K294.548
RAM

20082

K. V. Mangalambi 1,988
No. 1398, Southern 1 Cross
28th Main, 9th Block
Jayanagar, Bangalore-

ಧರ್ಮಾರ್ಥ ಸಾಹಿತ್ಯ ಮಾಲೆ :

ಸ್ವಾಮಿ ರಾಮತೀರ್ಥರ

ವೇದಾಂತ ಬೋಧಕ ಕಥೆಗಳು
ಮತ್ತು
ದೃಷ್ಟಾಂತಗಳು

(ಸ್ವಾಮಿರಾಮತೀರ್ಥರ ಸಂಪೂರ್ಣಕೃತಿಗಳಿಂದ ಸಂಗ್ರಹವಾದುವು)

ಬಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
20082
ಬೆಂಗಳೂರು-19

ಅನುವಾದ: ಶ್ರೀ ಮೂರ್ತಿ

ದತ್ತಾಶ್ರಮ, ಆರ್. ನುಲೇನೂರು (ಹೊಳಲ್ಕೆರೆ-ತಾ.)

ಪ್ರಕಾಶಕರು :

ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಬೆಂಗಳೂರು ಶಾಖಾ, ತ್ಯಾಗರಾಜನಗರ-ಬೆಂಗಳೂರು-೨೮

Rama guarantees that anybody in this world who hears all of Ramā's speeches, would get his doubts removed, is sure to come to the conviction of his own Divinity.

ಈ ಪ್ರಪಂಚದಲ್ಲಿ ಯಾರೇ ಆಗಲಿ ರಾಮನ ಎಲ್ಲಾ ವ್ಯಾಖ್ಯಾನಗಳನ್ನೂ ಕೇಳಿದವನು, ತನ್ನ ಸಂಶಯಗಳನ್ನೆಲ್ಲಾ ಕಳೆದುಕೊಂಡು, ತಾನೇ ದೇವರೆಂಬ ನಿಶ್ಚಯ ಜ್ಞಾನಕ್ಕೆ ಖಂಡಿತ ಬರುವನೆಂದು ರಾಮನು ಭರವಸೆ ಕೊಡುತ್ತಾನೆ.

ವಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ
ಗ್ರಂಥ ಭಂಡಾರ
ಕ್ರಮ ಸಂಖ್ಯೆ 70019
ವರ್ಗ
ವರ್ಗ ಸಂ
ಬಂದ ತಾ||
ಬೆಲೆ

೩೦-೧-೧೯೭೫

K294.548
RAM

e98307

ಎಲ್ಲಾ ಹಕ್ಕೂ ಲೇಖಕರಿಗೆ ಸೇರಿದೆ

ಮುದ್ರಕರು :
ರವಿ ಪ್ರಿಂಟರ್ಸ್, ಬೆಂಗಳೂರು-೯

Rama's Promise

Whether working through many souls or alone, Rama seriously promises to infuse true life and dispel darkness and weakness from India within ten years, and within the first half of the twentieth Century, India will be restored to more than its original glory. Let these words be recorded.

Jan. 1, 1900 **Swamy Rama**

ರಾಮನ ಪ್ರತಿಜ್ಞೆ, ವಾಗ್ದಾನ, ಭರವಸೆ

ಅನೇಕ ಚೇತನಗಳ ಮೂಲಕವಾಗಿ ಆಗಲೀ ಏಕಾಂಗಿಯಾಗಿ ಆಗಲೀ ಕಾರ್ಯಸಾಧನೆ ಮಾಡುವದರಿಂದ, ಹತ್ತುವರ್ಷಗಳೊಳಗಾಗಿ ಭಾರತದ ಜನಾಂಗದಲ್ಲಿ ನಿಜವಾದ ಜೀವ ಚೈತನ್ಯವನ್ನು ಎರೆದು ತುಂಬುವದಾಗಿಯೂ ಭಾರತೀಯರಲ್ಲಿರುವ ಅಜ್ಞಾನಾಂಧಕಾರವನ್ನೂ (ಮನೋ) ದೌರ್ಬಲ್ಯವನ್ನೂ ತೊಲಗಿಸುವದಾಗಿಯೂ ಮತ್ತು ಇಪ್ಪತ್ತನೇ ಶತಮಾನದ ಪೂರ್ವಾರ್ಧದೊಳಗೇ ಭಾರತವು, ಅದರ ಪೂರ್ವ ವೈಭವ ಪ್ರತಿಷ್ಠೆಗಳಿಗಿಂತಲೂ ಹೆಚ್ಚಿನ ಗೌರವ ಸ್ಥಾನ-ಮಾನ-ಮಹಿಮೆಗಳಲ್ಲಿ ಪುನಸ್ಸ್ಥಾಪಿತವಾಗುವುದೆಂದೂ ರಾಮನು ಗುರುತರ ಶ್ರದ್ಧೆಯಿಂದ ಭರವಸೆ ಕೊಡುತ್ತಾನೆ; ಪ್ರತಿಜ್ಞೆ ಮಾಡುತ್ತಾನೆ. ಈ ಮಾತುಗಳು ಶಾಶ್ವತವಾದ ದಾಖಲೆಯಲ್ಲಿರಲಿ.

ಜನವರಿ ೧, ೧೯೦೦ ಸ್ವಾಮಿ ರಾಮ

20082

ಶ್ರೀ ಪ್ರತಿಷ್ಠಾನ
೨೦೦೬೨
೨೦೮೪೭

ಬಿನ್ನಹ

ಈಶ್ವರಾನುಗ್ರಹದಿಂದ ಈಗ ಸುಮಾರು ಐವತ್ತು ವರ್ಷಗಳ ಹಿಂದೆಯೇ ಪೂಜ್ಯ ಸ್ವಾಮಿ ರಾಮತೀರ್ಥರ "In Woods of God-Realization" ಎಂಬ ಗ್ರಂಥದಲ್ಲಿಯ ಅವರ ಉಪನ್ಯಾಸಗಳಲ್ಲಿ ಕೆಲವು ಭಾಗಗಳನ್ನು ಓದಿ ಹೃದಯವು ಅತಿಶಯವಾಗಿ ಪ್ರಭಾವಿತವಾಯಿತು. ಅವರು ತಮ್ಮ ಉಪನ್ಯಾಸಗಳಲ್ಲಿ ಪ್ರಯೋಗಿಸಿರುವ " My own Self in the form of ladies and gentlemen ! " "ಮಹಿಳೆಯರ ಮತ್ತು ಮಹನೀಯರ ರೂಪದಲ್ಲಿರುವ ನನ್ನ ಆತ್ಮವೆ!" ಎಂಬ ಅವರ ಅಪೂರ್ವವೂ ಅಸಾಧಾರಣವೂ ಅದ್ವೈತ ಪ್ರಬೋಧಕವೂ ಆದ ಸಂಬೋಧನೆಯಿಂದ ಹೃದಯದಲ್ಲಿ ಅಧ್ಯಾತ್ಮದ ಅರುಣೋದಯವಾಗಿ, ಅಲ್ಲಿ ಗುಪ್ತ-ಸುಪ್ತವಾಗಿದ್ದ ಆಧ್ಯಾತ್ಮಿಕ ಸಂಸ್ಕಾರವು ಎಚ್ಚರಗೊಂಡಿತು. ಆ ಕ್ಷಣದಿಂದ ಸ್ವಾಮಿ ರಾಮತೀರ್ಥರು ಹೃದಯದಲ್ಲಿ ಪ್ರತಿಷ್ಠಿತರಾದರು ; "ರಾಮ ಬಾದ್ಷಾ"ನ ಪ್ರಭುತ್ವವು ಪ್ರಾರಂಭವಾಯಿತು. ಮುಂದಿನ ಜೀವನವು ಈ ರೀತಿಯಲ್ಲಿ ರೂಪಿತವಾಗುವುದಕ್ಕೆ ಅವರ ಅನುಗ್ರಹವೇ ಬಹಳ ಮಟ್ಟಿಗೆ ಕಾರಣವಾಯಿತು-ಎನ್ನಬಹುದು.

ಅವರು ಪರಮ ವಿರಕ್ತರೂ ಮಹಾ ತ್ಯಾಗಶೀಲರೂ ಇದ್ದಂತೆಯೇ ಉಜ್ವಲ ರಾಷ್ಟ್ರಪ್ರೇಮಿಗಳೂ ಆಗಿದ್ದರು. ಅವರ ಉತ್ಕಟವಾದ ಅದ್ವೈತಾನುಭವವು ಹೊರ ಹೊಮ್ಮಿದ ಲೌಕಿಕರೂಪವೇ ಅವರ ವಿಲಕ್ಷಣವಾದ ರಾಷ್ಟ್ರಭಾವನೆಯಾಗಿತ್ತು. ವಿರಾಡಾತ್ಮನ ಅನುಭವದಿಂದ ಅವರು ರಾಷ್ಟ್ರವನ್ನಾಗಲೀ ಲೋಕವನ್ನಾಗಲೀ ತಮ್ಮಿಂದ ಬೇರೆಯಾಗಿ ತಿಳಿಯಲಿಲ್ಲ. ಆ ವಿಷಯದಲ್ಲಿ ಅವರು ಹೇಳಿರುವದೇನೆಂದರೆ:

" Let me feel I am India-the whole of India. The land of India is my body. The Cape Comorine is my feet, the Himalayas my head............

"ಇಂಡಿಯಾದೇಶವೇ ನಾನೆಂದು-ಇಡೀ ಇಂಡಿಯಾದೇಶವೇ ನಾನೆಂದು-ಮನಃಪೂರ್ವಕವಾಗಿ ಭಾವಿಸುತ್ತೇನೆ. ಇಂಡಿಯಾದೇಶವೇ ನನ್ನ ದೇಹ. ಕೇಪ್ ಕಾಮರಿನ್-ಕನ್ಯಾಕುಮಾರಿಯೇ--ನನ್ನ ಪಾದ. ಹಿಮಾಲಯವೇ ನನ್ನ ಮಸ್ತಕ. ನನ್ನ ಕೇಶಗಳಿಂದ ಗಂಗೆಯೂ ನನ್ನ ಶಿರಸ್ಸಿನಿಂದ ಬ್ರಹ್ಮಪುತ್ರಾ-ಸಿಂಧೂ ನದಿಗಳೂ ಹರಿಯುತ್ತವೆ......ನಾನು ನಡೆಯುವಾಗ ಇಂಡಿಯಾನೇ ನಡೆಯುವುದೆಂದು ಭಾವಿಸುತ್ತೇನೆ. ನಾನು ಉಸಿರಾಡುವಾಗ ಇಂಡಿಯಾದೇಶವೇ ಉಸಿರಾಡುವದೆಂದು ಭಾವಿಸುತ್ತೇನೆ. ನಾನು ಮಾತನಾಡುವಾಗ ಇಂಡಿಯಾನೇ ಮಾತನಾಡುವುದೆಂದು

ಭಾವಿಸುತ್ತೇನೆ, ಅರಿಯುತ್ತೇನೆ. ನಾನೇ ಇಂಡಿಯಾ (ಭಾರತ), ನಾನೇ ಶಂಕರ-ನಾನೇ ಶಿವ! ರಾಷ್ಟ್ರಭಕ್ತಿಯ ಅತ್ಯುನ್ನತ ಅನುಭವವೇ ಇದು. ಇದೇ ವ್ಯವಹಾರ-ವೇದಾಂತ, ಅನುಷ್ಠೇಯ-ವೇದಾಂತ, ಕ್ರಿಯಾಶೀಲ-ವೇದಾಂತ !"

ಈ ಭವ್ಯವಾದ ಭಾವನೆಗಳು ಯಾರಲ್ಲಿ ನಿಜವಾದ ರಾಷ್ಟ್ರಭಕ್ತಿಯನ್ನೂ ವಿಶ್ವಾತ್ಮ ಭಾವನೆಯನ್ನೂ ಚಿಮ್ಮಿಸಲಾರವು ?

ರಾಮತೀರ್ಥರ ಇಂಥಾ ಉಜ್ಜ್ವಲವಾದ, ಅನೇಕ ಮಹಾಕಾವ್ಯಭಾವಗಳು ಈಗ ಸುಮಾರು ಐದು ದಶಕಗಳಿಗೂ ಹೆಚ್ಚು ಕಾಲ ಮನೋಮಂದಿರದಲ್ಲಿ ಮೊರೆಯುತ್ತಾ ಸಂಸ್ಕಾರ ವೀಣೆಯನ್ನು ಮಿಡಿಯುತ್ತಾ ಬಂದಿವೆ.

ಆದರೆ, ಅವರ ಜೀವನ ಚರಿತ್ರೆಯನ್ನೂ ಸಮಸ್ತ ಉಪನ್ಯಾಸಗಳನ್ನೂ ಆಂಗ್ಲ ಭಾಷಾಮೂಲದಿಂದ ಕನ್ನಡದಲ್ಲಿ ಅನುವಾದ ಮಾಡುವ ಸೌಭಾಗ್ಯವನ್ನು ಗುರುವರ್ಯ ರಾಮರೇ ಅನುಗ್ರಹಿಸಿದ್ದಾರೆಂದರೆ ಅತಿಶಯೋಕ್ತಿಯಲ್ಲ. ಈ ಪವಿತ್ರ ಕಾರ್ಯಕ್ಕೆ ಪ್ರೇರಿಸುವದಕ್ಕೆ ಶ್ರೀ ರಾಮತೀರ್ಥರ ಪರಮಾನುಗ್ರಹವು (ಶ್ರೀರಾಮಾನುಗ್ರಹವು) ದಿವಂಗತ "ಧರ್ಮಸೇವಾ ಧುರೀಣ" ಶ್ರೀಮಾನ್ ಖೋಡೆ ಲಕ್ಷ್ಮಣಸಾರವರ ಸ್ನೇಹ ರೂಪವನ್ನು ತಾಳಿತು.

ಬಾದರಾಯಣರು ಬ್ರಹ್ಮಸೂತ್ರಗಳಲ್ಲಿ, "ಆವೃತ್ತಿರಸಕೃದುಪದೇಶಾತ್" ಎಂದು ಹೇಳಿರುವಂತೆ ವೇದಾಂತ ತತ್ತ್ವಗಳನ್ನು ಮಂದ ಮಧ್ಯಮಾಧಿಕಾರಿಗಳಿಗೆ ಪುನಃ ಪುನಃ ಅನೇಕಾವರ್ತಿ ಉಪದೇಶಮಾಡುವದು ಅವಶ್ಯವಾಗಿರುತ್ತದೆ. ಆದ್ದರಿಂದ ಸ್ವಾಮಿರಾಮರ ಉಪನ್ಯಾಸಗಳಲ್ಲಿಯೂ ಒಂದೇ ವಿಷಯದ ಪುನರಾವರ್ತನೆಗಳು ಹೆಚ್ಚಾಗಿ ತೋರಬಹುದು. ಆದರೆ, ಯಾರಿಗೆ ವೇದಾಂತವನ್ನು ಬಾಲಪಾಠದಿಂದಲೂ ಬೋಧಿಸಬೇಕಾಗಿತ್ತೋ ಅಂಥಾ ಜಪಾನೀಯರೂ ಅಮೆರಿಕನ್‌ರೂ ಸ್ವಾಮಿಗಳ ಶ್ರೋತೃಗಳಾಗಿದ್ದರೆಂಬದನ್ನು ನಾವು ಮರೆಯಬಾರದು. ಇದರಲ್ಲಿ ಮೆಚ್ಚಬೇಕಾದ್ದ ಒಂದು ಉತ್ತಮ ಗುಣವೂ ಇದೆ. ಏನೆಂದರೆ, ಸ್ವಾಮಿ ರಾಮತೀರ್ಥರ ಉಪನ್ಯಾಸ ಗಳು ನಮ್ಮಲ್ಲಿ ಎಲ್ಲಾ ಮಟ್ಟದ ಅಧಿಕಾರಿಗಳಿಗೂ ಉಪಯುಕ್ತವಾಗಿವೆ. ಪ್ರತಿಯೊಂದು ಉಪನ್ಯಾಸದಲ್ಲಿಯೂ ಸಾಮಾನ್ಯವಾಗಿ ಇರುವ ಅವರ ಸಣ್ಣ ಸಣ್ಣ ಕಥೆಗಳೂ ದೃಷ್ಟಾಂತಗಳೂ ಎಲ್ಲರಿಗೂ ಸ್ವಾರಸ್ಯಕರವಾಗಿಯೂ ಸೂಕ್ಷ್ಮತತ್ತ್ವವನ್ನು ಸುಲಭವಾಗಿ ತಿಳಿಸುವುದಾಗಿಯೂ ಎಂದಿಗೂ ಮರೆಯದಂಥವಾಗಿಯೂ ಇವೆ.

ಸ್ವಾಮಿ ರಾಮತೀರ್ಥರ "In woods of God-realization" "ಪರಮಾತ್ಮಾನುಭವದ ಮಹಾರಣ್ಯಗಳಲ್ಲಿ" ಎಂಬ ಸಂಪೂರ್ಣ ಕೃತಿಗಳನ್ನು ವ್ಯಾಸಂಗ ಮಾಡುವಾಗ ವೇದಾಂತದ ಅತ್ಯುನ್ನತ ತತ್ತ್ವವನ್ನು ಬೋಧಿಸುವದಕ್ಕೆ ಅವರು

ಸಮೃದ್ಧಿಯಾಗಿ ಉಪಯೋಗಿಸಿರುವ ಸ್ವಾರಸ್ಯವಾದ ಅನೇಕ ಸರಳ ಕಥೆಗಳು ಬೆರಗುಗೊಳಿಸುತ್ತವೆ. ಅತ್ಯಂತ ಮೇಧಾವಿಗಳ ಬುದ್ಧಿಯು ಗ್ರಹಿಕೆಗೆ ಸಹ ದುಸ್ಸಾಧ್ಯವಾದ ಅತ್ಯಂತ ಕಠಿಣವೂ ಜಟಿಲವೂ ಆದ ತಾತ್ತ್ವಿಕ ಸಮಸ್ಯೆಗಳನ್ನೂ ಮತ್ತು ಗಹನ ತತ್ತ್ವಗಳನ್ನೂ ಮೂಢರಾಗಲೀ ಬಾಲಕರಾಗಲೀ ಓದಿ ಅರ್ಥಮಾಡಿಕೊಂಡು ಅನುಭವದಲ್ಲಿ ಕಂಡು ಆನಂದಿಸುವಂತೆ ಸ್ವಾಮಿ ರಾಮರು ಕುತೂಹಲಜನಕವಾಗಿಯೂ ಆಕರ್ಷಕವಾಗಿಯೂ ಇರುವ ಶೈಲಿಯಲ್ಲಿ ದೃಷ್ಟಾಂತಪೂರ್ವಕವಾಗಿ ವಿವರಿಸಿದ್ದಾರೆ. ಅವರ ಉಪದೇಶವು ಸುಲಭದಿಂದ ಅರ್ಥವಾಗಿ ಹೆಚ್ಚು ಪ್ರಯೋಜನವಾಗಲು ಕಥಾ-ದೃಷ್ಟಾಂತಗಳನ್ನು ಅವುಗಳಿಂದ ಸೂಚಿತವಾದ ಮುಖ್ಯ ವಿಷಯಗಳ ಮೇಲೆ ವಿಹಿತವಾಗಿ ವಿಂಗಡಿಸಿದೆ.

ಈ ಅನುವಾದವು ಬಹಳ ಮಟ್ಟಿಗೆ ಭಾವಾನುವಾದ; ಕೆಲವು ಕಡೆ ಸ್ವೇಚ್ಛಾನುವಾದ. ಮೂಲದಲ್ಲಿರುವ ಪುನರಾವರ್ತನೆಗಳನ್ನು ಸಾಧ್ಯವಾದಷ್ಟು ಬಿಟ್ಟಿದೆ. ಮೂಲದಲ್ಲಿ ಗೂಢವೂ ಗರ್ಭಿತವೂ ಆಗಿರುವ ಅರ್ಥವನ್ನೂ ಭಾವವನ್ನೂ ಧ್ವನಿಯನ್ನೂ ಈ ಅನುವಾದದಲ್ಲಿ ಬಿಚ್ಚಲೂ ಬೆಳೆಸಲೂ ಕೆಲವು ಕಡೆ ಹೆಚ್ಚು ಸ್ವಾರಸ್ಯಕರವಾಗಿ ಮಾಡಲೂ ಪ್ರಯತ್ನ ಪಟ್ಟಿದೆ. ಮೂಲದಲ್ಲಿರುವ ವೀರ್ಯವನ್ನೂ (Force) ತತ್ತ್ವವನ್ನೂ ಚೇತಶ್ಶಕ್ತಿಯನ್ನೂ (Spirit) ಸಾಧ್ಯವಾದಷ್ಟು ಕಳೆಗುಂದಿಸದಂತೆ ನಿರೂಪಿಸಲೂ ಪ್ರಯತ್ನ ಮಾಡಿದೆ. ಅಮುಖ್ಯವಾಗಿ ಕಾಣುವ ಕೆಲವು ವಿಷಯಗಳನ್ನು ಕೈಬಿಟ್ಟಿದೆ, ಸಹ. ಎಂದೆಂದಿಗೂ ಅಮರರಾಗಿ ಎಲ್ಲರ ಹೃದಯದಲ್ಲಿಯೂ ಚೈತನ್ಯ ಸ್ವರೂಪರಾಗಿರುವ ಸ್ವಾಮಿ ರಾಮತೀರ್ಥರು ಈಗಲೂ ಇಲ್ಲಿ ಹೃದಯದಲ್ಲಿದ್ದು ಹೆಚ್ಚು ಸ್ವಾತಂತ್ರ್ಯವನ್ನು ವಹಿಸಿ ತಮ್ಮ ಕಾರ್ಯವನ್ನು ನಡೆಸಿಕೊಂಡಿದ್ದಾರೆ.

ಸ್ವಾಮಿಗಳ ಶಿಷ್ಯರಾದ ಪೂರಣಸಿಂಗರು,

"Preface to the First edition of 'In Woods of God-Realisation"

"ಪರಮಾತ್ಮಾನುಭವದ ಮಹಾರಣ್ಯಗಳಲ್ಲಿ" ಈ ಗ್ರಂಥದ ಪ್ರಥಮ ಪ್ರಕಟನೆಯ ಉಪೋದ್ಘಾತದಲ್ಲಿ ಹೇಳಿರುವದೇನೆಂದರೆ, "......ಅವರ ಉಪನ್ಯಾಸಗಳು ಅವರಿಂದ ಪುನಃ ಪರೀಶಿಲನೆಯ ಹಾಗೂ ಪರಿಷ್ಕರಣದ ಲಾಭವನ್ನು ಪಡೆಯುವದಕ್ಕೆ ಅವಕಾಶವಾಗಲಿಲ್ಲ. ಅವರು ತೆಗೆದು ಹಾಕಬಹುದಾಗಿದ್ದ ಎಷ್ಟೋ ವಿಷಯಗಳು ಇನ್ನೂ ಅವುಗಳಲ್ಲಿ ಉಳಿದಿವೆ; ಮತ್ತು ಅವರು ಸೇರಿಸಬಹುದಾಗಿದ್ದ ಎಷ್ಟೋ ವಿಷಯಗಳು ಅವುಗಳಲ್ಲಿ ಅಭಾವವಾಗಿವೆ. ಅವರು ಅವುಗಳನ್ನೆಲ್ಲಾ ಸಂಪೂರ್ಣವಾಗಿಯೇ ಪುನಃ ಬೇರೆ ರೂಪದಲ್ಲಿ ರಚಿಸಬೇಕೆಂದಿದ್ದರು. ತಮ್ಮ

ಉಪದೇಶವನ್ನು ಕ್ರಮಬದ್ಧವಾಗಿ ಪ್ರತಿಪಾದಿಸುವದಕ್ಕಾಗಿ ತಮ್ಮ ಮನಸ್ಸಿನಲ್ಲಿದ್ದ ಇನ್ನೂ ಎಷ್ಟೋ ಹೆಚ್ಚಿನ ವಿಚಾರಗಳನ್ನೂ ಸೇರಿಸಿ, ಆ ಕೈಬರೆಹದಲ್ಲಿದ್ದ ಮುಖ್ಯ ವಿಷಯದ ಅಮೂಲ್ಯ ಭಾಗಗಳನ್ನು ವಾಸ್ತವವಾಗಿಯೂ ಹೊಸದಾಗಿಯೇ ಬರೆಯ ಬೇಕೆಂಬ ಉದ್ದೇಶವುಳ್ಳವರಾಗಿದ್ದರು...ಆದರೆ ಮುಖ್ಯವಾಗಿ ಎರಡು ಕಾರಣಗಳಿಗಾಗಿ ಅವರ ಉದ್ದೇಶವು ಪೂರ್ಣವಾಗಲಿಲ್ಲ. ಅವರ ಮಹಾ ಸಮಾಧಿಗೆ ಎರಡು ವರ್ಷ ಗಳಿಗೆ ಮುಂಚೆ, ಈ ಹಿಂದೆ ಹೇಳಿರುವ ಅವರ ಕಾರ್ಯಯೋಜನೆಯ ಸಿದ್ಧತೆಗಾಗಿ ಅತ್ಯಂತ ಶ್ರದ್ಧಾದರಗಳಿಂದ ಭಾಷ್ಯಸಹಿತವಾದ ಮೂಲ ವೇದವನ್ನು ಸಂಪೂರ್ಣವಾಗಿ ಅಧ್ಯಯನ ಮಾಡುವದಕ್ಕೆ ಪ್ರಾರಂಭಿಸಿದರು. ಆದರೆ, ಅವರ ಸ್ವಂತ ಲೇಖನಗಳನ್ನೇ ಪರಿಷ್ಕರಿಸುವದಕ್ಕೂ ವ್ಯವಸ್ಥೆಗೊಳಿಸುವದಕ್ಕೂ ಅದೇ ಕಾಲವನ್ನೇ ಹೆಚ್ಚು ಲಾಭಕರ ವಾಗಿ ಉಪಯೋಗಿಸಬಹುದಾಗಿತ್ತು. ಅದರಿಂದ ಅವರ ಲೇಖನ-ಭಾಷಣಗಳು ಹೆಚ್ಚು ಭವ್ಯವೂ ದಿವ್ಯವೂ ಶಾಶ್ವತಸ್ಮಾರಕವೂ ಆಗಿರುತ್ತಿದ್ದವು, ಎರಡನೆಯ ಕಾರಣವೆಂದರೆ, ಅಂಥಾ ಕಾರ್ಯಸಾಧನೆಗೆ ಅವರ ಬುದ್ಧಿಯನ್ನು ಪ್ರಚೋದಿಸ ಬಹುದಾದ ಆಶಾ ಆಕಾಂಕ್ಷೆಗಳಿದ್ದ ಜನರ ಸಂಪರ್ಕದಿಂದ ದೂರವಾಗಿ, ಅವರಿಗೆ ಅತ್ಯಂತ ಪ್ರಿಯವಾದ ಹಿಮಾಲಯದ ಏಕಾಂತದಲ್ಲಿ ಅವರು ಹಗಲಿರುಳೂ ಧ್ಯಾನ ಮಗ್ನರಾಗಿದ್ದುದರಿಂದ ಅವರ ಮನಸ್ಸು ಮೇಲು ಮೇಲಿನ ಭೂಮಿಕೆಗಳಿಗೆ ಏರುತ್ತೇರುತ್ತಾ ಅನಂತದಲ್ಲಿ ಕರಗಿಹೋಗಿ ತನ್ನತನವನ್ನೇ ಕಳೆದುಕೊಂಡಿತು.

"ಈ ಲೇಖಕನು (ಪೂರಣಸಿಂಗ್) ಕೊನೆಯಸಲ ಅವರ ಜೊತೆಯಲ್ಲಿ (ಹಿಮಾಲಯದಲ್ಲಿ) ಇದ್ದಾಗ ಸ್ವಾಮಿಗಳು ಬಹಳ ಮಟ್ಟಿಗೆ ಯಾವಾಗಲೂ ಮೌನ ವಾಗಿಯೇ ಇರುತ್ತಿದ್ದರು. ಓದುವದರಲ್ಲಿಯೂ ಬರೆಯುವದರಲ್ಲಿಯೂ ಸಹ ಅವರಿಗೆ ಆಸಕ್ತಿಯು ಕ್ಷೀಣವಾಗಿತ್ತು. ಅವರನ್ನು ಪ್ರಶ್ನೆಮಾಡಿದಾಗ ಮಾತ್ರ ಅವರ ಪ್ರಜ್ಞಾಸ್ಥಿತಿಯ ರಹಸ್ಯವನ್ನು ವಿವರಿಸುತ್ತಿದ್ದರು.

"ಈ ಅತ್ಯಂತ ಗಾಢವಾದ ಮೌನವನ್ನು ಆಗ ಅವರು, 'Death in-life' 'ಜೀವನದಲ್ಲಿ ಸಾವು' ಎನ್ನುತ್ತಿದ್ದರು. **ಬಾಳಿನಲ್ಲಿ ಒಬ್ಬನು ಹೆಚ್ಚು ಹೆಚ್ಚಾಗಿ ಸತ್ತಷ್ಟೂ ಅವನಿಂದ ಇತರರಿಗೆ ಸ್ವಾಭಾವಿಕವಾಗಿಯೂ** ತಾನೇ ತಾನಾಗಿಯೂ ಹೆಚ್ಚು ಹೆಚ್ಚು ಒಳ್ಳೆಯದಾಗುತ್ತದೆ ಎಂದು ನಮಗೆ ಹೇಳುತ್ತಿದ್ದರು. 'ರಾಮನು ಕೈಗೊಂಡಿರುವ ಕಾರ್ಯವನ್ನು ಮುಗಿಸುವಂತೆ ಕಾಣಲಾರದು, ಆದರೆ, ಎಲ್ಲಾ ಯೋಜನೆಗಳನ್ನೂ ಯೋಜನೆಗಳನ್ನೂ ಇಚ್ಛೆಗಳನ್ನೂ ಧ್ಯೇಯಗಳನ್ನೂ ಮೀರಿ (ಅಂತಿಮವಾಗಿ) ಹೋದಾಗ ಆ ಕಾರ್ಯವು ಎಂದೋ ಒಂದು ಕಾಲದಲ್ಲಿ ಎಲ್ಲಕ್ಕಿಂತಲೂ ಹೆಚ್ಚು ಉತ್ತಮವಾಗಿಯೇ ನೆರವೇರುತ್ತದೆ ಎಂಬದು ರಾಮನಿಗೆ ಗೊತ್ತಿದೆ.' ಎನ್ನುತ್ತಿದ್ದರು.

" ಈ ಭಾವನೆ ಅವರಲ್ಲಿ ಎಷ್ಟು ದೃಢವಾಗಿತ್ತೆಂದರೆ, ಎಷ್ಟೆಷ್ಟು ಬಗೆಯಿಂದ ಪ್ರಾರ್ಥನೆ ಮಾಡಿದರೂ ಅವರಿಂದ ಅವರ ಆ ಕೃತಿಯನ್ನು ಬರೆಯುವದಕ್ಕೆ ಪ್ರಾರಂಭಿಸುವಂತೆ ಮಾಡುವದು ಸಹ ನಮ್ಮಿಂದ ಸಾಧ್ಯವಾಗಲಿಲ್ಲ." ಹೀಗೆ ಪೂರಣಸಿಂಗರು ಹೇಳಿದ್ದಾರೆ.

ಚಿಚ್ಛಕ್ತಿಪ್ರಭಾವ ಮೊದಲಾದ ಹಿಂದಿನ ಗ್ರಂಥಗಳಿಗೆ ಆಶೀರ್ವಾದ ಪೂರ್ವಕವಾಗಿ ತಮ್ಮ ಮುನ್ನುಡಿಗಳನ್ನು ಅನುಗ್ರಹಿಸಿರುವಂತೆ ಈ ಗ್ರಂಥಗಳಿಗೂ ಮುನ್ನುಡಿಯನ್ನು ಕರುಣಿಸಿರುವ ಹೊಳೇನರಸಿಪುರದ ಪ್ರಖ್ಯಾತ ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಪೂಜ್ಯ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳಿಗೆ ಅನಂತ ವಂದನೆಗಳು.

ಸ್ನೇಹಪೂರ್ಣ ಸಹಕಾರದಿಂದ ಈ ಗ್ರಂಥಗಳನ್ನು ಸುಂದರವಾಗಿ ಮುದ್ರಣ ಮಾಡಿಕೊಟ್ಟಿರುವ "ರವಿ ಪ್ರಿಂಟರ್ಸ್", ಬೆಂಗಳೂರು-೯ ಇದರ ಮಾಲೀಕರಿಗೂ ಕೆಲಸಗಾರರಿಗೂ ಭಗವಂತನು ಕಲ್ಯಾಣವನ್ನು ಮಾಡಲೆಂದು ಹಾರೈಕೆ.

ಬೆಂಗಳೂರು
೩೦-೧-೧೯೭೫ **ಶ್ರೀ ಮೂರ್ತಿ.**

ಈ ಲೇಖಕರ ಇತರ ಗ್ರಂಥಗಳು

೧. ಶ್ರೀ ಬನವಸಿಯ ದತ್ತಾತ್ರೇಯ ಯೋಗೀಂದ್ರ—ಸದ್ಗುರು ಚರಿತಾಮೃತ (ಪದ್ಯ ಮತ್ತು ಗದ್ಯ)
೨. ದೇವರು ಯಾರು ? (ವಿಜ್ಞಾನವೂ ವೇದಾಂತವೂ) ಮಲ್ಲಾಡಿಹಳ್ಳಿ
೩. ದೈವ ಮತ್ತು ಪೌರುಷ (Fate and Free will) ಗುಬ್ಬಿ ಚಿದಂಬರಾಶ್ರಮ
೪. ಸಮಗ್ರಸಾಧನ (೨ ಭಾಗಗಳು ಅನಾಥ ಸೇವಾಶ್ರಮ, ಮಲ್ಲಾಡಿಹಳ್ಳಿ)
೫. ಚಿಚ್ಛಕ್ತಿ ಪ್ರಭಾವ (ಇದೊಂದು ಮಹಾಗ್ರಂಥ—ಸಂಯುಕ್ತ ಕರ್ನಾಟಕ)
೬. ಶ್ರೀ ಸ್ವಾಮಿ ರಾಮತೀರ್ಥರ ಜೀವನ ಚರಿತ್ರೆ
೭. ಪರಮಾತ್ಮಾನುಭವದ ಮಹಾರಣ್ಯಗಳಲ್ಲಿ (3 ಭಾಗಗಳು)
೮. ಯೋಗವಾಸಿಷ್ಠದ ಸಾರ ಮತ್ತು ಭಗವತೀ ಚೂಡಾಲೆಯ ಆಖ್ಯಾನ (ಕೀರ್ತನ ರೂಪ)
೯. ಹೊಸ ಮನಸ್ಸು (Fresh Mind)
೧೦. ಬಿಡುಗಡೆ
೧೧. ಚಿದಾಕಾಶ ಗೀತೆ
೧೨. ರಾಮಹೃದಯ
೧೩. ಶ್ರೀ ರಮಣ ಮಹರ್ಷಿಗಳ ದಿವ್ಯಸನ್ನಿಧಿಯಲ್ಲಿ

Rama's Mission

ರಾಮನು ಪ್ರಸಾರನಮಾಡುವ ಉಜ್ಜ್ವಲ ಧರ್ಮತತ್ತ್ವ ಘೋಷಣ

ನಿಮ್ಮ ಎದೆಯಲ್ಲಿ ಮಿಡಿಯುತ್ತಿರುವವನು ರಾಮ ; ನಿಮ್ಮ ಕಣ್ಣುಗಳಿಂದ ನೋಡುತ್ತಿರುವವನು ರಾಮ; ನಿಮ್ಮ ನಾಡಿಯಲ್ಲಿ ತುಡಿ ತುಡಿದು ಮಿಡಿಯುತ್ತಿರುವವನು ರಾಮ ; ಹೂವುಗಳಲ್ಲಿ ನಸುನಕ್ಕು ನಲಿಯುವವನು ರಾಮ ; ಪಳ್ಳನೆ ಹೊಳೆದೆಳೆವ ಮಿಂಚಿನಲಿ ಗೊಳ್ಳನೆ ನಗು ಬೀರುವವನು ರಾಮ ; ಜೀವನದೀನದಗಳಲ್ಲಿ ಮೊರೆ ಮೊರೆದು ಮೊಳಗುತಿರುವವನು ರಾಮ ; ಕಡಲ ಕಲ್ಲೋಲದಲಿ ಭೋರ್ಗರೆಯುತಿರುವವನು ರಾಮ ; ಪರ್ವತಾರಣ್ಯಗುಹೆಗಳಲಿ ನಿಶ್ಶಬ್ದ ಮೌನಿಯಾಗಿರುವವನು ರಾಮ. ನಾವು ಬ್ರಾಹ್ಮಣರೆಂಬ ಅಭಿಮಾನವನ್ನು ಬೀಸಿ ಎಸೆಯಿರಿ ; ನಾನು ಸ್ವಾಮಿ ಎಂಬ ದುರಭಿಮಾನವನ್ನು ಸುಡಿರಿ, ಜನರಿಂದ ಬೇರೆ ಹಿರಿದಾಗಿ ತೋರಿಸುವ ಬಿರುದುಗಳನ್ನೂ ಗೌರವದ ಪದವಿಗಳನ್ನೂ ಸಮುದ್ರದಲ್ಲಿ ಎತ್ತಿ ಎಸೆಯಿರಿ. ಪ್ರಿಯತಮ (-ತಮೆ) ! ನೀನೇ ರಾಮ ! ನೀವು ಯಾರೇ ಆದರೂ ರಾಮನು ನಿಮ್ಮ ನಿಜವಾದ ಆತ್ಮ. ನೀವು ಪಂಡಿತರಾದರೂ ಪಾಮರರಾದರೂ ರಾಮನು ನಿಮ್ಮ ಆತ್ಮ. ನೀವು ಧನಿಕರಾಗಿರಬಹುದು, ಅಥವಾ ದರಿದ್ರರಾಗಿರಬಹುದು, ಹೆಣ್ಣಾಗಿರಬಹುದು, ಅಥವಾ ಗಂಡಾಗಿರಬಹುದು, ಸಾಧುವಾಗಿರಬಹುದು, ಪಾಪಿಯಾಗಿರಬಹುದು, ನೀವು ಕ್ರಿಸ್ತನಾಗಿರಬಹುದು ಅಥವಾ ಕ್ರಿಸ್ತನನ್ನು ಮೋಸದಿಂದ ಶತ್ರುವಶಮಾಡಿದ ಪರಮ ದ್ರೋಹಿಯಾದ ಜೂಡಾಸ್‌ನೇ ಇರಬಹುದು. ನೀವು ಕೃಷ್ಣನಾದರೂ ಇರಬಹುದು ಅಥವಾ ಗೋಪಿಯಾದರೂ ಆಗಿರಬಹುದು. ರಾಮನಂತೂ ನಿಮ್ಮ ಆತ್ಮನೇ ಸರಿ. ತಾನು ದೇವರೆಂದೂ ನೀವೂ ದೇವರೆಂದೂ ರಾಮನು ಗರ್ಜಿಸಿ ಗರ್ಜಿಸಿ ನಿಮ್ಮ ಹೃದಯದಲ್ಲಿ ತುಂಬಿ ಒಂದೊಂದು ನಿಮಿಷದಲ್ಲಿಯೂ ಒಂದೊಂದು ನಡೆಯಿಂದಲೂ ಅದನ್ನು ಸಾರುತ್ತಾನೆ.

ಜರ್ಮನಿ, ಇಂಗ್ಲೆಂಡ್, ಅಮೆರಿಕಾ, ಇಂಡಿಯಾ ಮೊದಲಾದ ಎಲ್ಲವನ್ನೂ ರಾಮನು ಅಲ್ಲಾಡಿಸಿ, ಕೊಡವಿ ಕೊಡವಿ ಸ್ವತಂತ್ರವಾಗುವಂತೆ ಮಾಡಬೇಕು. ರಾಮನು ಹಳೆಯ ಆಟದಿಂದ ದಣಿದು ನೋತಿದ್ದಾನೆ. ಓ ಸ್ವಪ್ನಸಂಚಾರಿಯೆ !

ಹಿಮಾಲಯದ–ಕೈಲಾಸಶಿಖರದ–ಘಂಟಾನಾದ ತರಂಗ ವಿಲಾಸವನ್ನು ಕೇಳು ತ್ತಿದ್ದೀಯ? ಗುಡುಗುತ್ತಿರುವ ಉದಯದ ಮೊಳಗನ್ನೂ ಆಲಿಸುತ್ತಿದ್ದೀಯ? ಸ್ವಾತಂತ್ರ್ಯ! ಸ್ವಾತಂತ್ರ್ಯ!

ಇದು ಕ್ಷುಲ್ಲಕವಾದ ಚಿತ್ತಭ್ರಾಂತಿಯಲ್ಲ; ಮಾಯೆಯಲ್ಲ; ಸರ್ವಾತ್ಮನಾದ ನಿಮ್ಮ ಆತ್ಮಾರಾಮನ ಇಚ್ಛೆ ಇದು; ಇದು ಕೇವಲ ರಾಮನ ಆಜ್ಞೆ.

ವಿಮೋಚನೆ! ವಿಮೋಚನೆ! ಬಿಡುಗಡೆ! ಬಿಡುಗಡೆ!

ಬುದ್ಧ, ಮಹಮ್ಮದ್, ಕ್ರಿಸ್ತ ಮತ್ತು ಬೇರೆ ಪ್ರವಾದಿಗಳು ಅಥವಾ ಅವತಾರ ಪುರುಷರು ಮೊದಲಾದವರಾದ ಇಂಥಾ ಲಕ್ಷಲಕ್ಷ ಅನುಯಾಯಿಗಳನ್ನು ಉತ್ಪತ್ತಿಮಾಡುವದು ರಾಮನ ಧರ್ಮಪ್ರಸಾರದ ಉದ್ದೇಶವಲ್ಲ; ಆದರೆ ಪ್ರತಿಯೊಬ್ಬ ಮನುಷ್ಯನಲ್ಲಿಯೂ ಮಹಿಳೆಯಲ್ಲಿಯೂ ಮಗುವಿನಲ್ಲಿಯೂ ಸಾಕ್ಷಾತ್ ರಾಮನನ್ನೇ ಉತ್ಪತ್ತಿಮಾಡುವುದು, ಎಚ್ಚರಿಸುವದು, ಆವಾಹಿಸುವದು, ಅಥವಾ ವ್ಯಕ್ತಮಾಡುವದು ರಾಮನ ಉಪದೇಶದ ಉದ್ದೇಶವಾಗಿದೆ. ಈ ದೇಹವನ್ನು ತುಳಿತುಳಿದು ಹಾಕಿ, ಈ ವ್ಯಕ್ತಿತ್ವವನ್ನು ತಿಂದುಹಾಕಿಬಿಡಿ, **ಈ ವೇದಾಂತವನ್ನು ಚೆನ್ನಾಗಿ ಅರೆದು, ಅಗಿದು,** ನುಂಗಿ, ಅರಗಿಸಿ, ಹೀರಿಕೊಂಡುಬಿಡಿ; ಆಗಲೇ ರಾಮನಿಗೆ **ನೀವು ನ್ಯಾಯುವನ್ನು ಮಾಡಿದಂತೆ ಆಗುತ್ತದೆ.**

೨೦೦೮೨
20082

Lessons from Rama's Message

ರಾಮನ ಸಂದೇಶದ ಪಾಠಗಳು

"In woods of God Realization" "ಪರಮಾತ್ಮಾನುಭವದ ಮಹಾರಣ್ಯಗಳಲ್ಲಿ" ಎಂಬ ಗ್ರಂಥದ ಮೂರು ಭಾಗಗಳಿಂದ ಸ್ವಾಮಿ ರಾಮ ತೀರ್ಥರು ಮುಖ್ಯವಾಗಿ ಅಮೆರಿಕಾದಲ್ಲಿ ಮಾಡಿದ ಉಪನ್ಯಾಸಗಳ ಸಂಗ್ರಹವು ಮುಗಿಯುತ್ತದೆ. ಈ ಉಪನ್ಯಾಸಗಳಲ್ಲದೆ, ಉರ್ದು ಮತ್ತು ಹಿಂದಿ ಭಾಷೆಗಳಲ್ಲಿ, ಎಲ್ಲಾ ಆತ್ಮೋನ್ನತಿಕರವಾದಂಥ ಅವರ ಅನೇಕ ಮೂಲ ಲೇಖನಗಳೂ ಇವೆ; ಮತ್ತು ಅವರು ಪೂರ್ವ,ಪಶ್ಚಿಮ ದೇಶಗಳ ತತ್ತ್ವಶಾಸ್ತ್ರಗಳನ್ನು ವಿಮರ್ಶಾತ್ಮಕವಾಗಿ ಅಧ್ಯಯನಮಾಡುವಾಗ ಅವರಿಗೆ ಲಭಿಸಿದ ಮನನೀಯವಾದ ಮಹದ್ವಾಕ್ಯಗಳನ್ನು ಎತ್ತಿ ಬರೆದಿಟ್ಟಿರುವ ಅತಿಶಯ ಸುಂದರ-ಸ್ವಾರಸ್ಯವಾದ ಸಾಹಿತ್ಯ ಸಂಗ್ರಹವೂ ಇದೆ.

ಅವರು ತಮ್ಮ ಉಪನ್ಯಾಸಗಳಲ್ಲಿ ಅಷ್ಟು ಉತ್ಸಾಹದಿಂದ ಅವಿರತವಾಗಿ ಪ್ರತಿಪಾದಿಸಿದ ಸಂದೇಶದ ಮುಖ್ಯವಿಷಯವೇನು?-ಎಂಬ ವಿಚಾರದಲ್ಲಿ ಈಗ ಒಂದು ಮಾತನ್ನು ಹೇಳಬಹುದಾಗಿದೆ. ಈ ಗ್ರಂಥಭಾಗಗಳನ್ನು ಆಕಸ್ಮಿಕವಾಗಿ ಮೊದಲಸಲ ಓದುವ ವಾಚಕರೂ ಸಹ ಇದನ್ನು ಗಮನಿಸದಿರಲಾರರು. ಅವರು, ದೇಶ-ಕಾಲ-ನಿಮಿತ್ತಗಳಿಗೆ ಹೊರಚ್ಚಾಗಿಯೂ ಸ್ವಯಂಪ್ರಕಾಶವಾಗಿಯೂ ಇರುವ ಒಂದೇ ಒಂದು ಸದ್ವಸ್ತುವಿದೆಯೆಂದು ಹೇಳುತ್ತಾರೆ. ಅದನ್ನು ವಿವರಿಸುವದು ತೀರಾ ಅಸಾಧ್ಯ; ಮತ್ತು ಅದೇ ನೀನಾಗಿದ್ದಿ. ಅದನ್ನು ತಿಳಿ, ಅದನ್ನು ಅನುಭವದಲ್ಲಿ ತಂದುಕೊ, ಈ ಪ್ರಪಂಚದಲ್ಲಿ ನಿಮಗೆ ತೋರುವ ಬಗೆಬಗೆಯ ತೋರಿಕೆಗಳೆಲ್ಲಾ ಬರಿ ತೋರಿಹಾರುವ ಪ್ರಕೃತಿವಿಲಾಸ; ಅದಕ್ಕೆ ಸ್ವತಂತ್ರವೂ ಸ್ಥಿರವೂ ಆದ ಅಸ್ತಿತ್ವವಿಲ್ಲ. ಹಿಂದೂ ಇಂದೂ ಮುಂದೂ ಎಂದೆಂದೂ ಒಂದೇ ಬಗೆಯಾಗಿರುವ ಸರ್ವಜ್ಞವೂ ಸರ್ವಶಕ್ತವೂ ಪೂರ್ಣಾನಂದವೂ ಆಗಿರುವ ನಿಮ್ಮ ಆತ್ಮಸ್ವರೂಪದ ಅರಿವಿಲ್ಲದಿರುವದೇ ಎಲ್ಲಾ ಅನರ್ಥಕ್ಕೂ ಕಾರಣವಾಗಿದೆ;-ಎಂದು ಅವರು ಹೇಳುತ್ತಾರೆ. ಈ ಪ್ರಪಂಚದಲ್ಲಿ ಒಂದೇ ರೋಗವಿದೆ; ಮತ್ತು ಅದಕ್ಕೆ ಒಂದೇ ಚಿಕಿತ್ಸೆಯಿದೆ. ನಿಮ್ಮ ನಿಜವಾದ ಆತ್ಮನ ಅರಿವಿಲ್ಲದಿರುವುದೇ-ಅಜ್ಞಾನವೇ-ಮುಖ್ಯವಾದ ವ್ಯಾಧಿಯಾಗಿದೆ; ಅದೇ ದೈಹಿಕ, ಮಾನಸಿಕ, ಆಧ್ಯಾತ್ಮಿಕವಾಗಿ ಅನೇಕ ವಿಧವಾದ ನೋವುಗಳಾಗಿ ತೋರಿಕೊಳ್ಳುತ್ತಿದೆ, ಚಿಕ್ಕದಾಗಿ ಹೇಳಬಹುದಾದರೆ, ಇದೇ ಅವರ ವೇದಾಂತ ತತ್ತ್ವ, ಆದರ್ಶಭಾವ, ಧ್ಯೇಯ. ಅವರು ಸಾರಭೂತವಾದ ಆತ್ಮೈಕ್ಯ ಭಾವವನ್ನು ಹೀರಿಕೊಂಡಿದ್ದಾರೆ, "ಸಚ್ಚಿದಾನಂದ ಸ್ವರೂಪ ಆತ್ಮನೇ ನಾನು,, ಎಂಬ ಸರ್ವೋತ್ತಮವಾದ ಅರಿವಿನ ಅತ್ಯುನ್ನತ

ಸ್ಥಿತಿಯಿಂದ ಅವರು ನಿಮಿಷಮಾತ್ರವೂ ಚಲಿಸುತ್ತಿರಲಿಲ್ಲ, ಅಷ್ಟು ದೃಢವಾಗಿ ಅವರು ಆ ಅನುಭವದಲ್ಲಿ ನೆಲೆಗೊಂಡಿದ್ದರು, ಅವರು ಪರಮಾತ್ಮಾನುಭವದಲ್ಲಿ ಯಾವಾಗಲೂ ಅಷ್ಟು ಮುಳುಗಿರುತ್ತಿದ್ದುದರಿಂದ, ಅವರ ಕೊನೆಯ ದಿನಗಳಲ್ಲಿ ಅವರು ವಾಸ್ತವವಾಗಿಯೂ ದೇಹಭಾವನೆಯಿಲ್ಲದೆ ಇರುತ್ತಿದ್ದರು. ಗುರುವಾಗಿ ಉಪದೇಶಮಾಡಬೇಕೆಂದು ಅವರೊಳಗೆ ಅತ್ಯಂತ ಪ್ರಬಲ ಪ್ರೇರಣೆಯಾದಾಗ ಮಾತ್ರ, ಬಹಳ ಅಪರೂಪವಾಗಿ ಅವರು ತಮ್ಮ ಸಹಜ ಸಮಾಧಿಯಿಂದ ಹೊರ ಬರುತ್ತಿದ್ದರು. ಆಗ ಅವರು ಪ್ರಾಪಂಚಿಕವಾದ ಪ್ರತಿಯೊಂದು ಸಮಸ್ಯೆಯನ್ನೂ-ಅದು ದೊಡ್ಡದಾಗಲಿ, ಚಿಕ್ಕದಾಗಲಿ, ರಾಜಕೀಯುವಾಗಲಿ, ಸಾಮಾಜಿಕವಾಗಲಿ, ಧಾರ್ಮಿಕವಾಗಲಿ, ಸಾಂಸ್ಕೃತಿಕವಾಗಲಿ, ರಾಷ್ಟ್ರೀಯುವಾಗಲಿ, ಅಂತರರಾಷ್ಟ್ರೀಯುವಾಗಲಿ-ವೇದಾಂತದ ಅತ್ಯಂತ ಉನ್ನತವಾದ ಸ್ಥಾನದಿಂದ ನೋಡುತ್ತಿದ್ದರು. ಅವರ ಸ್ಥಾನದ ಆ ತತ್ತರಿಸುವ ಎತ್ತರದಿಂದಾಗಿ ಅವರ ತೀರ್ಮಾನಗಳೂ ಸಿದ್ಧಾಂತಗಳೂ ಸಾಮಾನ್ಯವಾಗಿ ಅಷ್ಟು ಪ್ರಿಯಕರವೆನಿಸುವದಿಲ್ಲ; ಮತ್ತು ಸಾಮಾನ್ಯ ಲೌಕಿಕರಿಗೆ ಸುಲಭ ಸಾಧ್ಯವಾಗುವದಿಲ್ಲ.

ಅವರು ಅಮೆರಿಕೆಯಲ್ಲಿ ಇದ್ದಷ್ಟುಕಾಲ, ವೇದಾಂತ ತತ್ತ್ವವನ್ನು ಪ್ರಸಾರ ಮಾಡುವದರ ಜೊತೆಗೆ, ಭಾರತೀಯರ ಸಹಾಯಾರ್ಥವಾಗಿ, ತಮ್ಮ ಸ್ವಂತರೀತಿಯಲ್ಲಿ ಬಹಳ ಪ್ರಯತ್ನವನ್ನು ಮಾಡಿದರು, ಯಾವ ಬಗೆಯ ವ್ಯಕ್ತಿಪರವಾದ ಪ್ರಚಾರ ಕಾರ್ಯಕ್ಕೂ ಅವರು ಸಂಪೂರ್ಣ ವಿರೋಧವಾಗಿದ್ದುದರಿಂದ, ಅವರ ಸೇವಾ ಸಾಹಸಗಳ ದಾಖಲೆಯನ್ನು ಇಡುವದಕ್ಕೆ ಅವರು ಅವಕಾಶಕೊಡದಿದ್ದುದು ನಮ್ಮ ದುರ್ದೈವವೇ ಸರಿ. ಆದರೆ ಅವರ ಅಮೆರಿಕೆಯ ಕೆಲವು ಉಪನ್ಯಾಸಗಳಿಂದ, ಭಾರತಮಾತೆಯ ಹಿಂದುಳಿದ ಸ್ಥಿತಿಗಾಗಿ ಅವರ ವ್ಯಥೆಯು ಎಷ್ಟು ತೀವ್ರವಾಗಿತ್ತೆಂಬದು ವ್ಯಕ್ತವಾಗುತ್ತದೆ. ಅಮೆರಿಕಾ ಮತ್ತು ಯೂರೋಪ್ ಜನಾಂಗಗಳು, ಅರಿಯದೆ ಮಹತ್ತರವಾಗಿ ಆಚರಣೆಯಲ್ಲಿ ತಂದಿರುವ ವೇದಾಂತವನ್ನು ವ್ಯವಹಾರದಲ್ಲಿ ರೂಢಿಸದಿರುವದೊಂದೇ ಭಾರತದೇಶದ ಭೌತಿಕ ಹೀನಸ್ಥಿತಿಗೆ ಕಾರಣವೆಂದು, ಅವರು ತಮ್ಮದೇ ಆದ ವಿಶಿಷ್ಟರೀತಿಯಲ್ಲಿ ಮತ್ತೆ ಮತ್ತೆ ಸಾರಿ ಸಾರಿ ಹೇಳುತ್ತಿದ್ದರು.

ಭಾರತ ಸಮಾಜದ ಉದ್ಧಾರಕ್ಕೆ ಅವರು ಸೂಚಿಸಿರುವ ಚಿಕಿತ್ಸೆಗಳಲ್ಲಿ ಕೆಲವು ವಿಧಾನಗಳನ್ನು ಪರೀಕ್ಷಿಸುವದು ಇಲ್ಲಿ ಅಪ್ರಾಸಂಗಿಕವಾಗಲಾರದು. ಉದಾಹರಣೆಗೆ, ಹಿಂದೂಗಳ ಅಭ್ಯಾಸದಲ್ಲಿರುವ ಮೂರ್ತಿಪೂಜೆಯು ಅವರಿಗೆ ಬಹಳ ಮಟ್ಟಿಗೆ ಒಪ್ಪಿಗೆಯಾಗಿರಲಿಲ್ಲ. ಪ್ರಪಂಚದ ಎಲ್ಲಾ ಮತಧರ್ಮಗಳನ್ನೂ ಅವರು, "ತಸ್ಯೈವಾಹಂ — ಅವನವನು ನಾನು", "ತವೈವಾಹಂ — ನಿನ್ನವನು ನಾನು", "ತ್ವಮೇವಾಹಂ—ನೀನೇ ನಾನು, ಅಥವಾ ತದೇವಾಹಂ—ಅವನೇ ನಾನು" ಎಂಬ ಭಾವ-ಜ್ಞಾನ ವಿಕಾಸದ ಮೂರು ವರ್ಗಗಳಲ್ಲಿ ವಿಂಗಡಿಸಿ, ಈ ಎಲ್ಲವನ್ನೂ ಒಪ್ಪಿ ಅನುಗ್ರಹಿಸಿದರೂ ಭಾರತೀಯರ ಪ್ರತಿಭೆಗೆ 'ತ್ವಮೇವಾಹಂ—ನೀನೇ ನಾನು, ಅಥವಾ

ತದೇವಾಹಂ–ಅವನೇ ನಾನು" ಎಂಬ ಕೊನೆಯ ಅನುಭಾವದ ಶುದ್ಧವೂ ಸರಳ ಸುಂದರವೂ ಸತ್ಯವೂ ಆದ ವೇದಾಂತವೇ ಸರ್ವೋತ್ತಮವಾಗಿ ಹೊಂದಿಕೆಯಾದುದೆಂದು ಅವರ ನಿಶ್ಚಿತಾಭಿಪ್ರಾಯವಾಗಿದ್ದಿತು. ಇಷ್ಟೇ ಅಲ್ಲ ; ಅವರ ಅಭಿಪ್ರಾಯದಲ್ಲಿ, ಈ ಕೇಂದ್ರ ವೇದಾಂತ ಚಿಂತನೆಯು ಜನಸಾಮಾನ್ಯರಲ್ಲಿ ಅಭಾವವಾದುದೇ ಭಾರತೀಯರು ಒಟ್ಟಿಗೆ ಅನೇಕ ಶತಮಾನಗಳು ದಾಸ್ಯದಲ್ಲಿ ಬಿದ್ದಿರುವದಕ್ಕೆ ಕಾರಣವಾಯಿತು. ತಿಳಿದೋ ಕೊನೆಗೆ ತಿಳಿಯದೆಯೋ ವೇದಾಂತದ ಆದರ್ಶ ತತ್ತ್ವಗಳನ್ನು ನಮ್ಮ ನಿತ್ಯಜೀವನದಲ್ಲಿ ಅಳವಡಿಸಿಕೊಂಡ ಹೊರತು ನಮ್ಮ ನಿಜವಾದ ಪ್ರಗತಿಗೆ ವಾಸ್ತವವಾಗಿಯೂ ಹೆಚ್ಚು ಅವಕಾಶವಿಲ್ಲ. "ಓ ದೇವರೆ! ನಾವು ನಿನ್ನ ದಾಸರು, ಗುಲಾಮರು, ನಮ್ಮನ್ನು ದುಃಖ-ದುರವಸ್ಥೆಗಳಿಂದ ಪಾರುಮಾಡು" ಎಂದು ನಾವು ಬೇಡಲು ಆರಂಭಿಸಿದ್ದರಿಂದ, 'ಭಾವಿಸಿದಂತೆ ಆಗುವೆವೆಂಬ' ಭಾವನೆಯ ಆಧ್ಯಾತ್ಮಿಕ ನಿಯಮದ ಪ್ರಕಾರ, ಒಟ್ಟಿಗೆ ಅನೇಕ ವರ್ಷಗಳು, ನಮ್ಮ ಇಷ್ಟದೇವರ ದಾಸರಾಗಿ ಅಲ್ಲವಾದರೂ ಪರಕೀಯರ ಗುಲಾಮರಾಗಿ ಮಾಡಲ್ಪಟ್ಟೆವು. "ಯೂರೋಪ್-ಅಮೆರಿಕಾ ಜನರೂ ಸಹ ಈ ರೀತಿಯಲ್ಲಿಯೇ ಬೇಡುತ್ತಾರೆ; ಆದರೂ ಅವರೇಕೆ ನಮ್ಮಂತೆ ಬೇರೆಯವರ ಗುಲಾಮರಾಗಲಿಲ್ಲ ?" ಎಂದರೆ, **ಧರ್ಮವು ಹಿಂದೂಗಳಿಗೆ ಹೃದಯಕ್ಕೆ ಸಂಬಂಧಪಟ್ಟ** ಅನುಭವವಾಗಿರುವಂತೆ ಅವರಲ್ಲಿ ಬಹುಜನರಿಗೆ ಆಗಿಲ್ಲವೆಂದು ರಾಮತೀರ್ಥರು ಹೇಳುತ್ತಾರೆ. ಪಾಶ್ಚಾತ್ತ್ಯರು ತಮ್ಮ ಹೃದಯಾಂತರಾಳದಲ್ಲಿ ಭೌತಿಕ ಸಂಪದಭಿವೃದ್ಧಿಯನ್ನೂ ಸಮೃದ್ಧಿಯನ್ನೂ ಬಯಸುತ್ತಾರೆ, ಹಂಬಲಿಸುತ್ತಾರೆ; ಅವರಿಗೆ ಧರ್ಮವು ಸಾಮಾನ್ಯವಾಗಿ ಹೊರಗಿನ ಒಂದು ಮೋಜು, ಮರ್ಯಾದೆ, ಬಾಹ್ಯೋಪಚಾರ, ಬಾಹ್ಯಾಡಂಬರ, ಕೇವಲ ಸಂಪ್ರದಾಯ. ಆದರೆ, ಹಿಂದೂಗಳಿಗಾದರೋ ಧರ್ಮವು ಅವರ ಕೇವಲ ಜೀವದ ಉಸಿರು. ಸ್ವಾಮಿ ದಯಾನಂದ ಸರಸ್ವತಿಗಳಂತೆ ಅವರೂ ಪ್ರಾಚೀನ ವೇದಸಾಹಿತ್ಯದಲ್ಲಿ ವಿಗ್ರಹಾರಾಧನೆಯ ಸುಳಿವೇ, ಸೆಲೆಯೇ ಇಲ್ಲವೆಂದು ಹೇಳುತ್ತಿದ್ದರು. ಹಾಗಾದರೆ, ಇಂಡಿಯಾದೇಶದಲ್ಲಿ ವಿಗ್ರಹಾರಾಧನೆಯನ್ನು ಮೊದಲು ಯಾರು ತಂದರು?... ಎಂದು ಅವರು ಕೇಳುತ್ತಾರೆ. ಅದಕ್ಕೆ ಅವರೇ ತೀರ ಗಂಭೀರವಾಗಿ, ಅತಿಶಯ ಬೆರಗುಗೊಳಿಸುವಂತೆಯೂ ಬೆಚ್ಚಿಬೀಳಿಸುವಂತೆಯೂ ಇರುವ ಖಂಡಿತ ಮಾತನ್ನು ಹೇಳುತ್ತಾರೆ. ಸುಮಾರು 2000 ವರ್ಷಗಳ ಹಿಂದೆ, ಹಿಂದೂಗಳ ಮತಧರ್ಮದಲ್ಲಿ ಕ್ರೈಸ್ತರೇ ಮೊಟ್ಟಮೊದಲಿಗೆ ಪ್ರತಿಮಾಪೂಜೆಯ ಪದ್ಧತಿಯನ್ನು ಪ್ರವೇಶಮಾಡಿಸಿದರೆಂದು ಅವರು ಹೇಳುತ್ತಾರೆ. ಅದು ಏನಾದರೂ ರಲಿ ; ಧರ್ಮಗಳ ಇತಿಹಾಸಪಂಡಿತರು ಬೇಕಾದರೆ, ಆ ದಿಶೆಯಲ್ಲಿ ಸಂಶೋಧನೆಗಳನ್ನು ನಡೆಸಲಿ. ಅವರ ಪ್ರಕಾರ, ಈಗ ಅತ್ಯವಶ್ಯವಾದ ಸಾಧನೆಯೆಂದರೆ ನಾವು ಪರಮಾತ್ಮಾನುಭವದ ಅತ್ಯಂತ ಉನ್ನತ ಶಿಖರಕ್ಕೆ ಏರಬೇಕಾದುದೇ ಆಗಿದೆ. ನಾನು ದೇಹವಲ್ಲ, ನಾನು ಮನಸ್ಸಲ್ಲ, ನಾನು ಬುದ್ಧಿಯಲ್ಲ, ಅಹಂಕಾರವೂ ಅಲ್ಲ ; ನಾನು "ಸಚ್ಚಿದಾನಂದ ಬ್ರಹ್ಮವೇ ಆಗಿದ್ದೇನೆ" ಎಂಬೀ ಪ್ರಧಾನತತ್ತ್ವದಲ್ಲಿ ಕೇಂದ್ರ

ಭಾವದಲ್ಲಿಇರುವ ಅಚಲವಾದ ವಿಶ್ವಾಸವೇ ಪ್ರಾಪಂಚಿಕವಾದ ಎಲ್ಲಾ ಕ್ಷೇತ್ರಗಳಲ್ಲಿಯೂ ಮತ್ತು ಆಧ್ಯಾತ್ಮಿಕ ಜೀವನದಲ್ಲಿಯೂ ಕ್ರಮ ಕ್ರಮವಾಗಿ ಯಶಸ್ಸಿಗೆ ಒಯ್ಯುತ್ತದೆ;– ಎಂದು ರಾಮತೀರ್ಥರು ಹೇಳುತ್ತಾರೆ.

ಹಿಂದೂಗಳ ಸಾಮಾಜಿಕ ಜೀವನ ವಿಷಯದಲ್ಲಿ ಅವರು ಜಾತಿಪದ್ಧತಿಗೆ ಸಂಪೂರ್ಣವಾಗಿ ವಿರೋಧಿಗಳಾಗಿದ್ದರು. ಹಿಂದೂಗಳ ಜಾತಿವ್ಯವಸ್ಥೆಗೆ ಜೀವನವೃತ್ತಿ ವಿಭಾಗದ ಸರಳ ನಿಯಮವೇ ಆಧಾರವಾಗಿದ್ದಿತು. ಆದ್ದರಿಂದ, ಅದು ಉಪಯುಕ್ತವಾದುದರಿಂದ ಪ್ರಪಂಚದ ಎಲ್ಲಾ ದೇಶಗಳಲ್ಲಿಯೂ ಆಚರಣೆಯಲ್ಲಿ ಈಗಲೂ ಇದೆ. ಆದರೆ ಸಾವಿರಾರು ವರ್ಷಗಳಲ್ಲಿ ಅದರ ಸುತ್ತಲೂ ಬೆಳೆದಿರುವ ಕಾಠಿಣ್ಯವು ಮಹಾ ವಿಪತ್ತಾಗಿಯೂ ವಿನಾಶಕರವಾಗಿಯೂ ಪರಿಣಮಿಸಿದೆ. ಕಸುಬುಗಳ ಶ್ರಮವಿಭಾಗದಲ್ಲಿ ಮಾತ್ರ ಉಪಯೋಗವಾಗಬೇಕಾದ ವ್ಯವಸ್ಥೆಯು ಮನುಷ್ಯ ಸಾಮಾನ್ಯರನ್ನು ವಿಭಾಗಿಸಿ ಪ್ರತ್ಯೇಕಿಸುವ ದುರ್ವ್ಯವಸ್ಥೆಯಾಗಿದೆ. ಅವರು ಈ ಸಂಸ್ಥೆಯ ನಿಯಮ-ನಿಬಂಧನೆಗಳನ್ನು ಹೊಟ್ಟೆಗೆ ಹೋಲಿಸುತ್ತಾರೆ, ಕಾಳಿನ ಬೆಳವಣಿಗೆಗೆ ಹೊಟ್ಟು ಕೆಲವು ಕಾಲದ-ಮಿತಿಯ-ವರೆಗೆ ಅವಶ್ಯವೇ ಸರಿ ; ಆದರೆ ಅದು ಕಬ್ಬಿಣದಂತೆ ಗಡುಸಾಗಿ ಎಂದೂ ಬದಲಾಯಿಸದಂತಾದರೆ, ಬೀಜದ ಬೆಳವಣಿಗೆಗೆ ಅದು ಖಂಡಿತವಾಗಿಯೂ ಮಾರಕವೇ ಆಗುತ್ತದೆ. ಶ್ರುತಿಯು ಅಥವಾ ವೇದಾಂತವು ಸರ್ವಕಾಲದಲ್ಲಿಯೂ ಸತ್ಯವಾದುದೆಂದೂ ಆದರೆ, ವರ್ಣ ವ್ಯವಸ್ಥೆಯ ನಿಯಮ–ನಿಬಂಧನೆಗಳನ್ನು ಶಾಸನಮಾಡುವ ಸ್ಮೃತಿಯು ಮಾತ್ರ ಆಯಾ ಕಾಲಗಳ ಜರೂರಾದ ಆವಶ್ಯಕತೆಗಳಿಗೆ ಅನುಸಾರವಾಗಿ ಬದಲಾಯಿಸುತ್ತಿರಬೇಕೆಂದೂ ಅವರು ಸಾಧ್ಯವಾದಷ್ಟೆಲ್ಲಾ ಒತ್ತಿ ಒತ್ತಿ ಸಾರುತ್ತಾರೆ· "ಜಡವಾದ ನಿಯಮಗಳನ್ನು ದೇವರೆಂಬಂತೆ ಏಕೆ ಆರಾಧಿಸುತ್ತೀರಿ? ನಿಮಗಾಗಿ ಅವು ಇವೆಯೇ ಹೊರತು, ಅವುಗಳಿಗಾಗಿ ನೀವಿಲ್ಲ. ಅವುಗಳನ್ನು ಕಲ್ಪಿಸಿದವರು ನೀವೇ ಅಲ್ಲವೆ ? ಹೀಗಿರುವಾಗ ಅವುಗಳೇಕೆ ನಿಮ್ಮ ಮೇಲೆ ಪ್ರಭುತ್ವವನ್ನು ನಡೆಸಬೇಕು? ಮುಂದುವರಿಯಬೇಕೆಂಬ ಮನಸ್ಸಿದ್ದರೆ ಹಿಂದೂಗಳು ಈ ಓಬೀರಾಯನ ಕಾಲದ ಜಾತಿಪದ್ಧತಿಯನ್ನು ಒಮ್ಮೆಗೇ ನಿರ್ಮೂಲಮಾಡಿ ಒಂದು ರಾಷ್ಟ್ರದ ಒಂದೇ ಜನಾಂಗವಾಗಿ ಒಟ್ಟುಕೂಡಬೇಕು." ಎಂದು ಅವರು ಹೇಳುತ್ತಾರೆ.

ಅವರ ಕಾಲದ ನಿತ್ಯಜೀವನದಲ್ಲಿ ಸ್ತ್ರೀ-ಶೂದ್ರರು ಪಡೆದಿದ್ದ ಶೋಚನೀಯ ಸ್ಥಿತಿಯ ಕಡೆಗೆ ಅವರ ಪೂರ್ಣ ಹೃದಯವು ಹರಿದು ಹೋಗುತ್ತಿತ್ತು. ಅವರು ಮರದ ಬೇರುಗಳಿಗೆ ಅವರನ್ನು ಹೋಲಿಸುತ್ತಾರೆ. ಬೇರುಗಳು ಕ್ಷೀಣಿಸಿ ಹಾಳಾಗುತ್ತಿದ್ದರೆ, ಮರವು ಎಂದೂ ಚಿಗುರಿ ಬೆಳೆಯುವುದಿಲ್ಲ. ಅವರನ್ನು ನಾವು ಅಜ್ಞಾನದ ಕತ್ತಲೆಯಲ್ಲಿ ತುಳಿದಿಟ್ಟಿರುವದರಿಂದ ಅವರಿಗೆ ವಿದ್ಯಾಭ್ಯಾಸ ಮಾಡಿಸಿ ಅವರ ವಿಮೋಚನೆಗೆ ಪರಮಾವಧಿಯಾಗಿ ಪ್ರಯತ್ನಪಟ್ಟ ಹೊರತು, ರಾಷ್ಟ್ರನಿರ್ಮಾಣ ಕಾರ್ಯಗಳ ಯಾವ ಕ್ಷೇತ್ರದಲ್ಲಿಯೂ ನಾವು ನಿಜವಾದ ಅರ್ಥದಲ್ಲಿ ಮುಂದುವರಿಯುವದಕ್ಕೆ ಅವಕಾಶವಾಗಲೀ ಭರವಸೆಯಾಗಲೀ ಇಲ್ಲ ;—ಎಂದು ಅವರು ಹೇಳುತ್ತಾರೆ.

ಅವರು ತಮ್ಮ ಅಮೆರಿಕಾದ ಭಾಷಣಗಳಲ್ಲಿ ನಮ್ಮ ಮೊನಚಾದ ಗಮನವನ್ನು ಸೆಳೆದಿರುವ, ವರ್ತಮಾನಕಾಲದ ಇತರ ಎರಡು ಅತ್ಯಂತ ಮುಖ್ಯವಾದ ಸಮಸ್ಯೆಗಳು ಯಾವವೆಂದರೆ,–ಭಯಂಕರ ವೇಗದಿಂದ ಏರುತ್ತಿರುವ ಭಾರತದ ಜನಸಂಖ್ಯೆ ಮತ್ತು ದಾರಿದ್ರ್ಯ. ಇಂಡಿಯಾ ದೇಶವು ಪ್ರಾಯಶಃ ಪ್ರಪಂಚದಲ್ಲಿಯೇ ಅತ್ಯಂತ ಹೆಚ್ಚಾದ ಜನಸಾಂದ್ರತೆಯುಳ್ಳ, ಮತ್ತು ಅತ್ಯಂತ ಹೆಚ್ಚಿನ ಬಡತನದಿಂದ ಭಂಗಪಡುತ್ತಿರುವ ದೇಶವಿರಬಹುದೆಂದು ಅವರು ಹೇಳಿದ್ದಾರೆ. ಈ ಸಮಸ್ಯೆಯ ವಿಷಯದಲ್ಲಿ ಅವರು,– ಒಂದು ದೇಶದ ಜನಸಂಖ್ಯೆಯನ್ನು ಹತೋಟಿಯಿಂದ ಯೋಗ್ಯ ಮಿತಿಯಲ್ಲಿ ಇಟ್ಟು ಕೊಳ್ಳದಿದ್ದರೆ, ವಿನಾಶಕರವಾದ ಅಂಟುರೋಗಗಳೂ ಯುದ್ಧಗಳೂ ಭೂಕಂಪಗಳೂ– ಇವೇ ಮೊದಲಾದ ಅನೇಕ ವಿಪತ್ತುಗಳು ಆ ದೇಶದ ಮೇಲೆ ಖಂಡಿತವಾಗಿಯೂ ದಾಳಿ ಮಾಡುವವೆಂದು ತ್ರೇತಾಯುಗದ ವಸಿಷ್ಠ ಮಹರ್ಷಿಗಳು ಹೇಳಿದ್ದಾರೆಂದು —ಇತಿಹಾಸಪೂರ್ವದ ಸಾಧಾರವಾದ ಹಿತೋಕ್ತಿಯನ್ನು ಉದಾಹರಿಸುತ್ತಾರೆ. ಐವತ್ತು ವರ್ಷಗಳ ಹಿಂದೆಯೇ ರಾಮತೀರ್ಥರು ಈ ಗುರುತರವಾದ ಸಮಸ್ಯೆಯ ವಿಷಯದಲ್ಲಿ ಅಷ್ಟು ಹೌಹಾರಿಸುವಂಥ ಎಚ್ಚರಿಕೆಯನ್ನು ಕೊಟ್ಟರಾದರೂ ಈ ಸಮಸ್ಯೆಯ ಉಗ್ರತೆಯು ಕಡಿಮೆಯಾಗುವದಕ್ಕೆ ಬದಲು ಇವತ್ತು ಇನ್ನೂ ಹೆಚ್ಚು ಭಯಂಕರವಾಗಿದೆ. ಈ ಕೇಡನ್ನು ಕಡಿಮೆ ಮಾಡುವದಕ್ಕೆ ಅವರು ಕೆಲವು ಉಪಾಯಗಳನ್ನು ಸೂಚಿಸಿದರಲ್ಲದೆ, ಪರಲೋಕದ ಸುಖಕ್ಕಾಗಿ ಇಹಲೋಕದಲ್ಲಿ ದೊಡ್ಡ ಸಂತಾನ ಪರಂಪರೆಯನ್ನು ಬೆಳೆಸಿ ಹೋಗುವದು ಅತ್ಯಂತ ಅವಶ್ಯ ಧರ್ಮ ವೆಂದು ಹಿಂದೂಗಳಲ್ಲಿರುವ ನಂಬಿಕೆಯನ್ನು ಅವರು ತಿರಸ್ಕಾರದಿಂದ ಕಂಡರು. ನಾವು ನಮ್ಮ ಆಧ್ಯಾತ್ಮಿಕ ಶ್ರೇಯಸ್ಸನ್ನು ನಮ್ಮ ಸ್ವಂತ ಪ್ರಯತ್ನದಿಂದ ಸಾಧಿಸ ಬೇಕಲ್ಲದೆ ಬೇರೆ ಯಾರಿಂದಲೂ ಸಾಧ್ಯವಲ್ಲವೆಂದೂ ದೇವರಿಂದ ಕೂಡ ಸಹಾಯ ವಾಗಲಾರದೆಂದೂ ಅವರು ಸ್ಪಷ್ಟವಾಗಿ ಹೇಳಿದರು.

ಬಡತನದ ಸಮಸ್ಯೆಯು ಅತ್ಯಂತ ಪ್ರಸಿದ್ಧವೇ ಇರುವದರಿಂದ ಅದನ್ನು ಮತ್ತೆ ಮತ್ತೆ ಹೇಳುವ ಅಗತ್ಯವಿಲ್ಲ. ಅದೇ ಮೂಲ ಸಮಸ್ಯೆಯೆಂದೂ ಎಲ್ಲಾ ಸಮಸ್ಯೆಗಳಿಗಿಂತಲೂ ಹೆಚ್ಚಿನ ಸಮಸ್ಯೆಯೆಂದೂ ಅವರು ಹೇಳುತ್ತಾರೆ. ಅದರ ಉಗ್ರತೆ ಯನ್ನು ಕಡಿಮೆ ಮಾಡುವದಕ್ಕೆ ನೀವು ಏನು ಮಾಡುವದಕ್ಕೂ ಸಾಧ್ಯವಿಲ್ಲವಾದರೆ, ನಿಮ್ಮ ನಾಡಿನ ಜನರಿಗೆ ಜೀವನದ ಕೇವಲ ಅತ್ಯಗತ್ಯ ವಸ್ತುಗಳಾದ ಅನ್ನ, ವಸ್ತ್ರ, ವಸತಿಗಳನ್ನೂ ನೀವು ಪೂರೈಸಲಾರಿರಾದರೆ, ಪ್ರಗತಿಪಥದಲ್ಲಿ ಒಂದು ಅಂಗುಲವನ್ನೂ ನೀವು ಮುಂದುವರಿಯುವ ಆಸೆಯನ್ನು ಹೊಂದಿರಲಾರಿರಿ ;—ಎಂದು ಅವರು ಹೇಳುತ್ತಾರೆ. ಹಸುವಿನ ಸಾಧುಸ್ವಭಾವವು ಮನೆಯ ಮಾತಾಗಿದೆಯಷ್ಟೆ. ಆದರೆ ಒಂದೆರಡು ಹಸುಗಳಿಗೆ ಮಾತ್ರ ಮೇವಿರುವ ಒಂದು ಆವರಣದಲ್ಲಿ ಹತ್ತು ಹಸುಗಳನ್ನು ಕೂಡಿದರೆ, ಅಂಥಾ ಅತ್ಯಂತ ಸೌಮ್ಯ ಸ್ವಭಾವದ ಆ ಪ್ರಾಣಿಗಳು ಕೂಡ ಆಹಾರಕ್ಕಾಗಿ ಒಂದರೊಡನೊಂದು ನಿಶ್ಚಯವಾಗಿಯೂ ಜಗಳವಾಡುತ್ತವೆ,

ಆದ್ದರಿಂದ ಈ ಪರಿಸ್ಥಿತಿಯನ್ನು ಸುಧಾರಿಸುವದಕ್ಕಾಗಿ ವ್ಯವಸಾಯ ಮೊದಲಾದ ಉತ್ಪಾದನೆಗಳಲ್ಲಿ ವೈಜ್ಞಾನಿಕ ವಿಧಾನಗಳನ್ನು ಅವಲಂಬಿಸಬೇಕೆಂದು ಅವರು ಹೇಳುತ್ತಿದ್ದರು. ಅಮೆರಿಕಾದೇಶಕ್ಕೆ ಹೋಗಿ ವೈಜ್ಞಾನಿಕ ಕಲೆಗಳಲ್ಲಿಯೂ ಉದ್ಯೋಗಗಳಲ್ಲಿಯೂ ಸಂಪೂರ್ಣ ಜ್ಞಾನವನ್ನು ಪಡೆಯಬೇಕೆಂದು ಅವರು ಭಾರತವ ಉತ್ಸಾಹಿಗಳಾದ ತರುಣರಿಗೆ ಹೃತ್ಪೂರ್ವಕವಾಗಿ ಬುದ್ಧಿವಾದ ಹೇಳಿ ಪ್ರೋತ್ಸಾಹಿಸುತ್ತಿದ್ದರು. ಅಂಥಾ ಪರಿಣತ ವಿದ್ಯಾರ್ಥಿಗಳಿಗೆ ಅಮೆರಿಕೆಯ ವಿಶ್ವವಿದ್ಯಾನಿಲಯಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ಹೆಚ್ಚಿನ ಶಿಕ್ಷಣ ಕೊಡುವದಕ್ಕಾಗಿ ವಿದ್ಯಾರ್ಥಿವೇತನಗಳನ್ನೂ ಉಚಿತ ಸಹಾಯಗಳನ್ನೂ ನೀಡಬೇಕೆಂದು ಅವರು ಅಮೆರಿಕಾ ಜನರಲ್ಲಿ ಮೊರೆಯಿಟ್ಟರು. ಇಷ್ಟೆಲ್ಲಾ ಆದರೂ ಅವರು - ಈಗ ನಾವು ಮರುಳಾಗಿರುವ - ಏರಿದ ಮಟ್ಟದ ದುಬಾರಿಯ ಜೀವನದ ಮೋಹಜಾಲಕ್ಕೆ ಸಂಪೂರ್ಣ ವಿರೋಧಿಗಳಾಗಿದ್ದರು, ಒಂದು ಒರಟು ಬಟ್ಟೆಯು ನಮ್ಮನ್ನು ಚಳಿಯ ಕೊರೆತದಿಂದ ಕಾಪಾಡುವದಾದರೆ, ರೇಷ್ಮೆಯ ವಸ್ತ್ರದ-ಪೀತಾಂಬರದ-ಅಗತ್ಯವೇನು ?—ಎಂದು ಅವರು ಕೇಳುತ್ತಾರೆ. ಯವೆಯ ಅಥವಾ ಜವೆ ಗೋಧಿಯ ಅಥವಾ ರಾಗಿ–ಜೋಳಗಳ ನುಚ್ಚೂ ಹಾಲೂ ವಿದ್ಯಾರ್ಥಿಗಳಿಗೆ ಸಾಕಷ್ಟು ಪುಷ್ಟಿಯನ್ನೂ ತುಷ್ಟಿಯನ್ನೂ ಕೊಡುವದಾದರೆ, ಹೆಚ್ಚಿನ ಕೊಬ್ಬನ್ನು ಬೆಳೆಸುವ ತುಪ್ಪವೇಕೆ ?–ಎಂದು ಅವರು ಕೇಳುತ್ತಾರೆ. ಸ್ವಲ್ಪದರಲ್ಲಿ ಹೇಳುವದಾದರೆ, ಅವರು ಉನ್ನತ ವಿಚಾರಕ್ಕೂ ಆದರೆ ಅತಿ ಸರಳವೂ ಸುಲಭವೂ ಸತ್ತ್ವಯುತವೂ ಆದ ಜೀವನಕ್ಕೂ ಪ್ರೇರಕರಾಗಿದ್ದರು.

ಹೀಗೆ, ಇಂಡಿಯಾದೇಶದ ಸಂಬಂಧವಾಗಿ ಅವರು ಅಮೆರಿಕೆಯಲ್ಲಿ ಮಾಡಿದ ಭಾಷಣಗಳಲ್ಲಿ ಪ್ರಾಯಶಃ ಜೀವನದ ಪ್ರತಿಯೊಂದು ವೃತ್ತಿಯ ಮೇಲೂ ತಮ್ಮದೇ ಆದ ವೇದಾಂತದೃಷ್ಟಿಯಿಂದ ಮಾಡಿದ, ಇವತ್ತು ಕೂಡ ಹಿತ–ವಿಹಿತವೆಂದು ತೋರುವ, ಸೂಚನೆಗಳನ್ನು ನಾವು ಕಾಣಬಹುದು. ಆದರೆ, ಅವರು ವಿದೇಶ ಪ್ರವಾಸದಿಂದ ಸ್ವದೇಶಕ್ಕೆ ಹಿಂದಿರುಗಿದ ಮೇಲೆ ಅವುಗಳನ್ನು ಹೆಚ್ಚು ಒತ್ತಿ ಹೇಳಲಿಲ್ಲ. ಆದೇಕೆ ?—ಎಂದು ಯಾರಿಗೆ ಗೊತ್ತು ? ದೇಶವು ಪರಕೀಯರ ದಾಸ್ಯದಿಂದ ವಿಮೋಚನೆಮಾಡಲ್ಪಟ್ಟ ಹೊರತು, ಜೀವನದ ಯಾವ ವಲಯದಲ್ಲಿಯೂ ನಿಜವಾದ ಪ್ರಗತಿಯ ರೀತಿಯಿಂದ ವಾಸ್ತವವಾದ ಏನನ್ನೂ ಸಾಧಿಸುವದು ಸಾಧ್ಯವಿಲ್ಲವೆಂದು ಪ್ರಾಯಶಃ ಅವರು ತಮ್ಮ ನಿರ್ಮಲ ದೃಷ್ಟಿಯಲ್ಲಿ ಕಂಡಿರಬೇಕು. “ಧರ್ಮಕ್ಕೆ ಮರುಳಾಗಿರತಕ್ಕವರೂ ದೇವರ ದರ್ಶನವನ್ನು ಬಯಸತಕ್ಕವರೂ ಪರಮಾತ್ಮಾನುಭವಕ್ಕಾಗಿ ಹಂಬಲಿಸತಕ್ಕವರೂ ಆದ ಓ ಭಾರತೀಯರೆ ! ನಿಮ್ಮ ದೇಶದೊಡನೆಯೂ ನಿಮ್ಮ ದೇಶದ ಜನಾಂಗದೊಡನೆಯೂ ನೀವು ಸಂಪೂರ್ಣವಾಗಿ ತಾದಾತ್ಮ್ಯವನ್ನು ಪಡೆದ ಹೊರತು, ನಿಮ್ಮ ಗುರಿಯನ್ನು ನೀವು ಎಂದೆಂದಿಗೂ ಮುಟ್ಟಲಾರಿರಿ. ನಿಮ್ಮ ದೇಶದ ಪ್ರೇಮದಿಂದ ನಿಮ್ಮ ಹೃದಯದ ಪ್ರತಿಯೊಂದು ಎಳೆಯೂ ಮಿಡಿದುಕೊಳ್ಳದೆ, ಬಡಿದುಕೊಳ್ಳದೆ, ಧರ್ಮದ ಅತ್ಯಂತ ಉನ್ನತವಾದ ಧ್ಯೇಯವನ್ನು

ಸಾಧಿಸುವ ಭರವಸೆಯಿಲ್ಲ. ಮೊದಲು ನಿಮ್ಮ ಸಹಾನುಭೂತಿಯನ್ನೂ ಕನಿಕರವನ್ನೂ ವಿಶಾಲಗೊಳಿಸಬೇಕು. ನಿಮ್ಮ ಕುಟುಂಬದ ಅಥವಾ ಯಾವದೊಂದು ಜಾತಿ–ಮತದ ಸಂಕುಚಿತವಾದ ಎಲ್ಲೆಕಟ್ಟಿನಲ್ಲಿ ಸೆರೆಯಾಳಾಗಿ ಉಳಿದರೆ, ನೀವು ಆಧ್ಯಾತ್ಮಿಕವಾಗಿ ಮುಂದುವರಿಯಲಾರಿರಿ. ಅದಕ್ಕಾಗಿ ನಿಮ್ಮನ್ನು ನೀವು ಇಡೀ ರಾಷ್ಟ್ರದೊಡನೆ ಒಂದಾಗಿ ಭಾವಿಸಬೇಕು. ಮತ್ತು ಅದರ ಪ್ರತಿಯೊಬ್ಬ ನಾಗರಿಕ ವ್ಯಕ್ತಿಯಲ್ಲಿಯೂ ಇಡೀ ಭಾರತವೇ ವ್ಯಕ್ತವಾಗಿರುವದನ್ನು ಗುರುತಿಸಬೇಕು. ಜಾತಿ-ಮತ ವಿಭಾಗಗಳು ಅಮೆರಿಕಾದಲ್ಲಿ ಭಾರತಕ್ಕಿಂತಲೂ ಕಡಿಮೆಯೇನಿಲ್ಲ. ಆದರೆ ಅವರು ರಾಷ್ಟ್ರಕ್ಕಾಗಿ ಮಹತ್ತಮ ಬಲಿದಾನವನ್ನು ಮಾಡುವದಕ್ಕೂ ಹಿಮ್ಮೆಟ್ಟದಷ್ಟು ಆಳವಾಗಿ ರಾಷ್ಟ್ರ ಭಾವನೆಯೂ ಭಕ್ತಿಯೂ ಪ್ರತಿಯೊಬ್ಬ ಅಮೆರಿಕದ ನಾಗರಿಕನ ಹೃದಯದಲ್ಲಿಯೂ ಇಳಿದಿರುತ್ತದೆ. ಇದೇ ಅವರ ಕಾರ್ಯಗತವಾದ ವ್ಯವಹಾರ-ವೇದಾಂತ. ನೀವು ಬ್ರಾಹ್ಮಣರಾದರೆ ನಿಮ್ಮ ದೇಶದ ಪುರೋಭಿವೃದ್ಧಿಗಾಗಿ ನಿರಂತರ ಯೋಚನೆಯನ್ನೂ ಯೋಜನೆಯನ್ನೂ ಮಾಡಿ, ನಿಮ್ಮ ಎಲ್ಲಾ ಬೌದ್ಧಿಕ ಶಕ್ತಿಗಳನ್ನೂ ತಪಶ್ಯಕ್ತಿಯನ್ನೂ ದೇಶದ ಸೇವೆಗಾಗಿ ಧಾರೆಯೆರೆಯ ಬೇಕು. ನೀವು ಕ್ಷತ್ರಿಯರಾದರೆ ನಿಮ್ಮ ದೇಶಕ್ಕಾಗಿ ಜೀವವನ್ನು ಅರ್ಪಿಸುವದಕ್ಕೆ ಸಿದ್ಧರಾಗಿ. ನೀವು ವೈಶ್ಯರಾದರೆ ನಿಮ್ಮ ಸಂಪತ್ತನ್ನು ದೇಶದ ಉಪಯೋಗಕ್ಕಾಗಿ ಪವಿತ್ರ ಮುಡಿಪಾಗಿ ಸಮರ್ಪಿಸಿ. ಏಳಿರಿ; ಎಚ್ಚರಗೊಳ್ಳಿರಿ ಇವತ್ತು ಸಮಸ್ತ ಜನರ ಅಭಿವೃದ್ಧಿಗೆ ಈ ರಾಷ್ಟ್ರಭಕ್ತಿಯ ಧರ್ಮದ ಹೊರತು ಬೇರೆ ಮಾರ್ಗವಿಲ್ಲ.'' ಅವರು ಹೀಗೆ ಸಾರಿ ಹೇಳಿದರು.

ಬ್ರಾಹ್ಮಣರೂ ಕ್ಷತ್ರಿಯರೂ ವೈಶ್ಯರೂ ದೇಶಹಿತಕ್ಕಾಗಿ ಸ್ವಾರ್ಥತ್ಯಾಗ ಮಾಡುವಂತೆ ಅವರು ಹುರಿದುಂಬಿಸಿದರು. ಹಿಂದೂಗಳಲ್ಲಿ ದ್ವಿಜರು ಕೀಳಾಗಿ ಕಾಣುತ್ತಿದ್ದ ಶ್ರಮಜೀವನವನ್ನು ಸಂನ್ಯಾಸಿಗಳು ಸಹ ಒಪ್ಪಿಕೊಂಡು ದೇಶಕ್ಕಾಗಿ ಕಷ್ಟಪಟ್ಟು, ಕೈಮುಟ್ಟಿ ಕೆಲಸಮಾಡುವಂತೆ ಪ್ರೋತ್ಸಾಹಿಸಿದರು. ಹೀಗೆ ಅವರು ದೇಶಭಕ್ತಿಯನ್ನು ಆಧ್ಯಾತ್ಮಿಕವಾಗಿ ಮಾಡಿದರು. ನಿಸ್ಸಂದೇಹವಾಗಿ ಅನೇಕ ಉದಾತ್ತ ಜೀವರಿಗೆ ಆ ಕಾಲದಲ್ಲಿ ಸ್ಫೂರ್ತಿಯನ್ನು ಕೊಟ್ಟು, ಮಾತೃಭೂಮಿಯ ಸೇವೆಗೆ ಅವರನ್ನು ಸಿದ್ಧರನ್ನಾಗಿ ಮಾಡಿದರು.

ಅವರು ಸಮಾಜವಾದವನ್ನೂ Socialism ಪ್ರತಿಪಾದಿಸಿದರು. ಖಾಸಗಿ ಸ್ವಂತ ಆಸ್ತಿಯನ್ನು ಹೊಂದಿರುವ ಪದ್ಧತಿಗೆ ವಿರೋಧವಾಗಿರುವದರಿಂದ ವೇದಾಂತವೂ ಸಮಾಜವಾದವೂ-ಆ ಅರ್ಥದಲ್ಲಿ-ಒಂದೇ ಸಮನಾಗಿವೆ ಎಂದು ಅವರು ಹೇಳಿದರು, ಈ ಒಂದು ದೃಷ್ಟಿಯಿಂದ ಈ ಎರಡರ ಗುರಿ ಒಂದೇ. ನೀವು ಶರೀರವಲ್ಲ. ನೀವು ಮನಸ್ಸಲ್ಲ. ನೀವು ಆತ್ಮನಾಗಿರುವದರಿಂದ ಎಲ್ಲದರಲ್ಲಿ ಎಲ್ಲವೂ ಆಗಿದ್ದೀರಿ ಎಂದು ವೇದಾಂತವು ಹೇಳುತ್ತದೆ. ಆದ್ದರಿಂದ ಈ ವಾದದಲ್ಲಿ ಸ್ವಂತ ಆಸ್ತಿಯ ಪ್ರಶ್ನೆಯೇ ಇಲ್ಲ. ಶೋಷಣೆಗೆ ಕಾರಣವಾಗುವದರಿಂದ ಸಮಾಜವಾದವು ಖಾಸಗಿ ಆಸ್ತಿಯನ್ನು ನಿಷೇಧಿಸುತ್ತದೆ. ಅಷ್ಟು ದೂರದವರೆಗೆ ಅವೆರಡೂ ಒಂದೇ.

ಆದರೆ, ಸಮಾಜವಾದದಲ್ಲಿ ಅಡಗಿರುವ (ಜಮೀನುಗಳೂ ಇತರ ಉತ್ಪತ್ತಿ ಸಾಧನಗಳೂ ಎಲ್ಲರ ಉಪಯೋಗಕ್ಕಾಗಿ ಜನಸಾಮಾನ್ಯದ ಸ್ವಾಮ್ಯವಾಗಿರಬೇಕೆಂಬ) ಸಮಷ್ಟಿವಾದದ-ಸಾಮುದಾಯಿಕ ವಾದದ--ಶಕ್ತಿಯು, ಭಾವನೆಯು ವೇದಾಂತದ ಸತ್ತ್ವಕ್ಕೆ ವಿರೋಧ. ನೀವು ಯಾರಿಗೂ ಗುಲಾಮರಲ್ಲ ; ಆದರೆ ಸರ್ವಕ್ಕೂ ಪ್ರಭು-ಎಂದು ಅವರು ಹೇಳುತ್ತಾರೆ. ನಿಮ್ಮ ಆತ್ಮನನ್ನು ಅವಶ್ಯವಾದರೆ ಇಡೀ ಜಗತ್ತಿನ ವಿರುದ್ಧವಾಗಿ ನಿಲ್ಲಿಸಬಹುದೆಂದು ಅವರೆನ್ನುತ್ತಾರೆ.

ಇಂಡಿಯಾ ದೇಶದ ಸಂಬಂಧವಾದ ಅವರ ಅಮೆರಿಕಾದ ಉಪನ್ಯಾಸಗಳಿಂದ ಸ್ಪಷ್ಟವಾಗುವ ಬೋಧನೆಗಳಲ್ಲಿ ಈ ಮೇಲಿನವು ಕೆಲವು. ಭಾರತದಲ್ಲಿ ವರ್ತಮಾನ ಕಾಲದಲ್ಲಿರುವ ಪರಿಸ್ಥಿತಿಗೂ ಲಾಭದಾಯಕವಾಗಿ ಇವುಗಳನ್ನೇ ಅನ್ವಯಿಸಬಹುದು. ಅವರು ವೇದಾಂತಿಗಳೂ ಜೀವನ್ಮುಕ್ತರೂ ಆಗಿದ್ದರೂ ಹೃದಯಾಂತರಾಳದಲ್ಲಿ ದೇಶಭಕ್ತರಾಗಿದ್ದರು. ಆದರೆ ಅವರ ಸೇವಾ ಪದ್ಧತಿಯು ಅಪೂರ್ವವೂ ಅನುಪಮವೂ ಆದುದು. ಕ್ರಿ. ಶ. 1901 ರಷ್ಟು ಹಿಂದೆಯೇ ಅವರು ಅಚ್ಚರಿಯ ಉದ್ಗಾರ ಮಾಡಿದ್ದರು : "ಅನೇಕ ಜೀವರ ಮೂಲಕವಾಗಲೀ ಒಂಟಿಯಾಗಲೀ ಪ್ರಯತ್ನ ಮಾಡುವದರಿಂದ ನಿಜವಾದ ಜೀವಸತ್ತ್ವವನ್ನು ತುಂಬಿ ಹತ್ತು ವರ್ಷಗಳೊಳಗಾಗಿ ಇಂಡಿಯಾದಿಂದ ಅಂಧಕಾರವನ್ನೂ ದೌರ್ಬಲ್ಯವನ್ನೂ ತೊಲಗಿಸುವನೆಂದೂ ಮತ್ತು ಇಪ್ಪತ್ತನೆಯ ಶತಮಾನದ ಪೂರ್ವಾರ್ಧದೊಳಗೆ ಇಂಡಿಯಾ ದೇಶವು ತನ್ನ ಪೂರ್ವ ವೈಭವಕ್ಕಿಂತಲೂ ಹೆಚ್ಚಿನ ಗೌರವದ ಸ್ಥಾನಮಾನಗಳಲ್ಲಿ ಪುನಃ ಪ್ರತಿಷ್ಠಾಪಿತವಾಗುವದೆಂದೂ ರಾಮನು ಗಂಭೀರವಾದ ಭರವಸೆಯನ್ನು ಕೊಡುತ್ತಾನೆ. ಈ ಮಾತುಗಳು ಶಾಶ್ವತವಾದ ದಾಖಲೆಯಾಗಲಿ." ಈ ವಿಲಕ್ಷಣವಾದ ಭರವಸೆಯು ಖಂಡಿತವಾಗಿಯೂ ರಾಜಕಾರಣಿಯ ಮುನ್ನೋಟವಾಗಲೀ ದೈವಜ್ಞನ ಭವಿಷ್ಯವಾಣಿಯಾಗಲೀ ಯೋಗಸ್ಥ ಮನಸ್ಸಿನ ಕಲ್ಪಿತ ಕಥೆಯಾಗಲೀ ಆಗಿರಲಿಲ್ಲ. ಅದು ಆತ್ಮಾನುಭವಿಯ ಗುರುತರವಾದ ಭರವಸೆಯಾಗಿದ್ದಿತು ; ಸತ್ಯವಾದ ವಾಗ್ದಾನವಾಗಿದ್ದಿತು. ಆದ್ದರಿಂದ ಅವರ ಸ್ವಕೀಯ ದೃಷ್ಟಿಗನುಗುಣವಾಗಿ ಪೂರ್ಣ ಹೊಣೆಗಾರಿಕೆಯಿಂದ ಅಕ್ಷರಶಃ ಆ ಮಾತು ಪಾಲನೆಯಾಯಿತು-ಸಾಧನೆಯಾಯಿತು. ಈ ಪ್ರಪಂಚದಲ್ಲಿ ವಸ್ತುವಾಗಲೀ ಶಕ್ತಿಯಾಗಲೀ ಏನೊಂದೂ ಎಂದೂ ನಷ್ಟವಾಗುವದಿಲ್ಲ ; ಮಂಜೂ ನೀರೂ ಆವಿಯೂ ಒಂದೇ ಆಗಿವೆ. ರೂಪಗಳು ಬದಲಾವಣೆಯಾಗುತ್ತವೆಯೇ ಹೊರತು ವಸ್ತುವಲ್ಲ. ಆಶೆಗಳೂ ಬಯಕೆಗಳೂ ಹಂಬಲಗಳೂ ಲಾಲಸೆಗಳೂ ಮನಸ್ಸಿನ ಶಕ್ತಿಗಳು. ಅವುಗಳು ನಾಶವಾಗುವದಿಲ್ಲ. ಈ ಎಲ್ಲವೂ ಸಕಾಲದಲ್ಲಿ ಸಫಲವಾಗುತ್ತವೆ. ಅನಾಸಕ್ತನೂ ನಿಸ್ಸ್ವಾರ್ಥಿಯೂ ಆದ ದೇಶಭಕ್ತ ಮಹಾತ್ಮನ ಆಶೆಗಳು ಫಲವನ್ನು ಪಡೆಯಲು ಹೆಚ್ಚು ಶಕ್ತಿಯುತವಾಗಿರುತ್ತವೆ. ಆತ್ಮಾನುಭವಿಯಲ್ಲಿರಬಹುದಾದ ಲೋಕಹಿತಾರ್ಥವಾದ ಭಾವನೆಗಳೂ ಕಾಮನೆಗಳೂ ನದಿಗಳಿಂದಲೂ ಮರಗಳಿಂದಲೂ ಕಲ್ಲುಗಳಿಂದಲೂ ಸಹ-ಸಾಕ್ಷಾತ್ತಾಗಿ ಸ್ವತಃ ಪ್ರಕೃತಿಯಿಂದಲೇ

–ಸಂಗ್ರಹ ಮಾಡಲ್ಪಟ್ಟು ಅನುಕೂಲವಾದ ಸಮಯ ಒದಗಿದೊಡನೆಯೇ ಅತ್ಯಂತ ಆಶ್ಚರ್ಯಕರವಾಗಿ ಪವಾಡವೆಂಬಂತೆ ಫಲರೂಪದಿಂದ ಪ್ರಕಟವಾಗುತ್ತವೆ.– ಎಂದು ಅವರು ಹೇಳುತ್ತಾರೆ. ರಾಮತೀರ್ಥರು ಜೀವನ್ಮುಕ್ತರಾಗಿದ್ದರು. 1906 ರಲ್ಲಿ ಗಂಗಾ ನದಿಯಲ್ಲಿ ಸ್ನಾನಮಾಡುವಾಗ ಮಹಾ ನಿರ್ವಾಣವನ್ನು ಹೊಂದಿದರು. ಹೀಗೆ ಪುನರ್ಜನ್ಮವು ಅವರಿಗೆ ಕೊನೆಯಾಯಿತು. ಅವರು ಸರ್ವದರಲ್ಲಿ ಸರ್ವವೂ ಆಗಿದ್ದರು. ಪ್ರತಿಯೊಬ್ಬ ಜೀವನ್ಮುಕ್ತನೂ ಹೀಗೆಯೇ ಸರಿ. ಆದರೆ ಅವರ ಸಾತ್ತ್ವಿಕ ವಾದ ಆಶೆಯೂ ಗಂಭೀರವಾದ ಭರವಸೆಯೂ ವ್ಯರ್ಥವಾಗದೆ ಅವರ ಇಚ್ಛೆಯಂತೆ ವಾಸ್ತವವಾಯಿತು, ಸತ್ಯವಾಯಿತು.

ಅವರ ಬೋಧೆಗನುಸಾರವಾಗಿ ನಡೆದುಕೊಂಡು ಅತ್ಯಂತ ಸಾಮಾನ್ಯರಿಂದ ಅತ್ಯಂತ ಶ್ರೇಷ್ಠರ ವರೆಗೂ ಎಲ್ಲಾ ಜನರಲ್ಲಿಯೂ ಅದನ್ನೇ ಪ್ರಸಾರ ಮಾಡುವದಕ್ಕೆ ರಾಮನ ಪ್ರೇಮಿಗಳಿಗೆ ಈಗ ಸರಿಯಾದ ಕಾಲವಾಗಿದೆ.

Introduction

ಪ್ರಸ್ತಾವನೆ

ನಮ್ಮೀ ಪ್ರಪಂಚದಲ್ಲಿ, ಇದರ ಇತಿಹಾಸದ ಅತ್ಯಂತ ಗಂಡಾಂತರ ಸಮಯದಲ್ಲಿ ಆಗಾಗ ತೋರಿಕೊಳ್ಳುವ ಮಹಾಪುರುಷರಲ್ಲಿ ತತ್ತ್ವಜ್ಞಾನಿಗಳೂ ಕವಿಗಳೂ ಬೋಧಕರೂ ದಿವ್ಯಾತ್ಮರೂ ಆದ ಸ್ವಾಮಿರಾಮರೂ ಒಬ್ಬರೆಂದು ಧಾರಾಳವಾಗಿ ಹೇಳಬಹುದು. **ಅವರು ಖಂಡಿತವಾಗಿಯೂ ಭರತವರ್ಷದ ಅತ್ಯಂತ ಪ್ರಖ್ಯಾತರೂ ಶ್ರೇಷ್ಠರೂ ಆದ ಪುತ್ರರಲ್ಲಿ ಒಬ್ಬರಾಗಿದ್ದು ಅತ್ಯಂತ ಅವಶ್ಯವಾದಾಗ ನಮ್ಮಲ್ಲಿಗೆ ಬಂದರು.** ನಮ್ಮಲ್ಲಿ ಆಗಲೇ ಅತಿಯಾಗಿರುವ ಯಾವದೊಂದು ಹೊಸ ಮತವನ್ನಾಗಲೀ ಸಮಾಜವನ್ನಾಗಲೀ ಸ್ಥಾಪಿಸುವದಕ್ಕಾಗಿ ಅಥವಾ ಯಾವ ಹಳೆಯ ಮೃತ ಧರ್ಮವನ್ನು ಅಥವಾ ಪೂಜಾ ಪದ್ಧತಿಯನ್ನು ಉಜ್ಜೀವನ ಮಾಡುವದಕ್ಕಾಗಿ ಇಂಡಿಯಾದ ಇತಿಹಾಸರಂಗದಲ್ಲಿ ಅವರು ತೋರಿಕೊಂಡವರಲ್ಲ. ಯಾವ ನೂತನ ಸಿದ್ಧಾಂತವನ್ನಾಗಲೀ ತತ್ತ್ವಶಾಸ್ತ್ರವನ್ನಾಗಲೀ ಪ್ರಸಾರ ಮಾಡವದಕ್ಕಾಗಿ ಅವರು ಬಂದವರಲ್ಲ. ಯಾವದೊಂದು ಹೊಸ ಸಂಸ್ಥೆಯನ್ನು ಸಂಸ್ಥಾಪಿಸುವದಕ್ಕಾಗಿ ಅಥವಾ ಗುರುನಾನಕ್‌ರಂತೆ ಹಿಂದೂ ಮುಸಲ್ಮಾನರನ್ನು ಕೂಡಿಸುವದಕ್ಕಾಗಿ (ನಿಸ್ಸಂದೇಹವಾಗಿ ಅವಕಾಶವಿದ್ದರೂ) ಅವರು ಬಂದವರಲ್ಲ. ಆದರೆ ಸಂಕುಚಿತ ರಾಷ್ಟ್ರಭಾವನೆಯೂ ಜನಾಂಗ ಭಾವನೆಯೂ ಇಲ್ಲದ ಅವರ ಧರ್ಮಪ್ರಸಾರವು ಸಾರ್ವತ್ರಿಕವೂ ಸರ್ವಸಮವೂ ವಿಶ್ವವ್ಯಾಪಿಯೂ (Universal and cosmopolitan) ಆಗಿದ್ದಿತು. ಈ ಕ್ರಿಸ್ತಶಕ ಇಪತ್ತನೆಯ ಶತಮಾನದಲ್ಲಿ, ಈ ವಿಜ್ಞಾನ ಯುಗದಲ್ಲಿ, ಐಶ್ವರ್ಯಕ್ಕಾಗಿಯೂ ಕೈಗಾರಿಕಾ ಉದ್ಯೋಗಗಳಿಗಾಗಿಯೂ ಉದ್ವೇಗಪೂರ್ಣ ಧಾವಂತದಿಂದಲೂ ಪೈಪೋಟಿಯಿಂದಲೂ ಸಮಾಜವಾದದಿಂದಲೂ ಬರಿ ಬದುಕಿರುವದಕ್ಕಾಗಿಯೇ ಪಡುವ ಕಡುಕಷ್ಟದಿಂದಲೂ ಅದಕ್ಕೆ ಸಂಬಂಧಪಟ್ಟ ಎಲ್ಲಾ ಕೇಡುಗಳಿಂದಲೂ ತುಂಬಿರುವ ಈ ದಿನಗಳಲ್ಲಿ ಇಡೀ ಪ್ರಪಂಚಕ್ಕೂ ವಿಶೇಷವಾಗಿ ಇಂಡಿಯಾ ದೇಶಕ್ಕೂ ಅತ್ಯಂತ ಶ್ರೇಷ್ಠವೂ ಆದ ಅಧ್ಯಾತ್ಮ ತತ್ತ್ವಗಳನ್ನು ಬೋಧಿಸುವದೂ

ಉಪದೇಶಿಸುವದೂ ಅವರ ಮಹತ್ತಾದ ಧ್ಯೇಯವೂ ಮಹತ್ವದ ಜೀವನಕಾರ್ಯವೂ ಆಗಿದ್ದವು.

ಈ ಉಪದೇಶವೇ ಅಲ್ಲವೆ, ಈ ಕಾಲದಲ್ಲಿ ನಮಗೆ ಅತ್ಯಂತ ಅವಶ್ಯವಾಗಿರುವದು ? ಅವರ ಆಧ್ಯಾತ್ಮಿಕ ಸಂದೇಶವೂ ಹೆಚ್ಚು ಉನ್ನತವೂ ಪವಿತ್ರವೂ ಆದ ಜೀವನದ ಉಪದೇಶವೂ ಈ ಸಮಯದಲ್ಲಿ ಅತ್ಯಂತ ಮಹತ್ವದ ಆವಶ್ಯಕತೆಯಲ್ಲವೆ? ....ಅವರು ಸೂರ್ಯನು ಮುಳುಗುವ ಅಮೆರಿಕಾದಲ್ಲಿಯೂ ಸೂರ್ಯನು ಉದಯವಾಗುವ ಜಪಾನಿನಲ್ಲಿಯೂ ಮಾತೃಭೂಮಿಯಾದ ಭಾರತದಲ್ಲಿಯೂ ಉಪದೇಶಮಾಡಿದರು. ಹೀಗೆ, ಏಷ್ಯ ಜನಾಂಗ–ಯೂರೋಪ್ ಜನಾಂಗ, ಕಪ್ಪು ಜನರು, ಬಿಳಿ ಜನರು, ಸ್ತ್ರೀಯರು–ಪುರುಷರು, ವಿದ್ಯಾವಂತರು-ಅವಿದ್ಯಾವಂತರು, ವೃದ್ಧರು–ತರುಣರು, ಧನಿಕರು-ದರಿದ್ರರು ಎಂಬ ಯಾವ ಭೇದವನ್ನೂ ಎಣಿಸದ ಅವರ ಧರ್ಮ ಪ್ರಸಾರವು ವಿಶ್ವ ವ್ಯಾಪಕವೂ ಸಾರ್ವತ್ರಿಕವೂ ಸರ್ವಸಮವೂ ಆಗಿದ್ದಿತು, ಕ್ರೈಸ್ತ ಮತದ ಪ್ರಭಾವಕ್ಕೂ ಶಕ್ತಿಗೂ, ಬೆಳೆಯುತ್ತಿರುವ ಉದಾರಭಾವದ ಪ್ರಗತಿಗೂ ವಿರುದ್ಧವಾಗಿ, ಸೂಕ್ಷ್ಮಾಭಿರುಚಿ-ಸಂಸ್ಕೃತಿಗಳು ಮುಂದುವರಿದು ಬೆಳೆಯುತ್ತಿರುವ ಪಾಶ್ಚಾತ್ತ್ಯದೇಶಗಳಲ್ಲಿ ಸಹ, ಅತಿ ಮಹತ್ವ ಕೊಡುವ ಜಾತಿ, ಮತ, ಬಣ್ಣ, ಜನಾಂಗ ಮೊದಲಾದ ಯಾವ ಭೇದವನ್ನೂ ಅವರು ಆದರಿಸದೆ, ಸರ್ವ ಸಮಾನಭಾವದಿಂದ ಮಾಡಿದ ಉಪದೇಶವು ತಮ್ಮ ದೇಶಕ್ಕೂ ಬೇರೆ ದೇಶಗಳಿಗೂ ಅಪಾರ ಮಹತ್ವದ್ದೂ ಅತ್ಯಧಿಕ ಪರಿಣಾಮಗರ್ಭಿತವೂ ಆಗಿದ್ದಿತು.

ರಾಮತೀರ್ಥರ ಮುಗ್ಧಗೊಳಿಸುವ ವ್ಯಕ್ತಿತ್ವವು ಆಧ್ಯಾತ್ಮಿಕ ಬೋಧಕರೆಂದು ಮಾತ್ರ ಆಕರ್ಷಕವಾಗಿಲ್ಲ. ಅವರು ನೈಜವೂ ನಿಷ್ಕಪಟವೂ ನಿವೇದಿತವೂ ಆದ ದೇಶಭಕ್ತಿಯುಳ್ಳವರೂ ಭಾರತಮಾತೆಯ ನಿಜವಾದ ಪ್ರೇಮಿಗಳೂ ಋಷಿ-ಮುನಿಗಳ, ಸಂನ್ಯಾಸಿ-ಯೋಗಿಗಳ, ಮಹಾತ್ಮರ–ಮಹಾತಪಸ್ವಿಗಳ, ಮಹಾ ವಿದ್ವಾಂಸರ, ಹಾಗೆಯೇ ಮಹಾಯೋಧರ, ಮಹಾರಾಜರ–ಮಹಾವೀರರ ಜನ್ಮಭೂಮಿಯಾದ ಭಾರತದ ಯೋಗ್ಯ ಪುತ್ರರೂ ಪವಿತ್ರ ಆರ್ಯಾವರ್ತದ ನಿಷ್ಠಾವಂತ ಸೇವಕರೂ ದೇಶಕ್ಕಾಗಿ ಬಲಿದಾನ ಮಾಡಿದವರೂ ಎಂದು ಮನಸ್ಸಿನ ಮೇಲೆ ಪ್ರಬಲವಾಗಿ ಮುದ್ರೆಯೊತ್ತುತ್ತಾರೆ.

`ಅವರು ರಾಷ್ಟ್ರಧರ್ಮವನ್ನು ಸ್ಪಷ್ಟವಾಗಿ ಬೋಧಿಸಿದ್ದಾರೆ. ಮಹತ್ತಾದ ಐತಿಹಾಸಿಕ ಗತಕಾಲದ ಉತ್ತರಾಧಿಕಾರಿಗಳಾಗಿ ನಮ್ಮ ತಾಯ್ನಾಡಿಗೆ ನಾವು ಹೊತ್ತಿರಬೇಕಾದ ಮಹತ್ತಾದ ಹೊಣೆಯ ಎಚ್ಚರಿಕೆಯನ್ನು ಅವರ ಸ್ಫೂರ್ತಿಯುಕ್ತ ಭಾಷಣಗಳು ನಮ್ಮಲ್ಲಿ ಪ್ರೇರೇಪಿಸುತ್ತವೆ. 1906ರಲ್ಲಿ ಅವರು ಮುಕ್ತರಾದ ಮೇಲೆ, ಅವರ ವಿಷಯದಲ್ಲಿ ಪ್ರಕಟವಾಗಿರುವ ಅನೇಕ ಶ್ಲಾಘನೆಯ ಲೇಖನಗಳಲ್ಲಿ, ಪ್ರಪಂಚದಲ್ಲಿದ್ದೂ ಪ್ರಾಪಂಚಿಕರಾಗಿರದಿದ್ದ ಸ್ವಾಮಿ ರಾಮತೀರ್ಥರ ಮಹಾ ನಿಸ್ಸ್ವಾರ್ಥವಾದ ವ್ಯಕ್ತಿತ್ವದ, ನೈಜರಾಷ್ಟ್ರಭಕ್ತಿಯ ವೀರಲಕ್ಷಣವನ್ನು ಯಾರೂ ಗಮನಿಸದೆ, ಗೌರವಿಸದೆ

ಇರುವದು ಬಹಳ ವಿಲಕ್ಷಣವಾಗಿ ತೋರುತ್ತದೆ.........ಜಟಿಲವಾದ ಆಧ್ಯಾತ್ಮಿಕ ಸಮಸ್ಯೆಗಳ ಮೇಲೆ ಅವರು ನಿಷ್ಪಕ್ಷಪಾತವಾಗಿ ಬರೆದಂತೆಯೇ ಭಾರತದ ಸ್ವಾತಂತ್ರ್ಯದ ಮೇಲೂ ನಿರ್ಭಯವಾಗಿಯೂ ಧೈರ್ಯವಾಗಿಯೂ ಅವರು ಮಾತನಾಡುತ್ತಿದ್ದರು ಮತ್ತು ಬರೆಯುತ್ತಿದ್ದರು. ಭಾರತದ ಪರವಾಗಿ ಅಮೆರಿಕಾ ಜನರಿಗೆ ಮಾಡಿಕೊಂಡ ಮನವಿಯಲ್ಲಿ ಅವರು ಹೇಳಿರುವಂತೆ, ಅವನತಿಯನ್ನು ಪಡೆದಿರುವ ಮಾತೃಭೂಮಿಯ ಹಿತೋನ್ನತಿ ಸಾಧನೆಗಾಗಿ ಪರರಾಷ್ಟ್ರಗಳೆದುರು ಅವರು ವಾದಿಸುವದರಲ್ಲಿಯಾಗಲೀ, ಶತಮಾನಗಳ ಕಾಲ ಕ್ಷೀಣದಶೆಯನ್ನೂ ಪತನವನ್ನೂ ಹೊಂದಿದ ಮೇಲೆ ಅಯೋಗ್ಯರೂ ಪತನಶೀಲರೂ ಆದ ಭಾರತಮಾತೆಯ ಸಂತತಿಯವರು ಹೇಗೆ ಎಚ್ಚೆತ್ತು, ಎದ್ದು, ಪ್ರಗತಿಯನ್ನು ಸಾಧಿಸಬೇಕೆಂಬದನ್ನು ವಿವರಿಸುವದರಲ್ಲಿಯಾಗಲೀ ಅವರು ತೋರಿಸಿರುವ ಮಹಾಧೈರ್ಯವನ್ನೂ ಸತ್ಯಧರ್ಮಗಳಿಗಾಗಿ ಚಿತ್ರಹಿಂಸೆಯನ್ನು ಸಹಿಸಿ, ಸರ್ವಸ್ವವನ್ನೂ ಬಲಿದಾನಮಾಡುವ ಅವರ ಉತ್ಸಾಹವನ್ನೂ ನಮ್ಮಲ್ಲಿಯ ಬೇರೆ ಉತ್ತಮ ಸಂನ್ಯಾಸಿಗಳಲ್ಲಿಯೂ ಅತ್ಯಂತ ವಿರಳವಾಗಿ ಕಾಣಬಹುದೆಂದರೆ ತಪ್ಪಾಗಲಾರದು. ಅವರು ಅಂಥಾ ಧೀರರೂ ವೀರರೂ ನಿಸ್ಸ್ವಾರ್ಥಿಗಳೂ ಸ್ವಾತಂತ್ರ್ಯ ಪ್ರಿಯರೂ ಆದ ಮಹಾಪುರುಷರಲ್ಲದಿದ್ದರೆ ಅವರೆಂದೂ ನಮಗೆ ಈಗಿನಷ್ಟು ಗೌರವಾರ್ಹ ಪ್ರಿಯಪೂಜ್ಯವ್ಯಕ್ತಿಯಾಗುತ್ತಿರಲಿಲ್ಲ. ಯಾರು ಭಯಂಕರ ಹುಲಿಗಳ, ಹೆಬ್ಬಾವುಗಳ, ವಿಷಸರ್ಪಗಳ ಮಧ್ಯದಲ್ಲಿಯೇ ವಾಸಿಸುತ್ತಿದ್ದರೂ ಅವುಗಳಿಗೆ ಹೆದರಲಿಲ್ಲವೋ ಯಾರು, ಪಾಳುಬಿದ್ದ, ಶ್ಮಶಾನಸದೃಶವಾದ ಅತ್ಯಂತ ನಿರ್ಜನ ಪ್ರದೇಶ ದಲ್ಲಿಯೂ ಗಹನವಾದ ಪರ್ವತಾರಣ್ಯ ಗುಹೆಗಳಲ್ಲಿಯೂ ಇರಲು ಭಯಪಡಲಿಲ್ಲವೋ, ಹಿಮಾಲಯದಲ್ಲಿ ಅತ್ಯುನ್ನತವಾದ ಸುಮೇರು(ಬಂದರ್ ಪುಚ್ಛ್) ಶೃಂಗವನ್ನು ಏರು ವಾಗ ಒಂದು ಹೆಜ್ಜೆ ಜಾರಿದರೂ ಕ್ಷಣಾರ್ಧದಲ್ಲಿ ಮೃತ್ಯು ಮುಖದಲ್ಲಿಯೇ ಬೀಳುವ ಅತ್ಯಂತ ಸನ್ನಿಹಿತವಾದ ಅಪಾಯದ ಶುಭ ಪ್ರತೀಕ್ಷೆಯಿದ್ದರೂ ಯಾರು ತಮ್ಮ ಗುರಿಯನ್ನು ಮುಟ್ಟುವ ದೃಢ ನಿಶ್ಚಯದಿಂದ ಹಿಮ್ಮೆಟ್ಟಲಿಲ್ಲವೋ ಯಾರು ಪ್ರಚಂಡ ಮೃತ್ಯುವನ್ನು ಜಯಿಸಿದುದರಿಂದ ಜನನ ಮರಣಗಳನ್ನು ಸಮವಾಗಿ ಕಾಣುತ್ತಿದ್ದರೋ ಅಂಥವರು ಎಷ್ಟೇ ಮಹತ್ತಾಗಿಯೂ ಪ್ರಬಲವಾಗಿಯೂ ಪ್ರಚಂಡವಾಗಿಯೂ ಇರಲಿ ಅಂಥಾ ಮಾನವ ಶಕ್ತಿಗೆ ಎಂದಾದರೂ ಅಂಜುವದುಂಟೆ? ಹೀಗೆ ಅವರು ಪರಿಪೂರ್ಣ ನಿರ್ಭಯರೂ ಸ್ವಾತಂತ್ರ್ಯಪ್ರಿಯರೂ ಜನನ ಮರಣಗಳ ವಿಷಯದಲ್ಲಿ ಸಂಪೂರ್ಣ ನಿರ್ಲಕ್ಷ್ಯ ಭಾವವುಳ್ಳವರೂ ತಮ್ಮ ಭವಿಷ್ಯದ ವಿಚಾರದಲ್ಲಿ ಕೇವಲ ಅನಾಸಕ್ತರೂ ಇದ್ದುದರಿಂದಲೇ ಸರ್ಕಾರದ ಸಂಬಂಧವಾಗಲೀ ಧರ್ಮಸಂಬಂಧ ವಾಗಲೀ ಪೌರೋಹಿತ್ಯ ಸಂಬಂಧವಾಗಲೀ ನಾಗರಿಕತೆಯ ಸಂಬಂಧವಾಗಲೀ ಸತ್ಯ–ಧರ್ಮ–ನ್ಯಾಯಗಳನ್ನು ನಿರ್ಭಯವಾಗಿ ಪ್ರತಿಪಾದಿಸುತ್ತಿದ್ದರು. ಈ ಗುಣವೇ ಅವರ ಮಹಿಮೆಗೆ ಕಾರಣವಾದುದು ; ಇದರಿಂದಲೇ ಅವರು ಈ ಯುಗದಲ್ಲಿ ಕಾಣಿಸಿ ಕೊಂಡ ಯಾವ ಮಹಾತ್ಮರಿಗೂ ಕಡಿಮೆಯವರೆನಿಸಲಿಲ್ಲ. ತಮ್ಮ ಸ್ವಂತ ಮತ್ತು

ತಮ್ಮ ಬಂಧು ಬಾಂಧವರ ಸುರಕ್ಷಿತತೆಯನ್ನೂ ಹಿತಾಸಕ್ತಿಗಳನ್ನೂ ಭದ್ರಪಡಿಸಿಕೊಂಡು "ಅತ್ಯಲ್ಪವಾದ ವಿರೋಧವೂ ಪ್ರತಿಭಟನೆಯೂ ಉಳ್ಳ ದಾರಿಯಲ್ಲಿಕೆಲಸಮಾಡ ಬೇಕು" ಎಂಬ ಮೂಲತತ್ತ್ವದ ಸುಲಭವೂ ಸುಸೂತ್ರವೂ ಆದ ಉದ್ದೇಶವನ್ನು ಇಟ್ಟುಕೊಂಡು ಪ್ರಾರಂಭಿಸುವ ಅನೇಕ ಉಪದೇಶಕರನ್ನೂ ಬೋಧಕರನ್ನೂ ನಾಯಕ ರನ್ನೂ ಸುಧಾರಕರನ್ನೂ ಅವರು ಮೀರಿ ಅಸಾಧಾರಣ ಮಹಾತ್ಮರಾಗಿ ಬೆಳಗುತ್ತಿರು ವದು ಆ ಮಹಾ ಸದ್ಗುಣಗಳಿಂದಲೇ. ಇದರಿಂದಲೇ ಅವರು ನಿಜವಾದ ಸಂನ್ಯಾಸಿ ಗಳೂ ಸಾಧುಗಳೂ ಆದುದು. ಕುತ್ಸಿತವಾದ ಲಾಭದ ಆಶೆಯಾಗಲೀ ಕೀರ್ತಿಕಾಮನೆ ಯಾಗಲೀ ನಿಂದೆಯ ಭಯವಾಗಲೀ ಇಲ್ಲದೆ. ಲಕ್ಷಾಧೀಶ–ಕೋಟ್ಯಧೀಶರಾದ ಮಹಾಧನಿಕರ ವಶವರ್ತಿಯಾಗದಿರುವ ಸರಳ ನಗ್ನ ಸತ್ಯವನ್ನು ಸ್ವಚ್ಛಂದವಾದ ಅಮೆರಿಕೆ ಯಲ್ಲಿಯೂ ಈ ದೇಶದಲ್ಲಿಯೂ ನಿರ್ದಾಕ್ಷಿಣ್ಯವಾಗಿಯೂ ನಿರ್ಭಯವಾಗಿಯೂ ಸ್ಪಷ್ಟವಾಗಿಯೂ ಹೇಳಿದ್ದರಿಂದ ಲೌಕಿಕ ಅಧಿಕಾರ–ಶಕ್ತಿಗಳಿಂದ ಅವರು ಎಷ್ಟು ಉಪದ್ರವವನ್ನೂ ಕಷ್ಟವನ್ನೂ ಅನುಭವಿಸಬೇಕಾಯಿತೆಂಬುದು ಅವರ ಅತಿಶಯಪ್ರೇಮಿ ಗಳಲ್ಲಿಯೂ ಪ್ರಶಂಸಕರಲ್ಲಿಯೂ ಅನೇಕರಿಗೆ ತಿಳಿಯದು. ಸಮಯಸಾಧಕ ರಾಜಕೀಯ ಕಾರ್ಯಕೌಶಲದಿಂದ ಸುಳ್ಳು ಮೆರಗುಕೊಡದೆ ಯಥಾರ್ಥವಾದ ಸರಳ ಸತ್ಯವನ್ನು ನಿರ್ಲಕ್ಷ್ಯವಾಗಿ ಹೇಳುವ ಮಹಾವೀರರಾದುದರಿಂದಲೇ ಅವರು ಸಂಸ್ಥೆಗಳನ್ನೂ ಸರ್ಕಾರಗಳನ್ನೂ ನಾಗರಿಕತೆಗಳನ್ನೂ ಸಂಪ್ರದಾಯಗಳನ್ನೂ 'ಫ್ಯಾಷನ್' ಗಳನ್ನೂ ಪೌರೋಹಿತ್ಯವನ್ನೂ ಕಪಟಸುಧಾರಕರನ್ನೂ ಹೇಡಿಗಳಾದ ನಾಯಕರನ್ನೂ ಟೀಕಿಸುವ ದರಲ್ಲಿಯೂ ತಿರಸ್ಕರಿಸುವುದರಲ್ಲಿಯೂ ಸತ್ತ್ವಯುತವಾದ ಪರಿಣಾಮವಿದೆ.

ಈಚಿನ ಅಂದಾಜು ಲೆಕ್ಕದಂತೆ ಈ ದೇಶದಲ್ಲಿರುವ ಐವತ್ತೆರಡು ಲಕ್ಷ ಸಾಧು ಗಳಿಗೆ ಸ್ವಾಮಿ ರಾಮತೀರ್ಥರು ಸಂನ್ಯಾಸ ಧರ್ಮದ ನಿಜವಾದ ಆದರ್ಶವನ್ನು ತಮ್ಮ ಸ್ವಂತ ಜೀವನದ ಉನ್ನತವಾದ ನಿದರ್ಶನದಿಂದ ಎದುರಿಗಿಟ್ಟು ತೋರಿಸಿ, ಮಾತೃ ಭೂಮಿಗೆ ಮಹತ್ತಾದ ಸೇವೆಯನ್ನು ಸಲ್ಲಿಸಿದ್ದಾರೆ. ಸಂನ್ಯಾಸವೆಂದರೆ ಕೇವಲ ನಿಷ್ಕ್ರಿಯವಾಗಿ ಏಕಾಂತವಾದ ಮರೆಯಲ್ಲಿ ಅಡಗಿಕೊಂಡು ದೇಹ ದಂಡನೆಯನ್ನೂ ತಪಶ್ಚರ್ಯವನ್ನೂ ಮಾಡುವುದೇ ಆಗಿದೆ–ಎಂಬ ತಪ್ಪಾದ ಮತ್ತು ಹಾನಿಕಾರಕವಾದ ತಿಳಿವಳಿಕೆಯ ನಿರರ್ಥಕತೆಯನ್ನೂ ಹಾಸ್ಯಾಸ್ಪದವಾದ ಹುಚ್ಚುತನವನ್ನೂ ಅವರು ತಮ್ಮ ಜೀವನದಿಂದಲೂ ಉಪದೇಶಗಳಿಂದಲೂ ತೋರಿಸಿಕೊಟ್ಟಿದ್ದಾರೆ. ಅವರು ಜೊತೆಯ ಜನರಲ್ಲಿ ಸಂಕೋಚವಿಲ್ಲದೆ ಸರಳವಾಗಿ ಜೀವಿಸಿ ವ್ಯವಹರಿಸಿದರು ; ಅವರು ಅತ್ಯಂತವಾಗಿ ಮುಂದುವರಿದ ನಾಗರಿಕವಾದ ದೇಶಗಳಲ್ಲಿ ದೂರವಾಗಿಯೂ ವಿಸ್ತಾರವಾಗಿಯೂ ಸಂಚಾರಮಾಡಿದರು ; ಒಳ್ಳೆಯ ಮನೋಭಾವದಿಂದ ತಮ್ಮ ಸಮೀಪಕ್ಕೆ ಬಂದ ಎಲ್ಲರೊಡನೆಯೂ ಅವರು ವಿಚಾರಮಾಡಿ, ಚರ್ಚಿಸಿ, ಬೋಧಿಸಿದರು ; ಅವರು

ಉಪನ್ಯಾಸಮಾಡಿದರು ; ಬರೆದರು. ಗೃಹಸ್ಥಜೀವನ, ಮಾಂಸಾಹಾರ ಮೊದಲಾದ ವಿಷಯಗಳನ್ನೂ ವಿಚಾರಮಾಡಿದರು ; ಬಿಡುವಿಲ್ಲದೆ ನಡೆಸಿದ ಈ ಕಾರ್ಯಗಳಿಂದ ಅವರು ಸಂನ್ಯಾಸವೆಂದರೆ ಜನರನ್ನು ಬಿಟ್ಟು, ದೂರಹೋಗಿ, ಕೆಲಸವಿಲ್ಲದೆ, ಮೂಲೆಯಲ್ಲಿ ತನ್ನಷ್ಟಕ್ಕೆ ತಾನು ಆರಾಮವಾಗಿ ಕುಳಿತಿರುವದಲ್ಲವೆಂಬುದನ್ನು ತೋರಿಸಿ **ವೇದಾಂತವೆಂದರೆ ಮಾನವನ ನಿತ್ಯಜೀವನದ ಅತ್ಯಂತ ತೊಡಕಾದ ವ್ಯಾಪಾರಗಳಿಗೂ ಆಧುನಿಕ ನಾಗರಿಕತೆಯ ನವನೂತನ ಸಮಸ್ಯೆಗಳಿಗೂ ಉಪಯೋಗಿಸಿಕೊಳ್ಳಬಹುದಾದ ವ್ಯವಹಾರಸಾಧ್ಯವಾದ ತತ್ತ್ವಶಾಸ್ತ್ರ**ವೆಂಬುದನ್ನು ಸ್ಥಾಪಿಸಿದರು. ಅವರು ಅನ್ನಪಾನಾದಿಗಳಲ್ಲಿ ಅತಿಮಿತವಾದ ಸರಳ ಜೀವನವನ್ನು ನಡೆಸಿದರೂ ಸ್ವಲ್ಪವೂ ಬಿಡುವಿಲ್ಲದೆ ದುಡಿಯುವ ಕ್ರಿಯಾಶೀಲ ಜೀವನದಿಂದ ನಮ್ಮ ಎಲ್ಲಾ ಸಂನ್ಯಾಸಿಗಳಿಗೂ ಯೋಗ್ಯವಾದ ದಾರಿಯನ್ನೂ ಜೀವನಕ್ರಮವನ್ನೂ ತೋರಿಸಿದ್ದಾರೆ. ಆಲೋಚನೆಮಾಡಿ ಆರಿಸಿಕೊಳ್ಳದೆ, ಕೂಡಲೇ ಸ್ಮರಿಸಬಹುದಾದರೆ ಶ್ರೀ ರಾಮಕೃಷ್ಣ ಪರಮಹಂಸರು, ವಿವೇಕಾನಂದರು, ಸ್ವಾಮಿ ರಾಮತೀರ್ಥರು, ಅವರ ಮುಖ್ಯ ಶಿಷ್ಯರಾದ ಸ್ವಾಮಿ ನಾರಾಯಣರು, ಬಾಲಬ್ರಹ್ಮಚಾರಿ ದಯಾನಂದ ಸರಸ್ವತಿಗಳು ಇವರೇ ಮೊದಲಾದ ಕೆಲವು ಮಹಾತ್ಮರ ಆದರ್ಶವಾದ ದಿವ್ಯಜೀವನದಲ್ಲಿ ನಿದರ್ಶನವಾದ, ವೇದಾಂತದ ಅತ್ಯಂತ ಉನ್ನತವಾದ ಬೋಧೆಗಳನ್ನು ನಮ್ಮ ಸಾಧುಸಂತರಲ್ಲಿ (ಒಳ್ಳೆಯ ಉದ್ದೇಶವುಳ್ಳವರಾದರೂ ಒಳ್ಳೆಯ ನಿದರ್ಶನವಿಲ್ಲದ) ಕೆಲವು ಲಕ್ಷ ಸಜ್ಜನರಾದರೂ ತಮ್ಮ ವಾಸ್ತವವಾದ ಜೀವನದಲ್ಲಿ ಶ್ರದ್ಧಾದರಗಳಿಂದ ಸಾಧಿಸಿ ಅನುಭವದಲ್ಲಿ ತಂದುಕೊಂಡರೆ ನಮ್ಮ ಭಾರತದ ಭಾವೀ ಜೀವನದಲ್ಲಿ ಎಂಥಾ ಪ್ರಾಮುಖ್ಯವೂ ಪ್ರಬಲವೂ ಆದ ವಿದ್ಯಮಾನವಾಗಬಹುದು ! ಅದೆಂಥ ಮಹತ್ತರವಾದ ಸುಧಾರಣೆಯಾಗಬಹುದು ! ಭಾರತೀಯ ಜೀವನದ ಸ್ಥಿತಿಗತಿಗಳಲ್ಲಿ ಓ ! ಅದೆಂಥ ಆಶ್ಚರ್ಯಕರವಾದ ಕ್ರಾಂತಿಯಾಗಬಹುದು ! ಇವರೆಲ್ಲರೂ ಉದ್ಯೋಗಶೀಲತೆಯ ಮತ್ತು ಪ್ರಾಮಾಣಿಕ ಕಾರ್ಯದ ಘನತೆಗೌರವಗಳನ್ನು ಬೆಳೆಸಿದ್ದಾರೆ ; ಮತ್ತು ಸಂನ್ಯಾಸದ ನಿಜವಾದ ಮನೋಭಾವಕ್ಕೆ—ಅನಾಸಕ್ತವಾದರೂ—ಕಾರ್ಯಚಟುವಟಿಕೆಯಿಂದ ತುಂಬಿದ ಶ್ರಮಪೂರಿತವಾದ ಜೀವನವೂ ಹೋರಾಟವೂ ಅಸಂಗತವೂ ಅವಮಾನಕರವೂ ಅಲ್ಲವೆಂದು ತೋರಿಸಿದ್ದಾರೆ. ಕೇವಲ ಯೌವನದ ಭರದಲ್ಲಿಯೂ ಆಶಾದಾಯಕವಾದ ಪ್ರಾಪಂಚಿಕ ಜೀವನವೃತ್ತಿಯ ಪ್ರಾರಂಭದಲ್ಲಿಯೂ (ಎಷ್ಟೋ ಜನರ ಜೀವನ ಪಥದಲ್ಲಿ ದೊಡ್ಡ ಪ್ರತಿಬಂಧಕಗಳಾಗಿಯೂ ಪ್ರಲೋಭನಗಳಾಗಿಯೂ ಪರೀಕ್ಷೆಗಳಾಗಿಯೂ ಪರಿಣಮಿಸುವ ಇವುಗಳಿಗೆ ವಶವಾಗದೆ) ಪ್ರಾಪಂಚಿಕವಾದ ಎಲ್ಲಾ ಪ್ರತೀಕ್ಷೆಗಳನ್ನೂ ಎಲ್ಲಾ ಸಂಬಂಧಗಳನ್ನೂ ಸಂಪರ್ಕಗಳನ್ನೂ ಸಾವಧಾನವಾಗಿ ಯೋಚಿಸಿ, ಬುದ್ಧಿಪೂರ್ವಕವಾಗಿ ತ್ಯಾಗಮಾಡಿದ ನಿಸ್ಪೃಹತೆಯ ಸ್ಥೈರ್ಯವು

ಸತ್ಯದ ಮತ್ತು ಮಾತೃಭೂಮಿಯ ಅತ್ಯವಶ್ಯಕವಾದ ಸೇವೆಯಲ್ಲಿ (ಇದುವರೆಗಿರುವ ಎಷ್ಟೋ ಉದಾಹರಣೆಯ ಜೊತೆಗೆ) ಹೆಚ್ಚಿನ ಮಹತ್ವಾದ ಉದಾಹರಣೆಯಾಗಿದೆ.

ಆತ್ಮಬಲಿದಾನ (ಸ್ವಾರ್ಥತ್ಯಾಗ) ಮತ್ತು ತ್ಯಾಗಧರ್ಮದ ಅತ್ಯಂತ ಉನ್ನತವಾದ ಉದಾಹರಣೆಯೇ ಸ್ವಾಮಿ ರಾಮರಾಗಿದ್ದಾರೆ.

ಆದರೆ, ಸಂನ್ಯಾಸಿಗಳಾಗಿ ಮಾತ್ರವೇ ಅವರು ಉತ್ತಮ ಉದಾಹರಣೆಯಾಗಿ ಭಾರತದ ಉನ್ನತ ಸೇವೆಯನ್ನು ಸಲ್ಲಿಸಿದರೇದಲ್ಲ. ಅವರು ತಮ್ಮ ಗುರುಗಳಿಗೆ ಬರೆದಿರುವ ಪತ್ರಗಳ ಪ್ರಕಟಣೆಯಿಂದ ಇತ್ತೀಚೆಗೆ ಬೆಳಕು ಚೆಲ್ಲಿರುವ ಅವರ ವಿದ್ಯಾರ್ಥಿ ಜೀವನವು ಸಹ ನಮ್ಮ ವಿದ್ಯಾರ್ಥಿಗಳಿಗೂ ತರುಣರಿಗೂ ಮಾರ್ಗದರ್ಶಕವಾಗಿ ಅವರ ಅನೇಕ ಸಂಕಷ್ಟಗಳನ್ನೂ ಸಮಸ್ಯೆಗಳನ್ನೂ ಪರಿಹರಿಸುವದಾಗಿದೆ. ಹೇಗಾದರೂ ಆಗಲಿ, ಈಗ ಈ ಬಡದೇಶದಲ್ಲಿ ನಮ್ಮ ಬಡ ವಿದ್ಯಾರ್ಥಿಗಳು ತಮ್ಮ ಬಡತನಕ್ಕೆ ಭಯಪಡದೆ, ಅವರ ಕಷ್ಟಗಳನ್ನು ಹೇಗೆ ಎದುರಿಸಬಹುದೆಂಬುದನ್ನು ಅವರ ಸ್ಕೂಲ್–ಕಾಲೇಜುಗಳ ಜೀವನ–ವರ್ತನಗಳಿಂದ ಅವರು ತೋರಿಸಿಕೊಟ್ಟಿದ್ದಾರೆ, ಅವರ ಭಯಭಕ್ತಿಗಳೂ ವಿಧೇಯತೆಯೂ ಅವರ ಲಜ್ಜಾಶೀಲತೆಯೂ (ಹ್ರೀಃ) ವಿನಯವೂ ಜೊತೆ ವಿದ್ಯಾರ್ಥಿಗಳಲ್ಲಿ ಅವರ ಸಹಾನುಭೂತಿಯೂ ಎಂಥಾ ಪರೀಕ್ಷಾ ಸಂದರ್ಭದಲ್ಲಿಯೂ ಅಚಲವಾದ ಅವರ ಸಮಾಧಾನವೂ ಮನಃಶ್ಯಾಂತಿಯೂ, ಸತತವಾಗಿ ಅನಾರೋಗ್ಯವಿದ್ದರೂ ಅವರ ಪ್ರಯೋಗಶೀಲತೆಯ ಮತ್ತು ಉದ್ಯೋಗಪ್ರಿಯತೆಯ ಅಭ್ಯಾಸವೂ ಅವರ ಸ್ವಾಭಿಮಾನವೂ, ಅವರ ಆದರದ ಅತಿಥಿ ಸತ್ಕಾರೋತ್ಸಾಹವೂ, ಸಂನ್ಯಾಸಸ್ವೀಕಾರಕ್ಕೆ ಮುಂಚೆಯೇ ಅವರು ಉತ್ತಮ ಉಪನ್ಯಾಸಕರೆಂಬ ಜನಪ್ರಿಯತೆಯೂ ಕೀರ್ತಿಯೂ, ನಾಳೆಗೇನೆಂಬ ಚಿಂತೆಯಿಲ್ಲದ ಅವರ ನಿರ್ಲಕ್ಷ್ಯತೆಯೂ ಅವರ ನೂರಾರು (1100) ಪತ್ರಗಳ ವಾಚನದಿಂದ ವ್ಯಕ್ತವಾಗುವ ಕೆಲವು ಅಸಾಧಾರಣ ಗುಣಗಳು.

ಅವರನ್ನು ಅತಿಶಯವಾಗಿ ಮೆಚ್ಚಿಕೊಂಡಿರುವವರೂ ಪ್ರೀತಿಸುವವರೂ ಎಷ್ಟು ಹೆಚ್ಚು ಸಂಖ್ಯೆಯಿಂದ ಭಾರತದಲ್ಲೆಲ್ಲಾ ವ್ಯಾಪಿಸಿದ್ದಾರೆಂಬುದನ್ನೂ ಈ ಪ್ರಪಂಚದಲ್ಲಿ ಅವರು ಬದುಕಿದ್ದ ಅಲ್ಪಕಾಲದಲ್ಲಿ, ಅವರು ಒಮ್ಮೆಯೂ ಸಂದರ್ಶನವೀಯದಿದ್ದ ನಮ್ಮ ದೇಶದ ಹಲವು ಭಾಗಗಳಲ್ಲಿ ಕೂಡ ಜನರ ಮೇಲೆ ಅವರು ಎಷ್ಟು ಡಂಭವೂ ಆಡಂಬರವೂ ಇಲ್ಲದ ದಿವ್ಯ ಪ್ರಭಾವವನ್ನು ಬೀರಿದ್ದಾರೆಂಬುದನ್ನೂ ತಿಳಿದರೆ ಮಹದಾಶ್ಚರ್ಯವಾಗುತ್ತದೆ. ಅವರ ಉಪನ್ಯಾಸಗಳನ್ನೂ ಲೇಖನಗಳನ್ನೂ ಒಳಗೊಂಡಿರುವ ಈ ಕೃತಿಗಳು ಈಗಾಗಲೇ ಗುಜರಾತಿ, ಮರಾಠಿ, ಹಿಂದಿ, ತಮಿಳು ಮೊದಲಾದ ಪ್ರಾದೇಶಿಕ ಭಾಷೆಗಳಲ್ಲಿ ಪರಿವರ್ತನೆಯನ್ನು ಹೊಂದಿ ಹೆಚ್ಚು ಹೆಚ್ಚಾಗಿ ಪ್ರಚಾರವಾಗುತ್ತಿವೆ. ಸ್ವತಃ ಸ್ವಾಮಿ ನಾರಾಯಣರಿಂದಲೇ ಉರ್ದು ಭಾಷಾಂತರವಾಗಿದೆ.

ಈ ಮೇಲಿನ ಎಲ್ಲಾ ವಿಚಾರಗಳಿಂದಲೂ ಸ್ವಾಮಿ ರಾಮರು, ಆಯುಷ್ಯವು ತೀರುವುದಕ್ಕೆ ಮುಂಚೆಯೇ ಹಿನ್ನುವಂತೆ, ಆಕಸ್ಮಿಕವಾಗಿ ನಮ್ಮನ್ನು ಬಿಟ್ಟು ಹೋಗದಿದ್ದರೆ ಎಷ್ಟು ಪ್ರಭಾವವನ್ನು ಬೀರಬಹುದಾಗಿತ್ತೋ ಅದಕ್ಕಿಂತಲೂ ಹೆಚ್ಚು ಪ್ರಾಮುಖ್ಯವೂ ಶಕ್ತಿಯುತವೂ ವ್ಯಾಪಕವೂ ಸ್ಥಿರವೂ ಆದ ಪ್ರಭಾವವನ್ನು ನಮ್ಮ ದೇಶದ ಭಾವೀ ಜೀವನಗತಿಯ ಮೇಲೆ ಈಗಲೇ ಬೀರಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಅವರು ಈಗ ಸದೇಹಿಗಳಾಗಿ ರಕ್ತಮಾಂಸಗಳಲ್ಲಿ ಇಲ್ಲದಿರುವದರಿಂದಲೇ ಅವರ ಬೆಲೆಯನ್ನು ಪ್ರಾಯಶಃ ಹೆಚ್ಚಾಗಿ ಅರಿತು ಅರ್ಥಮಾಡಿಕೊಳ್ಳಬಹುದು. ರಾಮರ ಉಪದೇಶಗಳನ್ನು ಒಟ್ಟುಗೂಡಿ ಅಭ್ಯಾಸಮಾಡುವದಕ್ಕಾಗಿಯೂ ಚರ್ಚಿಸಿ ಪರಸ್ಪರ ಅಭಿಪ್ರಾಯಗಳನ್ನು ವಿನಿಮಯಮಾಡಿಕೊಳ್ಳುವದಕ್ಕಾಗಿಯೂ ದೇಶದ ಆದ್ಯಂತವಾಗಿ ಎಲ್ಲೆಡೆಗಳಲ್ಲಿ ಅವರ ಬೋಧೆಗಳನ್ನು ವಿವರಿಸಿ ಪ್ರಸಾರ ಮಾಡುವದಕ್ಕೆ ಯಾವ ಕ್ರಮವನ್ನು ಅನುಸರಿಸಬೇಕೆಂಬದನ್ನು ವಿಚಾರಿಸಿ ನಿರ್ಣಯಿಸುವದಕ್ಕಾಗಿಯೂ ವರ್ಷಕ್ಕೆ ಒಂದು ಸಲ, ಸಾಧ್ಯವಾದರೆ ಅಥವಾ ಅನುಕೂಲವಾದರೆ, ರಾಮರ ಜನ್ಮ ದಿನದಲ್ಲಿಯೋ ಅಥವಾ ನಿರ್ಯಾಣ ದಿನದಲ್ಲಿಯೋ ಯಾವದಾದರೂ ಕೇಂದ್ರಸ್ಥಳವಾದ ನಗರದಲ್ಲಿಯೋ ಅಥವಾ ಬೇರೆ ಬೇರೆ ಸಹೋದರ ಭಕ್ತರಿಂದ ಆಹ್ವಾನಿತರಾಗಿ ಸರದಿಯಿಂದ ಬೇರೆ ಬೇರೆ ಸ್ಥಳಗಳಲ್ಲಿಯೋ ಅವರ ಎಲ್ಲಾ ಸಾಚಾ ಮತ್ತು ನಿಷ್ಠಾವಂತ ಅನುರಾಗಿಗಳೂ ಪ್ರಶಂಸಕರೂ ಭಕ್ತರೂ ಸೇರಿ ಆಧ್ಯಾತ್ಮಸಭೆಯನ್ನು ನಡೆಸಬಹುದೆಂದು ಸೂಚಿಸುವದು ಅಪ್ರಾಸಂಗಿಕವಾಗಲಾರದು.

ಸ್ವಾಮಿ ರಾಮತೀರ್ಥ

ಸ್ವಾಮಿ ರಾಮರ ಜೀವನವು ವಿಶ್ವಪ್ರೇಮವನ್ನೂ ವಿಶ್ವಶಾಂತಿಯನ್ನೂ ಬೋಧಿಸುವ ದಿವ್ಯಗಾನದಂತೆ ಇದೆ. ಮಹಿಮಾಪೂರ್ಣವಾದ ಉಪನಿಷತ್ತುಗಳಿಂದ ಉದಿಸಿರುವ ಪವಿತ್ರ ಜ್ಞಾನಗಂಗೆಯಂತೆಯೇ ಆ ಜೀವನವಾದರೂ ಇದೆ. ಅದು ಮಾನವನನ್ನು ಅಪಸ್ವರದಿಂದ ಸುಸ್ವರಕ್ಕೂ ವೈಷಮ್ಯದಿಂದ ಸಾಮ್ಯಕ್ಕೂ ಸಮತೆಗೂ ಭೇದದಿಂದ ಅಭೇದಕ್ಕೂ ಏಕತ್ವಕ್ಕೂ ಅಹಂಕಾರದಿಂದ ಆತ್ಮಕ್ಕೂ ಸರ್ವಾತ್ಮಕ್ಕೂ ಸಾಗಲು ಮನ ಒಲಿಸುತ್ತದೆ. ಅವರು ಮನುಷ್ಯನನ್ನು ದ್ವೇಷದಿಂದ ಅನುರಾಗಕ್ಕೂ ಯುದ್ಧದಿಂದ ಶಾಂತಿಗೂ ಹಿಂದಿರುಗಲು ಕರೆಯುತ್ತಾರೆ. ಅವರಿಂದ ಎಲ್ಲರಿಗೂ ಹಿತೇಚ್ಛೆಯೂ ಪ್ರೀತಿ–ವಿಶ್ವಾಸ–ಉದಾರ ಭಾವನೆಗಳೂ ಪ್ರವಹಿಸಿವವು. ಅವರು ಮನುಷ್ಯನ ಮತ್ತು ಪ್ರಕೃತಿಯ ಅಂತರಂಗದ ಕವಿಗಳಾಗಿದ್ದರು. ಅವರಿಗೆ ಸಮಸ್ತ ಮಾನವರೂ ಪ್ರಾಣಿಗಳೂ ಪದಾರ್ಥಗಳೂ ದೇವರಾಗಿದ್ದವು. 'ಅಹಂ ಬ್ರಹ್ಮಾಸ್ಮಿ' 'ನಾನೇ ದೇವರು' ಎಂಬ ದಿವ್ಯವಾದ ಬಂಗಾರದ ದೇಹದ (ಭಂಗಹರದೇಹದ) ಈ ಪರಮ ಹಂಸವು 'ತತ್ತ್ವಮಸಿ' 'ಅದೇ ನೀನು' ಮತ್ತು 'ಸರ್ವಂ ಖಲ್ವಿದಂ ಬ್ರಹ್ಮ' 'ಈ ಎಲ್ಲವೂ ಬ್ರಹ್ಮವೇ' ಎಂಬ ಎರಡು ಸುವರ್ಣ ಪಕ್ಷಗಳ ಸಮತೋಲನ (ಯೋಗ)ದಿಂದ ತನ್ನ ಜೀವನದ ಪ್ರತಿಯೊಂದು ನಿಮಿಷದಲ್ಲಿಯೂ ಹಾರುತ್ತಾ ಅನಂತವಾದ ಚಿದಾಕಾಶದಲ್ಲಿ ಏರುತ್ತಾ ಏರುತ್ತಾ ವಿಲೀನವಾಯಿತು.

ಸ್ವಾಮಿ ರಾಮತೀರ್ಥರ ಮೊದಲ ಹೆಸರು ತೀರ್ಥರಾಮ ಎಂದಿತ್ತು. ಅವರು ಗೃಹಸ್ಥರಾಗಿದ್ದಾಗ ಅವರಿಗೆ ಗೋಸಾಯಿ ತೀರ್ಥರಾಮ ಎಂಬ ಹೆಸರಿತ್ತು. ಅವರು ದೀಪಾವಳಿಯಾದ ಮರುದಿನ ಬುಧವಾರ ತಾ॥ 22–10–1873 ಪಂಜಾಬ್ ದೇಶದ ಗುಜರನ್‌ವಾಲಾ ಜಿಲ್ಲೆಯಲ್ಲಿ ಮುರಳೀವಾಲಾ ಎಂಬ ಹಳ್ಳಿಯಲ್ಲಿ ಬಡ ಬ್ರಾಹ್ಮಣ ಕುಟುಂಬದಲ್ಲಿ ಹೀರಾನಂದ ಗೋಸ್ವಾಮಿಯವರಿಗೆ ಪುತ್ರನಾಗಿ ಜನಿಸಿದರು. ಮುರಳೀವಾಲದ ಗೋಸ್ವಾಮಿ ಬ್ರಾಹ್ಮಣರು. ಹಿಂದೀ ಭಾಷೆಯ ತುಳಸೀರಾಮಾಯಣದ ಪ್ರಸಿದ್ಧ ಕರ್ತೃಗಳಾದ ಗೋಸ್ವಾಮಿ ತುಳಸೀದಾಸರ ವಂಶಸ್ಥರಲ್ಲಿ ದೂರದ ಸಂತತಿಯವರೆಂದು ತಿಳಿದು ಬರುತ್ತದೆ. ಅವರ ತಂದೆಯವರಾದ ಗೋಸ್ವಾಮಿ ಹೀರಾನಂದರು ಆಗಾಗ ಪೆಷಾವರ್ ಮತ್ತು ಸ್ವತ್ ಪ್ರಾಂತ್ಯಗಳ ಧಾರ್ಮಿಕ ಪ್ರವಾಸದಿಂದ ಪಡೆಯುತ್ತಿದ್ದ ಸಂಪಾದನೆಯಲ್ಲದೆ ಅವರ ಜೀವನಕ್ಕೆ ಬೇರೆ ಆಧಾರವಿರಲಿಲ್ಲ. ಅವರು ಪಂಜಾಬ್ ದೇಶದ (ಭಾರತದ) ವಾಯುವ್ಯ ಗಡಿನಾಡಿನ ಹಿಂದೂ ಜನಗಳ ಕುಲ ಗುರುಗಳಾಗಿದ್ದರು. ಹೀರಾನಂದರು ಕಾಲಕಾಲಕ್ಕೆ ತಮ್ಮ ಶಿಷ್ಯರಲ್ಲಿಗೆ

ಪೌರೋಹಿತ್ಯನಿಮಿತ್ತವಾಗಿ ಸಂಚಾರ ಹೋಗಬೇಕಾಗುತ್ತಿದ್ದಿತು. ಸ್ವಾಮಿ ರಾಮರು ಅಥವಾ ತೀರ್ಥರಾಮರು ಜನನವಾದ ಕೆಲವು ದಿನಗಳಲ್ಲಿಯೇ ಅವರ ತಾಯಿಯು ಸ್ವರ್ಗಸ್ಥರಾದರು. ಆದ್ದರಿಂದ ಆಕಳ ಹಾಲಿನಿಂದಲೇ ಅವರನ್ನು ಸಾಕಿದರು. ಅವರು ಪಂಜಾಬಿಯಾದರೂ ಮುಂದೆ ಅವರ ಮುಖ್ಯವಾದ ಆಹಾರವು ಅನ್ನ (ಅಕ್ಕಿ), ಹಾಲು ಆಗಿದ್ದಿತು. ಹಾಲು ಅವರಿಗೆ ಅತಿಶಯ ಪ್ರಿಯವಾದ ಆಹಾರವಾಗಿದ್ದಿತು. ಅವರು ದೊಡ್ಡವರಾದ ಮೇಲೆ ಒಂದೊಂದು ಸಲ ಐದು ಸೇರು ಹಾಲನ್ನಾದರೂ ಕುಡಿಯುತ್ತಿದ್ದರು. ಅವರು ಮಗುವಿನಿಂದಲೂ ಬಹಳ ಸೂಕ್ಷ್ಮಬುದ್ಧಿಯುಳ್ಳವರೂ ಏಕಾಂತಪ್ರಿಯರೂ ಧ್ಯಾನಶೀಲರೂ ಆಗಿದ್ದರು.

ಅವರು ಐದನೇ ವಯಸ್ಸಿನಲ್ಲಿ ಪ್ರೈಮರಿ ಸ್ಕೂಲಿಗೆ ಸೇರಿಸಲ್ಪಟ್ಟರು. ಅವರ ಬಾಲ್ಯ–ಕೌಮಾರಾವಸ್ಥೆಗಳು ಕಠಿಣತರವಾದ ವಿದ್ಯಾಭ್ಯಾಸದಲ್ಲಿ ಕಳೆಯಿತು. ಅವರು ಮೇಲುಮೇಲಿನ ತರಗತಿಗಳಿಗೆ ಉತ್ತೀರ್ಣರಾಗಿ ಹೋದಾಗ, ಬಡವರಾದ ಅವರ ತಂದೆಯವರಿಗೆ ಅವರನ್ನು ಓದಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಅವರು ವಿದ್ಯಾರ್ಥಿಗಳಾಗಿದ್ದಾಗ ಅತ್ಯಂತ ದಾರಿದ್ರ್ಯದಲ್ಲಿ ಕಷ್ಟಪಡಬೇಕಾಯಿತು. ಅಗ್ಗವಾದ ಮತ್ತು ಬಹಳ ಒರಟಾದ ಕೈಮಗ್ಗದ ಬಟ್ಟೆಯಿಂದ ಮಾಡಿದ ಷರ್ಟು ಪಂಜಾಬಿಯ ಷರಾಯಿಗಳೂ ಸಣ್ಣ ರುಮಾಲೂ ಅವರ ಉಡಿಗೆಯಾಗಿದ್ದವು. ಆಗಿನ ಕಾಲದಲ್ಲಿ ಅವರ ಎಲ್ಲಾ ಬಟ್ಟೆಗಳಿಗೂ ಒಟ್ಟು ಮೂರು ರೂಪಾಯಿ ಆಗುತ್ತಿದ್ದಿತು. ಅವರು ಐದನೇ ತರಗತಿಯಲ್ಲಿ ಓದುತ್ತಿದ್ದಾಗ ಅವರ ಶಾಲೆಯ ಪುಸ್ತಕಗಳ ಜೊತೆಗೆ ಪರ್ಷಿಯನ್ ಭಾಷೆಯಲ್ಲಿ ಪ್ರಸಿದ್ಧವಾದ ಗುಲಿಸ್ತಾನ್ ಮತ್ತು ಬೋಸ್ತಾನ್ ಎಂಬ ಗ್ರಂಥಗಳನ್ನು ಓದಿ ಮುಗಿಸಿದ್ದರು. ಅವರು ಆಟಕ್ಕೆ ಹೋಗುತ್ತಿರಲಿಲ್ಲ. ತಮ್ಮ ಎಲ್ಲಾ ಹೊತ್ತನ್ನೂ ಉರ್ದು ಮತ್ತು ಪರ್ಷಿಯನ್ ಸಾಹಿತ್ಯವನ್ನು ಓದುವದರಲ್ಲಿ ಕಳೆಯುತ್ತಿದ್ದರು. ಅವರು ತಮ್ಮ ಹತ್ತನೇ ವರ್ಷದಲ್ಲಿ ತಮ್ಮ ಹಳ್ಳಿಯಿಂದ ಏಳು ಮೈಲಿಗಳ ದೂರದಲ್ಲಿರುವ ಗುಜರನ್‌ವಾಲಾದಲ್ಲಿ ಹೈಸ್ಕೂಲಿಗೆ ಸೇರಿದರು. ಅಲ್ಲಿ ಅವರ ತಂದೆಯ ಸ್ನೇಹಿತರೂ ಅತಿಶಯ ಧರ್ಮಾತ್ಮರೂ ಸತ್ಪುರುಷರೂ ಆಗಿದ್ದ ಭಗತ್‌ಧನ್ನಾರಾಂಜೀ ಎಂಬವರ ರಕ್ಷಣೆಯಲ್ಲಿ ಇಡಲ್ಪಟ್ಟರು. ಬಾಲಕ ತೀರ್ಥರಾಮರು ಧನ್ನಾರಾಂ ಜೀಯವರನ್ನೇ ತಮ್ಮ ಆಧ್ಯಾತ್ಮಿಕ ಗುರುಗಳನ್ನಾಗಿ ಭಾವಿಸಿದರು. ಅವರು ಇನ್ನೂ ಹದಿನಾಲ್ಕು ವರೆ ವರ್ಷ ಇರುವಾಗ 1888ರಲ್ಲಿ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಅವರ ಶಾಲೆಯ ಉತ್ತೀರ್ಣರಾದ ವಿದ್ಯಾರ್ಥಿಗಳಲ್ಲಿ ಪ್ರಪ್ರಥಮರಾಗಿಯೂ ಇಡೀ ಪಂಜಾಬ್ ವಿಶ್ವವಿದ್ಯಾನಿಲಯದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಶ್ರೇಣಿಯಲ್ಲಿ ೩೮ನೇ ಸ್ಥಾನವನ್ನೂ ಪಡೆದರು. ಮುಂದೆ ಕಾಲೇಜಿನಲ್ಲಿ ಓದುವದಕ್ಕೆ ಅವರಿಗೆ ಅದರಿಂದ ಸಹಾಯವಾಗಿ ವಿದ್ಯಾರ್ಥಿ ವೇತನವು ಸಿಕ್ಕಿತು. ಅವರ ಕಾಲೇಜಿನ ವಿದ್ಯಾಭ್ಯಾಸ ಕಾಲದಲ್ಲಿ ಮಧ್ಯರಾತ್ರಿಯಲ್ಲಿ ಓದುವದಕ್ಕೆ ದೀಪದ ಎಣ್ಣೆಗಾಗಿ

ಒಂದೊಂದು ದಿನ ಅವರು ಊಟವನ್ನೇ ಬಿಟ್ಟುಬಿಡುತ್ತಿದ್ದರೆಂದು ಅವರ ಜೊತೆಯ ವಿದ್ಯಾರ್ಥಿಗಳು ಹೇಳುತ್ತಿದ್ದರು. ಎಷ್ಟೋ ಸಮಯ ಅವರು ದಿವಸಗಟ್ಟಲೆ ಉಪವಾಸವಿರಬೇಕಾಗುತ್ತಿತ್ತಾದರೂ ಮುಖದ ಮೇಲೆ ಆ ಕ್ಲೇಶದ ಸೂಚನೆಯನ್ನು ಸ್ವಲ್ಪವೂ ತೋರಿಸಿಕೊಳ್ಳದೆ ಶಾಂತವಾದ ಪ್ರಸನ್ನಮುಖದಿಂದಲೇ ಯಥಾಪ್ರಕಾರ ಕ್ರಮವಾಗಿ ಕಾಲೇಜಿಗೆ ಹೋಗಿ ಬರುತ್ತಾ ತಪ್ಪದೆ ಅಭ್ಯಾಸದಲ್ಲಿ ನಿರತರಾಗಿರುತ್ತಿದ್ದರು.

ಆರ್ಯ ಜನಾಂಗದ ಲಕ್ಷಣವುಳ್ಳ ಮಾದರಿಯ ಅವರ ಮುಖವು ವ್ಯಗ್ರವೂ ಸುಂದರವೂ ಆಗಿದ್ದಿತು. ಆಳವಾಗಿ ಕಪ್ಪಾಗಿದ್ದ ಅವರ ಹೊಳಪಿನ ಕಣ್ಣುಗಳು ಅಂತರಾತ್ಮನ ಗೂಢವನ್ನೂ ಪ್ರೇಮವನ್ನೂ ತೋರಿಸುತ್ತಿದ್ದವು. ವಿಶಾಲವಾಗಿಯೂ ಪ್ರಧಾನವಾಗಿಯೂ ಕಾಣುತ್ತಿದ್ದ ಅವರ ದೊಡ್ಡ ಹಣೆಯು ಉನ್ನತವಾದ ಬುದ್ಧಿ ಶಕ್ತಿಯನ್ನು ಸೂಚಿಸುತ್ತಿದ್ದಿತು. ಅವರ ತುಟಿಗಳ ಸುತ್ತಲೂ ಹೆಣ್ಣಿನ ಕೋಮಲತೆಯಿದ್ದಿತು. ಅವರು ಗಂಭೀರಭಾವದಲ್ಲಿದ್ದಾಗ ಕೆಳತುಟಿಯು ಮೇಲಿನ ತುಟಿಗೆ ದುಂಡಾದ ಸಣ್ಣ ಗದ್ದದ ಮೇಲೆ ಒತ್ತಿ ಅದಮ್ಯವಾದ ಸಂಕಲ್ಪಶಕ್ತಿಯನ್ನು ತೋರಿಸುತ್ತಿತ್ತು. ಮುಂದೆ ಅವರು ಇಂಥಾ ಪ್ರಖ್ಯಾತವ್ಯಕ್ತಿ ಆಗಬಹುದೆಂಬ ಸೂಚನೆಯು ಅಥವಾ ಭರವಸೆಯು, ಅವರು ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಅಷ್ಟಾಗಿ ಅವರಲ್ಲಿ ತೋರುತ್ತಿರಲಿಲ್ಲ. ಆದರೂ ಆಗ ಅವರನ್ನು ನೋಡಿದ ಯಾರಿಗಾದರೂ ಅವರ ದೈವೀ ಸ್ವಭಾವವೂ ಅಪರೂಪವಾಗಿ ಕಾಣಬಹುದಾದ ಜೀವನದ ನಿಷ್ಕಪಟವೂ ನಿಷ್ಕಳಂಕವೂ ಪರಿಶುದ್ಧವೂ ಆದ ಗುಣವೂ ಯಾರ ಮನಸ್ಸಿನ ಮೇಲಾದರೂ ಅಸಾಧಾರಣವಾದ ಮುದ್ರೆಯೊತ್ತುತ್ತಿತ್ತು. ವಿನೀತ ಕನ್ಯೆಯಂತೆ ಲಜ್ಜಾಶೀಲರಾಗಿದ್ದರು. ಚೆಲುವಾದ ಬಿಳುಪು ಬಣ್ಣದ ತೆಳುವಾದ ಸಣ್ಣದೇಹದ ಮೂಲಕ ಅವರು ಪ್ರೇಮದ ಬೆಳಕಿನಲ್ಲಿ ಪರಿಶುದ್ಧ ಪಾರದರ್ಶಕವಾಗಿ ತೋರುತ್ತಿದ್ದರು. ಆದರೆ ನಿರಾಡಂಬರವಾದ ಆ ನಮ್ರ ಸ್ವಭಾವದೊಳಗೆ, ಅತಿ ಪವಿತ್ರವಾದುದರಿಂದ ವ್ಯಕ್ತಮಾಡಲಾಗದೆಂದು ಅವರು ಭಾವಿಸಿದ ಉದಾತ್ತವಾದ ಉದ್ದೇಶಗಳೂ ಉನ್ನತವಾದ ಆಕಾಂಕ್ಷೆಗಳೂ ಉಳ್ಳ ಒಂದು ಮಹದ್ವ್ಯಕ್ತಿತ್ವವು ಹುದುಗಿದ್ದಿತು. ಕಷ್ಟಕಾರ್ಪಣ್ಯಗಳ ಕಣ್ಣೀರಿನಿಂದಲೂ ಹೃದಯದಲ್ಲಿ ಶಿಷ್ಯನ ನಮ್ರತೆಯಿಂದಲೂ ಕನ್ಯಾಮಣಿಯ ಮೌನದಿಂದಲೂ ವಿಶ್ವಚೇತನನಿರ್ಧಾರದಿಂದಲೂ ಈ ದೇವತಾಸ್ವರೂಪನಾದ ವಿದ್ಯಾರ್ಥಿಯೂ ಜ್ಞಾನದೇಗುಲದಲ್ಲಿ ಧರ್ಮಯೋಧನಂತೆ ರಾತ್ರಿಹಗಲೂ ಬಹಳ ಶ್ರಮಿಸುತ್ತಿದ್ದನು. ಅವರು ಯಾವಾಗಲೂ ಸಹಪಾಠಿಗಳಲ್ಲಿ ಮುಂದಾಳಾಗಿರುತ್ತಿದ್ದರು. ಅವರ ಅಧ್ಯಯನವು ಅಪಾರವಾಗಿದ್ದಿತು. ಅವರು ಸ್ವಾಮಿಗಳಾಗಿದ್ದಾಗ ಸಾಹಿತ್ಯದಲ್ಲಿಯೂ ತತ್ತ್ವಶಾಸ್ತ್ರದಲ್ಲಿಯೂ ಅವರಿಗಿದ್ದ ಜ್ಞಾನವೂ ಬೋಧವೂ ಅದ್ಭುತವಾಗಿದ್ದಿತು. ಮಾನವನ ಸಮಸ್ತ ವಿಚಾರವ್ಯಾಪ್ತಿಯೂ ಅವರಿಗೆ ಅವಗತವಾಗಿದ್ದಂತೆ ಇದ್ದಿತು.

ಅವರು ಎಂಟ್ರೆನ್ಸ್ ಪರೀಕ್ಷೆಯನ್ನು ಮುಗಿಸಿದ ಕೂಡಲೇ ಓದುವದನ್ನು ಬಿಟ್ಟು, ಯಾವುದಾದರೂ ಉದ್ಯೋಗಕ್ಕೆ ಸೇರಿಕೊಂಡು, ಸಂಪಾದನೆಮಾಡಿ, ಕುಟುಂಬ ಭರಣಕ್ಕೆ ತಮಗೆ ಸಹಾಯಕವಾಗಬೇಕೆಂದು ಅವರ ತಂದೆಯವರು ಬಹಳ ಆಗ್ರಹ ಮಾಡಿದರೂ ಜಗ್ಗದೆ ಮುಂದೆ ಓದುವದಕ್ಕಾಗಿ ಅವರು ಲಾಹೋರಿಗೆ ಹೋಗಿ ಮಿಷನ್ ಕಾಲೇಜನ್ನು ಸೇರಿಕೊಂಡರು. ಇಲ್ಲಿ ಅವರು ಬಹಳ ತೀವ್ರವಾದ ಹಣಕಾಸಿನ ಮುಗ್ಗಟ್ಟಿಗೆ ಸಿಕ್ಕು ಅತಿಶಯ ಪ್ರತಿಕೂಲ ಪರಿಸ್ಥಿತಿಯಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಬೇಕಾಯಿತು. ಇದರಿಂದ ಅವರ ಆರೋಗ್ಯವು ಕೆಟ್ಟು ಆಗಾಗ ಕಾಯಿಲೆ ಬೀಳುತ್ತಿದ್ದರು. ಈ ಕಷ್ಟಗಳು ಸಾಲದೆಂದು ಅವರು ಹಿಂದೆ ಸಂಸ್ಕೃತವನ್ನು ಕಲಿತಿರಲಿಲ್ಲವಾದರೂ ಅದನ್ನು ಐಚ್ಛಿಕ ವಿಷಯಗಳಲ್ಲಿ ಒಂದನ್ನಾಗಿ ತೆಗೆದುಕೊಂಡರು. ಇಷ್ಟೆಲ್ಲಾ ಕಷ್ಟಗಳಿದ್ದರೂ ೧೮೯೦ ರಲ್ಲಿ ಎಫ್. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪ್ರಥಮಸ್ಥಾನವನ್ನು ಪಡೆದರು. ಅವರು ಬಿ. ಎ. ಕ್ಲ್ಯಾಸಿನಲ್ಲಿ ಓದುವ ವಿದ್ಯಾರ್ಥಿಯಾಗಿದ್ದಾಗಲೇ ಅವರ ಹೆಂಡತಿಯನ್ನೂ ಜೊತೆಗಿಟ್ಟುಕೊಂಡು ಜೀವನವನ್ನು ನಡೆಸಬೇಕಾಯಿತು. ಆಗ ಅವರಿಗೆ ಸಾಕಷ್ಟು ಸಂಪಾದನೆ ಇರಲಿಲ್ಲವಾದ್ದರಿಂದ, ಎರಡು ಹೊತ್ತು ಊಟಮಾಡುವದೇ ಕಷ್ಟವಾಗಿತ್ತು. ಅವರು ಜೀವನದ ಪ್ರತಿ ನಿಮಿಷವನ್ನೂ ತಮ್ಮ ಮಹದ್ವ್ಯಕ್ತಿತ್ವವನ್ನು ಬೆಳೆಸುವದಕ್ಕಾಗಿ ವಿನಿಯೋಗಿಸುತ್ತಿದ್ದರು. ಅತ್ಯಂತ ಸರಳ ಜೀವನವೂ ಉನ್ನತ ಭಾವನಾ–ವಿಚಾರಗಳೂ ಅವರ ಬಾಳಿನ ಗುಟ್ಟಾಗಿತ್ತು. ಅವರು ಅಧ್ಯಾತ್ಮಿಕ ಸಾಧನೆಗೂ ಕಾಲವನ್ನು ಉಪಯೋಗಿಸುತ್ತಿದ್ದುದರಿಂದ ಆ ವರ್ಷ ಬಿ.ಎ. ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳ ಒಟ್ಟಿನ ಅಂಕಗಳಲ್ಲಿ ಪಂಜಾಬ್ ವಿಶ್ವವಿದ್ಯಾನಿಲಯಕ್ಕೇ ಅತ್ಯಂತ ಹೆಚ್ಚಿನ ಗುಣಾಂಕಗಳನ್ನು ಗಳಿಸಿದರೂ ಇಂಗ್ಲೀಷ್‌ನಲ್ಲಿ ಮೂರು ಗುಣಾಂಕಗಳು ಕಡಿಮೆ ಬಂದುದರಿಂದ ಅವರು ಉತ್ತೀರ್ಣರಾಗಲಿಲ್ಲ. ಮರುವರ್ಷ ೧೮೯೩ರಲ್ಲಿ ಬಿ.ಎ.ಪರೀಕ್ಷೆಯಲ್ಲಿ ಪಂಜಾಬ್ ಯೂನಿವರ್ಸಿಟಿಗೇ ಪ್ರಥಮ ಸ್ಥಾನದಲ್ಲಿ ತೇರ್ಗಡೆಯಾದರು. ಆದುದರಿಂದ ಅವರಿಗೆ ತಿಂಗಳಿಗೆ 60 ರೂ.ಗಳು ವಿದ್ಯಾರ್ಥಿವೇತನವು ಬರುವಂತಾಯಿತು.

ಈಗ ಅವರ ೧೯॥ ವರ್ಷ ವಯಸ್ಸಿನಲ್ಲಿ ಲಾಹೋರಿನ ಗೌರ್ನಮೆಂಟ್ ಕಾಲೇಜಿನಲ್ಲಿ ಮ್ಯಾಥಮ್ಯಾಟಿಕ್ಸ್ (ಗಣಿತಶಾಸ್ತ್ರದ) ಎಂ. ಎ. ಕ್ಲಾಸಿಗೆ ಸೇರಿದರು. ೧೮೯೫ರಲ್ಲಿ ಅವರು ಮ್ಯಾಥಮ್ಯಾಟಿಕ್ಸ್ ಎಂ. ಎ. ಪದವಿಯನ್ನು ಬಹಳ ಹೆಚ್ಚಿನ ಗುಣಾಂಕಗಳಿಂದ ಪಡೆದರು. ಆ ವರ್ಷವೇ ಅವರಿಗೆ ಸಿಯಾಲ್‌ಕೋಟ್‌ನಲ್ಲಿ ಅಮೆರಿಕನ್ ಮಿಷನ್ ಹೈಸ್ಕೂಲಿನಲ್ಲಿ ಮಾಸ್ತರ್ ಕೆಲಸವಾಯಿತು. ೧೮೯೬ರಲ್ಲಿ ಲಾಹೋರಿನ ಫೊರ್‌ಮನ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಅವರಿಗೆ ಮ್ಯಾಥಮ್ಯಾಟಿಕ್ಸ್ ಪ್ರೊಫೆಸರ್ ಕೆಲಸವಾಯಿತು. ಕೆಲವು ಕಾಲದ ಮೇಲೆ ಲಾಹೋರ್ ಓರಿಯಂಟಲ್ ಕಾಲೇಜಿನಲ್ಲಿ ಅವರು ರೀಡರ್ ಕೆಲಸವನ್ನು ಪಡೆದರು. ಆಗ ಅವರು ಉಪನಿಷತ್ತುಗಳನ್ನೂ

ಬ್ರಹ್ಮಸೂತ್ರಗಳನ್ನೂ ಗೀತೆಯನ್ನೂ ಯೋಗವಾಸಿಷ್ಠವನ್ನೂ ಚೆನ್ನಾಗಿ ಅಧ್ಯಯನ ಮಾಡಿದರು. ಇದರಿಂದ ಅವರ ಹೃದಯವು ತೀವ್ರ ಪರಿವರ್ತನೆಯಾದುದರಿಂದ ಕೇವಲ ಪ್ರೊಫೆಸರ್ ಆಗಿಯೋ ಗೃಹಸ್ಥರಾಗಿಯೋ ಉಳಿಯುವದು ಅವರಿಗೆ ಸಾಧ್ಯವಾಗಲಿಲ್ಲ, ಅವರು ಪಾಶ್ಚಾತ್ತ್ಯ ತತ್ತ್ವಶಾಸ್ತ್ರವನ್ನೂ ಆಳವಾಗಿ ಅಭ್ಯಾಸಮಾಡಿ ಶುದ್ಧ ನೈತಿಕ-ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಿದ್ದರು.

ಅವರು ಕಾಲೇಜಿನಲ್ಲಿ ಓದುತ್ತಿರುವಾಗಲೇ ಹಫೀಸ್, ಮೌಲಾನಾ ರೂಮಿ ಮಾಘ್ರಾಬಿ, ಉಮರ್ ಖಯಾಂ ಇವರೇ ಮೊದಲಾದ ಪರ್ಷಿಯಾದ ಸೂಫಿ ಮಹಾಂತರ ಸಾಹಿತ್ಯವನ್ನು ಅಭ್ಯಾಸಮಾಡಿದ್ದರು. ಪ್ರಾಚ್ಯ ಮತ್ತು ಪಾಶ್ಚಾತ್ತ್ಯ, ತತ್ತ್ವಶಾಸ್ತ್ರಗಳ ಸಾಹಿತ್ಯ ಸ್ರೋತಸ್ಸಿನಲ್ಲಿ ಈಜಾಡಿದ್ದರು. ಉಪನಿಷತ್ತುಗಳನ್ನು ಅನೇಕಸಲ ಓದಿದ್ದರು. ಹಿಂದೀ, ಉರ್ದು, ಪಂಜಾಬೀ ಕವಿ-ಕಾವ್ಯಗಳ ಸೌಂದರ್ಯಕ್ಕೂ ಸವಿಗೂ ಮರುಳಾಗಿದ್ದರು.

ಅವಿರತವಾದ ಅಭ್ಯಾಸದ ತೀವ್ರ ಶ್ರಮವೂ ಪರಿಸ್ಥಿತಿಯ ಕಾಠಿಣ್ಯವೂ ಆರೋಗ್ಯವನ್ನು ಕೆಡಿಸಿದ್ದವು. ಅವರು ಎಂ. ಎ. ಪರೀಕ್ಷೆಯಲ್ಲಿ ಪದವೀಧರರಾಗಿ ಬಂದಾಗ, ಅವರು ಹೊತ್ತು ತಿರುಗುತ್ತಿದ್ದ ಎಲುಬಿನ ಗೂಡಿನಂತಿದ್ದ ದೇಹದಲ್ಲಿ ಪ್ರಾಣವು ಹೇಗೆ ಕಷ್ಟದಿಂದ ಸಿಕ್ಕಿಕೊಂಡಿರಬಹುದೆಂದು ಕಂಡವರೆಲ್ಲಾ ಆಶ್ಚರ್ಯಪಡುತಿದ್ದರು. ಅವರ ಮೂಳೆಗಳ ಮೇಲೆ ಮಾಂಸಖಂಡಗಳೇ ಇರಲಿಲ್ಲ. ಅವರ ದೊಡ್ಡ ತಲೆಯು ತೆಳುವಾದ ಮೂಳೆಯ ಕೊಕ್ಕರೆಯ ಕುತ್ತಿಗೆಯ ಮೇಲೆ ಓಲೆದಾಡುವಂತಿತ್ತು. ಧ್ವನಿಯು ಕರ್ಕಶವಾಗಿ ಮಾತಾಡುವದು ಕಷ್ಟವಾಗಿತ್ತು. ದೇಹದಿಂದ ಅಷ್ಟು ದುರ್ಬಲರಾಗಿದ್ದರು. ಆದರೆ ದೇಹವನ್ನು ಬಲಪಡಿಸಿಕೊಳ್ಳಬೇಕೆಂದು ದೃಢ ನಿರ್ಧಾರಮಾಡಿದರು. ಕ್ರಮಬದ್ಧವಾದ ಶಾರೀರಕ ವ್ಯಾಯಾಮದಿಂದಲೂ ಸ್ವಲ್ಪ ಹೆಚ್ಚು ಪ್ರಮಾಣದ ಕ್ಷೀರಸೇವನೆಯಿಂದಲೂ ಸ್ವಲ್ಪ ಕಾಲದಲ್ಲಿಯೇ ಆರೋಗ್ಯವನ್ನೂ ಬಲವನ್ನೂ ಸಂಪಾದಿಸಿಕೊಂಡರು. ಹೊಸ ಹೊಸ ರೀತಿಯ ವ್ಯಾಯಾಮವನ್ನು ಕಂಡುಹಿಡಿಯುವದರಲ್ಲಿ ಸಂತೋಷಗೊಳ್ಳುತ್ತಿದ್ದರು. ಅಂದಿನಿಂದ ಅವರೆಂದೂ ಪ್ರತಿದಿನ ವ್ಯಾಯಾಮವನ್ನು ಬಿಡುತ್ತಿರಲಿಲ್ಲ. ಅವರು ಕೊನೆಗೆ ಗಂಗೆಯಲ್ಲಿ ತೇಲಿ ಹೋಗುವದಕ್ಕೆ-ನಿರ್ಯಾಣಕ್ಕೆ-ಕೆಲವು ನಿಮಿಷಗಳ ಮುಂಚೆ ಸಹ ನದೀ ತೀರದಲ್ಲಿ ವ್ಯಾಯಾಮ ಮಾಡಿದ್ದರು. ಹೀಗೆ ತೆಳುವಾದ ಕೃಶ ಶರೀರದಿಂದ ಜಿಂಕೆಯಂತೆ ಅಥವಾ ಸಾರಂಗದಂತೆ ಚಪಲವೂ ವೇಗವೂ ಸತ್ತ್ವಯುತವೂ ಆದ ಬಲಿಷ್ಠದೇಹವನ್ನು ಸಂಪಾದಿಸಿದರು. ಅವರು ಮಹಾವೇಗಶಾಲಿಗಳಾದ ನಡಗೆಗಾರರಾಗಿದ್ದರು. ಅವರು ಸ್ವಾಮಿಗಳಾದ ಮೇಲೆ ಹಿಮಾಲಯದಲ್ಲಿ ದಿನಕ್ಕೆ ನಲವತ್ತು ಮೈಲಿಗಳ ಮೇಲೆ ನಡೆಯುತ್ತಿದ್ದರು. ಅವರು ಅಮೇರಿಕಾದಲ್ಲಿ ಅಲ್ಲಿಯ ಕೆಲವು ಸೈನಿಕರ ಜೊತೆಯಲ್ಲಿ ನಲವತ್ತು ಮೈಲಿಗಳ ಓಟದ ಪಂದ್ಯದಲ್ಲಿ ತಮಾಷೆಗಾಗಿ

ಸ್ಪರ್ಧಿಸಿ, ಓಡಿ, ಜಯಶಾಲಿಯಾದ ಸೈನಿಕನಿಗಿಂತಲೂ ಎರಡು ಗಂಟೆಗಳ ಕಾಲ ಮುಂಚೆಯೇ ಬಂದು ಗುರಿಯನ್ನು ಸೇರಿದರು. ಅವರು ಒಮ್ಮೆ ಸ್ಯಾನ್ ಫ್ರಾನ್ಸಿಸ್ಕೋ ನಗರದ ರಸ್ತೆಯಲ್ಲಿ ವೇಗವಾಗಿ ನಡೆದು ಹೋಗುತ್ತಿದ್ದಾಗ ಒಬ್ಬ ಅಮೆರಿಕನ್ ಎದುರಾಗಿ "ಏನು? ನಿಮ್ಮದೇ ದೇಶವೆಂಬಂತೆ ನಡೆಯುತ್ತಿದ್ದೀರಿ?" ಎಂದು ಟೀಕಿಸಲು, ಅವರು ನಗುನಗುತ್ತಾ "ಹೌದು; ಸಂದೇಹವೇ ಇಲ್ಲ." ಎಂದು ಹೇಳಿ ನಡದೇ ಬಿಟ್ಟರು. ಮೊಣಕಾಲಿನ ಮೇಲೆ ಒಂದು ತುಂಡು ಬಟ್ಟೆಯನ್ನು ಸುತ್ತಿಕೊಂಡು ಕಂಬಳಿಯನ್ನು ಹೊದ್ದು ಗಂಗೋತ್ರಿ, ಜಮ್ನೋತ್ರಿ, ಬದರೀನಾಥ ಮೊದಲಾದ ಶಿಖರಗಳನ್ನು ಅವರು ಏರಿದರು. ಜಮ್ನೋತ್ರಿಯಿಂದ ಗಂಗೋತ್ರಿಗೆ ಹಿಮರಾಶಿಯಲ್ಲಿಯೂ ಹಿಮ ಪ್ರವಾಹದಲ್ಲಿಯೂ ದಾಟಿದರು. ಹಿಮಪರ್ವತಗಳಲ್ಲಿಯೇ ವಾಸಿಸಿ, ಗೊಂಡಾರಣ್ಯದ ಗುಹೆಗಳಲ್ಲಿಯೇ ಏಕಾಂಗಿಯಾಗಿ ಮಲಗುತ್ತಿದ್ದರು. ಗಿರಿಜನರು ಅವರನ್ನು—ಸ್ವಾಮಿಗಳನ್ನು-ದೇವರೆಂದೇ ನಂಬಿದ್ದರು, ಕರೆಯುತ್ತಿದ್ದರು. ಆ ಪರ್ವತಗಳಲ್ಲಿ ವೇಗವಾಗಿ ಹರಿಯುತಿದ್ದ ಮಳೆಗಾಲದ ಪ್ರವಾಹಗಳಲ್ಲಿ ಕೂಡ ಈ ದೇವರು ಆ ಗಿರಿಜನರ ದನಕರುಗಳನ್ನು ಈಚೆ ದಂಡೆಯಿಂದ ಆಚೆ ದಂಡೆಗೆ ದಾಟಿಸಿ ಕೊಡುತ್ತಿದ್ದರು. ಮಧ್ಯರಾತ್ರಿಯಲ್ಲಿ ಧ್ಯಾನಮಾಡುತ್ತಿದ್ದ ತಮ್ಮ ಆಸನವನ್ನು ಬಿಟ್ಟು, ಕತ್ತಲಿನ ಕಾನನದಲ್ಲಿ ಮೃತ್ಯುವನ್ನೂ ಭಯವನ್ನೂ, ಎದುರಿಸಿ, ಸ್ವಚ್ಛಂದವಾಗಿ ಅಲೆದಾಡುತ್ತಿದ್ದರು. ಲಾಹೋರಿನಲ್ಲಿ ಅವರು ವಿದ್ಯಾರ್ಥಿದಶೆಯಲ್ಲಿದ್ದಾಗ, ಸಾಕಷ್ಟು ಸರಿಯಾದ ಆಹಾರವಿಲ್ಲದೆ ಉಪವಾಸದಿಂದ ಅತ್ಯಂತ ಕೃಶ ಶರೀರಿಯಾಗಿದ್ದ ಅವರನ್ನು ನೋಡಿದ್ದ ಜನರು, ಈ ಹಿಮಾಲಯ ಪರ್ವತಗಳಲ್ಲಿ ಇಷ್ಟು ನಿರ್ಭಯವಾಗಿಯೂ ಧೈರ್ಯವಾಗಿಯೂ ನಿರ್ಲಕ್ಷ್ಯವಾಗಿಯೂ ಆವೇಶ–ರಭಸ ಪೂರ್ಣವಾಗಿಯೂ ಇಷ್ಟು ಬಲಿಷ್ಠವಾಗಿಯೂ ಗುಲಾಬಿಯ ಬಣ್ಣದಿಂದ ತೇಜಸ್ವಿಯಾಗಿಯೂ ಇದ್ದ ಈ ಕಾಡುಮನುಷ್ಯ ರಾಮರಲ್ಲಿ ಅವರ ಬಳಲಿ–ಕಳೆಗುಂದಿ–ಬಿಳಿಚಿಕೊಂಡ ಆ ಹಳೆಯ ಬಡಕಲು ಮುಖವನ್ನು ಗುರುತಿಸುವುದು ಸಾಧ್ಯವೇ ಇರಲಿಲ್ಲ. ಅವರ ಈಗಿನ ಮುಖವು ತುಂಬಿತ್ತು; ಅಂದವಾಗಿ ಕಳೆಗಟ್ಟಿತ್ತು, ಉನ್ಮನೀ ಭಾವದ ಆನಂದದ ಅಮಲಿನಿಂದ ಕಣ್ಣುಗಳು ಅರ್ಧನಿಮೀಲಿತವಾಗಿರುತ್ತಿದ್ದವು. ಈ ಎಲ್ಲಾ ಪುಷ್ಕಲ ದೈಹಿಕ–ಆಧ್ಯಾತ್ಮಿಕ ಶಕ್ತಿಯ ಸಮೃದ್ಧಿಯಿಂದ ಸ್ವಾಮಿರಾಮರು ತಮ್ಮ ಜೀವಮಾನದ ಮೇರುಕೃತಿಯೆಂಬ ತಮ್ಮ ದಿವ್ಯವಾದ ವ್ಯಕ್ತಿತ್ವವನ್ನೇ ಲೋಕಕ್ಕೆ ಅರ್ಪಿಸಿದರು.

ಸ್ವಾಮಿ ರಾಮರ ವ್ಯಕ್ತಿತ್ವವು ಸ್ಫೋಟಕವಾಗಿದ್ದಿತೆಂದು ಹೇಳಬಹುದು. ಅವರು, ಏನೂ ಹೇಳುವದಕ್ಕೆ ಇಲ್ಲವೇನೋ ಎಂಬಂತೆ ಎಷ್ಟೋ ತಿಂಗಳು ಮೌನವಾಗಿ ನಿಶ್ಶಬ್ದವಾಗಿರುತ್ತಿದ್ದರು. ಆನಂದದಲ್ಲಿ ಮುಳುಗಿ ಕರಗಿರುತ್ತಿದ್ದರು. ಅನಂತರ, ಅವರು ಒಮ್ಮೆಗೇ ಜ್ವಾಲಾಮುಖಿಯಂತೆ ಬಗೆಯೊಡೆದು ಭಾವಾವೇಶದಿಂದ ತಮ್ಮ

ವಿಚಾರಗಳನ್ನು ಉಚ್ಛೃಂಖಲವಾಗಿ ಹರಿಬಿಡುತ್ತಿದ್ದರು ಅಥವಾ ವ್ಯಕ್ತಮಾಡುತ್ತಿದ್ದರು. ಅವರು ಯಾವಾಗ ಮಾತನಾಡಿದರೂ ಬರೆದರೂ ಹೊಸದಾಗಿಯೂ ಉಲ್ಲಾಸಕರವಾಗಿಯೂ ಇರುತ್ತಿದ್ದಿತು. ಅವರು ಜನರ ಮಧ್ಯದಲ್ಲಿ ಹೆಚ್ಚು ಕಾಲ ಇರಲು ಸಾಧ್ಯವಿಲ್ಲವೆಂಬಂತೆ ತೋರುತ್ತಿತ್ತು. ಜನರ ಸಹವಾಸದಿಂದ ಏನೋ ನಷ್ಟವಾದಂತೆ, ಆತ್ಮವು ಬಳಲಿದಂತೆ ಅನಿಸುತ್ತಿದ್ದುದರಿಂದ, ಅವರು ಅದನ್ನು ಪುನಃ ತುಂಬಿಕೊಳ್ಳುವದಕ್ಕೆ ಮತ್ತೆ ಮತ್ತೆ ಪರ್ವತಾರಣ್ಯಗಳ ಏಕಾಂತಕ್ಕೆ ಓಡಿಹೋಗುತ್ತಿದ್ದರು. ಅಲ್ಲಿ ಅವರು ಹರಿಯುವ ಜಲಝರಿಗಳೊಡನೆಯೂ ವಿಶಾಲ ವೈಭವವಾದ ಅನಂತಾಕಾಶದೊಡನೆಯೂ ಶಾಂತವಾದ ತಾದಾತ್ಮ್ಯವನ್ನು ಅನುಭವಿಸಿ, ಬಿಸಿಲಿನಲ್ಲಿ ಬಂಡೆಗಳ ಮೇಲೆ ದೇಹವನ್ನು ಕೆಡವಿ, ಕಣ್ಣು ಮುಚ್ಚಿಕೊಂಡು ಗಂಟೆಗಟ್ಟಲೆ ಮಲಗಿರುತ್ತಿದ್ದರು.

ಅತಿಶಯ ಸುಸಂಸ್ಕೃತವೂ ವಿಕಸಿತವೂ ಆದ ಸ್ವಾಮಿ ರಾಮರ ರಾಗ–ಭಾವಗಳು (Emotion), ಅವರ ವ್ಯಕ್ತಿತ್ವದ ಇನ್ನೊಂದು ಅತ್ಯಾಕರ್ಷಕವಾದ ವೈಲಕ್ಷಣ್ಯವಾಗಿತ್ತು. ಗಭೀರವಾದ ನಿಷ್ಕಪಟ ಸರಳ ಭಾವವು ಅವರ ನಯನಗಳಿಂದ ಹೇರಳವಾಗಿ ವೃಷ್ಟಿಯಾಗುತ್ತಿರುವದೋ ಎನ್ನುವಂತಿತ್ತು. ಅವರ ಮುಖಭಾವದ, ಪ್ರೀತಿಯ ನೋಟದ, ನಡೆನುಡಿಗಳ ಮಾಧುರ್ಯಕ್ಕೆ ಯಾರಾದರೂ ಮರುಳಾಗದಿರುವದೇ ಸಾಧ್ಯವಿರಲಿಲ್ಲ. ಮುಹಮ್ಮದೀಯರಾಗಲೀ ಹಿಂದೂಗಳಾಗಲೀ ಅವರನ್ನು ಒಂದೇ ಬಗೆಯಿಂದ ಪ್ರೀತಿಸುತ್ತಿದ್ದರು. ಬೇರೆ ಬೇರೆ ಜನಾಂಗಗಳ ಜನರು ಸ್ವಾಮಿ ರಾಮರಲ್ಲಿ ತಮ್ಮ ಕುಟುಂಬ ಸಂಬಂಧವಾದ ಏನನ್ನೋ ಕಂಡು ಪ್ರೇಮಿಸುತ್ತಿದ್ದರು. ಅಮೆರಿಕನ್‌ರು ಅವರನ್ನು ಅಮೇರಿಕನ್ ಎಂದೇ ಜಪಾನೀಯರು ಅವರನ್ನು ಜಪಾನೀಯರೆಂದೇ ಪರ್ಷಿಯನ್‌ರು ಅವರನ್ನು ಪರ್ಷಿಯನ್ ಎಂದೇ ಭಾವಿಸುತ್ತಿದ್ದರು.

ಸ್ವಾಮಿ ರಾಮರ ದರ್ಶನವೆಂದರೆ, ಅತ್ಯುಚ್ಚವಾದ ಹೊಸಭಾವನೆಗಳಿಂದಲೂ ಹೊಸ ಆದರ್ಶಗಳಿಂದಲೂ ಹೊಸ ಶಕ್ತಿಗಳಿಂದಲೂ ಹೊಸ ದೃಷ್ಟಿಯಿಂದಲೂ ಹೊಸ ದರ್ಶನಗಳಿಂದಲೂ ಸ್ಫೂರ್ತಿ ಪಡೆಯುವದೇ ಆಗಿದ್ದಿತು.

ಅವರ ಸಾನ್ನಿಧ್ಯದ ಮೋಹಕತೆಗೂ ಮೆಚ್ಚುಗೆಗೂ ಕಾರಣವಾದ ಇನ್ನೊಂದು ವಿಶೇಷವೆಂದರೆ, ಅವರ ಶಿಖರೋಪಮವಾದ ಅತ್ಯುಚ್ಚ ಬುದ್ಧಿಶಕ್ತಿ ಮತ್ತು ಧೀರವಾದ ವಿಚಾರ ಸ್ವಾತಂತ್ರ್ಯ. ಅವರು ಏನನ್ನು ಬೋಧಿಸಿದರೂ ಅದು ಅವರ ಸಾಧನೆಯಲ್ಲಿಯೂ ಜೀವನದಲ್ಲಿಯೂ ಅನುಭವ ಪಡೆದದ್ದೇ ಆಗಿದ್ದಿತು. ಸತ್ಯವನ್ನು ಕಂಡು ಹಿಡಿಯುವದಕ್ಕೆ ಭೌತಿಕವಿಜ್ಞಾನದಲ್ಲಿ ಆಧಾರ ಪ್ರಮಾಣಗಳ (Authority) ಅಧಿಕಾರ ತೂಕವು ಬಹಳ ಕಡಿಮೆಯಾಗಿರುವಂತೆ ವ್ಯಕ್ತಿ ಜೀವನದ ಅಂತರಂಗದ ಧರ್ಮದಲ್ಲಿಯೂ ತತ್ತ್ವಶೋಧನೆಯಲ್ಲಿಯೂ ಅವುಗಳ ಕಾಟವು ಅತ್ಯಲ್ಪವಾಗಿರಬೇಕು. ಅಥವಾ ಇಲ್ಲವಾಗಬೇಕು. ಪ್ರತಿಯೊಬ್ಬರೂ ಅವರವರ ಜೀವನದ ಗೆಲವು-ಸೋಲುಗಳ

ಮೂಲಕ ದೇವರಲ್ಲಿಗೆ–ಸತ್ಯದೆಡೆಗೆ–ಹೋಗಬೇಕು. ಜೀವನವೇ ಅತ್ಯಂತ ಮಹತ್ತಾದ ದಿವ್ಯದರ್ಶನ–ದೈವಿಕವಾದ ಜ್ಞಾನ-ಪ್ರಕಾಶನ.

ತೀರ್ಥರಾಮರು ತಮ್ಮ ಅತ್ಯುನ್ನತ ಪಾರಮಾರ್ಥಿಕ ಧ್ಯೇಯಸಾಧನೆಗಾಗಿ ಪೂರ್ಣಸಿದ್ಧತೆಮಾಡಿಕೊಂಡು, ೧೯೦೦ರ ಜುಲೈ ತಿಂಗಳಲ್ಲಿ ತಮ್ಮ ಉದ್ಯೋಗವನ್ನು ತ್ಯಾಗಮಾಡಿ, ಹೆಂಡತಿಮಕ್ಕಳನ್ನೂ ಕರೆದುಕೊಂಡು ಕೆಲವು ಸಂಗಡಿಗರೊಡನೆ ಹಿಮಾಲಯದ ಅರಣ್ಯಕ್ಕೆ ಹೋದರು. ೧೯೦೧ ರಲ್ಲಿ ಗೋಸಾಯಿ ತೀರ್ಥರಾಮರು ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ಸ್ವಾಮಿ ರಾಮತೀರ್ಥರಾದರು. ಅವರು ಹಿಮಾಲಯದಲ್ಲಿ ಗಂಗೋತ್ರಿ, ಯಮುನೋತ್ರಿ, ಕೇದಾರನಾಥ, ಬದರೀನಾರಾಯಣ, ಮೊದಲಾದ ಅನೇಕ ಕ್ಷೇತ್ರಗಳನ್ನು ಸಂದರ್ಶನಮಾಡಿ, ಹಿಮಾಚಲದಲ್ಲಿ ದೀರ್ಘಕಾಲ ತಪಸ್ಸು ಮಾಡಿದರು.

ಎರಡು ವರ್ಷಗಳು ಹಿಮಾಲಯದ ತಪಸ್ಸಿನಲ್ಲಿ ಸ್ವಾಮಿ ರಾಮರು ಅನುಭವಿಸಿದ ಆನಂದವನ್ನು ಬೀರುವದಕ್ಕಾಗಿ ಆಧ್ಯಾತ್ಮಪ್ರಚಾರಮಾಡುವ ಉತ್ಸಾಹದಿಂದ ಉರಿಯುತ್ತಾ ಕೆಳಗಿಳಿದು ಮೈದಾನಕ್ಕೆ ಬಂದರು. ೨೮–೮–೧೯೦೨ ರಲ್ಲಿ ಅವರು ತಮ್ಮ ಶಿಷ್ಯರಾದ ಸ್ವಾಮಿ ನಾರಾಯಣರೊಡನೆ ಕಲ್ಕತ್ತಾದಿಂದ ಹಡಗಿನಲ್ಲಿ ಜಪಾನಿಗೆ ಹೋದರು. ಅಲ್ಲಿ ಅವರು ಹದಿನೈದು ದಿನಗಳು ಮಾತ್ರ ಇದ್ದರು. ಜಪಾನ್ ಜನರ ಸಭೆಯಲ್ಲಿ ಮಾತನಾಡುವದಕ್ಕಾಗಿ ಅವರು ಎರಡುಸಲ ಆಹ್ವಾನಿತರಾದರು. ಟೋಕಿಯೋದ ಒಂದು ಕ್ರೈಸ್ತ ವೃತ್ತಪತ್ರಿಕೆಯು ಅವರನ್ನು "ಉತ್ಸಾಹಶಾಲಿಗಳಾದ ವೇದಾಂತ ತತ್ತ್ವಪ್ರಸಾರಕರು" ಎಂದು ಉನ್ನತಭಾವದಲ್ಲಿ ಅತಿಶಯ ಮೆಚ್ಚುಗೆಯಿಂದ ಪ್ರಚುರ ಪಡಿಸಿತು.

ಸ್ವಾಮಿ ರಾಮರು ಜಪಾನಿನಲ್ಲಿ ಅನೇಕ ಉಪನ್ಯಾಸಗಳನ್ನು ಮಾಡಿ ಅಮೆರಿಕಾಕ್ಕೆ ಹೋದರು. ಅಲ್ಲಿ ಅವರು ಒಂದೂವರೆ ವರ್ಷಗಳಿದ್ದು ವೇದಾಂತದ ಮೇಲೂ ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳ ಮೇಲೂ ಹಲವು ಉಪನ್ಯಾಸಗಳನ್ನು ಮಾಡಿದರು. ಅವರು ಅಮೆರಿಕನ್‌ರಿಗೆ ಅತ್ಯಂತ ಪ್ರಿಯರಾದರು. ಅಲ್ಲಿಯೂ ಅವರು ಬಹಳಕಾಲ ಏಕಾಂತದಲ್ಲಿಯೇ ಇರುತ್ತಿದ್ದರು. ಅಲ್ಲಿ ಅವರು ಸರಳವಾದ ಜೀವನ ವನ್ನು ನಡೆಸುತ್ತಿದ್ದರು; ಅಡವಿಯಿಂದ ತಮ್ಮ ಕಟ್ಟಿಗೆಯನ್ನು ತಾವೇ ತಲೆಯ ಮೇಲೆ ಹೊತ್ತು ತರುತ್ತಿದ್ದರು. ಅವರ ಕೃತಿಯ ಮತ್ತು ಜೀವನದ ಮೇಲೆ ಶ್ಲಾಘನೆಯ ಲೇಖನಗಳು ಪ್ರಕಟವಾಗಿದ್ದ ಅನೇಕ ವೃತ್ತ ಪತ್ರಿಕೆಗಳ ಭಾಗಗಳನ್ನು ಸ್ಯಾಕ್ರಮೆಂಟೋ ನದಿಯಲ್ಲಿ ತೇಲಿಬಿಟ್ಟ ಅವರ ನಿರ್ಲಕ್ಷ್ಯತೆಗಾಗಿ ಕ್ಯಾಲಿಫೋರ್ನಿಯಾದ ಜನರು ಬೆರ ಗಾದರು. ಅವರು ಅಮೆರಿಕನ್‌ರ ಮೇಲೆ ಶಾಶ್ವತವಾದ ಪರಿಣಾಮವನ್ನುಂಟು ಮಾಡಿದರು. ಅನೇಕ ಅಮೆರಿಕನ್‌ರು ಅವರನ್ನು ಜೀವಂತ ಕ್ರಿಸ್ತನೆಂದು ತಿಳಿದಿದ್ದರು. ಅವರನ್ನು ಅನೇಕ ಸ್ತ್ರೀಪುರುಷರೂ ಮತ್ತು ಆಗಿನ ಅಮೆರಿಕನ್ ಪ್ರೆಸಿಡೆಂಟ್ ಸಹ ದರ್ಶನ ಮಾಡಿದರು.

ಇಂಡಿಯಾಕ್ಕೆ ಹಿಂದಿರುಗುವಾಗ ಅವರು ಈಜಿಪ್ಟಿಗೆ ಹೋಗಿ ಅಲ್ಲಿ ಒಂದು ಅತ್ಯಂತ ದೊಡ್ಡದಾದ ಮಸೀದಿಯಲ್ಲಿ ಮಹಮ್ಮದೀಯ ಸಭಿಕರ ಮುಂದೆ ಪರ್ಷಿಯನ್ ಭಾಷೆಯಲ್ಲಿ ಉಪನ್ಯಾಸ ಮಾಡಿದರು. ಪರದೇಶಗಳಲ್ಲಿ ಎರಡೂವರೆ ವರ್ಷಗಳು ಪ್ರವಾಸಮಾಡಿ ಅವರು ೧೯೦೪ ರಲ್ಲಿ ಇಂಡಿಯಾಕ್ಕೆ ಹಿಂದಿರುಗಿದರು.

ಇಂಡಿಯಾದಲ್ಲಿಯೂ ಅನೇಕ ಸ್ಥಳಗಳಲ್ಲಿ ಅವರು ಸಂಚಾರಮಾಡಿ ವ್ಯವಹಾರ ಯೋಗ್ಯ (Practical) ವೇದಾಂತವನ್ನು ಪ್ರಸಾರ ಮಾಡಿದರು. ೧೯೦೫ ರಲ್ಲಿ ಅವರು ಹೃಷಿಕೇಶದಲ್ಲಿ ಕೇವಲ ಏಕಾಂತವನ್ನು ಸೇರಿದರು. ೧೯೦೬ ರಲ್ಲಿ ಟೆಹರಿಯಿಂದ ೬೦ ಮೈಲಿಗಳ ದೂರದಲ್ಲಿ ೧೨,೯೯೦ ಅಡಿಗಳ ಎತ್ತರದಲ್ಲಿ ವಸಿಷ್ಠಾಶ್ರಮದಲ್ಲಿ ವಾಸಮಾಡಲು ಪ್ರಾರಂಭಿಸಿದರು.

ಅವರು ಒಮ್ಮೆ ಹರಿದ್ವಾರದಲ್ಲಿ ಸುಮಾರು ಒಂದು ತಿಂಗಳು ಅಸ್ವಸ್ಥರಾಗಿ ಮಲಗಿದ್ದಾಗ ಚಿರಸ್ಮರಣೀಯವಾದ ಒಂದು ಸ್ವಾರಸ್ಯವಾದ ಘಟನೆ ನಡೆಯಿತು. ಒಂದು ದಿನ, ಅನಿರೀಕ್ಷಿತವಾಗಿ, ಅವರ ಪೂರ್ವಾಶ್ರಮದ ಪತ್ನಿಯು ತಮ್ಮ ಆರು ವರ್ಷಕ್ಕೂ ಕಡಿಮೆ ವಯಸ್ಸಿನ ಚಿಕ್ಕ ಮಗನನ್ನೂ ಅವರ (ಸ್ವಾಮಿಗಳ) ಮಲ ತಾಯಿಯನ್ನೂ ಕರೆದುಕೊಂಡು, ಸ್ವಾಮಿಗಳು ಅಮೆರಿಕಾದಿಂದ ಹಿಂದಿರುಗಿದ ತರುಣದಲ್ಲಿ, ಅವರ ದರ್ಶನಕ್ಕಾಗಿ, ಹೆಚ್ಚಿನ ಖರ್ಚಿನಿಂದ, ದೂರ ಪಂಜಾಬಿನಿಂದ ಬಂದರು. ಮೊದಲೇ ಬಹಳ ಬಡ ಕುಟುಂಬ. ಒಂಟಿಯಾಗಿ ಸಂಪಾದಿಸುತ್ತಿದ್ದ ಸಮರ್ಥರಾದ ಪ್ರೊಫೆಸರ್ ತೀರ್ಥರಾಮರು ತಮ್ಮೊಳಗೆ ತುಂಬಿ ತುಳುಕುತ್ತಿದ್ದ ಉಜ್ಜ್ವಲವಾದ ಜ್ಞಾನವೈರಾಗ್ಯಗಳನ್ನು ತಡೆದುಕೊಳ್ಳಲಾರದೆ ಹೆಂಡತಿ–ಮಕ್ಕಳನ್ನು ತ್ಯಾಗಮಾಡಿ ಸಂನ್ಯಾಸ ತೆಗೆದುಕೊಂಡು ಸ್ವಾಮಿರಾಮತೀರ್ಥರಾಗಿದ್ದರು. ಆಗ ಇಡೀ ಕುಟುಂಬವನ್ನು ದೇವರ ಕರುಣೆಗೆ ಒಪ್ಪಿಸಿದಂತಾಯಿತು. ಯಾವ ಬಗೆಯ ಆಶ್ರಯವೂ ಆಸ್ತಿಯೂ ದುಡಿಮೆಯೂ ಇಲ್ಲದೆ ಅವರು ಭಕ್ತರ ಸಹಾಯದಿಂದ ಬದುಕಬೇಕಾಗಿತ್ತು. ಅಂಥಾ ಪರಿಸ್ಥಿತಿಯಲ್ಲಿ ಅವರು ಪ್ರೀತಿಯಿಂದ ಸ್ವಾಮಿಗಳ ಸಂದರ್ಶನಕ್ಕಾಗಿ ಅಷ್ಟು ದೂರ ಎಷ್ಟೋ ಖರ್ಚುಮಾಡಿಕೊಂಡು ಬರುವದೆಂದರೆ ಮಹಾ ಸಾಹಸವೇ ಆಗಿತ್ತು. ಸ್ವಾಮಿಗಳನ್ನು ನೋಡದೆ ಬಹಳ ಕಾಲವಾಗಿದ್ದುದರಿಂದ, ಅವರ ವಿಯೋಗದಿಂದ ಉಂಟಾದ ತಮ್ಮ ಕೇವಲ ಮಾನಸಿಕ ಯಾತನೆಯನ್ನು ಕಳೆದುಕೊಳ್ಳುವುದಕ್ಕಾಗಿ ಅವರ ಕುಟುಂಬದವರು ಪ್ರಾಯಶಃ ಸಾಲಮಾಡಿಕೊಂಡೋ ಪ್ರಯಾಣದ ವೆಚ್ಚಕ್ಕಾಗಿ ಕಷ್ಟದಿಂದ ಬೇಡಿಕೊಂಡೋ ಹರಿದ್ವಾರಕ್ಕೆ ಬಂದಿದ್ದರು. ಸ್ವಾಮಿಗಳ ಸಮೀಪದಲ್ಲಿ ಶುಶ್ರೂಷೆ ಮಾಡುತ್ತಿದ್ದ ಪೂರಣಸಿಂಗರು ಆ ದಿನ ದರ್ಶನಾರ್ಥಿಗಳು ಬಂದಿರುವದನ್ನು ತಿಳಿದು ಸ್ವಾಮಿಗಳಲ್ಲಿ ಹೋಗಿ ಅರಿಕೆಮಾಡಿದರು. ಅವರಿಗೆ ಬೇನೆಯು ಗುಣವಾಗಿದ್ದರೂ ಬಹಳ ಬಳಲಿಕೆಯೂ ನಿಶ್ಶಕ್ತಿಯೂ ಇದ್ದುದರಿಂದ ಅವರು ಹಾಸಿಗೆಯಲ್ಲಿಯೇ ಮಲಗಿದ್ದರು; ಅವರ ಕಿನ್ನಗಳು

ಹಿಂದಿನಂತೆ ಕಳೆಗಟ್ಟುತ್ತಿದ್ದವು ; ಅವರ ಆಳವಾದ ಕಪ್ಪು ಕಣ್ಣುಗಳು ಹೊಳೆಯಲು ತೊಡಗಿದ್ದವು. ಅವರು ಕನ್ನಡಕವನ್ನು ತರಿಸಿ, ತಮ್ಮ ಕಾಷಾಯ ವಸ್ತ್ರದಿಂದ ಆ ಗಾಜುಗಳನ್ನು ಚೆನ್ನಾಗಿ ಒರೆಸಿ ತಿಕ್ಕಿ ಹಾಕಿಕೊಂಡರು. ಅವರ ಹಿಂದಿನ ಹೆಂಡತಿಯೂ ತಾಯಿಯೂ ಚಿಕ್ಕ ಮಗುವೂ ಬಂದಿರುವದನ್ನು ಹೇಳಿದ್ದುದರಿಂದ, ಏನು ಉತ್ತರ ಹೇಳಬೇಕೆಂದು ಅವರು ಅಷ್ಟು ಹೊತ್ತೂ ಯೋಚಿಸುತ್ತಿದ್ದಂತೆ ತೋರಿತು.

ಆಗ ಅವರು "ಪೂರಣಜೀ ! ನಿನ್ನಲ್ಲಿ ಏನಾದರೂ ಹಣವಿದೆಯೆ ?" ಎಂದು ಕೇಳಿದರು. ಅದಕ್ಕೆ ಪೂರಣಜಿ "ಹೌದು ಸ್ವಾಮಿ ! ಎಷ್ಟು ಬೇಕೆಂದು ಹೇಳಿದರೆ ಕೊಡಬಹುದು." ಎಂದರು.

ಸ್ವಾಮಿಜೀ: "ಪೂರಣಜೀ ! ಅವರನ್ನು ರೈಲ್ವೇಸ್ಟೇಷನ್ನಿಗೆ ಕರೆದುಕೊಂಡು ಹೋಗಿ. ಪಂಜಾಬಿಗೆ ಹಿಂದಿರುಗುವದಕ್ಕಾಗಿ ಟಿಕೆಟ್ ಕೊಡಿಸು. ನನ್ನ ಗಂಗೆಯಲ್ಲಿ ಅವರು ಸ್ನಾನಮಾಡಲಿ ; ಹಿಂದಿರುಗಿ ಹೋಗಲಿ, ಅವರು ನನ್ನನ್ನು ನೋಡಲು ಸಾಧ್ಯವಿಲ್ಲ" ಎಂದು ಕಠಿಣವಾಗಿ ದಯಾದಾಕ್ಷಿಣ್ಯಗಳಿಲ್ಲದೆ ಹೇಳಿದರು. ಪೂರಣ ಸಿಂಗರು ಆ ಮುಂದಿನ ಪ್ರಸಂಗವನ್ನು ಹೀಗೆ ಹೇಳಿದ್ದಾರೆ. "ನಾನು ಆಗ ಒಂದು ತಿಂಗಳಿಂದ, ಅವರಲ್ಲಿ ನನಗಿದ್ದ ಸಣ್ಣದೊಂದು ಮೂಕ ಪಶುಪ್ರೇಮದಿಂದ ಅವರ ಜೊತೆಗಿದ್ದೆ. ಆದರೆ ಹೃದಯಶೂನ್ಯವಾದ ಅವರ ಆ ಉತ್ತರವನ್ನು ಕೇಳಿ ದೊಡನೆಯೇ ನನ್ನ ಹೃದಯದಲ್ಲಿ ಬೆಂಕಿ ಹತ್ತಿಕೊಂಡಂತೆ ಆಗಿ ನನ್ನಲ್ಲಿದ್ದ ಎಲ್ಲಾ ಶಾಂತಿಯೂ ಒಮ್ಮೆಗೇ ಸ್ಫೋಟವಾದಂತೆ ಆಯಿತು. ನಾನು ಕೂಡಲೇ ಬೆಂಕಿ ಕಾರುವಂತೆ 'ನಮಸ್ತೇ ! ಸ್ವಾಮಿಜೀ ! ನಾನೂ ಹೊರಡುತ್ತೇನೆ ; ನಿಮ್ಮನ್ನು ನಾನು ಪುನಃ ಎಂದೆಂದೂ ನೋಡುವದಿಲ್ಲ. ಆಹಾ ! ನೀವು ! ಆ ಬಡ ಕುಟುಂಬಕ್ಕೆ ಪಾಪ ! ಮೂಲಾಧಾರವೂ ಮುಖ್ಯಾಶ್ರಯವೂ ಆಗಿರಬೇಕಾಗಿದ್ದ ನೀವು, ನಿರ್ದಯ ವಾಗಿ ಕಿತ್ತು ಹರಿದುಕೊಂಡು ಬಂದಿರಿ. ಪಾಪ ! ಅವರು ಅಷ್ಟು ದೂರದಿಂದ ತಮ್ಮ ಪುಡಿಕಾಸನ್ನು ತಾವು ಖರ್ಚುಮಾಡಿಕೊಂಡು ಬಂದಿದ್ದಾರೆ. ಅಂಥವರು ನಿಮ್ಮ ಲಕ್ಷ್ಯದಲ್ಲಿಯೇ ಇಲ್ಲ. ನೀವು ಯಾವೂರು ದಾಸರೆಂದೂ ನೀವವರನ್ನು ಕೇಳುವಂತಿಲ್ಲ. ಆದರೆ ನಾವು, ಮೂಢ ಬಾಲಕರು, ಏನೂ ಅರಿಯದೆ, ನಿಮ್ಮ ಸುತ್ತಲೂ ಆಟವಾಡಿಕೊಂಡು, ನೀವು ಮಹಾತ್ಮರೆಂದೂ ವಿಶ್ವಪ್ರೇಮಿಗಳೆಂದೂ ವಿಶ್ವಕುಟುಂಬಿಗಳೆಂದೂ ನೀವೇ ದೇವರೆಂದೂ ಹೊಗಳಿ ಹೊಗಳಿ, ನಿಮ್ಮನ್ನು ವಿನೋದಪಡಿಸುತ್ತಿರುವ ಅಲ್ಪರಾದ ನಾವು ನಿಮಗೆ ಹೆಚ್ಚಿನವರು. ನೀವು ನಮಗೆ ಆಶ್ರಯವನ್ನು ಕೊಡಬಹುದು ; ಆದರೆ ತಮ್ಮ ಪೂಜ್ಯ ಸ್ವಾಮಿಗಳ ಕೇವಲ ದರ್ಶನಾರ್ಥಿಗಳಾಗಿ ಬಂದಿರುವ ಆ ಪ್ರೇಮಳ ಯಾತ್ರಿಕರನ್ನು ನೀವು ಕಡೆಗಣ್ಣಿನಿಂದಲೂ ನೋಡಬಾರದು ; ಅವರ ಯೋಗಕ್ಷೇಮವನ್ನಂತು ವಿಚಾರಿಸಲೇ ಬಾರದು. ನಿಮ್ಮ ವಿಶ್ವಪ್ರೇಮವೂ ವ್ಯವಹಾರ ವೇದಾಂತವೂ, (Practical Vedanta) ಇಷ್ಟು ಅಗಾಧವಾದುದು ; ಅವರೇನೂ ನಿಮ್ಮ ಮೇಲೆ ಪುನಃ ತಮ್ಮ ಹಿಂದಿನ ಹಕ್ಕನ್ನು

ಸ್ಥಾಪಿಸುವುದಕ್ಕೆ ಬಂದಿಲ್ಲ. ಅಂಥವರಿಗೆ ನೀವು ದರ್ಶನವನ್ನು ಕೂಡ ಕೊಡುವದಿಲ್ಲವೆಂದರೆ ಅಷ್ಟು ಕ್ರೂರವೂ ಘೋರವೂ ಬೇರೆ ಯಾವುದೂ ಇರಲಾರದು. ನಿಮ್ಮ ದರ್ಶನ ಮಾತ್ರವೋ, ನಿಮ್ಮ ಒಂದು ಮುಗುಳು ನಗೆಯೋ, ನಿಮ್ಮ ಕೃಪಾದೃಷ್ಟಿಯೋ ಇಷ್ಟೇ ಅವರಿಗೆ ಬೇಕಾಗಿರುವಾಗ, ಸಾಕಾಗಿರುವಾಗ, ಅಷ್ಟು ಮಾತ್ರಕ್ಕೂ ಅವಕಾಶ ಕೊಡದೆ ಹೃದಯಶೂನ್ಯರಂತೆ ಕಠೋರವಾಗಿ ವರ್ತಿಸುವ, ಯಾವ ವ್ಯಕ್ತಿ ಸಂಬಂಧವನ್ನೂ ಗೌರವಿಸದಿರುವ–ಇಂಥಾ–ಮಹಾತ್ಮರ ಜೊತೆಯಲ್ಲಿರುವದು ನನ್ನಿಂದ ಸಾಧ್ಯವಿಲ್ಲ. ನನ್ನ ಪ್ರೇಮದ ಸ್ವಾಮಿಜೀ ! ಇದರಲ್ಲಿ ತಪ್ಪಿದ್ದರೆ ಕ್ಷಮಿಸಬೇಕು.' ಎಂದು ಆ ಕೋಣೆಯಿಂದ ಬಿರ್ರನೆ ಹೊರಟು ಹೊರಗೆ ಹೋಗಲು ಬಾಗಿಲನ್ನು ತೆರೆಯುವದರಲ್ಲಿದ್ದೆ ! ಅಷ್ಟರಲ್ಲಿ ಆಶ್ಚರ್ಯವೆನಿಸುವಂತೆ ಸ್ವಾಮಿಗಳು, ಗೊಳ್ಳನೆ ನಕ್ಕು ನನ್ನನ್ನು ವಾಪಸು ಕರೆದು, 'ಒಳ್ಳೆಯದು ! ಪೂರಣಜಿ ! ಅವರನ್ನು ಒಳಗೆ ಕರೆದುಕೊಂಡು ಬಾ' ಎಂದು ಹೇಳಿದರು.

"ಅನಿರೀಕ್ಷಿತವಾದ ಅವರ ಆ ಉಲ್ಲಾಸಪೂರಿತವಾದ ಔದಾರ್ಯದಿಂದ ನಿಷ್ಕಾರಣವಾದ ನನ್ನ ಕೋಪಕ್ಕಾಗಿ ನನಗೇ ನಾಚಿಕೆಯಾಯಿತು. ಇಷ್ಟರೊಳಗೆ ಸ್ವಾಮಿಗಳ ಆ ಸಂಬಂಧಿಗಳೂ ಒಳಗೆ ಬಂದರು. ಸ್ವಾಮಿಗಳು ಪುನಃ ಸುಮ್ಮನೆ ಹೊಟ್ಟೆ ಬಿರಿಯುವಷ್ಟು ನಕ್ಕು, ತಮ್ಮ ಸ್ವಾಭಾವಿಕವಾದ ಮಂದಹಾಸದಿಂದ ಅವರನ್ನು ಬರಮಾಡಿಕೊಂಡರು; ಆದರೆ ಅವರಲ್ಲಿ ಸಂನ್ಯಾಸಿಯ ಗಂಭೀರಭಾವವಿತ್ತು. ಅವರ ಆ ಮುದ್ದಾದ ಮಗುವು 'ಸ್ವಾಮಿಜೀ ! ನನ್ನ ಪಾಠಗಳನ್ನೆಲ್ಲಾ ನಿಮಗೆ ಒಪ್ಪಿಸಲೆ ?' ಎಂದು ಕೇಳಿತು. ಅದಕ್ಕೆ ಸ್ವಾಮಿಗಳು "ಓಹೋ ! ಆಗಬಹುದು. ಬಹಳ ಸಂತೋಷ. ನೀನಾಗಲೇ ಓದಲು ಕಲಿತಿದ್ದೀಯ ಮಗು ? ಎಷ್ಟು ದಿವ್ಯವಾದುದು, ಸೊಗಸಾದುದು !" ಎಂದು ಹೇಳಿ ಆ ಮಗುವಿನ ಮುದ್ದಾದ ಪಠನವನ್ನು ಕೇಳಿ ಸಂತೋಷಪಟ್ಟರು. 'ಪೂರಣಜೀ ! ಅವನಿಗೆ ಆ ದ್ರಾಕ್ಷಿಯ ಗೊಂಚಲನ್ನು ಕೊಡು,' ಎಂದರು. ಆಗ ನಾನು ಆ ಮಗುವಿನ ಚಾಚಿದ ಕೈಗಳಲ್ಲಿ ಕೊಟ್ಟೆ. ಅವನಿಗೆ ದ್ರಾಕ್ಷಿಯಿಂದೇನೂ ಅಷ್ಟು ತೃಪ್ತಿಯಾದಂತೆ ಕಾಣಲಿಲ್ಲ; ಅವನಿಗೆ ಇನ್ನೆಂದೂ ಸಿಕ್ಕಲಾರದ (ಸ್ವಾಮಿ) ವಸ್ತು ಬೇಕಾಗಿದ್ದಂತೆ ತೋರಿತು. ಸ್ವಾಮಿಗಳ ಪತ್ನಿಯು ಅವರನ್ನೇ ನೋಡುತ್ತಾ ಮೌನವಾಗಿ ನಿಂತಿದ್ದಳು. ಅವರಿಬ್ಬರ ಮಧ್ಯದಲ್ಲಿ ಒಂದೂ ಮಾತು ನಡೆಯಲಿಲ್ಲ. ಆದರೆ ಸ್ವಾಮಿಗಳು ಗಂಟೆಹೊಡೆದಂತೆ ನಗುತ್ತಾ ತಮ್ಮ ಮಲತಾಯಿಯ ಜೊತೆಯಲ್ಲಿ ಸ್ವಲ್ಪ ಹೊತ್ತು ಮಾತನಾಡುತ್ತಿದ್ದರು. ಅವರು ತಮ್ಮ ಕುಟುಂಬದ ಪ್ರತಿಯೊಬ್ಬರ ಯೋಗಕ್ಷೇಮವನ್ನೂ ಪ್ರೇಮದಿಂದ ವಿಚಾರಿಸಿದರು; ಹೀಗೆ ಈ ಪ್ರಸಂಗವನ್ನು ಮುಗಿಸಿ ಅವರನ್ನು ಕಳಿಸಿಕೊಟ್ಟರು. ಅಲ್ಪ ಚೇತಸರು ಅಥವಾ ಸಾಮಾನ್ಯರು ಮತ್ತು ಮಹಾತ್ಮರು ಒಂದೇ ಗಾಳಿಯನ್ನು ಉಸಿರಾಡುತ್ತಾ ಒಂದೇ ನೆಲ, ಜಲ, ಬಿಸಿಲಿನಿಂದ ಜೀವಿಸಿದ್ದರೂ ಅವರ ಸಂಬಂಧ–

ಸಹವಾಸಗಳು ಸ್ನೇಹ–ಸೌಹಾರ್ದಗಳಿಂದ ಬೆಳೆದು ಬೆಳಗದೆ, ಒಡೆದು ದೂರವಾಗಿ ದುಃಖದಲ್ಲಿ ಕೊನೆಗೊಳ್ಳಬಹುದು. ಆ ಯಾತ್ರಿಕರು, ಅಂತು, ಹೊರಟು ಹೋದರು.

ಪೂರಾ ಒಂದು ವರ್ಷದ ಮೇಲೆ ಪೂರಣಜೀಯು ಸ್ವಾಮಿಗಳೊಡನೆ ಏಕಾಂತದಲ್ಲಿ ಹಿಮಾಲಯದ ವ್ಯಾಸಪೀಠದಲ್ಲಿ ಕುಳಿತಿರುವಾಗ, ಆ ಹಿಂದಿನ ಪ್ರಸಂಗವನ್ನು ನೆನೆಸಿಕೊಂಡು ಹೇಳಿದ್ದೇನೆಂದರೆ,

“ ಪೂರಣಜೀ ! ಒಂದು ವರ್ಷದ ಹಿಂದೆ, ಹರಿದ್ವಾರದಲ್ಲಿ ರಾಮನ ಕುಟುಂಬದವರನ್ನು ಕಳಿಸಿಕೊಡಬೇಕೆಂದು ರಾಮನು ನಿನಗೆ ಹೇಳಿದಾಗ, ನೀನೆಷ್ಟು ಕೋಪಾವಿಷ್ಟನಾದೆ ! ಆದರೆ ರಾಮನಿಗೂ ಹೃದಯವಿದೆ, ದಯವಿದೆ, ಪ್ರಿಯವಿದೆ. ಆದರೆ, ಆಗ ಅವನು ಧರಿಸಿರುವ ಸಂನ್ಯಾಸ ವೇಷದ ನಿಯಮವನ್ನು ಪಾಲಿಸಬೇಕೆಂದು ಬಯಸಿದನು. ಅವರನ್ನು ನೋಡಲು ನಿರಾಕರಿಸಿದ್ದು ಕೇವಲ ತೋರಿಕೆಗೆ ಮಾತ್ರ ; ಕೇವಲ ಔಪಚಾರಿಕ. ದೇವನ ವಿಷಯದಲ್ಲಿಯಾಗಲೀ ಮಾನವನ ವಿಷಯದಲ್ಲಿಯಾಗಲೀ ರಾಗಭಾವಗಳೂ ರಸಭಾವಗಳೂ ಭಾವಾವೇಗಗಳೂ (Emotion) ಹೃದಯವನ್ನು ಇನ್ನೂ ಕಲಕುತ್ತಿರುವವರೆಗೂ ಮನುಷ್ಯನು ತನ್ನ ವೈಯಕ್ತಿಕ ಸಂಬಂಧಗಳನ್ನು ಹೇಗೆ ಮರೆತಿರಲು ಸಾಧ್ಯ ? ಭಾವಶೂನ್ಯವಾದ ಪಾಷಾಣಗಳಂತೆ ಕವಿಗಳೂ ಕಲ್ಲಾಗಿ ನಿಸ್ಸತ್ತ್ವವಾಗುವದಕ್ಕೆ ಸಾಧ್ಯವಿಲ್ಲ. ಮನೋವೇದನೆಯೇ ಇಲ್ಲದಂತೆ ಭಾವನಾಶೂನ್ಯವಾಗುವದು ಆಧ್ಯಾತ್ಮಿಕ ವಿಕಸನವಲ್ಲ. ಅವರು ಕೀಟ್ಸ್ (Keats) ಕವಿಯನ್ನು ಕಠಿಣ ಶಬ್ದಗಳಿಂದಲೇ ಕೊಂದರು. ಆಧ್ಯಾತ್ಮಿಕ ಅನುಭವವು ಹೆಚ್ಚು ಬೆಳೆದಷ್ಟೂ ಭಾವನಾ ವಿಶೇಷವೂ ಬೆಳೆಯುತ್ತದೆ.

“ ಪೂರಣಜೀ ! ಆ ದಿನ ಬಹ್ಮಾನಂದನ* ತಾಯಿಯ ಮುಖವು ಎಂಥಾ ದೈವೀಕಳೆಯಿಂದ ಬೆಳಗುತ್ತಿತ್ತು ! ಆಕೆಯು ಅಂದು ಪೂಜನೀಯ ರೂಪವನ್ನು ಪಡೆದಂತೆ ಕಂಡಳು ; ಅಲ್ಲವೆ ?

“ ನೀನು ಮದುವೆಯಾಗಿರುವುದು ರಾಮನಿಗೆ ಸಂತೋಷ. ಎಷ್ಟು ಹೇಳಿದರೂ ವಿಚಾರಮಾಡಿ ನೋಡಿದರೆ, ವಿವಾಹಿತ ಜೀವನವೇ ಹೆಚ್ಚು ಸ್ಥಿರತೆಯುಳ್ಳದು. ನೀವು ದಂಪತಿಗಳಿಬ್ಬರೂ ಇಲ್ಲಿಗೆ ಬಂದು ಈ ಹಿಮಾಲಯದ ಶಿಖರಗಳ ಮೇಲೆ ವಾಸಮಾಡಬಹುದು. ”

ಅವರು ಅತಿನಮ್ರವೂ ಪರಿಶುದ್ಧವೂ ಆದ ಬಡ ವಿದ್ಯಾರ್ಥಿದಶೆಯಿಂದ ವಿಶ್ವಪ್ರಜ್ಞೆಯುಳ್ಳ ಉತ್ಸಾಹ ಭರಿತ ಪೂರ್ಣಮಾನವರಾಗಿ ಬೆಳೆದಿದ್ದರು. ಅವರಲ್ಲಿ ಗಂಭೀರವಾದ ಏಕಾಗ್ರತೆಯಿದ್ದರೂ ವಿಲಕ್ಷಣವಾಗಿ ಚಿಮ್ಮುತ್ತಿರುವ ಚೈತನ್ಯದಿಂದ ಯಾವಾಗಲೂ ಉಲ್ಲಾಸ ಉಕ್ಕುತ್ತಿತ್ತು. ಅವರಲ್ಲಿ ಅಕ್ಷಯವಾದ ಆನಂದದ ಬುಗ್ಗೆ ಹತ್ತಿಕ್ಕಲಾರದ ನಗುವಿನ ರೂಪದಲ್ಲಿ ಸ್ಫೋಟವಾಗುತ್ತಿತ್ತು. ಅವರ

*ಇದು ಸ್ವಾಮಿಗಳ ಕೊನೆಯ ಮಗನ ಹೆಸರು.

ದೃಷ್ಟಿಯಲ್ಲಿ ಔನ್ನತ್ಯವೂ ವರ್ತನೆಯಲ್ಲಿ ಔದಾರ್ಯವೂ ಗಾಂಭೀರ್ಯವೂ ತುಂಬಿದ್ದವು. ಹಗುರವಾದ ಅವರ ವೇಗದ ನಡಿಗೆಯಲ್ಲಿ ಜಿಗಿದಾಡುವ ಜಿಂಕೆಯ ಓಟವಿದ್ದಿತು. ಅವರು ದಿವ್ಯವಾದ ಆನಂದ ಮಧುಪಾನದಿಂದ ಉನ್ಮತ್ತರಾಗಿ ಹುಚ್ಚೆದ್ದು ಕುಣಿಯುವಾಗ, ದೈವೀ ತೇಜಸ್ಸಿನಿಂದ ಅವರ ಮುಖವು ಉದ್ದೀಪ್ತವಾಗಿಯೂ ನೇತ್ರಗಳು ನಿಮೀಲಿತವಾಗಿಯೂ ಆನಂದ ಬಾಷ್ಪಪರಿಪೂರಿತವಾಗಿಯೂ ಇರುತ್ತಿದ್ದವು. ಅವರು ರಾವೀ ನದಿಯ ತೀರದಲ್ಲಿ, ವಿಶ್ವವನ್ನೇ ಉತ್ಕಟಪ್ರೇಮದಿಂದ ಆಲಂಗಿಸುವಂತೆ, ತಮ್ಮ ಕೈಗಳನ್ನು ವಿಶಾಲವಾಗಿ ಬಿಚ್ಚಿ ಭಾವೋದ್ವೇಗದಿಂದ ಒಮ್ಮೊಮ್ಮೆ ಹುಚ್ಚರಂತೆ ಕೂಗಿಡುತ್ತಿದ್ದರು. ಅವರ ಸುತ್ತಲಿದ್ದ ವನವೃಕ್ಷಗಳೂ ಕಲ್ಲು ಬಂಡೆಗಳೂ ಬೆಟ್ಟ ಗುಡ್ಡಗಳೂ ಸಹ ಅವರಾ ದಿವ್ಯಾವೇಶದ ಸ್ಪಂದನಗಳಿಂದ ಪ್ರಭಾವಿತವಾಗಿ ಕಂಪಿಸುವಂತೆ ತೋರುತ್ತಿತ್ತು !

ಗಾಳಿಗಳು ಅವರೊಡನೆ ಪಿಸುಗುಟ್ಟಿ ಆಟವಾಡುವಂತೆಯೂ ಕಲ್ಲುಗಳು ಮಾತಾಡುವಂತೆಯೂ ತೋರುತ್ತಿತ್ತು. ಅವರು ಓರಿಯಂಟಲ್ ಕಾಲೇಜಿನಲ್ಲಿ ರೀಡರ್ (Reader of Mathematics) ಆಗಿದ್ದಾಗ, ದೇಹದ ಪ್ರಜ್ಞೆಯೇ ಇಲ್ಲದವರಂತೆ ಕಾಲೇಜಿಗೆ ಹೋಗಿ ಬರುತ್ತಿದ್ದರು. ಅವರು ಮಿಷನ್‌ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾಗ ಅವರ ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಕುರಿತು "ಓ, ಪ್ರಿಯತಮ ಕೃಷ್ಣ ! ನೀನು ಸರ್ವಜ್ಞನಲ್ಲವೆ ? ನಾನು ನಿನಗೆ ತಿಳಿಸುವುದೇನಿದೆ ?" ಎನ್ನುತ್ತಿದ್ದರು. ಅವರು ತಮ್ಮ ವಿದ್ಯಾರ್ಥಿಗಳಿಗೆ ಹೀಗೆ ಸ್ಫೂರ್ತಿಯನ್ನು ಕೊಟ್ಟು ಅವರಿಂದಲೇ ಸುಲಭವಾಗಿ ಲೆಕ್ಕಗಳನ್ನು ಮಾಡಿಸುತ್ತಿದ್ದರು.

ಒಂದು ದಿನ ತೀರ್ಥರಾಮರು ಲಾಹೋರ್ ಮಿಷನ್ ಕಾಲೇಜಿನ ಪ್ರಿನ್ಸಿಪಾಲ್‌ರಾದ ಡಾಕ್ಟರ್ ಈವಿಂಗ್ (Dr. Ewing) ಸಾಹೇಬರಲ್ಲಿ ಹೋಗಿ, ಅವರನ್ನು ಕುರಿತು, "ನೀವು ಕ್ರಿಸ್ತನನ್ನು ಪೂಜಿಸುತ್ತೀರಲ್ಲವೆ, ನೀವು ಅವನನ್ನು ಕಣ್ಣಿನಿಂದ ನೋಡಿದ್ದೀರಾ ? ಇಲ್ಲ ; ನೋಡಿರಲಿಕ್ಕಿಲ್ಲ. ನೋಡಿ, ನೋಡಿ, ಈವೀಂಗ್ ! ನಿಮ್ಮ ಎದುರಿಗೇ ಕ್ರಿಸ್ತನಿದ್ದಾನೆ ; ಇಗೋ, ಇಲ್ಲಿಯೇ ನಿಂತಿದ್ದಾನೆ, ನೋಡಿ !" ಎಂದು ಅವರು ಬೆರಗಾಗುವಂತೆ ಆವೇಶದಿಂದ ಉದ್ಗಾರಮಾಡಿದರು.

ಹೀಗೆ ಅವರ ದಿವ್ಯಭಾವೋನ್ಮಾದವು ಮಿತಿಮೀರಿ ಉಕ್ಕುವಂತಿತ್ತು. ಆಗಿನ ಕಾಲದಲ್ಲಿ ಅವರು ತಮ್ಮಲ್ಲಿ ತಾವು ನೆಲೆನಿಂತು, ಆತ್ಮಲೀನರೂ ಓಂಕಾರೋಚ್ಚಾರಣೆಯಿಂದ ಆನಂದ ತುಂದಿಲರೂ ಆಗಿ ಬೀದಿಯಲ್ಲಿ ನಡೆಯುತ್ತಿದ್ದರೆ ಅವರ ನಡಿಗೆಯಿಂದ ರಸ್ತೆಯೇ ರೋಮಾಂಚನಗೊಳ್ಳುವಂತಿತ್ತು. ಲಾಹೋರ್ ರಸ್ತೆಗಳಲ್ಲಿ ಅವರನ್ನು ಕಂಡವರೆಲ್ಲಾ ಅವರಲ್ಲಿ ವಿಲಕ್ಷಣವಾದ ಆಕರ್ಷಣೆಯನ್ನು ಅನುಭವಿಸಿ ಮುಗ್ಧರಾಗುತ್ತಿದ್ದರು. ಅವರು ಜನರಿಗೆ "ನೀವೇ ದೇವರೆಂದು ಹೇಳಿ ; ನಡುರಾತ್ರಿಯಲ್ಲಿ ಮನೆಯ ಮಹಡಿಯ ಮೇಲು ಮಾಳಿಗೆಯ ಮೇಲೆ ನಿಂತು, ಓ ಮನುಷ್ಯ

'ನಾನೇ ದೇವರು, ನಾನೇ ದೇವರು' ಎಂದು ಕೈಯೆತ್ತಿ ಸಾರು." ಎಂದು ಘಂಟಾಘೋಷವಾಗಿ ಒತ್ತಿ ಹೇಳುತ್ತಿದ್ದರು.

ಲಾಹೋರಿನ ಡಾಕ್ಟರ್, ಮಹಮದ್ ಇಕ್ಬಾಲರು (Dr. Mohammad Iqbal) ಒಮ್ಮೆ ತೀರ್ಥರಾಮರಲ್ಲಿಗೆ ಹೋಗಿದ್ದಾಗ ತಾವು ಕಂಡಿದ್ದನ್ನು ಹೇಳಿರುವದೇನೆಂದರೆ, "ಒಂದು ದಿನ ನಾನು ಅವರಲ್ಲಿಗೆ ಹೋಗಿದ್ದಾಗ ಅವರಿಗೆ ತೀವ್ರವಾದ ಹೊಟ್ಟೆ ಶೂಲಿಯಿಂದ ನುಲಿತವು ಬಂದಿತ್ತು. ನರಮಂಡಲದ ಎಳೆತ-ಸೆಳೆತಗಳಿಂದ ಮೂಳೆಯ ಹಂದರದಂತಿದ್ದ ಅವರ ಶರೀರವು ವೃತ್ತಾಕಾರವಾಗಿಯೂ ಅರ್ಧ ವೃತ್ತಾಕಾರವಾಗಿಯೂ ಬಿಲ್ಲಿನಂತೆ ಬಾಗಿ ಸೆಟೆದು ಪುಟಿಯುತ್ತಿತ್ತು. ಅವರು ಇದರಿಂದ ಲಿವಿ ಲಿವಿ ಒದ್ದಾಡಿ ಯಮ ಯಾತನೆಯನ್ನು ಅನುಭವಿಸುತ್ತಿದ್ದರೂ ಗಂಟೆ ಹೊಡೆದಂತೆ ನಗುತ್ತಾ "ಓ ಇಕ್ಬಾಲ್! ರಾಮನ ಕೋಟಿ ಕೋಟಿ ಶರೀರಗಳಲ್ಲಿ ಇದೊಂದು ಶರೀರಕ್ಕೆ ಈ ವ್ಯಥೆಯು ಬಂದ ಮಾತ್ರಕ್ಕೆ ನಷ್ಟವೇನು? ಕಷ್ಟವೇನು? ನಾನು ನಕ್ಕು ನಕ್ಕು ನಲಿಯುತ್ತೇನೆ. ನನ್ನ ಮಿಕ್ಕ ಎಷ್ಟೋ ಕೋಟಿ ಶರೀರಗಳು ಆರೋಗ್ಯದಿಂದ ಸುಖವಾಗಿವೆಯಲ್ಲ! ದೇಹದ ಪ್ರಾರಬ್ಧದ ಪಾಲಿಗೆ ಈ ಕ್ಲೇಶವೂ ನನ್ನ ಆತ್ಮದ ಪಾಲಿಗೆ ಸಂತೋಷವೂ ಬಂದೊದಗಿವೆ." ಎಂದು ಹೇಳಿದರು.

ಸ್ವಾಮಿಗಳು ಒಂದು ಮೃತಮನಸ್ಸೂ ಅಥವಾ ಕೇವಲ ಒಬ್ಬ ವ್ರತಧಾರಿಯೂ ಮಾತ್ರ ಆಗಿರಲಿಲ್ಲ. ಅವರು ಪ್ರಚಂಡ ಕ್ರಿಯಾಶೀಲ ವ್ಯಕ್ತಿಯೂ ಅದ್ಭುತ ಶಕ್ತಿಯೂ ಆಗಿದ್ದರು; ಅವರು ಸರ್ವಸಮರ್ಥ ಆತ್ಮವೇ ಆಗಿದ್ದರು.

ಅವರು ಅಮೆರಿಕಾದಲ್ಲಿಯೂ ಹಿಂದಿರುಗಿ ತಮ್ಮ ದೇಶಕ್ಕೆ ಬಂದ ಮೇಲೂ ಸಂನ್ಯಾಸ ಜೀವನದ ವಿವಿಕ್ತಶೀಲ ವೃತ್ತಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಬೇಸರಹೊಂದಿದವರಂತೆ ಕಾಣುತ್ತಿದ್ದರೆಂದು ಅವರ ಶಿಷ್ಯರಾದ ಪೂರಣಸಿಂಗರು ಹೇಳಿದ್ದಾರೆ. ಸ್ವಾಮಿ ರಾಮರು ಅಮೆರಿಕಾದಲ್ಲಿರುವಾಗ ಇಂಡಿಯಾ ದೇಶದ ಜಾತಿಪದ್ಧತಿಯ ವಿರುದ್ಧವಾಗಿಯೂ ವಿವಾಹಿತ ಜೀವನದ ಗುಣಗಳ ಶ್ಲಾಘನಾಪರವಾಗಿಯೂ ತಂಬಾ ಬೋಧಿಸುತಿದ್ದರೆಂದು ತಮ್ಮ ಜೊತೆಗೇ ಡೆಹರಾಡೂನಿನಲ್ಲಿ ಒಂದೇ ಮನೆಯಲ್ಲಿ ಆರು ತಿಂಗಳು ವಾಸಮಾಡಿಕೊಂಡಿದ್ದ ಅವರ ಅಮೇರಿಕೆಯ ಮಹಿಳಾ ಶಿಷ್ಯಳಾದ ಕಮಲಾನಂದಳು ಹೇಳುತ್ತಿದ್ದಳೆಂದು ಪೂರಣಜೀ ಹೇಳುತ್ತಾರೆ. ಆದರೆ ಇಂಡಿಯಾಕ್ಕೆ ಹಿಂದಿರುಗಿದ ಮೇಲೆ, ಅವರು ಆ ಹವ್ಯಾಸವನ್ನು ಬಿಟ್ಟು ಪುನಃ ಬ್ರಹ್ಮಚರ್ಯದ ವಿಷಯವನ್ನೇ ಹೇಳುತ್ತಿದ್ದರು. ಅವರು ಅಮೇರಿಕಾದ ವಿಮುಕ್ತ ಸ್ತ್ರೀಯರ (Freed women of America) ಸ್ನೇಹ ಪೂರ್ಣ ಸಹವಾಸದ ಸ್ವಚ್ಛಂದ ಸಂಪರ್ಕದಲ್ಲಿದ್ದಾಗ ವಿವಾಹ ಜೀವನದ ಪಾವಿತ್ರ್ಯತೆಯು ಮತ್ತು ಆದರ್ಶ ಮಹಿಳೆಯ ಧರ್ಮದ ಪಾಠವನ್ನು ಪಾಶ್ಚಾತ್ತ್ಯರಿಗೆ ಬೋಧಿಸುವದು ಅವಶ್ಯವೆಂದು ಅವರಿಗೆ ತೋರಿರಬಹುದು. ಮುಂದೆ ಅವರು ಮಹಿಳಾಮಾತೆಯರ ಮಧುರ ಸಂಪರ್ಕವನ್ನು ಕಳೆದು

ಕೊಳ್ಳದೆ ಇದ್ದಿದ್ದರೆ ಕವಿಹೃದಯದ ಅವರ ಜೀವನವು ಹೆಚ್ಚು ರಸಮಯ ವಾಗುತ್ತಿದ್ದಿತೆಂದು ಅವರ ಚರಿತ್ರಕಾರರಾದ ಪೂರಣಜೀ ಅಭಿಪ್ರಾಯಪಡುತ್ತಾರೆ.

"ಮಹಾರಾಜ ರಾಮನು ರಾಮ ಸಾರ್ವಭೌಮನ ಸೇವಕನಲ್ಲದೆ ಬೇರೆ ಸಾಮಾನ್ಯ ಮರ್ತ್ಯರ ಸೇವಕನಾಗಲಾರ" ನೆಂದು ತೀರ್ಥರಾಮರು ಉನ್ಮತ್ತಾವೇಶ ದಿಂದ, ಉಜ್ಜ್ವಲ ಭಾಷೆಯ ಉರಿಮಾತಿನಿಂದ ಬರೆದು ತಮ್ಮ ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತರಾದಾಗ, ಮೂಢ ಸೆನೇಟರ್‌ಗಳೂ ಅಜ್ಞ ಸಹೋದ್ಯೋಗಿಗಳೂ ತೀರ್ಥರಾಮರಿಗೆ ಹುಚ್ಚು ಹಿಡಿದಿದೆಯೆಂದು ಸಿಕ್ಕಾಪಟ್ಟೆ ಶೋಚನೀಯವಾಗಿ ಟೀಕೆ ಮಾಡುತ್ತಿದ್ದಾಗ, ಆ ಕಾಲದಲ್ಲಿ ಕೇವಲ ತರುಣ ಪ್ರಾಧ್ಯಾಪಕರಾಗಿದ್ದ ಡಾಕ್ಟರ್ ಇಕ್ಬಾಲರು, ತೀರ್ಥರಾಮರಿಗೆ ಹುಚ್ಚು ಹಿಡಿದಿದ್ದರೆ, ಚಿತ್ತ ಸ್ವಾಸ್ಥ್ಯವೂ ವಿವೇಕ ಪ್ರಜ್ಞೆಯೂ ಬೇರೆ ಯಾರಲ್ಲಿಯೂ ಸ್ವಲ್ಪವೂ ಉಳಿದಿರಲು ಸಾಧ್ಯವಿಲ್ಲವೆಂದೂ ಅವರದು ಸ್ಪಿನೋಜನ (Spinoza) ಹುಚ್ಚುತನವೆಂದೂ ಪ್ರವಾದಿಯ ಕವಿಭಾವವೆಂದೂ ವಾದಿಸಿ ಹುಚ್ಚು ಟೀಕಾಚಾರ್ಯರುಗಳ ಬಾಯಿ ಕಟ್ಟಿಸಿದ್ದರು.

ಅವರು ಜಪಾನಿಗೆ ಹೋಗಿದ್ದಾಗಲೂ ಅಮೆರಿಕಾದಲ್ಲಿದ್ದ ಕೆಲವು ಕಾಲವೂ ವಿಲಕ್ಷಣ ಆನಂದಾವೇಶದ ರಭಸದಿಂದ ಅವರ ವ್ಯಕ್ತಿತ್ವವು ಎಲ್ಲರ ಮೇಲೆ ತನ್ನದೇ ಆದ ಮಹತ್‌ಪ್ರಭಾವ ಬೀರುವದರಲ್ಲಿ ಅದ್ಭುತ ಸಾಂಕ್ರಾಮಿಕವಾಗಿತ್ತು. ಅವರಲ್ಲಿ ಉರಿಯುತ್ತಿದ್ದ ದಿವ್ಯಭಾವದಿಂದ ಎಷ್ಟೋಜನ ಉನ್ನತ ಭಾವೋದ್ದೀಪನವನ್ನು ಪಡೆದರು. ಆದರೆ ಅವರು ಅಮೆರಿಕಾದಿಂದ ಹಿಂದಿರುಗಿದ ಅನಂತರ ಅವರಲ್ಲಿದ್ದ ಧ್ಯಾನಯೋಗಿಯ ಸೂಕ್ಷ್ಮವಾದ ಉಲ್ಲಾಸಭರಿತ ದಿವ್ಯ ಸ್ಫೂರ್ತಿಯು ಹಾರಿ ಹೋಗಿ ಅದರ ಸ್ಥಳದಲ್ಲಿ ಉದಾತ್ತ ವಿಚಾರ–ಪ್ರತಿಭೆಗಳ ಉಜ್ಜ್ವಲ ಪ್ರಭೆಯು ವಿರಾಜಿ ಸುತ್ತಿತ್ತು, ಅವರು ತಮ್ಮ ಹಿಂದಿನ ಉನ್ನತ ತುರ್ಯಾನಂದದ ದೈವೀ ಸ್ಫೂರ್ತಿಯನ್ನು ಪುನಃ ಪಡೆಯಲು ಮತ್ತೆ ಮತ್ತೆ ಏಕಾಂತವಾಸಕ್ಕೆ ಹೋಗುತ್ತಿದ್ದರು. ಕ್ರಿಸ್ತನ ಜೀವನದಲ್ಲಿಯೂ ಅವನ ಕೊನೆಗಾಲದಲ್ಲಿ ಹೀಗೆಯೇ ಆಗಿತ್ತೆಂದು ಬೈಬಲ್‌ನ ವಿಮರ್ಶಾತ್ಮಕವಾದ ಅಧ್ಯಯನದಿಂದ ಅವರ ಪರಿಶೀಲನೆಗೆ ಬಂದಿತ್ತು.

"Who has touched me, my power is gone"

"ನನ್ನನ್ನು ಮುಟ್ಟಿದವರಾರು? ನನ್ನ ಶಕ್ತಿಯು ಹರಿದು ಹೋಯಿತು," ಎಂದು ಸಮರ್ಥ ಕ್ರಿಸ್ತನೂ ಲೋಕ ಸಂಸರ್ಗದಿಂದ ತಪಶ್ಶಕ್ತಿಯು ಕ್ಷೀಣ ವಾಗುವದನ್ನು ತನ್ನ ಸಹಜವಾದ ಉದ್ಗಾರದಿಂದ ವ್ಯಕ್ತಮಾಡಿದ್ದನು. ಇದು ಯಾರಿಗೂ ಬದಲಾಗದ ಕಠೋರ ಸತ್ಯ.

ಪರಮಾತ್ಮ ಪ್ರಜ್ಞೆಯ ದೈವಾವೇಶವು ಹೇಗೆ ಉತ್ಕರ್ಷಾಪಕರ್ಷಗಳಿಗೂ ಏರಿಳಿತಗಳಿಗೂ ಒಳಗಾಗಬಹುದು—ಎಂಬುದನ್ನು ರಾಮತೀರ್ಥರೇ ಅನೇಕ ಸಂದರ್ಭ

ಬಂದಾಗ ವಿವರಿಸುತ್ತಿದ್ದರು. ಅವರ ಪ್ರಸಿದ್ಧ ಉದಾಹರಣೆಯೇ ಕ್ರಿಸ್ತನದಾಗಿತ್ತು. ಆದರೆ, ಅವರಲ್ಲಿದ್ದ ತತ್ತ್ವಜ್ಞಾನವು ಅವರ ಧ್ಯಾನೋನ್ಮಾದವನ್ನು ನುಂಗಿತ್ತು. ಅವರ ಹಿಂದಿನ ಹುಚ್ಚು ಆವೇಶವನ್ನು ಮತ್ತೆ ಪಡೆದುಕೊಳ್ಳುವದಕ್ಕೆ ಅವರಿಗಿಂತಲೂ ಹೆಚ್ಚಿನ ಆನಂದಾವೇಶವುಳ್ಳವರ ಸಹವಾಸವು ಅವರಿಗೆ ದೊರಕಲಿಲ್ಲ; ಜೊತೆಗಿದ್ದ ಅವರ ಮುಗ್ಧ ಶಿಷ್ಯರಿಂದ ಅವರಿಗೆ ಆ ಸಹಾಯುವಾಗಲಿಲ್ಲ. ಅಜೀರ್ಣವ್ಯಾಧಿ ಮೊದಲಾದ ಅವರ ದೈಹಿಕ ಬಾಧೆಗಳೂ ಅವರ ಉತ್ಸಾಹದ ಕುಸಿತಕ್ಕೆ ಕಾರಣ ವಾಗಿದ್ದವು. ತಮ್ಮ ಮುಖ್ಯ ಶಿಷ್ಯರಾದ ಸ್ವಾಮಿ ನಾರಾಯಣರನ್ನು ತಮ್ಮಿಂದ 15 ಮೈಲಿಗಳ ದೂರದಲ್ಲಿ ವಾಸಮಾಡಬೇಕೆಂದೂ ತಾವು ಕರೆದಾಗ ಬರಬೇಕೆಂದೂ ಅವರು ಆಜ್ಞೆಮಾಡಿದ್ದರಿಂದ ಅವರ ಬಾಧೆಯನ್ನು ಪರಿಹರಿಸುವದಕ್ಕೆ ನಾರಾಯಣರು ಮಾಡಿದ ಪ್ರಯತ್ನವೂ ಫಲವಾಗಲಿಲ್ಲ. ಪ್ರಪಂಚದ ದುಃಖವನ್ನು ಕಳೆದು ಅದನ್ನು ಉದ್ಧಾರಮಾಡುವದಕ್ಕಾಗಿ, ಮಹಾತ್ಮರು ತಮ್ಮ ಉಕ್ಕೇರುತ್ತಿರುವ ಆನಂದವನ್ನೇ ನೀಡಿ ತಾವು ನಿರ್ಗುಣ–ನೀರವ–ನಿಸ್ತರಂಗ ಶಾಂತಾತ್ಮರಾಗುತ್ತಾರೆ. ಜ್ಞಾನವಾಗಲೀ ಧ್ಯಾನವಾಗಲೀ ವೃತ್ತಿರೂಪವಾದುದರಿಂದ ಅವುಗಳಿಗೆ ತಾರುಣ್ಯ–ವಾರ್ಧಕ್ಯಗಳೂ ಪಾಕ–ಪರಿಪಾಕಗಳೂ ಉಬ್ಬರವಿಳಿತಗಳೂ ಇರಬಹುದೆಂಬುದು ಸ್ವಾಭಾವಿಕ.

ಇದೇ ಅನುಭವಕ್ಕೆ ಹಲವು ದೃಷ್ಟಾಂತಗಳು ಪುರಾಣೇತಿಹಾಸಗಳಲ್ಲಿಯೂ ಇವೆ. ಶ್ರೀಕೃಷ್ಣನು ತತ್ತ್ವಜ್ಞಾನಿಯೂ ಸ್ಥಿತಪ್ರಜ್ಞನೂ ಜೀವನ್ಮುಕ್ತನೂ ಇದ್ದನೆಂಬುದೇನು? ಅವನು ಭಗವಂತನೇ ಆಗಿದ್ದನು. ಆದರೂ ಕುರುಕ್ಷೇತ್ರಯುದ್ಧದಲ್ಲಿ ಅರ್ಜುನನಿಗೆ ಭಗವದ್ಗೀತೆಯನ್ನು ಉಪದೇಶಮಾಡಿ ತನ್ನ ವಿಶ್ವರೂಪವನ್ನು ತೋರಿಸಿದಾಗ ಕೃಷ್ಣನಲ್ಲಿ ಇದ್ದ ಉತ್ಸಾಹವೂ ದೈವಾವೇಶವೂ ದಿವ್ಯಸ್ಫೂರ್ತಿಯೂ ಅನಂತರ ಬಹಳ ಕಾಲದಮೇಲೆ ವಿರಾಮ ಸಮಯದಲ್ಲಿ ಅರ್ಜುನನ ಬೇಡಿಕೆಯಂತೆ ಅವನಿಗೆ "ಅನುಗೀತೆ"ಯನ್ನು ಕೃಷ್ಣನೇ ಬೋಧಿಸಿದಾಗ ಅವನಲ್ಲಿರಲಿಲ್ಲ.

ಇದೇ ಬಗೆಯ ಅನೇಕ ಉದಾಹರಣೆಗಳನ್ನು ಕೊಡಬಹುದು.

ರಾಮರೇ ಹೇಳುತ್ತಿದ್ದಂತೆ, ಪರಮಾನಂದದ ಆವೇಶವುಳ್ಳ ಅಂಥಾ ಮಹಾತ್ಮರು ಲೋಕಹಿತಸಾಧನೆಗೆಂದು ಏನನ್ನಾದರೂ ಮಾಡುವದಕ್ಕೆ ಹೋಗದೆ ಸುಮ್ಮನೆ ಶಾಂತವಾಗಿರಬೇಕು. ಅವರು ಪರಮಾತ್ಮ ಚಿಂತನದ ತೀವ್ರ ತಪಸ್ಸಿನಿಂದ ಉರಿಯುತ್ತಾ ಜೀವಿಸಿದ್ದರೆ ಸಾಕು. ಅವರ ಸಾನ್ನಿಧ್ಯ ಮಾತ್ರದಿಂದಲೇ ಲೋಕವು ಉನ್ನತಿಯನ್ನು ಪಡೆಯುತ್ತದೆ.

ವಿಧೇಯರಾದ ಸತ್ಪುತ್ರರಿಗೂ ಬುದ್ಧಿಶಾಲಿಗಳಾದ ವಿದ್ಯಾರ್ಥಿಗಳಿಗೂ ವಾತ್ಸಲ್ಯಪೂರ್ಣ ಅಧ್ಯಾಪಕರಿಗೂ ವಿವೇಕಿಗಳಾದ ಗೃಹಸ್ಥರಿಗೂ ಸೇವಾನಿಷ್ಠ ನಾಗರಿಕರಿಗೂ ಉಜ್ಜ್ವಲ ರಾಷ್ಟ್ರಭಕ್ತರಿಗೂ ಪ್ರೇಮಾವೇಶದ ಭಗವದ್‌ಭಕ್ತರಿಗೂ ಸಾಧನಪರರಾದ ಸಾಧುಗಳಿಗೂ ವಿರಕ್ತರಾದ ಸಂನ್ಯಾಸಿಗಳಿಗೂ ನಿಸ್ಸ್ಪೃಹರಾದ

ತಪಸ್ವಿಗಳಿಗೂ ಉತ್ಸಾಹಭರಿತ ಧರ್ಮಪ್ರಚಾರಕರಿಗೂ ಶ್ರದ್ಧಾವಂತ ಸನಾತನಿಗಳಿಗೂ ಕ್ರಾಂತಿಕಾರಕ ಸುಧಾರಕರಿಗೂ ಜೀವನ್ಮುಕ್ತರಿಗೂ ಅನುಭಾವಿಗಳಿಗೂ ಸ್ವಾಮಿರಾಮ ತೀರ್ಥರ ಜೀವನವು ಅಚ್ಚು ಮೆಚ್ಚಿನ ಉಚ್ಚವಾದ ಆದರ್ಶಗಳಿಂದ ತುಂಬಿದೆ.

ರಾಮತೀರ್ಥರು ಇಂಡಿಯಾದಲ್ಲಿ ಅನೇಕ ವರ್ಷಗಳು ಸಂಚಾರಮಾಡಿ ವ್ಯವಹಾರ ಯೋಗ್ಯ (Practical) ವೇದಾಂತವನ್ನು ಪ್ರಸಾರ ಮಾಡಿದರು. ೧೯೦೫ರಲ್ಲಿ ಅವರು ಹೃಷೀಕೇಶದಲ್ಲಿ ಕೇವಲ ಏಕಾಂತವನ್ನು ಸೇರಿದರು. ೧೯೦೬ ರಲ್ಲಿ ಟೆಹರಿಯಿಂದ ೯೦ ಮೈಲಿಗಳ ದೂರದಲ್ಲಿ ೧೨, ೧೯೦ ಅಡಿಗಳ ಎತ್ತರದಲ್ಲಿ ವಸಿಷ್ಠಾಶ್ರಮದಲ್ಲಿ ವಾಸಮಾಡಲು ಪ್ರಾರಂಭಿಸಿದರು. ಅವರ ೩೩ನೇ ವಯಸ್ಸಿನಲ್ಲಿ ಅವರು ಗಂಗಾನದಿ ಯಲ್ಲಿ ಸ್ನಾನಮಾಡುತ್ತಿದ್ದಾಗ ಹತೋಟಿಯಲ್ಲಿ ಸಿಕ್ಕದ ವೇಗವಾದ ಪ್ರವಾಹವು ಅವರ ದೇಹವನ್ನು ಕೊಚ್ಚಿಕೊಂಡು ಹೋಯಿತು.

ಆ ಆಕಸ್ಮಿಕ ಮಹಾಸಮಾಧಿಯ—ಜಲಸಮಾಧಿಯ—ದುರಂತ ದಿನದ ಬೆಳಿಗ್ಗೆ, ಅವರು ಸ್ನಾನಕ್ಕೆ ಹೊರಡುವ ಸ್ವಲ್ಪ ಮುಂಚೆ ಆ ವಿಷಾದಕರ ಘಟನೆಗೆ ಕೆಲವು ನಿಮಿಷಗಳ ಹಿಂದೆ—ಅವರು ತಮ್ಮ ಜೀವನದ ಅಂತಿಮ ಮುಹೂರ್ತದಲ್ಲಿ ಬರೆದ ಒಂದು ಉರ್ದು ಲೇಖನದ ಕೊನೆಯಲ್ಲಿ ಮುಕ್ತಾಯಗೊಂಡಿರುವ ಚರಮ ಶ್ಲೋಕದಲ್ಲಿ, ಸನ್ನಿಹಿತವಿರುವ ಮೃತ್ಯುವಿನ ವಿಷಯವಾಗಿ ತಮ್ಮ ಮನಸ್ಸಿಗಾದ ಮುನ್ಸೂಚನೆಯನ್ನು ವ್ಯಕ್ತಮಾಡಿದ್ದಾರೆ. ಅದೇನೆಂದರೆ :

"ಓ ಮೃತ್ಯುವೇ ! ನಿನಗೆ ಇಚ್ಛೆಯಾದರೆ ಈ ದೇಹವನ್ನು ಯಥೇಚ್ಛೆಯಾಗಿ ತೆಗೆದುಕೊಂಡು ಹೋಗು. ನಾನು ಬದುಕುವದಕ್ಕೆ ಇನ್ನೂ ಹೆಚ್ಚಾಗಿ ಅನೇಕ ದೇಹಗಳಿವೆ. ನಾನು ಚಂದ್ರನ ರಜತಮಯವಾದ ತಂತುಗಳನ್ನೂ ಸೂರ್ಯನ ಸುವರ್ಣಮಯವಾದ ಕಿರಣಗಳನ್ನೂ ಧರಿಸಿ ಸುಖವಾಗಿ ಜೀವಿಸಬಲ್ಲೆ. ನಾನು ಬೆಟ್ಟಗಳ ಹಳ್ಳಗಳಾಗಿಯೂ ಹೊಳೆಗಳಾಗಿಯೂ ಹಾಡುತ್ತಾ ಮೊರೆಯುತ್ತಾ ಸ್ವಚ್ಛಂದವಾಗಿ ಅಲೆದಾಡುತ್ತೇನೆ. ಸಾಗರದ ತರಂಗಗಳಲ್ಲಿ ನಾನು ಸಂತೋಷವಾಗಿ ಕುಣಿಯುತ್ತಿರುತ್ತೇನೆ. ಮಂದ ಮಾರುತನ ಮನೋಹರ ವಿಲಾಸವು ನಾನೇ; ಉನ್ಮತ್ತ ಮಾರುತನು ನಾನೇ. ನನ್ನೀ ರೂಪಗಳು ಬದಲಾವಣೆಯ ಸಂಚಾರೀಭಾವ ಗಳು. ಮೇರುಶಿಖರದಿಂ ಕೆಳಗಿಳಿದು ಬಂದೆ ; ಬಾಗಿಲುಗಳನು ತಟ್ಟಿದೆನು ; ನಿದ್ರಿಪರನೆಚ್ಚರಿಸಿದೆ, ಸಂತೈಸಿದೆನೊಬ್ಬನನು ಇನ್ನೊಬ್ಬನ ಕಣ್ಣೀರುಗಳನೊರಸಿದೆ, ಕೆಲವರಿಗೆ ಹೊದಿಸಿದೆ ; ಇತರರ ಮುಸುಕುಗಳ ತೆಗೆದೊಗೆದೆ. ನಾನಿದನು ಸೋಂಕಿದೆನು, ಅದನು ಸ್ಪರ್ಶಿಸಿದೆ. ತೆಗೆದೆ ನಾ ಟೋಪಿಯನು ಒಗೆದು ನಾ ಓಡಿದೆನು. ನನ್ನೊಡನೆ ಇಡೆನು ಏನನ್ನೂ, ಯಾರೂ ನನ್ನನ್ನು ಕಂಡು ಹಿಡಿಯಲಾರರು."

ಸ್ವಾಮಿರಾಮರ ಸಂದರ್ಶನವನ್ನು ಯಾರು ಮಾಡಿದರೂ ಅವರ ಜೀವನವೇ ಹೊಸಬಗೆಯಾಗುತ್ತಿತ್ತು. ಆ ಚೇತನದ ಅಲ್ಪತನವೂ ಕ್ಷುದ್ರತನವೂ ಅವರ ದರ್ಶನ ಮಾತ್ರದಿಂದ ಮಾಯವಾಗುತ್ತಿತ್ತು ; ಮಾನುಷ ಪ್ರಜ್ಞೆಯು ಆ ಕ್ಷಣವೇ ದಿವ್ಯ

20082

ಭಾವದ ಉನ್ನತ ಸ್ವರ್ಗೀಯ ಭೂಮಿಕೆಗೆ ಎತ್ತಲ್ಪಡುತ್ತಿತ್ತು. ಅವರ ಸಾಕ್ಷಾತ್ ಸಂಪರ್ಕ ಹೊಂದಿದವರ ಕಣ್ಣುಗಳಲ್ಲಿ ಅವರ ಕಣ್ಣುಗಳಿಂದ, ಜೀವನದ ವಿಷಯದಲ್ಲಿ, ಸಂಪೂರ್ಣ ಲೋಕಾತೀತ (ಲೋಕವನ್ನು ಮೀರಿದ) ದೃಷ್ಟಿಯು ಮಿಂಚಿ ಚಿಮ್ಮುತ್ತಿತ್ತು. ಅವರ ವ್ಯಕ್ತಿತ್ವವು ಸಮ್ಮೋಹಕವಾಗಿದ್ದಿತು. ಸರ್ವದಾ ಲಾಸ್ಯ ವಾಡುತ್ತಿದ್ದ ಅವರ ಮಂದಹಾಸವು ಸುತ್ತಲೆಲ್ಲಾ ಬೆಳಕು ಬೀರುವಂತೆ ತೋರುತ್ತಿತ್ತು. ಆ ಪ್ರಸರಣದ ಪರಿಧಿಯಲ್ಲಿ ಸಿಕ್ಕವರ ಪ್ರೀತಿ-ವಿಶ್ವಾಸಗಳನ್ನು ನಿಮಿಷದಲ್ಲಿ ಸೆಳೆದುಕೊಳ್ಳುತ್ತಿತ್ತು. ಸ್ವಾಮಿ ರಾಮರು ಕವಿ–ಸಂನ್ಯಾಸಿಗಳೂ ತತ್ತ್ವಜ್ಞ–ಸಂತರೂ ಆನಂದೋನ್ಮತ್ತ ಯತೀಶ್ವರರೂ ಆಗಿದ್ದರು. ಅವರ ಅಂತ ರಂಗದ ಜ್ಞಾನಪ್ರಕಾಶವು ಸುತ್ತಲೂ ಎಲ್ಲರ ಮೇಲೂ ಸೌಂದರ್ಯ–ಪ್ರೇಮಗಳ ದಿವ್ಯ ಪ್ರಭಾಮಂಡಲವನ್ನು ಪ್ರಸರಿಸುತ್ತಿತ್ತು.

ಸ್ವಾಮಿ ರಾಮರು ಸಹಜವಾದ ಭೂಮಾನಂದೈಶ್ವರ್ಯದ ಆಢ್ಯತೆಯಿಂದ ತಮ್ಮನ್ನು ತಾವು 'ರಾಮಂ ಬಾದ್ಷಹ' ಎಂದು ಕರೆದುಕೊಳ್ಳುತ್ತಿದ್ದರು. ಅವರು ಜೀವನದ ತತ್ತ್ವಜ್ಞಾನವನ್ನು 'ವ್ಯವಹಾರ ವೇದಾಂತ,' "Practical Vedanta" ಎಂದು ಕರೆಯುತ್ತಿದ್ದರು. ಅವರ ಉಪದೇಶಗಳು ಪ್ರಾಚೀನ ಸಿದ್ಧಾಂತಗಳ ಹಾಗೂ ಶಾಸ್ತ್ರಗಳ ಪುನರುಚ್ಚಾರಣೆ ಮಾತ್ರ ಆಗಿರಲಿಲ್ಲ. ಸತ್ಯದ ಪರೀಕ್ಷೆಯನ್ನು ಬುದ್ಧಿಗೆ ಒಪ್ಪುವಂತೆ, ವಿಚಾರಸಮ್ಮತವಾಗಿ ಗ್ರಹಿಸುವದರಲ್ಲಿಯೂ ಅದನ್ನು ವ್ಯವಹಾರ ಸಾಧ್ಯವಾಗಿಮಾಡುವದರಲ್ಲಿಯೂ ಜೀವನದ ವಾಸ್ತವಾನುಭವದಲ್ಲಿ ತರುವದರಲ್ಲಿಯೂ ಸಾಧಿಸಬೇಕೆಂದು ಅವರು ಹೇಳುತ್ತಿದ್ದರು ; ವಿಚಾರ ಮಾಡದೆ. ಸಾರ್ವತ್ರಿಕವಾದ ಅನುಭವಕ್ಕೆ ಹೋಲಿಸಿ ನೋಡದೆ, ಯಾವದನ್ನೂ ಸುಮ್ಮನೆ ಒಪ್ಪಿಕೊಳ್ಳಬಾರದೆಂದೂ ಹೇಳುತ್ತಿದ್ದರು. ಭೌತವಿಜ್ಞಾನ (Physics) ರಸಾಯನ ಶಾಸ್ತ್ರ (Chemistry), ಪ್ರಾಣಿಶಾಸ್ತ್ರ (Biology)ಮೊದಲಾದವುಗಳನ್ನು ಪ್ರಯೋಗಶಾಲೆಯಲ್ಲಿ ನಿರೀಕ್ಷೆ–ಪರೀಕ್ಷೆ-ಪ್ರಯೋಗಗಳಿಗೆ ಗುರಿಪಡಿಸಿ, ವಿಚಾರದ ಒರೆಗಲ್ಲಿಗೆ ತಿಕ್ಕಿ ಅವುಗಳ ತತ್ತ್ವಗಳನ್ನು ಕಂಡುಹಿಡಿದಂತೆಯೇ ಧರ್ಮತತ್ತ್ವ ಅಧ್ಯಾತ್ಮತತ್ತ್ವಗಳನ್ನೂ ವಿವೇಚನೆಯಿಂದ ಪರಿಶೀಲಿಸಿ ಒಪ್ಪಿಕೊಳ್ಳಬೇಕೆಂದು ಅವರು ಹೇಳುತ್ತಿದ್ದರು.

ಗಾಢವಾದ ರಾಗೋಜ್ಜ್ವಲತೆಯಿಂದಲೂ ಸೌಂದರ್ಯಾನುಭವದ ಕವಿಸಹಜ ವಾದ ಆನಂದದಿಂದಲೂ ಸುತ್ತಲಿರುವವರೊಡನೆ ತೋರಿಸುತ್ತಿದ್ದ ಏಕಾತ್ಮತೆಯ ಭಾವದಿಂದಲೂ ವಿಶಾಲವಾದ ಮಾನವೀಪ್ರೇಮದಿಂದಲೂ ಅವರು ಕೇವಲ ವಿದ್ವಾಂಸರಾದ ಶುಷ್ಕ ವೇದಾಂತಿಗಳಿಂದ ಭಿನ್ನರಾಗಿದ್ದರು. ಓಂಕಾರ ಗಾನವೇ ಅವರ ನಿತ್ಯದ ಆಹಾರವಾಗಿತ್ತು. ಸಹಜವಾಗಿ, ತಮ್ಮನ್ನು ತಾವು ತಮ್ಮ ವಿರೋಧಿಗಳಲ್ಲಿಯೂ ಕಾಣುತ್ತಿದ್ದ ಗಾಢವಾದ ಭಾವಾವೇಗವು ಅವರ ಶತ್ರುವಿನ ಹೃದಯವನ್ನೂ ವಶಪಡಿಸಿಕೊಳ್ಳುತ್ತಿತ್ತು, ಫೈಜಾಬಾದ್‌ನಲ್ಲಿ ಅವರನ್ನು ಇರಿದು ಕೊಲ್ಲುವದಕ್ಕಾಗಿ ತನ್ನ ವಸ್ತ್ರದಲ್ಲಿ ಕಠಾರಿಯನ್ನು ಮುಚ್ಚಿಟ್ಟುಕೊಂಡು ಬಂದಿದ್ದ ಒಬ್ಬ ಮತಾಂಧ

ಮಹಮ್ಮದೀಯನ ಕೋಪಾವಿಷ್ಟವಾದ ವಿತಂಡವಾದವು ಅವರ ಮೋಹಕವಾದ ಮಂದಹಾಸದಿಂದಲೂ ಓಂಕಾರೋಚ್ಚಾರಣೆಯಿಂದಲೂ ಶಾಂತವಾಗಿ, ಆ ವೈರಿಯೂ ಪಶ್ಚಾತ್ತಾಪದಿಂದ ಅವರಿಗೆ ಶರಣಾಗತನಾಗಿ ಕ್ಷಮೆಯನ್ನು ಬೇಡಿ ಸಾಧುವಾದನೆಂಬದು ರಾಮತೀರ್ಥರ ಜೀವನದಲ್ಲಿ ನಡೆದ ವಿಸ್ಮಯಕಾರಕವಾದ ವಾಸ್ತವ ಘಟನೆ. ಅವರ ಕಾಂತಶಕ್ತಿಯ ವ್ಯಕ್ತಿತ್ವವು(Magnetic personality)ಅಷ್ಟು ಸಮ್ಮೋಹಕವಾಗಿತ್ತು.

ಸ್ವಾಮಿ ವಿವೇಕಾನಂದರಂತೆಯೇ ಸ್ವಾಮಿರಾಮತೀರ್ಥರೂ ಭಾರತದಲ್ಲಿ ಆಧ್ಯಾತ್ಮಿಕ ಪುನರುಜ್ಜೀವನವನ್ನು ಉಂಟುಮಾಡಿದರು. ಆಧುನಿಕ ಭಾರತದ ವಿಚಾರ-ಭಾವನೆಗಳ ನಿರ್ಮಾಪಕರಾದ ವಿಭೂತಿಪುರುಷರಲ್ಲಿ ಸ್ವಾಮಿರಾಮತೀರ್ಥರೂ ಮುಖ್ಯರಾದವರು. ಜಡತೆಯನ್ನು ಕಳೆದೆದ್ದು, ಹಗಲು ಕನಸುಗಳನ್ನೂ ಬರಡಾದ ಕರ್ಮಾಚರಣೆಗಳನ್ನೂ ಕೈ ಬಿಟ್ಟು, ತನ್ನನ್ನು ತಾನು ಜಯಿಸುವದರಿಂದ ರಾಷ್ಟ್ರ ಸ್ವಾತಂತ್ರ್ಯವನ್ನು ಸಾಧಿಸಬೇಕೆಂದು ಅವರು ಭಾರತೀಯರನ್ನು ತಮ್ಮ ಬುದ್ಧಿವಾದಗಳಿಂದ ಬಡಿದೆಬ್ಬಿಸಿದರು. ಅವರು ತಮ್ಮ ಅಮೆರಿಕಾದ ಪ್ರವಾಸ-ಪ್ರವಚನಗಳಲ್ಲಿ, ಪಾಶ್ಚಾತ್ತ್ಯರು ಪೌರ್ವಾತ್ಯರನ್ನು ರಾಜಕೀಯ-ಆರ್ಥಿಕಾದಿ ರಂಗಗಳಲ್ಲಿ ಶೋಷಣೆ ಮಾಡುತ್ತಿರುವದನ್ನು, ನಿರ್ಭಯವಾಗಿ-ಯಾವ ನಿಷ್ಠುರ ರಾಜಕಾರಣೆಗೂ ಕಡಿಮೆ ಇಲ್ಲದಂತೆ-ಆದರೆ ನಿಷ್ಠುರವಾಗದಂತೆ, ಆತ್ಮೀಯತೆಯಿಂದ ಅವರ ಮನಸ್ಸನ್ನು ಒಲಿಸಿಕೊಳ್ಳುವ ರೀತಿಯಲ್ಲಿ ಖಂಡಿಸುತ್ತಿದ್ದರು. ಹಿಂದುಳಿದಿರುವ ತಮ್ಮ ಮಾತೃಭೂಮಿಯ ಪರವಾಗಿ ಧೈರ್ಯೋತ್ಸಾಹಗಳಿಂದ ವಾದಿಸುತ್ತಿದ್ದರು. ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ವೀರಾವೇಶದಿಂದ ಹೋರಾಡಿದ ಕಾಂಗ್ರೆಸ್ ನಾಯಕರಲ್ಲಿ ಅನೇಕರಿಗೆ ಸ್ವಾಮಿರಾಮತೀರ್ಥರೇ ಪ್ರೇರಕಶಕ್ತಿಯೂ ಮಾರ್ಗದರ್ಶಕ ಧ್ರುವತಾರೆಯೂ ಆಗಿದ್ದರು. ಅವರು ೧೯೦೦ ರಲ್ಲಿ ೫೦ ವರ್ಷಗಳಿಗಿಂತಲೂ ಮುಂಚೆಯೇ ಭಾರತವು ಸ್ವಾತಂತ್ರ್ಯವನ್ನು ಪಡೆಯುವದೆಂದು ಹೇಳಿದ್ದ ಭವಿಷ್ಯವು ವಾಸ್ತವ ಘಟನೆಯಾಗಿರುವದು ಲೋಕಪ್ರಸಿದ್ಧವಾಗಿದೆ.

ಸವಿನಯ ಜ್ಞಾನದಾನ ಯಜ್ಞ

ವಾಚಕ ಭಕ್ತಮಹಾಶಯರೇ !

ತಮಗೆ ಈಗ ಕಳಿಸಿರುವ ಈ ಪುಸ್ತಕವು (ಅಥವಾ ಪುಸ್ತಕಗಳು) ಧರ್ಮಾರ್ಥವಾದ ಸಾಹಿತ್ಯ. ಇದರ ಪ್ರೇಮಪೂರ್ವಕವಾದ ಪ್ರಸಾರದಲ್ಲಿ ಸಹಕರಿಸಿ ತಾವು ಪುಣ್ಯ (ಸರ್ವಾತ್ಮ ಭಾವದ ಆನಂದಕ್ಕೆ) ಭಾಗಿಗಳಾಗಬೇಕಾಗಿ ಪ್ರಾರ್ಥನೆ. ಧರ್ಮಕಾರ್ಯವು ಸುಗಮವಾಗಿ ನಡೆಯುವುದಕ್ಕಾಗಿ ಈ ಕೆಳಗಿನ ನಿಯಮಗಳನ್ನು ದಯವಿಟ್ಟು ಪಾಲಿಸಬೇಕು :

1) ಪುಸ್ತಕವು ತಮ್ಮ ಕೈಸೇರಿದ ಕೂಡಲೇ ದಯವಿಟ್ಟು, ತಾವು ಒಪ್ಪಿಗೆಯ (acknowledgement) ಪತ್ರವನ್ನು ಬರೆದರೆ, ತಮಗೆ ಮುಂದಿನ ಪ್ರಕಟಣೆಗಳನ್ನು ಉಚಿತವಾಗಿ ಕಳಿಸುವುದಕ್ಕೆ ಭರವಸೆಯಾಗುತ್ತದೆ.

2) ಯಾವ ಗ್ರಂಥವನ್ನಾದರೂ ಮೊದಲನೆಯ ಸಲ ಓದುವದು ಕೇವಲ ಕುತೂಹಲದ ತೃಪ್ತಿಗಾಗಿ. ಅತ್ಯಂತ ವಿರಳರಾದ ಏಕಸಂಧಿಗ್ರಾಹಿಗಳಿಗೆ ಹೊರತು ಮಿಕ್ಕ ಸಾಮಾನ್ಯರಿಗೆ ಮೊದಲನೆಯ ಸಲದ ಓದು ಓದೇ ಅಲ್ಲವೆಂಬಂತೆ ಆಗಬಹುದು. ಎರಡನೆಯ ಸಲದ ಓದಿನಲ್ಲಿ ಹೆಚ್ಚು ಚೆನ್ನಾಗಿ ಅರ್ಥವಾಗಬಹುದು. ಮೂರನೆಯ ಸಲದ ಓದಿನಿಂದ ಅನುಭವವಾಗಿ ಹೆಚ್ಚು ವಿಷಯಗಳು ನೆನಪಿನಲ್ಲಿ ಉಳಿಯಬಹುದು. ನಿತ್ಯವೂ ಪಾರಾಯಣಮಾಡಿ (ಯಾಂತ್ರಿಕವಾಗಿ ಅಲ್ಲ), ಅಂತಃಕರಣವು ಹೆಚ್ಚು ಹೆಚ್ಚು ವಿಕಾಸವಾದಂತೆ ಆಳವಾದ ಹೊಸ ಹೊಸ ಅರ್ಥಗಳನ್ನು ಕಂಡುಕೊಳ್ಳಬೇಕಾದ ಗ್ರಂಥಗಳನ್ನು ಕೊನೆಯ ಪಕ್ಷ ಏಳು ಸಲವಾದರೂ ಓದಿದರೆ ಒಂದು ಸಲ ಓದಿದಂತೆ ಆಗುತ್ತದೆ, ಎಂದು ಸ್ವಾಮಿರಾಮತೀರ್ಥರು ಅಭಿಪ್ರಾಯಪಡುತ್ತಾರೆ.

ಒಂದೊಂದು ಶಬ್ದವನ್ನೂ ಒಂದೊಂದು ವಾಕ್ಯವನ್ನೂ, ಓದುತ್ತಾ ಓದುತ್ತಾ ಜೊತೆಗೇ ಮನನವೂ ನಿದಿಧ್ಯಾಸನವೂ ಉಂಟಾಗಿ ಅನುಭವದ ಆನಂದದಲ್ಲಿ (ಅರಿವಿನ ಬಯಲಾಗಿ) ನಿಲ್ಲಬೇಕು ; ನಿಶ್ಶಬ್ದವಾದ–ಮೌನವಾದ–ಶಾಂತಿ ಸಮೃದ್ಧಿಯಲ್ಲಿ ನೆಲೆಸಬೇಕು.

3) ನಾವು ಓದಿದ ಮೇಲೆ ಪುಸ್ತಕವನ್ನು ಪೆಟ್ಟಿಗೆಯಲ್ಲಿಯೋ ಬೀರುವಿನ ಒಳಗೋ ಮುಚ್ಚಿಡಬಾರದು. ಆಸಕ್ತಿಯುಳ್ಳವರನ್ನು ಹುಡುಕಿ ಓದಲು

ಕೊಡಬೇಕು. ಇದನ್ನು ಯಾರೂ ಓದದಂತೆ ಒಂದು ದಿನವೂ ವ್ಯರ್ಥವಾಗಿ ಇಡಬಾರದು. ಧರ್ಮಚಕ್ರವನ್ನು ಉರುಳಿಸುತ್ತಿರಬೇಕು. ಧರ್ಮದ ಗಡಿಯಾರವು ಯಾರ ಕೈಯಲ್ಲಾದರೂ ನಡೆಯುತ್ತಿರಬೇಕು. ಧರ್ಮಜೀವನವೂ ಧರ್ಮಪ್ರಸಾರವೂ ನಮ್ಮ ಉಸಿರಾಟವಾಗಬೇಕು. ಈ ಪುಸ್ತಕಗಳು ನಿಮಗೂ ನಿಮ್ಮವರಿಗೂ ಉಪಯೋಗವಾದ ಮೇಲೆ ಇವನ್ನು ಯಾವದಾದರೂ ವಾಚನಾಲಯಕ್ಕೆ ಕೊಡಬಹುದು.

ಗ್ರಂಥವನ್ನು ಪೂರ್ಣವಾಗಿ ಅಧ್ಯಯನ ಮಾಡಿದ ಪ್ರಾಜ್ಞರು ತಮ್ಮ ವಿಮರ್ಶಾತ್ಮಕವಾದ ಅಭಿಪ್ರಾಯವನ್ನು ದಾಕ್ಷಿಣ್ಯವಿಲ್ಲದಂತೆ ದಯವಿಟ್ಟು ತಿಳಿಸಿದರೆ ಮುಂದಿನ ಸುಧಾರಣೆಗೆ ಸಹಾಯವಾಗಬಹುದು.

ದಯವಿಟ್ಟು, ಈ ಪುಸ್ತಕಗಳನ್ನು (ಯಾವ ಪುಸ್ತಕವನ್ನಾದರೂ) ನೆಲದ ಮೇಲೆ ಇಡಬಾರದು, ಕೊಳೆಮಾಡಬಾರದು, ಮಕ್ಕಳ ಕೈಗೆ ಕೊಡಬಾರದು. ನಾವು ಎಷ್ಟು ಸಲ ಓದಿದರೂ ಪುಸ್ತಕವು ಹೊಸದಾಗಿಯೇ ಇರಬೇಕು. ದೇವಾಲಯದಲ್ಲಿರುವ ಶಾರದಾಮೂರ್ತಿಯನ್ನು ಭಕ್ತಿಯಿಂದ ಪೂಜಿಸುವಂತೆ ಧರ್ಮಗ್ರಂಥಗಳನ್ನು (ಜ್ಞಾನ ವೀಯುವ ಯಾವ ಪುಸ್ತಕವನ್ನಾದರೂ) ಶ್ರದ್ಧಾವಂತರು ಪ್ರತ್ಯಕ್ಷ ಸರಸ್ವತಿಯೆಂಬ ಪೂಜ್ಯಭಾವದಿಂದ ಕಂಡು ಉಪಯೋಗಮಾಡಿಕೊಳ್ಳಬೇಕು.

ನಾವು ಈ ಗ್ರಂಥಗಳನ್ನು ಉಪಯೋಗ ಮಾಡಿಕೊಂಡು ಇತರರಿಗೂ ಉಪಯೋಗವಾಗುವಂತೆ ಮಾಡುವದೇ ಇವುಗಳಿಗೆ ಕೊಡಬೇಕಾದ ನಿಜವಾದ ಬೆಲೆ.

ಓಂ.

ವಿ. ಸೂ :— ಉತ್ತರವನ್ನು ಅಪೇಕ್ಷಿಸುವವರು ದಯವಿಟ್ಟು ರಿಪ್ಲೈ (Reply) ಕಾರ್ಡನ್ನು ಬರೆಯಬಹುದು.

ಶ್ರೀ ಮೂರ್ತಿ
ದತ್ತಾಶ್ರಮ
ಧರ್ಮಾರ್ಥ ಸಾಹಿತ್ಯಮಾಲೆ



ಸ್ವಾಮಿ ರಾಮತೀರ್ಥರು, ೧೯೦೫ — ಲಕ್ನೋ

ರಾಮತೀರ್ಥರ ವೇದಾಂತ ಕಥೆಗಳು

ವಿಷಯಾನುಕ್ರಮಣಿಕೆ

೨೦೦೮೨
20082



ಸ್ವಾಮಿ ರಾಮತೀರ್ಥರು — ಅಮೇರಿಕಾದಲ್ಲಿ

ಸ್ವಾಮಿ ರಾಮತೀರ್ಥರ

ವೇದಾಂತ ಬೋಧಕ ಕಥೆಗಳು

೧ ಮಹತ್ವಾಕಾಂಕ್ಷೆ—ಆಶೆಯ ಕಾರಣ

(ಸೆರೆಯಲ್ಲಿ ಷಹಜಹಾನ್)

ಇಂಡಿಯಾ ದೇಶದಲ್ಲಿ, ಚಕ್ರವರ್ತಿ ಷಹಜಹಾನನನ್ನು, ಅವನ ಮಗ ಔರಂಗಜೇಬನೇ ಸೆರೆಯಲ್ಲಿಟ್ಟನು. ಅವನ ಇಡೀ ರಾಜ್ಯವನ್ನು ತಾನು ಆಳಬೇಕೆಂಬುದೇ ಆ ಮಗನ ಕೆಟ್ಟ ಅಭಿಲಾಷೆಯಾಗಿತ್ತು. ಸಂಪತ್ತಿನ ಮೇಲೆ ತನಗಿದ್ದ ಹಸಿವನ್ನು ಹಿಂಗಿಸಿಕೊಳ್ಳುವುದಕ್ಕಾಗಿಯೇ ಮಗನು ತಂದೆಯನ್ನು ಸೆರೆಯಲ್ಲಿಟ್ಟಿದ್ದನು. ಒಮ್ಮೆ ಆ ಸೆರೆಯಲ್ಲಿದ್ದ ತಂದೆಯು ಮಗನಿಗೆ ಪತ್ರ ಬರೆದು ಕಳಿಸಿದನು; ತನ್ನಲ್ಲಿಗೆ ಕೆಲವು ವಿದ್ಯಾರ್ಥಿಗಳನ್ನು ನಿತ್ಯವೂ ಕಳಿಸುತ್ತಿದ್ದರೆ, ಅವರಿಗೆ ತಾನು ಏನಾದರೂ ಕಲಿಸುತ್ತಾ ವಿನೋದವಾಗಿ ಕಾಲ ಕಳೆಯಬಹುದೆಂದು ರಾಜನು ಅದರಲ್ಲಿ ಬರೆದಿದ್ದನು. ಆದರೆ, ಆ ಮಗನು ಹೇಳಿದ್ದೇನೆಂದರೆ, "ಎಷ್ಟೋ ವರ್ಷಗಳು ನಮ್ಮ ತಂದೆಯು ರಾಜ್ಯವಾಳುತ್ತಿದ್ದನು; ಈಗಲೂ ಅವನು ಆಳುವ ತನ್ನ ಹಳೆಯ ಹವ್ಯಾಸವನ್ನು ಬಿಡಲಾರನಾದ್ದರಿಂದ ಯಾರನ್ನಾದರೂ ಆಳುತ್ತಿರಬೇಕೆಂದು ಹಂಬಲಿಸುತ್ತಾನೆ. ಆದ್ದರಿಂದಲೇ ಕಲಿಸುವ ನೆಪದಿಂದ, ವಿದ್ಯಾರ್ಥಿಗಳನ್ನಾದರೂ ಆಳಬೇಕೆಂದು ಬಯಸುತ್ತಾನೆ. ಅವನು, ಪಾಪ! ಹಿಂದಿನ ರೂಢಿಯನ್ನು ಬಿಡಲಾರನು."

ಹೀಗಿದೆ, ಲೋಕದ ಸ್ವಭಾವ. ನಮ್ಮ ಹಳೆಯ ಅಭ್ಯಾಸಗಳನ್ನು ನಾವು ಹೇಗೆ ಬಿಡುವದು ಸಾಧ್ಯ? ಅವೇ ನಮ್ಮನ್ನು ಅಂಟಿ ಹಿಡಿದುಕೊಳ್ಳುತ್ತವೆ. ಅವನ್ನು ನಾವು ಕೊಡವಿಕೊಳ್ಳಲಾರೆವು. ನಮ್ಮ ನಿಜವಾದ ಆತ್ಮನೇ ಇಡೀ ವಿಶ್ವಕ್ಕೇ ಒಡೆಯನು. ಅವನೇ ಷಾ-ಇ-ಜಹಾನ್, ಅಂದರೆ ಸಮಗ್ರ ವಿಶ್ವಕ್ಕೇ ಪ್ರಭು. ಈಗ ನೀವು ಅಂಥಾ ಚಕ್ರವರ್ತಿಯನ್ನು ಸೆರೆಯಲ್ಲಿ ಹಾಕಿದ್ದೀರಿ; ನಿಮ್ಮ ದೇಹವೆಂಬ ಕತ್ತಲೆಯ ಕೋಣೆಯಲ್ಲಿ ಕೆಡವಿದ್ದೀರಿ. ಅವನನ್ನು ನಿಮ್ಮ ಅಹಂಕಾರವೆಂಬ ನಿರ್ಬಂಧ ಸ್ಥಳದಲ್ಲಿ ಬಂಧಿಸಿಟ್ಟಿದ್ದೀರಿ. ಆದರೂ ವಿಶ್ವದ ಪ್ರಭುವಾದ ನಿಮ್ಮ ನಿಜವಾದ ಆತ್ಮನು ತನ್ನ ಪ್ರಭುತ್ವದ ಹಳೆಯ ಅಭ್ಯಾಸವನ್ನು ಮರೆಯಬಲ್ಲನೆ? ಅವನು ತನ್ನ ಸ್ವಭಾವವನ್ನು ಬಿಡುವದು ಹೇಗೆ ಸಾಧ್ಯ? ತಮ್ಮ ಸ್ವಂತ ಸ್ವಭಾವವನ್ನು ಬಿಡುವದು ಯಾರಿಗೂ ಸಾಧ್ಯವಲ್ಲ. ತನ್ನ ಸ್ವಭಾವದಿಂದ ಹೊರಗೆ ಹಾರುವದು ಯಾವನಿಗೂ ಶಕ್ಯವಿಲ್ಲ. ಈ ಮಹತ್ವಾಕಾಂಕ್ಷೆಯನ್ನು ಬಿಟ್ಟುಬಿಡಬೇಕೆಂದು ಜನರಿಗೆ ನೀವು ಬೋಧಿಸಲು ಸಾಧ್ಯವೆ? ಅದು ಸಾಧ್ಯವೇ ಇಲ್ಲ.

ಜನರಿಗೆ ಸಾಮಾನ್ಯವಾಗಿ ಮಿತಿಯಿಲ್ಲದ ಆಶೆಯಿರುವದು ಅವರ ಸರ್ವಾತ್ಮತ್ವವನ್ನೂ ಸರ್ವೇಶ್ವರತ್ವವನ್ನೂ ಸೂಚಿಸುತ್ತದೆ.

೨ ಅತ್ಯಾಶೆಯ ಕಾರಣ

(99ರ–ಆಶಾ–ಪಾಶ–ಉರುಲು)

“99ರ ಪಾಶದಲ್ಲಿ ಬೀಳಬೇಡ, 99ರ ಜಾಲದ ಉರುಲಿನಲ್ಲಿ ಸಿಕ್ಕಿಕೊಳ್ಳಬೇಡ” ಎಂದು ತಿಳಿದವರು ಹೇಳುತ್ತಾರೆ. ಇದರ ಅರ್ಥವೇನು ?

ಒಬ್ಬ ಬಡವನು ತನ್ನ ಹೆಂಡತಿಯೊಡನೆ ಒಂದು ಸಣ್ಣ ಗುಡಿಸಿಲಿನಲ್ಲಿ ಸುಖವಾಗಿದ್ದನು ; ಅವನು ಬಹಳ ಸುಖವಾಗಿಯೇ ವಾಸಮಾಡುತ್ತಿದ್ದನು.

ಅವನು ಹಗಲೆಲ್ಲಾ ಬಹಳ ಕಷ್ಟಪಟ್ಟು ಕೆಲಸಮಾಡುತ್ತಿದ್ದನು ; ಆದರೂ ಇಬ್ಬರು ಬದುಕಿರಲು ಮಾತ್ರ ಸಾಕಾಗುವಷ್ಟು ಅತ್ಯಲ್ಪ ಸಂಪಾದನೆ ಆಗುತ್ತಿತ್ತು. ಅವನು ಅಷ್ಟರಲ್ಲಿಯೇ ತೃಪ್ತನಾಗಿದ್ದನು. ಅವನಿಗೆ ಬೇರೆ ಯಾವ ಪ್ರಾಪಂಚಿಕವಾದ ಬಯಕೆಯಾಗಲೀ ಮಹದಾಶೆಯಾಗಲೀ ಇರಲಿಲ್ಲ. ಅವನಲ್ಲಿ ದ್ವೇಷಾಸೂಯೆಗಳೂ ಇರಲಿಲ್ಲ. ಅವನು ಒಳ್ಳೇ ಪ್ರಾಮಾಣಿಕನಾದ ಕೆಲಸಗಾರನಾಗಿದ್ದನು. ಅವನ ನೆರೆಯಲ್ಲಿ ಒಬ್ಬ ದೊಡ್ಡ ಶ್ರೀಮಂತ ಗೃಹಸ್ಥನಿದ್ದನು. ಆದರೆ ಅವನು ಯಾವಾಗಲೂ ಚಿಂತಾತಂಕಗಳಲ್ಲಿಯೇ ಮುಳುಗಿರುತ್ತಿದ್ದನು ; ಅವನೆಂದೂ ಸುಖಿಯಾಗಿರಲಿಲ್ಲ. ಒಮ್ಮೆ ಒಬ್ಬ ವೇದಾಂತಿಗಳಾದ ಸ್ವಾಮಿಗಳು ಆ ಧನಿಕನ ಮನೆಗೂ ಬಡವನ ಮನೆಗೂ ಬಂದರು. ಆ ಧನಿಕನು ಸ್ವಾಮಿಗಳಲ್ಲಿ ತನ್ನ ವ್ಯಥೆಗಳನ್ನೆಲ್ಲಾ ಹೇಳಿಕೊಂಡನು. ಅವನ ಕಳವಳಕ್ಕೂ ಕಾತರತೆಗೂ ಅವನ ಆಸ್ತಿಯೇ ಕಾರಣವೆಂದೂ ಅದು ಅವನನ್ನು ಪಿಶಾಚಿಯ ಹಾಗೆ ಹಿಡಿದುಕೊಂಡು ಚಿಂತೆಯಲ್ಲಿ ಮುಳುಗಿಸಿದೆಯೆಂದೂ ಸ್ವಾಮಿಗಳು ಹೇಳಿದರು. “ನೋಡಪ್ಪ, ನಿನ್ನ ನೆರೆಯ ಗುಡಿಸಿಲಿನಲ್ಲಿರುವ ಬಡವನಿಗೆ ಯಾವ ಆಸ್ತಿಯೂ ಇಲ್ಲದಿದ್ದರೂ ಅವನ ಮುಖದಲ್ಲಿ ಯಾವಾಗಲೂ ಸಂತೋಷದ ಕಳೆಯು ಉಕ್ಕುತ್ತಿರುತ್ತದೆ. ಅವನ ಕೈಕಾಲುಗಳ ಮಾಂಸಖಂಡಗಳು ಎಷ್ಟು ಪುಷ್ಟವಾಗಿ ಬಲಿಷ್ಠವಾಗಿವೆ ! ಅವನ ಅಂಗಾಂಗಗಳು ಎಷ್ಟು ಸುಂದರವೂ ಬಂಧುರವೂ ಆಗಿವೆ ! ಅವನು ಎಷ್ಟು ಸಂತೋಷವಾಗಿಯೂ ಉಲ್ಲಸಿತವಾಗಿಯೂ ವಿನೋದವಾಗಿಯೂ ಇರುತ್ತಾನೆ ! ಅವನು ಯಾವಾಗಲೂ ತನ್ನಷ್ಟಕ್ಕೇ ತಾನು ಆನಂದ ಗೀತೆಯನ್ನು ಗೊಣಗಿಕೊಳ್ಳುತ್ತಿರುತ್ತಾನೆ.” ಎಂದು ಸ್ವಾಮಿಗಳು ಧನಿಕನಿಗೆ ಹೇಳಿದರು. ಅವನು ಆ ಬಡವನ ನಿಶ್ಚಿಂತತೆಯ ಆನಂದವನ್ನು ಎಂದೂ ಅನುಭವಿಸಿರಲಿಲ್ಲ. ಆ ಧನಿಕನು ಬೇರೆ ಜನರು ಬಯಸಿದಂತೆ ತನ್ನ ಸಂಪತ್ತನ್ನು ರೂಪಿಸಿಕೊಂಡಿದ್ದನು. ಸ್ವಾಮಿಗಳು ಆಡಿದ ಮಾತಿನ ಸತ್ಯತೆಯನ್ನು ಕಂಡುಹಿಡಿಯುವದಕ್ಕಾಗಿ ಆ ಶ್ರೀಮಂತನು ಅಪೇಕ್ಷೆಮಾಡಿದನು. ಇದಕ್ಕಾಗಿ, ಸ್ವಾಮಿಗಳ ಗುಪ್ತವಾದ ಸಲಹೆಯಂತೆ ಅವನು ಆ ಬಡವನ ಮನೆಯಲ್ಲಿ 99 ರೂಪಾಯಿಗಳ ಒಂದು ಗಂಟನ್ನು ಒಬ್ಬರಿಗೂ ತಿಳಿಯದಂತೆ ಎಸೆದನು. ಆ ಬಡವನು ಕಷ್ಟದಿಂದ ದುಡಿದ ಅಲ್ಪ ಧನದಿಂದಲೇ ಸಾಮಗ್ರಿಗಳನ್ನು ತಂದು, ನಿತ್ಯವೂ ಅಡಿಗೆ ಮಾಡುತ್ತಿದ್ದ. ಅವನ ಕುಟೀರದಲ್ಲಿ ಮರುದಿನ ಬೆಂಕಿಯನ್ನೇ (ಹೊಗೆಯನ್ನೇ)

ಕಾಣಲಿಲ್ಲ. ಆ ರಾತ್ರಿ ಅವರ ಮನೆಯಲ್ಲಿ ಹೊಗೆಯನ್ನೇ ಹಚ್ಚದೆ, ಅಡಿಗೆ ಮಾಡದೆ ಉಪವಾಸವಿದ್ದರು. ಮರುದಿನ ಸಂಜೆ ಸ್ವಾಮಿಗಳು ಆ ಶ್ರೀಮಂತನನ್ನು ಕರೆದು ಕೊಂಡು ಆ ಬಡವನ ಮನೆಗೆ ಹೋಗಿ, ಅವನ ಮನೆಯಲ್ಲಿ ಹೊಗೆಯನ್ನು ಕಾಣದಿರು ವದಕ್ಕೆ ಕಾರಣವನ್ನು ಕೇಳಿದರು. ಸ್ವಾಮಿಗಳ ಸನ್ನಿಧಿಯಲ್ಲಿ ಆ ಬಡವನು ಬೇರೆ ಕಾರಣವನ್ನು ಹೇಳಿ ತಪ್ಪಿಸಿಕೊಳ್ಳುವದಕ್ಕೆ ಸಾಧ್ಯವಾಗದೆ, ನಿಜವನ್ನು ಹೇಳಬೇಕಾ ಯಿತು ; "ಸ್ವಾಮಿಗಳೆ! ತಮ್ಮ ಎದುರಿಗೆ ಸುಳ್ಳು ಹೇಳಲಾರೆ. ನಿತ್ಯವೂ ಕಷ್ಟ ಪಟ್ಟು ಕೆಲವು ಆಣೆಗಳನ್ನು ದುಡಿದುಕೊಂಡು ಬಂದು, ಅದರಿಂದ ಅವತ್ತಿಗೆ ಬೇಕಾಗುವಷ್ಟು ಹಿಟ್ಟನ್ನೂ ಸೊಪ್ಪನ್ನೂ ಕೊಂಡುಕೊಂಡು ಬಂದು ಬೇಯಿಸಿ ತಿಂದು ಮಲಗುತ್ತಿದ್ದೆವು. ಆದರೆ, ನಿನ್ನೆ ನಮ್ಮ ಮನೆಯಲ್ಲಿ ದೈವವಶಾತ್ ತೊಂಬತ್ತೊಂಬತ್ತು ರೂಪಾಯಿಗಳಿರುವ ಒಂದು ಪೆಟ್ಟಿಗೆ ಸಿಕ್ಕಿತು. ಅದನ್ನು ಕಂಡೊಡನೆ ಅದು ಸಂಪೂರ್ಣವಾಗಿ ನೂರು ರೂಪಾಯಿ ಆಗಲು ಇನ್ನು ಒಂದೇ ರೂಪಾಯಿ ಬೇಕೆಂಬ ಕಲ್ಪನೆಯು ಮನಸ್ಸಿಗೆ ಬಂದಿತು. ಆ ಒಂದು ರೂಪಾಯಿಯನ್ನು ಭರ್ತಿಮಾಡುವದ ಕ್ಕೋಸ್ಕರ ನಾವು ಒಂದು ದಿನ ಉಪವಾಸ ಮಾಡಬಹುದೆಂದೂ ಹಾಗಾದರೆ ಒಂದು ವಾರದಲ್ಲಿ ಒಂದು ರೂಪಾಯಿಯನ್ನು ಉಳಿಸಿ ಆ ತೊಂಬತ್ತೊಂಬತ್ತರ ಭಂಡಾರವನ್ನು ಒಂದು ನೂರಕ್ಕೆ ಭರ್ತಿಮಾಡಬಹುದೆಂದೂ ಯೋಚಿಸಿ ಉಪವಾಸ ಮಾಡುತ್ತಿದ್ದೇವೆ. ಮೊದಲು ಆಯಾ ಹೊತ್ತಿನ ಊಟಮಾಡಿ ನಿಶ್ಚಿಂತೆಯಿಂದ ನಿದ್ದೆ ಮಾಡುತ್ತಿದ್ದೆವು. ಈಗ ಈ ತೊಂಬತ್ತೊಂಬತ್ತರ ಉರುಲಿನಲ್ಲಿ ಸಿಕ್ಕಿ ನರಳುತ್ತಿದ್ದೇವೆ." ಎಂದನು. ಐಶ್ವರ್ಯವಂತರ ಕೃಪಣತನದ ಗುಟ್ಟೇ ಇದು. ಅವರ ಸಂಪಾದನೆಯು ಹೆಚ್ಚಿದಷ್ಟೂ ಇನ್ನೂ ಸಾಲದು, ಇನ್ನೂ ಸಾಲದು ಎಂಬ ಅವರ (ದಾಹದ) ಬಡತನವೂ ಹೆಚ್ಚುತ್ತದೆ. ಅವರಿಗೆ 99 ರೂ. ಬಂದರೆ, ಅದು 100 ರೂ. ಆಗಬೇಕು ; 99,000 ರೂ. ಬಂದರೆ ಅದು 100,000 ರೂ. ಆಗಬೇಕೆಂದು ಅವರು ಬಯಸು ತ್ತಾರೆ. ಬೇಕು, ಬೇಕು ಎನ್ನುವ ಅವರ ಬಯಕೆ ಬೆಳೆಯುವದೇ ಹೊರತು ಅವರಿಗೆ ಸಾಕು ಎನ್ನುವ ತೃಪ್ತಿ ಬರುವದಿಲ್ಲ.

೩. ಆಶೆಗಳು—ಭಾವೀಘಟನೆಗಳ ಮುನ್ಸೂಚನೆ

(ಯುವತಿ ಮತ್ತು ಫೋಟೋ ತೆಗಯುವವ)

ಪ್ರಾರಬ್ಧವಾದ ಮತ್ತು ಪೌರುಷವಾದ ಎಂಬ ಎರಡು ಪಾದಗಳಿವೆ. ಅವನ- ವನ ಹಿಂದಿನ ಕರ್ಮಗಳಿಗೆ ಅನುಗುಣವಾಗಿ ಇಂಥಾ ದೇಶದಲ್ಲಿ, ಇಂಥಾ ಕಾಲದಲ್ಲಿ ಇಂಥಾ ವ್ಯಕ್ತಿಗೆ (ಸುಖವಾಗಲಿ ದುಃಖವಾಗಲಿ) ಇಂಥಾ ಫಲವು ತಪ್ಪದೇ ಆಗಲೇ ಬೇಕೆಂಬುದು ಮೊದಲೇ ಪೂರ್ತಿಯಾಗಿ ನಿಶ್ಚಿತವಾಗಿ ಬಿಟ್ಟಿದೆ; ಆದ್ದರಿಂದ ಇದನ್ನು ಯಾರೂ ಹೇಗೂ ತಪ್ಪಿಸಿಕೊಳ್ಳುವದು ಸಾಧ್ಯವೇ ಇಲ್ಲ. ಅವನವನು ಆಯಾ ಫಲ ಗಳನ್ನು ಅನುಭವಿಸಲೇ ಬೇಕು. ಆದ್ದರಿಂದಲೇ "ಬುದ್ಧಿಃ ಕರ್ಮಾನುಸಾರಿಣೀ"

ಈಗಿನ ನಮ್ಮ ಬುದ್ಧಿಯಲ್ಲಿ ಸಹ ನಮ್ಮ ಹಿಂದಿನ ಮನಸ್ಸು–ಮಾತು–ಕೃತಿಗಳ ಕರ್ಮಕ್ಕೆ ಅನುಸಾರವಾಗಿಯೇ ಆಲೋಚನಾಭಾವನಾದಿಗಳು ಮೂಡುತ್ತಿರುತ್ತವೆ. ನಮಗೆ ಯಾವ ಸ್ವಾತಂತ್ರ್ಯವೂ ಇಲ್ಲ; ಅಥವಾ ನಮಗಿರುವ ಅತ್ಯಂತ ಪರಿಮಿತವಾದ ಸ್ವಾತಂತ್ರ್ಯವೂ ತೋರಿಕೆ ಮಾತ್ರ. ಪ್ರಾರಬ್ಧವು ಸರಿಯಾಗಿ ಬಿಟ್ಟ ಬಾಣದಂತೆ ಗುರಿಯನ್ನು ಮುಟ್ಟಲೇ ಬೇಕು–ಫಲವನ್ನು ಕೊಟ್ಟೇ ತೀರಬೇಕು. ವ್ಯಷ್ಟಿಯ ಕರ್ಮದಂತೆ ಸಮಷ್ಟಿ ವಿಶ್ವದ ಕರ್ಮವೂ ಯುಗಧರ್ಮಾದಿಗಳೂ ಮೊದಲೇ ನಿಶ್ಚಿತವಾಗಿಬಿಟ್ಟಿವೆ. ಅತ್ಯಂತ ಪ್ರಭಾವಯುತವಾದ ಆ ಕಾಲ-ಕರ್ಮಗಳ ಮಹಾಪ್ರವಾಹದಲ್ಲಿ ಕೊಚ್ಚಿಹೋಗುತ್ತಿರುವ ಒಂದೊಂದು ವ್ಯಕ್ತಿಯೂ ಒಂದೊಂದು ಅಸ್ವತಂತ್ರವಾದ ಪಾತ್ರ ಮಾತ್ರ. ಸಂಕ್ಷಿಪ್ತವಾಗಿ, ಇದೇ ಪ್ರಾರಬ್ಧವಾದ ಅಥವಾ ವಿಧಿವಾದ ಅಥವಾ ದೈವವಾದ.

ಈ ದೃಷ್ಟಿಯಿಂದ ನೋಡಿದರೆ, ಈ ವಾದದ ಪ್ರಕಾರ, ನಮ್ಮ ಮನಸ್ಸಿನಲ್ಲಿ ಮೂಡುವ ಬಯಕೆಗಳೆಲ್ಲವೂ ಯಾವಾಗಲೂ ನಮ್ಮ ಪ್ರಯತ್ನದಿಂದಲೇ ಏಳತಕ್ಕವುಗಳಲ್ಲ. ಅದರಲ್ಲಿ ನಮ್ಮ ಉದ್ದೇಶವೂ ಸಾತಂತ್ರ್ಯವೂ ಇಲ್ಲ. ಅವು ಕೇವಲ ಸ್ವಾಭಾವಿಕವಾದುವು; ಅಂದರೆ, ಮುಂದೆ ನಡೆಯಲೇ ಬೇಕಾಗಿರುವ ಘಟನೆಗಳ ನೆರಳುಗಳೇ ಈ ಬಯಕೆಗಳು, ಆಶೆಗಳು. ವ್ಯವಸ್ಥಿತವಾದ ಪ್ರಕೃತಿ ವ್ಯಾಪಾರಗಳ ಸಾಮಾನ್ಯ ನಿಯಮದಂತೆ, ಯಾವದೊಂದು ದೇಶಕಾಲಗಳಲ್ಲಿ ಕೆಲವು ವಿಶಿಷ್ಟ ಘಟನೆಗಳು ನಡೆಯಲೇ ಬೇಕಾಗಿರುತ್ತವೆ. ಅವು ನಮ್ಮ ಮನಸ್ಸಿನಲ್ಲಿ ತಮ್ಮ ನೆರಳನ್ನು ಮುಂಚಿತವಾಗಿಯೇ ಕೆಡವುತ್ತವೆ. ಈ ನೆರಳುಗಳು ಆಶೆಗಳಂತೆ ತೋರಿಕೊಳ್ಳುತ್ತವೆ. ಇದು ಆಶಾದಿಗಳ ಸಂಬಂಧವಾಗಿ ಪ್ರಾರಬ್ಧಾನುಗುಣವಾದ ವಾದ. ಇದಕ್ಕೊಂದು ದೃಷ್ಟಾಂತವಿದೆ.

ಯುವತಿಯೊಬ್ಬಳು ತನ್ನ ಭಾವಚಿತ್ರವನ್ನು ತೆಗೆಸಿಕೊಳ್ಳುವದಕ್ಕಾಗಿ ಉತ್ತಮನಾದ ಫೋಟೋಗ್ರಾಫರನ ಹತ್ತಿರಕ್ಕೆ ಹೋದಳು. ಅವನು ಅತ್ಯಂತ ಸೂಕ್ಷ್ಮ ಸಂವೇದನಾತ್ಮಕವಾದ (Highly Sensitized plate) ಪ್ಲೇಟನ್ನು ಉಪಯೋಗಿಸಿ, ಫೋಟೋ ತೆಗೆದ. ಅವನು ಫೋಟೋ ನೆಗೆಟಿವ್ ಪರೀಕ್ಷಿಸಿದಾಗ, ಆ ಯುವತಿಯ ಮುಖದ ಮೇಲೆ ಸಿಡುಬಿನ ಗುರುತುಗಳ ಸೂಚನೆಯನ್ನು ಕಂಡನು. ಅವನಿಗೆ ಆಶ್ಚರ್ಯವಾಯಿತು. ಇದರ ಅರ್ಥವೇನು ?—ಎಂದು ಯೋಚಿಸಿದನು. ನೋಡುವದಕ್ಕೆ ಆಕೆಯ ಮುಖವೇನೋ ಚೆನ್ನಾಗಿ, ಶುದ್ಧವಾಗಿದ್ದಿತು. ಆದರೆ, ಆ ನೆಗೆಟಿವ್‌ನಲ್ಲಿ ಭಯಂಕರ ರೋಗವಾದ ಸಿಡುಬಿನ ಸ್ಪಷ್ಟವಾದ ಗುರುತುಗಳಿವೆ; ಸಂಶಯವೇ ಇಲ್ಲ. ಆದರೂ ಆಕೆಯ ಮುಖದ ಮೇಲೆ ಆ ಗುರುತುಗಳಿಲ್ಲದ ಉತ್ತಮವಾದ ಫೋಟೋ ತೆಗೆಯಬೇಕೆಂದು, ಮತ್ತೆ ಮತ್ತೆ ಪ್ರಯತ್ನಮಾಡಿದರೂ ಸಾಧ್ಯವಾಗಲಿಲ್ಲ. ಅವನಿಗೆ ಬೇಜಾರಾಯಿತು. ಉತ್ತಮವಾದ ಹವಾಗುಣವಿರುವ ಬೇರೊಂದು ದಿನ ಬಂದರೆ, ಒಳ್ಳೆಯ ಫೋಟೋ ತೆಗೆದುಕೊಡುವದಾಗಿ, ಆಕೆಗೆ ಸಮಾಧಾನಮಾಡಿ ಕಳಿಸಿದನು.

ಆಕೆಯು ಮನೆಗೆ ಹೋಗಿ ಕೆಲವು ಗಂಟೆಗಳ ಮೇಲೆ, ತನ್ನ ಮುಖದ ಮೇಲೆ, ಆಕೆಗೇ ಸಿಡುಬು ಕಾಣಿಸಿಕೊಂಡಿತು. ಇದಕ್ಕೆ ಕಾರಣವೇನೆಂಬುದು ಆಕೆಗೇ ಅನಂತರ ಗೊತ್ತಾಯಿತು. ಆಕೆಯ ಅಕ್ಕನಿಂದ ಆಕೆಗೆ ಅವತ್ತೇ ಒಂದು ಪತ್ರ ಬಂದಿತ್ತು. ಆ ಅಕ್ಕನಿಗೆ ಸಿಡುಬು ಎದ್ದಿದೆಯೆಂದು ಅದರಲ್ಲಿ ಬರೆದಿತ್ತು. ಆ ಪತ್ರವನ್ನು ಆಕೆಯೇ ಬರೆದು, ಅದಕ್ಕೆ ತನ್ನ ತುಟಿಗಳಿಂದ ಎಂಜಲು ಹಚ್ಚಿ ಬೆರಳುಗಳಿಂದ ಮುಚ್ಚಿದ್ದಳು. ಈ ತಂಗಿಯು ಆ ಪತ್ರವನ್ನು ಒಡೆದು ನೋಡಿದ ಕೂಡಲೇ ಈಕೆಗೂ ಆ ರೋಗವು ಅಂಟಿಕೊಂಡಿತು; ಆದರೆ ಸ್ವಲ್ಪ ಕಾಲದ ಮೇಲೆ ತೋರಿಕೊಂಡಿತು. ಪತ್ರವನ್ನು ಓದಿದ ಮರುದಿನ ಆಕೆಗೆ ಕಾಹಿಲೆಯು ಗೊತ್ತಾಗಿ, ಮಲಗುವದಕ್ಕೆ ಮುಂಚೆ ಫೋಟೋ ತೆಗೆಸಿಕೊಳ್ಳಲು ಹೋಗಿದ್ದಳು. ಆದರೆ, ಆಗ ಆಕೆಗೆ ಗೊತ್ತಿಲ್ಲ ದಿದ್ದರೂ ಕಾಹಿಲೆಯು ಶುರುವಾಗಿ, ಚರ್ಮದಲ್ಲಿ ಸೂಕ್ಷ್ಮವಾಗಿ ತೋರಿಕೊಳ್ಳುತ್ತಿದ್ದ, ಬರಿ ಕಣ್ಣಿಗೆ ಕಾಣದಿದ್ದ-ಸಿಡುಬನ್ನು ಫೋಟೋ ತೆಗೆಯುವವನು ಉಪಯೋಗಿಸಿದ್ದ ಅತ್ಯಂತ ಸೂಕ್ಷ್ಮವಾದ ರಾಸಾಯನಿಕ ವಸ್ತುಗಳು ಹಿಡಿದು ತೋರಿಸಿಕೊಟ್ಟವು.

ಮುಖದ ಮೇಲೆ ಸ್ಪಷ್ಟವಾಗಿ ತೋರಿಕೊಳ್ಳದಿದ್ದರೂ ಫೋಟೋ ಕ್ಯಾಮರಾದಲ್ಲಿ ಕಂಡ ಸಿಡುಬಿನಂತೆಯೇ ಆಶೆಗಳ ವಿಷಯವೂ ಇದೆ. ಆಶೆ ತೋರಿತೆಂದರೆ ಮುಂದೆ ಅದು ಫಲವಾಗಬೇಕೆಂಬ ಯೋಗವು ಮೊದಲೇ ಇತ್ತೆಂಬುದಕ್ಕೆ ಖಾತರಿಯಾದ ಪ್ರಮಾಣ.

೪. ಬಯಕೆಗಳು ಸಫಲಗೊಳ್ಳುವ ಗುಟ್ಟು

(ಉದ್ದವಾದ ಓಲೆ)

ಒಬ್ಬ ಮನುಷ್ಯನು ತನ್ನ ಮಿತ್ರನಿಗಾಗಿ ಪತ್ರ ಬರೆಯುತ್ತಿದ್ದನು. ಆ ಮಿತ್ರ ನನ್ನು ನೋಡಬೇಕೆಂದು ಅವನು ಬಹಳ ಕಾಲದಿಂದ ಹಂಬಲಿಸುತ್ತಿದ್ದನು. ಅವರಿಬ್ಬರೂ ದೂರವಾಗಿ ಬಹಳ ದಿನಗಳಾಗಿತ್ತು. ಅವನು ಬಹಳ ಉದ್ದವಾದ ಓಲೆಯನ್ನು, ಪುಟಗಳ ಮೇಲೆ ಪುಟಗಳನ್ನು ಬೆಳೆಸುತ್ತಾ ಬರೆಯುತ್ತಿದ್ದನು. ಅವನು ನಡುವೆ ಒಂದು ನಿಮಿಷವೂ ಅತ್ತಿತ್ತ ನೋಡದಂತೆ ಆ ಬರೆವಣಿಗೆಯಲ್ಲಿ ಮಗ್ನನಾಗಿ ದ್ದನು. ತಲೆಯನ್ನೆತ್ತದಂತೆ ಮುಕ್ಕಾಲು ಗಂಟೆಯ ಕಾಲ ಅವನು ಆ ಪತ್ರವನ್ನು ಬರೆದನು. ಅವನಾ ಪತ್ರವನ್ನು ಮುಗಿಸಿ ಸಹಿಯನ್ನು ಹಾಕಿ ತಲೆಯೆತ್ತಿದಾಗ, ಎಲೆಲಾ ! ಅವನಾ ಸ್ನೇಹಿತನು ಬಂದು ಎದುರಿಗೇ ನಿಂತಿದ್ದನು. ಅವನು ಆಶ್ಚರ್ಯಾ ನಂದದಿಂದ ಹಾರಿ ಹೋಗಿ, ಆ ಸ್ನೇಹಿತನನ್ನು ಆಲಿಂಗನ ಮಾಡಿಕೊಂಡನು. "ಇದೇ ನಯ್ಯ ! ಇಲ್ಲೇ ಇದ್ದೀಯ, ಯಾವಾಗ ಬಂದೆ ?" ಎಂದು ಕೇಳಿದನು. ಸ್ನೇಹಿತನು, "ಓ ! ಅರ್ಧ ಗಂಟೆಯ ಮೇಲಾಯಿತು, ಇಲ್ಲೇ ನಿಂತಿದ್ದೇನೆ." ಎಂದು ಹೇಳಿದನು. "ಅಷ್ಟು ಹೊತ್ತಿನಿಂದ ಇಲ್ಲೇ ನಿಂತಿದ್ದರೆ, ಏಕಯ್ಯ ಹೇಳಲಿಲ್ಲ ?" ಎಂದವನು ಕೇಳಿದನು. ಇದಕ್ಕೆ ಆ ಮಿತ್ರನು, "ನೀನು ಏನೋ ಕಾರ್ಯದಲ್ಲಿ ಪೂರಾ ಮುಳುಗಿ

ಹೋಗಿದ್ದೆ ; ಆದ್ದರಿಂದ ನಾನದನ್ನು ಕೆಡಿಸಲು ಇಷ್ಟ ಪಡಲಿಲ್ಲ." ಎಂದು ಹೇಳಿದನು. ಆಶೆಗಳ ಮತ್ತು ಫಲಗಳ ವಿಚಾರವೂ ಹೀಗೇ ಇದೆ.

ಆ ಪತ್ರವನ್ನು ಬರೆದಂತೆ, ನಿಮ್ಮ ಬಯಕೆಗಳು. ನಿಮ್ಮ ಇಷ್ಟ ವಿಷಯವನ್ನು ಬಯಸುತ್ತಾ ಹಂಬಲಿಸುತ್ತಾ ಇಚ್ಛಿಸುತ್ತಾ ಅದಕ್ಕಾಗಿ ಚಡಪಡಿಸುತ್ತಾ ಇರುವದು ಪತ್ರವನ್ನು ಬರೆಯುತ್ತಲೇ ಇರುವಂತೆ. ನಿಮ್ಮ ಇಷ್ಟ ಮಿತ್ರನು ಬಂದು ನಿಮ್ಮೆದುರಿನಲ್ಲಿಯೇ ನಿಂತಿರುವಂತೆ, ರಹಸ್ಯವಾದ ಕರ್ಮ ನಿಯಮದ ಪ್ರಕಾರ ನಿಮ್ಮ ಇಷ್ಟ ಫಲ ನಿಮ್ಮೆದುರಿಗೆ ಸಿದ್ಧವಾಗಿಯೇ ಬಿಟ್ಟಿದೆ. ನೀವು ಬರೆಯುತ್ತಲೇ ಇದ್ದೀರಿ, ಬಯಸುತ್ತಲೇ ಇದ್ದೀರಿ, ಆದ್ದರಿಂದ ಅದನ್ನು ನೋಡಿಲ್ಲ. ನೀವು ಬರೆಯುವದನ್ನು, ಬಯಸುವದನ್ನು ಬಿಟ್ಟಕೂಡಲೇ, ನಿಮ್ಮ ಇಷ್ಟ ವಸ್ತುಗಳನ್ನು ಎದುರಿನಲ್ಲಿಯೇ ಕಾಣುತ್ತೀರಿ. ಇದಕ್ಕೋಸ್ಕರವೇ ಬೆಲೆಯನ್ನು ಕೊಡುವದು ಅತ್ಯವಶ್ಯವಾಗುತ್ತದೆ.

೫. ಯಾಚನೆಯ ಫಲ ಮತ್ತು ಅದನ್ನು ಮೀರಿದ ಪ್ರಭಾವ
(ಮಹಾ ಪ್ರಧಾನಿ ಮತ್ತು ಲಕ್ಷ್ಮಿ)

ಒಬ್ಬ ಮಹಾರಾಜನ ಮಹಾ ಪ್ರಧಾನಿಯು ರಾಷ್ಟ್ರ ನಿರ್ಮಾಣದ ಮಹಾ ಕಾರ್ಯಕ್ಕಾಗಿ ಅವಶ್ಯವಿದ್ದ ಅಪಾರವಾದ ಐಶ್ವರ್ಯವನ್ನು ಸಂಪಾದಿಸಲು ಐಶ್ವರ್ಯಕ್ಕೆ ಅಧಿದೇವತೆಯಾದ ಭಾಗ್ಯಲಕ್ಷ್ಮಿಯನ್ನು ಕುರಿತು, ಉಗ್ರವಾದ ತಪಸ್ಸನ್ನು ಮಾಡಿದನು. ಅವನು ಎಷ್ಟೇ ದೀರ್ಘಕಾಲ ಶಾಸ್ತ್ರೀಯವಾದ ತಪಸ್ಸನ್ನು ಮಾಡಿದರೂ ಲಕ್ಷ್ಮಿಯು ಪ್ರತ್ಯಕ್ಷಳಾಗಲೇ ಇಲ್ಲ. ಎಷ್ಟೇ ಶ್ರಮಪಟ್ಟರೂ ತನ್ನ ಉದ್ದೇಶವು ಸಫಲವಾಗಲಿಲ್ಲವೆಂದು ಅವನು ಪೂರ್ಣ ನಿರಾಶನಾದನು, ಅವನು ಜುಗುಪ್ಸೆಯಿಂದ ವೈರಾಗ್ಯ ಹೊಂದಿ, ಸಂನ್ಯಾಸ ತೆಗೆದುಕೊಂಡು ಅರಣ್ಯಕ್ಕೆ ಹೋದನು. ಅರಮನೆಯನ್ನು ಬಿಟ್ಟು, ಎಲ್ಲವನ್ನೂ ತ್ಯಾಗಮಾಡಿ, ಸಂನ್ಯಾಸ ತೆಗೆದುಕೊಂಡು ಆ ವಿದ್ಯಾರಣ್ಯ ಮುನಿಯು ಅರಣ್ಯಕ್ಕೆ ಹೋದ ಕೂಡಲೇ, ಲಕ್ಷ್ಮೀದೇವಿಯು ಪ್ರತ್ಯಕ್ಷಳಾದಳು. ಆಗ ಆ ಮುನಿಯು ತಿರಸ್ಕಾರ ಕೋಪಗಳಿಂದ, "ದೇವಿ! ಹೊರಟುಹೋಗು; ನಿನಗಾಗಿ ಹಗಲಿರುಳೂ ಹಂಬಲಿಸಿ, ಘೋರವಾಗಿ ತಪಸ್ಸು ಮಾಡಿದಾಗ ನೀನು ಒಲಿಲಿಲ್ಲ; ಆಗ ನಿನ್ನ ಅವಶ್ಯಕತೆಯಿತ್ತು. ಆದರೆ, ಈಗ ನಾನು ಸಂನ್ಯಾಸಿ. ನನಗೆ ಯಾವ ಪ್ರಾಪಂಚಿಕ ಭೋಗ ಭಾಗ್ಯಗಳೂ ಬೇಕಿಲ್ಲ. ಈಗ ನೀನು ಬೇಡವಾದಾಗ, ಬಂದು ಕಾಡುತ್ತೀಯೆ; ತೊಲಗು, ನಿನ್ನ ಹಂಗೇನೂ ನನಗೆ ಬೇಕಿಲ್ಲ." ಎಂದನು. ಅದಕ್ಕೆ ಆ ಮಹಾಲಕ್ಷ್ಮಿಯು ಹೇಳಿದ್ದೇನೆಂದರೆ, "ನಾನೇನು ಮಾಡಲಿ? ನೀನೇ ನನ್ನ ದಾರಿಯಲ್ಲಿ ಅಡ್ಡವಾಗಿ ನಿಂತಿದ್ದೆ. ನೀನು ಬಯಸಿ ಬೇಡುತ್ತಿದ್ದವರೆಗೂ ನಿನ್ನನ್ನು ನೀನು ಭಿಕ್ಷುಕನನ್ನಾಗಿ ಮಾಡಿಕೊಂಡಿದ್ದೆ; ದ್ವೈತಿಯಾಗಿದ್ದೆ. ಭಿಕ್ಷುಕನ ಆಸ್ತಿ ಭಿಕ್ಷಾಪಾತ್ರೆಯೇ ಹೊರತು, ಭಾಗ್ಯದ ಭಂಡಾರವಲ್ಲ. ನೀನು ಐಶ್ವರ್ಯವನ್ನೆಲ್ಲಾ ತಿರಸ್ಕಾರಮಾಡಿ, ಬಯಕೆಗಳನ್ನೆಲ್ಲಾ ತುಳಿದು, ಮೇಲೇರಿದ ಕ್ಷಣವೇ ದೇವರಾದೆ, ಮಹಾವಿಷ್ಣು–ನಾರಾಯಣನಾದೆ ;

ಆದ್ದರಿಂದ ಈ ಮಹಾಲಕ್ಷ್ಮಿಯನ್ನು ನಿನ್ನ ಪಕ್ಕದಲ್ಲಿಯೇ ಕಂಡೆ, ಆಕೆ ಬೇರೆಯಲ್ಲ; ದೂರದಿಂದ ಬರಬೇಕಾಗಿಲ್ಲ. ನೀನು ಬೇಡವೆಂದರೂ ಆಕೆ ನಿನ್ನನ್ನು ಬಿಟ್ಟು ಹೋಗಲರಿಯಳು. ಎಲ್ಲಾ ಶಕ್ತಿ-ಮಹಿಮಾವೈಭವಗಳೂ ನಿನ್ನವೇ ಆಗಿವೆ!"

ಸಫಲತೆಯ ಗುಟ್ಟೇ ಇದು.

ಸರ್ವಜ್ಞವೂ ಸರ್ವಗತವೂ ಸರ್ವಾತ್ಮವೂ ಆದ ಬ್ರಹ್ಮವಾಗಿ (ತೈ. ಉ.)

"ಸೋಽಶ್ನುತೇ ಸರ್ವಾನ್ ಕಾಮಾನ್ ಸಹ! ಬ್ರಹ್ಮಣಾ ವಿಪಶ್ಚಿತೇತಿ ॥೧॥"

ಕಾಮಗಳನ್ನೆಲ್ಲಾ ಒಮ್ಮೆಗೇ ಪಡೆದುಕೊಳ್ಳುತ್ತೇವೆ.

ಆದರೆ, ನಿಜವಾದ ನಮ್ಮ ಬ್ರಹ್ಮಸ್ವರೂಪವನ್ನು ಮರೆತು, ನಾವು ಅಲ್ಪರಾದ ಜೀವರೆಂದು ಭಾವಿಸಿ, ಬಯಸಿ, ದೈನ್ಯದಿಂದ ಬೇಡುವದಕ್ಕೆ ತೊಡಗಿದ ಕೂಡಲೇ, ಭಾಗ್ಯಲಕ್ಷ್ಮಿಯು ಹಾಸ್ಯಮಾಡಿ ಹಿಮ್ಮೆಟ್ಟುತ್ತಾಳೆ.

೬. ಮನಸ್ಸಿನ ನಿರ್ಮೂಲೀಕರಣ

(ಕಾಳಿಂದಿ ಮಡುವಿನಲ್ಲಿದ್ದ ಕಾಳಿಯ ಸರ್ಪನ ಹೆಡೆಗಳ ಮೇಲೆ ಕಾಳಿಂಗಮರ್ದನ ಕೃಷ್ಣನ ಪ್ರಳಯ ನರ್ತನ)

ಭಾಗವತ ಪುರಾಣದಲ್ಲಿ ಒಂದು ಸೊಗಸಾದ ಕತೆಯಿಂದೆ, ಶ್ರೀಕೃಷ್ಣನು ಯಮುನಾ ನದಿಯ ಒಂದು ಮಡುವಿನಲ್ಲಿ ಹಾರಿಕೊಂಡ ವಿಷಯವನ್ನು ಅದು ಹೇಳುತ್ತದೆ. ಅವನು ಒಂದು ದಿನ ಯಮುನಾ ನದಿಯ ಕಾಳಿಂದಿ ಮಡುವಿನಲ್ಲಿ ಹಾರಿಕೊಳ್ಳುತ್ತಾನೆ. ಅವನ ತಂದೆ, ತಾಯಿ, ಬಂಧುಗಳೂ ಮಿತ್ರರೂ ಸಹ ಅಲ್ಲಿಯೇ ಸುತ್ತಲೂ ನಿಂತಿರುತ್ತಾರೆ. ಅವರೆಲ್ಲರೂ ನೋಡುತ್ತಿರುವಂತೆಯೇ ಆ ಭಯಂಕರ ಮಡುವಿನಲ್ಲಿ ಕೃಷ್ಣನು ಹಾರಿ ಬಿಡುತ್ತಾನೆ. ಅವರು ಭಯವಿಸ್ಮಯಗಳಿಂದ ಮೂಕರೂ ಸ್ತಬ್ಧರೂ ಆಗುತ್ತಾರೆ; ಕೃಷ್ಣನು ನದಿಯಲ್ಲಿ ಮುಳುಗಿಹೋಗಿಯೇ ಬಿಟ್ಟನೆಂದೂ ಮತ್ತೆಂದೂ ಏಳುವದಿಲ್ಲ ವೆಂದೂ ನಿರಾಶರಾಗುತ್ತಾರೆ. ಅವನು ನದಿಯ ತಳದಲ್ಲಿ ಮುಳುಗಿದನು. ಅಲ್ಲಿ, ಸಹಸ್ರಶಿರಗಳುಳ್ಳ ಕಾಳಿಯ ಎಂಬ ಘೋರಸರ್ಪ ಒಂದಿತ್ತು. ಅದರಿಂದ ಆ ಮಡು ವಿನ ನೀರೆಲ್ಲಾ ವಿಷಮಯವಾಗಿದೆ ಎಂದು ಜನರ ಭಾವನೆಯಿತ್ತು. ಹರಿಯದೆ ನಿಂತಿದ್ದ ಆಳವಾದ ಆ ಹಚ್ಚನೆಯ ಹಸುರು ನೀರಿನಿಂದ ದುರ್ವಾಸನೆಯು ಬರುತ್ತಿದ್ದುದರಿಂದ ಜನರು ಅದನ್ನು ಭಯ ಜಿಗುಪ್ಸೆಗಳಿಂದ ಬಿಟ್ಟಿದ್ದರು, ಆದರೂ ಈ ನೀರಿನ ಅಪಾಯ ವನ್ನು ತಿಳಿಯದೆ, ನೀರಡಿಕೆಯ ಆತುರದಿಂದ, ಈ ನೀರನ್ನು ಅಕಸ್ಮಾತ್ ಕುಡಿದರೆ, ಅಂಥಾ ದನಗಳೂ ಜನಗಳೂ ಸಾಯುತ್ತಿದ್ದರು.

ಕೃಷ್ಣನು ಆ ಆಳವಾದ ಮಡುವಿನಲ್ಲಿ ಮುಳುಗಿ ಮುಳುಗಿ ಮೇಲೆದ್ದು ತನ್ನ ಕೊಳ-ಲನ್ನು ಬಾರಿಸಿ, ಓಂಕಾರವನ್ನು ಗಾನಮಾಡುವದಕ್ಕೆ ತೊಡಗಿದನು. ಅವನು ಆ ಕಾಳಿಂಗ ಸರ್ಪದ ತಲೆಗಳ ಮೇಲೆ ಕುಣಿದಾಡುತ್ತಾ ಒಂದೊಂದೇ ತಲೆಗಳನ್ನು ತುಳಿ

ತುಳಿದು ಜಜ್ಜಿ ಹಾಕುತ್ತಿದ್ದನು. ಒಂದೊಂದು ತಲೆಯನ್ನೇ ಅವನು ಧ್ವಂಸಮಾಡು ವದರೊಳಗೆ ಮತ್ತೆ ಹೊಸ ಹೊಸ ತಲೆಗಳು ಹುಟ್ಟಿಕೊಳ್ಳುತ್ತಿದ್ದವು. ಕೃಷ್ಣನು ತನ್ನ ಮುರಳಿಯನ್ನು ಬಾರಿಸುತ್ತಾ ಓಂಕಾರನಾದ ದೊಡನೆ ಆ ಸರ್ಪದ ಹೆಡೆಗಳ ಮೇಲೆ ಕುಣಿಯುತ್ತಾ ತುಳಿದಾಡುತ್ತಿದ್ದನು. ಅರ್ಧಗಂಟೆಯಲ್ಲಿ ಆ ಸರ್ಪವನ್ನು ಕೊಂದನು. ಓಂಕಾರ ಮಂತ್ರೋಚ್ಚಾರಣೆಯಿಂದಲೂ ಅವನ ತುಳಿದಾಟದಿಂದಲೂ ಆ ಮಹಾ ಸರ್ಪವು ಸಂಹಾರವಾಗಿದ್ದಿತು. ಸರ್ಪದ ರಕ್ತವು ನದಿಯ ನೀರನ್ನೆಲ್ಲಾ ರಕ್ತಮಯವಾಗಿ ಮಾಡಿದ್ದಿತು. ಕೃಷ್ಣನ ಮಧುರ ಸಾನ್ನಿಧ್ಯದ ಅಮೃತ ರಸವನ್ನು ಪಾನಮಾಡುವದ ಕ್ಕಾಗಿಯೂ ಅವನಿಗೆ ಪೂಜೆ ಸಲ್ಲಿಸುವದಕ್ಕಾಗಿಯೂ ಆ ಸರ್ಪನ ಪತ್ನಿಯರೆಲ್ಲಾ ಬಂದರು. ಕೃಷ್ಣನು ನದಿಯಿಂದ ಹೊರಗೆ ಬಂದನು. ಆತ್ಮಂತ ಪ್ರಿಯನಾದ ಕೃಷ್ಣನು ಬದುಕಿ ಬಂದುದನ್ನು ಕಂಡ ಬಂಧು ಮಿತ್ರರ ಆನಂದಕ್ಕೆ ಪಾರವೇ ಇರಲಿಲ್ಲ.

ಈ ಕಥೆಗೆ ದ್ವಂದ್ವಾರ್ಥಗಳಿವೆ. ತಮ್ಮೊಳಗಿರುವ ಸತ್ಯವನ್ನು ಕಾಣಲು ಬಯಸು ವವರಿಗೆ ಇದೊಂದು ನೀತಿಪಾಠವೂ ತತ್ತ್ವೋಪದೇಶವೂ ಆಗಿದೆ,

ಆ ನದಿ ಅಥವಾ ಸರೋವರವು ಮಾನಸಸರೋವರವೇ ಆಗಿದೆ. ಭಗವಾನ್ ಕೃಷ್ಣನಾಗಬೇಕೆಂದು ಯಾರು ಬಯಸುತ್ತಾರೋ, ಕಳೆದುಕೊಂಡಿರುವ ಸ್ವರ್ಗಸಾಮ್ರಾಜ್ಯ ವನ್ನು, ಆತ್ಮಸಾಮ್ರಾಜ್ಯವನ್ನು, ಆನಂದಸಾಮ್ರಾಜ್ಯವನ್ನು ಪುನಃ ಸಂಪಾದಿಸಬೇಕೆಂದು ಯಾರು ಹಂಬಲಿಸುತ್ತಾರೋ ಅವರು ತಮ್ಮ ಮನಸ್ಸಿನ ಸರೋವರದಲ್ಲಿಯೇ ತಮ್ಮ ಒಳಗೇ ಆಳವಾಗಿ ಮುಳುಗಬೇಕು ; ಅವರು ತಮ್ಮ ಸ್ವಭಾವದೊಳಗೇ ಆಳವಾಗಿ ಧುಮುಕಿ, ತಳವನ್ನು ಸೇರಿ ಕಾಮ-ಮೋಹಗಳೆಂಬ ವಿಷಸರ್ಪವನ್ನು ಮಂತ್ರಜಪದಿಂದ ಮರುಳುಮಾಡಿ, ಅದರ ಸಹಸ್ರ ಸಹಸ್ರ ಹೆಡೆಗಳನ್ನು ತುಳಿದು ತುಳಿದು ನಾಶಮಾಡ ಬೇಕು. ಈ ರೀತಿಯಿಂದ ಅವರು, ತಮ್ಮ ಮನಸ್ಸೆಂಬ ಸರೋವರವನ್ನು ನಿರ್ಮಲ ವಾಗಿ ಮಾಡಿಕೊಳ್ಳಬೇಕು. ಸಾಧನ ಕ್ರಮವು ಕೃಷ್ಣನು ಅನುಸರಿಸಿದ ಕ್ರಮವೇ ಆಗಿದೆ. ಅವರೂ ಕೃಷ್ಣನಂತೆಯೇ ವೇಣುವಾದನದ ಮೂಲಕ ದಿವ್ಯವಾದ ಓಂಕಾರ ಗಾನ ಮಾಡಬೇಕು.

ಈ ಕೊಳಲೆಂದರೆ ಯಾವದು ? ಇದು ಸುಮ್ಮನೆ ಸಾಧಕನಿಗೇ ಸಂಕೇತ. ಭಾರತದೇಶದ ಕವಿಗಳು ಇದಕ್ಕೆ ಬಹಳ ಮಹತ್ತ್ವವನ್ನು ಕೊಟ್ಟಿದ್ದಾರೆ. ಅಷ್ಟೊಂದು ಗೌರವದ ಸ್ಥಾನಕ್ಕೆ ಏರುವುದಕ್ಕೆ ಆ ಕೊಳಲು ಎಷ್ಟು ಪುಣ್ಯ ಮಾಡಿರಬಹುದು ! ವಿಶಾಲ ಭಾರತದಲ್ಲಿ ಮಹಾ ಮಹಾ ಚಕ್ರವರ್ತಿ ಸಾರ್ವಭೌಮರುಗಳಿಗೂ ಸಹಸ್ರಾರು ಸುಂದರ ಸ್ತ್ರೀಯರಿಗೂ ಪ್ರೀತಿ ಪಾತ್ರನೂ ಪೂಜ್ಯನೂ ಆಗಿದ್ದರೂ ರಾಜಾಧಿರಾಜರನ್ನು ಕರುಣೆಯಿಂದ ಕಣ್ಣೆತ್ತಿಯೂ ನೋಡದಿದ್ದ ಕೃಷ್ಣನು ಆ ಮುರಳಿಯನ್ನು ಮುತ್ತಿಟ್ಟನೇಕೆ? ಆ ಮುರಳಿಯ ಉತ್ತರವೇನೆಂದರೆ, "ನನ್ನಲ್ಲಿ ಒಂದು ಸದ್ಗುಣವಿದೆ ; ನನ್ನಲ್ಲಿರುವ ವಸ್ತುವನ್ನೆಲ್ಲಾ ಕಳೆದುಕೊಂಡು ಖಾಲಿಯಾಗಿದ್ದೇನೆ ; ಪೂರಾ ಪೊಳ್ಳಾಗಿದ್ದೇನೆ ; ನಾನು ನಿರ್ವಸ್ತು, ನಿರ್ವಿಷಯವಾಗಿದ್ದೇನೆ."

ಕೊಳಲು ಒಳಗೆಲ್ಲಾ ಪೊಳ್ಳಾಗಿದೆ. "ನನ್ನಲ್ಲಿರುವ ಅನಾತ್ಮವನ್ನೆಲ್ಲಾ ಖಾಲಿಮಾಡಿದ್ದೇನೆ." ಎನ್ನುತ್ತದೆ ಕೊಳಲು. ಹಾಗೆಯೇ, ಕೊಳಲನ್ನು ತುಟಿಗೆ ಹಚ್ಚುವದೆಂದರೆ, ಹೃದಯವನ್ನು ಪರಿಶುದ್ಧಗೊಳಿಸುವುದು, ಮನಸ್ಸನ್ನು ದೇವರ ಕಡೆಗೆ ತಿರುಗಿಸುವುದು. ಭಗವಂತನ ಚರಣಾರವಿಂದದಲ್ಲಿ ಶರಣಾಗತರಾಗಿ ಸರ್ವವನ್ನೂ ಸಮರ್ಪಣ ಮಾಡುವದು. ಸದ್ಯಃ ದೇಹವು ನಾನೆನ್ನುವ ಅಭಿಮಾನವನ್ನೂ ಸ್ವಾರ್ಥವನ್ನೂ ಸ್ವಾರ್ಥ ಸಂಬಂಧಗಳನ್ನೂ ನನ್ನದು ನಿನ್ನದು ಎಂಬ ಭಾವನೆಗಳನ್ನೂ ನಿಮ್ಮ ಹೃದಯಾಂತರಾಳದಿಂದ ಪರಿತ್ಯಾಗಮಾಡಿ, ಅವುಗಳನ್ನು ಮೆಟ್ಟಿ ಮೇಲೇರಿರಿ. ಪರಮ ಪ್ರೇಮಾಸ್ಪದಳಾದ ತರುಣಿಯನ್ನು ಮೆಚ್ಚಿಸುವುದಕ್ಕೂ ಒಲಿಸಿಕೊಳ್ಳುವುದಕ್ಕೂ ಪುರುಷನು ಮಾಡಬಹುದಾದ ಪ್ರೇಮದ ಪ್ರಯತ್ನಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ದೇವರನ್ನು ಪ್ರೀತಿಸುವ ಮನೋಭಾವವೇ ಕೃಷ್ಣನು ಕೊಳಲನ್ನು ನುಡಿಸುವ ಭಾಷೆ. ಪ್ರಾಪಂಚಿಕ ಜನರು ಬಹುಕಾಲದಿಂದ ಬಯಸುವ ಒಂದು ವಸ್ತುವಿಗಾಗಿ ಹಸಿದು ಬಾಯಾರಿದಂತೆ, ಸತ್ಯದರ್ಶನಕ್ಕಾಗಿಯೂ ದೈವೀ ಸ್ಫೂರ್ತಿಗಾಗಿಯೂ ಪರಮ ಸತ್ಯವಾದ ಆತ್ಮನ ಆನಂದಾಮೃತವನ್ನು ಸವಿಯುವದಕ್ಕಾಗಿಯೂ ತೀವ್ರವಾಗಿ ಹಸಿದು ಬಾಯಾರಿ, ಕಾತರಿಸಿ, ಹಂಬಲಿಸಿ ಹಲುಬುವ ಮನೋಭಾವವೇ ಕೃಷ್ಣನ ವೇಣುವಾದನದ ವೇದನ, ನಿವೇದನ. ಇಂಥಾ ಮನೋಭಾವದಲ್ಲಿ, ಹೃದಯದ ಶಾಂತಿಯಲ್ಲಿ ಇಂಥಾ ಪರಿಶುದ್ಧ ಮನಸ್ಸಿನಿಂದ ಓಂ ಎಂಬ ಮಂತ್ರವನ್ನು ಉಚ್ಚರಿಸುವದಕ್ಕೆ ತೊಡಗಿರಿ, ಪವಿತ್ರವಾದ ಓಂ ಮಂತ್ರವನ್ನು ಗಾನಮಾಡಿರಿ. ಇದೇ ನಿಜವಾದ ಮುರಳೀ ಗಾನ. ನಿಮ್ಮ ಇಡೀ ಜೀವನವನ್ನೇ ಕೊಳಲನ್ನಾಗಿ ಮಾಡಿರಿ, ನಿಮ್ಮ ಇಡೀ ದೇಹವನ್ನೇ ಕೊಳಲನ್ನಾಗಿ ಮಾಡಿರಿ. ಅದರಲ್ಲಿರುವ ಸ್ವಾರ್ಥವನ್ನೆಲ್ಲಾ ಖಾಲಿ ಮಾಡಿ ದೈವೀ ಶ್ವಾಸದಿಂದ ಅದನ್ನು ತುಂಬಿರಿ.

ಓಂಕಾರವನ್ನು ಉಚ್ಚರಿಸುತ್ತಾ ನಿಮ್ಮ ಮಾನಸ ಸರೋವರದಲ್ಲಿ ಅನೇಕ ಜಿಹ್ವೆಗಳುಳ್ಳ ಆ ವಿಷ ಸರ್ಪಕ್ಕಾಗಿ ಶೋಧಿಸಿರಿ. ಅನಂತವಾದ ಆಶೆಗಳೂ ಪ್ರಾಪಂಚಿಕ ಒಲವುಗಳೂ ಸ್ವಾರ್ಥ ಪ್ರವೃತ್ತಿಗಳೂ ಇವೇ ಆ ವಿಷಸರ್ಪದ ಸಹಸ್ರ ಸಹಸ್ರ ಹೆಡೆಗಳು ನಾಲಿಗೆಗಳು, ವಿಷದಂತಗಳು. ಅವುಗಳಲ್ಲಿ ಒಂದೊಂದನ್ನೇ ತುಳಿಯಿರಿ, ಸದೆಬಡಿಯಿರಿ, ಜಜ್ಜಿ ಹಾಕಿರಿ. ಒಂದೊಂದನ್ನೇ ಬಿಡಿಸಿ, ಬಿಡಿಸಿ ಮೆಟ್ಟಿ ಮೇಲೇರಿ, ಓಂಕಾರವನ್ನು ಉಚ್ಚಾರ ಮಾಡುತ್ತಾ ಗಾನಮಾಡುತ್ತಾ ಪ್ರಾಪಂಚಿಕ ವಾಸನೆಗಳನ್ನು ಧ್ವಂಸಮಾಡಿರಿ.

ಒಳ್ಳೆಯ ಗುಣ-ಸ್ವಭಾವ, ನಡೆ-ನುಡಿಗಳನ್ನು ಬೆಳೆಸಿಕೊಳ್ಳಿರಿ, ನಿಮ್ಮ ಮನಸ್ಸಿನ ನದಿಯಿಂದ ಅಥವಾ ಸರೋವರದಿಂದ ಹೊರಬಂದಾಗ ಅದರ ನೀರು (ವೃತ್ತಿಗಳು) ವಿಷವಾಗದಿರುವಂತೆ ಅಚಲವಾದ ನಿರ್ಧಾರಗಳನ್ನೂ ದೃಢ ಸಂಕಲ್ಪಗಳನ್ನೂ ಗಂಭೀರವಾದ ಪ್ರತಿಜ್ಞೆಗಳನ್ನೂ ಕೈಗೊಳ್ಳಿರಿ. ಆ ನೀರನ್ನು ಸೇವಿಸಿದವರಿಗೂ ಅದು ವಿಷವಾಗಬಾರದು. ಆ ಸರೋವರವನ್ನು ಸಂಪೂರ್ಣಪರಿಶುದ್ಧಗೊಳಿಸಿ ಹೊರೆ

ಬನ್ನಿರಿ. ಜನರ ಭಾವನೆಯೂ ಅಭಿಪ್ರಾಯವೂ ನಿಮ್ಮಿಂದ ಬೇರೆಯಾಗಬಹುದು. ನಿಮಗೆ ಅವರು ಬಗೆ ಬಗೆಯಿಂದ ಕಷ್ಟ ಕೊಡಬಹುದು. ನಿಮ್ಮನ್ನು ದೂಷಿಸಬಹುದು. ಆದರೆ, ಜನರ ಆಗ್ರಹಗಳೂ ಅನುಗ್ರಹಗಳೂ ಭಯ ಪ್ರದರ್ಶನಗಳೂ ಭರವಸೆಗಳೂ ಏನೇ ಇರಲಿ, ನಿಮ್ಮ ಮಾನಸ ಸರೋವರದಿಂದ ಪರಮ ಪರಿಶುದ್ಧವೂ ನವ-ನವೀನವೂ ದಿವ್ಯವೂ ಆದ ಭಾವನೆಗಳೂ ವಿಚಾರಗಳೂ ಹರಿದು ಬರಬೇಕೇ ಹೊರತು, ಬೇರೆ ಬರಬಾರದು. ನಿಮ್ಮ ಒಳಗಿಂದ ಅಮೃತವೇ ಹರಿದು ಬರಬೇಕು. ನೀರು ಕುಡಿಯಬಂದವರಿಗೆ ವಿಷ ಕುಡಿಸುವುದು, ಪವಿತ್ರವಾದ ಹೊಸ ಚಿಲುಮೆಗೆ ಎಷ್ಟು ಅಸಾಧ್ಯವೋ ಇನ್ನೊಬ್ಬರಿಗೆ ಕೆಡುಕನ್ನು ಆಲೋಚಿಸುವದೂ ನಿಮಗೆ ಅಷ್ಟು ಅಸಾಧ್ಯ ವಾಗಬೇಕು. ಹೃದಯವನ್ನು ಶುದ್ಧಿ ಮಾಡಿಕೊಳ್ಳಿ, ಓಂಕಾರವನ್ನು ಗಾನಮಾಡಿ. ದುರ್ಬಲವಾದ ಅಂಶಗಳನ್ನೆಲ್ಲಾ ಹುಡುಕಿ ತೆಗೆದು ಅವನ್ನು ನಿರ್ಮೂಲಮಾಡಿ. ಸುಂದರವಾದ ಶೀಲವನ್ನು ರೂಪಿಸಿಕೊಂಡು ಜಯಶಾಲಿಗಳಾಗಿ.

ಕೃಷ್ಣನು ಆ ಮಹಾಸರ್ಪವನ್ನು ಕೊಂದಮೇಲೆ, ನದಿಯೊಳಗಿನ ಆದರ ಪತ್ನಿಯರು ಬಂದು ಕೃಷ್ಣನಿಗೆ ಪೂಜೆ ಸಲ್ಲಿಸಿದಂತೆ, ಮೋಹ ಮಹಾ ಸರ್ಪವನ್ನು ನಾಶಮಾಡಿದ ಕೂಡಲೇ ನೀವು ಬಯಸಿದ ವಿಷಯಗಳೆಲ್ಲಾ ತಾವಾಗಿಯೇ ಬಂದು ನಿಮಗೆ ಪೂಜೆ ಸಲ್ಲಿಸುತ್ತಿರುವುದನ್ನು ಕಾಣುತ್ತೀರಿ.

ವಿವೇಕದಿಂದಲೂ ಓಂಕಾರ ಗಾನದಿಂದಲೂ ಕಾಮ-ಮೋಹಗಳನ್ನು ಕಳೆದು, ಮನಸ್ಸನ್ನು ಶುದ್ಧಿಗೊಳಿಸಬೇಕು. ತಿಳಿಯಾದ ಮನಸ್ಸಿನಲ್ಲಿ ಒಳಗಿನ ನಿಜಾನಂದವೇ ಬೆಳಗುತ್ತದೆ. ಆತ್ಮನ ಆನಂದ ಸ್ವರೂಪವನ್ನು ಮುಸುಕಿಕೊಂಡಿರುವ ಮೋಹದ ಕ್ಷಯವೇ (ಮೋಹಕ್ಷಯವೇ) ಮೋಕ್ಷ.

೭. ಅಹಂಭಾವವಿಲ್ಲದ ಸ್ವಾಭಾವಿಕ ರೀತಿಯ ಲೋಕಕಲ್ಯಾಣ

(ಪವಿತ್ರವಾದ ನೆರಳು)

ಬಹಳ ಕಾಲದ ಹಿಂದೆ ಬಹಳ ಒಳ್ಳೆಯವನಾದ ಒಬ್ಬ ಮಹಾತ್ಮನಿದ್ದನು. ಇದನ್ನು ತಿಳಿದು ಆಶ್ಚರ್ಯಚಕಿತರಾದ ದೇವತೆಗಳು, ಒಬ್ಬ ಸಾಮಾನ್ಯ ಮರ್ತ್ಯನು ಇಷ್ಟು ದೈವೀ ಸಂಪತ್ತುಳ್ಳವನಾಗಿರುವದು ಹೇಗೆ ಸಾಧ್ಯವೋ ನೋಡಬೇಕೆಂದು ಸ್ವರ್ಗದಿಂದ ಇಳಿದು ಬಂದರು. ನಕ್ಷತ್ರವು ಬೆಳಕನ್ನೂ ಹೂವು ಪರಿಮಳವನ್ನೂ ಅರಿವಿಲ್ಲದೆ ಚೆಲ್ಲುತ್ತಿರುವಂತೆ, ಅವನು ತನ್ನ ನಿತ್ಯ ಜೀವನದಲ್ಲಿ ಸದ್ಗುಣಗಳನ್ನೂ ಸತ್ಕಾರ್ಯಗಳನ್ನೂ ಸ್ವಾಭಾವಿಕವಾಗಿ ಪ್ರಸರಿಸುತ್ತಾ ಹೋಗುತ್ತಿದ್ದನು.

"He gave, he forgave" "ಅವನು ನೀಡಿದನು, ಕ್ಷಮೆಯನ್ನೂ ನೀಡಿದನು" "ಅವನು ದಾನಮಾಡಿದನು, ಕ್ಷಮಾದಾನವನ್ನೂ ಮಾಡಿದನು." ಈ ಎರಡು ಶಬ್ದಗಳು ಅವನ ನಿತ್ಯ ಜೀವನ ಧರ್ಮವನ್ನು ಸಾರಭೂತವಾಗಿ ಸಂಗ್ರಹಿಸುವಂತಿದ್ದವು.

ಆದರೂ ಎಂದೂ ಯಾವ ಶಬ್ದಗಳೂ ಅವನ ಬಾಯಿಯಿಂದ ಹೊರಬೀಳುತ್ತಿರಲಿಲ್ಲ. ಆದರೆ, ಯಾವಾಗಲೂ ಸಿದ್ಧವಾಗಿರುತ್ತಿದ್ದ ನಗೆ, ದಯೆ, ಸಹನೆ ಮತ್ತು ದಾನ ಇವುಗಳ ಮೂಲಕ ಆ ಶಬ್ದಾರ್ಥವು ವ್ಯಕ್ತವಾಗುತ್ತಿದ್ದಿತು.

ದೇವತೆಗಳು ದೇವರಿಗೆ ಹೇಳಿದರು : "ಓ ಪ್ರಭುವೇ ! ಇವನಿಗೆ ಸಿದ್ಧಿಗಳನ್ನು ಅನುಗ್ರಹಿಸು."

ದೇವರು ಹೇಳಿದರು, "ಆಗಲಿ, ಅವನಿಗೇನು ಬೇಕು ಕೇಳಿ"

ಅವರು ಆ ಮಹಾತ್ಮನನ್ನು ಕೇಳಿದರು, "ಸಂತನೆ ! ನಿನ್ನ ಹಸ್ತ ಸ್ಪರ್ಶದಿಂದ ಯಾವ ರೋಗವಾದರೂ ಗುಣವಾಗಬೇಕೆಂದು ನೀನು ಇಚ್ಛಿಸುವೆಯ ?"

ಮಹಾತ್ಮ : ಇಲ್ಲ ; ಆ ಕಾರ್ಯವನ್ನು ದಯವಿಟ್ಟು ದೇವರೇ ಮಾಡಬೇಕೆಂದು ಬೇಡುವೆನು.

ದೇವತೆಗಳು : ಪಾಪಿಗಳ ಹೃದಯವನ್ನು ಪರಿವರ್ತನೆಮಾಡಿ, ಅವರನ್ನು ಸರಿಯಾದ ದಾರಿಯಲ್ಲಿ ನಡೆಸಬೇಕೆಂದು ಬಯಸುವೆಯ ?

ಮಹಾತ್ಮ : ಇಲ್ಲ, ಅದು ದೇವತೆಗಳ ಕರ್ತವ್ಯವು, ನಾನು ಸುಮ್ಮನೆ ಪ್ರಾರ್ಥಿಸುವೆನು ; ಪರಿವರ್ತನೆಮಾಡುವುದಿಲ್ಲ

ದೇವತೆಗಳು : ನಿನ್ನ ಸದ್ಗುಣಗಳ ಪ್ರಭೆಯಿಂದ ಜನರನ್ನು ಆಕರ್ಷಿಸಿ ಸಮಾಧಾನದ ಒಂದು ಆದರ್ಶವಾಗಬೇಕೆಂದೂ ಇದರಿಂದ ದೇವರ ಮಹಿಮೆಯನ್ನು ತೋರಿಸಬೇಕೆಂದೂ ನಿನಗೆ ಇಷ್ಟವಿದೆಯೆ ?

ಮಹಾತ್ಮ : ಇಲ್ಲ ; ನನ್ನಲ್ಲಿಗೆ ಜನರನ್ನು ಆಕರ್ಷಿಸಿದರೆ, ಅವರು ದೇವರಿಂದ ದೂರವಾಗುತ್ತಾರೆ; ಪರಕೀಯರಾಗುತ್ತಾರೆ. ತನ್ನ ಮಹಿಮೆಯನ್ನು ತೋರಿಸುವುದಕ್ಕೆ ದೇವರಿಗೆ ಅನಂತ ಮಾರ್ಗಗಳಿವೆ.

ದೇವತೆಗಳು : ಹಾಗಾದರೆ, ನಿನ್ನ ಇಚ್ಛೆಯೇನು ?

ಮಹಾತ್ಮ : ನಾನು ಏನನ್ನು ಬಯಸಬೇಕು ? (ಎಂದು ನಗುತ್ತಾ ಕೇಳಿದನು.) ದೇವರ ಅನುಗ್ರಹ ಒಂದಿದ್ದರೆ, ಅದರಿಂದ ಎಲ್ಲವೂ ಪ್ರಾಪ್ತಿಯಾಗಬೇಕಲ್ಲವೆ ?

ದೇವತೆಗಳು : ನೀನು ಯಾವುದಾದರೂ ಒಂದು ಸಿದ್ಧಿಯನ್ನು ಕೇಳಲೇ ಬೇಕು. ಇಲ್ಲವಾದರೆ ಯಾವದಾದರೊಂದು ಸಿದ್ಧಿಯನ್ನು ನಿನ್ನ ಮೇಲೆ ಒತ್ತಾಯದಿಂದ ನೀಡುತ್ತೇವೆ, ಹೇರುತ್ತೇವೆ.

ಮಹಾತ್ಮ : ಒಳ್ಳೆಯದು, ನಾನೆಂದೂ ಅರಿಯದಂತೆ, ಎಂದೆಂದಿಗೂ ನನ್ನಿಂದ ಮಹತ್ತಾದ ಒಳ್ಳೆಯದೇ ನಡೆಯುತ್ತಿರಬೇಕು.

ಅವನೀ ವಿಚಿತ್ರವಾದ ಪ್ರಾರ್ಥನೆಯಿಂದ ದೇವತೆಗಳಿಗೆ ಬಹಳ ದಿಗ್ಭ್ರಮೆಯಾಯಿತು. ಆದರೆ, ಅವರೆಲ್ಲರೂ ಕೂಡಿ ಆಲೋಚನೆಮಾಡಿ, ಈ ಮುಂದಿನ ಯೋಜನೆಯನ್ನು ನಿಶ್ಚಯಿಸಿದರು ;

ಪ್ರತಿಯೊಂದು ಸಲವೂ ಆ ಮಹಾತ್ಮನ ನೆರಳು ಹಿಂದೆ ಬಿದ್ದರೂ ಯಾವ ಪಕ್ಕದಲ್ಲಿ ಬಿದ್ದರೂ ಅವನಿಗೆ ಕಾಣಬಾರದು. ಆದರೆ, ಅದು ಯಾರ ಮೇಲೆ ಬಿದ್ದರೂ ಅವರ ರೋಗವನ್ನು ಗುಣಪಡಿಸಬೇಕು, ನೋವನ್ನು ಕಳೆಯಬೇಕು ; ದುಃಖವನ್ನು ಶಮನಮಾಡಬೇಕು, ಈ ಶಕ್ತಿ ಅವನ ನೆರಳಿನಲ್ಲಿರಬೇಕು. ಇದೇ ಆ ದೇವತೆಗಳ ಯೋಜನೆಯಾಯಿತು.

ಅದು ಹಾಗೆಯೇ ಆಯಿತು. ಆ ಮಹಾತ್ಮನು ಹೋಗುತ್ತಿರುವಾಗ ಅವನ ಎಡಕ್ಕೋ ಬಲಕ್ಕೋ ಅಥವ ಹಿಂದಕ್ಕೋ ನೆಲದ ಮೇಲೆ ಬಿದ್ದ ಅವನ ನೆರಳು ಒಣಗಿದ ಬೆಂಗಾಡು ದಾರಿಗಳನ್ನು ಹಚ್ಚ ಹಸುರಾಗಿಯೂ ಸೊರಗಿ ಸುರಟಿಹೋದ ಗಿಡಗಳನ್ನು ಕಳೆತುಂಬಿ ಕುಸುಮಿಂತವಾಗಿ ನಳನಳಿಸುವಂತೆಯೂ ಬತ್ತಿ ಹೋಗಿದ್ದ ಹೊಳೆಗಳಲ್ಲಿ ನಿರ್ಮಲ ಜಲವು ಹರಿಯುವಂತೆಯೂ ಬಿಳಿಚಿಕೊಂಡ ಪುಟ್ಟ ಮಕ್ಕಳು, ಹೊಸ ಕಾಂತಿಯಿಂದ ಕಳೆಗಟ್ಟಿ ನಲಿಯುವಂತೆಯೂ ದುಃಖಿತರಾಗಿದ್ದ ತಾಯಿಯರು ಸಂತೋಷದಿಂದ ಉಲ್ಲಸಿತರಾಗುವಂತೆಯೂ ಮಾಡಿತು.

ಆದರೆ, ಆ ಮಹಾತ್ಮನು, ನಕ್ಷತ್ರವು ಬೆಳಕು ಚೆಲ್ಲುವಂತೆಯೂ ಹೂವು ಸುಗಂಧ ಬೀರುವಂತೆಯೂ ಸದ್ಗುಣ ಸಚ್ಚೀಲಗಳ ಪುಣ್ಯಪ್ರಭೆಯನ್ನು ಪ್ರಸರಿಸುತ್ತಾ ಸ್ವಾಭಾವಿಕವಾಗಿ, ತನ್ನ ನಿತ್ಯ ಜೀವನದಲ್ಲಿ ತೊಡಗಿದ್ದನು.

ಜನರು ಅವನ ಸೌಜನ್ಯವನ್ನು ಗೌರವಿಸಿ, ಅವನ ಸಿದ್ಧಿಯ-ಪವಾಡಗಳ-ವಿಷಯವನ್ನೇನೂ ಅವನೊಡನೆ ಮಾತಾಡದೆ, ಅವನನ್ನು ಮೌನವಾಗಿ ಅನುಸರಿಸುತ್ತಿದ್ದರು. ಕಾಲಾನುಕ್ರಮದಲ್ಲಿ ಜನರು ಅವನ ಹೆಸರನ್ನು ಸಹ ಮರೆತು, ಅವನನ್ನು "ಪವಿತ್ರವಾದ ನೆರಳು" ಎಂದೇ ಕರೆಯುತ್ತಿದ್ದರು.

ಪುಷ್ಪಗಳಿಂದ ಪರಿಮಳವೂ ಚಂದ್ರತಾರೆಗಳಿಂದ ಹೊಂಬೆಳಕೂ ಸ್ವಾಭಾವಿಕವಾಗಿ ಹೊರಸೂಸಿ, ಲೋಕವು ತಣಿಯುವಂತೆ, ಯಾವ ಬಯಕೆಯೂ ಅಹಂಭಾವವೂ ಇಲ್ಲದ ವಿಶ್ವಪ್ರೇಮಿಯಾದ ಭಗವದ್ಭಕ್ತನಿಂದ ಲೋಕಹಿತ ಕಾರ್ಯಗಳು ಸಹಜವಾಗಿಯೂ ಸಂತತವಾಗಿಯೂ ನಡೆಯುತ್ತಿರುತ್ತವೆ.

ನಿಜವಾದ ಬಡತನ

(ರಾಜ—ಅತ್ಯಂತ ದರಿದ್ರ)

ಒಬ್ಬ ಸಂನ್ಯಾಸಿಯ ಹತ್ತಿರ ಇದ್ದ ಕೆಲವು ತಾಮ್ರದ ನಾಣ್ಯಗಳನ್ನು ಕೆಲವು ಹುಡುಗರಿಗೆ ಅವರು ಕೊಟ್ಟು ಬಿಡುವದರಲ್ಲಿದ್ದರು. ಅವನ್ನು ಪಡೆಯುವದಕ್ಕಾಗಿ ಹಲವರು ಬಡವರು ಅವರಲ್ಲಿಗೆ ಬಂದರು. ಆದರೆ, ಆ ಯತಿಯು ಅವರಿಗೆ ಕೊಡಲೊಪ್ಪಲಿಲ್ಲ. ಕೊನೆಗೆ, ಆನೆಯ ಮೇಲೆ ಕುಳಿತಿದ್ದ ಒಬ್ಬ ರಾಜನು ಸಮೀಪದ ರಸ್ತೆಯಲ್ಲಿ ಬಿಜಯುಮಾಡುತ್ತಿದ್ದನು. ಆ ಸ್ವಾಮಿಗಳು ಅವನನ್ನು ಕಂಡು, ತಮ್ಮ ಕೈಯಲ್ಲಿದ್ದ ತಾಮ್ರದ ನಾಣ್ಯಗಳನ್ನು ರಾಜನು ಕುಳಿತಿದ್ದ ಆನೆಯ ಮೇಲಿನ

ಅಂಬಾರಿಯೊಳಗೆ ಏಸೆದರು. ಸ್ವಾಮಿಗಳ ಈ ಅನಿರೀಕ್ಷಿತವಾದ ಕಾರ್ಯದಿಂದ ರಾಜನೂ ಜನರೂ ಆಶ್ಚರ್ಯಪಟ್ಟರು. ರಾಜನು ಅತ್ಯಂತ ದರಿದ್ರ ಮನುಷ್ಯ ನಾದುದರಿಂದಲೇ ಅವನಿಗಾಗಿ ತಾವು ಹಣವನ್ನು ಕೊಟ್ಟಿರುವದಾಗಿ ಸ್ವಾಮಿಗಳು ಹೇಳಿದರು. ತಾನು ಹೇಗೆ ಅತ್ಯಂತ ದರಿದ್ರನಾಗಲು ಸಾಧ್ಯವೆಂದು ರಾಜನು ಕೇಳಿದನು. ರಾಜ್ಯವೂ ಐಶ್ವರ್ಯವೂ ಎಷ್ಟಿದ್ದರೂ ಸಾಲದೆಂದೂ ಹೆಚ್ಚು ಹೆಚ್ಚಾಗಿ ಬೇಕೆಂದೂ ಅತೃಪ್ತಿಯೂ ಅತ್ಯಾಶೆಯೂ ರಾಜನಿಗಿರುವದರಿಂದ, ಅವನು ಎಲ್ಲರಿ ಗಿಂತಲೂ ಹೆಚ್ಚು ಬಡವನೆಂದು ಆ ಯತಿಗಳು ಹೇಳಿದರು. ಆದ್ದರಿಂದ ರಾಜನು ಅತ್ಯಂತ ದರಿದ್ರನೆಂದು ಸಿದ್ಧವಾಗುತ್ತದೆ.

ಸ ತು ಭವತಿ ದರಿದ್ರೋ ಯಸ್ಯ ತೃಷ್ಣಾ ವಿಶಾಲಾ ।
ಮನಸಿ ಚ ಪರಿತುಷ್ಟೇ ಕೋರ್ಥವಾನ್ ಕೋ ದರಿದ್ರಃ ॥

ಅತ್ಯಾಶೆಯನ್ನು ಬೆಳೆಸಿಕೊಂಡವನೇ ದರಿದ್ರ; ಸದಾ ಸಂತುಷ್ಟವಾದ ಮನ ಸ್ಸುಳ್ಳವನೇ ಶ್ರೀಮಂತ. ಸುಖಕ್ಕೆ ಮನಸ್ಸೇ ಕಾರಣವಾಗಿರುವದರಿಂದ, ಕೇವಲ ಲೌಕಿಕ ದೃಷ್ಟಿಯಿಂದ ಒಬ್ಬನನ್ನು ಧನಿಕ ಅಥವಾ ದರಿದ್ರ ಎನ್ನುವದು ಹೇಗೆ ಸರಿಯಾದೀತು ?

೯ ಕರ್ಮಫಲ ನಿಯಮ

(ಕುರುಡನೆಂದು ನಟಿಸಿದ ಕವಿ)

ಜಾಣನೂ ಒಳ್ಳೆಯವನೂ ಆದ ಮಹಮ್ಮದೀಯ ಕವಿಯೊಬ್ಬನಿದ್ದನು. ಅವನು ಚತುರನೂ ಬಹಳ ತಮಾಷೆಯ ಮನುಷ್ಯನೂ ಆಗಿದ್ದನು. ಅವನಲ್ಲಿ ಅತಿಶಯ ಆದರವುಳ್ಳ ಒಬ್ಬ ದೇಶೀಯ ರಾಜನ ಆಸ್ಥಾನದಲ್ಲಿ ಆತನಿದ್ದನು. ಒಂದು ರಾತ್ರಿ ಅವನನ್ನು ಆ ರಾಜನು ತನ್ನ ಸಹವಾಸದಲ್ಲಿ ಬಹಳ ಹೊತ್ತು ಇಟ್ಟು ಕೊಂಡಿದ್ದನು. ಈ ಕವಿಯು ರಾಜನನ್ನು ಅನೇಕ ವಿಧವಾದ ಶ್ಲೋಕಗಳಿಂದಲೂ ಜಾಣತನದ ಕತೆಗಳಿಂದಲೂ ಸ್ವಾರಸ್ಯವಾದ ಉಪಕತೆಗಳಿಂದಲೂ ವಿನೋದಪಡಿಸು ತ್ತಿದ್ದನು. ಆ ರಾತ್ರಿ ರಾಜನು ಮಲಗುವದಕ್ಕೆ ಬಹಳ ಹೊತ್ತಿನ ಮೇಲೆ ಹೋದನು, ಮತ್ತು ಆ ಕವಿಯ ಚತುರೋಕ್ತಿಗಳನ್ನು ನೆನೆಸಿಕೊಳ್ಳುತ್ತಾ ನಿದ್ರೆಯನ್ನೇ ಮರೆತನು. ಅವನು ಅಪೂರ್ವವಾಗಿ, ಆ ರಾತ್ರಿ ಅಷ್ಟು ತಡವಾಗಿ ಶಯ್ಯಾಗೃಹಕ್ಕೆ ಬರುವದಕ್ಕೆ ಕಾರಣವೇನೆಂದು ರಾಣಿಯು ಕೇಳಿದಳು. ರಾಜನು, "ಓ! ಇಷ್ಟು ಹೊತ್ತೂ ನಮ್ಮೊಡನೆ ಬಹಳ ಆಶ್ಚರ್ಯದ ಮನುಷ್ಯನೊಬ್ಬನಿದ್ದನು. ಅವನು ಬಹಳ ಒಳ್ಳೆ ಯವನು, ಬಹಳ ಜಾಣ, ಸೊಗಸಾದ ತಮಾಷೆಯ ಮನುಷ್ಯ." ಎಂದನು. ಆಗ ರಾಣಿಯು ಕುತೂಹಲದಿಂದ; ಅವನ ವಿಷಯವನ್ನು ಹೆಚ್ಚಾಗಿ ತಿಳಿದುಕೊಳ್ಳುವುದ ಕ್ಕಾಗಿ ವಿವರವಾಗಿ ಪ್ರಸ್ತಾಪಮಾಡಿದಳು. ಆಕೆಯ ವಿಶೇಷ ಆಸಕ್ತಿಯಿಂದ ರಾಜನು ಪ್ರೋತ್ಸಾಹಗೊಂಡು, ಆ ಕವಿಯ ವಿದ್ವತ್ತು, ಸರಸೋಕ್ತಿಗಳು, ಶಕ್ತಿ-

ಸಾಮರ್ಥ್ಯಗಳು, ಮೊದಲಾದವುಗಳನ್ನು ಬೆಳೆಸಿ, ಬೆಳಗಿನವರೆಗೂ ದೀರ್ಘವಾದ ಉಪನ್ಯಾಸವನ್ನೇ ಮಾಡಿದನು. ಅವರು ಮಲಗುವಾಗ ಮುಂಜಾನೆಯಾಗಿತ್ತು. ರಾಜನ ವರ್ಣನೆಯಿಂದ ರಾಣಿಯ ಕುತೂಹಲವು ಅತ್ಯಂತ ತೀವ್ರವಾಗಿ ಕೆರಳಿದ್ದರಿಂದ, ಅಂಥಾ ಚತುರ ಕವಿಯನ್ನು ಎಂದಾದರೊಂದು ದಿನ ತನ್ನಲ್ಲಿಗೆ ಕರೆತರಬೇಕೆಂದು ರಾಣಿಯು ಮರುದಿನ ಪ್ರಾರ್ಥಿಸಿದಳು. ಆ ದಿನವೇ ರಾಜನು ಆ ಕುಶಲ ಕವಿಯನ್ನು ತನ್ನ ರಾಣೀವಾಸಕ್ಕೆ ಕರೆತಂದನು. ಇಂಡಿಯಾ ದೇಶದಲ್ಲಿರುವ ಪದ್ಧತಿಗಳು ಈ ಪಾಶ್ಚಾತ್ತ್ಯ ದೇಶದ ಪದ್ಧತಿಗಳಿಗಿಂತ ತೀರ ಬೇರೆಯಾಗಿವೆ. ಅಲ್ಲಿ ಹೆಂಗಸರು ಮನೆಗಳಲ್ಲಿ ಪ್ರತ್ಯೇಕ ಕೋಣೆಗಳಲ್ಲಿ ವಾಸಮಾಡುತ್ತಾರೆ. ಅವರು ಗಂಡಸರ ಜೊತೆಗೆ, ಅದೂ ಹೊರಗಿನ ದೊಡ್ಡ ಮನುಷ್ಯರ ಜೊತೆಗೆ ಹೆಚ್ಚು ಸೇರುವದಿಲ್ಲ. ಅವರು ಬೇರೆಯೇ ವಾಸಮಾಡುತ್ತಿರುತ್ತಾರೆ. ವಿಶೇಷವಾಗಿ ಮುಸಲ್ಮಾನ ಮಹಿಳೆಯರು— ಹಿಂದೂ ಸ್ತ್ರೀಯರು ಹೀಗಲ್ಲ–ದಟ್ಟವಾದ ಮುಸುಕುಗಳನ್ನು ಹಾಕಿಕೊಂಡಿರುತ್ತಾರೆ. ತಮ್ಮ ಗಂಡಂದಿರ ಅಥವಾ ಬಹಳ ಪರಿಶುದ್ಧರೂ ಉತ್ತಮ ಶೀಲವಂತರೂ ಹೊರತ್ಯ ಧರ್ಮಾತ್ಮರೂ ಆದ ಸಜ್ಜನರ ಹೊರತು, ಬೇರೆ ಯಾವ ಪುರುಷರೂ ತಮ್ಮನ್ನು ನೋಡುವದಕ್ಕೆ ಅವರು ಬಿಡುವುದಿಲ್ಲ. ಒಳ್ಳೆಯದು. ರಾಜನು ಆ ಕವಿಯನ್ನು ತನ್ನ ಅಂತಃಪುರಕ್ಕೆ ಕರೆದುಕೊಂಡು ಬಂದನು. ಆಗ ಆ ಕವಿಯು ತನ್ನ ರಸವತ್ತಾದ ಪದ್ಯಗಳನ್ನು ಹಾಡಿ, ಚಮತ್ಕಾರದ ಕಥೆಗಳನ್ನು ಹೇಳಿ, ಸರಸವಾಗಿ ಮಾತನಾಡಿದನು. ಇದರಿಂದ ರಾಣಿಯೂ ಅಂತಃಪುರದ ಸ್ತ್ರೀಯರೂ ಬಹಳವಾಗಿ ಮೆಚ್ಚಿಕೊಂಡು ಸಂತೋಷಪಟ್ಟರು. ಅವರೆಲ್ಲಾ ಕವಿಯ ರಸಿಕತೆಯನ್ನೂ ವಿನೋದವನ್ನೂ ಬಹಳವಾಗಿ ಶ್ಲಾಘಿಸಿದರು. ಆದರೆ, ಈ ಕವಿಯು ತನಗೆ ಕಣ್ಣಿದ್ದರೂ ಯಾವುದೋ ರೋಗದಿಂದ ತನಗೇನೂ ಕಾಣುವದಿಲ್ಲವೆಂದು ಮೊದಲಿನಿಂದಲೂ ನಟಿಸುತ್ತಿದ್ದನು. ರಾಜನ ಜನಾನಾದಲ್ಲಿ ಅಲ್ಲಿಯ ಅಂತಃಪುರ ಸ್ತ್ರೀಯರನ್ನೂ ರಾಣಿಯನ್ನೂ ತನ್ನ ತಮಾಷೆಗಳಿಂದ ವಿನೋದಗೊಳಿಸುತ್ತಾ ನಗಿಸುತ್ತಾ ಇರುವದಕ್ಕೆ ತನಗೆ ಅವಕಾಶವಾಗಬೇಕೆಂದೂ ತಾನು ಕುರುಡನೆಂದು ವೇಷ ಹಾಕಿದರೆ ಯಾರೂ ತನ್ನಲ್ಲಿ ಅವಿಶ್ವಾಸ ಮಾಡದೆ, ನಂಬುವರೆಂದೂ ಅಲ್ಲಿಯ ಸುಂದರಿಯರು ತನ್ನೆದುರಿಗೆ ಓಡಾಡುವಾಗಲೂ ಮಾತನಾಡುವಾಗಲೂ ಬುರಕೆಯಿಲ್ಲದೆ ಸ್ವಚ್ಛಂದವಾಗಿರುವರೆಂದೂ ಯೋಚಿಸಿ, ಆ ಕವಿಯು ದುರುದ್ದೇಶದಿಂದ ಹಾಗೆ ನಟಿಸುತ್ತಿದ್ದನು. ರಾಜನೂ ಹೆಚ್ಚು ಪರೀಕ್ಷಿಸದೆ, ಅವನನ್ನು ನಂಬಿ ಅಂತಃಪುರದಲ್ಲಿ ಬೇಕಾದಾಗ ಅನಿರ್ಬಂಧಿತವಾಗಿ ಹೋಗಿ ಬರಲು ಅವಕಾಶ ಮಾಡಿಕೊಟ್ಟಿದ್ದನು. ಆದರೆ ಸತ್ಯವನ್ನು ಹೆಚ್ಚು ಕಾಲ ಮುಚ್ಚಿಡಲು ಯಾರಿಗೂ ಸಾಧ್ಯವಾಗುವದಿಲ್ಲ.

Truth crushed to earth, shall rise again,
The eternal years of God are hers,

ಸತ್ಯವನು ಸದೆಬಡಿದು ತುಳಿದಿಡಲು ಭೂಮಿಯಲಿ,
ಮತ್ತೆ ಪುಟಿದೇಳುವದದುವೆ ಬಿಡದೆ, ಶತಬಲದಲಿ.

ಸತ್ಯವನ್ನು ಎಷ್ಟೇ ರಹಸ್ಯವಾಗಿಡಲಿ, ಅದು ಎಂದಾದರೊಂದು ದಿನ ಹೊರ ಬಿದ್ದೇ ಬೀಳುವದು. ಅದರಂತೆ, ಒಂದು ದಿನ ಆ ಕವಿಯು ಅಂತಃಪುರದಲ್ಲಿದ್ದ ಒಬ್ಬ ಪರಿಚಾರಿಕೆಯನ್ನು ಕರೆದು ದೂರದಲ್ಲಿದ್ದ ಒಂದು ವಸ್ತುವನ್ನು ತಂದು ಕೊಡಲು ಹೇಳಿದನು. ಇಂಡಿಯಾ ದೇಶದಲ್ಲಿ ಜನರು ಸ್ವಲ್ಪ ಶ್ರೀಮಂತರಾದಕೂಡಲೇ ಸೋಮಾರಿಗಳಾಗಿ ದರ್ಬಾರು ನಡೆಸಲು ತೊಡಗುತ್ತಾರೆ. ಏಕೆಂದರೆ, ಸೋಮಾರಿತನವೇ ಶ್ರೀಮಂತಿಕೆಯ ಲಕ್ಷಣವೆಂದು ತಿಳಿಯುತ್ತಾರೆ. ನೀವೇ ಸ್ವತಂತ್ರವಾಗಿ ಯಾವ ಕೆಲಸವನ್ನೂ ಮಾಡದೆ, ನಿಮ್ಮ ಊಟ, ಉಡಿಗೆಗಳಲ್ಲಿಯೂ ನಡೆದಾಟದಲ್ಲಿಯೂ ಪ್ರವಾಸದಲ್ಲಿಯೂ ಯಾರಾದರೂ ಇನ್ನೊಬ್ಬರು ನಿಮಗೆ ಸಹಾಯವನ್ನೂ ಸೇವೆಯನ್ನೂ ಮಾಡುತ್ತಲೇ ಇದ್ದರೆ, ನಿಮ್ಮನ್ನು ಬಹಳ ದೊಡ್ಡ ಮನುಷ್ಯರೆಂದೂ ಗೌರವಸ್ಥರೆಂದೂ ನೀವೇ ಭಾವಿಸಿಕೊಳ್ಳುತ್ತೀರಿ. ಹೀಗೆ ನಿರಂತರ ಪರಾಧೀನತೆಯೇ ಗೌರವದ ಮುಖ್ಯ ಲಕ್ಷಣವೆಂದು ಭ್ರಮೆಗೊಳ್ಳುತ್ತೀರಿ. ಸ್ವಾತಂತ್ರ್ಯವನ್ನೂ ಸ್ವಯಂಪ್ರಭುತ್ವವನ್ನೂ ಪರಾವಲಂಬನೆಯೆಂದೂ ದಾಸ್ಯವೆಂದೂ ವಿಪರೀತ (ತಿರುವುಮುರು) ವಾಗಿ ತಿಳಿಯುತ್ತೀರಿ. ಆದ್ದರಿಂದ, ರಾಜನ ಅರಮನೆಯಲ್ಲಿ ಒಂದು ಗೌರವದ ಸ್ಥಾನವನ್ನು ಪಡೆದಿದ್ದ ಆ ಕವಿಯೂ ತನಗೆ ಬೇಕಾಗಿದ್ದ ಒಂದು ಸಾಮಾನನ್ನು ತಂದುಕೊಳ್ಳುವದಕ್ಕೆ ತನ್ನ ಸ್ಥಾನವನ್ನು ಬಿಟ್ಟೇಳುವುದೇ ಅಗೌರವವೆಂದು ಭಾವಿಸಿದನು. ಇದರಿಂದ ಅವನು ತನ್ನ ಕೆಲಸವನ್ನು ಮಾಡಲು ಒಬ್ಬ ಪರಿಚಾರಿಕೆಗೆ ಆಜ್ಞೆ ಮಾಡಿದನು. ಆದರೆ ಅವಳು ತನಗೆ ಬಿಡುವಿಲ್ಲವೆಂದು ಒರಟಾಗಿಯೂ ನಿರ್ದಾಕ್ಷಿಣ್ಯವಾಗಿಯೂ ಉತ್ತರಕೊಟ್ಟಳು. ಅನಂತರ ಅಲ್ಲಿಗೆ ಬಂದ ಇನ್ನೊಬ್ಬ ಸೇವಕಿಯನ್ನು ಕರೆದು ಆವನು ದೂರದಲ್ಲಿದ್ದ ಒಂದು ಕುರ್ಚಿಯನ್ನು ತನ್ನಲ್ಲಿಗೆ ತರಲು ಹೇಳಿದನು. ಅಲ್ಲಿ ಕುರ್ಚಿ ಇಲ್ಲವೆಂದು ಆಕೆ ಹೇಳಿದಳು. "ಆ ನೀರಿನ ಪಾತ್ರೆಯನ್ನು ತೆಗೆದುಕೊಂಡು ಬಾ" ಎಂದು ಹೇಳಿದನು. ಆಕೆ ಅದೂ ಇಲ್ಲವೆಂದು ಹೇಳಿ ಹೋಗುತ್ತಿದ್ದಳು. ಅಷ್ಟರಲ್ಲಿ ಆ ಕವಿಯು ರೇಗಿ, ಕುರುಡಿ ಅಲ್ಲಿರುವುದು ಕಾಣುವುದಿಲ್ಲವೆ ?" ಎಂದು ಕೂಗಾಡಿದನು. ಅವನು ಕೋಪದಿಂದಲೂ ದರ್ಪದಿಂದಲೂ ಗರ್ವದಿಂದಲೂ ತನ್ನನ್ನು ತಾನೆ ಮರೆತಿದ್ದನು. ಅದು ಹೀಗಾಗುವದು ಸ್ವಭಾವ. ಸತ್ಯವು ಸುಳ್ಳರನ್ನು ಗೇಲಿಮಾಡುವುದೇ, ಅಪಹಾಸ್ಯಮಾಡುವುದೇ ಹೀಗೆ.

ಲೇಡಿ ಮ್ಯಾಕ್‌ಬೆತ್ತಳೂ ತಾನು ಮಾಡಿದ ಅಪರಾಧವನ್ನು ಮುಚ್ಚಿಡಲು ಸಾಧ್ಯವಾಗಲಿಲ್ಲ—ಎನ್ನುವುದು ನಿಮಗೆ ತಿಳಿದೇ ಇದೆ. ಸತ್ಯವು ಆಕೆಗೆ ಹುಚ್ಚು ಹಿಡಿಸಿತು. ಆಕೆ ತಾನಾಗಿಯೇ ವೈದ್ಯರಲ್ಲಿ ಅದನ್ನು ಒಪ್ಪಿಕೊಂಡಳು. ಇದೇ ಪ್ರಕೃತಿನಿಯಮ. ಹಾಗೇ ಆ ಕವಿಯು "ಕುರುಡಿ ಇಲ್ಲಿರುವುದು ಕಾಣುವದಿಲ್ಲವೆ ?" ಎಂದು ಕೂಗಿದೊಡನೆ, ಆ ಸೇವಕಿಯು ಆ ಕಾರ್ಯವನ್ನು ಮಾಡುವದಕ್ಕೆ ಬದಲು, ರಾಣಿಯಲ್ಲಿಗೆ

ಓಡಿಹೋಗಿ ಆ ರಹಸ್ಯವನ್ನು ಸ್ಫೋಟವಮಾಡಿ "ಓಹೋ! ಮಹಾರಾಣಿ, ಆ ಕವಿಯು ಕುರುಡನಲ್ಲ ಅವನು ಮೋಸಗಾರ, ದುಷ್ಟ, ಸುಮ್ಮನೆ ನಾಟಕವಾಡುತ್ತಾನೆ. ಅವನನ್ನು ಮೊದಲು ಈ ರಾಣೀವಾಸದಿಂದ ತೊಲಗಿಸಬೇಕು." ಎಂದು ಉದ್ವೇಗದಿಂದ ಬಿನ್ನವಿಸಿಕೊಂಡಳು. ಆಗ ರಾಣಿಯು ನೈಜವಾದ ವಿಷಯವನ್ನು ವಿಚಾರಮಾಡಿ ಆ ಕವಿಯನ್ನು ಕೂಡಲೇ ಅಲ್ಲಿಂದ ಹೊರಗಟ್ಟಿ ಓಡಿಸಿದಳು, ಆದರೆ ಆ ಕವಿಯು ಏನೋ ಒಂದು ಅಪಘಾತದಿಂದ ಮೂರು ದಿನಗಳೊಳಗೇ ನಿಜವಾಗಿಯೂ ಕುರುಡಾದನು. ಅದು ಹೇಗೆ? ಏಕೆಂದರೆ, ಅವನ ಇಚ್ಛೆಯಿಂದಲೇ ಅವನು ಕುರುಡಾದನೆಂದು ಕರ್ಮ-ಫಲ-ಭೋಗ ನಿಯಮವು ಹೇಳುತ್ತದೆ. ಅವನ ಅದೃಷ್ಟಕ್ಕೆ ಅವನೇ ಒಡೆಯ. ಇನ್ನೊಬ್ಬನನ್ನು ಯಾರೂ ಕುರುಡನನ್ನಾಗಿ ಮಾಡುವುದಿಲ್ಲ. ಅವನವನ ಕರ್ಮವೆ ಅವನನ್ನು ಕುರುಡನನ್ನಾಗಿ ಮಾಡುತ್ತದೆ. ತನ್ನ ಇಚ್ಛೆಯಿಂದಲೇ—ಕರ್ಮದಿಂದಲೇ—ತಾನು ಕುರುಡಾದರೂ ಅವನು ಅನಂತರ ಅತ್ತು ಗೋಳಾಡುತ್ತಾನೆ. ಹಲ್ಲು ಕಡಿದು ಎದೆ ಬಡಿದುಕೊಳ್ಳುತ್ತಾನೆ.

ಸುಖಸ್ಯ ದುಃಖಸ್ಯ ನ ಕೋಽಪಿ ದಾತಾ ।
ಪರೋ ದದಾತೀತಿ ಕುಬುದ್ಧಿರೇಷಾ ॥
ಅಹಂ ಕರೋಮೀತಿ ವೃಥಾಭಿಮಾನಃ ।
ಸ್ವಕರ್ಮಜಾಲ ಗ್ರಥಿತೋ ಹಿ ಲೋಕಃ ॥

ನಮಗೆ ಸುಖದುಃಖಗಳನ್ನು ಬೇರೆಯವರು ಯಾರೂ ಕೊಡತಕ್ಕವರಿಲ್ಲ; ಅವರಿಂದ ಕಷ್ಟವೋ ಸುಖವೋ ಆಯಿತೆಂಬುದು ಬುದ್ಧಿಹೀನತೆ. ಏನು ಬೇಕಾದರೂ ನಾನೇ ಮಾಡಬಲ್ಲೆ ಎಂಬುದೂ ವ್ಯರ್ಥವಾದ ಅಭಿಮಾನ; ಎಲ್ಲ ಜನರೂ ತಮ್ಮ ತಮ್ಮ ಕರ್ಮದ ಬಲೆಯಲ್ಲಿ ತಾವು ತಾವು ಸಿಕ್ಕಿಕೊಂಡಿದ್ದಾರೆ. ಇಷ್ಟ ಫಲವಾಗಲೀ ಅನಿಷ್ಟಫಲವಾಗಲಿ ಮಿಶ್ರಫಲವಾಗಲೀ ನಮಗೆ ಬರುತ್ತಿರುವುದು ನಮ್ಮ ಕರ್ಮವೇ (ಇಚ್ಛೆಯೇ) ಕಾರಣವಾಗಿ ಹೊರತು ಬೇರೆಯಲ್ಲ.

೧೦ ಬಯಕೆಯ ಫಲ ಬವಣೆ

ಒಬ್ಬ ಮುದುಕನು ಭಾರವಾದ ಹೊರೆಯನ್ನು ಹೊತ್ತುಕೊಂಡು ಹೋಗುತ್ತಿದ್ದನು. ಅವನು ಉಷ್ಣದೇಶವಾದ ಇಂಡಿಯಾದಲ್ಲಿ ವಾಸ ಮಾಡುತ್ತಿದ್ದನು. ಆ ದಿನ ಅವನು ಜ್ವರದಿಂದ ನರಳುತ್ತಾ ಬಹಳ ದುರ್ಬಲನಾಗಿದ್ದನು. ಅವನು ಬಿಸಿಲಿನಲ್ಲಿ ನಡೆಯಲಾರದೆ, ತಲೆಯ ಮೇಲಿದ್ದ ಹೊರೆಯನ್ನೆಸೆದು ಒಂದು ಮರದ ನೆರಳಿನಲ್ಲಿ ಕಾಲು ಚಾಚಿಕೊಂಡು ಮಲಗಿದನು, ಅವನು ತನ್ನ ಸಂಕಷ್ಟದ ಸಂಸಾರವನ್ನೂ ನೆನೆಸಿಕೊಂಡು, ಆಗಿನ ದುರವಸ್ಥೆಗೂ ಎದೆಗುಂದಿ "ಓ ಮೃತ್ಯುವೇ, ಮೃತ್ಯುವೇ, ನೀನಾದರೂ ದಯಮಾಡಿ ಬಂದು ನನ್ನ ದುಃಖವನ್ನು ತಪ್ಪಿಸಲಾರೆಯ? ಈ ಬವಣೆಯಿಂದ ಬಿಡುಗಡೆಮಾಡಲಾರೆಯಾ?" ಎಂದು ಗೋಳಾಡಿ ಗೋಗರೆದನು. ಮನ

ಕೊರೆಯುವ ಅವನ ಮೊರೆಯು ಮೃತ್ಯುವಿನ ಮನಸ್ಸಿಗೆ ಮುಟ್ಟಿತೋ ಎನ್ನುವಂತೆ, ಮೃತ್ಯುವು ಬಂದೇ ಬಿಟ್ಟನು. ಅವನ ಘೋರ ರೂಪವನ್ನು ನೋಡಿ, ಜ್ವರದ ತಾಪ ದಿಂದ ಸನ್ನಿಹಿಡಿದಂತಿದ್ದ ಮುದುಕನು ಭಯದಿಂದ ಕಿಟ್ಟನೆ ಕಿರಿಚಿ, ಗಡಗಡನೆ ನಡುಗುವುದಕ್ಕೆ ತೊಡಗಿದನು. ಅತಿವಿಕಾರವಾದ ಆ ಭಯಂಕರಾಕೃತಿಯನ್ನು ನೋಡಿ ಆ ಮುದುಕನು ಅವಶನಾಗಿ "ನೀನು ಯಾರು ?" ಎಂದು ಕೂಗಿದನು. "ನೀನು ಸ್ವಲ್ಪ ಮುಂಚೆ ಯಾರನ್ನು ಕರೆದೆಯೋ ಅವನೇ ನಾನು. ನಿನ್ನ ಇಚ್ಛೆಯಂತೆ ಬಂದಿದ್ದೇನೆ ; ನಿನ್ನ ಮೊರೆಗೆ, ಕರೆಗೆ ಓಗೊಟ್ಟು, ನಿನ್ನ ಬಯಕೆಯನ್ನು ಪೂರೈಸಲು." ಎಂದು ಮೃತ್ಯು ದೇವನು ಗಂಭೀರವಾಗಿ ಗುಡುಗಿದನು. ಈ ಮಾತು ಮುದುಕನ ಮನಸ್ಸಿಗೆ ಅಪ್ಪಳಿಸಿದಂತಾಗಿ ಎದೆ ನಡುಗಿತು, ಸಿಡಿಲೇ ಎರಗಿದಂತಾಯಿತು. ಕ್ಷಣ ಕಾಲ ಮೂರ್ಛೆ ಹೋದಂತಾಗಿ, ಎಚ್ಚೆತ್ತು, ಸ್ವಲ್ಪ ಧೈರ್ಯ ತಂದುಕೊಂಡು "ಅಯ್ಯೋ ! ಮಹಾದೇವ, ಕ್ಷಮಿಸು ; ಸಹಿಸಲಾರದ ಹಾಗೂ ಸಾಯಲಾರದ ಸಂಕಟದಲ್ಲಿ ನಾನು ಯಾರನ್ನು ಕರೆದೆನೋ ತಿಳಿಯದು. ಕೆಳಗೆ ಬಿದ್ದಿರುವ ಈ ಹೊರೆಯನ್ನೆತ್ತಿ ನನ್ನ ತಲೆಯ ಮೇಲೆ ಹೊರಿಸುವದಕ್ಕೆ ಯಾರ ಸಹಾಯವಾದರೂ ಬೇಕಾಗಿತ್ತು ; ನನ್ನ ಜ್ವರದ ಹುಚ್ಚಿನಲ್ಲಿ ಯಾರನ್ನು ಕರೆದೆನೋ ತಿಳಿಯದು......" ಎಂದನು.

ಜನರ ಸ್ವಭಾವವೇ ಹೀಗೆ. ನಿಮ್ಮ ಎಲ್ಲಾ ಕಷ್ಟಗಳೂ ದುಃಖಗಳೂ ನಿಮ್ಮಿಂದಲೇ ನಿಮಗೆ ಬರುತ್ತವೆ. ನಿಮ್ಮ ಅದೃಷ್ಟಕ್ಕೆ ನೀವೇ ಒಡೆಯರು. ನೀವು ಬಯಸಿದ್ದೇ ನಿಮಗೆ ಬಂದಾಗ ಬೇಡವೆಂದು ಅಳುತ್ತೀರಿ. ಸಾವನ್ನು ಕರೆಯುತ್ತೀರಿ ; ಸಾವು ಬಂದಾಗ ಗೋಳಾಡುತ್ತೀರಿ. ತಪ್ಪಿಸಿಕೊಳ್ಳುವದಕ್ಕೆ ಉಪಾಯವನ್ನು ಹುಡುಕುತ್ತೀರಿ. ಆದರೆ ಅದು ಸಾಧ್ಯವಾಗುವದಿಲ್ಲ. ಹರಾಜಿನಲ್ಲಿ ಸವಾಲು ಮಾಡಿ, ಎಲ್ಲರಿಗಿಂತಲೂ ಹೆಚ್ಚಿನ ಬೆಲೆಯನ್ನು ಕೂಗಿದ ಮೇಲೆ ಆ ಪದಾರ್ಥವನ್ನು ತೆಗೆದು ಕೊಳ್ಳಲೇ ಬೇಕಾಗುತ್ತದೆ. ಕುದುರೆಯನ್ನು ಓಡಿಸಿದಮೇಲೆ ಅದರ ಹಿಂದಿರುವ ಗಾಡಿ ಬೆನ್ನ ಹತ್ತಿಯೇ ಓಡುತ್ತದೆ. ಆದ್ದರಿಂದ ನೀವು ಬಯಸಿದ ಮೇಲೆ ಅದರ ಪರಿಣಾಮ ವನ್ನು ಅನುಭವಿಸಲೇ ಬೇಕಾಗುತ್ತದೆ. ಬಹು ಜನರು ಸಾಮಾನ್ಯವಾಗಿ ಮುಪ್ಪಿ ನಲ್ಲಿಯೇ ಸಾಯುತ್ತಾರೆ ಏಕೆ ? ಯೌವನದಲ್ಲಿ ಸಾಯತಕ್ಕವರು ಕಡಿಮೆ ಏಕೆ ? ದೇಹವು ವಯಸ್ಸಾದ ಮೇಲೆ ದುರ್ಬಲವಾಗಿ ರೋಗಗ್ರಸ್ತವಾಗುತ್ತದೆ ; ದುಃಖ ದಾಯಕವಾಗುತ್ತದೆ. ಆದ್ದರಿಂದ ಕಷ್ಟವನ್ನು ಸಹಿಸಲಾರದೆ ಜನರು ಬಿಡುಗಡೆಯನ್ನು ಬಯಸುತ್ತಾರೆ : ಸಾವನ್ನು ಕರೆಯುತ್ತಾರೆ. ಸಾವು ಬರುತ್ತದೆ. ಹೀಗೆ ಸಾವು ಬರುವದೂ ನಿಮಗೆ ಬೇಕಾಗಿಯೇ, ನಿಮ್ಮಿಂದಲೇ. ವೇದಾಂತದ ಪ್ರಕಾರ ಪ್ರತಿ ಯೊಬ್ಬನೂ ಆತ್ಮ (ಪ್ರಾಣ) ಹತ್ಯಕಾರ ; ಆತ್ಮಘಾತಕ. ತನ್ನ ಪ್ರಾಣವನ್ನು ತಾನೇ ಸ್ವೇಚ್ಛೆಯಿಂದ ಕಳೆದುಕೊಳ್ಳತಕ್ಕವನು, ನೀವು ಕರೆದ ಕೂಡಲೇ ಮೃತ್ಯುವು ಬರು ತ್ತದೆ. ಹಾಗಾದರೆ ಕೆಲವರು ಭರತಾರುಣ್ಯದಲ್ಲಿಯೇ ಏಕೆ ಸಾಯುತ್ತಾರೆ ? ರಾಮನು

ಹೇಳುವದು ಈಗ ನಿಮಗೆ ನಂಬಿಕೆಯಾಗದಿರಬಹುದು. ಆದರೆ ಆ ಸಂಬಂಧವಾದ ಕೆಲವು ಸಂದರ್ಭಗಳನ್ನು ಒಳಹೊಕ್ಕು ಚೆನಾಗ್ಗಿ ಪರೀಕ್ಷಿಸಿದರೆ, ರಾಮನು ಹೇಳುವದನ್ನು ನೀವು ಒಪ್ಪುತ್ತೀರಿ. ತುಂಬಿದ ಯೌವನದಲ್ಲಿ ಸತ್ತಿರುವ ಅನೇಕರನ್ನು ರಾಮನು ನೋಡಿದ್ದಾನೆ. ಅವರ ವೈಯಕ್ತಿಕ ಜೀವನದಲ್ಲಿ ಪ್ರವೇಶ ಮಾಡಿ, ರಾಮನು ಅವರ ಚಾರಿತ್ರ್ಯವನ್ನೆಲ್ಲಾ ಕೂಲಂಕಷವಾಗಿ ವಿಚಾರ ಮಾಡಿದ್ದಾನೆ. ಹಾಗೆ ಅಕಾಲದಲ್ಲಿ ಸತ್ತಿರುವ ಆ ಯುವಕರು, ದುಃಖಕರವಾದ ತಮ್ಮ ಅನಿಷ್ಟ ಸನ್ನಿವೇಶಗಳನ್ನು ಸಹಿಸಲಾರದೆ, ಹಾಗೂ ಈ ಜನ್ಮದಲ್ಲಿ ಬದಲಾಯಿಸಿಕೊಳ್ಳಲಾರದೆ, ಅವುಗಳಿಂದ ಬಿಡುಗಡೆಯನ್ನು ಪಡೆಯುವದಕ್ಕೋಸ್ಕರ ಅವರ ಹೃದಯಾಂತರಾಳದಲ್ಲಿ ಮರಣವನ್ನೇ ಅತ್ಯುತ್ಕಟವಾಗಿ ಬಯಸುತ್ತಿದ್ದರು ಎಂದು ನಿಶ್ಚಿತವಾಗಿ ತಿಳಿದುಬಂದಿದೆ. ಆ ವಿಷಯ ಯಾವಾಗಲೂ ಹಾಗೆಯೇ ಸರಿ. ಇದನ್ನು ಸತ್ಯವೆಂದು ತೋರಿಸುವದಕ್ಕಾಗಿ ವಾಸ ವಿಕವಾದ ಯಾವ ಉದಾಹರಣೆಯನ್ನೂ ಈಗ ಕೊಡುವದಕ್ಕೆ ಸಮಯವಿಲ್ಲ, ಆದರೂ ಇದು ಸತ್ಯವಾದುದು, ಎಂದಿಷ್ಟೇ ಹೇಳಬಹುದು.

೧೧ ಪರಸ್ಪರ ವಿರುದ್ಧ ಬಯಕೆಗಳ ಫಲ

(ಮತೀಯ ಕಾಲೇಜಿನ ಪ್ರಾಧ್ಯಾಪಕರು)

ಇಂಡಿಯಾ ದೇಶದಲ್ಲಿ, ಸಂಕುಚಿತ ಮತಾಭಿಮಾನವುಳ್ಳ ಒಂದು ಕಾಲೇಜನಲ್ಲಿ, ಪ್ರತಿಭಾವಂತ ತರುಣರೊಬ್ಬರು ಪ್ರೊಫೆಸರ್ ಆಗಿ ಕೆಲಸ ಮಾಡುತ್ತಿದ್ದರು, ಒಮ್ಮೆ ಅವರು ಸಾರ್ವಜನಿಕ ಸಭೆಯೊಂದರಲ್ಲಿ ಆ ಕಾಲೇಜಿನ ಧ್ಯೇಯ ಸಾಧನೆಗಾಗಿ ತಮ್ಮ ಜೀವನವನ್ನೇ–ಮುಡುಪಾಗಿಟ್ಟು-ಧಾರೆಯೆರೆದಿರುವದಾಗಿ ಭಾವಾವೇಶದಿಂದ ಸಾರಿ ಬಿಟ್ಟರು. ಅವರಾ ಪ್ರತಿಜ್ಞೆಗನುಸಾರವಾಗಿಯೇ ಕೆಲವು ಕಾಲ ಅತ್ಯಂತ ಉತ್ಸಾಹ ದಿಂದ ಕೆಲಸ ಮಾಡಿದರು. ಅನಂತರ ಅವರ ಮನಸ್ಸು ವಿಶಾಲವಾಗಿ, ಭಾವನೆಯು ವಿಕಾಸವಾಗಿ, ದೃಷ್ಟಿ ಉದಾರವಾಗಿ, ಅಭಿಪ್ರಾಯವು ಬದಲಾವಣೆ ಹೊಂದಿತು. ಆದರಿಂದ ಸಂಕುಚಿತ ಮತಾಭಿಮಾನವುಳ್ಳವರ ಜೊತೆಗೆ-ಆ ಸಂಸ್ಥೆಯಲ್ಲಿ-ಮೊದಲಿನಂತೆ ಕೆಲಸ ಮಾಡುವುದು ಅವರಿಗೆ ಸಾಧ್ಯವಿಲ್ಲವಾಯಿತು. ಆ ಮತಾಭಿಮಾನಿಗಳಿಗೂ ಹೃದಯಾಂತರಾಳದಲ್ಲಿ ಈ ಪ್ರೊಫೆಸರ ನೂತನ ಭಾವನೆಗಳ ವಿಷಯಕ್ಕೆ ಸಹಾನು ಭೂತಿಯಿಲ್ಲವಾಯಿತು, ಆದರೆ ಅವರು ಆ ಸಂಸ್ಥೆಯ ಸೇವೆಗೆ ಮೊದಲೇ ವಚನ ಬದ್ಧರಾಗಿದ್ದುದರಿಂದ ಸಂಕುಚಿತಭಾವದ ಮಿಕ್ಕ ಸಹೋದ್ಯೋಗಿಗಳ ಜೊತೆಗೆ ಬಹಳ ಕಷ್ಟದಿಂದ ಅನಿವಾರ್ಯವಾಗಿ ಹೊಂದಿಕೊಂಡು ಹೋಗಬೇಕಾಗಿ ಬಂದಿತು. ತಾವೇ ಹಾಕಿಕೊಂಡಿದ್ದ ಮಾತಿನ ಕಟ್ಟಿನಿಂದ ಅವರಿಗೆ ಬಿಡುಗಡೆಗೇ ಅವಕಾಶವಿಲ್ಲವಾಯಿತು, ಅವರ ದೇಹವು ಒಂದು ಕಡೆಯಲ್ಲಿ, ಮನಸ್ಸೇ ಇನ್ನೊಂದು ಕಡೆಯಲ್ಲಿ ಆಯಿತು, ಅವರ ದೇಹವೂ ಮನಸ್ಸೂ ಬೇರೆಯಾದವು. ಹೀಗೆ ಬಹಳ ದಿನಗಳನ್ನು ಕಳೆಯುವದು ಸಾಧ್ಯವಿರಲಿಲ್ಲ. ಆದ್ದರಿಂದ ಅವರು ಸತ್ತುಹೋದರು. ಸಾವಿನಿಂದ ಹೊರತು

ಬೇರೆ ಯಾವ ಬಗೆಯಿಂದಲೂ ಅವರು ತಮ್ಮ ಪರಿಸ್ಥಿತಿಗಳನ್ನು ಬದಲಾಯಿಸುವದು ಸಾಧ್ಯವಿರಲಿಲ್ಲ. ಆದರೆ ಅವರ ಸಾವಿನಿಂದ ಅವು ಬದಲಾಯಿಸಿದವು. ಹೀಗೆ ಸಾವು ಕೂಡ ಎಲ್ಲರಿಗೂ ತೋರುವಂತೆ ಭಯಪ್ರದವಾದುದಲ್ಲ.

ನಿಮ್ಮ ಪರಿಸ್ಥಿತಿಗಳಿಗೂ ಸಂದರ್ಭಗಳಿಗೂ ಅದೃಷ್ಟಗಳಿಗೂ ನೀವೇ ಕಾರಣರು. ನೀವೇ ಪ್ರಭುಗಳು. ಹಾಗಾದರೆ ಜನರಿಗೆ ದುಃಖ ದುರವಸ್ಥೆಗಳು ಏಕೆ ಉಂಟಾಗುತ್ತವೆ? ಕಷ್ಟಗಳು ಏಕೆ ಬರುತ್ತವೆ? ಬಯಕೆಗಳ ತಿಕ್ಕಾಟದಿಂದ. ನಿಮ್ಮಲ್ಲಿರುವ ಒಂದು ಬಗೆಯ ಬಯಕೆಗಳು ಒಂದು ರೀತಿಯ ಕರ್ಮವನ್ನು ಮಾಡುವದಕ್ಕೆ ಪ್ರೇರಿಸುತ್ತವೆ. ನಿಮ್ಮಲ್ಲಿರುವ ಬೇರೆ ಬಗೆಯ ಬಯಕೆಗಳು ಬೇರೆ ರೀತಿಯ ಕರ್ಮವನ್ನು ನಡೆಸುವದಕ್ಕೆ ಪ್ರಚೋದಿಸುತ್ತವೆ. ಎರಡೂ ಬಗೆಯ, ಹಲವು ಬಗೆಯ ಬಯಕೆಗಳು ನಿಮ್ಮಲ್ಲಿಯೇ ಇವೆ. ನೀವು ಲೇಖಕರೂ ಭಾಷಣಕಾರರೂ ಪ್ರೊಫೆಸರೂ ಬೋಧಕರೂ ಅಥವಾ ಉಪದೇಶಕರೂ ಆಗಬೇಕೆಂದು ಒಂದು ಬಯಕೆ ಪ್ರೋತ್ಸಾಹಿಸುತ್ತದೆ. ಇದಕ್ಕೆ ನಿರಂತರ ಶ್ರಮ, ಸಂಯಮ, ನಿಯಮಶೀಲತೆ, ಅಧ್ಯಯನ, ಅಭ್ಯಾಸ ಇವೆಲ್ಲಾ ಬೇಕು. ಆದರೆ, ಭೋಗವಿಲಾಸಗಳಿಂದ ಕೂಡಿದ, ಸ್ವಲ್ಪವೂ ಶ್ರಮವಿಲ್ಲದ ಸ್ವಚ್ಛಂದವಾದ ಸುಖ ಜೀವನವನ್ನು ನಡೆಸಬೇಕು ಎಂಬ ಹಂಬಲವೂ ನಿಮ್ಮಲ್ಲಿರಬಹುದು. ಇದೇ ಪರಸ್ಪರ ವಿರುದ್ಧವಾದ ಅಸಂಗತ ಬಯಕೆಗಳ ಸಂಘರ್ಷ. ಇವೆರಡೂ ಒಂದೇ ವ್ಯಕ್ತಿಯಲ್ಲಿ ಏಕಕಾಲದಲ್ಲಿ ತಲೆಯೆತ್ತಿ ಕುಣಿಯುತ್ತಿದ್ದರೆ ಏನಾಗುತ್ತದೆ? ಅವನ ಹೃದಯವು ರಣರಂಗವಾಗುತ್ತದೆ. ಒಂದೇ ಕಾಲದಲ್ಲಿ ಒಬ್ಬನಲ್ಲಿ ಕೂಡಿರಲಾರದ ಈ ಎರಡೂ ವಾಸನೆಗಳು ತೃಪ್ತಿಯನ್ನು ಬಯಸುತ್ತವೆ. ಆಗ ಅವೆರಡರಲ್ಲಿ ಹೆಚ್ಚು ಪ್ರಬಲವಾದುದು ಮೇಲೆದ್ದು, ಮುಂದಾಗಿ ಕಾರ್ಯ ಸಾಧನೆ ಮಾಡಿ ತೃಪ್ತಿಯನ್ನು ಪಡೆಯುತ್ತದೆ. ಅದರಿಂದ, ದುರ್ಬಲವಾದ ಆಶೆಯು ಭಂಗ ಹೊಂದುವದರಿಂದ ನಿಮಗೆ ದುಃಖವಾಗುತ್ತದೆ. ಜನರು ತಮ್ಮ ಮೇಲೆ ತಾವು ಸಂಕಟವನ್ನು ತಂದುಕೊಳ್ಳುವದಕ್ಕೆ ಇದೇ ಕಾರಣ. ಇದೂ ಕೂಡ ನಿಮ್ಮ ಅದೃಷ್ಟಕ್ಕೆ ನೀವೇ ಒಡೆಯರು, ಎನ್ನುವದನ್ನು ತೋರಿಸುತ್ತದೆ. ಇದನ್ನು ಸ್ಪಷ್ಟಪಡಿಸುವದಕ್ಕೆ ಈಗ ರಾಮನು ಒಂದು ಸೊಗಸಾದ ಕಥೆಯನ್ನು ಹೇಳುತ್ತಾನೆ.

೧೨ ವಿಷಮ ಬಯಕೆಗಳ ವೈಪರೀತ್ಯ

(ಇಬ್ಬರು ಹೆಂಡಿರ ಕಾಟ)

ಇಂಡಿಯಾದಲ್ಲಿ ಒಬ್ಬ ಮನುಷ್ಯನಿಗೆ ಇಬ್ಬರು ಹೆಂಡಿರಿದ್ದರು. ಹಿಂದೂಗಳು ಬಹುಪತ್ನೀ ಪದ್ಧತಿಯಲ್ಲಿ ನಂಬಿಕೆಯುಳ್ಳವರಲ್ಲ. ಮಹಮ್ಮದೀಯರಲ್ಲಿ ಆ ಪದ್ಧತಿಯಿದೆ. ಆ ಇಬ್ಬರು ಹೆಂಡಿರಿದ್ದವನು ಮಹಮ್ಮದೀಯ. ಒಬ್ಬಳು ಹೆಂಡತಿಯು ಉಪ್ಪರಿಗೆಯ ಮೇಲೆ ವಾಸಮಾಡುತ್ತಿದ್ದಳು. ಇನ್ನೊಬ್ಬಳು ಕೆಳಗಿರುತ್ತಿದ್ದಳು. ಒಂದು ದಿನ ಒಬ್ಬ ಕಳ್ಳನು ಆ ಮನೆಯಲ್ಲಿದ್ದ ಎಲ್ಲಾ ವಸ್ತುಗಳನ್ನೂ ಕದ್ದೊಯ್ಯುವದಕ್ಕಾಗಿ

ರಾತ್ರಿಯಲ್ಲಿ ಕನ್ನಹಾಕಿ ಒಳಗೆ ನುಗ್ಗಿದನು. ಆದರೆ ಆ ಮನೆಯವರೆಲ್ಲರೂ ರಾತ್ರಿಯೆಲ್ಲಾ ಎಚ್ಚರವಾಗಿದ್ದುದರಿಂದ ಕಳವು ಮಾಡುವುದಕ್ಕೆ ಆ ಕಳ್ಳನಿಗೆ ಅವಕಾಶವೇ ಸಿಕ್ಕಲಿಲ್ಲ. ಮುಂಜಾನೆಯ ಹೊತ್ತಿಗೆ ಮನೆಯ ಜನರು ಕಳ್ಳನನ್ನು ನೋಡಿ, ಹಿಡಿದು ಪೋಲೀಸ್ ಮ್ಯಾಜಿಸ್ಟ್ರೇಟ್‌ರ ಹತ್ತಿರ ಕರೆದುಕೊಂಡು ಹೋದರು. ಕಳ್ಳನು ಏನನ್ನೂ ಕದ್ದಿರದಿದ್ದರೂ ಮನೆಗೆ ಕನ್ನಹಾಕಿ ನುಗ್ಗಿದ್ದುದೇ ಅಪರಾಧ ವಾಗಿತ್ತು. ಮ್ಯಾಜಿಸ್ಟ್ರೇಟರು ಅವನಿಗೆ ಕೆಲವು ಪಾಟೀಸವಾಲಿನ ಅಡ್ಡ ಪ್ರಶ್ನೆಗಳನ್ನು ಹಾಕಿದರು. ಕಳ್ಳನು ತನ್ನ ಉದ್ದೇಶವನ್ನೂ ಅಪರಾಧವನ್ನೂ ಒಪ್ಪಿಕೊಂಡನು. ಮ್ಯಾಜಿಸ್ಟ್ರೇಟರು ಅವನಿಗೆ ಏನೋ ಶಿಕ್ಷೆಯನ್ನು ಕೊಡುವವರಿದ್ದರು. ಅಷ್ಟರಲ್ಲಿ ಆ ಕಳ್ಳನು ಮ್ಯಾಜಿಸ್ಟ್ರೇಟರನ್ನು ಕುರಿತು, "ಮಹಾಸ್ವಾಮಿ, ತಾವು ನನಗೆ ಯಾವ ಶಿಕ್ಷೆಯನ್ನು ಬೇಕಾದರೂ ಕೊಡಬಹುದು : ನನ್ನನ್ನು ಕತ್ತಲು ಕಾರಾಗಾರದಲ್ಲಿ ಎಸೆಯ ಬಹುದು ; ಬೇಟೆ ನಾಯಿಗಳ ಮುಂದೆ ಒಗೆಯಬಹುದು ; ನನ್ನ ದೇಹವನ್ನು ತಾವು ಸುಡಿಸಲೂಬಹುದು. ಆದರೆ ದಯವಿಟ್ಟು ಒಂದು ಶಿಕ್ಷೆಯನ್ನು ಮಾತ್ರ ಕೊಡ ಬಾರದು" ಎಂದು ಬೇಡಿದನು. ಮ್ಯಾಜಿಸ್ಟ್ರೇಟರಿಗೆ ಆಶ್ಚರ್ಯವಾಯಿತು ; "ಏನಪ್ಪ ಅದು ?" ಎಂದು ಕೇಳಿದರು. ಕಳ್ಳನು "ಅಯ್ಯೋ ಸ್ವಾಮಿ ! ನನಗೆ ಇಬ್ಬರು ಹೆಂಡಿರನ್ನು ಮಾತ್ರ ಅಗ್ನಮಾಡಬೇಡಿರಿ ; ದಯವಿಟ್ಟು ತಾವು ಇದೊಂದು ಶಿಕ್ಷೆಯನ್ನು ಮಾತ್ರ ನನಗೆ ವಿಧಿಸಬಾರದು" ಎಂದು ಮತ್ತೊಮ್ಮೆ ಬೇಡಿ ನಮಸ್ಕರಿ ಸಿದನು. ಮ್ಯಾಜಿಸ್ಟ್ರೇಟರು ಬಹಳ ಕುತೂಹಲದಿಂದ "ಅದೇಕೆ ?" ಎಂದು ಕೇಳಿದರು. ನ್ಯಾಯಾಲಯದಲ್ಲಿ ಎಲ್ಲರಿಗೂ ಆಶ್ಚರ್ಯವಾಯಿತು. ಕಳ್ಳನು, "ಮಹಾಸ್ವಾಮಿ ! ನಾನು ಎಷ್ಟು ಕಷ್ಟಪಟ್ಟು, ಭದ್ರವಾದ ಗೋಡೆಯಲ್ಲಿ ಕಂಡಿ ಕೊರೆದು, ಒಳನುಗ್ಗಿ, ಬೆಳಗಿನವರೆಗೆ ನಿದ್ರೆಗೆಟ್ಟು ಸುಚು ನೋಡುತ್ತಿದ್ದರೂ ಯಾವ ವಸ್ತುವನ್ನೂ ಕದಿಯ ಲಾಗಲಿಲ್ಲ. ಇದಕ್ಕೆ ಕಾರಣವೇನೆಂದರೆ, ಮನೆಯ ಯಜಮಾನನು ರಾತ್ರಿಯೆಲ್ಲಾ ಮಹಡಿಯ ಕೆಳಗೆ ಏಣಿಯ ಮೆಟ್ಟಿಲ ಮೇಲೆ ನಿಂತಿರಬೇಕಾಯಿತು. ಒಬ್ಬ ಹೆಂಡತಿಯು ಅವನ ತಲೆಯಕೂದಲನ್ನೂ ಗಡ್ಡವನ್ನೂ ಹಿಡಿದು ಉಪ್ಪರಿಗೆಯ ಮೇಲಕ್ಕೆ ಎಳೆಯುತ್ತಿದ್ದಳು ; ಕೆಳಗೆ ವಾಸಮಾಡುತ್ತಿದ್ದ ಹೆಂಡತಿಯು, ಅವನು ತನ್ನಲ್ಲಿಗೆ ಬರಬೇಕೆಂದು ಅವನ ಇಜಾರದ ತುದಿಯನ್ನೂ ಕಾಲು ಚೀಲಗಳನ್ನೂ ಹಿಡಿದು ಒಂದೇ ಸಮನೆ ಜಗ್ಗುತ್ತಿದ್ದಳು. ಇದರಿಂದ ಆ ಬಡಪಾಯಿಯ ತಲೆ ಗೂಪಲೂ ಗಡ್ಡವೂ ಕಿತ್ತುಹೋದವು ; ಇಜಾರವೂ ಕಾಲು ಚೀಲಗಳೂ ಹರಿದು ಹೋಗಿ ಅವನು ಬರಿಮೈಯಲ್ಲಿ ರಾತ್ರಿಯೆಲ್ಲಾ ಚಳಿಯಿಂದ ನಡಗುತ್ತಿದ್ದನು. ಹೀಗಾಗಿ ಈ ಭಂಡಾಟದಲ್ಲಿ ನಾನೂ ತಪ್ಪಿಸಿಕೊಳ್ಳಲಾರದೆ ಸಿಕ್ಕುಬಿದ್ದೆ" ಎಂದನು.

ಹೀಗೆ ನಿಮ್ಮ ಎಲ್ಲಾ ಸಂಕಟಗಳಿಗೂ ಪರಸ್ಪರ ವಿರುದ್ಧವಾದ ಬಯಕೆಗಳ ತಿಕ್ಕಾಟವೇ ಕಾರಣ. ಗೃಹಸೌಖ್ಯ ನಾಶವಾಗುವದಕ್ಕೆ ಗೃಹ ಕಲಹವೇ ಹೇಗೆ ಕಾರಣವೋ ಹಾಗೆ ನಮ್ಮ ಹೃದಯದ ಶಾಂತಿ, ನಾಶವಾಗುವದಕ್ಕೂ ಬಯಕೆಗಳಲ್ಲಿ

ಸಾಮಂಜಸ್ಯವೂ ಸಾಮರಸ್ಯವೂ ಇಲ್ಲದೆ ಅವುಗಳ ಹೋರಾಟ ನಡೆಯುತ್ತಿರುವದೇ ಕಾರಣ. ಆದ್ದರಿಂದ ನಿಮ್ಮ ಹೃದಯಗಳನ್ನೂ ಮನಸ್ಸುಗಳನ್ನೂ ನೀವೇ ಪರೀಕ್ಷೆ ಮಾಡಿ, ಶಾಂತಿಯಿಂದೆಯೆ ನೋಡಿಕೊಳ್ಳಿ. ನಿಮ್ಮ ಗುರಿಯಲ್ಲಿ ಏಕತೆಯೂ ಉದ್ದೇಶದಲ್ಲಿ ಐಕ್ಯವೂ ಇದ್ದರೆ ನಿಮಗೆ ಯಾವ ತೊಂದರೆಯೂ ಕಷ್ಟವೂ ಬರುವದಿಲ್ಲ. ಆದರೆ ಅವುಗಳಲ್ಲಿ ವಿರೋಧವೂ ವೈಷಮ್ಯವೂ ಇದ್ದರೆ ಮನೆಯೂ ಮನಸ್ಸೂ ಮುರಿದು ಬೀಳುವದರಿಂದ ಸಂಕಟಕ್ಕೆ ಒಳಗಾಗುತ್ತೀರಿ.

ಹೀಗೆ ನಿಮ್ಮ ದುಃಖಕ್ಕೆ ಇದೇ ಕಾರಣ; ಅದನ್ನು ನೀವೇ ತಂದುಕೊಳ್ಳುತ್ತೀರಿ. ಆದ್ದರಿಂದ ನಿಮ್ಮ ಅದೃಷ್ಟಕ್ಕೆ ನೀವೇ ಒಡೆಯರು. ನಮ್ಮಲ್ಲಿ ಕೀಳಾದ ಬಯಕೆಗಳೂ ಇವೆ; ಮೇಲಾದ ಬಯಕೆಗಳೂ ಇವೆ. ಇವೆರಡರ ನಡುವೆ ಹೋರಾಟ ನಡೆಯುತ್ತಿರುತ್ತದೆ. ಆದರೆ ವಿಶ್ವವ್ಯಾಪಕವಾದ ವಿಕಾಸ ನಿಯಮದಂತೆ ಈ ಹೋರಾಟದಲ್ಲಿ ಹೆಚ್ಚು ಬಲಿಷ್ಠವಾದುದು ಬದುಕುತ್ತದೆ, ಬೆಳೆಯುತ್ತದೆ. ಇದೇ ಪ್ರಕೃತಿಯ ಯೋಜನೆ, ಸಾರ್ವತ್ರಿಕವಾದ (Survival of the fittest) ಈ ನಿಯಮಕ್ಕೆ ಅನುಸಾರವಾಗಿ ಬಲಿಷ್ಠವಾದ ಬಯಕೆಗಳೇ ಜಯಶಾಲಿಗಳಾಗುತ್ತವೆ. ಆದರೆ, ಬಯಕೆಗಳಿಗೆ ಈ ಬಲವು ಎತರಿಂದ ಬರುತ್ತದೆ? ಈ ಶಕ್ತಿಯು ಬರುವದು ಸತ್ಯದಿಂದಲೇ.

Those desires alone which have more of the truth in them, more of righteousness, justice, godliness or purity, will carry the day. You will have to improve and progress at the bayonet's point. You cannot stagnate in sensuality all the time.

"ಯಾವ ಕಾಮನೆಗಳಲ್ಲಿ ಹೆಚ್ಚು ಸತ್ಯವೂ ಹೆಚ್ಚು ಧರ್ಮವೂ ಹೆಚ್ಚು ನ್ಯಾಯವೂ ದೇವತ್ವವೂ ಅಥವಾ ಪರಿಶುದ್ಧಿಯೂ ಇವೆಯೋ ಅವುಗಳೇ ಜಯಶಾಲಿಯಾಗುತ್ತವೆ. (ಎದೆಗಾನಿಸಿ ತಿಳಿಯಲು ಹಿಡಿದಿರುವ ಬಂದೂಕಿನ) ಸನೀನಿನ ತುದಿಯಲ್ಲಿ ನೀವು ಉತ್ತಮಗೊಳ್ಳಬೇಕು, ಮತ್ತು ಅಭಿವೃದ್ಧಿ ಪಡೆಯಬೇಕು. ಎಲ್ಲಾ ಕಾಲದಲ್ಲಿಯೂ ನೀವು ವಿಷಯಾಸಕ್ತಿಯಲ್ಲಿಯೇ ಜಡವಾಗಿ ನಿಂತು ನಾರುತ್ತಿರುವದಕ್ಕಾಗುವದಿಲ್ಲ."

ಸ್ವಾರ್ಥಮಯವಾದ ಆಶೆಯಲ್ಲಿಯೂ ದುರಾಶೆಯಲ್ಲಿಯೂ ಮಲೆತು ನಿಂತು ಕೊಳೆಯಲಾರಿರಿ. ನೀವು ಆ ಕೆಸರಿನಿಂದ ಮೆಲ್ಲಮೆಲ್ಲನೆ ಆದರೆ ಅತ್ಯಂತ ನಿಶ್ಚಿತವಾಗಿ ಮೇಲೇರಬೇಕಾಗುತ್ತದೆ. ಈ ಜಗತ್ತಿನಲ್ಲಿ ಸುಖವೂ ಇದೆ; ಇದನ್ನು ಎಲ್ಲರಿಗೂ ಹಿಡಿದು ನಿಂತಿರುವ ಕರ್ಮ-ಫಲ-ಭೋಗ ನಿಯಮವೂ ಇದೆ.

೧೩ ದೃಢ ವಿಶ್ವಾಸ : ದೇವಮಾನವ

(ವೇದಾಂತಿಯ ಮನೆಯಲ್ಲಿ ಅಪರಿಚಿತ ಧೂರ್ತ)

ಒಮ್ಮೆ, ಒಬ್ಬ ಮನುಷ್ಯನು ಒಬ್ಬ ವೇದಾಂತಿಯ ಮನೆಗೆ ಬಂದು, ಆ ಯಜಮಾನನು ಇಲ್ಲದಾಗ, ಅಲ್ಲಿ ಖಾಲಿಯಾಗಿದ್ದ ಯಜಮಾನನ ಗೌರವಪೀಠದ ಮೇಲೆ ಕುಳಿತುಕೊಂಡನು. ಸ್ವಲ್ಪ ಹೊತ್ತಿನಲ್ಲಿ ಯಜಮಾನನು ಒಳಗೆ ಬಂದನು. ಕರೆಯಂದೆ ನುಗ್ಗಿದ್ದ ಆ ಹೊಸ ಮನುಷ್ಯನು, ಯಜಮಾನನನ್ನು ಕಂಡಕೂಡಲೇ ಸೌಜನ್ಯದೃಷ್ಟಿಯಿಂದ ಎದ್ದು ನಮಸ್ಕರಿಸಬೇಕಾಗಿತ್ತು ; ಅಲ್ಲದೇ ಅವನು ಯಜಮಾನನ ಪೀಠದ ಮೇಲೆಯೇ ಕುಳಿತಿದ್ದುದೂ ವಿನಯವರ್ತನೆಯಾಗಿರಲಿಲ್ಲ. ಯಜಮಾನನನ್ನು ಕಂಡ ಕೂಡಲೇ, ಅವನು ಲೋಕರೂಢಿಯ ಯಾವ ಕುಶಲ ಪ್ರಶ್ನೆಯನ್ನೂ ಮಾಡದೆ ಕುಳಿತಲ್ಲಿಯೇ ಧೂರ್ತನಂತೆ "ಏನಯ್ಯಾ ವೇದಾಂತಿ ! ದೇವರೆಂದರೆ ಏನಯ್ಯಾ ? ಮನುಷ್ಯನೆಂದರೆ ಏನು ? ಹೇಳು ನೋಡೋಣ." ಎಂದು ಕೇಳಿದನು. ಆ ಪ್ರಾಜ್ಞ ವೇದಾಂತಿಯು ಅವನ ಪ್ರಶ್ನೆಗೆ ನೇರವಾಗಿ ಉತ್ತರ ಕೊಡಲಿಲ್ಲ. ಅವನು ಸುಮ್ಮನೇ ತನ್ನ ಸೇವಕರನ್ನು ಕೂಗಿ ಕರೆದು, "ಲೋ! ಈ ಮುಠ್ಠಾಳನನ್ನು ಹೊರಗೆ ದಬ್ಬಿ ! ಈ ಚಂಡಾಲನನ್ನು ಚೆಂಡುಹಿಡಿದು ಹೊರಗೆ ನೂಕಿರೋ !" ಎಂದು ಕಠೋರವಾದ ಮಾತುಗಳನ್ನು ಬಳಸುತ್ತಾ, ಕೋಪಾಟೋಪದಿಂದ ಕಿರಚುವುದಕ್ಕೆ ತೊಡಗಿದನು. ಆ ವೇದಾಂತಿಯ ಅತ್ಯಂತ ಅನಿರೀಕ್ಷಿತವಾದ ಆ ಭಯಂಕರ ವರ್ತನೆಯಿಂದ, ಆ ದುರ್ವಿನೀತನಾದ ಅಭ್ಯಾಗತನು, ಗಾಬರಿಗೊಂಡು ಥರಥರ ನಡಗುತ್ತಾ ಆ ಗೌರವ ಪೀಠವನ್ನು ಬಿಟ್ಟು, ಅಪರಾಧಿಯಂತೆ ಎದ್ದು ನಿಂತನು. ಆ ಪ್ರಾಜ್ಞ ಚತುರನು, ಆ ಪೀಠದ ಮೇಲೆ ಕುಳಿತು, ಒಮ್ಮೆಗೇ ಹಸನ್ಮುಖಿಯಾಗಿ ಶಾಂತವಾಗಿಯೂ ಗಂಭೀರವಾಗಿಯೂ ಅವನನ್ನು ಕುರಿತು "ಇಲ್ಲಿ ನೋಡಿ, ಸ್ವಾಮಿ ! (ತನ್ನನ್ನು ತೋರಿಸಿಕೊಳ್ಳುತ್ತಾ) ಇಗೋ ! ಇಲ್ಲಿದ್ದಾನೆ ದೇವರು—ತನ್ನ ಸ್ವಂತ ಸ್ಥಾನದಲ್ಲಿ ಪ್ರತಿಷ್ಠಿತನಾಗಿ ! ಆ ಸ್ಥಾನದಲ್ಲಿದ್ದರೂ ಭಯ-ಸಂಶಯಗಳಿಂದ ಹಾರಿ ಹೊರಗೆ ನಿಂತ ನೀವೇ ಮನುಷ್ಯರು. ಎಂಥಾ ಭಯಂಕರ ವಿಪತ್ತು ಬಂದರೂ ಭಯಪಡದೆ ಸಮಚಿತ್ತತೆಯಿಂದಲೂ ಶಾಂತಿಯಿಂದಲೂ ಸ್ಥಿರತೆಯಿಂದಲೂ ನಿಮ್ಮ ಸ್ಥಾನವನ್ನು ನೀವು ಬಿಡದೆ, ಭದ್ರವಾಗಿ ಕೂತಿದ್ದರೆ, ನೀವೂ ದೇವರಾಗಿಯೇ ಇರುತ್ತಿದ್ದಿರಿ. ಅದರೆ ನಿಮ್ಮ ದೇವತ್ವದಲ್ಲಿ ನಿಮಗೆ ವಿಶ್ವಾಸವಿಲ್ಲದೆ ಭಯದಿಂದ ನಡುಗುತ್ತಿರುವುದೇ ನಿಮ್ಮನ್ನು ಒಂದು ಕ್ಷುದ್ರ ಕ್ರಿಮಿಯನ್ನಾಗಿ ಮಾಡುತ್ತಿದೆ.

"ನಿಮ್ಮ ದೇವತ್ವದಲ್ಲಿ ನೀವು ಜೀವಂತವಾದ ವಿಶ್ವಾಸವಿಟ್ಟು, ನಿಮ್ಮನ್ನು ನೀವು ದೇವರೆಂದು ತಿಳಿದರೆ, ಯಾವುದೂ ನಿಮ್ಮನ್ನು ಬಾಧಿಸಲಾರದು; ಯಾರೂ ನಿಮ್ಮನ್ನು ನೋಯಿಸಲಾರರು." ಎಂದು ಹೇಳಿ ಪೀಠದಿಂದೆದ್ದು ಲೀನನಾಗಿದ್ದ ಅಭ್ಯಾಗತನನ್ನು ಕೈಹಿಡಿದು, ಆ ಪ್ರಾಜ್ಞರು, ತಮ್ಮ ಪೀಠದ ಮೇಲೆ ಕುಳ್ಳಿರಿಸಿ, ನಮಸ್ಕರಿಸಿ, ಉಪಚರಿಸಿದರು.

೧೪. ಸರಿಯಾದ ನಂಬಿಕೆ

(ನಯಾಗರಾದಲ್ಲಿ ಬಿದ್ದ ಇಬ್ಬರು)

ನಯಾಗರಾ ನದಿಯ ವೇಗವಾದ ಪ್ರವಾಹದಲ್ಲಿ ಸಿಕ್ಕಿ, ಇಬ್ಬರು ಕೊಚ್ಚಿಕೊಂಡು ಹೋಗುತ್ತಿದ್ದರು. ಅವರು, ಹೇಗಾದರೂ ಮಾಡಿ ದಂಡೆಗೆ ಬಂದು, ಬದುಕಬೇಕೆಂದು, ಚಡಪಡಿಸುತ್ತಿರುವಾಗ, ಒಬ್ಬನಿಗೆ ತೇಲಿಹೋಗುತ್ತಿದ್ದ ದೊಡ್ಡದೊಂದು ಮರದ ತೊಲೆಯೇ ಸಿಕ್ಕಿತು. ಅವನು ರಕ್ಷಣೆಗಾಗಿ ಅದನ್ನೇ ಹಿಡಿದುಕೊಂಡನು. ಇನ್ನೊಬ್ಬನು ದಂಡೆಯಲ್ಲಿದ್ದ ಜನರಿಂದ ರಕ್ಷಣೆಗಾಗಿ ಎಸೆಯಲ್ಪಟ್ಟಿದ್ದ ಸೂಕ್ಷ್ಮವಾಗಿ ಭದ್ರವಾಗಿದ್ದ ಒಂದು ಹುರಿಯನ್ನು ಹಿಡಿದುಕೊಂಡನು. ಹುರಿಯು ತೆಳ್ಳಗೆ ಬಳಕುತ್ತಿದ್ದರೂ ತೊಲೆಯ ಹಾಗೆ ಭಾರವಾಗಿಲ್ಲವಾದ್ದರಿಂದ ಅದನ್ನು ಹಿಡಿದುಕೊಂಡವನು ಹೇಗೋ ದಂಡೆಯನ್ನು ಸೇರಿದನು. ಆದರೆ ಆ ದೊಡ್ಡ ತೊಲೆಯನ್ನು ಹಿಡಿದುಕೊಂಡವನು ಅದರೊಡನೆಯೇ ಆ ವೇಗವಾದ ಸೆಳವಿನಿಂದ ಕೊಚ್ಚಿ ಒಯ್ಯಲ್ಪಟ್ಟು, ಉಕ್ಕಿ ಹರಿವಾ ನದಿಯ ಘೋರ ಭೋರ್ಗರೆಯುತ್ತಿದ್ದ ಮಹಾ ಜಲಪಾತದ ಕೆಳಗೆ, ಬಾಯ್ದೆರೆದು ಆಕಳಿಸುತ್ತಿದ್ದಾ ಮೃತ್ಯು ಮುಖದೊಳಗೆ ಎಸೆಯಲ್ಪಟ್ಟನು.

ಹೀಗೆಯೇ, ಓ ಪ್ರಪಂಚದ ಜನರೇ! ಈ ಹೊರಗಿನ ಭೋಗ, ಭಾಗ್ಯ, ಅಧಿಕಾರ, ಸಂಪತ್ತು, ಆಸ್ತಿ, ಕೀರ್ತಿ, ಅಭಿವೃದ್ಧಿ ಮೊದಲಾದವುಗಳನ್ನು ನಂಬುತ್ತೀರಿ. ಆ ಮರದ ತೊಲೆಯಂತೆ ಇವುಗಳು ದೊಡ್ಡದಾಗಿ ತೋರುತ್ತವೆ. ಆದರೆ ಅವು ರಕ್ಷಣೆ ಮಾಡತಕ್ಕವುಗಳಲ್ಲ. ನೀವು ನಂಬಿರುವ ಇವುಗಳು ಆ ಭಾರವಾದ ತೊಲೆಯಂತೆ ನಿರಾಶೆಯಿಂದಲೂ ಚಿಂತೆಯಿಂದಲೂ ನೋವಿನಿಂದಲೂ ತುಂಬಿರುವ ಅಗಾಧವಾದ ಪಾತಾಳದೊಳಗೆ ನಿಮ್ಮನ್ನೆಸೆದು ನಾಶಮಾಡುತ್ತವೆ. ಹುಷಾರ್! ಹುಷಾರ್! ಎಚ್ಚರ! ಎಚ್ಚರ! Beware, Beware! ಸತ್ಯವನ್ನು ಭದ್ರವಾಗಿ ಹಿಡಿಯಿರಿ. ಹೊರಗಿನ ವಸ್ತುಗಳನ್ನು ನಂಬುವದಕ್ಕಿಂತಲೂ ಹೆಚ್ಚಾಗಿ ಸತ್ಯವನ್ನು ನಂಬಿ. ಯಾವಾಗ ಒಬ್ಬ ಮನುಷ್ಯನು ಹೊರಗಿನ ವಸ್ತುಗಳನ್ನೂ ಸಂಪತ್ತನ್ನೂ ವಾಸ್ತವವಾಗಿ ನಂಬುತ್ತಾನೋ ಆಗ ಅವನು ಸೋಲಲೇ ಬೇಕು; ವಿಫಲನಾಗಲೇ ಬೇಕು-ಇದೇ ಪ್ರಕೃತಿ ನಿಯಮ. ನಿಮ್ಮ ದೇಶದಲ್ಲಿ ನೀವು ನಂಬಿಕೆಯಿಟ್ಟರೆ, ನೀವು ಸುರಕ್ಷಿತವಾಗಿರುತ್ತೀರಿ. ಇಂದ್ರಿಯಗಳಿಂದ ಮೋಸಹೋಗಬೇಡಿ.

ನಿಮ್ಮ ನೆರೆಹೊರೆಯವರ ಸೂಚನೆಗಳನ್ನೂ ಸಮ್ಮೋಹಗಳನ್ನೂ ಮೀರಿ ನಿಲ್ಲಿರಿ. ನಿಮ್ಮ ಪ್ರಾಪಂಚಿಕವಾದ ಬಂಧ-ಸಂಬಂಧಗಳೆಲ್ಲಾ ನಿಮ್ಮನ್ನು ಚಿಂತೆಯಲ್ಲಿಯೂ ಸಂಕಟದಲ್ಲಿಯೂ ತೊಳಲಾಡುವಂತೆ ಮೋಹವಶ ಮಾಡುತ್ತವೆ. ಅದನ್ನೆಲ್ಲಾ ಮೆಟ್ಟಿ ನಿಲ್ಲಿ; ದೇವತ್ವದಲ್ಲಿ ನಿಮ್ಮ ಏಕತ್ವವನ್ನು ಅನುಭವ ಮಾಡಿದರೆ, ಮುಕ್ತರಾಗುವಿರಿ. ಇಲ್ಲ, ಮುಕ್ತರೇ ನೀವು. ಸ್ವತಃ ಮೋಕ್ಷ ಸ್ವರೂಪರೇ ನೀವು.

ವೈದ್ಯರು ತಾವು ಮಾತ್ರ ರೋಗವನ್ನು ಅಂಟಿಸಿಕೊಳ್ಳದಂತೆ, ರೋಗಿಗಳಿಗೆ ಹೇಗೆ ಚಿಕಿತ್ಸೆಮಾಡಿ ಉಪಚರಿಸುವರೋ ಹಾಗೆ, ನೀವು ವ್ಯವಹಾರವನ್ನು ಮಾಡಿ.

ಯಾವ ಬಗೆಯ ತೊಡಕಿನಲ್ಲಿಯೂ ಸಿಕ್ಕದೆ, ಅಬಾಧಿತವಾದ ಸಾಕ್ಷಿಯ ಮನೋಧರ್ಮದಿಂದ ಕೆಲಸಮಾಡಿ. ಯಾವದನ್ನೂ ಅಂಟಿಸಿಕೊಳ್ಳದಂತೆ "Remain Immune." ಸುರಕ್ಷಿತವಾಗಿರಿ.

೧೫. ಸುಳ್ಳುಕಲ್ಪನೆಯನ್ನು ಕಳೆಯುವುದು

(ಮಗು ಮತ್ತು ಭೂತ)

ಮುಗ್ಧಳಾದ ಒಬ್ಬ ತಾಯಿಯು, ತನ್ನ ಮನೆಯ ಒಂದು ಕೋಣೆಯಲ್ಲಿ ಭಯಂಕರವಾದ ಭೂತವಿದೆಯೆಂದು, ಒಂದು ದಿನ ತನ್ನ ಸಣ್ಣ ಮಗುವಿಗೆ ಹೇಳಿ ಹೆದರಿಸಿದಳು. ಆ ಮಗುವು ಅದನ್ನೇ ನಂಬಿ ಭಯದಿಂದ ಆ ಕೋಣೆಯೊಳಗೇ ಎಂದೂ ಹೋಗುತ್ತಿರಲಿಲ್ಲ. ಆದರೆ ಆ ಮಗುವಿನ ತಂದೆಯು ಒಂದು ಸಂಜೆ ಮನೆಗೆ ಬಂದವನು, ಆ ಕೋಣೆಯಲ್ಲಿರುವ ತನ್ನ ಪುಸ್ತಕವೊಂದನ್ನು ತಂದು, ಕೊಡಬೇಕೆಂದು ಮಗುವಿಗೆ ಹೇಳಿದನು. ಆ ಕೋಣೆಯಲ್ಲಿ ದೊಡ್ಡ ದೆವ್ವ ಇದೆಯೆಂದು ತಾಯಿ ಹೇಳಿದ್ದಾಳೆಂದೂ ತಾನು ಎಂದೂ ಅಲ್ಲಿಗೆ ಹೋಗುವುದಿಲ್ಲವೆಂದೂ ಮಗುವು ಹಟ ಮಾಡಿತು, ಮಗುವಿನ ಭಯವನ್ನು ಕಳೆಯಬೇಕೆಂದು ಜಾಣನಾದ ತಂದೆಯು ತನ್ನ ಸೇವಕನನ್ನು ಕರೆದು, ಅವನಿಗೆ ಗುಟ್ಟಾಗಿ ಕಿವಿಯಲ್ಲಿ ಏನನ್ನೋ ಹೇಳಿ ಕಳಿಸಿದನು. ಆ ಸೇವಕನು, ಮಗುವಿಗೆ ತಿಳಿಯದಂತೆ ಆ ಕೋಣೆಯೊಳಗೆ ಹೋಗಿ, ಒಂದು ತಲೆದಿಂಬಿಗೆ ಕಪ್ಪುಬಟ್ಟೆಯನ್ನು ಸುತ್ತಿ, ಅದರ ಒಂದು ಮೂಲೆಯ ತುದಿಯನ್ನು ಆ ಕೋಣೆಯ ಒಂದು ಕಿಟಕಿಯ ಬಾಗಿಲ ಸಂದಿಯಿಂದ ಮಗುವಿಗೆ ಕಾಣುವಂತೆ ಹೊರಗೆ ಚಾಚಿದನು. ಆಗ ತಂದೆಯು ಮಗುವಿಗೆ ಅದನ್ನು ತೋರಿಸಿ, "ಅಗೋ ಅಗೋ ! ಆ ದೆವ್ವವು ಕಿವಿಯನ್ನು ಚಾಚಿ ಹೊರಗೆ ಇಣುಕುತ್ತಿದೆ ; ಬಾ ! ಬಾ ! ಈ ಕೋಲಿನಿಂದ ಅದನ್ನು ಹೊಡೆದು ಓಡಿಸೋಣ" ಎಂದು ಹೇಳಿ, ಕೈಗೆ ತನ್ನ ಕೋಲನ್ನು ಕೊಟ್ಟು, ಪ್ರೋತ್ಸಾಹಿಸಿ ಆ ಕಿವಿಯು ಕಾಣುವಲ್ಲಿಗೆ ಕರೆದುಕೊಂಡು ಹೋಗಿ, ಆ ದೆವ್ವವನ್ನು ಚೆನ್ನಾಗಿ ಹೊಡೆಯಲು ಹೇಳಿದನು. ಕೆಲವು ಸಮಯ ಮಕ್ಕಳಿಗೆ ಉಪಾಯದಿಂದ ಉತ್ತೇಜನ ಕೊಟ್ಟರೆ, ಅವರು ಧೈರ್ಯಶಾಲಿಗಳೂ ಸಾಹಸಿಗಳೂ ಆಗುತ್ತಾರೆ. ಆ ಮಗುವೂ ತಂದೆಯ ಜೊತೆಗೆ ಹೋಗಿ, ಆ ದೆವ್ವದ ತಲೆಗೆ ಚೆನ್ನಾಗಿ ಹೊಡೆಯಿತು. ದೆವ್ವವು ತಲೆಯನ್ನು ಒಳಗೆ ಎಳೆದುಕೊಂಡು ಅಳುವುದಕ್ಕೆ ತೊಡಗಿತು. ಮಗುವಿಗೆ ಬಹಳ ಧೈರ್ಯವೂ ಸಂತೋಷವೂ ಉಂಟಾಯಿತು. ಮಗುವು ಜಯಶಾಲಿಯಾದನೆಂದು ತಂದೆಯೂ ಹೊಗಳಿ ಉಬ್ಬಿಸಿದನು. ಸ್ವಲ್ಪ ಹೊತ್ತಿನ ಮೇಲೆ, ಆ ದೆವ್ವವು ಪುನಃ ತನ್ನ ತಲೆಯನ್ನು ಹೊರಗೆ ಚಾಚಿತು, ಕಿಟಕಿಯ ಬಾಗಿಲ ಸಂದಿಯಿಂದ ಈಗ ಎರಡು ಕಿವಿಗಳು ಕಾಣುತ್ತಿದ್ದವು. ತಂದೆಯು ಮಗುವಿಗೆ, ಪುನಃ ಪ್ರೋತ್ಸಾಹ ಕೊಟ್ಟನು. ಮೊದಲ ಸಲದ ತನ್ನ ಗೆಲುವಿನಿಂದ ಹೆಚ್ಚು ಧೈರ್ಯಗೊಂಡಿದ್ದ ಮಗುವು, ಈ ಸಲ ತಾನೇ ಮುಂದೆ ನುಗ್ಗಿ, ದೆವ್ವದ

ತಲೆಯನ್ನು ಧೊಪ್! ಧೊಪ್! ಎಂದು ಚೆನ್ನಾಗಿ ಹೊಡೆಯಿತು. ದೆವ್ವವೂ ಬಹಳ ಅತ್ತು ಸುಮ್ಮನಾಯಿತು. ಆಗ ತಂದೆಯು ಮುಂದೆ ನುಗ್ಗಿ, ಆ ದೆವ್ವದ ತಲೆಯನ್ನು ಹಿಡಿದು, ಹೊರಗೆ ಎಳೆದುಹಾಕಿದನು. ತಂದೆಯು ಆ ತಲೆದಿಂಬನ್ನು ತೋರಿಸಿ "ನೋಡು ಮಗು! ನೀನು ಎಂಥಾ ಶೂರ! ಇದಕ್ಕೆ ಹೆದರುತ್ತಿದ್ದೆಯಲ್ಲಾ, ಈಗ ನೀನೇ ಧೈರ್ಯದಿಂದ ಇದನ್ನು ಹೊಡೆದು ಕೊಂದುಬಿಟ್ಟೆ; ಇಷ್ಟುಬಂದ ರೂಪವನ್ನು ತಾಳಬಲ್ಲ ಪಿಶಾಚಿಯು ಸಾಯುವಾಗ ತಲೆದಿಂಬಾಗಿದೆ: ನೋಡು! ಹೀಗೆ ನೀನು ಎಂದೂ ಯಾವ ಭೂತಕ್ಕೂ ಹೆದರಬಾರದು. ಧೈರ್ಯದಿಂದ ಮುಂದೆ ನುಗ್ಗಿ ಸದೆ ಬಡಿದರೆ ಅವು ಸೋತುಹೋಗುತ್ತವೆ; ಕೊನೆಗೆ ಸಾಯುತ್ತವೆ." ಎಂದು ಆ ಮಗುವಿಗೆ ಉಪಾಯದಿಂದ, ಬೆಳೆದಿದ್ದ ಧೈರ್ಯವನ್ನು ಭದ್ರಮಾಡಿದನು. ಮಗುವು ಅದನ್ನೆಲ್ಲಾ ನಿಜವೆಂದು ನಂಬಿ ಸಂತೋಷಪಟ್ಟಿತು. ದೆವ್ವವೂ ಭೂತವೂ, ಅದರ ಭ್ರಮೆಯೂ ಎಲ್ಲಾ ಹೋಯಿತು. ಅದು ಧೈರ್ಯದಿಂದ ಕುಣಿಯುತ್ತಾ ಆ ಕೋಣೆಯೊಳಗೇ ಹೋಗಿ, ತಂದೆಗೆ ಬೇಕಾಗಿದ್ದ ಪುಸ್ತಕವನ್ನು ತಂದುಕೊಟ್ಟಿತು. ಆದರೆ ಯಾವ ವಿವೇಕಿಯಾದ ತಂದೆಯಾದರೂ ತನ್ನ ಬೆಳೆದ ಮಗನಿಗೆ ಆತ್ಮವಿಶ್ವಾಸವನ್ನೂ ಧೈರ್ಯವನ್ನೂ ಹುಟ್ಟಿಸಲು, ಈ ಉಪಾಯವನ್ನು ಹೂಡಬಹುದೆ? ಛೆ, ಛೆ! ಹುಚ್ಚುತನವೂ ಪೆಚ್ಚುತನವೂ ಆದೀತು. ಬುದ್ಧಿ ಬೆಳೆಯುದಿರುವ ಆ ಸಣ್ಣ ಮಗುವಿಗೆ ಆ ಉಪಾಯವೇನೋ ಪ್ರಯೋಜನವಾಯಿತು. ಆ ಮಗುವು ಆ ದಿಂಬನ್ನು ಬಡೆದಿದ್ದರಿಂದ ನಿಜವಾದ ಭೂತವನ್ನೇನೂ ಅದು ಓಡಿಸಲಿಲ್ಲ; ಕೊಲ್ಲಲಿಲ್ಲ. ಆದರೆ, ಎಂಥಾ ಭೂತವನ್ನಾದರೂ ಬಡಿದೋಡಿಸಬಲ್ಲೆನೆಂಬ ಧೈರ್ಯವೂ ಆತ್ಮವಿಶ್ವಾಸವೂ ಕೋಣೆಯಲ್ಲಿ ಭೂತವಿಲ್ಲವೆಂಬ ನಂಬಿಕೆಯೂ ಆ ಮಗುವಿನಲ್ಲಿ ಬೆಳೆಯಿತು. ಅದರ ಕಲ್ಪನೆಯಿಂದಲೇ ಕೋಣೆಯಲ್ಲಿ ಭೂತ ಬಂದಿದ್ದಿತು. ಭೂತವು ನಿಜವಾಗಿ ಬಂದೂ ಇರಲಿಲ್ಲ; ಹೋಗಲೂ ಇಲ್ಲ. ಹೋಗಲಾಡಿಸಬೇಕಾಗಿರುವುದು ಸುಳ್ಳು ಕಲ್ಪನೆಯನ್ನು. ಬೆಳೆದವರ ಭ್ರಮೆಗಳನ್ನು ಬೇರೆ ಉಪಾಯಗಳಿಂದ ಹೋಗಲಾಡಿಸಬಹುದು. ಜನರು ಮೊದಲು ಸಾಮಾನ್ಯವಾಗಿ ತಾವು ಪಾಪಿಗಳೆಂದೂ ಭಯಂಕರ ನರಕವೇ ತಮಗೆ ಗತಿಯೆಂದೂ ಸೃಷ್ಟಿಯ ಆರಂಭದ ಪ್ರಥಮ ದಂಪತಿಗಳಾದ ಆಡಮ್–ಈವ್ ಇವರು ಮಾಡಿದ ಮೊದಲ ಪಾಪದಿಂದ ತಾವೆಲ್ಲರೂ ಸ್ವಾಭಾವಿಕವಾಗಿ ಪಾಪಿಗಳಾದೆವೆಂದೂ ತಾವು ಕೇವಲ ದುರ್ಬಲರಾದ ಕ್ಷುದ್ರ ಜಂತುಗಳೆಂದೂ ಭಾವಿಸುತ್ತಾರೆ. (ಸರಳವಾದ ಸತ್ಯವನ್ನು ಬಿಚ್ಚಿ ನುಡಿಯುವುದಕ್ಕಾಗಿ ರಾಮನನ್ನು ಕ್ಷಮಿಸಿ) ಬೈಬಲ್ಲಿನ ಒಂದು ಭಾಗವು, ಜನರು ತಾವು ಸ್ವಭಾವತಃ ಪಾಪಿಗಳೆಂದು ತಿಳಿಯುವಂತೆ ಮಾಡಿದೆ. (The Old Testament) ಹಳೆಯ ಒಡಂಬಡಿಕೆಯು ಈ ಪ್ರಪಂಚದಲ್ಲಿ (ದುರ್ದೈವಿಗಳಾದ) ಬಡ ಕ್ರೈಸ್ತರ (ಅಮೃತಾತ್ಮನಿರುವ ಪ್ರಕಾಶ ಮಂದಿರವಾದ) ಹೃದಯಗಳಲ್ಲಿ, ಮನುಷ್ಯನ ಸ್ವಭಾವವೇ ಪಾಪಮಯವೆಂದೂ ಅವನು ಪತಿತನೆಂದೂ ದೀನ–ದರಿದ್ರ–ದಲಿತ–ದುರ್ದೈವಿಯೆಂದೂ ನಂಬುವ ಕಲ್ಪಿತ

ಪಿಶಾಚಿಯನ್ನು ಎಬ್ಬಿಸಿತು. ಮನಸ್ಕರು, ಅತಿವೃಷ್ಟಿ–ಚಂಡಮಾರುತ ಇತ್ಯಾದಿ ಪ್ರಚಂಡವಾದ ಪ್ರಕೃತಿ ಶಕ್ತಿಗಳ ಕೃಪೆಯಿಂದ ಬದುಕಬೇಕಾಗಿರುವ ದುರ್ಬಲ ಕ್ಷುದ್ರಜೀವಿಗಳು ಎಂಬ ಭಾವನೆಗಳನ್ನು ಅವರ ಹೃದಯಗಳಲ್ಲಿ ಹಳೆಯ ಒಡಂಬಡಿಕೆಯು ಒತ್ತಾಯದಿಂದ ತುಂಬಿತು. ಪ್ರಪಂಚದ ಜೀವರುಗಳಲ್ಲಿ ಮೊದಲು ಈ ಭ್ರಾಂತಿಯ ಭೂತವನ್ನು ಪ್ರಬಲವಾಗಿ ಬೆಳೆಸಿ ಅನಂತರ "The New Testament" ಹೊಸ ಒಡಂಬಡಿಕೆಯು ಬಂದಿತು. ರಾಮನು ಈ ಮಾತನ್ನು ಪಕ್ಷಪಾತದಿಂದ ಹೇಳುತ್ತಿಲ್ಲ. ಓಲ್ಡ್ ಟೆಸ್ಟಮೆಂಟ್ ತಾಯಿಯು ಅಸಂಸ್ಕೃತರಾದ ಜನರ ಹೃದಯಗಳಲ್ಲಿ ಪ್ರಬಲವಾಗಿ ಬೆಳೆಸಿದ್ದ ಹುಚ್ಚು ಭ್ರಾಂತಿಯ ಭೂತವನ್ನು ನ್ಯೂಟೆಸ್ಟಮೆಂಟಿನ ಸೆಯಿಂಟ್ ಪಾಲ್ ತಂದೆಯು ಉಚ್ಚಾಟನೆಮಾಡಲು ಅತೀವವಾಗಿ ಪ್ರಯತ್ನಮಾಡಿದ. ಅವನು ಮಾಡಿದ ಉಪಾಯವೇನು ? ಅದನ್ನು ಸೆಯಿಂಟ್‌ಪಾಲನು ಮಾಡಲಿಲ್ಲ; ದೈವವೇ ಸೆಯಿಂಟ್ ಪಾಲನ ಮೂಲಕವಾಗಿ ನಡೆಸಿತು ಎಂದು ರಾಮನು ಹೇಳುತ್ತಾನೆ. ಅಂಧಕಾರದಲ್ಲಿ ಕಾಡುತ್ತಿರುವ ಆ ಪಾಪ-ಪತನಗಳ ಪಿಶಾಚಿಯನ್ನು ಓಡಿಸಲು, ಒಂದು ರೀತಿಯ ಪುಣ್ಯಕಾರ್ಯದ ಸಾಧನ ವಿಧಾನವನ್ನು ಜನರಿಗೆ ಹೇಳಿದನು. "ಮತಕ್ಕೆ ಸೇರುವ ದೀಕ್ಷಾಸ್ನಾನವನ್ನು ಮಾಡಿ ಕ್ರೈಸ್ತರಾಗುವುದರಿಂದಲೂ ಅವರ ಚರ್ಚ್ ದೇವಾಲಯಕ್ಕೆ ಹೋಗಿ, ಅಲ್ಲಿ ಪಾದ್ರಿಯು ನಡೆಸುವ ಪ್ರಾರ್ಥನಾದಿಗಳಲ್ಲಿ ಭಾಗಿಗಳಾಗಿ ಸುಟ್ಟ ಹಂದಿಯ ಮಾಂಸದ ಮೇಲೆ ಅನುಗ್ರಹವನ್ನು ಬೇಡುವುದರಿಂದಲೂ, ಮುಖ್ಯ ಪುರೋಹಿತರನ್ನು ಭೋಜನಮಾಡಿಸುವುದರಿಂದಲೂ, ಅವರ ಜೀವನಕ್ಕೆ ಸಹಾಯ ಮಾಡುವುದರಿಂದಲೂ ಕ್ರಿಸ್ತನ ವೈಶಿಷ್ಟ್ಯದ ಪೋಷಾಕನ್ನು ಧರಿಸುವುದರಿಂದಲೂ ಇವೇ ಮೊದಲಾದವುಗಳಿಂದ, ನಿಮ್ಮ ಪಾಪಗಳೆಲ್ಲಾ ನಾಶವಾಗಿ ನೀವು ಉದ್ಧಾರವಾಗುತ್ತೀರಿ; ಮುಕ್ತರಾಗುತ್ತೀರಿ; ಜೀವನದ ಪುಸ್ತಕದಲ್ಲಿ ನಿಮ್ಮ ಹೆಸರು ಬರೆಯಲ್ಪಡುತ್ತದೆ"—ಎಂದು ಸೆಯಿಂಟ್ ಪಾಲ್ ಹೇಳಿದನು. ಈ ಎಲ್ಲಾ ಕ್ರಮಗಳೂ ಕಾರ್ಯಗಳೂ ಆ ಸಣ್ಣ ಮಗುವಿನಿಂದ ತಲೆದಿಂಬಿನ ಭೂತವನ್ನು ಬಿಡಿಸಿದ ಹಾಗೆ. ಆದರೂ ಜನರು ಅಷ್ಟೆಲ್ಲಾ ಮಾಡಿ "ನಾವು ಪುನೀತರಾದೆವು; ನಾವು ರಕ್ಷಿತರಾದೆವು; ಮುಕ್ತರಾದೆವು" ಎಂದು ಜೀವಂತವಾದ ವಿಶ್ವಾಸವನ್ನೂ ನಂಬಿಕೆಯನ್ನೂ ನಿಶ್ಚಯವನ್ನೂ ಪಡೆಯುವುದಾದರೆ, ಒಳ್ಳೆಯದೆ. ಅವರು ನಿಜವಾಗಿಯೂ ರಕ್ಷಿತರಾದರೆಂದೇ ಹೇಳಬೇಕು. ಮಗುವು ದಿಂಬಿನ ಭೂತವನ್ನು ಬಡೆದು, ಕೋಣೆಯಲ್ಲಿ ಭೂತವಿಲ್ಲವೆಂದು ಹೇಗೆ ಸಮಾಧಾನವನ್ನು ಹೊಂದಿತೋ ಹಾಗೆ, ನಿಜವಾದ ಕ್ರೈಸ್ತರು ಸೆಯಿಂಟ್‌ಪಾಲ್ ಹೇಳಿರುವ ಸೇವೆಗಳನ್ನೆಲ್ಲಾ ನಡೆಸಿ, ತಾವು ಪಾರಾದೆವೆಂದೂ ರಕ್ಷಿತರಾದೆವೆಂದೂ ಭಾವಿಸಿ ನಂಬಿದರೆ, ಅವರು ಪಾರಾದಂತೆಯೇ ಸರಿ.

೧೬. ಶ್ರದ್ಧಾದರ ಸರ್ವಶಕ್ತಿ
(ಧರ್ಮ ಯುದ್ಧ ಮತ್ತು ಭಲ್ಲೆ)

ಕ್ರೈಸ್ತ ಪುಣ್ಯಭೂಮಿಯಾದ 'ಪ್ಯಾಲೆಸ್ತೈ'ನನ್ನು ಮಹಮ್ಮದೀಯರಿಂದ ಹಿಂದಕ್ಕೆ ಕಿತ್ತುಕೊಳ್ಳಲು, ಕ್ರೈಸ್ತರು ಕೈಕೊಂಡ ದಂಡಯಾತ್ರೆಯ ಧರ್ಮಯುದ್ಧಗಳಲ್ಲಿ (ಜುಡಿಯಾದಲ್ಲಿ) ಕ್ರೈಸ್ತರು ರಕ್ತದ ಕಾಲುವೆಗಳನ್ನೇ ಹರಿಸಿದರು. ಆಗ, ಸಣ್ಣ ಯುದ್ಧವೊಂದರಲ್ಲಿ ಮಹಮ್ಮದೀಯರು ಕ್ರೈಸ್ತರನ್ನು ಸೋಲಿಸಿ, ಹಿಮ್ಮೆಟ್ಟಿಸಿದರು. ಆಗ ಕ್ರೈಸ್ತ ಸೈನ್ಯಗಳಲ್ಲಿದ್ದ ಉನ್ಮತ್ತಾಭಿಮಾನಿಯಾದ ಧರ್ಮಾಂಧನೊಬ್ಬನು ತಾನು ಖ್ಯಾತಿಯನ್ನು ಸಂಪಾದಿಸಬೇಕೆಂದು, ತನಗೊಂದು ದಿವ್ಯದರ್ಶನವಾಯಿತೆಂದು ಪ್ರಚಾರ ಮಾಡಿದನು. ಕ್ರಿಸ್ತನ ಕಾಲನ್ನು ಒಮ್ಮೆ ಮುಟ್ಟಿದ್ದ ಮತ್ತು ಅವನ ಕಾಲ ಕೆಳಗೆ ಹೂತಿದ್ದ ಒಂದು ಭಲ್ಲೆಯನ್ನು ತಾವು ಹುಡುಕಿ ಅಗೆದು ತೆಗೆದುಕೊಂಡರೆ,ತಮಗೆ ಯುದ್ಧದಲ್ಲಿ ಜಯವು ಖಂಡಿತವೆಂದು ಒಂದು ದೇವತೆಯು ತನಗೆ ದರ್ಶನಕೊಟ್ಟು ಹೇಳಿದೆಯೆಂದು ಸುದ್ದಿಯನ್ನು ಹಬ್ಬಿಸಿದನು. ಜನರು ಸ್ವಲ್ಪವೂ ವಿಚಾರಮಾಡದೆ ಅದನ್ನು ನಂಬಿ ಸೈನ್ಯದ ತುಂಬಾ ಹರಡಿದರು. ಕಥೆಯು ಸುಳ್ಳೋ ನಿಜವೋ ಎಂಬ ವಿವೇಚನೆಯನ್ನೇ ಮಾಡದೆ, ಎಲ್ಲರೂ ಅಗೆಯುವುದಕ್ಕೆ ತೊಡಗಿದರು. ರಾತ್ರಿ ಬಹಳ ಹೊತ್ತಿನವರೆಗೂ ಹಗಲೆಲ್ಲಾ ಅಗೆದರೂ ಅದು ಸಿಕ್ಕಲಿಲ್ಲ. ನಿರಾಶರಾಗಿ ಎಲ್ಲರೂ ಕೈಬಿಡುತ್ತಿರುವುದರೊಳಗೇ ಅದೇ ಸೈನಿಕನು ತಾನು ಆ ಸ್ಥಳವನ್ನು ಕಂಡುಹಿಡಿದಿರುವುದಾಗಿ ಉಚ್ಚವಾದ ಧ್ವನಿಯಲ್ಲಿ ಕೂಗಿಡುವುದಕ್ಕೆ ತೊಡಗಿದನು. ಎಲ್ಲರೂ ಅಲ್ಲಿಗೆ ನುಗ್ಗಿ ಹೋದಾಗ ಅದನ್ನು ಕಂಡರು. ಅದು ಬಹಳ ಹಳೆಯದೂ ತುಕ್ಕು ಹಿಡಿದು ಲಡ್ಡೂ ಆಗಿತ್ತು. "ಓ! ಆ ಭಲ್ಲೆ, ಇಲ್ಲೆ ಇದೆ. ಅದು ಕ್ರಿಸ್ತನನ್ನು ಮುಟ್ಟಿರಬೇಕು; ಆದರೆ ಮಣ್ಣು ತಿಂದಿದೆ" ಎಂದನು. ಎಲ್ಲರೂ ನೋಡುವಂತೆ ಅದನ್ನು ಎತ್ತಿ ತೋರಿಸಿದನು. ಎಲ್ಲಾ ಕ್ರೈಸ್ತರೂ ಅದರ ಸುತ್ತಲೂ ಕುಣಿದಾಡಿದರು. ಅವರ ಆನಂದಕ್ಕೆ ಪಾರವೇ ಇರಲಿಲ್ಲ. ಹೀಗೆ ತುಕ್ಕು ಹಿಡಿದು ಲಡ್ಡಾದ ಆ ಭಲ್ಲೆಯಿಂದ ಎಲ್ಲರೂ ಸ್ಫೂರ್ತಿ ಪಡೆದು ಹೊಸ ಚೈತನ್ಯದಿಂದ ತುಂಬಿದವರಂತೆ, ಶತ್ರುಗಳ ಮೇಲೆ ಪುನಃ ಧಾಳಿಮಾಡಿ, ವೀರಾವೇಶದಿಂದ ಯುದ್ಧಮಾಡಿ ಜಯಶಾಲಿಗಳಾದರು. ಅನಂತರ ಆ ಕ್ರೈಸ್ತರೆಲ್ಲಾ ಯುರೋಪಿಗೆ ಹಿಂದಿರುಗಿದ ಮೇಲೆ, ಆ ಭಲ್ಲೆಯು ದೊರೆತ ಸುದೈವದಿಂದಲೇ ತಮಗೆ ಜಯವಾಯಿತೆಂದು ಎಲ್ಲರೂ ನಂಬಿದ್ದರು. ಆಗ ಆ ದಿವ್ಯದರ್ಶನದ ಕಥೆಯನ್ನು ಪ್ರಚಾರಮಾಡಿ ಪ್ರಸಿದ್ಧನಾಗಿದ್ದ ಸೈನಿಕನಿಗೆ, ಕೆಲವು ದಿನಗಳ ಮೇಲೆ ತುಂಬಾ ಕಾಹಿಲೆಯಾಯಿತು. ಅವನು ಮರಣಶಯ್ಯೆಯಲ್ಲಿರುವಾಗ ಕ್ರೈಸ್ತಪದ್ಧತಿಯಂತೆ ಅವನನ್ನು ಅನುಗ್ರಹಮಾಡಲು, ಬಂದಿದ್ದ ಕ್ರೈಸ್ತಗುರುಗಳಲ್ಲಿ ಪಶ್ಚಾತ್ತಾಪದಿಂದ ತನ್ನ ಪಾಪಗಳನ್ನೆಲ್ಲಾ ನಿವೇದನೆಮಾಡುವಾಗ, ಆ ಯುದ್ಧದಲ್ಲಿ ತಮಗೆ ಜಯವನ್ನು ತಂದಿದ್ದ ಆ ಭಲ್ಲೆಯ ಪ್ರಕರಣವೆಲ್ಲಾ ತಾನೇ ನಡೆಸಿದ ಕಪಟ ನಾಟಕವೆಂದು ಒಪ್ಪಿಕೊಂಡನು. ಆ ಈಟಿಯು ಸೈನ್ಯದಲ್ಲಿಯೇ ಇದ್ದ, ತನ್ನ ಅಜ್ಜ ಮುತ್ತಜ್ಜನ

ಕಾಲದಿಂದಲೂ ತನ್ನ ಮನೆಯಲ್ಲಿಯೇ ಇದ್ದ, ಆಯುಧವೆಂದು ಹೇಳಿದನು. ಕ್ರೈಸ್ತ ಸೈನಿಕರು ಜೆರೂಸಲೆಂಗೆ ಹೋಗುವಾಗ ಇವನೂ ಅದನ್ನು ಬಟ್ಟೆಯಲ್ಲಿ ಮುಚ್ಚಿಕೊಂಡು ಒಯ್ದಿದ್ದನಂತೆ. ಯುದ್ಧದಲ್ಲಿ ಅದು ನಿರುಪಯೋಗಿ ಆಗಿದ್ದು, ಆ ಸಲ ಅವರೆಲ್ಲರೂ ಸೋತು ಹಿಮ್ಮೆಟ್ಟಿ ಓಡಿಬರುವಾಗ, ತಾನು ಹೇಗಾದರೂ ಜನಪ್ರಿಯನಾಗಿ ಪ್ರಸಿದ್ಧಿಗೆ ಬರಬೇಕೆಂದು ಆ ಕಥೆಯನ್ನು ಪ್ರಚಾರಮಾಡಿದನಂತೆ. ಜನರೆಲ್ಲಾ ಅಗೆದು ಅಗೆದು ಭಲ್ಲೆ ಸಿಕ್ಕದೆ, ನಿರಾಶರಾಗಿ ಕೈಬಿಟ್ಟಾಗ, ತಾನೇ ತನ್ನ ಲಡ್ಡು ಭಲ್ಲೆಯನ್ನು ಯಾರೂ ಕಾಣದಂತೆ ಆ ಗುಂಡಿಯೊಳಗೆ ಮುಚ್ಚಿಟ್ಟು, ಸಿಕ್ಕಿತೆಂದು ತೋರಿಸಿದನಂತೆ. ಇತಿಹಾಸ ಕಾರರು, ಅವನಾ ಮರಣಶಯ್ಯೆಯ ರಹಸ್ಯವಾದ ನಿವೇದನೆಯನ್ನು ಹೊಂಚಿ ಕೇಳಿ, ಆ ಸಂದರ್ಭದಲ್ಲಿ ಕ್ರೈಸ್ತರ ವಿಜಯಕ್ಕೆ ತುಕ್ಕು ಹಿಡಿದು ಕೆಲಸಕ್ಕೆ ಬಾರದಿದ್ದ ಈ ಈಟಿಯು ಕಾರಣವಾಗಿರಲಿಲ್ಲವೆಂದೂ ಸೈನಿಕರ ಪೂರ್ಣವಿಶ್ವಾಸವೂ ಉತ್ಸಾಹವೂ ಕಾರಣವಾಗಿತ್ತೆಂದೂ ಪ್ರಸಿದ್ಧಿಪಡಿಸಿದರು.

ಹೀಗೇ "ಓ ಕ್ರೈಸ್ತರೆ! ಓ ಮುಹಮ್ಮದೀಯರೆ! ಓ ವೈಷ್ಣವರೇ! ಇಡೀ ಜಗತ್ತಿನ ಬೇರೆ ಬೇರೆ ಮತದ ಜನರೆ! ಕ್ರಿಸ್ತ, ಮುಹಮ್ಮದ್, ಕೃಷ್ಣ, ಬುದ್ಧ ಮಂತ್ತೆ ಯಾವ ಮಹರ್ಷಿಗಳ ಹೆಸರಿನಿಂದಾಗಲೀ ನೀವು ರಕ್ಷಿತರಾಗುತ್ತೀರೆಂದು ತಿಳಿದಿದ್ದರೆ, ನಿಮ್ಮ ರಕ್ಷಣವನ್ನು ಮಾಡುವ ನಿಜವಾದ ಗುಣವು ಕ್ರಿಸ್ತ, ಮುಹಮ್ಮದ್, ಕೃಷ್ಣ, ಬುದ್ಧ ಮೊದಲಾದವರಲ್ಲಿಲ್ಲವೆಂದು ನೆನಪಿನಲ್ಲಿಡಿ. ನಿಮ್ಮನ್ನು ಉದ್ಧಾರ ಮಾಡುವ ಶಕ್ತಿಯು ನಿಮ್ಮಲ್ಲಿಯೇ ಇದೆ." ಎಂದು ವೇದಾಂತವು ಹೇಳುತ್ತದೆ.

ಕ್ರೈಸ್ತರು ಆಗ, ಜಯಶಾಲಿಗಳಾಗುವುದಕ್ಕೆ ಅವರ ಜೀವಂತ ಶ್ರದ್ಧಾದರ-ಉತ್ಸಾಹಗಳೂ ಜೀವಂತ ಶಕ್ತಿಯೂ ಕಾರಣವಾಗಿ, ಹೊರಗಿನದು ಯಾವುದೂ ಕಾರಣವಾಗಿರದಿದ್ದರೆ, ಆ ಜೀವಂತ ಅಥವಾ ಮೃತ ಶಕ್ತಿ-ಗುಣಗಳನ್ನು ಹೊರಗಿನ ಕ್ರಿಸ್ತ, ಮುಹಮ್ಮದ್, ಕೃಷ್ಣ ಮೊದಲಾದವರಿಗೆ ಏಕೆ ಅನ್ವಯಿಸುತ್ತೀರಿ? ನಿಮ್ಮೊಳಗಿರುವ ನಿಜವಾದ ಆತ್ಮನಿಗೇ, ದೇವರಿಗೇ, ಏಕೆ ಹಚ್ಚಬಾರದು? ಎಲ್ಲಾ ಶಕ್ತಿಗಳೂ ನಿಮ್ಮ ಆತ್ಮನಲ್ಲಿಯೇ ಇವೆ—ಎಂದೇಕೆ ತಿಳಿಯಬಾರದು? ಎಷ್ಟು ಸುಲಭವೂ ಸ್ವಾಭಾವಿಕವೂ ಸತ್ಯವೂ ಆದ ತಿಳಿವಳಿಕೆ ಇದು!

೧೭ ನಿಜವಾದ ನಂಬಿಕೆ—ಅದ್ಭುತ ಪವಾಡ

(ಗೋಪಕನ್ಯೆಯ ದೃಢ ನಂಬಿಕೆ)

ಹಿಂದೂಗಳ ಹಿಂದಿನ ಕತೆಗಳಲ್ಲಿ ಸ್ವಾರಸ್ಯವಾದ ಒಂದು ದಂತ ಕಥೆ ಇದೆ. ಒಂದು ದಿನ ಒಬ್ಬ ಪಂಡಿತ-ಸಾಧುಗಳು ತಮ್ಮ ಭಕ್ತವೃಂದದಲ್ಲಿ ಪುರಾಣವನ್ನು ಹೇಳುತ್ತಿದ್ದರು. ಆ ಊರಿಗೆ ಹಾಲು ಮಾರುವದಕ್ಕಾಗಿ ಬಂದಿದ್ದ ಗೌಳಿಗಿತ್ತಿಯರು ಆ ಸಮಯದಲ್ಲಿ ಅಲ್ಲಿ ಹೊರಗೆ ಬೀದಿಯಲ್ಲಿ ಹಾದು ಹೋಗುತ್ತಿದ್ದರು. ಅವರೂ ಆ ಊರಿಗೆ ನಿತ್ಯವೂ ಬರುತ್ತಿದ್ದರು. ಒಂದು ದಿನ ಅವರು ಹಾಲು ಮಾರಿಕೊಂಡು

ಹೋಗುತ್ತಿದ್ದಾಗ ಆ ಪಂಡಿತರು ಪುರಾಣದಲ್ಲಿ "ಭಗವಂತನ ನಾಮವೆಂಬ ಭದ್ರವಾದ ನೌಕೆಯಿಂದ ಅಪಾರವಾದ ಸಂಸಾರ ಸಾಗರವನ್ನು ಸುಲಭವಾಗಿ ದಾಟಬಹುದು. ಓಂ ಎಂಬ ನಾಮವೇ ಅವನ ಅನಂತ ನಾಮಗಳಲ್ಲಿ ಶ್ರೇಷ್ಠವಾದುದು" ಎಂದು ಹೇಳುತ್ತಿದ್ದುದನ್ನು ಕೇಳಿದರು. ಆ ಗೋಪ ಕನ್ಯೆಯರಿಗೆ ಬಹಳ ಸಂತೋಷವಾಯಿತು. ಅವರು ಸ್ವಲ್ಪವೂ ಸಂಶಯ ಪಡದೆ ಆ ಶಾಸ್ತ್ರ-ಗುರುವಾಕ್ಯದಲ್ಲಿ ಸಂಪೂರ್ಣ ವಿಶ್ವಾಸವನ್ನಿಟ್ಟರು. ಅವರು ಬಹಳ ಸರಳರೂ ನಿಷ್ಕಪಟ ಸ್ವಭಾವದವರೂ ಇದ್ದರು. ಅವರಿಗೆ ಯಾವದೂ ಅಸಾಧ್ಯವಾಗಿ ಕಾಣಲಿಲ್ಲ. ಪವಿತ್ರವಾದ ಧರ್ಮಗ್ರಂಥಗಳಲ್ಲಿ ಹೇಳಿರುವದು ಎಂದೂ ಸುಳ್ಳಲ್ಲ, ಎಂದು ಯೋಚಿಸಿ ದೃಢವಾದ ನಂಬಿಕೆಯನ್ನು ಹೊಂದಿದರು. ಅವರು ನಿತ್ಯವೂ ತಮ್ಮ ಊರಿನಿಂದ ಒಂದು ನದಿಯನ್ನು ದೋಣಿಯಲ್ಲಿ ದಾಟಿ ಈ ಊರಿಗೆ ಬರಬೇಕಾಗಿತ್ತು. ಅದಕ್ಕಾಗಿ ಅವರು ಅಂಬಿಗನಿಗೆ ನಿತ್ಯವೂ 5 ಪೈಸಾ ಕೊಡಬೇಕಾಗಿತ್ತು. "ಭಗವಂತನ ಓಂ ಎಂಬ ನಾಮವು (ಸಂಸಾರ) ಸಮುದ್ರವನ್ನೇ ದಾಟಿಸಲು ಶಕ್ತಿಯುಳ್ಳದ್ದಾಗಿರುವಾಗ ಈ ಸಣ್ಣ ನದಿಯನ್ನು ದಾಟಿಸಲಾರದೆ ? ಓಂಕಾರವನ್ನು ಉಚ್ಚರಿಸುತ್ತಾ ನಾವೇಕೆ ನದಿಯನ್ನು ದಾಟಬಾರದು ? ನಿತ್ಯವೂ ದೋಣಿಯವನಿಗೆ 5 ಪೈಸೆಯನ್ನೇಕೆ ಕೊಡಬೇಕು ?" ಎಂದು ಅವರು ಯೋಚಿಸಿದರು. ಅವರ ನಂಬಿಕೆಯು ವಜ್ರದಂತೆ ಗಟ್ಟಿಯಾಗಿತ್ತು. ಆದ್ದರಿಂದ ಅವರು ನದಿಗೆ ಹೋಗಿ ಓಂಕಾರವನ್ನು ಉಚ್ಚರಿಸುತ್ತಾ ಸುಲಭವಾಗಿ ನದಿಯಲ್ಲಿ ನಡೆದು, ದಾಟಿ ಹೋದರು. ಅವರೇನೂ ಮುಳುಗಲಿಲ್ಲ. ಹೀಗೆ ಅಂಬಿಗನಿಗೆ ಏನನ್ನೂ ಕೊಡದೆ, ನಿತ್ಯವೂ ಅವರು ನಾಮಸ್ಮರಣೆಯಿಂದಲೇ ನದಿಯನ್ನು ದಾಟುತ್ತಿದ್ದರು. ಹೀಗೆ ಅವರು ಒಂದು ತಿಂಗಳು ನದಿಯನ್ನು ದಾಟುತ್ತಿದ್ದಮೇಲೆ, ದಿನಕ್ಕೆ 5 ಪೈಸೆಯ ಖರ್ಚನ್ನು ಉಳಿಸಿದ್ದ ಮಹಾಮಂತ್ರವನ್ನು ಯಾರಿಂದ ತಾವು ಕಲಿತಿದ್ದರೋ ಆ ಪುಣ್ಯಾತ್ಮನಲ್ಲಿ ಅವರಿಗೆ ಅತ್ಯಂತ ಕೃತಜ್ಞತೆ ಉಂಟಾಯಿತು. ಆ ಗೊಲ್ಲಿತಿಯರು ಒಂದು ದಿನ ಆ ಪಂಡಿತ-ಸಾಧುಗಳಲ್ಲಿ ಬಂದು ತಮ್ಮ ಮನೆಗೆ ಭೋಜನಕ್ಕೆ ದಯಮಾಡಿ ಬರಬೇಕೆಂದು ಬಿನ್ನವಿಸಿಕೊಂಡರು. ಸಾಧುಗಳು ಒಪ್ಪಿಕೊಂಡರು. ನಿರ್ದಿಷ್ಟವಾದ ದಿವಸ, ಅವರನ್ನು ಕರೆದುಕೊಂಡು ಹೋಗಲು ಗೋಪಕನ್ಯೆಯರು ಬಂದರು. ಅವರು ಸಾಧುವನ್ನು ಕರೆದುಕೊಂಡು ನದಿಯ ಹತ್ತಿರ ಬಂದರು. ಆ ಕನ್ಯೆಯರು ಹಿಂದೆ ನೋಡದೆ, ನದಿಯಲ್ಲಿ ಇಳಿದು, ಮುಂದೆ ಮುಂದೆ 2-3 ನಿಮಿಷಗಳಲ್ಲಿ ನದಿಯನ್ನು ದಾಟಿ ಆಚೆಗೆ ಹೋದರು. ಅವರು ಅಲ್ಲಿಂದ ನೋಡಿದಾಗ, ಸಾಧುಗಳು ನದಿಯಲ್ಲಿ ಇಳಿಯದೆ, ಇನ್ನೂ ಈಚೆಯ ದಂಡೆಯಲ್ಲಿಯೇ ನಿಂತಿದ್ದರು. ಆ ಕನ್ಯೆಯರು ಹಿಂದಿರುಗಿ ಬಂದು, ಅವರು ತಮ್ಮ ಜೊತೆಗೆ ಬಾರದಿರುವದಕ್ಕೆ ಕಾರಣವೇನೆಂದು ಆ ಸಾಧುಗಳನ್ನು ಕೇಳಿದರು. ತಾವು ದೋಣಿಯವನಿಗಾಗಿ ಕಾಯುತ್ತಿರುವುದಾಗಿ ಆ ಸಾಧುಗಳು ಹೇಳಿದರು. ಒಬ್ಬ ಗೊಲ್ಲಿತಿಯು ಹೇಳಿದಳು, "ಸ್ವಾಮಿ! ನಾವು ನಿಮಗೆ ಅತ್ಯಂತ ಕೃತಜ್ಞರಾಗಿದ್ದೇವೆ. ನಿಮ್ಮ ಉಪದೇಶದ ಬಲದಿಂದ ನಾವು ಒಂದು ಕಾಸನ್ನೂ ಕೊಡದೆ, ಅಂಬಿಗನ ಹಂಗಿಲ್ಲದೆ, ನದಿಯನ್ನು

ದಾಟುತ್ತೇವೆ. ನಿಮ್ಮ ಉಪಕಾರವು ನಮಗೆ ಜೀವಮಾನಕ್ಕೆಲ್ಲಾ ಉಪಯೋಗವಾಗಿದೆ. ನೀವೇಕೆ ಅದರ ಉಪಯೋಗವನ್ನು ಹೊಂದಿ ಕಾಸನ್ನು ಉಳಿಸಿಕೊಳ್ಳಬಾರದು ?" ಆ ಸಾಧುವು ಆಶ್ಚರ್ಯದಿಂದ, ತಾವು ಅವರಿಗೆ ಎಂದು, ಯಾವ ಉಪದೇಶವನ್ನು ಮಾಡಿದ್ದರೆಂದು ಕೇಳಿದರು. ಆಗ ಆಕೆ, ಅವರು ಒಂದು ಧಿನ ಅವರ ಪುರಾಣದಲ್ಲಿ "ಸಂಸಾರ ಸಮುದ್ರವನ್ನು ದಾಟಿಸುವದಕ್ಕೆ ಓಂ ಎಂಬ ಭಗವಂತನ ನಾಮವೇ ಶ್ರೇಷ್ಠವಾದ ನೌಕೆ" ಎಂದು ಬೋಧಿಸಿದ್ದುದನ್ನು ನೆನಪು ಮಾಡಿಕೊಟ್ಟಳು. ಆ ನಾಮದ ಮಹಿಮೆಯಿಂದಲೇ ತಾವು ನಿತ್ಯವೂ ನದಿಯನ್ನು ದಾಟುತ್ತಿರುವುದಾಗಿಯೂ ಹೇಳಿದಳು. ಅವರು "ಒಳ್ಳೆಯದು, ನಾನೂ ಆ ನಾಮದ ಬಲವನ್ನು ಪರೀಕ್ಷಿಸುತ್ತೇನೆ" ಎಂದರು. ಆ ಸಾಧುಗಳ ಜೊತೆಯಲ್ಲಿ ಅವರ ಶಿಷ್ಯರಿದ್ದರು. ಗುರುಗಳು ಉದ್ದವಾದೊಂದು ಹಗ್ಗವನ್ನು ತರಿಸಿ ತಮ್ಮ ಸೊಂಟಕ್ಕೆ ಕಟ್ಟಿಕೊಂಡು ಇನ್ನೊಂದು ತುದಿಯನ್ನು ಶಿಷ್ಯರ ಕೈಯಲ್ಲಿ ಕೊಟ್ಟರು. "ಈ ಮೂಢ ಗೊಲ್ಲಿತಿಯರು ಏನೋ ಹೇಳುತ್ತಾರೆ. ಅವರ ಹುಚ್ಚು ನಂಬಿಕೆಯನ್ನು ನಾನೂ ಪರೀಕ್ಷೆ ಮಾಡಬೇಕಾಗಿದೆ. ದೇವರ ನಾಮದಲ್ಲಿ ಇಂಥಾ ಮಹಿಮೆ ಇದೆಯೋ, ನೋಡಬೇಕು. ನಾನು ನಾಮಸ್ಮರಣೆ ಮಾಡುತ್ತಾ ನದಿಯಲ್ಲಿ ನಡೆದುಹೋಗುತ್ತೇನೆ. ನಾಮದಲ್ಲಿ ಶಕ್ತಿಯಿದ್ದರೆ ನಾನು ಮುಳುಗದೆ ನಡೆದು ಹೋಗಬಹುದು. ಯಾವದನ್ನೂ ಪರೀಕ್ಷೆ ಮಾಡದೆ ಅದರಲ್ಲಿ ಭರವಸೆ ಹುಟ್ಟುವದಿಲ್ಲ. ಆದ್ದರಿಂದ ಪರೀಕ್ಷಾ ಕಾಲದಲ್ಲಿ ಅಕಸ್ಮಾತ್ ಮುಳುಗಿದರೆ ನೀವು ಹಗ್ಗವನ್ನು ಹಿಡಿದು ಮೇಲಕ್ಕೆ ಎಳೆದುಕೊಳ್ಳಿರಿ" ಎಂದು ಶಿಷ್ಯರಿಗೆ ಹೇಳಿ, ಹೊಳೆಯಲ್ಲಿ ಹಾರಿದರು. ಅವರು ಕೆಲವು ದೂರ ಹೋಗುವದರೊಳಗೆ ಮುಳುಗುವದಕ್ಕೆ ತೊಡಗಿ, ನೀರನ್ನು ಕುಡಿದು ಕಣ್ಣು ಕಣ್ಣು ಬಿಡುತ್ತಾ ತೇಕುತ್ತಾ ಉಸಿರಾಡಲಾರದೆ, ಪ್ರಾಣಕ್ಕಾಗಿ ಒದ್ದಾಡುತ್ತಿದ್ದರು. ಶಿಷ್ಯರೆಲ್ಲಾ ಗೊಳ್ಳನೆ ನಕ್ಕರು. ಗೊಲ್ಲಿತಿಯರಿಗೆ ಆಶ್ಚರ್ಯವೂ ಕನಿಕರವೂ ಆಯಿತು. "ಅಯ್ಯೋ ಪಾಪ" ಎಂದು ಶಿಷ್ಯರು ಕರುಣೆಯಿಂದ ಹಗ್ಗವನ್ನು ಎಳೆದು ಗುರುಗಳನ್ನು ಮೇಲಕ್ಕೆತ್ತಿ ದಂಡೆಗೆ ಸೇರಿಸಿ ಬದುಕಿಸಿದರು.

ಇಲ್ಲಿ ಸ್ವಲ್ಪ ಗಮನಿಸಬೇಕು. ಆ ಪಂಡಿತರಿಗೆ ಇದ್ದಂಥ ನಂಬಿಕೆಯು ಬದುಕಿಸುವ ಸಾಧನವಲ್ಲ ; ಸಂಶಯಾತ್ಮಕವಾದ ಶ್ರದ್ಧೆಯು, ತಾರಕವಲ್ಲ. ಇದು ಹೃದಯದಲ್ಲಿರುವ ವಕ್ರತೆ, ಕುಟಿಲತೆ. ಓಂ ಎಂಬ ನಾಮವನ್ನೋ ಬೇರೆ ಯಾವದಾದರೂ ದೇವರ ನಾಮವನ್ನೋ ಉಚ್ಚಾರಣೆ ಮಾಡುತ್ತಾ "ನಾನು ಪೂರ್ಣಾರೋಗ್ಯ ಸ್ವರೂಪ" ಎಂದು ಚಿಂತನೆ ಮಾಡುತ್ತಿರುವಾಗ ನಿಮ್ಮ ಹೃದಯಾಂತರಾಳದಲ್ಲಿ ದೃಢವಾದ ನಂಬಿಕೆಯಿಲ್ಲದೆ ಸಂಶಯದಿಂದ ಕಂಪಿಸುತ್ತೀರಿ, ನಡುಗುತ್ತೀರಿ, ತತ್ತರಿಸುತ್ತೀರಿ. "ಇದು ನಿಜವಲ್ಲದಿದ್ದರೆ, ಸುಳ್ಳಾದರೆ, ಒಂದು ವೇಳೆ ಇದು ಅಲ್ಲದಿದ್ದರೆ, ಅಕಸ್ಮಾತ್ ಇದು ಆಗದಿದ್ದರೆ .. ರೆ... ರೆ... ರೆ .. " "ಈ ದೇವರ ನಾಮದಲ್ಲಿ ನನ್ನನ್ನು ತೇಲಿಸುವ, ಬದುಕಿಸುವ ಶಕ್ತಿಯಿಲ್ಲದಿದ್ದರೆ, ನೀವು ನನ್ನನ್ನು ಮೇಲಕ್ಕೆ ಎಳೆದುಕೊಂಡುಬಿಡಿ"

ಎನ್ನುವ ಮನೋಭಾವ ಏನನ್ನೂ ಸಾಧಿಸಲಾರದು; ತನ್ನ ಶ್ರೇಯಸ್ಸನ್ನೂ ಸಾಧಿಸಲಾರದು. ಸಂಶಯ ಸ್ವಭಾವವು ಮನಸ್ಸನ್ನೂ ಒಂದೇ ಭಾವದಲ್ಲಿ ನಿಲ್ಲಗೊಡದೆ, ಯಾವಾಗಲೂ ಅಲ್ಲಾಡಿಸುತ್ತಿರುವದರಿಂದ ಮನಶ್ಶಕ್ತಿಯ ಕೇಂದ್ರೀಕರಣದಿಂದ ಕಾರ್ಯಸಾಧನೆ ಮಾಡುವದಕ್ಕೆ ಅವಕಾಶ ಕೊಡುವದಿಲ್ಲ. ಇದರಿಂದ ಶಕ್ತಿಯ ಅಪವ್ಯಯವಾಗುವದು. (ಇದಕ್ಕೆ ಕಾರಣ, ಸ್ವರೂಪಜ್ಞಾನವಿಲ್ಲದಿರುವದು.) ನಮ್ಮ ಸ್ವಭಾವದಲ್ಲಿ ಇಲ್ಲದ ಜ್ಞಾನವನ್ನೂ ಶಕ್ತಿಯನ್ನೂ ಶುಭವನ್ನೂ ಕಲ್ಪಿಸುವದಾದರೆ, ಸಂಶಯಪಡಬಹುದು. ನಮ್ಮಲ್ಲಿ ಇಲ್ಲದಿರುವ ಶಕ್ತಿಯೇ ಇಲ್ಲ. ಎಲ್ಲಾ ಶಕ್ತಿಯೂ ಇದ್ದು ಬಿಟ್ಟಿದೆ; ಸ್ವತಃ ಸಿದ್ಧವಾಗಿದೆ, ನಿತ್ಯ ಸಿದ್ಧವಾಗಿದೆ, ತಾನೇ ಇದ್ದು ಬಿಟ್ಟಿದೆ; ಯಾವಾಗಲೂ ಇದ್ದೇ ಇದೆ. ಹೊಸದಾಗಿ ಯಾವದನ್ನೂ ಸಾಧಿಸಬೇಕಾಗಿಲ್ಲ. ಎಂದೋ ಒಂದು ದಿನ ಹೊಸದಾಗಿ ಸಾಧಿಸುವದಾಗಿದ್ದರೆ, ಅದೂ ಎಂದೋ ಒಂದು ದಿನ ನಾಶವಾಗಿ ಬಿಡುತ್ತಿತ್ತು. ಹುಟ್ಟಿದ್ದು ಹಾಳಾಗಲೇ ಬೇಕು, ಉತ್ಪತ್ತಿಯಾದುದು ನಾಶವಾಗಲೇ ಬೇಕು; ತೋರಿದುದು ಅಡಗಲೇ ಬೇಕು. ಎಚ್ಚರ–ಕನಸುಗಳ ಪ್ರಪಂಚವನ್ನೂ ಗಾಢ ನಿದ್ರೆಯ ಅಭಾವವನ್ನೂ ಎಲ್ಲವನ್ನೂ ವಿಷಯಮಾಡಿಕೊಂಡು ಬೆಳಗುವದರಿಂದಲೇ ಆತ್ಮನು ಸರ್ವಜ್ಞನು. ಆದ್ದರಿಂದಲೇ ಸರ್ವಶಕ್ತನು. ಆತ್ಮನು ಸರ್ವವೂ ಆಗಿದ್ದಾನೆ, ಜ್ಞಾನಸ್ವರೂಪವೂ ಆಗಿದ್ದಾನೆ; ಆದ್ದರಿಂದ ಆತ್ಮನು ಸರ್ವಜ್ಞನು. ಹೀಗೆ, ನಮ್ಮಲ್ಲಿ ಸಹಜವಾಗಿರುವ ಸರ್ವಜ್ಞತ್ವವನ್ನೂ ಸರ್ವ ಶಕ್ತಿತ್ವವನ್ನೂ ಅಜ್ಞಾನವೂ ಸಂಶಯಜ್ಞಾನವೂ ವಿಪರೀತಜ್ಞಾನವೂ (ತಪ್ಪು ತಿಳಿವಳಿಕೆಯೂ) ಮುಚ್ಚಿಕೊಂಡಿವೆ. ಆದ್ದರಿಂದ ಸರಿಯಾದ ತಿಳಿವಳಿಕೆಯಿಂದ (ಸಮ್ಯಜ್ಞಾನದಿಂದ) ತಪ್ಪು ತಿಳಿವಳಿಕೆ ಮೊದಲಾದವು ತೊಲಗಿಬಿಟ್ಟರೆ, ಒಳಗೆ ನಮ್ಮ ಸ್ವರೂಪದಲ್ಲಿ ನಿಮಿಷವೂ ಎಡೆಬಿಡದೆ ನಿಜವಾಗಿರುವ ಸರ್ವಜ್ಞತ್ವ, ಸರ್ವಶಕ್ತಿತ್ವಗಳು ತಾನೇ ತಾನಾಗಿ ಬೆಳಗುತ್ತವೆ. ಭಾವನಾರೂಪವಾದ ಉಪಾಸನೆಯು ಸಾಧನೆಯ ದೃಷ್ಟಿಯಿಂದ ಶಕ್ತಿಯು ವ್ಯಕ್ತವಾಗುವದಕ್ಕೆ ಸಹಾಯಕವಾದರೂ ಆತ್ಮಸ್ವರೂಪದಲ್ಲಿ ಮಾತ್ರ ಇದರಿಂದ ಯಾವ ವಿಶೇಷವೂ ಆಗಲಾರದು. ಈ ಪ್ರಪಂಚದಲ್ಲಿ ತೋರುವ ಎಲ್ಲಾ ಭೇದಭಾವಗಳೂ ಸನ್ನಿವೇಶಗಳೂ ಆಗುಹೋಗುಗಳೂ ನಿಮ್ಮ ಸೃಷ್ಟಿಯೇ ಎನ್ನುವುದು ತ್ರಿಕಾಲ ಸತ್ಯ, ವಾಸ್ತವ; ಬೇರೆ ಅಲ್ಲ. ನಿಮ್ಮಲ್ಲಿರುವ ಆತ್ಮನೇ–ನೀವೇ–ಅಖಿಲಾಂಡಕೋಟಿ ಬ್ರಹ್ಮಾಂಡನಾಯಕ, ಪರಮೇಶ್ವರ. ಇದನ್ನೇ ಈ ಕ್ಷಣದಲ್ಲಿ ಶುದ್ಧವಾದ ಬುದ್ಧಿಯಿಂದ ಅರಿಯಿರಿ. ಇದನ್ನೇ ಹೃದಯದಿಂದ ಭಾವಿಸಿರಿ. ಈ ಗಳಿಗೆಯಲ್ಲಿಯೇ ಅದನ್ನು ಅರಿಯಿರಿ. ಸಂಶಯವಿಲ್ಲದಂತೆ ದೃಢವಾಗಿ ಅದನ್ನು ನಂಬಿರಿ. ಈ ಲೇಖನವನ್ನು ನೀವು ನಿತ್ಯವೂ ಓದುತ್ತಿದ್ದರೆ, ನಿಮ್ಮನ್ನು ಬಂಧಿಸುತ್ತಿರುವ, ನಿಮ್ಮ 'ರೆ' ಗಳೆಲ್ಲಾ ಕರಗಿ ಹೋಗುತ್ತವೆ. ಈ ಲೇಖನವನ್ನು ನೀವು ನಿತ್ಯವೂ ಎರಡು ಸಲವೋ ಐದು ಸಲವೋ ಓದಿರಿ. ಅಲ್ಪವಾದ ನಿಮ್ಮ 'ರೆ' ಗಳೆಲ್ಲಾ ತೊಲಗಿ ಹೋಗುತ್ತವೆ.

೧೮ ಪೂರ್ಣ-ಬ್ರಾಹ್ಮೀಸ್ಥಿತಿ

(ಪರಮೋಚ್ಚ ಸ್ಥಿತಿ)

ಇಂಥಾ ಪರಿಪೂರ್ಣ, ಮುಕ್ತ ಸ್ಥಿತಿಯನ್ನು ಹೊಂದಿದ್ದ ಒಬ್ಬ ಮನುಷ್ಯನ ಸಮೀಪಕ್ಕೆ ಶಿಷ್ಯನೊಬ್ಬನು ಬಂದು; ಒಂದು ವರ್ಷ ಅವನ ಚರಣ ಸನ್ನಿಧಿಯಲ್ಲಿ ಸೇವೆ ಮಾಡಿಕೊಂಡಿದ್ದ. ಶಿಷ್ಯನು ಗುರುಗಳ ಸನ್ನಿಧಿಯನ್ನು ಬಿಟ್ಟು ಹೋಗುವಾಗ ಇಂಡಿಯಾ ದೇಶದಲ್ಲಿರುವ ಪದ್ಧತಿಯಂತೆ ಗುರುಗಳ ಪಾದದಡಿಯಲ್ಲಿ ದೀರ್ಘದಂಡ ನಮಸ್ಕಾರಮಾಡಿದನು. ಗುರುಗಳು ಮುಗುಳು ನಗುತ್ತಾ ಅವನನ್ನೆತ್ತಿ "ವತ್ಸ ! ನೀನಿನ್ನೂ ಕಲಿಯಬೇಕಾದುದನ್ನೆಲ್ಲಾ ಕಲಿತಿಲ್ಲ, ಇನ್ನೂ ನೀನು ಅನೇಕ ವಿಷಯ ಗಳನ್ನು ತಿಳಿಯುವದಿದೆ, ಇನ್ನೂ ಕೆಲವು ಕಾಲವಿರು." ಎಂದು ಹೇಳಿದರು. ಅದೇ ಪ್ರಕಾರ ಗುರುಗಳ ಪವಿತ್ರ ಸನ್ನಿಧಿಯಲ್ಲಿ ಅವನು ಪುನಃ ಸ್ವಲ್ಪಕಾಲವಿದ್ದು ಹೆಚ್ಚು ಹೆಚ್ಚು ಸ್ಫೂರ್ತಿಯನ್ನು ಪಡೆದನು. ಅವನ ಹೃದಯವು ಪರಿವರ್ತನೆಹೊಂದಿ ಆತ್ಮ ಜ್ಞಾನವಾಯಿತು. ಅವನು ತುಂಬಾ ಪವಿತ್ರಾತ್ಮನಾದ. ತಾನು ಶಿಷ್ಯನೋ ಅಥವಾ ಸ್ವತಃ ಗುರುವೋ ಎಂಬ ಪರಿಜ್ಞಾನವೇ ಇಲ್ಲದೆ ಗುರುಸನ್ನಿಧಿಯನ್ನು ಬಿಟ್ಟು ಹೊರಟನು. ಇಡೀ ವಿಶ್ವವನ್ನೇ ವಿಶಾಲ ಜಗತ್ತನ್ನೇ ತನ್ನ ನಿಜಾತ್ಮನೆಂದು ನೋಡುತ್ತಾ ಹೊರಟು ಹೋದನು. ಇಡೀ ವಿಶ್ವವೇ ಅವನ ಆತ್ಮನಾಗಿರುವಾಗ ಆತ್ಮನಾದ ಅವನು ಎಲ್ಲಿಗೆ ಹೋಗಬಲ್ಲನು? ಆತ್ಮನು ಪ್ರತಿಯೊಂದು ಅಣುವನ್ನೂ ಪರಮಾಣುವನ್ನೂ ತುಂಬಿ ತುಳುಕುತ್ತಿರುವಾಗ ಅವನು ಎಲ್ಲಿಗೆ ಹೋಗಬಹುದು? ಹೋಗಿ ಬರುವ ಕಲ್ಪನೆಯೇ ಅವನಿಗೆ ಅರ್ಥಶೂನ್ಯವಾಗುತ್ತದೆ. ನೀನು ಹೋಗ ಬೇಕೆಂದಿರುವ ಸ್ಥಳದಲ್ಲಿ ಮೊದಲೇ ನೀನಿಲ್ಲದಿದ್ದರೆ ಅಲ್ಲಿಗೆ ನೀನು ಹೊಸದಾಗಿ ಹೋಗ ಬಹುದು. ಅವನು ಎಲ್ಲೆಲ್ಲಿಯೂ ತನ್ನನ್ನೇ ನೋಡುತ್ತಿರುವಾಗ ಎಲ್ಲೆಡೆಯಲ್ಲಿಯೂ ದೇವರನ್ನೇ ಕಾಣುತ್ತಿರುವಾಗ ಎಲ್ಲಿಗೆ ಹೋಗಬೇಕು? ಎಲ್ಲಿಗೆ ಬರಬೇಕು? ಅವನು ಪೂರ್ಣ ಆತ್ಮಾನುಭವದಲ್ಲಿರುವದರಿಂದ ಅವನ ಮನಸ್ಸಿನಲ್ಲಿ ಹೋಗಿ ಬರುವ ಕಲ್ಪನೆಯೇ ಹಾರಿಹೋಯಿತು. ದೇಹ ಮಾತ್ರ ಹೋಗುವದು ಬರುವದು ಒಂದು ಬಗೆಯ ಸ್ವಾಭಾವಿಕ ಕ್ರಿಯೆಯೂ ಯಾವದೊಂದು ಪ್ರೇರಣಾಕ್ರಿಯೆಗೆ ಪ್ರತಿಕ್ರಿಯೆಯೂ ಆಗಿದ್ದಿತು, ಶಿಷ್ಯನ ಈ ಬ್ರಾಹ್ಮೀ ಸ್ಥಿತಿಯನ್ನು ಗುರುವು ಚೆನ್ನಾಗಿ ಪರೀಕ್ಷಿಸಿ ಸಂತುಷ್ಟನಾದನು. ಶಿಷ್ಯನು ಪೂರ್ಣ ಏಕಾತ್ಮಭಾವದಲ್ಲಿದ್ದುದರಿಂದ ಗುರುವು ಬೇರೆ, ತಾನು ಬೇರೆ, ಗುರುವಿಗೆ ತಾನು ಋಣಿಯಾಗಿರಬೇಕು, ಕೃತಜ್ಞನಾಗಿರಬೇಕು, ಅವನನ್ನು ಅಭಿನಂದಿಸಬೇಕು, ಗೌರವಿಸಬೇಕು ಮೊದಲಾದ ದ್ವೈತಭಾವವೇ ಅವನಲ್ಲಿ ಉದಯವಾಗುವಂತಿರಲಿಲ್ಲ. ಶಿಷ್ಯನು ತಮ್ಮ ಉಪದೇಶವನ್ನು ಸರಿಯಾಗಿ ಅರ್ಥ ಮಾಡಿಕೊಂಡು ಅನುಭವದಲ್ಲಿ ತಂದುಕೊಂಡಿದ್ದಾನೆಂದು ಗುರುಗಳಿಗೆ ಅಪಾರವಾದ ಆನಂದವಾಯಿತು.

ಹೀಗೆ ಗುರುವು ಶಿಷ್ಯನ ಯೋಗ್ಯತೆಯ ಬೆಲೆಯನ್ನು ಒರೆಗೆ ಹಚ್ಚಿ ಅದನ್ನು ಕೊನೆಮುಟ್ಟಿದುದೆಂದು ಖಚಿತ ಮಾಡಿಕೊಂಡನು. ಇದೇ ಅತ್ಯಂತ ಶ್ರೇಷ್ಠವಾದ ಆಚಾರ್ಯಸ್ಥಿತಿ; ಗುರುವರ್ಯನ ಬ್ರಾಹ್ಮೀಸ್ಥಿತಿ. ಈ ಪರಮೋಚ್ಚ ಸ್ಥಿತಿಯಲ್ಲಿದ್ದವನನ್ನು ನೀವು ಎಷ್ಟೇ ಗೌರವಿಸಿದರೂ "ಈ ಶರೀರದಲ್ಲಿ ನಾನು ಬಂಧಿತನಾಗಿಲ್ಲ; ಈ ಸಣ್ಣ ದೇಹ ಒಂದೇ ನಾನಾಗಿಲ್ಲ; ವಿಶಾಲ ಜಗತ್ತೇ ನಾನಾಗಿದ್ದೇನೆ. ನೀವೇ ನಾನಾದ್ದರಿಂದ ನಿಮ್ಮಲ್ಲಿ ನನ್ನನ್ನು ಗೌರವಿಸಿ" ಎಂದು ಆ ಮಹಾಪುರುಷನು ಹೇಳಬಹುದು. ಯಾವ ಸ್ಥಿತಿಯಲ್ಲಿದ್ದರೆ ಒಬ್ಬ ಮನುಷ್ಯನು ನಿಮಗೆ ಏನನ್ನೂ ಮಾರಿ ಕೊಳ್ಳುವದಿಲ್ಲವೋ ಆ ಸ್ಥಿತಿಯೇ ಇದು. ಯಾವ ಸ್ಥಿತಿಯಲ್ಲಿ ಒಬ್ಬ ಮನುಷ್ಯನಿದ್ದರೆ ಅವನಿಗೆ ಮಾನವೂ ಅಪಮಾನವೂ ಅರ್ಥಶೂನ್ಯವಾಗಿವೆಯೋ ಕೀರ್ತಿಯೂ ಅಪಕೀರ್ತಿಯೂ ಕ್ಷುಲ್ಲಕವಾಗಿವೆಯೋ ಆ ಸ್ಥಿತಿಯೇ ಇದು.

೧೯ ಬ್ರಹ್ಮನಿಷ್ಠಸಿದ್ಧಪುರುಷನ ಅಸಾಧಾರಣಶಕ್ತಿ

(ಷ್ಯಾಮ್ಸ್ ಟಾಬ್ರೆಸ್ ಮತ್ತು ಅವನ ತಂದೆ)

ಈಗ ರಾಮನು, ತನ್ನ ದೃಷ್ಟಿಯಿಂದ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠಪುರುಷರಲ್ಲಿ ಒಬ್ಬರಾದ ಪೌರ್ವಾತ್ಯ ಮಹಾತ್ಮ ಷ್ಯಾಮ್ಸ್ ಟಾಬ್ರೆಸ್ (Shams Tabrez) ರ ಜೀವನ ಚರಿತ್ರೆಯನ್ನು ಹೇಳುತ್ತಾನೆ. ಈ ವ್ಯಕ್ತಿಯು ವಿಚಿತ್ರವಾದ ಪರಿಸ್ಥಿತಿಯಲ್ಲಿ ಹುಟ್ಟಿದ್ದನು. ಆ ಕತೆಯು ಸುಳ್ಳಾದರೂ ಇರಲಿ ನಿಜವಾದರೂ ಇರಲಿ. ನಮಗೇನೂ ಅದು ಮುಖ್ಯವಲ್ಲ. ಆದರೂ ಅದರಲ್ಲಿ ಎಲ್ಲಿಯಾದರೂ ಸತ್ಯವಿರಲೇ ಬೇಕು. ಅವನ ತಂದೆಯು ಒಂದು ಕಾಲದಲ್ಲಿ ನಾಡಿನಲ್ಲಿಯೇ ಅತ್ಯಂತ ಬಡವನಾಗಿದ್ದನು. ಆ ಅತ್ಯಂತ ನಿರ್ಧನ ಮನುಷ್ಯನು ತನ್ನ ಜೀವನವನ್ನು ದೇವರ ಧ್ಯಾನಕ್ಕಾಗಿಯೇ ಮೀಸಲಾಗಿಟ್ಟಿದ್ದನು. ಅವನು ತನ್ನ ದೇಹವು ಎಂದಾದರೂ ಹುಟ್ಟಿದೆಯೆಂಬುದನ್ನೇ ಮರೆತು ಬಿಟ್ಟನು; ಈ ಪ್ರಪಂಚದಲ್ಲಿ ವ್ಯಕ್ತಿರೂಪದಿಂದ ತಾನೊಬ್ಬನಿರುವನೆಂಬುದನ್ನು ಪೂರಾ ಮರೆತುಬಿಟ್ಟನು. ಅವನಿಗೆ ಪ್ರಪಂಚವು ಎಂದೂ ಪ್ರಪಂಚವೇ ಆಗಿರಲಿಲ್ಲ. ಅವನು ದೇವರೇ, ಪೂರಾ ದೇವರೇ ಆಗಿದ್ದನು. ಅಡಿಯಿಂದ ಮುಡಿಯವರೆಗೆ ಒಬ್ಬ ಮನುಷ್ಯನು ಒಂದೇ ದೃಢ ಭಾವನೆಯಿಂದ ತುಂಬಿದ್ದರೆ ಆ ಭಾವನಾ ರೂಪನೇ ಅವನಾಗುವಂತೆ, ಆ ಮಹಾತ್ಮನ ದೇಹದ ರಂಧ್ರಗಳೆಲ್ಲಾ ಪರಮಾತ್ಮ ಭಾವನೆಯಿಂದ ತುಂಬಿ ತುಳುಕುತ್ತಿದ್ದುದರಿಂದ ಪರಮಾತ್ಮನೇ ಅವನಾಗಿದ್ದನು. ಅವನು ಬೀದಿಗಳಲ್ಲಿ ತಿರುಗುತ್ತಿದ್ದಾಗ ಅವನ ದೇಹದ ರಂಧ್ರಗಳಿಂದೆಲ್ಲಾ "ಹಕ್ ಅನಲ್ ಹಕ್" "ದೇವರು, ನಾನೇ ದೇವರು" ಎಂಬ ಗಾನವು ಕೇಳುತ್ತಿದ್ದಿತೆಂದು ಜನರು ಹೇಳುತ್ತಿದ್ದರು. ಅವನ ತುಟಿಗಳ ಮೇಲೂ "ಅನಲ್‌ಹಕ್, ಅನಲ್‌ಹಕ್" "ದೇವರು ನಾನು, ದೇವರು ನಾನು" ಎಂಬ ಗಾನವೇ ಯಾವಾಗಲೂ ಕೇಳುತ್ತಿತ್ತು. ಅವನ ಸುತ್ತಲೂ ಸಾಮಾನ್ಯ ಮನುಷ್ಯರು ಸೇರಿಕೊಂಡರು. ಅವರು ಅವನನ್ನು ಕೊಲೆಮಾಡಬೇಕೆಂದು ಯೋಚಿಸಿದ್ದರು. ಅವರು

ಅವನನ್ನು ನಾಸ್ತಿಕನೆಂದು ಆರೋಪಿಸಿದರು. ಅವನ ಬಾಯಿಂದ "ಅನಲ್‌ಹಕ್" ಎಂಬ ಉಚ್ಚಾರಣೆ ಹೊರಡುತ್ತಿದ್ದಾಗ ಅವನಿಗೆ ಅದರ ಅರಿವೇ ಇರಲಿಲ್ಲ. ಒಬ್ಬ ಮನುಷ್ಯನು ನಿದ್ರಿಸುತ್ತಿರುವಾಗ ಅವನಿಗೇ ಪರವೆಯಿಲ್ಲದೆ ಗೊರಕೆ ಹೊಡೆಯುತ್ತಿರುವಂತೆ ಅವನ "ಅನಲ್‌ಹಕ್" ಉಚ್ಚಾರಣೆ ನಡೆಯುತ್ತಿತ್ತು. ಆದರೆ ಜನರು ಅವನನ್ನು ಕೊಲ್ಲಬೇಕೆಂದು ಬಯಸಿದರು. ಅದರಿಂದ ಅವನಿಗೇನು? ಯಾರನ್ನು ಕೊಲ್ಲುವುದು? ಜನರು ದೇಹವನ್ನು ಕೊಲ್ಲುತ್ತಿದ್ದರು; ಆದರೆ ಅವನ ದೃಷ್ಟಿಯಿಂದ ಆ ದೇಹವು ಎಂದೂ ಇರಲೇ ಇಲ್ಲ. ಆದ್ದರಿಂದ ಆ ದೇಹವನ್ನು ಕೊಂದರೆ ಯಾರಿಗೆ ನೋವಾಗಬೇಕು? ಆಗಿನ ಕಾಲದಲ್ಲಿ ಮರಣ ದಂಡನೆಯನ್ನು ವಿಧಿಸಿದವನನ್ನು ಶೂಲಕ್ಕೆ ಏರಿಸುತ್ತಿದ್ದರು. ಶೂಲವೆಂದರೆ ನಿಮ್ಮ ಕ್ರಿಸ್ತನನ್ನು ಏರಿಸಿದ ಶಿಲುಬೆ (Cross) ಗಿಂತಲೂ ಭಯಂಕರವಾದುದು. ಭೂಮಿಯಲ್ಲಿ ಹೂತು ನಿಲ್ಲಿಸಿದ ಎತ್ತರವಾದ ಕಬ್ಬಿಣದ ಸಲಾಕೆಗೆ ತುದಿಯಲ್ಲಿ ಸೂಜಿಗಿಂತಲೂ ಚೂಪಾದ ಉಕ್ಕಿನ ಶೂಲವಿರುತ್ತದೆ. ಅಪರಾಧಿಯ ಎದೆಯು ಅಥವಾ ಹೊಕ್ಕಳು ಸೂಜಿಯಂಥ ಹರಿತವಾದ ಶೂಲದ ಮೊನೆಯ ಮೇಲೆ ಚುಚ್ಚಿಕೊಳ್ಳುವಂತೆ ಅವನನ್ನು ಮಲಗಿಸುತ್ತಿದ್ದರು. ಆ ಶಿಕ್ಷೆಯು ನಿಮ್ಮ ಶಿಲುಬೆಯ ಶಿಕ್ಷೆಗಿಂತಲೂ ಕ್ರೂರವೂ ಘೋರವೂ ಆದುದು. ಆಗಿನ ಕಾಲದಲ್ಲಿ ಮರಣ ದಂಡನೆ ಪಡೆದ ಅಪರಾಧಿಯನ್ನು ಈ ರೀತಿಯಲ್ಲಿ ವಧೆ ಮಾಡುತ್ತಿದ್ದರು. ದ್ವೇಷಿಗಳಾದ ಜನರೆಲ್ಲರೂ ಸೇರಿ ಆ ಮಹಾತ್ಮನನ್ನು ಶೂಲಕ್ಕೇರಿಸಿದರು, ಆ ಹರಿತವಾದ ಶೂಲವು ಅವನ ಎದೆಯೊಳಗೆ ಚುಚ್ಚಿಕೊಂಡಿದ್ದಾಗ ಆ ಮಹಾಪುರುಷನ ಮುಖವು ಶಾಂತಿ-ಸಂತೋಷಗಳ ದಿವ್ಯ ಪ್ರಭೆಯಿಂದ ಬೆಳಗುತ್ತಿತ್ತು; ಅವನ ಶರೀರದ ಪ್ರತಿಯೊಂದು ರೋಮಕೂಪದಿಂದಲೂ "ಅನಲ್‌ಹಕ್, ಅನಲ್‌ಹಕ್, ನಾನೇ ದೇವರು ನಾನೇ ದೇವರು, ಅಹಂ ಬ್ರಹ್ಮಾಸ್ಮಿ ಅಹಂ ಬ್ರಹ್ಮಾಸ್ಮಿ" ಎಂಬ ಮಧುರ ಗಾನವೇ ಕೇಳಿಬರುತ್ತಿತ್ತು. ಸಾಯುವದು ಶರೀರವಾದ್ದರಿಂದ, ಅದರ ಮಹತ್ತ್ವವೇನೂ ಅವನಿಗಿರಲಿಲ್ಲ, ಏಕೆಂದರೆ ಸತ್ಯಕ್ಕಾಗಿ ಶರೀರವನ್ನು ಬಲಿಕೊಡಬೇಕಾದರೆ, ಸಂತೋಷದಿಂದ ಕೊಡಬೇಕು. ಕತ್ತರಿಸಿ ಒಗೆಯುವದಕ್ಕೆ ಇದೇ ಕೊನೆಯ ಬಂಧನ, ಆಸಕ್ತಿ, ಸತ್ಯಕ್ಕಾಗಿ ದೇಹವನ್ನೇ ಬಲಿಕೊಡಬೇಕಾದರೆ, ಮಿಕ್ಕ ಪ್ರಾಪಂಚಿಕ ವಿಷಯಗಳ ವಿಚಾರವನ್ನು ಹೇಳುವದೇನು? ಸತ್ಯಮಾರ್ಗದಲ್ಲಿ ನಡೆಯಬೇಕಾದುದೇ ಹೀಗೆ. ಆ ಬ್ರಹ್ಮಜ್ಞಾನಿಯ ಶರೀರದಲ್ಲಿ ಶೂಲವು ಚುಚ್ಚಿ ತೂರಿಕೊಂಡಿರುವಾಗ ಅವನ ಶರೀರದಿಂದ ರಕ್ತವು ಸುರಿಯುತ್ತಿತ್ತು. ಆ ಮಹಾಗುರುವಿನ ಶಿಷ್ಯಳಾದ ಒಬ್ಬ ತರುಣಿಗೆ ಅದೇ ನಂಬಿಕೆಯೂ ಭಾವನೆಯೂ ಇದ್ದಿತು. ಆಕೆಯು ಶ್ರದ್ಧಾಭಕ್ತಿಯಿಂದ ಆ ಗುರುವಿನ ಶರೀರದ ರಕ್ತವನ್ನೆಲ್ಲಾ ಸಂಗ್ರಹಿಸಿ ಕುಡಿದುದರಿಂದ ಆ ಯುವತಿಯು ಗರ್ಭವತಿಯಾದಳೆಂದೂ ಆ ಕಥೆಯಲ್ಲಿ ಹೇಳಿದೆ. ಅದು ಸುಳ್ಳೋ ನಿಜವೋ ಅದು ಏನಾದರೂ ಇರಲಿ. ಬೈಬಲ್ಲಿನ ಪ್ರಕಾರ, ಮೇರಿಯು ಪುರುಷ ಸಂಪರ್ಕವಿಲ್ಲದೆ ಕ್ರಿಸ್ತನ ಪವಿತ್ರ ಗರ್ಭವನ್ನು ಧರಿಸಬಹುದಾದರೆ, ಆ ಮಹಾತ್ಮನ ರಕ್ತಪಾನದಿಂದಲೂ ಶ್ರದ್ಧಾಸಂಪನ್ನೆಯಾದ ಭಕ್ತಳು ಗರ್ಭ

ಧಾರಣೆ ಮಾಡುಂವುದು ಸಾಧ್ಯ. ಆ ಮಹಾತ್ಮನು ಕ್ರಿಸ್ತನಿಗಿಂತಲೂ ಕೀಳಾದವನಲ್ಲ, ನಿಜವಾಗಿ ಅವನಿಗಿಂತಲೂ ಎಷ್ಟೋ ಪಾಲು ಮೇಲಾದವನು. ಆ ತಾಯಿಯು ಒಬ್ಬ ಮಹಾತ್ಮನಿಗೆ ಜನ್ಮಕೊಟ್ಟಳು. ಅವನ ಚರಿತ್ರೆಯನ್ನೇ ಈಗ ರಾಮನು ಹೇಳಬೇಕಾಗಿರುವದು. ಆತನು ಬಾಲ್ಯದಿಂದಲೂ ತನ್ನ ತಂದೆಯನ್ನೂ ಮೀರಿಸುವಂಥ ಬ್ರಹ್ಮಜ್ಞಾನಿಯಾಗಿದ್ದನು. ಈ ಮಹಾಪುರುಷನಿಂದ ಒಂದು ಮಹಾಕಾವ್ಯ ಉದಯವಾಯ್ತು. ಅವನು ಲೇಖನಿಯನ್ನು ಹಿಡಿದು ಯಾವದನ್ನೂ ಬರೆಯಲಿಲ್ಲ. ಅವನು ಆಡಿದ ಮಾತೆಲ್ಲಾ ಕಾವ್ಯವಾಯಿತು. ಆತನಿಂದ ಕಾವ್ಯಗಂಗೆಯು ತಾನೇ ತಾನಾಗಿ ಹರಿದು ಬಂದಳು. ಅದು ನಿಜವಾದ ಕಾವ್ಯವಾಗಿತ್ತು; ಆದರ್ಶವಾದ ಕಾವ್ಯ ಗುಣದಿಂದ ಕೂಡಿತ್ತು. ಸಮಸ್ತ ವರಕವಿಗಳಿಗೂ ಮಹಾಕವಿಗಳಿಗೂ ಮಹಾಕಾವ್ಯಗಳಿಗೂ ಸ್ಫೂರ್ತಿಯನ್ನು ಕೊಡುವ ಮೂಲಪ್ರೇರಕಶಕ್ತಿಯಾದ ಪರಮಾತ್ಮನೇ ನೈಜವಾದ ವಿಶ್ವಕವಿ ಸಾರ್ವಭೌಮ. ಆ ಮಹಾತ್ಮನು ಬ್ರಹ್ಮವಿದ್ಯಾ ಪಾರಂಗತನಾಗಿದ್ದುದರಿಂದ ಅವನ ವಾಣಿಯೆಲ್ಲಾ ಕವಿವಾಣಿಯಾಗಿದ್ದಿತು. ಅದರ ತುಂಬಾ ದೇವರ ವಿಚಾರವೇ ಇದ್ದುದರಿಂದ ಅದು ದಿವ್ಯವೂ ಭವ್ಯವೂ ಆಗಿದ್ದಿತು.

ಇವನ ವಿಷಯವಾಗಿ ಒಂದು ಸ್ವಾರಸ್ಯವಾದ ವಿಚಾರವಿದೆ. ಒಮ್ಮೆ ಅವನಿದ್ದ ರಾಜಧಾನಿಗೆ ಸರ್ಕಸ್ ಆಟದವರು ಬಂದರು. ಅವರು ಆಶ್ಚರ್ಯಕರವಾದ ಪ್ರದರ್ಶನ ಕೊಡುತ್ತಿದ್ದರು. ರಾಜನೆದುರಲ್ಲಿಯೂ ಪ್ರದರ್ಶನವನ್ನು ಕೊಟ್ಟರು. ಅವನು ಅತ್ಯಂತ ಪ್ರೀತನಾಗಿ ಅವರಿಗೆ ಒಂದು ಸಾವಿರ ಡಾಲರುಗಳನ್ನು ಬಹುಮಾನವಾಗಿ ಕೊಟ್ಟನು. ಆದರೆ ಅಷ್ಟು ದೊಡ್ಡ ಬಹುಮಾನವನ್ನು ಕೊಟ್ಟಿದ್ದಕ್ಕೆ ಆ ರಾಜನಿಗೆ ಅನಂತರ ಪಶ್ಚಾತ್ತಾಪವಾಯಿತು. ಪ್ರತಿ ರಾತ್ರಿಯೂ ಆ ಪೊಳ್ಳು ಪ್ರದರ್ಶನಗಳನ್ನು ನೋಡಿ ಸಾವಿರಾರು ಡಾಲರುಗಳನ್ನು ಅವರಿಗೆ ಕೊಡುವದು ಅವನಿಗೆ ಹುಚ್ಚುತನವಾಗಿ ಕಂಡಿತು. ಆದ್ದರಿಂದ ತಾನು ಅವರಿಗೆ ಕೊಟ್ಟಿದ್ದ ಹಣವನ್ನೆಲ್ಲಾ ವಾಪಸು ಪಡೆಯಲು ಅವನು ಒಂದು ಉಪಾಯವನ್ನು ಮಾಡಿದನು, ಒಂದು ಸಿಂಹದ ವೇಷದಲ್ಲಿ ಬಂದು, ಅವರು ಜೀವಂತ ಸಿಂಹನಂತೆಯೇ ಪ್ರದರ್ಶನ ಕೊಡಬೇಕೆಂದೂ ಅದರಲ್ಲಿ ಯಶಸ್ವಿಗಳಾದರೆ ಇನ್ನೂ ಬಹಳ ಹೆಚ್ಚಿನ ಬಹುಮಾನವನ್ನು ಕೊಡುವದಾಗಿಯೂ ಒಂದು ವೇಳೆ ಅದರಲ್ಲಿ ಅವರು ಸೋತರೆ ಅವರಲ್ಲಿರುವ ಸಮಸ್ತ ಆಸ್ತಿಯನ್ನೂ ದಂಡವಾಗಿ ತನಗೆ ಕೊಟ್ಟುಬಿಡಬೇಕೆಂದೂ ಪಣವನ್ನಿಟ್ಟು ಆ ಆಟಗಾರರನ್ನು ರಾಜನು ಆಹ್ವಾನಿಸಿದನು. ಆ ಜನರಿಗೆ ಅದು ಸಾಧ್ಯವಾಗಿರಲಿಲ್ಲ, ಆ ವೇಷವನ್ನು ಹಾಕಿಕೊಂಡಾಗಲೀ ಆ ಸಿಂಹದ ರೂಪವನ್ನು ಧರಿಸಿ ಆಗಲಿ ಅಭಿನಯಿಸಿ ರಾಜನನ್ನು ಪ್ರೀತಿಪಡಿಸಲು ಸಾಧ್ಯವಿಲ್ಲದೆ ಆ ಜನರು ಆ ಮಹಾತ್ಮನಲ್ಲಿ ಬಂದು ತಮ್ಮ ಕಷ್ಟವನ್ನು ಹೇಳಿಕೊಂಡು ಏನಾದರೂ ಮಾಡಿ ಸಹಾಯ ಮಾಡಬೇಕೆಂದು ಗೋಳಿಟ್ಟು ಬೇಡಿಕೊಂಡರು. ಇಂಡಿಯಾದಲ್ಲಿ ಅನೇಕ ವೇಷಗಳನ್ನು ಧರಿಸಿ ಅಭಿನಯಿಸತಕ್ಕವರೂ ಕೆಲವು ಪ್ರಾಣಿಗಳಂತೆ ತೋರಿಕೊಂಡು ಎಲ್ಲಾ ರೀತಿಯಿಂದಲೂ ವಾಸ್ತವವಾಗಿ ಅವುಗಳಂತೆಯೇ

ವರ್ತಿಸತಕ್ಕವರೂ ಇದ್ದಾರೆ; ಆದರೆ, ಸಿಂಹವೇ ಆಗಿ ನಡೆದುಕೊಳ್ಳುವದು ಅಥವಾ ನಟಿಸುವದು ಯಾರಿಗೂ ಸುಲಭವಾಗಿರಲಿಲ್ಲ. ವಿಶ್ವಾತ್ಮ ಭಾವನೆಯಲ್ಲಿದ್ದ ಆ ಮಹಾತ್ಮನು ಇಡೀ ಪ್ರಕೃತಿ ಮಂಡಲದಲ್ಲಿ ಸಮರಸಭಾವವುಳ್ಳವನಾಗಿ ಪ್ರತಿಯೊಬ್ಬರನ್ನೂ ತಾನೇ ಎಂದು ಕಾಣುತ್ತಿದ್ದುದರಿಂದ ಅವರ ಪ್ರಾರ್ಥನೆಗೆ ಮನಸ್ಸು ಕರಗಿ, ತಾನೇ ಸಿಂಹನಾಗಿ ರಾಜನೆದುರು ಪ್ರದರ್ಶನ ಕೊಡುವದಾಗಿಯೂ ಸಂತೋಷವಾಗಿರಬೇಕೆಂದೂ ಆ ಆಟಗಾರರಿಗೆ ಆಶ್ವಾಸನೆ ಕೊಟ್ಟನು. ಮರುದಿನ ರಾಜನೂ ಅವನ ದರ್ಬಾರಿನವರೂ ಆಟಗಾರರ ಸಿಂಹರೂಪದ ಪ್ರದರ್ಶನವನ್ನು ನೋಡಲು ಕಾತರದಿಂದ ಕಾದಿದ್ದಾಗ ಒಮ್ಮೆಗೇ ಮಂತ್ರಮಹಿಮೆಯಿಂದಲೋ ಎನ್ನುವಂತೆ ಒಂದು ನಿಜವಾದ ಸಿಂಹವೇ ಆ ಕ್ಷಣದಲ್ಲಿ ಬಂದು ಹಾರಿತು ಎಂದು ಕಥೆಯಲ್ಲಿ ಹೇಳಿದೆ. ಈ ಸಿಂಹವು ಅರಮನೆಯೆಲ್ಲಾ, ರಾಜಧಾನಿಯೆಲ್ಲಾ ಗಡಗಂಟ್ಟಿ ನಡಗುವಂತೆ ಭಯಂಕರವಾಗಿ ಗರ್ಜಿಸಿ ಆರ್ಭಟಿಸಿತು. ರಾಜನ ಪರಿವಾರದವರಲ್ಲಿದ್ದ ರಾಜಕುಮಾರನನ್ನು ಕಚ್ಚಿ ಸೆಳೆದು ಹರಿದು ಹರಿದು ತುಂಡು ತುಂಡು ಮಾಡಿತು. ಇನ್ನೊಬ್ಬ ಬಾಲಕನ ಮೇಲೂ ಜಿಗಿದು ಕಚ್ಚಿಕೊಂಡೋಡಿ ಗಗನಕ್ಕೆ ಸಯಿತು. ತಾನೇ ನಿಜವಾಗಿ ದೇವರೆಂದೂ ತಾನೇ ಸರ್ವಸ್ವವೆಂದೂ ಇರುವ ಭಾವನೆಯು ಈ ಪುಣ್ಯಾತ್ಮನಲ್ಲಿ ಅತ್ಯಂತ ದೃಢವಾಗಿದ್ದಿತು. ಈ ಅಲ್ಪವಾದ ಪುಟ್ಟ ಶರೀರವು ತಾನೆಂಬ ಭಾವನೆಯು ಈತನಲ್ಲಿ ಹಿಂದೆ ಕಳೆದುಹೋಗಿದ್ದ ಭ್ರಮೆಯಾಗಿದ್ದಿತು. ಅದು ಅವನಿಗೆ ಸಂಪೂರ್ಣ ಅರ್ಥಶೂನ್ಯವಾಗಿತ್ತು. ದೇವರೇ ಅವನಾಗಿದ್ದನು; ಸರ್ವಶಕ್ತನಾದ ದೇವರೇ ಆ ಸಿಂಹರೂಪದಿಂದ ತೋರಿಕೊಂಡಿದ್ದನು. ಸಿಂಹವೇ ತಾನೆಂದು ಚಿಂತನಮಾಡಿದ ನಿಮಿಷ ಮಾತ್ರದಲ್ಲಿ ಅವನು ಸಿಂಹವೇ ಆಗಿದ್ದನು.

Just as you think, so you become, and if you have felt and realized yourself as God, all your thoughts and desires are bound to fructify, to be realized on the spot.

"ನೀವು ಹೇಗೆ ಭಾವಿಸುವಿರೋ ಹಾಗೆ ಆಗುವಿರಿ; ನೀವು ಏನೆಂದು ಸಂಕಲ್ಪಿಸುವಿರೋ ಅದೇ ಆಗುವಿರಿ. ನಿಮ್ಮನ್ನು ನೀವು ದೇವರೆಂದು ಭಾವಿಸಿ, ಆ ಸರ್ವಲೋಕಗಳಿಗೂ ಕಾರಣನೂ ಸರ್ವಜ್ಞನೂ ಸರ್ವಶಕ್ತನೂ ಆದ ಪರಮಾತ್ಮನೇ ನೀವೆಂದು ಅನುಭವ ಪಡೆದಿದ್ದರೆ, ನಿಮ್ಮ ಎಲ್ಲಾ ಭಾವನೆಗಳೂ ಬಯಕೆಗಳೂ ಸಂಕಲ್ಪ ಮಾಡಿದ ಸಮಯದಲ್ಲಿಯೇ ಸ್ಥಳದಲ್ಲಿಯೇ ಸಫಲವಾಗುತ್ತವೆ; ಸಿದ್ಧವಾಗುತ್ತವೆ." ಆದ್ದರಿಂದ ಆ ಮಹಾತ್ಮನು ತಾನು ಸಿಂಹವಾಗಬೇಕೆಂದು ಸಂಕಲ್ಪ ಮಾಡಿದ ಕೂಡಲೇ ಅದು ಸಿದ್ಧಾರ್ಥವಾಗಿ ಅವನು ಸಿಂಹವೇ ಆದನು. ಆ ಘೋರವಾದ ಪ್ರದರ್ಶನವು ಮುಗಿದಿತ್ತು. ಆ ಇಬ್ಬರು ಬಾಲಕರನ್ನು ಕೊಂದ ಮೇಲೆ ಆ ಮಹಾತ್ಮನು-ಯಾವ ಶರೀರದ ಅಭಿಮಾನವೂ ಇಲ್ಲದವನಾದುದರಿಂದ–ಆ ಸಿಂಹರೂಪವನ್ನು ವಿಸರ್ಜಿಸಿ ತನ್ನ ಪೂರ್ವ ರೂಪವನ್ನು ಪಡೆದನು. ಅವನು ವ್ಯಕ್ತಿಗಳನ್ನು ಗೌರವಿಸತಕ್ಕವನಾಗಿರಲಿಲ್ಲ.

ಆದರೆ, ರಾಜನೂ ಪರಿವಾರದವರೂ ಈ ಸಿದ್ಧಪುರುಷನೇ ಸಿಂಹವಾಗಿ ಬಂದು ತನ್ನ ಬಾಲಕನನ್ನು ಕೊಂದಿರಬೇಕೆಂದು ಊಹಿಸಿ ಅತ್ಯಂತ ದುಃಖಿತರೂ ಉದ್ರಿಕ್ತರೂ ಆಗಿ ಕೋಪವೇ ಮೂರ್ತಿಗೊಂಡಂತೆ ಆದರು. ಅವರು ಇವನ ಮೇಲೆ ಸೇಡು ತೀರಿಸಿ ಕೊಳ್ಳಬೇಕೆಂದು, ಅವನಲ್ಲಿಗೆ ಬಂದು "ಸ್ವಾಮಿ ! ತಾವು ಮಹಾ ಸಿದ್ಧಪುರುಷರು; ಕೊಲ್ಲುವ ಶಕ್ತಿಯು ತಮಗೆ ಇದ್ದಮೇಲೆ ಕಾಯುವ ಶಕ್ತಿಯೂ ಇರಬೇಕು ; ಸಂಹಾರ ಶಕ್ತಿಯು ಇರುವಲ್ಲಿ ಸಂಜೀವನ ಶಕ್ತಿಯೂ ಸಂರಕ್ಷಣ ಶಕ್ತಿಯೂ ಇರುವುದು ಸ್ವಾಭಾವಿಕ. ಕ್ರಿಸ್ತನು ಸತ್ತವರನ್ನು (Qum Biyazn Allah) 'ಕ್ವಂ ಬಿಯಾಜನ್ ಅಲ್ಲಾ !' 'ದೇವರ ಹೆಸರಿನಿಂದ ಏಳು ; ದೇವರಿಗೆ ಜಯವಾಗಲಿ ! ದೇವರ ಮಹಿಮೆ ಯಿಂದ ಜೀವಂತನಾಗು ; ಬದುಕಿ ಏಳು, ನಡಿ,' ಎಂದು ಪ್ರಾರ್ಥಿಸಿ ಬದುಕಿಸುತ್ತಿದ್ದನು. ಹಾಗೆಯೇ ನೀವೂ ಕೂಡ ಆ ಸತ್ತವನನ್ನು ಅಥವಾ ನೀವೇ ಕೊಂದವನನ್ನು ದೇವರ ಹೆಸರಿನಲ್ಲಿ ಬದುಕಿಸಿಕೊಡಿ", ಎಂದರು. ಆ ಮಹಾತ್ಮನು ನಕ್ಕನು, "ಒಳ್ಳೆಯದು, ನಿಮ್ಮ ಮಂತ್ರವನ್ನೇ ಉಚ್ಚರಿಸುತ್ತೇನೆ" ಎಂದು "ಕ್ವಂ ಬಿಯಾಜನ್ ಅಲ್ಲಾ !" "ಕ್ವಂ ಬಿಯಾಜನ್ ಅಲ್ಲಾ !" ಎಂದು ಮತ್ತೆ ಮತ್ತೆ ಉಚ್ಚರಿಸಿದನು. ಆದರೆ ಸತ್ತವನು ತಿರುಗಿ ಬದುಕಲಿಲ್ಲ, "ದೇವರ ಮಹಿಮೆಯಿಂದ, ದೇವರ ಹೆಸರಿನಲ್ಲಿ, ಬದುಕು, ಏಳು, ನಡಿ." ಎಂದು ಪುನಃ ಪುನಃ ಹೇಳಿದನು. ಆದರೆ ಹೆಣಕ್ಕೆ ಜೀವ ಬರಲಿಲ್ಲ. ಆಗ ಅವನು ಪುನಃ ನಕ್ಕು "ಕ್ವಂ ಬಿಯಾಜ್‌ನಿ" "ನನ್ನ ಅಧಿಕಾರದಿಂದ ಹೇಳುತ್ತೇನೆ, ಬದುಕು, ನಾನು ಆಜ್ಞೆ ಮಾಡುತ್ತೇನೆ, ಜೀವಂತನಾಗು, ಎಚ್ಚರಗೊಳ್ಳು, ಎದ್ದೇಳು, ನಡಿ" ಎಂದು ಅಪ್ಪಣೆ ಮಾಡುತ್ತೇನೆ ಎಂದು ಹೇಳಿದ ಕೂಡಲೇ ಆ ಬಾಲಕನಿಗೆ ಜೀವ ಬಂದಿತು. ಆದರೆ ಸುತ್ತಲೂ ಇದ್ದ ಜನರಿಗೆ ಸಹನೆಯಾಗಲಿಲ್ಲ. ಅವರು "ಇವನು ಮಹಾ ಪಾಷಂಡಿ, ನಾಸ್ತಿಕ ; ತಾನೇ ದೇವರ ಸಮಾನನೆನ್ನುತ್ತಾನೆ. ಎಲ್ಲಾ ಖ್ಯಾತಿಯನ್ನೂ ಗೌರವವನ್ನೂ ತಾನೇ ತೆಗೆದುಕೊಳ್ಳುತ್ತಾನೆ, ಇವನನ್ನು ಕೊಲ್ಲಬೇಕು, ಇವನ ಚರ್ಮ ಸುಲಿದು ಕೊಲೆ ಮಾಡಬೇಕು," ಎಂದು ಕೂಗಾಡಿದರು. ಆ ಮಹಾತ್ಮನಿಗೆ ಅವರ ರೇಗಾಟಗಳು ಯಾವ ಮಹತ್ತ್ವದ್ದೂ ಆಗಿರಲಿಲ್ಲ. ಜನರಿಗೆ ಅವನ ಮಾತು ಅರ್ಥವಾಗಲಿಲ್ಲ. ಅವನು ಈ ದೇಹ ವನ್ನು ಈ ಅಲ್ಪ ವ್ಯಕ್ತಿಯನ್ನು ದೇವರೆನ್ನಲಿಲ್ಲ. ಅವನು ತನ್ನ ಮಾಂಸಮಯ ದೇಹ ವನ್ನು ಎಂದೋ ಶಿಲುಬೆಗೇರಿಸಿ, ಶೂಲಕ್ಕೇರಿಸಿ ಕೊಂದು ಬಿಟ್ಟಿದ್ದನು, ಇದನ್ನು ತಿಳಿಯದೆ ಜನರು ಆ ಮಹಾತ್ಮನ ಜೀವ ಸಹಿತ ಚರ್ಮ ಸುಲಿಯಬೇಕೆಂದು ಕೂಗಾಡುತ್ತಿದ್ದರು. ಇದನ್ನು ತಿಳಿದು ತತ್‌ಕ್ಷಣ ಆ ಮಹಾತ್ಮನು, ಪ್ರಾಣಿಗಳ ಚರ್ಮವನ್ನು ಸುಲಿದು ದೇಹ ದಿಂದ ಬೇರ್ಪಡಿಸುವಂತೆ, ಉಗುರುಗಳಿಂದ ತನ್ನ ಇಡೀ ದೇಹದ ಚರ್ಮವನ್ನೇ ಮುಡಿ ಯಿಂದ ಅಡಿಯವರೆಗೂ ಸುಲಿದು ಕತ್ತರಿಸಿ ಒಗೆದನು—ಎಂದು ಆ ಕಥೆಯಲ್ಲಿ ಹೇಳಿದೆ, ಆ ಸಮಯದಲ್ಲಿ ಅವನು ಬರೆದ ಒಂದು ಸೊಗಸಾದ ಉದ್ದವಾದ ಕವಿತೆಯಿದೆ. ಆ ಗೀತೆಯ ತಾತ್ಪರ್ಯವೇನೆಂದರೆ—"ಓ ಆತ್ಮ ! ಓ ಆತ್ಮ ! ನಿನಗೆ ಪ್ರಪಂಚದ ವಿಷವೇ ಅಮೃತವಾಗಿದೆ; ಮತ್ತು ಪ್ರಪಂಚದ ಅಮೃತವೇ (ವಿಷಯ ಸುಖವೇ) ವಿಷವಾಗಿದೆ.

ಈ ಜನರಿಗೆ ಏನೋ ಬೇಕಾಗಿದೆ. ಪ್ರಪಂಚವು ಸತ್ತ ಹೆಣವಲ್ಲದೆ ಬೇರಲ್ಲ ; ಪ್ರಪಂಚ ಸುಖವೂ ನಿರ್ಜೀವ ಶವವಲ್ಲದೆ ಬೇರಲ್ಲ. ಅದರ ಬೆನ್ನು ಹತ್ತಿ ಓಡುವ ಜನರು ನಾಯಿಗಳಲ್ಲದೆ ಬೇರಲ್ಲ. ಇಲ್ಲಿ ಈ ನಾಯಿಗಳಿವೆ. ಅವುಗಳಿಗೆ ತಿನ್ನುವದಕ್ಕೆ ಈ ಮಾಂಸವನ್ನು ಕೊಡು." ಎಂದು ತನ್ನನ್ನು ಕುರಿತು ತಾನೇ ಹೇಳಿಕೊಂಡನು. ಈ ಕತೆಯು ಸುಳ್ಳೋ ನಿಜವೋ ಅದು ನಮಗೆ ಮುಖ್ಯವಲ್ಲ. ಆದರೆ ಅದರಲ್ಲಿರುವ ನಿಜವಾದ ಅರ್ಥವನ್ನೂ ಭಾವವನ್ನೂ ನೀತಿಯನ್ನೂ ನಾವು ಮನಸ್ಸಿನಲ್ಲಿ ಧರಿಸಬೇಕು.

ಧರ್ಮ ಮಾರ್ಗದಲ್ಲಿ ನಡೆಯುವುದಕ್ಕಾಗಿ, ಸತ್ಯವನ್ನು ಅನುಭವಕ್ಕೆ ತಂದುಕೊಳ್ಳುವದಕ್ಕಾಗಿ ಎಲ್ಲಾ ಆಸಕ್ತಿಗಳನ್ನೂ ಬಿಡಬೇಕು ; ಪ್ರಾಪಂಚಿಕ ಆಶೆಗಳನ್ನೂ ಸ್ವಾರ್ಥಕ್ಕಾಗಿ ಅಂಟಿಕೊಂಡಿರುವ ಅಭಿಮಾನಗಳನ್ನೂ ಮೆಟ್ಟಿ ಮೇಲೇರಬೇಕು. ಮನಸ್ಸಿಗೆ ಅಂಟಿಕೊಂಡಿರುವ ಪ್ರಾಪಂಚಿಕ ವಿಷಯಗಳನ್ನೂ ಸ್ವಾರ್ಥದ ಬಯಕೆಗಳನ್ನೂ ಬಿಡುಗಡೆ ಮಾಡಿಕೊಂಡ ಮಾತ್ರಕ್ಕೆ ಸತ್ಯದ ಸಮಾಚಾರವೇನು? ಸತ್ಯವು ಹೇಗೆ ಲಭಿಸುತ್ತದೆ?" ಎಂದು ತೋರಬಹುದು. ಆದರೆ ಅದಕ್ಕಾಗಿ ಹೊಸದಾಗಿ ಏನೂ ಮಾಡಬೇಕಾಗಿಲ್ಲ. ಈ ಕ್ಷಣವೇ ನೀವು ಸತ್ಯಸ್ವರೂಪರಾಗಿದ್ದೀರಿ.

೨೦. ಭೂತಗಳು ಬದ್ಧಜೀವರು

(ಹಿಮಾಲಯದ ಗುಹೆ)

ಪಿಶಾಚಿಗಳಿವೆಯೆಂದು ಪ್ರಸಿದ್ಧವಾಗಿದ್ದ ಹಿಮಾಲಯದ ಗುಹೆಯೊಂದರಲ್ಲಿ ರಾಮನು ವಾಸಮಾಡುತ್ತಿದ್ದನು. ಆ ಗುಹೆಯಲ್ಲಿ ಒಂದು ರಾತ್ರಿ ಉಳಿದಿದ್ದರಿಂದಲೇ ಹಲವು ಸಾಧು ಸಂನ್ಯಾಸಿಗಳು ಸತ್ತು ಹೋಗಿರುವರೆಂದು ಸುತ್ತಲಿದ್ದ ಹಳ್ಳಿಯ ಜನರು ಹೇಳುತ್ತಿದ್ದರು. ಕೆಲವರು ಆ ಗುಹೆಯಲ್ಲಿ ಪ್ರವೇಶಮಾಡಿದ ಮಾತ್ರಕ್ಕೇ ಭೂತಗಳು ಭಯಪಡಿಸಿದ್ದರಿಂದ ಮೂರ್ಛೆ ಹೊಂದಿದ್ದರೆಂದೂ ಹೇಳುತ್ತಿದ್ದರು. ಆ ಗುಹೆಯಲ್ಲಿಯೇ ವಾಸಮಾಡಬೇಕೆಂಬ ಇಚ್ಛೆಯನ್ನು ರಾಮನು ವ್ಯಕ್ತ ಮಾಡಿದ ಕೂಡಲೇ ಎಲ್ಲರಿಗೂ ಆಶ್ಚರ್ಯವಾಯಿತು. ರಾಮನು ಆ ಗುಹೆಯಲ್ಲಿ ಹಲವು ತಿಂಗಳು ವಾಸಮಾಡಿದನು. ಯಾವದೊಂದು ದೆವ್ವವೂ ಅದರ ನೆರಳೂ ಸಹ ಅಲ್ಲಿಗೆ ಬರಲಿಲ್ಲ. ಅವೆಲ್ಲಾ ಪಲಾಯನ ಮಾಡಿರಬೇಕೆಂದು ತೋರುತ್ತದೆ. ನೆರೆಯಲ್ಲಿಯೇ ಹಾವು ಚೇಳುಗಳು ಹೇರಳವಾಗಿದ್ದವು. ಆದರೆ ಅವು ರಾಮನ ಶರೀರಕ್ಕೆ ಯಾವ ಅಪಾಯವನ್ನೂ ಮಾಡಲಿಲ್ಲ.

ಈ ದೇಹವನ್ನು ಬಿಟ್ಟ ಮೇಲೆ ಜೀವನ್ಮುಕ್ತರು ಎಂದೂ ದೆವ್ವ-ಪಿಶಾಚಿಗಳಾಗುವದಿಲ್ಲವೆಂದು ವೇದಾಂತವು ಸಿದ್ಧಮಾಡಿ ತೋರಿಸಿದೆ. ತಮ್ಮ ತಮ್ಮ ಚಿತ್ತಭ್ರಾಂತಿಗಳಿಗೆ ಗುಲಾಮರಾಗಿರತಕ್ಕವರೇ ಭೂತ-ಪ್ರೇತಗಳ ರೂಪವನ್ನು ಧರಿಸತಕ್ಕವರು, ಕೇವಲ ಬದ್ಧಜೀವರೇ ಅಂಥಾ ಛಾಯಾರೂಪಗಳಲ್ಲಿ ವಾಸನಾ ಸರಪಳಿಯಿಂದ ಸೆರೆ ಹಾಕಲ್ಪಡುತ್ತಾರೆ.

೨೧. ಜೀವನ್ಮುಕ್ತನ (ಆಭಾಸ) ಸೂಕ್ಷ್ಮಶರೀರ

(ರಾಜಾ ಸ್ಟೈರಸ್)

ಪರ್ಷಿಯಾ ದೇಶದ ಹಿರಿಯ ರಾಜನಾದ ಸ್ಟೈರಸ್‌ನ ವಿಷಯವಾಗಿ ಹೀಗೆ ಹೇಳಿದೆ: ಅವನು ಪ್ರಪಂಚದಲ್ಲಿ ಜೀವಿಸಿರುವವರೆಗೂ ಜನರ ಹಿತಕ್ಕಾಗಿಯೂ ಸೇವೆಗಾಗಿಯೂ ಇದ್ದನು. ಅವನು ಸಾಯುವಾಗ ತನ್ನ ಇಚ್ಛಾ ಪತ್ರದಲ್ಲಿ "ಸತ್ತಮೇಲೆ ನನ್ನ ಶರೀರವನ್ನು ಭವ್ಯವಾದ ಒಂದು ಸಮಾಧಿಯಲ್ಲಿ ಇರಿಸುವದು ಬೇಡ. ಅದನ್ನು ಕಡಿದು ಕೊಚ್ಚಿ ಕೊಚ್ಚಿ ಸಣ್ಣ ತುಂಡುಗಳನ್ನು ಮಾಡಿ ಅದು ಗೊಬ್ಬರವಾಗಿ ಪರಿಣಮಿಸಲು ಪರ್ಷಿಯಾದ ರಾಜ್ಯದ ತುಂಬಾ ಹಂಚಲ್ಪಡಲಿ" ಎಂದು ಬರೆಸಿದನಂತೆ. ಮುಕ್ತಾತ್ಮನ ಸೂಕ್ಷ್ಮ ಶರೀರಕ್ಕೆ ಆಗುವ ಪರಿಣಾಮವು ಖಂಡಿತವಾಗಿ ಇದೇ ಸರಿ. ಮರಣಾನಂತರ ಅವನ ಸೂಕ್ಷ್ಮಶರೀರವು ಇಡೀ ವಿಶ್ವದ ತುಂಬಾ ಪ್ರಸರಣವಾಗುತ್ತದೆ. ಪ್ರತಿಯೊಬ್ಬನೂ ಅವನ ಹಂಚಿಕೆಯಲ್ಲಿ ಭಾಗಿಯಾಗುತ್ತಾನೆ. ಅವನ ಮಾಂಸವನ್ನು ಸೇವಿಸಿ, ರಕ್ತವನ್ನು ಪಾನಮಾಡುತ್ತಾನೆ. ಸಣ್ಣದಾಗಿ ಕತ್ತರಿಸಲ್ಪಟ್ಟ ಅವನ ಸೂಕ್ಷ್ಮಶರೀರವು ಇಡೀ ಜಗತ್ತಿನಿಂದ ಸೇವಿಸಲ್ಪಡುತ್ತದೆ. ಇಲ್ಲಿ ಅಹಂಕಾರವು ಗಾಳಿಗೆ ತೂರಲ್ಪಟ್ಟಿದೆ. ಅವನು ಬಾಯಿ ಬಿಟ್ಟು ಉಪದೇಶಮಾಡಲಿ, ಮಾಡದಿರಲಿ, ಅವನು ಗ್ರಂಥಗಳನ್ನು ಬರೆಯಲಿ ಬರೆಯದಿರಲಿ, ಅವನು ಸಾರ್ವಜನಿಕ ವೇದಿಕೆಯ ಮೇಲೆ ಬರಲಿ ಬಾರದಿರಲಿ, ಮಾನವ ಜನಾಂಗವನ್ನು ಆಶ್ಚರ್ಯಕರವಾಗಿ ಸೇವಿಸುತ್ತಾನೆ. ಅವನು ಅದ್ಭುತ ಸುಧಾರಕನು. ರಾಜಾಧಿರಾಜರ ಭಾಗ್ಯಭಂಡಾರದಲ್ಲಿಯಾದರೂ ಅವನು ಬಯಸಬಹುದಾದ್ದೊಂದು ಏನೂ ಇಲ್ಲ. ಪ್ರಪಂಚದಲ್ಲಿರುವ ಯಾವ ಗ್ರಂಥಗಳೂ ವೇದಗಳೂ ಬೈಬಲ್‌ಗಳೂ ಅವನಿಗೆ ಏನನ್ನೂ ತಿಳಿಸಬೇಕಾಗಿಲ್ಲ. ಮಹಾರಾಜರುಗಳ ಅಥವಾ ಮಹಾ ದುಷ್ಟ ಪ್ರಭುಗಳ ಅನುಗ್ರಹವಾಗಲೀ ಆಗ್ರಹವಾಗಲೀ ಅವನಿಗೆ ಅರ್ಥಹೀನವಾಗಿರುತ್ತವೆ. ಅವರು ಜೀವಿಸಿರುವವರೆಗೂ ಅವನ ದಯಾಮಯವಾದ ಸಾನ್ನಿಧ್ಯವೂ ಪವಿತ್ರವಾದ ದೃಷ್ಟಿಯೂ ಪರಿಶುದ್ಧಿಯನ್ನೂ ಸುಖವನ್ನೂ ಪ್ರಸರಿಸುತ್ತದೆ. ಅವನು ನಿಧನ ಹೊಂದಿದರೆ ಪ್ರಪಂಚವು ಆಶ್ಚರ್ಯಕರವಾಗಿ ಸುಧಾರಣೆ ಹೊಂದುತ್ತದೆ.

ಸೂರ್ಯನ ಶಾಖದಿಂದ ಈ ಸ್ಥಳದಲ್ಲಿರುವ ಗಾಳಿಯು ವಿರಳವಾದರೆ ಅದು ಸ್ವಾಭಾವಿಕವಾಗಿ ಮೇಲೇರುತ್ತದೆ ; ಇಲ್ಲಿ ಅದರ ಸ್ಥಳವು ಖಾಲಿ ಆಗುತ್ತದೆ. ಈ ಖಾಲಿ ಆದ ಸ್ಥಳವನ್ನು ತುಂಬಿಕೊಳ್ಳಲು ಸುತ್ತಲೆಲ್ಲಾ ಕಡೆಗಳಿಂದಲೂ ಗಾಳಿಯು ನುಗ್ಗಿ ಬರುತ್ತದೆ. ಹೀಗೆ ಇಡೀ ವಾತಾವರಣದ ತುಂಬಾ ಚಲನೆಗಳೂ ಪರಿಭ್ರಮಣೆಗಳೂ ಉಂಟಾಗುತ್ತವೆ. ಯಾವ ಮನುಷ್ಯನು ದೇಹದ ವಿಷಯದಲ್ಲಿ ಎಂದಿಗೂ ಏನನ್ನೂ ಆಲೋಚಿಸುವದಿಲ್ಲವೋ ಯಾವ ಬಯಕೆಯನ್ನೂ ಉಳ್ಳವನಾಗಿಲ್ಲವೋ ಪೂರ್ಣನಾಗಿದ್ದಾನೆಯೋ ಅವನು ಪುನಃ ಹುಟ್ಟುವದಿಲ್ಲ. ಅವನು ಸತ್ತ ಮೇಲೆ—ಆತ್ಮಜ್ಞಾನವನ್ನು ಆಳವಾಗಿ ಪಾನಮಾಡಿ ಸತ್ಯವನ್ನು (ಶಾಖವನ್ನು) ಅಥವಾ ಪ್ರಕಾಶವನ್ನು

ಹೀರಿಕೊಂಡಿರುವ-ಅವನ ಸೂಕ್ಷ್ಮಶರೀರವು, ವಿಶ್ವದಲ್ಲಿರುವ ತನ್ನ ಸ್ಥಾನವನ್ನು ಖಾಲಿಮಾಡಿ, ವಿರಳವಾದ ಗಾಳಿಯಂತೆ ಈ ಪ್ರಪಂಚವನ್ನು ಬಿಟ್ಟು ಮೇಲೇರುತ್ತದೆ. ಅವನಿಗೆ ಪುನರ್ಜನ್ಮವಿಲ್ಲವಾದ್ದರಿಂದ, ಅವನಿಂದ ಬರಿದಾದ ಸ್ಥಳವನ್ನು ಒಂದು ದೈವೀ ನಿಯಮದ ಪ್ರಕಾರ, ಅವನಿಗೆ ಅತ್ಯಂತ ಸಮೀಪವಾಗಿರುವ ಭಕ್ತರು, ಅವನ ಸ್ಥಳವನ್ನು ತುಂಬುವದಕ್ಕಾಗಿ, ಮನಶುದ್ಧಿಯಿಂದಲೂ ಪ್ರೇಮದಿಂದಲೂ ಜ್ಞಾನದಿಂದಲೂ ಮೇಲೆ ಎತ್ತಲ್ಪಡುವರು. ಆಗ ಅವರಿಂದ ತೆರವಾದ ಸ್ಥಳವನ್ನು ತುಂಬುವದಕ್ಕಾಗಿ ಅವರಿಗೆ ಅತ್ಯಂತ ಸಮೀಪರಾದ ಸಾಧಕರ ಉದ್ಧಾರದಿಂದಲೂ ಅವರ ಸ್ಥಳವನ್ನು ಅವರಿಗೆ ಅತ್ಯಂತ ಸಮೀಪರಾದ ಯೋಗಿಗಳ ಉನ್ನತಿಯಿಂದಲೂ ಹೀಗೆ ಇಡೀ ಜಗತ್ತೇ-ಸಂಸ್ಕಾರ-ಸಂಬಂಧವುಳ್ಳ ಅಧಿಕಾರಿಗಳ ಯೋಗ್ಯತೆಯ ತಾರತಮ್ಯದಂತೆ-ಉದ್ಧಾರವನ್ನು ಪಡೆಯುತ್ತದೆ. ಹೀಗೆ ಜೀವನ್ಮುಕ್ತನ ನಿಧನದಿಂದಲೂ ಪ್ರಪಂಚವೇ (ಸ್ವಯಂ) ಸಂಚಲಿತವಾಗುತ್ತದೆ. ಇವನು ಆಶ್ಚರ್ಯಕರವೂ ಅದ್ಭುತವೂ ಆದ ಸಂಧಾರಕನು. ಬ್ರಹ್ಮನಿಷ್ಠ ಜೀವನ್ಮುಕ್ತನು ಬಾಯಿ ಬಿಚ್ಚದಿದ್ದರೂ ಪ್ರಪಂಚವು ಅವನಿಂದ ಉನ್ನತಿಯನ್ನು ಪಡೆಯುತ್ತದೆ.

೨೨. ಆಸಕ್ತಿ ವಿರುದ್ಧ ಅನಾಸಕ್ತಿ

(ಹಸಿಯ ತೆಂಗಿನಕಾಯಿ ಒಣಗಿದ ಕೊಬರಿ)

ಒಳಗಿರುವ ಈ ದೌರ್ಬಲ್ಯವೇನು ? ದೇಹವನ್ನೂ ಇಂದ್ರಿಯಗಳನ್ನೂ ನೀವೆಂದು ಭಾವಿಸುವ ಅಜ್ಞಾನ ಗಾಢಾಂಧಕಾರವೇ ಈ ದೋಷವಾಗಿದೆ. ಅದನ್ನು ತಿರಸ್ಕರಿಸಿ, ಕಳೆದುಕೊಳ್ಳಿ ; ಆಗ ಶಕ್ತಿಯೇ ನೀವಾಗುತ್ತೀರಿ. ನಿಮ್ಮ ಪಿತ್ತಕೋಶವನ್ನೋ ಗುಲ್ಮವನ್ನೋ ಗಮನಿಸುವುದು ಯಾವಾಗ ? ಅದು ಕೆಟ್ಟಾಗ. ನಿಮ್ಮ ಶ್ವಾಸಕೋಶವನ್ನು ನೀವು ಭಾವಿಸುವದು ಯಾವಾಗ ? ಅದಕ್ಕೆ ಕಷ್ಟವಾದಾಗ. ಕಣ್ಣು ಮೂಗುಗಳು ಆರೋಗ್ಯವಾಗಿರುವಾಗ ಅವುಗಳು ಇವೆಯೆಂಬುದೇ ತಿಳಿಯುವದಿಲ್ಲ.

ಹೀಗೆಯೇ, ನಿಮಗೆ ದೇಹಭಾವನೆ ಬಂದರೆ, ಅದರಲ್ಲಿ ಏನೋ ದೋಷವಿರಬೇಕೆಂದೂ ಅದೊಂದು ವ್ಯಾಧಿಯೆಂದೂ ತಿಳಿಯಬೇಕು. ನೀವು ಪೂರ್ಣಾರೋಗ್ಯದಿಂದಿರುವಾಗ ನಿಮ್ಮಲ್ಲಿ ಧೈರ್ಯವೂ ಶಕ್ತಿಯೂ ನಿಮ್ಮ ಅನುಭವಕ್ಕೆ ಬರುತ್ತದೆ. ಆಗ ನೀವು ಈ ದೇಹವೆಂದೂ ಒಂದು ವ್ಯಕ್ತಿಯೆಂದೂ ನಿಮಗೆ ಅಷ್ಟಾಗಿ ತೋರುವದಿಲ್ಲ ; "ಈ ಸುಳ್ಳು ಆತ್ಮವೇ ನಾನು-ಈ ಪುಟ್ಟ ದೇಹವೇ ನಾನು" ಎಂಬ ಅಣಕವನ್ನೂ ಭ್ರಮೆಯನ್ನೂ ನೀವು ಮೀರಿರುತ್ತೀರಿ. ನಿಮಗೆ ಇಡೀ ಜಗತ್ತೇ ನಿಮ್ಮ ದೇಹವಾಗಿರುತ್ತದೆ. ಆ ಸ್ಥಿತಿಯಲ್ಲಿ ನೀವು ಇದ್ದ ಕೂಡಲೇ ಆ ಕ್ಷಣದಲ್ಲಿಯೇ-ಆನಂದವು ನಿಮ್ಮಲ್ಲಿ ಸ್ಫುರಿಸುತ್ತದೆ ; ಬಯಕೆಯೇ ಏಳುವದಿಲ್ಲ. ದೇಹವು ನಾನೆಂಬ ಅಜ್ಞಾನ ಕತ್ತಲೆಯಲ್ಲಿ ನೀವು ಮತ್ತೆ ಮತ್ತೆ ಎಡವಿ ಬೀಳುತ್ತೀರಿ ; ಅಜ್ಞಾನವೇ ನಿಮ್ಮಲ್ಲಿರುವ ದೌರ್ಬಲ್ಯವು.

ಒಬ್ಬ ಮಹಾತ್ಮರಲ್ಲಿ ಶಿಷ್ಯನೊಬ್ಬನು ಪ್ರಶ್ನೆ ಮಾಡಿದನು: ಕ್ರಿಸ್ತನನ್ನು ಶಿಲುಬೆಗೇರಿಸಿ ಮೈತುಂಬಾ ಮೊಳೆಗಳನ್ನು ಜಡಿದಾಗ, ಅವನಿಗೇಕೆ ನೋವಾಗಲಿಲ್ಲ?" ಎಂದು ಕೇಳಿದನು. ಆಗ ಆ ಮಹಾತ್ಮನಲ್ಲಿ ಎರಡು ತೆಂಗಿನ ಕಾಯಿಗಳಿದ್ದವು. ಒಂದು ಎಳೆಯದಾಗಿ ಹಸಿಯಾಗಿದ್ದಿತು. ಇನ್ನೊಂದು ಕಾಯಿಯು ಬಲಿತು ಒಣಗಿದ್ದಿತು. ಆ ಮಹಾತ್ಮನು ಹೇಳಿದನು, "ಈಗ ಈ ಹಸಿಯ ಕಾಯಿಯ ಚಿಪ್ಪನ್ನು ಒಡೆದರೆ, ಒಳಗಿನ ಕಾಯಿಗೂ ಗಾಯವಾಗಿ, ಕಾಯಿಯು ಒಡೆದು ಚೂರಾಗುತ್ತದೆ. ಈ ಒಣಗಿದ ಕಾಯಿಯನ್ನು ಒಡೆದರೆ, ಒಳಗಿನ ಕಾಯಿಯು ಗಿಟುಕಾಗಿ ಚಿಪ್ಪನ್ನು ಬಿಟ್ಟು ಪ್ರತ್ಯೇಕವಾಗಿರುವದರಿಂದ ಆ ಕೊಬ್ಬರಿಗೆ ಸ್ವಲ್ಪವೂ ಅಪಾಯವಾಗುವುದಿಲ್ಲ: ಗಾಯವಾಗುವದಿಲ್ಲ. ಆದರೆ ಹಸಿಯ ಕಾಯಿಯು ಚಿಪ್ಪಿಗೆ ಅಂಟಿಕೊಂಡಿರುವದರಿಂದ ಚಿಪ್ಪಿಗೆ ಆಗುವ ಗಾಯವೆಲ್ಲಾ ಕಾಯಿಗೂ ಆಗುತ್ತದೆ. ಕ್ರಿಸ್ತನು, ಅವಿದ್ಯಾಕಾಮಗಳು ಶೋಷಣವಾಗಿ ಒಣಗಿದ ಕೊಬರಿಯಂತಾಗಿದ್ದನು. ಹೊರಗಿನ ಚಿಪ್ಪಿನಂತಿರುವ ದೇಹದ ಅಭಿಮಾನವನ್ನು ಬಿಟ್ಟು ಅವನು ಬೇರೆಯಾಗಿ ಸ್ವಸ್ವರೂಪದಲ್ಲಿ ನಿಂತಿದ್ದನು. ಆದ್ದರಿಂದ ಅವನ ಹೊರಗಿನ ಚಿಪ್ಪಿಗೆ-ದೇಹಕ್ಕೆ-ಮೊಳೆಗಳನ್ನು ಹೊಡೆದರೂ ಒಳಗಿನ ಅವನ ಆತ್ಮವು ಸ್ವಲ್ಪವೂ ನೋಯಲಿಲ್ಲ. ಆದ್ದರಿಂದ ಅದಕ್ಕಾಗಿ ಏಕೆ ದುಃಖ ಪಡಬೇಕು, ಅಳಬೇಕು, ಗೋಳಾಡಬೇಕು? ಸಾಮಾನ್ಯ ಜನರ ವಿಷಯವೇ ಬೇರೆ. ಹಸಿಕಾಯಿಯು ಹೊರಗಿನ ಚಿಪ್ಪಿಗೆ ಅಂಟಿಕೊಂಡಿರುವದರಿಂದ ಚಿಪ್ಪಿಗೆ ಗಾಯವಾದರೆ ಒಳಗಿನ ಕಾಯಿಗೂ ಗಾಯವಾಗುವಂತೆ ಸಾಮಾನ್ಯ ಜೀವರ ದೇಹಕ್ಕೆ ಆಗುವ ದುಃಖವು ಅವರ ಒಳಗೂ ತಳಮಳವನ್ನುಂಟುಮಾಡುತ್ತದೆ.

ಹೊರಗಿನ ಚಿಪ್ಪಿಗೆ ಅಂಟಿಕೊಂಡಿರುವದೇ, ಅದಕ್ಕೆ ಗುಲಾಮರಾಗಿರುವದೇ ನಿಮ್ಮಲ್ಲಿರುವ ದೊಡ್ಡ ದೌರ್ಬಲ್ಯ, ದೋಷ, ಅಥವ ರೋಗವು. ಹೀಗೆ ಚಿಪ್ಪಿನಲ್ಲಿರುವ ಅಭಿಮಾನವನ್ನೂ, ಆಸಕ್ತಿಯನ್ನೂ ದಾಸ್ಯವನ್ನೂ ಬಿಡುವದೇ ಪ್ರಾಪಂಚಿಕರ ದೃಷ್ಟಿಯಿಂದ ಸಾವು. ಈ ಸಾವನ್ನು ಅನುಭವಿಸಿ, ಚಿಪ್ಪಿನಿಂದಲೂ ಚಿಪ್ಪಿನ ಸಂಬಂಧದಿಂದಲೂ ಹಂಬಲದಿಂದಲೂ ನಿಮ್ಮನ್ನು ನೀವು ಬಿಡುಗಡೆ ಮಾಡಿಕೊಂಡ ಹೊರತು, ಸಾವನ್ನು ಜಯಿಸಲು ಸಾಧ್ಯವಿಲ್ಲ; ನೀವು ಕ್ಲೇಶವನ್ನೂ ದುಃಖವನ್ನೂ ರೋಗವನ್ನೂ ನೋವನ್ನೂ ಮೀರುವದು ಸಾಧ್ಯವಿಲ್ಲ. ದೇಹವು ನಿಮಗೆ ಎಂದೆಂದೂ ಇರಲಿಲ್ಲವೇನೋ ಎಂಬಂತೆ ಆಗಲಿ. ದೇಹವು ಎಂದೆಂದೂ ಹುಟ್ಟಿಯೇ ಇರಲಿಲ್ಲವೇನೋ ಎನ್ನುವಷ್ಟು ತೀವ್ರವಾಗಿ ಪರಮಾತ್ಮ ಸ್ವರೂಪದಲ್ಲಿ ನೆಲೆನಿಂತು ಜೀವಿಸುತ್ತಿರುವವನೇ ಮುಕ್ತಾತ್ಮನು.

"ಅಯ್ಯೋ! ನಾನೆಂದೂ ಹುಟ್ಟದಿದ್ದರೆ ಎಷ್ಟು ಚೆನ್ನಾಗಿತ್ತು!" ಎನ್ನುವ ಮಾತನ್ನು ಅನೇಕರ ಮುಖದಿಂದ ರಾಮನು ಕೇಳಿದ್ದಾನೆ. "Let the day Perish in Which I was born" "ನಾನು ಹುಟ್ಟಿದ ದಿನವು ನಾಶವಾಗಲಿ" ಎಂಬ ಜಾಬ್ (Job)ನ

ಸುವಾರ್ತೆಯನ್ನು ಡೀನ್ ಸ್ವಿಫ್ಟ್ (Dean Swift)ನು ಓದುವ ಪದ್ಧತಿಯಿಂತ್ತು. ಆದರೆ ರಾಮನು ಹೇಳುವದೇನೆಂದರೆ "ತಮ್ಮ ! ನಿನ್ನ ಜನ್ಮದಿನವು ನಾಶವಾಗುವಂತೆ ಮಾಡುವ ರೀತಿಯು ಇದಲ್ಲ. ನಿನ್ನ ಅಭಿಮಾನವೂ ಆಸಕ್ತಿಯೂ ಆಶೆಗಳೂ ನಾಶವಾಗಲಿ. ಎಂದೂ ನಿನಗೆ ದೇಹವೇ ಇರಲಿಲ್ಲವೇನೋ, ಎಂದೂ ನೀನು ಹುಟ್ಟಿಯೇ ಇಲ್ಲವೇನೋ ಎನ್ನುವಷ್ಟು ತೀವ್ರವಾಗಿ, ನಿನ್ನ ನೆನಪಿನಲ್ಲಿ ನೀನು ಹುಟ್ಟಿದ ದಿನವು ಉಳಿಯದಷ್ಟು ಉತ್ಕಟವಾಗಿ ಪರಮಾತ್ಮ ಪ್ರಜ್ಞೆಯಲ್ಲಿ ಜೀವಿಸುತ್ತಿರಬೇಕು. ನೀವು ಗಾಢ ನಿದ್ರೆಯಲ್ಲಿ ರುವಾಗ ಎಚ್ಚರದ ಎಲ್ಲಾ ಅನುಭವಗಳೂ ಮಾಯವಾಗುವಂತೆ, ಮರೆತುಹೋಗುವಂತೆ ನಿಮ್ಮ ಹಿಂದಿನ ಅನುಭವಗಳೂ ಸಂಬಂಧಗಳೂ ಖಾಲಿಯಾಗಿ, ಬಯಲಾಗುವಷ್ಟು ಆತ್ಮಜ್ಞಾನದಲ್ಲಿ ನೀವು ಮುಳುಗಬೇಕು. ಚಿಪ್ಪಿನಿಂದ ಕೊಬರಿಯು ಬೇರ್ಪಡುವಂತೆ ಮಾಡುವ ರೀತಿಯೇ ಇದು, ಆಗ ನೀವು ಮೃತ್ಯುವನ್ನು ಜಯಿಸುತ್ತೀರಿ.

೨೩ ಪರಮಾತ್ಮ ಪ್ರಜ್ಞೆಯ ಸ್ಥಿತಿ

(ರಾಮುನ ಮಗನ ಸಾವು)

ನಿಮ್ಮ ಹಳೆಯ ಹಾಡುಗಳನ್ನೆಲ್ಲಾ ಈ ಹೊಸರಾಗಕ್ಕೆ ಹೊಂದಿಸುವದೇ ಆತ್ಮಾನುಭವ. ಹಳೆಯ ಹಾಡುಗಳು ಹಾಗೆಯೇ ಇರುತ್ತವೆ. ಆದರೆ ಎಲ್ಲವನ್ನೂ ಪೂರಾ ಹೊಸರಾಗದಲ್ಲಿ ಹಾಡಬೇಕು. ನೀವು ಪ್ರಪಂಚವನ್ನು ಪೂರಾ ಹೊಸನೋಟದಿಂದಲೇ ನೋಡಬೇಕು. ಎರಡು ನೋಟಗಳನ್ನೂ ನೀವು ಮಿಶ್ರಮಾಡುವದು ಸಾಧ್ಯವಲ್ಲ. ಯಾವದೋ ಒಂದು ವಿದ್ಯಮಾನವನ್ನು ನೀವು ಪ್ರಾಪಂಚಿಕ ದೃಷ್ಟಿಯಿಂದ ನೋಡಿ ಇನ್ನೊಂದು ಸನ್ನಿವೇಶವನ್ನು ಹೊಸ ಪಾರಮಾರ್ಥಿಕ ದೃಷ್ಟಿಯಿಂದ ನೋಡುವದು ಶಕ್ಯವಲ್ಲ. ನಿಮ್ಮ ನೋಟವೂ ನಿಲುಮೆಯೂ ಸಂಪೂರ್ಣವಾಗಿ ಬದಲಾಗಲಿ. ಪ್ರತಿಯೊಂದನ್ನೂ ದೇವರೆಂದು ಭಾವಿಸಿ, ದೇವರೆಂದು ತಿಳಿಯಿರಿ. ದೇವರು ಪ್ರಪಂಚದೊಡನೆ ಯಾವ ಸಂಬಂಧವನ್ನು ಇಟ್ಟುಕೊಂಡಿದ್ದಾನೋ ನೀವು ಪ್ರಪಂಚದೊಡನೆ ಅದೇ ಸಂಬಂಧವನ್ನು ಇಟ್ಟುಕೊಳ್ಳಬೇಕು. ಮನಸ್ಸೇ ಸಂಪೂರ್ಣ ಪರಿವರ್ತನೆಯನ್ನು ಹೊಂದಬೇಕು. ಇದನ್ನು ಕೆಲವು ಕಥೆಗಳಿಂದ ಮನಗಾಣಿಸಬಹುದು.

ಒಮ್ಮೆ ರಾಮನ ವೇದಾಂತದ ಉಪನ್ಯಾಸ ಮಹಿಮೆಯಿಂದ ಸಭಿಕರೆಲ್ಲಾ ದೇವರ ಭಾವನೆಯಲ್ಲಿ ಮುಳುಗಿ, ಪ್ರಪಂಚದ ಎಚ್ಚರವನ್ನೇ ಕಳೆದುಕೊಂಡಂತೆ ಇದ್ದಾಗ, ಒಬ್ಬ ಮನುಷ್ಯನು ಅಳುತ್ತಾ ಒಳಗೆ ಬಂದು ಎದೆ ಎದೆ ಬಡಿದುಕೊಳ್ಳುವದಕ್ಕೆ ತೊಡಗಿದನು. ರಾಮನ ಮಗನು ಸತ್ತನೆಂದು ಅವನು ಗೋಳಾಡುತ್ತಿದ್ದನು. ಆ ಹುಡುಗನು ಅವನ ಸಂಬಂಧಿಯಾಗಿದ್ದನು. ಆದರೆ ಆಗ ಅಲ್ಲಿದ್ದ ದೈವಿಕ ವಾತಾವರಣದ ಪ್ರಭಾವದಿಂದಲೂ ಎಲ್ಲರಲ್ಲಿ ಎಚ್ಚರಗೊಂಡಿದ್ದ ವೇದಾಂತ ವಿಚಾರದ ಮನೋಭಾವದಿಂದಲೂ ಯಾರೂ ಅವನ ಕಡೆ ಲಕ್ಷ್ಯ ಕೊಡಲೇ ಇಲ್ಲ. ಅವನ ಅಳುವು ಎಲ್ಲರಿಗೂ ಅಣಕವಾಗಿತ್ತು. ಅರ್ಥಹೀನವಾಗಿತ್ತು. ಕೈಲಾಸ ಶಿಖರದ ಎತ್ತರದಿಂದ ಸಹಸ್ರಾರು ಅಡಿಗಳ ಕೆಳಗಿರುವ

ಒಂದು ಮೃಗವನ್ನು ಅಥವಾ ಒಂದು ಕಂದರವನ್ನು ನೋಡಿದರೆ ಅದು ಎಷ್ಟು ಸಣ್ಣದಾಗಿ ಕಾಣಬಹುದೋ ಅವನ ದುಃಖವೂ ಎಲ್ಲರಿಗೂ ಅಷ್ಟು ಕ್ಷುದ್ರವಾಗಿ ಕಾಣುತ್ತಿತ್ತು. ಕೊನೆಗೆ ಅವನೇ ಪೆಚ್ಚಾದನು. ಅವನು ನಿರೀಕ್ಷಿಸಿದಂತೆ ಯಾರೂ ಸಹಾನುಭೂತಿಯಿಂದ ಅವನೊಡನೆ ಅಳಲಿಲ್ಲ. ತತ್ತ್ವೋಪದೇಶವನ್ನು ಶ್ರವಣ-ಮನನ ಮಾಡಿದ್ದರ ಬಲದಿಂದ ಎಲ್ಲರ ಮನಸ್ಸೂ ದೇವರ ಸ್ವರೂಪದ ಅರಿವಿನಲ್ಲಿ ಮುಳುಗಿದ್ದರಿಂದ ಯಾರ ಮನಸ್ಸಿನಲ್ಲಿಯೂ ಕಳವಳವುಂಟಾಗಲಿಲ್ಲ. ಪ್ರಪಂಚದಲ್ಲಿರುವ ಪ್ರತಿಯೊಂದನ್ನೂ ಪ್ರತಿಯೊಂದು ಘಟನೆಯನ್ನೂ, ತಾನು ದೇವರಾಗಿ ದೇವರ ದೃಷ್ಟಿಯಿಂದ ನೋಡುವ ಸ್ಥಿತಿಯು ಆಗ ಎಲ್ಲರಲ್ಲಿಯೂ ಇದ್ದುದರಿಂದ ಯಾರೂ ತಳಮಳಗೊಳ್ಳಲಿಲ್ಲ. ಆಗ, ಎಲ್ಲಾ ಹಳೆಯ ಹಾಡುಗಳನ್ನೂ ದಿವ್ಯವಾದ ಹೊಸರಾಗಕ್ಕೆ ಹೊಂದಿಸಿ ಹೇಳುವ ವಿಚಿತ್ರವಾದ ನೂತನ ಮನೋಭಾವವಿದ್ದಿತು. ಆ ಸಮಯದಲ್ಲಿ ಈ ಮಾತುಗಳು ಈ ತುಟಿಗಳಿಂದ ನುಸುಳಿದುವು: "ಓ ತಮ್ಮಾ! ರಾಮನ ಮಗನು ಸತ್ತುಹೋದನೆಂದು ನೀನು ಸುದ್ದಿಯನ್ನು ತಿಳಿಸುವದಕ್ಕಾಗಿ ಬಂದಿದ್ದಿ. ನಿನಗೆ ಅವನು ಸಂಬಂಧಪಟ್ಟವನೆಂಬ ಅಭಿಮಾನದಿಂದ ಗೋಳಾಡುತ್ತಿದ್ದಿ. ರಾಮನೂ ರಾಮನ ಅಭಿಮಾನಿಗಳೂ ಸಹ ನಿನ್ನಂತೆಯೇ ದುಃಖ ಪಡಬೇಕೆಂದು ನಿರೀಕ್ಷಿಸುತ್ತಿದ್ದಿ. ನಮ್ಮದು ಎನ್ನುವ ಅಭಿಮಾನವನ್ನು ಬಿಟ್ಟರೆ ಸಾವು ಎನ್ನುವದು ಸಾಮಾನ್ಯವಾಗಿದೆ. ಇದರಲ್ಲಿ ವಿಶೇಷವೇನು? ಹುಟ್ಟಿದ ಪ್ರಾಣಿಗಳೆಲ್ಲಾ ಸಾಯಲೇಬೇಕು. ಸತ್ತವರೂ ಹುಟ್ಟಲೇಬೇಕು. ಇದು ಅತ್ಯಂತ ಸ್ವಾಭಾವಿಕವಾದುದು. ಇದರಲ್ಲಿ ಅಸಾಧಾರಣತೆ ಏನಿದೆ? ಗಾಳಿಯು ಬೀಸುತ್ತಿದ್ದರೆ, ನದಿಯು ಹರಿಯುತ್ತಿದ್ದರೆ ಅದು ಕೇವಲ ಸ್ವಾಭಾವಿಕ. ಹಾಗೆಯೇ ಪ್ರತಿ ನಿಮಿಷವೂ ಕೋಟಿ ಕೋಟಿ ಪ್ರಾಣಿಗಳು ಸಾಯುತ್ತಿರುವದೂ ಅವುಗಳಲ್ಲಿ ಒಂದು ನಮ್ಮದಾಗಿರಬಹುದಾದುದೂ ಸ್ವಾಭಾವಿಕ. ಅದು ನಮ್ಮ ಸಮಾಧಾನವನ್ನೇಕೆ ಕದಲಿಸಬೇಕು? ಸತ್ತವರಿಗಾಗಿ ಅಳುವದಾದರೆ, ನಾವು ಯಾವಾಗಲೂ ಅಳುತ್ತಲೇ ಇರಬೇಕು. ಯಾರೂ ಸಾವನ್ನು ತಪ್ಪಿಸಿಕೊಳ್ಳುವದು ಸಾಧ್ಯವಿಲ್ಲದ ಮೇಲೆ ನಮ್ಮವರಿಗಾಗಿ ಮಾತ್ರ ಏಕೆ ಅಳಬೇಕು? ಈ ಪಕ್ಷಪಾತವೇಕೆ? ಅಳತಕ್ಕವರೂ ಸಾಯತಕ್ಕವರೇ ಅಲ್ಲವೆ? ನೀವು ವಿಶ್ವವಿದ್ಯಾನಿಲಯವನ್ನು ಪ್ರವೇಶಿಸುವದು. ಅದನ್ನೇ ನಿಮ್ಮ ಸ್ವಂತ ಮನೆಯನ್ನಾಗಿ ಮಾಡಿಕೊಂಡು ಸಾಯುವವರೆಗೂ ಅಲ್ಲಿಯೇ ಇರುವದಕ್ಕಾಗಿಯೇ? ಸ್ವಲ್ಪ ಕಾಲವಿದ್ದು ಪರೀಕ್ಷೆಯನ್ನು ಕೊಟ್ಟು ಉತ್ತೀರ್ಣರಾಗಿ ಅದನ್ನು ಬಿಟ್ಟು ತೆರಳುವ ಮುನ್ನಡೆಗಾಗಿ ಅಲ್ಲವೆ? ಒಂದು ದಿನ ಅದನ್ನು ಬಿಡುವದಕ್ಕಾಗಿಯೇ ಅಲ್ಲಿ ಬಂದು ಸೇರುವದು. ಏಣಿಯನ್ನು ಹತ್ತುವದಕ್ಕೆ ತೊಡಗುವದು, ಅದನ್ನು ಏರಿ ಬಿಡಬೇಕೆಂದೇ ಹೊರತು, ಏಣಿಯ ಮೆಟ್ಟಲಿನ ಮೇಲೆ ನಿಂತಿರಬೇಕೆಂದಲ್ಲ. ನೀವು ಜನ್ಮವೆತ್ತಿದಾಗಲೇ ಅದನ್ನು ಒಂದು ದಿನ ಬಿಡುವದು ನಿಶ್ಚಿತವಲ್ಲವೆ?

ಆದ್ದರಿಂದ ರಾಮನ ಮಗನೆಂದು ನೀವು ಕರೆಯುವ ಹುಡುಗನು ಸತ್ತಿದ್ದರೆ,

ಅದು ಕೇವಲ ಸ್ವಾಭಾವಿಕ. ಅದರಲ್ಲಿ ವಿಶೇಷವೂ ವಿಚಿತ್ರವೂ ಏನೂ ಇಲ್ಲ. ಆದ್ದರಿಂದ ಅಷ್ಟಕ್ಕಾಗಿ ಯಾರೂ ಅಸಮಾಧಾನವಾಗುವ ಕಾರಣವಿಲ್ಲ.

ನಿಮ್ಮ ಪ್ರಾಪಂಚಿಕ ಪರಿಚಯಗಳನ್ನೂ ಪ್ರೇಮಗಳನ್ನೂ ಸಂಬಂಧಗಳನ್ನೂ ಈ ದೃಷ್ಟಿಯಿಂದ, ದೇವರ ದೃಷ್ಟಿಯಿಂದ ನೋಡಬೇಕು. ರಾಮನನ್ನೇ-ಸತ್ಯವನ್ನೇ-ನಿಮ್ಮ ಆತ್ಮವನ್ನಾಗಿ ನೋಡಬೇಕು. ಪ್ರಪಂಚದಲ್ಲಿಯೇ ಅತ್ಯಂತ ಉನ್ನತವಾದ ಹಿಮಾಲಯದ ಕೈಲಾಸ ಶಿಖರದಿಂದ ಪ್ರಪಂಚವನ್ನು ನೋಡಿದರೆ ಎಷ್ಟು ಅಲ್ಪವಾಗಿ ಕಾಣಬಹುದೋ ಆತ್ಮ ಭೂಮಿಕೆಯಿಂದ ವೀಕ್ಷಿಸಿದರೆ ಅಷ್ಟು ಕ್ಷುದ್ರವಾಗಿ ಕಾಣುತ್ತದೆ. ಅಲ್ಲಿ ನಿಂತು ದಿವ್ಯ ಜ್ಞಾನವೆಂಬ ದೂರದರ್ಶಕ ಯಂತ್ರದಿಂದ ನೋಡಿದರೆ ನೀವೇ ದೇವರೆಂದೂ ದೇವಾಧಿ ದೇವರೆಂದೂ ಪ್ರಕಾಶಗಳಿಗೆಲ್ಲಾ ಪ್ರಕಾಶವೆಂದೂ ಕಾಣುತ್ತೀರಿ. ನಾನೂ ಅದೇ ಆಗಿದ್ದೇನೆ. ನಾನೂ ಈ ದೇಹವಲ್ಲ, ಮನಸ್ಸಲ್ಲ ಈ ಅಲ್ಪವೂ ಮಿಥ್ಯವೂ ಕಾಮುಕವೂ ಆದ ಅಹಂಕಾರವಲ್ಲ ; ನಾನೇ ದೇವರು. ಓ ! ಅದನ್ನೇ ಭಾವಿಸಿರಿ. ಭಾವಿಸಿರಿ, ಅನುಭಾವಿಸಿರಿ. ನೀವೇ ದೇವರೆಂದು ಅನುಭವ ಪಡೆದುಕೊಳ್ಳಿ. ಇದೊಂದೇ ಮುಖ್ಯವಾಗಿ ಬೇಕಾದುದು. ಈ ದೇಹವು ಒಂದು ಹೊಲಸು ಗುಡಿಸಿಲಿನಲ್ಲಿದ್ದರೆ ತಾನೆ ಏನು ? ನಾನೇ ದೇವರೆಂಬ ಅರಿವಿದ್ದರೆ ಅದೇ ಸ್ವರ್ಗವಾಗಿ ಪರಿಣಮಿಸುತ್ತದೆ, ನಿಮ್ಮ ದೇಹವು ಅಕಸ್ಮಾತ್ ಚಿತ್ರಹಿಂಸೆಗೊಳಗಾಗಬಹುದು, ಅದಕ್ಕಾಗಿ ಚಿಂತಿಸಬೇಡಿ. 'ನಾನೇ ದೇವರು' ಎಂಬ ಪ್ರಜ್ಞೆಯು ಮಾತ್ರ ನಿಮ್ಮಲ್ಲಿದ್ದರೆ, ಈ ಪ್ರಪಂಚದಲ್ಲಿರುವ ಐಶ್ವರ್ಯವೆಲ್ಲಾ ನಿಮ್ಮದೇ ಆಗುತ್ತದೆ; ಈ ವಿಶ್ವದಲ್ಲಿರುವ ಸಕಲ ಸಂಪತ್ತೂ ನಿಮ್ಮದೇ ಆಗಿರುತ್ತದೆ. ನಿಮ್ಮಲ್ಲಿ ಆತ್ಮಜ್ಞಾನದ ಸಂಪತ್ತು ಒಂದಿದ್ದರೆ ಸಾಕು, ಮಿಕ್ಕ ಎಲ್ಲವನ್ನೂ ಎಸೆಯಿರಿ.

೨೪. ಪರಮೋನ್ನತವಾದ ಪರಮೇಶ್ವರ ಭೂಮಿಕೆಯ (ಭೂಮಾ) ದೃಷ್ಟಿ

(ಸ್ವಾಮಿ ರಾಮ ಮತ್ತು ಮಹಾರಾಜ)

ಒಮ್ಮೆ ಒಬ್ಬ ಮಿತ್ರನು ಬಂದು ರಾಮನಿಗೆ, “ಸ್ವಾಮಿ ! ಸ್ವಾಮಿ ! ಒಬ್ಬ ಪ್ರಸಿದ್ಧ ಮಹಾರಾಜನು ನಿಮ್ಮನ್ನು ಗೌರವಿಸಲು ನಿಮ್ಮ ಸಂದರ್ಶನಕ್ಕಾಗಿ ಬರುತ್ತಾನೆ.” ಎಂದು ಹೇಳಿದನು. ಈಗ ಇಲ್ಲಿ ನಾವು ವಿಚಾರಮಾಡಬೇಕಾದ ಒಂದು ಮುಖ್ಯ ವಿಷಯವಿದೆ. ಮುಖಸ್ತುತಿ ಮಾಡಿ ನಮ್ಮನ್ನು ಉಬ್ಬೇರಿಸುವ ಸ್ನೇಹಿತರು ನಮ್ಮ ಸುತ್ತಲೂ ಸೇರುತ್ತಾರೆ. ನಾವು ಬಹಳ ಎಚ್ಚರವಾಗಿರಬೇಕು ; ಅದಕ್ಕೆ ವಶವಾಗಬಾರದು. ಈ ಸ್ನೇಹಿತನು ಬಹಳ ಅಭಿಮಾನದಿಂದ ಹಾಗೆ ಹೇಳುತ್ತಿರುವಾಗ ರಾಮನು ಎಚ್ಚರದಲ್ಲಿ ಎಚ್ಚರವಾಗಿ, ತನ್ನ ಆನಂದದಲ್ಲಿ ತಾನಿದ್ದನು. ಪ್ರತಿಯೊಂದನ್ನೂ ರಾಮನು ಆತ್ಮಾರಾಮನೇ ತಾನಾಗಿ ಈಶ್ವರನ ಭೂಮಿಕೆಯಿಂದ ನೋಡುತ್ತಿದ್ದನು. ಆದ್ದರಿಂದ ಆ ಸ್ನೇಹಿತನ ಅಭಿಮಾನದ ಮಾತುಗಳಿಗೆ ಮರುಳಾಗದೆ, ಸಹಜ ಪ್ರತಿಕ್ರಿಯಾರೂಪವಾಗಿ ರಾಮನ ಬಾಯಿಯಿಂದ ಈ ಮಾತುಗಳು ಹೊರಟವು : “ತಮ್ಮ ! ರಾಜರಾಗಲೀ ಮಹಾರಾಜರಾಗಲೀ ಚಕ್ರವರ್ತಿ

ಸಾರ್ವಭೌಮರಾಗಲೀ ಅವರಿಂದ ರಾಮನಿಗಾಗಬೇಕಾದುದೇನು? ನನಗೆ ಸತ್ಯವಾದ ಆತ್ಮನೊಬ್ಬನಿದ್ದರೆ ಸಾಕು. ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನಾದ ನಮ್ಮೆಲ್ಲರಲ್ಲಿರುವ ಆತ್ಮನಿಗಿಂತಲೂ ಯಾರೂ ದೊಡ್ಡವರಿಲ್ಲ; ಯಾವ ಚಕ್ರವರ್ತಿಯೂ ದೊಡ್ಡವನಲ್ಲ. ಆತ್ಮನ ಹೊರತು ಮಿಕ್ಕೆಲ್ಲವೂ ಕ್ಷುಲ್ಲಕವಾದುವು. ತುಚ್ಛವಾದುವು; ಹುಡುಗಾಟಿಕೆಗಳು. ರಾಮನಿಗೆ ಯಾವುದೂ ಮಹತ್ತಲ್ಲ: ಯಾವುದರಲ್ಲಿಯೂ ಆಸಕ್ತಿಯಿಲ್ಲ. ಆತ್ಮನೊಬ್ಬನಿದ್ದರೆ ಸಾಕು. ಆ ಆನಂದಾನುಭವದಲ್ಲಿ ವಿರಾಮವಿಲ್ಲದಂತೆ ಕಾರ್ಯನಿರತನಾಗಿರುವದಕ್ಕೆ ನನಗೆ ಆತ್ಮನೊಬ್ಬನಿದ್ದರೆ ಸಮೃದ್ಧಿಯಾಗಿರುತ್ತದೆ. ವ್ಯರ್ಥವಾದ ಮಾತುಗಳಿಗೂ ಪ್ರಾಪಂಚಿಕ ವಿಷಯಗಳಿಗೂ ನನಗೂ ಏನೂ ಸಂಬಂಧವಿಲ್ಲ. ಈ ಶ್ರೀಮಂತರಾಗಲೀ ಮಹಾರಾಜರುಗಳಾಗಲೀ ರಾಮನ ದೇಹವನ್ನೂ ವ್ಯಕ್ತಿತ್ವವನ್ನೂ ನೋಡಿ ಬರುತ್ತಾರೆ: ಇವರು ವ್ಯಕ್ತಿತ್ವವನ್ನೂ ಮೀರಿದ ನಿಜವಾದ ರಾಮನನ್ನು ನೋಡಿ ಬರುವದಿಲ್ಲ. ಅವರಂತೆ ನಾನೂ ಮಿಥ್ಯವಾದ ವ್ಯಕ್ತಿಯನ್ನೇ ಸತ್ಯವಾಗಿಯೂ ಮಹತ್ತಾಗಿಯೂ ಭಾವಿಸಿ ಗೌರವಿಸುವದಾದರೆ ಪ್ರಶ್ನಾರ್ಹನಾಗುತ್ತೇನೆ: ದೊಡ್ಡ ಪ್ರಶ್ನಾರ್ಥಕಚಿಹ್ನೆಯಾಗುತ್ತೇನೆ. ನೋಡುವ ದೃಷ್ಟಿಯು ಬದಲಾಗಿ, ಹಳೆಯ ಹಾಡುಗಳನ್ನು ಹೊಸರಾಗದಲ್ಲಿ ಹಾಡುವಾಗ, 'ಸರ್ವಂ ಖಲ್ವಿದಂ ಬ್ರಹ್ಮ' ಇದೆಲ್ಲವೂ ಬ್ರಹ್ಮವೇ ಎನ್ನುವ ಆತ್ಯಂತಿಕ ದೃಷ್ಟಿಯಲ್ಲಿ,ಒಬ್ಬ ಪ್ರಭುವಾಗಲೀ ನಾಯಕನಾಗಲೀ ನಗರಾಧಿಪತಿಯಾಗಲೀ ರಾಜನಾಗಲೀ ರಾಮನಲ್ಲಿ ಯಾವ ಆಸಕ್ತಿಯನ್ನೂ ಆದರವನ್ನೂ ಹುಟ್ಟಿಸಬಲ್ಲರು? ಯಾವುದೂ ಇಲ್ಲ. ಆದ್ದರಿಂದ ನಮ್ಮ ನೋಡುವ ದೃಷ್ಟಿಯು ಬದಲಾಗಬೇಕು: ಪೂರ್ಣ ದೈವೀಕರಣವಾಗಬೇಕು; ತತ್ತ್ವೀಭೂತವಾಗಬೇಕು. ಎಂದು ನಿಮಗೆ ವೃತ್ತಾಂತ ಪತ್ರಿಕೆಗಳಲ್ಲಿ ಆಕರ್ಷಣೆಯೂ ಆಸಕ್ತಿಯೂ ಕಡಿಮೆಯಾಗುವದೋ ಅಂದಿನಿಂದ ನೀವು ದೇಹಾಭಿಮಾನವನ್ನು ಮೀರಿ, ದೇವರಿಗೆ ಹೆಚ್ಚು ಸಮೀಪವಾಗುತ್ತೀರಿ. ನಿಮ್ಮ ನಿತ್ಯ ಜೀವನದಲ್ಲಿ ಸತ್ಯವನ್ನು ವ್ಯವಹಾರಕ್ಕೆ ಅನ್ವಯಿಸಿಕೊಳ್ಳುವ ಒಂದು ಮಾರ್ಗ ಇದು. ಇಂಥಾ ಆತ್ಮ ಬಲಿದಾನವನ್ನು ಸಾಧಿಸಿದಾಗ ನಿಮ್ಮಲ್ಲಿರುವ ನಿಜವಾದ ಜೀವನವು-ಆತ್ಮವು-ಅನೇಕ ಬಗೆಯಿಂದ ವ್ಯವಹಾರ ಮಾರ್ಗದಲ್ಲಿ ಪ್ರಕಟವಾಗುತ್ತದೆ.

ನೀವು ಸುಮ್ಮನೆ ಅಂಧ ವಿಶ್ವಾಸದಿಂದ ಅನುಕರಣಮಾಡಬೇಕೆಂದು ಈ ಕಥೆಗಳನ್ನೆಲ್ಲಾ ಹೇಳುತ್ತಿಲ್ಲ. ಹಾಗಲ್ಲ, ನಿಮ್ಮಲ್ಲಿರುವ ದೇವತ್ವವನ್ನು ನೀವು ಮನಸಾರೆ ಭಾವಿಸಿರಿ; ನೀವೇ ದೇವರೆಂಬುದನ್ನು ಮನಗಾಣಿರಿ; ಚಿಂತಿಸಿರಿ, ಭಾವಿಸಿರಿ, ಧ್ಯಾನಿಸಿರಿ ಇದರ ಬಲದಿಂದ ಎಲ್ಲಾ ಮರುಳಾಟಗಳನ್ನೂ ಮೋಹಗಳನ್ನೂ ಪ್ರಲೋಭನಗಳನ್ನೂ ಭಯವನ್ನೂ ಚಿಂತೆಯನ್ನೂ ಮೆಟ್ಟಿ, ಮೇಲೇರಿ.

೨೫ ಬ್ರಾಹ್ಮೀಸ್ಥಿತಿಯು ನಿಜವಾದ ಜ್ಞಾನ

(ಸ್ವಾಮಿ ರಾಮನ ಸೇವಕ)

ಈ ದೇಹವು ಪವಾಡಗಳನ್ನು ಮಾಡಬೇಕೆಂದು ನೀವು ಬಯಸುತ್ತೀರಿ; ಆದರೆ ಈ ದೇಹವು ನಾನಲ್ಲ. ಈ ಪ್ರಪಂಚವೆಂಬ ಅತ್ಯಂತ ಅದ್ಭುತವಾದ ಪವಾಡವನ್ನು

ಆಗಲೇ ಹೊರತಂದಿರುವಂಥ ಆ ದೇವರೇ ನಾನಾಗಿದ್ದೇನೆ. ಅದೇ ನಾನು : ಆ ದೇವರೇ ನಾನು. ಈ ವಿಶಾಲ ಪ್ರಪಂಚವೇ ನನ್ನ ಪವಾಡವು ; ಈ ಅಖಂಡ ವಿಶ್ವವೇ ಯಾರ ಕಾರ್ಯಕೌಶಲವೋ, ನಿರ್ಮಾಣವೋ ಅವನೇ ನಾನು.

ಇಂಡಿಯಾದಲ್ಲಿ ಈ ದೇಹವು ವಾಸವಾಗಿದ್ದ ಮನೆಯಲ್ಲಿ ಒಬ್ಬ ಹುಡುಗನು ಸೇವೆಮಾಡಿಕೊಂಡಿದ್ದನು. ಅವನು ಯಾವಾಗಲೂ ರಾಮನ ಸಂಪರ್ಕದಲ್ಲಿಯೇ ಇದ್ದುದರಿಂದ ದೈವಾವೇಶವನ್ನು ಪಡೆದು, ಒಂದು ದಿನ ಆ ಎತ್ತರವಾದ ಶ್ರೀಮಂತಭವನದ ಮಹಡಿಯ ಮೇಲ್ಭಾಗದ ಮೇಲೆ ಹತ್ತಿ ನಡೆದಾಡುತ್ತಾ ಗಟ್ಟಿಯಾಗಿ "ನಾನೇ ದೇವರು ನಾನೇ ದೇವರು, ನಾನೇ ದೇವರು." ಎಂದು ಉದ್ಘೋಷಿಸುತ್ತಿದ್ದನು. ಅಕ್ಕಪಕ್ಕದ ಕೆಳಗಿನ ಮನೆಗಳಲ್ಲಿ ವಾಸಮಾಡುತ್ತಿದ್ದ ಕೆಲವು ಜನರು, ಇವನ ಕೂಗನ್ನು ಕೇಳಿ ಸ್ವಲ್ಪ ಸಿಟ್ಟಿಗೆದ್ದು, ಹೊರಗೆ ಬಂದು ಅವನನ್ನು ಕುರಿತು, "ಏನಯ್ಯಾ ಅದು ? ಸನ್ನಿ ಹಿಡಿದವನಂತೆ ಹುಚ್ಚುಹುಚ್ಚಾಗಿ ಅಬ್ಬರಿಸುತ್ತಿದ್ದಿ ? ಏನು ಹೇಳುತ್ತಿ ? ನೀನೇ ದೇವರು ಎನ್ನುತ್ತೀಯ ? ನೀನು ದೇವರಾದರೆ ಆ ಮಹಡಿಯಿಂದ ಕೆಳಗೆ ಹಾರು ನೋಡೋಣ ; ನಿನಗೆ ಕಾಲು ಮುರಿಯುವದೋ ಇಲ್ಲವೋ ತಲೆ ಒಡೆಯುವದೋ ಇಲ್ಲವೋ ನೋಡೋಣ; ನಿನಗೆ ಏನೂ ಗಾಯವಾಗದಿದ್ದರೆ, ನೋವಾಗದಿದ್ದರೆ, ನಿನ್ನನ್ನು ದೇವರೆಂದು ನಂಬುತ್ತೇವೆ; ನಿನಗೆ ಸ್ವಲ್ಪ ಗಾಯವಾದರೂ ಸಾಕು, ನಿನ್ನನ್ನು ಕೊಂದು ಬಿಡುತ್ತೇವೆ ; ಅಷ್ಟೇ ಅಲ್ಲ. ನಿನ್ನನ್ನು ಚಿತ್ರಹಿಂಸೆ ಮಾಡಿ ಕೊಲ್ಲುತ್ತೇವೆ. ಹಾಗೇಕೆ ಬೊಬ್ಬೆ ಹೊಡೆಯುತ್ತಿ ? 'ನಾನೇ ದೇವರು' ಎಂಬ ಅಪವಿತ್ರವಾದ ಮಾತನ್ನು ನಮ್ಮ ಕಿವಿಗಳಿಗೆಲ್ಲಾ ಬಡಿಯುವಂತೆ–ಬಡಿದುಕೊಳ್ಳುವದಕ್ಕೆ ನಿನಗೆ ಅಧಿಕಾರವಿಲ್ಲ". ಎಂದು ರೇಗಿ ರೇಗಿ ಕೂಗಿ ಹೇಳಿದರು.

ತಾನೇ ದೇವರೆಂಬ ಆನಂದ ಪರವಶತೆಯ ಹುಚ್ಚಿನಿಂದ ತುಂಬಿ ತುಳುಕುತ್ತಿದ್ದ ಆ ಬಾಲಕನು, ದಿವ್ಯವಾದ ಭಾವಾವೇಶ ಭರದಿಂದ "ಓ ನನ್ನ ಆತ್ಮವೇ ! ನಾನು ಕೆಳಗೆ ಹಾರುವದಕ್ಕೆ ಸಿದ್ಧವಾಗಿದ್ದೇನೆ; ನೀವು ಯಾವ ಅಗಾಧ ಕೂಪವನ್ನು ತೋರಿಸಿದರೂ ಅಧಃ ಪಾತಾಳವನ್ನು ತೋರಿಸಿದರೂ ತಲೆಕೆಳಗಾಗಿ ಧುಮುಕಲು ಸಿದ್ಧವಿದ್ದೇನೆ ; ಯಾವಸಾಗರದ ತಳಕ್ಕೆ ಹಾರಿ ಮುಳುಗಲಿ ಹೇಳಿ; ಆದರೆ ನಾನು ಮೊದಲೇ-ಆಗಲೇ-ಇಲ್ಲದಿರುವ ಸ್ಥಳವನ್ನು ದಯವಿಟ್ಟು ತಿಳಿಸಿ; ಏಕೆಂದರೆ, ಕೆಳಗೆ ನೆಗೆಯುವದಕ್ಕೆ ನಾನು ಮೊದಲೇ-ಈಗಾಗಲೇ-ಇಲ್ಲದಿರುವ ಸ್ಥಳವು ಬೇಕು. ನಾನಿಲ್ಲದೆ ಬರಿದಾಗಿರುವ ಸ್ಥಳವನ್ನು ದಯವಿಟ್ಟು ತಿಳಿಸಿ, ನಾನೇ ದೇವಾಧಿದೇವ, ಸರ್ವವ್ಯಾಪಿ, ಸರ್ವಾಂತರ್ಯಾಮಿಯು; ಯಾವನು ಖಂಡನಾಗಿದ್ದಾನೋ ಪರಿಮಿತನಾಗಿದ್ದಾನೋ ಯಾವನು ಇಲ್ಲಿ ಮಾತ್ರ ಇದ್ದು ಅಲ್ಲಿಲ್ಲವೋ ಅಂಥವನು ಮಾತ್ರ ತಾನಿದ್ದಲ್ಲಿಂದ ಇಲ್ಲದ ಸ್ಥಳಕ್ಕೆ ಹಾರುವದು ಸಾಧ್ಯ. ಎಲ್ಲೆಲ್ಲಿಯೂ ತಾನೇ ತುಂಬಿರುವವನು ಎಲ್ಲಿಗೆ ಹಾರಬೇಕು? ಹೇಗೆ ಹಾರಬೇಕು? ಎಂದು ಕೇಳಿದನು."

ಆಗ ಹಾರಬೇಕೆಂದು ಅವನನ್ನು ಕೇಳಿದ್ದ ಜನರು. "ಓ, ನೀನೇ ಆ ದೇವರೋ ನೀನೇ ಆ ದೇವರೋ ? ಎಂದಿಗೂ ಅಲ್ಲ. ನೀನು ಆ ದೇಹ." ಎಂದು ಕೂಗಿದರು. ಆ ಬಾಲಕನು ಹೇಳಿದನು, "ನಿಮ್ಮ ಭಾವನೆಯಿಂದ ಈ ದೇಹವನ್ನು ಕಲ್ಪಿಸಿಕೊಂಡಿದ್ದೀರಿ. ಇದು ನಾನಲ್ಲ. ನಿಮ್ಮ ಪ್ರಶ್ನೆಗಳೂ ಆಕ್ಷೇಪಗಳೂ ನನ್ನನ್ನು ಮುಟ್ಟಲಾರವು. ಅವು ನಿಮ್ಮ ಕಲ್ಪನೆಯನ್ನು ಮಾತ್ರ ತಾಕುತ್ತವೆ."

ಹೀಗೆ, ಯಾರು ಮೊದಲೇ ಸರ್ವವ್ಯಾಪಿಯೋ ಅವರು ಹಾರುವದು ಹೇಗೆ ಅಥವಾ ಅಂಥಾ ಕಾರ್ಯಗಳನ್ನು ಮಾಡುವದು ಹೇಗೆ? ಅವನು ಮೊದಲೇ ಇಲ್ಲದಿರುವ ಒಂದು ಸ್ಥಳವೂ ಇಲ್ಲ. ಅವನೇ ನಾನು; ಅವನೇ ನಾನು. ನಾನು ಈ ಶರೀರದಲ್ಲಿ ಮಾತ್ರ ಇದ್ದು ಆ ಶರೀರದಲ್ಲಿ ಅಥವಾ ಮಿಕ್ಕ ಶರೀರಗಳಲ್ಲಿ ಇಲ್ಲವಾದರೆ, ನಾನು ದೇವರೆಂದು ಸಿದ್ಧಪಡಿಸುವದಕ್ಕಾಗಿ ಈ ಶರೀರದ ಮೂಲಕವಾಗಿ ಪ್ರಾಪಂಚಿಕ ಪವಾಡಗಳನ್ನು ಮಾಡಿ ತೋರಿಸಬೇಕು. ಎಲ್ಲಾ ದೇಹಗಳೂ ನನ್ನವೇ: ಆಗಲೇ ಸಿದ್ಧವಾಗಿರುವ ಎಲ್ಲವೂ ನನ್ನವೇ. ಅವನ್ನು ನಾನು ಸುಮ್ಮನೇ ಸ್ವಾಧೀನ ಪಡಿಸಿಕೊಳ್ಳಬೇಕು; ಅಷ್ಟೆ. ಇನ್ನೇನೂ ಮಾಡಬೇಕಾಗಿಲ್ಲ; ಎಲ್ಲವನ್ನೂ ನಾನೇ ನಿರ್ಮಾಣ ಮಾಡಿದ್ದೇನೆ.

ಅನಂತವನ್ನು ಕಾಣುವ (ಅರಿಯುವ) ಬಗೆ
(ಕುರುಡರು ಮತ್ತು ಬಣ್ಣದ ನೋಟ)

ಈಗ ಇಲ್ಲಿ ಈ ಇಕ್ಕುಳಗಳಿವೆ. ಇಕ್ಕುಳವು ಯಾವ ವಸ್ತುವನ್ನಾದರೂ ಹಿಡಿದುಕೊಳ್ಳಬಹುದು. ಆದರೆ ಅದು ತಾನೇ ತಿರುಗಿ ತನ್ನನ್ನು ಹಿಡಿದು ಉಪಯೋಗಿಸುತ್ತಿರುವ ಕೈಯನ್ನೇ ಹಿಡಿದುಕೊಳ್ಳಲಾರದು. ಹೀಗೆ ದೇಶ-ಕಾಲ-ನಿಮಿತ್ತಗಳು ಪ್ರಪಂಚ ವಿಲಾಸವನ್ನು ಗ್ರಹಿಸಬಹುದೇ ಹೊರತು, ಅವರ ಹಿಂದಿರುವ ಆತ್ಮವನ್ನು ಗ್ರಹಿಸಲಾರವು.

ಒಮ್ಮೆ, ಕಣ್ಣಿಗೆ ಪರೆಬಂದಿದ್ದ ನಾಲ್ಕು ಜನ ರೋಗಿಗಳನ್ನು ಶಸ್ತ್ರ ಚಿಕಿತ್ಸೆಗಾಗಿ ವೈದ್ಯಶಾಲೆಗೆ ಕರೆದುಕೊಂಡು ಹೋದರು. ಅವರು ಪೂರ್ತಿ ಕುರುಡರಾಗಿದ್ದುದರಿಂದ ಅವರಿಗೆ ನೇತ್ರೇಂದ್ರಿಯವನ್ನು ಬಿಟ್ಟು ಮಿಕ್ಕ ನಾಲ್ಕೇ ಇಂದ್ರಿಯಗಳಿದ್ದವು. ಅವರು ಆ ರುಗ್ಣಾಲಯದಲ್ಲಿ (ward) ಮಲಗಿದ್ದಾಗ, ಒಂದುದಿನ, ಅವರ ಮಂಚಗಳ ಹತ್ತಿರವಿದ್ದ ಕಿಟಕಿಯ ಗಾಜಿನ ಬಣ್ಣವು ಯಾವದಿರಬಹುದೆಂಬ ಬಗೆಗೆ ಚರ್ಚೆ ಮಾಡುವದಕ್ಕೆ ತೊಡಗಿದರು. ಅವರಲ್ಲಿ ಒಬ್ಬನು "ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ ನನ್ನ ಮಗನು ಇಲ್ಲಿಗೆ ಬಂದುನೋಡಿ, ಈ ಕಿಟಕಿಯ ಗಾಜು ಹಳದಿಯಾಗಿದೆ-ಎಂದು ಹೇಳಿದ್ದನು. ಆದ್ದರಿಂದ ಇದು ಹಳದಿಯಾಗಿಯೇ ಇರಬೇಕು." ಎಂದನು. ಅದಕ್ಕೆ ಇನ್ನೊಬ್ಬನು "ಮುನಿಸಿಪಲ್ ಕಮೀಷನರ್ ಆಗಿರುವ ನಮ್ಮ ದೊಡ್ಡಪ್ಪ ಮೂರು ನಾಲ್ಕು ದಿನಗಳ ಹಿಂದೆ ಇಲ್ಲಿಗೆ ಬಂದಿದ್ದರು, ಅವರು ಈ ಕೋಣೆಯಲ್ಲಿರುವ

ಈ ಕಿಟಕಿಯು ಗಾಜು ಕೆಂಪಗಿದೆ—ಎಂದಿದ್ದರು. ಅವರು ಸುಳ್ಳು ಹೇಳುವವರಲ್ಲ, ಆದ್ದರಿಂದ ಇದು ಕೆಂಪಗೇ ಇರಬೇಕು." ಎಂದು ವಾದಿಸಿದನು. ಅದಕ್ಕೆ ಮೂರನೆಯವನು, "ನಮ್ಮ ಅಣ್ಣ ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಆಗಿದ್ದಾರೆ. ಅವರು ಮೊನ್ನೆ ಇಲ್ಲಿಗೆ ಬಂದಿದ್ದರು-ನನ್ನ ಯೋಗಕ್ಷೇಮವನ್ನು ವಿಚಾರಿಸುವುದಕ್ಕಾಗಿ. ಅವರು 'ಆಹಾ! ಈ ಹಸುರು ಗಾಜು ಎಷ್ಟು ಚೆನ್ನಾಗಿದೆ!' ಎಂದರು. ಅವರು ಬಹಳ ಜಾಣಾಕ್ಷರು. ಆದ್ದರಿಂದ ಅವರು ಹೇಳಿದಂತೆ ಇದು ಹಚ್ಚಗೇ ಇರಬೇಕು. ನಿಮ್ಮಿಬ್ಬರ ಅಭಿಪ್ರಾಯಗಳೂ ಸುಳ್ಳಿರಬೇಕು." ಎಂದು ಸಾಧಿಸಿದನು. ಹೀಗೆ ಅವರು ಒಬ್ಬರನ್ನೊಬ್ಬರು ವಿರೋಧಿಸುತ್ತಾ ಆ ಗಾಜಿನ ಬಣ್ಣದ ವಿಷಯದಲ್ಲಿ ಜಗಳ ವಾಡಿದರು. ಕೊನೆಗೆ ಅದರ ನೈಜವನ್ನು ತಮ್ಮ ತಮ್ಮ ಅನುಭವದಿಂದಲೇ ಕಂಡುಕೊಳ್ಳುವದಕ್ಕಾಗಿ ಪ್ರಯತ್ನ ಮಾಡಿದರು. ಅವರು ಮೊದಲು ತಮ್ಮ ನಾಲಿಗೆಗಳಿಂದ ಆ ಗಾಜನ್ನು ಬೇರೆ ಬೇರೆಯಾಗಿ ನೆಕ್ಕಿ ನೋಡಿದರು. ಅದರಿಂದ ಆ ಗಾಜಿನ ಬಣ್ಣವು ತಿಳಿಯಲಿಲ್ಲ. ಅವರು ತಮ್ಮ ತಮ್ಮ ಬೆರಳ ಗಣ್ಣುಗಳಿಂದ ಆ ಗಾಜನ್ನು ಟಪ, ಟಪ ಬಾರಿಸಿ ಶಬ್ದ ಕೇಳಿದರು. ಅದರಿಂದ ಅವರಿಗೆ ಗಾಜಿನ ಬಣ್ಣ ತಿಳಿಯಲಿಲ್ಲ. ಅವರು ಅದನ್ನು ಮೂಸಿ ನೋಡಿದರು; ಸ್ಪರ್ಶ ಮಾಡಿದರು, ಆದರೆ ಏನು ಮಾಡಿದರೂ ಅವರಿಗೆ ಅದರ ಬಣ್ಣ ತಿಳಿಯಲಿಲ್ಲ. ಅವರು ಹೊಂದಿದ್ದ ಕಿವಿ, ಮೂಗು, ನಾಲಗೆ, ಚರ್ಮ ಈ ಯಾವ ಇಂದ್ರಿಯಗಳೂ ಅವರಿಗೆ ಬಣ್ಣವನ್ನು ತಿಳಿಸದಾದವು.

ಹೀಗೆಯೇ ನಾವು ಅನಂತವನ್ನು ಇಂದ್ರಿಯಗಳಿಂದ ತಿಳಿಯಲಾರೆವು. ಅದು ಎಷ್ಟು ಅಸಾಧ್ಯವೆಂಬುದನ್ನು ಯೋಚಿಸಿರಿ. ಇಂದ್ರಿಯಗಳಿಂದ ಅನಂತವನ್ನು ತಿಳಿಯಬಹುದಾದರೆ, ಇಂದ್ರಿಯಗಳ ಪರಿಮಿತಿಗಿಂತಲೂ ಅದು ಹೆಚ್ಚು ಪರಿಮಿತವಾಗಬೇಕಾಗುತ್ತದೆ. ಇದು ಅಸಂಬದ್ಧ. ವಿಶ್ವಪ್ರಜ್ಞೆಯಿಂದ (Cosmic consciousness) ಮಾತ್ರ, ಪರಮಾತ್ಮ ಪ್ರಜ್ಞೆಯಿಂದ (God-consciousness) ಮಾತ್ರ ಅನಂತವನ್ನು ನಾವು ತಿಳಿಯಬಹುದು. ಇಂದ್ರಿಯಗಳು ತಮಗೆ ಮೀರಿದ್ದನ್ನು ಗ್ರಹಿಸಲಾರವು. ಗಾಜಿನ ಬಣ್ಣವನ್ನು ತಾವೇ ಕಂಡುಕೊಳ್ಳಲಾರದ ಆ ಕುರುಡರು ತನ್ನ ಮಗನು ಹೇಳಿದ್ದರಿಂದ ಅದು ಹಳದಿಯಿರಬೇಕೆಂದೂ ಅಣ್ಣನಾದ ಪ್ರೊಫೆಸರ್ ಹೇಳಿದ್ದರಿಂದ ಆ ಗಾಜು ಹಸುರಾಗಿರಬೇಕೆಂದೂ ಮೊದಲಾಗಿ ನಂಬಿಕೊಂಡಂತೆ, ನಮಗೇ ಅನುಭವಕ್ಕೆ ಬಾರದೆ, ಆತ್ಮಸ್ವರೂಪದ ವಿಷಯದಲ್ಲಿ ಹೊರಗಿನವರು ಯಾರೇ ಹೇಳಿದರೂ ಅದನ್ನು ನಂಬಿ ತೃಪ್ತರಾಗಬಾರದು. ಎರಡು ಭಾಗ ಜಲಜನಕ, ಒಂದು ಭಾಗ ಆಮ್ಲಜನಕ ಇವುಗಳ ಸಂಯೋಗದಿಂದ ನೀರು ಉಂಟಾಗುತ್ತದೆಂದು ವಿಜ್ಞಾನವು ಹೇಳುತ್ತದೆ. ಆದರೆ ನನಗೆ ಇದು ತಿಳಿದಿದೆಯೆ? ಇಲ್ಲ. ಎಲ್ಲಾ ರಸಾಯನ ಶಾಸ್ತ್ರಜ್ಞರೂ ಇದು ಸತ್ಯವೆಂದು ಸಾರಬಹುದು. ಆದರೂ ಇದು ನನಗೆ ತಿಳಿಯದಾಗಬಹುದು. ಆದರೆ ನಾನೇ ಸ್ವತಃ ವಿಜ್ಞಾನ ಪ್ರಯೋಗ ಶಾಲೆಗೆ ಹೋಗಿ

ಆ ಪ್ರಯೋಗವನ್ನು ನಡೆಸಿ ಆ ಸತ್ಯವನ್ನು ಮನಗಂಡರೆ ಮಾತ್ರ ಆ ಜ್ಞಾನವು ನನ್ನ ಸ್ವಾನುಭವವಾಗಬಹುದು. ನಾವು ಹೊರಗಿನ ಯಾವ ಪ್ರಮಾಣವನ್ನೂ-ಅದು ಕೃಷ್ಣ ಉವಾಚವೇ ಆಗಿರಲೀ ಕ್ರಿಸ್ತನ ಉಪದೇಶವೇ ಆಗಲೀ ಬುದ್ಧನ ಬೋಧವೇ ಆಗಲೀ ನಂಬಲಾಗದು, ಅವಲಂಬಿಸಲಾಗದು. ಯಾವದನ್ನಾದರೂ ತಿಳಿಯಬೇಕಾದರೆ ನಾವೇ ಸ್ವತಃ ತಿಳಿಯಬೇಕೇ ಹೊರತು, ಇನ್ನೊಬ್ಬರ ತಿಳಿವಳಿಕೆಯು ನಮ್ಮದಾಗಲಾರದು. ಗಾಜು ಹಸುರಾಗಿದೆಯೆಂದು ನಂಬಲರ್ಹವಾಗಿರುವ ಶ್ರೇಷ್ಠ ಪ್ರಮಾಣವಾದ (Authority) ಪ್ರೊಫೆಸರೇ ನಮಗೆ ಹೇಳಬಹುದು. ಆದರೆ ಅದನ್ನು ನಾವು ತಿಳಿಯಬೇಕಾದರೆ ನಾವೇ ನೋಡಬೇಕು. ಒಬ್ಬ ತರುಣನು ನನ್ನ ತಂದೆಗೆ ಒಳ್ಳೆಯ ಜೀರ್ಣಶಕ್ತಿ ಇದೆ; ಅವರು ನನಗಾಗಿ ನನ್ನ ಆಹಾರವನ್ನು ಜೀರ್ಣಿಸಿಕೊಡಬಹುದು." ಎಂದು ಹೇಳಬಹುದು. ಆದರೆ ಅದು ಸಾಧ್ಯವೆ? ಎಂದಿಗೂ ಇಲ್ಲ. ಮಗನ ಆಹಾರವನ್ನು ಮಗನೇ ಜೀರ್ಣಿಸಿಕೊಳ್ಳಬೇಕು. ನಾನು ಪ್ರಪಂಚದಲ್ಲಿರುವ ಎಲ್ಲಾ ಮಹಾತ್ಮರಿಗೂ ನಮಸ್ಕರಿಸಬಹುದು. ಆದರೆ ಅವರಾರೂ ನನ್ನ ಆಹಾರವನ್ನು ನನಗಾಗಿ ಜೀರ್ಣಿಸಿಕೊಡಲಾರರು. ಅದನ್ನು ನಾನೇ ಜೀರ್ಣಿಸಿಕೊಳ್ಳಬೇಕು. ಅವರೆಲ್ಲರೂ ಕೂಡಿ ನಾನೇ ದೇವರೆಂದು ನನಗೆ ಒಪ್ಪಿಸಲಾರರು. ಅದು ನನ್ನ ಮನಸ್ಸಿಗೇ ಸ್ವಂತ ಸಾಧನಾನುಭವಗಳಿಂದ ಒಪ್ಪಿಗೆಯಾಗಬೇಕು. ವಿಶ್ವಪ್ರಜ್ಞೆಯಿಂದಲೇ ನಾವು ಸತ್ಯವನ್ನರಿಯಬಹುದು. ಇದನ್ನು ರಾಮನು ನಿಮಗೆ ಸ್ವಲ್ಪ ಕಾಲದ ಮೇಲೆ ತಿಳಿಸುತ್ತಾನೆ.

(ಇಂದ್ರಿಯಗೋಚರವಾದುದು ಹೊರತು ಹೆಚ್ಚಿನ ತತ್ತ್ವವಿಲ್ಲವೆಂದೂ ಇದ್ದರೂ ತಿಳಿಯಲು ಸಾಧ್ಯವಲ್ಲವೆಂದೂ ಹೇಳುವ) ಅಜ್ಞೇಯತಾವಾದಿಯಾಗಲೀ (Agnostic) ಸ್ವತಂತ್ರ ವಿಚಾರಿಯಾಗಲೀ (Free thinker) 'ನಾನೇ ಸ್ವತಃ ಪರಿಶೋಧಿಸುತ್ತೇನೆ.' ಎನ್ನುತ್ತಾನೆ. ಅವನು ಎಷ್ಟು ದೂರದವರೆಗೆ ಸಾಧಿಸಬಲ್ಲನೆಂಬುದನ್ನು ನಾವು ನೋಡುತ್ತೇವೆ. ದೀಪದ ಕಡ್ಡಿಯಲ್ಲಿರುವ ದೀಪವನ್ನು ಶೋಧಿಸುವದಕ್ಕಾಗಿ ಅವನು ಆ ಕಡ್ಡಿಯನ್ನು ಕತ್ತರಿಸಿ ಚೂರು ಚೂರು ಮಾಡುತ್ತಾನೆ. ಆದರೆ ಅದರಲ್ಲವನು ದೀಪವನ್ನು ಕಾಣುವದಿಲ್ಲ. ಅನಂತರ ಅವನು ಅದನ್ನು ನುಣ್ಣಗೆ ಪುಡಿ ಪುಡಿ ಮಾಡುತ್ತಾನೆ. ಆದರೂ ಅದರಲ್ಲಿ ದೀಪವು ಕಾಣುವದಿಲ್ಲ. ಹಾಗೆಯೇ ಅವನು ಈ ದೇಹದಲ್ಲಿರುವ ಜೀವವನ್ನು ಕಂಡು ಹಿಡಿಯುವದಕ್ಕಾಗಿ, ಒಂದು ದೇಹವನ್ನು ತೆಗೆದುಕೊಂಡು ಕತ್ತರಿಸಿ ತುಂಡು ತುಂಡು ಮಾಡುತ್ತಾನೆ; ಜೀವವು ಕಾಣುವುದಿಲ್ಲ, ಮೂಳೆಗಳನ್ನೆಲ್ಲಾ ಜಗ್ಗಿ ಬಡಿದು ಪುಡಿ ಪುಡಿ ಮಾಡುತ್ತಾನೆ. ಆದರೂ ಅದರಲ್ಲಿ ಜೀವಸತ್ತ್ವವು ದೊರಕುವದಿಲ್ಲ. ಆಗ ಅವನು "ಸತ್ಯವೊಂದು ಇದ್ದರೆ, ಅದೇ ನಾನಾಗಿರಬೇಕು. ಆದರೆ ಅದು ಅರಿವಿಗೆ ನಿಲುಕುವದಿಲ್ಲ. ಅದನ್ನು ಅರಿಯುವುದು ಸಾಧ್ಯವಿಲ್ಲ," ಎನ್ನುತ್ತಾನೆ. ಅವನು ಹೊರಗಿರುವ ಅಷ್ಟರವರೆಗೇನೋ ಸರಿ;

ಆದರೆ ಅವನು ವಿಶ್ವಸೃಷ್ಟಿಯನ್ನು ಬೆಳೆಸಿಲ್ಲ : ಅನಂತವನ್ನು ತಿಳಿಯುವುದಕ್ಕೋ ಅವನು ಸ್ವತಃ ವ್ಯಷ್ಟಿಸೃಷ್ಟಿಯನ್ನೇ ಉಪಯೋಗಿಸಿದ್ದಾನೆ. ಆದರೆ, ಅವನನ್ನು ಈ ರೀತಿಯಿಂದ ನೋಡಲಾಗುವುದಿಲ್ಲವೆಂಬುದೇನೋ ಸ್ಪಷ್ಟವಾಗಿಯೇ ಇದೆ. ತರ್ಕಬದ್ಧವಾದ ವಿಚಾರದಿಂದ ನಾವು ಅನಂತವನ್ನು ತಿಳಿಯುವುದು ಸಾಧ್ಯವೆ ? ಎನ್ನುವುದನ್ನು ನೋಡೋಣ. ವಿಚಾರಮಾಡುವುದರಿಂದ, ಅನಂತವೆಂಬುದೊಂದು ಇದೆ ಎಂದಿಷ್ಟು ನಾವು ತಿಳಿಯಬಹುದು. ಆದರೆ ಅದರ ಸ್ವರೂಪವೇನು ? ಎಂಬುದನ್ನು ತಿಳಿಯಲಾರೆವು. ಯಾವನೊಬ್ಬ ಮನುಷ್ಯನು ನಿಮ್ಮ ಹಿಂದಿನಿಂದ ಬಂದು, ನಿಮಗೆ ತಿಳಿಯದಂತೆ ಎರಡು ಕಣ್ಣುಗಳನ್ನೂ ಮುಚ್ಚಿಬಿಡುತ್ತಾನೆ—ಎಂದಿಟ್ಟುಕೊಳ್ಳೋಣ. ಯಾರೋ ಕಣ್ಣನ್ನು ಮುಚ್ಚಿದ್ದಾರೆ, ಅವನು ಸ್ನೇಹಿತನೇ ಇರಬೇಕು : ಏಕೆಂದರೆ ಇಷ್ಟು ಸ್ವಾತಂತ್ರ್ಯ ವಹಿಸುವುದಕ್ಕೆ ಯಾವ ಅಪರಿಚಿತನಿಗೂ ಸಾಧ್ಯವಿಲ್ಲ ;—ಎಂದು ಇಷ್ಟು ನಿಮಗೆ ತಿಳಿಯಬಹುದೇ ಹೊರತು, ಆ ವ್ಯಕ್ತಿಯಾರೆಂಬುದು ನಿಮಗೆ ಖಚಿತವಾಗಿ ತಿಳಿಯುವುದಿಲ್ಲ. ಒಂದು ರಬ್ಬರ್ ಚೆಂಡನ್ನು ಗೋಡೆಗೆ ಎಸೆದರೆ, ಅದು ಗೋಡೆಯನ್ನು ಹೊಡೆದು ತಿರುಗಿ ಹಿಂದಕ್ಕೇ ಬರುತ್ತದೆ. ವಿಚಾರದ ಸ್ವಭಾವವೂ ಹಾಗೆಯೇ. ವಿಚಾರವು ಅನಂತದಲ್ಲಿ ತೂರಲಾರದು. ಅನಂತವನ್ನು ಅರಿಯುವುದು ಸಾಧ್ಯವಿದ್ದರೆ ಹೊರಗೇ ಏಕತ್ವಕ್ಕೆ ಬದಲು ದ್ವೈತವೇ ಸ್ಥಾಪನೆಯಾಗುತ್ತಿತ್ತು. ಆಗ ಜ್ಞಾತೃವಾಗಲಿ ಜ್ಞೇಯವಾಗಲೀ ಅನಂತವಾಗುತ್ತಿರಲಿಲ್ಲ. ಆದರೆ ವಿಶ್ವಸೃಷ್ಟಿಯಿಂದ ವಿಶ್ವ ವ್ಯಾಪಕತ್ವವು ಸ್ಥಾಪನೆಯಾಗುತ್ತದೆ.

ಈಗ ಪರಮಾತ್ಮ ಸೃಷ್ಟಿಯನ್ನು ಹೇಗೆ ಬೆಳೆಸಬೇಕೆಂಬ ವಿಷಯಕ್ಕೆ ಮೊದಲು ರಾಮನು ಮಗುವಿನ ವಿಚಾರವಾಗಿ ಸ್ವಲ್ಪ ಹೇಳುತ್ತಾನೆ. ಮಗುವಿಗೆ ವಿಶ್ವಸೃಷ್ಟಿಯೂ ಇಲ್ಲ, ವ್ಯಷ್ಟಿಸೃಷ್ಟಿಯೂ ಇಲ್ಲ. ಚಿಕ್ಕ ಮಗುವಿಗೆ ಯಾವ ತಿಳಿವಳಿಕೆ ಇರುತ್ತದೆ? ನಾವು ಅದರೊಡನೆ ಮಾತನಾಡುವ ಮೊದಲು ಅದು ತನ್ನನ್ನು ತಾನು ತಿಳಿದುಕೊಳ್ಳಲಿ ಎಂದು ಅಲ್ಲಿಯವರೆಗೆ ಕಾಯುತ್ತೇವೆಯೆ ? ಇಲ್ಲ. ಮಗು ಚಿಕ್ಕದಿರುವಾಗಲೇ ಅದಕ್ಕೊಂದು ಹೆಸರಿಡುತ್ತೇವೆ. ತಂದೆ ತಾಯಿಗಳು ಆ ಹೆಸರಿನಿಂದಲೇ ಅದನ್ನು ಕರೆಯುತ್ತಾರೆ. ಅವರು ಅದರೊಡನೆ ಮಾತನಾಡುತ್ತಾರೆ, ಅದಕ್ಕೆ ಅನೇಕ ವಿಷಯಗಳನ್ನು ತಿಳಿಸುತ್ತಾರೆ. ಇದು ಎಷ್ಟು ಮಧುರವಾಗಿದೆ, ಎಷ್ಟು ಸುಂದರವಾಗಿದೆ, ಎಷ್ಟು ಪ್ರಿಯವಾಗಿದೆ—ಎಂಬುದನ್ನೆಲ್ಲಾ ಅದಕ್ಕೆ ಹೇಳುತ್ತಾರೆ. ತಂದೆ ತಾಯಿಯ ವಿಷಯವನ್ನು ಅದಕ್ಕೆ ಹೇಳುತ್ತಾರೆ. ಆ ಶಿಶುವು ಬೆಳೆದು ಸ್ವಲ್ಪ ದೊಡ್ಡವನಾದ ಅನಂತರ ತೊದಲಾಗಿ ಮಾತನಾಡುವ ಪ್ರಯತ್ನದಲ್ಲಿ ಅರ್ಥವಾಗದಿರುವ ಏನೇನೋ ಶಬ್ದ ಮಾಡುತ್ತದೆ. ಆದರೆ ನಿತ್ಯವೂ ಅನೇಕ ಸಲ 'ಅಮ್ಮಾ, ಅಪ್ಪಾ' ಎಂಬ ಶಬ್ದಗಳನ್ನು ಕೇಳಿದ್ದರಿಂದ ಆ ಸಣ್ಣ ಮಗುವು—ಆ ಪುಟ್ಟ ಪ್ರಾಣಿ—ಅದೇ ಶಬ್ದಗಳನ್ನು ಅನುಕರಿಸುತ್ತದೆ. ಆಗ ತಾಯಿಯು ತಂದೆಗೆ "ಓ! ನೋಡಿ, ಮಗು

K294.548
RAM

ಮ್ಮನ್ನು ಕರೆಯುತ್ತಿದೆ. ಹಾ-ಹಾ ಎನ್ನುತ್ತಿದೆ." ಎನ್ನುತ್ತಾಳೆ. ಆಗ ತಂದೆಯೂ ಮಗುವನ್ನು "ಇಲ್ಲಿ ಬಾ, ಬಾ" ಎಂದು ಕರೆಯುತ್ತಾನೆ. ಆ ಮಗುವಿಗೆ ಈ ಮಾತಿನ ಅರ್ಥವೇನೆಂದು ಗೊತ್ತಿದೆಯೆ? ಇಲ್ಲ. ಆದರೆ ತಂದೆಯ ಬಾಯಿಂದ ಗಳಿಂದಲೂ ಪ್ರೀತಿಯಿಂದ ಉಚ್ಚರಿಸುವಿಕೆಯಿಂದಲೂ ಅವನ ಮುಖಭಾವದಿಂದಲೂ ತಂದೆಯಲ್ಲಿಗೆ ಹೋಗಬೇಕೆಂಬ ಭಾವನೆಯು ಮಗುವಿನ ಮನಸ್ಸಿನಲ್ಲಿ ಮೂಡಿ ಬರುತ್ತದೆ. ಹೀಗೆ ವ್ಯಕ್ತಿಯ ಅರಿವು ಬೆಳೆದು ಜೀವಂತವಾಗಿರುವವರ ಸಹವಾಸದಿಂದಲೂ ಪ್ರಯತ್ನದಿಂದಲೂ ಅದು ಮಗುವಿನಲ್ಲಿಯೂ ಬೆಳೆಯುತ್ತದೆ. ಹಾಗೆಯೇ ಯಾರು ತಮ್ಮಲ್ಲಿರುವ ದೇವತ್ವವನ್ನರಿತು ವಿಶ್ವಪ್ರಜ್ಞೆಯುಳ್ಳವ ರಾಗಿದ್ದಾರೆಯೋ ಅವರ ಸಹವಾಸದಿಂದ ನಮ್ಮಲ್ಲಿಯೂ ಅದು ಬೆಳೆಯುತ್ತದೆ. ಶೀಘ್ರ ವಾದ ದುಃಖವುಳ್ಳವರ ಸಹವಾಸದಿಂದ ನಾವು ದುಃಖಿತರಾಗುವುದೂ ಉತ್ಸಾಹವಾದ ಉತ್ಸಾಹವೂ ಸಂತೋಷವೂ ಉಳ್ಳವರ ಸಹವಾಸದಿಂದ ನಾವು ಸಂತೋಷಪಡುತ್ತಾ ಳ್ಳವರಾಗುವುದೂ ಸ್ವಾಭಾವಿಕವಾಗಿ ಎಲ್ಲರ ಅನುಭವದಲ್ಲಿದೆ. ಅದ್ದರಿಂದ ವಿಶ್ವ ಪ್ರಜ್ಞೆಯುಳ್ಳ ಮಹಾತ್ಮರ ಸಹವಾಸದಿಂದ ಆ ಪ್ರಜ್ಞೆಯು ನಮ್ಮಲ್ಲಿಯೂ ಪ್ರಜ್ವಲಿತವಾಗುತ್ತದೆ. ಸಹವಾಸವು ಪ್ರತ್ಯಕ್ಷವಾಗಿ ಆಗಲೀ ಆತ್ಮಪ್ರಕಾಶ ಉಳ್ಳವ ರೊಡನೆ ಆಗಲೀ ಅವರ ಆಲೋಚನೆಗಳೊಡನೆ ಆಗಲೀ ಆದ್ದಿ ಇಲ್ಲ: ಅಂತೂ ಸಹವಾಸವು ನಮ್ಮಲ್ಲಿ ವಿಶ್ವಪ್ರಜ್ಞೆಯನ್ನು ಕಿರಣಿಸಿ ಬೆಳಗಿಸುತ್ತದೆ. ತಂದೆ ತಾಯಿಗಳು ಮಗುವನ್ನು ರಾಮು ರಾಮ (ರಾಮು) ಎಂದು ಕರೆದು ಕರೆದು, ಅದು ತಾನು ರಾಮನೇ ಹೊರತು ಕೃಷ್ಣನಲ್ಲ—ಎಂದು ನಿಶ್ಚಿತವಾಗಿ ತಿಳಿಯುವಂತೆ ಮಾಡುತ್ತಾರೆ. ಒಂದು ಕೋಣೆ ಯಲ್ಲಿ ಮೂರು-ನಾಲ್ಕು ಹುಡುಗರು ಮಲಗಿ ನಿದ್ರಿಸುತ್ತಿರಬಹುದು. ಅವರಲ್ಲಿ ರಾಮು, ಸೋಮು, ಭೀಮುರೂ ಇರಬಹುದು. ಆದರೆ, ರಾಮನನ್ನು ಕರೆದಾಗ ರಾಮನೇ ಓ, ಎಂದು ಉತ್ತರಿಸಿ ಎದ್ದು ಬರುವನೇ ಹೊರತು, ಅಲ್ಲಿಯೇ ಮಲಗಿರುವ ಮಿಕ್ಕವರಿಗೆ ಆ ಕೂಗು ಅಷ್ಟೇ ಗಟ್ಟಿಯಾಗಿ ಕೇಳಿದ್ದರೂ ಅವರು ಎಚ್ಚರಗೊಳ್ಳು ವುದಿಲ್ಲ. ಏಕೆಂದರೆ, ಮಿಕ್ಕವರನ್ನು ಉದ್ದೇಶಿಸಿ ಅವರ ಹೆಸರುಗಳನ್ನು ಕರೆದಿರುವುದಿಲ್ಲ. ಹೀಗೇ ರಾಮನೆಂಬ ಪ್ರಜ್ಞೆಯು ಆ ಮಗುವಿಗೆ ಮನಸ್ಸಿನ ಒಳಗೆ ಆಳದಲ್ಲಿ ಗಾಢ ವಾಗಿಯೂ ಕಾದಿಕೆ ಶರೀರದಲ್ಲಿ ಸಹ ಹಾಸುರುತ್ತದೆ, ಬೇರು ಇಳಿದಿರುತ್ತದೆ.

ತಾನೇ ದೇವರೆಂಬ ವಿಶ್ವಯುಜ್ಞಾನದಿಂದ ಬೋಧಿಸುತ್ತಿರುವವನಿಗೆ ಅನ್ಯರು "ನೀನೇ ದೇವರಾದರೆ, ಎಲ್ಲಿ, ಒಂದು ಹುಲ್ಲುಗರಿಕೆಯನ್ನು ಸೃಷ್ಟಿಮಾಡಿ ತೋರಿಸು, ನೋಡೋಣ" ಎಂದು ಕೇಳಬಹುದು. ಅವನು, "ಈಗ ಇಲ್ಲಿ ಹೋಗು ನ್ನು ನೀನು ದೇವರೆನ್ನುತ್ತೀಯೆ: ನೀನು ಏನು ಮಾಡಬಲ್ಲೆ? ದೇವರು ಈ ವಿಶ್ವ ವನ್ನು ಸೃಷ್ಟಿಸಿದನು: ನೀನಾದರೋ ಒಂದು ಹುಲ್ಲುಕಡ್ಡಿಯನ್ನೂ ಮಾಡಲಾರೆ. ಆದರೂ ನಿನ್ನನ್ನು ದೇವರೆಂದು ಕರೆದುಕೊಳ್ಳುತ್ತೀಯೆ, ಎಲ್ಲಿ ನೀನು ಏನು ಮಾಡ

ಬಲ್ಲೆ, ಎಂಬುದನ್ನು ತೋರಿಸು" ಎಂದು ಆಕ್ಷೇಪಿಸಬಹುದು, ಯೇಸುಕ್ರಿಸ್ತನನ್ನೂ ಹೀಗೆಯೆ ಮರಳುಮಾಡಿ ಪ್ರತಿಭಟಿಸಲಿಲ್ಲವೆ? ಪರ್ವತದಿಂದ ಧುಮುಕಬೇಕೆಂದು ಅವನನ್ನು ಒತ್ತಾಯಪಡಿಸಿದ ಸೈತಾನನ ಮೂದಲಿಕೆಗಳಿಗೆ ಕ್ರಿಸ್ತನು ಲಕ್ಷ್ಯ ಕೊಡದೆ, " (Get thee behind me)." "ಮರುಳೆ! ತೊಲಗಾಚೆ, ಬೆನ್ನ ಹಿಂದೆ ಸರಿ ಶನಿ," ಎಂದು ಗುಡುಗಲಿಲ್ಲವೆ ? ಎಲ್ಲಾ ಶಕ್ತಿಯೂ ಅವನದೇ ಆಗಿತ್ತು. ಆದಗೆ ಯಾವ ಮಹಿಮೆಯನ್ನಾದರೂ ಅಪನಂಬಿಕೆಯುವನಿಗೆ ಏಕೆ ತೋರಿಸಬೇಕು? ಕೋಟಿ ಕೋಟಿ ಪವಾಡಗಳನ್ನು ಮಾಡಿ ತೋರಿಸಿದರೂ ಸಂಶಯಾತ್ಮರು ನಂಬುವಂತೆ ಮಾಡುವದು ಸಾಧ್ಯವಲ್ಲ. ಇವನೂ ತನ್ನಲ್ಲಿರುವ ಸರ್ವಾತ್ಮಪ್ರಜ್ಞೆಯನ್ನು ಪ್ರಕಾಶ ಪಡಿಸಿದ ಹೊರತು ತನ್ನೊಳಗಿರುವ ಆತ್ಮನನ್ನು ಅರಿಯುವದಿಲ್ಲ. ಈಗ "ನಾನು ದೇವರು", ಎಂದು ರಾಮನು ಹೇಳಿದರೆ, ಅದರ ಅರ್ಥವೇನು? ಈ ಪುಟ್ಟ ವ್ಯಕ್ತಿ ಯನ್ನು ದೇವರೆನ್ನುತ್ತಾನೆಯೆ? ಇಲ್ಲ. ಈ ಮನಸ್ಸನ್ನು ದೇವರು ಎನ್ನುತ್ತಾನೆಯೆ? ಇಲ್ಲ, ಅದೂ ಅಲ್ಲ. 'ನಾನು ದೇವರು' ಎನ್ನುವದರ ಅರ್ಥ ಹೀಗಿದೆ: ಒಬ್ಬ ಮನುಷ್ಯನು ಎಂ. ಎ. ಪದವೀಧರನಾದರೆ, ಅಥವಾ ಇನ್ನೊಬ್ಬನು ರಾಜನಾದರೆ, ಆ ಪದವಿಗಳೂ ಪ್ರಶಸ್ತಿಗಳೂ ಅಧಿಕಾರಗಳೂ ಅವರವರ ವ್ಯಕ್ತಿತ್ವಕ್ಕೆ ಹೊರಗಿನಿಂದ ಸೇರಿಸಿಕೊಂಡವು; ಒಂದು ರೀತಿಯಿಂದ ಅವರಿಗೆ ಹೊರಗೆ ತಗುಲಿಕೊಂಡವು. ಹಾಗೆಯೇ ಹಾವು ಕಪ್ಪಾಗಿದೆ ಎಂದರೆ, ಕಪ್ಪು ಹಾವಿನ ಹೊರಗಿನ ಒಂದು ಗುಣವೇ ಹೊರತು, ಕಪ್ಪೇ ಹಾವಲ್ಲ. ಆದರೆ, ಹಾವು ಹಗ್ಗವಾಗಿದೆ ಎಂದರೆ ಅದು ಪೂರಾ ಬೇರೆ ವಿಚಾರವೇ ಆಗುತ್ತದೆ. ನೀವಾಗ ಅಲ್ಲಿ ಬರೀ ಹಗ್ಗವನ್ನು ನೋಡುತ್ತೀರೇ ಹೊರತು ಹಾವನ್ನಲ್ಲ. ನಮಗೆ ಹಾವೆಂದು ತೋರಿದ್ದು ಕೇವಲ ಭ್ರಾಂತಿ. ನಿಮ್ಮ ಅಜ್ಞಾನದಿಂದ ಹಗ್ಗವನ್ನೇ ಹಾವೆಂದು ತಿಳಿದಿರಿ. ಹಾವು ಎನ್ನುವುದು ನಿಜವಲ್ಲ; ಹಗ್ಗವೇ ನಿಜ. ನಿಮಗೆ ಹಾವೆಂದು ಕಂಡಾಗಲೂ ಅದು ನಿಜವಾಗಿ ಹಗ್ಗವೇ ಆಗಿತ್ತು. "ನಾನು ದೇವರು" ಎನ್ನುವದು ಈ ದೃಷ್ಟಿಯಿಂದ. "ನಾನು ರಾಜ" ಎನ್ನು ವಂತಲ್ಲ ಇದು. 'ನಾನು ದೇವರು' ಎನ್ನುವಾಗ ಈ ವ್ಯಕ್ತಿತ್ವದ ಅಲ್ಪವಾದ ಅಹಂಕಾರವನ್ನು ದೇವರು ಎನ್ನುವದಿಲ್ಲ. ಈ ವ್ಯಕ್ತಿತ್ವವು ಹಾವಿನಂತೆ ಕೇವಲ ಭ್ರಾಂತಿ ಈ ವ್ಯಕ್ತಿತ್ವವಲ್ಲದ ನಾನು ನಿಜವಾಗಿ ದೇವರೇ ಆಗಿದ್ದೇನೆ. ಅನಂತವೂ ಸರ್ವವೂ ಆದ ದೇವರೇ ನಾನು; ನನಗೆ ಎರಡನೆಯದಿಲ್ಲವಾದ್ದರಿಂದ ವಿರೋಧಿಯೇ ಇಲ್ಲ.

ಸಮುದ್ರದಲ್ಲಿರುವ ತೆರೆಗಳು ಅನೇಕವಾದರೂ ಆ ಎಲ್ಲವುಗಳಲ್ಲಿರುವ ನೀರು ಒಂದೇ ಆಗಿರುವಂತೆ, ಎಲ್ಲಾ ದೇಹಗಳಲ್ಲಿರುವ ಆತ್ಮ ಒಂದೇ ಆಗಿದೆ. ಆದ್ದರಿಂದ ಎಲ್ಲಾ ದೇಹಗಳೂ ಆತ್ಮನಾದ ನನ್ನ ದೇಹಗಳೇ, ಒಂದು ದೀಪವನ್ನೇ ಅನೇಕ ಭಾಷೆಗಳಲ್ಲಿ ಅನೇಕ ಶಬ್ದಗಳಿಂದ ಕರೆದರೂ ದೀಪ ಒಂದೇ ಆಗಿರುವಂತೆ ಆತ್ಮ ಒಂದೇ. ಆತ್ಮದಲ್ಲಿ ಹೆಸರುಗಳಿಂದ ಏನೂ ಬದಲಾವಣೆಯಾಗುವದಿಲ್ಲ. ಸಮಸ್ತವೂ ಆತ್ಮವೇ ಆಗಿದೆ.

೨೭ ಬ್ರಹ್ಮಜ್ಞಾನಿ ಮತ್ತು ಸ್ವರ್ಗ-ನರಕಗಳು

(ಬೆಂಕಿಯನ್ನೂ ನೀರನ್ನೂ ಒಯ್ಯುತ್ತಿದ್ದ ಮಹಿಳೆ)

ಹೀಗೆ ವೇದಾಂತದ ಪ್ರಕಾರ, ಸಾವಿನ ದೀರ್ಘನಿದ್ರೆಯಲ್ಲಿ ಸ್ವರ್ಗನರಕಗಳೂ ನೀವೇ, ಸ್ವರ್ಗಸುಖವನ್ನು ಭೋಗಿಸುತ್ತಿರುವ ಮನುಷ್ಯನೂ ನರಕದಲ್ಲಿ ಸಂಕಟಪಡುತ್ತಿರುವ ಮನುಷ್ಯನೂ ನೀವೇ. ಇದನ್ನು ನೀವು ಅರಿತರೆ ನೀವು ಮುಕ್ತರಾಗುತ್ತೀರಿ.

ಈ ವೇದಾಂತಜ್ಞಾನವನ್ನು ಪಡೆದಿದ್ದ ಒಬ್ಬಳು ಬ್ರಹ್ಮಜ್ಞಾನಿ ಇದ್ದಳು. ಆಕೆಯು ತನ್ನ ಒಂದು ಕೈಯಲ್ಲಿ ಬೆಂಕಿಯನ್ನೂ ಇನ್ನೊಂದು ಕೈಯಲ್ಲಿ ತಣ್ಣೀರನ್ನೂ ತೆಗೆದುಕೊಂಡು ಬೀದಿಯಲ್ಲಿ ಹೋಗುತ್ತಿದ್ದಳು. "ಇದೇನು?" ಎಂದು ಜನರು ಕುತೂಹಲದಿಂದ ಆಕೆಯನ್ನು ಪ್ರಶ್ನೆಮಾಡುತ್ತಿದ್ದರು. ಒಂದು ದಿನ, ಕ್ರೈಸ್ತಧರ್ಮ ಪ್ರಚಾರಕನಾದ ಒಬ್ಬ ಪ್ರಸಿದ್ಧ ಪಾದ್ರಿಯೇ ಆಕೆಯನ್ನು ಪ್ರಶ್ನೆಮಾಡಿದನು. ಆಕೆಯು "ಈ ಬಲಗೈ ಬೆಂಕಿಯಿಂದ ನಿಮ್ಮ ಸ್ವರ್ಗವನ್ನೂ ನಂದನವನವನ್ನೂ ಉರಿಹಚ್ಚಿ ಸುಡುತ್ತೇನೆ; ಈ ಎಡಗೈ ತಣ್ಣೀರಿನಿಂದ ನಿಮ್ಮ ನರಕದ ಬೆಂಕಿಯನ್ನು ಆರಿಸುತ್ತೇನೆ. ಸ್ವರ್ಗನರಕಗಳೆಲ್ಲಾ ತಾನೇ ಎನ್ನುವ ತತ್ತ್ವಜ್ಞಾನವುಳ್ಳವನಿಗೆ, ನಿಮ್ಮ ಸ್ವರ್ಗದ ಆಕರ್ಷಣೆಯೂ ನಿಮ್ಮ ನರಕದ ಭಯವೂ ಕೂಡ ನಷ್ಟವಾಗುತ್ತವೆ. ಅವನು ಅವುಗಳನ್ನೆಲ್ಲಾ ಮೀರಿ ನಿಂತಿರುತ್ತಾನೆ." ಎಂದು ಹೇಳಿದಳು.

ಹಾಗಾದರೆ, ನಿಮ್ಮ ಈ ಎಚ್ಚರದ ಪ್ರಪಂಚದ ವಿಚಾರವೇನು? ನೀವಿದನ್ನು ಎಷ್ಟು ಸತ್ಯವೆಂದು ತಿಳಿದಿದ್ದೀರಿ! ಇಷ್ಟು ಘನವಾಗಿಯೂ ಸ್ಥೂಲವಾಗಿಯೂ ದೃಢವಾಗಿಯೂ ಕಠೋರಸತ್ಯವಾಗಿಯೂ ಕಾಣುತ್ತಿರುವ ಈ ನಿಮ್ಮ ಎಚ್ಚರದ ಪ್ರಪಂಚವೂ ಸಹ ನಿಮ್ಮ ಕನಸಿಗಿಂತ ಬೇರೆ ಜಾತಿಯದಲ್ಲವೆಂದೂ ಇದು ನಿಜವಲ್ಲವೆಂದೂ ವೇದಾಂತವು ತೋರಿಸಿಕೊಡುತ್ತದೆ. ಎರಡಕ್ಕೂ ಪರಿಮಾಣ–ಅಂತಸ್ತುಗಳಲ್ಲಿ ತಾರತಮ್ಯವಿರಬಹುದೇ ಹೊರತು ಗುಣಲಕ್ಷಣಗಳಲ್ಲಿ ಅಲ್ಲ ಎಂದು ವೇದಾಂತವು ಹೇಳುತ್ತದೆ. ನಿಮ್ಮ ಎಚ್ಚರದ ಜಗತ್ತೂ ಒಂದು ಕನಸೇ. ಅದು ಘನೀಭೂತವಾದ ಕನಸು. ಘನವಾಗಿ ತೋರುವ ಈ ನಿಮ್ಮ ಎಚ್ಚರದ ಜಗತ್ತಿನಲ್ಲಿ ಸಹ, ವಿಷಯಿ ಮತ್ತು ವಿಷಯ ಕೂಡ ನಿಜವಾದ ಆತ್ಮನ ಸೃಷ್ಟಿಯೇ ಹೊರತು ಬೇರೆ ಅಲ್ಲ; ಹೆಚ್ಚೇನೂ ಅಲ್ಲ. ಒಂದು ಕಡೆ ಈ ನಗರಗಳೂ ಪಟ್ಟಣಗಳೂ ನದಿಗಳೂ ಪರ್ವತಗಳೂ ಆಗಿ, ಇನ್ನೊಂದು ಕಡೆ ಈ ಪ್ರಪಂಚದಲ್ಲಿ ದಿಕ್ಕಿಲ್ಲದೆ ನಿರ್ಗತಿಕನಾಗಿ ಪರಿಭ್ರಮಿಸುತ್ತಿರುವ ಪ್ರವಾಸಿಯಾಗಿ, ಯಾತ್ರಿಕವಾಗಿ ತೋರುತ್ತಿರುವವನು ನಿಮ್ಮ ನಿಜವಾದ ಆತ್ಮನೇ. ನಿಮ್ಮ ಎಚ್ಚರವಲ್ಲಿ ಸಹ ವಿಷಯಿಯಾಗಿ, ತೋರುವದೂ ವಿಷಯುವೇ, ವಿಷಯವಾಗಿ ತೋರುವದೂ ವಿಷಯಿಯೇ ಆಗಿವೆ.

೨೮. ಸುಖದ ನಿಜವಾದ ನೆಲೆ

(ಕಳವಳದ ಕೆಟ್ಟ ಸುದ್ದಿ)

ಅಂದವಾದೊಂದು ಮುದ್ದು ಮಗುವನ್ನು ಪಡೆದಿರುವ ಗೃಹಸ್ಥನೊಬ್ಬನು ತನ್ನ ಕಚೇರಿಯಲ್ಲಿ ಕುಳಿತಿದ್ದಾನೆ. ಅಲ್ಲಿ ಟೆಲಿಫೋನ್ ಗಂಟೆಯು ಬಾರಿಸುತ್ತದೆ. ಓಡಿ ಹೋಗಿ ಅವನದನ್ನು ಕೇಳುತ್ತಾನೆ. ಏಕೋ ಗಾಬರಿಯಿಂದ ಎದೆಯು ಬಡಿದು ಕೊಳ್ಳುತ್ತದೆ. ಮುಂಬರುವ ವಿಪತ್ತುಗಳು ಮುಂಚೆಯೇ ಮನಸ್ಸಿನ ಮೇಲೆ ತಮ್ಮ ನೆರಳನ್ನು ಕೆಡವುತ್ತವೆಂದು ಹೇಳುತ್ತಾರೆ. ಹಾಗೆ ಅವನ ಮನಸ್ಸಿನಲ್ಲಿ ಏನೋ ಕಳವಳವುಂಟಾಗುತ್ತದೆ. ಅವನು ಆ ಫೋನಿನಿಂದ ಕೆಟ್ಟ ಸುದ್ದಿಯೊಂದನ್ನು ಕೇಳಿ ಬಿಕ್ಕಿ ಬಿಕ್ಕಿ ಅಳುತ್ತಾ ತನ್ನ ಮೇಲಧಿಕಾರಿಯ ಅಪ್ಪಣೆಯನ್ನೂ ಪಡೆಯದೆ ಕೋವಿಯಿಂದ ಉಡಾಯಿಸಲ್ಪಟ್ಟ ಗುಂಡಿನಂತೆ ಆಫೀಸಿನಿಂದ ಓಡಿದನು. ಅವನಲ್ಲಿ ಕರ್ತವ್ಯ ಪ್ರಜ್ಞೆಯೇ ಹಾರಿಹೋಯಿತು. ಅವನ ಸಹೋದ್ಯೋಗಿಗಳೆಲ್ಲಾ ದಿಗ್ಭ್ರಾಂತರಾದರು. ಅವನು ಓಡುತ್ತಿರುವಾಗ ಅಂಚೆ ಜವಾನನು (Post man) ಅವನಿಗೆ ಒಂದು ಪತ್ರವನ್ನು ತಂದು ಕೊಟ್ಟನು. ಅವನು ಹಾಕಿದ್ದ ಲಾಟರಿ ನಂಬರಿಗೆ ಹತ್ತು ಸಾವಿರ ರೂಪಾಯಿ ಬಹುಮಾನ ಬಂದಿದೆಯೆಂದು ಅದರಿಂದ ತಿಳಿಯಿತು. ಈ ಸುದ್ದಿಯು ಅವನಿಗೆ ನಿಜವಾಗಿಯೂ ಅತಿಶಯ ಸಂತೋಷವನ್ನುಂಟುಮಾಡಬೇಕಾಗಿತ್ತು. ಆದರೆ ಅವನು ಫೋನಿನಲ್ಲಿ ಕೇಳಿದ್ದ ದುಷ್ಟವಾರ್ತೆಯೇ ಅವನ ಹೃದಯದಲ್ಲಿ ಭಾರವಾಗಿ ತೂಗುತ್ತಿತ್ತು. ಆದ್ದರಿಂದ ಆ ಲಾಟರಿಯ ಲಾಭದಿಂದ ಅವನಿಗೆ ಸಂತೋಷವೆನಿಸಲಿಲ್ಲ. ಅವನೆದುರಿಗೇ ಒಂದು ಕಾರು ಬಂದಿತು. ಅದರಲ್ಲಿ, ಅವನು ಬಹಳ ವರ್ಷಗಳಿಂದಲೂ ಕಾಣಬೇಕೆಂದಿದ್ದ ಅತ್ಯುನ್ನತ ಅಧಿಕಾರಿಯಿದ್ದರು. ಆದರೆ ಅವನೀಗ ಆ ಕಡೆ ತಿರುಗಿಯೂ ನೋಡಲಿಲ್ಲ. ಅಷ್ಟರಲ್ಲಿ ಅವನಿಗೆ ಅತ್ಯಂತ ಪ್ರಿಯಳೆನಿಸಿದ್ದ ಗೆಳತಿಯೊಬ್ಬಳು ಇದಿರಾಗಿ ಬಂದಳು. ಆಕೆಯೊಡನೆ ಪ್ರೇಮಸಲ್ಲಾಪ ಮಾಡಬೇಕೆಂಬುದು ಹಲವು ವರ್ಷಗಳ ಅವನ ಹಂಬಲವಾಗಿತ್ತು. ಆದರೆ ಈ ವಿಷಮ ಸಂದರ್ಭದಲ್ಲಿ ಆಕೆಯ ಕಡೆಗೂ ಅವನ ಪ್ರೀತಿಯು ಹರಿಯಲಿಲ್ಲ.

ಅವನು ಅಷ್ಟರಲ್ಲಿ ಓಡೋಡಿ ತನ್ನ ಮನೆಯ ಹತ್ತಿರ ಬಂದಾಗ ಅದು ಬೆಂಕಿ ಹತ್ತಿ ಉರಿಯುತ್ತಿರುವದನ್ನೂ ನೂರಾರು ಜನರು ಸುತ್ತುವರಿದು ಅದನ್ನು ಆರಿಸುವ ಸಾಹಸದಲ್ಲಿ ಗದ್ದಲ ಮಾಡುತ್ತಿರುವದನ್ನೂ ಕಂಡನು. ಹೊಗೆಯ ಮೋಡಗಳು ಸೂರ್ಯನನ್ನೇ ಮುಸುಕಿದ್ದವು; ಉಗ್ರವಾದ ಉರಿಯು ತನ್ನ ಸಹಸ್ರ ನಾಲಿಗೆಗಳಿಂದ ಚಳಾಳಿಸಿ ಅಂತರಿಕ್ಷವನ್ನೇ ಸುಡುತ್ತಿತ್ತು. ಅವನ ತಾಯಿಯೂ ಅಜ್ಜಿಯೂ ಹೆಂಡತಿಯೂ ಇತರ ಬಂಧುಗಳೂ ಭಯಂಕರವಾದ ಬೆಂಕಿಯಿಂದ ಸುಟ್ಟು ಬೂದಿಯಾಗುತ್ತಿದ್ದ ತಮ್ಮ ಮನೆಯ ಸುತ್ತಲೂ ನಿಂತು ದುಃಖಪಡುತ್ತಿದ್ದರು. ಅಲ್ಲಿ ಅವನು ತನ್ನ ಎಲ್ಲಾ ನೆಂಟರನ್ನೂ ಕಂಡನಾದರೂ ತನ್ನ ಸುಖಸೌಭಾಗ್ಯದ ಭಂಡಾರವಾದ ಅತ್ಯಂತ ಪ್ರೀತಿಯ ಮುದ್ದು ಮಗುವನ್ನೇ ಕಾಣಲಿಲ್ಲ. ಭಯವಿಹ್ವಲತೆಯಿಂದ

ಅವನ ಹೃದಯವೇ ಒಡೆದಂತಾಯಿತು. ಐಶ್ವರ್ಯಕ್ಕಿಂತಲೂ ಅಧಿಕಾರಕ್ಕಿಂತಲೂ ಭೋಗಭಾಗ್ಯಗಳಿಗಿಂತಲೂ ಆ ಮಗು ಅವನಿಗೆ ಹೆಚ್ಚು ಪ್ರಿಯಕರವಾಗಿದ್ದಿತು. ಮಗು ಎಲ್ಲಿದೆಯೆಂದು ಭಯ ಕಾತರತೆಯಿಂದ ಕೇಳಿದನು. ದುಃಖವೆಗ್ಗಳಿಸಿ ಬಿಕ್ಕಿ ಬಿಕ್ಕಿ ಅಳುತ್ತಿದ್ದ ಹೆಂಡತಿಯು ಹೇಳಲಾರದಿದ್ದ ಸ್ಥಿತಿಯನ್ನು ತಿಳಿದು ಆಗಿರಬಹುದಾದ ಅನರ್ಥವನ್ನು ಅರಿತುಕೊಂಡನು. ಮನೆಗೆ ಬೆಂಕಿ ಹತ್ತಿದಾಗ, ದಾದಿಯು ತೊಟ್ಟಿಲಲ್ಲಿ ಮಲಗಿಸಿದ್ದ ಮಗುವನ್ನು ಮರೆತು, ಮನೆಯವರೆಲ್ಲರೂ ಗಾಬರಿಯಿಂದ ಹೊರಗೆ ಓಡಿ ಬಂದಿದ್ದರು. ಒಬ್ಬೊಬ್ಬರೂ ಇನ್ನಾರೊಬ್ಬರ ಕೈಯಲ್ಲಿ ಮಗುವಿರಬಹುದೆಂದು ಭಾವಿಸಿದ್ದರು. ಆದರೆ ಎಲ್ಲರೂ ಹೊರಗೋಡಿ ಬಂದಮೇಲೆ ಯಾರ ಕೈಯಲ್ಲಿಯೂ ಮಗುವಿಲ್ಲದಿರುವದನ್ನು ನೋಡಿ, ಸುತ್ತಲೂ ಬೆಂಕಿ ಹತ್ತಿ ಉರಿಯುತ್ತಿದ್ದ ಕೋಣೆಯಲ್ಲಿಯೇ ಮಗುವನ್ನು ಬಿಟ್ಟು ಬಂದಿರುವದನ್ನು ತಿಳಿದು ಎಲ್ಲರೂ ಎದೆ ಎದೆ ಬಡಿದುಕೊಂಡು ಬೊಬ್ಬೆಯಿಟ್ಟರು. ಈ ಗೃಹಸ್ಥನೂ ಅವನ ಹೆಂಡತಿಯೂ ಅವನ ತಾಯಿಯೂ ದಾದಿಯೂ ಸ್ನೇಹಿತರೂ ಹಾಹಾಕಾರ ಮಾಡುತ್ತಾ ಗೋಳಿಡುತ್ತಾ ಯಾರಾದರೂ ಬೆಂಕಿಯ ಮನೆಯಲ್ಲಿ ನುಗ್ಗಿ ತಮ್ಮ ಮುದ್ದು ಕಂದಮ್ಮನನ್ನು ಬದುಕಿಸಿ ಕೊಡಬೇಕೆಂದು ಸುತ್ತಲೂ ನಿಂತವರನ್ನು ಬೇಡಿ ಗೋಗರೆದರೂ ಬೆಂಕಿಯಲ್ಲಿ ಬೀಳಲು ಯಾರೂ ಮುಂದಾಗಲಿಲ್ಲ. ಆಗ ಆ ಯಜಮಾನನು "ಅಯ್ಯೋ! ಹೇಗಾದರೂ ಮಾಡಿ ಯಾರಾದರೂ ಪುಣ್ಯಾತ್ಮರು ನಮ್ಮ ಪಂಚಪ್ರಾಣವಾದ ಕಂದಮ್ಮನನ್ನು ಉಳಿಸಿ ಕಾಪಾಡಿರಿ. ನಮ್ಮ ಆಸ್ತಿಯನ್ನೆಲ್ಲಾ ಅಂಥ ಧರ್ಮಾತ್ಮನಿಗೆ ಕೊಟ್ಟುಬಿಡುತ್ತೇವೆ. ಅಷ್ಟೇ ಅಲ್ಲ, ಇನ್ನು ಹತ್ತು ವರ್ಷಗಳು ನಾವು ಸಂಪಾದಿಸಬಹುದಾದ ಸರ್ವ ಸಂಪತ್ತನ್ನೂ ದಾನ ಮಾಡುತ್ತೇವೆ. ನಮ್ಮ ಸರ್ವಸ್ವವನ್ನೂ ತ್ಯಾಗಮಾಡುತ್ತೇವೆ. ಮಗುವನ್ನು ಕಾಪಾಡಿ ಕಾಪಾಡಿ!" ಎಂದು ಬೇಡಿ ಬೇಡಿ ಗೋಳಾಡಿ ಕೂಗಿಡುತ್ತಿದ್ದನು. ಆಹಾ! ಆ ಪರಮ ಪ್ರೇಮದ ಪುತ್ಥಳಿಗಾಗಿ ಅವರು ಸಕಲ ಸಂಪತ್ತನ್ನೂ ಸರ್ವಸ್ವವನ್ನೂ ಬಲಿದಾನ ಮಾಡುವದಕ್ಕೆ ಸಿದ್ಧರಾಗಿದ್ದಾರೆ. ಆದರೆ, ಆ ಮಗುವಿಗಾಗಿ ಸರ್ವಸ್ವವನ್ನು ತ್ಯಾಗ ಮಾಡಿದರೂ ಅತ್ಯಂತ ಪ್ರಿಯವಾದ ಆ ಮಗುವನ್ನೇ ಅದಕ್ಕಿಂತಲೂ ಹೆಚ್ಚು ಪ್ರಿಯವಾದ ತಮಗಾಗಿ ಅವರು ಬಲಿಗೊಡುತ್ತಿದ್ದಾರೆ. ಆ ಮಗುವನ್ನು ರಕ್ಷಿಸಲು ಬೇರೆ ಯಾರಾದರೂ ಬೆಂಕಿಯಲ್ಲಿ ಹಾರಬೇಕೆನ್ನುತ್ತಾರೆಯೇ ಹೊರತು, ಅವರು ತಾವು ಮಾತ್ರ ಆ ಸಾಹಸ ಮಾಡಲಾರರು, ಏಕೆಂದರೆ, ಎಲ್ಲಕ್ಕಿಂತಲೂ ಮಿಕ್ಕ ಎಲ್ಲರಿಗಿಂತಲೂ ತನಗೆ ತಾನೇ ಅತ್ಯಂತ ಪ್ರಿಯನಾಗಿದ್ದಾನೆ. ತಾನೇ ಅತ್ಯಂತ ಸುಖದ ಮೂಲವಾದ್ದರಿಂದಲೇ ಅತ್ಯಂತ ಪ್ರಿಯನಾಗಿದ್ದಾನೆ. ಆದ್ದರಿಂದ ಯಾರೂ ಸಾಮಾನ್ಯವಾಗಿ ತಮ್ಮನ್ನು ತಾವು ಬಲಿಗೊಡುವದಿಲ್ಲ. ತಮ್ಮನ್ನು ತಾವು ಉಳಿಸಿಕೊಳ್ಳುವದಕ್ಕಾಗಿ ಮಿಕ್ಕ ಎಲ್ಲವನ್ನೂ ಬಲಿಗೊಡುತ್ತಾರೆ. ಹಾಗಾದರೆ, ಸಕಲ ಪ್ರಪಂಚಕ್ಕಿಂತಲೂ ಹೆಚ್ಚಿನ ವಸ್ತುವಾದ ಆ ತಾನು ಯಾರು?

ಅತ್ಯಂತ ಸುಖಸ್ವರೂಪನಾದ ತನ್ನ ಒಳಗಿನಿಂದ ಹೊರಹೊಮ್ಮುವ ಆತ್ಮ ಸೂರ್ಯನ ಸುಖದ ಕಿರಣಗಳಿಂದ ತನ್ನ ಮಗುವು ಬೆಳಗಲ್ಪಡುವುದರಿಂದಲೇ ಅದು ಅತ್ಯಂತ ಪ್ರಿಯವಾಗಿಯೂ ಸುಖಪ್ರದವಾಗಿಯೂ ತೋರುತ್ತದೆ. ಆದ್ದರಿಂದ ಸುಖವು ಮಗುವಿನಲ್ಲಿಲ್ಲ ; ತನ್ನಲ್ಲಿಯೇ ಇದೆ. ಸುಖವು ಮಗುವಿನಲ್ಲಿಯೇ ನಿಜವಾಗಿಯೂ ಇದ್ದಿದ್ದರೆ, ಅದು ಮಗುವಿನಲ್ಲಿ ಎಂದೆಂದಿಗೂ ಅಚ್ಚಳಿಯದೇ ತೋರಬೇಕಾಗಿತ್ತು. ಅದು ಹಾಗೆ ತೋರುವುದಿಲ್ಲ ; ಏಕೆಂದರೆ ಸುಖವು ಅಲ್ಲಿಲ್ಲ. ಅದರ ಮೂಲವಿರುವದು ತನ್ನಲ್ಲಿಯೇ; ನಮ್ಮಲ್ಲಿಯೇ. ಆದ್ದರಿಂದ ನಮ್ಮೊಳಗಿನ ಆತ್ಮಚೈತನ್ಯದ ಪ್ರಿಯಭಾವನೆ ಯೆಂಬ ಬೆಳಕು ಯಾವ ವಸ್ತುವಿನ ಮೇಲೆ ಬೀಳುತ್ತದೋ ಅದು ಪ್ರಿಯವಾಗಿಯೂ ಸುಖವಾಗಿಯೂ ತೋರುತ್ತದೆ. ಸುಖದ ಕಲ್ಪನೆಯ ಬಿಸಿಲುಕುದುರೆಯು ಒಮ್ಮೆ ವಿದ್ಯೆಯಲ್ಲಿಯೂ ಒಮ್ಮೆ ಹಣದಲ್ಲಿಯೂ ಇನ್ನೊಮ್ಮೆ ಹೆಣ್ಣಿನಲ್ಲಿಯೂ ಮತ್ತೊಮ್ಮೆ ಮಕ್ಕಳಲ್ಲಿಯೂ ಕ್ಷಣಕಾಲ ನಿಂತು ನಿಂತು ಬೆಳಗುತ್ತಾ ಮುಂದೆ ಮುಂದೆ ಓಡುತ್ತಲೇ ಇರುತ್ತದೆ. ಇದರ ಮೂಲವು ಮಾತ್ರ ಯಾವಾಗಲೂ ಓಡದೇ ತನ್ನ ಒಳಗೇ ಇರುತ್ತದೆ.

"ಮಕ್ಕಳಿಗಾಗಿ ಮಕ್ಕಳು ಪ್ರಿಯರಾಗುವದಿಲ್ಲ ; ತನಗಾಗಿಯೇ ಮಕ್ಕಳು ಪ್ರಿಯರಾಗುವರು. ಹೆಂಡತಿಯ ಸಲುವಾಗಿ ಹೆಂಡತಿ ಪ್ರಿಯಳಾಗುವುದಿಲ್ಲ ; ತನ್ನ ಸಲುವಾಗಿಯೇ ಹೆಂಡತಿ ಪ್ರಿಯಳಾಗುವಳು. ಗಂಡನ ಸುಖಕ್ಕಾಗಿ ಗಂಡನ ಮೇಲೆ ಪ್ರೇಮವುಂಟಾಗುವದಿಲ್ಲ ; ತನ್ನ ಸುಖಕ್ಕಾಗಿಯೇ ಗಂಡನ ಮೇಲೆ ಪ್ರೀತಿ ಹುಟ್ಟು ವದು............" ಇದೇ ಸತ್ಯ. ಹೀಗೆಂದು ಉಪನಿಷತ್ತು ಹೇಳುವದು. ಯಾವ ದೊಂದು ವಸ್ತುವನ್ನು ಪ್ರೀತಿಸುವದು ಆ ವಸ್ತುವಿನ ಸಲುವಾಗಿಯೇ ಎಂದು ಜನರು ಹೇಳುವದುಂಟು. ಆದರೆ ಇದು ನಿಜವಲ್ಲ. ಸಾಹಿತ್ಯಕ್ಕಾಗಿ ಸಾಹಿತ್ಯ ; ಸಂಗೀತ ಕ್ಕಾಗಿ ಸಂಗೀತ, ಕಲೆಗಾಗಿ ಕಲೆ ಎಂದು ಮೊದಲಾಗಿ ಕೆಲವರು ವಾದಿಸುವದುಂಟು. ಇದು ಸುಳ್ಳು. ಪ್ರಪಂಚದಲ್ಲಿ ಯಾವದನ್ನು ನಾವು ಅಭಿಮಾನಿಸಿದರೂ ಆರಾಧಿಸಿದರೂ ಅದು ನಮಗಾಗಿ, ನಮ್ಮ ಸುಖಕ್ಕಾಗಿ. ಸುಖವನ್ನು ಕೊಡುತ್ತಿದ್ದ ಪ್ರಿಯಪತ್ನಿಯು ಅದಕ್ಕೆ ವಿರೋಧಿಯಾದರೆ ದೂರಮಾಡಲ್ಪಡುತ್ತಾಳೆ. ಒಮ್ಮೆ ಸುಖವನ್ನು ನೀಡು ತ್ತಿದ್ದ ಪ್ರಿಯಕರನು ಅದನ್ನು ಕೊಡದಿದ್ದರೆ ತಿರಸ್ಕರಿಸಲ್ಪಡುತ್ತಾನೆ. ಸಂಪತ್ತಾದರೂ ನಮ್ಮ ಸುಖವನ್ನು ಕೆಡಿಸುವದಾದರೆ ತ್ಯಾಜ್ಯವಾಗುತ್ತದೆ. ಯಾವ ವಿದ್ಯೆಯಾದರೂ ಕಲೆಯಾದರೂ ಸುಖಕ್ಕೆ ಸಾಧನವಾಗದೆ ದುಃಖಕ್ಕೇ ಕಾರಣವಾದರೆ ಸೇವಿಸಲ್ಪಡುವದಿಲ್ಲ.

೨೯. ಆನಂದದ ಮೂಲ

(ಸಾವಿನ ಅಂಚಿನಲ್ಲಿದ್ದ ಒಬ್ಬ ತರುಣ)

ಸಾಯುವ ಸ್ಥಿತಿಯಲ್ಲಿದ್ದ ಒಬ್ಬ ಯುವಕನನ್ನು ರಾಮನು ಒಮ್ಮೆ ನೋಡಿದ. ಅವನು ಒಂದು ಬಹಳ ಕೆಟ್ಟ ಕಾಹಿಲೆಯಿಂದ ನರಳುತ್ತಿದ್ದ. ಅವನ ದೇಹದಲ್ಲಿ ಅತ್ಯಂತ

ಯಾತನೆ ಕೊಡುತ್ತಿದ್ದ ನೋವಿತ್ತು. ಮೊದಲು, ಅವನ ಕಾಲುಗಳ ಹೆಬ್ಬೆರಳು ಗಳಲ್ಲಿ ಆ ನೋವು ತೋರಿಕೊಂಡಿತು. ಆಗ ಅದೇನೂ ಅಷ್ಟು ದೊಡ್ಡದಾಗಿರಲ್ಲಿಲ್ಲ; ಆದರೆ, ಅನಂತರ ಸ್ವಲ್ಪಹೊತ್ತಿನ ಮೇಲೆ ಆ ನೋವು ಮೆಲ್ಲ ಮೆಲ್ಲನೆ ಮೇಲೇರು ವುದಕ್ಕೆ ತೊಡಗಿತು. ಆದರಿಂದ ಅವನ ದೇಹವು ಉದ್ರಿಕ್ತಗೊಂಡು ನಡಗುತ್ತಿತ್ತು. ಆ ವ್ಯಥೆಯು ಕ್ರಮ ಕ್ರಮವಾಗಿ ಮೊಣಕಾಲುಗಳವರೆಗೆ ಬಂದು, ಹೊಟ್ಟೆಗೂ ಮುಟ್ಟಿತ್ತು. ಭಯಂಕರವಾದ ಆ ನೋವು ಹೃದಯಕ್ಕೆ ಏರಿದೊಡನೆಯೇ ಆ ಯುವಕನು ಸತ್ತು ಹೋದನು. ಆದರೆ, ಅವನು ಸಾಯುವುದಕ್ಕೆ ಮುಂಚೆ, ಉಗ್ರವಾದ ಆ ವ್ಯಥೆಯನ್ನು ಸಹಿಸಲಾರದೆ, "ಅಯ್ಯೋ! ಹಾಳಾದ ಈ ಪ್ರಾಣವು ಇನ್ನೂ ಹೋಗಲಿಲ್ಲವಲ್ಲ; ಈ ನನ್ನ ಪ್ರಾಣವು ತೊಲಗಿದ್ದರೆ ಸುಖವಾಗಿರುತ್ತಿದ್ದೆ. ಈ ಜೀವ ಇರುವವರೆಗೂ ಈ ನೋವು ತಪ್ಪುವದಿಲ್ಲವಲ್ಲ! ಈ ನನ್ನ ಪ್ರಾಣ, ಯಾವಾಗ ಹೋದೀತು?" ಎಂದು ಕೆಟ್ಟದನಿಯಿಂದ ಹಲುಬುತ್ತಾ ಪ್ರಾಣಬಿಟ್ಟನು. ಇದೇ ಅವನ ಕಟ್ಟ ಕಡೆಯ ಸಂಕಟದ ನುಡಿಯಾಗಿತ್ತು.

ಅವನಿಗೇ ತಿಳಿಯದಂತೆ, ಅವನ ಬಾಯಿಂದ ಹೊರಟ ಈ ಕೊನೆಯ ಮಾತನ್ನು ಬಿಡಿಸಿ, ಬಿಡಿಸಿ, ಅದರ ಹಿಂದಿರುವ ಮನಸ್ಸಿನ ಒಳಹೊಕ್ಕು ನೋಡಿದರೆ, ಅದರಲ್ಲಿ ತತ್ತ್ವಜ್ಞಾನವೇ ತುಂಬಿದೆ-ಎಂಬುದನ್ನು ಕಂಡುಕೊಳ್ಳಬಹುದು. ನನ್ನಪ್ರಾಣ, ನನ್ನ ಜೀವ-ಎಂದು ಅವನು ಹೇಳುವಾಗ ಅಥವಾ ಭಾವಿಸುವಾಗ ಪ್ರಾಣ, ಜೀವ ಅವನಾ ಗಿಲ್ಲ. 'ನಾನು ಇಂಥವನು' ಎಂಬ ಜೀವನನ್ನು, ತನ್ನ ಎದುರಿಟ್ಟು ವಿಷಯೀಕರಿಸಿ ನೋಡಬಲ್ಲವನು ಆ ಜೀವನಿಗೆ ಸಾಕ್ಷಿಯಾಗಿ ಬೇರೆಯಾಗಿರುತ್ತಾನೆ. ಅಥವಾ ಜೀವವನ್ನು (ಪ್ರಾಣವನ್ನೂ) ವಿಷಯೀಕರಿಸುವಾಗ, ಆ ಮನಸ್ಸು ತನಗೇ ತಿಳಿಯದಂತೆ ಮೊದಲೇ ಸಿದ್ಧವಾಗಿ, ನಿತ್ಯವಾಗಿರುವ ತನ್ನ ಸ್ವರೂಪವಾದ ಸಾಕ್ಷಿ ಚೈತನ್ಯದಲ್ಲಿ—ಒಂದು ಸೆಕೆಂಡ್ ಆದರೂ-ನಿಂತಿರುತ್ತದೆ. ಅದೇ ಎಲ್ಲಕ್ಕೂ ಹೆಚ್ಚಿನದಾದ ನಿತ್ಯಸುಖದ ಮೂಲ—ನಿಜಸುಖಧಾಮ. ಅದೇ ನಿಜಾನಂದದ ತೌರು, ಅದೇ ನಮ್ಮೆಲ್ಲರ ಆತ್ಮ-ನಿಜಾತ್ಮ. ಆ ಆತ್ಮಬಲಕ್ಕಾಗಿ ಸಮಸ್ತವೂ—ಪ್ರಾಣವೂ-ಬಲಿ.

೩೦. ವ್ಯರ್ಥವಾದ ಶೋಧ

(ಸೂಜಿಯನ್ನು ಕಳೆದುಕೊಂಡ ಮುದುಕಿ)

"ಗೋಲಿ ಪೀಪಿಗಳಿಗೆ ತೆರುವೆವೀ ಪ್ರಾಣದ ಬೆಲೆಯ"

"ಗೋಳು ಗುಳ್ಳೆಯ ಗಳಿಸೆ ತುಂಬು ಜೀವದ ಬಲಿಯು"

ಇಂಡಿಯಾ ದೇಶದಲ್ಲಿ ಒಂದು ಸ್ವಾರಸ್ಯವಾದ ಮುದುಕಿಯ ಕತೆಯಿದೆ. ಆಕೆ ತನ್ನ ಮನೆಯ ಕತ್ತಲೆ ಕೋಣೆಯಲ್ಲಿ ಒಂದು ಸೂಜಿಯನ್ನು ಕಳೆದುಕೊಂಡಳು. ಆಕೆ ಬಹಳ ಬಡವಿ ಇದ್ದುದರಿಂದ ಆ ಕತ್ತಲೆಯಲ್ಲಿ ಹುಡುಕಲು ಆಕೆಗೆ ದೀಪವಿರಲಿಲ್ಲ. ಆದ್ದರಿಂದ ಆಕೆ ತುಂಬಾ ಬೆಳಕಿದ್ದ ಬೀದಿಯಲ್ಲಿ ಸೂಜಿಯನ್ನು ಹುಡುಕುತ್ತಿದ್ದಳು.

ಏನು ಹುಡುಕುತ್ತಿರುವದೆಂದು ಯಾರೋ ಆಕೆಯನ್ನು ಕೇಳಿದರು. ತನ್ನ ಸೂಜಿಯನ್ನು ಹುಡುಕುತ್ತಿರುವದಾಗಿ ಆಕೆ ಹೇಳಿದಳು. "ಅಜ್ಜಿ! ನೀನಿದನ್ನು ಎಲ್ಲಿ ಕಳೆದುಕೊಂಡೆ?" ಎಂದು ಆತ ಕೇಳಿದ. "ಮನೆಯಲ್ಲಿ" ಎಂದಳು. "ಮನೆಯಲ್ಲಿ ಕಳೆದುಕೊಂಡಿರುವದನ್ನು ಬೀದಿಯಲ್ಲಿ ಹುಡುಕುವುದು ಎಂಥ ಅವಿವೇಕ?" ಆತನೆಂದ. "ಅಯ್ಯೋ! ನಾನೇನು ಮಾಡಲಿ? ಮನೆಯಲ್ಲಿ ಹುಡುಕಲು ನನಗೆ ದೀಪಕ್ಕೆ ಗತಿಯಿಲ್ಲ. ಬೀದಿಯಲ್ಲಾದರೆ ಬೇಕಾದಷ್ಟು ಬೆಳಕಿದೆ, ಕಳೆದುಕೊಂಡು ಸುಮ್ಮನಿರುವದು ಸಾಧ್ಯವೆ? ಎಲ್ಲಿಯಾದರೂ ಹುಡುಕಲೇ ಬೇಕು" ಎಂದಳು, ಆಕೆ.

ಪ್ರಾಪಂಚಿಕ ಜನರ ಸ್ಥಿತಿಯೆಲ್ಲಾ ಹೀಗೇ ಇದೆ. ನಿಮ್ಮಲ್ಲಿ ನೀವು ಸ್ವರ್ಗವನ್ನೇ ಇಟ್ಟುಕೊಂಡು ಹೊರಗೆ ಬೀದಿಯಲ್ಲಿ ಬಿದ್ದಿರುವ ತುಚ್ಛ ವಿಷಯಗಳಿಗಾಗಿ ಬಾಯಿ ನೀರು ಸುರಿಸುತ್ತಿದ್ದೀರಿ. ನಿಮ್ಮ ಹೃದಯ ಗುಹೆಯ ಅಜ್ಞಾನಾಂಧಕಾರದಲ್ಲಿ ಅಡಗಿರುವ ಸುಖದ ಅಮೃತವನ್ನು ಕಂಡುಕೊಳ್ಳಲಾರದೆ ನಿಸ್ಸಾರವೂ ದುಃಖ ಮಿಶ್ರಿತವೂ ಆದ ವಿಷಯಗಳಲ್ಲಿ ಅದನ್ನು ಕಾಣಲೆಂದು ತೊಳಲುತ್ತಿದ್ದೀರಿ. ಎಷ್ಟು ವಿಚಿತ್ರ! ಎಷ್ಟು ಶೋಚನೀಯ!

೩೧. ಪ್ರಾಪಂಚಿಕ ವರಪ್ರದಾನವೆಂದರೆ ಅದೊಂದು ಶಾಪವೇ!

(ಗೃಹಿಣಿ-ಭಿಕ್ಷುಕ)

ಭಾರತದಲ್ಲಿ ಒಂಬತ್ತು ಮಕ್ಕಳ ತಾಯಿ ಒಬ್ಬಳಿದ್ದಳು. ಒಂದು ದಿನ ಆಕೆ, ಮನೆಗೆ ಬಂದ ಭಿಕ್ಷುಕನಿಗೆ ಸ್ವಲ್ಪ ಉದಾರವಾಗಿ ಭಿಕ್ಷೆಯನ್ನು ನೀಡಿದಳು. ಬಹಳ ಸಂತೋಷದಿಂದ ಅವನು, ಆಕೆಯನ್ನು ಆಶೀರ್ವದಿಸಿದನು. "ದೇವ! ಈ ಪುಣ್ಯವತಿಯು ಏಳು ಮಕ್ಕಳ ತಾಯಿಯಾಗಲಿ!" ಎಂದು ಹರಸಿದನು. ಆಗಲೇ ಆಕೆಗೆ ಒಂಬತ್ತು ಮಕ್ಕಳಿದ್ದುದರಿಂದ, ಆ ಭಿಕ್ಷುಕನ ಹರಕೆಯಂತೆ ಆಕೆ ಏಳು ಮಕ್ಕಳ ತಾಯಿಯಾದರೆ, ಈಗಿರುವ ಮಕ್ಕಳಲ್ಲಿ ಇಬ್ಬರು ಸಾಯಬೇಕಾಯಿತು. ಈ ಆಲೋಚನೆಯಿಂದ ಆಕೆಗೆ ಮನಸ್ಸು ಬಹಳ ನೊಂದಿತು. ಇದರಿಂದ ಆಕೆ, ಪುನಃ ಸರಿಯಾಗಿ ಆಶೀರ್ವದಿಸಬೇಕೆಂದು ಅವನನ್ನು ಬೇಡಿಕೊಂಡಳು. ಅವಳ ಉದ್ದೇಶವನ್ನು ತಿಳಿಯದೆ, ಅವನು ಪುನಃ ಅದೇ ರೀತಿಯಲ್ಲಿ ಹರಸಿದನು. ಆಕೆಯು ಕೋಪಾವೇಶದಿಂದ ಅವನನ್ನು ಹೊಡೆಯುವದಕ್ಕೇ, ಹೋದಳು. ಇದನ್ನು ಕಂಡ ಜನರು, ಕುತೂಹಲದಿಂದ ಸೇರಿ, ಆಕೆಯ ಉದ್ವೇಗಕ್ಕೆ ಕಾರಣವನ್ನು ಕೇಳಿದರು. ನಿಜಸ್ಥಿತಿಯನ್ನು ತಿಳಿದಮೇಲೆ ಅವರಿಗದು ವಿನೋದವೆನಿಸಿತು. ಒಬ್ಬರ ದೃಷ್ಟಿಯಿಂದ ವರವಾದುದು ಇನ್ನೊಬ್ಬರ ಭಾವನೆಯಲ್ಲಿ ಶಾಪವೆನಿಸಿತು.

ಹೀಗೆ ನಮ್ಮೊಳಗೇ ಪೂರ್ಣಾನಂದವು ತುಂಬಿರುವುದನ್ನು ಲಕ್ಷಿಸದೆ, ಮನಸ್ಸು ಪ್ರಾಪಂಚಿಕ ಭೋಗಭಾಗ್ಯಗಳಿಗಾಗಿ ಹೊರಗೆ ಹರಿವರೆ, ಅದೊಂದು ಮಹಾ ನಷ್ಟವೇ ಆಗುತ್ತದೆ.

ಹಿಮಾಲಯದ ಮಂಜಿನ ರಾಶಿಯಲ್ಲಿ ಬೆಳೆದು ಅರಳುವ ನೈದಿಲೆಗಳಂತೆ ನಿಮ್ಮ ವ್ಯಕ್ತಿತ್ವವು ಯಾರೂ ಅರಿಯದಂತೆ ವಿಕಾಸವಾಗಲಿ, ಈ ದೇಹವನ್ನು ಶಿಲುಬೆಗೋ ಶೂಲಕ್ಕೋ ಏರಿಸಿದರೂ ಕಾರಾಗೃಹದಲ್ಲಿ ಎಸೆದರೂ ಸಾಗರದ ಮಹಾತರಂಗಗಳೇ ನುಂಗಿದರೂ ಅತ್ಯುಷ್ಣದೇಶದ ಹವೆಯು ಸುಟ್ಟು ಕಮರಿ ಹಾಕಿದರೂ ಒಳಗಿರುವ ಅನಿರ್ವಚನೀಯವಾದ ನಿಜಾನಂದವು ಎಂದೂ ಅಣು ಮಾತ್ರವೂ ಕಡಿಮೆಯಾಗ ಲಾರದು. ಒಳಗಿನ ಆ ಪರಮಾನಂದವನ್ನು ಭಾವಿಸಿ, ಅನುಭವಿಸಿ; ಎಲ್ಲಾ ಬಗೆಯ ಪ್ರಾಪಂಚಿಕವಾದ ವ್ಯಥಾಭಿಮಾನವನ್ನೂ ಮೌಢ್ಯವನ್ನೂ ಖಿನ್ನತೆಯನ್ನೂ ಮೆಟ್ಟಿ ಏರಿ ನಿಲ್ಲಿ. ನೀವೇ ರಾಜಾಧಿರಾಜರೂ ದೇವಾಧಿದೇವರೂ ಆಗಿರಿ; ಅದಾಗಿಯೇ ಇದ್ದೀರಿ! ಅದಾಗಿಯೇ ಇದ್ದೀರಿ!

೩೨. ಅತ್ಯುತ್ಸಾಹಿಯಾದ ಹುಚ್ಚನೊಬ್ಬನ ಔತನ.

(ಅಕಸ್ಮಾತ್, ಔತನವು ನಿಜವಾಗಿದ್ದರೆ....)

ಇಂಡಿಯಾದೇಶದಲ್ಲಿ ಇನ್ನೊಂದು ವಿಚಿತ್ರವಾದ, ಒಬ್ಬ ಹುಚ್ಚು ಮನುಷ್ಯನ ಕತೆಯಿದೆ. ಅವನೊಂದು ದಿನ ಬೀದಿಯಲ್ಲಿ ಆಡುತ್ತಿದ್ದ ಹುಡುಗರ ಗುಂಪಿಗೆ ಬಂದನು. ನಗರಾಧ್ಯಕ್ಷರ ಮನೆಯಲ್ಲಿ ಆ ದಿನ ವೈಭವದಿಂದ ರಾಜಯೋಗ್ಯವಾದ ಔತನವನ್ನು ನಡೆಸುತ್ತಿರುವುದಾಗಿಯೂ ಬಾಲಕರೆಲ್ಲರನ್ನೂ ಭೋಜನಕ್ಕಾಗಿ ಆಹ್ವಾನಿಸಿರುವುದಾ ಗಿಯೂ ಹೇಳಿದನು. ಭಕ್ಷ್ಯಭೋಜ್ಯಗಳೆಂದರೆ ಬಾಲಕರಿಗೆ ಸ್ವಾಭಾವಿಕವಾಗಿಯೇ ಅತಿಶಯ ಪ್ರಿಯವಾದುದರಿಂದ ಅವರೆಲ್ಲರೂ ಆ ಹುಚ್ಚನ ಮಾತನ್ನು ನಂಬಿ ಉತ್ಸಾಹ ದಿಂದ ಕುಣಿದಾಡಿ ಕೇಕೆ ಹಾಕುತ್ತಾ ನಗರಾಧ್ಯಕ್ಷರ ಮನೆಗೆ ಹೋದರು. ಆದರೆ ಆ ದಿನ ಅವರಲ್ಲಿ ಯಾವ ಔತಣವೂ ಇರಲಿಲ್ಲ. ಅದನ್ನು ತಿಳಿದ ಹುಡುಗರಿಗೆ ಸ್ವಲ್ಪ ಹೊತ್ತು ದಿಗ್ಭ್ರಮೆಯಾಯಿತು; ನಿರಾಶೆಯೂ ಆಯಿತು. ಆದರೆ ಆ ಸುಳ್ಳು ಹೇಳಿದ ಹುಚ್ಚನೂ ಅಲ್ಲಿಗೆ ಬಂದಿದ್ದನು. ಕಕ್ಕಾಬಿಕ್ಕಿಯಾದ ಹುಡುಗರು ಒಬ್ಬರನ್ನೊ ಬ್ಬರು ನೋಡಿ ನಗುತ್ತಾ "ಏನಯ್ಯಾ ಭೂಪ! 'ಸುಳ್ಳು ಹೇಳಿದ್ದೇನೆ' ಎಂಬುದನ್ನು ತಿಳಿದೂ ತಿಳಿದೂ ನೀನೂ ಏಕಯ್ಯ ಬಂದೆ?" ಎಂದು ಕೇಳಿದರು. ಆಗ ಆ ಖುಲು ಮನುಷ್ಯ ಹೇಳಿದ "ಅಲ್ರಪ್ಪಾ! ನಾನೇನೋ ತಮಾಷೆಗೆ ಸುಳ್ಳು ಹೇಳಿದೆ. ನನ್ನ ಮಾತನ್ನು ನಂಬಿದ ನಿಮ್ಮನ್ನು ಹುಚ್ಚರೆಂದು ಗೇಲಿಮಾಡಿ ನಗಿಸಬೇಕೆಂದು ಹೇಳಿದೆ. ಆದರೆ, ಅಕಸ್ಮಾತ್ ಅವರ ಮನೆಯಲ್ಲಿ ಈ ದಿನ ನಿಜವಾಗಿ ಔತಣವೇ ಇದ್ದು, ನನ್ನ ಮಾತು ನಿಜವಾಗಿ ಬಿಟ್ಟರೆ, ನನಗೆ ಮಾತ್ರ ಅದು ತಪ್ಪಿಹೋಗಬಹುದಲ್ಲಾ ಎಂದು ನಾನೂ ಓಡಿ ಬಂದೆ" ಎಂದನು.

ಯಥಾರ್ಥವಾಗಿಯೂ ಹೀಗೆಯೇ ಇದೆ ಪ್ರಾಪಂಚಿಕ ಸ್ವಭಾವ. ಸಂಸಾರಿಗಳು ಯಾವದೊಂದು ವಸ್ತುವನ್ನು ತಮ್ಮ ಕಲ್ಪನಾಶಕ್ತಿಯಿಂದ ಪ್ರಿಯವಾಗಿಯೂ ಸುಂದರ ವಾಗಿಯೂ ಮನೋಹರವಾಗಿಯೂ ಮಾಡಿಕೊಂಡು ಅದರ ಸುಖವನ್ನು ತಾವು

ಕಳೆದುಕೊಳ್ಳಬಾರದೆಂದು ಆ ಮರುಳು ಮನುಷ್ಯನಂತೆಯೇ ಆ ವಿಷಯದ ಬೆನ್ನು ಹತ್ತಿ ಮೋಹದಲ್ಲಿ ಬೀಳುತ್ತಾರೆ.

ಸಾರಾಂಶವೇನೆಂದರೆ, ನಮ್ಮೊಳಗೇ ಇರುವ ಸ್ವರ್ಗವನ್ನು ನಾವು ಕಂಡು ಕೊಂಡರೆ, ನಮ್ಮ ದುಃಖವೆಲ್ಲಾ ನಾಶವಾಗಿ ಪರಮಾನಂದವನ್ನು ಪಡೆದು ಪೂರ್ಣ ಕಾಮರಾಗುತ್ತೇವೆ.

೩೩. ಪ್ರಪಂಚವು ಕನ್ನಡಿಯ ಮನೆಯಂತಿದೆ

(ಕನ್ನಡಿಯ ಮನೆಯಲ್ಲಿ ಒಂದು ನಾಯಿ)

ಬೇರೆ ಬೇರೆ ದೇಹಗಳನ್ನೂ ಮನಸ್ಸುಗಳನ್ನೂ ಬಗೆಬಗೆಯ ಕನ್ನಡಿಗಳಿಗೆ ಹೋಲಿಸ ಬಹುದು. ಒಂದು ದೇಹವು ಭೂತಕನ್ನಡಿಯಂತಿರಬಹುದು; ಇನ್ನೊಂದು ಸಪ್ತ ವರ್ಣಗಳ ಬೆಳಕನ್ನು ಚೆಲ್ಲುವ ಘನಾಕೃತಿಯ ಗಾಜಿನಂತಿರಬಹುದು: ಮತ್ತೊಂದು ಬಿಳಿಯ ಕನ್ನಡಿಯಂತೆಯೂ ಬೇರೊಂದು ಕೆಂಪು ಕನ್ನಡಿಯಂತೆಯೂ ಕೆಲವು ತಗ್ಗಾದ ಕನ್ನಡಿಯಂತೆಯೂ ಕೆಲವು ಉಬ್ಬಾದ ಕನ್ನಡಿಯಂತೆಯೂ ಇರಬಹುದು. ದೇಹಗಳು ಮಾತ್ರ ಬೇರೆ ಬೇರೆಯಾಗಿವೆ. ಆದರೆ ತೋರಿಕೆಯ ಅನಾತ್ಮವಾದ ಈ ದೇಹಗಳು ನೀವಲ್ಲ. ಅಜ್ಞಾನದ ದೆಸೆಯಿಂದ ನೀವಲ್ಲದ ದೇಹಗಳನ್ನು ನೀವೆಂದು ಕರೆದುಕೊಳ್ಳು ತ್ತೀರಿ. ನೀವು ಅನಂತ ಶಕ್ತಿಯಾಗಿದ್ದೀರಿ. ಎಂದೂ ಬದಲಾವಣೆಹೊಂದದ ವಿಕಾರ ವಾಗದ ನಿತ್ಯ ಸತ್ಯವಾದ ದೇವರೇ ನೀವಾಗಿದ್ದೀರಿ. ದೇಹಗಳು ಬೇರೆ ಬೇರೆ ಅನೇಕ ವಾಗಿದ್ದರೂ ನೀವು ಮಾತ್ರ ಏಕಘನವಾಗಿಯೇ ಇದ್ದೀರಿ. ಇದನ್ನು ನೀವು ತಿಳಿಯಿರಿ; ಇದನ್ನು ತಿಳಿದರೆ ಸರ್ವಜಗತ್ತಿನಲ್ಲಿಯೂ ಸಕಲ ವಿಶ್ವದಲ್ಲಿಯೂ ನೀವೇ ವಾಸವಾಗಿರು ವದನ್ನು ನೀವು ಕಾಣುತ್ತೀರಿ.

ಭಾರತದೇಶದಲ್ಲಿ ಕನ್ನಡಿಯ ಮನೆಗಳಿವೆ. ಆ ಮನೆಗಳಲ್ಲಿ ಗೋಡೆಗಳಿಗೂ ಮೇಲು ಚಾವಣಿಗೂ ತುಂಬಾ ಬಗೆ ಬಗೆಯಾದ ಕನ್ನಡಿಗಳನ್ನು ಹಾಕಿರುತ್ತದೆ. ಮನೆಯ ಯಜಮಾನನು ಆ ಕನ್ನಡಿಗಳ ಕೋಣೆಯಲ್ಲಿ ಬಂದು ನಿಂತು ಸುತ್ತಲೂ ಎಲ್ಲಾ ಕಡೆಗಳಲ್ಲಿಯೂ ಆ ಕನ್ನಡಿಗಳಲ್ಲಿ ತನ್ನನ್ನೇ ಕಾಣುತ್ತಾನೆ. ಅವನು ವಿವೇಕಿಯಾದರೆ ತಾನೊಬ್ಬನೇ ಇರುವದನ್ನು ಮರೆಯದೆ ತನ್ನ ಸುತ್ತಲೂ ತೋರುವ ಅನೇಕ ರೂಪಗಳನ್ನು ನೋಡಿ ಸಂತೋಷಪಡುತ್ತಾನೆ. ಅವನು ಹುಚ್ಚನಾದರೆ ತನ್ನ ಸುತ್ತಲೂ ಅನೇಕ ಜನರು, ತನ್ನನ್ನು ಮುತ್ತಿರುವದನ್ನು ಕಂಡು ಹೆದರಿ ಚೀರುತ್ತಾನೆ; ಇಲ್ಲವಾದರೆ ಕೋಪಗೊಂಡು ಅವರನ್ನು ಬಯ್ಯಲೂ ಹೊಡೆಯಲೂ ಹೋಗುತ್ತಾನೆ. ಅವರೊಡನೆ ಜಗಳವಾಡುತ್ತಾನೆ.

ಒಮ್ಮೆ ಇಂಥಾ ಕನ್ನಡಿಯ ಮನೆಯೊಳಗೆ ಒಂದು ನಾಯಿಯು ಪ್ರವೇಶ ಮಾಡಿತು. ಅದರ ಸುತ್ತಲೂ ನಾಯಿಗಳ ಒಂದು ಸೈನ್ಯವೇ ಅದನ್ನು ಎದಿರಿಸುತ್ತಾ ಮುತ್ತಿಕೊಳ್ಳುತ್ತಿರುವಂತೆ ಅದಕ್ಕೆ ಕಂಡಿತು. ನೀವು ತಿಳಿದಂತೆ ನಾಯಿಗಳು ಸ್ವಜಾತಿ ವೈರಿಗಳಾದುದರಿಂದ ಬೇರೆ ಹೊಸ ನಾಯಿಗಳನ್ನು ಕೂಡಲೆ ಸಹಿಸುವದಿಲ್ಲ. ಅವಕ್ಕೆ

ಬಹಳ ಅಸೂಯೆ. ಆ ನಾಯಿಯು ಒಳಹೊಕ್ಕ ಕೂಡಲೇ ಬಲಕ್ಕೆ ತಿರುಗಿ ನೋಡಿತು. ಸಾವಿರಾರು ನಾಯಿಗಳು ತನ್ನನ್ನು ಬೆರೆಸಿಕೊಂಡು ಬಂದುದನ್ನು ನೋಡಿ ಎಡಕ್ಕೆ ತಿರುಗಿತು. ಆ ಕಡೆಯೂ ಗೋಡೆಗಳಲ್ಲಿ ಸಾವಿರಾರು ಕನ್ನಡಿಗಳಿದ್ದುದರಿಂದ ಅಲ್ಲಿಯೂ ಸಾವಿರಾರು ನಾಯಿಗಳು ಅದನ್ನು ಚೂರು ಚೂರಾಗಿ ಹರಿದು ತಿನ್ನುವಂತೆ, ಅದನ್ನು ನುಂಗುವಂತೆ ಓಡಿಬರುತ್ತಿರುವದನ್ನು ಕಂಡಿತು. ಅದು ಬೆದರು ಮತ್ತೊಂದು ಕಡೆ ನೋಡಿತು. ಅದಕ್ಕೆ ಅಲ್ಲಿಯೂ ಹಾಗೆಯೇ ಕಂಡಿತು. ಅದು ನಾಲ್ಕನೆಯ ಗೋಡೆಯ ಕಡೆ ನೋಡಿದಾಗ ಅಲ್ಲಿಯೂ ಅದೇ ರೀತಿ ಆಯಿತು. ಅದು ಮೇಲಕ್ಕೆ ಮುಗಿಲ ಕಡೆ ನೋಡಿತು; ಮೇಲೆ ಛಾವಣಿಗೂ ಸಾವಿರಾರು ಕನ್ನಡಿಗಳನ್ನು ಹಾಕಿದ್ದುದರಿಂದ ಮೇಲಿಂದಲೂ ಸಾವಿರಾರು ನಾಯಿಗಳು ಅದನ್ನು ಹರಿದು ತಿನ್ನುವಂತೆ ನುಗ್ಗಿ ಬಂದವು. ಅದಕ್ಕೆ ಬಹಳ ಭಯವಾಯಿತು. ಅದು ಮೇಲಕ್ಕೆ ಹಾರಿತು. ಎಲ್ಲ ಕಡೆಯಿಂದಲೂ ನಾಯಿಗಳು ಅದರ ಮೇಲೆ ಹಾರಿದವು. ಅದು ಬೊಗಳುವದಕ್ಕೆ ತೊಡಗಿತು. ಎಲ್ಲಾ ನಾಯಿಗಳೂ ಬಾಯಿ ಬಾಯಿ ಕಳೆದು ಬೊಗಳಲು ತೊಡಗಿದವು. ಆ ಭಯಂಕರ ಶಬ್ದವು ಸುತ್ತಲೂ ನಾಲ್ಕು ದಿಕ್ಕುಗಳ ಗೋಡೆಗಳಿಂದಲೂ ಪ್ರತಿಧ್ವನಿತವಾಗುವದನ್ನು ಕೇಳಿ ಅದಕ್ಕೆ ಎದೆಯೊಡೆಯುವಷ್ಟು ಭಯವಾಯಿತು. ಅದು ಅತ್ತಿಂದಿತ್ತಲೂ ಇತ್ತಿಂದತ್ತಲೂ ಹಾರಿ ಹಾರಿ, ಬೊಗಳಿ ಬೊಗಳಿ ಸುಸ್ತಾಗಿ ಅಲ್ಲಿಯೇ ಬಿದ್ದು ಸತ್ತಿತು.

ಹಾಗೆಯೇ ಈ ಪ್ರಪಂಚವು ಕನ್ನಡಿಯ ಮನೆಯಂತಿದೆಯೆಂದೂ ಒಂದೊಂದು ದೇಹವೂ ಒಂದೊಂದು ಬಗೆಯಾದ ಕನ್ನಡಿಯೆಂದೂ ಆ ನಾಯಿಯು ನಾಲ್ಕು ದಿಕ್ಕುಗಳಿಂದಲೂ ತನ್ನ ಪ್ರತಿಬಿಂಬವನ್ನೇ ಕಂಡಂತೆ ನಿಮ್ಮ ನಿಜವಾದ ಆತ್ಮನೇ ಎಲ್ಲಾ ದೇಹಗಳಲ್ಲಿಯೂ ತೋರುತ್ತಿದ್ದಾನೆಂದೂ ವೇದಾಂತವು ನಿಮಗೆ ಹೇಳುತ್ತದೆ. ಹೀಗೆ ಅನಂತವಾದ ಒಬ್ಬ ಆತ್ಮನೇ ಅನಂತನಾದ ಒಬ್ಬ ಪರಮಾತ್ಮನೇ ಅನಂತವಾದ ಒಂದು ಶಕ್ತಿಯೇ ಬೇರೆ ಬೇರೆ ಕನ್ನಡಿಗಳಂತಿರುವ ದೇಹಗಳಲ್ಲಿ ತೋರಿಕೊಳ್ಳುತ್ತಿದೆ. ಅನಂತನಾದ ಒಬ್ಬ ರಾಮನೇ ಈ ಎಲ್ಲಾ ದೇಹಗಳಲ್ಲಿಯೂ ತೋರಿಕೊಳ್ಳುತ್ತಿದ್ದಾನೆ. ಈ ಪ್ರಪಂಚದಲ್ಲಿ ಅಜ್ಞಾನಿಗಳು ನಾಯಿಗಳಂತೆ ಬಂದು "ಈ ಮನುಷ್ಯನು ನನ್ನನ್ನು ತಿಂದುಬಿಡುತ್ತಾನೆ; ಆ ಮನುಷ್ಯನು ನನ್ನನ್ನು ಚೂರು ಚೂರಾಗಿ ಹರಿದು ನಾಶ ಮಾಡುತ್ತಾನೆ." ಎಂದು ಹೇಳುತ್ತಾರೆ. ಆಹಾ! ಈ ಜಗತ್ತಿನಲ್ಲಿ ಎಷ್ಟು ಅಸೂಯೆ! ಎಷ್ಟು ಭಯ! ಈ ಅಸೂಯೆ ಮತ್ತು ಭಯಕ್ಕೆ ಕಾರಣವೇನು? ಪ್ರಪಂಚದ ಭಯಂ-ಮತ್ಸರಗಳಿಗೆ ನಾಯಿಯಂಥ ಅಜ್ಞಾನವೇ ಕಾರಣ. ದಯವಿಟ್ಟು ನಿಮ್ಮ ಭಾವನೆಗಳನ್ನು ತಿರುವು ಮುರುವು ಅಥವಾ ತಲೆಕೆಳಗು ಮಾಡಿ. ಕನ್ನಡಿ ಮನೆಯ ಯಜಮಾನನಂತೆ ಈ ಪ್ರಪಂಚದೊಳಗೆ ಬನ್ನಿ. ಪ್ರಪಂಚದೊಳಗೆ ನಾಯಿಯಂತೆ ಬರಬೇಡಿ; ಅಥವಾ ದೆವ್ವದಂತೆ ಬರಬೇಡಿ; ಆದರೆ ದೇವರಂತೆ ಬನ್ನಿ. ಈ ಕನ್ನಡಿ

ಮನೆಯ ಯಜಮಾನರೇ ನೀವು. ಸಂಪೂರ್ಣ ವಿಶ್ವದ ಪ್ರಭುಗಳೇ ನೀವು. ನಿಮ್ಮ ವಿರೋಧಿಗಳನ್ನೂ ನೀವು ಕಂಡಾಗ ಸಂತೋಷಪಡುತ್ತೀರಿ. ಸಹೋದರರಾಗಲೀ ಶತ್ರುಗಳಾಗಲೀ ಪ್ರಗತಿಯನ್ನು ಪಡೆದಾಗ ನೀವು ಹರ್ಷಗೊಳ್ಳುತ್ತೀರಿ. ಎಲ್ಲಿ ಒಂದು ಶೋಭೆಯನ್ನೂ ಮಹಿಮೆಯನ್ನೂ ವೈಭವವನ್ನೂ ಕಂಡರೂ ಆನಂದಪಡುತ್ತೀರಿ. ಈ ಮರ್ತ್ಯಲೋಕವನ್ನೇ ಸ್ವರ್ಗಲೋಕವನ್ನಾಗಿ ಮಾಡುತ್ತೀರಿ.

೩೪. ಹುಚ್ಚು ಹರ್ಷೋತ್ಸಾಹ

(ಮಿಠಾಯಿ ದಾನ)

ಒಮ್ಮೆ, ಇಂಡಿಯಾದೇಶವಲ್ಲಿ ಒಬ್ಬ ಮನುಷ್ಯನು ಒಂದು ದೇವಸ್ಥಾನದಲ್ಲಿ ಮಿಠಾಯಿಗಳನ್ನು ಹಂಚುತ್ತಿದ್ದನು. ದೊಡ್ಡದೊಂದು ಸಂತೋಷ ಸಮಯದಲ್ಲಿಯಾಗಲೀ ಉತ್ಸವಕಾಲದಲ್ಲಿಯಾಗಲೀ ಬಡಜನರಲ್ಲಿ ಸಿಹಿತಿಂಡಿಗಳನ್ನು ಹಂಚುವದು ಹಿಂದೂ ಜನರ ಪದ್ಧತಿ. ಆ ಸಂತೋಷಕ್ಕೆ ಕಾರಣವೇನೆಂದು ಆಗ ಯಾರೋ ಬಂದು ಕೇಳಿದರು. ತಾನು ತನ್ನ ಕುದುರೆಯನ್ನು ಕಳೆದುಕೊಂಡಿದ್ದೇನೆಂದು ಆ ಹಂಚುವ ಮನುಷ್ಯನು ಹೇಳಿದನು. ಅವನ ಸಂತೋಷಕ್ಕೆ ಅದೇ ಕಾರಣವಾಗಿತ್ತು. ಜನರಿಗೆ ಬಹಳ ಆಶ್ಚರ್ಯವಾಯಿತು. "ಏನಪ್ಪ ! ನೀನು ಕುದುರೆಯನ್ನು ಕಳೆದುಕೊಂಡಿದ್ದಕ್ಕಾಗಿ ಸಂತೋಷಪಡುತ್ತಿದ್ದೀಯ?" ಎಂದು ಜನರು ಕೇಳಿದರು. ಅದಕ್ಕೆ ಅವನು "ಹಾ ! ನೀವು ತಪ್ಪು ತಿಳಿದುಕೊಳ್ಳಬೇಡಿ. ನಾನು ಕುದುರೆಯನ್ನು ಕಳೆದುಕೊಂಡಿದ್ದರೂ ಸವಾರನನ್ನು ಉಳಿಸಿದ್ದೇನೆ. ದರೋಡೆಗಾರರ ಒಂದು ತಂಡದಿಂದ ಕುದುರೆಯು ಕಳವಾಯಿತು. ಆಗ ನಾನದನ್ನು ಸವಾರಿ ಮಾಡುತ್ತಿರಲಿಲ್ಲ. ಹಾಗೇನಾದರೂ ಸವಾರಿ ಮಾಡುತ್ತಿದ್ದಿದ್ದರೆ ನನ್ನನ್ನೂ ಕದ್ದೊಯ್ಯುತ್ತಿದ್ದರು. ಅದ್ದರಿಂದ ಕಳವಾದುದು ಕುದುರೆಯೊಂದೇ ಹೊರತು ಅದರೊಡನೆ ನನ್ನನ್ನೂ ಸೆಳೆದೊಯ್ಯಲಿಲ್ಲವಲ್ಲಾ ಎಂದು ಕೃತಜ್ಞತೆಯಿಂದ ಸಂತೋಷವಾಗಿದ್ದೇನೆ." ಎಂದನು. "ಎಂಥಾ ಸರಳ ಮನುಷ್ಯ!" ಎಂದು ಜನರು ಮನಸಾರೆ ನಕ್ಕರು.

ಸಹೋದರ–ಸಹೋದರಿಯರೆ ! ಇದೊಂದು ಕುಚೋದ್ಯದ ಕತೆಯೆಂದು ಕಾಣುತ್ತದೆ. ಆದರೆ, ಪ್ರತಿಯೊಬ್ಬರೂ ಅದನ್ನು ತಮ ತಮಗೇ ಅನ್ವಯಿಸಿಕೊಂಡು ಆ ಮೂಢಮನುಷ್ಯನಿಗಿಂತಲೂ ತಾವು ಹೆಚ್ಚು ಪಾಮರರಂತೆ ನಡೆದುಕೊಳ್ಳುತ್ತಿಲ್ಲವೆ? —ಎಂದು ಪರೀಕ್ಷಿಸಿಕೊಳ್ಳಬೇಕು. ಆ ಮನುಷ್ಯನಾದರೋ ಕುದುರೆಯನ್ನು ಕಳೆದುಕೊಂಡರೂ ಸವಾರನಾದ ತನ್ನನ್ನು ತಾನು ಉಳಿಸಿಕೊಂಡನು. ಆದರೆ ಸಹಸ್ರಾರು ಜನರು-ಅಲ್ಲ, ಲಕ್ಷಾಂತರ ಜನರು-ಏನು ಮಾಡುತ್ತಿದ್ದಾರೆ? ಅವರು ಸವಾರನನ್ನೇ ಕಳೆದುಕೊಂಡು ಕುದುರೆಯನ್ನು ಉಳಿಸಲು ಪ್ರಯತ್ನ ಮಾಡುತ್ತಿದ್ದಾರೆ. ಇದೇ ಅತ್ಯಂತ ಶೋಚನೀಯ. ಆದ್ದರಿಂದ ಕುದುರೆಯನ್ನು ಕಳೆದುಕೊಂಡರೂ ಸವಾರನನ್ನು ಉಳಿಸಿದವನಿಗೆ ಸಂತೋಷಪಡಲು ನ್ಯಾಯವಾದ ಕಾರಣವಿತ್ತು.

ಅತಿವಾಹಕ ಶರೀರವೇ ಕುದುರೆಯೆಂದೂ ನಿಜವಾದ ಆತ್ಮನೇ ಸವಾರನೆಂದೂ ಎಲ್ಲರಿಗೂ ಗೊತ್ತಿದೆ. ಆದರೆ ನಾವು ಯಾರಲ್ಲಿಗಾದರೂ ಹೋಗಿ ಅವನು ಯಾರು? ಅವನ ನಿಜವಾದ ಸ್ವಭಾವವೇನು? ಎಂದು ವಿಚಾರಿಸೋಣ. "ನಾನು ಇಂಥವನು; ನಾನು ಇಂಥಾ ಕೆಲಸಮಾಡುತ್ತಿದ್ದೇನೆ." ಎಂದು ಅವನು ಹೇಳಬಹುದು. ಆದರೆ ಇದು ನಮ್ಮ ಪ್ರಶ್ನೆಗೆ ಸರಿಯಾದ ಉತ್ತರವಲ್ಲ. ಅವನು ಸ್ಥೂಲಶರೀರದ ವಿಷಯುವನ್ನು ಹೇಳುತ್ತಿದ್ದಾನೆ. ನಾವು ಸವಾರನಾದ ಆತ್ಮನ ವಿಷಯುವನ್ನು ಕೇಳಿದರೆ, ಅವನು ಕುದುರೆಯ ವಿಷಯುವನ್ನು ಹೇಳುತ್ತಾನೆ. ನಮ್ಮ ಪ್ರಶ್ನೆಯಿಂದ ನುಣುಚಿಕೊಂಡು ನಾವು ಕೇಳದಿರುವ ವಿಚಾರಗಳನ್ನು ಹೇಳುತ್ತಾನೆ. ಇದರಿಂದ ಕುದುರೆಯನ್ನೇ ಸವಾರನೆಂದು ನಾವು ತಿಳಿದಂತೆ ಆಗುವದಿಲ್ಲವೆ? ಕುದುರೆಯು ಕಳವಾಗಿದೆ; "ಕಳೆಯಿತು, ಕಳೆಯಿತು, ಕಳೆಯಿತು!" ಎಂದು ಕೂಗೆಬ್ಬಿಸಲು ಇದು ಮೀರಿದ ಸಮಯುವಾಗಿದೆ. "ಕಳೆಯಿತು, ಕಳೆಯಿತು, ಕಳೆಯಿತು!" ಎಂದು ವರ್ತಮಾನ ಪತ್ರಿಕೆಗಳಲ್ಲೆಲ್ಲಾ ಪ್ರಕಟವಾಗಲಿ! ಕಳೆದುದು ಏನು? ಕದುರೆಯೆ? ಇಲ್ಲ: ಕುದುರೆ ಕಳೆಯಲಿಲ್ಲ. ಏಕೆಂದರೆ ಪ್ರತಿಯೊಬ್ಬನೂ ಕುದುರೆಯ ವಿಷಯುವನ್ನೇ ಹೇಳುತ್ತಾನೆ. ನಿಜವಾಗಿ ಕಳೆದಿರುವದೆಂದರೆ ಸವಾರ; ಕುದುರೆಯಲ್ಲ. ವ್ಯಕ್ತಿಯೇ ಕುದುರೆ; ಆತ್ಮನೇ ಸವಾರ. ಪ್ರತಿಯೊಬ್ಬನೂ ತನ್ನ ವ್ಯಕ್ತಿವಿಚಾರವನ್ನು ಬೇಕಾದಷ್ಟು ಹೇಳುತ್ತಾನೆ. ಆದರೆ ತನ್ನ ಆತ್ಮನ ವಿಚಾರವನ್ನು ಯಾರೂ ಹೇಳುವದಿಲ್ಲ. ಆದ್ದರಿಂದ ಎಲ್ಲರೂ ಕಳೆದುಕೊಂಡಿರುವದು, ನಿಜವಾದ ತಮ್ಮ ಆತ್ಮವನ್ನು, ಚೈತನ್ಯವನ್ನು. ಆಶ್ಚರ್ಯವೋ ಆಶ್ಚರ್ಯ!

೩೫. ಮತಧರ್ಮಗಳ ಕಲಹ-ಕಚ್ಚಾಟಗಳ ಕಾರಣ

(ವಾಟರ್ ಮೆಲನ್-ಟರ್ಬೂಜ್-ಹಿಂಡ್ವನ್)

ಮೂರು ಜನ ಬಾಲಕರಿಗೆ ಅವರ ಯಜಮಾನನು ಸಮವಾಗಿ ಹಂಚಿಕೊಳ್ಳಬೇಕೆಂದು 'ಐದು ಸೆಂಟ್' ನಾಣ್ಯವನ್ನು ಕೊಟ್ಟನು. ಆ ಬಾಲಕರು ಆ ಹಣದಿಂದ ಏನನ್ನಾದರೂ ಕೊಂಡುಕೊಳ್ಳಬೇಕೆಂದು ತೀರ್ಮಾನಿಸಿದರು. ಅವರಲ್ಲಿ ಒಬ್ಬನು ಆಂಗ್ಲ ಬಾಲಕನೂ ಇನ್ನೊಬ್ಬನು ಹಿಂದುವೂ ಮತ್ತೊಬ್ಬನು ಪಾರ್ಸಿಯೂ ಆಗಿದ್ದರು. ಅವರಲ್ಲಿ ಒಬ್ಬನಿಗೂ ಇನ್ನೊಬ್ಬನ ಭಾಷೆಯು ಚೆನ್ನಾಗಿ ತಿಳಿದಿರಲಿಲ್ಲ. ಆದ್ದರಿಂದ ಏನನ್ನು ಕೊಂಡುಕೊಳ್ಳಬೇಕೆಂಬ ವಿಷಯದಲ್ಲಿ ಅವರಿಗೆ ಸ್ವಲ್ಪ ಗೊಂದಲವಾಯಿತು. ಆಂಗ್ಲ ಬಾಲಕನು ತನಗೆ "ವಾಟರ್ ಮೆಲನ್" ಬೇಕೆಂದು ಹಠ ಹಿಡಿದನು. ಹಿಂದೂ ಬಾಲಕನು ಅವನನ್ನು ಅಲ್ಲಗಳೆದು "ಇಲ್ಲ, ಇಲ್ಲ, ನನಗೊಂದು "ಹಿಂಡ್ವನ" ಬೇಕು" ಎಂದು ವಾದಿಸಿದನು. ಮೂರನೆಯ ಪರ್ಷಿಯನ್ ಬಾಲಕ "ಬೇಡ, ಬೇಡ, ನಾವು 'ಟರ್ ಬೂಜ್' ತೆಗೆದುಕೊಳ್ಳೋಣ" ಎಂದು ಸಾಧಿಸಿದನು. ಹೀಗೆ ಏನನ್ನು

ಕೊಂಡುಕೊಳ್ಳಬೇಕೆಂಬ ವಿಚಾರದಲ್ಲಿಯೇ ಅವರು ಒಮ್ಮತಕ್ಕೆ ಬರಲಾರದಾದರು. ಪ್ರತಿಯೊಬ್ಬನೂ ಉಳಿದಿಬ್ಬರ ಇಚ್ಛೆಗಳನ್ನು ನಿರ್ಲಕ್ಷಿಸಿ ತನಗೆ ಇಷ್ಟವಾದ ವಸ್ತುವನ್ನೇ ಕೊಳ್ಳಬೇಕೆಂದು ಒತ್ತಾಯ ಪಡಿಸುತ್ತಿದ್ದನು. ಅವರಲ್ಲಿ ದೊಡ್ಡ ರಂಪಾಟವೇ ನಡೆದಿತ್ತು. ಅವರು ಹಾಗೆ ಜಗಳವಾಡುತ್ತಾ ಬೀದಿಯಲ್ಲಿ ಹೋಗುತ್ತಿದ್ದಾಗ, ಅವರಾ ಮೂರು ಭಾಷೆಗಳನ್ನೂ ಬಲ್ಲ ಒಬ್ಬ ಮನುಷ್ಯನು ಸಂಧಿಸಿದನು. ಅವರ ಜಗಳವನ್ನು ಕೇಳಿ ಅವನಿಗೆ ವಿನೋದವಾಗಿ ಕಂಡಿತು, ಅವರ ಕಲಹವನ್ನು ತಾನು ಬಗೆಹರಿಸುವದಾಗಿ ಅವರಿಗೆ ಹೇಳಿದನು. ಮೂವರೂ ತಮ್ಮ ಸಮಸ್ಯೆಯನ್ನು ಅವನಿಗೆ ತಿಳಿಸಿ ಅವನ ತೀರ್ಮಾನದಂತೆ ನಡೆದುಕೊಳ್ಳುವದಾಗಿ ಮಾತುಕೊಟ್ಟರು. ಈ ಮನುಷ್ಯನು ಅವರಿಂದ ಆ ಹಣವನ್ನು ತೆಗೆದುಕೊಂಡು, ಅವರವರಿಗೆ ಬೇಕಾದ ವಸ್ತುಗಳನ್ನು ತಾನು ತರುವತನಕ ಕಾದಿರಬೇಕೆಂದು, ಅವರನ್ನು ಒಂದು ಮೂಲೆಯಲ್ಲಿ ನಿಲ್ಲಿಸಿದನು. ಅವನೇ ಸ್ವತಃ ಒಂದು ಹಣ್ಣಿನಂಗಡಿಗೆ ಹೋಗಿ ಐದು 'ಸೆಂಟಿಗೆ' ಒಂದು ದೊಡ್ಡ ಕಲ್ಲಂಗಡಿ ಹಣ್ಣನ್ನು ಕೊಂಡುಕೊಂಡನು. ಅದನ್ನು ತೆಗೆದುಕೊಂಡು ಹೋಗಿ ಮುಚ್ಚಿಟ್ಟು ಅವರಲ್ಲಿ ಒಬ್ಬೊಬ್ಬನನ್ನಾಗಿ ಕರೆದನು. ಆ ಹಣ್ಣಿನಲ್ಲಿ ಮೂರು ಸಮಭಾಗಮಾಡಿ ಮಿಕ್ಕ ಭಾಗಗಳನ್ನು ತೋರಿಸದೆ, ಒಂದು ಭಾಗವನ್ನು ಆಂಗ್ಲ ಬಾಲಕನಿಗೆ ಕೊಟ್ಟು "ಈ ಹಣ್ಣೇ ಅಲ್ಲವೆ ನಿನಗೆ ಬೇಕಾಗಿರುವದು ?" ಎಂದನು. ಆ ಬಾಲಕನಿಗೆ ಬಹಳ ಸಂತೋಷವಾಯಿತು. ಅದೇ ತನಗೆ ಬೇಕಾಗಿದ್ದುದೆಂದು ಹೇಳಿ ಅದನ್ನು ಕೃತಜ್ಞತೆಯಿಂದ ಸ್ವೀಕರಿಸಿ ಉಲ್ಲಾಸದಿಂದ ಕುಣಿಯುತ್ತಾ ನೆಗೆಯುತ್ತಾ ಹೋದನು. ಆ ಸಜ್ಜನನು ಪರ್ಷಿಯನ್ ಬಾಲಕನನ್ನು ಕರೆದು ಅವನಿಗೂ ಒಂದು ತುಂಡು ಹಣ್ಣನ್ನು ಕೊಟ್ಟನು. ಆ ಹುಡುಗನು "ಓ ! ಇದೇ ನನಗೆ ಬೇಕಾಗಿದ್ದ ನನ್ನ 'ಟರ್ಬೂಜ್' " ಎಂದು ಹೇಳಿ ಹರ್ಷೋತ್ಸಾಹದಿಂದ ಅದನ್ನು ತೆಗೆದುಕೊಂಡು ಹೋದನು. ಕೊನೆಗೆ ಆ ಸಭ್ಯನು ಹಿಂದೂ ಬಾಲಕನನ್ನೂ ಕರೆದು ಅವನಿಗೆ ಆ ಹಣ್ಣಿನ ಮೂರನೆಯ ಭಾಗವನ್ನು ಕೊಟ್ಟನು. ಅವನು ಅತ್ಯಾನಂದದಿಂದ "ಓಹೋ ಇದೇ ನನಗೆ ಬೇಕಾಗಿದ್ದ ನನ್ನ 'ಹಿಂಡ್ವನ'" ಎಂದು ಕುಣಿದಾಡುತ್ತಾ ತೆಗೆದುಕೊಂಡು ಹೋದನು. ಆದರೆ, ಆ ಹುಡುಗರ ಅಸಮಾಧಾನಕ್ಕೂ ಕಲಹಕ್ಕೂ ಕಾರಣವಾಗಿದ್ದುದೇನು? ಬರೀ ಹೆಸರುಗಳು. ಆ ಹಣ್ಣಿನ ಬರೀ ಹೆಸರುಗಳು, ಬೇರೇನೂ ಇಲ್ಲ; ಆ ಹೆಸರುಗಳನ್ನು ತೆಗೆದುಬಿಡಿ; ಆ ಹೆಸರುಗಳ ತೆರೆಯ ಹಿಂದಿರುವ ವಸ್ತುವನ್ನು ನೋಡಿ. ಇಷ್ಟೆಲ್ಲಾ ವಾದ–ಭೇದಗಳಿಗೂ ದ್ವೇಷಾಸೂಯೆಗಳಿಗೂ ಕಲಹ–ಕದನಗಳಿಗೂ ಕಾರಣವಾಗಿದ್ದ 'ವಾಟರ್ ಮೆಲನ್', ಟರ್ಬೂಜ್, ಹಿಂಡ್ವನ' ಹೆಸರುಗಳು ಒಂದೇ ವಸ್ತುವನ್ನು ಸೂಚಿಸುತ್ತವೆ–ಎಂಬುದು ಸಿದ್ಧವಾಗುತ್ತದೆ. ಪರ್ಷಿಯಾ ದೇಶದಲ್ಲಿ ಬೆಳೆಯುವ ಕಲ್ಲಂಗಡಿ ಹಣ್ಣಿಗೂ ಇಂಗ್ಲೆಂಡಿನಲ್ಲಿ ಬೆಳೆಯುವ ಅದೇ ಜಾತಿಯ ಹಣ್ಣಿಗೂ ಇಂಡಿಯಾದಲ್ಲಿ ಬೆಳೆಯುವ ಅದೇ ಹಣ್ಣಿಗೂ ಗುಣ-ರುಚಿ-ಗಾತ್ರ-ರೂಪ

ಇತ್ಯಾದಿಗಳಲ್ಲಿ ಸ್ವಲ್ಪ ಸ್ವಲ್ಪ ವ್ಯತ್ಯಾಸವಿರಬಹುದು. ಆದರೆ ಆ ದೇಶಾನುಗುಣವಾದ ಅಲ್ಪ ವೈಲಕ್ಷಣ್ಯಗಳನ್ನು ಗಮನಿಸದಿದ್ದರೆ ಆ ಎಲ್ಲವೂ ಕಲ್ಲಂಗಡಿ ಹಣ್ಣು ಗಳೇ ಎಂಬುದು ಮಾತ್ರ ನಿಜ.

ಇದೇ ಪ್ರಕಾರ, ಬೇರೆಬೇರೆ ಮತಧರ್ಮಗಳಿಗಿರುವ ಪರಸ್ಪರ ಭೇದಗಳ ವಿರೋಧಗಳೂ ಅಪಾರ್ಥಗಳೂ ಅಸಮಾಧಾನಗಳೂ ಹೊಡೆದಾಟ-ಹೋರಾಟಗಳೂ ವಿಚಾರ ಮಾಡಿದರೆ ಹಾಸ್ಯಾಸ್ಪದವಾಗಿ ಕಾಣುತ್ತವೆ. ಇದನ್ನು ನೋಡಿ ರಾಮನಿಗೆ ವಿನೋದವಾಗಿದೆ; ನಗು ಬರುತ್ತದೆ. ಕ್ರೈಸ್ತರು ಯಹೂದಿಗಳೊಡನೆ ಯುದ್ಧ ಮಾಡುವದು; ಯಹೂದಿಗಳು ಮುಹಮ್ಮದೀಯರೊಡನೆ ತಿಕ್ಕಾಡುವದು; ಮುಹಮ್ಮದೀಯರು ಬ್ರಾಹ್ಮಣರೊಡನೆ ಹೋರಾಡುವದು; ಬ್ರಾಹ್ಮಣರು ಬೌದ್ಧರೊಡನೆ ವಿರೋಧಿಸುವದು; ಬೌದ್ಧರೂ ಅದೇ ಪ್ರತೀಕಾರದ ಸಂಭಾವನೆ ನೀಡುವದು-ಕೇವಲ ಬಾಲ ಬುದ್ಧಿಯು ಈ ಕಲಹಗಳನ್ನು ತಟಸ್ಥ ದೃಷ್ಟಿಯಿಂದ ನೋಡಿದರೆ, ತಮಾಷೆಯಾಗಿರುತ್ತದೆ. ಈ ಮನಸ್ತಾಪಗಳಿಗೂ ಕದನ ಕುತೂಹಲಗಳಿಗೂ ಕಾರಣವನ್ನು ಹುಡುಕಿದರೆ ಅದು ಮುಖ್ಯವಾಗಿ ಹೆಸರುಗಳಲ್ಲಿಯೇ ಇದೆ, ಎನ್ನುವದು ಸ್ಪಷ್ಟವಾಗುತ್ತದೆ. ಹೆಸರುಗಳ ಪರದೆಯನ್ನು ಹರಿದೊಗೆದು, ನಾಮಗಳ ಮಾಯಾಪಟಲವನ್ನು ತೂರಿ, ಆಚೆಗೆ ನೋಡಿದರೆ, ಹಿನ್ನೆಲೆಯಲ್ಲಿ ಯಾವ ಭೇದವೂ ಇಲ್ಲದೆ, ಒಂದೇ ವಸ್ತುವಿದೆಯೆಂಬದು ವ್ಯಕ್ತವಾಗುತ್ತದೆ.

ರಾಮನು ಅನೇಕ ವೇಳೆ "ವೇದಾಂತ" ಎಂಬ ಶಬ್ದವನ್ನು ಉಪಯೋಗಿಸುತ್ತಾನೆ. ಇದೊಂದು ಹೆಸರು; ನಾಮ. ರಾಮನಿಂದ ಯಾವದನ್ನೂ ಕೇಳದಿರುವಂತೆ ಈ ಹೆಸರೇ ಕೆಲವರಿಗೆ ವಿರೋಧಭಾವನೆಯನ್ನು ಹುಟ್ಟಿಸುತ್ತದೆ. ಒಬ್ಬನು ಬಂದು ಬುದ್ಧನ ಹೆಸರಿನಲ್ಲಿ ಉಪದೇಶ ಮಾಡುತ್ತಾನೆ. ಅನೇಕರ ಕಿವಿಗಳಿಗೆ ಅಪ್ರಿಯವಾದ ಹೆಸರನ್ನು ಅವನು ಹೇಳುವದರಿಂದ ಅವನ ಉಪದೇಶವನ್ನು ಕೇಳುವದು ಅವರಿಗೆ ಬೇಕಾಗುವದಿಲ್ಲ. ದಯವಿಟ್ಟು ಹೆಚ್ಚು ವಿಚಾರಶೀಲರಾಗಿರಿ. ಹೆಸರುಗಳನ್ನು ಮೀರಿ ನಿಲ್ಲುವದಕ್ಕೆ ಈ ಇಪ್ಪತ್ತನೆಯ ಶತಮಾನವು ಬಹಳ ಮೀರಿದ ಕಾಲವಾಗಿದೆ. ರಾಮನಾಗಲೀ ಯಾರೇ ಆಗಲೀ ಹೇಳುವ ವಿಚಾರಗಳನ್ನು ಅವವುಗಳ ಯೋಗ್ಯತೆಯನ್ನರಿತು, ಬೆಲೆಕಟ್ಟಿ, ಗಮನ ಕೊಡಿ. ಕೇವಲ ಹೆಸರುಗಳಿಂದ ದಿಗ್ಭ್ರಮೆಗೊಳ್ಳಬೇಡಿ; ತಪ್ಪಾಗಿ ತಿಳಿಯಬೇಡಿ, ಪ್ರತಿಯೊಂದನ್ನೂ ಚೆನ್ನಾಗಿ ಪರಿಶೀಲಿಸಿ, ಪರೀಕ್ಷಿಸಿ, ಸತ್ಯವೇನೆಂಬದನ್ನು ಕಂಡುಹಿಡಿದು, ಪ್ರಯೋಗಸಾಧ್ಯವೆ? ನೋಡಿ,

೩೬. ಮೂಢವಿಶ್ವಾಸ

(ಅಜ್ಜಿ-ಗಡಿಯಾರ)

ಅನೇಕರು ರಾಮನಿಗೆ ಈ ಪ್ರಶ್ನೆಯನ್ನು ಮತ್ತೆ ಮತ್ತೆ ಕೇಳುತ್ತಾರೆ: ಇದು ವೇದಾಂತವಾಗಿದ್ದರೆ, ವೇದಾಂತದ ಸಾರವು ಹೀಗಿದ್ದರೆ, ಮತ್ತು ವೇದಾಂತದ

ಮೂಲಸ್ಥಾನವೇ ಇಂಡಿಯಾ ಆಗಿದ್ದರೆ, ಇಂಡಿಯಾ ಏಕೆ ಇಷ್ಟು ಅವನತ ಸ್ಥಿತಿಯಲ್ಲಿದೆ ?"

ಇಂಡಿಯಾದ ಜನರು ವೇದಾಂತವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳದಿರುವುದೇ ಅವರು ಕ್ಷೀಣದಶೆಯನ್ನು ಹೊಂದುವುದಕ್ಕೆ ಕಾರಣ. ಇಂಡಿಯಾ ಜನರಿಗಿಂತಲೂ ಅಮೆರಿಕೆಯವರು ಹೆಚ್ಚಾಗಿ ವೇದಾಂತದಂತೆ ಜೀವಿಸುವುದರಿಂದ ಅವರು ಹೆಚ್ಚು ಅಭಿವೃದ್ಧಿಯನ್ನು ಪಡೆದಿದ್ದಾರೆ. ಇಂಡಿಯಾದ ಅವನತಿಗೆ ಅದರ ವೇದಾಂತವೇ ಕಾರಣವೆಂದು ಲೋಕದವರು ಹೇಳುವುದು ಸರಿಯಲ್ಲ, ನ್ಯಾಯವಲ್ಲ. ಒಂದು ಸಣ್ಣ ಕಥೆಯಿಂದ ರಾಮನು ಅದನ್ನು ತೋರಿಸಿಕೊಡುತ್ತಾನೆ.

ಇಂಡಿಯಾದೇಶದ ಒಂದು ಹಳ್ಳಿಯ ಬಾಲಕ, ವಿಶ್ವವಿದ್ಯಾನಿಲಯದಲ್ಲಿ ಓದಿ ವಿದ್ವಾಂಸನಾದ. ಅವನ ಕಾಲೇಜಿನಲ್ಲಿ ಮೂರು ತಿಂಗಳು (ರಜಾ) ವಿರಾಮವಿದ್ದುದರಿಂದ ಹಳ್ಳಿಯಲ್ಲಿ ಓದುವುದಕ್ಕೆ ಅನುಕೂಲವಾಗಲೆಂದು ಒಂದು ಗಡಿಯಾರವನ್ನು ತೆಗೆದುಕೊಂಡು ಅಜ್ಜಿಯಿದ್ದ ಒಂದು ಹಳ್ಳಿಗೆ ಹೋದನು. ಅವರೆಲ್ಲಾ ಬಹಳ ಪೂರ್ವಸಂಪ್ರದಾಯ ಪ್ರಿಯರಾಗಿದ್ದರು. ಹೊಸಯುಗದ ಇಂಗ್ಲಿಷು ವೇಷಭೂಷಣಗಳೂ ಯಂತ್ರ ಮೊದಲಾದ ನಾಗರಿಕ ಸಾಮಾನುಗಳೂ ಅವರಿಗೆ ಅತಿಶಯ ಅನಿಷ್ಟವಾಗಿ ಕಾಣುತ್ತಿದ್ದವು. ಮೊಮ್ಮಗನು ಮನೆಗೆ ಗಡಿಯಾರವನ್ನು ತಂದಿದ್ದು ಆಕೆಗೆ ಸಹಿಸಲಿಲ್ಲ. ಅದು ಅಶುಭಕರವೆಂದೂ ಮನೆಗೆ ತರಬಾರದೆಂದೂ ಆಕೆ ಬಹಳ ಆಗ್ರಹ ಮಾಡಿದಳು. ಅಷ್ಟೇ ಹಟವಾದಿಯಾಗಿದ್ದ ಮೊಮ್ಮಗನು ಅದನ್ನು ಇಟ್ಟುಕೊಂಡೇ ಇದ್ದನು. ಒಂದು ದಿನ ಅಕಸ್ಮಾತ್ ಅವರ ಮನೆಯಲ್ಲಿದ್ದ ಒಡವೆ ವಸ್ತುಗಳೆಲ್ಲಾ ಕಳವಾದವು. ಅವಕ್ಕೆ ಅರಿಷ್ಟವಾದ ಗಡಿಯಾರವೇ ಕಾರಣವೆಂದು ಅಜ್ಜಿ ಸಿಟ್ಟು ಮಾಡಿದಳು. ಬೆಲೆಯುಳ್ಳ ಎಲ್ಲವನ್ನೂ ಒಯ್ದಿದ್ದ ಕಳ್ಳರು, ಗಡಿಯಾರವನ್ನು ಮಾತ್ರ ಬಿಟ್ಟು ಹೋಗಿದ್ದರು. ಗಡಿಯಾರದಿಂದ ಕೆಟ್ಟದ್ದಾಗುವುದರಿಂದಲೇ ಕಳ್ಳರು ಸಹ ಅದನ್ನು ಒಯ್ಯಲಿಲ್ಲವೆಂದು ಅಜ್ಜಿಯು ವಾದಿಸಿದಳು. ಅನಂತರ ಕೆಲವು ದಿನಗಳಲ್ಲಿ ಆ ವಿದ್ಯಾರ್ಥಿಯ ತಂದೆಯೂ ಸತ್ತನು. ಆಗ ಅಜ್ಜಿಗೆ ಇನ್ನಷ್ಟು ಭಯವಾಯಿತು. ಆಗ ಆಕೆ "ಏ ಉದ್ಧಟ ಮೂರ್ಖ ! ಈ ಘೋರ ಅನಿಷ್ಟವನ್ನು ಮನೆಯಿಂದ ಎಸೆ. ಅದರಿಂದ ನಿನ್ನ ತಂದೆ ಸತ್ತರೂ ಇಟ್ಟುಕೊಂಡಿದ್ದೀಯ ?" ಎಂದು ರೇಗಾಡಿದಳು. ಬಹಳ ಹಟವಾದಿಯಾದ ಆ ಹುಡುಗನು ಅಜ್ಜಿಯ ಭ್ರಮೆಗಾಗಿ ವಿಷಾದಪಟ್ಟರೂ ಗಡಿಯಾರವನ್ನು ಇಟ್ಟುಕೊಂಡೇ ಇದ್ದನು. ಪುನಃ ಕೆಲವು ದಿನಗಳಲ್ಲಿ ದುರ್ದೈವದಿಂದ ಅವನ ತಾಯಿಯೂ ಸತ್ತಳು, ಅಜ್ಜಿಗೆ ಇನ್ನು ಸಹಿಸುವದಾಗಲಿಲ್ಲ. ಆಕೆ ಯಂತ್ರದಿಂದ ಚಲಿಸುವ ಯಾವುದನ್ನೂ ನೋಡಿರಲಿಲ್ಲ. ಒಳಗಡೆ ಯಾವ ಪ್ರಾಣಿಯೂ ಇಲ್ಲದೆ ನಿರ್ಜೀವವಾದ ಆ ಯಂತ್ರ ಅಥವಾ ವಸ್ತು, ಟಿಕ್ ಟಿಕ್ ಎಂದು ಶಬ್ದಮಾಡುವುದು ಹೇಗೆ ? ಆ ಕೈಗಳು ತಮ್ಮಿಂದ ತಾವೇ ಚಲಿಸುವುದು

ಹೇಗೆ ಸಾಧ್ಯ ? ಅದರೊಳಗೆ ಏನೋ ವಿಷಜಂತುವಿರಬೇಕು; ತನ್ನ ಮಗನೂ ಸೊಸೆಯೂ ಸಾಯುವುದಕ್ಕೂ ಅದೇ ಕಾರಣವಿರಬೇಕು-ಹೀಗೆ ಆ ಅಜ್ಜಿಯು ಯೋಚಿಸಿ, ಆ ಹುಡುಗನು ಇಲ್ಲದಾಗ ಆ ಗಡಿಯಾರವನ್ನು ತೆಗೆದುಕೊಂಡು ಹೋಗಿ ತನ್ನ ಕೋಣೆಯೊಳಗೆ ಎರಡು ದೊಡ್ಡ ಕಲ್ಲುಗಳಿಂದ ಅದನ್ನು ಕುಟ್ಟಿ ಕುಟ್ಟಿ ಒಡೆದು ಹಾಕಿದಳು. ತನ್ನ ಎಲ್ಲಾ ರೋಷವನ್ನೂ ದುಃಖವನ್ನೂ, ಗಡಿಯಾರವನ್ನು ಧ್ವಂಸ ಮಾಡಿ ತೀರಿಸಿಕೊಂಡಳು.

ದಯವಿಟ್ಟು, ಈಗ ಸ್ವಲ್ಪ ಗಮನಿಸಿ. ಇಂಡಿಯಾದಲ್ಲಿರುವ ಈ ಹಳೆಯ ಅಜ್ಜಿಗಳ ದಡ್ಡತನಕ್ಕೂ ಭ್ರಮೆಗೂ ನಿಮಗೆ ನಗು ಬರಬಹುದು. ಆದರೆ, ಬೇರೆ ಹಲವು ವಿಚಾರಗಳಲ್ಲಿ ನೀವೂ ಆ ಅಜ್ಜಿಯಂತೆಯೇ ಆಡುತ್ತಿದ್ದೀರಿ. ಜನರು ಪರಸ್ಪರ ಸಂಬಂಧವಿಲ್ಲದ ಯಾವ ಯಾವುದನ್ನೋ ಸೇರಿಸಿಕೊಂಡು, ತೀರ್ಮಾನಗಳಿಗೆ ಹಾರುತ್ತಾರೆ. ಯಾವುದು ಯಾವುದಕ್ಕೋ ಕಾರಣವೆಂದು ಹೇಳುತ್ತಾರೆ. ಯುರೋಪ್ ಜನರಿಗೆ ವಿಶೇಷವಾಗಿ, ಇಂಡಿಯಾದ ಎಲ್ಲಾ ಅವನತಿಗೂ ಅದರ ವೇದಾಂತವೇ ಕಾರಣವೆಂಬ ದುರಭಿಪ್ರಾಯವಿದೆ. ಪ್ರಪಂಚದಲ್ಲಿರುವ ಬೇರೆ ವಿಷಯಗಳ ವಿಚಾರಗಳಲ್ಲಿಯೂ ಅವರು ಹಾಗೇ ಸರಿಯಾದ ಕಾರಣಗಳನ್ನು ಪರೀಕ್ಷಿಸದೆ, ತಮ್ಮ ತರ್ಕದಲ್ಲಿ ಒಮ್ಮೆಗೇ ತೀರ್ಮಾನಗಳಿಗೆ ಹಾರುತ್ತಾರೆ.

ಯುರೋಪ್ ಅಮೇರಿಕಾಗಳು ಮೇಲೆದ್ದಿರುವುದಕ್ಕೆ ಕ್ರಿಸ್ತನ ವ್ಯಕ್ತಿತ್ವವೇನೂ ಕಾರಣವಲ್ಲ. ಅವರಿಗೇ ತಿಳಿಯದಂತೆ ಅವರು ವೇದಾಂತವನ್ನು ಆಚರಣೆಯಲ್ಲಿ ತಂದಿರುವುದೇ ಅವರ ಏಳಿಗೆಗೆ ನಿಜವಾದ ಕಾರಣ.

೩೭. ಭಯಂಕರ ಅಸಂಬದ್ಧ ಪ್ರಲಾಪ

(ತನ್ನ ಹೆಂಡತಿ ಮುಂಡೆಯಾದಳೆಂದು ಗೋಳಾಡಿದ ಮಂಕು ತಿಮ್ಮ)

ಪ್ರಪಂಚದಲ್ಲಿ ಜನರು ಕಷ್ಟ ಪಡುವುದಕ್ಕೆ ಮಹತ್ತಾದ ಕಾರಣವೇನೆಂದರೆ, "ನಾವು ನಮ್ಮೊಳಗೆ ನೋಡಿಕೊಳ್ಳುವದಿಲ್ಲ. ನಮ್ಮ ಅನುಭವಗಳಿಂದ ನಮ್ಮ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುವದಿಲ್ಲ. ಅತಿಯಾದ ನಂಬಿಕೆಯಿಂದ ಇನ್ನೊಬ್ಬರಿಂದ ಬಂದ ವಿಷಯಗಳನ್ನು ತೆಗೆದುಕೊಳ್ಳುತ್ತೇವೆ. ನಮಗಾಗಿ ಆಲೋಚಿಸುವದಕ್ಕೆ ಹೊರಗಿನ (ವ್ಯಕ್ತಿ) ಶಕ್ತಿಗಳನ್ನು ನಾವು ಅವಲಂಬಿಸುತ್ತೇವೆ."

ಇನ್ನೊಬ್ಬರ ಹೇಳಿಕೆಯನ್ನು ವಿಮರ್ಶೆ ಮಾಡದೆ ಸತ್ಯವಿರಬಹುದೆಂದು ನಂಬಿಬಿಡುತ್ತೇವೆ. ನಮ್ಮ ಸ್ವಂತ ಶಕ್ತಿಯನ್ನು ನಾವು ನೆಚ್ಚುವದಿಲ್ಲ. ಮಹಮ್ಮದನನ್ನೂ ಬುದ್ಧನನ್ನೂ, ಕೃಷ್ಣನನ್ನೂ ನಂಬುವದರ ಜೊತೆಗೆ ನಾವು ನಮಸ್ಕರಿಸುತ್ತಿರುವ ಹಲವು ಬಗೆಯ ಮೂಢಾರಾಧನೆಯ ವಸ್ತುಗಳನ್ನು ನಾವೇ ಸೃಷ್ಟಿಸಿಕೊಂಡಿದ್ದೇವೆ. ಯಾವ ಸಣ್ಣ ಮಗುವಾದರೂ ನಮ್ಮ ನಡೆವಳಿಕೆಯಲ್ಲಿ ದೋಷವನ್ನು ಕಂಡುಹಿಡಿದು

ಟೀಕಿಸಬಹುದು. ನಮ್ಮ ಅಸಮಾಧಾನಕ್ಕೂ ಸಂಕಟಕ್ಕೂ ಅಷ್ಟೇ ಸಾಕಾಗಬಹುದು. ನಾವು ಬೇರೆಯವರ ಟೀಕೆಗೂ ಅಭಿಪ್ರಾಯಕ್ಕೂ ಬಹಳ ಬೆಲೆ ಕೊಡುತ್ತೇವೆ. ಇನ್ನೊಬ್ಬರ ಮೆಚ್ಚನ್ನೂ ಒಲವನ್ನೂ ಸಂಪಾದಿಸುವದಕ್ಕೆ ನಾವು ಅವರನ್ನು ಅತಿಯಾಗಿ ಆದರಿಸಿ ಅನುಸರಿಸುವದರಲ್ಲಿ ಹೊತ್ತು ಕಳೆಯುತ್ತೇವೆ. ನಮ್ಮ ನಿಜವಾದ ಆತ್ಮನನ್ನು ನಾವು ನೋಡಿಕೊಳ್ಳದೆ ಇನ್ನೊಬ್ಬರ ಕಣ್ಣಿನಿಂದ ನಮ್ಮನ್ನು ನೋಡಿ ಕೊಳ್ಳುವದೇ ದುಃಖಕ್ಕೆ ಕಾರಣವಾಗಿದೆ. ಇನ್ನೊಬ್ಬರ ಕಣ್ಣಿನಲ್ಲಿ ನಾವು ಬಹಳ ಒಳ್ಳೆಯವರಾಗಿ ಕಾಣಬೇಕೆಂಬ ಬಯಕೆಯೇ ಎಲ್ಲಾ ಸಮಾಜಗಳ ಮತ್ತು ಮತ ಧರ್ಮಗಳ ಬೇನೆಯಾಗಿದೆ.

ಒಂದೂರಿನಲ್ಲಿ ಅರೆಹುಚ್ಚನಾದ ಒಬ್ಬ ಮನುಷ್ಯನಿದ್ದ. ನೀವು ಇಲ್ಲಿ ಅಮೇರಿಕಾ ದಲ್ಲಿ ಏಪ್ರಿಲ್ ತಿಂಗಳಲ್ಲಿ "ಏಪ್ರಿಲ್ ಫೂಲ್" ವಿನೋದ ಮಾಡಿದಂತೆ ಇಂಡಿಯಾದಲ್ಲಿ ಸುಮಾರು ಮಾರ್ಚ್ ತಿಂಗಳಲ್ಲಿ ತಮಾಷೆ ಮಾಡುತ್ತಾರೆ. ಆ ಊರಿನ ತಮಾಷೆ ಗಾರರಾದ ಯುವಕರು ಆ ತಿಂಗಳಲ್ಲಿ ಈ ಅರೆಹುಚ್ಚನನ್ನು ಗೇಲಿ ಮಾಡಿ ಎಲ್ಲರನ್ನೂ ನಗಿಸಬೇಕೆಂದು ಒಂದು ಉಪಾಯವನ್ನು ಮಾಡಿದರು. ಅವರು ಆ ಹುಚ್ಚನಿಗೆ ಹೆಂಡವನ್ನು ಕುಡಿಸಿ ಅಮಲು ಹತ್ತುವಂತೆ ಮಾಡಿದರು. ಅನಂತರ ಅವನ ಅತ್ಯಂತ ವಿಶ್ವಾಸಿಯೂ ನಂಬಿಕೆಯುವನೂ ಆದ ಪರಮ ಮಿತ್ರನೊಬ್ಬನನ್ನು ಅವನ ಹತ್ತಿರಕ್ಕೆ ಕಳಿಸಿದರು. ಅವನು ಈ ಅಮಲೇರಿದ ಅರೆಹುಚ್ಚನಲ್ಲಿ ಬಂದು ಬಿಕ್ಕಿ ಬಿಕ್ಕಿ ಅಳುತ್ತಾ ಗೋಳಾಡುತ್ತಾ (ಮೊಸಳೆ) ಕಣ್ಣೀರನ್ನು ಸುರಿಸುವದಕ್ಕೆ ತೊಡಗಿದನು. ಅವನು ಅತಿ ದುಃಖದಿಂದ ಹೇಳಿದ: "ಅಯ್ಯೋ! ಏನು ಹೇಳಲಿ? ನಿನ್ನ ಮನೆಯಿಂದ ಈಗ ಬಂದೆನಪ್ಪ! ನಿನ್ನ ಹೆಂಡತಿ—ಅಯ್ಯೋ ಪಾಪ!—ನಿನ್ನ ಹೆಂಡತಿ ಮುಂಡೆ ಯಾಗಿದ್ದಾಳಪ್ಪ. ಆಕೆ ವಿಧವೆಯಾಗಿರುವದನ್ನು ನೋಡಿ ಬಂದೆ. ನಿನಗಿದನ್ನು ಹೇಗೆ ಹೇಳಲಿ?" ಹೀಗೆ ಹೇಳಿ ಅವನನ್ನು ತಬ್ಬಿಕೊಂಡು ಮತ್ತಷ್ಟು ಅಳುತ್ತಿದ್ದನು. ಆ ಹುಚ್ಚನೂ 'ಅಯ್ಯೋ!' ಎಂದು ತನ್ನ ಹೆಂಡತಿಯೇ ವಿಧವೆಯಾಗಿರುವದಕ್ಕಾಗಿ ಬಿದ್ದು ಬಿದ್ದು ಅಳತೊಡಗಿದನು. ಹೀಗೆ ಬಹಳ ಹೊತ್ತಾದ ಮೇಲೆ ಸುತ್ತಲೂ ಇದ್ದ ಜನರು ಇವರಿಬ್ಬರ ಗೋಳಾಟವನ್ನು ನೋಡಿ ಕನಿಕರದಿಂದ "ಇವರಿಗೆ ಏನು ವಿಪತ್ತು ಬಂದಿತೋ" ಎಂದು ಬಂದು ಸೇರಿ "ಏಕೆ ಅಳುತ್ತೀರಿ?" ಎಂದು ಕೇಳಿದರು. ಆ ಹುಚ್ಚನೇ ಹೇಳಿದ: "ಅಯ್ಯೋ! ನನ್ನ ಹೆಂಡತಿ ವಿಧವೆಯಾದಳಂತೆ; ಇನ್ನೇನು ಗತಿ?" ಆ ಜನರು ನಗುವುದಕ್ಕೆ ತೊಡಗಿದರು; "ಅದು ಹೇಗಯ್ಯಾ? ನಿನ್ನ ಹೆಂಡತಿ ವಿಧವೆಯೆಂದು ನೀನೇ ಅಳುತ್ತಿ, ಹೇಳುತ್ತಿ. ನೀನು ಸತ್ತಿಲ್ಲ. ನೀನು ಸಾಯದೆ ಆಕೆ ವಿಧವೆಯಾಗುವದು ಹೇಗಯ್ಯ? ಇದು ತನಗೆ ತಾನೇ ವಿರುದ್ಧವಾಗಿದೆ" ಎಂದು ಹೇಳಿದರು. ಆ ಹುಚ್ಚ ಹೇಳಿದ, "ಅಯ್ಯೋ! ಹೋಗಿರಯ್ಯಾ ನಿಮಗೇನು ಗೊತ್ತು? ನಿಮಗೇನು ತಿಳಿಯುವದೇ ಇಲ್ಲ. ಈ ನನ್ನ ಅತ್ಯಂತ ವಿಶ್ವಾಸದ ಪರಮ ಮಿತ್ರ ಹೇಳಿದ್ದಾನೆ. ಈಗವನು ನಮ್ಮ ಮನೆಯಿಂದಲೇ ಬಂದಿದ್ದಾನೆ, ನನ್ನ ಹೆಂಡತಿ

ವಿಧವೆಯಾಗಿದ್ದಾಳೆಂದು ಹೇಳಿದ್ದಾನೆ. ಅವಳು ವಿಧವೆಯಾದುದನ್ನು ಕಣ್ಣಾರೆ ಕಂಡು ಬಂದಿದ್ದಾನೆ." ಅವನು ಚೆನ್ನಾಗಿ ಹೊಡೆದು ಗೊಳ್ಳೆಂದು ಹೊಟ್ಟೆ ಹುಣ್ಣಾಗುವಂತೆ ನಗುತ್ತಾ ಹೇಳಿದರು. "ನೋಡಪ್ಪಾ! ನಿನ್ನ ಅಮೂಲ್ಯ ಸ್ವಲ್ಪ ಇದರ ಮೇಲೆ ವಿಚಾರ ಮಾಡು. ನಿನ್ನದು ಎಂಥಾ ಅಸಂಬದ್ಧ ಪ್ರಲಾಪ! ಭಯಂಕರ ಅಸಂಗತ-ಎನ್ನುವುದು ನಿನಗೇ, ತಿಳಿಯುತ್ತದೆ." (ಇದನ್ನು ಕೇಳಿ ಸಭಿಕರೆಲ್ಲಾ ನಗುವುದಕ್ಕೆ ತೊಡಗಿದರು.)

ಈಗ, ಆ ಹುಚ್ಚ ತನ್ನ ಹೆಂಡತಿಯು ವೈಧವ್ಯಕ್ಕಾಗಿ ಅಳುತ್ತಿದ್ದನು. ಅವನು ಬದುಕಿರುವವರೆಗೆ ಅವನ ಹೆಂಡತಿ ವಿಧವೆಯಾಗುವುದು ಸಾಧ್ಯವಿಲ್ಲವೆಂದು ಜನರು ಎಷ್ಟು ಹೇಳಿದರೂ ಕೇಳಲಿಲ್ಲ—ಎನ್ನುವುದಕ್ಕಾಗಿ ನಾವು ನಗುತ್ತೇವೆ. ಆದರೆ ನೆನಪಿಟ್ಟುಕೊಳ್ಳಿ, ಹಾಸ್ಯಾಸ್ಪದವಾದ ಈ ಘೋರ ಅಸಂಗತವನ್ನೇ ಈ ಪ್ರಪಂಚದ ಎಲ್ಲಾ ಮತಗಳವರೂ ಧರ್ಮಗಳವರೂ ಗರ್ವಿಷ್ಠರಾದ ಜನರೂ ಹೊಗಳುಗಾರರೂ (ಹೋಕ್ ಜನರೂ) ನಡೆಸುತ್ತಿದ್ದಾರೆ. ಅವರು ತಮ್ಮ ಕಣ್ಣಿನಿಂದ ನೋಡುವುದಿಲ್ಲ; ತಮ್ಮ ಬುದ್ಧಿಯಿಂದ ವಿಚಾರ ಮಾಡುವುದಿಲ್ಲ. ನಿಮ್ಮ ಸ್ವಂತ, ನಿಜವಾದ ಆತ್ಮನೇ ನಿಮ್ಮೊಳಗಿದ್ದಾನೆ. ಅವನು ಪ್ರಕಾಶಗಳಿಗೆಲ್ಲಾ ಪ್ರಕಾಶನು, ಪರಿಶುದ್ಧನು, ನಿರ್ವಿಕಲ್ಪನು, ಸ್ವರ್ಗಗಳಿಗೆಲ್ಲಾ ಅವನು ಸ್ವರ್ಗವಾಗಿದ್ದಾನೆ. ಎಂದೆಂದಿಗೂ ಚ್ಯುತಿಯಿಲ್ಲದೇ ಅಮರನಾಗಿದ್ದಾನೆ, ಜೀವಂತನಾಗಿದ್ದಾನೆ, ಅವನು ಎಂದೂ ಸತ್ತಿಲ್ಲ. ಆದರೂ ನೀವು ಅತ್ತು ಗೋಳಾಡುತ್ತೀರಿ. "ಅಯ್ಯೋ! ನನಗೆಂದಿಗೆ ಮುಕ್ತಿ ಸಿಕ್ಕುತ್ತದೆ? ದುಃಖ ನಾಶವಾಗುತ್ತದೆ?" ಎಂದು ಗೋಗರೆಯುತ್ತೀರಿ. ಮತ್ತು "ನಮ್ಮನ್ನು ಕಷ್ಟದಿಂದ ಪಾರು ಮಾಡಿರಿ" ಎಂದು ಕಂಡ ಕಂಡ ದೇವತೆಗಳಿಗೆ ಕೈಮುಗಿದು ಸಹಾಯಮಾಡಲು ಬೇಡುತ್ತೀರಿ. ಇವೆಲ್ಲದರ ಬದಲಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಹಾಕಿ ನಿಮ್ಮನ್ನು ನೀವು ತಿರಸ್ಕಾರದಿಂದ ಕಾಣುತ್ತೀರಿ. "ಅಂಥ ಪ್ರಸಿದ್ಧ ಲೌಕಿಕ, ಆ ಧರ್ಮಾತ್ಮ, ಆ ಮಹಾತ್ಮ ಸಹ ತನ್ನನ್ನು ತಾನು ಪಾಪಿಷ್ಠನೆಂದೂ ಕ್ಷುದ್ರ ಜೀವಿಯೆಂದೂ ಕರೆದು ಕೊಂಡ ಮೇಲೆ ನಮ್ಮಂಥವರ ಪಾಡೇನು? ನಾವು ಕ್ರಿಮಿಗಳಿಗಿಂತಲೂ ಕಡೆ" ಎಂದು ಭಾವಿಸುವುದರಲ್ಲಿಯೇ ನಿಮ್ಮ ಉದ್ಧಾರವಿದೆಯೆಂದು "ನಾನು ಸತ್ತಿದ್ದೇನೆ" ಎಂದು ತಿಳಿಯುವುದರಲ್ಲಿಯೇ ನಿಮ್ಮ ಮೋಕ್ಷವಿದೆಯೆಂದೂ ತಿಳಿದಿದ್ದೀರಿ. ಜನರ ದೃಷ್ಟಿಯೇ ಬೇಗೆ; ಅವರ ಭಾವನೆಯೇ ಬೇಗೆ. ನಿಮ್ಮೊಳಗಿರುವ ನಿಜವಾದ ಆತ್ಮನನ್ನು, ಆನಂದಸ್ವರೂಪನನ್ನು, ಮನಗಾಣಲು ಪ್ರಯತ್ನಮಾಡಿ. ನಿಮ್ಮ ಸಾವಿಗೆ ನೀವೇ ಅಳುವ ಈ ಹುಚ್ಚು ಭ್ರಾಂತಿಗೆ, ಮೂಢನಂಬಿಕೆಯ ಅವುಗಳಿಗೆ ನಮಸ್ಕಾರ ಹಾಕಿ. ನೀವು ದೊಡ್ಡ ಮನುಷ್ಯರಾಗಲಿ ಸಣ್ಣವರಾಗಲಿ ನಿಮ್ಮ ಕಾಲ ಮೇಲೆ ನೀವು ನಿಲ್ಲಿ. ನೀವು ಬಹಳ ಹೆಚ್ಚಿನ ಸ್ಥಾನಮಾನದಲ್ಲಿರಲಿ, ಕಡಿಮೆ ಸ್ಥಾನಮಾನದಲ್ಲಿರಲಿ, ಸ್ವಲ್ಪವೂ ಅದಕ್ಕೆ ಗಮನ ಕೊಡಬೇಡಿ. ನಿಮ್ಮಲ್ಲಿರುವ ದೇವತ್ವವನ್ನು ಭಾವಿಸಿ, ಸಮಸ್ತ ಜಗತ್ತಿನಲ್ಲಿಯೂ ನೀವೇ ಅತ್ಯಂತ ಶ್ರೇಷ್ಠರೆಂದು ನಿಮ್ಮ ಆತ್ಮನು ಹೇಳುತ್ತದೆ.

೩೮. ಅಜ್ಞಾನದ ಅಂಧಕಾರ

(ಕತ್ತಲೆಯ ಕೋಣೆಯಲ್ಲಿ ನಡೆದಾಡುವವ)

ರಾತ್ರಿಯ ಕತ್ತಲೆಯಲ್ಲಿ, ದೀಪವನ್ನು ಹಚ್ಚಲು ಸಹ ಗತಿಯಿಲ್ಲದಷ್ಟು ಬಡವರಾದ ಜನರ ಗುಡಿಸಲುಗಳು ಇಂಡಿಯಾದಲ್ಲಿ ಇವೆ. ಆದರೆ, ಮಧ್ಯಮ ವರ್ಗದವರ ಒಂದು ಮನೆಯಲ್ಲಿ, ಒಂದು ರಾತ್ರಿ, ಏಕೋ ದೀಪವಿರಲಿಲ್ಲ. ಆ ಮನೆಯೊಳಗೆ ಕತ್ತಲೆಯಲ್ಲಿ ಓಡಾಡುತ್ತಿದ್ದ ಯಜಮಾನನು" "ಅಯ್ಯೋ! ಇಲ್ಲೀ ಮೇಜನ್ನು ಏಕೆ ಇಟ್ಟಿದ್ದೀರಿ? ಇದನ್ನು ಎಡವಿ ನನ್ನ ಕಾಲನ್ನು ಮುರಿದು ಕೊಂಡೆ; ಥೂ! ನಿಮ್ಮ! ಈ ಕುರ್ಚಿಯನ್ನು ಇಲ್ಲೆ ಇಡುವುದು? ನನ್ನ ಕೈಯೇ ಮುರಿದು ಹೋಯಿತಲ್ಲ! ಓಹೋ! ಈ ಬಾಗಿಲನ್ನೂ ತೆರೆದಿಟ್ಟಿದ್ದೀರಾ? ನನ್ನತಲೆಯೇ ಒಡೆದು ಹೋಯಿತು! ರಾಮ! ರಾಮ!......" ಎಂದು ರೇಗಾಡುತ್ತಿದ್ದನು. ಆದರೆ ಇದಕ್ಕೇನಾದರೂ ಪರಿಹಾರವಿದೆಯೆ? ಏನೂ ಇಲ್ಲ. ಏಕೆಂದರೆ ಕುರ್ಚಿ, ಮೇಜು ಮೊದಲಾದ ಆ ಸಾಮಾನುಗಳನ್ನು ಅದೇ ಕೋಣೆಯಲ್ಲಿ ಬೇರೆ ಸ್ಥಳಗಳಲ್ಲಿ ಇಟ್ಟರೂ ಅಲ್ಲಿಯೇ ಕತ್ತಲೆಯಲ್ಲಿ ಓಡಾಡುವ ಮನುಷ್ಯನು ತನ್ನ ಕೈಯನ್ನೋ ಕಾಲನ್ನೋ ಮುರಿದು ಕೊಳ್ಳಲೇ ಬೇಕು, ಗೋಡೆಗಾದರೂ, ಅವನು ತನ್ನ ತಲೆಯನ್ನು ಹೊಡೆದುಕೊಳ್ಳಲೇ ಬೇಕು. ಏಕೆಂದರೆ ಅವನಾ ಕಷ್ಟಕ್ಕೆ ಕತ್ತಲೆಯು ಕಾರಣವೇ ಹೊರತು ಆ ಸಾಮಾನುಗಳಾಗಲಿ ಅವುಗಳ ಇರಿಸುವಿಕೆಯಾಗಲಿ ಕಾರಣವಾಗಿಲ್ಲ.

ಪ್ರಪಂಚದಲ್ಲಿರುವ ಕಷ್ಟಗಳಿಗೆಲ್ಲಾ ಅಜ್ಞಾನವೇ ಕಾರಣ. ತಮ್ಮ ಸ್ವರೂಪವನ್ನೇ ತಾವು ತಿಳಿಯದಿರುವದು, ತಮ್ಮನ್ನು ತಾವು ಮರೆತು ಬೇರೆಯವರು ತಮ್ಮನ್ನು ತಿಳಿದಿರುವಂತೆ ತಿಳಿಯುವದು,—ಎಲ್ಲಿಯವರೆಗೆ ಈ ಅಜ್ಞಾನವಿದೆಯೋ ಮತ್ತು ಎಲ್ಲಿಯವರೆಗೆ ಮನುಷ್ಯ ತನ್ನ ದೇವತ್ವವನ್ನು ತಾನೇ ತಿಳಿಯುವದಿಲ್ಲವೋ ಅಲ್ಲಿಯವರೆಗೆ ಕಷ್ಟ ತಪ್ಪುವದೇ ಇಲ್ಲ.

ಅಜ್ಞಾನವೇ ಕತ್ತಲು. ಕತ್ತಲು ಕೋಣೆಯಲ್ಲಿ ಹೊಕ್ಕರೆ ಅಲ್ಲಿರುವ ಪದಾರ್ಥಗಳನ್ನು ಕಾಣದೆ ಕಾಲನ್ನೋ ತಲೆಯನ್ನೋ ಹೊಡಿಸಿಕೊಳ್ಳಲೇ ಬೇಕಾಗುತ್ತದೆ. ಆ ಪದಾರ್ಥಗಳನ್ನು ಅಲ್ಲಿಯೇ ಹೇಗೆ ಹೇಗೆ ಬದಲಾಯಿಸಿಟ್ಟರೂ ಕತ್ತಲೆ ಇರುವವರೆಗೂ ಈ ಕಷ್ಟ ತಪ್ಪುವದೇ ಇಲ್ಲ. ನೀವು ಸುಮ್ಮನೆ ದೀಪವನ್ನು ಹಚ್ಚಿ ಬೆಳಕು ಮಾಡಿದರೆ ಸಾಕು, ಆ ವಸ್ತುಗಳೆಲ್ಲಾ ಇದ್ದಲ್ಲಿಯೇ ಇರಲಿ; ಯಾವ ತೊಂದರೆಯೂ ಇಲ್ಲದೆ ಓಡಾಡಬಹುದು. ಪ್ರಪಂಚದಲ್ಲಿಯೂ ಹಾಗೇ. ನಿಮ್ಮ ಕಷ್ಟವನ್ನು ಕಳೆಯುವದಕ್ಕೆ ನಿಮ್ಮ ಸುತ್ತಲ ಪರಿಸರಗಳ ಹೊಸ ಹೊಂದಾಣಿಕೆಗಳನ್ನಾಗಲೀ ಜೀವನದ ಸ್ಥಾನಮಾನಗಳನ್ನಾಗಲೀ ಅವಲಂಬಿಸಬಾರದು. ಆದರೆ ನಿಮ್ಮೊಳಗಿನ ಆತ್ಮ ಸೂರ್ಯನನ್ನು ಹೊಂದಿಸಿಕೊಳ್ಳುವ ಪರಿಹಾರವನ್ನು ಮಾತ್ರ ಅವಲಂಬಿಸಬೇಕು. ಆದರೆ ಜನರು ಹಾಗೆ ಮಾಡುವದಿಲ್ಲ. ಕತ್ತಲೆ ಕೊಠಡಿಯಲ್ಲಿರುವ ಕುರ್ಚಿ ಮೇಜು ಮೊದಲಾದ

ಪೀಠೋಪಕರಣಗಳನ್ನು ಅಲ್ಲಿಯೇ ಬದಲಾಯಿಸಿಟ್ಟಂತೆ, ಪುನರ್ವ್ಯವಸ್ಥೆ ಮಾಡಿದಂತೆ ಪ್ರಪಂಚದಲ್ಲಿರುವ ವಸ್ತುಗಳ ಸ್ಥಿತಿಯನ್ನು ಬದಲಾಯಿಸುವದಕ್ಕೆ ಹೋಗುತ್ತಾರೆ. ಧನ ಸಂಗ್ರಹ ಮಾಡುವದರಿಂದಲೂ ಭವ್ಯವಾದ ಮನೆಗಳನ್ನು ಕಟ್ಟುವವರಿಂದಲೂ ಬೇರೆಯುವರ ಜಮೀನನ್ನು ತಾವು ಕೊಳ್ಳುವದರಿಂದಲೂ ಕಷ್ಟವನ್ನು ಕಳೆದುಕೊಳ್ಳುವದಕ್ಕೆ ಹೋಗುತ್ತಾರೆ. ಇದು ಕತ್ತಲೆಯ ಕೋಣೆಯಲ್ಲಿನ ವಸ್ತುಗಳನ್ನು ಅಲ್ಲಿಯೇ ಬದಲಾಯಿಸಿಟ್ಟಂತೆ ಸರಿ. ಕೊಠಡಿಯೊಳಗೆ ದೀಪವನ್ನು ಹಚ್ಚಿ ಬೆಳಕುಮಾಡಿ ಕತ್ತಲೆಯನ್ನು ಕಳೆದರೆ ಮಾತ್ರ ಅಪಾಯವು ತಪ್ಪುವಂತೆ ಹೃದಯದಲ್ಲಿ ಆತ್ಮಜ್ಞಾನವನ್ನು ಬೆಳಗಿದರೆ ಮಾತ್ರ ಕಷ್ಟವು ಪರಿಹಾರವಾಗುತ್ತದೆ.

೩೯. ಕತ್ತಲೆಯನ್ನು ಕಳೆಯುವ ಸಾಧನ ಜ್ಞಾನ ಜ್ಯೋತಿ

(ಕಾಡುಜನ–ಕತ್ತಲು ರಕ್ಕಸ)

ಸಹಸ್ರಾರು ವರ್ಷಗಳ ಹಿಂದೆ ಹಿಮಾಲಯದ ತಪ್ಪಲಲ್ಲಿ ಅನಾಗರಿಕರಾದ ಮೂಲ ನಿವಾಸಿಗಳ ಒಂದು ಜಾತಿ ಇದ್ದಿತು. ಅವರಿಗೆ ಬೆಂಕಿ ಎಂದರೆ ಏನೆಂಬುದೇ ಗೊತ್ತಿರಲಿಲ್ಲ. ಅವರು ಹಸಿ ಮಾಂಸವನ್ನೂ ಬಿಸಿಲಿನಲ್ಲಿ ಒಣಗಿಸಿದ ಮೀನುಗಳನ್ನೂ ಮಾಂಸಗಳನ್ನೂ ತಿನ್ನುತ್ತಿದ್ದರು. ಆಹಾರವನ್ನು ಬೆಂಕಿಯಿಂದ ಬೇಯಿಸುವದೇ ಅವರಿಗೆ ಗೊತ್ತಿರಲಿಲ್ಲ. ಸಂಜೆಯಾಗುವದರೊಳಗೆ ಮಲಗುತ್ತಿದ್ದರು. ಸೂರ್ಯನ ಜೊತೆಗೇ ಏಳುತ್ತಿದ್ದರು. ಆದ್ದರಿಂದ ವಾಸ್ತವವಾದ ಕತ್ತಲೆಯೊಡನೆ ಸೇರುವ ಅವಕಾಶವೇ ಅವರಿಗೆ ಬಂದಿರಲಿಲ್ಲ. ಅವರ ವಾಸದ ಸಮೀಪದಲ್ಲಿಯೇ ಒಂದು ದೊಡ್ಡ ಗುಹೆ ಇತ್ತು. ಆ ಗುಹೆಯಲ್ಲಿ ಸಹಸ್ರಾರು ವರ್ಷಗಳಿಂದಲೂ ಗಾಢವಾದ ಕತ್ತಲೆಯಿತ್ತು. ತಮ್ಮ ಪೂಜ್ಯರಾದ ಕೆಲವು ಹಿರಿಯರು ಅದರಲ್ಲಿ ವಾಸಮಾಡುತ್ತಿರುವರೆಂದು ಆ ಗುಹೆಯಲ್ಲಿ ಅವರಿಗೆ ಪೂಜ್ಯಭಾವನೆ ಇತ್ತು. ನಿಜವಾಗಿಯೂ ಅವರ ಕೆಲವು ಹಿರಿಯರು ಆ ಗುಹೆಯಲ್ಲಿ ಹೋಗಿ ಅದರ ಕತ್ತಲಲ್ಲಿಯೂ ಕೆಸರಿನಲ್ಲಿಯೂ ಸಿಕ್ಕಿಕೊಂಡು ಸತ್ತು ಹೋಗಿದ್ದರು. ಈ ಕಾಡು ಜನರಿಗೆ ಆ ಕತ್ತಲೆಯು ಭಯಂಕರ ರಾಕ್ಷಸನಂತೆ ಕಾಣುತ್ತಿತ್ತು. (ಸಭಿಕರು ನಗುವದಕ್ಕೆ ತೊಡಗಿದರು). ಇದು ಎಂಥಾ ಮೌಢ್ಯವೆಂದು ನೀವು ನಗುತ್ತೀರಿ. ಆದರೆ ಈಗಿನ ಜನ ಇದಕ್ಕಿಂತಲೂ ಹೆಚ್ಚು ಹಾಸ್ಯಾಸ್ಪದ ರೀತಿಯಲ್ಲಿ ನಡೆದುಕೊಳ್ಳುತ್ತಾರೆ. ಒಳ್ಳೆಯದು. ಆ ಕತ್ತಲು ರಾಕ್ಷಸನನ್ನು ಏನಾದರೂ ಮಾಡಿ ಅಲ್ಲಿಂದ ಅಟ್ಟಬೇಕೆಂದು ಆ ಜನರಿಗೆ ಭಾವನೆ ಬಂದಿತು. ಪೂಜ್ಯಭಾವದಿಂದ ಗುಹೆಯ ಮುಂದೆ ಹೋಗಿ ಪ್ರಾರ್ಥನೆ ಮಾಡಿದರೆ ಆ ರಾಕ್ಷಸನು ಗುಹೆಯನ್ನು ಬಿಟ್ಟು ಹೋಗಬಹುದೆಂದು ಯಾರೋ ಹೇಳಿದರು. ಈ ಜನರು ಹಾಗೆಯೇ ಹೋಗಿ ಭಯ ಭಕ್ತಿಯಿಂದ ಕತ್ತಲೆಯನ್ನು ಪೂಜಿಸಿ ಎಲ್ಲರೂ ದಂಡ ನಮಸ್ಕಾರ ಹಾಕಿ ಬಹಳ ವರ್ಷಗಳು ಹೀಗೆಯೇ ಪ್ರಾರ್ಥನೆ ಸಲ್ಲಿಸಿದರು. ಆದರೆ ಆ ರಾಕ್ಷಸನು ಗುಹೆಯನ್ನು ಬಿಡಲೇ ಇಲ್ಲ. ಅನಂತರ ಯಾರೋ ಹೇಳಿದರು, ಪ್ರಾರ್ಥನೆಗೆ ಅವನು ಬಗ್ಗುವುದಿಲ್ಲ

ಅವನೊಡನೆ ಧೈರ್ಯದಿಂದ ಯುದ್ಧ ಮಾಡಿಯೇ ಓಡಿಸಬೇಕು—ಎಂದು. ಸರಿ, ಈ ಜನರೂ ಎಲ್ಲರೂ ಸೇರಿ ಬಾಣಗಳನ್ನೂ ದೊಣ್ಣೆಗಳನ್ನೂ ಕಲ್ಲುಗಳನ್ನೂ ತೆಗೆದು ಕೊಂಡು ಹೋಗಿ ಕತ್ತಲೆಯ ಮೇಲೆ ಪ್ರಯೋಗ ಮಾಡಿದರು. ಕತ್ತಲೆಯನ್ನು ದೊಣ್ಣೆಗಳಿಂದ ಎಷ್ಟು ಹೊಡೆದರೂ ಅದು ಹೋಗಲೇ ಇಲ್ಲ. ಕೆಲವು ದಿನಗಳ ಮೇಲೆ ಉಪವಾಸ ಮಾಡಿದರೆ ಮತ್ತು ದಾನ ಧರ್ಮಗಳನ್ನು ಮಾಡಿದರೆ ಅಂಧಕಾಸುರನ ವಧೆಯಾಗುವದೆಂದು ಮತ್ತೆ ಯಾರೋ ಹೇಳಿದರು. ಆ ಕಾಡು ಜನರು ಅತಿ ಶ್ರದ್ಧೆಯಿಂದ ಎಷ್ಟೋ ದಿನ ಉಪವಾಸಗಳನ್ನು ಮಾಡಿದರು, ಹಾಗೆಯೇ ತಮ್ಮಲ್ಲಿರುವ ದನ್ನೆಲ್ಲಾ ದಾನ ಮಾಡಿದರು. ಆದರೂ ಆ ಕಾಳಕತ್ತಲೆಯು ಸ್ವಲ್ಪವೂ ಕಡಿಮೆ ಯಾಗಲಿಲ್ಲ. ಕೊನೆಗೆ ಒಬ್ಬ ಜಾಣನು ಕೆಲವು ಬೊಂಬುಗಳನ್ನು ತೆಗೆದುಕೊಂಡು ಬಂದನು. ಅವಕ್ಕೆ ಒಣಗಿದ ಹುಲ್ಲನ್ನು ಹೊಸೆದು ಹಗ್ಗ ಮಾಡಿ ಕೂಡಿಸಿ ಕಟ್ಟಿದರು. ಬೊಂಬುಗಳ ತುದಿಗೆ ತುಂಬಾ ಒಣಗಿದ ಹುಲ್ಲನ್ನೂ ಸೊಪ್ಪುಗಳನ್ನೂ ಕಟ್ಟಿಸಿ ಅದರ ಮೇಲೆ ಮೀನಿನ ಎಣ್ಣೆಯನ್ನು ಸುರಿಸಿದರು. ಬೆಣಚು ಕಲ್ಲುಗಳನ್ನು ಚಕಮುಕಿ ಕಲ್ಲುಗಳನ್ನೂ ಅವನು ಒಂದರಿಂದ ಇನ್ನೊಂದನ್ನು ಹೊಡೆದು ಕಿಡಿಗಳನ್ನು ಹುಟ್ಟಿಸಿ ಬೊಂಬುಗಳ ತುದಿಯ ಹುಲ್ಲಿಗೆ ಬೆಂಕಿ ಹಚ್ಚಿದನು. ಹುಲ್ಲು ಸೊಪ್ಪುಗಳೂ ಬೆಂಕಿ ಹತ್ತಿಕೊಂಡು ಬೊಂಬು ದೊಡ್ಡದಾಗಿ ಉರಿಯುವದಕ್ಕೆ ತೊಡಗಿತು. ಆ ಜನರಿಗೆ ಇದು ಬಹಳ ವಿಲಕ್ಷಣವಾಗಿಯೂ ಆಶ್ಚರ್ಯವಾಗಿಯೂ ತೋರಿತು. ಆ ಜನರಿಗೆ ದೊಂದಿಯನ್ನು ತೆಗೆದುಕೊಂಡು ಗುಹೆಯೊಳಗೆ ನುಗ್ಗಿ ಹೋಗಲು ಹೇಳಿದನು. ಆ ಕತ್ತಲು ರಾಕ್ಷಸನು ಸಿಕ್ಕರೆ ಅವನ ಕಿವಿ ಹಿಡಿದು ಎಳೆದುಕೊಂಡು ಬರಲು ಹೇಳಿದನು. ಆದರೆ ಆ ಜನರು ಇವನ ವಾದವನ್ನು ನಂಬಲಿಲ್ಲ. ಏಕೆಂದರೆ ಪೂಜೆ ಮಾಡಿದರೆ, ಪ್ರಾರ್ಥನೆ ಮಾಡಿದರೆ, ಉಪವಾಸ ಮಾಡಿದರೆ, ದಾನ ಧರ್ಮ ಮಾಡಿದರೆ ಆ ರಾಕ್ಷಸನು ಗುಹೆಯಿಂದ ತೊಲಗುವನೆಂದು ಅವರ ಅಜ್ಜ ಮುತ್ತಜ್ಜಂದಿರು ಹೇಳಿದ್ದರು. ಅವರೆಲ್ಲರೂ ಎಷ್ಟೋ ವರ್ಷಗಳು ಆ ಎಲ್ಲಾ ಸಾಧನೆಗಳನ್ನೂ ಮಾಡಿದ್ದರು. ಆದರೂ ಪ್ರಯೋಜನವಾಗಲಿಲ್ಲ. ಆದ್ದರಿಂದ ಈಗ ಈ ಹೊಸಬ ಬಂದು ಇದೇನೋ ಹೇಳುವದೂ ಉಪಯೋಗವಾಗಲಾರದು ಎಂದು ಕೆಲವರು ಬೆಂಕಿಯನ್ನೇ ಆರಿಸತೊಡ ಗಿದರು. ಆದರೆ ಅವರಲ್ಲಿಯೇ ಮತ್ತೆ ಕೆಲವರು ಪರೀಕ್ಷೆ ಮಾಡೋಣವೆಂದು ಆ ಪ್ರದೀಪವನ್ನು ಕೈಯಲ್ಲಿ ಹಿಡಿದು ಗುಹೆಯೊಳಗೆ ರಭಸದಿಂದ ನುಗ್ಗಿದರು. ಆದರೆ, ಓಹೋ! ಆ ರಾಕ್ಷಸನು ಅಲ್ಲಿರಲೇ ಇಲ್ಲ. ಆ ಉದ್ದವಾದ ಗುಹೆಯಲ್ಲಿ ಅವರು ಮುಂದೆ ಮುಂದೆ ಓಡಿದರು. ಕೊನೆಯುವರೆಗೆ ಹೋದರೂ ಅವನು ಕಾಣಲೇ ಇಲ್ಲ. ಅವನು ಅಡಗಿರಬಹುದೆಂದು ಅಲ್ಲಿರುವ ತೂತುಗಳಲ್ಲೆಲ್ಲಾ ಬೆಂಕಿಯನ್ನು ತುರುಕಿ ನೋಡಿದರು, ಎಲ್ಲಿಯೂ ಇಲ್ಲ. ಆ ಕತ್ತಲು ದೈತ್ಯನು ಅಲ್ಲಿ ಎಂದೂ ಇರಲೇ ಇಲ್ಲ ಎಂಬಂತಾಯಿತು.

ಹಾಗೆಯೇ ಅಜ್ಞಾನವೆಂಬ ಅಂಧಕಾರ ರಾಕ್ಷಸನು ನಿಮ್ಮ ಹೃದಯಗಳೊಳಗೆ

ಹೊಕ್ಕು ಬಹು ಕಾಲದಿಂದ ಅಲ್ಲಿ ಹಾವಳಿ ಮಾಡುತ್ತಾ ಅದನ್ನು ನರಕವಾಗಿ ಮಾಡಿದ್ದಾನೆ. ಎಲ್ಲಾ ಚಿಂತೆಯೂ ಕಳವಳವೂ ದುಃಖವೂ ನೋವೂ ನಿಮ್ಮೊಳಗೇ ಇವೆ: ಅವು ಹೊರಗಿಲ್ಲ.

ನಿಮ್ಮೊಳಗಿರುವ ಕತ್ತಲೆಯನ್ನು ನೀವೇ ಕಳೆಯುವುದಕ್ಕೆ ಪ್ರಯತ್ನ ಮಾಡಿದ ಹೊರತು ಮುನ್ನೂರು ಮೂವತ್ತಮೂರು ಕೋಟಿ ಕ್ರಿಸ್ತರೂ ಕೃಷ್ಣರೂ ಬುದ್ಧರೂ ಪ್ರಪಂಚದಲ್ಲಿ ಅವತರಿಸಿದರೂ ಪ್ರಯೋಜನವಿಲ್ಲ. ಈ ಮತವನ್ನೋ ಆ ಮತವನ್ನೋ ಸೇರುವದರಿಂದಲೂ ಕ್ರಿಸ್ತನನ್ನೋ ಕೃಷ್ಣನನ್ನೋ ಪೂಜಿಸುವದರಿಂದಲೂ ನಾವೇ ಕಲ್ಪಿಸಿಕೊಂಡಿರುವ ದೇವತೆಗಳನ್ನು ಸೇವಿಸುವದರಿಂದಲೂ ನಮ್ಮ ದುಃಖ ನಿವಾರಣೆಯಾಗುವದಿಲ್ಲ. ಏನು ಮಾಡಿದರೂ ಲಾಭವಿಲ್ಲ. ಒಂದೇ ಪರಿಹಾರವೆಂದರೆ ಪ್ರಕಾಶ. ಜೀವಂತವಾದ ಜ್ಞಾನವೇ ಬೆಳಕು. ನಿಮ್ಮ ದೇವತ್ವದಲ್ಲಿ ಜೀವಂತ ವಿಶ್ವಾಸ, ನಂಬಿಕೆ, ಇದೊಂದೇ ಚಿಕಿತ್ಸೆ. ಬೇರೆ ಯಾವದೂ ಇಲ್ಲ. ತೋರಿಕೆಯ ಈ ಎಲ್ಲಾ ದೇಹಗಳೂ ನಾಮರೂಪಗಳೂ ಕ್ಷೀಣಿಸಿ ಶೂನ್ಯವಾಗುವಷ್ಟು, ಕಾಣದಾಗುವಷ್ಟು ತೀವ್ರವಾಗಿ ಸತ್ಯವನ್ನು ಅನುಭವ ಮಾಡುವದೇ ಬೆಳಕು. ಅನುಭವಿಯಾದ ಜ್ಞಾನಿ ಯಾರಲ್ಲಿಯೂ ಅವನ ವ್ಯಕ್ತಿತ್ವವನ್ನು—ಅಹಂಕಾರವನ್ನು—ನೋಡುವದೇ ಇಲ್ಲ. ಅವನಿಗೆ ಈ ತೋರಿಕೆಯ ರೂಪವೂ ದೇಹವೂ ವ್ಯಕ್ತಿಯೂ ಮಾಯೆ, ಕತ್ತಲು, ಅಜ್ಞಾನ. ಅಜ್ಞಾನವನ್ನು ಕಳೆಯುವದೆಂದರೆ ದೇವರನ್ನು ನೋಡುವದು; ನಿಜವಾದ ಆತ್ಮವನ್ನು ನೋಡುವದು, ಸತ್ಯವನ್ನು ನೋಡುವದು; ಇದೇ ಎಲ್ಲಾ ಭಯ-ಸಂಶಯ-ಚಿಂತಾ-ದುಃಖಗಳ ಬಿಡುಗಡೆ, ವಿಮೋಚನೆ. ಬೇರೆಯವರ ದೃಷ್ಟಿಯಿಂದ ಶತ್ರುವಾದವರೂ ಮಿತ್ರರಾದವರೂ ಎಲ್ಲಾ ನನ್ನ ನಿಜವಾದ ಆತ್ಮವೇ. ಹೊರಗಿನ ವ್ಯಕ್ತಿಯನ್ನೂ ಸಣ್ಣ ಅಹಂಕಾರವನ್ನೂ ನೋಡಬೇಡಿ. ಎಲ್ಲರಲ್ಲಿಯೂ ನಿಮ್ಮಲ್ಲಿಯೂ ಎಲ್ಲೆಲ್ಲಿಯೂ ದೇವತ್ವವನ್ನೇ ನೋಡಿ; ಇದೇ ಪ್ರಕಾಶ. ಅದನ್ನೇ ಭಾವಿಸಿರಿ, ಸಾಧಿಸಿರಿ, ಜೀವಿಸಿರಿ, ಎಲ್ಲಾ ಕಷ್ಟಗಳೂ ತೊಂದರೆಗಳೂ, ಅಡ್ಡಿಗಳೂ ಅಡ್ಡಗೋಡೆಗಳೂ ಅಡಚಣೆಗಳೂ ಮಾಯವಾಗುತ್ತವೆ. ಆಹಾ! ಎಂಥಾ ದಿವ್ಯದೃಷ್ಟಿ! ಎಂಥಾ ಸತ್ಯ! ಎಂಥಾ ಭವ್ಯವಾದ ವಾಸ್ತವಿಕೆ! ಅದನ್ನು ವಿವರಿಸಲಾಗುವದಿಲ್ಲವಲ್ಲಾ ಎಂದು ವಿಷಾದವಾಗುತ್ತದೆ. ಯಾವ ಶಬ್ದಗಳೂ ಅದನ್ನು ಮುಟ್ಟುವದಿಲ್ಲ. ಆದರೂ ಅದು ಪರಮ ಸತ್ಯ. ನೀವು ಸುಮ್ಮನೇ ಅದನ್ನು ತೀವ್ರವಾಗಿ ಬಯಸಿದರೆ, ಅದಕ್ಕಾಗಿ ಮನಃಪೂರ್ವಕ ಕಾತರಿಸಿದರೆ ಅದು ನಿಮ್ಮಲ್ಲಿ ಬರುತ್ತದೆ.

೪೦. ತಪ್ಪಾದ ವಿಚಾರ

(ಹುಚ್ಚು ಮುದುಕಿ ಮತ್ತು ಕೋಳಿ)

ಒಂದಾನೊಂದು ಕಾಲದಲ್ಲಿ ಒಂದು ಸಣ್ಣ ಹಳ್ಳಿಯಲ್ಲಿ ಒಂದು ಹುಚ್ಚು ಮುದುಕಿ ಇದ್ದಿತು. ಅವಳೊಂದು ಕೋಳಿಯನ್ನು ಸಾಕಿದ್ದಳು. ತಿಕ್ಕಲು ಮುದುಕಿಯೊಂದು

ಜನರು ಆಕೆಯನ್ನು ತಮಾಷೆ ಮಾಡುತ್ತಿದ್ದರು. ಬಗೆ ಬಗೆಯಿಂದ ಜನರು ಆಕೆಯನ್ನು ಗೇಲಿ ಮಾಡಿ ರೇಗಿಸುತ್ತಿದ್ದುದರಿಂದ, ಆಕೆ, ಅವರಿಗೆ ಹೇಳಿದ್ದೇನೆಂದರೆ, "ಲೇ ಬೈರಣ್ಣ! ಬೋರಣ್ಣ ! ಭೂತಣ್ಣ ! ನೀವು ನನ್ನನ್ನು ಬಹಳವಾಗಿ ಕಾಡುತ್ತಿದ್ದೀರಿ; ನಾನು ಒಳ್ಳೆಯವಳಲ್ಲ ; ನೋಡಿ, ಎಚ್ಚರವಾಗಿರಿ ; ನಿಮಗೆ ಸರಿಯಾದ ಶಿಕ್ಷೆಯನ್ನು ಕೊಡುತ್ತೇನೆ. ನಾನೇನೂ ಸಾಮಾನ್ಯಳೆಂದು ತಿಳಿಯಬೇಡಿ, ಈ ಸೇಡು ತೀರಿಸಿಕೊಂಡು ನಿಮಗೆ ಬುದ್ಧಿ ಕಲಿಸುತ್ತೇನೆ ಹುಷಾರ್!

"ಮುಕ್ಕಿ ! ನೀನೇನು ಮಾಡಬಲ್ಲೆ ?" ಎಂದವರು ಕೇಳಿದರು.

ಮುದುಕಿ "ಈ ನಿಮ್ಮೂರಿನಲ್ಲಿ ಸೂರ್ಯನೇ ಮೂಡದಂತೆ ಮಾಡುತ್ತೇನೆ."

ಜನರು ! "ಅದು ಹೇಗೆ ಮಾಡುತ್ತಿ ?"

ಮುದುಕಿ : "ನಿತ್ಯವೂ ಇಲ್ಲಿ, ನನ್ನ ಕೋಳಿ ಕೂಗಿದಾಗಲೇ ಸೂರ್ಯನು ಮೂಡುತ್ತಿದ್ದಾನೆ. ನೀವು ಹೀಗೆ ನನ್ನನ್ನು ಲೇವಡಿ ಮಾಡುತ್ತಿದ್ದರೆ (ನನಗೇನೂ ಮರ್ಯಾದೀ ಇಲ್ವಾ?) ನನ್ನ ಕೋಳಿಯನ್ನು ಬೇರೆ ಹಳ್ಳಿಗೆ ಒಯ್ಯುತ್ತೇನೆ. ಆಗ, ನೋಡಿಕೊಂಡಿರಿ, ಇಲ್ಲಿ ಸೂರ್ಯನೇ ಹುಟ್ಟುವುದಿಲ್ಲ. ಹೀಗೆ ನಿಮಗೆ ತಕ್ಕ ಶಾಸ್ತಿ ಮಾಡ್ತೇನಿ."

ನಿತ್ಯವೂ ಅವಳ ಕೋಳಿ ಕೂಗಿದಾಗಲೇ ಸೂರ್ಯ ಉದಯಿಸುತ್ತಿದ್ದುದು ನಿಜ; ಆದರೆ, ಆ ಕೋಳಿಯ ಕೂಗು ಸೂರ್ಯೋದಯಕ್ಕೇನೂ ಕಾರಣವಾಗಿರಲಿಲ್ಲ, ಖಂಡಿತ ಅಲ್ಲ. ಆದರೂ ಅದೇ ಕಾರಣವೆಂಬುದು ಆಕೆಯ ಭ್ರಮೆಯಾಗಿತ್ತು. ಅವಳು ಆ ಹಳ್ಳಿಯನ್ನು ಬಿಟ್ಟು, ಕೋಳಿಯನ್ನು ಬೇರೆ ಹಳ್ಳಿಗೆ ಒಯ್ದಳು. ಅದು ಅಲ್ಲಿಯೂ ಕೂಗಿತು! ಸೂರ್ಯೋದಯವೂ ಆಯಿತು. ಆದರೆ, ಅವಳು ಬಿಟ್ಟು ಬಂದ ಹಳ್ಳಿಯ ಮೇಲೂ ಸೂರ್ಯನು ಉದಿಸಿದನು.

ಹೀಗೆ ನಿಮ್ಮ ಬಯಕೆಗಳ ಹಂಬಲಗಳೂ ಕಕ್ಕುಲತೆಗಳೂ ಕೋಳಿಯ ಕೂಗಿನಂತಿವೆ; ಮತ್ತು ನೀವು ಬಯಸಿದ ವಸ್ತುಗಳು ನಿಮ್ಮ ಕಣ್ಣ ಮುಂದೆ ಬರುವುದು ಸೂರ್ಯೋದಯದಂತಿವೆ. ಬಯಕೆಯ ವಸ್ತುಗಳ ತೃಷ್ಣೆಯನ್ನೂ ಹಂಬಲಗಳನ್ನೂ ಉಂಟು ಮಾಡತಕ್ಕವನೂ ಆಳತಕ್ಕವನೂ ನಿಯಮ ಮಾಡತಕ್ಕವನೂ ಒಳಹೊರಗಿನ ಸಕಲವನ್ನು ಬೆಳಗತಕ್ಕ ಆ ಒಬ್ಬ ಆತ್ಮಸೂರ್ಯನೇ. ಮುಂಜಾನೆ–ಸಂಜೆಗಳನ್ನೂ ಹಗಲು ರಾತ್ರಿಗಳನ್ನೂ ಉಂಟು ಮಾಡತಕ್ಕವನು ನಿಜವಾದ ಆ ಸೂರ್ಯನೇ. ಪ್ರಾಪಂಚಿಕವಾದ ಸಮಸ್ತ ವ್ಯವಹಾರಗಳನ್ನೂ ಪ್ರೇರಿಸತಕ್ಕವನೂ ಪೋಷಿಸತಕ್ಕವನೂ ನಿಯಂತ್ರಿಸತಕ್ಕವನೂ ಅನಂತವಾದ ನಿಜಾತ್ಮನೆ. ಪ್ರಕಾಶಗಳಿಗೆಲ್ಲಾ ಪ್ರಕಾಶನಾದ ಸೂರ್ಯರ ಸೂರ್ಯನೇ ತೋರಿಕೆಯ ಸೂತ್ರಚಾಲಕನನ್ನು ತನ್ನ ವಶದಲ್ಲಿಟ್ಟು ಕೊಂಡಿದ್ದಾನೆ. ಇದನ್ನು ನೆನಪಿಡಿ.

ಹಸಿದು ಹಂಬಲಿಸುವ ಸ್ವಾರ್ಥಮಯವಾದ ಕ್ಷುದ್ರ ಅಹಂಕಾರಕ್ಕೆ ಈ ಎಲ್ಲವನ್ನೂ

ಜನರು ಆರೋಪಿಸುತ್ತಾರೆ ; ಆ ತಪ್ಪನ್ನು ಮಾತ್ರ ನೀವು ಮಾಡಬೇಡಿ ; ಆದ್ದರಿಂದ ದಯವಿಟ್ಟು ದೂರವಿರಿ.

೪೧. ಶಾಸ್ತ್ರದ ತಪ್ಪಾದ ವ್ಯಾಖ್ಯಾನ

(ಮದ್ಯ ಮಾರುವವನ ಮಗ)

ಇಂಡಿಯಾದಲ್ಲಿ ಮದ್ಯಮಾರುವವನ ಮಗನಾದ ಒಬ್ಬ ಬಾಲಕ ಶಾಲೆಯಲ್ಲಿ ಇಂಗ್ಲಿಷ್ ಭಾಷೆಯನ್ನು ಕಲಿಯುತ್ತಿದ್ದ. ಅಲ್ಲಿ ಮಿಷನರಿ ಸ್ಕೂಲ್‌ಗಳಲ್ಲಿ ಮೊದಲು ಬೈಬಲ್ ಗ್ರಂಥವನ್ನೇ ಕಲಿಸುತ್ತಾರೆ. ಒಂದು ದಿನ ಅದರಲ್ಲಿ,

"The Spirit of God brooded over the waters," ಎಂಬೀ ವಾಕ್ಯ ಬಂದ ಕೂಡಲೇ ಅವನಿಗೆ ದಿಗ್‌ಭ್ರಮೆ ಆಯಿತು. ಅವನಿಗೆ Spirit ಎಂಬ ಶಬ್ದವೂ Brooded ಎಂಬ ಶಬ್ದವೂ waters ಎಂಬ ಶಬ್ದವೂ ಚೆನ್ನಾಗಿ ಗೊತ್ತಿತ್ತು, ಆದರೆ, God ಎಂಬ ಶಬ್ದವು ಅವನಿಗೆ ತಿಳಿದಿರಲಿಲ್ಲ.

"The Spirit of God brooded," God ಎಂದರೆ ಬಾರ್ಲಿ, ಧಾನ್ಯ, ದ್ರಾಕ್ಷಿಗಳು ಇವುಗಳಲ್ಲಿ ಯಾವದಿರಬಹುದು? ಬಾರ್ಲಿಯಿಂದ ಅಥವಾ ಧಾನ್ಯದಿಂದ ಅಥವಾ ದ್ರಾಕ್ಷಿಗಳಿಂದ ಮದ್ಯವನ್ನು ತಯಾರಿಸುವುದು ನನಗೆ ಗೊತ್ತಿದೆ. ಆದರೆ, ಇದೇನು ? Spirit of God ಎಂಬೀ ವಿಚಿತ್ರವಾದ ಹೆಂಡ ಯಾವದಿರಬಹುದು ?" ಎಂದು ಬಾಲಕ ಆಲೋಚಿಸಿದನಂತೆ. ಏಕೆಂದರೆ, ತನ್ನ ತಂದೆಯು "Alcoholic Spirits" ಸಾರಾಯಿಯನ್ನು ನೀರಿನೊಂದಿಗೆ ಬೆರೆಸುವದನ್ನು ಅವನು ಕಂಡಿದ್ದನು. 'Spirit of God' ಎನ್ನುವುದನ್ನು ಅವನ ತಿಳಿವಳಿಕೆಯ ಮಟ್ಟದಲ್ಲಿ ಅವನು ಅರ್ಥ ಮಾಡಿಕೊಂಡನು.

ಜನರು ಅತಿಯಾಗಿ ಯಾವದಾದರೊಂದು ಬಗೆಯ ಹೆಂಡದಂಗಡಿಯಲ್ಲಿಯೇ ಇರುವದರಿಂದ–ಅತಿಯಾಗಿ ಭೌತಿಕವಿಷಯ ಗಳಲ್ಲಿಯೇ ಆಸಕ್ತರಾಗಿರುವದರಿಂದ–ಪವಿತ್ರವಾದ ಶಾಸ್ತ್ರಗಳನ್ನೂ ಅವರವರ ಸಂಕುಚಿತ ಸಂಸ್ಕಾರಗಳಿಗೆ ಅನುಗುಣವಾಗಿಯೇ ಅರ್ಥ ಮಾಡುತ್ತಾರೆ.

೪೨. ನಿತ್ಯ ಪ್ರಾಪ್ತವಾಗಿ, ಸ್ವರೂಪವೇ ಆದ ಮುಕ್ತಿಯು ಅಜ್ಞಾನದಿಂದ ಕಳೆದು ಕೊಂಡಿರುವಂತೆಯೂ ಜ್ಞಾನದಿಂದ ಹೊಸದಾಗಿ ದೊರೆಯುವಂತೆಯೂ ಆಗುತ್ತದೆ.

(ತಿರುಗಿ ಪಡೆದ ಮರೆತ ಹಾರ)

ಒಬ್ಬ ಹೆಂಗಸಿನ ಕೊರಳಲ್ಲಿ ಒಂದು ಅನರ್ಘವಾದ ರತ್ನಮಾಲೆ ಇತ್ತು. ರಾತ್ರಿ ಮಲಗಿದಾಗ ಆಕೆಯ ಬೆನ್ನಮೇಲೆ ಅದು ಜಾರಿ ಸರಿದಿತ್ತು. ಬೆಳಿಗ್ಗೆ ಎದ್ದು ಮನೆಗೆಲಸ ಮಾಡುವಾಗ ನಿತ್ಯವೂ ಕೊರಳಲ್ಲಿ ಎದೆಯ ಮೇಲೆ ಜೋಲಾಡುತ್ತಿದ್ದ ಸರವು ಆ ದಿನ ಕಾಣದಾಗಲು ಆಕೆಯು ಗಾಬರಿಯಾಗಿ ಮನೆಯೆಲ್ಲಾ ಹುಡುಕಿ ದೊರಕದೆ

ಅಳುವದಕ್ಕೆ ತೊಡಗಿದಳು. ಆಕೆಯ ನೆರೆಮನೆಯ ಗೆಳತಿಯು ಯಾವದೋ ಕೆಲಸಕ್ಕಾಗಿ ಆ ಮನೆಗೆ ಬಂದವಳು ಈಕೆಯ ಶೋಕಕ್ಕೆ ಕಾರಣವನ್ನು ಕೇಳಿ, ಕಂಠಹಾರವು ಕಳೆದಿದೆಯೆಂಬದನ್ನು ತಿಳಿದು, ಆಕೆಯ ಕೊರಳನ್ನು ನೋಡಿದಳು. ಅದು ಅಲ್ಲಿಯೇ ಜಾರಿ ಹಿಂದೆ ಸರಿದಿರುವದನ್ನು ನೋಡಿ ಆ ಗೆಳತಿಯು ಆಕೆಗೆ ತೋರಿಸಿದಳು. ಆಕೆಯು ವಿಸ್ಮಯ ಸಂತೋಷದಿಂದ ತನ್ನ ಹಾರವನ್ನು ಕೈಯಿಂದ ಮುಟ್ಟಿ ನೋಡಿಕೊಂಡು ಸರಿಮಾಡಿಕೊಂಡಳು. ನಿಜವಾಗಿ ನೋಡಿದರೆ, ಆ ಸರವನ್ನು ಆಕೆಯು ಕಳೆದು ಕೊಂಡೂ ಇರಲಿಲ್ಲ. ಅದನ್ನು ಹೊಸದಾಗಿ ಪಡೆಯಲೂ ಇಲ್ಲ. ಆದರೆ ಅದನ್ನು ಆಕೆ ಮರೆತಿದ್ದಳು; ಯಾವಾಗಲೂ ಅದು ಆಕೆಯ ಕೊರಳಲ್ಲಿಯೇ ಇದ್ದಿತು. ಹೀಗೆಯೇ ನಿಮ್ಮ ನಿಜವಾದ ಆತ್ಮನು–'ನಾನಿದ್ದೇನೆ' ಎಂಬ ಆತ್ಮನು—ಹಿಂದೂ ಇಂದೂ ಮುಂದೂ ಎಂದೆಂದೂ ಒಂದೇ ರೂಪವಾಗಿದ್ದಾನೆ. ಆದರೆ ಮನಸ್ಸು, ಬುದ್ಧಿಯು ಅಜ್ಞಾನವನ್ನು ಕಳೆದುಕೊಳ್ಳಬೇಕಾಗಿದೆ. ಆ ಅಮೂಲ್ಯ ರತ್ನ ಮಾಲೆಯು ಸಿಕ್ಕಿತೆಂದು ನಂಬುವಂತೆ ನೀವು ಮುಕ್ತಿಯನ್ನು ಪಡೆಯುತ್ತೀರಿ, ಪಡೆದಿರಿ ಎನ್ನಬಹುದು. ಎಂದೂ ಕಳೆಯದಿದ್ದ ರತ್ನಮಾಲೆಯು ನಿಮಗೆ ಸಿಕ್ಕಿತೆಂದು ಹೇಳುವಂತೆ ಮೋಕ್ಷಪ್ರಾಪ್ತಿಯ ವ್ಯವಹಾರವೂ ಇದೆ.

೪೩. ಒಳಗಿನ ದೌರ್ಬಲ್ಯ

(ಗುರುತ್ವಾಕರ್ಷಣ ಶಕ್ತಿಯಲ್ಲಿ ದೋಷಾರೋಪಣೆ)

ಒಬ್ಬ ಮನುಷ್ಯನು ಮೇಲಿನಿಂದ ಬಿದ್ದು ಕಾಲನ್ನು ನೋಯಿಸಿಕೊಂಡು, ಅದಕ್ಕೆ ಗುರುತ್ವಾಕರ್ಷಣ ಶಕ್ತಿಯೇ ಕಾರಣವೆಂದು ಅದರಲ್ಲಿ ತಪ್ಪನ್ನು ಹುಡುಕಿ, ಉದ್ವಿಗ್ನನಾಗಿ "ಓ ಬಿಕನಾಸಿ ಗುರುತ್ವಾಕರ್ಷಣ ನಿಯಮವೇ! ನೀನು ನನ್ನನ್ನು ಬೀಳುವಂತೆ ಮಾಡಿದೆ, ಹಾಳಾಗು." ಎಂದು ನಿಂದಿಸಿದನು. ಆದರೆ ಗುರುತ್ವಾಕರ್ಷಣನಿಯಮವು ಹಾಳಾಗುವದಕ್ಕಿಂತಲೂ ಲಕ್ಷಾಂತರ ಜನರು ಬಿದ್ದು, ಕಾಲು ಮುರಿದುಕೊಂಡು, ಹಾಳಾಗುವದು ಹೆಚ್ಚು ಉತ್ತಮವಾದುದು. ಆದ್ದರಿಂದ ಪ್ರಕೃತಿ ನಿಯಮಗಳ ಜೊತೆಗೆ ಹೋರಾಟಕ್ಕೆ ಹೋಗದೆ, ಎಚ್ಚರಿಕೆಯಿಂದ ನಡೆಯುತ್ತಿದ್ದರೆ, ನೀವು ಬೀಳುವದಿಲ್ಲ. ನಿಮ್ಮ ಎಲ್ಲಾ ಪತನಕ್ಕೂ ಗಾಯಗಳಿಗೂ ನೋವುಗಳಿಗೂ ಚಿಂತೆಗಳಿಗೂ ತೊಂದರೆಗಳಿಗೂ ನಿಮ್ಮೊಳಗಿರುವ ಏನೋ ಒಂದು ದೋಷವೇ–ದೌರ್ಬಲ್ಯವೇ- ಕಾರಣವು. ಸನ್ನಿವೇಶಗಳೊಡನೆ ಯುದ್ಧಕೆ ಹೋಗದೆ, ಜನರನ್ನು ದೂಷಿಸದೆ, ಇನ್ನೊಬ್ಬರ ಮೇಲೆ ತಪ್ಪನ್ನು ಹೊರಿಸದೆ, ನಿಮ್ಮಲ್ಲಿರುವ ದೌರ್ಬಲ್ಯವನ್ನು ನೀವು ಕಳೆದುಕೊಳ್ಳಿ. ಯಾವಾಗ ನಿಮಗೆ ಯಾವ ಕಷ್ಟ ಬಂದರೂ ನಿಮ್ಮಲ್ಲಿರುವ ಯಾವದೊಂದು ದೋಷವೇ ಅದಕ್ಕೆ ಕಾರಣವೆಂದು ತಿಳಿಯಿರಿ. ಇದನ್ನು ನೆನಪಿಟ್ಟುಕೊಂಡು ವರ್ತಿಸಬೇಕೇ ಹೊರತು ಪ್ರಕೃತಿ ನಿಯಮಗಳ ಜೊತೆಗೆ ಹೊಡೆದಾಡಬಾರದು.

೪೪. ವಿನಾಶಕ್ಕೆ ಅವಿವೇಕವೇ ಕಾರಣ
(ಮದ್ಯಪಾಯಿಗಳ ಅವಿವೇಕ)

ಮದ್ಯಪಾಯಿಗಳಾದ ಇಬ್ಬರು ಅಮಲೇರಿದ ಸಮಯದಲ್ಲಿ ಏನೇನೋ ವಿಚಿತ್ರ ವಾದ ಅನುಭವಗಳನ್ನು ಕಾಣುತ್ತಾ ಅದರಲ್ಲಿ ಒಬ್ಬನು "ಅಯ್ಯೋ ಅಣ್ಣಾ, ನನ್ನ ದೇಹದಿಂದ ಪ್ರಾಣವು ಹೊರಟು ಹೋಗುತ್ತಾ ಇದೆ", ಎಂದು ಹೇಳಿದ. ಇನ್ನೊಬ್ಬನು, ಅವನ ಪ್ರಾಣವು ಪಾಪ! ಹೊರಗೆ ಹೋಗಿಬಿಡಬಾರದೆಂದು, ಒಳಗೇ ಇರಬೇಕೆಂದು, ಅವನ ಮೂಗನ್ನೂ ಬಾಯಿಯನ್ನೂ ಕಿವಿಗಳನ್ನೂ ಬಿಗಿಯಾಗಿ ಒತ್ತಿ ಹಿಡಿದನು. ಆದರೆ ಉಸಿರು ಒಳಗೇ ಕಟ್ಟಿ, ಜೀವವು ಮಾತ್ರ ಹೋಗುವದೆಂಬದು ಆ ಕುಡುಕರಿಗೆ ತಿಳಿಯಲಿಲ್ಲ.

೪೫. ಸ್ವಮತಾಭಿಮಾನದ ಅಂಧತೆಯ ಫಲ
(ರೆವರೆಂಡ್ ಡಾಕ್ಟರ್ ಸಾಹೇಬರ ಗ್ರಂಥ)

ಕೆಲವು ವರ್ಷಗಳ ಹಿಂದೆ ರಾಮನು ಭರತವರ್ಷದಲ್ಲಿ ಅಥವಾ ಭಾರತದಲ್ಲಿ (ಇಂಡಿಯಾದಲ್ಲಿ) ಇದ್ದಾಗ, ಅವನ ಕೈಗೆ ಒಂದು ಪುಸ್ತಕವು ಸಿಕ್ಕಿತು. ಅದನ್ನು ಅಮೆರಿಕಾದ ವಿದ್ವಾಂಸರೊಬ್ಬರು ಬರೆದಿದ್ದರು. ಅವರು ಗೌರವದ ಡಾಕ್ಟರ್ (Reverend Doctor) ಪದವಿಯನ್ನು ಪಡೆದವರಾಗಿದ್ದು ಭರತಖಂಡದ ಒಂದು ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಆಗಿದ್ದರು. ಈ ಪುಸ್ತಕದ ವಿಷಯವು 'ಮರಣಾನಂತರ' 'After Death' ಎಂದಿತ್ತು. ಈ ಪ್ರಪಂಚವು ಒಂದು ಸ್ಟೇಷನ್ ಇದ್ದ ಹಾಗೆ ಇದೆಯೆಂದೂ ಪರಲೋಕವು ಸಮುದ್ರದಾಚೆ ಇರುವ ಅಥವಾ ಸಮುದ್ರದ ದೊಡ್ಡಕೊಲ್ಲಿಯಾಚೆ ಇರುವ ಇನ್ನೊಂದು ಸ್ಟೇಷನ್ನಿನಂತೆ ಇದೆಯೆಂದೂ ಒಂದು ಬಹಳ ಸುಂದರವಾದ ರೂಪಕದಿಂದ ಆ ಪುಸ್ತಕದಲ್ಲಿ ವಿವರಿಸಿತ್ತು. ಈ ಸಮುದ್ರದಾಚೆ ಹೋಗಬೇಕಾದವರು ಟಿಕೆಟ್ಟುಗಳನ್ನು ಕೊಳ್ಳಬೇಕಾಗಿದೆ. ಸರಿಯಾದ ಟಿಕೆಟ್ ಇಲ್ಲದ ಪ್ರಯಾಣಿಕರನ್ನು ಹಡಗಿನ ಮೇಲಿಂದ ಎತ್ತಿ ಸಮುದ್ರದ ಅಗಾಧವಾದ ಕೂಪದಲ್ಲಿ ಎಸೆದುಬಿಡುತ್ತಾರೆ. ವಿಹಿತವಾದ ಟಿಕೆಟ್ ಇದ್ದವರನ್ನು ಅವರ ನಿರ್ದಿಷ್ಟ ಸ್ಥಾನಕ್ಕೆ ಹೋಗಿ ಸೇರುವದಕ್ಕೆ ಅವಕಾಶ ಕೊಡುತ್ತಾರೆ. ಟಿಕೆಟ್‌ಗಳಲ್ಲಿ ಅನೇಕ ಬಗೆಯಿದೆ: ಫಸ್ಟ್‌ಕ್ಲಾಸ್ ಟಿಕೆಟ್; ಸೆಕೆಂಡ್‌ಕ್ಲಾಸ್ ಟಿಕೆಟ್, ಥರ್ಡ್‌ಕ್ಲಾಸ್ ಟಿಕೆಟ್ ಇತ್ಯಾದಿಗಳೂ ಇವೆ; ಖೋಟಾ ಟಿಕೆಟ್‌ಗಳೂ ಇವೆ. ಟಿಕೆಟ್‌ಗಳಲ್ಲಿ ಬಿಳಿ, ಕಪ್ಪು, ಹಳದಿ, ಹಸುರು ಮೊದಲಾದ ಬಣ್ಣಗಳ ಟಿಕೆಟ್‌ಗಳೂ ಇವೆ. ಆದರೆ ನಿಮ್ಮ ಉದ್ದಿಷ್ಟ ಸ್ಥಾನಕ್ಕೆ ಕರೆದೊಯ್ಯುವ (ಸತ್ಯವೂ ನಿಷ್ಕಪಟವೂ ಆದ) ನಿಜವಾದ ಟಿಕೆಟ್ಟು ಯೇಸುಕ್ರಿಸ್ತನ ರಕ್ತದಿಂದ ಲೇಪಿತವಾಗಿ ಕೆಂಪಗಿರುತ್ತದೆ. ಅಂಥಾ ಟಿಕೆಟ್ ಉಳ್ಳ ಪ್ರಯಾಣಿಕರನ್ನು ಮಾತ್ರ ಅವರ ಕೊನೆಯ ಗಮ್ಯಸ್ಥಾನಕ್ಕೆ ಯಶಸ್ವಿಯಾಗಿ ಸೇರಲು ಅವಕಾಶಕೊಡುತ್ತಾರೆ. ಬೇರೆಯವರಿಗೆ ಎಂದೆಂದಿಗೂ ಅವಕಾಶ

ಕೊಡುವುದಿಲ್ಲ. ಕ್ರಿಸ್ತನ ರಕ್ತಲಾಂಛನವುಳ್ಳ ಕೆಂಪು ಟಿಕೆಟ್ಟುಗಳು ಮಾತ್ರ ಕ್ರೈಸ್ತ ಟಿಕೆಟ್ಟುಗಳು. ಮಿಕ್ಕ ಬಿಳಿ, ಕಪ್ಪು, ಹಳದಿ ಇತ್ಯಾದಿ ಬೇರೆ ಬಣ್ಣಗಳ ಟಿಕೆಟ್ಟುಗಳು ಬೇರೆಯ ಮತಧರ್ಮಗಳಿಗೆ ಸೇರಿದವು. ಇದೇ ಆ ಪುಸ್ತಕದ ವಿಷಯವಾಗಿತ್ತು; ಮತ್ತು ಅದನ್ನು ಬಹಳ ಚೆನ್ನಾಗಿ ವರ್ಣಿಸಿತ್ತು. ಅದರ ಲೇಖಕರಾದ ರೆವೆರೆಂಡ್ ಡಾಕ್ಟರ್ ಲೇಖನದಲ್ಲಿ ತಮ್ಮ ಕಲ್ಪನಾ ಚಾತುರ್ಯವನ್ನೆಲ್ಲಾ ಸೂರೆಮಾಡಿದ್ದರು; ಮತ್ತು ತಮ್ಮ ಆಂಗ್ಲಸಾಹಿತ್ಯ ಜ್ಞಾನವನ್ನೆಲ್ಲಾ ಉಪಯೋಗಿಸಿದ್ದರು.

ಸ್ವಲ್ಪ ಹೆಚ್ಚು ಕಡಿಮೆ ಈ ಬಗೆಯ ನಂಬಿಕೆಯು ಕ್ರೈಸ್ತರಲ್ಲಿ ಮಾತ್ರವಲ್ಲ, ಮಿಕ್ಕ ಎಲ್ಲಾ ಮತಧರ್ಮಗಳ ಜನರಲ್ಲಿಯೂ ಇದೆ, ಮಹಮ್ಮದೀಯರೂ ಹೇಳುವ ದೇನೆಂದರೆ, ಸತ್ತಮೇಲೆ ಎಲ್ಲರ ಧರ್ಮಾಧರ್ಮಗಳ ಲೆಕ್ಕವನ್ನು ಪರೀಕ್ಷೆಮಾಡುವ ಅತ್ಯುನ್ನತ ಅಧಿಕಾರವುಳ್ಳ ಸ್ಟೇಷನ್ ಮಾಸ್ಟರ್, ಟಿಕೆಟ್ ಕಲೆಕ್ಟರ್ ಮಹಮ್ಮದನೇ ಸರಿ; ಆದ್ದರಿಂದ ಮಹಮ್ಮದನ ಗುರುತುಳ್ಳ ಟಿಕೆಟ್ ಇಲ್ಲದವರನ್ನು ನರಕದಲ್ಲಿ ಎಸೆಯುತ್ತಾರೆ.—ಹೀಗೆ ಮಹಮ್ಮದೀಯರು ಹೇಳುತ್ತಾರೆ. ಬೇರೆ ಮತಧರ್ಮಗಳೂ ಇದೇ ಬಗೆಯ ಭಾವನೆಯನ್ನು ಹೊಂದಿದ್ದಾರೆ. ಅಮೆರಿಕಾ, ಯೂರೋಪ್, ಆಫ್ರಿಕಾ, ಆಸ್ಟ್ರೇಲಿಯ, ಏಷ್ಯ ಮೊದಲಾದ ಯಾವ ದೇಶದಲ್ಲಿ ಜನರು ಸತ್ತರೂ ಅವರೆಲ್ಲರನ್ನೂ ಕ್ರಿಸ್ತನೋ, ಮಹಮ್ಮದನೋ, ಬುದ್ಧನೋ, ಜೊರೊಸ್ಟರನೋ, ಕೃಷ್ಣನೋ-ಇವರಲ್ಲಿ ಯಾವನಾದರೂ-ಒಬ್ಬನೇ ಪ್ರಭುವು ವಿಚಾರಣೆ ನಡೆಸತಕ್ಕವನು,-ಎಂದು ಹೇಳುತ್ತಾರೆ. ಮತಧರ್ಮಗಳಲ್ಲಿರುವ ಪರಸ್ಪರ ಎಲ್ಲಾ ವಿರೋಧಕ್ಕೂ, ವೈರಕ್ಕೂ, ಕಲಹಕ್ಕೂ ಯುದ್ಧಕ್ಕೂ ಈ ಭಾವನೆಯೇ ಕಾರಣವಾಗಿದೆ. ಪ್ರಪಂಚದಲ್ಲಿ ಇದುವರೆಗೆ ಧರ್ಮದ ಹೆಸರಿನಲ್ಲಿ ಹರಿಸಿರುವ ರಕ್ತ ಪ್ರವಾಹಗಳಿಗೆ ಈ ಮೂಢ ನಂಬಿಕೆಯೂ ಮತಾಂಧತೆಯೂ ಕಾರಣವಾಗಿವೆ.

೪೬. ಮಾಯಾಮಹಿಮೆ

(ಮಿಲ್ಟನ್ ಹೆಂಡತಿಯ ಕನಸು)

ಮಿಲ್ಟನ್ ಕವಿಯ ಜೀವನದಲ್ಲಿ ಬಹಳ ಸ್ವಾರಸ್ಯವಾದೊಂದು ಕಥೆಯಿದೆ. ಅದು ಅವನ ಹೆಂಡತಿಗೆ ಸಂಬಂಧಪಟ್ಟದ್ದು, ಅವಳು ಒಮ್ಮೆ ತನ್ನ ಕನಸಿನಲ್ಲಿ ತನ್ನ ಗಂಡನನ್ನು ಕಂಡಳು. ಅವನ ಮೇಲಿನ ಅತಿಪ್ರೇಮದಿಂದ ತನ್ನ ಹೃದಯವು ಅವನೆಡೆಗೆ ತನ್ನೆದೆಯಲ್ಲಿ ಹಾರುತ್ತಿರುವಂತೆ ಆಕೆಗೆ ಅನುಭವವಾಯಿತು. ಆ ಕನಸಿನಲ್ಲಿಯೇ ಆಕೆಯು ತನ್ನ ಗಂಡನನ್ನು ಭಾವಾವೇಶದಿಂದ ಬಿಗಿಯಾಗಿ ಅಪ್ಪಿಕೊಂಡು "ಪ್ರಭುವೇ ನಾನು ಪೂರಾ ನಿನ್ನವಳು". ಎಂದು ಉತ್ಕಟವಾದ ಅನುರಾಗದಿಂದ ಕಂಠ ಗದ್ಗದವಾಗಿ ನಿವೇದಿಸುತ್ತಿದ್ದಂತೆಯೇ ಆಕೆಗೆ ಬೆಚ್ಚಿಬಿದ್ದಂತಾಗಿ ಎಚ್ಚರವಾಯಿತು. ಟಣ್ಣನೆ ನೆಗೆಯಿತು ಆಕೆಯ ನಾಯಿಯು-ಆಕೆಯ ಹೊದಿಕೆಯಿಂದ ಹೊರಗೆ. ಆಕೆಯು ಸಾಕಿದ ಮುದ್ದು ನಾಯಿಯು ಆಕೆಯ ಹಾಸಿಗೆಯ ಮೇಲೆ ನಿತ್ಯವೂ ಮಲಗುತ್ತಿತ್ತು. ಆ ರಾತ್ರಿ,

ಅದು ಆಕೆಯ ಹೊದಿಕೆಯೊಳಗೆ ನುಸುಳಿ ಆಕೆಗೆ ತಿಳಿಯದಂತೆ ಆಕೆಯ ಎದೆಗೆ ಒತ್ತೊತ್ತಿ ಮಲಗಿತ್ತು. ಆ ನಾಯಿಯ ಒತ್ತುವಿಕೆಯಿಂದಲೇ ಆಕೆಗೆ ಕನಸಿನಲ್ಲಿ ತನ್ನ ಗಂಡನೇ ಬಂದಿರುವಂತೆಯೂ ಆತನನ್ನು ರಾಗಾವೇಶದಿಂದ ತಾನೇ ಬಿಗಿದಪ್ಪಿ ಕೊಂಡಂತೆಯೂ ಭಾಸವಾಗಿ, ಪಕ್ಕದಲ್ಲಿ ಮಲಗಿದ್ದ ತನ್ನ ನಾಯಿಯನ್ನು ನಿಜವಾಗಿಯೂ ಅಪ್ಪಿಕೊಂಡಳು. ಆಕೆಯ ಗಾಢಾಲಿಂಗನವನ್ನು ಸಹಿಸಲಾರದೆ ಆ ನಾಯಿಯು ಗಾಬರಿ ಯಾಗಿ ಆಕೆಯ ತೋಳುಗಳ ಬಿಗಿತದಿಂದ ತಪ್ಪಿಸಿಕೊಂಡು ಟಣ್ಣನೆ ಹಾಸಿಗೆಯಿಂದ ನೆಗೆಯುತ್ತಿದ್ದಾಗ ಆಕೆಗೆ ಎಚ್ಚರವಾಗಿತ್ತು. ಎಚ್ಚರವಾದ ಮೇಲೆ ಆಕೆಯು ಸ್ವಲ್ಪಹೊತ್ತು, ತನ್ನ ಸುಖಸ್ವಪ್ನವನ್ನೂ ಅದಕ್ಕೆ ಕಾರಣವಾಗಿರಬಹುದಾದ ತನ್ನ ನಾಯಿಯ ಕೃತಿಯನ್ನೂ ಅದರಿಂದ ಪ್ರೇರಿತವಾದ ತನ್ನ ತನುಮನಗಳ ಪ್ರತಿಕ್ರಿಯೆ ಗಳನ್ನೂ ನೆನೆನೆನೆದು ಬಿದ್ದುಬಿದ್ದು ನಕ್ಕಿರಬೇಕು. ಆದರೆ ಆ ನಾಯಿಯು ತನ್ನ ಮೈಯಿಂದ ಆಕೆಯ ಎದೆಯನ್ನು ಇನ್ನೂ ಹೆಚ್ಚಾಗಿ ಒತ್ತಿದ್ದರೆ, ಆಕೆಗೆ ಎದೆಯ ಮೇಲೆ ಮಹತ್ತಾದ ಹಿಮಾಲಯದ ಭಾರವೇ ಬಿದ್ದಿರುವಂತೆ ಭೀಕರ ಸ್ವಪ್ನ ಬೀಳಬಹು ದಾಗಿತ್ತು. ಹಾಗಲ್ಲದೆ ನಾಯಿಯು ತಿಳಿಯದೆ ಹಿತಮಿತವಾಗಿ ಒತ್ತಿದ್ದರಿಂದ ಆಕೆಗೆ ಹಿತವಾದ ಸ್ವಪ್ನವೇ ಕಂಡಿರಬೇಕು.

ವೇದಾಂತವು ಹೇಳುವದೇನೆಂದರೆ, ಎಲ್ಲಿಯ ವರೆಗೆ ಅಜ್ಞಾನವೆಂಬ ನಾಯಿಯು ಅಥವಾ ಮಾಯೆಯೆಂಬ ನಾಯಿಯು ನಿಮ್ಮನ್ನು ಕೆಳಗೆ ಒತ್ತುತ್ತಿದೆಯೋ ಅಲ್ಲಿಯ ವರೆಗೆ ನಿಮ್ಮ ಕನಸುಗಳು ಒಳ್ಳೆಯದರಿಂದ ಕೆಟ್ಟದ್ದಕ್ಕೂ ಕೆಟ್ಟದ್ದರಿಂದ ಒಳ್ಳೆಯದಕ್ಕೂ ಬಿಡುವಿಲ್ಲದೆ ಬದಲಾಯಿಸುತ್ತಲೇ ಇರುತ್ತವೆ; ಕೆಲವು ಸಮಯ ಪ್ರಿಯನಾದ ಗಂಡನು (ಅಥವಾ ಹೆಂಡತಿ) ಹಿತವಾಗಿಯೂ, ಕೆಲವು ಸಮಯ ಭಯಂಕರವಾದ ಹಿಮಾಲಯವು ಪ್ರಾಣ ಹಿಂಡುವಂತೆಯೂ ನಿಮ್ಮನ್ನು ಒತ್ತುತ್ತಲೇ ಇರುತ್ತವೆ. ನೀವು ಯಾವಾಗಲೂ ಗಡಿಯಾರದ ಲೋಲಕದಂತೆ (Pendulum) ನಗುವಿನಿಂದ ಅಳುವಿಗೂ ಅಳುವಿನಿಂದ ನಗುವಿಗೂ ಡೋಲಾಯಮಾನವಾಗಿ ತೂಗಾಡುತ್ತಲೇ ಇರುತ್ತೀರಿ. ಪ್ರಪಂಚವು ನಿಮ್ಮ ಹೃದಯದ ಮೇಲೆ ಭಾರವಾಗಿ ತೂಗುತ್ತಿರು ವದರಿಂದ ನಿಮಗೆ ವಿಶ್ರಾಂತಿಯೇ ಇರುವದಿಲ್ಲ. ವೇದಾಂತ ಹೇಳುವದೇನೆಂದರೆ "ಅಜ್ಞಾನವೆಂಬ ಈ ನಾಯಿಯನ್ನು ಹೊರಗೋಡಿಸಿ; ಸರ್ವಸಮರ್ಥನಾದ ಭಗವಂತನೇ ನೀವೆಂಬುದನ್ನು ಅರಿತರೆ ನೀವು ಮುಕ್ತರಾಗುತ್ತೀರಿ."

೪೭. ನಿಜವಾದ ಅನುಕರಣ

(ಮಜನೂ ಪ್ರೇಮದ ಅನುಕರಣ)

ಲೈಲಾ ಮಜನೂರ ಪ್ರೇಮವನ್ನು ವರ್ಣಿಸುವ ಒಂದು ಸುಂದರವಾದ ಪ್ರೇಮ ಗೀತೆಯನ್ನು ಒಬ್ಬ ರಸಿಕನು ಓದುತ್ತಿದ್ದನು. ಆ ಪದ್ಯದ ನಾಯಕನಾದ ಮಜನೂವನ್ನು ಬಹಳವಾಗಿ ಮೆಚ್ಚಿಕೊಂಡು ಅವನು ತಾನೂ ಮಜನೂವಾಗಲು ಪ್ರಯತ್ನಿಸಿದ.

ಅದಕ್ಕಾಗಿ ಅವನು ಆ ಪದ್ಯದ ನಾಯಕಿಯ ಚಿತ್ರವನ್ನು ತೆಗೆದುಕೊಂಡು ಆಲಂಗಿಸಿ, ಅದನ್ನು ತನ್ನ ಹೃದಯದ ಮೇಲೆ ಇಟ್ಟುಕೊಂಡು, ಕಣ್ಣೀರು ಸುರಿಸುತ್ತಿದ್ದನು. ಅವನು ಆ ಚಿತ್ರವನ್ನು ಒಂದು ನಿಮಿಷವೂ ಬಿಟ್ಟಿರುತ್ತಿರಲಿಲ್ಲ. ಆದರೆ ಕೃತ್ರಿಮವಾದ ಪ್ರೇಮವು ಬಹಳ ಕಾಲ ಇರಲಾರದು. ಸ್ವಾಭಾವಿಕವಾದ ಪ್ರೇಮವನ್ನು ಅನುಕರಣ ಮಾಡುವದು ಸಾಧ್ಯವಲ್ಲ; ಆದರೂ ಅವನು ಅನುಕರಣ ಮಾಡಲು ಪ್ರಯತ್ನ ಮಾಡುತ್ತಿದ್ದನು.

ಅವನಲ್ಲಿಗೆ ಅವನ ಮಿತ್ರನೊಬ್ಬನು ಬಂದು "ತಮ್ಮ! ಏನು ಮಾಡುತ್ತಿದ್ದಿ? ಮಜ್ನು ಆಗುವದು ಹೀಗಲ್ಲ. ನೀನು ಮಜ್ನು ಆಗಬೇಕಾದರೆ ಅವನ ಪ್ರೇಯಸಿಯನ್ನು ನೀನು ತೆಗೆದುಕೊಳ್ಳಬೇಕಾಗಿಲ್ಲ; ಆದರೆ ಮಜ್ನುವಿನ ನಿಜವಾದ ಪ್ರೇಮವು ಮಾತ್ರ ನಿನ್ನಲ್ಲಿರಬೇಕು. ಅವನ ಪ್ರೇಮದ ವಸ್ತುವನ್ನೇ ನೀನೂ ಇಟ್ಟುಕೊಳ್ಳುವದು ಅಗತ್ಯವಿಲ್ಲ; ಆದರೆ ಆ ಪ್ರೇಮದ ಉತ್ಕಟತೆಯೇ ನಿನ್ನಲ್ಲಿಯೂ ಇರಬೇಕು. ನಿನ್ನ ಪ್ರೇಯಸಿಯನ್ನು—ಪ್ರೇಮದ ನಾಯಕಿಯನ್ನು—ನೀನೇ ಆರಿಸಿಕೊಳ್ಳಬಹುದು; ಆದರೆ ಮಜ್ನುವಿನಲ್ಲಿದ್ದ ಆ ಉತ್ಕಟ ಪ್ರೇಮವೇ ನಿನ್ನಲ್ಲಿಯೂ ಇರಬೇಕು; ನಿಜವಾದ ಮಜ್ನು ಆಗುವದು ಹಾಗೆ." ಎಂದು ಹೇಳಿದನು.

ಹಾಗೆ ನೀವು ಕ್ರಿಸ್ತನೂ ಬುದ್ಧನೂ ಮಹಮ್ಮದನೂ ಕೃಷ್ಣನೂ ಆಗಬೇಕಾದರೆ ಅವರು ಮಾಡಿದಂತೆ ನೀವು ಮಾಡಬೇಕಾಗಿಲ್ಲ. ಅವರ ಜೀವನದ ಕಾರ್ಯಗಳನ್ನು ನೀವು ಅನುಕರಣ ಮಾಡಬೇಕಾಗಿಲ್ಲ; ನೀವು ಅವರ ನಡವಳಿಕೆಯ ಗುಲಾಮರು ಆಗಬೇಕಾಗಿಲ್ಲ,—ಎಂದು ರಾಮನು ಹೇಳುತ್ತಾನೆ. ನೀವು ಅವರ ಕೃತಿಗಳಿಗೂ ಹೇಳಿಕೆಗಳಿಗೂ ನಿಮ್ಮ ಸ್ವಾತಂತ್ರ್ಯವನ್ನು ಮಾರಿಕೊಳ್ಳದೆ, ನೀವು ಅವರ ಭಾವನೆಗಳ ತೀವ್ರತೆಯನ್ನೂ ಅವರ ಅನುಭವದ ಆಳವನ್ನೂ ಅವರ ಆಳವಾದ ಮನೋಭಾವವನ್ನೂ ವಿಚಾರವನ್ನೂ ಅವರ ನಿಜವಾದ ಚೇತನ ಶಕ್ತಿಯನ್ನೂ ಕಂಡುಕೊಳ್ಳಬೇಕು; ಅನುಭವ ಮಾಡಬೇಕು. ಅದೇ ಮನೋಭಾವವನ್ನೂ ಸತ್ತ್ವವನ್ನೂ ನಿಮ್ಮ ಜೀವನದಲ್ಲಿ ವ್ಯಕ್ತಮಾಡಿದರೆ, ಈಗ ನಿಮ್ಮ ಸುತ್ತಲಿರುವ ಸನ್ನಿವೇಶಗಳೂ ಪರಿಸ್ಥಿತಿಗಳೂ ಬದಲಾಯಿಸಲ್ಪಡಬೇಕು. ಇವತ್ತು ರಾತ್ರಿ ಕ್ರಿಸ್ತನು ಹುಟ್ಟಿದ್ದರೆ ಏನು ಮಾಡುತ್ತಿದ್ದನು? ಅವನು ಈಗಲೂ ಶಿಲುಬೆಯ ಮೇಲೇರಿ ಮೊಳೆಗಳನ್ನು ಹೊಡಿಸಿಕೊಳ್ಳುತ್ತಿದ್ದನೆ? ಎಂದಿಗೂ ಇಲ್ಲ. ನೀವು ಈಗ ಕ್ರಿಸ್ತರಾಗಿಯೂ ಬದುಕಬಹುದು. ಕ್ರಿಸ್ತನು ತನ್ನ ನಿಶ್ಚಿತಾಭಿಪ್ರಾಯಗಳಿಗಾಗಿ ತನ್ನ ಜೀವವನ್ನೇ ಬಲಿಕೊಟ್ಟನು. ಆದರೆ ಷೋಪೆನ್ ಹೇರನು [Schopenhauer] ತನ್ನ ನಿಶ್ಚಿತಾಭಿಪ್ರಾಯಗಳಿಗಾಗಿ ಬದುಕಿದನು. ಮತ್ತು ಅನೇಕ ವೇಳೆ ನಿಮ್ಮ ನಿಶ್ಚಿತಾಭಿಪ್ರಾಯಗಳಿಗಾಗಿಯೂ ನಿಮ್ಮ ದೃಢ ನಂಬಿಕೆಗಳಿಗಾಗಿಯೂ ಸಾಯುವದಕ್ಕಿಂತಲೂ ಬದುಕುವದೇ ಕಷ್ಟವಾಗುತ್ತದೆ.

೪೮. ಭಯಪ್ರದವಾದ ಮಾಯಾ ಪ್ರಪಂಚವನ್ನು ಧೀರನು ವಿವೇಕದಿಂದ ಕಣ್ಣಿಟ್ಟು ನೋಡಿದರೆ ಅದು ಬ್ರಹ್ಮವೇ ಆಗಿರುವದನ್ನು ಮನಗಾಣುತ್ತಾನೆ.

(ಮೋಸೆಸ್ ಮತ್ತು ಸರ್ಪ)

ಮೋಸೆಸ್‌ನ ವಿಷಯದಲ್ಲಿ ರಾಮನು ಕೆಲವು ಮಾತುಗಳನ್ನು ಹೇಳಬಯಸುತ್ತಾನೆ. ಮೋಸೆಸ್ಸನು ಆ ಪೊದೆಯಲ್ಲಿ ಆ ಉರಿಯನ್ನು ನೋಡಿ ಆ ವಾಣಿಯನ್ನು ಕೇಳಿದಾಗಲೇ ಅವನ ಸಮೀಪದಲ್ಲಿ ಬುಸುಗುಟ್ಟುವ ಒಂದು ಹಾವನ್ನೂ ಕಂಡನು. ಮೋಸೆಸ್ಸನು ಹೌಹಾರಿ ದಿಗ್ಭ್ರಾಂತನಾದನು ; ಅವನು ನಡುಗಿದನು, ಅವನ ಎದೆ ಬಡಿದುಕೊಳ್ಳುತ್ತಿತ್ತು. ಅವನ ನರನಾಡಿಗಳಲ್ಲಿದ್ದ ರಕ್ತವೆಲ್ಲಾ ಹೆಪ್ಪುಗಟ್ಟಿ ಕೊಂಡಿತು. 'ಅಯ್ಯೋ ! ನನ್ನ ಬಾಳೇ ಮುಗಿಯಿತು' ಎಂದುಕೊಂಡನು. ಆಗ ಅವನಿಗೆ ಒಂದು ವಾಣಿಯು ಕೂಗಿ ಹೇಳಿತು : "ಓ ಮೋಸೆಸ್ ! ಭಯಪಡಬೇಡ. ಆ ಸರ್ಪವನ್ನು ಹಿಡಿ. ಅದನ್ನು ಗಟ್ಟಿಯಾಗಿ ಹಿಡಿದುಕೋ. ಅದನ್ನು ಹಿಡಿದುಕೊಳ್ಳಲು ಧೈರ್ಯ ಮಾಡು; ಧೈರ್ಯ ಮಾಡು." ಆದರೂ ಮೋಸೆಸ್ಸನು ನಡುಗಿದನು; ಪುನಃ ಆ ವಾಣಿಯು ಅವನನ್ನು ಕುರಿತು "ಮೋಸೆಸ್ ! ಧೈರ್ಯವಾಗಿ ಮುಂದೆ ಬಾ. ಆ ಹಾವನ್ನು ಹಿಡಿದುಕೋ" ಎಂದು ಕೂಗಿತು. ಆಗ ಅವನು ಬಹಳ ಧೈರ್ಯಮಾಡಿ ಅದನ್ನು ಹಿಡಿದುಕೊಂಡನು. ಆಹಾ ! ಅದು ಅತ್ಯಂತ ಸುಂದರವೂ ದಿವ್ಯವೂ ಆದ ದಂಡವಾಗಿದ್ದಿತು ; ದೊಣ್ಣೆಯಾಗಿದ್ದಿತು, ಇದಿಷ್ಟು ಆ ಕಥೆ ; ಅಥವಾ ಪ್ರಸಂಗ. ಈಗ, ಇದರ ಅರ್ಥವೇನು ? ಆದರಲ್ಲಿ ಸತ್ಯವನ್ನೇ (ಸಚ್) ಸರ್ಪ (ಸರ್ಪ್) ಎಂದು ಹೇಳಿದೆ. ಹಿಂದೂಗಳೂ ಮತ್ತು ಬೇರೆ ಪೌರ್ವಾತ್ಯರೂ ಆತ್ಯಂತಿಕ ಸತ್ಯಕ್ಕೆ ಸರ್ಪವನ್ನೇ ಆದಿಶೇಷನನ್ನೇ ಸಂಕೇತವಾಗಿ ಹೇಳುತ್ತಾರೆ. ಸರ್ಪವು ವೃತ್ತಗಳೊಳಗೆ ವೃತ್ತಗಳನ್ನು ಇರಿಸಿದಂತೆ ಮಂಡಲದೊಳಗೆ ಮಂಡಲ ಹಾಕಿ ಸುರಳಿ ಸುತ್ತಿಕೊಂಡು ಬಾಲದ ತುದಿಯನ್ನು ಬಾಯಿಯಲ್ಲಿ ಇಟ್ಟುಕೊಂಡಿರುತ್ತದೆ. ಹೀಗೆ ಪ್ರತಿಯೊಂದೂ ಪುನಃ ಪುನಃ ಉಚ್ಚರಿತವಾಗಿ ಸುತ್ತು ಸುತ್ತು ಹಾಕಿ ಅಂತಿಮಗಳು ಸೇರುವದರಿಂದ ಈ ಪ್ರಪಂಚದಲ್ಲಿ ಎಲ್ಲವೂ ವೃತ್ತಗಳೊಳಗೆ ವೃತ್ತಗಳಾಗಿವೆ. ಇದು ಇಡೀ ವಿಶ್ವದಲ್ಲಿ ವ್ಯಾಪಕವಾಗಿರುವ ಸಾರ್ವತ್ರಿಕ ನಿಯಮ ಅಥವಾ ತತ್ತ್ವ. ಹಾವನ್ನು ಹಿಡಿದು ಕೊಳ್ಳುವದೆಂದರೆ. ದೈವೀ ನಿಯಮವನ್ನು ಚಲಾಯಿಸತಕ್ಕ ವಿಶ್ವ ಪ್ರಭುವಿನ ಸ್ಥಾನದಲ್ಲಿ ನೀವು ಧೈರ್ಯವಾಗಿ ನಿಲ್ಲುವದು. ನೀವು ಹಾಗೆ ಮಾಡಿ, ನೀವೇ ದೇವರೆಂಬುದನ್ನು ಮನಗಾಣಿರಿ.

೪೯. ದೇವರ ಜ್ಞಾನ ಮತ್ತು ಮಹಿಮೆ

(ರಾಜ ಮತ್ತು ಕ್ವಾಜಿ)

ಒಂದಾನೊಂದು ಕಾಲದಲ್ಲಿ ಒಬ್ಬ ಮಹಮ್ಮದೀಯ ಚಕ್ರವರ್ತಿಯ ಸಮೀಪಕ್ಕೆ ಅವನ ಮಂಡಲಾಧಿಪತಿಯೊಬ್ಬನು [Qazi or Governor] ಬಂದನು. ಆ ಅಧಿಕಾರಿಯ ಧಾರ್ಮಿಕ ನಟನೆಗಳಿಗಾಗಿ ಬಹಳವಾಗಿ ಗೌರವಿಸುತ್ತಿದ್ದ ಚಕ್ರವರ್ತಿಯು ಅವನ

ಯೋಗ್ಯತೆಯನ್ನು ಪರೀಕ್ಷೆ ಮಾಡಬೇಕೆಂದು ಬಯಸಿದನು. ಅವನು ಸ್ವತಃ ವಿದ್ವಾಂಸನಾಗಿರಲಿಲ್ಲ. ಆದರೆ ತನಗೆ ಮಂಡಲಾಧಿಪತ್ಯವು ಲಭಿಸಬೇಕೆಂದು ಅಪೇಕ್ಷಿಸುತ್ತಿದ್ದ ಜಾಣನೊಬ್ಬನು ಈ ಪ್ರಶ್ನೆಗಳನ್ನು ದೊರೆಗೆ ಸೂಚಿಸಿದನು. ಚಕ್ರವರ್ತಿಯು ಮೊದಲಿನ ಮಂಡಲಾಧಿಪತಿಯನ್ನು ಕುರಿತು, "ದೇವರು ಯಾವ ದಿಕ್ಕಿಗೆ ಮುಖವನ್ನು ತಿರುಗಿಸಿಕೊಂಡಿರುತ್ತಾನೆ ? ಅವನು ಕುಳಿತಿರುವದೆಲ್ಲಿ ? ಅವನು ತಿನ್ನುವದೇನನ್ನು ? ಅವನು ಮಾಡುವದೇನು?" ಎಂದು ಕೇಳಿದನು. ಅವನು ತನಗೆ ತೃಪ್ತಿಯಾಗುವಂತೆ ಉತ್ತರ ಕೊಟ್ಟರೆ, ಅವನಿಗೆ ಹೆಚ್ಚಿನ ಅಧಿಕಾರ ಕೊಡುವದಾಗಿ ಹೇಳಿದನು. ದೊರೆಯು ಕೇಳಿದ ಪ್ರಶ್ನೆಗಳು ಬಹಳ ಕಠಿಣವಾಗಿರಬೇಕೆಂದು ಅವನು ಭಾವಿಸಿದನು. ರಾಜನನ್ನು ಹೊಗಳಿ ಅವನ ಗುಣಗಳನ್ನು ಕೊಂಡಾಡಿ, ಅವನನ್ನು ಹೇಗೆ ಖುಷಿಯಾಗಿಟ್ಟಿರಬೇಕೆಂಬುದು ಆ ಮಂಡಲಾಧಿಪತಿಗೆ ಗೊತ್ತಿತ್ತು. ಆ ಪ್ರಶ್ನೆಗಳಿಗೆ ಉತ್ತರ ಕೊಡುವದಕ್ಕೆ ಒಂದು ವಾರ ತನಗೆ ಅವಕಾಶ ಕೊಡಬೇಕೆಂದು ಅವನು ಕೇಳಿಕೊಂಡನು.

ಆ ಎಂಟು ದಿನಗಳು ಆ ಮಂಡಲಾಧಿಪತಿಯು ಉತ್ತರಕ್ಕಾಗಿ ಹಗಲಿರುಳೂ ಆಲೋಚನೆ ಮಾಡಿದನು. ಆದರೆ ಅವನು ಯಾವ ತೀರ್ಮಾನಕ್ಕೂ ಬರಲಿಲ್ಲ. ರಾಜನಿಗೆ ತೃಪ್ತಿಯಾಗುವಂತೆ ಹೇಗೆ ಉತ್ತರಿಸಬೇಕು ? ಇದು ಅವನಿಗೆ ಹೊಳೆಯಲಿಲ್ಲ. ಕೊನೆಯಲ್ಲಿ ಎಂಟನೇ ದಿನವೂ ಬಂದಿತು ; ಪ್ರಯೋಜನವಾಗಲಿಲ್ಲವಾದ್ದರಿಂದ ಹೆಚ್ಚು ಅವಕಾಶವನ್ನು ಪಡೆಯುವದಕ್ಕಾಗಿ ತನಗೆ ಕಾಯಿಲೆಯಾಗಿದೆಯೆಂದು ಸೋಗು ಹಾಕಿದನು. ಪಾಜಿ ಎನ್ನುವ ಸೇವಕನು ಅವನಲ್ಲಿಗೆ ಬಂದು, ಸಮಾಚಾರವೇನೆಂದು ಕೇಳಿದನು. ಅಧಿಪತಿಯು "ತೊಲಗು ಆಚೆ; ನನ್ನನ್ನು ಕಾಡಬೇಡ, ನಾನು ಸಾಯುವದರಲ್ಲಿದ್ದೇನೆ" ಎಂದು ರೇಗಿದನು. ಸೇವಕನು "ಸ್ವಾಮೀ ! ನಿಮಗಾಗಿ ನಾನು ಸಾಯುತ್ತೇನೆ; ನಿಮಗೆ ಯಾವ ರೀತಿಯ ತೊಂದರೆಯೂ ಆಗಬಾರದು. ದಯವಿಟ್ಟು ವಿಷಯವೇನೆಂಬುದನ್ನು ತಿಳಿಸಿ" ಎಂದು ಬೇಡಿದನು. ಒಡೆಯನು ಸೇವಕನಿಗೆ ತನ್ನ ಸಮಸ್ಯೆಯನ್ನು ವಿವರಿಸಿದನು. ಈ ಸೇವಕನು ಯಾವ ಗೌರವವೂ ಇಲ್ಲದ ಬಹಳ ಕೆಳಗಿನ ಅಧಿಕಾರದಲ್ಲಿದ್ದನು. ಅವನು ಗಾರೆಯನ್ನು ಅರೆಯುವ ಕೆಲಸದವನಾಗಿದ್ದನು. ಆದರೆ ಅವನು ಆ ಅಧಿಪತಿಯ ಶಿಷ್ಯನೂ ವಿದ್ವಾಂಸನೂ ಆಗಿದ್ದನು. ರಾಜನ ಪ್ರಶ್ನೆಗಳಿಗೆ ತಾನು ಉತ್ತರಿಸುವದಾಗಿಯೂ ತನಗೊಂದು ಆಜ್ಞಾಪತ್ರವನ್ನು ಕೊಡಬೇಕೆಂದೂ ತನ್ನ ಉತ್ತರವು ರಾಜನಿಗೆ ಸಮಾಧಾನವನ್ನು ಕೊಡದಿದ್ದರೆ ತನ್ನ ಗುರುವಿಗೆ ಬದಲಾಗಿ ತಾನೇ ಸಾಯುವದಾಗಿಯೂ ಅವನು ತಿಳಿಸಿದನು. ಅಷ್ಟರಲ್ಲಿ ಒಬ್ಬ ರಾಜದೂತನೂ ಬಂದುದರಿಂದ, ಸಂದೇಹಪಡುತ್ತಿದ್ದ ಮಂಡಲಾಧಿಪತಿಯು ಆ ಸೇವಕನಿಗೆ ಕೂಡಲೇ ಆಜ್ಞೆ ಮಾಡಿ ಕಳಿಸಿದನು. ಆ ಸೇವಕನು ತನ್ನ ಹರಕುಬಟ್ಟೆಗಳಲ್ಲೆಲ್ಲಾ ಉತ್ತಮವಾದುದನ್ನು ಹಾಕಿಕೊಂಡು ಹೊರಟನು. ಅವನು ವೇದಾಂತಿಯಾಗಿದ್ದನು. ಇಂಡಿಯಾ ದೇಶದಲ್ಲಿ ರಾಜರುಗಳು ಯಾವಾಗಲೂ ಸ್ವಾಮಿಗಳಲ್ಲಿ

ಹೋಗಿ ಧರ್ಮಜ್ಞಾನವನ್ನೂ ಬ್ರಹ್ಮಜ್ಞಾನವನ್ನೂ ಪಡೆಯುತ್ತಾರೆ. ಈ ಸೇವಕನು [ಪಾಜೀ] ನಿರ್ಭಯವಾಗಿ ರಾಜನಲ್ಲಿಗೆ ಹೋಗಿ "ಪ್ರಭುವೇ ! ತಾವು ಯಾವ ಪ್ರಶ್ನೆಯನ್ನಾದರೂ ಮಾಡಬಹುದು" ಎಂದು ಹೇಳಿದನು. ರಾಜ: "ನಿನ್ನ ಗುರುಗಳಿಗೆ ಕೇಳಿದ ಪ್ರಶ್ನೆಗೆ ನೀನು ಉತ್ತರ ಕೊಡಬಲ್ಲೆಯಾ ?" ಪಾಜಿ: "ಓಹೋ, ಉತ್ತರ ಕೊಡಬಲ್ಲೆ ; ಆದರೆ, ಪ್ರಶ್ನೆ ಕೇಳುವವನು ಶಿಷ್ಯನೆಂದೂ ಉತ್ತರ ಹೇಳುವವನು ಗುರುವೆಂದೂ ತಮಗೆ ತಿಳಿದೇ ಇದೆ. ತಾವು ನಿಜವಾದ ಮುಸಲ್ಮಾನರು; ಆದ್ದರಿಂದ ಪವಿತ್ರಶಾಸ್ತ್ರದಂತೆ ನಡೆಯತಕ್ಕವರು. ಶಾಸ್ತ್ರ ನಿಯಮಪ್ರಕಾರ ಉತ್ತರ ಹೇಳುವ ನನಗೆ ಗೌರವ ಸ್ಥಾನವನ್ನು ಕೊಟ್ಟು ನೀವು ಸ್ವಲ್ಪ ಕೆಳಗೆ ಕುಳಿತುಕೊಳ್ಳಬೇಕು."

ರಾಜನು ಇದಕ್ಕೆ ಒಪ್ಪಿ, ಅವನು ಧರಿಸುವದಕ್ಕೆ ಉತ್ತಮವಾದ ವಸ್ತ್ರಗಳನ್ನು ಕೊಟ್ಟು, ತನ್ನ ಸಿಂಹಾಸನದ ಮೇಲೆಯೇ ಅವನನ್ನು ಕುಳ್ಳರಿಸಿ, ತಾನು ಕೆಳಗೆ ಮೆಟ್ಟಲಿನ ಮೇಲೆ ಕುಳಿತುಕೊಂಡನು.

ರಾಜ : "ಒಂದು ಮುಖ್ಯವಾದ ವಿಚಾರವಿದೆ. ನಿಮ್ಮ ಉತ್ತರಗಳು ನನಗೆ ಸಮರ್ಪಕವಾಗಿಯೂ ಸಮಾಧಾನಕರವಾಗಿಯೂ ಇಲ್ಲವಾದರೆ ನಿಮ್ಮ ಬಾಳು ಮುಗಿಯಬೇಕಾಗುತ್ತದೆ.

ಪಾಜಿ : "ಓಹೋ ! ಅದು ಮೊದಲೇ ಗೊತ್ತಿರುವ ವಿಷಯ."

"ದೇವರು ಎಲ್ಲಿ ಕುಳಿತುಕೊಳ್ಳುತ್ತಾನೆ ?" ಇದೇ ಮೊದಲನೆಯ ಪ್ರಶ್ನೆ. ಇದಕ್ಕೆ ಕೇವಲ ಮಾತಿನಿಂದ ಉತ್ತರ ಕೊಡುವದಕ್ಕಿಂತಲೂ ಪ್ರತ್ಯಕ್ಷವಾಗಿ ತೋರಿಸಬೇಕೆಂದು, ಅವನು ಒಂದು ಆಕಳನ್ನು ತರಲು ಹೇಳಿದನು. ರಾಜಸೇವಕರು ಕೂಡಲೇ ಆಕಳನ್ನು ತಂದರು.

"ಈ ಆಕಳಿನಲ್ಲಿ ಹಾಲಿದೆಯಲ್ಲವೆ ? ಇದರಲ್ಲಿ ಹಾಲು ಎಲ್ಲಿ ಕುಳಿತಿದೆ ?"

ರಾಜ : "ಹಾಲು ಹಸುವಿನ ಕೆಚ್ಚಲಿನಲ್ಲಿ ಇದೆ."

ಪಾಜೀ : "ಅದು ತಪ್ಪು : ಹಾಲು, ಹಸುವಿನ ಇಡೀ ದೇಹದಲ್ಲಿ ವ್ಯಾಪಿಸಿದೆ. ಈಗ ಈ ಹಸು ಹೋಗಲಿ. ಈ ಹಾಲಿನಲ್ಲಿ ಬೆಣ್ಣೆ ಎಲ್ಲಿದೆ ? ಹಾಲಿನಲ್ಲಿ ಬೆಣ್ಣೆ ಇದೆ ಎಂದು ಹೇಳುತ್ತೀರಿ, ಆದರೆ ಎಲ್ಲಿದೆ ಹೇಳಿ ನೋಡೋಣ."

ಇದಕ್ಕೆ ಯಾರೂ ಉತ್ತರ ಹೇಳಲಿಲ್ಲ.

ಪಾಜೀ "ಈ ಹಾಲಿನಲ್ಲಿ ಬೆಣ್ಣೆ ಎಲ್ಲಿ ಕುತಿಳಿದೆ ಎಂದು ಹೇಳಲಾರಿರಿ ; ಆದರೂ ಬೆಣ್ಣೆಯು ಹಾಲಿನಲ್ಲಿ ಇದೆಯೆಂದು ನಂಬಲೇಬೇಕು. ಬೆಣ್ಣೆ ನಿಜವಾಗಿಯೂ ಹಾಲಿನಲ್ಲಿ ಎಲ್ಲ ಕಡೆಯೂ ತುಂಬಿದೆ. ಹೀಗೆಯೇ ಇಡೀ ವಿಶ್ವದಲ್ಲಿ ದೇವರು ಎಲ್ಲೆಡೆಯೂ ಎಲ್ಲ ವಸ್ತುಗಳಲ್ಲಿಯೂ ತುಂಬಿದ್ದಾನೆ. ಬೆಣ್ಣೆಯು ಹಾಲಿನಲ್ಲಿ ಎಲ್ಲೆಡೆಯೂ ತುಂಬಿರುವಂತೆ ಹಾಲು ಹಸುವಿನ ದೇಹದಲ್ಲಿ ಎಲ್ಲೆಡೆಯೂ ತುಂಬಿದೆ. ನಿಮಗೆ ಹಾಲು ಬೇಕಾದರೆ, ಆಕಳ ಕೆಚ್ಚಲಿನಿಂದ ಹಾಲನ್ನು ಹಿಡಿದುಕೊಳ್ಳಬೇಕು. ಹೀಗೆ ನಿಮಗೆ ದೇವರು ಬೇಕಾದರೆ ನಿಮ್ಮ ಹೃದಯದಿಂದಲೇ ಅವನನ್ನು ಪಡೆದುಕೊಳ್ಳಬೇಕು ;

ದೇವರಿಗಾಗಿ ಧ್ಯಾನ—ಜ್ಞಾನ ಸಾಧನಗಳಿಂದ ನಿಮ್ಮ ಹೃದಯವನ್ನೇ ದೋಹನ ಮಾಡಬೇಕು. ರಾಜ ! ನಿನ್ನ ಪ್ರಶ್ನೆಗೆ ಉತ್ತರ ಸಿಕ್ಕಿತೆ ?"

ರಾಜ : ಓಹೋ ! ನನ್ನ ಮೊದಲನೆಯ ಪ್ರಶ್ನೆಗೆ ಸರಿಯಾದ ಉತ್ತರವಾಯಿತು. ಮುಂದಿನ ಪ್ರಶ್ನೆಗೆ ಉತ್ತರವಾಗಲಿ."

ದೇವರು ಏಳನೆಯ ಸ್ವರ್ಗದಲ್ಲಿ ಇದ್ದಾನೆಂದು ಹೇಳುವ ಜನರೆಲ್ಲಾ ರಾಜನ ದೃಷ್ಟಿಯಲ್ಲಿ ಗೌರವವನ್ನು ಕಳೆದುಕೊಂಡರು. ಆ ಭಾವನೆ ಸರಿಯಲ್ಲವೆಂದೂ ಹಾಸ್ಯಾಸ್ಪದವೆಂದೂ ರಾಜನಿಗೆ ಮನವರಿಕೆ ಆಯಿತು.

ಎರಡನೆಯ ಪ್ರಶ್ನೆ : "ದೇವರ ಮುಖವು ಯಾವ ದಿಕ್ಕಿಗೆ ತಿರುಗಿರುತ್ತದೆ ? ದೇವರು ಯಾವ ದಿಕ್ಕಿಗೆ ನೋಡುತ್ತಾನೆ? ಪೂರ್ವಕ್ಕೋ, ಪಶ್ಚಿಮಕ್ಕೋ ಉತ್ತರಕ್ಕೋ ದಕ್ಷಿಣಕ್ಕೋ ?" ಇದು ಬಹಳ ವಿಚಿತ್ರವಾದ ಪ್ರಶ್ನೆಯಾಗಿದೆ ; ಆ ಜನರು ದೇವರನ್ನು ಒಂದು ವ್ಯಕ್ತಿಯೆಂದು ಭಾವಿಸಿದ್ದರು.

ಪಾಜೀ : "ಒಳ್ಳೆಯದು, ಒಂದು ದೀಪವನ್ನು ತನ್ನಿ." ಸೇವಕರು ಒಂದು ಮೇಣದ ಬತ್ತಿಯನ್ನು ತಂದು ದೀಪ ಹಚ್ಚಿ ಇಟ್ಟರು.

ಪಾಜೀ "ಈಗ ಹೇಳಿ ಈ ದೀಪವು ಯಾವ ದಿಕ್ಕಿಗೆ ಮುಖವಾಗಿದೆ ? ಯಾವ ದಿಕ್ಕಿಗೆ ನೋಡುತ್ತಿದೆ ? ದೀಪವು ಯಾವದೊಂದು ದಿಕ್ಕನ್ನು ನೋಡುತ್ತಿಲ್ಲ. ಆದರೆ ಸರ್ವತ್ರ ಸಮವಾಗಿ ವ್ಯಾಪಕವಾಗಿದೆ. ದೇವರು ನಿಮ್ಮ ಹೃದಯದಲ್ಲಿರುವ ದೀಪವಾಗಿರುವದರಿಂದ ಆ ಜ್ಞಾನ ಜ್ಯೋತಿಯ ಬೆಳಕು ಎಲ್ಲೆಡೆಯೂ ಸಮವಾಗಿ ಚೆಲ್ಲಿದೆ."

ತನ್ನ ಎರಡನೆಯ ಪ್ರಶ್ನೆಗೂ ಸರಿಯಾದ ಉತ್ತರವು ಸಿಕ್ಕಿತೆಂದು ರಾಜನಿಗೆ ಸಂತೋಷವಾಯಿತು.

"ದೇವರು ಏನು ಮಾಡುತ್ತಾನೆ ?" ಇದು ಮೂರನೆಯ ಪ್ರಶ್ನೆ. ಪಾಜಿಯು ರಾಜನಿಗೆ ಹೇಳಿ ತನ್ನ ಗುರುವಾದ ಮಂಡಲಾಧಿಪತಿಯನ್ನು ಕರೆಸಿದನು. ತನ್ನ ಶಿಷ್ಯನಾದ ಸೇವಕನು ರಾಜನ ಸಿಂಹಾಸನದ ಮೇಲೆ ಕುಳಿತಿರುವದನ್ನು ನೋಡಿ ಅಧಿಪತಿಗೆ ಆಶ್ಚರ್ಯವಾಯಿತು. ಸೇವಕನಾದ ಪಾಜಿಯು ಕುಳಿತುಕೊಳ್ಳಬೇಕಾದ ಸ್ಥಳದಲ್ಲಿ ತನ್ನ ಗುರು ಕ್ವಾಜಿಯನ್ನೂ ಮಂಡಲಾಧಿಪಕ್ವಾಜಿಯು ಕುಳಿತುಕೊಳ್ಳಬೇಕಾದ ಸ್ಥಳದಲ್ಲಿ ರಾಜನನ್ನೂ ಕುಳ್ಳಿರಿಸಿ, ತಾನು ಮೊದಲಿನಂತೆಯೇ ಪಾಜಿಯು ರಾಜನ ಸಿಂಹಾಸನದಲ್ಲಿ ಕುಳಿತಿದ್ದನು.

ಪಾಜೀ : "ಇದೇ ನೋಡಿ, ದೇವರ ಕಾರ್ಯ, ದೇವರ ಮಹಿಮೆ ; ದೇವರು ಯಾವಾಗಲೂ ವಸ್ತುಗಳು ಚಲಿಸುತ್ತಿರುವಂತೆ ಮಾಡುತ್ತಾನೆ. ಪಾಜಿಯನ್ನು ರಾಜನನ್ನಾಗಿಯೂ ರಾಜನನ್ನು ಕ್ವಾಜಿಯನ್ನಾಗಿಯೂ ಕ್ವಾಜಿಯನ್ನು ಪಾಜಿಯನ್ನಾಗಿಯೂ ಬದಲಾವಣೆ ಮಾಡುತ್ತಿರುತ್ತಾನೆ." ಜಗತ್ತಿನಲ್ಲಿ ಇದೇ ನಡೆಯುತ್ತಿರುವದು. ಯಾವದೋ ಒಂದು ವಂಶವು ಒಂದು ಕುಟುಂಬವು ಉಚ್ಛ್ರಾಯ ಸ್ಥಿತಿಗೆ ಏರುತ್ತದೆ ;

ಅನಂತರ ಅದು ಕಾಲಾನುಗುಣವಾಗಿ ಇಳಿದು ಕಣ್ಮರೆಯಾಗುತ್ತದೆ. ಅನಂತರ ಬೇರೆ ಯಾವದೋ ಒಂದು ವಂಶವು ಅದರ ಸ್ಥಾನಕ್ಕೆ ಬರುತ್ತದೆ. ಯಾವನೋ ಒಬ್ಬ ಮನುಷ್ಯನು ಕೆಲವು ಕಾಲ ಉನ್ನತವಾದ ಗೌರವವನ್ನು ಪಡೆಯುತ್ತಾನೆ. ಅನಂತರ ಬೇರೊಬ್ಬನು ಆ ಸ್ಥಾನಕ್ಕೆ ಬರುತ್ತಾನೆ. ದಿನವೂ ವರ್ಷವರ್ಷವೂ ಹೀಗೆಯೇ ನಡೆದಿದೆ. ಈ ಜಗತ್ತಿನಲ್ಲಿ ಸರ್ವ ಕಾಲದಲ್ಲಿಯೂ ಈ ಬದಲಾವಣೆ ನಡೆಯುತ್ತಿದೆ. ಆದಿನಿಂದ ಆ ಪಾಜಿಯು ಕ್ವಾಜಿಯಾದನು.

೫೦. ನಮ್ಮ ಅಧ್ಯಾತ್ಮ ಸಾಧನೆಗೆ ಜೀವನದಲ್ಲಿ ಅವಕಾಶವೇ ಇಲ್ಲವೆಂಬ ಗೊಣಗಾಟ-ದೂರು-ನಿರಾಧಾರವಾದುದು

(ಡಾಕ್ಟರ್ ಜಾನ್‌ಸನ್ ಮತ್ತು ಆಕ್ಷೇಪಕ)

ಡಾಕ್ಟರ್ ಜಾನ್‌ಸನ್ ಅವನ ಕಷ್ಟವೇನೆಂದು ವಿಚಾರಮಾಡಿದ. ಅವನು ತನ್ನ ವಿಚಾರವನ್ನು ಹೇಳುವದಕ್ಕೆ ತೊಡಗಿದನು. "ನೋಡಿ ಡಾಕ್ಟರೆ! ಈ ಪ್ರಪಂಚದಲ್ಲಿ ಮನುಷ್ಯ, ಪರಮಾವಧಿಯಾದರೆ ನೂರು ವರ್ಷ ಬದುಕಬಹುದು. ಆದರೆ, ಅನಂತ ಕಾಲಕ್ಕೆ ಹೋಲಿಸಿದರೆ ಈ ನೂರು ವರ್ಷ ಎಷ್ಟು ಮಾತ್ರವಾಗುತ್ತದೆ? ಇದರಲ್ಲಿ ಅರ್ಧವೇ (ಅಂದರೆ ೫೦ ವರ್ಷಗಳೇ) ನಿದ್ರೆಯಲ್ಲಿ ಕಳೆದು ಹೋಗುತ್ತದೆ. ನಮ್ಮ ಶೈಶವ-ಬಾಲ್ಯಗಳೆಂದರೆ ಒಂದು ದೀರ್ಘ ನಿದ್ರೆಯೇ ಸರಿ. ನಮ್ಮ ವಾರ್ಧಿಕ್ಯದಲ್ಲಿಯೂ ನಮ್ಮ ನಿಶ್ಶಕ್ತಿ—ನಿಸ್ಸಹಾಯಕತೆಗಳಿಂದ ನಾವು ಏನನ್ನೂ ಮಾಡಲಾರೆವು. ನಮ್ಮ ಯೌವನವು ದುರ್ವಿಷಯಗಳಲ್ಲಿಯೂ ದುರ್ವ್ಯಸನಗಳಲ್ಲಿಯೂ ದುರಾಲೋಚನೆಗಳಲ್ಲಿಯೂ ವ್ಯರ್ಥವಾಗಿ ಕಳೆದು ಹೋಗುತ್ತದೆ. ಇನ್ನು ಉಳಿದಿರುವ ಅಲ್ಪ ಕಾಲವನ್ನು ಆಟದಲ್ಲಿಯೂ ಹುಡುಗಾಟಗಳಲ್ಲಿಯೂ ಆಹಾರಪಾನೀಯ ಮಲಮೂತ್ರ ವಿಸರ್ಜನಾದಿಗಳಲ್ಲಿಯೂ ಕಳೆಯುತ್ತೇವೆ. ಕೋಪ-ತಾಪಗಳಲ್ಲಿಯೂ ದ್ವೇಷಾಸೂಯೆಗಳಲ್ಲಿಯೂ ಚಿಂತಾಕ್ಲೇಶಗಳಲ್ಲಿಯೂ ಕಾಲವನ್ನು ಕೊಲ್ಲುತ್ತೇವೆ. ಇವು ಪ್ರತಿಯೊಬ್ಬ ಮನುಷ್ಯನಿಗೂ ಸ್ವಭಾವವೇ ಸರಿ. ಇನ್ನು ಉಳಿದಿರುವ ಅಲ್ಪಸ್ವಲ್ಪ ಕಾಲವು ಮಕ್ಕಳು ಮರಿ, ನೆಂಟರು, ಸ್ನೇಹಿತರು ಇವರ ಸೇವೆಯಲ್ಲಿಯೂ ಉದ್ಯೋಗ ವ್ಯವಹಾರಗಳಲ್ಲಿಯೂ ಮಜ-ಮೋಜುಗಳಲ್ಲಿಯೂ ವ್ಯಾಧಿ-ವ್ಯಥೆಗಳಲ್ಲಿಯೂ ಉರುಳಿಹೋಗುತ್ತದೆ. ಈ ಪ್ರಪಂಚದಲ್ಲಿ ಮನುಷ್ಯ ಏನು ಮಾಡಬಲ್ಲ? ಏನಾದರೂ ಮಹತ್ತ್ವದ ಕಾರ್ಯ ಮಾಡುವದಕ್ಕೆ ಹೊತ್ತಾದರೂ ಎಲ್ಲಿ ಉಳಿಯುತ್ತದೆ? ಅಧ್ಯಾತ್ಮ ಸಾಧನೆ ಮಾಡುವದಕ್ಕೆ ಯಾರಿಗಾದರೂ ಅವಕಾಶವೆಲ್ಲಿ? ಸಾಧ್ಯವೇ ಇಲ್ಲ. ದೇವಾಲಯಗಳೂ, ದೇವತಾಕಾರ್ಯಗಳೂ ಹಾಳಾಗಲಿ. ಧರ್ಮೋಪದೇಶಕರೂ ತತ್ತ್ವಬೋಧಕರೂ ತೊಲಗಲಿ. ಎಲ್ಲಾ ಮೂರ್ಖರು. ಈ ಪ್ರಪಂಚದಲ್ಲಿ ಧರ್ಮಕಾರ್ಯಗಳಿಗಾಗಲೀ ಆಧ್ಯಾತ್ಮ ಸಾಧನೆಗಾಗಲಿ ಯಾರಿಗೂ ಅಲ್ಪ ವೇಳೆಯೂ ಸಿಕ್ಕುವದಿಲ್ಲವೆಂದು ಅವರಿಗೆ ತಿಳಿಸಿ. ಅವೆಲ್ಲಾ ನಮಗೆ ಬಹಳ ಮೀರಿದವು." ಎಂದು ಹೇಳಿದನು. ಡಾಕ್ಟರ

ಜಾನ್‌ಸನ್ ಈ ಮಾತುಗಳನ್ನು ಕೇಳಿ ನಗಲೂ ಇಲ್ಲ; ಅವನನ್ನು ದೂಷಿಸಲೂ ಇಲ್ಲ, ಆಕ್ಷೇಪಿಸಲೂ ಇಲ್ಲ; ಆದರೆ ಸಹಾನುಭೂತಿಯಿಂದ ಅಳುವದಕ್ಕೆ ತೊಡಗಿದನು. "ತಮ್ಮಾ! ದೇವರ ಕೆಲಸಕ್ಕೆ ಪುರುಸೊತ್ತಿಲ್ಲವಾದ್ದರಿಂದ ಜನರು ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಕು. ನಿನ್ನ ಆಕ್ಷೇಪಣೆಗೆ ನಾನು ಇನ್ನೂ ಹೆಚ್ಚು ಕೆಡುಕಿನ ಆಕ್ಷೇಪಣೆಯನ್ನು ಸೇರಿಸಬೇಕಾಗಿದೆ" ಎಂದು ಹೇಳಿದನು. ಅದಕ್ಕೆ ಆ ಮನುಷ್ಯ ಡಾಕ್ಟರ ಆಕ್ಷೇಪಣೆಯೇನೆಂದು ಕೇಳಿದನು.

ಡಾಕ್ಟರು ಅಳುವನ್ನು ನಟಿಸುತ್ತಾ "ನೋಡಪ್ಪಾ! ನನ್ನ ಊಟಕ್ಕೆ ಅಗತ್ಯವಾದಷ್ಟು ಕಾಳನ್ನು ಬೆಳೆಯುವಷ್ಟು ಸಹ ಮಣ್ಣು ಅಥವಾ ಭೂಮಿ ನನಗೆ ಉಳಿಯಲಿಲ್ಲ; ಅಯ್ಯೋ! ಏನು ಮಾಡಲಿ, ನಾನು ಕೆಟ್ಟೆ ಕೆಟ್ಟೆ!" ಎಂದು ಅಳುತ್ತಿದ್ದನು. ಆ ಮನುಷ್ಯನು "ಡಾಕ್ಟರೆ! ಅದು ಹೇಗೆ? ನೀವೇನೋ ಅತಿಯಾಗಿ ತಿನ್ನತಕ್ಕವರು. ಹತ್ತು ಜನರಷ್ಟು ನೀವೊಬ್ಬರೇ ಉಣ್ಣುತ್ತೀರಿ. ಆದರೂ ನಿಮ್ಮ ಹೊಟ್ಟೆಗೆ ಸಾಕಾಗುವಷ್ಟು ಕಾಳನ್ನೋ ತರಕಾರಿಯನ್ನೋ ಬೆಳೆಯುವದಕ್ಕೆ ಬೇಕಾಗುವಷ್ಟು ಮಣ್ಣು ಭೂಮಿಯ ಮೇಲಿದೆ. ಅದೇಕೆ ದುಃಖಪಡುತ್ತೀರಿ?" ಎಂದನು. ಡಾಕ್ಟರು ಹೇಳಿದ; "ನೋಡಪ್ಪ! ಭೂಮಿ ಇದೆ ಅನ್ನುತ್ತೀಯಲ್ಲ. ಈ ನಿನ್ನ ಭೂಮಿ ಎಷ್ಟಿದೆ? ಇದು ಏನೂ ಇಲ್ಲ. ಖಗೋಳಶಾಸ್ತ್ರಜ್ಞರ ಲೆಕ್ಕದಲ್ಲಿ ಈ ಭೂಗ್ರಹವನ್ನು ಗಣಿತಶಾಸ್ತ್ರದ ಒಂದು ಬಿಂದುವಿನಂತೆ ಸಣ್ಣ ಚುಕ್ಕೆಯಂತೆ ಅವರು ನೋಡುತ್ತಾರೆ. ಗ್ರಹ–ನಕ್ಷತ್ರಗಳ, ಸೂರ್ಯ–ಚಂದ್ರಾದಿಗಳ ಪರಸ್ಪರ ದೂರವನ್ನು ಲೆಕ್ಕ ಹಾಕಿದರೆ, ಈ ಭೂಮಿಯು ಒಂದು ಸೊನ್ನೆಯೇ ಸರಿ; ಶೂನ್ಯ, ಈ ಸೊನ್ನೆಯ ಮುಕ್ಕಾಲು ಭಾಗವು ನೀರಿನಿಂದ ತುಂಬಿದೆ. ಆ ಸೊನ್ನೆಯಲ್ಲಿ ಉಳಿದ ಕಾಲುಭಾಗದಲ್ಲಿ ಬಹು ಭಾಗ ಮರುಭೂಮಿಯಿಂದಲೂ ಬಂಜರು ಬೆಟ್ಟ ಗುಡ್ಡಗಳಿಂದಲೂ ಕಲ್ಲುಗಳಿಂದಲೂ ನದೀ ಸರೋವರಗಳಿಂದಲೂ ದೊಡ್ಡ ದೊಡ್ಡ ನಗರಗಳಿಂದಲೂ ಪಟ್ಟಣಗಳಿಂದಲೂ ರಸ್ತೆಗಳಿಂದಲೂ ರೈಲು ರಸ್ತೆಗಳಿಂದಲೂ ಕಾರ್ಖಾನೆಗಳಿಂದಲೂ ತುಂಬಿದೆ. ಈಗ ಮನುಷ್ಯನಿಗೆ ಉಳಿದಿರುವದೆಷ್ಟು? ಹೋಗಲಿ, ಮನುಷ್ಯನಿಗೆ ಏನೋ ಸ್ವಲ್ಪ ಉಳಿದಿದೆಯೆಂದು ಇಟ್ಟುಕೊಂಡರೆ, ಅಷ್ಟೇ ನೆಲದಲ್ಲಿ ಮನುಷ್ಯ ಬೆಳೆಯುವದರಿಂದಲೇ ಕೋಟಿ ಕೋಟಿ ಹಕ್ಕಿಗಳು, ಇರುವೆಗಳು, ಇಲಿಗಳು, ಕುರಿಗಳು, ದನಗಳು, ಆನೆಗಳು, ಕುದುರೆಗಳು ಮೊದಲಾದವೆಲ್ಲಾ ಬದುಕಬೇಕು; ಆದರೆ ಅವೇನೂ ಬೆಳೆಯಲಾರವು, ಮನುಷ್ಯನಿಗೆ ಉಳಿಯುವುದು ಏನೂ ಇಲ್ಲ. ಇದಿಷ್ಟರಲ್ಲಿ ಪ್ರಪಂಚದಲ್ಲಿರುವ ಮುನ್ನೂರು ನಾನೂರು ಕೋಟಿ ಜನರು ಊಟಮಾಡಬೇಕು. ಈ ಸೊನ್ನೆಯಲ್ಲಿಯ ಅತ್ಯಲ್ಪ ಭಾಗದಲ್ಲಿ ಇಷ್ಟು ಜನರು ಬದುಕಬೇಕಾದರೆ ನನಗೆ ತೃಪ್ತಿಯಾಗುವಷ್ಟು ಆಹಾರ ಎಲ್ಲಿ ಸಿಕ್ಕಬೇಕು? ಹೀಗೆ ವಿಚಾರಮಾಡಿದರೆ ನನ್ನ ಆಹಾರದ ಕಾಳಿಗೆ ನೆಲವೇ ಇಲ್ಲವಾದ್ದರಿಂದ ಊಟವಿಲ್ಲದೆ ಸಂಕಟಪಟ್ಟು ಸಾವಕಾಶ ಸಾಯುವದಕ್ಕಿಂತಲೂ

ಈಗಲೇ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಮಾಡಿದ್ದೇನೆ." ಇದಕ್ಕೆ ಆ ಮನುಷ್ಯ ಹೇಳಿದ: "ಡಾಕ್ಟರೆ! ನಿಮ್ಮ ವಾದ ಸರಿಯಾಗಿಲ್ಲ; ನಿಮ್ಮ ತರ್ಕವೇನೋ ಸರಿಯಾಗಿಯೇ ಕಾಣುತ್ತದೆ. ನಿಮ್ಮ ಈ ತರ್ಕ ಏನೇ ಇದ್ದರೂ ನೀವು ಬದುಕುವದಕ್ಕೆ ಈ ಭೂಮಿ ಸಾಕು." ಆಗ ಡಾಕ್ಟರ್ ಹೇಳಿದರು: ತಮ್ಮಾ! ನನ್ನ ಈ ಆಕ್ಷೇಪ ನಿರಾಧಾರವಾಗಿದ್ದರೆ, ನಿನಗೆ ಆಧ್ಯಾತ್ಮಿಕ ಆಹಾರವನ್ನು ಒದಗಿಸಿಕೊಳ್ಳುವದಕ್ಕೆ ಸಾಕಷ್ಟು ವೇಳೆಯಿಲ್ಲ–ಎನ್ನುವ ನಿನ್ನ ಆಕ್ಷೇಪವೂ ನಿರಾಧಾರವೇ ಆಗಿದೆ. ನನಗೆ ಭೌತಿಕ ಆಹಾರವನ್ನು ಒದಗಿಸುವಷ್ಟು ಭೂಮಿ ಇದ್ದರೆ, ನಿನಗೆ ಆಧ್ಯಾತ್ಮಿಕ ಆಹಾರವನ್ನು ನೀಡುವದಕ್ಕೂ ಸಾಕಷ್ಟು ಕಾಲವಿದೆ." ನಾವು ಆಧ್ಯಾತ್ಮಿಕ ಆಹಾರವನ್ನು ಸಂಪಾದಿಸುವದಕ್ಕೆ ಆಧುನಿಕ ನಾಗರಿಕತೆಯು ಸಾಕಷ್ಟು ಕಾಲಾವಕಾಶವನ್ನು ಕೊಡುವದಿಲ್ಲವೆನ್ನುವ ಆಕ್ಷೇಪಕ್ಕೂ ರಾಮನು ಈ ಉತ್ತರವನ್ನೇ ಹೇಳುತ್ತಾನೆ.

೫೧. ನಗೆಗೇಡಿನ ತಪ್ಪಾದ ತರ್ಕ

(ಎಣ್ಣೆಮಾರುವ ವರ್ತಕ ಮತ್ತು ಗಿಳಿ)

ಇಂಡಿಯಾದಲ್ಲಿ ಎಣ್ಣೆಯನ್ನು ಮಾರುವ ಒಬ್ಬ ವರ್ತಕನಿದ್ದನು. ಅವನು ತನ್ನ ಮನೆಯಲ್ಲಿ ಬಹಳ ಸುಂದರವಾದೊಂದು ಗಿಳಿಯನ್ನು ಸಾಕಿದ್ದನು. ಒಂದು ದಿನ ಆ ವರ್ತಕನು ತನ್ನ ಅಂಗಡಿಯನ್ನು ಬಿಟ್ಟು ಎಲ್ಲಿಗೋ ಹೊರಗೆ ಹೋದನು. ಅವನ ಸೇವಕನೂ ಬೇರೆ ಕಾರ್ಯದ ಮೇಲೆ ಹೊರಗೆ ಹೋದನು. ಅಂಗಡಿಯಲ್ಲಿ ಗಿಳಿಯು ಒಂದೇ ಇತ್ತು. ಅಂಗಡಿಯಲ್ಲಿ ಯಾರೂ ಇರಲಿಲ್ಲವಾದ್ದರಿಂದ ದೊಡ್ಡದೊಂದು ಬೆಕ್ಕು ಅಂಗಡಿಯೊಳಕ್ಕೆ ಬಂದಿತು. ಆ ಬೆಕ್ಕನ್ನು ಕಂಡಕೂಡಲೇ ಗಿಳಿಯು ಗಾಬರಿಗೊಂಡು ಅದು ಇದ್ದ ಪಂಜರದಲ್ಲಿಯೇ ಕುಣಿಯುವದಕ್ಕೆ ತೊಡಗಿತು. ಗಿಳಿಯು ರೆಕ್ಕೆಗಳನ್ನು ಬಡಿಯುತ್ತಾ ಕೊಳ್ಳುತ್ತಾ ಗೋಡೆಯಮೇಲೆ ತೂಗುಹಾಕಿದ್ದ ಪಂಜರದಲ್ಲಿ ಇತ್ತಲಾಗಿ ಅತ್ತಲಾಗಿ ಕುಣಿದಾಡಿ ಹಾರಾಡಿದ ಕೂಡಲೇ ಆ ಪಂಜರವು ಹೇಗೋ ಜಾರಿ ಕೆಳಗಿದ್ದ, ಬಹಳ ಬೆಲೆಯುಳ್ಳ ಎಣ್ಣೆಯನ್ನು ತುಂಬಿದ್ದ ಜಾಡಿಯ ಮೇಲೆ ಬಿದ್ದಿತು. ಆ ಜಾಡಿಯು ಒಡೆದು ಎಣ್ಣೆಯೆಲ್ಲಾ ಚೆಲ್ಲಿ ಹೋಯಿತು. ಸ್ವಲ್ಪ ಹೊತ್ತಿನಮೇಲೆ ಆ ವರ್ತಕನು ಅಂಗಡಿಗೆ ಬಂದು ಅಮೂಲ್ಯವಾದ ಎಣ್ಣೆಯು ಚೆಲ್ಲಿದ್ದನ್ನು ನೋಡಿ ಗಿಳಿಯು ಮಾಡಿರುವ ಅನಾಹುತಕ್ಕಾಗಿ ಬಹಳ ಕೋಪಗೊಂಡು ರೇಗಾಡಿ ವಿವೇಕವನ್ನೇ ಕಳೆದು ಕೊಂಡನು. ಗಿಳಿಯ ಹುಚ್ಚು ಚೇಷ್ಟೆಯಿಂದ ತನಗೆ 50 ರೂಪಾಯಿಗಳ ವರೆಗೆ ನಷ್ಟವಾಗಿರುವದನ್ನು ನೋಡಿ, ಗಿಳಿಯ ಮೇಲೆ ರೊಚ್ಚಿಗೆದ್ದು, ಪಂಜರದ ಬಾಗಿಲನ್ನು ತೆಗೆದು, ಗಿಳಿಯನ್ನು ಸಿಟ್ಟಿನಿಂದ ಒರಟಾಗಿ ಹಿಡಿದು ಹೊರಗೆಳೆದು, ಅದರ ತಲೆಯ ಮೇಲೆ ಸುಂದರ ತುರಾಯಿಯಂತೆ ಅಲಂಕಾರವಾಗಿದ್ದ ಬಣ್ಣ ಬಣ್ಣದ ನುಣ್ಣನೆಯ ಕಿರುಗರಿಯನ್ನೆಲ್ಲಾ ತರಿದು ತರಿದು ಕಿತ್ತು ಹಾಕಿದನು. ಗಿಳಿಯು ಮೃತ್ಯುವಿನ ಕೈಗೆ ಸಿಕ್ಕಂತೆ ಭಯದಿಂದಲೂ ನೋವಿನಿಂದಲೂ ಕಿರಿಚುತ್ತಾ ಒಂದೇ ಸಮನೆ ಏಲಿ ಏಲಿ

ಒದ್ದಾಡುತ್ತಿತ್ತು. ಅದರ ತಲೆಯಿಂದ ರಕ್ತ ಸುರಿಯುತ್ತಿತ್ತು. ಆ ಗಿಳಿಯ ತಲೆಯ ಮೇಲೆ ಶೋಭಿಸುತ್ತಾ ನೋಡಿದವರನ್ನೆಲ್ಲಾ ಆಕರ್ಷಿಸಿ ಜನರ ಮೆಚ್ಚುಗೆಯನ್ನೂ ಪ್ರೀತಿಯನ್ನೂ ಬೆಳೆಸುತ್ತಿದ್ದ ಅದರ ಮನೋಹರವಾದ ಕಿರೀಟಪುಂಭವು ಆ ಪಾಪಿಷ್ಠನ ಸಿಟ್ಟಿನಿಂದ ನಾಶವಾಯಿತು. ಮುಂದ್ದಾದ ಗಿಳಿಯ ತಲೆಯು ಬೋಳಾಯಿತು. ಆ ಚಂಡಾಲನು ಅದರ ಜೀವವನ್ನು ಮಾತ್ರ ಉಳಿಸಿ ಆ ಪಂಜರವನ್ನು ಮೇಲಕ್ಕೇರಿಸಿ ಕಟ್ಟಿಹಾಕಿದನು. ಆ ಗಿಳಿಯು ಎರಡು ವಾರಗಳ ವರೆಗೆ, ಅದು ಕಲಿತಿದ್ದ ಯಾವ ಮಾತನ್ನೂ ಆಡಲಿಲ್ಲ; ಆ ಯಜಮಾನನನ್ನೂ ಯಾರನ್ನೂ ವಿನೋದಗೊಳಿಸಲಿಲ್ಲ. ದುರ್ದೈವಿಯಾದ ಆ ಗಿಳಿಯ ಹೀನದೀನ ಸ್ಥಿತಿಯನ್ನು ನೋಡಿ, ಸಿಟ್ಟಿನ ಭರದಲ್ಲಿ ತಾನು ಮಾಡಿದ ಅಕ್ಷಮ್ಯವಾದ ಅನ್ಯಾಯಕ್ಕಾಗಿ ಆ ಯಜಮಾನನು ಬಹಳ ಪಶ್ಚಾತ್ತಾಪಪಟ್ಟನು. ಅವನು ತನ್ನ ಮೂರ್ಖತನಕ್ಕಾಗಿ ಎಷ್ಟು ದೂಷಿಸಿಕೊಂಡು ದುಃಖಪಟ್ಟರೂ ಸಾಲದಾಯಿತು. ಎರಡು ವಾರಗಳ ಮೇಲೆ ಅವನಲ್ಲಿ ಎಣ್ಣೆಯನ್ನು ಕೊಳ್ಳುವದಕ್ಕಾಗಿ ಒಬ್ಬ ಗಿರಾಕಿ ಬಂದನು. ಬಟ್ಟೆಯಿಲ್ಲದೆ ಬರಿದಾಗಿದ್ದ ಅವನ ತಲೆಯು ಬೋಳಾಗಿಯೂ ಇದ್ದಿತು. ತನ್ನಂತೆಯೇ ಬೋಳಾಗಿದ್ದ ಆ ಹೊಸ ಮನುಷ್ಯನನ್ನು ನೋಡಿ, ತನಗೊಬ್ಬ ಗೆಳೆಯನು ಸಿಕ್ಕಿದನೆಂದು ಆ ಗಿಳಿಯು ಬಹಳ ಸಂತೋಷಪಟ್ಟು, ತನ್ನಾ ದುರಂತದ ಬಹಳ ದಿನಗಳ ಮೇಲೆ ಮೊದಲನೆಯ ಸಲ ಉತ್ಸಾಹದಿಂದ ಗಟ್ಟಿಯಾಗಿ ನಕ್ಕಿತು. ಅಲ್ಲಿಯೇ ಇದ್ದ ಯಜಮಾನನು, ವ್ಯಥೆಯಿಂದ ಕುಸಿದು ಹೋದಂತಿದ್ದ ಗಿಳಿಯು ಒಮ್ಮೆಗೇ ಖುಷಿಯಾದುದನ್ನು ಕಂಡು, ಅದರ ಉಲ್ಲಾಸ ಹರ್ಷೋದ್ಗಾರಗಳಿಗೆ ಏನು ಕಾರಣವೆಂದು ಗಿಳಿಯನ್ನು ಕೇಳಿದನು. ಅದಕ್ಕೆ ಆ ಗಿಳಿಯು "ಓ ಸ್ವಾಮಿ, ದೇವರ ದಯೆ ಎಷ್ಟು ದೊಡ್ಡದು ! ಈ ಪ್ರಪಂಚದಲ್ಲಿ ಎಣ್ಣೆಯ ಸಾಹುಕಾರನ ದುರ್ದೈವಿ ಸೇವಕ ನಾನೊಬ್ಬನೇ ಅಲ್ಲ ; ಈ ಹತಭಾಗ್ಯನೂ ಅಂಥಾ ದಯಾಳುವಾದ ಎಣ್ಣೆ ಸಾಹುಕಾರನ ಸೇವಕನೇ ಇದ್ದಿರಬೇಕು ; ಇಲ್ಲವಾದರೆ ಇವನು ತನ್ನ ತಲೆಯ ಮೇಲಿನ ಚೆಲುವಾದ ಕೂದಲನ್ನೆಲ್ಲಾ ಕಳೆದುಕೊಂಡು ಹೀಗೆ ಬಕ್ಕಬೋಳನಾಗುವದಕ್ಕೆ ಹೇಗೆ ಸಾಧ್ಯ? ನನ್ನಂತೆ ಇರುವ ಈ ಗೆಳೆಯನನ್ನು ನೋಡಿ ನನಗೆ ಎಷ್ಟೋ ಸಂತೋಷವಾಯಿತು." ಎಂದಿತು.

ಇದೇ ಬಗೆಯ ತರ್ಕವನ್ನು ಕೆಲವು ಜನರು ಹೂಡುತ್ತಾರೆ. ತಾವು ಯಾವಾಗಲೂ ಏನಾದರೂ ಕೆಲಸಗಳನ್ನು ಮಾಡುತ್ತಲೇ ಇರುವಂತೆ, ದೇವರೂ ಸೃಷ್ಟಿ, ಸ್ಥಿತಿಕಾರ್ಯಗಳನ್ನು ಮಾಡುತ್ತಿರಬೇಕು ; ಮತ್ತು ತಾವು ಯಾವ ಕೆಲಸ ಮಾಡಿದರೂ ಅದಕ್ಕೆ ಒಂದು ಉದ್ದೇಶವಿರುವಂತೆ,-ಸ್ವಾರ್ಥಮಯವಾದ ಉದ್ದೇಶವಿರುವಂತೆ,–ದೇವರಿಗೂ ಅವನ ಕಾರ್ಯದಲ್ಲಿ ಉದ್ದೇಶವಿರಬೇಕು. ಕಾರ್ಯಮಾಡುವದಕ್ಕೆ ಮೊದಲು ತಾವು ಯೋಚಿಸುವಂತೆ, ದೇವರೂ ತನ್ನ ಸೃಷ್ಟಿ ಕಾರ್ಯಕ್ಕೆ ಮೊದಲು ಯೋಚಿಸಿರಬೇಕು, ಎಂದು ಮೊದಲಾಗಿ ಅವರು ತರ್ಕಮಾಡುತ್ತಾರೆ.

ಇದೆಲ್ಲಾ ತಲೆಯನ್ನು ಕೆಡಿಸಿಕೊಂಡ ಆ ಗಿಳಿಯ ತರ್ಕದಂತೆಯೇ ಇದೆ. ಇದು ದೋಷಯುಕ್ತವಾದ ತರ್ಕ. ಇದು ತಪ್ಪಾದ ಊಹೆ. ದೇವರು ಹೀಗೆ ಹೀಗೆಯೇ ಮಾಡಿರಬೇಕು, ಎನ್ನುವಪರಿಂದ, ದೇವರನ್ನು ಪರಿಮಿತನನ್ನಾಗಿ ಮಾಡುತ್ತೇವೆ. ನೀವು ಅವನನ್ನು ಅನಂತನೆಂದು ಒಪ್ಪುತ್ತೀರಿ, ದೇವರು ಅನಂತನೆಂದು ಹೇಳುತ್ತೀರಿ; ಆದರೂ ಅವನನ್ನು ಸಾಮಾನ್ಯ ಮಾನವನ ಮಟ್ಟಕ್ಕೆ ಎಳೆಯಲು ಬಯಸುತ್ತೀರಿ. ಇದು ತಪ್ಪಲ್ಲವೆ?

೫೨. ಅನ್ಯಾಯ ಮತ್ತು ಅಸತ್ಯ

(ಆಂಗ್ಲೋ ಇಂಡಿಯನ್ ಗೃಹಸ್ಥ)

ಇನ್ನೊಬ್ಬ ಮಿತ್ರನು ಹೇಳಿದ್ದೇನೆಂದರೆ, "ಇಲ್ಲಿ ನೋಡಿ, ಪ್ರಪಂಚದಲ್ಲಿ ಕ್ರೈಸ್ತ ಜನರ ರಾಷ್ಟ್ರಗಳೇ ಎಲ್ಲಾ ಅಭಿವೃದ್ಧಿಯನ್ನೂ ಸಾಧಿಸುತ್ತಿವೆ ; ಏಕೆ ? ಎಲ್ಲಾ ಪ್ರಗತಿಯೂ ನಾಗರಿಕತೆಯೂ ಇರುವದು ಕ್ರೈಸ್ತ ಜನಾಂಗದ ರಾಷ್ಟ್ರಗಳಲ್ಲಿ ಮಾತ್ರ." ರಾಮನು ಹೇಳುವದೇನೆಂದರೆ, "ಸಹೋದರ, ರಾಜಕೀಯ ಮತ್ತು ಸಾಮಾಜಿಕ ವ್ಯವಹಾರಗಳಲ್ಲಿ ಇಂಡಿಯಾ, ಚೈನಾ, ಜಪಾನ್‌ಗಳಿಗಿಂತಲೂ ಯೂರೋಪ್ ಅಮೇರಿಕಾಗಳು ಮುಂದುವರಿದಿದ್ದರೆ, ಅದಕ್ಕೆ ಕ್ರೈಸ್ತಧರ್ಮವು ಕಾರಣವಲ್ಲ. ಸುಳ್ಳು ತರ್ಕವನ್ನು ಮಾಡಬೇಡಿ. ಎಲ್ಲಾ ನಾಗರಿಕತೆಗೂ ಎಲ್ಲಾ ವೈಜ್ಞಾನಿಕ ಅಭಿವೃದ್ಧಿಗೂ ಕ್ರೈಸ್ತ ಧರ್ಮವೇ ಕಾರಣವಾದರೆ, ಗೆಲಿಲಿಯೋ ಆ ಅಲ್ಪ ಶೋಧನೆಯನ್ನು ಮಾಡಿದಾಗ ಕ್ರೈಸ್ತ ಮತೀಯರು ಅವನೊಡನೆ ಹೇಗೆ ನಡೆದುಕೊಂಡರು-ಎನ್ನುವದನ್ನು ಸ್ವಲ್ಪ ತಿಳಿಸಿ. ಅವನಿಗೆ ಕ್ರೈಸ್ತರು ಕೊಟ್ಟ ಪುರಸ್ಕಾರವೇನು ? ಅಥವಾ ತಿರಸ್ಕಾರವೇನು ? ಅವನಿಗೆ ಅವರು ಮಾಡಿದ ಅಪಚಾರವೇನು ? ಹೇಳಿ. ಬ್ರುನೋ (Bruno) ಮಹಾಶಯನನ್ನು ಸುಟ್ಟುಹಾಕಿದರು. ಅವನನ್ನು ಜೀವಸಹಿತ ಸುಟ್ಟವರು ಯಾರು ? ಕ್ರೈಸ್ತರೇ, ಕ್ರೈಸ್ತರೇ. ಹಕ್ಸ್‌ಲೇ, ಸ್ಪೆನ್ಸರ್, ಮತ್ತು ಡಾರ್ವಿನ್ ಇವರು ಕ್ರೈಸ್ತಜನಾಂಗದ ಹಲ್ಲುಗಳ ನಡುವೆಯೇ ಇದ್ದರು. ಅವರ ಆವಿಷ್ಕಾರಗಳೂ (Discoveries) ಮತ್ತು ಅಭಿವೃದ್ಧಿಗಳೂ ಮತ್ತು ಸ್ವತಂತ್ರಭಾವದ ಕೆಚ್ಚೂ ಕ್ರೈಸ್ತಧರ್ಮದಿಂದ ಉಂಟಾದವಲ್ಲ. ಆ ಧರ್ಮವು ಅವಕ್ಕೆ ಪ್ರೋತ್ಸಾಹವನ್ನೂ ಕೊಡಲಿಲ್ಲ. ತಲೆಯೆತ್ತದಂತೆ ತುಳಿದಿಡುವ ಕ್ರೈಸ್ತಧರ್ಮದ ಎಲ್ಲಾ ಪ್ರಭಾವಗಳನ್ನೂ ಎದುರಿಸಿ ಆ ಸಾಹಸಗಳು ಇನ್ನೂ ಬದುಕಿವೆ. ಷೋಪನ್ ಹಾವರ್‌ನ ಗತಿ ಏನಾಯಿತು ? ಅವನು ಹೇಗೆ ಜೀವಿಸಿರಬೇಕಾಯಿತು ? ಗೊತ್ತಿದೆಯೆ ? ಷೋಪನ್‌ಹಾರ್‌ನು ಕ್ರಿಸ್ತನಷ್ಟೇ ಮಹತ್ತಾದ ಬಲಿದಾನ ಮಾಡಬೇಕಾಯಿತು. ಕ್ರಿಸ್ತನು ತನ್ನ ನಿಶ್ಚಿತ ನಂಬಿಕೆಗಳಿಗಾಗಿ ಸತ್ತನು ; ಷೋಪನ್‌ಹಾವರನು ತನ್ನ ನಿಶ್ಚಿತಾಭಿಪ್ರಾಯಗಳಿಗಾಗಿ ಬದುಕಿದ್ದನು. ನಿಮ್ಮ

ನಿಶ್ಚಿತಾಭಿಪ್ರಾಯಗಳಿಗಾಗಿ ಬನುಕಿರುವವಕ್ಕಿಂತಲೂ ಸಾಯುವದು ಹೆಚ್ಚು ಸುಲಭ ವೆನ್ನುವದು ನಿಮಗೆ ತಿಳಿದಿರಬೇಕು. ಷೋಪೆನ್‌ಹಾವರನ ಸ್ವತಂತ್ರ ವಿಚಾರಧಾರೆಯ ಕೆಚ್ಚನ್ನು ತಡೆಗಟ್ಟಿದ್ದು ಯಾವದು, ನಿಮಗೆ ಗೊತ್ತೇ? ಅದೇ ನಿಮ್ಮ ಕ್ರೈಸ್ತ ಧರ್ಮ, ಅವನ ಮೊದಲು ಮೊದಲಿನ ಲೇಖನಗಳಲ್ಲಿ ತನ್ನ ಮುಖ್ಯ ಗುಣವೆಂದು ತೋರಿಸಿಕೊಂಡಿದ್ದ ಪ್ರಭಾವವನ್ನೂ ರಭಸವನ್ನೂ ಸತ್ತ್ವವನ್ನೂ ವೀರ್ಯವನ್ನೂ ಓಜಸ್ಸನ್ನೂ ಅವನು ತನ್ನ ಅನಂತರದ ಗ್ರಂಥಗಳಲ್ಲಿ ಕಳೆದುಕೊಂಡನು. ಹೆಗೆಲ್ ಮತ್ತು ಕ್ಯಾಂಟ್ ಮಹಾಶಯರ ತತ್ತ್ವಶಾಸ್ತ್ರಗಳಲ್ಲಿರುವ ಸತ್ತ್ವಹೀನತೆಗೂ ದೌರ್ಬಲ್ಯಕ್ಕೂ ಕ್ರೈಸ್ತಧರ್ಮದ ಪ್ರಭಾವವೇ ಕಾರಣವಾಯಿತು. ಫಿಕ್ಟೇ ಮಹಾ ಶಯನು ತನ್ನ ಪ್ರೊಫೆಸರ್ ಉದ್ಯೋಗವನ್ನು ಏಕೆ ಬಿಡಬೇಕಾಯಿತು? ಅವನು ದೇಶದಿಂದ ಏಕೆ ಓಡಿಸಲ್ಪಟ್ಟ? ಎನ್ನುವದು ಗೊತ್ತಿದೆಯೆ? ಅದಕ್ಕೆಲ್ಲಾ ಕ್ರೈಸ್ತ ಧರ್ಮವೇ ಕಾರಣವಾಯಿತು. ಪ್ರಾರಂಭದಿಂದಲೂ ಕ್ರೈಸ್ತಧರ್ಮದ ವಿರೋಧ ವಾದ ಪ್ರಭಾವವನ್ನು ಎದುರಿಸಿಯೇ ಎಲ್ಲಾ ಪ್ರಗತಿಯನ್ನೂ ಸಾಧಿಸಿದೆಯೇ ಹೊರತು ಕ್ರೈಸ್ತಧರ್ಮವು ಯಾವ ಪ್ರಗತಿಯನ್ನೂ ಸಾಧಿಸಿಲ್ಲ. ದಯವಿಟ್ಟು ಸರಿಯಾಗಿ ವಿವೇಚನೆ ಮಾಡದೆ ತಪ್ಪಾದ ತೀರ್ಮಾನಕ್ಕೆ ಬರಬೇಡಿ.

ಇಂಡಿಯಾ ದೇಶದಲ್ಲಿ ಕೆಲವು ಕಾಲ ವಾಸ ಮಾಡಿದ್ದ ಒಬ್ಬ ಆಂಗ್ಲೋ ಇಂಡಿಯನ್ ಗೃಹಸ್ಥನು ಇಂಗ್ಲೆಂಡಿಗೆ ಹಿಂದಿರುಗಿದ ಮೇಲೆ, ತನ್ನ ಧೈರ್ಯ-ಶೌರ್ಯ- ಶಕ್ತಿಗಳ ವಿಷಯದಲ್ಲಿ ತನ್ನ ಹೆಂಡತಿಯೊಡನೆ ಅತಿಶಯವಾಗಿ ಜಂಬ ಕೊಚ್ಚಿ ಕೊಳ್ಳುತ್ತಿದ್ದನು. ಅವರು ತಮ್ಮ ಹಳ್ಳಿಗಾಡಿನ ಮನೆಯಲ್ಲಿ ವಾಸಮಾಡುತ್ತಿದ್ದರು. ಒಂದು ದಿನ ಸಂಜೆ ಅವರಿಬ್ಬರೂ ಮಾತನಾಡುತ್ತಾ ವಿನೋದದಿಂದ ಕುಳಿತಿದ್ದಾಗ ಹಠಾತ್ತನೆ ಅವರ ಹತ್ತಿರಕ್ಕೆ ಒಂದು ದೊಡ್ಡ ಕರಡಿಯು ಬಂದುಬಿಟ್ಟಿತು. ಇಬ್ಬರೂ ಗಾಬರಿಯಾಗಿ ಎದ್ದು ಓಡಿದರು. ಆ ಶೂರನು ಹತ್ತಿರವಿದ್ದ ಒಂದು ಮರದಮೇಲೆ ಸರಸರನೆ ಹತ್ತಿ, ಎತ್ತರವಾಗಿ ಹೋಗಿ ಕುಳಿತನು. ಆದರೆ ಅವನ ಹೆಂಡತಿಯು ಮನೆ ಯೊಳಗೆ ಓಡಿಹೋಗಿ ದೊಡ್ಡ ಬಂದೂಕನ್ನು ತಂದು ಗುಂಡು ಉಡಾಯಿಸಿ ಆ ಕರಡಿ ಯನ್ನು ಕೊಂದುಹಾಕಿದಳು. ಅನಂತರ ಆ ಪೌರುಷಶಾಲಿಯು ಕೆಳಗಿಳಿದು ಬಂದನು. ಆ ಗುಂಡಿನ ಶಬ್ದವನ್ನು ಕೇಳಿ ಕೆಲವು ಜನರು ಕುತೂಹಲದಿಂದ ಅಲ್ಲಿಗೆ ಓಡಿಬಂದು "ಓ, ಈ ಭಯಂಕರ ಕರಡಿಯನ್ನು ಯಾರು ಕೊಂದರು?" ಎಂದು ಕೇಳಿದರು. ಅದಕ್ಕೆ ಆ ಪ್ರತಾಪಶಾಲಿಯು "ಓ, ಇದನ್ನು ನಾನೂ ನನ್ನ ಹೆಂಡತಿಯೂ ಇಬ್ಬರೂ ಸೇರಿ, ಕೊಂದೆವು." ಎಂದನು. ಆದರೆ ಅದು ನಿಜವಾಗಿರಲಿಲ್ಲ. ಹೀಗೆಯೇ ಬೇರೆಯವರು ಒಂದು ಸಾಹಸಕಾರ್ಯವನ್ನು ಮಾಡಿದ ಮೇಲೆ ಅದನ್ನು ನಾನೇ ಮಾಡಿದೆನೆಂದು ಯಾರಾದರೂ ಹೇಳಿಕೊಳ್ಳಬಹುದು. ಆದರೆ ಅದು ನಿಜವಾಗಿರುವದಿಲ್ಲ. ತನ್ನಿಂದಾಗದಿರುವ ಸಾಧನೆಯನ್ನು ಕ್ರೈಸ್ತಧರ್ಮವು ತಾನೇ ಮಾಡಿದ್ದೆಂದು ಹೇಳಿಕೊಳ್ಳುವದೂ ಹಾಗೆ ಸುಳ್ಳಾಗಿರುತ್ತದೆ.

ಯೂರೋಪ್–ಅಮೇರಿಕಾದೇಶದವರು ತತ್ತ್ವಶಾಸ್ತ್ರದಲ್ಲಿಯೂ ವಿಜ್ಞಾನ ಶಾಸ್ತ್ರದಲ್ಲಿಯೂ ಸಾಧಿಸಿರುವ ಎಲ್ಲಾಪ್ರಗತಿಗಳಿಗೂ ಎಲ್ಲಾ ಶೋಧನೆಗಳಿಗೂ ಯಂತ್ರ ನಿರ್ಮಾಣಗಳಿಗೂ ಅವರು ವೇದಾಂತದ ಚೇತನಶಕ್ತಿಯನ್ನು ತಮ್ಮ ಸಾಧನೆಯಲ್ಲಿ ಅಳವಡಿಸಿಕೊಂಡಿರುವುದೇ ಕಾರಣ. ವೇದಾಂತವೆಂದರೆ ಸ್ವಾತಂತ್ರ್ಯ—ವಿಮೋಚನೆ. ಎಲ್ಲಾ ಪ್ರಗತಿಗೂ ಸ್ವಾತಂತ್ರ್ಯಭಾವವ ಕೆಚ್ಚೇ ಕಾರಣವು; ಬಿಡಂಗಡೆಹೊಂದಬೇಕೆಂಬ ಮನೋಭಾವದ ಸತ್ತ್ವವೇ ಕಾರಣವು; ದೈಹಿಕವಾದ ಆವಶ್ಯಕತೆಗಳನ್ನೂ, ಅಪೇಕ್ಷೆ ಗಳನ್ನೂ, ಮತ್ತು ಕೊರತೆಗಳನ್ನೂ ಮೀರಿ ನಿಲ್ಲುವ ಕೆಚ್ಚೇ ಕಾರಣವು. ಈ ಎಲ್ಲಾ ಮುನ್ನಡೆಗಳಿಗೂ ಪುರೋಭಿವೃದ್ಧಿಗಳಿಗೂ ಅದೇ ಕಾರಣವು; ತಿಳಿಯದೇ ಆಚರಣೆಯಲ್ಲಿ ತಂದ ಅದೇ ವೇದಾಂತವು. ಅದನ್ನು ನೀವು ನಿಜವಾದ ಕ್ರೈಸ್ತಧರ್ಮವೆಂದೂ ಕರೆಯಬಹುದು. ನೀವು ಸರಿಯಾಗಿ ಅರ್ಥಮಾಡಿಕೊಂಡರೆ, ನಿಜವಾದ ಕ್ರೈಸ್ತ ಧರ್ಮವು ವೇದಾಂತದಿಂದ ಬೇರೆಯಲ್ಲ. ಗುಲಾಮಗಿರಿಯನ್ನು ಭೂಮಿತಾಯಿಯ ಮುಖದಿಂದಲೇ ತೊಡೆದುಹಾಕಿರುವುದಾಗಿ ಹೇಳಿಕೊಳ್ಳುತ್ತಾರೆ; ಮತ್ತು ಅನೇಕ ಸುಧಾರಣೆಗಳನ್ನು ಮಾಡಿರುವದಾಗಿಯೂ ಹೇಳಿಕೊಳ್ಳುತ್ತಾರೆ. ರಾಮನು ಹೇಳುವದೇ ನೆಂದರೆ, "ಸಹೋದರರೆ, ಗುಲಾಮಗಿರಿಯನ್ನು ನಿಜವಾಗಿಯೂ ನಿರ್ಮೂಲ ಮಾಡಿದ್ದೀರಾ ? ಆಹಾ ! ಅದನ್ನು ನಿಜವಾಗಿಯೂ ತೊಡೆದುಹಾಕಿದ್ದರೆ, ಎಷ್ಟು ಚೆನ್ನಾಗಿತ್ತೆಂದು ರಾಮನು ಆಶಿಸುತ್ತಾನೆ. ದಾಸ್ಯವನ್ನು ಕಿತ್ತೊಗೆದಿದೆ ಎಂಬ ಮಾತನ್ನು ನಾವು ಒಪ್ಪುವದಾದರೆ, ಅದಕ್ಕೆ ಕ್ರೈಸ್ತಮತವೇನೂ ಕಾರಣವಲ್ಲ; ಕ್ರೈಸ್ತಮತದಲ್ಲಿ ಅಂಥಾ ಗುಣವೇನಾದರೂ ಇದ್ದಿದ್ದರೆ, ಹಿಂದಿನ 1700 ವರ್ಷಗಳ ಕಾಲ, ಅದು ಏಕೆ ದಾಸ್ಯವನ್ನು ಕಳೆಯಲಿಲ್ಲ ? ಅದಕ್ಕೆ ಬೇರೆ ಕಾರಣಗಳು ಒದಗಿದವು. ಜನರು ಅಮೇರಿಕಾಕ್ಕೂ ಬಂದರು. ಯೂರೋಪಿನ ಜನಾಂಗವೂ ದೇಶದಿಂದ ದೇಶಕ್ಕೆ ಹೋಗುತ್ತಿತ್ತು. ಅವರಿಗೆ ಬೇರೆ ಜನಾಂಗದ ಸಂಪರ್ಕವೂ ಉಂಟಾಯಿತು, ಅವರ ಶಿಕ್ಷಣವು ಬೆಳೆಯಿತು; ಮನಸ್ಸು ಹೆಚ್ಚು ವಿಶಾಲವಾಯಿತು. ಇದೇ ವ್ಯವಹಾರ ಸಾಧ್ಯ ವೇದಾಂತವು; ಕ್ರಿಯಾಶೀಲ ವೇದಾಂತವು; ಕಾರ್ಯನಿಯೋಜ್ಯವೇದಾಂತವು. ದಾಸ್ಯವನ್ನು ತೊಡೆದುಹಾಕುವದಕ್ಕೆ ಅದು ಕಾರಣವೇ ಹೊರತು ಕ್ರೈಸ್ತಮತವಲ್ಲ. ರಾಜಕೀಯ ಮತ್ತು ಸಾಮಾಜಿಕ ಸಂದರ್ಭಗಳು ಜನರ ಹೃದಯಗಳನ್ನೂ ಆತ್ಮಗಳನ್ನೂ ಕಲಕಿದವು, ಕೆರಳಿಸಿದವು. ಕ್ರೈಸ್ತಮತದಲ್ಲಿ ಎಲ್ಲಾ ಒಳ್ಳೆಯಗುಣಗಳನ್ನೇ ತೋರಿ ಸುವದಾದರೆ, ಪಾಷಂಡವಾದವೆಂದು ಆರೋಪಿಸಿದ್ದವರನ್ನು ಅಡಗಿಸಲು ರೋಮನ್ ಕ್ಯಾಥೋಲಿಕ್ ಕ್ರೈಸ್ತರಲ್ಲಿ ಕೊಡುತ್ತಿದ್ದ ಕ್ರೂರ ಹಿಂಸೆಗಳು, ಮಂತ್ರವಾದಿನೀ ಮಾಟ ಗಾತಿಯರನ್ನು ಜೀವಸಹಿತ ಸುಡುತ್ತಿದ್ದುದು, ತಲೆಯನ್ನು ಕಡಿಯುವ ಯಂತ್ರವನ್ನು ಉಪಯೋಗಿಸುತ್ತಿದ್ದುದು ಮೊದಲಾದ ಘೋರ ರಾಕ್ಷಸೀ ಕೃತ್ಯಗಳನ್ನು ಯಾವದಕ್ಕೆ ಅನ್ವಯಿಸಬೇಕು ? ಪಾಷಂಡವಾದವನ್ನು ಅಡಗಿಸುವದಕ್ಕಾಗಿ ಕ್ರೈಸ್ತರು ಎದೆಯಿಂದ ರಕ್ತವನ್ನು ತೆಗೆಸುತ್ತಿದ್ದಂಥ ಕ್ರೂರಹಿಂಸೆಗಳು ಒಂದಾನೊಂದು ಕಾಲದಲ್ಲಿ

ಸ್ಯಾನ್‌ಫ್ರಾನ್‌ಸಿಸ್ಕೋದಲ್ಲಿ ಸಹ ಪರಮಾಧಿಕಾರದಿಂದ ತನ್ನ ಪೈಶಾಚಿಕ ನೃತ್ಯವನ್ನು ನಡೆಸುತ್ತಿತ್ತು. ಓ ಭಯಂಕರ! ಭಯಂಕರ! ಭೀಕರ ಜುಗುಪ್ಸೆಯನ್ನುಂಟುಮಾಡುವ ಈ ಎಲ್ಲಾ ವಿವರಣೆಯಲ್ಲಿ ರಾಮನು ಪ್ರವೇಶಿಸುವ ಅಗತ್ಯವಿಲ್ಲ, ಆದರೆ ವಾಸ್ತವ ಐತಿಹಾಸಿಕವಾದ ಈ ಭೀಕರ ಕ್ರೌರ್ಯಗಳು ಕ್ರೈಸ್ತ ಮತದಲ್ಲಿಯೇ ಇದ್ದುದಕ್ಕೆ ಸಮಾಧಾನವೇನು?

೫೩. ವ್ಯರ್ಥವಾದ ತಪ್ಪು ವಿಚಾರ ಸರಣಿ

(ಒಂದು ನದಿಯ ಮೂಲದ ವಿಷಯದಲ್ಲಿ ಊಹಾಪೋಹಗಳು)

ಪ್ರಶ್ನೆಯೇನೆಂದರೆ, "ಈ ಪ್ರಪಂಚವೇಕೆ"? "ಈ ಪ್ರಪಂಚವೆಲ್ಲಿಂದ?" ಅಥವಾ ಇದನ್ನೇ ವೇದಾಂತದ ಭಾಷೆಯಲ್ಲಿ ಹೇಳುವದಾದರೆ, "ಈ ವಿಶ್ವದಲ್ಲಿ ಈ ಅಜ್ಞಾನ ಏಕಿದೆ?" ಈ ವಿಶ್ವವು ನಿಜವಲ್ಲವೆಂದೂ ಕೇವಲ ದೃಶ್ಯವಿಲಾಸಮಾತ್ರವೆಂದೂ ವೇದಾಂತವು ಉಪದೇಶಿಸುತ್ತದೆ. ಅಜ್ಞಾನವು ಶಾಶ್ವತವಲ್ಲ, ಈ ಎಲ್ಲಾ ಪ್ರಕೃತಿವಿಲಾಸವೂ ನಿಜವಲ್ಲ, ನಿತ್ಯವಲ್ಲ. ಈಗ ಪ್ರಶ್ನೆ ಏನೆಂದರೆ, "ಈ ಅಜ್ಞಾನ ಏಕಿರಬೇಕು?" ಈ ಪ್ರಪಂಚವಿಲಾಸಕ್ಕೆ ಕಾರಣವಾದ ಈ ಅಜ್ಞಾನವು, ಅಥವಾ ಈ ಎಲ್ಲಾ ನಾನು ಮತ್ತು ನೀನು ಎನ್ನುವದಕ್ಕೂ ಎಲ್ಲಾ ಭಿನ್ನ ಭೇದಗಳಿಗೂ ಮೂಲವಾಗಿರುವ ಈ ಮಾಯೆಯು ನಿಜವಾದ ಆತ್ಮನನ್ನು ಏಕೆ ಮುಸುಕಿ ತಲೆಯೆತ್ತದಂತೆ, ಅಡಗಿಸಿಬಿಡಬೇಕು? ಈ ಮಾಯೆ ಅಥವಾ ಅಜ್ಞಾನವು ದೇವರಿಗಿಂತಲೂ ಹೆಚ್ಚು ಪ್ರಬಲವಾಗಿ ಏಕಿದೆ? ಇದೇ ಮುಖ್ಯವಾದ ಪ್ರಶ್ನೆ.

ಸಾಮಾನ್ಯ ಜನರ ಮಾತಿನಲ್ಲಿ ಮತ್ತು ಬೇರೆ ತತ್ತ್ವಶಾಸ್ತ್ರಜ್ಞರ ಹಾಗೂ ದೈವಶಾಸ್ತ್ರನಿಪುಣರ ಭಾಷೆಯಲ್ಲಿ ಪ್ರಶ್ನೆ ಏನೆಂದರೆ; "ಈ ಪ್ರಪಂಚವು ಇರುವದಾದರೂ ಏಕೆ?" 'ದೇವರು ಈ ಪ್ರಪಂಚವನ್ನು ಏಕಾದರೂ ಸೃಷ್ಟಿಸಿದ್ದಾನು?— ಅವನು ಏಕಾದರೂ ಸೃಷ್ಟಿಸಬೇಕಾಗಿತ್ತು?' ವೇದಾಂತವು ಹೇಳುವದೇನೆಂದರೆ, "ಇಲ್ಲ, ತಮ್ಮ. ಈ ಪ್ರಶ್ನೆಯನ್ನು ಕೇಳುವದಕ್ಕೆ ನಿನಗೆ ಅಧಿಕಾರವಿಲ್ಲ. ಈ ಪ್ರಶ್ನೆಗೆ ಉತ್ತರವೇ ಇಲ್ಲ. ಆದರೆ ಪರೀಕ್ಷಾ-ಪ್ರಯೋಗ-ಸಾಧನಾನುಭವಗಳಿಂದ, ನಿನಗೆ ತೋರುವ ಈ ಪ್ರಪಂಚವು ನಿಜವಾಗಿಯೂ ದೇವರಲ್ಲದೆ ಬೇರಲ್ಲ: ಮತ್ತು ನೀನು ಅಧ್ಯಾತ್ಮ ಸಾಧನೆಯಲ್ಲಿ ಮುಂದುವರಿದು ಸಾಕಷ್ಟು ಮೇಲೇರಿದರೆ ನಿನಗೆ ಈ ಪ್ರಪಂಚವು ತೋರದೇ ಹೋಗುತ್ತದೆ—ಎಂದು ನಿನಗೆ ನೇರವಾಗಿಯೂ ಕೊನೆಯದಾಗಿ ನಿಸ್ಸಂದೇಹವಾಗಿಯೂ ನಿಶ್ಚಿತವಾಗಿಯೂ ತೋರಿಸಬಹುದು. ಆದರೆ, ಈ ಪ್ರಪಂಚವು ಇರುವದಾದರೂ ಏಕೆ? ಎಂಬೀ ಪ್ರಶ್ನೆಗೆ ಉತ್ತರವನ್ನು ಹೇಳುವುದರಿಂದ ಹಿಂಜರಿಯುತ್ತೇವೆ. ಈ ಪ್ರಶ್ನೆ ಹಾಕುವದಕ್ಕೆ ನಿನಗೆ ಅಧಿಕಾರವೇ ಇಲ್ಲ.' ಈ ಪ್ರಶ್ನೆಗೆ ಮಾತ್ರ ಉತ್ತರವನ್ನು ಹೇಳುವದು ತನಗೆ ಸಾಧ್ಯವೇ ಇಲ್ಲವೆಂದು ವೇದಾಂತವು ಸರಳವಾಗಿ ತನ್ನ ಅಸಮರ್ಥತೆಯನ್ನು ಒಪ್ಪಿಕೊಳ್ಳುತ್ತದೆ. ಈ

ಮಾತಿಗಾಗಿ ಎಲ್ಲಾ ಮತಧರ್ಮ ಶಾಸ್ತ್ರಜ್ಞರೂ (Theologians) ತತ್ತ್ವ ಸಿದ್ಧಾಂತ ಪ್ರತಿಪಾದಕರೂ (Dogmatizers) ಮತ್ತು ಆಳವಾದ ವಿಚಾರವಿಲ್ಲದ ತತ್ತ್ವಶಾಸ್ತ್ರಜ್ಞರೂ ಹೆಮ್ಮೆಯಿಂದ ಮುಂದೆ ಬಂದು "ಓ! ನೋಡಿ, ವೇದಾಂತ ಶಾಸ್ತ್ರವು ಎಷ್ಟು ಅಪೂರ್ಣವಾಗಿದೆ. ನ್ಯೂನತೆಯುಳ್ಳದಾಗಿದೆ. 'ಈ ಪ್ರಪಂಚವು ಯಾವ ಕಾರಣದಿಂದ, ಏತಕ್ಕಾಗಿ ಸೃಷ್ಟಿಯಾಯಿತು ?' ಎಂಬ ಪ್ರಶ್ನೆಗೆ ಉತ್ತರವನ್ನೇ ಹೇಳಲಾರದು," ಎನ್ನುತ್ತಾರೆ.

ವೇದಾಂತವು ಹೇಳುವದೇನೆಂದರೆ, "ತಮ್ಮ, ಈ ಪ್ರಶ್ನೆಯೇ ಉಚಿತವಲ್ಲವೆಂದೂ ಆದ್ದರಿಂದ ಇದನ್ನು ಕೇಳುವದಕ್ಕೆ ವಿವೇಕಿಗಳಾದ ಯಾರಿಗೂ ಅಧಿಕಾರವಿಲ್ಲವೆಂದೂ ಇದಕ್ಕೆ ಉತ್ತರವೇ ಇಲ್ಲವೆಂದೂ ನಾವಾಗಲೀ ಯಾರೇ ಆಗಲೀ ಇದಕ್ಕೆ ಉತ್ತರ ಹೇಳುವದೂ ಸಾಧ್ಯವಿಲ್ಲವೆಂದೂ ನಮಗಂತೂ ಶಕ್ತಿಯಿಲ್ಲವೆಂದೂ ಮುಚ್ಚುಮರೆಯಿಲ್ಲದೆ, ಸರಳವಾಗಿ ಒಪ್ಪಿಕೊಳ್ಳುತ್ತೇವೆ. 'ಈ ಪ್ರಪಂಚವು ಏಕೆ ಸೃಷ್ಟಿಯಾಯಿತು ? ಯಾವಾಗ ಸೃಷ್ಟಿಯಾಯಿತು ? ಯಾರಿಂದ ಸೃಷ್ಟಿಯಾಯಿತು ? ಹೇಗೆ ಸೃಷ್ಟಿಯಾಯಿತು ?..................'ಮೊದಲಾದ ಅತ್ಯಂತ ಕುತೂಹಲಕರವಾದ, ಆದರೆ ಅತ್ಯಂತ ಅಸಂಬದ್ಧವಾದ ಪ್ರಶ್ನೆಗಳಿಗೆ ನೀವಾಗಲೀ ಯಾರೇ ಆಗಲೀ ಕೊಡಬಹುದಾದ ಉತ್ತರವನ್ನೇ ಸೂಕ್ಷ್ಮವಾಗಿ ಎಚ್ಚರದಿಂದ ಪರೀಕ್ಷೆ ಮಾಡಿ. ನಿಮ್ಮಲ್ಲಿ ಅತ್ಯಂತ ನಿಪುಣರಾದವರು ಕೊಡಬಹುದಾದ ಅತ್ಯಂತ ಚತುರ ಉತ್ತರವೂ ಉತ್ತರವೇ ಆಗಲಾರದೆಂದು ನಿಮಗೇ ಮನವರಿಕೆಯಾಗುತ್ತದೆ. ಎಲ್ಲಾ ತತ್ತ್ವ ಶಾಸ್ತ್ರಗಳೂ ವಿಜ್ಞಾನ ಶಾಸ್ತ್ರಗಳೂ ಜ್ಞಾತದಿಂದ ಅಜ್ಞಾತಕ್ಕೆ–ಅರಿತಿರುವದರಿಂದ ಅರಿಯದಿರುವದಕ್ಕೆ–ತಮ್ಮ ಶೋಧವನ್ನೂ ವಿಚಾರವನ್ನೂ ಬೆಳೆಸಿಕೊಂಡು ಮುಂದುವರಿಯಬೇಕು. ಕುದುರೆಯ ಹಿಂದೆ ಗಾಡಿಯನ್ನು ಕಟ್ಟದೆ ಕುದುರೆಯ ಮುಂದೆ ಗಾಡಿಯನ್ನು ನಿಲ್ಲಿಸಬಾರದು. ಅಜ್ಞಾತವೂ ಅಜ್ಞೇಯವೂ ಆದ ತತ್ತ್ವದಿಂದ ಪ್ರಾರಂಭಿಸಿ ಅನಂತರ ಜ್ಞೇಯಕ್ಕೆ ಬರಬೇಡಿ." ಹೀಗೆಂದು ವೇದಾಂತವು ಹೇಳುತ್ತದೆ.

ಆದ್ದರಿಂದ ಆ ಪ್ರಶ್ನೆಗಳಿಗೆ ಉತ್ತರವನ್ನು ಕಂಡು ಹಿಡಿಯುವದಕ್ಕೆ ಪ್ರಯತ್ನ ಮಾಡುವದೆಲ್ಲಾ ವ್ಯರ್ಥ ಕಾಲಹರಣವೆಂದೂ ವ್ಯರ್ಥ ಶ್ರಮವೆಂದೂ ವೇದಾಂತವು ಹೇಳುತ್ತದೆ. ಪೊದೆಯಲ್ಲಿ ಅಡಗಿರುವ ಎರಡು ಹಕ್ಕಿಗಳನ್ನು ಹಿಡಿಯುವ ಸಂಭ್ರಮದಲ್ಲಿ ಕೈಯಲ್ಲಿರುವ ಹಕ್ಕಿಯನ್ನೂ ಹಾರಿಬಿಟ್ಟಂತೆ ಈ ಸಾಹಸವಿದೆ. ಪೊದೆಯ ಹತ್ತಿರ ಉಪಾಯದಿಂದ ಮೆಲ್ಲನೆ ತೆವಳಿ ಹೋಗುವದರೊಳಗಾಗಿ ಆ ಹಕ್ಕಿಗಳು ಹಾರಿ ಹೋಗುತ್ತವೆ ; ಕೈಯಲ್ಲಿರುವ ಹಕ್ಕಿಯ ಕಡೆ ಎಚ್ಚರ ತಪ್ಪುವದರಿಂದ ಅದೂ ತಪ್ಪಿಸಿಕೊಳ್ಳುತ್ತದೆ. ಎಂದೂ ಯಾರಿಂದಲೂ ಸಮಾಧಾನ ಸಿಗಲಾರದ ಈ ಮೋಹಕ ಪ್ರಶ್ನೆಯ ಉತ್ತರದ ಬೇಟೆಯಲ್ಲಿ ಆಯುಷ್ಯವೆಲ್ಲಾ ಕಳೆದು ಹೋಗುತ್ತದೆ ; ಅಲ್ಲದೆ, ಈ ಮಾಯಾಮೃಗದ ಬೆನ್ನಟ್ಟದೆ ನಿಜವಾದ ಆಧ್ಯಾತ್ಮ ಸಾಧನೆ ಮಾಡಿದ್ದರೆ,

ನಮ್ಮೊಳಗೇ ಪಡೆದುಕೊಳ್ಳಬಹುದಾಗಿದ್ದ ನಿಜವಾದ ಸಮಾಧಾನದ ಯೋಗವೂ ತಪ್ಪಿ ಹೋಗುತ್ತದೆ.

ಇದಕ್ಕೆ ಇನ್ನೂ ಒಂದು ದೃಷ್ಟಾಂತವನ್ನು ಕೊಡಬಹುದು. ಒಂದು ನದಿಯು ಹರಿಯುತ್ತಿತ್ತು. ಅದರ ದಂಡೆಯ ಮೇಲೆ ಕೆಲವು ಜನರು ನಿಂತುಕೊಂಡು "ಈ ನದಿಯ ಮೂಲವು ಯಾವದು ? ಇದು ಎಲ್ಲಿಂದ ಹುಟ್ಟಿ ಹರಿದು ಬರುತ್ತಿದೆ?" ಮೊದಲಾದ ಪ್ರಶ್ನೆಯೆತ್ತಿ ತತ್ತ್ವಶಾಸ್ತ್ರಜ್ಞರಂತೆ, ದಾರ್ಶನಿಕರಂತೆ ಊಹಾಪೋಹ ಮಾಡುತ್ತಿದ್ದರು. ಅವರಲ್ಲಿ ಒಬ್ಬನು "ಈ ನದಿಯು ಗುಡ್ಡಗಳಲ್ಲಿ ಬಂಡೆಗಳಿಂದಲೂ ಕಲ್ಲುಗಳಿಂದಲೂ ಹುಟ್ಟಿ ಬರುತ್ತಿದೆ. ಗುಡ್ಡಗಳಲ್ಲಿ ನೀರು ಅಕ್ಷಯವಾದ ಚಿಲುಮೆ ಯಿಂದ ಚಿಮ್ಮಿ ಚಿಮ್ಮಿ ಹರಿದು ಬರುತ್ತಿದೆ. ಈ ನದಿಗೆ ಇದೇ ಕಾರಣ." ಎಂದು ಹೇಳಿದನು. ಆಗ ಇನ್ನೊಬ್ಬನು "ಓ! ಸುಳ್ಳು ಸುಳ್ಳು, ಅದು ಅಸಾಧ್ಯ ; ಕಲ್ಲು ಗಳು ಬಹಳ ಗಟ್ಟಿ, ಒರಟು, ಕಠಿಣ, ಗಡುಸು, ಆದರೆ ನೀರು ಎಷ್ಟು ದ್ರವರೂಪ ವಾಗಿಯೂ ಮೃದುವಾಗಿಯೂ ಇದೆ! ಮೃದುವಾದ ನೀರು ಅಷ್ಟು ಕಠಿಣವಾದ ಕಲ್ಲಿನಿಂದ ಹೇಗೆ ಹುಟ್ಟಿ ಬರುವದು ಸಾಧ್ಯ ? ಅಸಾಧ್ಯ, ಅಸಾಧ್ಯ. ಕಠಿಣವಾದ ಕಗ್ಗಲ್ಲೂ ಅಷ್ಟು ಮೃದುವಾದ ನೀರನ್ನು ಸ್ರವಿಸುವದೆಂದರೆ ನಮ್ಮ ಬುದ್ಧಿ ವಿಚಾರ ಒಪ್ಪಲಾರದು. ಕಗ್ಗಲ್ಲು ಕೋಮಲವಾದ ಜಲವನ್ನು ಕೊಡುವದು ನಿಜವಾದರೆ, ಈ ಕಲ್ಲನ್ನು ಕೈಯಿಂದ ಹಿಂಡುತ್ತೇನೆ, ನೋಡೋಣ. ಎಲ್ಲಿ ? ಎಷ್ಟು ಹಿಂಡಿ ಹಿಸುಕಿದರೂ ಇದರಿಂದ ಒಂದು ಹನಿಯೂ ನೀರು ಬರುವದಿಲ್ಲವಲ್ಲ. ಆದ್ದರಿಂದ ಆ ಬೆಟ್ಟಗಳಿಂದ ಈ ನದಿಯು ಹರಿದು ಬರುತ್ತಿದೆಯೆಂಬುದು ಕೇವಲ ಅಸಂಬದ್ಧ. ಆದರೆ ನನಗೊಂದು ಒಳ್ಳೆಯ, ನ್ಯಾಯವಾದ ವಿಚಾರವು ಹೊಳೆಯುತ್ತಿದೆ. ಏನೆಂದರೆ, ಎಲ್ಲಿಯೋ ಅದ್ಭುತ ವಿಗ್ರಹನಾದ ದೈತ್ಯನೊಬ್ಬನು ಇರಬೇಕು. ಅವನ ಮೈ ಬೆವೆತು ಹರಿದಿದ್ದೇ ಈ ನದಿ ಇರಬೇಕು. ಜನರ ಮೈ ಬೆವರಿ ನೀರು ಹರಿಯುವ ದನ್ನು ನಿತ್ಯವೂ ನಾವು ನೋಡುತ್ತೇವೆ. ಇದು ಎಲ್ಲರ ಅನುಭವ; ಆದ್ದರಿಂದ ಈ ನದಿಯು ಬೆವರುತ್ತಿರುವ ಯಾವನೊಬ್ಬ ರಾಕ್ಷಸನ ಮೈಯಿಂದ ಹರಿಯುತ್ತಿರಬೇಕು, ಇದೇ ವಿಚಾರಸಮ್ಮತವೂ ನ್ಯಾಯವೂ ಆಗಿ ತೋರುತ್ತದೆ. ಇದನ್ನೇ ನಮ್ಮೆಲ್ಲರ ಬುದ್ಧಿಯೂ ಒಪ್ಪಿಕೊಳ್ಳಬಹುದು. ಎಲ್ಲಾ ರೀತಿಯಿಂದಲೂ ಇದೇ ಸರಿ." ಎಂದು ಹೇಳಿದನು. ಅದಕ್ಕೆ ಮತ್ತೊಬ್ಬನು, "ಇಲ್ಲ, ಇಲ್ಲ, ಯಾವನೋ ಒಬ್ಬ ದೈತ್ಯ ಎಲ್ಲಿಯೋ ನಿಂತು ಉಗುಳುತ್ತಿರಬೇಕು. ಈ ನದಿಯು ಅವನ ಉಗುಳು," ಎಂದನು. ಬೇರೊಬ್ಬನು ಈ ಯಾವ ವಾದಗಳನ್ನೂ ಒಪ್ಪಿಕೊಳ್ಳದೆ, "ಇವೆಲ್ಲಾ ಬರೀ ಸುಳ್ಳು ಬೆವರಿದರೆ, ಉಗುಳಿದರೆ ಇಷ್ಟೊಂದು ನೀರು ಬರುವದುಂಟೆ ? ಯಾವನೋ ಒಬ್ಬ ಮಹಾದೈತ್ಯ ಮೂತ್ರವಿಸರ್ಜನೆ ಮಾಡುತ್ತಿರಬೇಕು. ಇದೇ ಈ ನದಿಗೆ ಕಾರಣ ನದಿಯ ಸ್ವಲ್ಪ ನೀರಿನಲ್ಲಿ ಆದರ ಆ ಗುಣ ಕಾಣುವದಿಲ್ಲ. ಎಲ್ಲಾ ನದಿಗಳದೂ ಸೇರಿ

ಸಮುದ್ರದಲ್ಲಿರುವ ಅಪಾರವಾದ ಉಪ್ಪಿನ ಗುಣದಿಂದ ನನ್ನ ವಾದವು ಸತ್ಯವೆಂದು ಸಿದ್ಧವಾಗುತ್ತದೆ." ಎಂದು ಕಂಠೋಕ್ತವಾಗಿ ಸಾರಿ ಹೇಳಿದನು.

ಆಗ, 'ಬೆಟ್ಟದಿಂದ ಈ ನೀರು ಚಿಮ್ಮಿ ಹರಿದು ಬರುತ್ತಿದೆ,' ಎಂದು ಕಣ್ಣಾರೆ ಕಂಡು ಹೇಳಿದ ಆ ಮೊದಲ ಜನರು, "ನೋಡಿ ಬೆವರಿನಿಂದಲೂ ಉಗುಳಿನಿಂದಲೂ ಮೂತ್ರದಿಂದಲೂ ನೀರು ಬರುವದನ್ನು ಎಲ್ಲರೂ ನೋಡಿರುವದರಿಂದ, ನಿತ್ಯವೂ ನೋಡುತ್ತಿರುವದರಿಂದ ನಿಮ್ಮ ಒಂದೊಂದು ವಾದವೂ ಕೆಲ ಕೆಲವು ಜನರಿಗೆ ನ್ಯಾಯ ವಾಗಿಯೂ ಎಲ್ಲರಿಗೂ ಸಂಭವನೀಯವಾಗಿಯೂ ತೋರಬಹುದು. ಬೆಟ್ಟದ ಮೇಲೇರಿಹೋಗಿ, ಕಲ್ಲುಗಳ ಮಧ್ಯದಿಂದಲೇ ನೀರು ನಿರರ್ಗಳವಾಗಿ ಹರಿಯುತ್ತಿರುವ ದನ್ನು ಎಂದೂ ನೋಡಿಲ್ಲದ ಜನರು ಇದನ್ನೆಂದೂ ಒಪ್ಪದಿರಬಹುದು. ಆದರೂ ಇದು ಸತ್ಯ; ಕಲ್ಲು ಬಂಡೆಗಳಿಂದಲೇ ನೀರು ತಡೆಯಿಲ್ಲದೆ, ಬಿಡುವಿಲ್ಲದೆ ಚಿಮ್ಮಿ ಚಿಮ್ಮಿ ಹರಿದು ಬರುತ್ತಿರುವದು ಪರಮ ಸತ್ಯ." ಎಂದು ಹೇಳಿದರು. ಇದು ಅವರ ವಾದ ವಾಗಿರಲಿಲ್ಲ, ಅವರು ಸ್ವತಃ ಕಣ್ಣಾರೆ ಕಂಡಿದ್ದ ನೇರ ಅನುಭವದ ಫಲವಾದ ಮಾತಾ ಗಿತ್ತು. ಮಿಕ್ಕ ಎಲ್ಲರ ಹೇಳಿಕೆಯೂ ಅವರವರ ಊಹಾಪೋಹದ ವಾದವಾಗಿತ್ತು.

ಇದೇ ಪ್ರಕಾರವಾಗಿ "ಈ ಪ್ರಪಂಚ ಪ್ರವಾಹದ—ಈ ವಿಶ್ವಪ್ರವಾಹದ— ಮೂಲವೇನು? ಈ ಜೀವಸರಿತ್ತಿನ ಉಗಮ ಯಾವದು? ನಮ್ಮೆಲ್ಲರ ಬಾಳು ಹೊಳೆಯ ಹುಟ್ಟು ಎಲ್ಲಿ? ಯಾವಾಗ? ಏತಕ್ಕಾಗಿ? ಇದರ ಅಂತಿಮ ಗಮ್ಯವೆಲ್ಲಿ?" ಮೊದಲಾದ ಈ ಪ್ರಶ್ನೆಗಳಿಗೆಲ್ಲಾ ನದಿಯ ಮೂಲದ ವಿಷಯಕ್ಕೆ ತಮ್ಮ ತಮ್ಮ ಅನು ಭವದಂತೆ, ಬೆವರು, ಉಗುಳು, ಉಚ್ಚೆ ಮೊದಲಾದವುಗಳಲ್ಲಿ ಒಂದಿರಬಹುದೆಂದು ಊಹಿಸಿ ಸಿದ್ಧಾಂತ ಮಾಡಿದ ಜನರಂತೆ, ತಮ್ಮ ಸುತ್ತಲ ಅನುಭವಕ್ಕೆ ಒಪ್ಪಾಗುವ ರೀತಿ ಯಲ್ಲಿ ವಾದಗಳನ್ನು ಜೋಡಿಸುತ್ತಾರೆ. ಅವರು ಹೇಳುವದೇನೆಂದರೆ, "ಎಲ್ಲಾ ಜನಸಾಮಾನ್ಯರ ಅನುಭವವನ್ನೇ ತೆಗೆದುಕೊಳ್ಳೋಣ. ಇಲ್ಲಿ ನಮ್ಮ ಚಪ್ಪಲಿ (ಬೂಟ್ಸ್) ಗಳಿವೆ. ಇವನ್ನು ಮಾಡಿದ ಮೋಚಿ, ಚಮ್ಮಾರನಿದ್ದಾನೆ. ಅವನಿಗೆ ಉದ್ದೇಶವಿದೆ, ಅವನಲ್ಲಿ ಇವುಗಳನ್ನು ತಯಾರಿಸುವ ರೀತಿಯು, ತಂತ್ರ-ಸಂವಿಧಾನಗಳ ಸಂಚೂ ಇದೆ. ಇವೆಲ್ಲಾ ಇಲ್ಲದೆ ಚಪ್ಪಲಿ ಆಗುವದಿಲ್ಲ. ನಮ್ಮಲ್ಲಿ ವಾಚುಗಳಿವೆ, ಗಡಿಯಾರಗಳಿವೆ. ನಾವು ವಾಸಮಾಡುವ ಮನೆಗಳಿವೆ. ಇವುಗಳನ್ನೆಲ್ಲಾ ಮಾಡುವ ಒಬ್ಬ ಕರ್ತೃ ಬೇಕು, ಅವನಿಗೆ ಉದ್ದೇಶಬೇಕು. ಅವುಗಳನ್ನೆಲ್ಲಾ ತಯಾರಿಸುವ ಜಾಣತನ, ಕುಶಲತೆ ಅವನ ಲ್ಲಿರಬೇಕು. ಹೀಗೆ ಕಾರ್ಯರೂಪವಾದ ಯಾವ ವಸ್ತುವಿಗಾದರೂ ಕರ್ತೃ, ಉದ್ದೇಶ ಕಾರ್ಯ-ಕೌಶಲ ಮೊದಲಾದವುಗಳಿರಬೇಕು. ಇವಿಲ್ಲದೆ ಯಾವ ಕಾರ್ಯವೂ ಸಾಧ್ಯ ವಲ್ಲ. ಇದೇ ನ್ಯಾಯವನ್ನು ಈ ಜಗತ್ತಿಗೆ ಏಕೆ ಅನ್ವಯಿಸಬಾರದು? ಹೊಂದಿಸಿ ನೋಡೋಣ. ಚಮ್ಮಾರ, ಕಮ್ಮಾರ, ಅಕ್ಕಸಾಲಿ, ಬಡಗಿ, ಶಿಲ್ಪಿ, ಯಂತ್ರಶಿಲ್ಪಿ ಮೊದಲಾದವರಂತೆ ಈ ಜಗತ್ತಿಗೂ ಅದೇ ರೀತಿಯು ಒಬ್ಬ ಕರ್ತೃವಿರಬೇಕು,

ಅವನಿಗೆ ಸಂಕಲ್ಪವೂ ಉದ್ದೇಶವೂ ಚಾತುರ್ಯವೂ ಇರಬೇಕು. ಇಷ್ಟೆಲ್ಲಾ ಇಲ್ಲದೆ ಈ ಜಗತ್ತೆಂಬ ಕಾರ್ಯವಾಗಿರಲಾರದು. ಇದನ್ನು ಮಾಡಿದವನಿಲ್ಲದೆ ಈ ಜಗತ್ತಾಗಿರಲು ಹೇಗೆ ಸಾಧ್ಯ?"

ಅವರು ಹೀಗೆ ತರ್ಕಮಾಡಿ, ಈ ಪ್ರಪಂಚವನ್ನು ಸೃಷ್ಟಿಮಾಡುವದಕ್ಕೆ ಸಗುಣ-ಸಾಕಾರನಾದ ಒಬ್ಬ (ಪರಮ) ಪುರುಷ ಈಶ್ವರನಿರಬೇಕೆಂದು ಕಲ್ಪಿಸುತ್ತಾರೆ. ಯಾವದೋ ಪುರುಷರೂಪದಲ್ಲಿರುವ ದೇವರು(Some Personal God) ಇದನ್ನು ಸೃಷ್ಟಿಸಿರಬೇಕೆಂದೂ ಅವನು ಅಂತರಿಕ್ಷದಲ್ಲಿ ಮೋಡಗಳ ಮೇಲೆ, (ಪಾಪ! ಅಲ್ಲಿ ಆ ಬಡಪಾಯಿ ಚಳಿಯಿಂದ ಸೆಟೆದು ಸಾಯಬಹುದೆಂಬ ಕರುಣೆಯೂ ಇಲ್ಲದೆ) ಇರಬೇಕೆಂದೂ ಭಾವಿಸುತ್ತಾರೆ.

ಅವರಾ ವಾದವು ಬಹಳ ನ್ಯಾಯವಾಗಿಯೂ ವಿಚಾರಸಮ್ಮತವಾಗಿಯೂ ಅನುಭವಗಮ್ಯವಾಗಿಯೂ ಸುಂದರವಾಗಿಯೂ ಕಾಣುತ್ತದೆ. ಆದರೆ, ಆ ನದಿಯು ನೀರು ಒಬ್ಬ ಮಹಾದೈತ್ಯನ ಬೆವರೋ ಉಗುಳೋ ಉಚ್ಚೆಯೋ ಆಗಿರಬೇಕೆಂದು ಊಹಿಸಿದವರ ವಾದದಂತೆಯೇ 'ಈ ಪ್ರಪಂಚವನ್ನೂ ಯಾರೋ ಸೃಷ್ಟಿಮಾಡಿರಬೇಕು' ಎಂಬುವರ ವಾದವೂ (ಅದೇ ಜಾತಿಯದಾಗಿ) ಕಾಣುತ್ತದೆ.

ವೇದಾಂತವು ಅಂಥಾ ವಾದವನ್ನೇನೂ ಪ್ರತಿಪಾದಿಸುವದಿಲ್ಲ, ಖಂಡಿತವಾಗಿಯೂ ಇಲ್ಲ. ಅದು ಹೇಳುವದು ಇಷ್ಟೇ: "ನೋಡಿ, ನೀವೇ ಪರೀಕ್ಷೆಮಾಡಿ, ಪ್ರಯೋಗ ಮಾಡಿ ಶಾಸ್ತ್ರ-ಗುರುಗಳ ಉಪದೇಶದಲ್ಲಿ ಶ್ರದ್ಧೆಯನ್ನಿಟ್ಟು ಪ್ರಯತ್ನಮಾಡಿ, ಸಾಧನ ಮಾಡಿ, ಸಾಮಾನ್ಯ ಅಜ್ಞದೃಷ್ಟಿಯಲ್ಲಿ ಈ ಪ್ರಪಂಚವು ಎಲ್ಲರಿಗೂ ಹೇಗೆ ಕಾಣುವದೋ ಹಾಗಿಲ್ಲವೆಂದು ನಿಮ್ಮ ಸ್ವಂತ ಅನುಭವಕ್ಕೇ ಬರುತ್ತದೆ. ಅದು ಹೇಗೆ? ಎನ್ನುವಿರೋ. ಆ ನದಿಯ ದೃಷ್ಟಾಂತವನ್ನೇ ತೆಗೆದುಕೊಳ್ಳೋಣ. ನಿಜವಾಗಿಯೂ ಬೆಟ್ಟದ ಮೇಲೆ ಕಲ್ಲುಗಳ ಮಧ್ಯದಿಂದ ಈ ನದಿಯು ಚಿಮ್ಮಿ ಹರಿದು ಬರುತ್ತಿರುವದೆಂದು ಮಾತ್ರ ನಾನು ಹೇಳಬಲ್ಲೆ. ಇದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಇದು ನನ್ನ ನೇರವಾದ ಅನುಭವ. ನೀವು ಯಾರೂ ಅಲ್ಲಿಗೆ ಹೋಗಿ ನೋಡಿಲ್ಲವಾದ್ದರಿಂದ ಇದನ್ನು ನಂಬದಿರಬಹುದು. ಆದರೆ ಕಲ್ಲುಗಳಿಂದ ನೀರು ಹುಟ್ಟಿ ಬರುವದು ಸಾಧ್ಯವೆ? ಎನ್ನುವ ನಿಮ್ಮ ಸಂಶಯಕ್ಕೆ ಮಾತ್ರ ಸಮಾಧಾನ ಹೇಳುವ ಶಕ್ತಿ ನನಗಿಲ್ಲದಿರಬಹುದು. ನೀವು ಕಷ್ಟಪಟ್ಟಾದರೂ ನನ್ನ ಜೊತೆಗೆ ಆ ಬೆಟ್ಟವೇರಿ ಆ ಸ್ಥಳಕ್ಕೆ ಬನ್ನಿ; ಬಂಡೆಗಳ ಒಳಗಿನಿಂದ ನೀರು ಬುಗ್ಗೆ ಬುಗ್ಗೆಯಾಗಿ ಬುಳು ಬುಳು ಹರಿದು ಬರುತ್ತಿರುವದನ್ನು ನೀವೇ ನೋಡುತ್ತೀರಿ. ಅದು ಹೇಗೆ ಸಾಧ್ಯವೆಂದು ನಾನು ವಿವರಿಸಲಾರೆನಾದರೆ ನನ್ನನ್ನು ಬೈಯಬೇಡಿ. ಆ ನೀರನ್ನು ಬೈಯಿರಿ; ನಿಮ್ಮ ತರ್ಕಬುದ್ಧಿಗೆ ಹುಚ್ಚುಹಿಡಿಸುವಂತೆ ನದಿಯು ಕಲ್ಲುಗಳಿಂದಲೇ ಹೊರಗೆ ಬರುತ್ತಿದೆ. ಇದು ವಾಸ್ತವ ವಿಷಯ; ಸತ್ಯ. ನೀವೇ ಬಂದು ನೋಡಿ; ಪರೀಕ್ಷೆ ಮಾಡಿ."

ಹಾಗೆಯೇ ವೇದಾಂತವು ಹೇಳುವದೇನೆಂದರೆ; "ಈ ಮಾಯೆ ಅಥವಾ ಅಜ್ಞಾನ ಏಕಿದೆ? ಎನ್ನುವದನ್ನು ನಾನು ವಿವರಿಸುವದಕ್ಕೆ ಸಾಧ್ಯವಿರಲಿ, ಇಲ್ಲದಿರಲಿ, ಅದು ಇರುವದಂತು ವಾಸ್ತವ. ನನ್ನ ದೃಷ್ಟಿ ಕೇವಲ ಪ್ರಯೋಗಶೀಲವೂ ಶಾಸ್ತ್ರೀಯವೂ ವೈಜ್ಞಾನಿಕವೂ ಆದುದು. ನಾನು ಯಾವ ಊಹಾ-ಕಲ್ಪನೆಯನ್ನೂ ಮಾಡುವದಿಲ್ಲ; ವಾದವನ್ನೂ ಹೂಡುವದಿಲ್ಲ. ಪ್ರಪಂಚದ ಮೂಲವನ್ನೂ ಕಾರಣ ವನ್ನೂ ತಿಳಿಸಬಲ್ಲೆನೆಂದೂ ಹೇಳಿಕೊಳ್ಳುವದಿಲ್ಲ, ಈ ಗೂಢವನ್ನರಿಯುವದು ಬುದ್ಧಿಯ ವಿಚಾರವನ್ನೂ ಗ್ರಾಹ್ಯಶಕ್ತಿಯನ್ನೂ ಮೀರಿದೆ ಎಂದು ಮಾತ್ರ ಹೇಳುತ್ತೇನೆ, ಇದೇ ವೇದಾಂತದ ನಿಲುವು. 'ಪ್ರಪಂಚವು ಏಕೆ ತೋರುತ್ತಿದೆ?' ಎಂಬ ಪ್ರಶ್ನೆಗೆ, 'ನೀನು ನೋಡುವದರಿಂದ ತೋರುತ್ತದೆ' ಎಂಬುದೇ ಉತ್ತರ. 'ನೀನು ನೋಡದಿದ್ದರೆ ಪ್ರಪಂಚವಿಲ್ಲವೇ ಇಲ್ಲ.' ಪ್ರಪಂಚವಿದೆಯೆಂದು ನಿನಗೆ ಹೇಗೆ ಗೊತ್ತು? ನೀನು ನೋಡುವದರಿಂದ ತಾನೇ? ಹಾಗಾದರೆ ನೋಡಬೇಡ; ನೋಡದಿದ್ದರೆ ಪ್ರಪಂಚ ವೆಲ್ಲಿದೆ? ಕಣ್ಣುಗಳನ್ನು ಮುಚ್ಚಿಕೊ; ಪ್ರಪಂಚದ ಐದರಲ್ಲಿ ಒಂದು ಭಾಗವೇ ಕಣ್ಮರೆಯಾಯಿತು. ಕಣ್ಣುಗಳಿಂದ ನೋಡುತ್ತಿರುವ ಪ್ರಪಂಚವು ಇಲ್ಲವೇ ಇಲ್ಲ. ನಿಮ್ಮ ಕಿವಿಗಳನ್ನು ಮುಚ್ಚಿಕೊಂಡರೆ, ಪ್ರಪಂಚದ ಐದು ಭಾಗಗಳಲ್ಲಿ ಇನ್ನೂ ಒಂದು ಭಾಗ ಹೋಯಿತು. ನಿಮ್ಮ ಮೂಗನ್ನು ಮುಚ್ಚಿಕೊಂಡರೆ, ಹಿಂದಿನ ಸಾಧನೆಯೊಡನೆ ಪ್ರಪಂಚದ ಮೂರು ಭಾಗವೇ ಹೋಯಿತು. ರುಚಿಯನ್ನೂ ನೋಡದೆ ಸ್ಪರ್ಶ ಮಾಡದಿದ್ದರೆ ಪ್ರಪಂಚದ ಐದಕ್ಕೆ ಐದು ಭಾಗವೂ ಹೋಯಿತು. ಹೀಗೆ ನಿಮ್ಮ ಯಾವ ಇಂದ್ರಿಯವನ್ನೂ ಉಪಯೋಗಿಸದಿದ್ದರೆ ಪ್ರಪಂಚವೇ ಇರುವುದಿಲ್ಲ. ನೀವು ಐದು ಇಂದ್ರಿಯಗಳ ವ್ಯಾಪಾರಕ್ಕೂ ಅವಕಾಶಕೊಟ್ಟರೆ, ಪ್ರಪಂಚವು ಪೂರ್ಣವಾಗಿ ನಿಮ್ಮ ಎದುರು ನಿಲ್ಲುತ್ತದೆ, ಆಗ ಅದು ಪರಮಸತ್ಯವಾಗಿ ಕಂಡು 'ನಾನು ಏಕೆ ಇದ್ದೇನೆ ಹೇಳು?' ಎಂದು ನಿಮ್ಮನ್ನೇ ಕೇಳುತ್ತದೆ, ಕಾಡುತ್ತದೆ. ನಿಮ್ಮಿಂದಲೇ ಸೃಷ್ಟಿಯಾದ ಭೂತವು ನಿಮ್ಮನ್ನೇ ನುಂಗಲು ಬರುತ್ತದೆ. ನೀವೇ ಸೃಷ್ಟಿಮಾಡಿಕೊಂಡರೂ ಅದನ್ನೇ ನೀವು ಮರೆಯುತ್ತೀರಿ. ನೀವು ಕಲ್ಪಿಸಿಕೊಳ್ಳುವದರಿಂದ ಅದು ಕಾಣುತ್ತದೆ; ಆದ್ದರಿಂದ ಏಕೆ ಕಾಣುತ್ತದೆ? ಏಕೆ ಕಲ್ಪಿಸಿಕೊಳ್ಳುತ್ತೀರಿ? ಇದಕ್ಕೆ ನೀವೇ ಉತ್ತರ ಹೇಳಬೇಕು, ನನ್ನನ್ನೇಕೆ ಕೇಳುತ್ತೀರಿ? ಪ್ರಪಂಚವನ್ನು ನೀವೇ ಸೃಷ್ಟಿಸಿಕೊಳ್ಳುತ್ತೀರಿ."

೩೪. ವಿಲಕ್ಷಣವಾದ ವಿಚಾರಸರಣಿ

(ಒಬ್ಬ ಸ್ವಾಮಿಯ ವಿಚಿತ್ರವಾದ)

ಈ ದೇಹದಲ್ಲಿ ಪ್ರತಿಯೊಂದು ಅವಯವವೂ ಇಡಿಯ ದೇಹದಿಂದ ಹೇಗೆ ಬೇರ್ಪಡಿಸಲಾಗದ ಒಂದೊಂದು ಭಾಗವಾಗಿದೆಯೋ ಹಾಗೆ ಇಡಿಯ ವಿಶ್ವದಲ್ಲಿ ಪ್ರತಿ ಯೊಂದು ವ್ಯಕ್ತಿಯೂ ಅಖಂಡ ವಿಶ್ವದಿಂದ ಬೇರ್ಪಟ್ಟು ಸ್ವತಂತ್ರವಾಗಿರಲಾರದ ಭಾಗವಾಗಿದ್ದಾನೆ. ನಮ್ಮ ಕೈಯೇ ಕೆಲಸವನ್ನು ಮಾಡಿ ಕಷ್ಟಪಟ್ಟು ದುಡಿದರೂ,

ದಂಡಿದುದನ್ನೆಲ್ಲಾ ತಾನೊಂದೇ ತಿನ್ನುವ ಹಾಗಿಲ್ಲ. ಕೈಯೊಂದೇ ಶ್ರಮಪಟ್ಟಿದೆ ಯೆಂದೂ ಅದರ ಸಂಪಾದನೆಯು ಅದಕ್ಕೇ ಸಲ್ಲಬೇಕೆಂದೂ ವಾದಿಸಿ, ಕೈಗೆ ಇಂಜೆಕ್ಷನ್ ಮೂಲಕ ಆಹಾರವನ್ನು ಕೊಟ್ಟರೆ ಪ್ರಯೋಜನವಾಗಬಹುದೆ ? ಕೈಯು ಮೈಯ ಅವಿಭಾಜ್ಯವಾದ ಒಂದು ಅಂಗವಾಗಿರುವದರಿಂದ, ಅದಕ್ಕೆ ಪ್ರತ್ಯೇಕವಾದ ಸ್ವಾತಂತ್ರ್ಯ ಇಲ್ಲ. ದುಡಿಯುವದು ಕೈಯಾದರೂ ಅದು ದಂಡಿದು ತಂದ ಆಹಾರವನ್ನು ಬಾಯಿಂದ ತಿಂದು, ಹೊಟ್ಟೆಯು ಜೀರ್ಣಿಸಿಕೊಂಡು, ಇಡಿಯ ದೇಹದ ಎಲ್ಲಾ ಅವಯವಗಳಿಗೂ ಅವವುಗಳಿಗೆ ಅಗತ್ಯವಾದಷ್ಟು ಆಹಾರ ಸತ್ತ್ವವನ್ನು ಹಂಚಿ, ಕೈಗೆ ಅರ್ಹತೆಯಿರುವಷ್ಟನ್ನು ಕೈಗೆ ಸಲ್ಲಿಸುತ್ತದೆ. ಕೈಯೊಂದೇ ಕೆಲಸ ಮಾಡುವಂತೆ ತೋರಿದರೂ ಜೀವಂತವಾದ ಇಡಿಯ ದೇಹದ ಸಹಾಯವಿಲ್ಲದೆ, ಪ್ರತ್ಯೇಕವಾದ ಕೈ ನಿರ್ಜೀವವಾದುದರಿಂದ ಕೆಲಸ ಮಾಡಲಾರದು. ಆದ್ದರಿಂದ ಒಂದು ಬಿಡಿಭಾಗವೇ ಕೆಲಸ ಮಾಡುವಂತೆ ತೋರಿದರೂ ಅದೊಂದರ ಮೂಲಕ ಇಡಿಯೇ ಕೆಲಸ ಮಾಡು ತ್ತಿರುತ್ತದೆ. ಹಾಗೆಯೇ ಯಾವನಾದರೂ ತಾನು ಸ್ವತಂತ್ರ ವ್ಯಕ್ತಿಯೆಂದೂ ಯಾರ ಹಂಗೂ ಸಂಗವೂ ತನಗಿಲ್ಲವೆಂದೂ ಸಂಪೂರ್ಣ ಅಖಂಡವಾದ ಜೀವಂತ ವಿಶ್ವದಿಂದ ಕತ್ತರಿಸಿಕೊಂಡ ಕೂಡಲೇ—ಪುನಃ ತನ್ನ ಸಮಗ್ರತೆಯನ್ನು ಅರಿಯುವವರೆಗೂ— ತಪ್ಪದೇ ಸಂಕಟ ಪಡುತ್ತಾನೆ; ಅವನು ತನ್ನ ಪರಿಪೂರ್ಣ ಅಖಂಡತೆಯ ಅನುಭವ ಪಡೆಯುವವರೆಗೂ ಅವನ ಧುಃಖಾನುಭವದಲ್ಲಿ ಬಿಡುವೇ ಇರುವದಿಲ್ಲ. ಸರ್ವಾತ್ಮ ಅವಲಂಬಿಗಳೆಂದೂ ನಿಕಟ ಸಂಬಂಧವುಳ್ಳವುಗಳೆಂದೂ ಎಲ್ಲಾ ದೇಹಗಳೂ ನನ್ನವೇ ಎಂದೂ ಭಾವನೆಯು ಅಥವಾ ಸರ್ವಾತ್ಮ ಪ್ರಜ್ಞೆಯು ಬೆಳೆದಾಗ ಎಲ್ಲಾ ದೇಹಗಳೂ ಪರಸ್ಪರ (ತನ್ನವೇ) ಎಂದೂ ಬೇರಲ್ಲವೆಂದೂ ಅನುಭವ ಪಡೆಯುತ್ತೇವೆ.

ಒಮ್ಮೆ ಒಬ್ಬ ಸ್ವಾಮಿಯು ಅಕ್ಕಸಾಲಿಯ ಹತ್ತಿರ ಹೋಗಿ "ನಿನ್ನಲ್ಲಿ ಉತ್ತಮ ವಾಗಿರುವ ಒಂದು ಬಂಗಾರದ ಉಂಗುರವನ್ನು ದೇವರ ಕೈಬೆರಳಿಗೆ ಇಡಿಸು" ಎಂದನು. ಅನಂತರ ಅವನು ಮೋಚಿಯ ಹತ್ತಿರ ಹೋಗಿ "ನಿನ್ನ ಜೋಡುಗಳಲ್ಲೆಲ್ಲಾ ಉತ್ತಮ ವಾದ ಜೋಡನ್ನು ತಂದು ದೇವರ ಪಾದಗಳಿಗೆ ತೊಡಿಸು". ಎಂದು ಹೇಳಿದನು. ಆಮೇಲೆ ಅವನು ಚಿಪ್ಪಿಗನಲ್ಲಿ ಹೋಗಿ, "ನಿನ್ನ ಉಡುಪುಗಳಲ್ಲೆಲ್ಲಾ ಅತ್ಯುತ್ತಮ ವಾದ ಉಡುಪನ್ನು ತಂದು ದೇವರಿಗೆ, ಧರಿಸು" ಎಂದು ಹೇಳಿದನು. ಆ ಸ್ವಾಮಿಯು ತನ್ನ ದೇಹಕ್ಕೆ ಎನ್ನುವ ಅರ್ಥದಲ್ಲಿ ದೇವರಿಗೆ ಎಂದು ಹೇಳಿದ್ದನು. ಜನರು ಅವನ ಅಭಿಪ್ರಾಯವನ್ನು ತಿಳಿದು, ಅವನು ದೇವದೂಷಕನೆಂದೂ ಪಾಷಂಡಿಯೆಂದೂ ನಿಂದಿಸಿ ಅವನನ್ನು ಕಾರಾಗೃಹದಲ್ಲಿ ಹಾಕಿ ಶಿಕ್ಷಿಸಬೇಕೆಂದು ಹಿಡಿದರು. ಆಗ ಅವನು, ತನ್ನನ್ನು ಶಿಕ್ಷಿಸುವದಕ್ಕೆ ಮೊದಲು ಜನರೆಲ್ಲಾ ದಯವಿಟ್ಟು ಸಭೆ ಸೇರಿ ತನ್ನ ನಾಲ್ಕು ಮಾತು ಗಳನ್ನು ಕೇಳಬೇಕೆಂದು ಅರಿಕೆಮಾಡಿ ಉಪಾಯದಿಂದ ಜನರನ್ನು ಕೂಡಿಸಿದನು. ಆಗ ಆ ಸ್ವಾಮಿಯು, ಜನರು ಮೆಚ್ಚುವಂತೆ ಕೆಲವುಹೊತ್ತು ಉಪನ್ಯಾಸ ಮಾಡಿ,

ಸೃಷ್ಟಿಕರ್ತನಾದ ಸರ್ವಶಕ್ತ ಪರಮಾತ್ಮನೇ ವಿಶ್ವವನ್ನೆಲ್ಲಾ ನಿರ್ಮಾಣ ಮಾಡಿದ್ದಾನೆ; ಆದ್ದರಿಂದ ಈ ಪ್ರಪಂಚವು ಯಾರದು?" ಎಂದು ಜನರನ್ನು ಕೇಳಿದನು. ಅದಕ್ಕೆ ಜನರೆಲ್ಲಾ "ದೇವರದೇ" ಎಂದು ಹೇಳಿದರು. "ಸೂರ್ಯ, ಚಂದ್ರ, ನಕ್ಷತ್ರಗಳು ಯಾರವು?" ಎಂದು ಕೇಳಿದನು. ಅವರು "ದೇವರವು" ಎಂದರು. "ಈ ಹೊಲ ಮನೆಗಳೆಲ್ಲಾ ಯಾರವು?" ಎಂದು ಕೇಳಿದನು. ಅದಕ್ಕೂ ಅವರು "ಎಲ್ಲಾ ದೇವರವೇ" ಎಂದರು. ಸ್ವಾಮಿಯು "ಇದನ್ನು ನೀವು ನಿಜವಾಗಿಯೂ ನಂಬು ತ್ತೀರೋ?" ಎಂದು ಕೇಳಿದನು. ಅವರು "ಖಂಡಿತ, ಅತ್ಯಂತ ಶ್ರದ್ಧೆಯಿಂದ ನಂಬುತ್ತೇವೆ, ಇದೇ ಸತ್ಯ." ಎಂದು ಹೇಳಿದರು. ಆಗ ಸ್ವಾಮಿಯು "ನೀವೇ ಒಪ್ಪುವಂತೆ ಎಲ್ಲವೂ ದೇವರದಾದಮೇಲೆ ಈ ದೇಹವು ಯಾರದು?" ಎಂದು ಕೇಳಿದನು. ಅವರು "ದೇವರದು" ಎಂದರು. ಸ್ವಾಮಿಯು "ಯಾರ ಕಾಲು? ಯಾರ ಕೈ?" ಎಂದು ಕೇಳಿದನು. ಅವರು "ದೇವರದು, ದೇವರದು" ಎಂದರು. ಹೀಗೆ ಅವರ ವಿಚಾರಸರಣಿಯಿಂದಲೇ ಎಲ್ಲಾ ದೇವರದೆಂದು ಅವರೇ ಒಪ್ಪಿದ್ದರಿಂದ ಜನರು ತಮ್ಮ ತಪ್ಪನ್ನು ತಿಳಿದು ನಾಚಿಕೊಂಡು ಸ್ವಾಮಿಯನ್ನು ಏನೂ ಮಾಡಲಾರದೆ ಬಿಟ್ಟು ಬಿಟ್ಟರು. ಅವರು ಅಜ್ಞಾನಿಗಳಾದ್ದರಿಂದ ಸ್ವಾಮಿಗಳಿಗಿದ್ದಷ್ಟು ಆಳವಾದ ತಿಳಿವಳಿಕೆ ಅವರಿಗಿಲ್ಲ.

೫೫. ಅರ್ಧಶ್ಲೋಕದ (ಸತ್ಯದ) ಸಾಧನೆ

(ಅಲ್‌ಕೊರಾನಿನಲ್ಲಿ ತನಗೆ ಇಷ್ಟವಾದ ಭಾಗದ ಅಭ್ಯಾಸ)

ಮಹಮ್ಮದೀಯರ ಬೈಬಲ್ ಆದ ಅಲ್‌ಕೊರಾನಿನಲ್ಲಿ ಒಂದು ಪ್ರಕರಣದಲ್ಲಿ ಹೇಳಿರುವದೇನೆಂದರೆ "ನಿಮ್ಮ ಜೀವನವನ್ನು ನೀವು ಕುಡಿತಕ್ಕೂ ವಿಷಯಭೋಗಗಳಿಗೂ ಯಥೇಚ್ಛವಾಗಿ ಉಪಯೋಗಿಸಿ ಅಧರ್ಮವನ್ನೂ ಪಾಪವನ್ನೂ ಅವಲಂಬಿಸಿ; ಹಾಗಾದರೆ ನಿಮ್ಮ ಹಾನಿಯನ್ನು ನೀವೇ ಮಾಡಿಕೊಳ್ಳುತ್ತೀರಿ; ನಿಮ್ಮ ನಾಶವನ್ನು ನೀವೇ ಮಾಡಿಕೊಳ್ಳುತ್ತೀರಿ" ಎಂದು. ಒಬ್ಬ ಮಹಮ್ಮದೀಯ ಗೃಹಸ್ಥನು ಸ್ವೇಚ್ಛೆ ಯಾಗಿ ಮದ್ಯಪಾನ ಮಾಡುತ್ತಾ ಅನೀತಿಯ ವಿಷಯಸುಖದಲ್ಲಿ ಲೋಲುಪ್ತನಾಗಿ ದ್ದನು. ಆಗ ಅವನಲ್ಲಿಗೆ ಮಹಮ್ಮದೀಯ ಗುರುವು ಬಂದು, ಕೊರಾನಿನಲ್ಲಿ ತಮ್ಮ ಗುರುಗಳಾದ ಮಹಮ್ಮದ್ ಪೈಗಂಬರರು ವಿಧಿಸಿರುವ ಧರ್ಮನಿಯಮಗಳನ್ನು ಅವನು ಮುರಿದು ನಡೆಯುತ್ತಿದ್ದಾನೆಂದೂ ಹಾಗೆ ಮಾಡಬಾರದೆಂದೂ ಹೇಳಿದನು. ಆ ಕೂಡಲೇ ಈ ಕುಡುಕನು ಅಲ್ ಕೊರಾನಿನಲ್ಲಿರುವ ಆ ಶ್ಲೋಕವನ್ನೇ ಉದಾಹರಿಸಿ "ಇಲ್ಲಿ ನೋಡಿ; ಕೊರಾನಿನಲ್ಲಿ ಹೇಳಿರುವದೇನು? 'ಕುಡಿಯಿರಿ, ಮಜಾ ಮಾಡಿರಿ, ಸ್ವೇಚ್ಛೆಯಾಗಿ ಭೋಗಿಸಿರಿ' ಎಂದಲ್ಲವೇ? ಕೊರಾನೇ ಹೀಗೆ ಹೇಳುತ್ತಿರುವಾಗ ನಾವೇಕೆ ಮಾಡಬಾರದು?" ಎಂದನು.

ಆಗ ಆ ಗುರುವು ಹೇಳಿದನು "ತಮ್ಮಾ! ತಮ್ಮಾ! ಇದೇನು ನೀನು

20082

ಹೇಳುತ್ತಿರುವದು? ಅದರ ಮುಂದಿರುವದೇನು ? ಅದನ್ನೂ ಹೇಳು. ಆ ಶ್ಲೋಕದ ಉತ್ತರಾರ್ಧದಲ್ಲಿ 'ನಿಮ್ಮ ನಾಶವನ್ನು ನೀವೆ ಮಾಡಿಕೊಳ್ಳುತ್ತೀರಿ' ಎಂದಿದೆಯಲ್ಲ? ಅದನ್ನೇಕೆ ಬಿಡುತ್ತಿ ? ನಿನಗೆ ಬೇಕಾದ ಪೂರ್ವಾರ್ಧವನ್ನು ಮಾತ್ರ ಏಕೆ ತೆಗೆದು ಕೊಳ್ಳುತ್ತಿ?" ಎಂದನು. ಆ ಕುಡುಕ ಹೇಳಿದನು : ಅಲ್‌ಕೊರಾನನ್ನು ಪೂರ್ಣವಾಗಿ ಆಚರಣೆಯಲ್ಲಿ ತಂದಿರತಕ್ಕವನು ಈ ಪ್ರಪಂಚದಲ್ಲಿ ಯಾವನೂ ಇಲ್ಲ. ಯಾರಾದರೂ ತಮಗೆ ಸಾಧ್ಯವಾದಷ್ಟನ್ನು ಮಾತ್ರ ಅಭ್ಯಾಸದಲ್ಲಿ ತರುತ್ತಾರೆ. ಕೆಲವರು ಸ್ವಲ್ಪ ಆಚರಿಸ ಬಹುದು; ಇನ್ನು ಕೆಲವರು ಸ್ವಲ್ಪ ಹೆಚ್ಚಾಗಿ ಆಚರಿಸಬಹುದು. ಆದ್ದರಿಂದ ಆ ಶ್ಲೋಕವನ್ನು ಪೂರ್ಣವಾಗಿ ನಾನು ಆಚರಣೆಯಲ್ಲಿ ತರಬೇಕೆಂದು ಏಕೆ ನಿರೀಕ್ಷಿಸು ತ್ತೀರಿ? ಆ ಶ್ಲೋಕದ ಪೂರ್ವಾರ್ಧವನ್ನು ನಾನು ಸಾಧ್ಯವಾದಷ್ಟು ಅಭ್ಯಾಸಮಾಡಿ ಸುಖಿಯಾಗಿದ್ದೇನೆ" ಎಂದನು,

ಆದ್ದರಿಂದ ರಾಮನು ನಿಮ್ಮನ್ನು ಬೇಡುವದೇನೆಂದರೆ, ಆ ಮಹಮ್ಮದೀಯ ಕುಡುಕನ ತರ್ಕವನ್ನು ನೀವೂ ಉಪಯೋಗಿಸಬೇಡಿ. ಪೂರ್ಣಶ್ಲೋಕವನ್ನು ಓದಿ ಅರ್ಥ ಮಾಡಬೇಕು. ಅರ್ಧದಲ್ಲಿಯೇ ನಿರ್ಣಯ ಮಾಡಬಾರದು-ಎಂದು.

೫೬. ವಸ್ತುಗಳು ಏತಕ್ಕಾಗಿ ಪ್ರಿಯವಾಗಿವೆ ?

(ಗಂಗಾನದಿಯ ಮಹಾಪೂರದಲ್ಲಿ ಮಂಗನೂ ಮರಿಗಳೂ)

ವಿವೇಕಿಯಾದ ರಾಜನು ತನ್ನ ರಾಜಧಾನಿಯನ್ನೂ ರಾಜ್ಯವನ್ನೂ ಅಭಿವೃದ್ಧಿ ಪಡಿಸುವದರಲ್ಲಿ ಸುಖಸಂತೋಷಗಳನ್ನು ಹೊಂದಿದರೆ ನೀರೋ ಎಂಬ ಮೂರ್ಖರಾಜನು ತನ್ನ ಸುಂದರ ರಾಜಧಾನಿಯಾದ ರೋಂ ನಗರವನ್ನು ಸುಟ್ಟು ಸೂರೆ ಮಾಡುವದರಲ್ಲಿ ಹೆಚ್ಚಿನ ಸಂತೋಷವನ್ನು ಕಂಡನು. ಅವನು ಸಮೀಪದಲ್ಲಿದ್ದ ಒಂದು ಪರ್ವತಶಿಖರದಲ್ಲಿ ಕುಳಿತು, ಆಕಾಶವನ್ನೆಲ್ಲಾ ಭಯಂಕರ ಜ್ವಾಲೆಗಳಿಂದ ಬೆಳಗಿಸುವ ಅದ್ಭುತವಾದೊಂದು ಬೆಂಕಿಯ ರಾಶಿಯನ್ನು ನೋಡಿ ಸಂತೋಷಪಡಬೇಕೆಂದು ಪ್ರಜಾಸಂಪದ್ಭರಿತವಾದ ರೋಂ ನಗರಕ್ಕೆ ಪೂರ್ಣವಾಗಿ ಬೆಂಕಿ ಹೊತ್ತಿಸಲು ತನ್ನ ಸ್ನೇಹಿತರಿಗೂ ಸೈನಿಕರಿಗೂ ಆಜ್ಞೆ ಮಾಡಿದನು. ಅದರಂತೆ ಇಡೀ ರೋಂ ನಗರವೇ ಬೆಂಕಿಯಿಂದ ಸುಟ್ಟು ಬೂದಿ ಯಾಗುತ್ತಿದ್ದಾಗ ಆ ರುದ್ರರಮ್ಯ ದೃಶ್ಯವನ್ನು ನೋಡುತ್ತಾ ಪರಮಾನಂದದಿಂದ ನೀರೋ ಮಹಾಶಯನು ತನ್ನ ಪಿಟೀಲನ್ನು ನುಡಿಸುತ್ತಿದ್ದನಂತೆ. ಹೀಗೆ ವಿನಾಶವನ್ನಾ ದರೂ ನಾವು ಬಯಸುವದು ನಮ್ಮ ಸುಖಕ್ಕಾಗಿ ಎಂದು ಇದರಿಂದ ಸಿದ್ಧವಾಗುತ್ತದೆ.

ರಾಮನು ಒಮ್ಮೆ ವಿಲಕ್ಷಣವೂ ಕುತೂಹಲಜನಕವೂ ಆದೊಂದು ದೃಶ್ಯವನ್ನು ನೋಡಿದನು. ಒಮ್ಮೆ ಗಂಗಾನದಿಯಲ್ಲಿ ಮಹಾಪೂರ ಬಂದಿತ್ತು. ಅದರ ದಂಡೆಯಲ್ಲಿದ್ದ ಮರಗಳ ಸುತ್ತಲೂ ಪ್ರವಾಹವು ಬಂದು ನಿಮಿಷ ನಿಮಿಷಕ್ಕೂ ಏರುತ್ತಾ ಹೋಯಿತು. ಅವುಗಳಲ್ಲಿ ಒಂದು ಮರದಮೇಲೆ ಅನೇಕ ಕೋತಿಗಳಿದ್ದವು. ಏರಿ ಬರುತ್ತಿದ್ದ ನೀರಿಗೆ

ಹೆದರಿ ಬೇರೆಲ್ಲಿಗೂ ಹೋಗಲಾರದೆ ಒಂದು ತಾಯಿಕೋತಿಯ ಸಮೀಪಕ್ಕೆ ಆದರ ಮರಿಗಳೆಲ್ಲಾ ಬಂದು ತೆಕ್ಕೆಹಾಕಿ ಕುಳಿತುಕೊಂಡವು. ಆ ಕೋತಿಗಳು ಕುಳಿತಿದ್ದ ಕೊಂಬೆಗೇ ನೀರು ಏರಿ ಬಂದಿತು. ಅವು ಇನ್ನೂ ಮೇಲಿನ ಕೊಂಬೆಗೆ ಹೋದವು. ಅಲ್ಲಿಗೂ ನೀರು ಬಂದಿತು. ಎಲ್ಲಕ್ಕಿಂತಲೂ ಮೇಲಿನ ತುಂಟ್ಟತುದಿಯ ಕೊಂಬೆಗೆ ಆ ಕೋತಿಗಳು ಏರಿ ಹೋದವು. ಅಲ್ಲಿಗೂ ನೀರು ಏರಿತು. ಮರಿಗಳೆಲ್ಲಾ ಹೆದರಿ ತಾಯಿಯನ್ನು ಅಪ್ಪಿಕೊಂಡು ಕೂತವು. ಪ್ರವಾಹವು ಮತ್ತೂ ಏರುತ್ತಾ ಬಂದಂತೆ ತಾಯಿಯು ಪ್ರಾಣಭಯದಿಂದ ತಾನೊಂದು ಬದುಕಿದರೆ ಸಾಕೆಂದು ಒಂದೊಂದೇ ಮರಿಗಳನ್ನು ಹಿಡಿದು ತನ್ನ ಕಾಲ ಕೆಳಗೆ ನೀರಿನಲ್ಲಿ ಮುಳುಗಿಸಿಟ್ಟುಕೊಂಡು ತಾನು ಮುಳುಗದಂತೆ ತನ್ನ ಮಟ್ಟವನ್ನು ಏರಿಸಿಕೊಳ್ಳುತ್ತಾ ಹೋಯಿತು. ತಾನು ಬದುಕುವದಕ್ಕಾಗಿ ತನ್ನ ನಾಲ್ಕೈದು ಮರಿಗಳನ್ನು ನಿರ್ದಯವಾಗಿ ಮುಳುಗಿಸಿ ಕೊಂದಿತು. ಯಾವ ವಸ್ತುವಾಗಲೀ ವ್ಯಕ್ತಿಯಾಗಲೀ ನಮಗೆ ಪ್ರಿಯವಾಗುವದು ಅದು ನಮಗೆ ಸುಖವನ್ನು ಕೊಡುವದರಿಂದಲೇ. ಸುಖವನ್ನು ಕೊಡಲಾರದಾದೊಡನೆ ಅದು ಬೇಡವಾಗುತ್ತದೆ.

ಹೀಗೆ ವಿಚಾರ ಮಾಡಿದರೆ ಸುಖವು ಹೊರಗೆಲ್ಲಿಯೂ ಇಲ್ಲ ; ಅದು ನಮ್ಮೊಳಗೇ ಇದೆ, ಎನ್ನುವದು ಸಿದ್ಧವಾಗುತ್ತದೆ.

೫೭. ಪ್ರೇಮದ ರಹಸ್ಯ

(ಲೈಲಾ–ಮಜ್ನು)

ಬೇರೆಯವರ ಮಕ್ಕಳಿಗಿಂತಲೂ ತನ್ನ ಮಗುವೇ ಹೆಚ್ಚು ಮುದ್ದಾಗಿಯೂ ಸುಂದರವಾಗಿಯೂ ಏಕೆ ಕಾಣುವದೆಂದರೆ, ತನ್ನ ಆತ್ಮನ ಪ್ರೇಮವೆಂಬ ಬಂಗಾರದ ಮುಲಾಮನ್ನು ತನ್ನದೆಂಬುವ ಮಗುವಿಗೆ ಹಚ್ಚಿ ಅಭಿಮಾನದಿಂದ ನೋಡುವದರಿಂದಲೇ. ಪ್ರತಿಯೊಬ್ಬನಿಗೂ ತಾನು ಬರೆದ ಸಾಮಾನ್ಯ ಗ್ರಂಥವೂ ಪ್ಲೇಟೋ ಮಹಾಶಯನು ಬರೆದಿರುವ ಮಹದ್‌ಗ್ರಂಥಕ್ಕಿಂತಲೂ ಶ್ರೇಷ್ಠವಾಗಿಯೇ ಕಾಣಬಹುದು. ಏಕೆಂದರೆ, ತನ್ನದೆನ್ನುವ ಪುಸ್ತಕದ ಮೇಲೆ ತನ್ನೊಳಗಿನ ಆತ್ಮಸೂರ್ಯನ ಹೊಂಬೆಳಕು ಮಿನುಗುತ್ತಿರುತ್ತದೆ; ಅದು ಅಂತಸ್ಸ್ವರ್ಗದ ಸೂರ್ಯಪ್ರಕಾಶದಿಂದ ಪವಿತ್ರವೂ ಪ್ರಸನ್ನಮನೋಹರವೂ ಆಗಿ ತೋರುತ್ತದೆ. ಆದ್ದರಿಂದಲೇ ಸಕಲ ಸ್ವರ್ಗವೂ ಸರ್ವಸುಖಗಳ ಉಗಮವೂ ಆನಂದ ಸಾಮ್ರಾಜ್ಯದ ಮಹಾರಾಜಧಾನಿಯೂ ನಿನ್ನೊಳಗೇ ಇದೆಯೆಂದು ವೇದಾಂತವು ಹೇಳುತ್ತದೆ ; ಹಿಂದುಗಳು ಹೇಳುತ್ತಾರೆ. ನಿಜಸ್ಥಿತಿ ಹೀಗಿರುವಾಗ, ಸುಖವನ್ನು ಹೊರಗೆ ಹುಡುಕುವುದು ಎಂಥಾ ದಡ್ಡತನ, ಮೂರ್ಖತನ.

ಇಂಡಿಯಾದೇಶದಲ್ಲಿ ಒಬ್ಬ ಪ್ರಣಯಿಯ (ಪ್ರೇಮಿಯ) ಕತೆಯಿದೆ. ತನ್ನ ಮೆಚ್ಚಿನ ನಲ್ಲೆಯು ತನಗೆ ದೊರಕಲಿಲ್ಲವೆಂದು ಹಗಲಿರುಳೂ ಕೊರಗಿ ಕೊರಗಿ ಒಬ್ಬ ತರುಣನು ಅತಿಶಯ ಸೊರಗಿ ಹೋಗಿದ್ದ. ಆ ಚಿಂತೆಯಿಂದ ಅವನ ಮೈಯಲ್ಲಿ

ರಕ್ತಮಾಂಸಗಳೆಲ್ಲಾ ಕರಗಿದಂತಾಗಿ ಮೂಳೆಯ ಪಂಜರವು ಮಾತ್ರ ಉಳಿದಿತ್ತು. ಆ ದೇಶದ ರಾಜನಿಗೆ ಅದು ತಿಳಿದು ತನ್ನ ಸನ್ನಿಧಿಗೆ ಆ ಪ್ರೇಮಿಯನ್ನು ಕರೆಸಿದನು. ಅವನ ಉತ್ಕಟ ಪ್ರೇಮಕ್ಕೂ ಚಿಂತೆಗೂ ಕಾರಣಳಾಗಿ ಅವನನ್ನು ಸಾವಿನಂಚಿಗೆ ತಂದಿದ್ದ ಅವನ ಪ್ರೇಯಸಿಯು ಇನ್ನೆಷ್ಟು ಸೌಂದರ್ಯವತಿಯೋ ನೋಡಬೇಕೆಂಬ ಕುತೂಹಲದಿಂದ ರಾಜನು ಆ ನಲ್ಲೆಯನ್ನೂ ಕರೆಸಿದ. ಆಕೆಯು ಅತ್ಯಂತ ಕುರೂಪಿಯಿದ್ದುದನ್ನು ಕಂಡು ತನ್ನ ಆಸ್ಥಾನವನ್ನು ಅಲಂಕರಿಸಿದ್ದ ಸುಂದರ ಯುವತಿಯರನ್ನೆಲ್ಲಾ ಕರೆಸಿ, ಅವರಲ್ಲಿ ಇಷ್ಟವಾದ ಯಾನ್ನಾದರೂ ಆರಿಸಿಕೊಳ್ಳಬಹುದೆಂದು ರಾಜನು ಆ ಪ್ರಣಯಿಗೆ ಹೇಳಿದನು. ಆಗ ಅವನು "ಓ ರಾಜ! ಪ್ರೇಮಕ್ಕೆ ಕಣ್ಣಿಲ್ಲವೆಂಬ ನುಡಿಯನ್ನು ಕೇಳಿದ್ದಿ. ಪ್ರೇಮವು ಯಾರನ್ನಾದರೂ ತೀರಾ ಕುರುಡನನ್ನಾಗಿ ಮಾಡುತ್ತದೆ. ರಾಜಾ! ನಿನಗೆ, ನನ್ನ ನಲ್ಲೆಯ ಚೆಲುವನ್ನು ನೋಡಬಲ್ಲ ಕಣ್ಣಿಲ್ಲ. ಆದ್ದರಿಂದ ಮೂರ್ಖನಂತೆ ಮಾತನಾಡುತ್ತಿ. ಆಕೆಯನ್ನು ನೀನು ನನ್ನ ಕಣ್ಣುಗಳಿಂದ ನೋಡಿ ಆಕೆಯು ಸುರೂಪಿಯಾಗಿ ಕಾಣುತ್ತಾಳೋ ಕುರೂಪಿಯಾಗಿ ಕಾಣುತ್ತಾಳೋ ಎನ್ನುವದನ್ನು ಹೇಳು." ಎಂದನು.

ಈ ಜಗತ್ತಿನಲ್ಲಿ ಎಲ್ಲಾ ಮೋಹಕ ಶಕ್ತಿಯ ಗುಟ್ಟೂ ಇಷ್ಟೇ. ನಮ್ಮ ನೋಟದ ರೀತಿಯಿಂದಲೇ ಯಾವ ವಸ್ತುವನ್ನಾದರೂ ನಾವು ಚಿತ್ತಾಕರ್ಷಕವಾಗಿ ಮಾಡಿಕೊಳ್ಳುತ್ತೇವೆ. ಮೆಚ್ಚಿನ ಕಣ್ಣಿನಿಂದ ಒಂದು ವಸ್ತುವನ್ನು ನೋಡಿ ಅದರ ಮೇಲೆ ನಮ್ಮ ಪ್ರೇಮದ ಬೆಳಕನ್ನು ಚೆಲ್ಲಿ ನಾವೇ ಅದರ ಮೋಹದಲ್ಲಿ ಬೀಳುತ್ತೇವೆ. ಗ್ರೀಸ್‌ದೇಶದ ಪುರಾಣದಲ್ಲಿ ಈಕೋ ಎನ್ನುವಳ ಕಥೆಯಿದೆ, ಆಕೆಯು ತನ್ನ ಪ್ರತಿಬಿಂಬವನ್ನು ನೋಡಿ ತಾನೇ ಮೋಹಿತಳಾದಳಂತೆ. ಎಲ್ಲಾ ಸೊಬಗಿನ ಸ್ವಭಾವವೂ ಇಷ್ಟೇ. ನಮ್ಮೊಳಗಿರುವ ಆತ್ಮನ ಸತ್ಯಂ ಶಿವಂ ಸುಂದರಂ ಆಗಿರುವ ಸ್ವಭಾವವೇ ವಸ್ತುಗಳಲ್ಲಿ ಪ್ರತಿಫಲನವಾಗಿ ಅವುಗಳ ಸೊಬಗೆಂದು ತೋರಿ ನಮ್ಮನ್ನು ಆಕರ್ಷಿಸುತ್ತದೆ. ಅದು ಕೇವಲ ನಮ್ಮ ನೆರಳೇ ಹೊರತು ಬೇರೆಯಲ್ಲ. ಹೀಗಿರುವಾಗ, ನಮ್ಮ ನೆರಳನ್ನೇ ನಾವು ಬೆನ್ನಟ್ಟಿ ಬೇಟೆಯಾಡಲೆಳಸುವದು ಎಂಥಾ ಹುಚ್ಚುತನ!

೫೮. ಪ್ರೇಮದ ಪರಮೋತ್ಕಟತೆ

(ದೇವರ ಆಕ್ಷೇಪಕ್ಕೆ ಮಜ್ನುವಿನ ನಿರ್ಭಯವಾದ ಉತ್ತರ)

ರಾಮನು ನಿತ್ಯವೂ ಈ ಸತ್ಯವನ್ನು ತನ್ನ ಅನುಭವದಲ್ಲಿ ನೋಡುತ್ತಿದ್ದಾನೆ. ಕಾಣುವ ಮನುಷ್ಯನಲ್ಲಿ ಅಥವಾ ವ್ಯಕ್ತಿಯಲ್ಲಿ ರಾಮನು ದೇವರನ್ನು ನೋಡಿದಾಗ, ಆ ಮನುಷ್ಯನ ದೇಹವನ್ನೂ ದೇವರೆಂದು ಮನ್ನಿಸಿದಾಗ, ಅಥವಾ ವ್ಯಕ್ತಿಯಲ್ಲಿ ಅವನ ವ್ಯಕ್ತಿತ್ವವನ್ನು ನೋಡದೆ, ಸತ್ಯಸ್ವರೂಪವನ್ನು ನೋಡಿದಾಗ ಅವನಿಗೆ ಕಷ್ಟವಾಗುವದಿಲ್ಲ. ಆದರೆ ವ್ಯಕ್ತಿಯ ದೇಹವನ್ನು ಮಾತ್ರ ನೋಡಿದಾಗ, ಅವನ ವ್ಯಕ್ತಿತ್ವವನ್ನು ಮಾತ್ರ ನೋಡಿದಾಗ ರಾಮನು ಕಷ್ಟಪಡುತ್ತಾನೆ. ಆದರೆ ಹಿಂದಿನ ಅನೇಕ

ಕೊರತೆಗಳಿಂದಲೂ ಗೆಲವುಗಳಿಂದಲೂ ರಾಮನು ಜಾಣನಾಗಿದ್ದಾನೆ. ಈಗ ಅವನು ಯಾರನ್ನಾದರೂ ಕನಸಿನಲ್ಲಿ ಕೂಡ ದೇವರೆಂದಲ್ಲದೆ ಬೇರೆ ಭಾವನೆಯಿಂದ ನೋಡುವ ದಿಲ್ಲ. ನಿಮ್ಮೆಲ್ಲರನ್ನೂ ರಾಮನು ತನ್ನ ಆತ್ಮವನ್ನಾಗಿಯೂ ನಿಮ್ಮ ದೇಹಗಳನ್ನು ತನ್ನ ದೇಹವನ್ನಾಗಿಯೂ ಭಾವಿಸುತ್ತಾನೆ—ಅನುಭವದಲ್ಲಿ ಕಾಣುತ್ತಾನೆ. ರಾಮನು ಹಾಗೆ ಕಾಣುವದರಿಂದ ಇತರರೂ ಅವಶ್ಯವಾಗಿ ಹಾಗೆ ಕಾಣಬೇಕಾಗುತ್ತದೆ. ಮಜ್ನು ಎನ್ನುವವನು ಪ್ರೇಮಿಗಳ ರಾಜನೆನಿಸಿದ್ದನು. ಪ್ರಾಯಶಃ ಯಾರೂ ಎಂದೂ ಅವನ ಹಾಗೆ ಪ್ರೇಮಿಸಿರಲಿಲ್ಲ. ಆದರೆ ಅವನ ಪ್ರೇಮವು ದೇಹ ಸಂಬಂಧವಾದುದು, ವ್ಯಕ್ತಿ ಸಂಬಂಧವಾದುದು, ಅವನ ಪ್ರೇಯಸಿಯ ಸಂಬಂಧವಾದುದು ಆಗಿತ್ತು. ಅವನು ತನ್ನ ಪ್ರೇಯಸಿಯನ್ನು ಕಾಣದೆ, ವಿರಹತಪ್ತನಾಗಿ, ಹುಚ್ಚನಾದನು. ಅರಣ್ಯದಲ್ಲೆಲ್ಲಾ ಭ್ರಮಿಸಿದನು. ಅವನು ಒಂದು ಗುಲಾಬಿಯ ಹೂವನ್ನು ಕಂಡರೂ ಮರವನ್ನು ಕಂಡರೂ ಜಿಂಕೆಯನ್ನು ಕಂಡರೂ ಅವುಗಳಲ್ಲಿ ತನ್ನ ಪ್ರೇಯಸಿಯನ್ನೇ ಕಂಡು ಆಲಂಗಿಸಿಕೊಳ್ಳುವದಕ್ಕೆ ಓಡುತ್ತಿದ್ದನು. ಅಡವಿಯಲ್ಲಿ ಮೂರ್ಛೆ ಬಂದು ಬಿದ್ದನು; ಅವನ ತಂದೆಯು ಅವನನ್ನು ಹುಡುಕಿಕೊಂಡು ಬಂದು ಎಚ್ಚರಿಸಿದರೆ ಅವನು ತನ್ನ ತಂದೆಯನ್ನೂ ಗುರುತಿಸಲಿಲ್ಲ. ಅವನ ಮನಸ್ಸು ಉತ್ಕಟ ಪ್ರೇಮದಿಂದ ಪ್ರೇಯಸಿ ಯಲ್ಲಿ ತನ್ಮಯವಾಗಿದ್ದಿತು. ಅದು ಒಂದು ಹೊರತು ಪ್ರಪಂಚದಲ್ಲಿ ಅವನಿಗೆ ಬೇರೆ ಏನೂ ತೋರುತ್ತಿರಲಿಲ್ಲ. ಆದರೆ ಅವನು ಜೀವಂತನಾಗಿರುವವರೆಗೂ ಪ್ರೇಯಸಿಯನ್ನು ಕಾಣಲಿಲ್ಲ. ಅನಂತರ ಮಜ್ನು ದೇವರ ಸಮ್ಮುಖದಲ್ಲಿ ಕರೆದುಕೊಂಡು ಬರಲ್ಪಟ್ಟ; ದೇವರು ಅವನನ್ನು ಕುರಿತು: "ಮೂರ್ಖ! ಪ್ರಾಪಂಚಿಕ ವಸ್ತುವನ್ನು ನೀನೇಕೆ ಅಷ್ಟೊಂದು ಪ್ರೀತಿಸಿದೆ? ನೀನು ನಿನ್ನ ಪ್ರೇಯಸಿಯ ಮೇಲೆ ಸೂರೆಮಾಡಿ ವ್ಯರ್ಥ ಗೊಳಿಸಿದ ಪರಮೋತ್ಕಟ ಪ್ರೇಮದ ಹತ್ತು ಲಕ್ಷ ಭಾಗದಲ್ಲಿ ಒಂದಂಶದಿಂದ ಮಾತ್ರ ನನ್ನನ್ನು ಪ್ರೀತಿಸಿದ್ದರೆ ನಾನು ನಿನ್ನನ್ನು ಸ್ವರ್ಗಾಧಿಪತಿಯನ್ನಾಗಿ ಮಾಡುತ್ತಿದ್ದೆ" ಎಂದನು. ಮಜ್ನು ದೇವರಿಗೆ ಹೀಗೆ ಉತ್ತರಿಸಿದನೆಂದು ಕವಿಯು ಹೇಳಿದ್ದಾನೆ:

"ದೇವ! ನೀನು ಹೀಗೆ ಹೇಳಿದ್ದಕ್ಕಾಗಿ ನಿನ್ನನ್ನು ಕ್ಷಮಿಸಿದ್ದೇನೆ. ನನ್ನಿಂದ ನೀನು ಪ್ರೇಮಿಸಲ್ಪಡಬೇಕೆಂದು ನಿನಗೆ ಅಷ್ಟು ಕಾತುರವಿದ್ದಿದ್ದರೆ ನನ್ನ ಪ್ರೇಯಸಿಯಾಗಿ ನೀನೇಕೆ ನನ್ನಲ್ಲಿಗೆ ಬರಲಿಲ್ಲ? ನನ್ನಿಂದ ಪೂಜಿಸಿಕೊಳ್ಳಬೇಕೆಂದು ನಿನಗೆ ಬಯಕೆ ಇದ್ದಿದ್ದರೆ ನೀನು ನನ್ನ ಹೃದಯಾರಾಧ್ಯ ದೇವತೆಯಾದ ಆ ನನ್ನ ಪ್ರೇಯಸಿ ಏಕೆ ಆಗಲಿಲ್ಲ?" ಅವನು ಎಲ್ಲ ವಸ್ತುಗಳಲ್ಲಿಯೂ ತನ್ನ ಪ್ರೇಯಸಿಯನ್ನೇ ಕಾಣುವದಕ್ಕೆ ಯಾವ ಉತ್ಕಟ ಪ್ರೇಮವು ಕಾರಣವಾಗಿದ್ದಿತೋ ಸತ್ಯದಲ್ಲಿ, ಆತ್ಮನಲ್ಲಿ ಆ ಉತ್ಕಟ ಪ್ರೇಮವು ನಿಮಗಿರಬೇಕು. ಆದರೆ ಅವನು ಪ್ರಾಪಂಚಿಕ ವಸ್ತುವನ್ನು ಪ್ರೇಮಿಸಿದ್ದ ರಿಂದ ದುಃಖವನ್ನು ಅನುಭವಿಸಿದನು. ದೈವೀಪ್ರೇಮವು ಆ ಮಟ್ಟಕ್ಕೆ ಏರಿದರೆ ತಂದೆಯಲ್ಲಿಯೂ ತಾಯಿಯಲ್ಲಿಯೂ ಹೆಂಡತಿಯಲ್ಲಿಯೂ—ಪ್ರತಿಯೊಬ್ಬರಲ್ಲಿಯೂ

ದೇವರನ್ನು ಹೊರತು ಬೇರೆ ಏನನ್ನೂ ನೀವು ನೋಡಲಾರಿರಿ—ಆಗ ನೀವೇ ದೇವರಾಗುತ್ತೀರಿ.

ನೀವು ಹೇಳಬಹುದು : "ನಮಗೆ ನಿಮ್ಮ ಆ ದೇವರು ಬೇಕಾಗಿಲ್ಲ ; ನಮ್ಮೀ ನರಕದಲ್ಲಿಯೇ ನಾವು ಸುಖವಾಗಿದ್ದೇವೆ" ಎಂದು. ರಾಮನು, ಹೇಳುವದೇನೆಂದರೆ, "ಇರಬಹುದು, ನೀವು ಸುಖವಾಗಿಯೇ ಇರಬಹುದು. ಆದರೆ, ಎಂದಾದರೂ ನೀವು ಅಲ್ಲಿಗೆ ಬರಲೇಬೇಕು. ಪ್ರಪಂಚದಲ್ಲಿ, ತಿಳಿದೋ ತಿಳಿಯದೆಯೋ ಎಲ್ಲಕ್ಕೂ ದೇವರೇ ಗತಿ ; ದೇವರೇ ಗುರಿ. ಆದ್ದರಿಂದ ಕೋಟಿ ಕೋಟಿ ವರ್ಷಗಳು ಕಷ್ಟಪಟ್ಟು ತಡವಾಗಿ ನಡೆದು ಹೋಗುವದಕ್ಕಿಂತಲೂ ರೈಲಿನಲ್ಲಿಯೋ ಎಲೆಕ್ಟ್ರಿಕ್ ಕಾರಿನಲ್ಲಿಯೋ ವಿಮಾನದಲ್ಲಿಯೋ ಏಕೆ ಇಂದೇ ಈಗಲೇ ಹೋಗಬಾರದು ? ಎಲ್ಲರೂ ಅಲ್ಲಿಗೆ ಹೋಗಿ ಸೇರಬೇಕೆಂಬುದೇ ಪ್ರಕೃತಿಯ ಯೋಜನೆ ಮತ್ತು ಉದ್ದೇಶ. ಯಾರಾದರೂ ಯಾವ ಪ್ರಾಪಂಚಿಕ ವಸ್ತುವಿಗಾದರೂ ಅತಿ ಮಹತ್ತ್ವವನ್ನು ಕೊಟ್ಟು ಅತ್ಯಂತವಾಗಿ ಪ್ರೀತಿಸುವದಕ್ಕೆ ತೊಡಗಿದರೆ ಏನಾದರೂ ಅನಿರೀಕ್ಷಿತವೂ ಅವರ್ಣನೀಯವೂ ಆದ ಕಾರಣವು ಒದಗಿ ಅದನ್ನು ಕಸಿದುಕೊಂಡು ಹೋಗುತ್ತದೆ. ಇದೇ ಅಬಾಧಿತವಾದ ಪ್ರಕೃತಿ ನಿಯಮ. ಪ್ರಿಯವಸ್ತು ವಿಯೋಗದಿಂದ ದುಃಖವಾಗುತ್ತದೆ. ಇದರಿಂದ ವಿವೇಕಿಯು ಪಾಠವನ್ನು ಕಲಿತು ದೇವರ ಕಡೆಗೆ ತಿರುಗುತ್ತಾನೆ; ಅಥವಾ ಮನಸ್ಸಿನ ಸಮತೆಯನ್ನು ಸಾಧಿಸುತ್ತಾನೆ. ಅವಿವೇಕಿಯು ತನ್ನ ದುಃಖಕ್ಕೆ ಹೊರಗಿನ ಪರಿಸ್ಥಿತಿಯೂ ಬೇರೊಬ್ಬರೂ ಕಾರಣರೆಂದು ಆಕ್ಷೇಪಿಸಿ ಅಸಮಾಧಾನಗೊಂಡು ತನ್ನ ಪ್ರಿಯವಸ್ತುಗಳನ್ನು ಬದಲಾಯಿಸುತ್ತಾ ಹೆಚ್ಚು ಹೆಚ್ಚು ಕಷ್ಟಗಳಿಗೆ ಒಳಗಾಗುತ್ತಾನೆ. ಪ್ರಾಪಂಚಿಕ ವಸ್ತುಗಳನ್ನು ನಂಬಿದವರಿಗೆ ಈ ಕಷ್ಟ ಸುಖಗಳು ತಪ್ಪುವದೇ ಇಲ್ಲ. ಪ್ರತಿಯೊಂದು ಕಷ್ಟದ ಹಗಲನ್ನು ಸುಖದ ರಾತ್ರಿಯೂ ಪ್ರತಿಯೊಂದು ಸುಖದ ರಾತ್ರಿಯನ್ನು ಕಷ್ಟದ ಹಗಲೂ ಹಿಂಬಾಲಿಸುತ್ತವೆ. ಶಾಂತಿಗಾಗಿ ಒಳಗಿನ ಆತ್ಮ (ಚಂದ್ರನ) ಸೂರ್ಯನ ಕಡೆ ಮನಸ್ಸು ತಿರುಗಲೆಂದೇ ಪ್ರಕೃತಿಯ ಉದ್ದೇಶ. ಭೂಮಿಯ ಮೇಲೆ ಹಗಲು ರಾತ್ರಿಗಳಿವೆಯೇ ಹೊರತು ಸೂರ್ಯನಲ್ಲಿ ಇಲ್ಲ. ಸೂರ್ಯನ ಸುತ್ತಲೂ ಭೂಮಿಯು ತಿರುಗುವದರಿಂದಲೇ ಹಗಲು ರಾತ್ರಿಗಳು ಉಂಟಾಗುವದು. ಸೂರ್ಯನಲ್ಲಿ ರಾತ್ರಿಯೇ ಇಲ್ಲ ; ಯಾವಾಗಲೂ ಇರುವದು ದೈವೀಪ್ರಕಾಶದ ಹಗಲೇ.

೫೯. ಯಾವದೊಂದು ವಸ್ತು ಅಥವಾ ವ್ಯಕ್ತಿ ಪ್ರಿಯವಾಗಲು ಕಾರಣವೇನು?

(ಯಾಜ್ಞವಲ್ಕ್ಯ ಮತ್ತು ಮೈತ್ರೇಯಿ)

ಯಾಜ್ಞವಲ್ಕ್ಯ ಮಹರ್ಷಿಗೆ ಕಾತ್ಯಾಯನೀ ಮತ್ತು ಮೈತ್ರೇಯೀ ಎಂಬ ಇಬ್ಬರು ಹೆಂಡಿರಿದ್ದರು. ಅವನಲ್ಲಿ ಅತ್ಯಂತ ಮಹತ್ತಾದ ಸಂಪತ್ತು ಇದ್ದಿತು.

ಅವನು ಇಂಡಿಯಾ ದೇಶದಲ್ಲಿ ಅತ್ಯಂತ ಐಶ್ವರ್ಯವಂತನಾದ ರಾಜನ ಗುರುವಾಗಿದ್ದನು. ತನ್ನ ಆಸ್ತಿಯನ್ನೆಲ್ಲಾ ಎರಡು ಸಮಭಾಗಮಾಡಿ ಇಬ್ಬರು ಹೆಂಡರಿಗೆ ಹಂಚಿಕೊಟ್ಟು ತಾನು ಅರಣ್ಯದಲ್ಲಿ ಏಕಾಂತವಾಸದಲ್ಲಿ ತಪೋಮಯ ಜೀವನವನ್ನು ನಡೆಸಬೇಕೆಂದು ಆ ಮಹರ್ಷಿಯು ಇಚ್ಛಿಸಿದನು. ಆದರೆ, ಲೌಕಿಕ ಸಂಪತ್ತು ಅಮೃತತ್ವಕ್ಕೆ ಸಾಧನವಾಗಿದ್ದರೆ, ತನ್ನ ಪತಿಯು ಅದನ್ನು ತ್ಯಾಗಮಾಡುತ್ತಿರಲಿಲ್ಲ, ಎಂದು ಆಲೋಚಿಸಿ ಮೈತ್ರೇಯಿಯು ತನ್ನ ಭಾಗವನ್ನು ತೆಗೆದುಕೊಳ್ಳಲು ನಿರಾಕರಿಸಿದಳು. ಭಾರತದೇಶದಲ್ಲಿಯೇ ಅತ್ಯಂತ ಶ್ರೀಮಂತನಾದ ತನ್ನ ಪತಿಯು, ತನ್ನ ಹಿಂದಿನ ಜೀವನಕ್ಕಿಂತಲೂ ಬೇರೆ ಬಗೆಯಾದ ಮುಂದಿನ ಜೀವನದಲ್ಲಿ ಹೆಚ್ಚು ಸುಖ ಸಂತೋಷಗಳೂ ಶಾಂತಿಯೂ ಇಲ್ಲದಾಗಿದ್ದರೆ, ಆ ಹಿಂದಿನ ಜೀವನದ ಸಕಲ ಸಂಪತ್ತನ್ನೂ ಕೊಟ್ಟುಬಿಡುತ್ತಿರಲಿಲ್ಲ, ಎಂದು ಮೈತ್ರೇಯಿಯ ಮನಸ್ಸಿನಲ್ಲಿ ವಿಚಾರವು ಹುಟ್ಟಿತು. ಆಕೆಯು ತನ್ನ ಪತಿಯನ್ನು ಕುರಿತು, "ದೇವ, ಆಧ್ಯಾತ್ಮಿಕ ಸಂಪತ್ತಿನಲ್ಲಿ ಹೆಚ್ಚು ಸುಖವಿದೆಯೊ, ಲೌಕಿಕ ಸಂಪತ್ತಿನಲ್ಲಿ ಸುಖವಿದೆಯೋ? ಅಮೃತತ್ವಕ್ಕೆ ಯಾವುದು ಸಾಧನ? ಐಹಿಕ ಸಂಪತ್ತಿನಿಂದ ಸಾವಿಲ್ಲದಂತೆ ಮಾಡಿಕೊಳ್ಳಲಾಗುವದೆ? ಆದರಿಂದ ಮೃತ್ಯುವನ್ನು ಜಯಿಸಬಹುದೆ.?" ಎಂದು ಕೇಳಿದಳು,

ಯಾಜ್ಞವಲ್ಕ್ಯರು ಹೇಳಿದ್ದೇನೆಂದರೆ, "ಐಶ್ವರ್ಯವಂತರ ಜೀವನದಲ್ಲಿ ನಿಜವಾದ ಸುಖವಿಲ್ಲ; ಶಾಂತಿಯಿಲ್ಲ; ಸ್ವಾತಂತ್ರ್ಯವಿಲ್ಲ. ಆದರಿಂದ ಅಮೃತತ್ವವಿಲ್ಲ; ಸಾವನ್ನು ತಪ್ಪಿಸಿಕೊಳ್ಳುವದು ಸಾಧ್ಯವಲ್ಲ."

ಮೈತ್ರೇಯಿ, "ಸಂಸಾರದ ಆಶಾಪಾಶಗಳಿಂದಲೂ ದುಃಖದಿಂದಲೂ ಬಂಧನ್ನದಿಂದಲೂ ಪೂರಾ ಬಿಡುಗಡೆಯಾಗುವುದು ಹೇಗೆ? ಜೀವನದ ಈ ಅಮೃತವನು ದಯವಿಟ್ಟು ವಿವರಿಸಬೇಕು. ನನಗೆ ಇದೊಂದೇ ಬೇಕಾಗಿದೆ." ಎಂದು ಕೇಳಿದಳು.

ಯಾಜ್ಞವಲ್ಕ್ಯರು ತಮ್ಮ ಎಲ್ಲಾ ಲೌಕಿಕ ಸಂಪತ್ತನ್ನು ಕಾತ್ಯಾಯನಿಗೂ ಪಾರಮಾರ್ಥಿಕ ಸಂಪತ್ತನ್ನು ಪೂರ್ಣವಾಗಿ ಮೈತ್ರೇಯಿಗೂ ಹಂಚಿಕೊಟ್ಟರು. ಆ ಆಧ್ಯಾತ್ಮಿಕ ಸಂಪತ್ತು ಯಾವದೆಂಬದನ್ನು ಬೃಹದಾರಣ್ಯಕ ಉಪನಿಷತ್ತಿನಲ್ಲಿ ಹೇಳಿದೆ.

"ನ ವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತ್ಯಾತ್ಮನಸ್ತು
ಕಾಮಾಯ ಪತಿಃ ಪ್ರಿಯೋ ಭವತಿ।

ನ ವಾ ಅರೇ ಜಾಯಾಯೈ ಕಾಮಾಯ ಜಾಯಾ ಪ್ರಿಯಾ ಭವತ್ಯಾತ್ಮನಸ್ತು
ಕಾಮಾಯ ಜಾಯಾ ಪ್ರಿಯಾ ಭವತಿ॥ (ಬೃಹದಾರಣ್ಯಕ ಉಪನಿಷತ್)

ಈ ವಾಕ್ಯಕ್ಕೆ ಅನೇಕ ಅರ್ಥಗಳಿರಬಹುದು. ಮ್ಯಾಕ್ಸ್ ಮುಲ್ಲರ್ ಒಂದು ಬಗೆಯಿಂದ ಅರ್ಥಮಾಡುತ್ತಾನೆ; ಹಿಂದೂಗಳು ಇನ್ನೊಂದು ಬಗೆಯಲ್ಲಿ ವ್ಯಾಖ್ಯಾನ

ಮಾಡುತ್ತಾರೆ. ಎರಡೂ ಒಂದೊಂದು ದೃಷ್ಟಿಯಿಂದ ಸರಿಯೇ. ಒಂದು ವ್ಯಾಖ್ಯಾನವೇನೆಂದರೆ, ಪತಿಯಲ್ಲಿ ಇರುವ ಕೇವಲ ಸದ್ಗುಣ-ಸೌಂದರ್ಯಗಳ ದೆಸೆಯಿಂದಲೇ ಅವನು ಪತ್ನಿಗೆ ಪ್ರಿಯನಾಗುವದಿಲ್ಲ; ಮತ್ತೇನೆಂದರೆ, ಪತಿಯು ಆಕೆಗೆ ಕನ್ನಡಿಯಂತಾಗುತ್ತಾನೆ. ನಮ್ಮನ್ನೇ ನಾವು ಕನ್ನಡಿಯಲ್ಲಿ ನೋಡಿಕೊಂಡು ಸಂತೋಷಪಡುವಂತೆ ಪತ್ನಿಯು ಪತಿಯಲ್ಲಿ ತನ್ನನ್ನು ತಾನು ನೋಡಿಕೊಂಡು ಪ್ರೇಮಿಸಿ ಸಂತೋಷಪಡುತ್ತಾಳೆ. ಆದ್ದರಿಂದ ಅವನು ಪ್ರಿಯನಾಗುತ್ತಾನೆ.

ಇನ್ನೊಂದು ಅರ್ಥವೇನೆಂದರೆ, ಗಂಡನಿಗಾಗಿ ಗಂಡನು ಪ್ರಿಯನಾಗುವದಿಲ್ಲ. ಹೆಂಡತಿಯು ತನ್ನ ಸುಖಕ್ಕಾಗಿಯೇ ಗಂಡನನ್ನು ಪ್ರೀತಿಸುತ್ತಾಳೆ; ಗಂಡನು ಪ್ರಿಯನಾಗುತ್ತಾನೆ. ಹೆಂಡತಿಯು ನಿಜವಾದ ಸತ್ಯವನ್ನೇ, ದೇವರನ್ನೇ, ದಿವ್ಯತೆಯನ್ನೇ ತನ್ನ ಗಂಡನಲ್ಲಿ ನೋಡಬೇಕು. ಒಬ್ಬರು ಮಾಡುವ ಪ್ರೇಮಕ್ಕೆ ಪ್ರತಿಯಾಗಿ ಇನ್ನೊಬ್ಬರು ಪ್ರೇಮಮಾಡದಿದ್ದರೆ,-ಪ್ರೇಮರಸವನ್ನು ಪ್ರತಿಪ್ರೇಮವು ಆದರಿಸದಿದ್ದರೆ– ಯಾರೂ ಪ್ರೇಮಮಾಡುವದಿಲ್ಲ. ಇದರಿಂದ ಏನು ತಿಳಿಯುವದೆಂದರೆ, ನಾವು ಪ್ರೀತಿಸುವದು ಇನ್ನೊಬ್ಬರಲ್ಲಿ ಪ್ರತಿಫಲನವಾದ ನಮ್ಮನ್ನೇ ಹೊರತು ಅವರನ್ನಲ್ಲ. ಇನ್ನೊಬ್ಬರಲ್ಲಿರುವ ನಮ್ಮನ್ನೇ ನಾವು ನೋಡಿಕೊಂಡು ಪ್ರೀತಿಸುತ್ತೇವೆ. ನಮ್ಮಲ್ಲಿರುವ ನಿಜಾತ್ಮನನ್ನು, ದೇವರನ್ನು ನಾವು ನೋಡಬೇಕಾಗಿದೆ. ತನ್ನೊಳಗೆ ತಿರುಗಿ, ನಿಜವಾದ ತನ್ನನ್ನು ನೋಡಿ ಆನಂದ ಪಡಲಾರದೆ ಹೊರಗೆ ನೋಡುವ ಕಣ್ಣು ತನಗೆ ಅನುಕೂಲವಾಗಿ ಕನ್ನಡಿಯಂತಿರುವ ಇನ್ನೊಬ್ಬರಲ್ಲಿ–ಇನ್ನೊಂದು ವಸ್ತುವಿನಲ್ಲಿ– ಆ ತನ್ನನ್ನು ಕಂಡು ಪ್ರೀತಿಸಿ, ಸಂತೋಷಪಡುತ್ತದೆ. ನಾವು ಯಾರನ್ನೂ ಅವರಿಗಾಗಿ ಪ್ರೀತಿಸುವದಿಲ್ಲ; ನಮಗಾಗಿಯೇ ನಮ್ಮ ಸುಖಕ್ಕಾಗಿಯೇ ಪ್ರೀತಿಸುವದು, ಯಾವ ವಸ್ತುವು ಪ್ರಿಯವಾಗುವದೂ ನಮ್ಮ ನಿಜಾತ್ಮಕ್ಕಾಗಿಯೇ ಎನ್ನುವ ತತ್ತ್ವಾರ್ಥವನ್ನು ಚೆನ್ನಾಗಿ ಪರೀಕ್ಷೆಮಾಡಿ, ಸೂಕ್ಷ್ಮವಾಗಿ ಪರಿಶೀಲಿಸಿ, ಪರಿಶೋಧನೆಮಾಡಿ. ಎಲ್ಲಾ ಮಾಧುರ್ಯವೂ ಸೌಂದರ್ಯವೂ ಇರುವದು ನಮ್ಮ ಆತ್ಮದಲ್ಲಿಯೇ. ಆ ಸತ್ಯದಿಂದ ಚಿಮ್ಮುವ ಭಾವನೆಗಳನ್ನು ತಪ್ಪಾಗಿ ತಿಳಿಯಬೇಡಿ; ತಪ್ಪಾಗಿ ಬಳಸಬೇಡಿ, ನಿಮ್ಮನ್ನು ಮೇಲೇರಿಸುವದಕ್ಕೆ ಉದ್ದಿಷ್ಟವಾದ ಏಣಿಯು ಅಜ್ಞಾನ ದುಃಖಗಳಲ್ಲಿ ನೀವು ಜಾರಿ ಬೀಳುವದಕ್ಕೆ ಕಾರಣವಾಗದಿರಲಿ. ಇದನ್ನು ಚೆನ್ನಾಗಿ ಪರೀಕ್ಷೆಮಾಡಿ; ನಿಜವಾದ ಮಾಧುರ್ಯವೂ ನಿಜವಾದ ಸಂತೋಷವೂ ನಿಜವಾದ ಸುಖವೂ ಎಲ್ಲಿದೆಯೆಂಬದು ನಿಮಗೆ ತಿಳಿಯುತ್ತದೆ. ಅದು ನಿಮ್ಮೊಳಗೇ ನಿಮ್ಮ ನಿಜಾತ್ಮನಲ್ಲಿಯೇ ಇದೆ, ನಿಮ್ಮೊಳಗಿರುವ ದೇವರಲ್ಲಿಯೇ ಇದೆ. ಅದನ್ನು ಚೆನ್ನಾಗಿ ಮನಗಂಡು ಬಿಡುಗಡೆ ಹೊಂದಿರಿ, ಮುಕ್ತರಾಗಿರಿ. ಅದನ್ನು ತಿಳಿದು ಎಲ್ಲಾ ಪ್ರಾಪಂಚಿಕ ಆಶೆಗಳನ್ನೂ ಮೀರಿ ನಿಲ್ಲಿರಿ. ಈ ಕೀಳೂ ಕ್ಷುದ್ರವೂ ಆದ ಎಲ್ಲಾ ಕಾಮನೆಗಳನ್ನೂ ಮೆಟ್ಟಿನಿಂತು ನಿಮ್ಮನ್ನು ನೀವು ಉದ್ಧಾರಮಾಡಿಕೊಳ್ಳಿ. ದೇವರಲ್ಲಿ ಒಂದಾಗಿರಿ.

ನ ವಾ ಅರೇ ಪುತ್ರಾಣಾಂ ಕಾಮಾಯ ಪುತ್ರಾಃ ಪ್ರಿಯಾ ಭವಂತ್ಯಾತ್ಮನಸ್ತು
ಕಾಮಾಯ ಪುತ್ರಾಃ ಪ್ರಿಯಾ ಭವಂತಿ । (ಬೃ. ಉ.)

ಮಕ್ಕಳಿಗಾಗಿ ಮಕ್ಕಳು ಪ್ರಿಯರಾಗುವದಿಲ್ಲ; ಆತ್ಮನಿಗಾಗಿ ಮಕ್ಕಳು ಪ್ರಿಯರಾಗುತ್ತಾರೆ ಮಕ್ಕಳು ಅವಿಧೇಯರೂ ವಿರೋಧಿಗಳೂ ಆದರೆ, ನಿಮಗೆ ತುಂಬಾ ದುಃಖವಾಗುತ್ತದೆ; ಅವರನ್ನು ನೀವು ಹೊರಗಟ್ಟಿಬಿಡತ್ತೀರಿ. ಆಗ ಯಾರಿಗಾಗಿ ಮಕ್ಕಳು ಪ್ರಿಯರಾಗಿದ್ದಾರೆಂಬದು ಸ್ಪಷ್ಟವಾಗುತ್ತದೆ. ಕೆಲವು ವಸ್ತುಗಳು ನಿಮ್ಮ ಮಕ್ಕಳಿಗಾಗಿ ನಿಮಗೆ ಪ್ರಿಯವಾಗುತ್ತವೆ; ಆ ವಸ್ತುಗಳಿಗಾಗಿ ವಸ್ತುಗಳ ಪ್ರೀತಿಯಲ್ಲ. ಹಾಗೆಯೇ ಆ ಮಕ್ಕಳೂ ನಿಮಗಾಗಿ, ನಿಮ್ಮ ನಿಜಾತ್ಮನಿಗಾಗಿ ಪ್ರಿಯರಾಗುತ್ತಾರೆ. ಮಕ್ಕಳಿಗಿಂತಲೂ ಹೆಚ್ಚಿನ ಸುಖವು ಆತ್ಮನಲ್ಲಿದೆ.

"ನ ವಾ ಅರೇ ವಿತ್ತಸ್ಯ ಕಾಮಾಯ ವಿತ್ತಂ ಪ್ರಿಯಂ ಭವತ್ಯಾತ್ಮನಸ್ತು
ಕಾಮಾಯ ವಿತ್ತಂ ಪ್ರಿಯಂ ಭವತಿ।" (ಬೃ.ಉ.)

"ಆಸ್ತಿ, ಐಶ್ವರ್ಯ. ಸಂಪತ್ತು ಗಳಿಗಾಗಿ ಅವು ಪ್ರಿಯವಾಗುವುದಿಲ್ಲ. ಆತ್ಮನಿಗಾಗಿ ಅವು ಪ್ರಿಯವಾಗುತ್ತವೆ.

ಈ ದೇವರನ್ನಾಗಲೀ ಆ ದೇವರನ್ನಾಗಲೀ ಯಾವ ದೇವರನ್ನಾಗಲೀ ನೀವು ಪ್ರಾರ್ಥಿಸುವದೇನೆಂದರೆ, "ಓ ದೇವರೆ, ನೀನು ಪರಮಾನಂದಸ್ವರೂಪ, ಅನಂತ ಮಹಿಮ, ಅಪಾರ ಪ್ರೇಮ, ಕರುಣಾಸಾಗರ, ಸರ್ವಜ್ಞ, ಸರ್ವಶಕ್ತ, ಸರ್ವೇಶ್ವರ, ಸರ್ವಾಂತರ್ಯಾಮಿ, ಸರ್ವಕರ್ತಾ" ಇತ್ಯಾದಿಯಾಗಿ ಹೀಗೇಕೆ ಪ್ರಾರ್ಥಿಸುತ್ತೀರಿ? ಏಕೆಂದರೆ, ದೇವರು ನಿಮ್ಮ ಇಚ್ಛೆಯನ್ನೆಲ್ಲಾ ಪೂರೈಸುತ್ತಾನೆ; ನಿಮ್ಮ ನಿಜಾತ್ಮನನ್ನು ಸೇವಿಸುತ್ತಾನೆ, ಸಂತೋಷಪಡಿಸುತ್ತಾನೆ; ಸಂತೃಪ್ತಿಪಡಿಸುತ್ತಾನೆ; ನಿಮ್ಮನ್ನು ಎಲ್ಲಾ ಬಗೆಯಿಂದ ಅನುಗ್ರಹಿಸುತ್ತಾನೆ, ಆದ್ದರಿಂದ ನಿಮಗಾಗಿ, ನಿಮ್ಮ ಸುಖಕ್ಕಾಗಿ ನೀವು ದೇವರನ್ನು ಪ್ರೀತಿಸುವದೇ ಹೊರತು, ದೇವರಿಗಾಗಿ ದೇವರನ್ನು ಪ್ರೀತಿಸುವದಿಲ್ಲ. ಇದನ್ನು ಚೆನ್ನಾಗಿ ನೆನಪಿನಲ್ಲಿಡಿ. ಒಂದು ವೇಳೆ ದೇವರು ನಿಮ್ಮ ಇಷ್ಟಾರ್ಥವನ್ನು ನೆರವೇರಿಸದಿದ್ದರೆ, ಅವನ ಮೇಲೆ ಸಿಟ್ಟು ಮಾಡುತ್ತೀರಿ; ಅವನನ್ನು ನಿಂದಿಸುತ್ತೀರಿ; ಅವನ ಪೂಜೆಯನ್ನೂ ಪ್ರಾರ್ಥನೆಯನ್ನೂ ಬಿಟ್ಟು ಅವನನ್ನು ದ್ವೇಷಿಸುತ್ತೀರಿ. ಆದರಿಂದ ಎಲ್ಲಾ ಸುಖ ಸಂತೋಷಗಳಿಗೂ ಆನಂದಕ್ಕೂ ನಿಜಾತ್ಮನೇ ಮೂಲ. ಅದನ್ನು ತಿಳಿದು ಆನಂದವಾಗಿರಿ.

೬೦. ಪ್ರಾಪಂಚಿಕ ಪ್ರೇಮದ ಫಲ
(ಕೃಷ್ಣ ಮತ್ತು ಕಾಳಿಂಗ ಸರ್ಪ)

ಇಂಡಿಯಾ ದೇಶದ ಒಂದು (ಭಾಗವತ) ಶಾಸ್ತ್ರದಲ್ಲಿ ಒಂದು ಕಥೆ ಇದೆ. ಇಂಡಿಯಾ ದೇಶದ ಕ್ರಿಸ್ತನಾದ ಭಗವಾನ್ ಕೃಷ್ಣನು ಒಂದು ಮಹಾಸರ್ಪದಿಂದ

ನುಂಗಲ್ಪಡುತ್ತಾನೆ. ಕೃಷ್ಣನು ಅದರ ಹೊಟ್ಟೆಯಲ್ಲಿ ಹೋದ ಮೇಲೆ ಕೈಯಲ್ಲಿದ್ದ ಕಠಾರಿಯಿಂದ ಅದರ ಹೃದಯವನ್ನು ಬಗಿದುಕೊಂಡು ಹೊರಗೆ ಬರುತ್ತಾನೆ. ಸರ್ಪವು. ಹೃದಯವು ಬಿರಿದು ರಕ್ತಸುರಿದು ಸಾಯುತ್ತದೆ. ಹಾಗೆ ಪ್ರೇಮವೇ ಕೃಷ್ಣ ; ಪ್ರೇಮವೇ ದೇವರು. ವಿಷಮಕಾಮದ ವ್ಯಕ್ತಿಯ ಹೃದಯದೊಳಗೆ ಹೊಕ್ಕ ಪ್ರೇಮರೂಪ ಕೃಷ್ಣನು ಅಲ್ಲಿ ಕೆಲವು ಕಾಲ ಭದ್ರವಾದ ಪೀಠವನ್ನು ಪಡೆದ ಅನಂತರ ಕಠಾರಿಯಿಂದ ಇರಿಯುತ್ತಾನೆ. ಹೃದಯ ಒಡೆಯುತ್ತದೆ. ಎದೆಯು ಬಿರಿಯುತ್ತದೆ. ವ್ಯಥೆಯೇ ಸಂತಾಪವೇ ಫಲವಾಗುತ್ತದೆ. ಪ್ರಾಪಂಚಿಕ ಪ್ರೇಮದ ಎಲ್ಲಾ ಸಂದರ್ಭಗಳಲ್ಲಿಯೂ ಅಳುವೂ ಹಲ್ಲು ಕಡಿಯುವದೂ ಮಸೆಯುವದೂ ಫಲವಾಗುತ್ತದೆ. ಅದೇ ನಿಯಮ. ಪ್ರಾಪಂಚಿಕವಾದ ಯಾವ ವಸ್ತುವಿನಲ್ಲಿಯಾದರೂ ಆಸಕ್ತಿಯನ್ನು ಹಚ್ಚಿಕೊಂಡು ಪ್ರೀತಿಸುವದಕ್ಕೆ ತೊಡಗಿದ ಕೂಡಲೇ ಪ್ರೇಮರೂಪದಿಂದ ಹೃದಯಾಂತರಾಳದಲ್ಲಿ ಪ್ರವೇಶಿಸಿದ ಭಗವಾನ್ ಕೃಷ್ಣನು ತನ್ನ ಕಠಾರಿಯಿಂದ ಚಕ್ಕನೆ ಇರಿಯುತ್ತಾನೆ. ಹೃದಯ ಬಿರಿಯುತ್ತದೆ; ನೀವು ಸಂಕಟಪಡುತ್ತೀರಿ. ನಿಮ್ಮ ಕರ್ಮವೇ, ನಿಮ್ಮ ಅವಿವೇಕದ ಪ್ರೀತಿಯೇ ಕಾರಣವೆಂಬುದನ್ನು ತಿಳಿಯದೆ ಅವರಿವರನ್ನು ಆಕ್ಷೇಪ ಮಾಡುತ್ತೀರಿ, ಆಗ್ರಹ ಮಾಡುತ್ತೀರಿ. ಅಳುತ್ತೀರಿ, "ಅಯ್ಯೋ ! ಈ ಪ್ರೇಮವೇ ಕೆಟ್ಟದ್ದು, ಕ್ರೂರವಾದುದು ; ಇದನ್ನು ನಂಬಬಾರದು ; ಯಾರನ್ನೂ ನಂಬಬಾರದು ; ಈ ಪ್ರೇಮವು ನನ್ನನ್ನು ಹಾಳುಮಾಡಿತು." ಎಂದು ಪ್ರಲಾಪ ಮಾಡುತ್ತೀರಿ, ಗೋಳಾಡುತ್ತೀರಿ.

"There is Law that anybody in this world who will attach himself to any personality or worldly object, shall have to suffer; either that friend or object will be taken away from him, or one of them will die, or there will be a rupture between them. This is an inevitable Law."

ಈ ಪ್ರಪಂಚದಲ್ಲಿ ಯಾವನಾಗಲೀ ಒಂದು ವ್ಯಕ್ತಿಯಲ್ಲಿ ಅಥವಾ ಒಂದು ವಸ್ತುವಿನಲ್ಲಿ ಆಸಕ್ತಿಯನ್ನು ಬೆಳೆಸಿ (ಅವನನ್ನು ಅಥವಾ ಅದನ್ನು) ಹಚ್ಚಿಕೊಂಡರೆ ಅನುಭವಿಸಲೇ ಬೇಕಾದ ಒಂದು ನಿಯಮವಿದೆ ; ಆ ಪ್ರೇಮಿಯೋ ಆ ಪದಾರ್ಥವೋ ಅವನಿಂದ ಕಸಿದು ಕೊಳ್ಳಲ್ಪಡುತ್ತದೆ; ಅಥವಾ ಅವರಲ್ಲಿ ಒಬ್ಬರು ಸಾಯುತ್ತಾರೆ ; ಅಥವಾ ಅವರಿಬ್ಬರ ನಡುವೆ ಮನಸ್ತಾಪದಿಂದ ಸ್ನೇಹ ಭಂಗವಾಗುತ್ತದೆ. ಇದೊಂದು ಅಪರಿಹಾರ್ಯವಾದ ನಿಯಮ." ಪ್ರಾಪಂಚಿಕವಾದ ಎಲ್ಲಾ ಅಭಿಮಾನಗಳೂ ಆಸಕ್ತಿಗಳೂ ಹೃದಯವನ್ನು ಒಡೆಯುವದರಲ್ಲಿಯೇ ಕೊನೆಗಾಣುತ್ತವೆ. ಇದೇ ಅಬಾಧಿತವಾದ ನಿಯಮ.

"Trust not in the mighty dollar; trust in God,"

"ಹಣವು ಸರ್ವ ಸಮರ್ಥವಾದುದೆಂದು ಅದನ್ನು ನಂಬಬೇಡಿ ; ದೇವರನ್ನು ನಂಬಿ."

ಪ್ರಾಪಂಚಿಕವಾದ ಎಲ್ಲಾ ಅಭಿಮಾನ ಆಸಕ್ತಿಗಳೂ ತಮ್ಮ ಜೊತೆಯಲ್ಲಿ ದುಃಖವನ್ನೇ ತರುತ್ತವೆ ; ಏಕೆಂದರೆ ಎಲ್ಲವೂ ವಿಗ್ರಹಾರಾಧನೆ. ನಿಮ್ಮ ಮನೆಯಲ್ಲಿ ನಿಮ್ಮ ಮಿತ್ರನೊಬ್ಬನ ಭಾವಚಿತ್ರವನ್ನಿಟ್ಟುಕೊಂಡು ಪೂಜಿಸುತ್ತಾ ಇದ್ದು ಸ್ವತಃ ಅವನೇ ನಿಮ್ಮ ಮನೆಗೆ ಬಂದಾಗ ತಿರಸ್ಕರಿಸುವುದು ನ್ಯಾಯವೋ ? ಅವನು ತನ್ನ ನೆನಪಿಗಾಗಿ ಕೊಟ್ಟ ಭಾವಚಿತ್ರವನ್ನು ನಿಮ್ಮಲ್ಲಿ ಬಿಡುತ್ತಾನೆಯೋ ? ಮೂಲವನ್ನು ಮರೆತು ಅಥವಾ ತಿರಸ್ಕರಿಸಿ ಅದರ ನಿರ್ಜೀವ ಚಿತ್ರವನ್ನು ಚಿತ್ರಕ್ಕಾಗಿ ಪೂಜಿಸುತ್ತಿದ್ದುದೇ ಮೂರ್ಖತನದ ಮೂರ್ತಿಪೂಜೆ. ಹಾಗೆಯೇ ಈ ಜಗತ್ತಿನಲ್ಲಿರುವ ಎಲ್ಲಾ ವಸ್ತುಗಳೂ ದೇವರ ಬರಿ ಚಿತ್ರಗಳು. ಸಂಕೇತಗಳು, ಗುರುತುಗಳು ಮಾತ್ರ. ಗಂಡಹೆಂಡಿರು ಪರಸ್ಪರ (ರೂಪದ) ಚಿತ್ರದ ಮೋಹಕ್ಕೆ ಬೇಟೆಯಾಗುತ್ತಾರೆ ; ವಿಗ್ರಹಗಳಿಗೆ ಗುಲಾಮರಾಗಿ, ಮೂರ್ತಿಪೂಜೆಗೆ ಬಲಿಯಾಗುತ್ತಾರೆ. ರೂಪಗಳು ಮೂಲದೇವರನ್ನು ನೆನಪು ಕೊಡಬೇಕಾದ ಸಂಕೇತಗಳೆಂಬುದನ್ನು ಮರೆಯುತ್ತಾರೆ. ನಿಮ್ಮ ಬೈಬಲ್, ದೇವರಿಗಾಗಿ ವಿಗ್ರಹವನ್ನು ಇಡಕೂಡದೆಂದೂ ವಿಗ್ರಹಾರಾಧನೆಯನ್ನು ಮಾಡಕೂಡದೆಂದೂ ಹೇಳುತ್ತದೆ. ವಿಗ್ರಹಗಳನ್ನೇ ಸತ್ಯವೆಂದು ತಿಳಿದು ಅದರ ಮೂಲವನ್ನು ಮರೆಯಬೇಡಿರಿ ಎಂದು ಇದರ ಅರ್ಥ. ಮನುಷ್ಯರು ಜೀವಂತ ವಿಗ್ರಹಗಳು, ಅಷ್ಟೆ.

ಒಬ್ಬ ತಾಯಿ ತನ್ನದೊಂದು ಮಗುವನ್ನು ಅತಿಯಾಗಿ ಪ್ರೀತಿಸುತ್ತಿದ್ದಳು. ಅದನ್ನು ಯಾವುದೊಂದು ಮೂಲಸತ್ಯದ ನೆನಪಿಗಾಗಿರುವ ಚಿತ್ರವೆಂದು ತಿಳಿಯದೆ ಹೆಚ್ಚಿನ ಮಮತೆಯಿಂದ ಮುದ್ದಿಸುತ್ತಿದ್ದುದರಿಂದ 'ಅಸೂಯಾಪರಳಾದ ಪ್ರಕೃತಿ ಮಾತೆಯು' ಅದನ್ನು ಕಸಿದುಕೊಂಡಳು. ಅದೇ ನಿಯಮ. ಆಕೆ ಆ ಮಗುವಿನ ಗೋರಿಯ ಮೇಲೆ ಕಲ್ಲಿನಲ್ಲಿ ಹೀಗೆ ಕೆತ್ತಿಸಿದ್ದಳು :

Here lies the babe that now is gone,
An idol to my heart.
If so, the wise God has justly done,
It was needful we should part.

ಈಗ, ಕೈತಪ್ಪಿ ನಡೆದ ಮಗು ಮಲಗಿರ್ಪುದಿಲ್ಲಿ,
ನೀಗಿತದು ಎನ್ನ ಹೃದಯಕತಿ ಮೆಚ್ಚಿನಾ ಮೂರ್ತಿ.
ಹಾಗಾದೊಡಾ ಜಾಣ ದೇವ ತಾ ನ್ಯಾಯವನೆ ಗೈದ,
ಈಗ ನಮ್ಮ ವಿಯೋಗವೆ ಅಗತ್ಯವಾಗಿತ್ತಲಾ !

ಅವನ ಚಿತ್ರಕ್ಕಿಂತಲೂ ಅವನ ಮೂಲವನ್ನು ಹೆಚ್ಚಾಗಿ ಪ್ರೀತಿಸಿದಾಗ ಮಾತ್ರ ಅವನ ಚಿತ್ರವೂ ನಮ್ಮಲ್ಲಿ ಉಳಿಯುತ್ತದೆ, ಇಲ್ಲವಾದರೆ ಇಲ್ಲ. ಇದೇ ನಿಯಮ, ಇದೇ

ತ್ಯಾಗಕ್ಕೆ ಸಾಧನ. ಪ್ರತಿಯೊಂದು ಮನೆಯಲ್ಲಿಯೂ ತ್ಯಾಗವನ್ನು ಹೀಗೇ ಸಾಧಿಸಬೇಕು.

೬೧. ಪ್ರೇಮದಿಂದ ಐಕ್ಯ ಸಾಧನೆ

(ಪ್ರೇಯಸೀ ಪ್ರಿಯರ ಐಕ್ಯತೆ)

ಒಬ್ಬ ತರುಣಿಯು ತನ್ನ ಪ್ರಿಯನಲ್ಲಿ ಅತ್ಯಂತ ಗಾಢವಾದ ಪ್ರೇಮವುಳ್ಳವಳಾಗಿದ್ದಳು. ಒಮ್ಮೆ ಆಕೆಗೆ ಬಹಳ ಕಾಯಿಲೆಯಾಯಿತು. ಆಕೆಯ ಚಿಕಿತ್ಸೆಗಾಗಿ ವೈದ್ಯರು ಬಂದು, ನೋಡಿ, ಆ ಶರೀರದಿಂದ ರಕ್ತವನ್ನು ತೆಗೆಯುವದೊಂದೇ ಪರಿಹಾರವೆಂದು ಹೇಳಿದರು. ಅವರು ಆಕೆಯ ಕೈಯ ಮಾಂಸದಲ್ಲಿ ಶಸ್ತ್ರವನ್ನು ಪ್ರಯೋಗ ಮಾಡಿದರೂ ರಕ್ತವು ಬರಲೇ ಇಲ್ಲ. ಆದರೆ ಆಕೆಯ ಪ್ರಿಯನ ಕೈಯಿಂದ, ಆಶ್ಚರ್ಯವೆನಿಸುವಂತೆ, ರಕ್ತವು ಚಿಮ್ಮುತ್ತಿದ್ದುದನ್ನು ಕಂಡರು. ಆಹಾ! ಎಂಥಾ ವಿಸ್ಮಯಕಾರಿಯಾದ ಐಕ್ಯತೆ! ಏಕೀಭವನ! ಇದೊಂದು ಸುಳ್ಳು ಕತೆಯೆಂದು ನಿಮಗೆ ಕಾಣಬಹುದು. ಆದರೆ ಇದು ನಿಜವಾಗಬಲ್ಲದು. ಕೀಳು ಸ್ವಭಾವದ್ದಾದರೂ, ಎಷ್ಟೋ ಸಮಯ, ಸಾಂಸಾರಿಕ ಪ್ರೇಮದಲ್ಲಿ ಈ ಬಗೆಯ ಏನೋ ಒಂದು ಅನುಭವವನ್ನು ಜನರು ತಮ್ಮ ಜೀವನದಲ್ಲಿ ತಾರ್ಕಣೆ ಮಾಡಿಕೊಳ್ಳುತ್ತಾರೆ. ಆ ಪ್ರೇಯಸಿಯು ತನ್ನನ್ನು ತಾನು ಮರೆತು ತನ್ನ ಪ್ರಿಯನೊಡನೆ ಒಂದಾಗಿದ್ದಳು; ಆ ಪ್ರಿಯನೂ ತನ್ನ ಪ್ರೇಯಸಿಯಲ್ಲಿ ಪೂರಾ ಮುಳುಗಿದ್ದನು.

ದೇವರಲ್ಲಿ ಪ್ರೇಮದಿಂದ ಹಾಗೆ ಒಂದಾಗುವದೇ ಧರ್ಮ. "ನನ್ನ ದೇಹವೇ ಅವನ ದೇಹವೂ ಅವನ ಆತ್ಮವೇ ನನ್ನ ಆತ್ಮವೂ ಆಗಲಿ."

೬೨. ಭೇದ ಭಾವದ ಲವಲೇಶವೂ ಇಲ್ಲದ ಸ್ಥಿತಿ

(ಹುಲಿಯ ದವಡೆಯಲ್ಲಿಯೂ ಶಿವೋಹಂ)

ಸ್ವಲ್ಪ ಕಾಲದ ಹಿಂದೆ ಹೃಷೀಕೇಶದ ಸಮೀಪದಲ್ಲಿ, ಹಿಮಾಲಯದ ಗೊಂಡಾರಣ್ಯದಲ್ಲಿ ಗಂಗಾ ನದಿಯ ದಂಡೆಯ ಮೇಲೆ ಒಬ್ಬ ಹಿಂದೂ ಯೋಗಿಯು ಕುಳಿತಿದ್ದನು. ಕೆಲವು ದೂರದಲ್ಲಿ ಇನ್ನು ಕೆಲವರು ಸಂನ್ಯಾಸಿಗಳೂ ಕುಳಿತಿದ್ದರು. ಆ ಯೋಗಿಯು "ಶಿವೋಹಂ" "ಶಿವೋಹಂ" "ಶಿವನೇ ನಾನು" "ಶಿವನೇ ನಾನು" "ದೇವರೇ ನಾನು" ಎಂದು ಆಗಾಗ ಉದ್ಗಾರ ಮಾಡುತ್ತಿದ್ದನು. ಆ ಸಂನ್ಯಾಸಿಗಳೆಲ್ಲಾ ಕುತೂಹಲದಿಂದಲೂ ಆದರದಿಂದಲೂ ಆತ್ಮಾರಾಮನಾದ ಆ ಯೋಗಿಯನ್ನೇ ನೋಡುತ್ತಿದ್ದರು. ಆದರೆ ಒಮ್ಮೆಗೇ ಒಂದು ಹುಲಿಯು ಜಿಗಿದು ಬಂದು ಆ ಯೋಗಿಯನ್ನು ಕಚ್ಚಿಕೊಂಡು ಹೋಯಿತು. ಭಯಂಕರವಾದ ಆ ಹುಲಿಯ ದವಡೆಯಲ್ಲಿ ಸಿಕ್ಕಿಕೊಂಡಿದ್ದರೂ ಆ ಯೋಗಿಯು ನಿರ್ಭಯವಾಗಿ "ಶಿವೋಹಂ, ಶಿವೋಹಂ" ಎಂದೇ ಆವೇಶದಿಂದ ಕೂಗುತ್ತಿದ್ದನು. ಆ ಹುಲಿಯು ಅವನ ಕೈಕಾಲುಗಳನ್ನೆಲ್ಲಾ

ಹರಿದು ಹಾಕಿದರೂ ಅವನ ಬಾಯಿಂದ ಅದೇ ಶಬ್ದವೇ ಅಡವಿಯೆಲ್ಲಾ ಮಾರ್ದನಿ ಕೊಡುವಂತೆ ನುಗ್ಗಿ ಬರುತ್ತಿದ್ದಿತು. ಈ ಅದ್ಭುತಕ್ಕೆ ಏನೆನ್ನುತ್ತೀರಿ ? "ಶಿವೋಹಂ, ಶಿವೋಹಂ" 'ನಾನೇ ದೇವರು' 'ನಾನೇ ದೇವರು' ಎನ್ನುವದು ಇದೆಂತಹ ಸತ್ಯ ! ಇದನ್ನೇನು ನಾಸ್ತಿಕವಾದವೆನ್ನುತ್ತೀರಾ ? ನಿರೀಶ್ವರವಾದವೆನ್ನುತ್ತೀರಾ ? ಅದರಿಂದ ಎಷ್ಟೋ ದೂರ, ಬಹಳ ದೂರ, ಅತಿ ದೂರ ! 'ಶಿವೋಹಂ' ಎನ್ನುವ ಅನುಭವವೇ ಆತ್ಯಂತಿಕ ಅನುಭವ, ಕಟ್ಟ ಕಡೆಯ ಅನುಭವ. ಪ್ರೇಮಿಗಳು ಆ ಪ್ರೇಮದ ಕೈಲಾಸ ಶಿಖರವನ್ನು ಏರಿದಾಗ, ಸೇರಿದಾಗ, ತಮ್ಮ ಅತ್ಯಂತ ಪ್ರಿಯವ್ಯಕ್ತಿಯಲ್ಲಿ ಸಂಪೂರ್ಣ ಐಕ್ಯಭಾವವನ್ನು ಅನುಭವಿಸುವದಿಲ್ಲವೆ ? ತಾಯಿಯು ತನ್ನ ಮುದ್ದು ಮಗುವನ್ನು ತನ್ನ ಮಾಂಸದ ಮಾಂಸವೆಂದೂ ರಕ್ತದ ರಕ್ತವೆಂದೂ ಮೂಳೆಯ ಮೂಳೆಯೆಂದೂ ಹೇಳುವದಿಲ್ಲವೆ ? ತಾಯಿಯು ತನ್ನ ಮಗುವನ್ನು ತನ್ನ ಇನ್ನೊಂದು ಜೀವವೆಂದೂ ಆತ್ಮವೆಂದೂ ತಿಳಿಯುವದಿಲ್ಲವೆ ? ಮಗುವಿನ ಹಿತಾಸಕ್ತಿಗಳೂ ತಾಯಿಯ ಹಿತಾಸಕ್ತಿಗಳೂ ಒಂದೇ ಅಲ್ಲವೆ ? ಎಂದೆಂದಿಗೂ ಒಂದೇ ಸರಿ.'

ದೇವರನ್ನು ಒಪ್ಪಿಕೊಳ್ಳುವದು, ಅಂಗೀಕರಿಸುವದು ಮಾತ್ರವಲ್ಲ, ಆಲಂಗಿಸಬೇಕು, ಅವನಲ್ಲಿಯೇ ಲಗ್ನವಾಗಬೇಕು, ಮಗ್ನವಾಗಬೇಕು ; ಲೇಶ ಭೇದದ ಸೆಲೆಯೂ ಇಲ್ಲದಂತೆ ಅತ್ಯುತ್ಕಟವಾದ ಪ್ರೇಮಭಾವದಿಂದ ದೇವರಲ್ಲಿ ಒಂದಾಗಬೇಕು. "ಓ ಪ್ರಭುವೇ ! ನಿನ್ನ ಇಚ್ಛೆಯಂತೆ ಆಗಲಿ:" ಎಂದು ಪ್ರಾರ್ಥನೆ ಮಾಡುವದಕ್ಕೆ ಬದಲು "ಸಕಲವೂ ನನ್ನ ಇಚ್ಛೆಯಂತೆಯೇ ನಡೆಯುತ್ತದೆ" ಎಂದು ತಿಳಿಯುವದರಲ್ಲಿ ನಿಮ್ಮ ಸಂತೋಷವಿರಲಿ.

೬೩. "ತವೈವಾಹಂ" 'ನಿನ್ನವನು ನಾನು'

(ತೇರಾ ! ತೇರಾ ! ತೇರಾ !)

ಈಗ ನಾವು 'ತಸ್ಯೈವಾಹಂ' 'ಅವನ ಪ್ರೇಮಕ್ಕೆ ಪಾತ್ರನಾದವನು ನಾನು' ಎನ್ನುವ ಅಧ್ಯಾತ್ಮ ಸಾಧನೆಯ ಮೊದಲನೆಯ ಘಟ್ಟವನ್ನು ತೆಗೆದುಕೊಳ್ಳೋಣ. ಇದು ಕೇವಲ ಪ್ರಾಥಮಿಕ ಪಾಠವಾಗಿ ಕಾಣುತ್ತದೆ. ಆದರೆ, ಓ ! ಅಧ್ಯಾತ್ಮ ಭಾವದ ಬೆಳವಣಿಗೆಯಲ್ಲಿ ಜನರು ಕೇವಲ ಆ ಮೊದಲನೆಯ ಸಾಧನೆಯನ್ನು ನಡೆಸುವದು ಕೂಡ ಎಷ್ಟು ಕಷ್ಟವಾಗಿದೆ ! ಸಾಧಕನು ನಿಷ್ಕಪಟವಾದ ಹೃದಯದಿಂದಲೂ ನಿಜವಾದ ಒಮ್ಮನಸ್ಸಿನ ಭಕ್ತಿಯಿಂದಲೂ ತಾನು ನಂಬಿರುವದನ್ನೂ ತಿಳಿದಿರುವದನ್ನೂ ಸಾಧನೆಯಲ್ಲಿ ತಂದು 'ತಸ್ಯೈವಾಹಂ' ಎಂಬ ಭಾವನೆಯು ತನ್ನ ಧಮನಿ-ಧಮನಿಯಲ್ಲಿಯೂ ರಕ್ತದ ಕಣಕಣದಲ್ಲಿಯೂ ಮಿಡಿಯುವಂತೆ ಮಾಡಿ. ಉಪಾಸನಾ ಮಾರ್ಗದ ಈ ಪ್ರಾಥಮಿಕ ಘಟ್ಟದಲ್ಲಿಯೇ ಆದರೂ ಆ ಭಾವನೆಯಿಂದ ತುಂಬಿ ತುಳುಕುವಂತಾದರೆ ಈ ಪ್ರಪಂಚದಲ್ಲಿ ಅವನೇ ಲೋಕೋತ್ತರ ದೇವತಾ ಪುರುಷನಾಗಬಹುದು.

ಇನ್ನು 'ತವೈವಾಹಂ' ಎನ್ನುವ ಎರಡನೆಯ ಘಟ್ಟವನ್ನು ನೋಡೋಣ.

ಇಂಡಿಯಾದಲ್ಲಿ ಗುರುನಾನಕ್ ಎಂಬ ಅತ್ಯಂತ ಪೂಜ್ಯ ಮಹಾತ್ಮನೊಬ್ಬನು ಅವನ ಯೌವನ ಕಾಲದಲ್ಲಿ ಧನ–ಧಾನ್ಯಗಳನ್ನು ಬಡವರಿಗೆ ದಾನಮಾಡುವ ಸೇವೆಯಲ್ಲಿ ನಿಯೋಜಿತನಾಗಿದ್ದನು, ಕೆಲವು ಬಡವರಿಗೆ ಹದಿಮೂರು ಸೇರು ಹಿಟ್ಟನ್ನು ಅಳೆದು ಕೊಡಬೇಕೆಂದು ಅವನ ಯಜಮಾನನು ಅವನಿಗೆ ಅನುಜ್ಞೆ ಮಾಡಿದನು. ಗುರು ನಾನಕ್‌ನು ಅವರಿಗೆ ಒಂದು, ಎರಡು, ಮೂರು, ನಾಲ್ಕು, ಐದು ಎಂದು ಹಿಟ್ಟನ್ನು ಸೇರಿನಿಂದ ಅಳೆದುಕೊಡುವದಕ್ಕೆ ತೊಡಗಿದನು. ಅವನು ಹತ್ತು, ಹನ್ನೊಂದು, ಹನ್ನೆರಡು ಎಂದು ಗಟ್ಟಿಯಾಗಿ ಹಿಂದೀ ಭಾಷೆಯಲ್ಲಿ ಸಂಖ್ಯೆಗಳನ್ನು ಉಚ್ಚರಿಸುತ್ತಾ ಹಿಟ್ಟನ್ನು ಅಳೆದು ಕೊಟ್ಟು ಹದಿಮೂರು ಎನ್ನುವ ಅಂಕೆಗೆ ಬಂದನು. ಹಿಂದೀ ಭಾಷೆಯಲ್ಲಿ ಹದಿಮೂರು ಎನ್ನುವದಕ್ಕೆ ತೇರಾ ಎಂಬ ಶಬ್ದವಿದೆ. ಇದೊಂದು ಬಹಳ ಗಮನಾರ್ಹ ಶಬ್ದ. ಇದಕ್ಕೆ ಎರಡು ಅರ್ಥಗಳಿವೆ. ಹದಿಮೂರು ಎಂದು ಒಂದು ಅರ್ಥ. ಇನ್ನೊಂದು ಅರ್ಥ "ತವೈವಾಹಂ" "ನಿನ್ನವನು ನಾನು" "ತವೈವಾಹಂ" "ನಾನು ನಿನ್ನವನು" "ನಾನು ದೇವರ ಅಂಶ!" ಎಂದು.

ಗುರು ನಾನಕ್‌ನು ಹದಿಮೂರು ಸೇರು ಹಿಟ್ಟನ್ನು ಅವರಿಗೆ ಅಳೆದು ಕೊಟ್ಟು "ತೇರಾ,ತೇರಾ,ತೇರಾ" ಎಂದು ಉಚ್ಚರಿಸುತ್ತಿದ್ದಾಗ ಆ ಭಕ್ತಾಗ್ರೇಸರನಿಗೆ, "ನಿನ್ನವನು ನಾನು, ನಿನ್ನವನು ನಾನು, ತವೈವಾಹಂ" ಎನ್ನುವ ಅರ್ಥವು ಹೊಳೆದು, ಅವನು ನಿಜವಾಗಿಯೂ ತನ್ನ ದೇಹವನ್ನೂ ಸಮಸ್ತವನ್ನೂ ಮನಃಪೂರ್ವಕವಾಗಿ ಭಗವಂತನಿಗೆ ಒಪ್ಪಿಸುವಂಥ ಪವಿತ್ರ ವಿಚಾರಗಳೂ ಭಾವಗಳೂ ಅವನಲ್ಲಿ ಚಿಮ್ಮಿದವು. ಅವನು ಪ್ರಪಂಚವನ್ನೇ ಮರೆತು ಬಿಟ್ಟನು. ಅವನು ತನ್ನನ್ನು ತಾನೇ ಮೀರಿದನು; ಅಲ್ಲಿ, ಅವನು ತನ್ನಲ್ಲಿ ತಾನೇ ಊರಿ ನಿಂತನು. ಆ ಆನಂದಾವೇಶದ ಭರದಲ್ಲಿ ಅವನು ಮೈಮರೆತು, "ತೇರಾ, ತೇರಾ, ತೇರಾ, ತೇರಾ" ಎಂದು ಕೂಗುತ್ತಾ ಎಚ್ಚರವಿಲ್ಲದೆ ಜನರಿಗೆ ಅಳೆದು ಕೊಡುತ್ತಲೇ ಇದ್ದನು. ಅವನು ಹಾಗೆಯೇ 'ತೇರಾ' 'ತೇರಾ' ಎನ್ನುತ್ತಾ ಎನ್ನುತ್ತಾ ನಿರತಿಶಯ ಆನಂದಾನುಭವದ ಸಮಾಧಿ ಸ್ಥಿತಿಯನ್ನು ಪಡೆದು ಬಿದ್ದುಬಿಟ್ಟನು.

ಹೀಗೆ ಉಪಾಸನೆಯ ಮೊದಲನೆಯ ಮತ್ತು ಎರಡನೆಯ ಭೂಮಿಕೆಗಳಲ್ಲಿರುವ ಜನರೇ ಆದರೂ ಎಷ್ಟೋ ವೇಳೆ, ಅವರಲ್ಲಿ ನುಡಿಗೆ ಸರಿಯಾದ ನಡೆಯೂ ಇದ್ದರೆ, ಅವರಲ್ಲಿ ನಿಷ್ಕಪಟ ಭಾವವೂ ಶ್ರದ್ಧೆಯೂ ಇದ್ದು ದೇವರ ಕಣ್ಣಿನಲ್ಲಿ ಮಣ್ಣೆರಚುವ ಬುದ್ಧಿಯಿಲ್ಲವಾದರೆ. ದೇವರಿಗೆ ವಾಗ್ದಾನಮಾಡಿ ಭರವಸೆ ಕೊಟ್ಟು ಅದನ್ನು ಭಂಗಪಡಿಸಬೇಕೆಂಬುದು ಅವರಿಗಿಲ್ಲವಾದರೆ,-ಆಧ್ಯಾತ್ಮಿಕ ಅನುಭವದ ಅತ್ಯಂತ ಉನ್ನತ ಶಿಖರಕ್ಕೆ ಏರಬಲ್ಲರೆಂಬುದು ಇದರಿಂದ ವ್ಯಕ್ತವಾಗುತ್ತದೆ. ದೇವಸ್ಥಾನದಲ್ಲಿ (ಅಥವಾ ಚರ್ಚ್‌ನಲ್ಲಿ) ದೇವರ ಎದುರಿಗೆ ಇದ್ದಾಗ ಜನರು "ತವೈವಾಹಂ" 'ನಿನ್ನವನು ನಾನು' ಎಂದು ಶರಣಾಗುತ್ತಾರೆ. ಆದರೆ ಹೊರಗೆ ಬಂದೊಡನೆ ಅದನ್ನು ಮರೆತು "ಎಲ್ಲಾ ನನ್ನದು" ಎಂದು ಭಾವಿಸುತ್ತಾರೆ. 'ತವೈವಾಹಂ' ಎನ್ನುವದನ್ನು ತೀವ್ರ ಭಾವನೆ

ಹೊಂದಿ ಜೀವನದಲ್ಲಿ ಅಳವಡಿಸಿಕೊಂಡು ಅನುಭವದಲ್ಲಿ ತಂದುಕೊಳ್ಳಬೇಕು. ಇದೇ ನಿಜವಾದ ಧರ್ಮವು.

'ತಸ್ಯೈವಾಹಂ' 'ತವೈವಾಹಂ' 'ತ್ವಮೇವಾಹಂ' ಎನ್ನುವ ಈ ಮೂರು ಶಿರೋನಾಮಗಳಲ್ಲಿ ಪ್ರಪಂಚದ ಆದ್ಯಂತದಲ್ಲಿರುವ ಮತ ಧರ್ಮಗಳನ್ನೆಲ್ಲಾ ವಿಭಾಗಮಾಡಬಹುದು. ಹೊರಗಿನ ರೂಪಗಳ ದೃಷ್ಟಿಯಿಂದ, 'ನೀನೇ ನಾನು' ಎನ್ನುವ ಮೂರನೆಯ ಭಾವವು ಅತ್ಯಂತ ಶ್ರೇಷ್ಠವಾದುದು. ಆದರೆ 'ನಿನ್ನವನು ನಾನು' ಎನ್ನುವ ಎರಡನೆಯ ಭಾವವು ಮೊದಲನೆಯ 'ಅವನವನು ನಾನು' ಎನ್ನುವ ಭಾವಕ್ಕಿಂತಲೂ ಹೆಚ್ಚು ಶ್ರೇಷ್ಠವಾದುದು. ಈ ಮೂರು ರೂಪಗಳಲ್ಲಿ ನಮ್ಮ ಧಾರ್ಮಿಕ ಮನೋಭಾವವನ್ನು ಯಾವದೊಂದರಲ್ಲಿಯಾದರೂ ಎರಕಹೊಯ್ಯಬಹುದು.

ಹಿಂದೂಗಳ ಅಭಿಪ್ರಾಯದಂತೆ ಉಪಾಸನಾಧರ್ಮದ ಮೊದಲನೆಯ ಹಂತದಲ್ಲಿ ಶ್ರದ್ಧೆಯಿಂದ ಸಾಧನೆ ಮಾಡತಕ್ಕವರು ಈ ಜನ್ಮದಲ್ಲಿಯೋ ಮುಂದಿನ ಜನ್ಮದಲ್ಲಿಯೋ ಎರಡನೆಯ ಮೇಲಿನ ಹಂತಕ್ಕೆ ಏರುತ್ತಾರೆ. ಅಲ್ಲಿ ಶ್ರದ್ಧೆಯಿಂದ ಎಡೆಬಿಡದೆ, ಸಾಧನೆ ಮಾಡಿದರೆ ಈ ಜನ್ಮದಲ್ಲಿಯೋ ಮುಂದಿನ ಜನ್ಮದಲ್ಲಿಯೋ 'ತ್ವಮೇವಾಹಂ' "ಸ ಏವಾಹಂ" ಎನ್ನುವ ಕೊನೆಯ ಹಂತಕ್ಕೆ ಕ್ರಮೇಣ ಏರುತ್ತಾರೆ. ಈ ಘಟ್ಟವನ್ನು ಸೇರಿದಾಗ ಪುನಃ ಜನ್ಮವಿಲ್ಲ. ಅವನು ಮುಕ್ತನು, ಜೀವನ್ಮುಕ್ತನು. ಸರ್ವತಂತ್ರ ಸ್ವತಂತ್ರನು, ಆಗ ನರನೇ ನಾರಾಯಣನಾದನು; ಪುರುಷನೇ ಪುರುಷೋತ್ತಮನಾಗುತ್ತಾನೆ; ಜೀವನೇ ದೇವನೂ ಮಹಾದೇವನೂ ಆಗುತ್ತಾನೆ. ಓಂ, ಓಂ, ಓಂ!

ಓ! ಎನ್ನಾ ಸಂತೋಷದ ಪಾತ್ರೆಯು ತುಂಬಿಹುದು.
ಕಾಮಂಗಳಖಿಲವು ಪರಿಪೂರ್ಣದಿ ಸಂತೃಪ್ತಿಯ ಪಡೆದಿಹುದು;
ಮುಂಜಾನೆಯ ಸುಮಧುರ ಮಂದಾನಿಲ ನಸುಬೀಸುತಲಿ,
ಮುತ್ತಿಡುವದ ನಾನರಳಿದ ಕುಸುಮದಿ ಮೆಚ್ಚುವೆನು.
ಕಾಮನ ಬಿಲ್ಲಿನ ಬಗೆಬಗೆ ಬಣ್ಣಗಳೆನ್ನಯ ಉಡಿಗೆಗಳು.
ಬೆಳಕಿನ್ನಯ ಸಂದೇಶವು ಮಿಂಚೆನ್ನಯ ಸುಚು, ಹೊಂಚು.
ಪ್ರಿಯಂಕರರೆಲ್ಲಾ ನಾನೇ, ಪ್ರೇಯಸಿಯರೂ ನಾನೇ.
ಬಯಕೆಗಳೆಲ್ಲಾ ನಾನೇ ಭಾವಾವೇಗವು ನಾನೇ.
ಗುಲಾಬಿಯ ನಗೆ, ಮುಂಜಿನ ಮುತ್ತುಗಳು,
ಸವಿಯೊಳು ಸುವಾಸಿತ ಸೂರ್ಯನ ಮಿರುಗುವ ಕಿರಣಗಳು,
ರಜತಮಯನು ಚಂದ್ರನು ರುಚಿಕರ ಓರಣವೂ.
ಉಲ್ಲಸಿತ ತರಂಗ, ಪರಮಾನಂದ ಸಾಂತರಂಗ.

೬೪. ಪ್ರೇಮ ಸಾಧನೆಯಲ್ಲಿ ಮಧ್ಯಮ ಘಟ್ಟಕ್ಕೆ ಇನ್ನೊಂದು ಉದಾಹರಣೆ.

(ನೇಪಲ್ಸ್ ಪಟ್ಟಣದ ವಸ್ತು ಪ್ರದರ್ಶನ ಶಾಲೆಯಲ್ಲಿ ದೈವತಾ ಮೂರ್ತಿಯ ದಿವ್ಯದೃಷ್ಟಿ)

ನೇಪಲ್ಸ್ ಪಟ್ಟಣದಲ್ಲಿ ಒಂದು ಭವ್ಯವಾದ ವಸ್ತು ಪ್ರದರ್ಶನಶಾಲೆ ಇದೆಯೆಂದು ಹೇಳುತ್ತಾರೆ. ಆ ನಿಲಯದ ಛಾವಣಿಯ ಮೇಲೆ ಒಂದು ಸುಂದರವಾದ ದೇವತಾಮೂರ್ತಿಯಿದೆ. ಅದರ ವಿಶೇಷವೇನೆಂದರೆ, ಆ ಪ್ರದರ್ಶನಶಾಲೆಯ (ಮ್ಯೂಸಿಯಂನ) ಯಾವದೇ ಭಾಗದಲ್ಲಿ ನೀವಿದ್ದರೂ ಪ್ರಕಾಶಮಾನವಾಗಿ ಥಳಥಳಿಸುವ ಆ ದೇವತೆಯ ನಿರ್ಮಲ ನೇತ್ರಗಳು ನೇರವಾಗಿ ನಿಮ್ಮ ಕಣ್ಣುಗಳಲ್ಲಿಯೇ ದೃಷ್ಟಿಯಿಟ್ಟು ನೋಡುತ್ತವೆ. ಅಧ್ಯಾತ್ಮಸಾಧನೆಯ ಎರಡನೆಯ ಘಟ್ಟದಲ್ಲಿರತಕ್ಕವರು ಪ್ರಾಮಾಣಿಕರಾಗಿದ್ದರೆ, ನಿತ್ಯ ನಿರಂತರವಾಗಿ ಗುರುವಿನ ದೃಷ್ಟಿಯಲ್ಲಿಯೇ ಜೀವಿಸುತ್ತಾರೆ. ತಾವು ಎಲ್ಲಿಯೇ ಹೋಗಲಿ, ಮನೆಯ ಕತ್ತಲೆಯ ಕೋಣೆಯಲ್ಲಿ ಆಗಲಿ, ಅರಣ್ಯದ ಅತ್ಯಂತ ನಿರ್ಜನ ಗುಹೆಯಲ್ಲಿ ಆಗಲಿ, ಎಲ್ಲಿಯೇ ಇರಲಿ ಸರ್ವದಾ ದೇವರಿಂದ ನೋಡಲ್ಪಡುತ್ತಾ ಅವನ ಬೆಳಕಿನಿಂದ ಪೋಷಿತರಾಗಿಯೂ ಅವನ ಕರುಣೆಯಿಂದ ಅನುಗ್ರಹೀತರಾಗಿಯೂ ಇರುವಂತೆ ಅವರಿಗೆ ಅನುಭವವಾಗುತ್ತದೆ.

೬೫. ಪ್ರೇಮದ ಕೊನೆಯ ಹಂತ

(''ನಾನೇ ಅವನು'' ''ನಾನೇ ನೀನು'' ಅತ್ಯುತ್ಕಟ ಕೃಷ್ಣಪ್ರೇಮ)

ಬಹಳ ಹಿಂದಿನ ಕಾಲದಲ್ಲಿ, ಇಂಡಿಯಾದಲ್ಲಿ ಈಗ ನೀವು ಅಮೆರಿಕಾದಲ್ಲಿ ಕಾಣುವದಕ್ಕಿಂತಲೂ ಪದ್ಧತಿಗಳೂ ರೂಢಿಗಳೂ ಬೇರೆ ಬಗೆಯಾಗಿದ್ದವು. ಇಲ್ಲಿ ಅಮೆರಿಕಾದಲ್ಲಿ ರಾತ್ರಿ ಕಾಲದಲ್ಲಿ ವಿದ್ಯುಚ್ಛಕ್ತಿಯಿಂದ ನಿಮ್ಮ ಮನೆಗಳನ್ನೂ ನಗರಗಳನ್ನೂ ಬೆಳಗಿ ರಾತ್ರಿಯನ್ನೇ ಹಗಲನ್ನಾಗಿ ಮಾಡಿಕೊಳ್ಳುತ್ತಿದ್ದೀರಿ. ಈಗ ರಾಮನು ಹೇಳುತ್ತಿರುವ ಸಂದರ್ಭದ ಸಮಯದಲ್ಲಿ ಇಂಡಿಯಾದಲ್ಲಿ ದೀಪಕ್ಕೆ ಮಣ್ಣಿನ ಹಣತಿಯನ್ನು ಉಪಯೋಗಿಸುತ್ತಿದ್ದರು. ಸಂಜೆಯ ಹೊತ್ತು ಒಂದು ಮನೆಯಲ್ಲಿ ದೀಪವನ್ನು ಹಚ್ಚಿದರೆ, ನೆರೆಹೊರೆಯ ಮನೆಯವರೆಲ್ಲಾ ಆ ಮನೆಗೆ ಬಂದು ತಮ್ಮ ತಮ್ಮ ದೀಪಗಳನ್ನು ಹಚ್ಚಿಕೊಂಡು ಹೋಗುತ್ತಿದ್ದರು. ಒಂದು ಸಾಯಂಕಾಲ ಶ್ರೀಕೃಷ್ಣನಲ್ಲಿ ಉತ್ಕಟ ಪ್ರೇಮವುಳ್ಳ ಒಬ್ಬ ಕನ್ನಿಕೆಯು ತನ್ನ ಹಣತಿಗೆ ದೀಪವನ್ನು ಹಚ್ಚಿಕೊಳ್ಳುವ ನೆಪದಿಂದ ಕೃಷ್ಣನ ತಂದೆಯ ಮನೆಗೆ ಹೋದಳು. ಆದರೆ ದೀಪ ಹಚ್ಚಿದ್ದ ಬೇರೆ ಎಷ್ಟೋ ಮನೆಗಳಿದ್ದರೂ ಆ ಮನೆಗಳಿಗೆ ಹೋಗದೆ, ಕೃಷ್ಣನ ದಿವ್ಯ ಸೌಂದರ್ಯದ ತೇಜಸ್ಸಿನಲ್ಲಿ ತಾನು ಪತಂಗದಂತೆ ಸಿಕ್ಕು, ಸುಟ್ಟು ಹೋಗಬೇಕೆಂದೇ ಅಲ್ಲಿಗೆ ಬಂದಿದ್ದಳು. ದೀಪವನ್ನು ಹಚ್ಚಿಕೊಂಡು ಬರಬೇಕೆಂಬದು ಆ ಕನ್ಯೆಯು ತನ್ನ ತಾಯಿಗೆ ಹೇಳಿದ್ದ ನೆವಮಾತ್ರವಾಗಿ ಆ ಕುಮಾರಿಯು ದೀಪವನ್ನು ಹಚ್ಚಿಕೊಳ್ಳುವಾಗ ತನ್ನ ಪ್ರಣತಿಯ ಬತ್ತಿಯನ್ನು ಉರಿಯುತ್ತಿದ್ದ ದೀಪದಲ್ಲಿ ಇರಿಸಬೇಕಾಗಿತ್ತು ; ಆದರೆ, ಆಕೆಯ ಕಣ್ಣುಗಳು

ದೀಪದಲ್ಲಿರದೆ ಆ ಪ್ರಿಯ ಕೃಷ್ಣನ ಮುದ್ದಾದ ಮುಖದಲ್ಲಿದ್ದವು. ಆ ರಮ್ಯವೂ ಮೋಹಕವೂ ಆದ ಕೃಷ್ಣನ ಮುಖವನ್ನು ಆಕೆಯು ಅತ್ಯಂತ ಕಾತರತೆಯಿಂದಲೂ ಆಸಕ್ತಿಯಿಂದಲೂ ನೋಡುತ್ತಿದ್ದುದರಿಂದ ತನ್ನ ಪ್ರಣತಿಯ ಬತ್ತಿಯನ್ನು ಉರಿಯುವ ದೀಪಕ್ಕೆ ಹಚ್ಚುವ ಬದಲು ತನ್ನ ಕೈಬಟ್ಟುಗಳನ್ನೇ ಹಚ್ಚಿದ್ದುದು ಆಕೆಯ ಲಕ್ಷ್ಯಕ್ಕೆ ಬರಲಿಲ್ಲ. ಆ ದೀಪದಲ್ಲಿ ಆಕೆಯ ಬಟ್ಟುಗಳು ಉರಿಯುತ್ತಲೇ ಇದ್ದರೂ ಆಕೆಗೆ ಅದರ ಎಚ್ಚರವಿರಲಿಲ್ಲ, ಆಕೆಯ ನೋಟವೂ ಮನಸ್ಸೂ ಉತ್ಕಟವಾದ ಪ್ರೇಮದಿಂದ ಕೃಷ್ಣನ ಮುಖಾರವಿಂದದಲ್ಲಿಯೇ ನಾಟಿದ್ದವು. ಹಾಗೇ ಎಷ್ಟೋ ಹೊತ್ತು ಕಳೆಯಿತು. ಆಕೆಯು ಮನೆಗೆ ಹಿಂದಿರುಗಲಿಲ್ಲವಾದ್ದರಿಂದ ಆಕೆಯ ತಾಯಿಗೆ ಚಿಂತೆಯಾಯಿತು; ಮಗಳು ಮನೆಗೆ ಬಾರದೆ ಅಷ್ಟು ತಡವಾದುದನ್ನು ತಾಯಿಯು ಸಹಿಸಲಾಗಲಿಲ್ಲ. ಅದ್ದರಿಂದ ತಾಯಿಯು ನೆರಮನೆಗೆ ಹೋಗಿ, ಮಗಳ ಕೈಬೆರಳುಗಳು ದೀಪದಲ್ಲಿ ಸುಡುತ್ತಾ ಮೂಳೆಯು ಸೀದುಹೋಗಿ, ಕೈ ಗಡಗಡ ನಡಗುತ್ತಿದ್ದರೂ ಆಕೆಗೆ ಎಚ್ಚರವಿಲ್ಲದಿರುವದನ್ನು ನೋಡಿ ಹೌಹಾರಿ, ಏದುತ್ತಾ "ಅಯ್ಯೋ! ಮಗಳೆ, ಏನು ಮಾಡುತ್ತಿ? ಇನ್ನೇನು ಗತಿ? ಸುಟ್ಟು ಹೋದೆಯಲ್ಲೇ!" ಎಂದು ಕಿರುಚುತ್ತಾ ಕೈಯನ್ನು ದೀಪದಿಂದ ಎಳೆದುಹಾಕಿ ತಾಯಿಯು ಅಳುವದಕ್ಕೆ ತೊಡಗಿದಳು. ಆಗ ಬಾಲಕಿಯು ಹೊಡೆದೆಬ್ಬಿಸಿದಂತೆ ಎಚ್ಚರಗೊಂಡಳು.

ಅಂಥಾ ದಿವ್ಯವಾದ ಪೂರ್ಣ ಪ್ರೇಮದ ಸ್ಥಿತಿಯಲ್ಲಿ ಪ್ರಿಯಕರೆಯೂ ಪ್ರಿಯತಮನೂ ಒಂದಾಗುತ್ತಾರೆ-- "ನಾನೇ ಅವನು" "ನಾನೇ ನೀನು" ಎನ್ನುವದು ಆಗ ಅನುಭವಕ್ಕೆ ಬರುತ್ತದೆ.

೬೬. ಮಾನವ ಪ್ರೇಮವೇ ದೇವನ ನಿಜವಾದ ಆರಾಧನೆ
(ಮಾನವಾರಾಧಕ ಷೇಕ್ ಅಬುಬೆನ್ ಆದಿಮ)

ಲೀಹಂಟ್ (Lee Hunt) ಎಂಬ ಕವಿಯು ಬರೆದಿರುವ ಒಂದು ಪದ್ಯದಲ್ಲಿ ಈ ಭಾವನೆಯು ಬಹಳ ಸ್ಪಷ್ಟವಾಗಿ ಬಂದಿದೆ:

ಅರಬ್ಬೀ ದೇಶದಲ್ಲಿ ಮುಹಮ್ಮದೀಯ ಮುಖಂಡನಾದ ಒಬ್ಬ ಷೇಕ್ ಇದ್ದನು. ಅವನಿಗೆ ಒಂದು ರಾತ್ರಿ ಒಂದು ದಿವ್ಯ ದರ್ಶನವಾಯಿತು. ಅದರಲ್ಲಿ ಒಬ್ಬ ದೇವತಾಪುರುಷನು ಏನನ್ನೋ ಬರೆಯುತ್ತಿದ್ದುದನ್ನು ಆ ಷೇಕ್ ಅಬುಬೆನ್ ಆದಿಮನು ಕಂಡನು. "ದೇವ! ಏನನ್ನು ಬರೆಯುತ್ತಿದ್ದಿ?" ಎಂದು ಷೇಕನು ಕೇಳಿದನು. ಆ ದೇವನು "ದೇವರಿಗೆ ಅತ್ಯಂತ ಸಮೀಪವಾಗಿಯೂ ಪ್ರಿಯವಾಗಿಯೂ ಶ್ರೇಷ್ಠವಾಗಿಯೂ ಇರುವ ಆರಾಧಕರ ಹೆಸರುಗಳನ್ನು ಬರೆಯುತ್ತಿದ್ದೇನೆ" ಎಂದು ಹೇಳಿದನು. ಷೇಕನು ಖಿನ್ನನಾಗಿ ತಲೆ ತಗ್ಗಿಸಿ "ಬೇರೆಯವರಂತೆ ನಾನೂ ದೇವರ ಅರ್ಚಕನಾಗಿದ್ದರೆ ಚೆನ್ನಾಗಿತ್ತು. ನಾನೆಂದೂ ಪ್ರಾರ್ಥನೆ ಮಾಡುವದಿಲ್ಲ; ಉಪವಾಸಮಾಡುವದಿಲ್ಲ; ದೇವಾಲಯಕ್ಕೆ

ಹೋಗುವದಿಲ್ಲ; ನಾನು ಬಹಿಷ್ಕರಿಸಲ್ಪಡುವದರಿಂದ ಸ್ವರ್ಗ ಸಾಮ್ರಾಜ್ಯವನ್ನು ನಾನೆಂದೂ ಪ್ರವೇಶಿಸುವದಕ್ಕೆ ಆಗುವದೇ ಇಲ್ಲ. ಅಯ್ಯೋ!" ಎಂದನು. ಆ ದೇವನು "ಅದಕ್ಕೆ ನಾನೇನೂ ಮಾಡಲಾರೆ" ಎಂದನು. ಅದಕ್ಕೆ ಷೇಕನು "ದೇವರನ್ನು ಪ್ರೀತಿಸದೆ, ಮನುಷ್ಯರನ್ನೂ ಪ್ರಪಂಚವನ್ನೂ ಪ್ರೀತಿಸತಕ್ಕವರ ಹೆಸರುಗಳ ಪಟ್ಟಿಯನ್ನು ನೀನು ಎಂದಾದರೂ ಬರೆಯುವದುಂಟೆ? ಹಾಗಾದರೆ ನನ್ನನ್ನು ಮಾನವನ ಆರಾಧಕನೆಂದು ಹೆಸರಿಸಬಹುದು. ಎಂದು ಆ ದೇವದೂತನನ್ನು ಪುನಃ ಪ್ರಶ್ನೆ ಮಾಡಿ ಬಿನ್ನವಿಸಿದನು. ಆ ದಿವ್ಯ ಪುರುಷನು ಅಂತರ್ಧಾನನಾದನು. ಆ ಷೇಕನಿಗೆ ಆ ರಾತ್ರಿಯೇ ಸ್ವಲ್ಪ ಹೊತ್ತಾದ ಮೇಲೆ, ಇನ್ನೊಂದು ದೃಶ್ಯವು ತೋರಿತು. ಅದರಲ್ಲಿ ಅದೇ ದಿವ್ಯಪುರುಷನು ಆ ಪುಸ್ತಕವನ್ನೇ ಹಿಡಿದು ಬಂದಿದ್ದನು. ಅವನು ಅದರಲ್ಲಿ ಪುಟಗಳನ್ನು ತಿರುವಿ ತಿರುವಿ ಹಾಕಿ ಪರಿಶೋಧಿಸಿದ ಮೇಲೆ ಷೇಕನು ಅವನನ್ನು ಪುನಃ ವಿಚಾರ ಮಾಡಿದನು. ಅದಕ್ಕೆ ಆ ದೇವಪುರುಷನು ದೇವರಿಗೆ ಅತ್ಯಂತ ಪ್ರಿಯರಾದ ಭಕ್ತರ ಹೆಸರುಗಳನ್ನು, ಅವರ ಯೋಗ್ಯತೆಯು ತಾರತಮ್ಯದ ಮೇಲೆ ಕ್ರಮವಾಗಿ ಬರೆದು ಪವಿತ್ರವಾದೊಂದು ಪಟ್ಟಿಯನ್ನು ತಯಾರಿಸುತ್ತಿರುವದಾಗಿ ಹೇಳಿ ಅದನ್ನು ಷೇಕನಿಗೆ ತೋರಿಸಿದನು, ಆಹಾ! ಆಶ್ಚರ್ಯ! ತಾನು ಕೇವಲ ಮಾನವ ಭಕ್ತನೆಂದು ಹೇಳಿಕೊಂಡಿದ್ದ ಷೇಕನ ಹೆಸರು, ದೇವರ ಮಹಾ ಭಕ್ತರ ಹೆಸರುಗಳ ಪಟ್ಟಿಯಲ್ಲಿ ತಲೆಯ ಮೇಲೆ ಮೊಟ್ಟ ಮೊದಲನೆಯದಾಗಿಯೇ ಬರೆದಿದ್ದಿತು.

ಇದು ವಿಲಕ್ಷಣವಲ್ಲವೆ? ಇಲ್ಲ; ಇದು ಬಹಳ ವಾಸ್ತವ. ನೀವು ಮಾನವನನ್ನು ಆರಾಧಿಸಿದರೆ, ಅಥವಾ ಮನುಷ್ಯನನ್ನು ನೀವು ಮನುಷ್ಯನನ್ನಾಗಿ ಕಾಣದೆ, ದೇವರನ್ನಾಗಿ ಕಂಡರೆ, ಪ್ರತಿಯೊಂದನ್ನೂ ನೀವು ದೇವರಾಗಿ ಕಂಡು, ಮನುಷ್ಯನನ್ನು ದೇವರೆಂದು ಪೂಜಿಸಿದರೆ, ಆಗ ನೀವು ದೇವರನ್ನೇ ಪೂಜಿಸಿದಂತಾಗುತ್ತದೆ.

ಮನುಷ್ಯರಲ್ಲಿ ತಪ್ಪನ್ನು ಹುಡುಕುವ, ಟೀಕಿಸುವ, ಖಂಡಿಸುವ, ನಿಂದಿಸುವ ಪ್ರವೃತ್ತಿಯು ದೇವರ ಪೂಜೆಯಲ್ಲ. ದಾನ ಧರ್ಮಗಳು ದೇವರ ಪೂಜೆಯಲ್ಲ. ಹೊರಗೆ ಅವನಿಗಾಗಿ ತಂದೆ ತಾಯಿಗಳು ಕಾದಿದ್ದಾರೆಂದು ಕ್ರಿಸ್ತನಿಗೆ ಜನರು ಹೇಳಿದರು. ಕ್ರಿಸ್ತನು ಜನಸ್ತೋಮದ ಕಡೆ ತೋರಿಸಿ "ಇಗೋ! ನನ್ನ ತಂದೆ ತಾಯಿಗಳನ್ನು ನೋಡಿ ಅವರನ್ನು ನಿಮ್ಮಂತೆಯೇ ಕಾಣಿರಿ" ಎಂದನು.

ನಿಮ್ಮಲ್ಲಿಯೇ ನಿಮಗೆ ಎಷ್ಟೋ ತಪ್ಪುಗಳು ಕಾಣಬಹುದು. ಆದರೂ ನಿಮ್ಮನ್ನು ನೀವು ದ್ವೇಷಿಸುವದಿಲ್ಲ. ನಿಮ್ಮ ಮಿತ್ರರಲ್ಲಿ ನೀವು ತಪ್ಪುಗಳನ್ನು ಕಂಡರೆ, ಅವುಗಳಿಂದ ದೂರವಿರುವದಕ್ಕೆ ನೀವು ಪ್ರಯತ್ನ ಮಾಡಿ; ಆದರೆ ಅವರನ್ನು ದ್ವೇಷಿಸಬೇಡಿ. ಅವರಲ್ಲಿರುವ ದೇವತ್ವವನ್ನು ಗುರುತಿಸಿ, ಅವರನ್ನು ದೇವರೆಂದೇ ತಿಳಿಯಿರಿ.

ಸರಕಾರದ ಉದ್ಯೋಗದಲ್ಲಿರುವ ಒಬ್ಬ ಮನುಷ್ಯನು ತನ್ನ ಕೆಲಸವನ್ನು ಕೈ ಬಿಟ್ಟು

ರಾಜ್ಯಾಧ್ಯಕ್ಷರ ಸಮೀಪದಲ್ಲಿ ಕಾಲ ಕಳೆದರೆ ಅವನನ್ನು ಆ ಉದ್ಯೋಗದಲ್ಲಿ ಉಳಿಸಿಕೊಳ್ಳುತ್ತಾರೆಯೇ? ಎಂದಿಗೂ ಇಲ್ಲ.

ರಾಜ್ಯಾಧಿಕಾರದಲ್ಲಿ ನಿಮಗಿರುವ ಉದ್ಯೋಗವನ್ನೇ ದೇವರೆಂದು ಭಾವಿಸಿ ನಿಮ್ಮ ಕರ್ತವ್ಯ ಪಾಲನೆಯನ್ನೇ ಪೂಜೆಯೆಂದು ತಿಳಿಯಬೇಕು. ಹಾಗಾದರೆ ನೀವು ರಾಜ್ಯದ ಪ್ರಭುವನ್ನೇ ಅಧ್ಯಕ್ಷರನ್ನೇ ಪೂಜಿಸಿದಂತಾಗುತ್ತದೆ. ನಿಮ್ಮ ಕರ್ತವ್ಯ ಕರ್ಮವನ್ನು ಬಿಟ್ಟು ದೇವಾಲಯಕ್ಕೆ ಹೋದರೂ ಪ್ರಾರ್ಥನಾ-ಜಪಗಳನ್ನು ಮಾಡಿದರೂ ಅಧ್ಯಕ್ಷರ ಸಮೀಪದಲ್ಲಿದ್ದು ಸೇವೆ ಮಾಡಿದಂತೆ, ವ್ಯರ್ಥವಾಗುತ್ತದೆ.

ನಿಮ್ಮ ಮಿತ್ರರಲ್ಲಿರುವ-ದೇವತ್ವವನ್ನು-ದೇವರನ್ನು ಪೂಜಿಸುವದೇ ಅತ್ಯುತ್ತಮವಾದ ದೇವರ ಪೂಜೆ. ಅವರ ತಪ್ಪುಗಳೂ ದೋಷಗಳೂ ನಿಮ್ಮ ಮನಸ್ಸನ್ನು ಖೇದಗೊಳಿಸಿ, ಅದರಲ್ಲಿರುವ ದೇವತ್ವವನ್ನು ಮರೆಮಾಡಿ ನಿಮ್ಮ ದೃಷ್ಟಿಯನ್ನು ಕುರುಡು ಮಾಡದೆ ಇರಬೇಕು. ನಿಮ್ಮ ಸುತ್ತಲಿರುವವರಲ್ಲಿ ಎಷ್ಟು ದೋಷಗಳಿದ್ದರೂ ಅವರಲ್ಲಿ ದೇವತ್ವವನ್ನು ನೀವು ಕಾಣಬಲ್ಲಿರಾದರೆ ನಿಮ್ಮಲ್ಲಿಯೂ ನೀವು ದೇವರನ್ನು ನೋಡಬಹುದು.

ಇದರಲ್ಲಿ ಇಡೀ ಕಷ್ಟವೇನಿದೆ ಎಂಬುದನ್ನು ಸಂಕ್ಷೇಪವಾಗಿ ಹೀಗೆ ತಿಳಿಸಬಹುದು. ನಾವು ಶತ್ರುಗಳಲ್ಲಿ ದೇವರನ್ನೇಕೆ ಕಾಣುವದಿಲ್ಲ? ಏಕೆಂದರೆ, ಅವರಲ್ಲಿ ನಾವು ದೋಷಗಳನ್ನೇ ನೋಡುತ್ತೇವೆ. ತಪ್ಪುಗಳನ್ನೇ ಹುಡುಕುವ ಕೆಟ್ಟ ಪ್ರವೃತ್ತಿಯನ್ನು ಜನರು ಬಿಟ್ಟು ಸುತ್ತಲೂ ದೇವತ್ವವನ್ನೇ ನೋಡುವದನ್ನು ಕಲಿಯಬೇಕು. ಪ್ರತಿಯೊಬ್ಬರಲ್ಲಿಯೂ ಇರುವ ದೇವತ್ವದಲ್ಲಿ ನಂಬಿಕೆ ಇಡಿ; ಪ್ರತಿಯೊಬ್ಬರಲ್ಲಿಯೂ ಸತ್ಯಜ್ಞಾನಾನಂತವನ್ನೇ ನೋಡಿ. ನೀರೋ ಅಂಥಾ ಜನರು ತಮ್ಮ ತಾರುಣ್ಯದಲ್ಲಿ ಬಹಳ ನೀತಿಪರರೂ ಧಾರ್ಮಿಕರೂ ಆಗಿದ್ದರೂ ಅನಂತರ ಅತಿಶಯ ದುಷ್ಟರಾಗುವದನ್ನು ಅನೇಕ ಸಂದರ್ಭಗಳಲ್ಲಿ ಕಾಣುತ್ತೇವೆ. ಆದರೆ, ಇಂಗ್ಲೆಂಡಿನ ಐದನೆಯ ಹೆನ್ರಿಯು ಬಾಲ್ಯದಲ್ಲಿ ಬಹಳ ದುಷ್ಟನಾಗಿದ್ದರೂ ಅವನ ಅನಂತರದ ಜೀವನದಲ್ಲಿ ಬಹಳ ಒಳ್ಳೆಯವನಾದನು. ಹೀಗೆ ಯಾರ ಗುಣಶೀಲಗಳೂ ಎಂದೆಂದೂ ಬದಲಾವಣೆ ಹೊಂದದೆ ಒಂದೇ ಬಗೆಯಾಗಿ ಸ್ಥಿರವಾಗಿರುತ್ತವೆಯೆಂದು ತಿಳಿಯಬಾರದು. ಇವತ್ತು ಬಹಳ ಕೆಟ್ಟವರಾದವರು ನಾಳೆ ಬಹಳ ಒಳ್ಳೆಯವರಾಗಬಹುದು. ಸರ್ ವಾಲ್ಟರ್ ಸ್ಕಾಟ್‌ನು ಬಾಲ್ಯದಲ್ಲಿ ಬಹಳ ದಡ್ಡನಾಗಿದ್ದನು; ಆದರೆ ಅನಂತರದ ಜೀವನದಲ್ಲಿ ಅವನು ಶ್ರೇಷ್ಠ ಪುರುಷನಾದನು. ಗಣಿತ ಶಾಸ್ತ್ರದಲ್ಲಿ ಲೆಕ್ಕಗಳನ್ನು ಮಾಡಲಾರದೆ ಸರ್ ಇಸ್ಸಾಕ್ ನ್ಯೂಟನ್‌ನು ಅನೇಕ ಸಲ ಶಿಕ್ಷೆಯನ್ನು ಪಡೆದನು. ಆದರೆ ಅನಂತರದ ವಯಸ್ಸಿನಲ್ಲಿ ಅವನು ವಿಖ್ಯಾತ ವಿಜ್ಞಾನಿಯಾದನು. ಮೇರಿ ಮ್ಯಾಗ್‌ಡೆಲೀನಳು ಅವಳ ಎಳೆ ಯೌವನದಲ್ಲಿ ಸ್ವೇಚ್ಛಾಚಾರಿಣಿಯಾಗಿದ್ದಳು; ಆದರೆ, ಕ್ರಿಸ್ತನ ಸಮಾಗಮದಲ್ಲಿ ಬಂದನಂತರ ಅವಳೇ ಸಾತ್ತ್ವಿಕ ಪ್ರವೃತ್ತಿಯುಳ್ಳವಳಾದಳು. ಆಕೆಯು

ಕ್ರಿಸ್ತನ ಭಕ್ತಳಾದಳು. ಇವತ್ತು ಪಾಪಿಷ್ಠನಾಗಿರುವವನು ನಾಳೆ ಪುಣ್ಯತಮನಾದ ಮಹಾತ್ಮನಾಗಬಹುದು, ಒಬ್ಬ ಮನುಷ್ಯನು ತಪ್ಪು ಮಾಡುತ್ತಿದ್ದರೆ, ಅವನಿಗೆ ವಿರುದ್ಧವಾಗಿ ನಿಂತು ಅವನನ್ನು ದ್ವೇಷಿಸುವದಕ್ಕೆ ನಿಮಗೆ ಅಧಿಕಾರವಿಲ್ಲವೆನ್ನುವ ದನ್ನು ನೆನಪಿನಲ್ಲಿಡಿ. ಅವನಲ್ಲಿಯೂ ಎಲ್ಲರಲ್ಲಿಯೂ ಎಲ್ಲೆಡೆಯಲ್ಲಿಯೂ ದೇವರನ್ನೇ ನೋಡಿ. ನಿಮ್ಮ ವಿಷಯದಲ್ಲಿಯೂ ಯಾರಾದರೂ ಕೆಟ್ಟ ಆಲೋಚನೆ ಮಾಡುತ್ತಿದ್ದರೂ ನಿಮ್ಮಲ್ಲಿ ತಪ್ಪನ್ನೇ ನೋಡುತ್ತಿದ್ದರೂ ನೀವು ಪ್ರತೀಕಾರ ಮಾಡಬಹುದೇ? ಛೇ ಛೇ, ಎಂದೆಂದಿಗೂ ಕೂಡದು.

ಸಾಕ್ರಿತೀಸನು ಕಾರಾಗೃಹದಲ್ಲಿದ್ದಾಗ, ಅವನಿಗೆ ಹೆಮ್‌ಲಾಕ್ (Hemloc) ವಿಷವನ್ನು ಕೊಡುವದಕ್ಕೆ ಮೊದಲು, ಅವನ ಶಿಷ್ಯರೆಲ್ಲಾ ಅವನ ಸುತ್ತಲೂ ಸೇರಿ, ಪಿತೂರಿಯನ್ನು ನಡೆಸಿ, ಅವನನ್ನು ಆ ಬಂಧನದಿಂದ ಬಿಡುಗಡೆ ಮಾಡಿಸುವದಾಗಿ ಹೇಳಿದರು. ಕಾರಾಗೃಹದ ಮುಖ್ಯಾಧಿಕಾರಿಗೆ ಬೇಕಾದಷ್ಟು ಲಂಚವನ್ನು ಕೊಟ್ಟು ತಮ ಕಾರ್ಯವನ್ನು ಸಾಧಿಸುವದಾಗಿಯೂ ಅದಕ್ಕೆ ಸಾಕ್ರಿತೀಸನು ಒಪ್ಪಬೇಕೆಂದೂ ಅವನನ್ನು ಬಗೆಬಗೆಯಿಂದ ಬೇಡಿಕೊಂಡರು. ಆದಕ್ಕೆ ಸಾಕ್ರಿತೀಸನು, "ಲಂಚದಿಂದ ಕೆಲಸವನ್ನು ಮಾಡಿಕೊಳ್ಳುವದೂ ರಾಜ್ಯದ ಕಾಯಿದೆ, ಕಾನೂನುಗಳನ್ನು ಮುರಿಯು ವದೂ ನ್ಯಾಯವಾಗಬಹುದೆ?"-ಎಂದು ಕೇಳಿದನು: "ಖಂಡಿತ, ಎಂದಿಗೂ ಇಲ್ಲ" ಎಂದು ಅವರು ಹೇಳಿದರು. ಆಗ ಸಾಕ್ರಿತೀಸನು "ಇದು ನ್ಯಾಯವಲ್ಲವಾದರೆ, ಶಾಸನ ಬದ್ಧವಾಗಿ ನನಗೆ ವಿಧಿಸಿರುವ ಶಿಕ್ಷೆಯನ್ನು ನಾನು ತಪ್ಪಿಸಿಕೊಳ್ಳಬೇಕೆಂದು ಏಕೆ ಹೇಳುತ್ತೀರಿ? ನ್ಯಾಯವಲ್ಲದ ಕಾರ್ಯವನ್ನು ಮಾಡಲು ನನ್ನನ್ನು ಏಕೆ ಪ್ರೇರಿಸುತ್ತೀರಿ, ಒತ್ತಾಯ ಪಡಿಸುತ್ತೀರಿ?" ಎಂದು ಕೇಳಿದನು. ಶಿಷ್ಯರು "ನಿಮ್ಮ ನಿಜವಾದ ಯೋಗ್ಯತೆ ಯನ್ನು ತಿಳಿಯದೆ, ನಿಮ್ಮ ಉಪದೇಶವನ್ನು ಅರ್ಥಮಾಡಿಕೊಳ್ಳದೆ, ನಿಮ್ಮಿಂದ ದೈವಕ್ಕೂ ಧರ್ಮಕ್ಕೂ ಜನರಿಗೂ ಹಾನಿಯಾಗುವದೆಂದು ಸುಳ್ಳಾದ ಆರೋಪ ಮಾಡಿ ಈ ರಾಜ್ಯದ ಅಧಿಕಾರಿಗಳೇ-ಜನರೇ-ಮಹಾ ಅಪರಾಧಿಗಳಾಗಿದ್ದಾರೆ. ಅವರು ಕಾಯಿದೆ ಯನ್ನು ದುರುಪಯೋಗ ಪಡಿಸಿದ್ದಾರೆ. ಆದ್ದರಿಂದ ಈ ತಪ್ಪಾದ ಶಿಕ್ಷೆಯಿಂದ ತಪ್ಪಿಸಿ ಕೊಂಡರೆ ನ್ಯಾಯವಾದ ದೃಷ್ಟಿಯಿಂದ ತಪ್ಪಾಗುವದಿಲ್ಲ" ಎಂದು ಹೇಳಿದರು. ಸಾಕ್ರಿ ತಿಸನು "ಇತರರು ಕಾಯಿದೆಯನ್ನು ಮುರಿದಿರುವದರಿಂದ ನಾನೂ ಕಾಯಿದೆಯನ್ನು ಭಂಗಪಡಿಸಿ, ನ್ಯಾಯವಲ್ಲದ್ದನ್ನು ನಡೆಸಿ, ಪ್ರತೀಕಾರ ಮಾಡಬೇಕೆಂದು-ಸೇಡು ತೀರಿಸಿ ಕೊಳ್ಳಬೇಕೆಂದು-ನೀವು ಹೇಳುತ್ತೀರಾ? ನಾನೂ ಕಾನೂನನ್ನು ಮುರಿಯುವದರಿಂದ ಅವರ ತಪ್ಪನ್ನು ನಾವು ತಿದ್ದಿದಂತೆ, ಅವರ ಅನ್ಯಾಯವನ್ನು ನಾವು ಸರಿಪಡಿಸಿದಂತೆ ಆಗು ತ್ತದೆಯೇ? ಎಂದೂ ಆಗುವದಿಲ್ಲ. ಶಾಸನ ಭಂಗ ಮಾಡುವದು ಶಾಸನ ಬದ್ಧವಲ್ಲ, ನ್ಯಾಯವಲ್ಲ-ಎಂದು ನೀವೇ ಇದುವರೆಗೆ ಬೋಧಿಸುತ್ತ ಬಂದಿರುವ ತತ್ತ್ವಕ್ಕೆ ವಿರೋಧವಾಗುತ್ತದೆ. ಒಂದು ಕಪ್ಪು ಬಣ್ಣಕ್ಕೆ ಇನ್ನೊಂದು ಕಪ್ಪು ಬಣ್ಣವನ್ನು ಸೇರಿಸಿದರೆ

ಎಂದೂ ಬೆಳ್ಳಗಾಗುವದಿಲ್ಲ. ಇತರರು ದೋಷಾರೋಪಣ ಮಾಡಿ ದೂಷಿಸಿದರೆ, ನಾವೇಕೆ ಹಾಗೆ ಮಾಡಬೇಕು? ಇನ್ನೊಬ್ಬರು ಮಾಡಿದ ತಪ್ಪನ್ನೇ ನಾವು ಮಾಡಿದರೆ ಪರಿಸ್ಥಿತಿಯು ಎಂದೂ ಸುಧಾರಿಸುವದಿಲ್ಲ. ಅವರು ಮೊದಲಿನ ತಪ್ಪಿತಸ್ಥರಾದರೆ ನಾವು ಎರಡನೆಯ ತಪ್ಪಿತಸ್ಥರಾಗುತ್ತೇವೆ. ಅಂತು ನಾವೂ ತಪ್ಪಿತಸ್ಥರೇ ಆಗುತ್ತೇವೆ. ನಿಮ್ಮ ಎಲ್ಲಾ ಸಾಹಸವೂ ಮರಣವನ್ನು ತಪ್ಪಿಸುವದಕ್ಕಾಗಿ ಅಲ್ಲವೆ? ಆದರೆ, ಎಂದಾದರೂ ಮರಣವು ತಪ್ಪಿದ್ದಲ್ಲ. ನಮಗೆ ಜೀವನಕ್ಕಿಂತಲೂ ಮರಣವೇ ಹೆಚ್ಚು ಒಳ್ಳೆಯದಿರಬಹುದು; ಅಲ್ಲವೆಂಬುದನ್ನು ನೀವೇನು ಬಲ್ಲಿರಿ?......" ಎಂದು ಹೇಳಿದನು.

೭೭. ಹುಚ್ಚು ಪ್ರೇಮ

(ಶಾಲಾ ಮಾಸ್ತರ್ ಅಜೀಜ್)

ಜೀವನವೆಂದರೇನು ? ಎಡೆತಡೆಗಳ ಪರಂಪರೆ. ಹೌದು, ಜೀವನದ ಮೇಲೆ ಮೇಲೆ ತೇಲಂತ್ತಿರುವ ಜನರಿಗೆ ಅದು ಹಾಗೆಯೇ ಸರಿ ; ಆದರೆ ಯಾರು ಜೀವನವಾಗಿಯೇ - ಪ್ರೇಮವಾಗಿಯೇ - ಬದುಕುತ್ತಾರೋ ಅವರಿಗೆ ಹಾಗಲ್ಲ. ಗೊಡ್ಡು ಹರಟೆ ಹೊಡೆಯುವವರ, ದೃಶ್ಯವನ್ನು ಸತ್ಯವೆಂದು ನಂಬತಕ್ಕವರ, ಮತ್ತು ನಾಚಿಕೆಗೇಡಿ ಗೌರವದ ನಾಚಿಕೆಗೆಟ್ಟ ಗುಲಾಮರ ಸಹವಾಸದಷ್ಟು ವಿಷಮಯವಾದುದು ಯಾವದೂ ಇಲ್ಲವೆಂಬುದು ಸತ್ಯ. ಆದರೆ ಎಲ್ಲಿ ಪ್ರಭುಪ್ರೇಮವು-ಪ್ರೇಮ ಪ್ರಭುವು-ಬೀಡು ಬಿಟ್ಟಿದೆಯೋ ಅಲ್ಲಿ ಅವಿನೀತ-ಅಧಿಕ ಪ್ರಸಂಗಿತನದ - ಕಾಲು ಸಪ್ಪಳವು ಸುತ್ತಿ ಸುಳಿದಾಡಲಾರದು. ಅವರ ಸಂಗವನ್ನು ದೂರವಿಡುವ ಅಗತ್ಯವಿಲ್ಲ. ಅವರ ಸೇವೆಯು ಅವಶ್ಯವಾಗಿರುವಾಗ ಹೊರತು ಬೇರೆ ಸಮಯದಲ್ಲಿ ಕರೆಯದೆ ಒಳ ನುಗ್ಗುವವರು ನಿಮ್ಮ ಮೇಲೆ ಅತಿಕ್ರಮಣ ಮಾಡುವಷ್ಟು ಧೈರ್ಯಮಾಡಿದರೆ ಪ್ರಕೃತಿ ನಿಯಮವು ನಿಯಮವೇ ಅಲ್ಲ ; ಪ್ರಕೃತಿಯು ಗಾಯಪಡಿಸುವ ಕೊಳೆಗಿಂತಲೂ ಹೆಚ್ಚಿನದಲ್ಲ.

ಪಂಜಾಬಿನ ಘನೀಮತ್ ಎಂಬ ಲೇಖಕನು ತನ್ನ ನೈರಂಗ್-ಇ-ಇಷ್ಕ್ ಗ್ರಂಥದಲ್ಲಿ ಷಾಹಿದ್ ಎಂಬ ತನ್ನ ವಿದ್ಯಾರ್ಥಿನಿಯಲ್ಲಿ ಹುಚ್ಚು ಪ್ರೇಮದಲ್ಲಿ ಬಿದ್ದ ಒಬ್ಬ ಬಡ ಶಾಲಾ ಉಪಾಧ್ಯಾಯನಾದ ಅಜೀಜ್‌ನ ವಿಷಯವನ್ನು ಹೇಳಿದ್ದಾನೆ. ಅವನು ತನ್ನ ವಿದ್ಯಾರ್ಥಿಗಳಿಗೆ ಬರೆಯಲು ನಿಯಮಿಸಿದ ಅಭ್ಯಾಸ ಪಾಠಗಳನ್ನು ತಿದ್ದುಪಡಿ ಮಾಡುವಾಗ, ಆ ಮತಿಗೆಟ್ಟ ಮಾಸ್ತರನು ಆ ಶಾಲೆಯಲ್ಲಿ ಆರಂಭ ದೆಶೆಯಲ್ಲಿದ್ದ ಆ ವಿದ್ಯಾರ್ಥಿನೀ ಗುರುವಿನ, ತೋಚಿದಂತೆ ಗೀಚಿ ಹಾಕಿದ್ದ, ಮಸಿಚೆಲ್ಲಿದ, ಅಂದಗೆಟ್ಟ, ಕಾಕಲಿಪಿಯನ್ನೇ ಸರ್ವೋತ್ಕೃಷ್ಟವಾದುದೆಂದು ಮೆಚ್ಚಿಕೊಳ್ಳುತ್ತಾನೆ. ಆಹಾ ! ಅವನು ಚೆನ್ನಾಗಿ ಮಾಡಿದ. ಎಷ್ಟು ನಿಜ ! ಪ್ರೀತಿಯ ಕೊರತೆಯಿಂದ ಕಣ್ಣಿಗೆ ಕಾಮಾಲೆ ಬಂದಾಗ ದೋಷಗಳು ಕಾಣುತ್ತವೆ. ನಮ್ಮ ಹೃದಯದಲ್ಲಿ ಪ್ರೇಮಪ್ರಭುವು ಬೀಡು

ಬಿಟ್ಟಾಗ ಅಂತರಿಕ್ಷದಲ್ಲಿ ಇನ್ನೊಬ್ಬ ಸೂರ್ಯನು ಉದಿಸಿದನೋ ಎಂಬಂತೆ ಹಗಲಿಗೆ ಹಗಲು ಸೇರಿದಂತೆ ಆಗುತ್ತದೆ.

೬೮. ವಿಶ್ವಪ್ರೇಮ

(ಸತ್ತಮಗುವಿನ ತಾಯಿ)

ಹೂವುಗಳು ಬೆಳೆಯುವಂತೆ ಹೇಗೆ ಮಾಡಬೇಕು? ಅವನ್ನು ಪ್ರೇಮಿಸುವದರಿಂದ ಹೆಂಗಸೊಬ್ಬಳು ಸುಂದರವಾದ ಹೂವುಗಳನ್ನು ಅವುಗಳಿಗೆ ಅತ್ಯಂತ ಅಹಿತವಾದ ಹವಾಮಾನದಲ್ಲಿ ಸಹ ಬೆಳೆಸಿದಳು. ಅದು ಹೇಗೆ ಸಾಧ್ಯವಾಯಿತೆಂದು ಆಶ್ಚರ್ಯದಿಂದ ಆಕೆಯನ್ನು ಒಬ್ಬರು ಕೇಳಿದರು. "ಅವುಗಳನ್ನು ನಾನು ಪ್ರೀತಿಸಿದೆ; ಉತ್ತಮವಾಗಿ ಬೆಳೆಸುವದಕ್ಕೆ ಉಪಾಯುಗಳು ತಾವಾಗಿಯೇ ಹೊಳೆದವು" ಎಂದಳು. ಪ್ರೀತಿಯು ಉಲ್ಲಾಸಕರವಾದ ಶಾಖವೊಂದೇ (ಹಕ್ಕಿಯು ಮೊಟ್ಟೆಗಳಿಂದ ಮರಿಮಾಡುವ) ಕೃತಕ ಶಾಖೋಪಕರಣ (ಕಾವು, ಪೆಟ್ಟಿಗೆ). ಪ್ರೇಮವು ಉದ್ಯೋಗಗಳನ್ನೂ ಕೈಗಾರಿಕೆಗಳನ್ನೂ ಕಲಾಪೂರ್ಣವಾಗಿ ಮಾಡುವದಲ್ಲದೆ ಕೆಲಸದಲ್ಲಿ ಸೌಂದರ್ಯವನ್ನೂ ತರುತ್ತದೆ. ಪ್ರೇಮವನ್ನು ಆಸಕ್ತಿ ಎಂದು ತಪ್ಪು ತಿಳಿಯಬಾರದು. ನಿಮ್ಮ ಹೆಂಡತಿ, ಮಕ್ಕಳು ನಿಮ್ಮ ಪ್ರೀತಿಗೆ ಸುತ್ತಲೂ ಆವರಣ ಕಲ್ಪಿಸುವ ಬೇಲಿಗಳಾಗದೆ ಇಡೀ ಜಗತ್ತಿಗೆ ಪ್ರೇಮವನ್ನು ಪ್ರಸರಣ ಮಾಡುವ ಕೇಂದ್ರವಾಗಬೇಕು. "ನಾನು ನನ್ನ ಕುಟುಂಬವನ್ನು ನನ್ನ ವ್ಯಕ್ತಿಗಿಂತಲೂ ಹೆಚ್ಚು ಪ್ರೀತಿಸುತ್ತೇನೆ; ನನ್ನ ದೇಶವನ್ನು ಕುಟುಂಬಕ್ಕಿಂತಲೂ-ಹೆಚ್ಚಾಗಿ ಪ್ರೀತಿಸುತ್ತೇನೆ: ಮತ್ತು ಇಡಿಯ ಪ್ರಪಂಚವನ್ನು ನನ್ನ ದೇಶಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತೇನೆ" ಎಂದು ಜೀನ್‌ಪಾಲ್ ರಿಚರ್ [Jean Paul Richter] ಹೇಳಿದ್ದಾನೆ.

ಯುದ್ಧಕ್ಕೆ ಹೋಗುವಾಗ ಲೌಲೇಸನು [Lovelace] ಲೂಕ್ಯಾಸ್ಟರ್‌ಗೆ [Lucaster] ಹೇಳಿರುವ ಮಾತು ಎಷ್ಟು ಉದಾತ್ತವಾಗಿವೆ ?– "ಪ್ರಿಯೆ ! ನಾನು ನಿನ್ನನ್ನು ಅಷ್ಟೊಂದು ಪ್ರೀತಿಸಲು ಸಾಧ್ಯವಾಗಲಿಲ್ಲ. ಏಕೆಂದರೆ, ನನ್ನ ದೇಶವನ್ನು ನಾನು ಇನ್ನೂ ಹೆಚ್ಚಾಗಿ ಪ್ರೀತಿಸಲಿಲ್ಲವೆ ?"

ನಿಜವಾದ ಪ್ರೇಮವು, ಸೂರ್ಯನಂತೆ, ಆತ್ಮವನ್ನು ವಿಕಾಸಗೊಳಿಸುತ್ತದೆ. ಹಿಮದಂತೆ ಮೋಹವು ಆತ್ಮವನ್ನು ಗಡ್ಡೆಕಟ್ಟಿಸಿ ಸಂಕುಚಿತಮಾಡುತ್ತದೆ.

"ನಿಮಗೆ ಪ್ರೇಮದ ಹೊರತು ಬೇರೆ ದೇವರು ಇಲ್ಲದಿರಲಿ" ಎನ್ನುವುದೇ ಮೋಸೆಸ್ಸಿನ ಮೊದಲನೆಯ ನಿಯಮ. ಈ ಅಸೂಯಾಪರನಾದ ಪ್ರಭು 'ಪ್ರೇಮ'ವು ಕಾಮ-ಮೋಹಗಳ ಮೂರ್ತಿಗೆ ತನ್ನ ಭವ್ಯ ಸಿಂಹಾಸನವನ್ನು ಆಕ್ರಮಿಸಲು ಅವಕಾಶ ಕೊಡುವದಿಲ್ಲ.

ತಾಯಿಯೊಬ್ಬಳು ಬಂದು, ತನಗಿದ್ದ ಒಂದೇ ಮಗುವು ಸತ್ತು ಹೋಯಿತೆಂದು ಗೋಳಾಡಿದಳು. "ನೀನು ಒಂದು ನೀಗ್ರೋ ಮಗುವನ್ನು ದತ್ತು ತೆಗೆದುಕೊಂಡು, ನಿನ್ನ

ಸ್ವಂತ ಮಗುವಿನಂತೆ ಅದನ್ನು ಪ್ರುದ್ಧಿಸಿ ಬೆಳೆಸಬಲ್ಲೆಯಾ ? ನೀನು ಅದಕ್ಕೆ ಸಿದ್ಧಳಾಗಿದ್ದೀಯಂ ?" ಎಂದು ರಾಮನು ಆಕೆಯನ್ನು ಕೇಳಿದನು. ಆಕೆ "ಇಲ್ಲ, ಅದೆಂದೂ ಸಾಧ್ಯವಲ್ಲ" ಎಂದಳು. "ಅದಕ್ಕಾಗಿಯೇ ನೀನು ನಿನ್ನ ಮಗುವನ್ನು ಕಳೆದುಕೊಂಡೆ" ಎಂದು ರಾಮನು ಹೇಳಿದನು. ಸ್ವರ್ಗಸುಖವನ್ನು ತೆರೆದು ತೋರುವದು ಎಲ್ಲವನ್ನೂ ಒಳಗೊಳ್ಳುವ ಪ್ರೇಮವೇ ಹೊರತು, ತನ್ನ ಮಮತೆಯ ವಸ್ತುವನ್ನು ಹೊರತು ಮಿಕ್ಕ ಎಲ್ಲವನ್ನೂ ಹೊರಹಾಕುವ ಮೋಹವಲ್ಲ, ಆಸಕ್ತಿಯಲ್ಲ.

ಜನರು ಇತರರ ಕೃತಘ್ನತೆಯ ವಿಷಯದಲ್ಲಿ ಆಕ್ಷೇಪ ಮಾಡುತ್ತಾರೆ. ಮಾಡಿದ ಅಲ್ಪಸ್ವಲ್ಪ ಸಹಾಯಕ್ಕಾಗಿ ಬಹಳ ಹೆಚ್ಚಿನ ದುಬಾರಿ ಬಡ್ಡಿಯನ್ನು ಕಿತ್ತುಕೊಳ್ಳಲು ಪ್ರಯತ್ನ ಪಡುವ 'ಷೈಲಾಕ್' ಜನರು. ಶಾಂತಿ! ಅಲ್ಪರಾದ ಗೊಣಗಾಟಗಾರರೆ! ದೇವರಿಗೆ ಒಂದೇ ಕೈಇಲ್ಲ; ಎಲ್ಲಾ ಕೈಗಳೂ ಅವನವೇ. ಎಲ್ಲಾ ಕಣ್ಣುಗಳೂ ದೇವರ ಕಣ್ಣುಗಳೇ ; ಎಲ್ಲಾ ಮನಸ್ಸುಗಳೂ ಅವನ ಮನಸ್ಸುಗಳೇ. ಯಾರೊಡನಾದರೂ ನೀವು ವ್ಯವಹಾರ ಮಾಡುವಾಗ ಒಬ್ಬ ಮನುಷ್ಯನು ತೆಗೆದುಕೊಂಡ ಕೈಯಿಂದಲೇ ಹಿಂದಿರುಗಿ ಕೊಡುವನೋ ಹೇಗೆಂಬುದನ್ನು ಎಚ್ಚರಿಕೆಯಿಂದ ಗಮನಿಸಿದ್ದೀರಾ ? ಅವನು ಕೊಡುವಾಗ ಇನ್ನೊಂದು ಕೈಯನ್ನು ಉಪಯೋಗಿಸಬಹುದು. ಅದರಿಂದೇನು ? ನಿಮ್ಮ ಗಿರಾಕಿಯು ಕೈಯಲ್ಲ ; ಆದರೆ ಕೈಯನ್ನು ಉಪಯೋಗಿಸುವ ಯಜಮಾನನು.

೬೯. ವೈಷಯಿಕ ಪ್ರೇಮವೇ ದೈವಿಕ ಪ್ರೇಮವಾಗಿ ಪರಿವರ್ತನೆಹೊಂಬಹುದು

(ತುಳಸೀದಾಸನ ಪತ್ನೀಪ್ರೇಮ)

ನೀವು ಹೊಸದಾಗಿ ಮನುಷ್ಯ ಜನ್ಮದಲ್ಲಿ ಬಂದಾಗ, ಹಿಂದೆ ನಿಮಗೆ ಪಶು ಶರೀರಗಳಲ್ಲಿ ಅಭ್ಯಾಸವಾಗಿದ್ದ ರೀತಿಯಲ್ಲಿಯೇ ಇಚ್ಛಿಸುವದೂ ಆಶಿಸುವದೂ ಬಯಸುವದೂ ನಿಮಗೆ ಸ್ವಾಭಾವಿಕವಾಗಿತ್ತು. ಏಕೆಂದರೆ, ಆಗ ನಿಮ್ಮಲ್ಲಿ ಜಡತಾ ನಿಯಮದ ಪ್ರಭಾವವೇ ಪ್ರಬಲವಾಗಿತ್ತು. ಆದ್ದರಿಂದ ಪಶುಶರೀರಗಳಲ್ಲಿದ್ದಾಗ ನಿಮ್ಮಗೆ ರೂಢಿಯಾಗಿದ್ದ ಕಾಮಕರ್ಮಗಳ ಗತಿ-ವೇಗವೇ ದಿಶೆಯೇ ನಿಮ್ಮ ಕೆಲವು ಮನುಷ್ಯ ಜನ್ಮಗಳಲ್ಲಿಯೂ ಮುಂದುವರಿಯುವದು— ಆ ಜಡತಾನಿಯಮದ ವಶದಿಂದ-ಸ್ವಾಭಾವಿಕವಾಗಿದೆ. ಹೀಗೆ ಸ್ವಾಭಾವಿಕ ಎನ್ನುವದು ಜಡತಾನಿಯಮವೇ ಹೊರತು ಬೇರೆಯಲ್ಲ. ಆದರೆ, ಈ ಜಡತಾನಿಯಮವು ನಿಮಗೆ ನಿಮ್ಮ ನಿಜವಾದ ಚೈತನ್ಯ ಸ್ವಭಾವವನ್ನೇನೂ ತೆರೆದು ತೋರಿಸುವದಿಲ್ಲ, ಪ್ರಕಾಶಪಡಿಸುವದಿಲ್ಲ, ತಿಳಿಸುವದಿಲ್ಲ. ಅದು ಬೇಕಾದರೆ, ನಿಮ್ಮಲ್ಲಿರುವ ಮೃತವಾದ ಜಡತತ್ತ್ವಗಳನ್ನು ತೋರಿಸುತ್ತದೆ ; ನಿಮ್ಮ ನಿಜವಾದ ದೇವತ್ವವನ್ನು ಅದು ಬೆಳಗುವದಿಲ್ಲ ; ತಿಳಿಸುವದಿಲ್ಲ.

ತನ್ನಲ್ಲಿರುವ ಈ ಜಡತೆಯ ಪ್ರಭಾವವನ್ನು ದಮನಮಾಡಿ ಜಯಿಸಿದಾಗ, ಅದನ್ನು ಮೆಟ್ಟಿ ಮೇಲೆದ್ದಾಗ, ಮನುಷ್ಯನು ನಿಜವಾದ ಮನುಷ್ಯನಾಗುತ್ತಾನೆ. ಈ

ಪಾಶವೀ ಕಾಮಾಸಕ್ತಿಗಳೂ ಬಯಕೆಗಳೂ ಪಶುಗಳಿಗೂ ಹೊಸದಾಗಿ ಮನುಷ್ಯ ಜನ್ಮದಲ್ಲಿ ಕಾಲಿಟ್ಟಿರುವ ಕೆಲವು ಬಗೆಯ ಜನರಿಗೂ ಮಾತ್ರ ಕೇವಲ ಸ್ವಾಭಾವಿಕ ವಾಗಿವೆ. ಮೊದಲು ಕೆಲವು ಜನ್ಮಗಳಲ್ಲಿ ಮಾತ್ರ ಅವರು ತಮ್ಮ ಪಶುಕಾಮಗಳನ್ನೇ ತೃಪ್ತಿಮಾಡಿಕೊಳ್ಳುತ್ತಾ ಇರುವದಕ್ಕೆ ಸ್ವತಂತ್ರರಿರಬಹುದು. ಆದರೆ ಕೆಲವು ಕಾಲದ ಅನಂತರ ಅವುಗಳನ್ನು ತ್ಯಜಿಸಿ, ಮೀರಿ ; ಏರಬೇಕು, ದೂರ ನಿಲ್ಲಬೇಕು.

ಈ ಸಂದರ್ಭಕ್ಕೆ ಅನುಚಿತವಾಗಲಾರದ ಒಂದು ಕತೆಯನ್ನು ಕೇಳಿ. ಇಂಡಿಯಾ ದಲ್ಲಿ ತುಳಸೀದಾಸರೆಂಬ ಸಾಧುಗಳಿದ್ದರು. ಅವರಿಗೆ ಅವರ ಹೆಂಡತಿಯಲ್ಲಿ ಅತಿಲಾಲಸೆ ಯಿದ್ದಿತು. ಹಿಂದೆಂದೂ ಯಾರೂ ತನ್ನ ಹೆಂಡತಿಯನ್ನು ಅಷ್ಟು ಪ್ರೀತಿಸಿರಲಿಲ್ಲ ವೆನ್ನುವಷ್ಟು ಅವರು ತಮ್ಮ ಹೆಂಡತಿಯನ್ನು ಪ್ರೀತಿಸುತ್ತಿದ್ದರು. ಅವರು ವಾಸಿಸುತ್ತಿದ್ದ ಊರಿನಿಂದ ಏಳೆಂಟು ಮೈಲಿಗಳು ದೂರದಲ್ಲಿ ತನ್ನ ತೌರುಮನೆಗೆ ಅವರ ಹೆಂಡತಿಯು ಒಮ್ಮೆ ಹೋಗಬೇಕಾಗಿ ಬಂದಿತು. ಆ ಸಾಧುಗಳು ಆಕೆಯ ವಿರಹವನ್ನು ತಾಳಲಾರದೆ, ಮನೆಯನ್ನು ಬಿಟ್ಟು ರಾತ್ರಿ ಹನ್ನೊಂದು ಗಂಟೆಯಲ್ಲಿ ಆಕೆಯನ್ನು ಸೇರಲು ಹುಚ್ಚರಂತೆ ಓಡಿಹೋದರು. ಅವರು ನಡುವೆ ಒಂದು ನದಿಯನ್ನು ದಾಟಬೇಕಾಗಿತ್ತು. ಆದರೆ ಆ ನದಿಯು ವೇಗದಿಂದ ತುಂಬಿ ಹರಿಯುತ್ತಿತ್ತು ; ಅಲ್ಲಿ ದೋಣಿಯಾಗಲೀ ದಾಟಿಸುವವರಾಗಲೀ ಆ ಮಧ್ಯರಾತ್ರಿಯಲ್ಲಿ ಇರಲಿಲ್ಲ. ಮೂರು ನಾಲ್ಕು ದಿನಗಳ ಹಿಂದೆ ಯಾರೋ ನದಿಯಲ್ಲಿ ಮುಳುಗಿ ಸತ್ತು, ಮೈಯೆಲ್ಲ ನೀರುಂಡು ಬಾತು, ಹಗುರವಾಗಿ ತೇಲುತ್ತಿದ್ದ ಒಂದು ಹೆಣವು, ತುಳಸೀದಾಸರಿಗೆ ಆ ದಂಡೆಯಲ್ಲಿ ಸಿಕ್ಕಿತು. ಹುಚ್ಚು ಪ್ರೇಮದ ಆ ಹುಚ್ಚುಸಾಹಸಿಗಳು ತೇಲುತ್ತಿದ್ದ ಬೆಂಡಿನ ತೊಲೆಯಂತಿದ್ದ ಆ ಹೆಣವನ್ನೇ ಬಿಗಿಯಾಗಿ ಅಪ್ಪಿ ಹಿಡಿದುಕೊಂಡು ನದಿ ಯಲ್ಲಿ ಈಜಿಕೊಂಡು ಹೋಗಿ ಆಚೆಯ ದಂಡೆಯನ್ನು ಸೇರಿದರು. ಅಲ್ಲಿಂದ ಅವರು ಓಡೋಡಿ ಹೋಗಿ ಅವರ ಹೆಂಡತಿಯ ಮನೆಯನ್ನು ಸೇರಿದರು. ಆದರೆ ಅಷ್ಟರಲ್ಲಿ ಮಧ್ಯರಾತ್ರಿ ಮೀರಿದ್ದರಿಂದ ಆ ಮನೆಯ ಎಲ್ಲಾ ಬಾಗಿಲುಗಳೂ ಹಾಕಿದ್ದವು. ಅದು ದೊಡ್ಡ ಮನೆಯಾಗಿದ್ದುದರಿಂದ ಬಹಳ ದೂರ ಒಳಗೆ ಎಲ್ಲಿಯೋ ಮಲಗಿದ್ದ ಜನರನ್ನು ಎಚ್ಚರಗೊಳಿಸಲಾಗಲಿಲ್ಲ. ಆಗ ಏನು ಮಾಡಬೇಕೆಂದು ಆ ಸಾಧುಗಳು ಬಹಳ ಯೋಚಿಸಿದರು. ದಾರಿಗೆ ಅಡ್ಡಲಾಗಿ ಒಂದು ಮಹಾನದಿ ಇದ್ದರೂ ಪ್ರೇಮವು ಅದನ್ನು ದಾಟುವದೆಂದೂ ಪರ್ವತವಿದ್ದರೂ ಪ್ರೇಮವು ಅದನ್ನು ಏರಿಹೋಗುವ ದೆಂದೂ ಹೇಳುತ್ತಾರೆ. ಆದ್ದರಿಂದ ಅವರು ಪ್ರೇಮದ ರೆಕ್ಕೆಗಳ ಮೇಲೆ ಹೆಂಡತಿಯು ಮಲಗಿದ್ದಲ್ಲಿಗೆ ಹೋಗಬೇಕಾಗಿತ್ತು. ಕಾತರದಿಂದ ಬಹಳ ಯೋಚಿಸುತ್ತಿರಲು, ಒಂದುಕಡೆ, ಮೇಲಿನ ಮಹಡಿಯ ಕೋಣೆಯ ಕಿಟಕಿಯಿಂದ ಏನೋ ಜೋತಾಡು ತ್ತಿದ್ದಂತೆ ಕಂಡಿತು, ತಮ್ಮ ಮೇಲಿನ ಅತಿ ಪ್ರೇಮದಿಂದ ತಮ್ಮ ಹೆಂಡತಿಯೇ ತಾವು ಮೇಲೆ ಹತ್ತಿಬರುವದಕ್ಕಾಗಿ ಒಂದು ಹಗ್ಗವನ್ನು ನೇತುಕಟ್ಟಿರಬೇಕೆಂದು ಯೋಚಿಸಿ ಬಹಳ ಸಂತೋಷದಿಂದ ಆ ಹಗ್ಗದ ತುದಿಯನ್ನು ಬಲವಾಗಿ ಹಿಡಿದು

ಏರುವದಕ್ಕೆ ತೊಡಗಿದರು, ಆದರೆ ಅದು ಹಗ್ಗವಾಗಿರದೆ ಹಾವಾಗಿದ್ದಿತು. ಆ ದೊಡ್ಡ ಹಾವಿನ ಮೂತಿಯನ್ನೇ ಬಲವಾಗಿ ಹಿಡಿದು ಹತ್ತುವದಕ್ಕೆ ತೊಡಗಿದ್ದರಿಂದ ಅದು ಅವರನ್ನು ಕಚ್ಚುವದಕ್ಕೆ ಅವಕಾಶವಾಗಲಿಲ್ಲ. ಅವರ ಹಿಡಿತಕ್ಕೆ ಅದು ಅರೆ ಜೀವವಾಯಿತು. ಆದರೂ ಅದು ತನ್ನ ಬಾಲದಿಂದ ಮೇಲೆ ಬಲವಾಗಿ ಸುತ್ತಿ ಹಿಡಿದುಕೊಂಡಿತ್ತಾದ್ದರಿಂದ ಅದನ್ನು ಅವರು ಹಿಡಿದುಕೊಂಡು ಹತ್ತಿ ಮೇಲಕ್ಕೆ ಹೋಗಿ ತಮ್ಮ ಹೆಂಡತಿಯು ಮಲಗಿದ್ದ ಕೋಣೆಯೊಳಗೆ ಪ್ರವೇಶಮಾಡಿದರು. ಆಕೆಗೆ ಎಚ್ಚರವಾಗಿ ಎದ್ದು, ತನ್ನ ಪತಿಯನ್ನು ನೋಡಿ ಬೆರಗಾಗಿ, ಆಶ್ಚರ್ಯದಿಂದ "ಏನಾಶ್ಚರ್ಯ ! ಹೇಗೆ ಬಂದಿರಿ ಇಲ್ಲಿಗೆ?" ಎಂದು ಉದ್ಗಾರ ಮಾಡಿದಳು. ದಾಸರಿಗೆ ಆನಂದ ಬಾಷ್ಪಗಳು ಸುರಿಯುತ್ತಾ ಕಂಠವು ಗದ್ಗದವಾಗಿ ಅವರು "ಓ ದೇವಿ, ಈ ಹೊತ್ತಿನಲ್ಲಿ ನಾನಿಲ್ಲಿ ಬರುವದಕ್ಕೆ ಪ್ರೇಮದಿಂದ ನೀನೇ ಸಹಾಯ ಮಾಡಿದೆಯಲ್ಲವೆ ? ಆ ನದಿಯಲ್ಲಿ ನೀನೇ ಸಣ್ಣದೊಂದು ದೋಣಿಯನ್ನು ಇಟ್ಟಿದ್ದೆ ; ಈ ನಿನ್ನ ಕೋಣೆಯ ಕಿಟಕಿಗೆ ಕಟ್ಟಿ ನೀನೇ ಆ ಹಗ್ಗವನ್ನು ಗೋಡೆಯಮೇಲೆ ತೂಗುಬಿಟ್ಟಿದ್ದೆ ಅಲ್ಲವೆ ? ನಾನು ನದಿಯನ್ನು ದಾಟಬರುವದಕ್ಕೂ ಇಲ್ಲಿ ಗೋಡೆಯನ್ನು ಹತ್ತಿಬರುವದಕ್ಕೂ ನೀನೇ ಪ್ರೇಮದಿಂದ ಸುಲಭಗೊಳಿಸಿದ್ದೆಯಲ್ಲವೆ ?" ಎಂದು ಕೇಳಿದರು. ಅವರು ಅತಿಶಯ ಪ್ರೇಮಾವೇಶದಿಂದ ಹುಚ್ಚರಂತಾಗಿದ್ದರು. ಆಕೆಯು ಕುತೂಹಲದಿಂದ ಅವರು ಹೇಳಿದ್ದ ಹಗ್ಗವನ್ನು ನೋಡಿದಳು. ಅದು ದೊಡ್ಡದೊಂದು ಹಾವಾಗಿರು ವದನ್ನು ಕಂಡು ಆಕೆಯು ದಿಗ್ಭ್ರಾಂತಳಾದಳು. ಆಕೆಯು ವಿದ್ಯಾವತಿಯೂ ಸುಸಂಸ್ಕೃತಳೂ ಸಾತ್ತ್ವಿಕಳೂ ಅಧ್ಯಾತ್ಮಜ್ಞಾನದ ಅಧಿದೇವತೆಯಂತೆಯೂ ಇದ್ದಳು. ಆಕೆಯು ಕನಿಕರ-ಪ್ರೀತಿಗಳ ಕಣ್ಣೀರು ಸುರಿಸುತ್ತಾ "ಓ ದಿವ್ಯಾತ್ಮ ! ಓ, ಅತ್ಯಂತ ಮಧುರ ಪ್ರಿಯ ! ಈ ನನ್ನ ಶರೀರದಲ್ಲಿಯೂ ವ್ಯಕ್ತಿತ್ವದಲ್ಲಿಯೂ ಇರುವ ಆಧಾರ ಚೈತನ್ಯ ಸ್ವರೂಪನಾದ ಪರಮಾತ್ಮನಲ್ಲಿ ಇದೇ ಉತ್ಕಟ ಪ್ರೇಮವನ್ನು ಇಟ್ಟಿದ್ದರೆ, ನೀವು ದೇವರೇ ಆಗುತ್ತಿದ್ದಿರಿ ; ನೀವು ಪ್ರಪಂಚದಲ್ಲಿ ಅತ್ಯಂತ ಶ್ರೇಷ್ಠ ಮಹಾತ್ಮರೇ ಆಗುತ್ತಿದ್ದಿರಿ ; ನೀವು ಅತ್ಯುನ್ನತ ಧರ್ಮಪ್ರಸಾರಕರೂ ಸಮಸ್ತ ವಿಶ್ವಕ್ಕೂ ಪೂಜ್ಯರಾದ ದೇವತಾ ಸಾರ್ವಭೌಮರೂ ಆಗುತ್ತಿದ್ದಿರಿ." ಎಂದು ಹೇಳಿದಳು.

ಆತ್ಮನಿಷ್ಠಳಾದ ಆಕೆಯು ಪರಮಾತ್ಮನಲ್ಲಿಯೇ ಮನಸ್ಸನ್ನಿರಿಸಿ, ಪತಿಗೆ ಬೋಧೆ ಮಾಡುತ್ತಾ, "ಓ ಪ್ರಿಯತಮ, ದೇವ ! ನೀವು ಈ ನನ್ನ ಶರೀರವನ್ನು ಪ್ರೀತಿಸು ತ್ತೀರಲ್ಲವೆ ? ಇದು ಬಹಳ ಅನಿತ್ಯವಾದುದು ; ಬದಲಾವಣೆ ಹೊಂದತಕ್ಕದ್ದು ; ಇದು ನಿಮ್ಮ ಮನೆಯನ್ನು ಬಿಟ್ಟು ಈ ಮನೆಗೆ ಬಂದಿತು. ಇದೇ ರೀತಿ ಈ ದೇಹವು ಇವತ್ತೋ ನಾಳೆಯೋ ಈ ಲೋಕವನ್ನೇ ಬಿಡಬಹುದು. ಈ ದೇಹವು ಬದುಕಿದ್ದರೂ ಯಾವದಾದರೂ ರೋಗಕ್ಕೆ ಬಲಿಯಾಗಿ ಸೌಂದರ್ಯವನ್ನೆಲ್ಲಾ ಕಳೆದುಕೊಳ್ಳಬಹುದು ; ಒಂದು ಸೆಕೆಂಡಿನಲ್ಲಿ ಅತಿ ಕುರೂಪಿಯಾಗಬಹುದು. ನೋಡಿ ನನ್ನ ಚೆಲುವಾದ

ಕೆನ್ನೆಗಳಿಗೆ ಈ ಕಳೆಯನ್ನು ಕೊಟ್ಟಿರುವುದು ಯಾವದು ? ನನ್ನ ಕಣ್ಣುಗಳಲ್ಲಿ ಈ ಹೊಳಪನ್ನು ಇಟ್ಟಿರುವ್ದದು ಯಾವದು ? ನನ್ನ ವ್ಯಕ್ತಿಸೌಂದರ್ಯಕ್ಕೆ ಈ ವೈಭವವನ್ನು ಕೊಟ್ಟಿರುವದು ಯಾವದು ? ನನ್ನ ಕಣ್ಣುಗಳಲ್ಲಿ ಹೊಳೆಯುತ್ತಿರುವದೂ ನನ್ನ ಕೇಶಗಳಿಗೆ ಈ ಸ್ನಿಗ್ಧತೆಯನ್ನೂ ಆಕರ್ಷಕಗುಣವನ್ನೂ ನೀಡಿರುವುದೂ, ನನ್ನ ಇಂದ್ರಿಯಂಗಳಿಗೂ ದೇಹಕ್ಕೂ ಜೀವಶಕ್ತಿಯನ್ನೂ ಬೆಳಕನ್ನೂ ಚಟುವಟಿಕೆಯನ್ನೂ ಅನುಗ್ರಹಿಸಿರುವದೂ ಯಾವದು ? ನಿಮ್ಮನ್ನು ಮೋಹಗೊಳಿಸಿರುವದು ಈ ನನ್ನ ಚರ್ಮವೂ ಅಲ್ಲ ; ನನ್ನ ದೇಹವೂ ಅಲ್ಲ. – ದಯವಿಟ್ಟು ವಿಚಾರಮಾಡಿ ನೋಡಿ ; ನಿಮ್ಮನ್ನು ಮೋಹಗೊಳಿಸಿರುವದೂ ಮರುಳು ಮಾಡಿರುವುದೂ ಆಕರ್ಷಿಸಿರುವದೂ ನನ್ನಲ್ಲಿರುವ ನಿಜವಾದ ಆತ್ಮ , ದಿವ್ಯತೆ, ದೇವರು. ಎಲ್ಲಾ ಮನೋಹರತೆಗೂ ಲಾವಣ್ಯಕ್ಕೂ ಮೂಲವಾದುದು ದೇವರೇ ಹೊರತು ಬೇರೆಯಲ್ಲ. ಎಲ್ಲೆಲ್ಲಿಯೂ ಆ ದೇವರನ್ನೇ ಭಾವಿಸಿರಿ, ನೋಡಿರಿ ; ಆ ದೇವರೇ ನಕ್ಷತ್ರಗಳಲ್ಲಿಯೂ ಚಂದ್ರನಲ್ಲಿಯೂ ಇದ್ದು ನಿಮ್ಮನ್ನು-ನಮ್ಮನ್ನು ನೋಡುತ್ತಿಲ್ಲವೆ ?" ಎಂದು ಹೇಳಿದಳು.

ಆ ಮಹಾಮಾತೆಯ ಬೋಧೆಯನ್ನು ಕೇಳಿ ಆ ಮಹಾತ್ಮನ ಕಣ್ಣು ತೆರೆಯಿತು ; ಅವನ ಮನಸ್ಸಿನಲ್ಲಿ ವಿವೇಕವು ಮಿಂಚಿತು ; ವೈರಾಗ್ಯವು ಹೃದಯದಲ್ಲಿ ಉದಿಸಿತು. ಅವನು ವಿಷಯಮೋಹವನ್ನೂ ಸಂಸಾರದ ಆಸಕ್ತಿಯನ್ನೂ ಕಾಮಾದಿಗಳನ್ನೂ ಮೀರಿ ಮೇಲೇರಿದನು. ಮೊದಲು ತನ್ನ ಹೆಂಡತಿಯಲ್ಲಿ ಅಸಾಧಾರಣ ಪ್ರೇಮದಿಂದಿದ್ದ ಈ ಸಾಧುವು ಪ್ರಪಂಚದ ಎಲ್ಲಾ ವಸ್ತುಗಳಲ್ಲಿಯೂ ತನ್ನ ಇಷ್ಟದೇವನನ್ನೂ ದಿವ್ಯತೆಯನ್ನೂ ಕಂಡನು. ಪರಮಾತ್ಮ ಪ್ರೇಮದಿಂದ ಹುಚ್ಚನಾಗಿದ್ದ ಈ ಮಹಾಭಕ್ತನು ಒಂದುದಿನ ಒಂದು ಅಡವಿಯಲ್ಲಿ ಹೋಗುತ್ತಿದ್ದನು. ಅಲ್ಲಿ ಸುಂದರವಾದ ಒಂದು ದೇವದಾರು ವೃಕ್ಷವನ್ನು ಕೊಡಲಿಯಿಂದ ಕಡಿಯುತ್ತಿದ್ದ ಒಬ್ಬ ಮನುಷ್ಯನನ್ನು ಆ ಸಾಧುವು ನೋಡಿ, ತನಗೇ ಆ ಏಟುಗಳು ಬೀಳುತ್ತಿರುವಂತೆ ಮನಸ್ಸಿಗೆ ನೋವಾಗಿ, ಮೂರ್ಛೆಗೊಂಡಂತಾದನು. ಅವನು ಸ್ವಲ್ಪ ಚೇತರಿಸಿಕೊಂಡು ಆ ಮನುಷ್ಯನಲ್ಲಿಗೆ ಹೋಗಿ, "ಅಪ್ಪ, ಈ ನಿನ್ನ ಕೊಡಲಿ ಏಟುಗಳು ನನ್ನ ಎದೆಗೇ ಬೀಳುತ್ತಿರುವಂತೆ ನೋವಾಗುತ್ತಿದೆ. ದಯವಿಟ್ಟು ಆ ಮರವನ್ನು ಕಡಿಯಬೇಡ." ಎಂದು ಬೇಡಿದನು. "ಅದು ಹೇಗೆ ಸ್ವಾಮಿ ?" ಎಂದು ಅವನು ಕೇಳಿದನು. ಆ ಮಹಾತ್ಮನು ಅವನನ್ನು ಕುರಿತು, "ಓ, ನನ್ನಪ್ಪಾ, ಈ ಮನೋಹರ ದೇವದಾರು ವೃಕ್ಷವೇ ನನ್ನ ದೇವರು ; ಇದರಲ್ಲಿ ನನಗೆ ಅತ್ಯಂತ ಪ್ರಿಯನಾದ ನನ್ನ ದೇವರನ್ನೇ ಕಾಣುತ್ತಿದ್ದೇನೆ. ಇದನ್ನು ಕಡಿಯಬೇಡ, ನೋಯಿಸಬೇಡ ; ನನ್ನನ್ನೇ ಕಡಿದಂತೆ, ನೋಯಿಸಿದಂತೆ ಆಗುತ್ತದೆ." ಎಂದು ಹೇಳಿದನು.

ದೇವರೇ ಅವನಿಗೆ ವಧುವೂ ಪತಿಯೂ ಮಗುವೂ ತಾಯಿಯೂ ಸಹೋದರಿಯೂ

ಸಹೋದರನೂ ಎಲ್ಲವೂ ಆದನು. ಅವನು ತನ್ನ ಎಲ್ಲಾ ಶಕ್ತಿಯನ್ನೂ ಪ್ರೇಮವನ್ನೂ ದೇವರ ಪಾದದಲ್ಲಿ ಸಮರ್ಪಿಸಿದನು; ಆದ್ದರಿಂದಲೇ ಅವನು ಮರ ಕಡಿಯುವ ಮನುಷ್ಯನಿಗೆ "ಅಯ್ಯೋ ಅಪ್ಪ, ನನ್ನ ದೇವರನ್ನು ಕಡಿಯುವದನ್ನು ನಾನು ಸಹಿಸಲಾರೆ" ಎಂದನು.

ಒಂದುದಿನ ಒಬ್ಬ ಬೇಟೆಗಾರನು ಒಂದು ಜಿಂಕೆಯನ್ನು ಬೇಟೆಯಾಡುವದರಲ್ಲಿದ್ದನು. ಅಷ್ಟರಲ್ಲಿ ಈ ಮಹಾತ್ಮನು ಅದನ್ನು ನೋಡಿ, ಓಡಿಹೋಗಿ ಅವನ ಪಾದಗಳ ಮೇಲೆ ಬಿದ್ದು "ಓ ನನ್ನಪ್ಪ, ಈ ಜಿಂಕೆಯನ್ನು ಕೊಲ್ಲಬೇಡ; ಇದನ್ನು ಉಳಿಸು, ಕೈಬಿಡು. ಇದರ ಸುಂದರವಾದ ಕಣ್ಣುಗಳೊಳಗಿಂದ ನನ್ನ ದೇವರೇ ನಮ್ಮನ್ನು ನೋಡುತ್ತಿದ್ದಾನೆ; ನೋಡು; ಅದನ್ನು ಕೊಲ್ಲುವುದಕ್ಕೆ ಬದಲಾಗಿ ಈ ನನ್ನ ಶರೀರವನ್ನು ದೇವರ ಹೆಸರಿನಲ್ಲಿ ಕೊಲ್ಲು; ಇದನ್ನು ಬಲಿಕೊಡು; ಈ ಶರೀರವನ್ನು ಕೊಂದರೂ ನಾನು ಸಾಯುವುದಿಲ್ಲ. ಆದರೆ ಈ ನನ್ನ ದೇವರನ್ನು ಕೊಲ್ಲಬೇಡ; ಇದರ ಜೀವದಾನ ಮಾಡು." ಎಂದು ಹಲವು ಬಗೆಯಿಂದ ಬೇಡಿದನು.

ಈ ಪ್ರಪಂಚದಲ್ಲಿ ನಿಮಗೆ ತೋರುವ ಎಲ್ಲಾ ಆಕರ್ಷಣೆಯೂ ನಿಜವಾದ ದೇವತ್ವದ ತೇಜಸ್ಸಲ್ಲದೆ ಬೇರೆಯಲ್ಲ. ನಿಮ್ಮ ಪ್ರೇಯಸಿಯಲ್ಲಿ ಕಾಣುವ ಸತ್ಯಸ್ವರೂಪ ದೇವರ ಆಕರ್ಷಕಸೌಂದರ್ಯವೇ ಪರ್ವತಗಳಲ್ಲಿಯೂ ಅರಣ್ಯಗಳಲ್ಲಿಯೂ ನದಿಗಳಲ್ಲಿಯೂ ಬೇರೊಂದು ರೂಪದಿಂದ, ವೇಷದಿಂದ, ಉಡುಗೆಯಿಂದ ತೋರುತ್ತದೆ. ಇದನ್ನು ಅರಿಯಿರಿ; ಹಾಗಾದರೆ, ಪ್ರಾಪಂಚಿಕವಾದ ಎಲ್ಲಾ ಕಾಮ ಮೋಹಗಳನ್ನೂ ನೀವು ಜಯಿಸುತ್ತೀರಿ. ಪ್ರಾಪಂಚಿಕ ಬಯಕೆಗಳನ್ನು ಆಧ್ಯಾತ್ಮಿಕವಾಗಿ ಉಪಯೋಗಿಸುವ ರೀತಿಯೇ ಹೀಗೆ. ಇಲ್ಲವಾದರೆ, ಆಧ್ಯಾತ್ಮಿಕ ವಿನಾಶಹೊಂದುತ್ತೀರಿ; ಪಾಪಿಗಳಾಗುತ್ತೀರಿ. ಆದರೆ ಪ್ರಾಪಂಚಿಕ ಬಯಕೆಗಳನ್ನೇ ಸರಿಯಾದ ರೀತಿಯಲ್ಲಿ ಉಪಯೋಗಿಸಿ, ಉನ್ನತಿಗೊಳಿಸುವದಾದರೆ, ಅದೇ ಕರ್ಮಗಳೇ ಪುಣ್ಯಕರಗಳಾಗುತ್ತವೆ.

೭೦. ಉತ್ಕಟ ಪ್ರೇಮದ ಪ್ರಭಾವ

(ಲೈಲಾ-ಮಜ್ನು)

ಒಂದು ದಿನ ಮಜ್ನುವಿನ ಪ್ರಿಯಳಾದ ಲೈಲಿಗೆ (ಲೈಲಾಳಿಗೆ) ಅಸ್ವಸ್ಥತೆಯುಂಟಾಯಿತು. ಏನು ಮಾಡಿದರೂ ಗುಣವಾಗಲಿಲ್ಲ. ವೈದ್ಯರನ್ನು ಕರೆಸಿದರು. ವೈದ್ಯರು ಬಂದು ಆಕೆಯ ಮೈಯಿಂದ ಸ್ವಲ್ಪ ರಕ್ತವನ್ನು ಹೊರ ತೆಗೆದರೆ ಆಕೆಯ ಬಾಧೆ ಪರಿಹಾರವಾಗಬಹುದೆಂದು ಆಕೆಯ ಕೈಯಲ್ಲಿ ಶಸ್ತ್ರದಿಂದ ಒಂದು ಸೀಳುಗಾಯವನ್ನು ಮಾಡಿದರು. ಆದರೆ ಆ ಕೈಯಿಂದ ರಕ್ತವೇ ಬರಲಿಲ್ಲ. ಆಗ ಮಜ್ನುವಿನ ಕೈಯಿಂದ ರಕ್ತವು ಹರಿಯುವದಕ್ಕೆ ತೊಡಗಿತು. ಆ ಪ್ರೇಮಿಗಳ ಐಕ್ಯಭಾವವು ಅಷ್ಟು ತೀವ್ರವಾಗಿತ್ತು.

೭೧. ಅನಂತ-ಅಖಂಡ

(ಕನ್ನಡಿಯಲ್ಲಿ ಮಗುವಿನ ಪ್ರತಿಬಿಂಬ)

ನೀವೊಂದು ಜೀವಾಣುವನ್ನು ತೆಗೆದುಕೊಂಡಾಗ ನಿಮಗೆ ಕಾಣುವದು ಅದರ ರೂಪ, ಆಕೃತಿ, ದೇಹ. ಜೀವಾಣು ಎಂಬ ಶಬ್ದದ ಸ್ಥೂಲಾರ್ಥ ಅಥವಾ ಅದರ ತೋರಿಕೆಯ ಅರ್ಥ, ಸುಮ್ಮನೆ ಅದರ ದೇಹ, ರೂಪ, ಆಕೃತಿ, ತೂಕ, ಬಣ್ಣ, ಅದರ ರಚನಾ ವಿಶೇಷ, ಅದೇ ತೋರಿಕೆಯ ಜೀವಾಣು ; ಆದರೆ ಅದರಲ್ಲಿರುವ ಜೀವವೇ, ಅನಂತ ಶಕ್ತಿಯೇ ನಿಜವಾದ ಜೀವಾಣು. ನಾವು ತೋರಿಕೆಯ ಜೀವಾಣುವನ್ನು ಕೊಂದರೂ ಅದರ ರೂಪವನ್ನು ನಾಶಪಡಿಸಿದರೂ ನಿಜವಾದ ಜೀವಾಣುವು ಅದರ ಶಕ್ತಿಯು ಅಥವಾ ಅದರ ಆತ್ಮವು ಸಾಯುವದಿಲ್ಲ. ಅದು ಇದ್ದಂತೆಯೇ ಇರುತ್ತದೆ. ದೇಹಗಳನ್ನು ಕತ್ತರಿಸುತ್ತಾ ಹೋಗಿರಿ, ದೇಹಗಳನ್ನು ನಾಶಪಡಿಸುತ್ತಾ ಹೋಗಿರಿ, ಶರೀರದ ಸಾವು ನಿಜವಾದ ಚೈತನ್ಯವನ್ನು ನಾಶಪಡಿಸುವದಿಲ್ಲ. ಶರೀರದ ಮರಣವು ರೂಪವನ್ನು ಮಾತ್ರ ನಾಶಪಡಿಸುತ್ತದೆ. ನಿಮ್ಮ ನಿಜವಾದ ದೈವತ್ವವು ಸನಾತನವೂ ಅಮರವೂ ಆದುದು. ಅನಂತಶಕ್ತಿಯು ಒಳಗೇ ಗೂಢವಾಗಿದ್ದುದರಿಂದ, ಗುಪ್ತವಾಗಿಯೂ ಸುಪ್ತವಾಗಿಯೂ ಇದ್ದುದರಿಂದ ಜೀವಾಣುವಿನ ಮೂಲ ದೇಹವನ್ನು ದಶಲಕ್ಷವಾದರೂ ಶತಲಕ್ಷವಾದರೂ ಬೆಳೆಸುವದಕ್ಕೆ ಸಾಧ್ಯವಾಯಿತು. ಇದೇ ಪರಿಮಿತದಲ್ಲಿ ಅಪರಿಮಿತ ! ಇದೇ ಅಣೋರಣೀಯಾನ್ ಗರ್ಭದಲ್ಲಿ ಮಹತೋ ಮಹೀಯಾನ್ !

ಈಗ ಒಂದು ಪ್ರಶ್ನೆ ಏಳುತ್ತದೆ. ಜೀವಾಣುವಿನ ದೇಹಗಳ ಸಂಖ್ಯೆ ಬೆಳೆಯುತ್ತಾ ಹೋದಂತೆ ಅದರಲ್ಲಿರುವ ಅನಂತಶಕ್ತಿಯೂ ಕೂಡ ಬೆಳೆಯುತ್ತಾ ಹೋಗುವದೇ ? ಅಥವಾ ಅದು ಇಳಿಯುತ್ತಾ ಹೋಗುವದೇ ? ಇಲ್ಲ, ಅದು ಬೆಳೆಯುವದೂ ಇಲ್ಲ ; ಇಳಿಯುವುದೂ ಇಲ್ಲ. ಜೀವಾಣುವಿನ ಹೊರಗಿನ ತೋರಿಕೆಯ ದೇಹದಲ್ಲಿರುವ ನಿಜವಾದ ಅನಂತ ಶಕ್ತಿಯು ಬದಲಾಯಿಸುವುದಿಲ್ಲ ; ಅದು ವೃದ್ಧಿಯೂ ಆಗುವದಿಲ್ಲ; ಅದು ಕ್ಷೀಣವೂ ಆಗುವದಿಲ್ಲ. ಅದು ಇದ್ದಂತೆಯೇ ಇರುತ್ತದೆ.

ಈ ಚಮತ್ಕಾರದ ವೇದಾಂತ ವಿವರಣೆಯನ್ನು ಒಂದು ದೃಷ್ಟಾಂತದ ಮೂಲಕ ಕೊಡಬಹುದು.

ಎಂದೂ ಕನ್ನಡಿಯನ್ನು ನೋಡಿರದ ಒಂದು ಮಗುವಿತ್ತು. ಭರತವರ್ಷದಲ್ಲಿ ಅಥವಾ ಹಿಂದೂಸ್ಥಾನದಲ್ಲಿ ಸಣ್ಣ ಮಕ್ಕಳಿಗೆ ಕನ್ನಡಿಯನ್ನು ತೋರಿಸುವದಿಲ್ಲ ವೆಂಬುದು ನಿಮಗೆ ಗೊತ್ತಿರಬೇಕು. ಈ ಮಗುವು ಒಂದು ದಿನ ಅಂಬೆಗಾಲಿಕ್ಕುತ್ತಾ ತನ್ನ ತಂದೆಯ ಕೋಣೆಯೊಳಗೆ ಹೋಯಿತು; ಅಲ್ಲಿ ಗೋಡೆಗೆ ಒರಗಿಸಿಟ್ಟ ಒಂದು ಕನ್ನಡಿಯು ನೆಲದ ಮೇಲಿತ್ತು; ಈ ಸಣ್ಣ ಮಗುವು ಅಂಬೆಗಾಲಿಕ್ಕುತ್ತ ಆ ಕನ್ನಡಿಯ ಸಮೀಪಕ್ಕೆ ಹೋಯಿತು. ಆಶ್ಚರ್ಯ! ಅದು ಆ ಕನ್ನಡಿಯಲ್ಲಿ ಒಂದು

ಮುದ್ದು ಮಗುವನ್ನು ನೋಡಿತು. ಮಕ್ಕಳನ್ನು ಕಂಡರೆ ಮಕ್ಕಳು ಯಾವಾಗಲೂ ಆಕರ್ಷಿತರಾಗುತ್ತಾರೆ. ನಿಮಗೊಂದು ಮಗುವಿದ್ದರೆ, ಮತ್ತು ಅದರೊಡನೆ ನಿಮ್ಮ ಸ್ನೇಹಿತರ ಮನೆಗೆ ಹೋದರೆ, ಅಲ್ಲಿ ನೀವು ನಿಮ್ಮ ಸ್ನೇಹಿತರೊಡನೆ ಮಾತನಾಡುತ್ತಿದ್ದಾಗ ನಿಮ್ಮ ಮಗುವು ಆ ಮನೆಯ ಮಕ್ಕಳೊಡನೆ ಕೂಡಲೇ ಸ್ನೇಹವನ್ನು ಮಾಡಿಕೊಳ್ಳುತ್ತದೆ. ಈ ಮಗುವು ಆ ಕನ್ನಡಿಯಲ್ಲಿ ತನ್ನಷ್ಟೇ ಇದ್ದ ಒಂದು ಮಗುವನ್ನು ಕಂಡು, ಅದರ ಹತ್ತಿರ ಹತ್ತಿರಕ್ಕೆ ಹೋದಂತೆ ಅದೂ ಇದರ ಹತ್ತಿರಕ್ಕೆ ಬಂದಿತು. ಈ ಮಗುವಿಗೆ ಸಂತೋಷವಾಯಿತು. ಕನ್ನಡಿಯಲ್ಲಿದ್ದ ಮಗುವಿನ ಮೇಲೆ ತನಗಿರುವಷ್ಟು ಪ್ರೇಮವೇ ತನ್ನ ಮೇಲೆ ಆ ಮಗುವಿಗೂ ಇರುವದು ಕಂಡಿತು. ಒಂದರ ಮೂಗಿಗೆ ಇನ್ನೊಂದರ ಮೂಗು ತಗುಲಿತು. ಈ ಮಗುವು ಕನ್ನಡಿಗೆ ತನ್ನ ಮೂಗನ್ನು ಮುಟ್ಟಿಸಿದೊಡನೆಯೇ ಆ ಮಗುವೂ ತನ್ನ ಮೂಗನ್ನು ಇದರ ಮೂಗಿಗೆ ಮುಟ್ಟಿಸಿತು. ಅವುಗಳ ಮೂಗುಗಳೂ ತುಟಿಗಳೂ ಒಂದನ್ನೊಂದು ಮುಟ್ಟಿದವು. ಈ ಮಗುವು ಕನ್ನಡಿಯ ಮೇಲೆ ತನ್ನ ಕೈಗಳನ್ನಿಟ್ಟಿತು. ಕನ್ನಡಿಯಲ್ಲಿರುವ ಮಗುವೂ ಇದರ ಕೈಗಳನ್ನು ಕುಲುಕುವದಕ್ಕೋ ಎನ್ನುವಂತೆ ತನ್ನ ಕೈಗಳನ್ನೂ ಮುಂದಕ್ಕೆ ಚಾಚಿತು. ಆದರೆ ಈ ಮಗುವಿನ ಕೈಗಳು ಕನ್ನಡಿಯೊಳಗಿನ ಮಗುವಿನ ಕೈಗಳ ಮೇಲೆ ಇಟ್ಟ ಕೂಡಲೇ ಕನ್ನಡಿಯು ನೆಲದ ಮೇಲೆ ಮಗುಚಿ ಬಿದ್ದು ಎರಡು ಚೂರುಗಳಾಗಿ ಒಡೆಯಿತು. ಈಗ ಮಗುವು ಒಂದಕ್ಕೆ ಬದಲು ಕನ್ನಡಿಯಲ್ಲಿ ಎರಡು ಮಕ್ಕಳನ್ನು ಕಂಡಿತು. ಪಕ್ಕದ ಕೋಣೆಯಲ್ಲಿದ್ದ ಅದರ ತಾಯಿಯು ಕನ್ನಡಿಯು ಬಿದ್ದ ಶಬ್ದವನ್ನು ಕೇಳಿ ತನ್ನ ಗಂಡನ ಕೋಣೆಗೆ ಓಡಿ ಬಂದಳು. ತನ್ನ ಗಂಡನಿಲ್ಲದಿದ್ದ ಕೋಣೆಯಲ್ಲಿ ಮಗುವು ಹೊಕ್ಕು ಅಲ್ಲಿರುವ ಸಾಮಾನುಗಳ ಜೊತೆಗೆ ಹಾವಳಿಮಾಡುತ್ತಾ ಕನ್ನಡಿಯನ್ನು ಒಡೆದಿರುವದನ್ನೂ ಕಂಡಳು. ಅದನ್ನು ಹೊಡೆಯುವಂತೆ ಹೆದರಿಸುವ ರೀತಿಯಲ್ಲಿ ಶಿಕ್ಷಿಸುವದಕ್ಕೆ ಅದರ ಹತ್ತಿರ ಹೋದಳು. ಆದರೆ ಮಕ್ಕಳು ಹೆಚ್ಚು ಜಾಣರು. ತಾಯಿಯರು ಹುಬ್ಬುಗಂಟಿಕ್ಕಿ ಸಿಟ್ಟು ಮಾಡುವದೂ ಬೆದರಿಸುವದೂ ಅರ್ಥವಿಲ್ಲದ್ದೆಂದು ಅವಕ್ಕೆ ಅನುಭವದಿಂದ ಗೊತ್ತೇ ಇರುತ್ತದೆ. "ಅಯ್ಯೋ! ಏನು ಮಾಡಿದೆ? ಏನು ಮಾಡಿದೆ? ಏನು ಮಾಡುತ್ತಿ?" ಎಂದು ಕೂಗುತ್ತಾ ಬಂದ ತಾಯಿಯ ಆಕ್ರೋಶವನ್ನು ಸಿಟ್ಟೆಂದೂ ಬೆದರಿಕೆಯೆಂದೂ ಭಾವಿಸದೆ, ಮಗುವು ಒಳ್ಳೆಯ ಭಾವನೆಯಿಂದ ಕಂಡು "ಓಹೋ! ಅಮ್ಮಾ! ನಾನು ಎರಡು ಮಾಡಿದ್ದೇನೆ; ಎರಡು ಮಾಡಿದ್ದೇನೆ." ಎಂದು ಕುಣಿದಾಡಿತು. ಆ ಮಗುವು ಒಂದು ಮಗುವಿನಿಂದ ಎರಡು ಮಕ್ಕಳನ್ನು ಸೃಷ್ಟಿಸಿತು. ಮೊದಲು ಅದರೊಡನೆ ಮಾತಾಡುತ್ತಿದ್ದ ಒಂದೇ ಮಗುವಿತ್ತು. ಈಗ ಆ ಮಗುವು ಎರಡು ಮಕ್ಕಳನ್ನು ಮಾಡಿತ್ತು. ದೊಡ್ಡದಾಗುವದಕ್ಕೆ ಮೊದಲೇ ಒಂದು ಸಣ್ಣ ಮಗುವು ಎರಡು ಮಕ್ಕಳ ತಂದೆಯಾಯಿತು. ತಾಯಿಯು ನಗುತ್ತಾ ಆ ಮಗುವನ್ನು ಎತ್ತಿಕೊಂಡು ತನ್ನ ಕೋಣೆಗೆ ಕರೆದುಕೊಂಡು ಹೋದಳು.

ಕನ್ನಡಿಯು ಈ ಎರಡು ಚೂರುಗಳನ್ನು ಒಡೆದು ನಾಲ್ಕು ಚೂರುಗಳನ್ನು ಮಾಡಿದರೆ ನಮಗೆ ನಾಲ್ಕು ಮಕ್ಕಳಾಗುತ್ತವೆ. ಆ ಮಗುವು ಆ ನಾಲ್ಕು ತುಂಡುಗಳನ್ನು ಒಡೆದು ಎಂಟು ತುಂಡು ಕನ್ನಡಿಗಳನ್ನು ಮಾಡಿದರೆ ಎಂಟು ಮಕ್ಕಳನ್ನು ಸೃಷ್ಟಿಸಬಹುದು. ಆ ರೀತಿ ಎಷ್ಟು ಮಕ್ಕಳನ್ನು ಬೇಕಾದರೂ ನಿರ್ಮಿಸಬಹುದು. ಆದರೆ ನಾವು ಕೇಳುವದು, ಕನ್ನಡಿಗಳನ್ನು ಒಡೆಯುವದರಿಂದ, ಕನ್ನಡಿಯ ತುಂಡುಗಳನ್ನು ಹೆಚ್ಚಿಸುವದರಿಂದ ಆ ನಿಜವಾದ ದೈವತ್ವವು, ಆ ನಿಜವಾದ ಮಗುವು ಹೆಚ್ಚುವದೆ? ಅಥವಾ ಕಡಿಮೆಯಾಗುವದೆ? ಅದು ಹೆಚ್ಚುವದೂ ಇಲ್ಲ; ಕಡಿಮೆಯಾಗುವದೂ ಇಲ್ಲ. ಹೆಚ್ಚು ಕಡಿಮೆಯಾಗುವದು ಕನ್ನಡಿಗಳಲ್ಲಿ. ಕನ್ನಡಿಯಲ್ಲಿ ನೋಡುವ ಮಗುವು ಹೆಚ್ಚುವದಿಲ್ಲ. ಅದು ಒಂದೇ ಸಮ ಇರುತ್ತದೆ. ಅನಂತವನ್ನು ಹೆಚ್ಚಿಸುವಡು ಹೇಗೆ? ಅನಂತವು ಹೆಚ್ಚಿದರೆ ಅದು ಅನಂತವಲ್ಲ. ಅನಂತವು ಕಡಿಮೆಯಾಗುವದು ಹೇಗೆ? ಅನಂತವು ಕ್ಷೀಣವಾದರೆ ಅದು ಅನಂತವಲ್ಲ.

ಜೀವಾಣುವಿನ ದೇಹವನ್ನೂ ಕನ್ನಡಿಗೆ ಹೋಲಿಸಬಹುದು, ಕನ್ನಡಿಯನ್ನು ಒಡೆದುದರಿಂದ ಅದರಲ್ಲಿ ಮೂಡಿದ್ದ ಪ್ರತಿಬಿಂಬವೇನೂ ಒಡೆಯಲಿಲ್ಲ. ಕನ್ನಡಿಯ ಒಂದೊಂದು ತುಂಡಿನಲ್ಲಿಯೂ ಒಂದೊಂದು ಪ್ರತಿಬಿಂಬವು ಪೂರ್ಣವಾಗಿಯೇ ಮೂಡಿರುವದನ್ನು ಕಾಣಬಹುದು, ಎಷ್ಟು ಕನ್ನಡಿಯ ತುಂಡುಗಳೋ ಅಷ್ಟು ಪೂರ್ಣ ಪ್ರತಿಬಿಂಬಗಳು. ಹಾಗೆಯೇ ಜೀವಾಣುವಿನ ದೇಹವನ್ನು ಕತ್ತರಿಸುವದರಿಂದ ಎಲ್ಲೆಡೆಯಲ್ಲಿಯೂ ತುಂಬಿರುವ ಅಖಂಡ ಚೈತನ್ಯದ ಪ್ರತಿಬಿಂಬವಾದ ಜೀವವು ಕತ್ತರಿಸಲ್ಪಡುವದಿಲ್ಲ. ಅದರ ಜೀವಶಕ್ತಿಯು ಅಥವಾ ಜೀವಾತ್ಮನು ತುಂಡಾಗುವದಿಲ್ಲ, ಸಾಯುವದಿಲ್ಲ. ಜೀವಾಣುವಿನ ದೇಹವನ್ನು ನಾವು ಎಷ್ಟುಸಲ ಕತ್ತರಿಸುತ್ತೇವೆಯೋ ಅಷ್ಟು ತುಂಡುಗಳ ಒಂದೊಂದರಲ್ಲಿಯೂ ಅದರ ಜೀವಶಕ್ತಿಯು ಪೂರ್ಣವಾಗಿಯೇ ಇರುತ್ತದೆ. ಕತ್ತರಿಸಿದ ಜೀವಾಣುವಿನ ದೇಹಗಳು ದಶಗುಣಿತವಾಗಿ ಅಥವಾ ಶತಗುಣಿತವಾಗಿ ಹೆಚ್ಚುವದರಿಂದ ಅದರಲ್ಲಿರುವ ನಿಜವಾದ ಜೀವಾಣುವು ಅಥವಾ ಜೀವಶಕ್ತಿಯು, ಅಥವಾ ಜೀವಾತ್ಮನು, ಅದರಲ್ಲಿರುವ ದೈವತ್ವವು ಅಥವಾ ದೇವರು ಹೆಚ್ಚುವದಿಲ್ಲ. ಅದು ಮಾತ್ರ ಒಂದೇ ಆಗಿರುತ್ತದೆ. ಅದರ ಜೀವಾತ್ಮನು ನಮ್ಮ ಹಿಂದಿನ ಉದಾಹರಣೆಯಲ್ಲಿದ್ದ-ನಿಜವಾದ ಮಗುವಿನಂತೆ. ಅದರ ದೇಹಗಳು ಕನ್ನಡಿಯ ತುಂಡುಗಳಂತೆ. ಜೀವಾಣುವಿನ ದೇಹವನ್ನು ಕತ್ತರಿಸಿ ಸಹಸ್ರ ಸಹಸ್ರ ಅಥವಾ ಲಕ್ಷೋಪಲಕ್ಷ ತುಂಡುಗಳನ್ನಾಗಿ ಮಾಡಿದಾಗ ಆ ಒಂದೊಂದು ಖಂಡದಲ್ಲಿಯೂ ಯಾವ ಕಾರಣದಿಂದಲೂ ಎಂದೂ ಖಂಡವಾಗದಿರುವ-ಅಖಂಡಾನಂತ ಚೈತನ್ಯವು ಪೂರ್ಣವಾಗಿ ಪ್ರಕಟವಾಗುತ್ತದೆ; ಒಂದೇ ಸಮನಾಗಿ ಅಭಿವ್ಯಕ್ತವಾಗುತ್ತದೆ, ತೋರಿಕೊಳ್ಳುತ್ತದೆ. ಆ ವಿಚಿತ್ರ ವಿಲಾಸಕ್ಕೆ ವೇದಾಂತವು, ನೀಡುವ ವಿವರಣೆಯೇ ಇದು. ಅನಂತವೂ ಅಪರಿಮಿತವೂ ಆದ ಆ ಚೈತನ್ಯವು ಅಖಂಡೈಕವಾದುದು. ತುಂಡಾಗದೆ, ಒಂದೇ ಆಗಿರುವದು. ಅದರಲ್ಲಿ ಎರಡೆಂಬುದಾಗಲೀ ಮೂರೆಂಬದಾಗಲೀ ಅನೇಕ

ಎಂಬದಾಗಲೀ ಇಲ್ಲವೇ ಇಲ್ಲ. ಓ! ಎಂಥ ಆಶ್ಚರ್ಯ! ಆಶ್ಚರ್ಯಗಳಲ್ಲಿ ಪರಮಾಶ್ಚರ್ಯ! ಎಂಥ ಆನಂದ! ಪರಮಾನಂದ! ಈ ಶರೀರವನ್ನು ಎರಡು ಭಾಗ ಮಾಡಿರಿ, ಎಷ್ಟಾದರೂ ಕತ್ತರಿಸಿರಿ, ನಾನು ಸಾಯುವದಿಲ್ಲ. ನಿಜವಾದ ಆತ್ಮ, ನಿಜವಾದ ನಾನು, ನಿಜವಾದ ತಾನು ಸಾಯುವದಿಲ್ಲ. ಈ ಶರೀರವನ್ನು ಸಜೀವವಾಗಿ ಸುಡಿರಿ; ಇದನ್ನು ನೀವು ಏನು ಬೇಕಾದರೂ ಮಾಡಿರಿ; ನಿಜವಾದ ನನಗೆ ಯಾವ ರೀತಿಯ ಹಾನಿಯನ್ನೂ ಮಾಡಿದಂತಾಗುವದಿಲ್ಲ. ಒಳಗಿರುವ ಅನಂತವೇ ಅಪಾರವೇ ಅಪರಿಮಿತವೇ, ಅಖಂಡೈಕರಸವೇ ಅಖಂಡೈಕಘನವೇ ನೀವೆಂಬದನ್ನು ನೇರವಾಗಿ, ಸಾಕ್ಷಾತ್ತಾಗಿ ಅನುಭವಿಸಿ, ನಿರಂತರವಾಗಿ ಅನುಭವಿಸಿ! ಅರಿಯಿರಿ ಅದನ್ನು. ಅದು ತಾನೇ ಎಂಬುದನ್ನು ಒಂದು ವ್ಯಕ್ತಿಯು ಅರಿತ ಆ ಕ್ಷಣದಲ್ಲಿಯೇ, ಒಬ್ಬ ಮನುಷ್ಯನು ತನ್ನ ನಿಜಸ್ವರೂಪವನ್ನು ಅನುಭವಿಸಿದ ಅದೇ ನಿಮಿಷದಲ್ಲಿಯೇ ಅವನು ಮುಕ್ತ; ಎಲ್ಲಾ ಅಪಾಯಗಳನ್ನೂ ಮೀರುತ್ತಾನೆ: ಎಲ್ಲಾ ಕಷ್ಟಗಳನ್ನೂ ಮೀರುತ್ತಾನೆ; ಎಲ್ಲಾ ದುಃಖಗಳನ್ನೂ ಮೀರುತ್ತಾನೆ; ಎಲ್ಲಾ ಕ್ಲೇಶಗಳನ್ನೂ ಮೀರುತ್ತಾನೆ; ಎಲ್ಲಾ ವೇದನೆಗಳನ್ನೂ ನೋವುಗಳನ್ನೂ ಮೀರುತ್ತಾನೆ. ಅರಿಯಿರಿ ಅದನ್ನು. ಅದೇ ನೀವಾಗಿರಿ! ಓ! ಎಂಥಾ ಆಶ್ಚರ್ಯಗಳಲ್ಲಿ ಆಶ್ಚರ್ಯ!

೭೨. ಬಂಧದ ಕಾರಣ.

(ಮಂಗನು ಸಿಕ್ಕಿ ಬೀಳುವ ರೀತಿ)

ಜನರು ಸ್ವಾತಂತ್ರ್ಯದ ವಿಷಯವಾಗಿಯೂ ವಿಮೋಚನೆಯ ವಿಚಾರವಾಗಿಯೂ ಬಹಳ ಬಹಳ ಮಾತಾಡುತ್ತಾರೆ. ನಿಮ್ಮನ್ನು ಬಂಧಿಸಿರುವದು ಯಾವದು? ಮೊದಲು ಇದನ್ನೇ ವಿಚಾರಮಾಡಬೇಕು. ನಿಮಗೆ ಸ್ವಾತಂತ್ರ್ಯವೂ ಮೋಕ್ಷವೂ ಬೇಕಾದರೆ ನಿಮ್ಮ ಬಂಧನಕ್ಕೆ ಕಾರಣವೇನೆಂಬುದನ್ನು ಮೊದಲು ತಿಳಿಯಬೇಕು. ಈ ಸಂದರ್ಭದಲ್ಲಿ ಒಂದು ಮಂಗನ ಕತೆಯೂ ನೆನಪಿಗೆ ಬರುತ್ತದೆ, ಇಂಡಿಯಾದೇಶದಲ್ಲಿ ಮಂಗಗಳನ್ನು ಬಹಳ ವಿಚಿತ್ರ ರೀತಿಯಲ್ಲಿ ಹಿಡಿಯುತ್ತಾರೆ. ಇಕ್ಕಟ್ಟಾದ ಕುತ್ತಿಗೆಯುಳ್ಳ ಒಂದು ಹೂಜಿಯನ್ನು ಭೂಮಿಯಲ್ಲಿ ಭದ್ರವಾಗಿ ಇಡುತ್ತಾರೆ. ಮಂಗಗಳಿಗೆ ಬಹಳ ಇಷ್ಟವಾದ ಕೆಲವು ಬೀಜಗಳನ್ನೂ ಕಾಳುಗಳನ್ನೂ ತಿಂಡಿಗಳನ್ನೂ ಆ ಹೂಜಿಯಲ್ಲಿ ಇಟ್ಟಿರುತ್ತಾರೆ. ಆ ತಿಂಡಿಯ ಆಶೆಯಿಂದ ಮಂಗವು ಓಡಿ ಬಂದು ಆ ಹೂಜಿಯಲ್ಲಿ ಕೈತುರುಕಿ ಅದರಲ್ಲಿರುವ ತಿಂಡಿಯನ್ನು ಮುಷ್ಟಿಯಿಂದ ತುಂಬಿಕೊಳ್ಳುತ್ತದೆ. ಆ ಮುಷ್ಟಿಯು ದಪ್ಪವಾಗುವದರಿಂದ ಹೂಜಿಯ ಇಕ್ಕಟ್ಟಾದ ಕುತ್ತಿಗೆಯಿಂದ ಹೊರಗೆ ತೆಗೆದುಕೊಳ್ಳುವದಕ್ಕೆ ಬರುವುದಿಲ್ಲ, ಇಷ್ಟವಾದ ತಿಂಡಿಯು ಕೈಯೊಳಗೆ ಸಿಕ್ಕಿರುವದ ರಿಂದ ಮುಷ್ಟಿಯನ್ನು ಬಿಚ್ಚಿ ತಿಂಡಿಯನ್ನು ಕಳೆದುಕೊಳ್ಳುವದಕ್ಕೆ ಅದಕ್ಕೆ ಮನಸ್ಸಿಲ್ಲ, ಮುಷ್ಟಿಯನ್ನು ಬಿಚ್ಚದ ಹೊರತು ಅದಕ್ಕೆ ಬಿಡುಗಡೆಯಿಲ್ಲ. ಹೀಗಾಗಿ ಬಹಳ ವಿಚಿತ್ರರೀತಿಯಿಂದ ಅದು ತಾನಾಗಿಯೇ ಸಿಕ್ಕಿಹಾಕಿಕೊಳ್ಳುತ್ತದೆ. ತಾನು ಸೆರೆ

ಸಿಕ್ಕಿದ್ದಕ್ಕೆ ಕಾರಣವನ್ನೂ ವಿಚಾರಮಾಡಲಾರದು; ಆಶೆಯನ್ನೂ ಬಿಡಲಾರದು: ಆದ್ದರಿಂದ ಅದು ತಪ್ಪಿಸಿಕೊಂಡು ಹೋಗಲಾರದು. ತನ್ನ ಬಂಧನಕ್ಕೂ ದುಃಖಕ್ಕೂ ಅದು ತಾನೇ ಕಾರಣವಾಗುತ್ತದೆ.

ನಿಮ್ಮನ್ನು ಬಂಧಿಸಿರುವದಾದರೊ ಮೊದಲು ಯಾವದು? ಎಂದು ಕೇಳುತ್ತೀವೆ. ನಿಮಗೆ ನೀವೇ ಬಂಧನವನ್ನೂ ಗುಲಾಮಗಿರಿಯನ್ನೂ ತಂದುಕೊಂಡಿದ್ದೀರಿ. ಇಲ್ಲಿ ಇಡೀ ವಿಶಾಲ ಜಗತ್ತೇ ಇದೆ. ಈ ಭವ್ಯವೂ ಸಮೃದ್ಧವೂ ಆದ ಇಡೀ ವಿಶ್ವವೆಂಬ ಮಹಾರಣ್ಯದಲ್ಲಿ ಇಕ್ಕಟ್ಟಾದ ಕಂಠವುಳ್ಳ ಒಂದು ಹೂಜಿ ಇದೆ. ನಿಮ್ಮ ಪುಟ್ಟ ಮೆದುಳೇ ಆ ಸಂಕುಚಿತ ಕಂಠದ ಹೂಜಿ ಪಾತ್ರೆ. ಇವು ನಮಗೆ ಇಷ್ಟವಾದುವು. ಇವು ನಮಗೆ ಮೆಚ್ಚಿನವು, ಎಂದು ಅಕಾರಣವಾಗಿ ನೀವು ಕಲ್ಪಿಸಿಕೊಂಡಿರುವ ಕೆಲಕೆಲವು ವಿಷಯಗಳೇ ನಿಮ್ಮ ಮೆದುಳೆಂಬ ಹೂಜಿಯಲ್ಲಿ ನೀವೇ ಹಾಕಿಟ್ಟುಕೊಂಡಿರುವ ತಿನಿಸುಗಳು, ಹಣ್ಣು ಕಾಯಿಗಳು, ನಿಮ್ಮ ಮನಸ್ಸೆಂಬ ಮಂಗವು, 'ಇವು ನನಗೆ ಬೇಕು; ಇವು ನನ್ನವು' ಎಂದು ನಿಮ್ಮ ಮೆದುಳಿನಲ್ಲಿ ನೀವೆ ಇಟ್ಟುಕೊಂಡಿರುವ ಮೆಚ್ಚಿನ ತಿಂಡಿಗಳನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತದೆ, ಅದನ್ನು ಬಿಡಲಾರದೆ ಅದರ ಮೋಹದಲ್ಲಿ ಸಿಕ್ಕಿಕೊಂಡು ಮನಃಕಪಿಯು ಪೇಚಾಡುತ್ತದೆ. ಇಷ್ಟವಾದ ವಿಷಯಗಳು ತನಗೆ ಬೇಕು ಎನ್ನುವ ರಾಗವೂ ಅನಿಷ್ಟ ವಿಷಯಗಳು ತನಗೆ ಬೇಡ ಎನ್ನುವ ದ್ವೇಷವೂ ದೊರೆತಿರುವ ಇಷ್ಟವಿಷಯಗಳಲ್ಲಿ ಇವು ನನ್ನವು ಎಂಬ ಮಮತೆಯೂ ಆ ವಿಷಯಸುಖವು ಯಾವಾಗಲೂ ತನಗೇ ಇರಬೇಕೆಂಬ ಲೋಭವೂ ಆಸಕ್ತಿಯೂ ನಿಮ್ಮ ಮನೋಮರ್ಕಟದ ಬಂಧಕ್ಕೂ ದುಃಖಕ್ಕೂ ಕಾರಣವಾಗಿದೆ. ಈ ಮಮತೆಗೂ ರಾಗದ್ವೇಷಾದಿಗಳಿಗೂ ಅಹಂಕಾರವೇ ಕಾರಣವಾಗಿದೆ. ಮನಸ್ಸು ದೇಹಾದಿಗಳೂ ನಾನೆಂಬ ಅಭಿಮಾನವೇ ಅಹಂಕಾರ. ಅದರಿಂದ ಮನಸು ಬುದ್ಧಿ ಮೊದಲಾದವು ಮಾಡಿದ್ದನ್ನೆಲ್ಲಾ ನಾವು ಮಾಡಿದ್ದು ನಾವು ಮಾಡುವದು ಎಂದು ನೀವು ತಿಳಿಯುತ್ತೀರಿ. ಇಕ್ಕಟ್ಟಾದ ಕುತ್ತಿಗೆಯುಳ್ಳ ಹೂಜಿಯಂತಿರುವ ನಿಮ್ಮ ಪುಟ್ಟ ಮೆದುಳಿನಲ್ಲಿ ಇಷ್ಟವಿಷಯಗಳ ಭ್ರಮೆಯಿಂದ ಸಿಕ್ಕಿಕೊಂಡಿರುವ ನಿಮ್ಮ ಮನಸ್ಸೆಂಬ ಮಂಗವನ್ನೇ ನೀವು ಎಂದು ತಿಳಿದಿದ್ದೀರಿ. ಚಿಂತೆಗೂ ಭಯಕ್ಕೂ ದುಷ್ಪ್ರೇರಣೆಗಳಿಗೂ ಎಲ್ಲಾ ಬಗೆಯ ತೊಂದರೆಗಳಿಗೂ ನಿಮ್ಮನ್ನು ಗುಲಾಮರನ್ನಾಗಿ ಮಾಡಿರುವದೇ ನಿಮ್ಮ ಈ ತಪ್ಪು ತಿಳಿವಳಿಕೆ. ನಿಮ್ಮನ್ನು ಬಂಧಿಸಿರುವದೂ ಇದೇ. ಈ ಪ್ರಪಂಚದಲ್ಲಿರುವ ಸಕಲ ಸಂಕಷ್ಟಗಳಿಗೂ ಇದೇ ಕಾರಣ. ನಿಮಗೆ ಮೋಕ್ಷವೂ ಸ್ವಾತಂತ್ರ್ಯವೂ ಬೇಕಾದರೆ, ಮುಚ್ಚಿಕೊಂಡಿರುವ ನಿಮ್ಮ ಹಿಡಿಯನ್ನು ಬಿಚ್ಚಿ ಬಿಡಿ. ವಿಶಾಲ ವಿಶ್ವದ ಮಹಾರಣ್ಯವೇ ನಿಮ್ಮದಾಗಿದೆ. ನೀವು ಮರದಿಂದ ಮರಕ್ಕೆ ಸ್ವೇಚ್ಛೆಯಾಗಿ ಹಾರಿ ಅಲ್ಲಿರುವ ಕಾಯಿಗಳನ್ನೂ ಹಣ್ಣುಗಳನ್ನೂ ತಿನ್ನಿರಿ. ಎಲ್ಲಾ ನಿಮ್ಮವೇ, ನಿಮ್ಮ ಉದ್ಧಾರಕರು ನೀವೇ,

೭೩. ಪ್ರಪಂಚ ಜೀವನವು ಒಂದು ಲೀಲೆ

(ರಾಜಕುಮಾರನ ಕಣ್ಣಾಮುಚ್ಚಾಲೆ ಆಟ)

ಒಬ್ಬ ರಾಜಕುಮಾರನು ತನ್ನ ಬಾಲ್ಯದಲ್ಲಿ ರಾಜಮನೆತನದ ಮಕ್ಕಳೊಡನೆ 'ಕಣ್ಣಾಮುಚ್ಚಾಲೆ ಆಟವನ್ನು ಆಡುತ್ತಿದ್ದನು. ಬಚ್ಚಿಟ್ಟುಕೊಂಡ ಹುಡುಗರನ್ನು ಕಂಡುಹಿಡಿಯುವುದಕ್ಕೆ ಅವನು ಬಹಳ ಪೇಚಾಡಬೇಕಾಯಿತು. ಆಗ ಇವರ ಆಟವನ್ನೆಲ್ಲಾ ನೋಡುತ್ತಿದ್ದವನೊಬ್ಬನು, "ರಾಜಕುಮಾರ! ನೀನು ಯಾರು? ನಿನ್ನ ಅಧಿಕಾರವೇನು? ವಿಚಾರಮಾಡು. ನಿನ್ನ ಪ್ರಭುತ್ವವನ್ನು ನೀನು ಮರೆತು ಅತಿ ಸಾಮಾನ್ಯನಂತೆ ಕಷ್ಟಪಡುತ್ತಿದ್ದೀಯ. ನೀನು ರಾಜನಾಗಿ ಆಜ್ಞೆಮಾಡಿದರೆ ಸಾಕು, ಕಷ್ಟಪಟ್ಟು ಹುಡುಕಿದರೂ ಯಾರು ನಿನಗೆ ಸಿಕ್ಕುವುದಿಲ್ಲವೋ ಅವರೆಲ್ಲರೂ ತಾವಾಗಿಯೇ ಕೂಡಲೇ ಓಡಿ ಬಂದು ನಮಸ್ಕಾರ ಹಾಕಿ ನಿನ್ನ ಎದುರಿಗೆ ಕೈಕಟ್ಟಿಕೊಂಡು 'ಜೀ ಹಜೂರ್' ಎಂದು ತಲೆಬಾಗಿ ನಿಲ್ಲುತ್ತಾರೆ. ನಿನ್ನ ಅಧಿಕಾರವನ್ನು ನೀನು ಚಲಾಯಿಸದೆ ಪೇಚಾಡಿದರೆ ಏನು ಪ್ರಯೋಜನ?" ಎಂದನು. ಅದಕ್ಕೆ ರಾಜಕುಮಾರನು "ಬೆಪ್ಪ! ನೀನು ಹೇಳಿದಂತೆ ಮಾಡಿದರೆ ಆಟದಲ್ಲಿ ಸ್ವಾರಸ್ಯವೇ ಉಳಿಯುವುದಿಲ್ಲ. ನಾನು ಬೇಕಾಗಿ ಈ ಆಟವನ್ನು ಹೂಡಿದ್ದೇನೆ. ನನಗೂ ಸಿಕ್ಕದಂತೆ ಬಚ್ಚಿಟ್ಟುಕೊಳ್ಳಬೇಕಾದರೆ ಮಕ್ಕಳು ಎಷ್ಟು ಜಾಣತನವನ್ನು ಉಪಯೋಗಿಸಬೇಕು! ಅವರು ನನ್ನಲ್ಲಿ ಹುಟ್ಟಿಸುವ ಕುತೂಹಲವೂ ಕೌತುಕವೂ ನನಗೆ ರಂಜನೆಯನ್ನು ಉಂಟುಮಾಡುತ್ತವೆ. ಅವರನ್ನು ಹುಡುಕುವುದರಲ್ಲಿ ನನಗೆ ಉಂಟಾಗುವ ಶ್ರಮವು ವ್ಯಾಯಾಮವಾಗುತ್ತದೆ; ಹಿತಮಿತವಾದ ಆಯಾಸವು ಆರೋಗ್ಯವನ್ನೂ ಆನಂದವನ್ನೂ ನೀಡುತ್ತದೆ. ಅವರು ನನಗೆ ಸಿಕ್ಕದಂತೆ ಬಚ್ಚಿಟ್ಟುಕೊಳ್ಳುವದಕ್ಕೆ ನನ್ನ ಪ್ರಭುತ್ವದ ಆಜ್ಞೆಯೇ ಕಾರಣವಾದ್ದರಿಂದ ಅದು ನನಗೆ ವಿರೋಧವಾಗದೆ ವಿನೋದವೇ ಆಗಿದೆ. ನಿನಗೆ ಪೇಚಾಟವೆನಿಸಿರುವ ಈ ಹುಡುಕಾಟವು ನನಗೆ ಹುಡುಗಾಟವಾಗಿದೆ" ಎಂದನು.

ಹೀಗೆ, ಸರ್ವಜ್ಞನೂ ಸರ್ವಶಕ್ತನೂ ಆದ ಪರಮೇಶ್ವರನೇ ನೀವಾದರೂ ಏನನ್ನೂ ಅರಿಯದವರಂತೆ ಈ ಪ್ರಪಂಚವೆಂಬ ಗೂಢವಾದ ಚಕ್ರವ್ಯೂಹದಲ್ಲಿ ನಿಮ್ಮ ವಿನೋದಕ್ಕಾಗಿ, ಜ್ಞಾನವೆನಿಸಿಕೊಂಡಿರುವ ವಿಚಾರಗಳನ್ನು ಹುಡುಕುವದಕ್ಕಾಗಿ ಜ್ಞಾನಾರ್ಜನೆಯೆಂಬ ಅಥವಾ ವಿದ್ಯಾರ್ಜನೆಯೆಂಬ ಕಣ್ಣಾಮುಚ್ಚಾಲೆ ಆಟದಲ್ಲಿ ತೊಡಗಿದ್ದೀರಿ. ನಿಮ್ಮ ಚಿತ್‌ಸ್ವರೂಪದಲ್ಲಿಯೇ—ಚಿತ್ತದಲ್ಲಿಯೇ —ಅಡಗಿಕೊಂಡಿರುವ ಜ್ಞಾನವಿಚಾರಗಳ ಶೋಧವನ್ನು ಮಾಡುವ ವಿನೋದ ಸಾಧನೆಯನ್ನು ಕೈಬಿಟ್ಟು ಒಮ್ಮೆಗೇ "ಶುದ್ಧವಾದ ಅರಿವಿನ ಸ್ವರೂಪನೇ ನಾನು; ನಿರ್ವಿಶೇಷ ಚಿದ್ಘನನೇ ನಾನು" ಎಂದು ಎಲ್ಲಾ ಮನೋವ್ಯಾಪಾರಗಳನ್ನೂ ಕತ್ತರಿಸಿ ಅರಿವಿನ ಬಯಲಾಗಿ ನಿಲ್ಲುವದು ಆ ಮಹಾಲೀಲೆಗೆ ಅಪಚಾರ ಮಾಡಿದಂತೆ ಆಗುತ್ತದೆ; ಆ ಜ್ಞಾನಸಾಧನೆಯ ಮಹಾಕ್ರೀಡೆಯನ್ನು 'ಶಹಾ' ಮಾಡಿದಂತೆ, ಭಂಗಗೊಳಿಸಿದಂತೆ ಆಗುತ್ತದೆ.

ಭೂತ-ಭವಿಷ್ಯ-ವರ್ತಮಾನಗಳೂ ಸಹಸ್ರಾರು ಸೂರ್ಯಚಂದ್ರ-ನಕ್ಷತ್ರಗಳೂ ಯಾವ ಭೂಮಿಕೆಯಲ್ಲಿ ಚಿತ್ತವು ನ್ಲಿಂತಾಗ ನಮ್ಮ ಆತ್ಮನೇ ಆಗುವವೋ—ಆಗಿರುವವೋ—ಮತ್ತು ಅವು ನಮ್ಮ ಜ್ಞಾನಸಾಗರದಲ್ಲಿ ಸುಳಿಗಳೂ ಅಲೆಗಳೂ ಆಗಿರುವವೋ ಅಲ್ಲಿ ಪ್ರಾಪಂಚಿಕ ಯಶಸ್ಸಿನ ಅಥವಾ ನ್ಯಾಯವಾದಿಯ ಪರೀಕ್ಷೆಗಳ ಮಹತ್ತ್ವವು ಏನಿದ್ದೀತು? ಎಲ್ಲೆಲ್ಲಿಯೂ ಎಲ್ಲ ವಸ್ತುಗಳಲ್ಲಿಯೂ ದೇವರನ್ನೇ ನೋಡುವ ದಿವ್ಯ ದೃಷ್ಟಿಯು ನಿಮಗೆ ಬೇಕಾದರೆ, ಯಾವ ಇಂದ್ರಿಯ ಭೂಮಿಕೆಯಿಂದ ನೀವು ದಿವ್ಯ ದೃಷ್ಟಿಯನ್ನು ಅಥವಾ ಅತೀಂದ್ರಿಯ ದೃಷ್ಟಿಯನ್ನು ಬಯಸುವಿರೋ ಆ ಭೂಮಿಕೆಯನ್ನೇ ಬಿಡಬೇಕಾಗಿದೆ; ಅಥವಾ ಮೀರಬೇಕಾಗಿದೆ.

೭೪. ಈ ಪ್ರಪಂಚವು ಏಕೆ ಸೃಷ್ಟಿಯಾಯಿತು ? ಹೇಗಾಯಿತು ? ಯಾರಿಂದಾಯಿತು ? ಇತ್ಯಾದಿ.

(ಮಗು ಮತ್ತು ಕನ್ನಡಿ)

ಕನ್ನಡಿಯಲ್ಲಿ ಒಂದು ಸುಂದರವಾದ ಮಗುವಿದೆಯೆಂದು ಯಾರೋ ದೊಡ್ಡವರೊಬ್ಬರು ಒಂದು ಮಗುವಿಗೆ ತಮಾಷೆಗಾಗಿ ಹೇಳಿದರು. ಮಗುವು ಅದನ್ನು ನಂಬಿ ಕುತೂಹಲದಿಂದ ಆ ಇನ್ನೊಂದು ಮಗುವನ್ನು ನೋಡುವದಕ್ಕಾಗಿ ಮನೆಯಲ್ಲಿರುವ ದೊಡ್ಡ ಕನ್ನಡಿಯ ಮುಂದೆ ನಿಂತು ನೋಡಿತು.ಅದರಲ್ಲಿರುವ ಆ ಮಗುವನ್ನು ನೋಡಿ ಸಂತೋಷದಿಂದ ಕೂಗಿ ತಾಯಿಯನ್ನು ಕರೆದು ಆ ಕನ್ನಡಿಯ ಮಗುವನ್ನು ತೋರಿಸಿತು. "ಅಮ್ಮಾ ಈ ಮಗು ಯಾವದು ? ಎಲ್ಲಿಂದ ಬಂತು ? ಏಕೆ ಬಂತು ? ಯಾವಾಗ ಬಂತು ? ಇದು ಹೋಗುವದು ಹೇಗೆ ? ಇದನ್ನು ತೊಲಗಿಸು. ಇದು ನನ್ನ ತಿಂಡಿಯನ್ನು ಕಸಕೊಳ್ಳುತ್ತದೆ. ನೋಡು, ಇದನ್ನು ಓಡಿಸು." ಎಂದು ಕೂಗಾಡಿತು. ತಾಯಿಯು "ಮಗು, ಆ ಕನ್ನಡಿಯಲ್ಲಿ ಬೇರೆ ಮಗು ಇಲ್ಲ; ಅದು ನಿನ್ನ ಪ್ರತಿಬಿಂಬವೇ. ಅದು ನಿಜವಾದ ಮಗುವಲ್ಲ. ಅದು ನಿಜವಾಗಿದ್ದರೆ, ಅದು ಯಾವದು ? ಎಲ್ಲಿಂದ ಬಂತು ? ಏಕೆ ಬಂತು ? ಮೊದಲಾದ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಹೇಳಬಹುದಾಗಿತ್ತು." ಎಂದು ಸಮಾಧಾನ ಹೇಳಿದಳು. ಆದರೆ ದೂರ ಹೋಗಿದ್ದ ಮಗುವು ಪುನಃ ಕನ್ನಡಿಯ ಮುಂದೆ ಬಂದು ನಿಂತು "ನೋಡಮ್ಮ ಇಲ್ಲಿ ಮಗುವಿಲ್ಲ ಎನ್ನುತ್ತೀಯೋ, ನೀನು ಸುಳ್ಳು ಹೇಳುತ್ತೀಯೆ; ನಿಜವಾದ ಮಗು ಈ ಕನ್ನಡಿಯಲ್ಲಿದೆ ನೋಡು, ಇದು ನನ್ನ ಬಿಸ್ಕಿಟ್ ಕಸಕೊಳ್ಳುತ್ತದೆ, ಓಡಿಸು." ಎಂದು ಅಳುವದಕ್ಕೆ ತೊಡಗಿತು. ಕನ್ನಡಿಯಲ್ಲಿ ಮಗುವಿಲ್ಲ ಎಂದ ತಾಯಿಯ ಮಾತನ್ನು ಪರೀಕ್ಷಿಸುವದಕ್ಕಾಗಿ ಮಗುವು ಕನ್ನಡಿಯ ಮುಂದೆ ಹೋದ ಕೂಡಲೇ ತಾನೇ ಕನ್ನಡಿಯಲ್ಲಿ ತನ್ನ ಪ್ರತಿಬಿಂಬದಿಂದ ಮಗುವನ್ನು ಕಲ್ಪಿಸಿ–ಅದು ತನ್ನ ಸೃಷ್ಟಿಯೋ ಎಂದು ತಿಳಿಯದೆ ಹೇಳಿದರೂ ಒಪ್ಪದೆ—"ನೋಡಿಲ್ಲ ಮಗುವಿದೆ; ಇಲ್ಲಿ ಎನ್ನುತ್ತಿ, ಸುಳ್ಳು ಹೇಳುತ್ತಿ

ಮೊದಲು ಇದನ್ನು ತೊಲಗಿಸು; ನಾನು ಇಲ್ಲಿಯೇ ಇರುತ್ತೇನೆ. ಇದನ್ನು ಓಡಿಸು." ಎಂದು ತಾಯಿಗೆ ಹೇಳಿ ಅಳುತ್ತಿತ್ತು.

ಹೀಗೆಯೇ ನೀವು "ಈ ಪ್ರಪಂಚವು ಏಕೆ ಸೃಷ್ಟಿಯಾಯಿತು ? ಹೇಗಾಯಿತು ? ಯಾವಾಗಾಯಿತು ? ಯಾರಿಂದಾಯಿತು ?" ಎಂದು ಈ ಪ್ರಪಂಚದ ಮೂಲವನ್ನು ವಿಚಾರ ಮಾಡುವದಕ್ಕೆ ತೊಡಗಿದ ಕೂಡಲೇ ಅದನ್ನು ನೀವೇ ಸೃಷ್ಟಿಸಿಕೊಳ್ಳುತ್ತೀರಿ "ಈ ಪ್ರಪಂಚವು ನಿಮ್ಮ ಕಲ್ಪನೆಯೇ, ನಿಮ್ಮ ಅಜ್ಞಾನದ ಪ್ರತಿಫಲನವೇ ಆಗಿದೆ ;." ಹೀಗೆಂದು ವೇದಾಂತವು ನಿಮಗೆ ಹೇಳಿದರೆ-ಆ ಮೂಢ ಬಾಲಕನಂತೆ-ನಿಮ್ಮ ಬಾಲಬುದ್ಧಿಯು ಅದನ್ನು ಒಪ್ಪುವದಿಲ್ಲ. ನಿಮ್ಮ ಮನಸ್ಸಿಗೂ ಅದರ ಕಲ್ಪನೆಗೂ ಸಂಬಂಧಪಡದೆ, ಪ್ರಪಂಚವೊಂದು ತಾನೇ ಸ್ವತಂತ್ರವಾಗಿ ಸತ್ಯವಾಗಿದೆ, ಎಂದು ನೀವೇ ದೃಢನಿಶ್ಚಯದಿಂದ ಕಲ್ಪಿಸಿಕೊಂಡಿರುವದರಿಂದ ಅದಕ್ಕೆ ಕಾರಣ, ಕರ್ತೃ ಅವನ ಉದ್ದೇಶ, ಸೃಷ್ಟಿಯ ಸಂವಿಧಾನ ರಹಸ್ಯ, ಕಾಲ ಇದರ ನಿವೃತ್ತಿ ಮೊದಲಾದ ಯಾವದನ್ನೂ ನೀವು ಕಂಡುಹಿಡಿಯುವದು ಸಾಧ್ಯವಿಲ್ಲ. ಸೃಷ್ಟಿಯ ಮೂಲವನ್ನು ಕಾಣುವದು ಅಥವಾ ಅರಿಯುವದು ಹೇಗೆ ಸಾಧ್ಯ ? ಇದರಿಂದಾಚೆಗೆ ಇರುವದನ್ನು ತಿಳಿಯುವುದು ಹೇಗೆ ? ಇದನ್ನು ಮೀರುವದು ಹೇಗೆ ?

ಇದನ್ನೇ ಹೆಚ್ಚು ಸ್ಪಷ್ಟಪಡಿಸಬೇಕಾಗಿದೆ. ಬ್ರಹ್ಮಾಂಡದ ಸಂಕ್ಷೇಪಾಕೃತಿಯೆಂದು ಭಾವಿಸಲ್ಪಡುವ ಈ ಪಿಂಡಾಂಡದ ದೃಷ್ಟಿಯಿಂದಲೂ ಭೌತಾತೀತವಾದ ಆಧ್ಯಾತ್ಮಿಕ ದೃಷ್ಟಿಯಿಂದಲೂ ಇದನ್ನು ವಿಚಾರ ಮಾಡಬೇಕು. ಎಲ್ಲಿಯೋ ಇರುವ ಸೃಷ್ಟಿಕರ್ತನಾದ ಒಬ್ಬ ಲೌಕಿಕ ದೇವರು ಈ ಜಗತ್ತನ್ನು ಸೃಷ್ಟಿಮಾಡಿದನೆಂದು ಕೆಲವರು ಹೇಳುತ್ತಾರೆ. ಈ ಪ್ರಪಂಚವನ್ನು - ಬಡಗಿ ಮೊದಲಾದವರು ಒಂದು ಮನೆಯನ್ನು ನಿರ್ಮಾಣಮಾಡಿದಂತೆ-ದೇವರು ಎಲ್ಲಿಯೋ ನಿಂತು ಸೃಷ್ಟಿಸಿರಬೇಕು. ಅವನು ಎಲ್ಲಿ ನಿಂತಿದ್ದ ? ಅವನು ಎಲ್ಲಿಯಾದರೂ ನಿಂತಿದ್ದನೆಂದರೆ, ಸೃಷ್ಟಿಯಾಗುವದಕ್ಕೆ ಮೊದಲೇ ಪ್ರಪಂಚವಿತ್ತು ಎಂದು ಹೇಳಿದಂತಾಗುತ್ತದೆ. ಏಕೆಂದರೆ ದೇವರು ನಿಲ್ಲಬಹುದಾದ ಯಾವ ಸ್ಥಳವಾದರೂ ಪ್ರಪಂಚದಲ್ಲಿಯೇ ಎಲ್ಲಿಯೋ ಇರಬೇಕಲ್ಲವೆ ? ಆದ್ದರಿಂದ ಸೃಷ್ಟಿಯಾಗುವದಕ್ಕೆ ಮೊದಲೇ ಪ್ರಪಂಚವಿತ್ತು-ಎಂದು ಒಪ್ಪಿಕೊಂಡಂತಾಗುತ್ತದೆ. ಇದು ಅಸಂಬದ್ಧವಲ್ಲವೆ ? ನೀವು, ಈ ಸೃಷ್ಟಿಯು ಯಾವಾಗ ಆರಂಭವಾಯಿತೆಂದು ವಿಚಾರಮಾಡುವದಕ್ಕೆ ತೊಡಗಿದ ಕೂಡಲೇ ಎರಡು ಭಾವನೆಗಳನ್ನು ಪ್ರತ್ಯೇಕಿಸುವದಕ್ಕೆ ಬಯಸುತ್ತೀರಿ. ಯಾವಾಗ? ಏತಕ್ಕಾಗಿ? ಯಾರಿಂದ? ಹೇಗೆ? ಮೊದಲಾದ ಭಾವನೆಗಳನ್ನು ಒಂದುಕಡೆ, ಈ ಪ್ರಪಂಚ ಎಂಬ ಭಾವನೆಯನ್ನು ಇನ್ನೊಂದುಕಡೆ. ಆದರೆ ಯಾವಾಗ, ಏತಕ್ಕಾಗಿ ಯಾರು ಈ ಮೊದಲಾದ ಶಬ್ದಗಳೂ ಕಾಲ, ದೇಶ, ಕಾರಣ, ಕಾರ್ಯ ಮೊದಲಾದ ಕಲ್ಪನೆಗಳೂ ಪ್ರಪಂಚದೊಳಗೇ ಸೇರಿಲ್ಲವೆ? ಅವು ಪ್ರಾಪಂಚಿಕವಾದುವಲ್ಲವೆ? ಅವು ನಿಶ್ಚಿತವಾಗಿಯೂ ಪ್ರಪಂಚದ ಭಾಗಗಳೇ ಸರಿ. ನಿಮ್ಮ

ಪ್ರಶ್ನೆಯು ಏಕೆ, ಯಾವಾಗ, ಯಾರು, ಏತಕ್ಕಾಗಿ ಎಂಬಿವುಗಳ ಸುತ್ತಲೂ ಕೇಂದ್ರೀಕರಿಸಿದೆ ಎಂಬುದನ್ನು ಲಕ್ಷ್ಯದಲ್ಲಿಡಿ. ಆದರೆ ದೇಶ ಕಾಲಾದಿಗಳು ಪ್ರಪಂಚದ ಹೊರಗಿಲ್ಲ; ಇದರೊಳಗೇ ಸೇರಿವೆ ಎಂಬುದನ್ನೂ ನೆನಪಿಡಿ, "ಯಾವಾಗ ಈ ಜಗತ್ತು ಆರಂಭವಾಯಿತೋ ಆಗ" ಎಂದು ನೀವು ಹೇಳುವದಕ್ಕೆ ತೊಡಗಿದ ಕೂಡಲೇ ಈ ಪ್ರಪಂಚದ ಭಾವನೆಯನ್ನು ಒಂದು ಕಡೆಯಾಗಿಯೂ 'ಯಾವಾಗ' ಎನ್ನುವ ಕಾಲದ ಭಾವನೆಯನ್ನು ಒಂದು ಕಡೆಯಾಗಿಯೂ ಬೇರ್ಪಡಿಸುತ್ತೀರಿ ಆಗ ನೀವು ಜಗತ್ತಿನ ಎದುರಿಗೆ ಜಗತ್ತನ್ನೇ ಇಟ್ಟಂತಾಯಿತು. ಇದು ಅತ್ಯಂತ ಸೂಕ್ಷ್ಮವಾದ ವಿಚಾರ; ತಿಳಿಯುವದಕ್ಕೆ ಬಹಳ ಕಠಿಣವೂ ಆದುದು. ನೀವು ದಯವಿಟ್ಟು ಬಹಳ ಎಚ್ಚರದಿಂದಲೂ ಅತ್ಯಂತ ಶ್ರದ್ಧಾದರಗಳಿಂದಲೂ ಲಕ್ಷ್ಯವಿಟ್ಟು ಕೇಳಿದರೆ ಮಾತ್ರ ತಿಳಿಯುಬಹುದು.

೭೫. ವಿಚಾರದಲ್ಲಿ ತರ್ಕದೋಷ

(ಶಾಲೆಯಲ್ಲಿ ಬಾಲಕರೂ ಮತ್ತು ಇನ್‌ಸ್ಪೆಕ್ಟರ್)

ಪ್ರಪಂಚವು ಆರಂಭವಾದುದು ಯಾವಾಗ? ಈ ಪ್ರಶ್ನೆಯಲ್ಲಿ ನೀವು ಪ್ರಪಂಚವನ್ನು ಪ್ರಪಂಚದಿಂದಲೇ ಹರಿದು ಬೇರ್ಪಡಿಸುವದಕ್ಕೆ ಬಯಸುತ್ತೀರಿ. ಯಾವಾಗ? ಎನ್ನುವ ಕಾಲದ ಕಲ್ಪನೆಯನ್ನು ಪ್ರಪಂಚದಿಂದ ಬಿಡಿಸಿ, ಹೊರಗೆಳೆಯುವದಕ್ಕೆ ಪ್ರಯತ್ನಿಸುತ್ತಿಲ್ಲವೆ? ಯಾವಾಗ, ಏಕೆ ಮೊದಲಾದವುಗಳಿಂದ ಪ್ರಪಂಚವನ್ನು ಅಳೆಯಬೇಕೆನ್ನುತ್ತೀರಿ; ಆದರೆ ಯಾವಾಗ, ಏಕೆ ಮೊದಲಾದ ಕಲ್ಪನೆಗಳೂ ಪ್ರಪಂಚದಲ್ಲಿಯೇ ಸೇರಿವೆ. ಅವೂ ಪ್ರಪಂಚವೇ ಎಂದು ನೀವು ಒಪ್ಪಬೇಕಾಗಿದೆ. ಪ್ರಪಂಚವನ್ನು ಮೀರಿ, ದೂರ ಆಚೆ ಹಾರಬೇಕೆನ್ನುತ್ತೀರಿ. ಆದರೆ ಹಾರಿ ನಿಲ್ಲುವಲ್ಲಿ ಅಥವಾ ಹಾರಾಡುತ್ತಲೇ ಇರಬೇಕೆನ್ನುವಲ್ಲಿ ನೀವು ಪುನಃ ಪ್ರಪಂಚವನ್ನೇ ಇಡುತ್ತೀರಿ.

ಒಮ್ಮೆ ಒಂದು ಶಾಲೆಗೆ ತನಿಖೆ ಮಾಡುವದಕ್ಕಾಗಿ ಒಬ್ಬ ಅಧಿಕಾರಿಗಳು (ಇನ್‌ಸ್ಪೆಕ್ಟರ್) ಬಂದರು. ಅವರು ವಿದ್ಯಾರ್ಥಿಗಳಿಗೆ ಈ ಪ್ರಶ್ನೆ ಹಾಕಿದರು: "ಬಹಳ ಎತ್ತರವಾದ ಒಂದು ಸ್ಥಳದಿಂದ-ನೂರಡಿಗಳ ಎತ್ತರದಿಂದ-ಒಂದು ಚೆಂಡನ್ನು ಬೀಳುವದಕ್ಕೆ ಬಿಟ್ಟರೆ, ಅದು ಭೂಮಿಯನ್ನು ಮುಟ್ಟುವದಕ್ಕೆ ಎಷ್ಟು ಕಾಲವನ್ನು ತೆಗೆದುಕೊಳ್ಳುತ್ತದೆ?" ಒಬ್ಬ ಬಾಲಕನು "ಇಷ್ಟು ಸೆಕೆಂಡುಗಳು" ಎಂದೂ ಎಷ್ಟೋ ಸಂಖ್ಯೆಯನ್ನು ಹೇಳಿದನು. ಪುನಃ ಇನ್‌ಸ್ಪೆಕ್ಟರು "ಅದೇ ಎತ್ತರದಿಂದ ಒಂದು ಕಲ್ಲನ್ನು ಬಿಟ್ಟರೆ? ಅದು ಭೂಮಿಗೆ ಬೀಳಲು ಎಷ್ಟು ಕಾಲ ಬೇಕು?" ಎಂದು ಕೇಳಿದರು. ಆ ಬಾಲಕನು "ಇಷ್ಟು ಸೆಕೆಂಡುಗಳು" ಎಂದು ಕೆಲವು ಸೆಕೆಂಡ್‌ಗಳನ್ನು ಹೇಳಿದನು. ಆಗ ಅವರು ಸಿಕ್ಕಿಸಿಕೊಳ್ಳುವ ಒಂದು ಜಾಣತನದ ಪ್ರಶ್ನೆ ಮಾಡಿದರು; "ಭೂಮಿಯೇ-ಈ ಭೂಗ್ರಹವೇ-ಬೀಳುವದಕ್ಕೆ ತೊಡಗಿದರೆ ಇದು ಬೀಳುವದಕ್ಕೆ ಎಷ್ಟು ಕಾಲವನ್ನು ತೆಗೆದುಕೊಳ್ಳುತ್ತದೆ?" ಆ ಮಕ್ಕಳಿಗೆ ದಿಗ್ಭ್ರಮೆ ಆಯಿತು,

ಅವರಲ್ಲಿ ಒಬ್ಬ ಸೂಟಿಯಾದ ಹುಡುಗನು "ಭೂಮಿಯು ಎಲ್ಲಿಗೆ ಬೀಳುತ್ತದೆ?- ಎನ್ನುವದನ್ನು ಮೊದಲು ತಿಳಿಸಬೇಕು" (ಹಾಗಾದರೆ ಅದ್ದು ಬೀಳಲು ಎಷ್ಟು ಹೊತ್ತು ಬೇಕು. ಎನ್ನುವದನ್ನು ಹೇಳಬಹುದು) ಎಂದು ಉತ್ತರಿಸಿದನು.

ಹೀಗೆಯೇ ಈ ದೀಪ ಹಚ್ಚಿದ್ದು ಯಾವಾಗ, ಈ ಮನೆಯನ್ನು ಕಟ್ಟಿದ್ದು ಯಾವಾಗ, ಈ ನೆಲವನ್ನು ಮಾಡಿದ್ದು ಯಾವಾಗ ಮೊದಲಾದ ಪ್ರಶ್ನೆಗಳನ್ನು ಹಾಕಬಹುದು. ಆದರೆ "ಈ ಭೂಮಿಯು ಸೃಷ್ಟಿಯಾದುದು ಯಾವಾಗ? ಈ ಜಗತ್ತು ಸೃಷ್ಟಿಯಾದುದು ಯಾವಾಗ? ಎಂಬೀ ಪ್ರಶ್ನೆಗಳು "ಭೂಮಿ ಬೀಳುವದಕ್ಕೆ ಎಷ್ಟು ಕಾಲ ಬೇಕು? ಭೂಮಿ ಎಲ್ಲಿಗೆ ಬೀಳುತ್ತದೆ?" ಎಂಬ ಪ್ರಶ್ನೆಗಳಂತೆಯೇ ಅಸಂಗತವಾಗುತ್ತವೆ. ಯಾವಾಗ? ಏಕೆ? ಮೊದಲಾದವುಗಳು ಪ್ರಪಂಚದಲ್ಲಿಯೇ ಸೇರಿ ಅದರ ಭಾಗವೇ ಆಗಿರುವದರಿಂದಲೂ ನಮ್ಮ ತರ್ಕವೂ ವಿಚಾರವೂ ಶೋಧನವೂ ಒಂದು ವೃತ್ತದಲ್ಲಿಯೇ ಆಗಿರುವದರಿಂದಲೂ ಎಷ್ಟು ಸುತ್ತಿದರೂ ಹೊರಟಲ್ಲಿಗೇ ತಿರುಗಿ ಬರುತ್ತೇವೆ. ಇದೊಂದು ಭ್ರಮೆ, ತರ್ಕದೋಷ. ನಿಮ್ಮ ಬಿಟ್ಟು ನೀವು-ನಿಮ್ಮೊಳಗಿನಿಂದ ನೀವು-ಹೊರಗೆ ಹಾರುವದು ಸಾಧ್ಯವೆ? (could you Jump out of yourself?) ಇಲ್ಲ. ಹಾಗೆಯೇ ಈ ಪ್ರಶ್ನೆಗಳೂ. ಈ ಇಡೀ ವಿಶ್ವಕ್ಕೆ ಇವು ವಿವರಣೆ ಕೊಡಲಾರವು. ಇದನ್ನೇ ಹೇಳುವುದು ವೇದಾಂತ.

ಇದನ್ನೇ ಇನ್ನೊಂದು ರೀತಿಯಲ್ಲಿ ವಿವರಿಸಬಹುದು.

ಇಲ್ಲೊಬ್ಬ ಮನುಷ್ಯನು ನಿದ್ರಿಸುತ್ತಿದ್ದಾನೆಂದು ಇಟ್ಟುಕೊಳ್ಳೋಣ. ಅವನು ತನ್ನ ಕನಸಿನಲ್ಲಿ ಅನೇಕ ವಸ್ತುಗಳನ್ನು ನೋಡುತ್ತಾನೆ. ಕನಸು ಕಾಣುತ್ತಿರುವ ಭ್ರಮಿಷ್ಠನಾದ ವಿಷಯಿಯೂ ಅವನೇ, ಕನಸಿನಲ್ಲಿ ಗೋಚರಿಸುತ್ತಿರುವ ವಿಷಯವೂ ಅವನೇ; ಅರಣ್ಯಗಳೂ ನದಿಗಳೂ ಪರ್ವತಗಳೂ ಎಲ್ಲವೂ ತಾನೇ ಆಗಿದ್ದಾನೆ. ಕನಸಿನಲ್ಲಿ ವಿಷಯಿಯೂ (ಕನಸು ಕಾಣುತ್ತಿರುವ ಜೀವನೂ) ವಿಷಯಗಳೂ ಏಕಕಾಲ ದಲ್ಲಿ ಉದಯವಾಗುತ್ತವೆ. ಕನಸು ಕಾಣುತ್ತಿರುವ ಜೀವನು ತನಗೆ ಕಾಣುತ್ತಿರುವ ನದಿಗಳೂ, ಪರ್ವತಗಳೂ, ಸರೋವರಗಳೂ, ಭೂದೃಶ್ಯಗಳೂ ಯಾವಾಗ ಸೃಷ್ಟಿ ಯಾದವು, ಎಂಬದನ್ನು ಹೇಳಬಲ್ಲನೆ? ನೀವು ಕನಸು ಕಾಣುತ್ತಿರುವವರೆಗೂ ಕನಸು ಕಾಣುವ ನೀವು ಯಾರಾದರೂ ಇದನ್ನು ಹೇಳಲು ಸಾಧ್ಯವೆ? ಎಂದಿಗೂ ಇಲ್ಲ. ಅಲ್ಲಿ ಆಗ ನಿಮಗೆ ನದಿಗಳು, ಪರ್ವತಗಳು ಮೊದಲಾದ ದೃಶ್ಯಗಳೆಲ್ಲಾ ಕೋಟಿ ಕೋಟಿ ವರ್ಷಗಳಿಂದ ಶಾಶ್ವತವಾಗಿ ಎಂದೆಂದೂ ಇರುವವೆಂದೇ ಸ್ವಾಭಾವಿಕವಾಗಿಯೇ ತೋರುತ್ತವೆ. ನೀವು ಕನಸಿನಲ್ಲಿರುವವರೆಗೂ, "ನಾನೀಗ ಕನಸು ಕಾಣಲು ತೊಡ ಗಿದ್ದೇನೆ; ನಾನು ಕನಸನ್ನು ಆರಂಭಿಸಿದಾಗಲೇ ಈ ದೃಶ್ಯಗಳೂ ತೋರಲು ಪ್ರಾರಂಭ ವಾಗಿವೆ. ನಾನು ನೋಡುತ್ತಿರುವದರಿಂದಲೇ ಇವೂ ತೋರುತ್ತಿವೆ. ಇದು ನನ್ನ ಕೇವಲ ಕನಸು, ಕಲ್ಪನೆ. ಈಗ ತೋರುತ್ತಿರುವ ಯಾವದೂ ನಿಜವಲ್ಲ; ಇವು ನನ್ನ

ಕನಸನ್ನು ಬಿಟ್ಟು ಸ್ವತಂತ್ರವಾಗಿ ಹಿಂದೆ ಬಹಳ ಕಾಲದಿಂದಲೂ ಇರಲಿಲ್ಲ; ಎಚ್ಚರವಾದ ಮೇಲೂ ಇರುವದಿಲ್ಲ." ಎಂದು ಎಂದಿಗೂ ತೋರುವದಿಲ್ಲ. ನೀವು ಕನಸು ಕಾಣುತ್ತಿರುವವರೆಗೂ ನೀವು ಕಾಣುತ್ತಿರುವ ಪ್ರಪಂಚ ಯಾವಾಗ ಯಾರಿಂದ, ಏತಕ್ಕಾಗಿ, ಹೇಗೆ ಸೃಷ್ಟಿಯಾಯಿತು-ಎಂಬದನ್ನು ನೀವು ಕಂಡು ಹಿಡಿಯುವದೂ ತಿಳಿಯುವದೂ ಸಾಧ್ಯವಲ್ಲ. ಆದರೆ ನೀವು ಎಚ್ಚರವಾದರೆ, ಎಲ್ಲವೂ ಒಮ್ಮೆಗೇ ಮಾಯವಾಗುತ್ತವೆ, ಕರಗಿ ಹೋಗುತ್ತವೆ, ಕಾಣದಾಗುತ್ತವೆ. ನಿಜವೇನೆಂಬದು ನಿಮಗೇ ತಿಳಿಯುತ್ತದೆ.

ಹೀಗೆಯೇ ಈ ಪ್ರಪಂಚದಲ್ಲಿ ಬಗೆಬಗೆಯ ವಸ್ತುಗಳನ್ನು ಕಾಣುತ್ತಿದ್ದೇವೆ. ಇವೆಲ್ಲಾ ನಿಜವಾಗಿಯೇ ಕಾಣುತ್ತವೆ. ಕನಸಿನಲ್ಲಿಯೂ ಯಾವದಕ್ಕೂ ಕೊನೆಯೇ ಕಾಣದಿರುವಂತೆ ಎಚ್ಚರದಲ್ಲಿ ಕಾಣುವ ಈ ಪ್ರಪಂಚಕ್ಕೂ ಕೊನೆಯೇ ಕಾಣುವದಿಲ್ಲ. ಈ ಎಚ್ಚರದ ದೊಡ್ಡ ಕನಸೂ ಯಾವಾಗ ಮೊದಲಾಯಿತೆಂಬದು ತಿಳಿಯುವದಿಲ್ಲ. ಕಾಲವು ಯಾವಾಗ ಆರಂಭವಾಯಿತೆನ್ನುವದನ್ನು ಹೇಳಬಲ್ಲಿರಾ? ಕ್ಯಾಂಟ್ ಮಹಾಶಯನೂ ಈ ಪರಸ್ಪರ ಭಾವವಿರೋಧವನ್ನೂ ಅಸಂಗತಿಯನ್ನೂ ತೋರಿಸಿ ಕೊಟ್ಟನು. ಕಾಲವು ಮೊದಲಾದುದು ಯಾವಾಗ ? ಎನ್ನುವ ಪ್ರಶ್ನೆಗೆ, ಕಾಲವು ಇಂಥಾ ಕಾಲದಲ್ಲಿ ಆರಂಭವಾಯಿತು. ಎಂದೇ ಹೇಳಬೇಕು. ಇದು ಅನಿವಾರ್ಯ. ಹೀಗೆ ಹೇಳುವದಾದರೆ, ಕಾಲವನ್ನು ಮೀರಿ, ಕಾಲದ ಆಚೆ ಎಲ್ಲಿಗೋ ಹೋಗಬೇಕೆಂದು ಬಯಸಿ ಸಾಧ್ಯವಿಲ್ಲದೆ, ಪುನಃ ಕಾಲದಲ್ಲಿಯೇ ಸಿಕ್ಕಿಕೊಂಡಂತೆ ಆಗುತ್ತದೆ. ದೇಶವು (Space) ಅಥವಾ ಆಕಾಶವು ಪ್ರಾರಂಭವಾದುದೆಲ್ಲಿ? ಈ ಪ್ರಶ್ನೆಯೂ ಇದಕ್ಕೆ ಉತ್ತರವೂ ಸಾಧ್ಯವಲ್ಲ, ಏಕೆಂದರೆ, ದೇಶವು ಇಲ್ಲಿ ಉಪಕ್ರಮವಾಯಿತು, ಎನ್ನುವಾಗ ದೇಶದ ಆಚೆ ಯಾವದೊಂದು ದೇಶದಲ್ಲಿಯೇ–ಸ್ಥಳದಲ್ಲಿಯೇ–ನಾವು ಒಂದು ಬಿಂದುವನ್ನಿಡಬೇಕು. ಇದು ಅಪರಿಹಾರ್ಯ. ದೇಶವನ್ನು ಮೀರಿ ಆಚೆ ಎಲ್ಲಿಗೋ ಹೋಗಬೇಕೆಂದು ಹೊರಟು ಮತ್ತೆ ದೇಶದಲ್ಲಿಯೇ ಸಿಕ್ಕಿಕೊಳ್ಳುತ್ತೇವೆ. ಕಾಲ-ದೇಶಗಳ ಆಚೆ ಯಾವಾಗ—ಎಲ್ಲಿ ಎನ್ನುವ ಪ್ರಶ್ನೆಗಳನ್ನು ಇಡುವುದಕ್ಕೆ ಹೊರಟು, ಈ ಪ್ರಶ್ನೆಗಳ ಆಚೆಯೂ ಕಾಲ–ದೇಶಗಳೇ ಇರುವದನ್ನು ಕಂಡು, ಜಾಣರಾದರೆ ನಗುತ್ತೇವೆ, ಇಲ್ಲವಾದರೆ ದಿಗ್ಭ್ರಾಂತರಾಗುತ್ತೇವೆ. ಕಾಲ–ದೇಶಗಳ ಆರಂಭವು ಯಾವಾಗ–ಎಲ್ಲಿ ಎಂಬ ಕಲ್ಪನೆಗಳಿಂದಲೂ ಯಾವಾಗ–ಎಲ್ಲಿ ಎಂಬ ಭಾವನೆಗಳು ಕಾಲ–ದೇಶ ಕಲ್ಪನೆಗಳಿಂದಲೂ ಸುತ್ತುವರಿಯಲ್ಪಟ್ಟಿವೆ. ಆದ್ದರಿಂದ ಈ ಪ್ರಶ್ನೋತ್ತರಗಳು ಅಸಂಭವ. ಹೀಗೆಯೇ ಕಾರಣಕಾರ್ಯ ಪರಂಪರೆಯ ಸರಪಳಿಯೂ ಇದೆ. ಈ ಸರಪಳಿಯು ಮೊದಲಾದುದು ಎಲ್ಲಿ? ಯಾವಾಗ? ಏಕೆ? ಈ ಪ್ರಶ್ನೆಗಳೂ ಅಸಂಭವ; ಇವಕ್ಕೆ ಉತ್ತರವೂ ಅಸಾಧ್ಯ. ಅನಂತವಾದ ಕಾರಣ ಕಾರ್ಯ ಪರಂಪರೆಯಲ್ಲಿ ಪ್ರತಿಯೊಂದು ಕಾರ್ಯವೂ ಆದರ ಮುಂದಿನ ಕಾರ್ಯಕ್ಕೆ ಕಾರಣವಾಗಿಯೇ ಇರುತ್ತದೆ. ಯಾವದೊಂದನ್ನು ಕಾರಣವೆಂದು ತೆಗೆದುಕೊಂಡರೆ

ಅದು ತನ್ನ ಹಿಂದಿನ ಕಾರಣದಿಂದ ಕಾರ್ಯವೇ ಆಗಿರುತ್ತದೆ. ಈ ವೃತ್ತಾಕಾರದ ಸರಪಳಿಯಲ್ಲಿ ಇದು ಸರ್ವಕ್ಕೂ ಮೂಲ ಕಾರಣ, ಎಂಬ ಆದಿಯೂ ಇಲ್ಲ. ಈ ಪರಸ್ಪರ ಪರಿಣಾಮ ಪರಂಪರೆಯು ಇಲ್ಲಿಗೇ ಮುಗಿಯಿತು, ಎಂಬ ಕೊನೆಯೂ ಇಲ್ಲ. ಎಲ್ಲಿ? ಯಾವಾಗ? ಏಕೆ? ಎಂಬೀ ಪ್ರಶ್ನೆ ಕಲ್ಪನೆಗಳೂ ಕಾರ್ಯಕಾರಣ ನಿಯಮದೊಳಗೇ ಸಿಕ್ಕಿಕೊಂಡಿವೆ. ಉತ್ತರಿಸಲಾಗದ ಪ್ರಶ್ನೆ ಇವು. ದೇಶ-ಕಾಲ-ನಿಮಿತ್ತಗಳಿಗೆ(ಕಾರ್ಯ-ಕಾರಣಗಳಿಗೆ) ಈ ಕಡೆಯಾಗಲೀ ಆ ಕಡೆಯಾಗಲೀ ಕೊನೆಯೆಂಬುದೇ ಇಲ್ಲ. ಷೋಪೆನ್ ಹೋವರ್, ಮತ್ತು ಹೆರಬೆರ್ಟ್ ಸ್ಪೆನ್ಸರ್ ಮೊದಲಾದವರು ಇದನ್ನು ಯುಕ್ತಿ-ವಿಚಾರಗಳಿಂದ ತೋರಿಸಿಕೊಟ್ಟಿದ್ದಾರೆ. ಇವಕ್ಕೆ ಕೊನೆಯೇ ಇಲ್ಲವೆಂದು ಪ್ರತಿಯೊಬ್ಬ ವಿಚಾರಕನೂ ತೋರಿಸಬಹುದು. ಕನಸಿನಲ್ಲಿಯೂ ಅಷ್ಟೆ. ಕನಸಿನಲ್ಲಿ ನೀವು ಕಾಣುತ್ತಿರುವ ಕನಸಿನ ವಿಶಿಷ್ಟ ಜಾತಿಯ ಕಾಲಕ್ಕೂ ದೇಶಕ್ಕೂ ಕಾರ್ಯ-ಕಾರಣ ಪರಂಪರೆಗೂ ಕೊನೆಯುಂಟೆ? ಕನಸಿನಲ್ಲಿರುವವರೆಗೂ ಇಲ್ಲವೇ ಇಲ್ಲ, ಕೊನೆಯೇ ಇಲ್ಲ.

ಎಚ್ಚರದ ವಿಚಾರವೂ ಹೀಗೆಯೇ. ಈ ಪ್ರಶ್ನೆಗಳಿಗೆ ಲೌಕಿಕವಾದ ಅನುಭವ ವ್ಯವಹಾರ ದೃಷ್ಟಿಯಿಂದ ಉತ್ತರ ಹೇಳಲು ಪ್ರಯತ್ನಮಾಡುವವರು ದಾರಿ ತಪ್ಪುತ್ತಾರೆ. ಮಂಡಲಾಕಾರದಲ್ಲಿ ತರ್ಕಮಾಡುತ್ತಾ ಸುತ್ತಿ ಸುತ್ತಿ ಹೊರಟಲ್ಲಿಗೇ ಬಂದು ದಿಗ್ಭ್ರಮೆಗೊಳ್ಳುತ್ತಾರೆ. ಈ ಸಮಸ್ಯೆಗಳಿಗೆ ವ್ಯಾವಹಾರಿಕ ದೃಷ್ಟಿಯ ಯಾವ ಸಮಾಧಾನವೂ ಪ್ರಯೋಜನವಾಗುವದಿಲ್ಲ, ಸಾಧ್ಯವೂ ಇಲ್ಲ, ಕನಸು ಕಾಣುತ್ತಿರುವವನು ಎಚ್ಚರಗೊಂಡ ಕೂಡಲೇ ಇಡೀ ಸಮಸ್ಯೆಯೇ ಪರಿಹಾರವಾಗುತ್ತದೆ, ಎಚ್ಚರವಾದ ಮೇಲೆ, ಕನಸು ಕಂಡವನು 'ಓ! ಅದೆಲ್ಲಾ ಬರೀ ಕನಸಾಗಿತ್ತು; ಅದು ಯಾವುದೂ ನಿಜವಾಗಿರಲಿಲ್ಲ'; ಎಂದು ಉದ್ಗಾರಮಾಡುತ್ತಾನೆ. ಹೀಗೆಯೇ, ವೇದಾಂತವು ಎಲ್ಲರೆದುರಿಗೂ ಎತ್ತಿಹಿಡಿದು ತೋರಿಸುತ್ತಿರುವ ಕೈವಲ್ಯದ (ಮೋಕ್ಷದ) ಆ ಪರಿಪೂರ್ಣ ಸ್ಥಿತಿಯನ್ನು ಪಡೆದು ಸತ್ಯವನ್ನರಿತು ನಿಜವಾಗಿ ಎಚ್ಚರಗೊಂಡರೆ, ಈ ಎಲ್ಲಾ ಪ್ರಪಂಚವೂ ಬರಿ ತಮಾಷೆ, ಆಟದ ವಸ್ತು, ಕೇವಲ ಭ್ರಮೆಯೇ ಹೊರತು ಬೇರೇನೂ ಅಲ್ಲ—ಸತ್ಯವಲ್ಲ ಎನ್ನುವದು ನಿಮಗೇ ಅನುಭವಕ್ಕೆ ಬರುತ್ತದೆ.

೭೬. ಪ್ರಪಂಚವು ಏಕೆ? ಯಾವಾಗ? ಎಲ್ಲಿ? ಇತ್ಯಾದಿ ಪ್ರಶ್ನೆಗಳ ಭಯ

(ಚಿತ್ರದಲ್ಲಿ ದೋಣಿ ಮತ್ತು ಅಂಬಿಗ)

ಮಾಯಾ ವಿಷಯವಾದ ಇದೇ ಪ್ರಶ್ನೆಯನ್ನು ಈ ರೀತಿಯಲ್ಲಿಯೂ ಹಾಕುತ್ತಾರೆ: "ಮನುಷ್ಯನು ದೇವರೇ ಆದರೆ ಅವನು ತನ್ನ ನಿಜಸ್ವಭಾವವನ್ನು ಏಕೆ ಮರೆಯಬೇಕು?" ಎಂದು. ವೇದಾಂತದ ಉತ್ತರವೇನೆಂದರೆ, "ನಿಮ್ಮಲ್ಲಿರುವ ನಿಜವಾದ ದೇವರು ತನ್ನ ನಿಜಸ್ವರೂಪವನ್ನು ಎಂದೂ ಮರೆತಿಲ್ಲ. ನಿಮ್ಮಲ್ಲಿರುವ ನಿಜವಾದ ದೇವರು ತನ್ನ ನಿಜವನ್ನು ತಾನು ಮರೆತಿದ್ದರೆ, ಅವನು ಎಲ್ಲಾ ಕಾಲವಲ್ಲಿಯೂ ಈ

ವಿಶ್ವವನ್ನು ನಿಯಂತ್ರಿಸುತ್ತಲೂ ಆಡಳಿತ ನಡೆಸುತ್ತಲೂ ಆಳುತ್ತಲೂ ಇರುತ್ತಿರಲಿಲ್ಲ. ನಿಜವಾದ ದೇವರು ಎಂದೂ ಮರೆತೇ ಇಲ್ಲ." ಹಾಗಾದರೆ ಮರೆತಿರುವವನು ಯಾರು? ಯಾರೂ ಮರೆತಿಲ್ಲ. ಇದೆಲ್ಲಾ ಒಂದು ಕನಸಿನಂತಿದೆ. ಕನಸಿನಲ್ಲಿ ನೀವು ಬೇರೆ ಬೇರೆ ವಸ್ತುಗಳನ್ನು ಕಾಣುವಾಗ, ಅವನ್ನು ನೋಡುತ್ತಿರುವವರು ನಿಜವಾದ ನೀವಲ್ಲ: ಕನಸಿನಲ್ಲಿರುವ ವಿಷಯಿಯೇ ಜ್ಞಾತೃವೇ (ತೈಜಸನೇ) ಕನಸಿನ ದೃಶ್ಯ (ವಿಷಯ)ವನ್ನು ನೋಡುತ್ತಿದ್ದಾನೆ. ಕನಸಿನಲ್ಲಿ ದ್ರಷ್ಟಾ (ನೋಡುವವ)ನೂ ದೃಶ್ಯವೂ ಜ್ಞಾತೃವೂ ಜ್ಞೇಯವೂ ಒಟ್ಟಿಗೆ ತೋರಿಕೊಳ್ಳುತ್ತವೆ. ಕನಸಿನಲ್ಲಿ ದ್ರಷ್ಟಾನೇ ದೃಶ್ಯವಾದ ನದಿಗಳನ್ನೂ ಪರ್ವತಗಳನ್ನೂ ಅರಣ್ಯಗಳನ್ನೂ ನೋಡುತ್ತಾ ಸಂಚರಿಸುತ್ತಾ ವಾಸ ಮಾಡುತ್ತಾ ಸುಖದುಃಖಗಳನ್ನು ಅನುಭವಿಸುತ್ತಾನೆ. ನಿಜವಾದ ಆತ್ಮನು ಸಾಕ್ಷಿಯಾಗಿ ಎಲ್ಲಕ್ಕೂ ನಿರ್ವಿಕಾರವಾದ ಅಧಿಷ್ಠಾನವಾಗಿರುತ್ತಾನೆ. ಅವನ ಬೆಳಕಿನಿಂದಲೇ ಕನಸಿನ ದ್ರಷ್ಟಾ-ದೃಶ್ಯಗಳ ಪ್ರಪಂಚವಿಲಾಸವೆಲ್ಲಾ ತೋರುತ್ತದೆ. ಅವನೇ ನಿಜವಾದ ನೀವು. ಆ ನಿಜವಾದ ಆತ್ಮನು, ನಿಜವಾದ ದೇವರು ಯಾವದನ್ನೂ ಎಂದೂ ಮರೆತಿಲ್ಲ. 'ನಾನು' ಎನ್ನುವ ಸುಳ್ಳು ಭಾವನೆಯೇ ಮಾಯೆಯ ಸೃಷ್ಟಿ. ಎಚ್ಚರ ಕನಸುಗಳಲ್ಲಿ ತೋರುವ ಮಿಕ್ಕ ಎಲ್ಲಾ ವಸ್ತುಗಳಂತೆಯೇ 'ನಾನು' ಎನ್ನುವ ಅರಿವು (ಅಥವಾ ಕಲ್ಪನೆಯೂ) ಭ್ರಾಂತಿಜನ್ಯವಾದುದು. ನಿಜವಾದ ಆತ್ಮನು ಯಾವದನ್ನೂ ಮರೆತಿಲ್ಲ. ನೀವು ಹೀಗೆ ಪ್ರಶ್ನೆ ಮಾಡಬಹುದು: "ದೇವರು ತನ್ನನ್ನು ತಾನು ಮರೆತು ಏಕೆ ಮನುಷ್ಯನಾದ? ದೇವರು ತನ್ನನ್ನು ತಾನು ಮರೆತು 'ನಾನು ನಾನು' ಎನ್ನುವ ಅಲ್ಪಜೀವ ಏಕಾದ? ವೇದಾಂತವು ಹೇಳುವದೇನೆಂದರೆ, "ತಾರ್ಕಿಕರು ಹೇಳುವಂತೆ ಈ ನಿನ್ನ ಪ್ರಶ್ನೆಯಲ್ಲಿ ಹೇತ್ವಾಭಾಸ ಅಥವಾ ತರ್ಕದೋಷವಿದೆ. ಇದೊಂದು ವೃತ್ತಾಕಾರದಲ್ಲಿ ಸುತ್ತುತ್ತಿರುವ ವಿಚಾರದೋಷ, ತರ್ಕಭ್ರಮೆ. ಈ ಪ್ರಶ್ನೆಯನ್ನು ನೀನು ಯಾರಿಗೆ ಹಾಕುತ್ತಿ? ಈ ಪ್ರಶ್ನೆಯನ್ನು ಕನಸಿನ ಜೀವನಿಗೆ (ದ್ರಷ್ಟಾನಿಗೆ, ತೈಜಸನಿಗೆ) ಹಾಕುತ್ತಿಯೋ? ಎಚ್ಚರದ ಜೀವನಿಗೆ (ದ್ರಷ್ಟಾನಿಗೆ, ವಿಶ್ವನಿಗೆ) ಹಾಕುತ್ತಿಯೋ ? ಕನಸಿನ ಜೀವನಿಗೆ ಎಂದರೆ, ಕನಸಿನ ಜೀವನು ಕನಸಿನ ಪ್ರಪಂಚದಲ್ಲಿಯೇ ಇರತಕ್ಕವನು. ಅವನೂ ಅವನ ದೃಶ್ಯವೂ ಒಂದೇ ಜಾತಿಯ ಸೃಷ್ಟಿ, ಅವನನ್ನು ಪ್ರಶ್ನೆಮಾಡತಕ್ಕವನೂ ಕನಸಿನವನೇ ಆಗಿ ಕನಸಿನಲ್ಲಿಯೇ ಇರಬೇಕು. ಆದ್ದರಿಂದ ಎಚ್ಚರದಲ್ಲಿರುವ ನೀನು ಕನಸಿನ ಜೀವನಿಗೆ ಪ್ರಶ್ನೆಹಾಕಲಾರೆ. ನೀನೂ ಕನಸಿನಲ್ಲಿಯೇ ಪ್ರಶ್ನೆಹಾಕುವದಾಗಿ ಹೇಳಿದರೆ, ನಿನ್ನ ಎಲ್ಲಾ ಪ್ರಶ್ನೆಗಳಿಗೂ ಎಚ್ಚರವಾಗುವದೇ ಉತ್ತರ. ಏಕೆಂದರೆ, ಕನಸು ಕಾಣುತ್ತಿರುವವರೆಗೂ ನಿಜವಾದ ಉತ್ತರವು ಸಾಧ್ಯವಲ್ಲ. ಎಚ್ಚರವಾದೊಡನೆ ಕನಸಿನ ಜೀವನೇ ಇಲ್ಲ; ಪ್ರಶ್ನೆ ಕೇಳಿದವನೂ ಇಲ್ಲ; ಉತ್ತರದ ಆಗತ್ಯವೂ ಇಲ್ಲ. ಇನ್ನು ಎಚ್ಚರದ ಜೀವನಿಗೆ ಅದನ್ನು ಕೇಳುವೆನೆಂದರೆ, ಮಾಯಾ ಸೃಷ್ಟಿ ಎಂಬೀ ದೀರ್ಘ ಸ್ವಪ್ನವು ಇರುವವರೆಗೆ ಮಾತ್ರ ಈ ಕೇಳುವ-ಹೇಳುವ ದ್ವೈತವು ಇರಬಲ್ಲದು ; ಮತ್ತು ತಪ್ಪುವದೇ ಇಲ್ಲ. ನೀವು,

ಅನಾದಿಯಾದ ಈ ಮಾಯಾ ನಿದ್ರೆಯಲ್ಲಿ "ನಾನು ಅಲ್ಪ ಜೀವ, ಮನುಷ್ಯ, ನಿತ್ಯವೂ ಎಚ್ಚರ, ಕನಸು, ನಿದ್ರೆ ಎಂಬ ಮೂರು ಅವಸ್ಥೆಗಳನ್ನು ನಾನು ಪಡೆಯುತ್ತಿದ್ದೇನೆ" ಎಂದು ಮೊದಲಾಗಿ ಕನಸು ಕಾಣುತ್ತಿರುವ ಎಚ್ಚರದ ಭ್ರಮೆಯಲ್ಲಿರುವ ಜೀವನಿಗೆ, ಈ ಪ್ರಶ್ನೆಯನ್ನು ಹಾಕಬಹುದು. ನೀವೂ ಅದೇ ಭ್ರಮೆಯಲ್ಲಿ ತೊಳಲಾಡುತ್ತಿರುವವರು; ಅದೇ ಜಾತಿಗೆ ಸೇರಿದವರು. ಆದ್ದರಿಂದ ಸರಿಹೋಗುತ್ತದೆ. ಆದರೆ ನೀವಿಬ್ಬರೂ ಕನಸುಕಾಣುತ್ತಿರುವವರೆಗೂ ನಿಮ್ಮ ಪ್ರಶ್ನೆಗೆ ಸರಿಯಾದ ಉತ್ತರವು ಸಾಧ್ಯವಿಲ್ಲವೆಂಬುದನ್ನೂ ನೀವು ಎಚ್ಚರವೆಂದು ತಿಳಿದಿರುವುದೂ ಕನಸೇ ಎಂಬದನ್ನೂ ಮರೆಯಬೇಡಿ. ನಿಮ್ಮಿಬ್ಬರಿಗೂ, ಮಾಯಾನಿದ್ರೆಯನ್ನು ಕಳೆದು, ನಿಜವಾದ ಎಚ್ಚರವಾದರೆ, ಕನಸಿನ ಜೀವನನ್ನು ಕಳೆದರೆ, ಸುರುಳಿ ಬಿಚ್ಚಿ ತೋರಿದಂತೆ ಕಾಣುವ ಕನಸಿನ ದೃಶ್ಯಜಾಲವೆಲ್ಲಾ ಕರಗಿಹೋಗುತ್ತದೆ. ಪ್ರಶ್ನೆ ಕೇಳುವವನೂ ಇಲ್ಲ, ಉತ್ತರ ಹೇಳತಕ್ಕವನೂ ಇಲ್ಲ. ಯಾರು ಯಾರನ್ನು ಏನೆಂದು ಕೇಳಬೇಕು? ಎರಡೆಂಬದೇ ಇಲ್ಲ. ವಿಷಯಿ-ವಿಷಯಗಳೆಂಬ ದ್ವೈತದಲ್ಲಿ ಮಾಡುವ ತರ್ಕವೆಲ್ಲಾ ಬಿಡಿಸಲಾಗದ ವೃತ್ತದಲ್ಲಿಯೇ ಸುತ್ತಿ ತಿರುಗುತ್ತಿರುವ ತರ್ಕ. ಬೆಳಕಿನಲ್ಲಿ ಕತ್ತಲೆಯಿಲ್ಲದಿರುವಂತೆ ಅರಿವಿನ ಸ್ವರೂಪವೇ ಆದ ದೇವರಲ್ಲಿ ಮರವೆ ಬರುವದು ಹೇಗೆ? ದೇವರು ತನ್ನನ್ನು ತಾನು ಮರೆಯುವದು ಸಾಧ್ಯವೆ? ತನ್ನನ್ನು ತಾನು ಮರೆತವನು ದೇವರಾಗಬಲ್ಲನೆ? ಹಾಗಾದರೆ ದೇವರು ತನ್ನನ್ನು ತಾನು ಮರೆಯದೆ ಮನುಷ್ಯ ಹೇಗಾದ? ಮನುಷ್ಯ ದೇವರಲ್ಲವೇ? ದೇವರೇ ಮನುಷ್ಯನಾಗಿಲ್ಲವೆ? ಇದೇ ಪರಿಹಾರ ಕಾಣದ ವರ್ತುಲ ತರ್ಕ.

ಇಲ್ಲಿ ಒಂದು ಚಿತ್ರವಿದೆ. ಇದರಲ್ಲಿ ಒಂದು ನದಿಯು ಹರಿಯುತ್ತಿದೆ. ಅಂಬಿಗನು ದೋಣಿಯನ್ನು ನಡೆಸುತ್ತಾ ನದಿಯನ್ನು ದಾಟಿಸುತ್ತಿದ್ದಾನೆ. ಒಂದು ಮಗುವಿಗೆ ಈ ಚಿತ್ರವನ್ನು ತೋರಿಸುವಾಗ "ನೋಡು ಮಗು, ಇಲ್ಲಿ ಒಂದು ದೊಡ್ಡ ನದಿಯು ವೇಗವಾಗಿ ಹರಿಯುತ್ತಿದೆ. ಇದು ಬಹಳ ಆಳವಾಗಿಯೂ ಇದೆ. ಅನೇಕ ಜನರು ಈ ನದಿಯ ಈಚೆಯ ದಂಡೆಯಿಂದ ದಾಟಿ ಆಚೆಯ ದಂಡೆಯಲ್ಲಿರುವ ತಮ್ಮ ಊರಿಗೆ ನಿತ್ಯವೂ ಹೋಗಬೇಕಾಗಿರುತ್ತದೆ. ನದಿಯಲ್ಲಿ ಇಳಿದರೆ ಮುಳುಗಿ ಹೋಗುತ್ತಾರೆ. ದೋಣಿಯ ಯಜಮಾನನಾದ ಅಂಬಿಗನು ಬಹಳ ಒಳ್ಳೆಯವನು. ಅವನಿಗೆ ನಿತ್ಯವೂ ಪ್ರತಿಯೊಬ್ಬರೂ ಈಚೆಯ ದಂಡೆಯಲ್ಲಿ ತಮ್ಮ ಕೆಲಸವನ್ನು ಮುಗಿಸಿಕೊಂಡ ಮೇಲೆ ಕೆಲವು ಪೈಸಾಗಳನ್ನು ಕೊಟ್ಟರೆ ಎಲ್ಲರನ್ನೂ ತನ್ನ ದೋಣಿಯಲ್ಲಿ ಕೂರಿಸಿಕೊಂಡು, ಹುಟ್ಟುಹಾಕಿ ದೋಣಿಯನ್ನು ನಡೆಸಿಕೊಂಡು ಹೋಗಿ ಸುರಕ್ಷಿತವಾಗಿ ಆಚೆಯ ದಂಡೆಗೆ ಬಿಡುತ್ತಾನೆ. ಆದರೆ, ನದಿಯಲ್ಲಿ ಹೋಗುತ್ತಿರುವಾಗ ಎಲ್ಲರ ಪ್ರಾಣವೂ ಆ ಅಂಬಿಗನ ಕೈಯಲ್ಲಿರುತ್ತದೆ. ಅವನು ಬೇಕಾದರೆ ಎಲ್ಲರನ್ನೂ ನದಿಯಲ್ಲಿ ಮುಳುಗಿಸಿ ಸಾಯಿಸಬಹುದು. ಆದರೆ, ಅವನು ದೇವರಂಥ ಮನುಷ್ಯ; ಬಹಳ ಒಳ್ಳೆಯವನು. ಆದ್ದರಿಂದ ಅವನು ಜಾಗರೂಕವಾಗಿ ದೋಣಿಯನ್ನು ನಡೆಸಿಕೊಂಡು

ಹೋಗಿ ದಯೆಯಿಂದ ಎಲ್ಲರನ್ನೂ ದಾಟಿಸುತ್ತಾನೆ..............."ಎಂದು ಮೊದಲಾಗಿ ಆ ಚಿತ್ರದಲ್ಲಿರುವ ನದಿಯೂ ಜನರೂ ದೋಣಿಯೂ ಎಲ್ಲರ ಪ್ರಾಣವನ್ನೂ ಉಳಿಸುವ ಜಾಣ ಯಜಮಾನನಾದ ಅಂಬಿಗನೂ ಎಲ್ಲವೂ ಸತ್ಯ ಸತ್ಯ ಎನ್ನುವಂತೆ ಮಗುವಿಗೆ ವಿವರಿಸುತ್ತೇವೆ. ಆದರೆ ಅದು ಕೇವಲ ಚಿತ್ರವೆಂದೂ ಅದರಲ್ಲಿರುವ ಯಾವುದೂ ನಿಜವಲ್ಲವೆಂದೂ ನಾವು ತಿಳಿದಿರುತ್ತೇವೆ. ಚಿತ್ರದಲ್ಲಿರುವ ದೇವರಂಥ ಅಂಬಿಗನು ಹೆಚ್ಚು ನಿಜವಲ್ಲ. ಅದರಲ್ಲಿರುವ ದೋಣಿಯಷ್ಟೇ ನಿಜ. ಮಿಕ್ಕ ಜನರೂ ನದಿಯೂ ಅವರ ಬದುಕೂ ಸಾವೂ ಎಲ್ಲಾ ಅಷ್ಟೇ ನಿಜ. ಅದೆಲ್ಲಾ ಚಿತ್ರವೆಂದು ತಿಳಿದಿರುವ ನಮಗೆ ಆ ಎಲ್ಲವೂ ಸುಳ್ಳು. ಆದರೆ ಆ ಮಗುವಿಗೆ ಮಾತ್ರ ಎಲ್ಲವೂ ನಿಜ.

ಹೀಗೆಯೇ ವೇದಾಂತದ ಪ್ರಕಾರ, ಚಿತ್ರದಲ್ಲಿ ದೋಣಿಗೂ ಅಂಬಿಗನಿಗೂ ಇರುವ ಸಂಬಂಧವೇ ಜಗತ್ತಿಗೂ ಸೃಷ್ಟಿಕರ್ತನಾದ ದೇವರಿಗೂ ಇದೆ. ದೋಣಿ ಇರುವವರೆಗೂ ಅಂಬಿಗನೂ ಇರಬೇಕು. ಜಗತ್ತು ಇರುವವರೆಗೂ ಜಗದೀಶ್ವರನೂ ಇರಬೇಕು. ದೋಣಿಯನ್ನು ನಾವು ಸುಳ್ಳೆಂದು ಅರಿತಾಗ ಅಂಬಿಗನೂ ಕಣ್ಮರೆ ಯಾಗುತ್ತಾನೆ.

ಇದೇ ರೀತಿಯಲ್ಲಿ ನಿಮಗೆ ಪ್ರಪಂಚವು ಸತ್ಯವಾಗಿರುವವರೆಗೂ ಈ ಪ್ರಪಂಚ ವನ್ನು ಸೃಷ್ಟಿಮಾಡಿರುವವನೂ ಸಂರಕ್ಷಿಸುತ್ತಿರುವವನೂ ನಿಯಂತ್ರಿಸುವವನೂ ಆಳುತ್ತಿರುವವನೂ ಆದ ಪರಮೇಶ್ವರನೂ ಸತ್ಯವಾಗಿರುತ್ತಾನೆ. ನಿಮಗೆ ಪ್ರಪಂಚವು ಸುಳ್ಳೆಂದು ತಿಳಿದಾಗ ಪರಮೇಶ್ವರನೂ ಸುಳ್ಳಾಗುತ್ತಾನೆ. ಸೃಷ್ಟಿಯು ಕಲ್ಪನೆಯು ಸೃಷ್ಟಿ ಕರ್ತನನ್ನೂ ಕಲ್ಪಿಸುತ್ತದೆ. ಯಾರು? ಏಕೆ? ಯಾವಾಗ? ಮೊದಲಾದ ಕಲ್ಪನೆಗಳೂ ಜೊತೆಗೂಡುತ್ತವೆ. ಪ್ರಪಂಚದ ಸೃಷ್ಟಿಕರ್ತ ಯಾರು? ಸೃಷ್ಟಿಯು ಆರಂಭ ಯಾವಾಗ? ಏತಕ್ಕಾಗಿ? ಮೊದಲಾದ ಕಲ್ಪನೆಗಳಿಗೂ ಪ್ರಪಂಚಕ್ಕೂ ಇರುವ ಸಂಬಂಧವು ಚಿತ್ರದಲ್ಲಿ ರುವ ಅಂಬಿಗನಿಗೂ ದೋಣಿಗೂ ಇರುವ ಸಂಬಂಧದಂತೆಯೇ ಇದೆ, ಆ ಎರಡೂ ಒಂದು ಇಡಿಯ ಚಿತ್ರದ ಭಾಗಗಳು. ಚಿತ್ರದ ದೋಣಿಗೂ ಅಂಬಿಗನಿಗೂ ಇರುವ ಬೆಲೆಯೇ ಮಾಯೂ ಚಿತ್ರದಲ್ಲಿರುಪ ಪ್ರಪಂಚಕ್ಕೂ ಪರಮೇಶ್ವರನಿಗೂ ಇದೆ. ಅದೂ ಭ್ರಮೆಯೇ ಇದೂ ಭ್ರಮೆಯೇ. ಏಕೆ? ಯಾವಾಗ? ಏತಕ್ಕಾಗಿ? ಎಂಬ ಪ್ರಶ್ನೆಗಳೂ ಭ್ರಮೆಯೇ ಈ ಪ್ರಶ್ನೆಯಲ್ಲಿ ದೋಣಿಯನ್ನು ನಡೆಸುವ ಅಂಬಿಗನಂತೆ ಪ್ರಪಂಚವನ್ನು ನಡೆಸುವ ಈಶ್ವರ. ನಿಮಗೆ ಎಚ್ಚರವಾಗಿ ಸತ್ಯವನ್ನರಿತರೆ ಇಡಿಯ ಜಗತ್ತು ಪರದೆಯ ಮೇಲೆ ಚಿತ್ರದಲ್ಲಿ ಬರೆದಿರುವ ದೋಣಿಯಂತೆ ಆಗಿ ಚಾಲಕ (ಅಂಬಿಗ) ವಾಗಿದ್ದ ಯಾರು, ಯಾವಾಗ, ಏತಕ್ಕಾಗಿ ಎಂಬ ಪ್ರಶ್ನೆಗಳು ಮಾಯವಾಗುತ್ತವೆ. ದೇಶ-ಕಾಲ-ನಿಮಿತ್ತ ಗಳನ್ನು ಮೀರಿ ಆಚೆ ಇರುವ ಸತ್ಯಸ್ವರೂಪದಲ್ಲಿ ಈ ಪ್ರಶ್ನೆಗಳೇ ಇಲ್ಲ. ಜಗತ್ತಿನ ಸೃಷ್ಟಿಗೆ ಸಗುಣೇಶ್ವರನು ಕಾರಣನೆಂದು ಅನೇಕ ಮತಧರ್ಮ, ಶಾಸ್ತ್ರಜ್ಞರು

ಹೇಳಬಹುದು. ವೇದಾಂತವು 'ನೇತಿ. ನೇತಿ' ಅಲ್ಲ, ಅಲ್ಲ ಎನ್ನುತ್ತದೆ. ಸಂಸ್ಕೃತದ ವೇದಾಂತ ಭಾಷೆಯಲ್ಲಿ ನೇತಿ ಎನ್ನುವ ಶಬ್ದವು ಪದೇ ಪದೇ ಅನೇಕಸಲ ಬರುತ್ತದೆ. ಇದು ಅಪಭ್ರಂಶವಾಗಿ ಅಮೇರಿಕಾ ಜನರಲ್ಲಿ 'Nit' (not that) ಅದಲ್ಲ ಎಂದಾಗಿದೆ. ದೇವರ ವಿಷಯದಲ್ಲಿ ಯಾವ ಪ್ರಶ್ನೆಗಳಿಗೂ ಅವಕಾಶವಿಲ್ಲ; ಯಾವ ಉತ್ತರವೂ ಸಾಧ್ಯವಿಲ್ಲವೆಂದು ನೇತಿ ನೇತಿ ಸೂಚಿಸುತ್ತದೆ.

ಇನ್ನು ಕೆಲವರು ತತ್ತ್ವವಿಚಾರಕರು "ದೇವರು ತನ್ನನ್ನು ತಾನು ಪ್ರೇಮಿಸಲು ತೊಡಗಿ ಈ ಪ್ರಪಂಚವನ್ನು ಸೃಷ್ಟಿ ಮಾಡಿದನು. ಈ ಪ್ರಪಂಚವನ್ನು ಕನ್ನಡಿಯ ಮನೆಯಂತೆ ಮಾಡಿಕೊಂಡು ಈ ಎಲ್ಲಾ ರೂಪಗಳಲ್ಲಿಯೂ ತನ್ನನ್ನೇ ತಾನು ನೋಡಿ ಕೊಳ್ಳುವದಕ್ಕಾಗಿ ದೇವರು ಈ ಜಗತ್ತನ್ನು ನಿರ್ಮಾಣ ಮಾಡಿದನು." ಎನ್ನುತ್ತಾರೆ.

ಇದಕ್ಕೂ ವೇದಾಂತವು 'ನೇತಿ, ನೇತಿ' ಅಲ್ಲ, ಅಲ್ಲ ಎನ್ನುತ್ತದೆ; 'ಆ ಬಗೆಯ ಕಲ್ಪನೆ ಮಾಡುವುದಕ್ಕೆ ನಿಮಗೆ ಅಧಿಕಾರವಿಲ್ಲ,' ಎನ್ನುತ್ತದೆ.

ಇನ್ನೊಬ್ಬ ಮನುಷ್ಯನು ಬಂದು 'ಈ ಪ್ರಪಂಚವು ಇಷ್ಟು ಕೋಟಿ ವರ್ಷಗಳ ಹಿಂದೆ ಸೃಷ್ಟಿಯಾಯಿತು' ಎನ್ನಬಹುದು. ಇದಕ್ಕೂ ವೇದಾಂತವು 'ನೇತಿ, ನೇತಿ, ಅದಲ್ಲ, ಅದಲ್ಲ—ಎನ್ನುತ್ತದೆ. 'ಏಕೆ?', ಎನ್ನುವುದರ ನಿಜವಾದ ಅರ್ಥ ಮಾಯಾ. ಮಾಯಾ ಎಂದರೆ, ಮಾ=ಅಲ್ಲ; ಯಾ=ಯಾವದು; ಯಾವದು ಅಲ್ಲವೋ ಅದು ಮಾಯಾ. ಅಥವಾ ಮಾಯಾ ಎಂದರೆ ಅದಲ್ಲ. ಪ್ರಶ್ನೆಯಿರುವದು ರೂಪಿಸುವದಕ್ಕೆ ಸಾಧ್ಯವಿಲ್ಲದಂತೆ. ಯಾವ ಪ್ರಶ್ನೆಯನ್ನು ಹೇಗೆ ರೂಪಿಸಿದರೂ ವೇದಾಂತವು ಅದನ್ನು ಮಾಯಾ(ಅದಲ್ಲ) ನೇತಿ(ಅದಲ್ಲ) ಎನ್ನುತ್ತದೆ. "ಪ್ರಪಂಚವು ಸತ್ಯವೆ?" ಎನ್ನುವ ಪ್ರಶ್ನೆಗೆ ವೇದಾಂತವು ನೇತಿ, ಮಾಯಾ, ಅದಲ್ಲ, ಅದಲ್ಲ ಎನ್ನುತ್ತದೆ. ಪ್ರಪಂಚವನ್ನು ಸತ್ಯವೆನ್ನಲಾಗುವದಿಲ್ಲ. ಏಕೆಂದರೆ, ಹಿಂದೂ ಇಂದೂ ಮುಂದೂ ಎಂದೆಂದೂ ಒಂದೇ ಬಗೆಯಾಗಿರುವದೇ ಸತ್ಯವೆನಿಸುತ್ತದೆ. ಪ್ರಪಂಚವು ಹಾಗಿರುವುದಿಲ್ಲ; ಪ್ರತಿ ಕ್ಷಣದಲ್ಲಿಯೂ ಬದಲಾಯಿಸುತ್ತಿರುತ್ತದೆ, ಆದ್ದರಿಂದ ಸತ್ಯದ ವಿವರಣೆಗೆ ಅದು ಅನುಗುಣವಾಗಿಲ್ಲವಾದ್ದರಿಂದ ಸತ್ಯವಲ್ಲ. ನಿಮ್ಮ ಗಾಢ ನಿದ್ರೆಯಲ್ಲಿ ಅದು ಇರುವದಿಲ್ಲ. ಸತ್ಯಾನುಭವದಲ್ಲಿಯೂ ಪೂರ್ಣತೆಯಲ್ಲಿಯೂ ಮುಕ್ತ ಸ್ಥಿತಿಯಲ್ಲಿಯೂ ಪ್ರಪಂಚವು ಮಾಯವಾಗುತ್ತದೆ. ಆದ್ದರಿಂದ ಅದನ್ನು ಸತ್ಯವೆಂದು ಕರೆಯುವದಕ್ಕೆ ನಿಮಗೆ ಅಧಿಕಾರವಿಲ್ಲ. ಹಾಗಾದರೆ, "ಪ್ರಪಂಚವು ನಿಜವಲ್ಲ ಮಿಥ್ಯಾ" ಅಲ್ಲವೆ? ಎಂದರೆ, ವೇದಾಂತವು ಇದಕ್ಕೂ ನೇತಿ, ನೇತಿ, ಮಾಯಾ-ಹೀಗೂ ಅಲ್ಲ, ಹೀಗೂ ಅಲ್ಲ, ಹಾಗೂ ಅಲ್ಲ,—ಎನ್ನುತ್ತದೆ. ಇದು ಬಹಳ ವಿಲಕ್ಷಣವಾಗಿ ತೋರಬಹುದು. ಏಕೆಂದರೆ ಪ್ರಪಂಚವು ಅಸತ್ಯವೂ ಅಲ್ಲ ಎಂದು ವೇದಾಂತವು ಹೇಳುತ್ತದೆ. ಅಸತ್ಯವೆಂದರೆ ಎಂದೆಂದಿಗೂ ಇಲ್ಲದಿರುವುದು; ಮೊಲದ ಕೊಂಬು ಅಥವಾ ಮನುಷ್ಯನ ಕೊಂಬಿನಂತೆ ಎಂದೆಂದಿಗೂ ಇಲ್ಲದಿರುವದೇ ವೇದಾಂತ ಭಾಷೆಯಲ್ಲಿ ಅಸತ್ಯವೆನಿಸುತ್ತದೆ.

ದನಗಳಿಗೆ ಕೊಂಬಿರುವಂತೆ ಮನುಷ್ಯನಿಗೆ ಎಲ್ಲಿಯಾದರೂ ಎಂದಾದರೂ ಕೊಂಬಿರುವ ದುಂಟೆ? ಎಂದಿಗೂ ಇಲ್ಲ. ಆದ್ದರಿಂದ ಅದು ಅಸತ್ಯ. ಆ ಅರ್ಥದಲ್ಲಿ ಪ್ರಪಂಚವು ಅಸತ್ಯವಲ್ಲಃ ಏಕೆಂದರೆ, ಪ್ರಪಂಚವು ಇರುವಂತೆ ಈಗ ನಿಮಗೆ ತೋರುತ್ತಿದೆ. ಆದ್ದರಿಂದ ಅದನ್ನು ಅಸತ್ಯವೆಂದು ಕರೆಯುವುದಕ್ಕೆ ನಿಮಗೆ ಅಧಿಕಾರವಿಲ್ಲ. ಈಗ "ಪ್ರಪಂಚವು ಸತ್ಯವೆ?" ಎಂಬ ಪ್ರಶ್ನೆಗೆ ವೇದಾಂತವು ನೇತಿ, ನೇತಿ ಅನ್ನುತ್ತದೆ. ಹಾಗಾದರೆ, "ಪ್ರಪಂಚವು ಅಸತ್ಯವೆ?" ಎನ್ನುವ ಪ್ರಶ್ನೆಗೂ ವೇದಾಂತವು ನೇತಿ, ನೇತಿ ಎನ್ನುತ್ತದೆ. ಹಾಗಾದರೆ "ಪ್ರಪಂಚವು ಭಾಗಶಃ ಸತ್ಯವಾಗಿಯೂ ಭಾಗಶಃ ಅಸತ್ಯವಾಗಿಯೂ ಇರಬಹುದೆ?" ಎಂದರೆ, ಅದಕ್ಕೂ ವೇದಾಂತವು 'ಮಾಯಾ, ನೇತಿ, ನೇತಿ' ಅದು ಕೂಡ ಅಲ್ಲ-ಎನ್ನುತ್ತದೆ. ಏಕೆಂದರೆ ಅಸತ್ಯವೂ ಸತ್ಯವೂ ಕೂಡಿ ಇರಲಾರವು. ಒಂದೇ ವಸ್ತುವು ಅಸತ್ಯವಾಗಿಯೂ ಸತ್ಯವಾಗಿಯೂ ಕೂಡ ಇರಲಾರದು. ಈ ಪ್ರಶ್ನೆಗಳಿಗೆ ವೇದಾಂತವು ಕೊಡುವ ಈ ಬಗೆಯ ಉತ್ತರ ಗಳಿಗೇ ಮಾಯಾವಾದ ಎನ್ನುವದು. ಇದಕ್ಕೆ ಮಿಥ್ಯಾ ಎನ್ನುವ ಇನ್ನೊಂದು ಹೆಸರೂ ಇದೆ. ಇದು ನಿಮ್ಮ ಮೈಥಾಲೊಜಿ(Mythology)—ಪುರಾಣ—ಎಂಬ ಶಬ್ದಕ್ಕೆ ಸಜಾತೀಯುವಾದುದು. ಮಾಯಾ ಅಥವಾ ಮಿಥ್ಯಾ ಎಂದರೆ, ನಿಜವೆಂದೂ ನಿಜವಲ್ಲ ಎಂದೂ(ಸತ್ಯವೆಂದೂ ಅನೃತವೆಂದೂ) ನಿಜವಾಗಿಯೂ ಸುಳ್ಳಾಗಿಯೂ ಕೂಡ ಇದೆ ಯೆಂದೂ (ಸತ್ಯವೂ ಅನೃತವೂ ಕೂಡ ಆಗಿದೆಯೆಂದೂ) ಹೇಳುವದಕ್ಕೆ ಬಾರದ ವಸ್ತು, ಹೀಗಿದೆ ನಿಮ್ಮ ಪ್ರಪಂಚ.

ನಾಸ್ತಿಕರು ದೇವರಿಲ್ಲ ಎನ್ನುತ್ತಾರೆ. ವೇದಾಂತವು ನೇತಿ, ನೇತಿ ಮಾಯಾ—ಅದು ನಿಜವಲ್ಲ; ಅವರು ಹೇಳುವದು ತಪ್ಪು; ಏಕೆಂದರೆ ಅವರು ಹಾಗೆ ಹೇಳು ವದಕ್ಕೆ ಸರಿಯಾದ ಕಾರಣವೂ ಯುಕ್ತಿಯೂ ಇಲ್ಲ ಎಂದು ಹೇಳುತ್ತದೆ. ಕೆಲವರು ಸೃಷ್ಟಿ ಕರ್ತನಾದ ಸಗುಣೇಶ್ವರನಿದ್ದಾನೆಂದು ಹೇಳುತ್ತಾರೆ. ಅದಕ್ಕೂ ವೇದಾಂತವು ನೇತಿ, ನೇತಿ—ಅದಲ್ಲ ಎನ್ನುತ್ತದೆ. ವೇದಾಂತವು ಹೇಳುವದೇನೆಂದರೆ, "ಆ ಬಗೆಯ ಹೇಳಿಕೆಯನ್ನು ಕೊಡುವದಕ್ಕೆ ನಿಮಗೆ ಅಧಿಕಾರವಿಲ್ಲ. ನೀವು ಕಾಲಿಡಬಾರದ ರಾಜ್ಯ ವಿದು. ಈ ರಾಜ್ಯದಲ್ಲಿ ನಿಮ್ಮ ಬುದ್ಧಿಯನ್ನು ಉಪಯೋಗಿಸಲಾರಿರಿ. ಈ ಪ್ರಪಂಚ ದಲ್ಲಿ ನಿಮ್ಮ ಬುದ್ಧಿಯು ಮಾಡುವದಕ್ಕೆ ಸಾಕಷ್ಟು ಕೆಲಸವಿದೆ. ಅಲ್ಲಿ ಅದು ಕಾರು ಬಾರು ಮಾಡಲಿ. "ಸೀಜರನಿಗೆ ಕೊಡಬೇಕಾದ ವಸ್ತುಗಳನ್ನು ಸೀಜರನಿಗೆ ಕೊಡಿ; ದೇವರಿಗೆ ಸಲ್ಲಿಸಬೇಕಾದುದನ್ನು ದೇವರಿಗೆ ಸಲ್ಲಿಸಿ." ಭೌತಿಕ ಭೂಮಿಕೆಯ ಮೇಲೆ, ವ್ಯವಹಾರ ರಾಜ್ಯಗಳಲ್ಲಿ ನಡೆಸಲು ನಿಮ್ಮ ಬುದ್ಧಿಗೆ ಬೇಕಾದಷ್ಟು ಕೆಲಸವಿದೆ. ಆದರೆ ಭೌತಾತೀತವಾದ ರಾಜ್ಯಗಳಲ್ಲಿ ನೀವು ಒಂದೇ ಒಂದು ಮಾರ್ಗದಿಂದ ಬರಬೇಕು. ಆ ಒಂದು ಮಾರ್ಗವೇ ಅನುಭಾವ ಮಾರ್ಗ, ಪ್ರೇಮ ಮಾರ್ಗ, ಭಾವನಾಮಾರ್ಗ, ಶ್ರದ್ಧಾ, ಹೆಚ್ಚು ನಿಜವಾಗಿ, ಯುಕ್ತವಾಗಿ, ಖಚಿತವಾಗಿ ಹೇಳಬೇಕೆಂದರೆ ಅದು

ಜ್ಞಾನ ಮಾರ್ಗ—ಅದು ವಿಲಕ್ಷಣ ಬಗೆಯ ಜ್ಞಾನ, ವಿಲಕ್ಷಣ ಬಗೆಯ ಪರಮಾತ್ಮ ಪ್ರಜ್ಞೆ. ಸರಿಯಾದ ಹಾದಿಯಿಂದ ಈ ಪ್ರಾಂತ್ಯಕ್ಕೆ ಬಂದೊಡನೆ ಎಲ್ಲಾ ಪ್ರಶ್ನೆಗಳೂ ನಿಲ್ಲುತ್ತವೆ, ಎಲ್ಲಾ ಸಮಸ್ಯೆಗಳೂ ಪರಿಹಾರವಾಗುತ್ತವೆ. ಸಾಮ ವೇದದ ಕೇನೋಪನಿಷತ್ತಿನಲ್ಲಿ ಹೇಳಿರುವದೇನೆಂದರೆ,

ಯಸ್ಯಾಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ ।
ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್ ॥೨-೩॥

ಯಾವನಿಗೆ (ಬ್ರಹ್ಮವನ್ನು ಅರಿತಿದ್ದೇನೆಂಬ) ತಿಳಿವಳಿಕೆ ಇಲ್ಲವೋ ಅವನಿಗೆ ತಿಳಿದಿದೆ. ಯಾವನಿಗೆ (ಬ್ರಹ್ಮವನ್ನು ಅರಿತಿದ್ದೇನೆಂಬ) ತಿಳುವಳಿಕೆ ಇದೆಯೋ ಅವನಿಗೆ ತಿಳಿದಿಲ್ಲ, ತಿಳಿದವರಿಗೆ ತಿಳಿಯದೆ ಇರುತ್ತದೆ; ತಿಳಿಯದವರಿಗೆ ತಿಳಿದಿರುತ್ತದೆ.

ಈಗಿನ ಕಾಲದ ವಿಚಾರಕರಾದರೂ ನಿಖರವಾಗಿ ಹೀಗೆಂದೇ ಹೇಳುವರು. ಹರ್ಬರ್ಟ್‌ಸ್ಪೆನ್ಸರ್ ಮಹಾಶಯನು ತನ್ನ "First principles" ಎನ್ನುವ ಗ್ರಂಥದ "The Unknowable" "ಅಜ್ಞೇಯ" ಎನ್ನುವ ಪ್ರಥಮ ಭಾಗದಲ್ಲಿ ವೇದಾಂತ ಸಿದ್ಧಾಂತದ ತೀರ್ಮಾನಕ್ಕೆ ಬರುತ್ತಾನೆ. ಅವನು ಏನು ಹೇಳುತ್ತಾನೆಂಬದನ್ನು ರಾಮನು ನಿಮಗೆ ಓದಿಹೇಳಬೇಕಾಗಿಲ್ಲ. ಆದರೆ ಆ ಕೃತಿಯ ಒಂದು ಸಣ್ಣ ಉದ್ಧೃತ ಭಾಗವನ್ನು ಓದಿ ಹೇಳಬಹುದು. "ವಿಜ್ಞಾನ ಶಾಸ್ತ್ರಕ್ಕೆ ಆಧಾರವಾಗಿರುವದರಿಂದ ವಿಜ್ಞಾನ ಶಾಸ್ತ್ರದಿಂದ ಸ್ಥಾಪನೆಮಾಡಲಾಗದ ಯಾವದೋ ಒಂದು ತತ್ತ್ವವಿರಬೇಕು. ತರ್ಕಬದ್ಧವಾದ ವಿಚಾರದಿಂದ ಸಾಧಿಸಲ್ಪಟ್ಟ ಎಲ್ಲಾ ನಿರ್ಣಯಗಳಿಗೂ (ಅವು ಯಾವುವೇ ಇರಲಿ)- ತರ್ಕ ಸೌಕರ್ಯಕ್ಕಾಗಿ ಮೊದಲೇ ಅಂಗೀಕರಿಸಲ್ಪಟ್ಟ-ಒಂದು ಆಧಾರ ಪ್ರತಿಜ್ಞೆಯು (ಒಂದು ಆಧಾರ ಕಲ್ಪನೆಯು) ಇರಲೇಬೇಕು. ಎಲ್ಲಿ ಬುದ್ಧಿಯು ಪ್ರವರ್ತಿಸಲು ಸಾಹಸ ಮಾಡಲಾಗದೋ, ಸಾಹಸ ಮಾಡಲಾರದೋ ಅಂಥಾ ಅಜ್ಞೇಯದ ಪ್ರಾಂತವನ್ನು (Region of the Unknowable) ನಾವು ಸಂಧಿಸುವ ಸ್ಥಳವೊಂದಿರಬೇಕು."

ಎಲ್ಲಾ ತತ್ತ್ವಶಾಸ್ತ್ರಜ್ಞರೂ ಈ ವಿಷಯದ ಮೇಲೆ ಇದೇ ಅಭಿಪ್ರಾಯವನ್ನು ಕೊಡುವ ಏನನ್ನಾದರೂ ಹೇಳಿರುತ್ತಾರೆ. ಸ್ವಲ್ಪ ಗಮನವಿಟ್ಟು ವಿಚಾರಮಾಡಿ. "ದೇವರು ಇದನ್ನು ಮಾಡಿರಬೇಕು, ದೇವರಿಗೆ ಈ ಉದ್ದೇಶಗಳಿರಬೇಕು, ದೇವರಿಗೆ ಕರುಣೆಯಿರಬೇಕು, ಪ್ರೇಮವಿರಬೇಕು, ದೇವರು ಎಲ್ಲರಿಗೂ ಒಳ್ಳೆಯದನ್ನು ಮಾಡಬೇಕು, ಅವನಲ್ಲಿ ಈ ಗುಣಗಳಿರಬೇಕು ಅಥವಾ ಆ ಗುಣಗಳಿರಬೇಕು" ಎಂದು ಜನರು ಹೇಳುವಾಗ ಎಂಥಾ ಹುಚ್ಚು ತಪ್ಪುಗಳನ್ನು ಮಾಡುತ್ತಾರೆ! ಏಕೆಂದರೆ, ಹೀಗಿರಬೇಕು, ಹಾಗಿರಬೇಕು, ಎನ್ನುವ ಎಲ್ಲಾ ವರ್ಣನೆಯೂ ವಿವರಣೆಯೂ ವರ್ಗೀಕರಣವೂ ದೇವರ ಮೇಲೆ ಪರಿಮಿತಿಯನ್ನು ಹೇರುತ್ತವೆ. ದೇವರು ಅಪರಿಮಿತನೆಂದು ಹೇಳಿದ ಉಸಿರಿನಲ್ಲಿಯೇ ಪರಿಮಿತನೆಂದೂ ಹೇಳುತ್ತೀರಿ, ಅವನು ಅನಂತ

ಎಂದೂ ಹೇಳಿ, ಅವನಲ್ಲಿ ಇಂಥಾ ಗುಣಗಳಿವೆ; ಅಂಥಾ ಗುಣಗಳಿವೆ ಎಂದೂ ಹೇಳುತ್ತೀರಿ. ಅವನು ಒಳ್ಳೆಯವನು ಎಂದ ಕೂಡಲೇ ಅವನು ಕೆಟ್ಟವನಲ್ಲ ಎಂದಂತಾಯಿತು. ಹಾಗಾದರೆ ಅವನು ಪರಿಮಿತನಾದ, ಸಾಂತನಾದ, ಸೀಮಿತನಾದ. ಕೆಟ್ಟದ್ದು ಇರುವಲ್ಲಿ ಒಳ್ಳೆಯದು ಇರುವದಿಲ್ಲ, ಅವನು ಸೃಷ್ಟಿಕರ್ತನೆಂದು ಹೇಳಿದೊಡನೆಯೇ ಅವನು ಸೃಷ್ಟವಾದವನಲ್ಲ ಎಂದು ಅವನನ್ನು ಸೀಮಿತಮಾಡುತ್ತಿರಿ. ಅದರಿಂದ ಅವನಿಲ್ಲದ ಸ್ಥಳವನ್ನು ನೀವು ಬೆಟ್ಟಿಟ್ಟು ತೋರಿಸಿದಂತಾಗುತ್ತದೆ. ಆದರೆ ಸರ್ವವೂ ಅವನೇ ಆಗಿದ್ದಾನೆ. ಮತ್ತೇನೆಂದರೆ, ಇಂಥಾ ಉದ್ದೇಶದಿಂದ ಅಥವಾ ಅಂಥಾ ಉದ್ದೇಶದಿಂದ ದೇವರು ಜಗತ್ತನ್ನು ಸೃಷ್ಟಿಮಾಡಿದನೆಂದು ನೀವು ಹೇಳುವದಾದರೆ, ನ್ಯಾಯಾಧೀಶನ ಎದುರಿಗೆ ಬಂದು ನಿಂತು ತಾನು ಮಾಡಿದ ಕೆಲಸದ ವಿವರಣೆ ನೀಡುವ ಒಬ್ಬ ಮನುಷ್ಯನಂತೆ ದೇವರನ್ನೂ ತಾನು ಮಾಡಿದ ಕೆಲಸದ ವಿವರಣೆ ಕೊಡುಬಹುದಾದ ಒಬ್ಬ ಸಾಮಾನ್ಯ ಮನುಷ್ಯನನ್ನಾಗಿ ಮಾಡುತ್ತೀರಿ. ಹೀಗೆಯೇ ದೇವರಿಗೆ ಯಾವದಾದರೂ ಸಂಕಲ್ಪಗಳನ್ನೂ ಉದ್ದೇಶಗಳನ್ನೂ ಇಚ್ಛೆಗಳನ್ನೂ ಯೋಜನೆಗಳನ್ನೂ ಆರೋಪಿಸಿ ಯಾವದಾದರೂ (ಸೃಷ್ಟಿ ಮೊದಲಾದ) ಕಾರ್ಯಗಳಿಗೆ ಹೊಣೆಗಾರನನ್ನಾಗಿ ಹಿಡಿಯುವದಾದರೆ, ವಾಸ್ತವವಾಗಿಯೂ ನಿಮ್ಮನ್ನು ನೀವು ಮ್ಯಾಜಿಸ್ಟ್ರೇಟ್ ಆಗಿಯೂ (ನ್ಯಾಯಾಧಿಪರನನ್ನಾಗಿಯೂ) ದೇವರನ್ನು-ನಿಮ್ಮೆದುರಿಗೆ ಬಂದು ತಾನು ಮಾಡಿದ ಕೆಲವು ಕಾರ್ಯಗಳಿಗಾಗಿ ಹೇಳಿಕೆ ಕೊಡಬೇಕಾಗಿರುವ-ಆರೋಪಿಯನ್ನಾಗಿಯೂ ಮಾಡಿಕೊಳ್ಳುತ್ತೀರಿ. ಈ ನಿಮ್ಮ ಹುಚ್ಚು ಕಲ್ಪನೆಯಲ್ಲಿ ದೇವರ ಗತಿ ಏನಾಗುತ್ತದೆ? ನಿಮ್ಮ ದೇವರಲ್ಲಿ ಏನಾದರೂ ದೇವತ್ವವನ್ನು ಉಳಿಸಿದ್ದೀರಾ ಎಂಬುದನ್ನೂ ವಿಚಾರಮಾಡಿ. ಆದ್ದರಿಂದ ವೇದಾಂತವು ಹೇಳುವದೇನೆಂದರೆ, "ದೇವರನ್ನು ನಿಮ್ಮ ನಾಯಸ್ಥಾನದೆದುರಿಗೆ ತರಲು ನಿಮಗೆ ಅಧಿಕಾರವಿಲ್ಲ. ಈ ಹುಚ್ಚು ಪ್ರಶ್ನೆಯನ್ನು ಬಿಟ್ಟುಬಿಡಿರಿ, ಇದು ನ್ಯಾಯ ಸಮ್ಮತವಲ್ಲ ಇದು ನ್ಯಾಯವಿರುದ್ಧ, ಅನುಚಿತ."

ಯಾವನೊಬ್ಬ ವಿಶಿಷ್ಟ ವ್ಯಕ್ತಿಯ ದಾಸ್ಯಕ್ಕೆ ಒಳಗಾಗದಿರುವದು ಎನ್ನುವದೇ ವೇದಾಂತದ ಅರ್ಥ. ಮಹಮದ್ ಎನ್ನುವ ಶಬ್ದವು ಮಹಮದ್ ಎಂಬ ವ್ಯಕ್ತಿಯ ಹೆಸರನ್ನು ಅವಲಂಬಿಸಿದೆ. ಮಹಮ್ಮದನು ಹೇಗೇ ನಡೆದಿರಲಿ, ಏನನ್ನೇ ನುಡಿದಿರಲಿ ಅದನ್ನು ನಾವು ನಂಬಬೇಕು. ಕ್ರಿಶ್ಚಿಯಾನಿಟಿ ಎಂಬ ಶಬ್ದವು ಕ್ರಿಸ್ತನ ಹೆಸರಿಗೆ ಗುಲಾಮರಾಗಿರಬೇಕೆಂಬುದನ್ನು ಸೂಚಿಸುತ್ತದೆ. "ಬುದ್ಧಿಸಂ" ಎಂಬ ಶಬ್ದವೂ ಬುದ್ಧನ ಹೆಸರಿಗೆ ದಾಸ್ಯವಾಗಿದೆ. "ಜೋರೋಸ್ಟ್ರಿಯಾನಿಸಂ" ಎಂಬ ಹೆಸರೂ ಜೋರೋಸ್ಟರ್ ಎಂಬ ವ್ಯಕ್ತಿಯ ದಾಸ್ಯವನ್ನು ಹೇಳುತ್ತದೆ. ಆದರೆ ವೇದಾಂತ ಎನ್ನುವ ಶಬ್ದವು ಯಾವದೊಂದು ವ್ಯಕ್ತಿಯ ಅಥವಾ ಪುರುಷನ ದಾಸ್ಯವನ್ನೂ ಸೂಚಿಸುವದಿಲ್ಲ. ವೇದಾಂತ ಎನ್ನುವ ಶಬ್ದಕ್ಕೆ ಜ್ಞಾನದ ಅಂತ್ಯ, ಜ್ಞಾನದ ಸೀಮಾ, ಜ್ಞಾನದ ಪರಮ

ಸೀಮಾ ಎನ್ನುವದೇ ಅರ್ಥ. ವೇದಾಂತವೆಂದರೆ ಸತ್ಯ ; ಆದ್ದರಿಂದ ವೇದಾಂತದಲ್ಲಿ ಯಾವ ಜಾತಿ-ಮತ-ಪಂಥಗಳ ಅಭಿಮಾನವೂ ಇಲ್ಲ. ಅದು ವಿಶ್ವವ್ಯಾಪಿಯೂ ವಿಶ್ವಸಂಬಂಧಿಯೂ ವಿಶ್ವಸಮ್ಮತವೂ ಸಾರ್ವತ್ರಿಕವೂ ಆದುದು. ಅದು ನಿಮಗೆ ಅಪರಿಚಿತವಾದ ಹೆಸರಾದ್ದರಿಂದ ಅದರ ವಿಷಯದಲ್ಲಿ ಅವಿಶ್ವಾಸವನ್ನಾಗಲೀ ವಿರೋಧಾಭಿಪ್ರಾಯವನ್ನಾಗಲೀ ಇಟ್ಟುಕೊಳ್ಳಬೇಡಿ. ಹಿಂದೂಗಳು ತಿಳಿದಿರುವ ಮತ್ತು ಉಪದೇಶಿಸುವ ಸತ್ಯವೇ ವೇದಾಂತ ಎಂದು ನೀವು ಅದನ್ನು ಕರೆಯಬಹುದು. ಜರ್ಮನಿಯಲ್ಲಿ ಆಗಲಿ, ಅಮೇರಿಕಾದಲ್ಲಿ ಆಗಲಿ ಸತ್ಯವನ್ನು ಎಲ್ಲಿಯೇ ಶೋಧಿಸಿದರೂ ಒಂದೇ ಸಿದ್ಧಾಂತಕ್ಕೆ ಬರುತ್ತದೆ ಎಂಬುದು ನಿಮಗೆ ಗೊತ್ತಿದೆ. ಸೂರ್ಯನನ್ನು ಮನುಷ್ಯನು ಎಲ್ಲಿಯೇ ನೋಡಲಿ, ಅದು ಪ್ರಕಾಶಮಾನವಾಗಿಯೂ ಜಾಜ್ವಲ್ಯವಾಗಿಯೂ ಇದೆಯೆಂದೇ ಕಾಣುತ್ತದೆ. ಯಾರೇ ಆಗಲಿ, ತಮ್ಮ ಪೂರ್ವ ಕಲ್ಪಿತ ಅಭಿಪ್ರಾಯಗಳನ್ನು ಗಾಳಿಗೆ ತೂರಿ ಬಿಡುಬಿಚ್ಚಾದ ಮನಸ್ಸಿನಿಂದ ವೇದಾಂತವು ತಿಳಿಸಿದಂತೆ ವಿಚಾರ ಮಾಡಿದ್ದಾದರೆ ಆ ಶಾಸ್ತ್ರದ ಸಿದ್ಧಾಂತಗಳನ್ನು ಒಪ್ಪಿಕೊಂಡೇ ಒಪ್ಪಿಕೊಳ್ಳುತ್ತಾನೆ. ನಿಮ್ಮ ಪೂರ್ವಾಗ್ರಹಗಳನ್ನೂ ಪಕ್ಷಪಾತಗಳನ್ನೂ ಪೂರ್ವಕಲ್ಪಿತಭಾವಗಳನ್ನೂ ಉದಾರವಾಗಿ ವರ್ಜಿಸಿ, ಸ್ವತಂತ್ರವಾಗಿಯೂ ಬಿಡುಬಿಚ್ಚಾಗಿಯೂ ಈ ಪ್ರಶ್ನೆಗಳನ್ನು ವಿಚಾರಮಾಡಿದರೆ, ವೇದಾಂತ ವಿಚಾರ ಸರಣಿಯನ್ನೇ ನಿಮ್ಮ ವಿಚಾರ ಸರಣಿಯನ್ನಾಗಿಯೂ ಅದರ ಯುಕ್ತಿವಾದಗಳನ್ನೇ ನಿಮ್ಮ ಯುಕ್ತಿ-ವಾದಗಳನ್ನಾಗಿಯೂ ವೇದಾಂತ ವಿಜ್ಞಾನವನ್ನೇ ನಿಮ್ಮ ವಿಜ್ಞಾನದ ನಿಶ್ಚಿತಾರ್ಥವನ್ನಾಗಿಯೂ ಕಾಣುತ್ತೀರಿ.

೭೩. ಹೊರಗಿನ ಭ್ರಮೆ-ಒಳಗಿನ ಸಹಜವಾದ ಭ್ರಮೆ

(ಬಾಲಕ ಮತ್ತು ಸರ್ಪ)

ಈಗ ರಾಮನು ನಿಮಗೆ, ಹಿಂದೂಗಳು, ತಮ್ಮ ಪ್ರಾಚೀನಶಾಸ್ತ್ರಗಳಲ್ಲಿ ಈ ಮಾಯಾ ಸಮಸ್ಯೆಯನ್ನು ಹೇಗೆ ನಿರೂಪಿಸಿ ವಿವರಿಸಿದ್ದಾರೆಂಬುದನ್ನು ತಿಳಿಸುತ್ತಾನೆ. ಅದನ್ನವರು ವ್ಯವಹಾರ ಸಮ್ಮತವಾಗಿಯೂ ಪ್ರಯೋಗ ಸಾಧ್ಯವಾಗಿಯೂ ವಿವರಿಸಿದ್ದಾರೆ. ಮಾಯೆಯನ್ನು ಅವರು ಅನಿರ್ವಚನೀಯ ಎಂದು ಕರೆದಿದ್ದಾರೆ. ಪರಿಮಿತವಾದ ಅರ್ಥದಲ್ಲಿ ಇದು 'ಭ್ರಾಂತಿ' ಎನಿಸುತ್ತದೆ. ಅನಿರ್ವಚನೀಯ ಎಂದರೆ ವಿವರಣೆಯು ಸಾಧ್ಯವಿಲ್ಲದ್ದು ಎಂದು. ಯಾವದನ್ನು ನಿಜ ಎನ್ನುವದಕ್ಕಾಗಲೀ ಸುಳ್ಳು ಎನ್ನುವದಕ್ಕಾಗಲೀ ನಿಜ-ಸುಳ್ಳುಗಳ ಒಟ್ಟು ಎನ್ನುವದಕ್ಕಾಗಲೀ ಬರುವದಿಲ್ಲವೊ ಅದೇ ಅನಿರ್ವಚನೀಯ. ಇಡಿಯ ಜಗತ್ತು ಮಾಯೆ, ಅಥವಾ ಭ್ರಾಂತಿ. ಈ ಭ್ರಾಂತಿಯು ಎರಡು ಬಗೆಯಾಗಿದೆ. ಇದನ್ನು ಬಾಹ್ಯಸ್ಥ (Extrinsic) ಎಂದೂ ಅಂತಸ್ಥ (Intrinsic)-ಸಹಜ-ಎಂದೂ ಎರಡು ಬಗೆ ಎನ್ನಬಹುದು.

ಮಬ್ಬುಗತ್ತಲೆಯಲ್ಲಿ ನೀವು ಒಂದು ಹಾವನ್ನು ಕಂಡು ಹೌಹಾರಿ, ಓಡಿ, ಬಿದ್ದು ನೋವು ಮಾಡಿಕೊಳ್ಳುತ್ತೀರಿ—ಎಂದಿಟ್ಟುಕೊಳ್ಳೋಣ. ಹಾವನ್ನು ಕಂಡರೆ ಸಾವನ್ನೇ ಕಂಡಂತೆ ಭಯವಾಗುವದು ಸ್ವಾಭಾವಿಕ. ಆದರೆ ಸ್ವಲ್ಪ ಹೊತ್ತಿನ ಮೇಲೆ ಧೈರ್ಯ ತಂದುಕೊಂಡು ದೀಪವನ್ನು ಒಯ್ದು ನೋಡಿದರೆ ಅಲ್ಲಿ ಹಾವಿರದೆ ಹಗ್ಗವಿರುತ್ತದೆ. ಆಗ ನೀವು, ಹಾವನ್ನು ಕಂಡಾಗ ನಡುಗಿ, ಎಡವಿ ಬಿದ್ದದ್ದನ್ನು ನೆನೆಸಿಕೊಂಡು ನಾಚಿಕೆ ಪಡುತ್ತೀರಿ ಅಥವಾ ನಗುತ್ತೀರಿ. ಈಗ ಪ್ರಶ್ನೆಯೇನೆಂದರೆ, ಮೊದಲು ಹೆದರಿದಾಗ ಕಂಡ ಹಾವು ಏನಾಗಿತ್ತು ? ಆ ಹಾವು ನಿಜವಾಗಿತ್ತೆ ? ಆ ಹಾವು ನಿಜವಲ್ಲವೆಂದು ವೇದಾಂತವು ಹೇಳುತ್ತದೆ, ಏಕೆಂದರೆ, ಅನಂತರ ದೀಪವನ್ನು ಒಯ್ದು ನೋಡಿದಾಗ ಅಲ್ಲಿ ಹಾವು ಇರಲಿಲ್ಲ. ಹಾಗಾದರೆ ಆ ಹಾವು ಸುಳ್ಳೆ ? ವೇದಾಂತವು ಅಲ್ಲ, ಅಲ್ಲ ಎನ್ನುತ್ತದೆ. ಏಕೆಂದರೆ, ಹಾವು ಸುಳ್ಳಾಗಿದ್ದರೆ, ನಿಮಗೆ ಅದು ಕಾಣುತ್ತಿರಲಿಲ್ಲ ; ನೀವು ಹೆದರಿ, ಓಡಿ, ಎಡವಿ ಬಿದ್ದು ಗಾಯ ಹೊಂದುತ್ತಿರಲಿಲ್ಲ. ಆದ್ದರಿಂದ ಅದು ಸುಳ್ಳು ಎನ್ನುವದಕ್ಕೂ ನಿಮಗೆ ಅಧಿಕಾರವಿಲ್ಲ. ಆ ಹಾವು ಭ್ರಾಂತಿ ಜನ್ಯವಾದುದು. ಭ್ರಾಂತಿಯು ನಿಜವಲ್ಲ ; ಅಥವಾ ಸುಳ್ಳೂ ಅಲ್ಲ. ಏಕೆಂದರೆ ಅನೃತವೆಂದರೆ ಎಂದೂ ಇಲ್ಲದಿರುವದು, ಅಥವಾ ಇದ್ದಂತೆ ಎಂದೂ ತೋರದಿರುವದು.

ನೀವು ಒಂದು ಕಾಮನ ಬಿಲ್ಲನ್ನು ದೂರದಲ್ಲಿ ನೋಡುತ್ತೀರಿ. ಆ ಕಾಮನ ಬಿಲ್ಲು ನಿಜವೆ ? ಅದು ನಿಜವಲ್ಲ; ಏಕೆಂದರೆ, ಅದು ಕಾಣಿಸಿದ ಸ್ಥಳಕ್ಕೆ ಹೋದರೆ, ಅಲ್ಲಿ ಅದು ಇರುವದೇ ಇಲ್ಲ. ನಾವು ನಮ್ಮ ಸ್ಥಳವನ್ನು ಬದಲಾಯಿಸಿದರೆ ಅದರ ಸ್ಥಾನವೂ ಬದಲಾಯಿಸಿದಂತೆ ತೋರುತ್ತದೆ. ಹಾಗಾದರೆ ಅದು ಸುಳ್ಳೆ ? ಅಲ್ಲ, ಅಲ್ಲ ಅದು ಸುಳ್ಳೂ ಅಲ್ಲ. ಏಕೆಂದರೆ ಅದು ದೂರದಲ್ಲಿ ಇದ್ದಂತೆ ತೋರುತ್ತದೆ. ಅದನ್ನು ಕಂಡಾಗ ನಮ್ಮ ಮೇಲೆ ಪರಿಣಾಮವೂ ಆಗುತ್ತದೆ, ಕಾಮನಬಿಲ್ಲು ಸುಳ್ಳೂ ಅಲ್ಲ, ನಿಜವೂ ಅಲ್ಲ. ಎರಡು ಕೂಡಿದ್ದೂ ಅಲ್ಲ. ಅದು ಭ್ರಾಂತಿ-ಅನಿರ್ವಚನೀಯ.

ಕನ್ನಡಿಯಲ್ಲಿ ನಿಮ್ಮ ಪ್ರತಿಬಿಂಬವನ್ನು ನೋಡುತ್ತೀರಿ. ನಿಮ್ಮ ಪ್ರತಿಬಿಂಬ ಸುಳ್ಳೆ ? ವೇದಾಂತವು 'ಅಲ್ಲ, ಅದು ಸುಳ್ಳಲ್ಲ' ಎನ್ನುತ್ತದೆ. ಏಕೆಂದರೆ, ಅದು ನಿಮಗೆ ಕಾಣುತ್ತದೆ, ನಿಮ್ಮ ಮನಸ್ಸಿನ ಮೇಲೆ ಪರಿಣಾಮವನ್ನೂ ಮಾಡುತ್ತದೆ. ಹಾಗಾದರೆ ಅದು ನಿಜವೆ ? ಅಲ್ಲ. ಅದು ನಿಜವೂ ಅಲ್ಲ, ಏಕೆಂದರೆ, ನೀವು ಅತ್ತಲಾಗಿ ಮುಖ ವನ್ನು ತಿರುಗಿಸಿದರೆ, ಅದು ಕಣ್ಮರೆಯಾಗುತ್ತದೆ. ಇದು ನಿಜವೂ ಅಲ್ಲದ ಸುಳ್ಳೂ ಅಲ್ಲದ ಒಂದು ಭ್ರಮೆ (Illusion). ಇದರಲ್ಲಿ ಹಿಂದೆ ಹೇಳಿರುವಂತೆ ಎರಡು ಬಗೆ ಯಿದೆ. ಹಗ್ಗದಲ್ಲಿ ಕಾಣುವ ಹಾವು ಒಳಗಿನ ಸಹಜವಾದ ಭ್ರಮೆ (Intrinsic illusion). ಇದರ ವೈಶಿಷ್ಟ್ಯವೇನೆಂದರೆ, ಭ್ರಾಂತಿಜನ್ಯವಾದ ವಸ್ತುವು ಕಾಣುವಾಗ ನಿಜವಾದ ವಸ್ತುವು ಕಾಣುವದಿಲ್ಲ. ನಿಜವಾದ ವಸ್ತುವು ಕಂಡಾಗ ಭ್ರಾಂತಿಯ ವಸ್ತುವು ಕಾಣುವದಿಲ್ಲ. ಹೀಗೆ ಎರಡು ಕೂಡಿ ಇರಲಾರವು. ಭ್ರಮೆಯ ಹಾವು ಕಂಡಾಗ

ನಿಜವಾದ ಹಗ್ಗವು ಕಾಣುವುದಿಲ್ಲ ; ನಿಜವಾದ ಹಗ್ಗವು ಕಂಡಾಗ ಹಾವು ಕಾಣುವದಿಲ್ಲ; ನಿಜವಾದ ಹಗ್ಗವನ್ನೂ ಭ್ರಾಂತಿಯ ಹಾವನ್ನೂ ಒಟ್ಟಿಗೆ ಕಾಣುವುದು ಸಾಧ್ಯವಿಲ್ಲ. ಹಗ್ಗವಿದ್ದಾಗ ಹಾವಿಲ್ಲ, ಹಾವಿದ್ದಾಗ ಹಗ್ಗವಿರುವದಿಲ್ಲ. ಯಾವದಾದರೂ ಒಂದು ಹೋಗಬೇಕು ಇನ್ನೊಂದಿರಬೇಕು.

ಆದರೆ ಹೊರಗಿನ ಭ್ರಮೆಯಲ್ಲಿ (Extrinsic illusion) ಎರಡೂ ಕೂಡಿರುತ್ತವೆ. ಹೊರಗೆ ಬಿಂಬವೂ ಕನ್ನಡಿಯಲ್ಲಿ ಪ್ರತಿಬಿಂಬವೂ ಕೂಡಿ ಇರುವಂತೆ ನಿಜವೂ ಭ್ರಮೆಯೂ (The reality and the illusion) ಏಕಕಾಲದಲ್ಲಿ ಕಾಣಿಸಿಕೊಳ್ಳುತ್ತವೆ. ಮುಖವು ನಿಜವಾದ ವಸ್ತು ; ಕನ್ನಡಿಯಲ್ಲಿರುವ ಪ್ರತಿಬಿಂಬವು ನಿಜವಲ್ಲ, ತೋರಿಕೆ ಮಾತ್ರವಾದ ಭ್ರಮೆ. ಆದರೂ ಅವೆರಡೂ ಒಟ್ಟಿಗೆ ಕಾಣಿಸಿಕೊಳ್ಳುತ್ತವೆ. ಇದೇ ಅದರ ವೈಶಿಷ್ಟ್ಯ. ಇದರಲ್ಲಿ ಇನ್ನೊಂದು ವಿಶೇಷವೇನೆಂದರೆ ಕನ್ನಡಿಯಂಥ ಮಧ್ಯಮ-ಉಪಾಧಿ ಇರುತ್ತದೆ. ಆದ್ದರಿಂದ ಬಾಹ್ಯಸ್ಥ ಭ್ರಮೆಯಲ್ಲಿ, ಒಂದೇ ಸಮಯದಲ್ಲಿ ನಿಜವಸ್ತುವೂ ಮಧ್ಯಮ ಉಪಾಧಿಯೂ (Medium) ಭ್ರಮಾ ವಸ್ತುವೂ ಒಟ್ಟಿಗೆ ಕಾಣಿಸಿಕೊಳ್ಳುತ್ತವೆ. ಸಹಜವಾದ ಅಂತಸ್ಥ ಭ್ರಮೆಯಲ್ಲಿ ಒಂದು ಸಮಯದಲ್ಲಿ ಒಂದೇ ವಸ್ತುವು ಕಾಣಿಸಿಕೊಳ್ಳುತ್ತದೆ.

ವೇದಾಂತಿಗಳು ಪರೀಕ್ಷಾ–ಪ್ರಯೋಗ–ಸಾಧನ–ಅನುಭವ ಪದ್ಧತಿಯಿಂದ ಇಡೀ ವಿಶ್ವದ ಅಖಂಡತೆಯನ್ನು ಮನಗಂಡಿದ್ದಾರೆ. ಅವರು ತಮ್ಮ ವಿಚಾರ-ಶೋಧಗಳಿಂದಲೂ ಧಾರ್ಮಿಕ ಸಾಧನೆಗಳಿಂದಲೂ ಪ್ರಯೋಗ-ಪ್ರಗತಿಗಳಿಂದಲೂ ಧ್ಯಾನಯೋಗ ಜ್ಞಾನಯೋಗಗಳಿಂದಲೂ ಪಡೆದ ಸತ್ಯಾನುಭವದಿಂದ ಚಿದಾನಂದ ಸ್ವರೂಪ ಆತ್ಮ ಒಂದೇ ಸತ್ಯವೆಂದೂ ಅದ್ವಿತೀಯವೆಂದೂ ಆದರೆ ಅದರಲ್ಲಿ ಭ್ರಮೆಯಿಂದ (ಹಗ್ಗದಲ್ಲಿ ತೋರುವ ಹಾವಿನಂತೆ) ಮಾಯೆಯಿಂದ ಪ್ರಪಂಚವು ತೋರುತ್ತಿದೆಯೆಂದೂ ತೋರಿಸಿಕೊಟ್ಟಿದ್ದಾರೆ, ಅಥವಾ ಸಿದ್ಧಾಂತಮಾಡಿದ್ದಾರೆ. ಈ ಪ್ರಪಂಚವು ತೋರುವುದಕ್ಕೆ ಕಾರಣವಾದ ಭ್ರಮೆಯಲ್ಲಿ ಅವರು 'ಎರಡು ಬಗೆಯನ್ನು ತೋರಿಸಬಹುದು' ಎನ್ನುತ್ತಾರೆ. ಇದೇ ಒಳಗಿನ ಭ್ರಮೆ ಮತ್ತು ಹೊರಗಿನ ಭ್ರಮೆ. ಒಬ್ಬ ಮನುಷ್ಯನು ಧಾರ್ಮಿಕ ಜೀವನವನ್ನು ಪ್ರಾರಂಭಿಸಿ ತನ್ನೊಳಗೇ ದೇವತ್ವವನ್ನು ಕಾಣುವದಕ್ಕೆ ತೊಡಗಿದಾಗ ಅವನು ಹೊರಗಿನ ಭ್ರಮೆಯನ್ನು ಅಥವಾ ಮಾಯೆಯನ್ನು ಮಾತ್ರ ಮೀರುತ್ತಾನೆ. ಈ ಪ್ರಪಂಚದಲ್ಲಿರುವ ಎಲ್ಲಾ ಧರ್ಮಗಳೂ-ಕ್ರೈಸ್ತ, ಮುಹಮ್ಮದೀಯ, ಬೌದ್ಧ, ಜೊರೋಸ್ಟ್ರಿಯ ಮೊದಲಾದ ಎಲ್ಲವೂ-ಹೊರಗಿನ ಮಾಯೆಯನ್ನು ಜಯಿಸುವುದಕ್ಕೆ ಬಹಳವಾಗಿ ಸಹಾಯಮಾಡಿವೆ. ಹೊರಗಿನ ಭ್ರಮೆಯನ್ನು ಗೆಲ್ಲುವುದಕ್ಕೆ ಈ ಧರ್ಮಗಳು ಮಾಡುವ ಉಪದೇಶವೆಲ್ಲಾ ಸರಿಯಾಗಿದೆ–ಎಂದು ವೇದಾಂತವು ಒಪ್ಪಿಕೊಳ್ಳುತ್ತದೆ. ಆದರೆ ವೇದಾಂತವು ಒಂದು ಹೆಜ್ಜೆ ಮುಂದೆ ಹೋಗುತ್ತದೆ. ಅದು ಒಳಗಿನ ಭ್ರಮೆಯನ್ನೂ ಕಳೆಯುತ್ತದೆ. ಆದರೆ

ಮಿಕ್ಕ ಧರ್ಮಗಳಲ್ಲಿ ಅದು ಬೇಕಾಗಿದೆ, ಅಥವಾ ಕೊರತೆಯಾಗಿದೆ. ಮಿಕ್ಕ ಧರ್ಮದವರು ಇದನ್ನು ತಿಳಿಯದೆ ವೇದಾಂತವು ತಮಗೆ ವಿರುದ್ಧವಾಗಿದೆ ಎನ್ನುತ್ತಾರೆ. ಇಲ್ಲ, ಇಲ್ಲ, ಅದು ಯಾವದಕ್ಕೂ ವಿರುದ್ಧವಾಗಿಲ್ಲ; ಅವುಗಳು ಪ್ರಾರಂಭಿಸಿದ ಕಾರ್ಯವನ್ನು ವೇದಾಂತವು ಪೂರೈಸಿದೆ, ಅಷ್ಟೆ. ಆದ್ದರಿಂದ ಎಲ್ಲಾ ಧರ್ಮಗಳಿಗೂ ವೇದಾಂತವು ಪೂರಕವಾದುದು; ಉಪಕಾರಕವಾದುದು, ಅದು ಯಾವದಕ್ಕೂ ವಿರೋಧವಾಗಿಲ್ಲ. ಆದರೆ ಇದು ನಿಮಗೆ ಅರ್ಥವಾಗದಿರಬಹುದು.

ಈಗ ನಿಮಗೆ ಅತಿ ಸೂಕ್ಷ್ಮವಾದ ಒಂದು ವಿಚಾರವನ್ನು ಹೇಳುತ್ತೇನೆ. ಆದ್ದರಿಂದ ಅತ್ಯಂತ ಜಾಗರೂಕತೆಯಿಂದ ಕೇಳಿರಿ. ಒಂದು ಹಗ್ಗವನ್ನು ಹಾವೆಂದು ತಪ್ಪಾಗಿ ತಿಳಿಯುತ್ತೀರಿ. ಹಗ್ಗದಲ್ಲಿ ಹಾವು ಕಂಡಿತು. ಇದಕ್ಕೆ ಹಿಂದೆಲ್ಲಾ ವಿವರಿಸಿರುವಂತೆ ಒಳಗಿನ ಭ್ರಮೆಯೇ ಕಾರಣವೆಂದು ಹೇಳುತ್ತೇವೆ. ಏಕೆಂದರೆ ಹಾವು ಕಂಡಾಗ ಹಗ್ಗ ಕಾಣುವದಿಲ್ಲ; ಹಗ್ಗವು ಕಂಡಾಗ ಹಾವು ಕಾಣುವುದಿಲ್ಲ. ಒಂದು ಸಮಯದಲ್ಲಿ ಒಂದೇ ವಸ್ತುವು ಕಾಣುತ್ತದೆ, ಮತ್ತು ಹಾವು ಕೇವಲ ನಮ್ಮ ಮನಸ್ಸಿನ ಕಲ್ಪನೆ. ಹಗ್ಗವೂ ಹಾವೂ ಆಕೃತಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಇರುವದರಿಂದ. ಮಬ್ಬುಗತ್ತಲೆಯಲ್ಲಿ ಬಿದ್ದಿರುವ ಹಗ್ಗದ ನಿಜವಾದ ರೂಪವು ಕಾಣದೆ, ಕಂಡ ಅದರ ಆಕೃತಿ ಮಾತ್ರವೇ, ಎಲ್ಲಿಯೋ ಎಂದೋ ಕಂಡಿದ್ದ ಹಾವಿನ ನೆನಪನ್ನು ಎಚ್ಚರಗೊಳಿಸಿ, ಎವೆಯಿಕ್ಕುವದರೊಳಗೆ ಮನಸ್ಸು ಹಾವನ್ನು ಕಲ್ಪಿಸಿಕೊಂಡು ಹೊರಚಾಚಿ ಹಗ್ಗದಲ್ಲಿ ಅದನ್ನು ಕಾಣುವಂತೆ ಮಾಡುತ್ತದೆ. ಇದರಲ್ಲಿ ಹೊರಗಿನ ವಸ್ತುವು ನಿಮಿತ್ತ ಮಾತ್ರ; ಮನಸ್ಸಿನ ಕಲ್ಪನೆಯೇ ಹೆಚ್ಚು. ಆದ್ದರಿಂದ ಇದು ಒಳಗಿನ ಭ್ರಮೆ, (ದಟ್ಟವಾದ ಕತ್ತಲೆಯಲ್ಲಿ ಹಾವಿದ್ದರೂ ಕಾಣುವದಿಲ್ಲ; ಹಗ್ಗವಿದ್ದರೂ ಕಾಣುವದಿಲ್ಲ. ಚೆನ್ನಾಗಿರುವ ಬೆಳಕಿನಲ್ಲಿ ಹಾವು ಹಾವಾಗಿಯೇ ಹಗ್ಗವು ಹಗ್ಗವಾಗಿಯೇ ಕಾಣುತ್ತವೆ. ಬೆಳಕು ಬಹಳ ಕಡಿಮೆಯಿರುವಾಗ ಹಗ್ಗವು ಹಾವಾಗಿಯೋ ಹಾವು ಹಗ್ಗವಾಗಿಯೋ-ಒಂದು ಇನ್ನೊಂದಾಗಿ-ಕಾಣುತ್ತದೆ. ಇದೇ ಭ್ರಮೆ,) ಹಾವಿನ ತೋರಿಕೆಗೆ ಒಳಗಿನ ಭ್ರಮೆ ಕಾರಣವಾದರೂ ಇದರಲ್ಲಿ ಹೊರಗಿನ ಭ್ರಮೆಯೂ ಸೇರಿದೆಯೆಂದು ತೋರಿಸಬಹುದು,

ಒಬ್ಬ ಬಾಲಕನು ಸಂಜೆಯಲ್ಲಿ ಓಡಿ ಬಂದು, ಗಾಬರಿಯಿಂದ "ಅಪ್ಪ, ಅಪ್ಪ, ಆ ಕೋಣೆಯಲ್ಲಿ ದೊಡ್ಡದೊಂದು ನಾಗರ ಹಾವಿದೆ. ಆದನ್ನು ನೋಡಿ, ಹೆದರಿ. ಓಡಿ ಬಂದೆ;" ಎನ್ನುತ್ತಾನೆ. ಆಗ ನಾವು "ಹಾವು ಎಷ್ಟು ಉದ್ದ ಇತ್ತು ? ಎಷ್ಟು ದಪ್ಪ ಇತ್ತು ? ಹೇಗಿತ್ತು ? ಮಗು, ಅಲ್ಲಿ ಹಾವಿರುವದಕ್ಕೆ ಕಾರಣವಿಲ್ಲವಲ್ಲ" ಎನ್ನುತ್ತೇವೆ, ಅದಕ್ಕೆ ಮಗುವು "ಅಯ್ಯೋ ಅಪ್ಪ" ನಿಜವಾಗಿದೆ, ನೋಡುಬಾ. ಒಂದು ಮಾರು ಉದ್ದ ಇದೆ, ಅವತ್ತು ನೀನು ಅಂಗಡಿಯಿಂದ ತಂದಿದ್ದ ಹಗ್ಗದಷ್ಟು ದಪ್ಪವಿದೆ; ಸುರುಳಿ ಸುತ್ತಿಕೊಂಡು ಮಲಗಿದೆ. ಸುಳ್ಳಲ್ಲ ಬೇಕಾದರೆ ನೋಡು ಬಾ." ಎಂದು

ನಮ್ಮ ಕೈಹಿಡಿದು ಎಳೆಯುತ್ತದೆ. ದೀಪವನ್ನು ಒಯ್ದು ಕೋಣೆಯಲ್ಲಿ ನೋಡಿದರೆ. ಅಲ್ಲಿ ಹಾವು ಇರುವದಿಲ್ಲ. ಆದರೆ ಅವತ್ತು ನಾವು ಅಂಗಡಿಯಿಂದ ತಂದು ಸುತ್ತಿಟ್ಟಿದ್ದ ದಪ್ಪವಾದ ಹಗ್ಗದ ಸುರುಳಿಯೇ ಇರುತ್ತದೆ. ಇದನ್ನು ನೋಡಿ ಮಗುವು ನಗಬಹುದು. ಇರಲಿ. ಇಲ್ಲಿ ನಾವು ಗಮನಿಸಬೇಕಾದುದು ಏನೆಂದರೆ, ಹಗ್ಗದ ಉದ್ದವೂ ದಪ್ಪವೂ ಸುರುಳಿಯ ಆಕೃತಿಯೂ ಭ್ರಾಂತಿಯ ಸರ್ಪದಲ್ಲಿ ಪ್ರತಿಫಲನವಾದಂತೆ ತೋರಿದ್ದು. ಹಗ್ಗದ ಆಕೃತಿ-ರೂಪಾದಿಗಳಿಗೆ ಭ್ರಾಂತಿಯ ಸರ್ಪವು ಕನ್ನಡಿಯಂತಾಯಿತು. ಹಾವಿನಲ್ಲಿ ತೋರಿದ ಉದ್ದ, ದಪ್ಪ, ಸುರುಳಿ ಮೊದಲಾದ ಗುಣಗಳೆಲ್ಲಾ ಹಗ್ಗದಲ್ಲಿ ಇರತಕ್ಕವೇ ಹೊರತು ಹಾವಿನಲ್ಲಿ ಇರತಕ್ಕವಲ್ಲ, ಹಾವು ಕನ್ನಡಿಯಂತೆ ಅದಕ್ಕೆ ಆಧಾರವಾದ ಹಗ್ಗವನ್ನು ಪ್ರತಿಬಿಂಬಿಸಿ ತೋರಿಸಿದೆ. ಹಾವು ಕೇವಲ ನಮ್ಮ ಮನಸ್ಸಿನ ಭ್ರಮೆಯಾದ್ದರಿಂದ ಮೊದಲು ಕಂಡ ಹಾವು ಒಳಗಿನ ಭ್ರಮೆ. ಆದರೆ ಆ ಹಾವಿನಲ್ಲಿ, ಅಲ್ಲಿರುವ ಹಗ್ಗದ ಉದ್ದ, ದಪ್ಪ ಮೊದಲಾದ ಗುಣಗಳೂ ಕಂಡಿದ್ದರಿಂದ ಅದು ಹೊರಗಿನ ಭ್ರಮೆ. ಹೊರಗೆ ಒಂದರ ಗುಣಗಳು ಇನ್ನೊಂದರಲ್ಲಿ ತೋರಿವೆ.

ಇದು ಮೂಲ ಭ್ರಮೆಯ ಮುಂದಿನ ಬೆಳವಣಿಗೆ. ಈ ಭ್ರಮೆಗಳನ್ನು ಕಳೆಯುವುದಕ್ಕೆ ಏನು ಮಾಡಬೇಕೆಂಬುದೇ ಈಗಿನ ಪ್ರಶ್ನೆ. ಮೊದಲು ಒಂದನ್ನು ಕಳೆದು ಅನಂತರ ಇನ್ನೊಂದನ್ನು ಕಳೆಯೋಣ, ಮೊದಲು ಹೊರಗಿನ ಭ್ರಮೆಯನ್ನು ಕಳೆದು ಅನಂತರ ಒಳಗಿನ ಭ್ರಮೆಯನ್ನು ಕಳೆಯಬೇಕು.

ವೇದಾಂತದ ಪ್ರಕಾರ, ಈ ವಿಶ್ವವೆಲ್ಲಾ ನಿಜವಾಗಿಯೂ ಅಖಂಡವೂ ಅವಿಭಾಜ್ಯವೂ ಅವರ್ಣನೀಯವೂ ಆದ ಒಂದು ಸತ್ಯವಾಗಿದೆ (ಇರುವಿಕೆ)ಯೇ ಹೊರತು ಬೇರೇನೂ ಅಲ್ಲ. ಅದನ್ನು ಬಚ್ಚಬರಿ ಇರುವಿಕೆಯೆಂದೂ ಸದ್ವಸ್ತುವೆಂದೂ ಸಹ ಕರೆಯಲಾರೆವು, ಕರೆಯಲಾಗದು. ಏಕೆಂದರೆ, ಅದು ಎಲ್ಲಾ ಭಾಷೆಯನ್ನೂ (ಮಾತನ್ನೂ) ಮೀರಿದೆ. ಅದು ದೇಶ-ಕಾಲ-ನಿಮಿತ್ತಗಳನ್ನೂ ಮೀರಿದೆ, ಏನೇನು ತೋರುತ್ತಿವೆ, ತೋರದಿವೆ. ಆ ಎಲ್ಲವನ್ನೂ ಮೀರಿದೆ. ಎಲ್ಲಕ್ಕೂ ಆಧಾರವಾದ ಈ ಸತ್ಯವನ್ನೇ-ತತ್ತ್ವವನ್ನೇ-ಕೇವಲ ಇರುವಿಕೆಯನ್ನೇ (ಯಾವ ಹೆಸರಿನಿಂದಲೂ ಕರೆಯಲಾಗದ ಇದನ್ನು ಏನಾದರೂ ಕರೆಯಿರಿ) ಹಗ್ಗವೆನ್ನಬಹುದು. ಈ ಹಗ್ಗದಲ್ಲಿ ನಾಮರೂಪಗಳೂ ಭೇದಗಳೂ ಅಥವಾ ಶಕ್ತಿಯೂ ಕ್ರಿಯೆಯೂ ಅಥವಾ ಸ್ಪಂದನಗಳೂ ತೋರಿಕೊಳ್ಳುತ್ತಿವೆ. ಇವುಗಳನ್ನೇ ಹಾವು ಎನ್ನಬಹುದು. ಮೂಲಭೂತವಾದ ಈ ಒಳಗಿನ ಭ್ರಮೆಯು ಪೂರ್ಣವಾದ ಕೂಡಲೇ ಹೊರಗಿನ ಭ್ರಮೆಯು ಬೆಳೆಯುತ್ತದೆ. ಈ ಎರಡನೆಯ ಭ್ರಮೆಯಿಂದ ಈ ನಾಮರೂಪಗಳೂ ಈ ವ್ಯಕ್ತಿಗಳೂ ಈ ವಸ್ತುಗಳೂ ತಮ್ಮದೇ ಆದ ಸ್ವತಂತ್ರ ಸತ್ತೆಯುಳ್ಳವುಗಳೆಂದೂ ಸ್ವತಂತ್ರವಾಗಿ ತಾವೇ ಇರತಕ್ಕವುಗಳೆಂದೂ ತಿಳಿಯುತ್ತೇವೆ. ಇವುಗಳನ್ನು ಸತ್ಯವೆಂದು ತಿಳಿಯುತ್ತೇವೆ. ಇದೇ ಎರಡನೆಯ ಹೊರಗಿನ ಭ್ರಮೆ. ಈ ಭ್ರಮಾಕ್ರಮವನ್ನು ತಿರುವು ಮುರುವು ಮಾಡಿದರೆ ನಿಮಗೆ ಇನ್ನೂ ಚೆನ್ನಾಗಿ ತಿಳಿಯುತ್ತದೆ.

200 2008

ಮತಧರ್ಮಗಳು ಮಾಡಿರುವ ಉಪಕಾರವೇನು ? ನಮಗೆ ಅತ್ಯಂತ ಪ್ರಿಯವಾದ ಕ್ರೈಸ್ತಮತವೂ ಮಹಮ್ಮದೀಯ ಮತವೂ ಇತರ ಮತಗಳೂ ಹೊರಗಿನ ಭ್ರಮೆಯನ್ನು ಕಳೆಯುವದರಲ್ಲಿ ತುಂಬಾ ಸಹಾಯಮಾಡಿವೆ ಎನ್ನಬಹುದು. ಇದೇ ಇವುಗಳಲ್ಲಿರುವ ಶ್ಲಾಘ್ಯಗುಣ ಎನ್ನಬಹುದು. ನಾವು ಪರಿಶುದ್ಧ ಜೀವನವನ್ನೂ ವಿಶ್ವಪ್ರೇಮದ ಜೀವನವನ್ನೂ ದಿವ್ಯವಾದ ಆನಂದ ಪರವಶತೆಯ ಜೀವನವನ್ನೂ ಶ್ರದ್ಧಾ ಪೂರ್ಣವೂ ತ್ಯಾಗಮಯವೂ ಆದ ಜೀವನವನ್ನೂ-ಭರವಸೆಯಿಂದ ನಡೆಸಿದರೆ, ನಮ್ಮ ಹೃದಯದಿಂದ ಎಲ್ಲಾ ದಿಶೆಗಳಲ್ಲಿಯೂ ಹುಚ್ಚು ಹೊಳೆಯಂತೆ ಹೊರಚಿಮ್ಮಿ ಹರಿಯುವ ಅಪಾರವಾದ ದೈವೀ ಪ್ರೇಮವು ಇಡೀ ವಿಶ್ವವನ್ನೇ ದಿವ್ಯತೆಯಿಂದ (ದೈವಭಾವದಿಂದ) ತುಂಬಿದಾಗ ನಮಗೆ ಎಲ್ಲೆಲ್ಲಿಯೂ ದೇವರೇ ಕಾಣುತ್ತಾನೆ—ಎಂದು ಈ ಧರ್ಮಗಳು ಮಾನವ ಕುಲಕ್ಕೇ ತೋರಿಸಿವೆ. ಇವನ್ನು ಸ್ವಲ್ಪ ಗಮನಿಸಿ: ನಿಜವಾದ ಮಹಾತ್ಮನಾದ ಕ್ರೈಸ್ತನು, ಶ್ರದ್ಧಾ ಪೂರ್ಣನಾದ ಕ್ರೈಸ್ತನು, ನಾಮರೂಪಗಳಲ್ಲಿ ಸಹ ದೇವರನ್ನು ಕಾಣುತ್ತಾನೆ. ಅವನು ಶತ್ರುವನ್ನು ದ್ವೇಷಿಸುವದಿಲ್ಲ; ಪ್ರೀತಿಸುತ್ತಾನೆ. ಮಹಾತ್ಮಾ ಯೇಸು ಕ್ರಿಸ್ತನು Oh! "Love your enemy as yourself" ಆಹಾ! 'ನಿಮ್ಮ ಶತ್ರುವನ್ನು ನಿಮ್ಮಂತೆಯೇ ಪ್ರೇಮಿಸಿರಿ.' ಎಂದು ಹೇಳಿದ್ದಾನೆ. ಇದು ಅವನ ದಿವ್ಯಬೋಧೆ. ನಿಜವಾದ ಕ್ರೈಸ್ತನು ಅಥವಾ ಮಹಮ್ಮದೀಯನು ಹೂವುಗಳಲ್ಲಿಯೂ ಅದೇ ದೇವರನ್ನು ಕಾಣುತ್ತಾನೆ. ಆಹಾ! ಅಂಥಾ ಆಶ್ಚರ್ಯ ಸ್ಥಿತಿಯನ್ನು ನೀವು ಎಂದಾದರೂ ಅನುಭವಿಸಿದ್ದೀರಾ? ನಿಜವಾದ ಧರ್ಮನಿಷ್ಠರು ಅದನ್ನೂ ಅನುಭವಿಸುತ್ತಾರೆ. ಹೂವುಗಳು ಸಹ ಅಂಥಾ ನಿಮ್ಮೊಡನೆ ಮಾತನಾಡುತ್ತವೆ; ಕಲ್ಲುಗಳಲ್ಲಿಯೂ ನೀವು ದಿವ್ಯವಾದ ಉಪದೇಶಗಳನ್ನು ಕಾಣುತ್ತೀರಿ. ಹರಿಯುವ ಹಳ್ಳಗಳಲ್ಲಿ ನೀವು ಗ್ರಂಥಗಳನ್ನು ಓದುತ್ತೀರಿ. ಗ್ರಹ-ನಕ್ಷತ್ರಗಳು ನಿಮ್ಮೊಡನೆ ಮಾತನಾಡುತ್ತವೆ. ಮನುಷ್ಯನ ಕಣ್ಣುಗಳಿಂದ ದೇವರೇ ನಿಮ್ಮನ್ನು ನೋಡುತ್ತಿರುವದನ್ನು ಕಾಣುತ್ತೀರಿ. ದೇವತ್ವಕ್ಕೆ ಏನಾದರೂ ಬೌದ್ಧಿಕ ಪ್ರಮಾಣ ಬೇಕೆ? ಬೇಕಿಲ್ಲ. ಅದು ತನಗೆ ತಾನೇ ಪ್ರಮಾಣವಾಗಿದೆ. ಎಲ್ಲಾ ಲೌಕಿಕ ತರ್ಕವನ್ನೂ ಲೌಕಿಕ ತತ್ತ್ವಶಾಸ್ತ್ರವನ್ನೂ ಮೀರಿದ ಪ್ರಮಾಣದ ಮೇಲೆ ಅದು ನಿಂತಿದೆ. ಎಲ್ಲೆಲ್ಲಿಯೂ ದೇವರನ್ನೇ ಕಾಣುತ್ತಾ ದೇವರಲ್ಲಿಯೇ ವ್ಯವಹರಿಸುತ್ತಾ ದೇವರಲ್ಲಿಯೇ ಸರ್ವದಾ ಜೀವಿಸುತ್ತಿರುವ ಮಹಾತ್ಮನೇ ಆ ದೇವತ್ವಕ್ಕೆ ಪ್ರಮಾಣ, ಅವನೇ ಆ ದಿವ್ಯತೆಗೆ ಜೀವಂತಸಾಕ್ಷಿ. ಈ ಬಗೆಯ ಧರ್ಮಜೀವನದಿಂದಲೂ ಯೋಗ-ಪ್ರಯೋಗಗಳಿಂದಲೂ ಅಭ್ಯಾಸ-ಅನುಭವಗಳಿಂದಲೂ ಅವನು ಹೊರಗಿನ ಭ್ರಮೆಯನ್ನು ಮೀರಿ ನಿಲ್ಲುತ್ತಾನೆ. ಅದು ಹೇಗೆ? ಎಂದರೆ, ಈ ಎಲ್ಲಾ ನಾಮರೂಪಗಳಲ್ಲಿಯೂ ಭಿನ್ನಭೇದಗಳಲ್ಲಿಯೂ. ಕ್ರಿಯಾ-ಕಾರಕ-ಫಲಗಳಲ್ಲಿಯೂ ದೇವರಿದ್ದಾನೆಂದು ಹೇಳುತ್ತೀರಿ. ಈ ನಾಮರೂಪಾದಿಗಳು ಹಾವಿನಂತಿವೆ. ಆದರೂ ಇವುಗಳನ್ನು ತೂರಿ ಇವುಗಳ ಹಿಂದೆ

ನೋಡಿದರೆ, ಇವುಗಳ ಆಚೆ, ಹಾವಿನ ಕೆಳಗಿರುವ ಹಗ್ಗವನ್ನು ಕಾಣುತ್ತೀರಿ. ಈ ದರ್ಶನ ಕ್ರಮದಿಂದ, ಹುಸಿ ಹಾವಿನಲ್ಲಿ ತೋರುವ ಉದ್ದ, ಅಗಲ, ದಪ್ಪ ಮೊದಲಾದ ಗುಣಗಳನ್ನೆಲ್ಲಾ ಆಧಾರವಾದ ಹಗ್ಗದ ಗುಣಗಳೆಂದು ತಿಳಿಯುತ್ತೀರಿ ಇದರಿಂದ ನಾಮರೂಪಗಳಲ್ಲಿ ತೋರುವ ಅಸ್ತಿ-ಬಾತಿ-ಪ್ರಿಯಗಳನ್ನು ನಾಮರೂಪಾದಿ ಗಳ ಸ್ವಂತ ಗುಣಗಳಲ್ಲವೆಂದೂ ಅವುಗಳಿಗೆ ಆಧಾರವಾದ—(ಸತ್ಯದ-ಆತ್ಮನ) ದೇವರ ಸಚ್ಚಿದಾನಂದ ಗುಣಗಳೆಂದೂ ತಿಳಿಯುತ್ತೀರಿ. ಈ ಸಾಧನದಿಂದ ಹೊರಗಿನ ಭ್ರಮೆಯನ್ನು ಮಾತ್ರ ಕಳೆದುಕೊಂಡಂತಾಗುತ್ತದೆ. ಆಗ ನೀವು ಎಲ್ಲಾ ನಾಮರೂಪಗಳ ಹಿನ್ನೆಲೆಯಲ್ಲಿಯೂ ದೇವರನ್ನೇ ನೋಡುತ್ತೀರಿ. ಧರ್ಮಜೀವನದ ಈ ಸ್ಥಿತಿಯಲ್ಲಿ ನೀವು ನಿಮ್ಮ ಶತ್ರುಗಳಿಗಾಗಲೀ ಮಿತ್ರರಿಗಾಗಲೀ ಯಾವ ಉದ್ದೇಶ ವನ್ನೂ ಆರೋಪಿಸುವದಿಲ್ಲ. ಅವರಲ್ಲಿಯೂ ಅವರ ವರ್ತನೆಯಲ್ಲಿಯೂ (ಹಿನ್ನೆಲೆ ಯಲ್ಲಿ) ದೇವರನ್ನೇ ದೇವರ ಇಂಗಿತವನ್ನೇ ಕಾರ್ಯವನ್ನೇ ನೋಡುತ್ತೀರಿ. ಆಗ ನೀವು "ಪ್ರಿಯವೋ ಅಪ್ರಿಯವೋ ಆದ ಈ ಎಲ್ಲವನ್ನೂ ಒಬ್ಬ ದೇವರೇ ಮಾಡು ತ್ತಿದ್ದಾನೆ. ಇದಕ್ಕೆ ಬೇರೆ ಯಾರೂ ಕಾರಣರಲ್ಲ; ಸ್ವತಂತ್ರರಲ್ಲ," ಎಂದು ಹೇಳುತ್ತೀರಿ. ಇದರಿಂದ ಹೊರಗಿನ ಭ್ರಮೆಯನ್ನು ಮೀರಿದಂತಾಗುತ್ತದೆ. ನಿಮ್ಮ ಆಧ್ಯಾತ್ಮ ಪ್ರಗತಿಯಲ್ಲಿ ಇದೊಂದು ದೊಡ್ಡ ಸಾಧನೆಯೇ. ಆದರೆ ವೇದಾಂತವು ಅದರಿಂದಾಚೆಗೆ ಹೋಗಿ "ತಮ್ಮ! ಈ ತೋರುತ್ತಿರುವ ನಾಮರೂಪಗಳಲ್ಲೆಲ್ಲಾ ದೇವರೆ ಇದ್ದಾನೆಂದು ಹೇಳುತ್ತಿದ್ದರೆ ಇದೇ ಪೂರ್ಣಸತ್ಯವಲ್ಲ ಅಥವಾ ಸತ್ಯದ ಪೂರ್ಣತೆಯಲ್ಲ. ಈ ದೃಷ್ಟಿ ಯನ್ನು (ದರ್ಶನವನ್ನೂ) ಮೀರಿ ಇನ್ನೂ ಆಚೆಗೆ ಹೋಗು. ಈ ಎಲ್ಲಾ ನಾಮ ರೂಪಗಳಲ್ಲಿಯೂ ಪ್ರತಿಮಾ ಪ್ರತೀಕಗಳಲ್ಲಿಯೂ ಭಿನ್ನಭೇದಗಳಲ್ಲಿಯೂ ಕ್ರಿಯೆ ಗಳಲ್ಲಿಯೂ ನಿಜವಾಗಿ ದೇವರೇ ತುಂಬಿಕೊಂಡಿದ್ದಾನೆಂದು ಹೇಳುತ್ತಿರಿ; ಆದರೆ ಈ ನಾಮರೂಪಾದಿಗಳೇ ನಿಜವಲ್ಲ. ಇವುಗಳ ತೋರಿಕೆಯು ಕೇವಲ ಭ್ರಮೆ. ಇವು ಹಗ್ಗದಲ್ಲಿ ತೋರುವ ಹಾವಿನಂತಿವೆ. ಅದರಿಂದಾಚೆಗೆ ಹೋಗು; ಎಲ್ಲಾ ಶಬ್ದ ಗಳನ್ನೂ ಭಾವನೆಗಳನ್ನೂ ಮೀರಿದ ಸ್ಥಿತಿಯನ್ನು ಪಡೆಯುತ್ತೀಯೆ," ಎಂದು ಹೇಳುತ್ತದೆ. ಆದ್ದರಿಂದ ವೇದಾಂತವು ಸಕಲಧರ್ಮಗಳಿಗೂ ಪೂರಕವಾಗಿದೆ. ಅದು ಪ್ರಪಂಚದಲ್ಲಿ ಯಾವ ಧರ್ಮವನ್ನೂ ವಿರೋಧಿಸುವದಿಲ್ಲ—ಎನ್ನುವದು ಸಿದ್ಧ ವಾಗುತ್ತದೆ.

೭೮. ಚಿತ್ತಾಕರ್ಷಣೆಗೆ ಕಾರಣವೇನು?

(ಒಬ್ಬ ನರ್ತಕಿಯ ಗಾನ)

ಇಂಡಿಯಾ ದೇಶದಲ್ಲಿ, ಒಂದಾನೊಂದು ಕಾಲದಲ್ಲಿ, ಬಹಳ ಶ್ರೀಮಂತ ವರ್ತಕ ನೊಬ್ಬನು, ಅವನ ನಗರದಲ್ಲಿದ್ದ ಜನರಿಗೆಲ್ಲಾ ವೈಭವಯುತವಾದ ಔತಣವನ್ನು ಏರ್ಪಡಿಸಿದನು. ಸಾಮಾನ್ಯವಾಗಿ ಅಂಥಾ ಸಂದರ್ಭಗಳಲ್ಲಿ ಅನೇಕ ವೇಳೆ ನರ್ತಕಿಯರ

ವೃಂದವನ್ನು ಆಹ್ವಾನಿಸುತ್ತಾರೆ. ಆದರೆ ಈಗ ಇಂಡಿಯಾದಲ್ಲಿ ಈ ಪದ್ಧತಿಯನ್ನು ಬಿಡುತ್ತಿದ್ದಾರೆ. ರಾಮನು ಹೇಳುತ್ತಿರುವ ಆ ಸಂದರ್ಭದ ಕಾಲದಲ್ಲಿ ಅದು ಪೂರ್ಣ ಪ್ರಭಾವದಿಂದ ಬಳಕೆಯಲ್ಲಿತ್ತು.

ಆ ನರ್ತಕಿಯರಲ್ಲಿ ಹುಡುಗಿಯೊಬ್ಬಳು ಕುಣಿಯುವದಕ್ಕೂ ಹಾಡುವುದಕ್ಕೂ ತೊಡಗಿದಳು. ಆಕೆ ಅತ್ಯಂತ ಅಶ್ಲೀಲವೂ ಕಾಮುಕವೂ ಆದ ಹಾಡನ್ನು ಹಾಡುತ್ತಿದ್ದಳು. ಅಲ್ಲಿ ಕುಳಿತಿದ್ದ ದೊಡ್ಡ ಮನುಷ್ಯರಲ್ಲಿ ಯಾರೂ ಆ ಮರ್ಯಾದೆಗೆಟ್ಟ ಹಾಡನ್ನು ಬೇರೆ ಸಂದರ್ಭದಲ್ಲಿ ಬೇರೆಯವರಿಂದ ಕೇಳಿದ್ದರೆ—ಸಂತೋಷ ಪಡುವದಿರಲಿ—ಸಹಿಸುತ್ತಲೂ ಇರಲಿಲ್ಲ. ಆದರೆ ಅಷ್ಟು ಹೀನಾಯವಾದ ಹಾಡನ್ನು ಆಕರ್ಷಕವಾದ ಹಾವ—ಭಾವ—ವಿಲಾಸಗಳಿಂದ ಆ ಸುಂದರ ನರ್ತಕಿಯು ಹಾಡಿದಾಗ ಇಡೀ ಸಭೆಯಲ್ಲಿ ಎಲ್ಲರ ಹೃದಯದಲ್ಲಿಯೂ ಆ ಹಾಡು ಆಳವಾಗಿ ಪ್ರವೇಶಮಾಡಿತು. ಅದಕ್ಕೆ ಕಾರಣವೇನು? ಇಂಡಿಯಾದಲ್ಲಿ ಸಾಮಾನ್ಯವಾಗಿ ವಿದ್ಯಾವಂತರೂ ಸಭ್ಯ ತರುಣರೂ ಅಂಥಾ ಕೆಟ್ಟ ಗ್ರಾಮ್ಯ ಗೀತೆಗಳನ್ನು ಕೇಳುವುದಕ್ಕೆ ಇಷ್ಟ ಪಡುವುದಿಲ್ಲ, ಆದರೆ ಆ ಸಂದರ್ಭದಲ್ಲಿ ಆ ನೀಚ ಪದವು ಸಭಿಕರನ್ನೆಲ್ಲಾ ಸಮ್ಮೋಹನಗೊಳಿಸುವಷ್ಟು ತಂತ್ರವಾಗಿ ಅವರ ಹೃದಯದಲ್ಲಿ ನುಸುಳಿಕೊಂಡು ಹೋಗಿ ಪ್ರಬಲವಾಗಿ ಹಿಡಿಯಿತು. ಆ ಪ್ರಸಂಗವು ನಡೆದು ಕೆಲವು ತಿಂಗಳ ಮೇಲೂ ಆದಿನ ಕೇಳಿ ಮುಗ್ಧರಾಗಿದ್ದ ಅನೇಕ ವಿದ್ವಾಂಸರು ಬೀದಿಯಲ್ಲಿ ಹೋಗುತ್ತಿರುವಾಗಲೂ ತಮಗೆ ತಾವೇ ಅದೇ ತುಚ್ಛ ಪದವನ್ನು ಗೊಣಗಿ ಹಾಡಿಕೊಳ್ಳುತ್ತಿದ್ದರು; ಮರ್ಯಾದಸ್ಥರೂ ಆ ಹೇಯ ಪದವನ್ನು ತಮ್ಮ ಪಕ್ಕ ತಾವು ಮೈಮರೆತು— ಸುತ್ತಲ ಎಚ್ಚರವಿಲ್ಲದೆ— ಸಿಳ್ಳುಹಾಕಿ ಹೇಳಿಕೊಳ್ಳುತ್ತಿರುವದು ಕಂಡುಬಂದಿತು. ಅದನ್ನು ಒಮ್ಮೆ ಕೇಳಿ ಮಾರುಹೋಗಿದ್ದ ಅವರೆಲ್ಲರೂ ಆ ಪಾಪಿ ಪದವನ್ನು ಅತಿಯಾಗಿ ಪ್ರೀತಿಸಿ ತಮ್ಮ ತಮ್ಮ ಹೃದಯಗಳಲ್ಲಿ ಅಕ್ಕರೆಯಿಂದ ಮತ್ತೆ ಮತ್ತೆ ಅಭ್ಯಾಸ ಮಾಡಿ ಪೋಷಿಸಿಕೊಂಡಿದ್ದರು.

ಇಲ್ಲಿ ವಿಸ್ಮಯದ ಪ್ರಶ್ನೆ ಏನೆಂದರೆ, ವಿದ್ವಾಂಸರಾದ ಮರ್ಯಾದಸ್ಥರ ಮನಸ್ಸನ್ನೂ ಅಪಹಾರ ಮಾಡಿದ ಆ ಆಕರ್ಷಕ ಶಕ್ತಿಯು ಯಾವುದು? ಆ ರಂಜನೆಯಾವುದು? ಆ ಅಸಹ್ಯ ಪದವು ಏಕೆ ಅಷ್ಟು ಪ್ರಿಯವಾಯಿತು? ಎಂದು ಅವರಲ್ಲಿ ಯಾರನ್ನಾದರೂ ಕೇಳಿದರೆ, ಅವರೆಲ್ಲರೂ ಓ! ಆ ಹಾಡು ಎಷ್ಟು ಸೊಗಸಾಗಿದೆ: ಸವಿಯಾಗಿದೆ, ಉದಾತ್ತವಾಗಿದೆ, ಉನ್ನತಿಕರವಾಗಿದೆ, ದಿವ್ಯವಾಗಿದೆ! ಎಂದು ಹಿಗ್ಗಿ ಹಿಗ್ಗಿ ಹೊಗಳುತ್ತಾರೆ. ಆದರೆ ಅದು ನಿಜವಲ್ಲ. ಪಾಪ! ಅವರು ಮೋಸಹೋಗಿದ್ದಾರೆ. ಆ ನರ್ತಕಿಯು ಅದನ್ನು ಹಾಡುವುದಕ್ಕೆ ಮುಂಚೆ ಅದೇ ಹಾಡು ಅವರಿಗೆ ಹೇಯವಾಗಿತ್ತು. ಆದರೆ ಆ ಚಲುವೆಯು ಅದನ್ನು ರಮ್ಯವಾಗಿ ಹಾಡಿದ ಮೇಲೆ ಆ ಪಾಪಿ ಪದವು ಅವರಿಗೆ ಅತ್ಯಂತ ಪ್ರಿಯವೂ ಪ್ರಾಣಪದಕವೂ ಆಯಿತು, ಪದವೇ ಉತ್ತಮವಾಗಿದೆ ಎಂಬುದು ತಪ್ಪು: ಅವರ ಭ್ರಮೆ. ನಿಜವಾದ ರಂಜನೆಯು ಆ ಲಾವಣ್ಯವತಿಯ ಕಂಠದಲ್ಲಿಯೂ ಮುಖಭಾವದಲ್ಲಿಯೂ ಮನೋಹರ ನಯನಗಳಲ್ಲಿಯೂ ಮಂದಹಾಸದಲ್ಲಿಯೂ

ಮುಂಗುರುಳುಗಳಲ್ಲಿಯೂ ಮೋಹಕ ರಾಗ ವಿನ್ಯಾಸಗಳಲ್ಲಿಯೂ ಆಲಾಪನಾ ವೈಖರಿಯಲ್ಲಿಯೂ ಅಂಗಾಂಗಗಳ ಚಲನ ವಲನಗಳಲ್ಲಿಯೂ ಲಯಬದ್ಧವಾದ ನಾಟ್ಯದಲ್ಲಿಯೂ ಇದ್ದಿತು. ನಿಜವಾದ ಚಿತ್ತಾಕರ್ಷಣ ಶಕ್ತಿಯು ಆ ಮನೋರಮೆಯಲ್ಲಿದ್ದಿತು. ಆ ರಮಣಿಯ ಹಾವ-ಭಾವ-ವಿಲಾಸಗಳಲ್ಲಿದ್ದ ರಮಣೀಯತೆಯು ಆ ಕೀರ್ತನೆಯ ಮೇಲೆ ಆರೋಪಿಸಲ್ಪಟ್ಟಿತು.

ಪ್ರಪಂಚದಲ್ಲಿ ನಡೆಯುವುದು ಹೀಗೆಯೇ. ಒಬ್ಬ ಬೋಧಕನು ಬರುತ್ತಾನೆ. ಅವನಿಗೆ ಸುಂದರವಾದ ಮುಖವೂ ಮಧುರವಾದ ಕಂಠವೂ ಮನೋಹರವಾದ ಕಣ್ಣು ಮೂಗುಗಳೂ ಇರುತ್ತವೆ. ಅವನ ಧ್ವನಿಯೂ ವಾಣಿಯೂ ಸ್ಪಷ್ಟವಾಗಿಯೂ ಆಕರ್ಷಕವಾಗಿಯೂ ಇರುತ್ತವೆ. ಅವನ ಹಾವ-ಭಾವಗಳೂ ಮೋಹಕವಾಗಿರುತ್ತವೆ; ಓ! ಅವನು ಆಡಿದ ಮಾತೆಲ್ಲಾ ಬಹಳ ಸೊಗಸಾಗಿರುತ್ತದೆ; ಅತ್ಯಂತ ಆಕರ್ಷಕವಾಗಿರುತ್ತದೆ; ಎಷ್ಟು ಪ್ರಿಯವಾಗಿರುತ್ತದೆ! ಎಲ್ಲರ ಮೆಚ್ಚಿಕೆಗೂ ಪಾತ್ರವಾಗಿರುತ್ತದೆ, ಇದರಿಂದಲೇ ಜಗತ್ತು ಮೋಸಹೋಗುವುದು. ಅವನ ಸೌಂದರ್ಯ-ಮಾಧುರ್ಯಗಳು ಹೇಗಾದರೂ ಇರಲಿ; ಅವನ ಉಪದೇಶದಲ್ಲಿರುವ ತತ್ತ್ವವೇನೆಂಬದನ್ನು—ಸತ್ಯವೆಷ್ಟೆಂಬುದನ್ನು—ಯಾರೂ ಪರೀಕ್ಷಿಸುವುದಿಲ್ಲ. ಆ ನರ್ತಕಿಯು ಹಾಡಿನಲ್ಲಿರುವ ವಿಷಯವೇನೆಂಬುದನ್ನು ಯಾರೂ ವಿಚಾರಿಸುವುದಿಲ್ಲ. ಸಭಿಕರಿಗೆ ಆ ಬೋಧನೆಯು ಅಷ್ಟು ಆಕರ್ಷಕವಾಗುವಂತೆಯೂ ಪ್ರಿಯವಾಗುವಂತೆಯೂ ಸೊಗಸಾಗುವಂತೆಯೂ ಮಾಡುವದು ಬೋಧಕನ ಅಭಿನಯವೂ ವಾಗ್ವೈಖರಿಯೂ ನಿರೂಪಣೆಯ ವೈಶಿಷ್ಟ್ಯವೂ ರೂಪವೂ ಬಾಹ್ಯಾಡಂಬರವೂ ಆಗಿವೆ.

ಹಿಂದೆ ಒಂದು ದಿನ ಬಹಳ ಒಳ್ಳೆಯ ಮಿತ್ರರಾದ ಮಾನ್ಯ ಶ್ರೋತೃಗಳೊಬ್ಬರು ರಾಮನೊಡನೆ ಒಬ್ಬ ಸ್ವಾಮಿಗಳ ವಿಚಾರವಾಗಿ—ಸ್ವಾಮಿ ವಿವೇಕಾನಂದರ ವಿಚಾರವಾಗಿ—ಮಾತನಾಡುತ್ತಿದ್ದರು. "ಅವರಿಗೆ ಸುಂದರವಾದ ಕಣ್ಣು ಮೂಗುಗಳಿರಲಿಲ್ಲವೆ?" ಎಂಬ ಪ್ರಶ್ನೆ ಮೂಡಿತು. ನೀವು ಉಪನ್ಯಾಸವನ್ನು ಕೇಳುವುದಕ್ಕೆ ಹೋಗುತ್ತೀರಾ? ಅಥವಾ ಉಪನ್ಯಾಸಕರ ಕಣ್ಣು ಮೂಗುಗಳನ್ನು ನೋಡುವುದಕ್ಕೆ ಹೋಗುತ್ತೀರಾ?

ಇದೇ ಪ್ರಪಂಚದ ರೀತಿ. ಅನೇಕ ಉಪನ್ಯಾಸಕರ ಆಕರ್ಷಣೆಯು ಅವರ ಮಾತಿನ ರೀತಿಯಲ್ಲಿಯೂ ವಾಗ್ಮಿತೆಯಲ್ಲಿಯೂ ಅವರ ಕಂಠಧ್ವನಿಯಲ್ಲಿಯೂ ಇರುತ್ತದೆ, ಆ ಆಕರ್ಷಣೆಯನ್ನು ಅವರ ಉಪನ್ಯಾಸದ ಮೇಲೆ ಅಧ್ಯಾರೋಪಿಸಿ ಮುಗ್ಧರಾಗುತ್ತಾರೆ. ವಸ್ತುಗಳನ್ನು ಸ್ವತಂತ್ರವಾಗಿ ತೂಕಮಾಡಿ; ವಿಷಯಗಳನ್ನು ಸ್ವತಂತ್ರವಾಗಿ ವಿಮರ್ಶೆ ಮಾಡಿ. ನಿಜವಾದ ಉಪನ್ಯಾಸಕರ ಕಡೆ ಹೆಚ್ಚು ಲಕ್ಷ್ಯವಿಡಿ: ಅವರ ದೇಹದ ಕಡೆ ಗಮನ ಕೊಡಬೇಡಿ. ಈ ಮಾತುಗಳು ಬಹಳ ಕಠಿಣವಾಗಿಯೂ ಭಯಂಕರವಾಗಿಯೂ ತೋರಬಹುದು, ಆದರೆ ರಾಮನು ವ್ಯಕ್ತಿಗಳನ್ನು—ಅವಿಚಾರದಿಂದ

ಗೌರವಿಸತಕ್ಕವನಲ್ಲ. ರಾಮನು ನಿಮ್ಮನ್ನು ಗೌರವಿಸುತ್ತಾನೆ; ಸತ್ಯ ಸ್ವರೂಪರಾದ ನಿಮ್ಮನ್ನು. ಸತ್ಯವೇ ನಿಮ್ಮ ನಿಜ ಸ್ವರೂಪ; ರಾಮನು ಆ ಅರ್ಥದಲ್ಲಿ ನಿಮ್ಮನ್ನು ಗೌರವಿಸುತ್ತಾನೆ. ನೀವು ರಾಮನ ಭಾಷಾ ಶೈಲಿಯನ್ನು ಮೆಚ್ಚದೇ ಇರಬಹುದು; ನಿರೂಪಣದ ರೀತಿಯನ್ನು ಇಷ್ಟ ಪಡದೇ ಇರಬಹುದು; ಈ ನಿಮ್ಮ ಸ್ತ್ರೀ ಪುರುಷ ರೂಪದಲ್ಲಿರುವ ನನಗೇ ನಾನು ಹೇಳಿಕೊಳ್ಳುವದೇನೆಂದರೆ, ನಿಮಗೆ ನಿಜವಾದ ಸುಖವೂ ನಿಜವಾದ ಶಾಂತಿಯೂ ಬೇಕಾದರೆ ನೀವು ರಾಮನ ಭಾಷಣಗಳನ್ನೂ ಉಪನ್ಯಾಸಗಳನ್ನೂ ಕೇಳಬೇಕು. ಅವು ನಿಮಗೆ ಆನಂದವನ್ನು ತರುತ್ತವೆ. ಅವುಗಳಲ್ಲಿರುವ ವಿಷಯಗಳ ತಿರುಳನ್ನು ಸ್ವಂತವಾಗಿ—ಸ್ವತಂತ್ರವಾಗಿ—ತೂಕಮಾಡಿ, ಅವುಗಳನ್ನು ವಿಚಾರ ಮಾಡಿ. ಆ ಶಬ್ದಗಳನ್ನೂ ಮಾತುಗಳನ್ನೂ ಚಿಂತನೆಮಾಡಿ, ನಿಮ್ಮ ಧ್ಯಾನವು ಆ ಮಾತಿನ ಮೇಲೇ ಇರಲಿ. ಮನೆಗೆ ಹೋದಮೇಲೆ ಅದನ್ನು ನೆನಪು ಮಾಡಿಕೊಂಡು ನಿಮ್ಮ ಆಚರಣೆಯಲ್ಲಿ ತರಲು ಪ್ರಯತ್ನಮಾಡಿ.

ಏಕಾಗ್ರತೆ ಗುಣ-ಶೀಲಗಳು ಅಭ್ಯಾಸ

(ಶೀತದಲ್ಲಿ ಸೆಟೆದು ಸಪ್ಪೆಯಾದ ಸರ್ಪ)

ಸರೋವರದಲ್ಲಿ ನೀರಿನ ಮೇಲೆ ಹಚ್ಚನೆಯ ಪಾಚಿಯೂ ಎಲೆಗಳೂ ಕಶ್ಮಲಗಳೂ ವಸ್ತ್ರದಂತೆ ಮುಸಕಿರುತ್ತವೆ. ಈ ಹಸುರು ಮುಸಕನ್ನು ಸ್ವಲ್ಪ ಸರಿಸಿದರೆ ಸಾಕು, ಕೆಳಗಿನಿಂದ ಸೊಗಸಾದ, ನಿರ್ಮಲವಾದ ನೀರು ಥಳಥಳಿಸುತ್ತದೆ. ಕೊಳೆಯನ್ನು ಸರಿಸಿದ ನಿಮ್ಮ ಕೈಯನ್ನು ಅತ್ತಲಾಗಿ ಸ್ವಲ್ಪ ತೆಗೆದರೆ ಸಾಕು; ಸ್ಫಟಿಕದಂತೆ ಹೊಳೆದ ನೀರನ್ನು ಆ ಹಸುರುಮುಸುಕು ಮತ್ತೆ ಬಂದು ಆವರಿಸುತ್ತದೆ. ಮನಸ್ಸಿನ ಸರೋವರವನ್ನು ನಿರ್ಮಲ ಮಾಡುವದು ಸಮಂಜಸವಾಗಿಯೂ ಸಾಧ್ಯವಾಗಿಯೂ ಇದೆ. ಮನಸ್ಸಿನ ಮೇಲೆ ಮುಚ್ಚಿಕೊಂಡಿರುವ ಹಸುರು ಮುಸುಕನ್ನು ಕೆಲವು ನಿಮಿಷಗಳು ಸರಿಸಿದರೆ ನಮಗೆ ಏಕಾಗ್ರತೆ ಉಂಟಾಗಬಹುದು; ಆದರೆ ಮಾಲಿನ್ಯ, ಚಾಂಚಲ್ಯರೂಪವಾದ ಮನಸ್ಸಿನ ರೋಗಕ್ಕೆ ಇದೇನೂ ಸ್ಥಿರವಾದ ಚಿಕಿತ್ಸೆಯಿಲ್ಲ. ಆದರೆ ಸರೋವರದ(ಮನಸ್ಸಿನ) ಕೊಳೆಯನ್ನು ಬೇಸರವಿಲ್ಲದಂತೆ ಬಾರಿಬಾರಿಗೂ ತೆಗೆದು ತೆಗೆದು ಹೊರಗೆ ಒಗೆಯುತ್ತಿದ್ದರೆ, ಆ ಹಸುರು ಮುಸುಕು ತೆಳುವಾಗುತ್ತಾ ಹೋಗಿ, ಅಂತ್ಯದಲ್ಲಿ ಇಡೀ ಸರೋವರವೇ ಸ್ವಚ್ಛವಾಗುತ್ತದೆ, ವೇದಾಂತದ ಉದ್ದೇಶವೇ ಅದು; ಧ್ಯೇಯವೇ ಅದು.

ಮುಟ್ಟಿದರೆ ಕಚ್ಚುವ ವಿಷ ಸರ್ಪವು ಅತಿಶೀತಲದಲ್ಲಿ ಚೇತನವಿಲ್ಲದೆ, ಸಪ್ಪೆಯಾಗಿ ಸೆಟೆದು ಮಂಡಲ ಹಾಕಿಕೊಂಡು ಚೆಂಡಿನಂತಾಗಿ ಮಲಗಿರುತ್ತದೆ. ಆಗ ಅದನ್ನು ಕೈಯಲ್ಲಿ ಹಿಡಿದರೂ ಕಚ್ಚುವದಿಲ್ಲ; ಕಚ್ಚಲಾರದು. ಅದನ್ನು ಮನೆಗೆ ತಂದು ಬೆಂಕಿಯ ಹತ್ತಿರ ಸ್ವಲ್ಪ ಬೆಚ್ಚಗೆ ಮಾಡಿದ ಕೂಡಲೇ ಅದು ಚೇತನಗೊಂಡು ಮೈ ನೀಡಿ ಚಾಚಿಕೊಂಡು ಆಗಲೇ ಕಚ್ಚುತ್ತದೆ. ವಿಷವೂ ಕಚ್ಚುವ ಪ್ರವೃತ್ತಿಯೂ ಒಳಗೇ ಇವೆ. ಕಾರಣಾಂತರದಿಂದ ಕೆಲವು ಕಾಲ ಆ ಚಟಕ್ಕೆ ತಡೆಯಾದ ಮಾತ್ರಕ್ಕೆ ಒಳಗಿರುವ ವಿಷವೂ ಕೆಟ್ಟ

ಒಲವೂ ನಾಶವಾಗಿರುವುದಿಲ್ಲ. ಕೆಲವರು ಯೋಗಿಗಳು ಅನುಸರಿಸುವ ಏಕಾಗ್ರತೆಗೂ ಸಮಾಧಿ ಸಾಧನೆಗೂ ಆ ಸರ್ಪದ ಸ್ವಭಾವವು ಸರಿಯಾದ ನಿದರ್ಶನವಾಗಬಹುದು. ಅನೇಕ ಜನರು ಸಾಧಿಸುವ ಏಕಾಗ್ರತೆಯಲ್ಲಿ ಮನಸ್ಸಿನ ಸರ್ಪವು ಕೆಲವು ಹೊತ್ತು ಸುಮ್ಮನೆ ಸುತ್ತಿಕೊಂಡು ಬಿದ್ದಿರುತ್ತದೆ. ಈ ಸರ್ಪದ ವಿಷದಂತಗಳೆಂಬ ಆಶೆಗಳು ಕೆಲವು ಹೊತ್ತು ಸತ್ತಂತೆ ತೋರುತ್ತವೆ. ಈ ಪುಟ್ಟ ಮನಸ್ಸು ಸ್ವಲ್ಪ ಹೊತ್ತು ನಿದ್ರಿಸುತ್ತದೆ; ಅಥವಾ ಸಮಾಧಿಯ ಸ್ಥಿತಿಯಲ್ಲಿ ಎಸೆಯಲ್ಪಡುತ್ತದೆ. ಸರ್ಪವು ಶೀತಾಧಿಕ್ಯದಿಂದ ಸೆಟೆದು ಸಿಂಬೆ ಸುತ್ತಿಕೊಂಡು ನೋಡುವದಕ್ಕೆ ಸತ್ತಂತೆ ಬಿದ್ದಿರುತ್ತದೆ—ಇದೇ ಆಗಿನ ಮನಸ್ಸಿನ ಸ್ಥಿತಿ. ಆದರೆ ಅದು ನಿಜವಾಗಿ ಸತ್ತಿರುವುದಿಲ್ಲ. ಆ ಹಾವನ್ನೇ ಇನ್ನೊಂದು ರೀತಿಯಲ್ಲಿ ಉಪಾಯ (ಯೋಗ)ದಿಂದ ವಶಪಡಿಸಿಕೊಳ್ಳಬಹುದು. ನಾವು ಪುಂಗಿಯನ್ನು ಊದಿ, ಮಂತ್ರಹಾಕಿ, ನಾಗಸ್ವರವನ್ನು ಬಾರಿಸಿ ಸರ್ಪವನ್ನು ಮರುಳು ಮಾಡಬಹುದು, ಮೋಹಗೊಳಿಸಬಹುದು. ಅನಂತರ ಜಾಣತನದಿಂದ ಹಾವನ್ನು ಹಿಡಿದು ಅದರ ವಿಷದ ಹಲ್ಲುಗಳನ್ನು ಕಿತ್ತು ಹಾಕಬೇಕು. ದಂತಹೀನವೂ ವಿಷಶೂನ್ಯವೂ ಆದ ಸರ್ಪವನ್ನು ನಿರ್ಭಯವಾಗಿ ಆಡಿಸಿ ವಿನೋದಪಡಬಹುದು. ಮನಸ್ಸನ್ನು ಸ್ವಾಧೀನಪಡಿಸಿಕೊಳ್ಳುವ ವೇದಾಂತ ಸಾಧನ ಕ್ರಮವೇ ಇದು.

ಕೆಲವರು ಯೋಗಿಗಳು (Spiritualists) ತಮ್ಮ ಮನಸ್ಸನ್ನು ಶೀತ ಬಾಧೆಯಿಂದ ಸ್ತಬ್ಧವಾದ ಅಥವಾ ಮೂರ್ಛೆಹೊಂದಿದ ಸರ್ಪದ ಸ್ಥಿತಿಯಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ಮನಸ್ಸು ಕೆಲವು ಹೊತ್ತು ಕೃತ್ರಿಮವಾಗಿ ತೆಪ್ಪಗಿರುವದರಿಂದ ಅವರಿಗೆ ಏಕಾಗ್ರತೆಯ ಫಲವಾಗಿ ಆನಂದವೂ ಆಗಬಹುದು. ಆದರೆ ಅವರ ನಿತ್ಯ ಜೀವನದಲ್ಲಿ ಸಹೋದರ-ಸಹೋದರಿಯರೂ, ಬಂಧು ಮಿತ್ರರೂ, ಶತ್ರುಗಳೂ ಬಂದು ಆಶಾ-ಮೋಹಗಳ ಸರ್ಪವನ್ನು ಬಿಸಿ ಮಾಡುತ್ತಾರೆ. ಒತ್ತಾಯದಿಂದ ತೆಪ್ಪಗಿದ್ದ ಸರ್ಪವು ಮತ್ತೆ ಎಚ್ಚರಗೊಂಡು ಹೆಡೆಯೆತ್ತುತ್ತದೆ. ಅದರ ವಿಷದ ಹಲ್ಲನ್ನು ಕಿತ್ತುಹಾಕಿರಲಿಲ್ಲ; ವಿಷವನ್ನು ನಾಶಮಾಡಿರಲಿಲ್ಲ; ಆದ್ದರಿಂದ ಒಳಗಿರುವ ಮನಸ್ಸು ಪುನಃ ತುಂಟಾಟಕ್ಕೆ ತೊಡಗುತ್ತದೆ. ವಿಷವು ಮೊದಲಿನಂತೆಯೇ ಇರುವದರಿಂದ ಅದರ ಅಪಾಯವು ತಪ್ಪುವದಿಲ್ಲ. ಕೇವಲ ಯಮ-ನಿಯಮಗಳಿಗೆ ಸಂಬಂಧಪಟ್ಟ ಯೋಗ್ಯವಾದ ಶೀಲವೇ ನಿರ್ಮಾಣವಾಗಲಿಲ್ಲ. ನಿಜವಾದ ಪರಮಾರ್ಥವನ್ನೇನೂ ಸಾಧಿಸಲಿಲ್ಲ.

ಅವರಲ್ಲಿ ಅನೇಕ ಜನರು ತಮ್ಮ ವಿಶೇಷ ಶಕ್ತಿಗಳನ್ನು ಮಾರಾಟಕ್ಕಿಟ್ಟು ಹಣ ಸಂಪಾದಿಸಲು ಬಯಸುತ್ತಾರೆ. ಮನಸ್ಸಿನ ಸಂಯಮವು, ಏಕಾಗ್ರತೆಯು, ಧ್ಯಾನ ಯೋಗವು ಸರಿಯಾದ ಸಾಧನವೇ. ಆದರೆ ಎಲ್ಲಾ ಲೋಭ-ಮೋಹಗಳನ್ನು ಮೆಟ್ಟಿ ಮೀರಿ ಮನಸ್ಸಿನ ಸರ್ಪದ ವಿಷದ ಹಲ್ಲನ್ನು ಕಿತ್ತುಹಾಕಬೇಕು. ನಿಮ್ಮ ವಿಚಾರಗಳನ್ನೂ ಭಾವನೆಗಳನ್ನೂ ನಡೆನುಡಿಗಳನ್ನೂ ಗುಣ-ಸ್ವಭಾವಗಳನ್ನೂ (ಶೀಲವನ್ನು) ಉತ್ತಮಪಡಿಸಿಕೊಳ್ಳಿ; (Build your character); ಇವುಗಳನ್ನು ಮುಖ್ಯವಾಗಿ

ಗಮನಿಸಿ. ನೆನಪಿನಲ್ಲಿಟ್ಟುಕೊಂಡು ಸಾಧಿಸಬೇಕು. ಈ ಒಂದೊಂದು ದೌರ್ಬಲ್ಯವನ್ನು ಕಳೆದುಕೊಂಡು ಚಿತ್ತವು ಪೂರಾ ನಿರ್ಮಲವಾದರೆ, ನೀವು ವಿಷದ ಹಲ್ಲುಗಳು ಇಲ್ಲದ ಸರ್ಪವಾಗುತ್ತೀರಿ. ಆಗಲೂ ಅತಿಶೀತದಿಂದ ಸೆಟೆದು ಸುರುಳಿ ಸುತ್ತಿಕೊಂಡು ಮನಸ್ಸು ಸಮಾಧಿಸ್ಥಿತಿಯಲ್ಲಿ ಬಿದ್ದುಕೊಂಡಿರಬಹುದು. ಆದರೆ ನಿಮ್ಮಲ್ಲಿ ಅಜ್ಞಾನ ಮತ್ತು ಲೋಭ—ಮೋಹಗಳ ವಿಷವಿಲ್ಲವಾದುದರಿಂದ ಆ ಸಮಾಧಿ ಸ್ಥಿತಿಯಲ್ಲಿಯೇ ಇರಬೇಕಾದ ಅಗತ್ಯವಿಲ್ಲ. ಈಗ ನಿಮ್ಮ ಕೋಡಿಗಳಲ್ಲಿ ವಿಷವಿಲ್ಲ ವಾದುದರಿಂದಲೂ ನಿಮ್ಮ ಶೀಲವು ಶುದ್ಧವೂ ಭದ್ರವೂ ಇರುವದರಿಂದಲೂ ನಿತ್ಯ ಜೀವನದ ಕಾರ್ಯಕ್ಷೇತ್ರದಲ್ಲಿ ನಿಮಗೆ ಯಾವ ಅಪಾಯವೂ ಒದಗುವುದಿಲ್ಲ.

೪೦ ಸಮಸ್ತ ಜ್ಞಾನದ ಮೂಲವೇ ಹೃದಯ (ಆತ್ಮ)

(ರಾಜ ಮತ್ತು ಇಬ್ಬರು ಕಲಾವಿದರು)

ಪ್ರಕೃತಿಯಲ್ಲಿ ಅತ್ಯುತ್ಕೃಷ್ಟವಾಗಿರುವದರೊಡನೆ ಒಂದಾಗಿ ನಿಮ್ಮ ಹೃದಯವು ಹೆಚ್ಚು ಮಿಡಿದಷ್ಟೂ ಇಡೀ ಪ್ರಕೃತಿಯ ಆದ್ಯಂತದಲ್ಲಿಯೂ ನೀವೇ ಉಸಿರಾಡುತ್ತಿದ್ದೀರೆಂದೂ ನಿಮಗೆ ಹೆಚ್ಚಿನ ಅನುಭವವು ಉಂಟಾಗುತ್ತದೆ. ವೃಕ್ಷಗಳ ವೃದ್ಧಿಯಲ್ಲಿಯೂ ಕ್ಷಯದಲ್ಲಿಯೂ ನೀವೇ ಉಸಿರಾಡುತ್ತಿದ್ದೀರಿ. ಸೂರ್ಯನ ಉದಯಾಸ್ತಗಳೇ ನಿಮ ಶ್ವಾಸೋಚ್ಛ್ವಾಸವು.

ಜನನ-ಮರಣಗಳು ನಿಮ್ಮ ಉಸಿರಾಟ ; ಪ್ರಕೃತಿಯಿಂದ ನೀವು ಬೇರೆಯೆಂದು ತಿಳಿದಷ್ಟೂ ಭಾವಿಸಿದಷ್ಟೂ ನೀವು ನಷ್ಟರಾಗುತ್ತೀರಿ. ಇಡೀ ಜಗತ್ತು ನಿಮ್ಮ ಉಸಿರಾಟವೆಂದು ನೀವು ಹೆಚ್ಚಾಗಿ ಭಾವಿಸಿದಷ್ಟೂ ಜನನ-ಮರಣಗಳ ಪ್ರಕೃತಿ ವಿಲಾಸದ ದ್ವಾರಾ ಉಸಿರಾಡುತ್ತಿರುವ ಅನಂತ ಶಕ್ತಿಯೇ ನೀವಾಗುತ್ತೀರಿ. ನೀವು ಎಲ್ಲಾ ಕ್ಷುದ್ರವಾದ ಚಿಂತಾತಂಕಗಳನ್ನು ಮೀರಿ ನಿಲ್ಲುತ್ತೀರಿ, ಇದೇ ಅಂತರಂಗದ ಸೌಂದರ್ಯ, ತಮ್ಮೊಳಗೆ ಯಾರು ಸುಂದರವಾಗುತ್ತಾರೋ ಅವರ ಹೊರಗಿನ ರೂಪವೂ ಹೇಗಾದರೂ ಇರಲಿ. ಅವರು ಇಡೀ ಜಗತ್ತಿನ ಆಕರ್ಷಣೆಯ ಕೇಂದ್ರವಾಗುತ್ತಾರೆ.

ಸಾಕ್ರೇತಿಸನು ಬಹಳ ಕುರೂಪಿಯಾಗಿದ್ದನು ; ಆದರೆ ಅವನು ಅಂತರಂಗದಲ್ಲಿ ತತ್ತ್ವಜ್ಞಾನದಿಂದಲೂ ಸದ್ಗುಣಗಳಿಂದಲೂ ಉನ್ನತಭಾವಗಳಿಂದಲೂ ಪರಮ ಸುಂದರನಾಗಿದ್ದುದರಿಂದ ಲೋಕವನ್ನೇ ಆಕರ್ಷಿಸುತ್ತಿದ್ದನು.

ಒಳಗಿನ ಸೌಂದರ್ಯವಿದ್ದರೆ ಇಡೀ ಜಗತ್ತು ಎಷ್ಟು ಸರಳವೂ ಸರಾಗವೂ ಸುಲಲಿತವೂ ಸುಗಮವೂ ಆಗುತ್ತದೆ ! ನೀವು ಮುಕ್ತರೆಂದೂ ಸ್ವತಂತ್ರರೆಂದೂ ಭಾವಿಸಿದಾಗ ಪ್ರಪಂಚದಲ್ಲಿ ಅಸಮಂತೆ-ವಿಷಮಂತೆಗಳಾಗಲೀ ಒರಟುತನವಾಗಲೀ ಕಾಠಿಣ್ಯವಾಗಲಿ, ತೋರುವದಿಲ್ಲ.

ಸೂರ್ಯನು ಕೆಳಗಿಳಿದರೂ ಚಂದ್ರನು ಕಳಚಿ ಧೂಳಿನಲ್ಲಿ ಒರಗಿದರೂ ಲೋಕ ಲೋಕಗಳೇ ಸೌರವ್ಯೂಹಗಳೇ ಬ್ರಹ್ಮಾಂಡ ತಂಡಗಳೇ ಆತ್ಯಂತಿಕ ನಾಶದಲ್ಲಿ

ನೂಕಲ್ಪಟ್ಟರೂ ಸತ್ಯಸ್ವರೂಪ ಆತ್ಮನಾದ ನಿಮಗೇನು ನಷ್ಟ ! ಅದನ್ನೇ ಭಾವಿಸಿರಿ. ಇದರಿಂದ ಯಾವದೂ ನಿಮಗೆ ಹಾನಿಯನ್ನುಂಟು ಮಾಡಲಾರದು. ಸೂರ್ಯ-ಚಂದ್ರ-ನಕ್ಷತ್ರಗಳು ನಾಶವಾದರೂ ನೀವೇನೂ ನಾಶವಾಗುವದಿಲ್ಲ. ಎಲ್ಲಾ ದೇಶಕಾಲಗಳ ಆತ್ಮವೇ ನೀವು. ನೀವು ಅವಿನಾಶಿ ಎಂದು ಭಾವಿಸಿದರೆ ಕಲ್ಲುಬಂಡೆಯಂತೆ ಭದ್ರವಾಗಿ ನಿಲ್ಲುತ್ತೀರಿ. ಅದನ್ನು ಅನುಭವದಿಂದ ಅರಿಯಿರಿ. ನೀವು ಉಸಿರಾಡಬೇಕಾದ ರೀತಿಯೇ ಇದು. ಶ್ವಾಸಕೋಶಗಳಿಂದಲೂ ಮನಸ್ಸಿನಿಂದಲೂ ಈ ಬಗೆಯಿಂದ ಉಸಿರಾಡಿ. ಮನಸ್ಸಿನ ಮೂಲಕ ಪೂರ್ಣ ಜಗತ್ತಿನ ಆತ್ಮವನ್ನೇ ಉಸಿರಾಗಿ ಎಳೆದುಕೊಳ್ಳಿ, ಉಸಿರಾಡಿ. ಇಡೀ ವಿಶ್ವವನ್ನೇ ವಿಶ್ವದ ಸತ್ತ್ವವನ್ನೇ ಉಸಿರಾಗಿ ತುಂಬಿಕೊಂಡು ಉಸಿರಾಡಿ. ಇದರಿಂದ ನೀವು ಪ್ರಕೃತಿಯೊಡನೆ ಸಮಶ್ರುತಿಯನ್ನೂ ಸಮರಸತೆಯನ್ನೂ ಸಂಗಾನವನ್ನೂ ಪಡೆಯುತ್ತೀರಿ. ಸಮಗ್ರ ವಿಶ್ವದೊಡನೆ ನಿಮ್ಮ ಜೀವನವು ಸಮರಸವಾಗುತ್ತದೆ; ಮಧುರ ಸ್ವರಮೇಳವನ್ನು ಪಡೆಯುತ್ತದೆ.

ಇಂಪಾದ ಸ್ವರಗಾನದ ಸಂಚಲನೆ ಯಾವದು? ಮೊದಲಿನ ಚಲನೆಯು, ಸ್ಪಂದನವು ಮಧುರ ಗಾನವಾಗಲಿ, ಸುಸಂಗತವಾದ ಸ್ವರಮೇಳದ ಸಂಚಲನೆಯೇ ಗ್ರಹಗೋಳಗಳ ಮಧುರಗಾನ. ವಿಶ್ವದ ಎಲ್ಲಾ ಗ್ರಹಗೋಳಗಳೂ ಸುಸ್ವರ ಮೇಳದ ಸಂಚಲನೆಯಲ್ಲಿ ಉಸಿರಾಡುತ್ತಿವೆ.

ಈ ಸುಸ್ವರ ಮೇಳದ ಸಂಚಲನೆಯನ್ನು ಸಾಧಿಸಿರಿ. ಸುಸ್ವರ ಮೇಳದಲ್ಲಿ ದನಿಗೂಡಿಸಿ; ಗ್ರಹಗೋಳಗಳ ಗಾನವಲ್ಲಿ ಸ್ವರಗೂಡಿಸಿ-ಆಗ ನೀವು ನಿಮ್ಮೊಳಗೆ ಸುಂದರವಾಗುತ್ತೀರಿ.

ಮಹಾ ಸಾಗರದಲ್ಲಿ ಮೀನುಗಳಿವೆ, ಸಾಗರದ ನೀರು ಮೀನುಗಳ ಶ್ವಾಸಾಂಗಗಳನ್ನು ತುಂಬಿ ಕೊಳ್ಳುತ್ತದೆ; ಒಳ ಹೊರಗೆ ಹರಿಯುತ್ತದೆ. ಹೀಗೆ ಮೀನುಗಳ ಹೊಟ್ಟೆ ಒಳಗೂ ಹೊರಗೂ ಸಾಗರ ಜಲಕ್ಕೆ ಪೂರ್ಣಚಲನೆ ಇದೆ. ಸಾಗರದ ಎಲ್ಲಾ ಜಲವೂ ಮೀನುಗಳದೇ.

ಹೀಗೆ, 'ಇಡೀ ಜಗತ್ತೇ ನನ್ನದು' ಎಂದು ಭಾವಿಸಿ. ನಿಮ್ಮ ಹುರುಪು ಹುಮ್ಮಸ್ಸುಗಳ ಮೇಲೂ ಉತ್ಸಾಹದ ಮೇಲೂ ಸಂತೋಷ ವೃತ್ತಿಯ ಮೇಲೂ ತಣ್ಣೀರೆರಚುವದು ಯಾವದು? ಇದೇ ಆಧ್ಯಾತ್ಮಿಕ ಅಪಾರ-ದರ್ಶಕತೆ; ಆಧ್ಯಾತ್ಮಿಕ ಮಾಂದ್ಯ. ಮಬ್ಬು, ಮಸುಕು. ಅಸ್ಪಷ್ಟತೆ, ಆಧ್ಯಾತ್ಮಿಕ ಅಪಾರದೀಪ್ತಿ. ತನ್ನಲ್ಲಿ ಆಧ್ಯಾತ್ಮಿಕ ಬೆಳಕನ್ನು, ಚೈತನ್ಯದ ಬೆಳಕನ್ನು ಹಾಯಗೊಡದಿರುವುದು, ಚೈತನ್ಯದ ಪ್ರಕಾಶವನ್ನು ಪ್ರತಿಫಲಿಸದಿರುವದೇ 'Spiritual Opacity' ಪ್ರಜ್ಞಾಮಾಂದ್ಯ. ಇದು ನಿಮ್ಮ ಮನಸ್ಸಿನ ಮೇಲೆ ಕತ್ತಲೆಯನ್ನು ಕವಿಸುವದು. ಅಂಥ ಇದನ್ನು ಕಳೆದುಕೊಳ್ಳಬೇಕು. ನಿಮ್ಮ ಹೃದಯವು ಚೈತನ್ಯದ ಬೆಳಕಿಗೆ ಪಾರದರ್ಶಕವಾಗಬೇಕು.

ಈ ಅಪಾರ ದರ್ಶಕತೆ ಅಥವಾ ನಿಷ್ಪಾರ ದರ್ಶಕತೆ ಎಂದರೆ ಏನು ? "ಇದು ನನ್ನದು ; ಅದು ನನಗೆ ಸೇರಿದ್ದು" ಎಂಬ ಸ್ವಾಮಿತ್ವವನ್ನು ಸಾಧಿಸುವ ಕ್ಷುದ್ರವಾದ ಅಹಂಕಾರವೇ ಅದು. ಇದನ್ನೇ ಬಿಟ್ಟು ಬಿಡಬೇಕು. ನೀವು ಬಯಲು ಗಾಳಿಯಲ್ಲಿ ಉಸಿರಾಡುವಾಗ ಸಮಗ್ರ ಜಗತ್ತಿನೊಡನೆ ಸುಸ್ವರಮೇಳವನ್ನು ಪಡೆದಿದ್ದೀರೆಂದು ಭಾವಿಸಿ. ಆಗ ನೀವು ಪಾರದರ್ಶಕವಾಗುತ್ತೀರಿ ; ಸಕಲವೂ ನಿಮ್ಮಲ್ಲಿಗೇ ಆಕರ್ಷಿತ ವಾಗಿ ಬರುತ್ತವೆ.

ಒಬ್ಬ ರಾಜನಲ್ಲಿಗೆ ಇಬ್ಬರು ಚಿತ್ರಗಾರರು ಬಂದು ಅವನ ಅರಮನೆಯ ಗೋಡೆ ಗಳನ್ನು ಚಿತ್ರಿಸಿ ಅಲಂಕರಿಸುವ ಉದ್ಯೋಗದಲ್ಲಿ ತಮ್ಮನ್ನು ನಿಯಮಿಸಿಕೊಳ್ಳಬೇಕೆಂದು ಕೇಳಿಕೊಂಡರು. ಪರಸ್ಪರ ವಿರೋಧಿಗಳಾಗಿದ್ದ ಆ ಬಣ್ಣಗಾರರಲ್ಲಿ ಪ್ರತಿಯೊಬ್ಬನೂ ತನಗೊಬ್ಬನಿಗೇ ಆ ಇಡೀ ಕಾರ್ಯವನ್ನು ಗಂತ್ತಿಗೆ ಕೊಡಬೇಕೆಂದು ಪ್ರಾರ್ಥಿಸಿದನು. ಅವರನ್ನು ಕೆಲಸದಲ್ಲಿ ತೊಡಗಿಸುವದಕ್ಕೆ ಮುಂಚೆ ಅವರ ಕಲಾಕೌಶಲವನ್ನು ಪರೀಕ್ಷಿಸ ಬೇಕೆಂದು ರಾಜನು ಯೋಚಿಸಿದನು. ಅದೇ ಪ್ರಕಾರವಾಗಿ, ಒಂದಕ್ಕೊಂದು ಎದು ರಾಗಿರುವ ಎರಡು ಗೋಡೆಗಳ ಮೇಲೆ ಬೇರೆ ಬೇರೆ ಚಿತ್ರಿಸಬೇಕೆಂದು ರಾಜನು ಅವರನ್ನು ನಿಯಮಿಸಿದನು.

ಆ ಕಲಾವಿದರು ಒಬ್ಬರ ಕೆಲಸವನ್ನು ಒಬ್ಬರು ನೋಡದೆ, ಸ್ವತಂತ್ರವಾಗಿ ಚಿತ್ರಿಸು ವದಕ್ಕಾಗಿ ಗೋಡೆಗಳ ಎದುರಿಗೆ ಮರೆಯಾಗಿ ಪರದೆಗಳನ್ನು ಇಟ್ಟರು. ಅವರು ಒಂದು ತಿಂಗಳು ಕೆಲಸ ಮಾಡಿದ ಮೇಲೆ, ಅವರಲ್ಲಿ ಒಬ್ಬನು ರಾಜನಲ್ಲಿಗೆ ಬಂದು, ತನ್ನ ಕಾರ್ಯವು ಮುಗಿದಿದೆಯೆಂದೂ ರಾಜನು ಬಂದು ತನ್ನ ಚಿತ್ರವನ್ನು ನೋಡಬಹು ದೆಂದೂ ಅವನನ್ನು ಬೇಡಿದನು. ಆ ರಾಜನು ಇನ್ನೊಬ್ಬ ಚಿತ್ರಕಾರನನ್ನು ಕುರಿತು, ಅವನ ಕೆಲಸವು ಮುಗಿಯುವುದಕ್ಕೆ ಇನ್ನು ಎಷ್ಟು ಕಾಲ ಬೇಕಾಗಬಹುದೆಂದು ಕೇಳಿದನು. ಅದಕ್ಕೆ, ತನ್ನ ಕೆಲಸವೂ ಮುಗಿದಿದೆಯೆಂದು ಆ ಚಿತ್ರಕಾರನೂ ಹೇಳಿದನು. ನಿಯ ಮಿತವಾದ ಒಂದು ದಿನ ರಾಜನು ತನ್ನ ಪರಿವಾರ ಮತ್ತು ಪ್ರೇಕ್ಷಕರ ಸಹಿತವಾಗಿ, ಯಾವ ಚಿತ್ರಕಾರನ ಕೆಲಸವು ಇನ್ನೊಬ್ಬನ ಕೆಲಸಕ್ಕಿಂತಲೂ ಉತ್ತಮವಾಗಿದೆಯೆಂಬ ದನ್ನು ನೋಡಬೇಕೆಂದು ಬಂದನು. ಮೊದಲನೆಯ ಕಲಾವಿದನ ಗೋಡೆಗೆ ಮರೆಯಾಗಿದ್ದ ತೆರೆಯನ್ನು ತೆರೆದು ನೋಡಿದರು. ರಾಜನೂ ಜೊತೆಗಿದ್ದವರೆಲ್ಲರೂ ಆ ಚಿತ್ರವು ದಿವ್ಯವಾಗಿಯೂ ಭವ್ಯವಾಗಿಯೂ ಇದೆಯೆಂದು ಒಮ್ಮತದಿಂದ ಮೆಚ್ಚಿ ಹೊಗಳಿದರು. ಎಲ್ಲರೂ ಅದನ್ನು ನೋಡಿ ನೋಡಿ ಸಂತೋಷ ಪರವಶರಾದರು. ಆ ಚಿತ್ರವು ಘನವಾಗಿದೆಯೆಂದೂ ಮಹೋನ್ನತವಾಗಿದೆಯೆಂದೂ ಭಾವಿಸಿ ಮಾತ ನಾಡಿಕೊಂಡರು.

ಆ ಚಿತ್ರಕ್ಕಿಂತಲೂ ಉತ್ತಮವಾಗಿ ಯಾರೂ ಬರೆಯಲು ಸಾಧ್ಯವಿಲ್ಲವೆಂದೂ ಇನ್ನೊಬ್ಬನ ಚಿತ್ರವನ್ನು ನೋಡುವ ಆವಶ್ಯಕತೆಯೇ ಇಲ್ಲವೆಂದೂ ಇವನು ತಮ್ಮ

ನಿರೀಕ್ಷೆಯನ್ನು ಬಹಳ ದೂರ ಮೀರಿದ್ದಾನೆಂದೂ ಪೂರಾ ಕೆಲಸವನ್ನು ಇವನಿಗೇ ಕೊಡಬಹುದೆಂದೂ ಆಸ್ಥಾನದ ಅಧಿಕಾರಿಗಳೆಲ್ಲಾ ಅಭಿಪ್ರಾಯಪಟ್ಟರು. ಆದರೆ ರಾಜನು ಅವರೆಲ್ಲರಿಗಿಂತಲೂ ಹೆಚ್ಚು ಜಾಣನಾಗಿದ್ದನು. ಅವನು ಇನ್ನೊಂದು ಗೋಡೆಯ ಎದುರಿಗಿದ್ದ ತೆರೆಯನ್ನು ತೆಗೆಸಿದನು. ಅಹಾ! ಜನರೆಲ್ಲರೂ ಬೆರಗಾದರು! ಎಲ್ಲರೂ ಬಾಯಿ ಕಳೆದು, ಕಣ್ಣುಗಳನ್ನರಳಿಸಿ ನೋಡುತ್ತಾ ಆಶ್ಚರ್ಯಮಗ್ನರಾಗಿ ಗಟ್ಟಿಯಾಗಿ ಉಸಿರಾಡದಂತೆ ನಿಂತಿದ್ದರು. "ಏನಿದಾಶ್ಚರ್ಯ! ಅದ್ಭುತ! ಇದೆಷ್ಟು ಸುಂದರವಾಗಿದೆ! ಅಪೂರ್ವವಾಗಿದೆ! ಲೋಕೋತ್ತರವಾಗಿದೆ!" ಎಂದು ರಾಜನೂ ದರ್ಬಾರಿನವರೂ ಉದ್ಗಾರಮಾಡುತ್ತಿದ್ದರು.

ಅದರಲ್ಲಿ ಅಂಥಾ ಆಶ್ಚರ್ಯವೇನಿತ್ತು? ಎಂದು ವಿಸ್ಮಯಗೊಳ್ಳಬಹುದು. ಆ ಎರಡನೆಯ ಚಿತ್ರಕಾರನು ಆ ಇಡೀ ತಿಂಗಳೆಲ್ಲಾ ಗೋಡೆಯ ಮೇಲೆ ಏನನ್ನೂ ಚಿತ್ರಿಸಿರಲಿಲ್ಲ. ಅವನು ಆ ಮೂವತ್ತು ದಿನಗಳು ರಾತ್ರಿ ಹಗಲೂ ಆ ಗೋಡೆಯನ್ನು ತಿಕ್ಕಿ ತಿಕ್ಕಿ ಉಜ್ಜಿ ಉಜ್ಜಿ ಅತಿಶಯ ನಯವಾಗಿ ಮಿರುಗುಟ್ಟುವಂತೆಯೂ ಸಾಧ್ಯವಾದಷ್ಟು ಪಾರದರ್ಶಕವಾಗುವಂತೆಯೂ ಮಾಡಿದ್ದನು. ಇನ್ನೊಂದು ಎದುರು ಗೋಡೆಯಲ್ಲಿ ಚಿತ್ರವು ಚೆನ್ನಾಗಿದ್ದರೂ ಆ ಗೋಡೆಯು ಒರಟಾಗಿಯೂ ಉಬ್ಬುತಗ್ಗಾಗಿಯೂ ಕುರೂಪವಾಗಿಯೂ ಇದ್ದಿತು. ಚಿತ್ರವನ್ನು ಬರೆಯದಿದ್ದ ಗೋಡೆಯು ಹೆಚ್ಚು ನಯವಾಗಿಯೂ ಸಮವಾಗಿಯೂ ಮಟ್ಟವಾಗಿಯೂ ನುಣುಪಾಗಿಯೂ ಸಾಫಾಗಿಯೂ ಸುಂದರವಾಗಿಯೂ ಇದ್ದಿತು. ಅದರಲ್ಲಿ ಪಾರದರ್ಶಕತೆಯು ಪೂರ್ಣವಾಗಿದೆಯೋ ಎನ್ನುವಂತೆ ಮಾಡುವುದರಲ್ಲಿ ಅವನು ಯಶಸ್ವಿಯಾಗಿದ್ದನು. ಆದ್ದರಿಂದ ಎದುರಿನ ಗೋಡೆಯ ಮೇಲೆ ಅವನ ಪ್ರತಿಸ್ಪರ್ಧಿಯು ಬರೆದಿದ್ದ ಬಣ್ಣದ ಚಿತ್ರವೆಲ್ಲಾ ಆ ಪಾರದರ್ಶಕವಾದ ಗೋಡೆಯಲ್ಲಿ ಪೂರ್ಣವಾಗಿ ಪ್ರತಿಫಲಿಸಿದ್ದಿತು. ಈ ಗೋಡೆಯು ನಯವಾಗಿಯೂ ಸುಂದರವಾಗಿಯೂ ಥಳಥಳ ಹೊಳೆಯುತ್ತಲೂ ಇದ್ದುದರಿಂದ ಇದರಲ್ಲಿ ಪ್ರತಿಬಿಂಬಿತವಾದ ವರ್ಣಚಿತ್ರವು ಎದುರಿನ ಮೂಲ ಚಿತ್ರಕ್ಕಿಂತಲೂ ಉತ್ತಮವಾಗಿಯೂ ದಿವ್ಯವಾಗಿಯೂ ತೋರುತ್ತಿದ್ದಿತು.

ಆ ಕಾಲದ ರಾಜರೂ ಪ್ರಜೆಗಳೂ ಕನ್ನಡಿಯನ್ನು ಕಂಡಿರಲಿಲ್ಲ. ಮತ್ತು ಅವರು ಗೋಡೆಯನ್ನು ಬಹಳ ಹತ್ತಿರದಲ್ಲಿ ಪರೀಕ್ಷಿಸಲಿಲ್ಲ. "ಮಹಾ ಪ್ರಭೋ! ಈ ಚಿತ್ರಕಾರನು ಗೋಡೆಯಲ್ಲಿ ಎರಡು ಮೂರು ಗಜಗಳು ಆಳವಾಗಿ ತೋಡಿ ತೆಗೆದು ಎಲ್ಲವನ್ನೂ ಬಣ್ಣದಿಂದ ಚಿತ್ರಿಸಿದ್ದಾನೆ. ಇದು ಅಸಾಧಾರಣವೇ ಸರಿ!" ಎಂದು ಪರಿವಾರದವರು ರಾಜನಿಗೆ ಆಶ್ಚರ್ಯವನ್ನು ಸೂಚಿಸಿದರು.

ಕನ್ನಡಿಯಿಂದ ಹೊರಗೆ ವಸ್ತುಗಳು ಎಷ್ಟು ದೂರದಲ್ಲಿರುತ್ತವೆಯೋ ಕನ್ನಡಿಯೊಳಗೆ ಅಷ್ಟೇ ದೂರದಲ್ಲಿ ಅವುಗಳ ಪ್ರತಿಬಿಂಬಗಳು ಇರುವಂತೆ ಕಾಣುತ್ತವೆ. ಆ ಎರಡು ಗೋಡೆಗಳ ನಡುವೆ ಎರಡು ಮೂರು ಗಜಗಳ ದೂರವಿದ್ದುದರಿಂದ ಕನ್ನಡಿಯಷ್ಟು

ಮೆರಗಿದ್ದ ಆ ಗೋಡೆಯಲ್ಲಿ ಹಾಗೆ ಕಂಡಿತು. ಆ ಗೋಡೆಗಳು ಬಹಳ ಎತ್ತರವಾಗಿದ್ದು ಅವುಗಳ ಮಧ್ಯದಲ್ಲಿ ನಿಂತು ನೋಡತಕ್ಕವರ ತಲೆಯಿಂದ ಮೇಲೆ ಚಿತ್ರಗಳು ಕಾಣುತ್ತಿದ್ದವು. ಆದ್ದರಿಂದ ಪ್ರೇಕ್ಷಕರ ಪ್ರತಿಬಿಂಬವು ಕನ್ನಡಿಯಂತಿದ್ದ ಗೋಡೆಯಲ್ಲಿ ಬೀಳಲಿಲ್ಲ.

ಈ ದೃಷ್ಟಾಂತದಿಂದ ನಾವು ತಿಳಿದುಕೊಳ್ಳಬೇಕಾದುದೇನೆಂದರೆ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸುವದು ಮೊದಲನೆಯ ಚಿತ್ರಕಾರನು ಗೋಡೆಯ ಮೇಲೆ ಚಿತ್ರವನ್ನು ಬರೆದಂತೆ. ಅದು ಮೇಲು ಮೇಲಿನ ತಿಳಿವಳಿಕೆಯಾದುದರಿಂದ ಅಷ್ಟು ಪ್ರಯೋಜನಕಾರಿಯಲ್ಲ. ಎರಡನೆಯ ಚಿತ್ರಕಾರನು ಗೋಡೆಯನ್ನು ಉಜ್ಜಿ ಉಜ್ಜಿ ನುಣುಪು ಮಾಡಿ ಮೆರಗು ಕೊಟ್ಟು ಕನ್ನಡಿಯಂತೆ ಪಾರದರ್ಶಕವಾಗಿ ಮಾಡಿದಂತೆ ನಮ್ಮ ಮನೋಬುದ್ಧಿಗಳ ಗೋಡೆಯನ್ನೂ ಉಜ್ಜಿದಂತೆ ಸಾಧನ ಸಂಸ್ಕಾರದಿಂದ ನಯವಾಗಿಯೂ ಸಮವಾಗಿಯೂ ಸೂಕ್ಷ್ಮವಾಗಿಯೂ ಮಾಡಬೇಕು. ಹೃದಯವನ್ನು ನಿರ್ಮಲಗೊಳಿಸುವದರಿಂದ ಅದು ಪಾರದರ್ಶಕವಾಗಿ ಪ್ರಪಂಚದಲ್ಲಿರುವ ಜ್ಞಾನವೆಲ್ಲಾ ಅದರಲ್ಲಿ ತಾನೇ ತಾನಾಗಿ ಪ್ರತಿಫಲನವಾಗುತ್ತದೆ, ಇಡೀ ವಿಶ್ವದಿಂದಲೇ ನೀವು ಸ್ಫೂರ್ತಿಯನ್ನು ಪಡೆಯುತ್ತೀರಿ,

ರಾಮನು ತನ್ನ ಸ್ವಂತ ಅನುಭವವನ್ನು ಹೇಳುತ್ತಾನೆ. ಅವನು ಹಿಮಾಲಯದ ನಿಬಿಡವಾದ ಅಡವಿಗಳಲ್ಲಿ ವಾಸಮಾಡುತ್ತಿದ್ದಾಗ, ಮನಸ್ಸು ಪಾರದರ್ಶಕವೂ ತಟಸ್ಥವೂ ಕಲ್ಪನಾಶೂನ್ಯವೂ ಇದ್ದ ಸಮಯದಲ್ಲಿ ಸ್ಫೂರ್ತಿಯ ಮೂಲಕ ಎನ್ನುವಂತೆ ಅತ್ಯಂತಶ್ರೇಷ್ಠವಾದ ಭಾವನೆಗಳೂ ಆಶ್ಚರ್ಯಕರವಾದ ತತ್ತ್ವವಿಚಾರಗಳೂ ಅದ್ಭುತವಾದ ಶಕ್ತಿಯೂ ಮನಸ್ಸಿನಲ್ಲಿ ಉದಯವಾದವು. ಆದ್ದರಿಂದ ಬೈಬಲ್ಲೂ ಉಪನಿಷತ್ತುಗಳೂ ವೇದಗಳೂ ಮಿಲ್ಟನ್ ಮಹಾಕವಿಯ ಕೃತಿಗಳೂ ಎಮರ್‌ಸನ್‌ನ ಕೃತಿಗಳೂ (ಕ್ರೈಸ್ತನದೆನಿಸಕೊಳ್ಳದಿದ್ದರೂ) ಇಂಗರ್‌ಸಾಲ್‌ನ ಕೃತಿಗಳೂ ದೈವಪ್ರೇರಣೆಯಿಂದಲೇ, ಸ್ಫೂರ್ತಿಯಿಂದಲೇ ಈ ಎಲ್ಲಾ ಗ್ರಂಥಗಳೂ ಬರೆಯಲ್ಪಟ್ಟವೆಯೆಂದು ರಾಮನು ಹೇಳುತ್ತಾನೆ. ವೇದಗಳು, ಕೊರಾನ್, ಬೈಬಲ್ ಇತ್ಯಾದಿ ಗ್ರಂಥಗಳಂತೆಯೇ ಸ್ಪೆನ್ಸರ್‌ನ ಕೃತಿಗಳೂ ದೈವಪ್ರೇರಣೆಯಿಂದಲೇ ಆಗಿವೆ. ಸ್ಫೂರ್ತಿಯಿಂದಲ್ಲದೆ ಯಾವ ಜ್ಞಾನವೂ ಇಲ್ಲ; ಎಲ್ಲಾ ಜ್ಞಾನವೂ ಸ್ಫೂರ್ತಿಯ ಮೂಲಕವೇ ಬರುತ್ತದೆ. ಯಾವಾಗ ಗ್ರಂಥಕರ್ತನು ತನ್ನಲ್ಲಿ ವಿಚಾರವನ್ನೂ ಭಾವವನ್ನೂ ಪ್ರಚೋದನೆ ಮಾಡಿದ ದೈವವನ್ನು ಮರೆತು ತಾನೇ ಸ್ವತಂತ್ರ ಕರ್ತೃವೆಂಬ ಅಹಂಕಾರವನ್ನೂ ಆ ಕೃತಿಯು ತನ್ನ ಸ್ವಂತ ಸ್ವತ್ತು ಎಂಬ ಸ್ವಾಮಿತ್ವವನ್ನೂ ವಹಿಸಿ, ವ್ಯಾಪಾರ ಮನೋಭಾವದಿಂದ, ಜನರ ಮೂಲಕ ಹಣಸಂಪಾನೆ ಮಾಡುತ್ತಾನೋ ಆಗ ಅವನ ಹೃದಯವು ಸಂಕುಚಿತವೂ ಕಲುಷಿತವೂ ಸ್ವಾರ್ಥಮಯವೂ ಆಗುತ್ತದೆ—ಅಥವಾ ಆದದರಿಂದ ಅವನ ಹೃದಯದ ಗೋಡೆಯು ಅಪೂರ್ಣವೂ ಒರಟೂ ಅಸಮವೂ ವಿಷಮವೂ ವಿಕಾರಿಯೂ ಆಗುತ್ತದೆ. ಈ ದೋಷವನ್ನು ಕಳೆದುಕೊಂಡರೆ ಹೃದಯ

ಭಿತ್ತಿಯು ಪಾರದರ್ಶಕವಾಗುತ್ತದೆ. ಆಗ ದಿವ್ಯಜ್ಞಾನದ ಸುಂದರವಾದ ವರ್ಣಚಿತ್ರವು ತಾನಾಗಿ ಸ್ಪಷ್ಟವಾಗಿ ಮೂಡುತ್ತದೆ. ನಿಮ್ಮ ಹೃದಯವು ಇಡೀ ಜಗತ್ತಿನ ಜೊತೆಗೆ ಸರಸವಾಗಿ ಸ್ಪಂದನಮಾಡಿದಾಗ, ಪ್ರಪಂಚದ ವ್ಯವಹಾರವೇ ನಿಮ್ಮ ವ್ಯವಹಾರವಾದಾಗ ಪ್ರಪಂಚದ ಹೃದಯವೇ ನಿಮ್ಮ ಹೃದಯವಾದಾಗ, "ಸಮಗ್ರ ವಿಶ್ವದಲ್ಲಿ ಮಿಡಿಯುತ್ತಿರುವ ಶಕ್ತಿಯು ನಾನೇ" ಎಂಬ ಭಾವವು ನಿಮಗೆ ಬಂದಾಗ ನೀವು ತಿಳಿದೋ ತಿಳಿಯದೆಯೋ ಆ ಸ್ಥಿತಿಯಲ್ಲಿದ್ದಾಗ, ಜ್ಞಾನವು ತಾನಾಗಿಯೇ ನಿಮ್ಮೊಳಗೆ ಸ್ಫುರಿಸಿ ತುಂಬಿಕೊಳ್ಳುತ್ತದೆ. ಇದೇ ರಾಜಮಾರ್ಗ.

ಪುಸ್ತಕಗಳಲ್ಲಿಯೂ ದೇವಾಲಯಗಳಲ್ಲಿಯೂ ಜ್ಞಾನವನ್ನು ವ್ಯರ್ಥವಾಗಿ ಹುಡುಕಬೇಡಿ. ವಿದ್ಯೆಯ ರಹಸ್ಯವನ್ನು ನಿಮ್ಮ ಹೃದಯದಲ್ಲಿಯೇ ಹುಡುಕಿರಿ. ನೀವು ಒಳಗೆ ಎಳೆದುಕೊಳ್ಳುವ ಉಸಿರಿನೊಂದಿಗೆ ಇಡೀ ಜಗತ್ತನ್ನೇ—ಸಕಲಸಾರವಾದ ಚೈತನ್ಯವನ್ನೇ–ಎಳೆದುಕೊಳ್ಳುವದಾಗಿ ಭಾವಿಸಿರಿ. ನಿಮ್ಮ ಮನಸ್ಸಿನಲ್ಲಿ ವಿರೋಧವೂ ವೈರವೂ ಇಲ್ಲವಾದರೆ, "ಇದು ನನ್ನದು" ಎಂದು ಹಕ್ಕನ್ನು ಸಾಧಿಸುವ ಮನೋಭಾವ ಇಲ್ಲವಾದರೆ, ಶತ್ರುವಿನ ಬಯಕೆಗಳು ನಿಮ್ಮ ಬಯಕೆಗಳೆಂದೇ ಭಾವಿಸುವದಾದರೆ, ಯಾರ ವಿಷಯದಲ್ಲಿ ನಿಮಗೆ ಅಸೂಯೆ ಇತ್ತೋ ಅವರನ್ನು ನೀವೇ ಎಂದು ತಿಳಿಯುವದಾದರೆ ನಿಮ್ಮ ಪ್ರಜ್ಞಾಮಾಂದ್ಯವೂ ಹೃದಯದ ಅಪಾರದರ್ಶಕತೆಯೂ (Opacity) ಮಬ್ಬು, ಮಂಕು, ತಮಸ್ಸು, ಕತ್ತಲೆಯೂ ಕರಗಿವೆಯೆಂದು ತಿಳಿಯಬೇಕು. ಆಗ ನಿಮ್ಮ ಹೃದಯವು ಕನ್ನಡಿಯಂತೆ ನಿರ್ಮಲವಾಗಿ ಪಾರದರ್ಶಕವಾಗುತ್ತದೆ. ನಿಮ್ಮನ್ನು ಶತ್ರುವಾಗಿ ಕಾಣತಕ್ಕವರ ಇಚ್ಛೆಯು ನಿಮ್ಮ ದೇಹವನ್ನು ಕೊಲ್ಲಬೇಕೆಂದು ಇದ್ದರೆ, ಆ ಇಚ್ಛೆಯನ್ನೂ ನಿಮ್ಮದೆಂದೇ ತಿಳಿಯಬೇಕು ಅಥವಾ ಭಾವಿಸಬೇಕು. ನಿಮ್ಮ ದೇಹವನ್ನು ಕೊಲ್ಲುವದರಿಂದ ಆ ಶತ್ರುವಿಗೆ ಯಾವ ಸಂತೋಷವಾಗುವದೋ ಅದೇ ಸಂತೋಷ ನಿಮಗೂ ಆಗುವದಾದರೆ, ಓ! ಆಗ ನಿಮ್ಮ ಹೃದಯವು ವಿಶ್ವಗಾನದೊಂದಿಗೆ ಸಮಶ್ರುತಿಯಿಂದ ದನಿಗೂಡಿಸಿದೆಯೆಂದು ತಿಳಿಯಬೇಕು: ಇಡೀ ಪ್ರಪಂಚದ ಸಂಗಾನದಲ್ಲಿ ಸಮರಸವಾಯಿತೆಂದು ತಿಳಿಯಬೇಕು. ಆಗ ನಿಮ್ಮ ಹೃದಯದ ಮಾಂದ್ಯವೆಲ್ಲಾ ಕಳೆದು ಕನ್ನಡಿಯಾಗಿರುವದರಿಂದ ನೀವೇ ದೇವರು, ಸರ್ವಸಮರ್ಥನಾದ ಪರಮೇಶ್ವರ, ಪರಮಾತ್ಮ, ಇದೇ ಯಶಸ್ಸಿನ ರಹಸ್ಯ; ಪ್ರಪಂಚದ ಸಕಲೈಶ್ವರ್ಯಗಳೂ ನಿಮ್ಮದೇ ಆಗುತ್ತವೆ.

೮೧. ವಿಜ್ಞಾನ ಸತ್ಯತಾವಾದ ಮತ್ತು ವಿಷಯ ಸತ್ಯತಾವಾದ

(ಶ್ರೀಮಾನ್ ಕಾಡುಮರ ಮತ್ತು ಶ್ರೀಮಾನ್ ಕೊಡಲಿ)

ಆದರೆ, ಗೋಡೆಯು ಬಹಳ ನಿಜವೆಂದೂ ನಮ್ಮ ಭಾವನೆಗೆ ಸಂಬಂಧವಿಲ್ಲದೆ ಗೋಡೆಯು ಸ್ವತಂತ್ರವಾಗಿದೆಯೆಂದೂ ವಿಷಯ-ಸತ್ಯತಾವಾದಿಗಳು ಹೇಳುತ್ತಾರೆ.

ನಾವು ಗೋಡೆಯನ್ನು ನೋಡುತ್ತೇವೆ, ಕೈಯಿಂದ ಮುಟ್ಟುತ್ತೇವೆ, ಅದನ್ನು ಹೊಡೆದು ಶಬ್ದವನ್ನೂ ಕೇಳಬಹುದು. ಅದರ ಗಂಧವನ್ನೂ ಮೂಸಿ ನೋಡಬಹುದು. ಅದನ್ನು ತಿಂದರೆ. ಅದು ನಿಜವೆಂದು ಹೊಟ್ಟೆಯು ಹೇಳುತ್ತದೆ. ಆದ್ದರಿಂದ ವಿಷಯ ಸತ್ಯತಾವಾದಿಗೂ ಬೇಕಾದಷ್ಟು ಯುಕ್ತಿಗಳಿವೆ. ಆದರೆ, ಒಂದು ವಸ್ತುವು ತೋರ ಬೇಕಾದರೆ ಮನಸ್ಸೂ ಬೇಕು, ವಿಷಯವೂ ಬೇಕು—ಎಂದು ರಾಮನು ಹೇಳುತ್ತಾನೆ. ವಶೀಕರಣ ವಿದ್ಯೆಗೆ ಬಲಿಯಾದವನಿಗೆ ಗೋಡೆಯು ಬೇರೆ ವಸ್ತುವಾಗಿ ತೋರಬಹು ದೆಂದು ಒಪ್ಪಿದರೂ ಆವಾಹಕನು ತನಗೆ ಇಷ್ಟವಾದ ವಸ್ತುವನ್ನು ಸೂಚಿಸಿ ಕುದುರೆ ಯೆಂದೋ ಸರೋವರವೆಂದೋ ತೋರಿಸುವದಕ್ಕೆ ಆಧಾರವಾಗಿ ಯಾವದಾದರೊಂದು ವಸ್ತು ಇರಲೇ ಬೇಕು. ಒಂದು ವಸ್ತುವು ತೋರುವದಕ್ಕೆ ಜ್ಞಾತೃವೂ ಬೇಕು, ವಿಷಯವೂ ಬೇಕು.

ಇಂಡಿಯಾದಲ್ಲಿ ಒಮ್ಮೆ ಇಬ್ಬರು ಜಗಳವಾಡುತ್ತಿದ್ದರು. ಜನರು ಅವರನ್ನು ದರ್ವೇಶಿಗಳು ಎನ್ನುತ್ತಿದ್ದರು. ಒಬ್ಬನ ಹೆಸರು ಶ್ರೀಮಾನ್ ಕಾಡುಮರ; ಇನ್ನೊಬ್ಬನ ಹೆಸರು ಶ್ರೀಮಾನ್ ಕೊಡಲಿ. ಒಂದು ಪ್ರಸಂಗದಲ್ಲಿ ಶ್ರೀಯುತ ಕೊಡ ಲಿಯು ಅತಿಶಯ ಕೋಪೋದ್ರೇಕದಿಂದ ರೇಗಾಡಿ ಆ ಶ್ರೀಯುತ ಕಾಡುಮರನಿಗೆ ಹೇಳಿದನು "ಪಾಪಿಷ್ಠ ! ನಿನ್ನನ್ನು ಕಡಿದುರುಳಿಸಿ ತುಂಡು ತುಂಡು ಮಾಡುತ್ತೇನೆ" ಅದಕ್ಕೆ ಮರ ಹೇಳಿದನು "ಆದರೆ ಮಹಾಸ್ವಾಮಿ, ನಿಮ್ಮ ಹಿಂದೆ ನನ್ನನ್ನು ಇಟ್ಟು ಕೊಳ್ಳಲೇ ಬೇಕು. ಇಲ್ಲವಾದರೆ ಪಾಪ। ನೀವೇನೂ ಮಾಡಲಾರಿರಿ." ಮರನು ಸೇಡಿನಿಂದ ರೇಗದೆ, ಹೀಗೆ ಜಾಣತನದಿಂದ ಹೇಳಿದ್ದೇಕೆಂದರೆ, ಕೊಡಲಿಯು ಹಿಂದುಗಡೆ ಮರದ ಕಾವನ್ನು ಹಾಕದಿದ್ದರೆ ಕೊಡಲಿಯು ಏನೂ ಮಾಡಲಾರದು. ಹೀಗೆ ವಿಜ್ಞಾನ-ಸತ್ಯತಾ ವಾದವೂ ವಿಷಯ-ಸತ್ಯತಾ ವಾದವೂ ಒಂದನ್ನೊಂದು ಅವಲಂಬಿ ಸಿವೆ. ಈ ಎರಡರಲ್ಲಿ ಪ್ರತಿಯೊಂದೂ ಇನ್ನೊಂದರ ಕೈಯನ್ನು ಹಿಡಿದೇ ನಡೆಯ ಬೇಕಾಗಿದೆ.

ಈಗ ಒಂದು ಉಪ್ಪು ಕಾಗದದ ಮೇಲೆ ದೀಪದ ಕಡ್ಡಿಯನ್ನು ಗೀಚಿದರೆ ಬೆಂಕಿ ಹೊತ್ತುತ್ತದೆ, ಬೆಂಕಿಯು ಮೊದಲು ಉಪ್ಪು ಕಾಗದದಲ್ಲಿಯೂ ಇರಲಿಲ್ಲ, ಕಡ್ಡಿಯ ಲ್ಲಿಯೂ ಇರಲಿಲ್ಲ. ಆದರೆ ಇವೆರಡರ ತಿಕ್ಕಾಟದಿಂದ ಬೆಂಕಿಯು ಹುಟ್ಟಿತು, ಎರಡು ಕೈಗಳಿಂದ ಚಪ್ಪಾಳೆಯನ್ನು ಹೊಡೆಯುತ್ತೇವೆ. ಆದರಿಂದ ಶಬ್ದ ಉಂಟಾಗು ತ್ತದೆ. ಆ ಶಬ್ದವು ಬಲಗೈಯಲ್ಲಿಯೂ ಇರಲಿಲ್ಲ, ಎಡಗೈಯಲ್ಲಿಯೂ ಇರಲಿಲ್ಲ; ಆದರೆ ಇವೆರಡರ ತಾಡನದಿಂದ ಉಂಟಾಯಿತು. ಎರಡು ಕೈಗಳಲ್ಲಿರುವ ಆತ್ಮವು ಒಂದೇ. ರಾಮನು ನಿಮಗೆ ಕಾಗೆಯ ವಿಷಯವನ್ನು ಹೇಳಬೇಕಾಗಿದೆ, ಕಾಗೆಗೆ ಕಣ್ಣಿನ ಗೂಡುಗಳು ಎರಡಿದ್ದರೂ ಕಣ್ಣು ಗುಡ್ಡೆಯು ಮಾತ್ರ ಒಂದೇ ಇದೆಯೆಂದು ಹೇಳುತ್ತಾರೆ. ಕಾಗೆಯು ಬಲಗಡೆ ನೋಡಬೇಕಾದರೆ, ಕಣ್ಣುಗುಡ್ಡೆಯನ್ನು ಬಲದ

ಕಂಳಿಗೆ ತಿರುಗಿಸುತ್ತದೆ ; ಎಡಗಡೆ ನೋಡಬೇಕಾದರೆ ಅವನ್ನು ಎಡವ ಕಂಳಿಗೆ ತಿರುಗಿಸುತ್ತದೆ, ಅದು ಒಂದೇ ಕಣ್ಣನ್ನು ತನ್ನ ಇಷ್ಟ ಪ್ರಕಾರ ಬಲಗಡೆಗೂ ಎಡಗಡೆಗೂ ತಿರುಗಿಸಿ ನೋಡುತ್ತದೆ. ಆ ಎರಡು ವಾದಗಳ ವಿಚಾರವೂ ಹೀಗಿದೆ. ಎರಡು ದೊಡ್ಡ ತೆರೆಗಳು ಎದುರಾಳಿಯಾಗಿ ಬಂದು ಒಂದನ್ನೊಂದು ಬಡಿದರೆ ತೀರಾಯಿಯಂಥ ಬಿಳಿಯ ನೊರೆ ಉಂಟಾಗುತ್ತದೆ. ಆದರೆ ಆ ಎರಡು ತೆರೆಗಳಲ್ಲಿರುವ ನೀರು ಮಾತ್ರ ಒಂದೇ. ಮಗುವು ಹುಟ್ಟಬೇಕಾದರೆ ತಂದೆ, ತಾಯಿ ಇಬ್ಬರೂ ಬೇಕು ; ಒಬ್ಬರಿಂದಲೇ ಹುಟ್ಟುವದಿಲ್ಲ. ಅವರನ್ನು ದೇವರು, ಮತ್ತು ಪವಿತ್ರಾತ ಎನ್ನಬಹುದು.

೮೨. ಜ್ಞಾನ ಸಂಪಾದನೆಯ ಎರಡು ಮಾರ್ಗಗಳು

(ರಾಜ ಮತ್ತು ಇಬ್ಬರು ಚಿತ್ರಕಾರರು)

ಬಹಳ ಸುಂದರವಾದ ನಿದರ್ಶನಗಳಿಂದ ವೇದಾಂತಶಾಸ್ತ್ರವು ಜನಪ್ರಿಯವಾಗಿದೆ. ನೀವು ಶಾಸ್ತ್ರಗ್ರಂಥಗಳ ವ್ಯಾಸಂಗದ ಮೂಲಕವೂ ವಿಶ್ವವಿದ್ಯಾನಿಲಯಗಳಲ್ಲಿ ಪ್ರೊಫೆಸರುಗಳ ಮೂಲಕವೂ ಪಡೆಯುವ ಬೆಳಕಿನ ಬಗೆಗಿಂತ ಒಳಗಿನ ಪರಮೋತ್ಕೃಷ್ಟವಾದ ಪರಮಾರ್ಥ ದೃಷ್ಟಿಯನ್ನು ಬೇರ್ಪಡಿಸಿ ತೋರಿಸುವದಕ್ಕಾಗಿ ರಾಮನು ಒಂದು ದೃಷ್ಟಾಂತವನ್ನು ಕೊಡುತ್ತಾನೆ.

ಒಂದಾನೊಂದು ಕಾಲದಲ್ಲಿ, ಒಬ್ಬ ರಾಜನು, ತನ್ನ ಅತ್ಯಂತ ಮನೋಹರವಾದ ಅರಮನೆಗಳಲ್ಲಿ ಒಂದು ಸುಂದರವಾದ ಅರಮನೆಯನ್ನು ಅದ್ಭುತವಾದ ಚಿತ್ರಗಳಿಂದ ಅಲಂಕರಿಸಬೇಕೆಂದು ಅನೇಕ ಉತ್ತಮ ಚಿತ್ರಕಾರರನ್ನು ಕರೆಸಿದನು. ಅವರಲ್ಲಿ ಸರ್ವೋತ್ತಮನಾದ ಚಿತ್ರಕಾರನನ್ನು ಕಂಡುಹಿಡಿಯುವದಕ್ಕಾಗಿ ಅವರಿಗೆ ಒಂದು ಪರೀಕ್ಷೆಯನ್ನು ಕೊಡುತ್ತಿದ್ದನು. ಅರಮನೆಯಲ್ಲಿ ಎರಡು ಗೋಡೆಗಳು ಒಂದರ ಪಕ್ಕದಲ್ಲಿ ಒಂದು ಕೆಲವು ಅಡಿಗಳ ಅಂತರದಲ್ಲಿ ಸಮದೂರದಲ್ಲಿದ್ದವು. ಈ ಎರಡು ಗೋಡೆಗಳನ್ನು ಚಿತ್ರಿಸುವದಕ್ಕಾಗಿ ಇಬ್ಬರು ಚಿತ್ರಕಾರರನ್ನು ನಿಯೋಜಿಸಿದನು. ಒಬ್ಬ ಚಿತ್ರಕಾರನ ಕೆಲಸವನ್ನು ಇನ್ನೊಬ್ಬನು ನೋಡದಂತೆ ಆ ಎರಡು ಗೋಡೆಗಳ ಮಧ್ಯದಲ್ಲಿ ದೊಡ್ಡ ಪರದೆಯನ್ನು ಹಾಕಿದ್ದರು. ಚಿತ್ರಗಳನ್ನು ಪೂರೈಸುವದಕ್ಕೆ ಅವರಿಗೆ ಎರಡು ವಾರಗಳ ಅವಧಿಯನ್ನು ಕೊಟ್ಟಿತ್ತು. ಅವರಲ್ಲಿ ಒಬ್ಬನು ಜಗತ್ತಿನ ಅತ್ಯಂತ ಭವ್ಯವಾದ ಗ್ರಂಥವಾದ ಮಹಾಭಾರತದಲ್ಲಿಯ ಮಹತ್ವದ ದೃಶ್ಯಗಳನ್ನೆಲ್ಲಾ ಅತಿಸುಂದರವಾಗಿ ಚಿತ್ರಿಸಿದನು. ಅವನ ಕಾರ್ಯವು ನಿಜವಾಗಿಯೂ ಅತ್ಯಂತ ಮನೋಹರವಾಗಿಯೂ ಅದ್ಭುತವಾಗಿಯೂ ಇದ್ದಿತು. ಇನ್ನೊಬ್ಬ ಚಿತ್ರಕಾರನು ಏನು ಮಾಡಿದ್ದನೆಂಬದನ್ನು ರಾಮನು ಈಗಲೇ ಹೇಳುವದಿಲ್ಲ, ಎರಡು ವಾರಗಳಾಯಿತು ; ರಾಜನು ತನ್ನ ಪರಿವಾರದೊಂದಿಗೆ ಆ ದೃಶ್ಯವನ್ನು ನೋಡುವದಕ್ಕಾಗಿ ಬಂದನು. ಮೊದಲನೆಯ ಚಿತ್ರಕಾರನ ಗೋಡೆಯ ಮೇಲಿಂದ ಪರದೆಯನ್ನು

ಎತ್ತಿದರು ; ಅದರಲ್ಲಿ ನೂರಾರು ಚಿತ್ರಗಳನ್ನು ಬರೆದಿದ್ದನು. ನೋಡಿದವರೆಲ್ಲಾ ಆಶ್ಚರ್ಯಸ್ತಂಭಿತರಾದರು ; ಆಹಾ ! ಅವನ ಕೆಲಸವು ಎಷ್ಟು ಆಕರ್ಷಕವಾಗಿತ್ತು ! ಇದಕ್ಕಿಂತಲೂ ಉತ್ತಮವಾಗಿ ಯಾರೂ ಚಿತ್ರಿಸುವದು ಸಾಧ್ಯವಿಲ್ಲವೆನ್ನಿಸಿತು. ಪ್ರೇಕ್ಷಕರೆಲ್ಲಾ "ಮೊದಲನೆ ಬಹುಮಾನವನ್ನು ಇವನಿಗೇ ಕೊಡಿರಿ ; ಮುಂದೆ ಬರೆಸಬೇಕಾದ ಚಿತ್ರದ ಮಹಾಕಾರ್ಯಗಳನ್ನೆಲ್ಲಾ ಇವನಿಗೇ ವಹಿಸಿರಿ. ಇವನೇ ವಿಜಯಶಾಲಿ ! ಇವನೇ ಚಿತ್ರಲೋಕದ ಚಕ್ರವರ್ತಿ !" ಎಂದು ಭಾವಾವೇಶದಿಂದ ಉದ್ಗಾರ ಮಾಡಿದರು.

ಆಗ ರಾಜನು ಇನ್ನೊಬ್ಬ ಚಿತ್ರಕಾರನಿಗೆ ಪರದೆಯನ್ನು ಎತ್ತಲು ಅಪ್ಪಣೆ ಮಾಡಿದನು, ಆ ಪರದೆಯನ್ನು ಎತ್ತಿದ ಕೂಡಲೇ ಎಲ್ಲಾ ಜನರೂ ಬೆರಗುಬಡಿದು, ಆಶ್ಚರ್ಯಸ್ತಬ್ಧರಾಗಿ ನಿಂತರು ; ಅವರ ಉಸಿರೇ ನಿಂತುಹೋಯಿತು ; ಅತ್ಯಂತ ವಿಸ್ಮಯದಿಂದ ಬಾಯಿ ಕಳೆದು, ಕಣ್ಣುಗಳನ್ನು ಅಗಲವಾಗಿ ಅರಳಿಸಿ ಅರಳಿಸಿ, "ಇದೇನು ಕೌತುಕ, ಇದೇನು ಅದ್ಭುತ ! ಪವಾಡ !" ಎನ್ನುವಂತೆ ಎಲ್ಲರ ಮನಸ್ಸಿಗೆ ಆಯಿತು ; ಆದರೆ ಆ ಉದ್ಗಾರ ಸಹ ಬಹಳ ಕಡಮೆ ಎನಿಸಿ, ಸಾಶ್ಚರ್ಯ ಮೂಕರಾದರು. ಎಲ್ಲರೂ ವಿಸ್ಮಯಚಕಿತ ದಿಗ್ಭ್ರಮೆಯ ಚಿತ್ರದಂತಾಗಿದ್ದರು, ಏಕೆ ? ಈ ವಿಚಿತ್ರ ಚಿತ್ರಕಾರ ಏನು ಮಾಡಿದ್ದ ? ಮೊದಲನೆಯ ಚಿತ್ರಕಾರನ ಎಲ್ಲಾ ಚಿತ್ರಗಳೂ ಹೇಗಿದ್ದವೋ ಸ್ವಲ್ಪವೂ ವ್ಯತ್ಯಾಸವಿಲ್ಲದೆ, ಈ ಗೋಡೆಯ ಮೇಲೂ ಚಿತ್ರಿತವಾಗಿದ್ದವು. ಆದರೆ, ಮೊದಲನೆಯ ಚಿತ್ರವು ಎರಡನೆಯದರ ಹೋಲಿಕೆಯಿಂದ ಒರಟಾಗಿಯೂ ಸ್ವಲ್ಪ ಹಳ್ಳತಿಟ್ಟಾಗಿಯೂ ಒಡ್ಡೊಡ್ಡಾಗಿಯೂ ಇದ್ದಿತು. ಎರಡನೆಯದಾದರೋ ಬಹಳ ನಯವಾಗಿಯೂ ನಾಜೂಕಾಗಿಯೂ ನಿರ್ಮಲವಾಗಿಯೂ ಒಪ್ಪಾಗಿಯೂ ಓರಣವಾಗಿಯೂ ಅಂದವಾಗಿಯೂ ಇದ್ದಿತು. ಉಜ್ಜುಗಾರಿಕೆಯಿಂದಲೋ ಎನ್ನುವಂತೆ ಆ ಗೋಡೆಯ ಚಿತ್ರಗಳ ಮೇಲೆ ಒಂದು ನೊಣವು ಕೂತರೂ ಜಾರಿಬೀಳಬಹುದೆಂಬಷ್ಟು ಅದು ನಯವೂ ನುಣುಪೂ ಹೊಳಪೂ ಮೃದುವೂ ಆಗಿದ್ದಿತು. ಆ ಕೆಲಸವು ಅಷ್ಟು ಚಿತ್ತಾಕರ್ಷಕವಾಗಿದ್ದಿತು ! ಈ ಎರಡನೆಯ ಚಿತ್ರಣದಲ್ಲಿ ಇನ್ನೊಂದು ಅಪೂರ್ವವಾದ ವಿಲಕ್ಷಣ ಸೌಂದರ್ಯವಿದ್ದಿತು. ಆ ಚಿತ್ರಗಳು ಗೋಡೆಯ ಮೇಲ್ಮೈಯಲ್ಲಿ ಕಾಣುತ್ತಿರಲಿಲ್ಲ ; ಅವು ಆ ಗೋಡೆಯ ಒಳಗೆ ಹತ್ತು ಅಡಿ ಆಳದಲ್ಲಿ ಅಥವಾ ದೂರದಲ್ಲಿ ಕಾಣುತ್ತಿದ್ದವು, ಜನರಿಗೆ ಆಶ್ಚರ್ಯವೋ ಆಶ್ಚರ್ಯ ! ಪರಮಾಶ್ಚರ್ಯ ! ಆ ಚಿತ್ರಕಾರ ಇಂಥಾ ಅದ್ಭುತಕಾರ್ಯವನ್ನು ಹೇಗೆ ಸಾಧಿಸಿದ್ದ ? ಎರಡನೆಯ ಚಿತ್ರಕಾರನು, ತನ್ನ ಗೋಡೆಯನ್ನು ಉಜ್ಜಿ ಉಜ್ಜಿ, ಅತಿಶಯವಾಗಿ ನಯವೂ ನಿರ್ಮಲವೂ ನುಣುಪೂಮಾಡಿ, ಮೆರುಗುಕೊಟ್ಟು, ಥಳ ಥಳ ಥಳ ಹೊಳೆಯುವಂತೆ ಮಾಡಿದ್ದ ; ಆದ್ದರಿಂದ ಅದು ಪಾರದರ್ಶಕವಾಗಿ, ಮುಖನೋಡಿಕೊಳ್ಳುವ ಕನ್ನಡಿಯೇ ಆಗಿದ್ದಿತು. ಅದು ಕನ್ನಡಿಯಂತೆ, ಮೊದಲನೆಯ ಚಿತ್ರಗಾರನು ಎದುರು ಗೋಡೆಯ ಮೇಲೆ ಬರೆದ

ಚಿತ್ರಗಳನ್ನೆಲ್ಲಾ ತನ್ನೊಳಗೆ ಪ್ರತಿಬಿಂಬಿಸಿತ್ತು. ಆ ಗೋಡೆಗಳು ಒಂದರಿಂದ ಇನ್ನೊಂದು ಹತ್ತು ಅಡಿಗಳ ದೂರದಲ್ಲಿದ್ದವು; ಮತ್ತು ನೆಲದಿಂದ ಐದು ಅಡಿಗಳ ಎತ್ತರದ ಮೇಲೆ ಚಿತ್ರಗಳಿದ್ದವು, ವಸ್ತುವು ಕನ್ನಡಿಯಿಂದ ಎಷ್ಟು ದೂರದಲ್ಲಿದ್ದರೆ, ಅಷ್ಟು ದೂರದಲ್ಲಿಯೇ ಕನ್ನಡಿಯೊಳಗೆ ಪ್ರತಿಬಿಂಬವು ಕಾಣುವಂತೆ, ಹತ್ತು ಅಡಿಗಳ ದೂರದಲ್ಲಿದ್ದ ಗೋಡೆಯ ಮೇಲಿನ ಚಿತ್ರಗಳು ಎದುರು ಗೋಡೆಯೊಳಗೆ ಹತ್ತು ಅಡಿ ದೂರದಲ್ಲಿ ಕಾಣುತ್ತಿದ್ದವು. ನೆಲದಿಂದ ಐದು ಅಡಿಗಳ ಮೇಲೆ ಆ ಎತ್ತರವಾದ ಗೋಡೆಗಳಲ್ಲಿ ಚಿತ್ರಗಳಿದ್ದುದರಿಂದ, ಆ ಎರಡು ಗೋಡೆಗಳ ನಡುವೆ, ಎಷ್ಟು ಜನಗಳಾದರೂ ನಿಂತು, ಓಡಾಡಿ, ಎರಡು ಕಡೆಯೂ ಚಿತ್ರಗಳನ್ನು ನೋಡಬಹುದಾಗಿತ್ತು.

ಹೀಗೆ, ಜ್ಞಾನ ಸಂಪಾದನೆಯಲ್ಲಿ ಎರಡು ರೀತಿಗಳಿವೆ. ಗೋಡೆಯ ಮೇಲೆ ಚಿತ್ರಗಳನ್ನು ಬರೆದಂತೆ ಕಂಠಪಾಠಮಾಡಿ, ಉರುಹಚ್ಚಿ, ತಲೆಯಲ್ಲಿ ವಿಷಯಗಳನ್ನು ತುಂಬಿಕೊಳ್ಳುವದು, ತುರುಕುವದು, ಗಿಡುಗುವದು ಇದು ಒಂದು ಬಗೆ. ಭೂವಿಜ್ಞಾನ ಶಾಸ್ತ್ರ, ಶ್ರುತಿಸಿದ್ಧ ದೇವತಾಶಾಸ್ತ್ರ, ಭಾಷಾಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ, ಮತ್ತು ಎಲ್ಲಾ ಬಗೆಯ ಅಧ್ಯಾತ್ಮ ಶಾಸ್ತ್ರ ಮತ್ತು ಜೀವನಕ್ಕೆ ಸಂಬಂಧಪಡದ. ವ್ಯವಹಾರಕ್ಕೆ ಉಪಯೋಗವಿಲ್ಲದ (Non-practicalogies) ಹಲವು ಶಾಸ್ತ್ರಗಳು-ಇವುಗಳ ವಿಚಾರಗಳನ್ನೂ ಭಾವನೆಗಳನ್ನೂ ಸಂಗತಿಗಳನ್ನೂ ಮಿದುಳಿನೊಳಗೆ 'ಪೊಂಪು' ಮಾಡಿ ತುಂಬಿಕೊಳ್ಳುವದು ಒಂದು ಬಗೆ. ಇದೊಂದು ರೀತಿಯ ಜ್ಞಾನ ಸಂಪಾದನೆ. ಈ ರೀತಿಯಿಂದ ಜ್ಞಾನ ಸಂಪಾದನೆಯು ಸಾಧ್ಯವಿಲ್ಲವೆಂದೇನೂ ರಾಮನು ಹೇಳುತ್ತಿಲ್ಲ. ಅದು ಸಾಧ್ಯ; ಆದರೆ, ಅದು ಮೊದಲನೆಯ ಚಿತ್ರಕಾರನು ಎಲ್ಲಾ ಬಗೆಯ ಬಣ್ಣಗಳನ್ನೂ ಉಪಯೋಗಿಸಿ, ಗೋಡೆಯ ಮೇಲು ಮೈಯಲ್ಲಿ ಚಿತ್ರ ಬರೆದಂತೆ ಇರುತ್ತದೆ. ಆದರೆ, ಪುಣ್ಯಾತ್ಮರೆ, ಜಗತ್ತಿನ ಜ್ಞಾನವನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳುವ ಇನ್ನೊಂದು ಬಗೆಯಿದೆ. ಅದು ಶುದ್ಧೀಕರಣದ ಕ್ರಮ. - ಅದು ಒಳಗೆ ತುಂಬಿ, ತುರುಕಿ, ಭರ್ತಿಮಾಡುವ ಕ್ರಮವಲ್ಲ; ಆದರೆ, ಆತ್ಮವಶ್ಯವಾದ ವಿಚಾರಗಳನ್ನು ಮಾತ್ರ ಉಪಯೋಗಿಸಿಕೊಂಡು ಮಿಕ್ಕವುಗಳನ್ನೆಲ್ಲಾ ಹೊರಹಾಕಿ, ಮನಸ್ಸನ್ನು ಖಾಲಿಮಾಡುವ ಕ್ರಮ, ನಿಮ್ಮ ಎದೆಯನ್ನು, ಸರ್ವವಸ್ತುಗಳಲ್ಲಿ ಒಂದಾಗಿ, ಸರ್ವಾತ್ಮನಲ್ಲಿ ಒಂದಾಗಿ, ಸಮರಸ ಪ್ರೇಮದಿಂದ ಮಿಡಿಯುವಂತೆ ಮಾಡಬೇಕು. ಎಮರಸ್‌ಸನ್ ಹೇಳಿರುವಂತೆ,—

Heave thine with nature's heaving breast,
And all is clear from east to west,

ಪ್ರಕೃತಿಯ ಏರಿಳಿಯುವ ಎದೆಯೊಡನೆ, ನಿಮ್ಮೆದೆಯು ಮಿಡಿದಾಡಲಿ,
ಮೂಡಲಿಂದದು ಪಡುವಲವರೆಗೆ, ಎಲ್ಲ ನಿರ್ಮಲ ತೋರ್ಪುದದ ಕಾಣಲಿ,

ಸರ್ವ ಪ್ರಪಂಚದಲ್ಲಿ ಏಕತ್ವವನ್ನು ಅನುಭವ ಪಡೆಯುವ ಸಾಧನ ವಿಧಾನವು ಒಂದಿದೆ. ವಾಲ್ಟ್ ವಿಟ್‌ಮನ್(Walt Whitman) ಹೇಳುವದೇನೆಂದರೆ,

"Unless you feel all, you cannot know all."

"ಎಲ್ಲವನ್ನೂ ಭಾವಿಸಿದ ಹೊರತು, ಎಲ್ಲವನ್ನೂ ಅರಿಯಲಾಗುವದಿಲ್ಲ."

— ಎಲ್ಲವನ್ನೂ ಭಾವಿಸುವ (ಅರಿಯುವ) ವಿಧಾನ ಅದು.

೮೩. ತೊಂದರೆಗಳನ್ನು ತಪ್ಪಿಸುವುದು ಸಾಧ್ಯವೇ ಇಲ್ಲವಾದ್ದರಿಂದ ಅವುಗಳ ನಡುವೆಯೇ ಸಾಧನೆ ಮಾಡಬೇಕು

(ಕುದುರೆ ಮತ್ತು ನೀರೆಳೆಯುವ ಗಾಲಿ)

ಬಾವಿಯ ಮೇಲೆ ನೀರನ್ನು ಕುಡಿಸುವದಕ್ಕಾಗಿ ಒಯ್ಯಲ್ಪಟ್ಟ ಒಂದು ಕುದುರೆಯು ನೀರನ್ನೆಳೆಯುವ ಗಾಲಿಯ ಶಬ್ದಕ್ಕೆ ನೀರು ಕುಡಿಯುತ್ತಿರಲಿಲ್ಲವಂತೆ; ಕುಡಿಯಲೆಂದು ಶಬ್ದವನ್ನು ನಿಲ್ಲಿಸಿದರೆ ಗಾಲಿಯೂ ನಿಲ್ಲುವದರಿಂದ ನೀರೇ ಇಲ್ಲ. ಕುದುರೆಯು ನೀರು ಕುಡಿಯಬೇಕಾದರೆ ಶಬ್ದದ ಜೊತೆಗೇ ಕುಡಿಯುವದನ್ನು ಹೇಗೆ ಅಭ್ಯಾಸ ಮಾಡಬೇಕೋ ಹಾಗೇ ವೇದಾಂತವನ್ನು ಅಭ್ಯಾಸ ಮಾಡಬೇಕಾದರೆ ಎಲ್ಲಾ ಬಗೆಯ ಶಬ್ದಗಳ ನಡುವೆಯೇ ಎಲ್ಲಾ ಬಗೆಯ ತೊಂದರೆಗಳ ಹೃದಯದಲ್ಲಿಯೇ ಅಭ್ಯಾಸ ಮಾಡಬೇಕು, ಈ ಪ್ರಪಂಚದಲ್ಲಿ ಶಬ್ದವಿಲ್ಲದ ಹಾಗೂ ಹೊರಗಿನ ತೊಂದರೆಗಳಿಲ್ಲದ ಸ್ಥಿತಿಯನ್ನು ಎಂದೂ ಪಡೆಯುವದು ಸಾಧ್ಯವೇ ಇಲ್ಲ, ಹಿಮಾಲಯದ ನೆತ್ತಿಯ ಮೇಲಿದ್ದರೂ ಸುತ್ತಲೂ ತೊಂದರೆಗಳು ಇದ್ದೇ ಇರುತ್ತವೆ. ಎಲ್ಲಿ ಹೋದರೂ ನಿಮ್ಮ ಸುತ್ತಲೂ ಪೀಡೆಗಳೂ ಪೇಚಾಟಗಳೂ ಇದ್ದೇ ಇರುತ್ತವೆ. ಅವುಗಳನ್ನು ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ. ನಿರುತ್ಸಾಹಕರವಾದ ಪರಿಸರ–ಪರಿಸ್ಥಿತಿಗಳಿಂದಲೇ ಮಹಾತ್ಮರೆಲ್ಲಾ ಉದಿಸಿದ್ದಾರೆ. ವಾಸ್ತವವಾಗಿ ಸನ್ನಿವೇಶಗಳು ಎಷ್ಟೆಷ್ಟು ಹೆಚ್ಚು ಕಠಿಣವೂ. ಪರೀಕ್ಷಾಕರವೂ ಆಗಿರುತ್ತವೆಯೋ ಅಷ್ಟಷ್ಟು ಹೆಚ್ಚು ಸಮರ್ಥರಾದ ಸಾಧಕರು ತಯಾರಾಗುತ್ತಾರೆ. ಆದ್ದರಿಂದ ಹೊರಗಿನ ಈ ತೊಂದರೆಗಳನ್ನೂ, ಕಾತರ ಕಳವಳಗಳನ್ನೂ ಸ್ವಾಗತ ಮಾಡಿ; ಪ್ರತಿಕೂಲ ಪರಿಸ್ಥಿತಿಗಳ ಮಧ್ಯದಲ್ಲಿಯೇ ವೇದಾಂತ ತತ್ತ್ವದಲ್ಲಿ ಜೀವಿಸುವದಕ್ಕೆ ಅಭ್ಯಾಸಮಾಡಿದರೆ ಕೆಲವು ಕಾಲದಲ್ಲಿ ಪರಿಸ್ಥಿತಿಯೇ ನಿಮ್ಮ ಸ್ವಾಧೀನವೂ ಸೇವಕವೂ ಆಗಿ ನೀವು ಅವುಗಳ ಸ್ವಾಮಿಯಾಗುತ್ತೀರಿ, ನಮ್ಮನ್ನು ಕೆಳಗೆ ತುಳಿದಿಟ್ಟಿರುವದು ಈ ಸಮಾಜವೇ? ಈ ಪ್ರಪಂಚವೇ? ನೀವೇನೂ ಈ ಪ್ರಪಂಚವಲ್ಲಿ ವಾಸಿಸುತ್ತಿಲ್ಲ. ಪ್ರತಿಯೊಬ್ಬನೂ ಅವನವನು ಕಲ್ಪಿಸಿಕೊಂಡಿರುವ ಸಣ್ಣ ಸಣ್ಣ ಪ್ರಪಂಚದಲ್ಲಿಯೇ ವಾಸಿಸುವದು. ವಿಶಾಲ ಪ್ರಪಂಚದಲ್ಲಿ ವಾಸಮಾಡತಕ್ಕವರು ಬಹಳ ಸ್ವಲ್ಪ ಜನ. ಕೆಲವರಿಗೆ ಅವರ ಕುಟುಂಬದ ಹೊರಗೆ ಏನೂ ತಿಳಿಯದು; ಕೆಲವರಿಗೆ ಅವರ ಜಾತಿ ಅಥವಾ ಸಮಾಜದ ಹೊರಗೆ ಏನೂ ತಿಳಿಯದು. ಆದ್ದರಿಂದ ನಿಮ್ಮ ನಿಮ್ಮ ಕ್ಷುದ್ರ ಪ್ರಪಂಚವನ್ನು ಮೀರಿ ವಿಶಾಲ

ವಿಶ್ವದಲ್ಲಿಯಾದರೂ ಬದುಕಿರಿ. ವಿಶಾಲ ಪ್ರಪಂಚವೇನೂ ನಿಮ್ಮನ್ನು ತುಳಿದಿಟ್ಟಿಲ್ಲ. ನಿಮ್ಮ ಸ್ವಂತ ಸೃಷ್ಟಿಯು ಸಣ್ಣ ಪ್ರಪಂಚವೇ ನಿಮ್ಮನ್ನು ಕೆಳಗಿಟ್ಟಿರುವದು. ಅದರಿಂದ ಮೇಲೇರಬಲ್ಲಿರಾದರೆ ಇಡೀ ಪ್ರಪಂಚವೇ ನಿಮಗೆ ವಿಧೇಯವಾಗುತ್ತದೆ.

ಈ ದೇಶದಲ್ಲಿ ನೀವು ಉದ್ಯೋಗನಿರತರಾಗಿ ಯಾವಾಗಲೂ ಕೆಲಸದ ಗಡಿಬಿಡಿಯಲ್ಲಿಯೇ ಇರುವದರಿಂದ ಬೇರೆ ಯಾವದಕ್ಕೂ ಹೊತ್ತೇ ಇಲ್ಲ ಎನ್ನುತ್ತೀರಿ. ಆದರೆ ಇಲ್ಲಿ ಜನರು ಜೀವಮಾನವೆಲ್ಲಾ ಕಾಲವನ್ನು ಕೊಲ್ಲುವದರಲ್ಲಿ ಕಷ್ಟ ಪಡುತ್ತಿದ್ದಾರೆ; ಆದರೂ ಹೊತ್ತು ಸಾಲದೆಂದು ಗೊಣಗುಟ್ಟುತ್ತಾರೆ. ಕೆಲಸವೆಂದರೇನು ಎನ್ನುವದನ್ನೇ ನೀವು ತಿಳಿದಿಲ್ಲ. ಯಾವದು ನಿಜವಾಗಿ ಕರ್ಮವಲ್ಲವೋ ಅದನ್ನು ಕರ್ಮವೆನ್ನುತ್ತೀರಿ. ಬೇರೆ ಬೇರೆಯವರು ಬೇರೆ ಬೇರೆ ರೀತಿಯಲ್ಲಿ ಕರ್ಮವನ್ನು ವಿವರಿಸುತ್ತಾರೆ. ವಿಜ್ಞಾನಿಗಳು, ಲೇಖಕರು ಮೊದಲಾದವರು ಒಂದು ರೀತಿಯಲ್ಲಿ ವಿವರಿಸಿದರೆ ನಾವೇ ಒಂದು ರೀತಿಯಲ್ಲಿ ಹೇಳುತ್ತೇವೆ. ಅದರ ಪ್ರಕಾರ ಒಂದು ಸಮತಳದ ಮೇಲೆ ನೀವು ನಡೆಯುತ್ತಿದ್ದರೆ ನೀವು ಕರ್ಮ ಮಾಡುತ್ತಿಲ್ಲ, ನಯವಾದ ಒಂದು ಸಮಕ್ಷೇತ್ರದಲ್ಲಿ ಒಂದು ಚೆಂಡು ಉರುಳುತ್ತಿದ್ದರೆ ಅದು ಏನೂ ಕರ್ಮ ಮಾಡುತ್ತಿಲ್ಲ. ನೀವು ಏರನ್ನು ಹತ್ತುವಾಗ ಮಾತ್ರ ಕರ್ಮ ಮಾಡುತ್ತೀರಿ. ಸಮ ಮಟ್ಟದಲ್ಲಿಯೇ ಚಲಿಸುತ್ತಿದ್ದರೆ ನೀವು ಕರ್ಮವನ್ನು ಮಾಡುತ್ತಿಲ್ಲ. ಹೀಗೆ ವಿವರಿಸುವದು ಒಂದು ವಿಲಕ್ಷಣ ರೀತಿ. ಮನಶ್ಶಾಸ್ತ್ರವು ಮತ್ತೊಂದು ರೀತಿಯಲ್ಲಿ ವಿವರಿಸುತ್ತದೆ, ಅದರ ಪ್ರಕಾರ ನಿಮ್ಮ ಮನಸ್ಸು ನಿಮ್ಮ ಕಾರ್ಯದಲ್ಲಿ ತೊಡಗಿರುವಾಗ ಮಾತ್ರ ಆ ಕಾರ್ಯವನ್ನು ನೀವು ಮಾಡಿದಂತೆ ಆಗುತ್ತದೆ. ಇಲ್ಲವಾದರೆ ಇಲ್ಲ. ನೀವು ಉಸಿರಾಡುತ್ತಿದ್ದೀರಿ, ನಿಮ್ಮ ದೇಹದಲ್ಲಿ ರಕ್ತವು ಹರಿಯುತ್ತಿದೆ. ಇವುಗಳೆಲ್ಲಾ ಕರ್ಮಗಳೇ ಆದರೂ ಮನಶ್ಶಾಸ್ತ್ರಜ್ಞರ ದೃಷ್ಟಿಯಿಂದ ಇವು ಕರ್ಮವಲ್ಲ. ಏಕೆಂದರೆ ನಿಮ್ಮ ಅರಿವೂ ಪ್ರಯತ್ನವೂ ಇಲ್ಲದೆ ತಾವಾಗಿಯೇ ಸಹಜವಾಗಿ ಇವು ನಡೆಯುತ್ತಿವೆ, ಯಾವದು ಕರ್ಮ ಎನ್ನುವದಕ್ಕೆ ಅವರು ಗಮನಾರ್ಹವಾದ ಅಸಾಧಾರಣ ಉದಾಹರಣೆಗಳನ್ನು ಕೊಡುತ್ತಾರೆ,

೮೪. ಅಡ್ಡಿ ಆತಂಕಗಳೇ ಶಕ್ತಿ ಮೂಲಗಳು

(ಸಭ್ಯನಾದ ಸಾಹುಕಾರ–ಅವಿಧೇಯ ಸೇವಕ)

ಒಬ್ಬ ಗೃಹಸ್ಥ—ಹೆಂಡತಿ, ಮಕ್ಕಳು, ಬಂಧುಗಳು, ಮಿತ್ರರು ಇವರೊಡನೆ ಜೀವಿಸತಕ್ಕವನು—ಅಥವಾ ಪ್ರಾಪಂಚಿಕನಾದ ಸಾಮಾನ್ಯ ಮನುಷ್ಯನೊಬ್ಬ ಸತ್ಯವನ್ನು ಅಥವಾ ಆತ್ಮನನ್ನು ಅರಿಯುವದು ಸಾಧ್ಯವೆ?

ಇದೇ ಪ್ರಶ್ನೆ.

ಈ ಪ್ರಶ್ನೆಯು ಒಂದು ಮುಖವನ್ನು ತೆಗೆದುಕೊಳ್ಳೋಣ. "ಒಂದು ಕತ್ತಿಯು ನಿಮ್ಮ ಶತ್ರುಗಳನ್ನು ಕೊಲ್ಲಬಲ್ಲದೆ?" ಎಂದು ವೇದಾಂತವು ಸುಮ್ಮನೆ ಕೇಳುತ್ತದೆ. ಇದನ್ನು ಅಹುದೆನ್ನುವ ಸ್ಥಿರೀಕರಿಸುವ, ಅರ್ಥದಲ್ಲಿ ಉತ್ತರಿಸಬಹುದಾದರೆ ಆ

ಪ್ರಶ್ನೆಗೂ ಹಾಗೆಯೇ ಉತ್ತರಕೊಡಬಹುದು. ಆ ಕತ್ತಿಯನ್ನು ಅಥವಾ ಕೌಟುಂಬಿಕ ಸಂಬಂಧವನ್ನು ನಾವು ಉಪಯೋಗಿಸುವುದರ ಮೇಲೆ ಎಲ್ಲಾ ಅವಲಂಬಿಸುತ್ತದೆ. ಅದೇ ಕತ್ತಿಯನ್ನು ಆತ್ಮಹತ್ಯೆಗೂ ಉಪಯೋಗಿಸಬಹುದು. ಹಾಗೆ ಕೌಟುಂಬಿಕ ಸಂಬಂಧವನ್ನು ದುರುಪಯೋಗ ಮಾಡುವದರಿಂದ ಒಬ್ಬನು ಆತ್ಮನಾಶ ಮಾಡಿಕೊಳ್ಳಬಹುದು, ಅಥವಾ ತನ್ನ ಉನ್ನತಿಯನ್ನು ಸಾಧಿಸಿಕೊಂಡು ತನ್ನಲ್ಲಿರುವ ದೇವರನ್ನು ಕಂಡುಕೊಳ್ಳಬಹುದು. ನಾವು ಶರೀರದಿಂದ ಮಾಡುವ ಒಂದು ಕೆಲಸವನ್ನು ವ್ಯಾಯಾಮವೆಂದೋ ವಿನೋದವೆಂದೋ ತಿಳಿಯಬಹುದು ಅಥವಾ ಅದನ್ನೇ ಶ್ರಮವೆಂದೂ ಆಯಾಸಕರವೆಂದೂ ತಿಳಿಯಬಹುದು.

ಒಬ್ಬ ಸಾಹುಕಾರನಲ್ಲಿ ಬಹಳ ಅವಿಧೇಯನಾದ ಒಬ್ಬ ಸೇವಕನಿದ್ದನು. ಎಂಥಾ ಸಮಾಧಾನವಾದ ಸ್ವಭಾವದವರಿಗೂ ಸಿಟ್ಟು ಬರಲೇಬೇಕು, ಹಾಗೆ ಅವನ ವರ್ತನೆಗಳಿದ್ದವು. ಒಮ್ಮೆ ಆ ಸಾಹುಕಾರನಲ್ಲಿ ಬಂದಿದ್ದ ಅವನ ಮಿತ್ರರೊಬ್ಬರು ಆ ಸೇವಕನಿಂದ ಬಹಳ ಅಪಚಾರ ಹೊಂದಿ ನೊಂದುಕೊಂಡು ಅವನನ್ನು ಕೆಲಸದಿಂದ ತೆಗೆದುಹಾಕಬೇಕೆಂದು ಆ ಸಾಹುಕಾರನಿಗೆ ಹೇಳಿದರು. ಅದಕ್ಕೆ ಸಾಹುಕಾರನು "ನಿಮ್ಮ ಸಲಹೆ ಏನೋ ಒಳ್ಳೆಯದು. ನಿಮ್ಮ ಉದ್ದೇಶವೂ ಒಳ್ಳೆಯದೇ, ನನ್ನ ವ್ಯವಹಾರವು ಅಭಿವೃದ್ಧಿಗೆ ಬರಲೆಂದೇ ನೀವು ಹೇಳುತ್ತೀರಿ. ಅದು ಇವನಿಂದ ಹಾಳಾಗುತ್ತಿದೆ ಎಂದೂ ನನಗೆ ಗೊತ್ತಿದೆ. ಅವನು ನಂಬಿಕೆಗೆ ಅರ್ಹನಲ್ಲ, ಕೆಟ್ಟವನು ಎಂಬ ಕಾರಣದಿಂದಲೇ ಅವನನ್ನು ಇಟ್ಟುಕೊಂಡಿದ್ದೇನೆ. ಅವನು ದುಷ್ಟನಾದ್ದರಿಂದಲೇ ಅವನು ನನಗೆ ಹೆಚ್ಚು ಪ್ರಿಯನಾಗಿದ್ದಾನೆ. ನನ್ನಲ್ಲಿ ಎಷ್ಟೋ ಜನ ಸೇವಕರಿದ್ದರು; ನನಗೆ ವಿರೋಧವಾಗಿ ನಡೆದುಕೊಳ್ಳುವ ಧೈರ್ಯ ಯಾರಿಗೂ ಇರಲಿಲ್ಲ. ಇವನೊಬ್ಬನೇ ಅಸಾಧಾರಣನಾದವನು. ವ್ಯಾಯಾಮ ಮಾಡತಕ್ಕವರು ರಟ್ಟೆಗಳಲ್ಲಿಯ ಮಾಂಸಖಂಡದ ಶಕ್ತಿಯನ್ನು ಬೆಳೆಸಿಕೊಳ್ಳುವದಕ್ಕಾಗಿ ಭಾರವಾದ "ಡಂಬೆಲ್"ಗಳನ್ನು ಗದೆಗಳನ್ನು ತೂಕವಾದ ಪದಾರ್ಥಗಳನ್ನೂ ಉಪಯೋಗಿಸುತ್ತಾರೆ. ಹಗುರವಾದ ಪದಾರ್ಥಗಳನ್ನು ಎತ್ತುವದೇನೋ ಸುಲಭ; ಆದರೆ ಅದರಿಂದ ಶಕ್ತಿ ಬರುವದಿಲ್ಲ. ಹುಲ್ಲುಕಡ್ಡಿಯನ್ನು ಎತ್ತುವದರಿಂದ ಯಾವ ಶಕ್ತಿ ಬರುತ್ತದೆ? ಆದರೆ ಭಾರವಾದ ಗದೆಗಳನ್ನು ಎತ್ತುವದು ಕಷ್ಟವಾದರು ಅದರಿಂದ ಶಕ್ತಿ ಬರುತ್ತದೆ. ಹಾಗೆ ನನ್ನ ಆಧ್ಯಾತ್ಮಿಕ ಶಕ್ತಿಯನ್ನು ಬೆಳೆಸಿಕೊಡುವದಕ್ಕೆ ಈ ಸೇವಕನು ನನಗೆ ಬಹುಭಾರವಾದ "ಡಂಬಲ್ಸ್"—ಉಕ್ಕಿನ ಗದೆಯೇ-ಆಗಿದ್ದಾನೆ. ಅನಿವಾರ್ಯವಾಗಿ ಇವನೊಡನೆ ಒಂದು ಬಗೆಯ ಕುಸ್ತಿಯನ್ನು ಮಾಡಬೇಕಾಗಿರುವದರಿಂದ ನನಗೆ ಶಕ್ತಿಯೂ ಬರುತ್ತದೆ"ಎಂದನು.

ಆದ್ದರಿಂದ ರಾಮನು ಈ ಬಗೆಯ ವಿದ್ಯಮಾನಕ್ಕೂ ದೃಷ್ಟಿಗೂ ನಿಮ್ಮ ಗಮನವನ್ನು ಸೆಳೆಯುತ್ತಾನೆ. ಕೌಟುಂಬಿಕ ಸಂಬಂಧವು ನಿಮಗೆ ಅಡ್ಡಿಯಾಗಿಯೂ ತೊಡಕಾಗಿಯೂ ವಿರೋಧವಾಗಿಯೂ ಕಂಡರೆ ನಿರಾಶೆ ಹೊಂದಬೇಡಿರಿ; ನೊಂದು

ಕೊಳ್ಳಬೇಡಿ. ವಿವೇಕಿಯೂ ಸಮಾಧಾನಿಯೂ ಆದ ಆ ಸಾಹುಂಕಾರನ ದೃಷ್ಟಾಂತವು ನಿಮ್ಮ ನೆನಪಿನಲ್ಲಿರಲಿ. ಕಷ್ಟಗಳನ್ನೂ ಭಿನ್ನಭಾವಗಳನ್ನೂ ಶಕ್ತಿಸಂಪಾದನೆಗೆ ಹೆಚ್ಚಿನ ಸಹಾಯವನ್ನಾಗಿಯೇ ಮಾಡಿಕೊಳ್ಳಿ.

೮೫. ಕೌಟುಂಬಿಕ ಸಂಬಂಧವು ಅಡ್ಡಿಯೇನಲ್ಲ

(ಸಾಕ್ರೇತಿಸ ಮತ್ತು ಅವನ ಕಠೋರ ಪತ್ನೀ)

ಸಾಕ್ರೇತಿಸನಿಗೆ ಪ್ರಪಂಚದಲ್ಲಿಯೇ ಅತ್ಯಂತ ಅನಿಷ್ಟಕರವಾದ ಸ್ವಭಾವದವಳಾದ ಹೆಂಡತಿ ಇದ್ದಳು. ಒಂದು ದಿನ ಸಾಕ್ರೇತಿಸನು ತನ್ನ ಮನೆಯಲ್ಲಿ ಬಹಳ ಗಂಭೀರವಾಗಿ ಆಲೋಚನೆ ಮಾಡುತ್ತಾ ತನ್ನ ಶಿಷ್ಯರಿಗೆ ತತ್ತ್ವೋಪದೇಶ ಮಾಡುತ್ತಿದ್ದನು. ಅವನ ಹೆಂಡತಿಯು (ಝಾಂತೆಪಿ) ಅವನಲ್ಲಿಗೆ ಬಂದು ತನಗೇನೋ ಕೆಲಸ ಮಾಡಿಕೊಡಬೇಕೆಂದು ಬಹಳ ಕಠೋರವಾಗಿ ಮಾತನಾಡಿದಳು; ಅವಳ ಪದ್ಧತಿಯಂತೆ, ಅವನ ಗಮನವನ್ನು ಸೆಳೆಯುವದಕ್ಕಾಗಿ ಅವನನ್ನು ನಿಂದಿಸಿದಳು; ಸ್ವೇಚ್ಛೆಯಾಗಿ ದೂಷಿಸಿದಳು, ಅಪಮಾನಕರವಾದ ಮಾತನಾಡಿದಳು; ಆದರೆ ಸಾಕ್ರೇತಿಸನು ಯಾವದನ್ನೂ ಲಕ್ಷಿಸದೆ ಬೋಧೆ ಮಾಡುತ್ತಲೇ ಇದ್ದನು. ಅವನು ಯಾವದಾದರೂ ಸಮಸ್ಯೆಯನ್ನು ತೆಗೆದುಕೊಂಡರೆ ಅದನ್ನು ಬಿಡಿಸಿದ ಹೊರತು ಕೈಬಿಡುವ ಅಭ್ಯಾಸವೇ ಇರಲಿಲ್ಲ. ಆಕೆ ಗರ್ಜಿಸಿ, ಚಂಡಮಾರುತನಂತೆ ಆರ್ಭಟಿಸಿದರೂ ಅವನು ಕೇಳದಿರಲು ಕ್ರೋಧಾವೇಶದಿಂದ ಆಕೆ, ಎಮ್ಮೆಗೆ ಕುಡಿಸಲು ಒಯ್ಯುತ್ತಿದ್ದ ಮುಸುರೆಯ ಪಾತ್ರೆಯನ್ನು ತಂದು ಅವನ ತಲೆಯ ಮೇಲೆ ಸುರಿದಳು. ಸಾಕ್ರೇತಿಸನು ಆಗಲೂ ಕ್ಷುಬ್ಧನಾಗಲಿಲ್ಲ; ಸ್ವಲ್ಪವೂ ಅಸಮಾಧಾನಗೊಳ್ಳಲಿಲ್ಲ. ಅವನು ನಕ್ಕು "ಅನೇಕ ವೇಳೆ ಗರ್ಜಿಸಿದಾಗ ಮಳೆಯೂ ಬರುತ್ತದೆ." ಎಂಬ ನಾಣ್ನುಡಿಯು ಸತ್ಯವೆಂದು ಇವತ್ತು ತೋರಿಸಲ್ಪಟ್ಟಿತು, ಎಂದು ಟೀಕಿಸಿ ತನ್ನ ತತ್ತ್ವವಾದವನ್ನೇ ಮುಂದುವರಿಸಿದನು. ಅವಳು ಗರ್ಜಿಸಿದಾಗಲೆಲ್ಲಾ ಮಳೆ ಬರುತ್ತಿರಲಿಲ್ಲ; ಆದರೆ ಇವತ್ತು ಆಕೆ ಗುಡುಗಿನಂತೆ ಗರ್ಜಿಸಿ ಬಿರುಗಾಳಿಯಂತೆ ಭೋರ್ಗರೆದಿದ್ದರಿಂದ ಮಳೆಯು ಬಂದಿತು, ಎಂದು ತಮಾಷೆಮಾಡಿ ತನ್ನ ಮಾತನ್ನೇ ಮುಂದುವರಿಸಿದನು.

ಅಂಥಾ ಸಂದರ್ಭಗಳಲ್ಲಿಯೂ ಕ್ಷುಬ್ಧರಾಗದೆ, ಸಿಟ್ಟನ್ನು ತಡೆದುಕೊಂಡು ಸಹನೆಯಿಂದಿರುವುದು ಎಲ್ಲರಿಗೂ ಸಾಧ್ಯವಲ್ಲ ಎಂದು ನಿರಾಶರಾಗಬಾರದು. ಸಾಕ್ರೇತಿಸನಿಗೆ ಅದು ಸಾಧ್ಯವಾದರೆ ಎಲ್ಲರಿಗೂ ಸಾಧ್ಯ ಎನ್ನುವ ಭರವಸೆಯಿಂದ ಪ್ರಯತ್ನ ಮಾಡಬೇಕು. ಇವತ್ತಿಗೂ ತಮ್ಮ ಕೋಪತಾಪಗಳ ಮೇಲೂ ಅಭ್ಯಾಸಗಳ ಮೇಲೂ ಪೂರ್ಣ ಹತೋಟಿಯನ್ನು ಇಟ್ಟುಕೊಂಡಿರುವ ಎಷ್ಟೋ ಜನರಿದ್ದಾರೆ; ಖಂಡಿತ ಇದ್ದಾರೆ, ನೀವೂ ಪ್ರಯತ್ನ ಮಾಡಬಹುದು. ನೀವು ಮನಸ್ಸು ಮಾಡಿದರೆ ನಿಮ್ಮ ಕೌಟುಂಬಿಕ ಸಂಬಂಧದಿಂದಲೇ ಪರಮಾರ್ಥ ಸಾಧನೆಯನ್ನು ಹೆಚ್ಚು ಸುಲಭಗೊಳಿಸಬಹುದು: ನಿಮ್ಮ ಕುಟುಂಬದವರೊಡನೆ ಒಂದಾಗುವದನ್ನು ಮೊದಲು ಅಭ್ಯಾಸ ಮಾಡಿದರೆ ನೀವು ವಿಶ್ವದೊಡನೆ ಒಂದಾಗಬಹುದು.

೮೬. ಅಡ್ಡಿಗಳ ನಿವಾರಣೆ ಅಗತ್ಯ
(ತನ್ನ ಕಣ್ಣನ್ನು ಕಿತ್ತುಕೊಟ್ಟ ಸಂತ)

ಒಬ್ಬ ಹಿಂದೂ ಮಹಾತ್ಮನು ಒಮ್ಮೆ ಹಸಿವಿನಿಂದ ಬೀದಿಯಲ್ಲಿ ಹೋಗುತ್ತಿದ್ದನು. ಇಂಡಿಯಾದಲ್ಲಿ ಮಹರ್ಷಿಗಳೂ ಮಹಾತ್ಮರೂ ಪರ್ವತಗಳಲ್ಲಿಯೂ ಅರಣ್ಯಗಳಲ್ಲಿಯೂ ಗುಹೆಗಳಲ್ಲಿಯೂ ತಪಸ್ಸು ಮಾಡುತ್ತಿದ್ದು, ಹಸಿವಾದಾಗ ಮಧ್ಯಾಹ್ನ ಒಂದು ಹೊತ್ತು ಮಾತ್ರ ಸಮೀಪವಿರುವ ಹಳ್ಳಿಗಾಗಲೀ ಪಟ್ಟಣಕ್ಕಾಗಲೀ ಹೋಗಿ ಊಟಕ್ಕಾಗಿ ಬೀದಿಯಲ್ಲಿ ಭಿಕ್ಷೆ ಬೇಡುತ್ತಾರೆ. ಅವರು ಪಟ್ಟಣಗಳಿಗೂ ನಗರಗಳಿಗೂ ಬಹಳ ಅಪರೂಪವಾಗಿ ಹೋಗುತ್ತಾರೆ. ಅವರು ಸಾಮಾನ್ಯವಾಗಿ ನಗರಗಳಿಂದ ದೂರವಾಗಿ ಅರಣ್ಯಗಳಲ್ಲಿ ತಮ್ಮ ಎಲ್ಲಾ ಕಾಲವನ್ನೂ ದೇವರ ಚಿಂತನೆಯಲ್ಲಿಯೇ ಕಳೆಯುತ್ತಾರೆ. ಪ್ರಾಣಧಾರಣೆಗಾಗಿ ಭಿಕ್ಷೆ ಬೇಡುವ ತಪಸ್ವಿಗಳಿಗೆ ಸಮಾಜದ ಜನರೇ ಊಟಕ್ಕೆ ನೀಡುತ್ತಾರೆ. ಆದ್ದರಿಂದ ರಾಮನೂ ನಿಮ್ಮಲ್ಲಿ ಪ್ರಾಣರಕ್ಷಣೆಗಾಗಿ ಬೇಡಿದರೆ ನೀವು ಅವನನ್ನು ಕ್ಷಮಿಸುವುದು ನ್ಯಾಯವಾದುದು. ಮೊದಲೇ ಹೇಳಿದಂತೆ ಒಬ್ಬ ಮಹಾತ್ಮನು ಬೇಡುವದಕ್ಕೆ ಒಬ್ಬ ಗೃಹಸ್ಥನ ಮನೆಯ ಬಾಗಿಲಿಗೆ ಬಂದಾಗ ಆ ಮನೆಯ ಯಜಮಾನಿಯು ಅವನಿಗೆ ರುಚಿಕರವಾದ ಆಹಾರವನ್ನು ತಂದು ನೀಡಿದಳು. ಆ ಸಾಧುವು ತನ್ನ ವಸ್ತ್ರದಲ್ಲಿ ಅದನ್ನು ತೆಗೆದುಕೊಂಡು ಅಡವಿಗೆ ಹೋಗಿ ಆ ರೊಟ್ಟಿಯನ್ನು ನೀರಿನಲ್ಲಿ ನೆನೆಸಿ ತಿಂದನು. ಮರುದಿನ ಅದೇ ಸಮಯಕ್ಕೆ ಆ ಸಾಧುವು ಪುನಃ ಅಲ್ಲಿಗೆ ಬೇಡುವದಕ್ಕೆ ಬಂದನು. ಪುನಃ ಅದೇ ಗೃಹಿಣಿಯು ಪ್ರೀತಿ-ಉತ್ಸಾಹಗಳಿಂದ ಬಂದು ಅವನಿಗೆ ಭಕ್ಷ್ಯ ಭೋಜ್ಯಗಳನ್ನೇ ನೀಡಿದಳು. ಆ ಸಾಧುವು ಅದನ್ನು ತೆಗೆದುಕೊಂಡು ಹೋದನು. ಮೂರನೇ ದಿನವೂ ಆಕೆ ಪುನಃ ಸಾಧುವಿಗೆ ಮಧುರವಾದ ಆಹಾರವನ್ನೇ ನೀಡುತ್ತಾ "ನಾನು ನಿಮಗಾಗಿ ಬೆಳಗಿನಿಂದಲೂ ಬಾಗಿಲಲ್ಲಿ ಕಾದುಕೊಂಡು ನಿಂತಿರುತ್ತೇನೆ; ಕಾದು ಕಾದು ಕಣ್ಣುಗಳೆಲ್ಲಾ ಹಣ್ಣಾದಂತಿವೆ. ನಿಮ್ಮ ಸುಂದರವಾದ ಕಣ್ಣುಗಳು ನನ್ನನ್ನು ಮರುಳು ಮಾಡಿ ಮನಸ್ಸನ್ನು ಸೆರೆಹಿಡಿದಿವೆ; ಹೃದಯವನ್ನು ಸೂರೆಗೊಂಡಿವೆ" ಎಂದಳು. ಅನುರಾಗದ ಆವೇಶದಿಂದ ಮುಖವು ಮಿನುಗುತ್ತಾ ಆಡಿದ ಈ ಮಾತುಗಳನ್ನು ಕೇಳಿ ಆ ಸಾಧುವು ಹೊರಟುಹೋದನು. ಅವನು ಬೇರೊಂದು ಮನೆಗೆ ಹೋಗಿ ಬೇಡಿ ಆಹಾರವನ್ನು ತೆಗೆದುಕೊಂಡು ಹೋದನು. ಕಾಡಿನಲ್ಲಿ ಹೋದಮೇಲೆ ಮೊದಲನೆಯ ಗೃಹಿಣಿಯು ಪ್ರೀತಿಯಿಂದ ಕೊಟ್ಟ ಆಹಾರವನ್ನು ನದಿಯಲ್ಲಿ ಎಸೆದು, ಎರಡನೆಯ ಮನೆಯಿಂದ ತಂದಿದ್ದ ಆಹಾರವನ್ನು ಭುಂಜಿಸಿದನು. ಮರುದಿನ ಕಾದ ಕಬ್ಬಿಣ ಸಲಾಕೆಗಳಿಂದ ತನ್ನ ಎರಡು ಕಣ್ಣುಗಳನ್ನೂ ಕಿತ್ತು ತೆಗೆದು ತನ್ನ ಕರವಸ್ತ್ರದಲ್ಲಿ ಕಟ್ಟಿಕೊಂಡು, ಒಂದು ಕೋಲಿನ ಸಹಾಯದಿಂದ ದಾರಿಯ ಸುಳುವನ್ನು ಹಿಡಿದು ಬಹಳ ಕಷ್ಟದಿಂದ ನಡೆದು ತನ್ನಲ್ಲಿ ಅತಿ ಪ್ರೇಮವನ್ನು ವ್ಯಕ್ತಮಾಡಿದ್ದ ಆ ಪ್ರಮದೆಯ ಮನೆಗೆ ಬಂದನು. ಆ ಕಾಮಿನಿಯು ಅತಿ ಕಾತರದಿಂದ ಇವನಿಗಾಗಿ ಬಾಗಿಲಲ್ಲಿಯೇ ಕಾದು ನಿಂತಿದ್ದಳು. ಅವನು ಮುಖವನ್ನು ಬಗ್ಗಿಸಿದ್ದನು; ಆದ್ದರಿಂದ ಅವನು ಕಣ್ಣುಗಳನ್ನು

ಕಿತ್ತುಕೊಂಡಿದ್ದುದು ಆಕೆಗೆ ಕಾಣಲಿಲ್ಲ. ಆ ತರುಣಿಯು ಪುನಃ ಅವನಿಗೆ ಮಧುರವಾದ
ಆಹಾರವನ್ನು ತಂದು ನೀಡುವದಕ್ಕೆ ಹೋದ ಕೂಡಲೇ ಆ ಸಾಧುವು ಆಕೆಗೆ ತನ್ನ ಕಣ್ಣಿ
ಗುಡ್ಡೆಗಳನ್ನು ನೀಡುತ್ತಾ "ತಾಯೆ! ತಾಯೆ! ನಿನ್ನನ್ನು ಮರಳುಮಾಡಿ ನಿನ್ನ
ಮನಸ್ಸನ್ನು ಸೂರೆಗೊಂಡು ನಿನಗೆ ಕಷ್ಟಕೊಟ್ಟಿರುವ ಈ ಕಣ್ಣುಗಳನ್ನು ತೆಗೆದುಕೊ.
ಇವುಗಳನ್ನು ನೀನು ಇಟ್ಟುಕೊಳ್ಳುವದಕ್ಕೆ ನಿನಗೆ ಎಲ್ಲಾ ಹಕ್ಕೂ ಇದೆ. ತಾಯೆ! ನಿನಗೆ
ಈ ಕಣ್ಣುಗಳು ಬೇಕಾದ್ದರಿಂದ ಇವುಗಳನ್ನು ನೀನು ಇಟ್ಟುಕೊಂಡು ಯಥೇಷ್ಟ
ವಾಗಿ ಸುಖಪಡು; ಇವುಗಳನ್ನು ಏನಾದರೂ ಮಾಡು. ಆದರೆ ದೇವರ ದಯದಿಂದ
ನನ್ನ ಮೇಲೆ ಕರುಣೆಯನ್ನು ತೋರಿಸಿ, ನನ್ನ ಮೋಕ್ಷ ಸಾಧನೆಗೆ ಅಡ್ಡಿಮಾಡಬೇಡ
ಸತ್ಯ—ಧರ್ಮಗಳ ಪಥದಲ್ಲಿ ನಾನು ಮುಗ್ಗರಿಸುವಂತೆ ಮಾಡಬೇಡ" ಎಂದು
ಹೇಳಿದನು.

ಇದರಿಂದ ತಿಳಿಯುವದೇನೆಂದರೆ, ಸತ್ಯಮಾರ್ಗದಲ್ಲಿ ನಡೆಯುವದಕ್ಕೆ ನಿಮ್ಮ
ಕಣ್ಣುಗಳೇನಾದರೂ ನಿಮಗೆ ತೊಂದರೆ ಕೊಟ್ಟರೆ ಅವುಗಳನ್ನು ಕಿತ್ತುಹಾಕಿ. ನಿಮ್ಮ
ಇಡೀ ಜೀವನವೇ ಅಂಧಕಾರದಲ್ಲಿ ನಾಶವಾಗುವದಕ್ಕಿಂತಲೂ ನಿಮ್ಮ ದೇಹವು ಬೆಳಕಿಲ್ಲ
ದಿರುವುದು ಉತ್ತಮ. ನಿಮ್ಮ ಕಿವಿಗಳು ನಿಮ್ಮನ್ನು ಮರುಳುಮಾಡಿ ದಾರಿ ತಪ್ಪಿಸುವ
ದಾದರೆ, ಅವುಗಳನ್ನು ಕತ್ತರಿಸಿಹಾಕಿ. ನಿಮ್ಮ ಹೆಂಡತಿಯಾಗಲೀ ಹಣವಾಗಲೀ ಆಸ್ತಿ
ಯಾಗಲೀ ಯಾವದೇ ಆಗಲಿ ನಿಮ್ಮ ದಾರಿಗೆ ಅಡ್ಡಬಂದರೆ ಅದನ್ನು ತೊಲಗಿಸಿ. ನೀವು
ಹೆಂಡತಿ ಮಕ್ಕಳನ್ನೂ ನೆಂಟರನ್ನೂ ಪ್ರೀತಿಸುವಷ್ಟು ಪ್ರೀತಿಯಿಂದ ಅಥವಾ ಆದರ ಅರ್ಧ
ದಷ್ಟು ಪ್ರೀತಿಯಿಂದಲಾದರೂ ಉತ್ಕಂಠತೆಯಿಂದಲಾದರೂ ಸತ್ಯವನ್ನು, ದೇವರನ್ನು,
ಆತ್ಮವನ್ನು ಪ್ರೀತಿಸಿದರೆ ಈ ಕ್ಷಣದಲ್ಲಿಯೇ ಸತ್ಯವಾದ ಆತ್ಮದೇವನನ್ನು ನೀವು ಮನ
ಗಾಣಬಲ್ಲಿರಿ. ನೀವು ಸತ್ಯಧರ್ಮಗಳ ಪಥದಲ್ಲಿ ನಡೆಯುವದಕ್ಕೆ ತೊಡಗಿದಾಗ ಮೊದಲು
ಮೊದಲು ತಾವಾಗಿಯೇ ಬಂದೊದಗುವಂತೆ ತೋರುವ ಕೆಲವು ಮೋಹಗಳನ್ನು ಜಯಿ
ಸಿದರೆ ಮುಂದೆ ಆ ಪಥವು ಅಷ್ಟು ಕಠಿಣವಾಗಿಯೂ ಸೌಂದರ್ಯಶೂನ್ಯವಾಗಿಯೂ-
ಕೊನೆಯವರೆಗೂ-ಆನಂದ ರಹಿತವಾಗಿಯೂ ಕಾಣಲಾರದು. ಸತ್ಯಪಥವು ಸೂಜಿಯ
ಕೊನೆಗಿಂತಲೂ ಮೊನಚಾದುದೆಂದು ಹೇಳುತ್ತಾರೆ. ಸತ್ಯಧರ್ಮಗಳ ಮಾರ್ಗವು
ಖಡ್ಗಧಾರೆಗಿಂತಲೂ-ಕತ್ತಿಯ ಅಲಗಿಗಿಂತಲೂ-ಹರಿತವಾದುದೆಂದು, ಸೂಕ್ಷ್ಮವಾದು
ದೆಂದು ವೇದದಲ್ಲಿಯೇ ಹೇಳಿದೆ. ಆದರೆ ಇದು ಪೂರ್ಣ ಸತ್ಯವಲ್ಲ. ಏಕೆಂದರೆ,
ಪ್ರಾರಂಭದಲ್ಲಿ ಆ ಮಾರ್ಗವು ಅತೀವ ಇಕ್ಕಟ್ಟಾಗಿ ತೋರಿದರೂ, ಮೊದಲು ಮೊದಲು
ಒದಗುವ ಕೆಲವು ವ್ಯಾಮೋಹಗಳನ್ನೂ ಪ್ರಲೋಭನಗಳನ್ನೂ ಗೆದ್ದುಕೊಂಡರೆ, ಮುಂದೆ
ಮುಂದೆ ಆ ಮಾರ್ಗವು ಆಶ್ಚರ್ಯಕರವಾಗಿ ಸುಂದರವೂ ಸುಲಭವೂ ಆಗಿ ತೋರುವ
ದರಲ್ಲಿ ಸಂಶಯವಿಲ್ಲ. ಇಡೀ ಪ್ರಕೃತಿಯೇ ನಿಮಗೆ ಸಹಾಯ ಮಾಡುತ್ತದೆ; ಎಲ್ಲವೂ
ನಿಮಗೇ ಬೆಂಬಲವಾಗಿ ನಿಲ್ಲುತ್ತವೆ. ತೊಂದರೆಗಳೂ ಅಡಚಣೆಗಳೂ ವಿರೋಧಗಳೂ
ವ್ಯಾಮೋಹಗಳೂ ಹೋರಾಟಗಳೂ ನಿಮ್ಮನ್ನು ಭಯಪಡಿಸುತ್ತವೆ; ಅಷ್ಟೆ; ಆದರೆ

ಅವು ನಿಮಗೆ ನಿಜವಾಗಿಯೂ ಅಪಾಯ ಮಾಡುವುದಿಲ್ಲ. ಇಡೀ ಸೃಷ್ಟಿಯೇ ನಿಮಗೆ ಊಳಿಗ ಮಾಡುತ್ತದೆ, ನಿಮ್ಮನ್ನು ಸೇವಿಸುತ್ತದೆ.

೮೭. ಕಾಮಿನೀಕಾಂಚನಗಳೇ ಅತ್ಯಂತಪ್ರಬಲನಾದ ಪ್ರಲೋಭನ—ಪ್ರತಿಬಂಧಗಳು

(ಅಟ್ಲಾಂಟಾ ಮತ್ತು ಬಂಗಾರ)

ಹಳೆಯ ಪುರಾಣದಲ್ಲಿ ಅಟ್ಲಾಂಟಾ ಎಂಬುವವಳ ಒಂದು ಬಹಳ ಸುಂದರವಾದ ಕಥೆಯಿದೆ. ಆಕೆಯನ್ನು ಮದುವೆಯಾಗುವುದಕ್ಕೆ ಬಯಸಿದ ಪ್ರತಿಯೊಬ್ಬ ಪುರುಷನೂ ಆಕೆಯೊಡನೆ ಪಂಥ ಕಟ್ಟಿ ಓಡಬೇಕಾಗಿತ್ತು. ಓಟದಲ್ಲಿ ಯಾರೂ ಆಕೆಯನ್ನು ಸೋಲಿಸುವದಕ್ಕೆ ಸಾಧ್ಯವಿರಲಿಲ್ಲ. ಹಾಗೆ ಸೋಲಿಸಿದವನನ್ನೇ ತಾನು ಮದುವೆಯಾಗುವುದಾಗಿ ಆಕೆಯು ಪಣ ತೊಟ್ಟಿದ್ದಳು. ಒಬ್ಬ ಜಾಣನಾದ ಮನುಷ್ಯನು ತನ್ನ ಉಪಾಸ್ಯದೇವನಾದ ಬೃಹಸ್ಪತಿಯನ್ನು ಪ್ರಾರ್ಥಿಸಿ, ಓಟದ ಪಂದ್ಯಾಟದಲ್ಲಿ ಅಟ್ಲಾಂಟಳನ್ನು ಸೋಲಿಸಿ ಆಕೆಯನ್ನು ತಾನು ಗೆದ್ದುಕೊಳ್ಳುವುದು ಹೇಗೆಂದು ಸಲಹೆ ಕೇಳಿದನು. ಆ ದೇವರು ಅವನಿಗೆ ವಿಚಿತ್ರವಾದೊಂದು ಸಲಹೆ ಮಾಡಿದನು. ಅವಳು ಓಡುವ ದಾರಿಯಲ್ಲಿ ಬಂಗಾರದ ಇಟ್ಟಿಗೆಗಳನ್ನು ಹರಡಬೇಕೆಂದು ಆ ಮನುಷ್ಯನಿಗೆ ಬೃಹಸ್ಪತಿಯು ಹೇಳಿದನು. ಬೃಹಸ್ಪತಿಯಾದರೂ ಅವನ ಭಕ್ತನಿಗೆ ಈ ವಿಷಯದಲ್ಲಿ ಬೇರೆ ರೀತಿಯಿಂದ ಸಹಾಯ ಮಾಡುವಂತಿರಲಿಲ್ಲ. ಏಕೆಂದರೆ, ತಾನು ಇಡೀ ವಿಶ್ವದಲ್ಲಿಯೇ ಅತ್ಯಂತ ಬಲಿಷ್ಠಳೂ ವೇಗಶಾಲಿಯೂ ಆಗಬೇಕೆಂದು ಪರಮೇಶ್ವರನಿಂದ ಅಟ್ಲಾಂಟಳು ವರವನ್ನು ಪಡೆದಿದ್ದಳು. ಆದರೆ ಆ ಬೃಹಸ್ಪತಿಯ ಭಕ್ತನು ಓಡುವ ಜಾಡಿನಲ್ಲಿ ಬಂಗಾರದ ಇಟ್ಟಿಗೆಗಳನ್ನು ಉದ್ದಕ್ಕೂ ಎಸೆದು, ತನ್ನ ಜೊತೆಗೆ ಓಡಲು ಆಕೆಯನ್ನು ಆಹ್ವಾನಿಸಿದನು. ಇಬ್ಬರೂ ಓಡುವುದಕ್ಕೆ ತೊಡಗಿದರು. ಆತನು ಆಕೆಗಿಂತ ಸ್ವಾಭಾವಿಕವಾಗಿ ಹೆಚ್ಚು ದುರ್ಬಲವಾಗಿದ್ದನು. ಆದ್ದರಿಂದ ಆಕೆಯು ಒಂದು ಕ್ಷಣದಲ್ಲಿ ಅವನನ್ನು ಹಿಂದೆ ಹಾಕಿದಳು. ಅವನು ಕಣ್ಣಿಗೆ ಕಾಣದಷ್ಟು ದೂರವಾದೊಡನೆ ಅಟ್ಲಾಂಟಳು ದಾರಿಯಲ್ಲಿದ್ದ ಬಂಗಾರದ ಇಟ್ಟಿಗೆಗಳನ್ನು ಕಂಡು, ಅವುಗಳನ್ನು ಆರಿಸಿಕೊಳ್ಳಲು ನಿಂತಕೂಡಲೇ ಆ ಗುರುಭಕ್ತನು ಆಕೆಯನ್ನು ಮೀರಿ ಮುಂದೆ ಓಡುತ್ತಿದ್ದನು. ಅನಂತರ ಸುಮಾರು ಒಂದು ನಿಮಿಷದಲ್ಲಿ ಅಟ್ಲಾಂಟಳು ಅವನನ್ನು ಓಟದಲ್ಲಿ ಹಿಂದೆ ಹಾಕುತ್ತಿದ್ದಳು. ಆಗ ಪುನಃ ಜಾಡಿನಲ್ಲಿ ಎಡಕ್ಕೆ ಒಂದು ಬಂಗಾರದ ಇಟ್ಟಿಗೆಯನ್ನು ಕಂಡು ಆಕೆ ಅದನ್ನು ತೆಗೆದುಕೊಳ್ಳಲು ಹೋದಳು. ಆಗ ಮತ್ತೆ ಆ ಬೃಹಸ್ಪತಿ ಭಕ್ತನು ಆಕೆಯನ್ನು ಹಿಂದೆ ಹಾಕಿ ಮುಂದೆ ಓಡಿದನು, ಸ್ವಲ್ಪ ಹೊತ್ತಿನಲ್ಲಿ ಅಟ್ಲಾಂಟಳು ಮುಂದೋಡಿದಳು. ಆದರೆ ಅಲ್ಲಿ ಬಿದ್ದಿರುವ ಇನ್ನೂ ಕೆಲವು ಬಂಗಾರದ ಇಟ್ಟಿಗೆಗಳನ್ನು ಕಂಡು, ಅವನ್ನು ತೆಗೆದುಕೊಳ್ಳಲು ಆ ವಧುವು ಮತ್ತೆ ಬಗ್ಗಿದಳು, ಅಷ್ಟರಲ್ಲಿ ಆ ವರನು ಮುಂದೋಡಿದನು, ಇಬ್ಬರಿಗೂ ಹೀಗೆಯೇ ಬಹಳ ಹೊತ್ತು ಸ್ಪರ್ಧೆಯು ನಡೆಯಿತು. ಕೊನೆಕೊನೆಯಲ್ಲಿ, ಅಟ್ಲಾಂಟಳ

ಕೈಯಲ್ಲಿದ್ದ ಇಟ್ಟಿಗೆಗಳ ಹೊರೆಯು ಭಾರ ಹೆಚ್ಚಾಯಿತು. ಆ ಹೊರೆಯನ್ನೂ ಹೊತ್ತುಕೊಂಡು ಓಡುವುದೂ ಅವನನ್ನು ಹಿಂದೆ ಹಾಕುವುದೂ ಆಕೆಗೆ ಕಷ್ಟವಾಯಿತು. ಅಂತ್ಯದಲ್ಲಿ ಅಟ್ಲಾಂಟಳನ್ನು ಸೋಲಿಸಿ ಬೃಹಸ್ಪತಿ ಭಕ್ತನೇ ಜಯಶಾಲಿಯಾದನು. ಆಕೆಯೂ ಆಕೆಯ ಎಲ್ಲಾ ಬಂಗಾರವೂ ಅವನ ವಶವಾದವು. ಆಕೆಯೇ ಅವನನ್ನು ಲಗ್ನವಾದಳು ಎಲ್ಲ ಲಾಭವೂ ಅವನಿಗಾಯಿತು.

೮೮. ಅತ್ಯಾತುರವೂ ಒಂದು ಅಡ್ಡಿಯೇ

(ರಾಮು ಬಾಲಕನಾಗಿದ್ದಾಗ)

ರಾಮನು ಬಾಲಕನಾಗಿದ್ದಾಗ ಇತರ ಬಾಲಕರ ಜೊತೆಯಲ್ಲಿ ಸೇರಿಕೊಂಡ, ಮನೆಯ ಅಂಗಳದ ತೋಟದಲ್ಲಿ ಚೆನ್ನಾಗಿ ಅಗತೆಮಾಡಿ ಗೊಬ್ಬರವನ್ನೂ ಹಾಕಿ ಭತ್ತ, ಕಡಲೆ, ಹೆಸರು ಮೊದಲಾದ ಧಾನ್ಯಗಳ ಬೀಜಗಳನ್ನು ಬಿತ್ತಿ, ಮಣ್ಣನ್ನು ಮುಚ್ಚಿ ನೀರನ್ನು ಎರೆಯುತ್ತಿದ್ದನು. ನಮಗೆ ಆ ಕಾರ್ಯದಲ್ಲಿ ಎಷ್ಟು ಶ್ರದ್ಧಾದರ ಇತ್ತು ಎಂದರೆ, ನಾವು ಊಟ ತಿಂಡಿಗಳನ್ನು ಸಹ ಮರೆತು ಅದರಲ್ಲಿ ತೊಡಗಿರುತ್ತಿದ್ದೆವು, ನಮಗೆ ತಿಳಿಯದಂತೆ ಬೀಜಗಳು ಮೊಳಕೆಯೊಡೆದು ಗಿಡವಾಗಬಹುದೇನೋ ಎಂಬ ಭಯದಿಂದ ಆ ಸ್ಥಳವನ್ನು ನಾವು ಒಂದು ನಿಮಿಷವೂ ಬಿಟ್ಟು ಹೋಗುತ್ತಿರಲಿಲ್ಲ. ನಿಮಿಷ ನಿಮಿಷಕ್ಕೂ ಆ ಬೀಜಗಳಲ್ಲಿ ಆಗುವ ಬದಲಾವಣೆಯನ್ನು ನೋಡಬೇಕೆಂದು ನಮಗೆ ಕುತೂಹಲವಿತ್ತು. ಬೀಜಗಳನ್ನು ಬಿತ್ತಿದ ಒಂದು ಗಂಟೆಯೊಳಗೇ—ಬಹಳ ಆತುರ–ಕಾತುರಗಳಿಂದ-ಅವುಗಳಲ್ಲಿ ಆಗುತ್ತಿರುವ ಬೆಳವಣಿಗೆಯನ್ನು ನೋಡಬೇಕೆಂದು ಆ ಸ್ಥಳವನ್ನೆಲ್ಲಾ ಕೆದರಿ, ಕೆದರಿ, ಪರೀಕ್ಷಿಸಿ ನೋಡುತ್ತಿದ್ದೆವು. ಏನೂ ಕಾಣುತ್ತಿರಲಿಲ್ಲ. ಅಲ್ಲಿ ಮತ್ತಷ್ಟು ಬಗೆದು ಬಗೆದು ಏನೂ ಕಾಣದಾಗಲೂ ನಿರಾಶರಾಗಿ ಬೀಜಗಳನ್ನೇ ಕಿತ್ತು ನೋಡುತ್ತಿದ್ದೆವು. ಆಗಂತೂ ನಮ್ಮ ನಿರಾಶೆಗೂ ಅಸಮಾಧಾನಕ್ಕೂ ಮಿತಿಯೇ ಇರುತ್ತಿರಲಿಲ್ಲ! ಆ ಬೀಜಗಳಲ್ಲಿ ಒಂದು ಗಂಟೆಯೊಳಗೆ ಯಾವ ಬದಲಾವಣೆ ತೋರಬಹುದು!

ಸಾಧಕರಾದ ನೀವೂ ಆ ಹುಚ್ಚು ಮಕ್ಕಳಂತೆ, ಕಣ್ಣು ಮುಚ್ಚಿ ಧ್ಯಾನ ಮಾಡಿದ ಕಾಲುಗಂಟೆಯೊಳಗೇ ಬ್ರಹ್ಮವನ್ನು ಕಾಣಬೇಕೆಂದು ಆತುರಪಡಬೇಡಿ. ಒಂದೆರಡು ಗಂಟೆಗಳು ಓಂಕಾರವನ್ನು ಉಚ್ಚರಿಸಿದ ಮಾತ್ರಕ್ಕೆ ನಿಮ್ಮೊಳಗೇ ಯಾವ ಶಕ್ತಿಯು ಬೆಳದಿದೆಯೋ ಯಾವ ಸಿದ್ಧಿಯು ಪ್ರಾಪ್ತವಾಗಿದೆಯೋ ತಿಳಿಯಬೇಕೆಂದು ಹುಚ್ಚು ಕುತೂಹಲದಿಂದ ಪರೀಕ್ಷಿಸಿ ನೋಡಬೇಡಿ. ಮೂಗನ್ನು ಒತ್ತಿ ಹಿಡಿದು, ಕಣ್ಣುಗಳನ್ನು ಮುಚ್ಚಿದಕೂಡಲೇ ದೇವರು ನಿಮ್ಮ ಎದುರಿಗೆ ಕೈಮುಗಿದುಕೊಂಡು ಬಂದು ನಿಲ್ಲುತ್ತಾನೆಂದು ತಿಳಿಯಬೇಡಿ. ನೀವು ಬೀಜವನ್ನು ಬಿತ್ತಬಹುದು, ಆದರೆ ನೀವು ತಿಳಿದಷ್ಟು ಬೇಗ, ನಿಮ್ಮ ಆತುರಕ್ಕೆ ಫಲವಾಗುವುದಿಲ್ಲ, ಸುಗ್ಗಿ ಬರುವುದಿಲ್ಲ. ಸಾಧನವು ಫಲಿಸುವುದಕ್ಕೆ ಎಡೆಬಿಡದ ಪ್ರಯತ್ನವೂ ಸಮಾಧಾನವೂ ದೀರ್ಘ ಕಾಲವೂ (ಅಥವಾ

ಸಾಕಷ್ಟು ಕಾಲವೂ) ಬೇಕು. ಆದರೆ ಪ್ರಯತ್ನಕ್ಕೆ ತಕ್ಕ ಫಲವು ಇದ್ದೇ ಇದೆ, ತಪ್ಪುವದೇ ಇಲ್ಲ.

೮೯. ವೇದಗಳ ಆದಿಯಲ್ಲಿಯೂ ವೇದಾಂತದಲ್ಲಿಯೂ ಪ್ರತಿಷ್ಠಿತವಾದ (ವೇದಗಳೂ ಮತ್ತು ಶಂಖಾಸುರ)

ಸ್ವರ್ಗ ಸಾಮ್ರಾಜ್ಯವು ನಿಮ್ಮೊಳಗೇ ಇದೆ. ನೀವು ಅದರ ಅನುಭವ ಪಡೆಯುವದು ಹೇಗೆ ?

ನಮ್ಮೊಳಗಿರುವ ಸ್ವರ್ಗ ಸಾಮ್ರಾಜ್ಯದ ಅನುಭವ ಪಡೆಯುವದು ಹೇಗೆಂಬುದನ್ನು ತೋರಿಸುವದಕ್ಕೆ ಒಂದು ಸ್ವಾರಸ್ಯವಾದ ಕಥೆಯಿದೆ. ಒಂದಾನೊಂದು ಕಾಲದಲ್ಲಿ ಒಬ್ಬ ರಾಕ್ಷಸನು ವೇದಗಳನ್ನೆಲ್ಲಾ ಅಪಹಾರ ಮಾಡಿಕೊಂಡು ಸಮುದ್ರದ ತಳಕ್ಕೆ ಒಯ್ದನೆಂದು ಆ ಕಥೆಯಲ್ಲಿ ಹೇಳಿದೆ.

'ವೇದ' ಎನ್ನುವ ಶಬ್ದಕ್ಕೆ ಎರಡು ಅರ್ಥಗಳಿವೆ. ಜ್ಞಾನ, ಸ್ವರ್ಗಸಾಮ್ರಾಜ್ಯ ಎನ್ನುವದು ಮೊದಲನೆಯ ಅರ್ಥ ; ಮೂಲವಾದ ಅರ್ಥ. ಎರಡನೆಯ ಅರ್ಥ, ಹಿಂದೂಗಳ ಅತ್ಯಂತ ಪವಿತ್ರವಾದ ಶಾಸ್ತ್ರಗ್ರಂಥಗಳು.

ವೇದಗಳನ್ನು ಸಮುದ್ರದ ತಳಕ್ಕೆ ಒಯ್ದನೆಂದು ಹೇಳಿರುವ ದೈತ್ಯನ ಹೆಸರು ಶಂಖಾಸುರ,—ಎಂದು. ಶಬ್ದ ವ್ಯುತ್ಪತ್ತಿಶಾಸ್ತ್ರದ ಪ್ರಕಾರ ಶಂಖಾಸುರನೆಂದರೆ ಶಂಖದಲ್ಲಿರುವ ದೈತ್ಯ–ಎಂದು. ಅಥವಾ ಶಂಖದಲ್ಲಿ ಹುಟ್ಟಿ ಬೆಳೆಯುವ ಶಂಖದ ಹುಳ–ಎಂದು.

ವೇದಗಳನ್ನು ಉದ್ಧರಿಸುವದಕ್ಕಾಗಿಯೂ ರಕ್ಷಿಸುವದಕ್ಕಾಗಿಯೂ ಜ್ಞಾನಭಂಡಾರವನ್ನು ಹಿಂದಕ್ಕೆ ತರುವದಕ್ಕಾಗಿಯೂ ಪರಮಾತ್ಮನು ಮತ್ಸ್ಯಾವತಾರಮಾಡಿ ಆ ಶಂಖಾಸುರನೊಡನೆ ಯುದ್ಧ ಮಾಡಿ, ಅವನನ್ನು ಸಂಹರಿಸಿ ವೇದಗಳನ್ನು ಹಿಂತಿರುಗಿ ಪ್ರಪಂಚಕ್ಕೆ ತಂದನು.

ಮಕ್ಕಳೂ ಆ ಕಥೆಯನ್ನು ಓದಿ ಅದಕ್ಕೆ ಅಕ್ಷರಾರ್ಥವನ್ನು ಮಾಡಿಕೊಳ್ಳುವರು. ಸಾಮಾನ್ಯ ಜನರೂ ಓದಿ ಆ ಕಥೆಗೆ ಮಕ್ಕಳಂತೆಯೇ ವಾಚ್ಯಾರ್ಥವನ್ನು ಮಾಡಿಕೊಳ್ಳಬಹುದು. ಆದರೆ ಈ ಕಥೆಯಲ್ಲಿ ಆಳವಾದ ಗೂಢಾರ್ಥವಿದೆ. ಒಂದು ಸಾಮಾನ್ಯವಾದ ಸತ್ಯವನ್ನು ನಿದರ್ಶಿಸುವದಕ್ಕಾಗಿ ಈ ಕಥೆಯಿದೆ.

ಶಂಖದಲ್ಲಿರುವ ಕ್ರಿಮಿಯಿಂದ ವೇದಗಳನ್ನು ಹಿಂತಿರುಗಿ ಪಡೆಯುವದಕ್ಕಾಗಿ ದೇವರು ಮೀನಾಗಿ ಅವತರಿಸುವನು. ದೇವರು ಮತ್ಸ್ಯಾವತಾರಮಾಡಿ ಸಮುದ್ರದ ತಳದಲ್ಲಿದ್ದ ಶಂಖಾಸುರನನ್ನು ಕೊಂದನು. ಇದರ ಉಪಯೋಗವೇನು ? ಮೀನು ಸಮುದ್ರದ ಪ್ರಾಣಿ; ಶಂಖವಲ್ಲಿಯೂ ಸಮುದ್ರದ ಪ್ರಾಣಿ ಇದೆ. ಸರ್ವಶಕ್ತನಾದ ಭಗವಂತನು ಮೀನಿನ ರೂಪವನ್ನು ತಾಳಿ ಸಮುದ್ರದಲ್ಲಿದ್ದ ಹುಳುವನ್ನು ಹೊಡೆದು ಹಾಕಿದನು. ಖಾಲಿಯಾದ ಆ ಶಂಖವನ್ನು ಸಮುದ್ರದ ಅಲೆಗಳು ಹೊಡೆದುಕೊಂಡು.

ಒಂದು ದಂಡಗೆ ತಂದುಹಾಕಿದವು. ಜನರು ಅದನ್ನು ತೆಗೆದುಕೊಂಡರು; ಆ ಶಂಖವನ್ನು ಊದಿದರು. ಅದರಿಂದ ಓಂ ಓಂ ಓಂ ಎಂಬ ಶಬ್ದವು ಪ್ರತಿಧ್ವನಿತವಾಗುತ್ತಾ ಹೊರ ಹೊಮ್ಮಿತು. ಅದೇ ವೇದ. "ಪ್ರಣವಸ್ಸರ್ವ ವೇದೇಷು" (ಗೀ) ಪ್ರಣವವೇ (ಓಂಕಾರವೇ) ಸರ್ವವೇದದ ಸಾರವಾಗಿದೆ. ಸಮುದ್ರದ ತಳದಿಂದ ವೇದರೂಪವಾದ ಶಂಖವು ಈ ಅರ್ಥದಲ್ಲಿ ತರಲ್ಪಟ್ಟಿತು.

ಪವಿತ್ರವಾದ ಓಂ ಮಂತ್ರದ ಮಹತ್ತ್ವವನ್ನು ತಿಳಿಸುವದಕ್ಕಾಗಿ ಆ ಕತೆಗಾರನು ಆ ಮಂತ್ರವನ್ನು ವಿಶೇಷವಾಗಿ ಒತ್ತಿ ಹೇಳಿದನು; ಎತ್ತಿ ತೋರಿಸಿದನು. ಸಮಸ್ತ ಪ್ರಪಂಚದಲ್ಲಿ ಈ ಪವಿತ್ರವಾದ ಮಂತ್ರ ಓಂಕಾರವೇ ಸಕಲ ಜ್ಞಾನದ ಅಂತ್ಯವೆಂಬುದನ್ನು ತೋರಿಸುವದಕ್ಕೆ ಈ ಕಥೆಯು ಉದ್ದೇಶವಾಗಿದೆ. ಸಕಲ ವೇದಗಳನ್ನೂ ನಿಖಿಲ ಸ್ವರ್ಗ ಸಾಮ್ರಾಜ್ಯವನ್ನೂ ಅತ್ಯಂತ ಸಂಕ್ಷಿಪ್ತ ರೂಪದಲ್ಲಿ ಸಾರಸಂಗ್ರಹ ಮಾಡಿ ಶಂಖದಲ್ಲಿ ತುಂಬಿದ್ದೇ ಪವಿತ್ರ ಓಂಕಾರ. ಇದನ್ನು ತಿಳಿಯುಪಡಿಸುವದೇ ಕಥೆಯ ಮುಖ್ಯ ಉದ್ದೇಶವಾಗಿತ್ತು.

ಹಿಂದೂಗಳು ಎಲ್ಲಾ ಪವಿತ್ರವೂ ಮುಖ್ಯವೂ ಅದ ಸಂದರ್ಭಗಳಲ್ಲಿ ಶಂಖವನ್ನು ಊದುತ್ತಾರೆ; ಅಂದರೆ ಅವರು ಮರಣ ಕಾಲದಲ್ಲಿಯೂ, ಜನನ ಕಾಲದಲ್ಲಿಯೂ, ಯುದ್ಧಕಾಲದಲ್ಲಿಯೂ, ಪೂಜಾ ಕಾಲದಲ್ಲಿಯೂ ಓಂಕಾರವನ್ನು ಉಚ್ಚಾರಣೆ ಮಾಡುತ್ತಾರೆ. ಓಂಕಾರದಲ್ಲಿಯೇ ಜೀವಿಸುತ್ತಾ, ಓಂಕಾರದಲ್ಲಿಯೇ ಚಲಿಸುತ್ತಾ, ಓಂಕಾರದಲ್ಲಿಯೇ ತನ್ನ ಸರ್ವಸ್ವದ ಇರುವಿಕೆ ಉಳ್ಳವನೇ ಸುಖಿಯು, ಧನ್ಯನು!

ನಮ್ಮ ಅಂತರಂಗದಲ್ಲಿರುವ ಐಶ್ವರ್ಯಭಂಡಾರವನ್ನು ಸ್ವರ್ಗ ಸಾಮ್ರಾಜ್ಯದ ಮಹಾದ್ವಾರವನ್ನೂ ಬಿಚ್ಚಿ ತೆರೆಯುವದಕ್ಕೆ ಓಂಕಾರವೇ ಬೀಗದ ಕೈ. ಯುರೋಪ್ ಮತ್ತು ಅಮೆರಿಕಾದ ಜನರು ತಮ್ಮ ಬುದ್ಧಿಗೆ ಒಪ್ಪಿಗೆಯಾಗದ ಹೊರತು ಯಾವುದನ್ನೂ ಅಂಗೀಕರಿಸುವದಿಲ್ಲ. ಲೌಕಿಕ ಯುಕ್ತಿಯಿಂದ ಈ ಮಂತ್ರದ ಮಹಿಮೆಯನ್ನು ಸಿದ್ಧಪಡಿಸಿ ತೋರಿಸುವದಕ್ಕೆ ಒಂದು ವೇಳೆ ಸಾಧ್ಯವಾಗದಿದ್ದರೂ ಸರಿಯಾದ ಕ್ರಮದಲ್ಲಿ ಈ ಮಂತ್ರವನ್ನು ಉಚ್ಚಾರಣೆ ಮಾಡಿದರೆ ಒಂದು ವ್ಯಕ್ತಿಯ ಶೀಲದ ಮೇಲೆ ಅದು ಉಂಟು ಮಾಡುವ ಪ್ರಬಲ ಪರಿಣಾಮವನ್ನು ಅಲ್ಲಗಳೆಯುವದು ಸಾಧ್ಯವಲ್ಲ; ಅಥವಾ ನಮ್ಮೆಲ್ಲರ ಒಳಗಿರುವ ಗೂಢ ಶಕ್ತಿಗಳನ್ನು ಬಿಚ್ಚಿಡುವದರಲ್ಲಿಯೂ ಜಗತ್ತಿನ ಎಲ್ಲಾ ಶಕ್ತಿಭಂಡಾರಗಳನ್ನು ನಮ್ಮ ವಶಪಡಿಸುವದರಲ್ಲಿಯೂ ಆ ಮಂತ್ರಕ್ಕೆ ಇರುವ ಪ್ರಭಾವವನ್ನು ಇಲ್ಲವೆನ್ನುವದೂ ಸಾಧ್ಯವಲ್ಲ. ಹಿಂದೂಗಳ ಪವಿತ್ರ ಶಾಸ್ತ್ರಗಳ ಲೇಖಕರು ಓಂಕಾರ ಜಪಮಾಡುತ್ತಾ ಪರಮಾನಂದ ಪರವಶರಾಗಿದ್ದರಿಂದಲೇ ಅವರಿಗೆ ಆ ವೇದ ಶಾಸ್ತ್ರಗಳ ಸಮಸ್ತ ಜ್ಞಾನವೂ ಲಭಿಸಿತೆಂದು ತೋರಿಸುವುದೂ ಆ ಕತೆಗಾರನ ಒಂದು ಉದ್ದೇಶವಾಗಿದೆ. ಸರ್ವಜ್ಞಾನಕ್ಕೂ ಈ ಮಂತ್ರವೇ ಬೀಜವಾಗಿದೆ. ಈ ಮಂತ್ರದ ಮಹತ್ತ್ವವೇನೆಂಬುದನ್ನು ನಿಮಗೆ ಬೇರೆ ಬೇರೆ ದೃಷ್ಟಿಯಿಂದ ತಿಳಿಸುತ್ತೇನೆ. ಜನರು

ಸಂಪೂರ್ಣ ಹೃದಯದಿಂದ ಈ ಮಂತ್ರವನ್ನು ಸೇವಿಸಿ ಲಾಭ ಪಡೆಯಲೆಂದು ಇದರ ಮಹತ್ತ್ವವನ್ನು ತಿಳಿಸುವದು ಅವಶ್ಯವಾಗಿದೆ.

೯೦. ಓಂಕಾರ ಮಂತ್ರದ ಪ್ರಭಾವ

(ಗರ್ಭಿಣಿಯಾದ ನವತರುಣಿ)

ನೀರಿನ ತೊಟ್ಟಿಯ ತಳದಲ್ಲಿ ಒಂದು ದ್ವಾರವಿದ್ದು ಅದನ್ನು ಬಿರಡೆಯಿಂದ ಮುಚ್ಚಿ, ತೊಟ್ಟಿಯಲ್ಲಿ ನೀರನ್ನು ಹೊಯ್ಯುತ್ತಿದ್ದರೆ, ಹೆಚ್ಚು ಹೆಚ್ಚಾಗಿ ನೀರನ್ನು ಸುರಿದಂತೆ ತೊಟ್ಟಿಯ ತಳದಲ್ಲಿ ಒತ್ತಡವೂ ಹೆಚ್ಚುತ್ತಾ ಹೋಗುತ್ತದೆ—ಎಂದು ಜಲ ಸಮಸ್ಥಿತಿ ಶಾಸ್ತ್ರವು (Hydrostatics) ಹೇಳುತ್ತದೆ. ಆ ಬಿರಡೆಯನ್ನು ಹೊರಕ್ಕೆ ತಳ್ಳಲು ಸಾಕಷ್ಟು ಒತ್ತಡವು ಉಂಟಾಗಬೇಕಾದರೆ ಆ ತೊಟ್ಟಿಯೊಳಗೆ ಎಷ್ಟು ನೀರನ್ನು ಹಾಕಬೇಕು-ಎನ್ನುವದನ್ನು ಆ ಶಾಸ್ತ್ರದ ನಿಯಮಗಳ ಪ್ರಕಾರವೇ ಲೆಕ್ಕ ಮಾಡಿ ಕಂಡು ಹಿಡಿಯಬಹುದು. ಹಾಗೆಯೇ ನಿಮ್ಮ ದೇಹವೆಂಬ ಪಾತ್ರದಲ್ಲಿ ಓಂಕಾರವನ್ನು-ಗಂಗಾಜಲದಂತೆ-ಸುರಿಯುತ್ತಾ ಹೋದರೆ, ನೀರಿನ ಒತ್ತಡವು ಬೆಳೆದಂತೆ, ಆ ಮಂತ್ರದ ಪ್ರಭಾವವು ಬೆಳೆಯುತ್ತಾ ಹೋಗುತ್ತದೆ. ಆದರೆ ಒಳಗಿನ ಪ್ರಭಾವದ ಉತ್ಪಾದನವೇ ಒಂದು ರೀತಿಯದಾದರೆ, ಹೊರಗೆ ಜನರ ದೃಷ್ಟಿಗೆ ಅದರ ಪ್ರಕಟಣವೇ ಬೇರೆ ಬಗೆಯಾಗುತ್ತದೆ. ಆದರೂ, ನೀರಿನ ಒತ್ತಡವು ಹೆಚ್ಚಾಗಿ ಆ ತೊಟ್ಟಿಯ ಕೆಳಗಿನ ಬಿರಡೆಯು ಕಿತ್ತುಕೊಂಡು ನೀರು ಹೊರನುಗ್ಗಿ ಹರಿಯುವ ಒಂದು ಸಮಯವು ಬರುವಂತೆ, ನಿಮ್ಮ ಓಂಕಾರ ಉಪಾಸನೆಯ ಭಾವನಾಬಲವು ಬೆಳೆದು ಉತ್ಪನ್ನವಾಗುವ ಚೈತನ್ಯಶಕ್ತಿಯು ನಿಮ್ಮಿಂದ ಹೊರಚಿಮ್ಮಿ ಹರಿಯುವ ಒಂದು ಕಾಲವೂ ಬರುತ್ತದೆ. ಕೆಲವು ಕಾಲದವರೆಗೆ ಯಾವ ಪರಿಣಾಮವೂ ತೋರದಿರಬಹುದು; ಆದರೂ ಪರಿಣಾಮವು ಒಳಗೆ ಬೆಳೆಯುತ್ತಲೇ ಬರುತ್ತಿರುತ್ತದೆ. ಅದಕ್ಕೆ ಒಂದು ದೃಷ್ಟಾಂತವನ್ನು ಕೊಡಬಹುದು: ಹೊಸದಾಗಿ ಮದುವೆಯಾದ ಒಬ್ಬ ತರುಣಿ ಇದ್ದಳು. ಆಕೆಗೆ ಗರ್ಭಧಾರಣೆಯ ಅನುಭವವೂ ಹೊಸದಾಗಿದ್ದಿತೆನ್ನುವುದು ಸ್ವಾಭಾವಿಕವೇ ಸರಿ. ಆಕೆಯು ಸರಳತೆಯೇ ಮೈತಳೆದಂತೆ ಅತಿ ಮುಗ್ಧಳಾಗಿದ್ದಳು. ಕೆಲವು ದಿನಗಳಲ್ಲಿ ಆಕೆಯು ಗರ್ಭವತಿಯಾದಳು. ಮೊದಲನೆಯ ತಿಂಗಳಲ್ಲಿ ಆಕೆಯು ತನ್ನ ಪ್ರಕೃತಿಯಲ್ಲಿ ಸ್ವಲ್ಪ ಬದಲಾವಣೆಯನ್ನು ಕಂಡರೂ ಮುಂದೆ ತನ್ನಲ್ಲಿ ಹೆಚ್ಚು ಬದಲಾವಣೆ ಆಗಲಾರದೆಂದು ಮುಗ್ಧತೆಯಿಂದ ಭಾವಿಸಿದಳು. ಇಂಡಿಯಾ ದೇಶದಲ್ಲಿ ಸೊಸೆಯು ಅತ್ತೆಯ ಮನೆಯಲ್ಲಿಯೇ ವಾಸಮಾಡುತ್ತಾಳೆ; ಅತ್ತೆಯು ಸೊಸೆಯ ಮತ್ತು ಆಕೆಯ ಮಕ್ಕಳ ಯೋಗಕ್ಷೇಮವನ್ನು ನೋಡುತ್ತಾಳೆ. ಒಂಭತ್ತನೆಯ ತಿಂಗಳ ಕೊನೆಯಲ್ಲಿ ಮುಗ್ಧ ಸೊಸೆಯು-ಬಹಳ ಹಳೆಯ ಕಾಲದ ಹೆಣ್ಣಿನಂತೆ-"ಅತ್ತೆ, ಅತ್ತೆ! ನನಗೆ ನಿದ್ದೆ ಬಂದಾಗ ಅಕಸ್ಮಾತ್ ನನಗೆ ಅರಿವಿಲ್ಲದಂತೆ ಶಿಶುವು ಜನನವಾಗಬಹುದು.

ನನ್ನ, ಪ್ರಸವಕಾಲದಲ್ಲಿ ದಯವಿಟ್ಟು ನನ್ನನ್ನು ಎಚ್ಚರಗೊಳಿಸುತ್ತೀರ"? ಎಂದು ಬೇಡಿದಳು, ಅತ್ತೆಯು ಆಕೆಯನ್ನು ಕುರಿತು, "ಮಗಳೆ! ಹೆರಿಗೆಯ ಸಮಯವು ಬಂತೆಂದರೆ ನಿನ್ನನ್ನು ಎಚ್ಚರಗೊಳಿಸುವ ಅಗತ್ಯವೇ ಇರುವುದಿಲ್ಲ. ಏಕೆಂದರೆ, ಪ್ರಸವ ವೇದನೆಯನ್ನು ತಡೆಯಲಾರದೆ, ಅರಚುವುದಕ್ಕೂ ಕಿರಿಚುವುದಕ್ಕೂ ತೊಡಗುವುದರಿಂದ ನೀನೇ ನೆರೆಹೊರೆಯವರನ್ನೆಲ್ಲಾ ಎಚ್ಚರಗೊಳಿಸುವ ಸ್ಥಿತಿಯಲ್ಲಿ ಇರುತ್ತೀಯ" ಎಂದಳು. ಗರ್ಭವು ಬೆಳೆಯುತ್ತಿದ್ದ ಕಾಲದಲ್ಲಿ, ತಾಯಿಗೆ ಅದರ ವಿಶೇಷವಾದ ಪರವೆಯಿಲ್ಲವಾದರೂ ಆಕೆಯ ಪ್ರಕೃತಿಯಲ್ಲಿ ಪರಿಣಾಮವುಂಟಾಗಿ ವಿಲಕ್ಷಣವಾದ ಬದಲಾವಣೆಗಳು ನಡೆಯುತ್ತಲೇ ಇರುತ್ತವೆ. ಸರಿಯಾದ (ಪರಿಪಕ್ವ) ಕಾಲವು ಬಂತಾದರೆ ಪರಿಣಾಮವೇನೆಂಬುದು ಹೊರತೋರಿಕೊಳ್ಳುತ್ತದೆ. ಹಾಗೆಯೇ ಈ ಮಂತ್ರವನ್ನು ಸೇವಿಸುತ್ತಾ ನಡೆದು, ಅದರಿಂದ ಪುಷ್ಟಿಯನ್ನು ಪಡೆದು, ಈ ಪೋಷಕವಾದ ಅಮೃತವನ್ನು ಆಳವಾಗಿ ಹೀರಿದರೆ, ಅದರ ಮಹಿಮೆ ಏನೆಂಬುದು ಸಕಾಲದಲ್ಲಿ ಪ್ರಕಾಶವಾಗುತ್ತದೆ. ನೀವು ಅಸಹನೆಯಿಂದ ಆತುರಪಡಬಾರದು.

೯೧. ಅತ್ಯುತ್ಕಟ ಪ್ರೇಮದ ಮಹಿಮೆ

(ಉತ್ಕಟ ಪ್ರೇಮದ ಸ್ತ್ರೀಪುರುಷರು)

ಅತ್ಯಂತ ಉತ್ಕಟ ಪ್ರೇಮಿಗಳಾದ ಸ್ತ್ರೀಪುರುಷರಿಬ್ಬರನ್ನು ಬೆಂಕಿಯಲ್ಲಿ ಎಸೆದರೂ ಬೆಂಕಿಯು ಅವರನ್ನು ಸುಡಲಿಲ್ಲವೆಂದು ಹಿಂದೂಗಳ ಧರ್ಮಗ್ರಂಥವಾದ ಯೋಗವಾಸಿಷ್ಠದಲ್ಲಿ ಹೇಳಿದೆ. ಅವರನ್ನು ನದಿಯಲ್ಲಿ ಎಸೆದರೂ ನೀರು ಮುಳುಗಿಸಲಿಲ್ಲ. ಪರ್ವತದಿಂದ ಅವರನ್ನು ಕೆಳಗೆ ಎಸೆದರೂ ಅವರ ಒಂದು ಮೂಳೆಯೂ ಮುರಿಯಲಿಲ್ಲ. ಅದಕ್ಕೆ ಏನು ಕಾರಣ? ಅವರು ಪರಮ ಪ್ರೇಮದ ಏಕತ್ವದಲ್ಲಿದ್ದಾಗ ಯಾವ ಪ್ರಶ್ನೆಯೂ ಅವರನ್ನು ಮುಟ್ಟಲಾರದಾಗಿತ್ತು; ಅವರು ಅವಕ್ಕೆ ಸಮಾಧಾನವನ್ನೂ ಕೊಡಲಾರದವರಾಗಿದ್ದರು. ಬಹಳ ಕಾಲದ ಮೇಲೆ ಅವರು ಸ್ವಾಭಾವಿಕ ವ್ಯವಹಾರ ಸ್ಥಿತಿಯಲ್ಲಿದ್ದಾಗ ಜನರು ಆಶ್ಚರ್ಯದಿಂದ ಆ ಪವಾಡದ ಕಾರಣವನ್ನು ಕೇಳಿದರು. ಅವರಲ್ಲಿ ಪ್ರಿಯನಿಗೆ ಪ್ರಿಯಳೂ ಪ್ರಿಯಳಿಗೆ ಪ್ರಿಯನೂ ಪರಸ್ಪರ ಸರ್ವಸ್ವವಾಗಿದ್ದಾರೆಂಬ ಅವರದಕ್ಕೆ ಉತ್ತರವನ್ನು ಹೇಳಿದರು. ಅವರಿಗೆ ಬೆಂಕಿಯು ಬೆಂಕಿಯಾಗಿರಲಿಲ್ಲ; ಆಕೆಗೆ ಬೆಂಕಿಯು ತನ್ನ ಪ್ರಿಯನಾಗಿಯೂ ಆತನಿಗೆ ಅದೇ ಬೆಂಕಿಯು ತನ್ನ ಪ್ರಿಯಳಾಗಿಯೂ ಕಂಡಿತು. ಅವರಿಗೆ ನೀರು ನೀರಾಗಿರಲಿಲ್ಲ. ಪರ್ವತವು ಪರ್ವತವಾಗಿರಲಿಲ್ಲ; ಎಲ್ಲವೂ ಪ್ರೇಮ ಸ್ವರೂಪವೇ ಆಗಿದ್ದವು. ಆದ್ದರಿಂದ ಪ್ರಿಯಕರನು ಪ್ರಿಯೆಗೂ ಪ್ರಿಯೆಯು ಪ್ರಿಯಕರನಿಗೂ ಹಾನಿ ಮಾಡುವುದು ಹೇಗೆ ಸಾಧ್ಯ?

ಹಿಂದೂ ಪುರಾಣಗಳಲ್ಲಿ, ರಾಜಕುಮಾರನಾದ ಪ್ರಹ್ಲಾದನ ತಂದೆಯು ಮಗನನ್ನು ಭಕ್ತಿಮಾರ್ಗದಿಂದ ತನ್ನ ಪ್ರಪಂಚಮಾರ್ಗಕ್ಕೆ ತಿರುಗಿಸಬೇಕೆಂದು ಅನೇಕ ಬಗೆಯಿಂದ

ಪ್ರೇರಿಸಿ, ಪ್ರೋತ್ಸಾಹಿಸಿದರೂ ತನ್ನ ಬಂಧ್ಧಿವಾದವೆಲ್ಲಾ ವ್ಯರ್ಥವಾದಂದರ್ಕಾಗಿ ಹುಡುಗನನ್ನು ಚಿತ್ರ ಹಿಂಸೆಗೂ ಗುರಿಪಡಿಸುತ್ತಾನೆ. ಪ್ರಹ್ಲಾದನನ್ನು ಹಿರಣ್ಯಕಶಿಪು ಬೆಂಕಿಯಲ್ಲಿ ಎಸೆಯುತ್ತಾನೆ. ಆದರೆ ಬೆಂಕಿಯು ಅವನನ್ನು ಸುಡುವುದಿಲ್ಲ. ಆ ರಾಜನು ಹುಡುಗನನ್ನು ನದಿಯಲ್ಲಿ ನೂಕುತ್ತಾನೆ. ಆದರೆ ನದಿಯು ಅವನನ್ನು ಮುಳುಗಿಸದೆ, ತೇಲಿಸಿ ಎತ್ತಿ ಹಿಡಿಯುತ್ತದೆ. ಪಂಚಭೂತಗಳಲ್ಲಿ ಬೆಂಕಿ ನೀರುಗಳಂತೆ ಇತರ ಭೂತಗಳೂ ಪ್ರಹ್ಲಾದನಿಗೆ ಯಾವ ತೊಂದರೆಯನ್ನೂ ಮಾಡುವುದಿಲ್ಲ; ಅವನು ಅವುಗಳ ನಿಜಸ್ವರೂಪವನ್ನು ಅರಿತಿದ್ದನು. ಆ ಬಾಲಕನ ಮೋಹವು ನಾಶವಾಗಿದ್ದುದರಿಂದ ನಿಜಸ್ಥಿತಿಯಲ್ಲಿ ನಿಂತಿದ್ದನು, ಅವನಿಗೆ ಎಲ್ಲವೂ ದೇವರಾಗಿದ್ದಿತು; ಎಲ್ಲವೂ ಪ್ರೇಮವಾಗಿದ್ದಿತು. ಬೆದರಿಕೆಗಳೂ ಆಗ್ರಹಗಳೂ ಹುಬ್ಬುಗಂಟುಗಳೂ ಖಡ್ಗವೂ ಬೆಂಕಿಯೂ ಎಲ್ಲವೂ ಅವನಿಗೆ ಮಧುರವಾದ ಸ್ವರ್ಗದ ಹೊರತು ಬೇರೆಯೆಂದು ತೋರಲಿಲ್ಲ. ಹೀಗಿರುವಾಗ ಅವನಿಗೆ ಯಾವ ಅಪಾಯವು ಬರಬೇಕು ?

೯೨. ಬಿಡಿಭಾಗಡ ಲಾಭವನ್ನುಗಳಿಸಬೇಕಾದರೆ ಇಡಿ ದೇಹದ ಲಾಭವನ್ನು ಸಾಧಿಸಬೇಕು.

(ಸ್ವಾರ್ಥಿಯಾದ ಕೈ)

ಒಳ್ಳೆಯದು, ಗೆಲುವಿನ ಮೂರನೆಯ ನಿಯಮವೇ ಪ್ರೇಮ; ವಿಶ್ವದೊಡನೆ ಸಮರಸಭಾವ; ಹೊಸ ಹೊಸ ಸನ್ನಿವೇಶಗಳಿಗೆ ಹೊಸ ಹೊಸ ಹೊಂದಾಣಿಕೆ. ಪ್ರೇಮವೆಂದರೆ ಏನು ? ನೆರೆಹೊರೆಯವರಲ್ಲಿಯೂ ನಿಮ್ಮ ಸಂಪರ್ಕದಲ್ಲಿ ಬಂದ ಪ್ರತಿಯೊಬ್ಬರಲ್ಲಿಯೂ, ನಿಮ್ಮನ್ನೇ ನೀವು ಕಾಣುವುದು ಪ್ರೇಮ. ವಾಸ್ತವವಾಗಿ ಅದು ವ್ಯವಹಾರದಲ್ಲಿಯೂ ಬರುವುದೇ ಪ್ರೇಮ. ನೀವು ವ್ಯಾಪಾರಿಗಳಾಗಿದ್ದರೆ, ನಿಮ್ಮ ಗಿರಾಕಿಗಳನ್ನು ನಿಮ್ಮಂತೆ ಪ್ರೇಮದಿಂದ ಕಾಣಬೇಕು; ಅವರ ಹಿತವೇ ನಿಮ್ಮ ಹಿತವಾಗಬೇಕು. ಇಲ್ಲವಾದರೆ ನಿಮ್ಮ ವ್ಯಾಪಾರವು ಕೆಡುತ್ತದೆ; ನಿಮ್ಮ ಉದ್ಯೋಗದಲ್ಲಿ ನಿಮಗೆ ಗೆಲುವಾಗುವುದಿಲ್ಲ. ನಮ್ಮ ಮೈಯೊಳಗಿನ ಒಂದು ಅವಿಭಾಜ್ಯಭಾಗವಾದ ಕೈಯು, ಸ್ವಾರ್ಥಿಯಾಗಿ ಇತರ ಅಂಗಗಳಿಂದ ತನ್ನ ಸ್ವತಂತ್ರ ಪ್ರತ್ಯೇಕತೆಯನ್ನು ಸಾಧಿಸಹೊರಟು ಹೀಗೆ ವಾದಿಸಬಹುದು, "ಓ ನೋಡಿ! ನಾನೇ ಎಲ್ಲಾ ಬಗೆಯ ಕಾರ್ಯಗಳನ್ನೂ ಮಾಡಿ ದುಡಿದು ತರುವವನು; ನಾನು ಶ್ರಮಪಟ್ಟು ಬೆವರು ಸುರಿಸಿ ಸಂಪಾದಿಸಿದ್ದರಲ್ಲಿ ಇಡೀ ದೇಹವು ಏಕೆ ಭಾಗಿಯಾಗಬೇಕು ? ನಾನು ದುಡಿದು ತಂದ ಆಹಾರವನ್ನು ಹೊಟ್ಟೆಗೂ ಅದರ ಮೂಲಕ ಇತರ ಭಾಗಗಳಿಗೂ ಏಕೆ ಕೊಡಬೇಕು ? ಇಲ್ಲ, ಇಲ್ಲ, ಎಲ್ಲವನ್ನೂ ನಾನೇ ಇಟ್ಟುಕೊಳ್ಳುತ್ತೇನೆ." ಈ ಸ್ವಾರ್ಥಭಾವನೆಯನ್ನು ಆಚರಣೆಯಲ್ಲಿ ತರಲು ಕೈಯು ಆಹಾರವನ್ನು ತನ್ನ ಚರ್ಮದಲ್ಲಿಯೂ ಮಾಂಸದಲ್ಲಿಯೂ 'ಇಂಜೆಕ್ಟ್' ಮಾಡಿಕೊಳ್ಳುವುದರ ಹೊರತು ಬೇರೆ ಗತಿಯಿಲ್ಲ.

ಹೀಗೆ ಮಾಡಿದರೆ ಅದಕ್ಕೆ ಹಿತವಾಗಬಹುದೇ ? ಗೆಲುವಾಗಬಹುದೇ ? ಅಸಾಧ್ಯ ! ಎಂದೆಂದಿಗೂ ಇಲ್ಲ. ಅದು ರೋಗವೇ ಆದೀತು. ಇಂಥಾ ಗೆಲುವನ್ನು ಯಾರೂ ಬಯಸುವುದಿಲ್ಲ.

ಹೀಗೆಯೇ ನೆನಪಿಡಿ; ಇಡೀ ಜಗತ್ತೇ ಒಂದು ದೇಹ. ನಿಮ್ಮ ದೇಹವೆಂಬುದು ಆ ವಿರಾಡ್‌ದೇಹದಲ್ಲಿ ಒಂದು ಕೈ ಅಥವಾ ಅದು ಆ ಮಹಾಬೃಹತ್ತಿನಲ್ಲಿ ಒಂದು ಬೆರಳೂ ಒಂದು ಉಗುರೂ ಆಗಲಾರದು. ಅನಂತ ಜೀವರೆಂಬ ಅನೇಕ ಸಜೀವ ಕೋಶಗಳಲ್ಲಿ ನಿಮ್ಮ ದೇಹವು ಅತ್ಯಂತ ಸೂಕ್ಷ್ಮವಾದ ಒಂದು ಸಜೀವ ಕೋಶವು ಮಾತ್ರ ಆಗಬಹುದು. ಆದ್ದರಿಂದ ನಿಮಗೆ ಹಿತವೂ ಸುಖವೂ ಗೆಲುವೂ ಆಗಬೇಕಾದರೆ, ಇಡೀ ವಿಶ್ವದ ಆತ್ಮನಿಂದ ನಿಮ್ಮನ್ನು ನೀವು ಬೇರೆ-ಎಂದು ತಿಳಿಯಬಾರದು. ಕೈಯು, ತನ್ನ ಆತ್ಮವು ತನ್ನಲ್ಲಿ ಮಾತ್ರವೇ ಪರಿಮಿತವಾಗಿರದೆ ಇಡೀ ದೇಹದಲ್ಲೆಲ್ಲಾ ತುಂಬಿದೆಯೆಂದು ಇಡೀ ದೇಹದ ಆತ್ಮವೇ ತನ್ನ ಆತ್ಮವೆಂದೂ ಇಡೀ ದೇಹದ ಆತ್ಮಕ್ಕೆ ಆಹಾರ ಸೇವನೆಯಿಂದ ತುಷ್ಟಿ ಪುಷ್ಟಿಗಳು ಒದಗಿದರೆ, ತನ್ನ ಆತ್ಮಕ್ಕೂ ಒದಗುವುದೆಂದೂ ತಿಳಿಯಬೇಕು. ಹೀಗೆ ವಿಶ್ವವೂ ನೀವೂ, ದೇವರೂ ನೀವೂ ಒಂದೆಂದು ತಿಳಿದು, ಆ ಸತ್ಯವನ್ನು ಮನಗಂಡು, ಅದರಲ್ಲಿಯೇ ಜೀವಿಸಿದ ಹೊರತು, ನೀವು ಯಶಸ್ಸನ್ನೂ ಗೆಲುವನ್ನೂ ಗಳಿಸಲಾರಿರಿ. ಈ ಏಕತ್ವವನ್ನು ನೀವು ಅನುಭವ ಮಾಡಿದರೆ, ವಾಸ್ತವವಾಗಿ ನೀವು ವೇದಾಂತದಲ್ಲಿ ಜೀವಿಸಿದಂತೆ ಆಯಿತು. ಈ ದಿವ್ಯವೂ ಭವ್ಯವೂ ಆದ ಸತ್ಯಕ್ಕೆ ನಿಮ್ಮ ವ್ಯವಹಾರದಲ್ಲಿ ಅಪಚಾರ ಮಾಡಿದರೆ, ಭಂಗ ತಂದರೆ, ಆ ದೈವದ್ರೋಹಕ್ಕೆ ಸ್ವಾರ್ಥಿಯೂ ಕ್ಷುಲ್ಲಕವೂ ಆದ ಕೈಯಂತೆ ದುಃಖವನ್ನು ಅನುಭವಿಸಬೇಕಾಗುತ್ತದೆ. ಕೋಲ್‌ರಿಡ್ಜ್ ಮತ್ತು ಬೈರನ್ ಮಹಾಕವಿಗಳು ತಮ್ಮ "ಏನ್‌ಷಿಯಂಟ್ ಮ್ಯಾರಿನರ್" ಮತ್ತು "ಪ್ರಿಸನರ್ ಆಫ್ ಚಿಲ್ಲನ್" ಎಂಬ ಕಾವ್ಯಗಳಲ್ಲಿ ಈ ಸತ್ಯವನ್ನು ಬಹಳ ಸುಂದರವಾಗಿ ಪ್ರತಿಪಾದಿಸಿದ್ದಾರೆ. ಯಾವಾಗ ಒಬ್ಬ ಮನುಷ್ಯನು ಪ್ರಕೃತಿಯಲ್ಲಿ ಸಮರಸಭಾವದಿಂದ ಇರಲಾರದೆ, ತಪ್ಪಿ ಬೀಳುವನೋ ಆಗ ಕಷ್ಟಪಡುತ್ತಾನೆ, ಎಂಬುದನ್ನು ಈ ಕವಿತೆಗಳಲ್ಲಿ ದೃಷ್ಟಾಂತದಿಂದ ತೋರಿಸಿದ್ದಾರೆ. ನಿಮ್ಮ ಸಹಜೀವಿಗಳ ಜೊತೆಗೆ ನಿಮ್ಮ ಏಕತೆಯನ್ನು ಮನಗಂಡ ಕ್ಷಣವೇ ಎಲ್ಲಾ ಅಭಿವೃದ್ಧಿಗಳೂ ನಿಮ್ಮದಾಗುತ್ತವೆ.

ಮನುಜನು ಪಶುವನೂ ಪಕ್ಷಿಯನೂ
ಘನವಾಗಿ ಪ್ರೀತಿಪನೆ ಘನವಾಗಿ ಪ್ರಾರ್ಥಿಪನು;
ಸಣ್ಣದನು ದೊಡ್ಡದನು ಸಕಲವನು
ಚೆನ್ನಾಗಿ ಪ್ರೀತಿಪನೆ ಚೆನ್ನಾಗಿ ಪ್ರಾರ್ಥಿಪನು.

ಎಲ್ಲಿಯವರೆಗೆ ನಿಮ್ಮ ಮನಸ್ಸು ವಿಶ್ವದೊಡನೆ ಸಮಶ್ರುತಿಯಿಂದ ಮಿಡಿಯುತ್ತಿದೆಯೋ ಎಲ್ಲಿಯವರೆಗೆ ಪ್ರತಿಯೊಬ್ಬರಲ್ಲಿಯೂ ಎಲ್ಲರಲ್ಲಿಯೂ ನಿಮ್ಮ ಏಕತ್ವವನ್ನು

ಭಾವಿಸುತ್ತಾ-ಅನುಭವಿಸುತ್ತಾ ಇದ್ದೀರೋ ಅಲ್ಲಿಯವರೆಗೆ, ಎಲ್ಲಾ ಸನ್ನಿವೇಶಗಳೂ ಸುತ್ತಲಿನ ಪರಿಸರಗಳೂ ಮಾರುತಗಳೂ ತರಂಗಗಳೂ ಕೂಡ, ನಿಮಗೆ ಅನುಕೂಲವಾಗಿರುವುವು. ಎಲ್ಲರೊಡನೆ ನೀವು ಅಪಸ್ವರ ಹೊಂದಿದೊಡನೆಯೇ ಮಿತ್ರರೂ ಬಂಧುಗಳೂ ವಿರುದ್ಧರಾಗುತ್ತಾರೆ ; ಆ ಕ್ಷಣವೇ ಜಗತ್ತೇ ನಿಮ್ಮ ಮೇಲೆ ಕೈಯೆತ್ತಿ ಯುದ್ಧಕ್ಕೆ ಬರುವಂತೆ ಮಾಡಿಕೊಳ್ಳುತ್ತೀರಿ. ಪ್ರೇಮದ ಈ ದೈವೀನಿಯಮವನ್ನು ಅರ್ಥಮಾಡಿಕೊಂಡು ಅಭ್ಯಾಸಮಾಡಿ. ಯಶಸ್ಸಿಗೂ ಗೆಲುವಿಗೂ ಪ್ರೇಮವು ಸಮರ್ಥವಾದ ಸಾಧನ.

೯೩. ದಿವ್ಯಸ್ಫೂರ್ತಿ—ದೈವಾವೇಶದ ಜೀವನ.

(ಸಿಳ್ಳು ಹೊಡೆಯುತ್ತಿರುವ ಸದಾ ಉಲ್ಲಾಸದ ಬಾಲಕ)

"ಯಾವದು ಒತ್ತಾಯ ಮಾಡಲ್ಪಡುತ್ತದೆಯೋ ಅದೆಂದೂ ಸತ್ತ್ವಯುತವಾಗುವುದಿಲ್ಲ."

ಪ್ರೇಮವು ಮನೆಯನ್ನು ಕಟ್ಟದಿದ್ದರೆ, ಕಟ್ಟತಕ್ಕವರ ಶ್ರಮವು ವ್ಯರ್ಥವೇ ಸರಿ. ಪ್ರತಿಭಾವಂತರ ಪವಾಡಗಳೆಲ್ಲಾ ಯಾವಾಗಲೂ ಉದ್ಯೋಗಶೀಲತೆಯ—ದುಡಿಮೆಯ-ಪವಾಡವೇ ಹೊರತು ಬೇರಲ್ಲ." ಬೇರೆಯವರ ದೃಷ್ಟಿಯಲ್ಲಿ ಕಷ್ಟದ ದುಡಿಮೆಯೆಂದು ಕಂಡುದು ಪ್ರತಿಭಾವಂತರಿಗೆ ಅತ್ಯಂತ ಸಂತೋಷಕರವಾದ ಆಟವಾಗುತ್ತದೆ.

ಅಯ್ಯೋ ! ಇದನ್ನು ನಾನು ಬಹಳ ಕಷ್ಟಪಟ್ಟು ಮಾಡಬೇಕು ... ಎಂದು ಅಹಂಕಾರವು ಗೋಳಾಡಿ ಹೇಳಿಕೊಳ್ಳುವ ನಿರ್ಜೀವವೂ ನಿಸ್ಸಾರವೂ ಆದ ಕಾರ್ಯವನ್ನು ಮಾಡದೇ ಬಿಟ್ಟರೇ ಒಳ್ಳೆಯದು. ಆತ್ಮನಿಂದ ಶಕ್ತಿ ಪ್ರವಾಹವು ಹರಿದಂತೆ ಕಾರ್ಯವು ತನ್ನಿಂದ ತಾನೇ ಆಗಬೇಕು. ನಿಮ್ಮ ಪ್ರಯಾಸದ ಪ್ರಯತ್ನವು ಅದನ್ನು ನಡೆಸುವುದಕ್ಕೆ ಅಲ್ಪವಾದ ಕ್ಷಮತೆಯನ್ನು ಒದಗಿಸುತ್ತದೆ. ಮೆಚ್ಚಿಗೆಯನ್ನು ಬೆನ್ನು ಹತ್ತಿ ಬೇಟೆಯಾಡುವ ಅಲ್ಪವಾದ ಮಾಯಿಕ ಅಹಂಕಾರವು ಅಂಥಾ ಕಲಾಹೀನವೂ ನೀರಸವೂ ಆದ ಕಾರ್ಯವನ್ನು ಬೇಸರದಿಂದ ಎಳೆದಾಡುತ್ತಾ ಮಾಡುವುದು ಬಂಧನಕ್ಕೆ ಕಾರಣವೆಂದು ಶಂಕರರು ಹೇಳಿದ್ದಾರೆ,

ಒಬ್ಬ ಹುಡುಗನು ಬೀದಿಯಲ್ಲಿ ಉಲ್ಲಾಸದಿಂದ ತಮಾಷೆಯಾಗಿ ಸಿಳ್ಳು ಹೊಡೆಯುತ್ತಾ ಸೀಟಿ ಹಾಕುತ್ತಾ ಹೋಗುತ್ತಿದ್ದನು. ಒಬ್ಬ ಪೋಲೀಸಿನವನು ಅವನನ್ನು ಆಕ್ಷೇಪಿಸಿದನು. ಆ ಹುಡುಗ ಹೇಳುತ್ತಾನೆ: "ನಾನು ಸಿಳ್ಳು ಹಾಕುತ್ತೇನೆಯೇ? ಇಲ್ಲಾ ಸಾರ್ ಅದು ತನ್ನಿಂದ ತಾನೇ ಸೀಟಿ ಹಾಕುತ್ತದೆ."

ಒಂದು ಬುಲ್ ಬುಲ್ ಹಕ್ಕಿಯೋ, ಕೋಗಿಲೆಯೋ, ಪಾರಿವಾಳವೋ ಭವ್ಯವಾದ ಒಂದು ದೇವದಾರು ವೃಕ್ಷದ ತುದಿಯಲ್ಲಿ ಅಥವಾ ಸಂಪಿಗೆಯ ಮರದ ತಲೆಯಲ್ಲಿ ಕುಳಿತುಕೊಳ್ಳಲಿ. ಆ ಕ್ಷಣವೇ ಆ ಹಕ್ಕಿಯಿಂದ ಇಂಪಾದ ತುಂಬುಗಾನವು ತಾನೇ ತಾನಾಗಿ ಹರಿಯುವುದಕ್ಕೆ ತೊಡಗುತ್ತದೆ.

ಈ ಅಲ್ಪವಾದ ಅಹಂಕಾರವನ್ನು ಅನಂತದಲ್ಲಿ ಎತ್ತಿ ಎಸೆಯಿರಿ, ಏಳಿರಿ, ಎಚ್ಚರಗೊಳ್ಳಿರಿ. ಪ್ರಾಣವೂ ಪ್ರಕಾಶವೂ ಪ್ರೇಮವೂ [Life, Light and Love] – ಸಚ್ಚಿದಾನಂದ— ನೀವೆಂದು ತಿಳಿಯಿರಿ. ಆ ಕ್ಷಣವೇ ಹೃದಯ ಕೇಂದ್ರದಲ್ಲಿರುವ ಆನಂದವು ಸುಖವಾದ ವೀರ ಕರ್ಮರೂಪವಾಗಿ-ವಿವೇಕವೂ ಸಚ್ಛೀಲವೂ ಆಗಿ-ನಿಮ್ಮಿಂದ ಚಿಮ್ಮುವುದಕ್ಕೆ ತೊಡಗುತ್ತದೆ. ಇದೇ ದೈವಾವೇಶದ ಜೀವನ, ದಿವ್ಯಸ್ಫೂರ್ತಿಯ ಜೀವನ, ಇದು ನಿಮ್ಮ ಜನ್ಮಸಿದ್ಧವಾದ ಹಕ್ಕು, ಕೋಲ್‌ರಿಡ್ಜನು ಹೇಳುವುದೇನೆಂದರೆ:

> "ಅವನಿಂದ ಅವನೇ ಹಾರುತ್ತೋಡುವನು,
>
> ಬಿಸಿಲಿನಲಿ ನಿಲ್ಲುವನು, ಕೋರೆ ನೋಟದಿಂದಲ್ಲ,
>
> ಸಮಸ್ತ ಸೃಷ್ಟಿಯನು ವೀಕ್ಷಿಸುವ, ಅದನೆಲ್ಲವನು ಪ್ರೀತಿಸುವ
>
> ಆಶೀರ್ವದಿಸುವನದನು, ಬಹಳ ಒಳಿತೆಂದು ಕರೆಯುವನು."

"ತನ್ನೊಳಗೆ ಸುಖವನ್ನು ಕಂಡು ಕೊಳ್ಳುವುದು ಕಷ್ಟವು, ಆದರೆ, ಹೊರಗೆ ಇನ್ನೆಲ್ಲಿಯೂ ಅದನ್ನು ಕಾಣುವುದು ಅಸಾಧ್ಯವು," ಎಂದು ಷೋಪೆನ್‌ಹೇರ್ ಹೇಳುತ್ತಾನೆ, ವ್ಯವಹಾರ ಚತುರ ಅಲ್ಪಾತ್ಮನು ಎಷ್ಟೇ ಅಭಿಮಾನವನ್ನೂ ಕರ್ತೃತ್ವವನ್ನೂ ವಹಿಸಿದರೂ ಎಲ್ಲಾ ಮಹಾ ಕಾರ್ಯಗಳೂ ವ್ಯಕ್ತಿತ್ವ ಭಾವನೆಯಿಲ್ಲದಿರುವಾಗಲೇ ತಮ್ಮಿಂದ ತಾವೇ ಆಗುತ್ತವೆ. ಅಹಂಕಾರವು ಏನನ್ನೂ ಮಾಡಲಾರದು. ಸೂರ್ಯನು ಅನಾಸಕ್ತ ಸಾಕ್ಷಿಯಾದ ಪ್ರಕಾಶದಂತೆ ತನ್ನ ಸ್ವಂತ ಮಹಿಮಾವೈಭವದಲ್ಲಿ ತಾನು ಸುಮ್ಮನೆ ಬೆಳಗುತ್ತಿರುತ್ತಾನೆ, ಆಹಾ! ನದಿಗಳು ಅವುಗಳ ಮಂಜಿನ ತೊಟ್ಟಿಲುಗಳಿಂದ ಬೀಗಬಿಚ್ಚಿ ಹರಿಯುತ್ತವೆ. ಮಂದಮಾರುತಗಳು ಹರ್ಷದಿಂದ ಕುಣಿಯ ತೊಡಗುತ್ತವೆ; ಪ್ರಕೃತಿಯಲ್ಲಿ ಚಲನವಲನವುಂಟಾಗುತ್ತದೆ; ಪ್ರಾಣಿಗಳು, ಎಚ್ಚರಗೊಳ್ಳುತ್ತವೆ; ಸಸ್ಯಗಳು ಬೆಳೆಯುತ್ತವೆ. ನೇರಿಳೆ ಬಣ್ಣದ ಹೂಗಳೂ, ಗುಲಾಬಿ ಹೂಗಳೂ ಅರಳುತ್ತವೆ; ಸ್ತ್ರೀಯರ, ಪುರುಷರ, ಮಕ್ಕಳ ಥಳ ಥಳಿಸುವ ಕಣ್ಣುಗಳೆಂಬ ಕಮಲಗಳು ತೆರೆದು ಪ್ರಫುಲ್ಲಿತವಾಗುತ್ತವೆ. ಇಷ್ಟೆಲ್ಲಾ ಅನಂತ ವಿಧವಾದ ಚಟುವಟಿಕೆಗಳೂ ಪರಿಣಾಮಗಳೂ ಸೂರ್ಯ ತೇಜಸ್ಸಿನ ದಿವ್ಯ ಮಹಿಮಾ ಸಾನ್ನಿಧ್ಯ ಮಾತ್ರದಿಂದ ನಡೆಯುತ್ತವೆ.

ಓ ದಿವ್ಯಾತ್ಮ! ಆನಂದದ ಉಗಮವೂ ಬೆಳಕಿನ ಮೂಲವೂ ಸರ್ವಾತ್ಮವೂ ಆಗಿ—ಎಂದೆಂದಿಗೂ ಆಗಿಯೇ ಇರುವನೆಂಬ ನಿಶ್ಚಯ ಜ್ಞಾನದಿಂದ—ಸುಮ್ಮನೆ ಬೆಳಗಬೇಕು; ಹಾಗಾದರೆ ಶಕ್ತಿಯೂ ಪ್ರಾಣವೂ ಕ್ರಿಯೆಯೂ ನಿಮ್ಮಿಂದ ಸ್ವಾಭಾವಿಕವಾಗಿಯೇ ಪ್ರಸರಣವಾಗುತ್ತವೆ. ಹೂವು ಅರಳಿದರೆ, ಸುಗಂಧವು ತಾನಾಗಿಯೇ ಹೊರಹೊಮ್ಮುತ್ತದೆ.

೯೪. ಇಬ್ಬರೂ ಒಂದೇ ಎಂಬ ನಿಜವಾದ ಭಾವನೆ
(ರಾಧಾಕೃಷ್ಣರ ಏಕೀಭಾವ)

ಶ್ರೀಕೃಷ್ಣನು ಒಂದು ದಿನ ದೊಡ್ಡ ಔತಣ ಮಾಡಬೇಕಾಗಿತ್ತು. ಅವನು ಮುಖ್ಯರಾದ ಮಂತ್ರಿಗಳು ಮೊದಲಾದವರಿಗೆಲ್ಲಾ ಆಹ್ವಾನವನ್ನು ಕಳಿಸಿದ್ದನು. ಆದರೆ ಕೃಷ್ಣನಿಗೆ ಅತ್ಯಂತ ಪ್ರಿಯಳಾದ ರಾಧೆಗೇ ಕಳಿಸಿರಲಿಲ್ಲ. ಪ್ರಧಾನ ಮಂತ್ರಿಯು ಇದನ್ನು ತಿಳಿದು, ರಾಧೆಗೆ ಆಹ್ವಾನ ಪತ್ರಿಕೆಯನ್ನು ಕಳಿಸಬೇಕೆಂದು ಕೃಷ್ಣನಿಗೆ ಒತ್ತಾಯ ಪಡಿಸಿದನು. ಕೃಷ್ಣನು 'ಬೇಡ' ಎಂದನು. ಆದರೆ ಪ್ರಧಾನಿಗೆ ಸಮಾಧಾನವಾಗದೆ, ರಾಧೆಯ ಹತ್ತಿರ ತಾನೇ ಹೋಗಿ ಔತಣದ ವಿಷಯವನ್ನು ತಿಳಿಸಿ ಆಕೆಯನ್ನು ಕೃಷ್ಣನ ಪರವಾಗಿ ಆಹ್ವಾನಿಸಿದನು. ಆಗ ರಾಧೆಯು "ನೀವು ಔತಣ ಮಾಡುವಾಗ ನಿಮ್ಮ ಸ್ನೇಹಿತರಿಗೆಲ್ಲಾ ಕರೆಯೋಲೆಗಳನ್ನು ಕಳಿಸುತ್ತೀರಿ. ಆದರೆ ನಿಮಗೆ ನೀವೇ ಅವನ್ನು ಕಳಿಸುವದಿಲ್ಲ. ಅಲ್ಲವೆ ? ನಾನು ಕೃಷ್ಣನಿಂದ ಬೇರೆ ಇಲ್ಲ. ನಾನೂ ಕೃಷ್ಣನೂ ಒಂದೇ. ಕೃಷ್ಣನ ಕಾರ್ಯಗಳೆಲ್ಲಾ ನನಗೆ ಗೊತ್ತಿವೆ."ಎಂದಳು.

೯೫. ನಿಜವಾದ ನೆರೆಹೊರೆ ನೆಂಟರು.
(ರಾಮ ಮತ್ತು ಸಹೋದ್ಯೋಗಿ ಪ್ರೊಫೆಸರ್)

ಈ ದೇಹವು, ರಾಮನೆಂದು ಕರೆಯುವ ನಿಮ್ಮ ಆತ್ಮನೇ ಸಂನ್ಯಾಸವನ್ನು ತೆಗೆದು ಕೊಂಡು, ಕೌಟುಂಬಿಕ ಸಂಬಂಧಗಳನ್ನು ಬಿಟ್ಟು, ಪ್ರಾಪಂಚಿಕ ಸ್ಥಾನಮಾನಗಳನ್ನೂ ತ್ಯಜಿಸಿದಾಗ, ಕೆಲವು ಜನರು ರಾಮನಲ್ಲಿಗೆ ಬಂದು "ಸ್ವಾಮಿ ! ನಿಮ್ಮ ಹೆಂಡತಿ, ಮಕ್ಕಳು, ಬಂಧುಗಳು, ಮತ್ತು ವಿದ್ಯಾರ್ಥಿಗಳು-ಇವರು-ನಿಮ್ಮಿಂದ ಸಹಾಯ ಪಡೆಯುವ ಅವರ ಹಕ್ಕನ್ನು ಏಕೆ ನಿರ್ಲಕ್ಷಿಸಿದ್ದೀರಿ?" ಎಂದು ಕೇಳಿದರು. ಅದಕ್ಕೆ ರಾಮನು ಅವರಲ್ಲಿದ್ದ ತನ್ನ ಸಹೋದ್ಯೋಗಿಗಳಾದ ಪ್ರೊಫೆಸರನ್ನು ಕುರಿತು "ನೀವು ಪ್ರೊಫೆಸರ್, ಕಾಲೇಜಿನಲ್ಲಿ ತತ್ತ್ವಶಾಸ್ತ್ರದ ವಿಷಯದಲ್ಲಿ ಉಪನ್ಯಾಸಮಾಡುತ್ತೀರಿ. ನಿಮ್ಮ ಹೆಂಡತಿ ಮಕ್ಕಳಿಗೆ ನಿಮಗಿರುವಷ್ಟು ವಿದ್ವತ್ತು ಇದೆಯೇ? ನಿಮ್ಮ ಚಿಕ್ಕಮ್ಮ ದೊಡ್ಡಮ್ಮಂದಿರಿಗೂ ಅಜ್ಜಿಗೂ ಸಹೋದರರಿಗೂ ನಿಮ್ಮಷ್ಟು ಪಾಂಡಿತ್ಯವಿದೆಯೇ ? ಇಲ್ಲವಾದರೆ, ಅವರಿಗೆ ಉಪನ್ಯಾಸಮಾಡಿ ವಿದ್ಯಾವಂತರನ್ನು ಮಾಡದೆ ಈ ವಿಶ್ವವಿದ್ಯಾನಿಲಯಕ್ಕೆ ಏಕೆ ಬರುತ್ತೀರಿ? ನಿಮ್ಮ ಹೆಂಡತಿ ಮಕ್ಕಳಿಗೂ ಅಜ್ಜಿಗೂ ಸಹೋದರರಿಗೂ ಸೇವಕರಿಗೂ ಏಕೆ ಉಪನ್ಯಾಸಮಾಡುವುದಿಲ್ಲ?" ಎಂದು ಕೇಳಿದನು. ತಮ್ಮ ಉಪನ್ಯಾಸಗಳು ಅವರಿಗೆ ಅರ್ಥವಾಗುವದಿಲ್ಲವೆಂದು ಆ ಪ್ರೊಫೆಸರ್ ಹೇಳಿದರು. ಅದಕ್ಕೆ ರಾಮನು ಹೇಳಿದ್ದೇನೆಂದರೆ.

"ನೋಡಿ; ಈ ಸಂಬಂಧಿಗಳೆಲ್ಲಾ—ಈ ಹೆಂಡತಿ, ಈ ಮಕ್ಕಳು, ಅಜ್ಜಿ ಇವರೆಲ್ಲಾ ನಿಮ್ಮ ನಿಜವಾದ ನೆಂಟರೂ ನೆರೆಹೊರೆಯವರೂ ಅಲ್ಲ. ನಿಮ್ಮ ನಾಯಿಯು

ನಿಮ್ಮನ್ನು ಒಂದು ನಿಮಿಷವೂ ಬಿಡದಂತೆ ಹಗಲಿರುಳೂ ಜೊತೆಯಲ್ಲಿರುತ್ತದೆ; ಅಜ್ಞರ ದೃಷ್ಟಿಯಿಂದ ಅದೂ ನಿಮ್ಮ ಸಂತತ ಸಂಗಾತಿಯೂ ಇರಬಹುದು. ಆದರೂ ಆ ನಾಯಿಯೂ ಸೇವಕನೂ ಅಜ್ಜಿ ಮೊದಲಾದವರೂ ನಿಮ್ಮ ನಿಜವಾದ ನೆಂಟರೂ ನೆರೆಯವರೂ ಆಗಬಲ್ಲರೆ? ನೀವು ಯಾರು? ನೀವು ದೇಹವಲ್ಲ; ನಿಜವಾದ ಆತ್ಮವೇ ನೀವು; ನೀವು ಯೂರೋಪಿಯನ್ ತತ್ತ್ವಶಾಸ್ತ್ರಜ್ಞ [Philosopher] ರಾಗಿರುವುದರಿಂದ ನೀವೇ ಆತ್ಮನೆಂಬುದನ್ನು ಒಪ್ಪುವುದಿಲ್ಲ. ನೀವು ಮನಸ್ಸಾಗಿದ್ದೀರಿ. ನಿಮ್ಮ ಮನಸ್ಸು ಯಾವ ಅತ್ಯುಚ್ಚ ಸ್ಥಾನದಲ್ಲಿ ಜೀವಿಸುವದೋ ಅಲ್ಲಿಯೇ ಯಾವಾಗಲೂ ನಿಮ್ಮೊಡನೆ ಯಾರು ಇರುವರೋ ಅವರೇ ನಿಮ್ಮ ನೆಂಟರು, ನೆರೆಯವರು. ನೀವು ಓದುತ್ತಿರುವ ವಿಷಯವನ್ನೇ ಓದುತ್ತಾ ಅದನ್ನೇ ಚಿಂತನಮಾಡುತ್ತಾ ತಮ್ಮ ದಿವಾನ ಖಾನೆಯಲ್ಲಿ ಅದೇ ಗ್ರಂಥಗಳನ್ನು ಓದುತ್ತಾ ಇರುವ ಬಿ.ಎ., ಎಂ. ಎ.. ವಿದ್ಯಾರ್ಥಿಗಳೇ ನಿಮ್ಮ ನೆಂಟರು, ನೆರೆಯವರು. ನೀವು ಕೋಣೆಯಲ್ಲಿ ಕುಳಿತು ಓದುತ್ತಿರುವಾಗ ನೀವು ಕೋಣೆಯಲ್ಲಿದ್ದೀರೆಂದು ಜನರು ಹೇಳುತ್ತಾರೆ, ನೀವು ಆಗ ಕೋಣೆಯಲ್ಲಿರುತ್ತೀರೋ ನಿಮ್ಮ ಭಾವನೆಗಳಲ್ಲಿಯೂ ವಿಚಾರಗಳಲ್ಲಿಯೂ ಇರುತ್ತೀರೋ—ನಿಜವಾಗಿ ಹೇಳಿ. ಓದುವ ಕೋಣೆಯಲ್ಲಿ ನೀವು ಓದುತ್ತಿರುವಾಗ ನಾಯಿಯು ನಿಮ್ಮ ತೊಡೆಯ ಮೇಲೆ ಕುಳಿತಿದ್ದರೂ ನಿಮ್ಮ ಮಕ್ಕಳು ಒಳಗೆ ಬಂದು ಚೇಷ್ಟೆ ಮಾಡಿದರೂ ನಿಮ್ಮ ಲಕ್ಷ್ಯಕ್ಕೇ ಬರುವುದಿಲ್ಲ. ನೀವು ಆಗ ತತ್ತ್ವವಿಚಾರದ ಭೂಮಿಕೆಯಲ್ಲಿರುತ್ತೀರಿ ; ತಮ್ಮ ತಮ್ಮ ಮನೆಗಳಲ್ಲಿ ಅದೇ ವಿಷಯವನ್ನೇ ಓದುತ್ತಾ ವಿಚಾರಮಾಡುತ್ತಾ ಇರುವ ವಿದ್ಯಾರ್ಥಿಗಳೇ ನಿಮ್ಮ ಸಮೀಪದವರು. ಆದ್ದರಿಂದ ನಿಮ್ಮ ದೊಡ್ಡಮ್ಮನಿಗೂ ಅಜ್ಜಿಗೂ ನಾಯಿಗೂ ಸೇವಕನಿಗೂ ಸಹಾಯ ಮಾಡುವುದಕ್ಕಿಂತಲೂ ಹೆಚ್ಚಾಗಿ ನಿಮ್ಮ ನಿಜವಾದ ಸಹವಾಸಿಗಳಾದ ಆ ವಿದ್ಯಾರ್ಥಿಗಳಿಗೆ ಸಹಾಯಮಾಡಬಹುದು. ನಿಮ್ಮ ಮನೋಭಾವಕ್ಕೆ ಸಮೀಪವಾಗಿಯೂ ಅದೇ ಭೂಮಿಕೆಯ ಮೇಲೂ ಜೀವಿಸುವರೇ ನಿಮ್ಮ ನೆರೆಯವರು. ಆದರೆ ಒಂದೇ ಮನೆಯಲ್ಲಿ ಜೀವಿಸುವವರು ನಿಮ್ಮ ಸಂಗಾತಿಗಳಲ್ಲ. ಏಕೆಂದರೆ ಇಲಿಗಳೂ ನೊಣಗಳೂ ನಾಯಿಗಳೂ ಬೆಕ್ಕುಗಳೂ ನಿಮ್ಮ ಮನೆಯಲ್ಲಿ ನಿಮ್ಮ ಜೊತೆಗೇ ವಾಸಮಾಡುತ್ತವೆ.

ಮುಂದಿನ ಜನ್ಮದಲ್ಲಿ ನೀವು ಅಜ್ಞರಾದ ಈ ಅಜ್ಜಿ ಮತ್ತು ದೊಡ್ಡಮ್ಮ ಮೊದಲಾದವರ ಮನೆಯಲ್ಲಿ ಹುಟ್ಟುವುದಿಲ್ಲ. ನಿಮ್ಮ ಭಾವನೆಗಳೂ ವಿಚಾರಗಳೂ ಇರತಕ್ಕವರ ಹಿತವಾದ ಸನ್ನಿವೇಶದಲ್ಲಿಯೇ ಹುಟ್ಟುತ್ತೀರಿ. ಮುಂದಿನ ಜನ್ಮದಲ್ಲಿ ನಿಮ್ಮ ಮನೋಭಾವಕ್ಕೆ ಅತ್ಯಂತ ಸಮೀಪ ಮನೋಭಾವವುಳ್ಳವರ ಮನೆಯಲ್ಲಿಯೇ ಹುಟ್ಟುತ್ತೀರಿ. ಹೀಗೆ ನೀವು ಯಾವಾಗಲೂ ಕೌಟುಂಬಿಕ ಸಂಬಂಧಗಳನ್ನು ಬದಲಾಯಿಸುತ್ತಲೇ ಇರುತ್ತೀರಿ. ಪ್ರೇಮವೆಂದರೆ ಏನು ? ನಿಮ್ಮ ಪ್ರೀತಿಗೆ ಪಾತ್ರರಾದವರಂತೆಯೇ ನೀವೂ ಭಾವಿಸುವದೇ ಪ್ರೇಮವು. ಬೇರೇನೂ ಅಲ್ಲ. ನೀವು ಪ್ರೀತಿಸುವ ಮನುಷ್ಯನ ಸುಖ

ದುಃಖಗಳು ನಿಮ್ಮವೇ ಆಗುತ್ತವೆ. ಯಾವ ವಿಷಯಗಳು ನಿಮಗೆ ನೋವನ್ನುಂಟು ಮಾಡುತ್ತವೆಯೋ ಅವೇ ವಿಷಯಗಳು ಅವನಿಗೂ ನೋವನ್ನುಂಟು ಮಾಡುತ್ತವೆ. ನಿಮಗೆ ಸಂತೋಷವನ್ನು ಉಂಟುಮಾಡುವ ವಿಷಯಗಳೇ ಅವನಿಗೂ ಸಂತೋಷವನ್ನು ಉಂಟುಮಾಡುತ್ತವೆ. ಅದೇ ಪ್ರೇಮ. ಅವನನ್ನು ನೀವು ಪ್ರೀತಿಸುತ್ತೀರಿ, ಒಬ್ಬ ಮನುಷ್ಯನನ್ನು ನೀವು ಪ್ರೀತಿಸುವದು ಅವನಿಗಾಗಿ ಅಲ್ಲ ; ಅವನಲ್ಲಿ ನಿಮ್ಮನ್ನೇ ನೀವು ಪ್ರೀತಿಸುತ್ತೀರಿ; ಬೇರೆ ಅಲ್ಲ. ನಿಮ್ಮನ್ನು ನೀವು ಪ್ರೀತಿಸಬಲ್ಲಿರೇ ಹೊರತು ಬೇರಲ್ಲ. ಉದಾಹರಣೆಗಾಗಿ, ರಾಮ, ಸೋಮ, ಭೀಮ ಎಂಬ ಮೂರು ಜನರಿದ್ದಾರೆ. ರಾಮನಿಗೆ ಸೋಮನಲ್ಲಿರುವದಕ್ಕಿಂತಲೂ ಹೆಚ್ಚು ಗುಣ ಸ್ವಭಾವಗಳ ಸಾಮ್ಯವು ಭೀಮನಲ್ಲಿದ್ದರೆ, ರಾಮನು ಸೋಮನಿಗಿಂತಲೂ ಹೆಚ್ಚಾಗಿ ಭೀಮನಲ್ಲಿಗೇ ಆಕರ್ಷಿತನಾಗುತ್ತಾನೆ.

ಹೀಗೆ ನಿಮ್ಮ ಕುಟುಂಬ ಸಂಬಂಧಗಳು ಪುನಃ ಪುನಃ ಒಡೆದೊಡೆದು ಕೂಡಿಕೊಳ್ಳುತ್ತವೆ. ಹೀಗೆ ಪ್ರೇಮವೆಂದರೆ, ಬೇರೊಬ್ಬ ಮನುಷ್ಯನಲ್ಲಿ ನಿಮ್ಮ ಕೆಲವು ಭಾವನೆಗಳನ್ನೂ ವಿಚಾರಗಳನ್ನೂ ಗುಣಶೀಲಗಳನ್ನೂ ಕಂಡುಕೊಳ್ಳುವದೇ ಆಗಿದೆ. ನಿಮ್ಮ ನಿಮ್ಮ ಪೂರ್ಣವಾದ ಪ್ರತಿರೂಪವೇ ಇರುವ ಮನುಷ್ಯನಲ್ಲಿ ನೀವು ಪೂರ್ಣವಾಗಿ ಪ್ರೇಮಮಾಡುತ್ತೀರಿ.

೯೬. ಐಕ್ಯಭಾವದಿಂದ ಉದಿಸಿದ ದಿವ್ಯದೃಷ್ಟಿ

(ಭಾರತ ಗ್ರಂಥದಲ್ಲಿಯ ರಾಜಕುಮಾರಿ ಮತ್ತು ಚಿತ್ರಲೇಖಕಿ)

ಪುನಃ, ಜಗತ್ತಿನ ಅತ್ಯಂತ ಮಹದ್ಗ್ರಂಥವಾದ, ನಾಲ್ಕು ಲಕ್ಷ ಶ್ಲೋಕಗಳಿರುವ ಮಹಾಭಾರತದಲ್ಲಿ ಒಬ್ಬ ರಾಣಿಯ ಕಥೆಯೂ ಬಂದಿದೆ. ಆಕೆಗಾದ ಒಂದು ದರ್ಶನದಲ್ಲಿ ಆಕೆ ಅತ್ಯಂತ ಸುಂದರನಾದ ರಾಜಕುಮಾರನೊಬ್ಬನನ್ನು ಕಂಡು, ಅವನ ಪ್ರೇಮದಲ್ಲಿ ಸಿಕ್ಕು ಬೀಳುತ್ತಾಳೆ. ಆಕೆಯ ಪ್ರೇಮವು ಅತ್ಯಂತ ಗಾಢವಾಗಿದ್ದುದರಿಂದ. ತೀವ್ರವಾದ ಪ್ರಣಯಜ್ವರದಿಂದ ದೇಹವು ಅಸ್ವಸ್ಥವಾಗುತ್ತದೆ. ಆಕೆಯ ತಂದೆಯು ಅನೇಕ ವೈದ್ಯರಿಂದ ಆಕೆಗೆ ಚಿಕಿತ್ಸೆ ಮಾಡಿಸಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ, ಆಕೆಯ ಆ ವಿಲಕ್ಷಣ ಜ್ವರದ ತಾಪಕ್ಕೆ ಗುಪ್ತಪ್ರೇಮವೇ–ಕಾಮವೇ–ಕಾರಣವೆಂದು ಯಾರೋ ಒಬ್ಬರು ಕಂಡುಹಿಡಿಯುತ್ತಾರೆ. ಆಗ ಆ ರಾಜನ ಪ್ರಧಾನ ಮಂತ್ರಿಯೇ ಬಂದು, ರಾಜಕುಮಾರಿಯ ನಾಡಿಯನ್ನು ತಾನೇ ಸ್ವತಃ ಪರೀಕ್ಷಿಸುತ್ತಾನೆ. ಅವನು ತನ್ನ ರಾಜ್ಯದಲ್ಲಿದ್ದ ಅತ್ಯಂತ ನಿಪುಣನಾದ ಚಿತ್ರಕಾರನನ್ನು ಕರೆಸಿ, ಆಗ ಭಾರತದಲ್ಲಿ ಸುಂದರ ರೂಪವುಳ್ಳ ರಾಜರೆಲ್ಲರ ಚಿತ್ರಗಳನ್ನೂ ಬರೆಯಲು ಆಜ್ಞೆಮಾಡುತ್ತಾನೆ. ಆ ಚಿತ್ರಕಾರ ವ್ಯಕ್ತಿಯು ಹೆಂಗಸಾಗಿದ್ದಳು. ಈ ನಿದರ್ಶನವು, ಭಾರತದಲ್ಲಿಯ ಸ್ತ್ರೀಯರ ಸ್ಥಾನಮಾನಗಳನ್ನೂ, ಸಾಮರ್ಥ್ಯಗಳನ್ನೂ ಕೆಲವು ಮಟ್ಟಿಗೆ ಸೂಚಿಸುತ್ತದೆ. ಆ ಚಿತ್ರಕಾರಳು ಆ ಅಂತಃಪುರದಲ್ಲಿ ಬಂದು ಆ ರಾಜಕುಮಾರಿಯ ಎದುರಿಗೆ ಗೋಡೆಗೆ ಹಾಕಿದ್ದ ಒಂದು ಪರದೆಯ ಮೇಲೆ, ಆ ಕಾಲದಲ್ಲಿ ಭಾರತದಲ್ಲಿ ಜೀವಿಸಿದ್ದ ಪ್ರಸಿದ್ಧ

ಮಹಾರಾಜರುಗಳ ಭಾವಚಿತ್ರಗಳನ್ನು ಒಂದಾದ ಮೇಲೆ ಒಂದನ್ನು ಬರೆಯುವದಕ್ಕೆ ತೊಡಗುತ್ತಾಳೆ. ರಾಜಕುಮಾರಿಯು ಆಸಕ್ತಿಯಿಂದ ಆ ಚಿತ್ರಗಳನ್ನು ನೋಡುತ್ತಿರುವಾಗ, ಪ್ರಧಾನಿಯು ಆಕೆಯ ನಾಡಿಯನ್ನು ಹಿಡಿದು ಅದರ ಮಿಡಿತದ ವೇಗವನ್ನು ಪರೀಕ್ಷಿಸುತ್ತಿದ್ದನು. ಚಿತ್ರಕಾರಳು ಕೆಲವು ರಾಜರ ಚಿತ್ರಗಳನ್ನು ಬರೆದು, ಅನಂತರ ಶ್ರೀ ಕೃಷ್ಣನ ಚಿತ್ರವನ್ನು ಬರೆದಳು. ಅದನ್ನು ನೋಡಿ ರಾಜಕುಮಾರಿಯ ನಾಡಿಯ ಸ್ಪಂದನವು ಹೆಚ್ಚು ವೇಗವಾಯಿತು ; ಪ್ರಧಾನಿಯು ಹೆಚ್ಚು ಗಮನವಿಟ್ಟು ಕುತೂಹಲದಿಂದ ಆಕೆಯ ನಾಡಿಯಲ್ಲಿಯೂ ಮುಖಭಾವದಲ್ಲಿಯೂ ದೃಷ್ಟಿಯಲ್ಲಿಯೂ ಆಗುವ ಬದಲಾವಣೆಯನ್ನು ನೋಡುತ್ತಿದ್ದನು. ಆಕೆಗೆ ಸೂಕ್ಷ್ಮರೂಪದಿಂದ ದರ್ಶನ ಕೊಟ್ಟು ಮನಸ್ಸನ್ನು ಸೆಳೆದಿರುವವನು ಕೃಷ್ಣನೇ ಇರಬಹುದೆ ?—ಎಂದು ಆಲೋಚಿಸುತ್ತಿದ್ದನು. ಆದರೆ ನಾಡಿಯು ಸಾಕಷ್ಟು ವೇಗವಾಗಿ ಹೊಡೆಯಲಿಲ್ಲ. ಆದ್ದರಿಂದ ಬೇರೆ ರಾಜಕುಮಾರರ ಚಿತ್ರಗಳನ್ನು ಬರೆಯಲು ಆ ಚಿತ್ರಕಾರಳಿಗೆ ಆಜ್ಞೆ ಮಾಡಿದನು. ಆಗ ಆಕೆಯು ಕೃಷ್ಣನ ಕೊನೆಯ ಮಗನ ಚಿತ್ರವನ್ನು ಬರೆದಳು. ಆಗ, ಓಹೋ, ನಾಡಿಯು ಹಾಗಿರಲಿ ; ಆ ಚಿತ್ರವನ್ನು ನೋಡಿದೊಡನೆ, ರಾಜಕುಮಾರಿಯ ಇಡೀ ಹೃದಯವೇ, ಪೂರ್ಣವೃಕ್ಷಸ್ಥಲವೇ ಭಾವಾವೇಗದಿಂದ ತೀವ್ರವಾಗಿ ಉಬ್ಬೇರಿ ಬೀಳುವದಕ್ಕೆ ತೊಡಗಿತು. ಆಕೆಯ ಮುಖವು ಅರಳಿತು ; ತುಟಿಗಳಲ್ಲಿ ನಗುವು ಮಿನುಗಿತು ; ಕಣ್ಣುಗಳು ಪ್ರೀತಿ ಕಾತರತೆಯಿಂದ ಹೊಳೆದವು. ಆದರೂ ಪ್ರಿಯದರ್ಶನ ಸಂತೋಷದ ಭರದಲ್ಲಿ ಮೈಮರೆತು ಅಷ್ಟಾದರೂ ಉಲ್ಲಾಸವನ್ನು ವ್ಯಕ್ತಪಡಿಸಿದ್ದಕ್ಕಾಗಿ ನಾಚಿದಳು. ಪ್ರಧಾನಿಯು ಬಹಳ ಎಚ್ಚರದಿಂದ ಸೂಕ್ಷ್ಮವಾಗಿ ಆಕೆಯಲ್ಲಿ ಮೂಡಿದ ಪ್ರತಿಕ್ರಿಯೆಗಳನ್ನೆಲ್ಲಾ ಪರಿಶೀಲಿಸಿ, ಆಕೆಯ ಕಾಲ್ಪನಿಕ ವಿರಹವ್ಯಥೆಯನ್ನು ಪರಿಹರಿಸುವ ಪ್ರಿಯಕರನು ಇವನೇ ಎಂದು ತೀರ್ಮಾನಿಸಿದನು. ಇದನ್ನು ನಾವು ಕಟ್ಟುಕತೆಯೆಂದು ಭಾವಿಸುವದಿಲ್ಲ ; ಇದನ್ನು ವಾಸ್ತವ ಐತಿಹಾಸಿಕ ಘಟನೆಯೆಂದೇ ತಿಳಿಯುತ್ತೇವೆ.

ಈಗ ನಮಗೆ ಬೇಕಾಗಿರುವುದು ಆ ಚಿತ್ರಕಾರಳ ವಿಷಯ. ಆಕೆಯು ಚಿತ್ರಿಸಿದ ರಾಜರನ್ನೆಲ್ಲಾ ನೋಡಿದ್ದಳೆ ? ಇಲ್ಲ; ಆಕೆಯು ದಿವ್ಯ ದೃಷ್ಟಿಯ ಪ್ರಭಾವಕ್ಕೆ ಒಳಗಾಗಿದ್ದಳು : ಹೆಚ್ಚು ಉನ್ನತವೂ ಸೂಕ್ಷ್ಮವೂ ಆದ ಚೈತನ್ಯಶಕ್ತಿಯ ಸ್ಪಂದನದಿಂದ ಸರ್ವಾತ್ಮದಲ್ಲಿ ಶ್ರುತಿಗೂಡಿದ್ದಳು. ಆದ್ದರಿಂದ ಪ್ರಕೃತಿಯ ಪುಸ್ತಕವು ಆಕೆಗೆ ಮೊಹರುಮಾಡಿದ್ದಾಗದೆ ತೆರೆದಿಟ್ಟದ್ದಾಗಿದ್ದಿತು. ಈ ಅಸಾಧಾರಣ ಶಕ್ತಿಗೆ ನಿದರ್ಶನವಾಗಿ ರಾಮುನು ಇಂಥಾ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಲ್ಲನು. ಆದರೆ, ಇಷ್ಟು ಹೇಳಿದರೆ ಸಾಕು ; ಈ ಪ್ರಪಂಚದಲ್ಲಿ ನಿಮಗೆ ಎಲ್ಲಾ ಜ್ಞಾನವನ್ನೂ ಕೊಡತಕ್ಕಂಥ ದಿವ್ಯದೃಷ್ಟಿಯಿದೆ ; ದಿವ್ಯದರ್ಶನವಿದೆ ; ಅಥವಾ ಒಳಗೆ ಹೆಚ್ಚಿನ ಬೆಳಕನ್ನು ಕೊಡತಕ್ಕಂಥ ಅಸಾಧಾರಣ ಪ್ರಜ್ಞೆ ಇದೆ.

೯೭. ನಿಜವಾದ ತ್ಯಾಗ

(ಸಂನ್ಯಾಸಿಗೆ ದೀರ್ಘದಂಡ ಪ್ರಣಾಮ ಮಾಡಿದ ರಾಜ)

ಇಂಡಿಯಾದೇಶದಲ್ಲಿ ಓಮ್ಮೆ ಒಬ್ಬ ಸಂನ್ಯಾಸಿಯ ಸಮೀಪಕ್ಕೆ ಒಬ್ಬ ರಾಜ ಬಂದು ದೀರ್ಘದಂಡ ನಮಸ್ಕಾರ ಮಾಡಿದನು. ಅವನ ಆ ಗೌರವಕ್ಕೆ ಏನು ಕಾರಣವೆಂದು ಆ ಯತಿಯು ರಾಜನನ್ನು ಕೇಳಿದನು. ಅದಕ್ಕೆ ರಾಜನು "ಮಹಾಸ್ವಾಮಿ! ತಾವು ಯತೀಶ್ವರರು; ಒಂದು ಕಾಲದಲ್ಲಿ ತಾವು ಆಳುತ್ತಿದ್ದ ರಾಜ್ಯವನ್ನು ತ್ಯಾಗಮಾಡಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ್ದೀರಿ. ತಾವು ಮಹಾ ತ್ಯಾಗಿಗಳು. ತಮ್ಮನ್ನು ನಾನು ದೇವರೆಂದು ಕಾಣುತ್ತೇನೆ; ಪೂಜಿಸುತ್ತೇನೆ." ಎಂದನು. ಇಂಡಿಯಾದಲ್ಲಿ ಯಾರನ್ನೂ ಅವರ ಐಶ್ವರ್ಯಕ್ಕಾಗಿ ಅಷ್ಟು ಗೌರವಿಸುವದಿಲ್ಲ. ಅಲ್ಲಿ ಯಾರು ಹೆಚ್ಚು ತ್ಯಾಗಿಗಳೋ ಅವರಿಗೆ ಹೆಚ್ಚು ಗೌರವ. ಗೌರವಕ್ಕೆ ಮುಖ್ಯ ಕಾರಣವಾದ ಮೂಲಸೂತ್ರವು ಇಲ್ಲಿಯೇ (ಅಮೇರಿಕಾದಲ್ಲಿಯೇ) ಬೇರೆ, ಅಲ್ಲಿಯೇ ಬೇರೆ. ಇಲ್ಲಿ ನೀವು ನಿಮ್ಮ "ಸರ್ವಶಕ್ತ" ವಾದ ಡಾಲರ್ ನಾಣ್ಯದಲ್ಲಿ ಇಟ್ಟಿರುವ ನಂಬಿಕೆಗಿಂತಲೂ ಹೆಚ್ಚು ನಂಬಿಕೆಯನ್ನು ಹಿಂದೂ ಜನರು ನಿಜವಾಗಿಯೂ ಸರ್ವಸಮರ್ಥನಾದ ದೇವರಲ್ಲಿ ಇಟ್ಟಿದ್ದಾರೆ, ಆ ರಾಜನ ಗೌರವಕ್ಕೆ ಯತಿಯು "ಓ ರಾಜಾ! ನೀನು ನನ್ನನ್ನು ಗೌರವಿಸುವದಕ್ಕೆ ಅದೇ ಕಾರಣವಾದರೆ ನಾನು ನಿನಗೆ ಬಾಗಿ ನಮಸ್ಕಾರಮಾಡಿ ನಿನ್ನ ಪಾದಗಳನ್ನು ತೊಳೆಯಬೇಕು, ಏಕೆಂದರೆ ಪ್ರಪಂಚದಲ್ಲಿರುವ ಎಲ್ಲಾ ಯತಿಗಳ ಒಟ್ಟು ತ್ಯಾಗಕಿಂತ್ಕಲೂ ಹೆಚ್ಚಿನ ತ್ಯಾಗವನ್ನು ನೀನು ಮಾಡಿದ್ದಿ." ಎಂದನು. ಅದು ಹೇಗೆ ಸಾಧ್ಯ? ಆ ಮಾತು ಬಹಳ ಆಶ್ಚರ್ಯಕರವಾಗಿತ್ತು. ಆಗ ಆ ಯತಿಯು ವಿವರಿಸುವದಕ್ಕೆ ತೊಡಗಿದನು: "ರಾಜಾ! ಒಂದು ವೇಳೆ, ಭವ್ಯವಾದ ಅರಮನೆಯುಳ್ಳ ಒಬ್ಬ ರಾಜನು ತನ್ನ ಅರಮನೆಯೊಳಗಿರುವ ಕಸವನ್ನೂ ಹೊಲಸನ್ನೂ ಹೊರಗೆಸೆದರೆ ಹೊಲಸು ಕಸಗಳನ್ನು ಅವನು ತ್ಯಾಗಮಾಡಿದಂತೆಯೇ ಆಯಿತು. ಹಾಗಾದರೆ ಆ ಮನುಷ್ಯನು ತ್ಯಾಗಿಯೇ?"

ಆದಕ್ಕೆ ರಾಜನೆಂದನು "ಛೀ! ಛೀ! ಅವನು ಹೇಗೆ ತ್ಯಾಗಿಯಾದಾನು?"

ಯತಿ; "ಇದಕ್ಕೆ ವಿರುದ್ಧವಾಗಿ ಇನ್ನೊಬ್ಬನು ತನ್ನ ಅರಮನೆಯ ಕಸ ಹೊಲಸುಗಳನ್ನು ಐಶ್ವರ್ಯದಂತೆ ಭದ್ರವಾಗಿಟ್ಟುಕೊಂಡು ತನ್ನ ಸುಂದರವಾದ ಇಡೀ ಅರಮನೆಯನ್ನೇ ಕೊಟ್ಟುಬಿಡುತ್ತಾನೆ; ದಾನಮಾಡುತ್ತಾನೆ. ಇಂಥಾ ಮನುಷ್ಯನನ್ನು ನೀನು ಏನೆಂದು ತಿಳಿಯುತ್ತಿ?"

ರಾಜ: ಅವನು ತ್ಯಾಗಿಯೇ ನಿಜ!"

ಯತಿ: ತಮ್ಮಾ! ರಾಜಾ! ಹಾಗಾದರೆ ನೀನು ಮಹಾತ್ಯಾಗಿಯೇ ಸರಿ!" ಏಕೆಂದರೆ, ದಿವ್ಯವಾದ ರಾಜಭವನವೂ ನಮ್ಮ ನಿಜವಾದ ಸ್ವಂತ ಮನೆಯೂ

ನಂದನವನವೂ ಸ್ವರ್ಗಗಳ ಸ್ವರ್ಗವೂ ಪರಮಸುಖಧಾಮವೂ ಆದ ನಿನ್ನ ಅಂತ ರಾತ್ಮನನ್ನೇ–ಪರಮಾತ್ಮನನ್ನೇ–ನೀನು ತ್ಯಾಗಮಾಡಿದ್ದಿ ; ಆದರೆ ಸ್ವಾತ್ಮರೂಪ ಆ ಅರಮನೆಯ ತುಚ್ಛ ಕಸವಾದ ಈ ದೇಹವನ್ನೂ ಅಹಂಕಾರವನ್ನೂ ಆದರದಿಂದ ಕಾಪಾಡಿಕೊಂಡಿದ್ದಿ. ನಾನಾದರೋ ನಿನ್ನಂತೆ ಏನನ್ನೂ ತ್ಯಾಗಮಾಡಿಲ್ಲ. ಏಕೆಂದರೆ ನಾನು ನಾನೇ ದೇವಾಧಿದೇವ; ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕ! ವಿಶ್ವನಾಥ! ಸರ್ವೇಶ್ವರ!! ಇರುವದೆಲ್ಲವೂ ನಾನೊಬ್ಬನೇ, ಎಲ್ಲವೂ ನಾನೇ ಆಗಿದ್ದೇನೆ; ತ್ಯಾಗಮಾಡಲು ನನ್ನಿಂದ ಬೇರೆಯಾದ ಎರಡನೆಯ ವಸ್ತುವೇ ಇಲ್ಲ. ಹೀಗಿರುವಾಗ ನಾನು ಏನನ್ನು ತ್ಯಾಗಮಾಡಲಿ?" ಎಂದನು.

ಆತ್ಮವಿಕಾಸದ ಅತ್ಯುನ್ನತ ಶಿಖರವಾದ ಗೌರೀಶಂಕರವನ್ನೇರಿರುವ ಇಂಥಾ ಮುಕ್ತಾತ್ಮರನ್ನು ಕೆಲವು ಸಮಯ, ಕೆಲವರು ಹುಚ್ಚರೆಂದು ಭಾವಿಸುವುದುಂಟು ; ಆದರೆ, ಪ್ರಪಂಚದ ಸಕಲ ಭೋಗೈಶ್ವರ್ಯಗಳನ್ನು ತೆಗೆದುಕೊಂಡಾದರೂ ತಮಗೆ ದಿವ್ಯವಾದ ಉನ್ಮತ್ತತೆಯನ್ನು ಅನುಗ್ರಹಿಸಿರುವ ಪರಮಾನಂದವನ್ನು–ಅವರು ಒಂದು ಕ್ಷಣವಾದರೂ ಕೊಡಬಲ್ಲರೆ, ಎಂಬುದನ್ನು ಕೇಳಿ. ಅದು ಅವರಿಗೆ ಸಾಧ್ಯವೇ ಅಲ್ಲ. ಎಂದೆಂದಿಗೂ ಕೊಡಲಾರರು. ಐಶ್ವರ್ಯವಂತರೆನಿಸಿಕೊಂಡವರು, ದೇಹೇಂದ್ರಿಯಗಳ ಮಾಂಸದ್ವಾರಗಳಲ್ಲಿ, ತುಚ್ಛವಾದ ವಿಷಯಸುಖಗಳ ಬಾಗಿಲುಗಳಲ್ಲಿ, ಭಿಕ್ಷೆಬೇಡುವ ಹೀನ ದೀನ ಭಾವಕ್ಕಾಗಿ ಈ ಮಹಾತ್ಮರು ಅವರನ್ನು ಕೀಳಾಗಿ ಕಂಡು ಮರುಗುತ್ತಾರೆ. ಸುಖವು ನಿಮ್ಮೊಳಗಿದೆ. ಸಕಲ ಸುಖಸಂಪತ್ತೂ ನಿಮ್ಮೊಳಗೇ ಇರುವಾಗ ಅಲ್ಲಿಂದಲೇ ನೀವದನ್ನು ಪಡೆಯಲು ಸಾಧ್ಯವಿರುವಾಗ ಅದನ್ನು ತಿಳಿಯದೆ ಕ್ಷುದ್ರ ಜೀವಿಯಾದ ತಿರುಕನಂತೆ ಹೊರಹೊರಗೇ ತಿಂದು ತಿರುಗುವ ಶೋಚನೀಯ ಸ್ಥಿತಿ ಏಕೆ ನಿಮಗೆ ? ಬನ್ನಿ, ಬನ್ನಿ, ಸರ್ವಸಮರ್ಥ ಪರಮಾತ್ಮನೇ ಆದ ನಿಮ್ಮ ನಿಜಾತ್ಮನನ್ನು ಕಂಡು ಕೊಳ್ಳಿ; ಅನುಭವ ಪಡೆದುಕೊಳ್ಳಿ, ನಿಮ್ಮೊಳಗೆ ತುಂಬಿ ತುಳುಕುವ ಪರಮಾನಂದ ರೂಪ ಈ ಗಾನವು ಸೆಲೆಯೊಡೆದು ಹೊರಹೊಮ್ಮಲಿ!

"ಬಿಸಿಲ ಕೋಲಿನೊಳಿರ್ಪ ನಾನ್ಯಸೆ, ತ್ರಸರೇಣು,
ಜ್ವಲಿಪ ಸೂರ್ಯನು, ನಾನು,
ವಿರಮಿಸಿಲ್ಲಿಯೆಂ!" ಪಿಸುದೊರೆವೆ ಪರಮಾಣು,
ಮಂಡಲಕೆ ಕರೆವೆ, "ಮುಂದುರುಳು!"ನೀನು.

ಮುಂಜಾನೆಯೂ ನಾಚು ನಾ ಕೆಂಪು.
ಸಂಜೆಯುಲಿ ಸುಳಿವ ನಸುಗಾಳಿ ಸೊಂಪು;
ನಾನೆಲೆಗಳಾ ಮೆಲು ಮರ್ಮರವು,
ಘೋರ ಶರಧಿಗಳ ಉಬ್ಬರವು.

ಪ್ರಣಯಿಂಗಳ ಮೋಹದಾಲಾಪ,
　　ಕನ್ನೆ ಪಿಸು ನುಡಿದ ಭಯಂತಾಪ.
ಯೋಧ, ಅವನಿರಿವ ಅಲಗಂ
　　ಭಯಂದಿ ನುಲಿದವನ ತಾಯಿಯಾ ಹೃದಯ.

ವರಗುಲಾಬಿಯು ಆಕೆಯಾ ಸುಕವಿ ಬುಲ್ ಬುಲ್,
　　ಕಂಠದಿಂದುದಯಿಪಾ ಗಾನಚಯ
ಚಕವುಕಿಯಂ, ಕಿಡಿಯು, ಮೇಣದ ಬತ್ತಿ,
　　ಮೇಣದರ ಸುತ್ತುಸುಳಿವಾ ಪತಂಗ

ನಾನವುಲಂ, ದ್ರಾಕ್ಷಿಗಳಂ,
　　ದ್ರಾಕ್ಷಿಯಾ ಗಾಣ, ಮದ್ದಾನೆ ಮೇಣ್ ದ್ರಾಕ್ಷಿ
ಅತಿಥಿ. ಯಜಮಾನ, ಪ್ರವಾಸಿ,
　　ಸುಂದರ ಸ್ಫಟಿಕದಾ ಪಾನಪಾತ್ರೆ.

ಓ! ನಿನ್ನಾತ್ಮದಾ ಪ್ರಭೆಯು, ವೈಭವವು,
　　ಸಾರ್ವಭೌಮರ ಐಶ್ವರ್ಯಾಟ್ಟಹಾಸಗಳ
　　　　　　　　ಅಪಮಾನಗೊಳಿಸುವುವು;
ಅಂತಪ್ಪ ಅದ್ಭುತ ಸ್ವರ್ಗ ನೀನೆ.
　　ಸತ್ತು, ಚಿತ್ತು, ಮೇಣಾನಂದ ನೀನೇ.

೯೮. ತ್ಯಾಗದ ಪ್ರಭಾವ

(ಅಲೆಗ್ಝಾಂಡರ್ ಮತ್ತು ಭಾರತೀಯ ಸಂನ್ಯಾಸಿ)

ಅಲೆಗ್ಝಾಂಡರ್ ಮಹಾಶಯನು, ಆಗ ತನಗೆ ತಿಳಿದಿದ್ದ ಮಿಕ್ಕ ಎಲ್ಲಾ ದೇಶಗಳನ್ನೂ ಆಕ್ರಮಣಮಾಡಿಕೊಂಡು, ಇಂಡಿಯಾದೇಶಕ್ಕೆ ಬಂದೊಡನೆ, ಯಾರ ವಿಷಯವನ್ನು ತಾನು ಬಹಳವಾಗಿ ಕೇಳುತ್ತಿದ್ದನೋ ಅಂಥ ಇಂಡಿಯಾ ಜನರನ್ನು ನೋಡಬಯಸಿದನು. ಅವನನ್ನು ಆಗ ಸಿಂಧೂನದಿಯ ತೀರದಲ್ಲಿದ್ದ ಒಬ್ಬ ಸಂನ್ಯಾಸಿಯ ಕಡೆಗೆ ಕರೆದುಕೊಂಡು ಹೋದರು. ಆ ಸಂನ್ಯಾಸಿಯು ಅಲ್ಲಿ ಯಾವ ಬಟ್ಟೆಯೂ ಇಲ್ಲದೆ, ಬರಿಮೈಯಿಂದಲೂ ಬರಿಗಾಲಿನಿಂದಲೂ ಬಿಸಿಲನ್ನು ಕಾಯಿಸುತ್ತಾ ಆ ಮರಳಿನ ಮೇಲೆ ಮರುದಿನದ ಊಟದ ಚಿಂತೆಯೇ ಇಲ್ಲದೆ ಆರಾಮವಾಗಿ ಮಲಗಿದ್ದನು. ಅಲೆಗ್ಝಾಂಡರ್ ಚಕ್ರವರ್ತಿಯು ಪರ್ಷಿಯಾದೇಶದಿಂದ ತಂದಿದ್ದ ಉಜ್ಜ್ವಲವಾದ ವಜ್ರಗಳಿಂದಲೂ ರತ್ನಗಳಿಂದಲೂ ಅಲಂಕರಿಸಲ್ಪಟ್ಟು ಝಗಝಗಿಸುತ್ತಿದ್ದ ಅನರ್ಘ್ಯ ಕಿರೀಟವನ್ನು ಧರಿಸಿ ಮಹಾರಾಜ ವೈಭವದಿಂದ ಪಕ್ಕದಲ್ಲಿಯೇ ನಿಂತಿದ್ದ. ಅವನ ಪಾರ್ಶ್ವದಲ್ಲಿಯೇ ಆ ದಿಗಂಬರ ಸಂನ್ಯಾಸಿಯೂ ಇದ್ದ. ಆಹಾ!

ಎಂಥಾ ಪರಸ್ಪರ ವಿರೋಧ; ವೈಲಕ್ಷಣ್ಯ! ಒಂದು ಕಡೆ, ಇಡೀ ಜಗತ್ತಿನ ಐಶ್ವರ್ಯವೇ ಅಲೆಗ್ಸಾಂಡರ್ ರೂಪದಿಂದ ಮೂರ್ತೀಭವಿಸಿದೆ; ಇನ್ನೊಂದು ಕಡೆ ಸಮಸ್ತ ಲೋಕದ ಬಡತನವೇ ಸಂನ್ಯಾಸಿಯ ರೂಪದಿಂದ ಮೈತಳೆದಂತಿದೆ. ಇವರಿಬ್ಬರಲ್ಲಿ ಯಾರು ನಿಜವಾಗಿಯೂ ಬಡವರು, ಯಾರು ನಿಜವಾಗಿಯೂ ಸಿರಿವಂತರು ಎನ್ನುವದನ್ನು ತಿಳಿಯಬೇಕಾದರೆ, ಅವರವರ ಅಂತರಾತ್ಮದ ದಾರಿದ್ರ್ಯ ಅಥವಾ ಐಶ್ವರ್ಯವು ಬೆಳಗುತ್ತಿದ್ದ ಅವರವರ ಮುಖದ ಕಳೆಯನ್ನು ನೋಡಬೇಕಾಗಿತ್ತು; ಅಷ್ಟೆ.

ಸಹೋದರ-ಸಹೋದರಿಯರೆ! ನಿಮ್ಮೊಳಗಿನ ದಾರಿದ್ರ್ಯದ ನೋವನ್ನು ಮುಚ್ಚಿಟ್ಟುಕೊಳ್ಳುವದಕ್ಕೋಸ್ಕರ, ಹೊರಗಿನ ಐಶ್ವರ್ಯಕ್ಕಾಗಿ ಹಂಬಲಿಸುತ್ತೀರಿ; ಭೋಗವೆಂಬ ಮಕಮಲ್ಲಿನ ಮುಸುಕನ್ನು ಎಳೆದುಕೊಳ್ಳುತ್ತೀರಿ. ಆ ಸಂನ್ಯಾಸಿಯ ಆತ್ಮವು ಸಂಪದ್ಭರಿತವಾಗಿತ್ತು. ಆತ್ಮನ ಐಶ್ವರ್ಯವನ್ನೂ ಮಹಿಮೆಯನ್ನೂ ಅನುಭವದಿಂದ ಪಡೆದಿದ್ದ ಮಹಾತ್ಮನವನು. ಅವನ ಸಮೀಪದಲ್ಲಿ, ಅಂತರಾತ್ಮನ ಜ್ಞಾನದಾರಿದ್ರ್ಯವನ್ನು ಹೊರಗಿನ ರಾಜವೈಭವದಿಂದ ಮುಚ್ಚಿಕೊಂಡಿದ್ದ ಅಲೆಗ್ಸಾಂಡರ್ ಮಹಾಚಕ್ರಾಧಿಪ ಠೀವಿಯಿಂದ ನಿಂತಿದ್ದಾನೆ. ಆನಂದದಿಂದ ಉಲ್ಲಸಿತವಾದ, ಸಂತೃಪ್ತಿಯ ಕಳೆಯನ್ನು ಸೂಸುತ್ತಿರುವ ಆ ಯತೀಶ್ವರನ ಮುಖವನ್ನು ನೋಡಿ, ಅವನಾ ಬ್ರಹ್ಮತೇಜಸ್ಸನ್ನೂ ಕಂಡು, ಅಲೆಗ್ಸಾಂಡರ್ ಮಹಾರಾಜನೇ ಮುಗ್ಧನೂ ಚಕಿತನೂ ಆದನು. ಅವನಿಗೆ ಆ ಯತಿಯ ಮೇಲೆ ಮಹಾಪ್ರೀತಿಯು ಉಕ್ಕಿತು; ತನ್ನೊಡನೆ ಗ್ರೀಸ್ ದೇಶಕ್ಕೆ ಬರಲು ಆಹ್ವಾನಿಸಿದನು. ಆ ಯತಿಯು ನಕ್ಕನು; ಮತ್ತು ಹೇಳಿದ್ದೇನೆಂದರೆ, "ಜಗತ್ತು ನನ್ನಲ್ಲಿದೆ; ನನ್ನ ಚಿತ್‌ಸ್ವರೂಪದಲ್ಲಿ ಹೊಳೆಯುತ್ತಾ ಅಳಿಯುತ್ತಾ ಇದೆ, ನಾನು ಜಗತ್ತಿನಲ್ಲಿಲ್ಲ. ಜಗತ್ತು ನನ್ನನ್ನು ಹಿಡಿದಿಟ್ಟುಕೊಳ್ಳಲಾರದು. ಇಡೀ ವಿಶ್ವವೇ ನನ್ನಲ್ಲಿದೆ; ವಿಶ್ವವು ನನ್ನನ್ನು ಬಂಧಿಸಲಾರದು. ಗ್ರೀಸ್, ರೋಂ ಮೊದಲಾದ ರಾಜ್ಯಗಳೆಲ್ಲಾ ನನ್ನಲ್ಲಿವೆ. ಸೂರ್ಯರೂ ನಕ್ಷತ್ರಗಳೂ ನನ್ನಲ್ಲಿಯೇ ಉದಯಿಸಿ ಅಸ್ತವಾಗುತ್ತವೆ."

ಅಲೆಗ್ಸಾಂಡರ್ ಮಹೋದಯನು, ಈ ಬಗೆಯ ಮಾತುಗಳನ್ನು ಕೇಳಿರಲಿಲ್ಲವಾದುದರಿಂದ ಅವನಿಗೆ ಆಶ್ಚರ್ಯವಾಯಿತು, ಅವನು ಆ ಯತಿಗೆ ಹೇಳಿದನು: "ನಾನು ನಿಮಗೆ ಬೇಕಾದಷ್ಟು ಐಶ್ವರ್ಯವನ್ನು ಕೊಡುತ್ತೇನೆ. ಪ್ರಾಪಂಚಿಕ ಸುಖಗಳ ಸುರಿಮಳೆಯಿಂದ ನಿಮ್ಮನ್ನು ಸಂತುಷ್ಟನನ್ನಾಗಿ ಮಾಡುತ್ತೇನೆ. ಜನರ ಮನಸ್ಸನ್ನು ಸೆಳೆದು ಸೆರೆಹಿಡಿಯುವ ಮತ್ತು ಜನರು ಬಯಸುವ ಎಲ್ಲಾ ಬಗೆಯ ವಿಷಯಗಳೂ ಸರ್ವದಾ ಸಮೃದ್ಧಿಯಾಗಿ ನಿಮ್ಮ ಸೇವೆಗೆ ಸಿದ್ಧವಾಗಿರುತ್ತವೆ; ದಯವಿಟ್ಟು ನನ್ನೊಡನೆ ಗ್ರೀಸಿಗೆ ಬನ್ನಿ."

ಅವನ ಆ ಅಪೂರ್ವವಾದ ಆಹ್ವಾನಕ್ಕೆ ಯತಿಯು ನಕ್ಕು ನಕ್ಕು ಹೇಳಿದನು; "ಯಾವದೊಂದು ನಕ್ಷತ್ರವಾಗಲೀ, ಸೂರ್ಯನಾಗಲೀ, ಚಂದ್ರನಾಗಲೀ, ಅಗ್ನಿ

ಆಗಲೀ, ನಿನ್ನ ಕಿರೀಟ-ಕಂಠಹಾರಗಳಲ್ಲಿರುವ ರತ್ನಗಳಾಗಲೀ ನನ್ನ ತೇಜಸ್ಸಿಲ್ಲದೆ ಬೆಳಗುವದಿಲ್ಲ; ಅವು ಥಳಥಳಿಸುವದು ನನ್ನ ಕಾಂತಿಯಿಂದಲೇ; ಸ್ವರ್ಗೀಯವಾದ ಎಲ್ಲಾ ಜ್ಯೋತಿಶ್ಶರೀರಿಗಳ ಮಹಿಮೆಯೂ ನನ್ನ ಚಿಚ್ಛಕ್ತಿ ಪ್ರಭಾವವೆ! ಆಕರ್ಷಕ ವಾದ ಸಕಲ ಸ್ವಭಾವವೂ ಇಷ್ಟವಿಷಯಗಳ ಎಲ್ಲಾ ಸೊಬಗೂ ನನ್ನ ಮಹಿಮಾ ವಿಲಾಸವೇ. ನನ್ನಲ್ಲಿ ಸಹಜವಾಗಿರುವ ಸೌಂದರ್ಯ-ಮಾಧುರ್ಯಗಳ ಮಹಿಮೆ ಯನ್ನು ಹೊರಗಿನ ವಿಷಯಂಗಳಿಗೆ ಕಡವಾಗಿ ಕೊಟ್ಟು, ಅವುಗಳ ಸೊಬಗಿಗೆ ಮರುಳಾಗಿ, ಸುಖಸಂತೋಷಗಳ ಭಿಕ್ಷೆ ಹಾಕಿರೆಂದು ಪಾಶವೀ ಕಾಮನೆಯಿಂದ ಪ್ರಾಪಂಚಿಕವಾದ ಭೋಗ ಭಾಗ್ಯಗಳ ಮನೆಯ ಬಾಗಿಲಲ್ಲಿ ಬೇಡುತ್ತಾ ನಿಲ್ಲುವದು ನನ್ನ ಪರಿಪೂರ್ಣತೆಯ ಹಾಗೂ ನಿತ್ಯತೃಪ್ತಿಯ ಘನತೆಗೌರವಗಳಿಗೆ ಸಲ್ಲದಿರುವದೂ ಹೀನಾಯವಾದುದೂ ಅಪಮಾನಕರವಾದುದೂ ಆಗಿದೆ. ಸರ್ವಶಕ್ತನು ಆ ಕೀಳು ಮಟ್ಟಕ್ಕೆ ಇಳಿಯಲಾರ. ಜಡವಾದ ವಿಷಯಂಗಳ ಮುಂದೆ ಸುಖದ ಭಿಕ್ಷೆಬೇಡುವ ದೈನ್ಯಸ್ಥಿತಿಗೆ ಸರ್ವೇಶ್ವರನು ಬೀಳಲಾರ."

ಈ ಮಾತುಗಳು ಅಲೆಗ್ಝಾಂಡರ್ ಮಹಾಪ್ರಭುವನ್ನು ದಂಗುಬಡಿಸಿದವು. ಆದರೆ, ಅದು ಮಾನವನ ಯೋಗ್ಯತೆಗೆ ಮೀರಿದ ಮಾತೆಂದೂ ಉನ್ಮತ್ತನ ಭ್ರಾಮಕ ಉದ್ಗಾರವೆಂದೂ ದೈವಾಪಚಾರದ ಪ್ರಲಾಪವೆಂದೂ ಅವನು ಕೋಪಾವಿಷ್ಟನಾಗಿ, ಆ ಯತಿಯ ಶಿರಚ್ಛೇದಮಾಡಬೇಕೆಂದು ತನ್ನ ಖಡ್ಗವನ್ನು ಸರ್ರನೆ, ಹೊರಹಿರಿದನು; ಅಥವಾ ತನ್ನ ಆದರಪೂರ್ವಕವಾದ ರಾಜಾಹ್ವಾನವನ್ನು ಸೌಜನ್ಯದಿಂದ ಗೌರವಿಸದೆ, ತಾನೇ ಸರ್ವೇಶ್ವರನೆಂಬಂತೆ ಅಲೌಕಿಕ ಆಢ್ಯತೆಯಿಂದ ಅತಿವಾದ ಮಾಡಿದ ಆ ಯತಿಯ ಸ್ವಾತಂತ್ರ್ಯದ ಕೆಚ್ಚನ್ನು ಮೆಚ್ಚಿಕೊಂಡರೂ ಅವನ ನಿಶ್ಚಯಜ್ಞಾನದ ಸತ್ತ್ವವನ್ನು ಪರೀಕ್ಷಿಸುವ ಉದ್ದೇಶದಿಂದ ಅಲೆಗ್ಝಾಂಡರ್ ಮಹಾರಾಜನು ತನ್ನ ಪ್ರಾರ್ಥನೆಯನ್ನು ತಿರಸ್ಕರಿಸಿದ ಯತಿಯ ಶಿರಚ್ಛೇದಮಾಡುವದಕ್ಕೆಂಬಂತೆ ಆವೇಶದಿಂದ ಕತ್ತಿಯನ್ನು ಹಿರಿದನು. ಆಗ ಪುನಃ ಆ ಯತಿಯು ಅಟ್ಟಹಾಸದಿಂದ ನಗುತ್ತಾ, "ಓ ಅಲೆಗ್ಝಾಂಡರ್! ನಿನ್ನ ಜೀವಮಾನದಲ್ಲಿಯೇ ನೀನೆಂದೂ ಇಂಥಾ ಹೀನ ಸುಳ್ಳನ್ನು ಹೇಳಿರಲಾರೆ. ನನ್ನನ್ನು ಕೊಲ್ಲುವೆಯ? ನನ್ನನ್ನು ಕೊಲ್ಲುವೆಯ? ಕೊಲ್ಲುವೆಯ ನನ್ನನ್ನು! ನನ್ನನ್ನು ಕೊಲ್ಲುವ ಆ ಕತ್ತಿ ಎಲ್ಲಿದೆ? ನನ್ನನ್ನು ಗಾಯಗೊಳಿಸುವ ಆಯುಧವೆಲ್ಲಿದೆ? ನನ್ನ ಸಂತೋಷಕ್ಕೆ ಹಾನಿಯುಂಟುಮಾಡುವ ವಿಪತ್ತೆಲ್ಲಿದೆ? ನನ್ನ ಸೌಖ್ಯವನ್ನು ಘಾತಿಸುವ ದುಃಖವೆಲ್ಲಿದೆ? ನಿತ್ಯನೂ ಅತ್ಯಂತ ಪವಿತ್ರಾತ್ಮನೂ ಆದ ವಿಶ್ವೇಶ್ವರನೇ ನಾನು. ಓ ಅಲೆಗ್ಝಾಂಡರ್! ನಿನ್ನ ಕೈಗಳ ಚಲನೆಗೂ ಕಾರಣವಾಗಿ, ನಿನ್ನ ಕೈಗಳಲ್ಲಿಯೇ ಇರುವ ಚಾಲನಶಕ್ತಿಯೇ ನಾನು. ಈ ದೇಹವು ಸತ್ತು ಬಿದ್ದರೂ, ನಿನ್ನ ಕೈಗಳ ಹುಚ್ಚು ಹೊಯ್ಲಿನ ಮೂಲಕ ಇದನ್ನು ಕಡಿದೊಗೆದ ಶಕ್ತಿಯೇ ನಾನು. ನಿನ್ನ ಮಾಂಸಖಂಡಗಳ ಚಲನೆಗೂ ನಿನ್ನ ಹೃದಯಸ್ಫುರಣಕ್ಕೂ

ನಿನ್ನ ಉಸಿರಾಟಕ್ಕೂ ನಿನ್ನ ಮನೋವಿಕಾರಕ್ಕೂ ನಿನ್ನ ರೋಷಾವೇಶಕ್ಕೂ ನಿನ್ನ ವಿವೇಕಕ್ಕೂ ಅವಿವೇಕಕ್ಕೂ ಕಾರಣವಾದ ಶಕ್ತಿಯೇ ನಾನು!" ಎಂದು ಉದ್ಗಾರ ಮಾಡಿದನು.

ಯತೀಶ್ವರನ ಆ ಜ್ಞಾನೋನ್ಮಾದದ ಧೀರ ಉದ್ಗಾರವು ಮಹಾರಾಜನ ಉದ್ಧಟವಾದ ಮನಸ್ಸಿನ ಮೇಲೆ ಪ್ರಚಂಡ ಪ್ರಭಾವವನ್ನು ಬೀರಿತು. ಅವನ ಮನಸ್ಸು ಮೆಚ್ಚಿತು ; ಆ ಮಕುಟಧಾರಿಯ ಮಸ್ತಕವು ಮಣಿಯಿತು ; ನಮಸ್ಕಾರೋತ್ಸಾಹಿಯಾದ ಅಲೆಗ್ಜಾಂಡರನ ಕೈಗಳಿಂದ ಖಡ್ಗವು ಜಾರಿ ಬಿದ್ದಿತು.

ತ್ಯಾಗಶೀಲಧರ್ಮವನ್ನು ಜನರು ಅರ್ಥಮಾಡಿಕೊಂಡು ಅನುಸರಿಸುವಂತೆ ಮಾಡುವದಕ್ಕೆ ಇಲ್ಲಿ ಒಂದೇ ಒಂದು ಮಾರ್ಗವಿರುವದನ್ನು ಕಾಣುತ್ತೇವೆ. ಪರಮಾರ್ಥ ದೃಷ್ಟಿಯಿಂದ ನಾವು ಐಶ್ವರ್ಯವಂತರಾದಾಗಲೇ ಪ್ರಪಂಚದೃಷ್ಟಿಯಿಂದ ನಾವು ಸಕಲ ವನ್ನೂ ತ್ಯಾಗಮಾಡಲು ಸಿದ್ಧರಾಗುತ್ತೇವೆ. ದಾರಿದ್ರ್ಯದಲ್ಲಿ ಸಾಧಿಸಿದ ಲಾಭವೇ ಸ್ಥಿರವಾಗಿರುವದೆಂಬ ನಿರ್ವಿವಾದವಾದ ವೈಜ್ಞಾನಿಕ ನಿಯಮವನ್ನು ನೀವು ಕೇಳಿಲ್ಲವೇ ? ಅಂತರಂಗದ ಪರಿಪೂರ್ಣತೆಯನ್ನೂ ಪ್ರಭುತ್ವವನ್ನೂ ಸಂಪಾದಿಸಿದಾಗಲೇ ಬಹಿರಂಗದ ನಷ್ಟವನ್ನೂ ತ್ಯಾಗವನ್ನೂ ಸಾಧಿಸಬಹುದು. "ನಾನ್ಯಃ ಪಂಥಾ ಅಯನಾಯ ವಿದ್ಯತೇ" ಇದನ್ನು ಬಿಟ್ಟು ಬೇರೆ ಮಾರ್ಗವೇ ಇಲ್ಲ.

೯೯. ಸಂಗ್ರಹವಿರುದ್ಧ ತ್ಯಾಗ

(ಪ್ರವಾಸಿಗಳಾದ ಇಬ್ಬರು ಸಾಧುಗಳು)

ಇಬ್ಬರು ಸಾಧುಗಳು ಒಟ್ಟಿಗೆ ಪ್ರಯಾಣಮಾಡುತ್ತಿದ್ದರು. ಅವರಲ್ಲಿ ಒಬ್ಬನು ಹಣವನ್ನು ಕೂಡಿಸಿಡುವ ರೂಢಿಯುಳ್ಳವನಾಗಿದ್ದನು. ಇನ್ನೊಬ್ಬನು ತ್ಯಾಗಿ ಯಾಗಿದ್ದನು. ಅವರು ಒಂದು ನದಿಯ ತೀರಕ್ಕೆ ಬರುವವರೆಗೂ ತ್ಯಾಗ ಮತ್ತು ಸಂಗ್ರಹ, ಈ ಎರಡು ವಿರುದ್ಧ ಧರ್ಮಗಳ ವಿಷಯವಾಗಿ ಚರ್ಚೆ ನಡೆಸಿದ್ದರು, ಅಷ್ಟರೊಳಗೇ ತುಂಬಾ ಸಂಜೆಯಾಗಿತ್ತು. ತ್ಯಾಗವನ್ನು ಬೋಧಿಸಿದವನಲ್ಲಿ ಹಣವಿರ ಲಿಲ್ಲ; ಆದರೆ ಇನ್ನೊಬ್ಬನಲ್ಲಿ ಇತ್ತು. ತ್ಯಾಗಿಯು ಹೇಳಿದ್ದೇನೆಂದರೆ, "ಈಗ ದೋಣಿಯಿಂದ ಹೊಳೆಯನ್ನು ದಾಟಬೇಕು ; ದೋಣಿಯವನಿಗೆ ಕೊಡುವುದಕ್ಕೆ ಸಹ ನಮ್ಮಲ್ಲಿ ಹಣವಿಲ್ಲ. ನಾವು ಇಲ್ಲಿದ್ದರೇನು, ಆಚೆಯ ದಂಡೆಗೆ ಹೋದರೇನು ? ಎರಡೂ ಒಂದೇ. ಎಲ್ಲಿದ್ದರೂ ಕಾಪಾಡತಕ್ಕವನು ದೇವರು ; ಆದ್ದರಿಂದ ಈ ಅಡವಿಯಲ್ಲಿಯೇ ಇದ್ದು ಅವನ ನಾಮಸ್ಮರಣೆ ಮಾಡಿದರಾಯಿತು." ಆದರೆ, ಹಣ ವಿದ್ದವನಿಗೆ ಭಯವಿತ್ತು ; ಆದ್ದರಿಂದ ಅವನು "ಇಲ್ಲಿ ಹಳ್ಳಿಯಿಲ್ಲ, ಮನೆಯಿಲ್ಲ, ಜನರಿಲ್ಲ ; ಕಳ್ಳರು ನಮ್ಮ ಹಣವನ್ನು ಕಿತ್ತುಕೊಳ್ಳಬಹುದು, ತೋಳಗಳು ನಮ್ಮನ್ನು ನುಂಗಬಹುದು, ಹಾವುಗಳು ಕಡಿಯಬಹುದು, ಛಳಿಯು ನಮ್ಮನ್ನು ಕೊರೆಯ

ಬಹುದು. ಆದ್ದರಿಂದ ನನ್ನಲ್ಲಿರುವ ಹಣವನ್ನು ಕೊಟ್ಟು ದೋಣಿಯಿಂದ ನದಿಯನ್ನು ದಾಟಿ ಹೋಗೋಣ. ಆ ಕಡೆಯಲ್ಲಿ ಹಳ್ಳಿಯಿರುವುದರಿಂದ ನಾವು ಸುಖವಾಗಿರ ಬಹುದು." ಎಂದು ಹೇಳಿದನು. ಆಗಲೇ ದೋಣಿಯವನು ಬಂದನು. ಅವನಿಗೆ ಕೊಡಬೇಕಾಗಿದ್ದ ಕೂಲಿಯನ್ನು ಕೊಟ್ಟು ಅವರು ಆಚೆಗೆ ದಾಟಿಹೋದರು. ಅವರು ಆ ಹಳ್ಳಿಗೆ ಹೋಗಿ, ಆಹಾರ ಸೇವಿಸಿ, ರಾತ್ರಿ ಮಲಗಿದ್ದಾಗ, ಹಣವಿದ್ದ ಸಾಧುವು ಆ ತ್ಯಾಗಿಗೆ ಬುದ್ಧಿವಾದ ಹೇಳಿದನು ; "ನೋಡಿದೆಯೇನಯ್ಯಾ ! ಹಣವನ್ನು ಕೂಡಿಡುವುದರ ಉಪಯೋಗವನ್ನು. ನನ್ನಲ್ಲಿ ಹಣವಿದ್ದುದರಿಂದಲೇ ನಮ್ಮಿಬ್ಬರ ಜೀವ ಉಳಿಯಿತು. ಇನ್ನು ಮುಂದೆ ನೀನು ತ್ಯಾಗವನ್ನು ಬೋಧಿಸಿ ಜಂಬ ಹೊಡೆಯ ಬೇಡ. ನಿನ್ನಂತೆಯೇ ನಾನೂ ಕಾಸಿಲ್ಲದ ತ್ಯಾಗಿಯಾಗಿದ್ದಿದ್ದರೆ ನಮ್ಮ ಗತಿಯೇನಾಗುತ್ತಿತ್ತು ? ಇಷ್ಟರಲ್ಲಿಯೇ ಆ ಗೊಂಡಾರಣ್ಯದಲ್ಲಿ ನಾವು ಉಪವಾಸವಾದರೂ ಸಾಯ ಬೇಕಾಗುತ್ತಿತ್ತು ; ನಮ್ಮನ್ನು ಹುಲಿಯಾದರೂ ತಿನ್ನುತ್ತಿತ್ತು, ಹಾವಾದರೂ ಕಡಿದು, ಛಳಿಯಾದರೂ ಕೊರೆದು, ಕೊಲ್ಲುತ್ತಿದ್ದವು." ಆ ತ್ಯಾಗಿ ಹೇಳಿದನು : ನೋಡಯ್ಯಾ ! ನಿನ್ನಲ್ಲಿ ಹಣವಿದ್ದುದರಿಂದಲೇ ಇಲ್ಲದ ಕಳ್ಳರನ್ನೂ ಹುಲಿ ಹಾವುಗಳನ್ನೂ ಕಲ್ಪನೆ ಮಾಡಿಕೊಂಡು ಭಯದಿಂದಲೇ ಸಾಯುತ್ತಿರಬೇಕಾಯಿತು. ಅಲ್ಲದೆ, ನಿನ್ನಲ್ಲಿ ಹಣವಿದ್ದ ಮಾತ್ರಕ್ಕೇ ಏನು ? ಅದನ್ನು ಕೈಬಿಟ್ಟು ಅಂಬಿಗನಿಗೆ ಸ್ವಲ್ಪ ತ್ಯಾಗ ಮಾಡದೇ ಇದ್ದಿದ್ದರೆ—ಒಂದು ವೇಳೆ ನಿನ್ನ ಮಾತಿನಂತೆ—ಸಾಯಬೇಕಾಗಿತ್ತು. ಆದ್ದರಿಂದ ತ್ಯಾಗದಿಂದಲೇ ನಾವಿಬ್ಬರೂ ಬದುಕಿದೆವು. ಮತ್ತು ನಾನು ನನ್ನ ಜೇಬಿನಲ್ಲಿ ಹಣ ವಿಟ್ಟುಕೊಳ್ಳದಿದ್ದುದರಿಂದ, ನಿನ್ನ ಜೇಬೇ ನನ್ನ ಜೇಬಾಯಿತು. ನನ್ನ ಧರ್ಮವೂ ಶ್ರದ್ಧೆಯೂ ನನಗಾಗಿ ನಿನ್ನಲ್ಲಿ ಹಣವನ್ನಿಟ್ಟಿತ್ತು. ನನಗೆ ಅಗತ್ಯವಿರುವಾಗ ನನ್ನ ಧರ್ಮವು ಹೇಗೋ ನನಗೆ ಒದಗಿಸುತ್ತದೆ, ಅಥವಾ ದೇವರು ಒದಗಿಸುತ್ತಾನೆ. ಒಂದು ವೇಳೆ ಒದಗಿಸದಿದ್ದರೂ ಚಿಂತೆಯಿಲ್ಲ," ಈ ಕಥೆಯಿಂದ ತಿಳಿಯುವುದೇನೆಂದರೆ, ನಿಮ್ಮ ಆಶೆಗಳನ್ನು ನಿಮ್ಮ ಜೇಬಿನಲ್ಲಿಟ್ಟುಕೊಂಡಿರುವವರೆಗೂ ನಿರ್ಭಯತೆಯಾಗಲೀ ಸುರಕ್ಷಣೆಯಾಗಲೀ ನೆಮ್ಮದಿಯಾಗಲೀ ಶಾಂತಿ-ವಿಶ್ರಾಂತಿಗಳಾಗಲೀ ಇರುವುದಿಲ್ಲ. ನಿಮ್ಮ ಆಶೆಗಳನ್ನು ತ್ಯಾಗಮಾಡಿರಿ. ಅವುಗಳನ್ನು ಮೀರಿ ಮೇಲೇರಿದರೆ, ಆಗಿಂದಾಗಲೇ ನಿಶ್ಚಿಂತತೆಯೂ ನೆಮ್ಮದಿಯೂ ಅಂತ್ಯದಲ್ಲಿ ಆಶೆಗಳು ಪರಿಪೂರ್ತಿಯಾದ ನಿಶ್ಚಿತ ಫಲವೂ—ಹೀಗೆ ಎರಡು ಬಗೆಯ ಶಾಂತಿಯೂ—ದೊರಕುತ್ತವೆ. ನೀವು ಆಶೆಗಳನ್ನು ಮೀರಿ ಪರಮೋಚ್ಚ ಸತ್ಯದಲ್ಲಿ ನಿಂತಾಗಲೇ ನಿಮ್ಮ ಬಯಕೆಗಳೆಲ್ಲಾ ಸಫಲವಾಗುತ್ತವೆ, —ಎನ್ನುವುದನ್ನು ನೆನಪಿನಲ್ಲಿಡಿ. ಯಾವಾಗ ನೀವು ಅರಿತೋ ಅರಿಯದೆಯೋ ದೇವತ್ವದಲ್ಲಿ ಲೀನವಾಗುವಿರೋ ಆಗಲೇ, ಆಗ ಮಾತ್ರವೇ, ಆಶೆಗಳು ಸಾಫಲ್ಯ ಹೊಂದಲು ಕಾಲವು ಪರಿಪಕ್ವವಾಗುತ್ತದೆ.

೧೨೦. ತ್ಯಾಗದ ಸರಿಯಾದ ರೀತಿ-ನಿಜವಾದ ಅರ್ಥ

(ಪುಟ್ಟ ಮೊಮ್ಮಗನನ್ನು ಕೈಬಿಟ್ಟು ಬೃಂದಾವನಕ್ಕೆ ಹೋಗಬಯಸಿದ ಮುದುಕಿ)

ಇಂಡಿಯಾ ದೇಶದಲ್ಲಿ-ಇಲ್ಲಿ ರೋಮನ್ ಕ್ಯಾಥೋಲಿಕ್ಸ್ ಮತದವರು ಪೂಜಿಸು ವಂತೆ–ದೇವರನ್ನು ಪೂಜಿಸತಕ್ಕವರಿದ್ದಾರೆ. ಅವರು ಪ್ರತಿಮೆಗಳ ಮೂಲಕವೂ ವಿಗ್ರಹಗಳ ಮೂಲಕವೂ ದೇವರನ್ನು ಪೂಜಿಸುತ್ತಾರೆ. ರಾಮ, ಕೃಷ್ಣ ಮೊದಲಾದ ದೇವರ ಪ್ರತಿರೂಪಗಳನ್ನು ಪೂಜಿಸುತ್ತಾರೆ. ರಾಮ ಮತ್ತು ಕೃಷ್ಣ ಇವರು ಇಂಡಿಯಾದೇಶದ ಕ್ರಿಸ್ತರು.

ಇಂಡಿಯಾದಲ್ಲಿ ಒಬ್ಬ ಮುದುಕಿಯು ಸಾಧುಗಳೊಬ್ಬರಲ್ಲಿ ಹೋದಳು. ತನ್ನ ಮನೆಯನ್ನೂ ಬಂಧುಗಳನ್ನೂ ಬಿಟ್ಟು ಶ್ರೀ ಕೃಷ್ಣ ಪರಮಾತ್ಮನ ಜನ್ಮಸ್ಥಳವಾದ ಬೃಂದಾವನಕ್ಕೆ ತಾನು ಹೋಗುವದಾಗಿ ಹೇಳಿದಳು. ಕೌಟುಂಬಿಕ ಬಂಧಗಳನ್ನೆಲ್ಲಾ ಕಳಚಿಕೊಂಡು ಎಲ್ಲರೊಡನೆಯೂ ಇದ್ದ ಸಂಬಂಧಗಳನ್ನು ಕಡಿದುಕೊಂಡು ತಾನು ಇಂಡಿಯಾದ ಜೆರೂಸೆಲುಂ ಆದ ವೃಂದಾವನಕ್ಕೆ ಹೋಗುವದು ಉಚಿತವಾಗಬಹುದೆ ? —ಎಂದು ಆ ಸಾಧುಗಳನ್ನು ಕೇಳಿದಳು.

ಆ ಮುದುಕಿಯ ಜೊತೆಗೆ, ಆಕೆಯ ಪೋಷಣೆಯಲ್ಲಿ ಚಿಕ್ಕ ವಯಸ್ಸಿನ ಮೊಮ್ಮಗನಿದ್ದ. ಆ ಸಾಧುಗಳು ಹೇಳಿದರು : ನಿನ್ನ ಈ ಮೊಮ್ಮಗನ ಕಣ್ಣುಗಳಿಂದ ನಿನ್ನ ಕಣ್ಣುಗಳಲ್ಲಿ ನೋಡುತ್ತಿರುವದೇನು ? ಸ್ವಲ್ಪ ಲಕ್ಷ್ಯ ಕೊಟ್ಟು ವಿಚಾರ ಮಾಡು. ಈ ಮಗುವಿನ ಕಣ್ಣುಗಳಿಂದಲೂ ಮೈಯೊಳಗಿನ ರೋಮರೋಮ ಗಳಿಂದಲೂ ನಿನ್ನನ್ನು ಕಾತರದಿಂದ, ತೀವ್ರ ಪ್ರೇಮದಿಂದ ನೋಡುತ್ತಿರುವ ಶಕ್ತಿ ಯಾವದು ? ದೇವತ್ವ ಯಾವದು ?" ಆಕೆ ಹೇಳಿದಳು "ಈ ಸಣ್ಣ ಮುದ್ದು ಬಾಲಕನಲ್ಲಿ ಚಂಚಲತೆ ಇಲ್ಲ, ಚಪಲತೆ ಇಲ್ಲ, ಮೋಹವಿಲ್ಲ, ಕೆಟ್ಟತನವಿಲ್ಲ ; ಇದು ನಿರ್ಮಲವಾಗಿಯೂ ನಿಷ್ಕಪಟವಾಗಿಯೂ ಇದೆ. ಅವನು ಅಳುವಾಗಲೂ ಆ ಧ್ವನಿ ಯಲ್ಲಿ ದೇವರ ಧ್ವನಿ ಇದೆಯೇ ಹೊರತು ಬೇರೆ ಏನೂ ಇಲ್ಲ." ಪುನಃ ಸಾಧುಗಳು ಹೇಳಿದರು, "ನೀನು ಬೃಂದಾವನಕ್ಕೆ ಹೋದರೆ, ಅಲ್ಲಿ ಕೃಷ್ಣನ ಒಂದೇ ಮೂರ್ತಿ ಯನ್ನು ನೆಚ್ಚಿಕೊಳ್ಳಬೇಕು ; ಅದಕ್ಕೆ ಅಂಟಿಕೊಳ್ಳಬೇಕು. ಆ ದೇವತಾ ಮೂರ್ತಿ ಯಲ್ಲಿ ನೀನು ದೇವರನ್ನು ಪೂಜಿಸಬೇಕು. ಬೃಂದಾವನದಲ್ಲಿರುವ ಮೂರ್ತಿಯಷ್ಟೇ ಈ ಮಗುವಿನ ದೇಹವೂ ಕೃಷ್ಣನ ಉತ್ತಮವಾದ ಮೂರ್ತಿಯಲ್ಲವೆ ?" ಮುದುಕಿಗೆ ಸ್ವಲ್ಪ ಆಶ್ಚರ್ಯವಾಯಿತು. ಆಕೆಯು ಸ್ವಲ್ಪ ಆಲೋಚನೆಯನ್ನೂ ವಿಚಾರವನ್ನೂ ಮಾಡಿದ ಅನಂತರ ಈ ಮಗುವನ್ನೇ ಕೃಷ್ಣನ ಅವತಾರವೆಂದು ತಿಳಿದು ಆ ಮಗುವಿನ ಮೂರ್ತಿಯ ಮೂಲಕವೇ ಕೃಷ್ಣನನ್ನು ಪೂಜಿಸಬಹುದು–ಎಂಬ ನಿರ್ಣಯಕ್ಕೆ ಬಂದಳು. ಏಕೆಂದರೆ, ಆಕೆ ಆಲೋಚಿಸಿದಳು ; "ಈ ಮಗುವಿನ ಕಣ್ಣುಗಳಿಂದ ನೋಡತಕ್ಕವನು ದೇವರೆ ; ಇದರ ಕಿವಿಗಳಿಂದ ಕೇಳತಕ್ಕವನು ದೇವರೆ ; ಇದಕ್ಕೆ

ಶಕ್ತಿಯನ್ನು ಕೊಡತಕ್ಕವನು ದೇವರೆ; ಇದರ ದೇಹವನ್ನು ಬೆಳಸತಕ್ಕವನೂ ದೇವರೆ: ರೋಮರೋಮಗಳಲ್ಲಿಯೂ ನಾಡೀ ನರಗಳಲ್ಲಿಯೂ ರಕ್ತದಲ್ಲಿಯೂ ಸ್ಪಂದಿಸುತ್ತಿರುವವನೂ ದೇವರೇ."

ಆ ಸಾಧುಗಳ ಬೋಧೆಯ ಪ್ರಕಾರ ಆಕೆಯು ಹೀಗೆ ವಿಚಾರಮಾಡಿ ಆ ಮಗುವನ್ನು ಮೊಮ್ಮಗನೆಂದು ಭಾವಿಸುವದನ್ನು ಬಿಟ್ಟಳು. ಆ ಮಗುವನ್ನು ಕೃಷ್ಣ ಪರಮಾತ್ಮನೆಂದೇ ಭಾವಿಸುತ್ತಾ ಕೌಟುಂಬಿಕವೂ ಪ್ರಾಪಂಚಿಕವೂ ಆದ ಎಲ್ಲಾ ಬಂಧಗಳನ್ನೂ ಸಂಬಂಧಗಳನ್ನೂ ಕಡಿದುಕೊಂಡಳು. ಅವನು ದೇವರು ಎನ್ನುವ ಒಂದೇ ಭಾವಸಂಬಂಧವನ್ನು ಉಳಿಸಿಕೊಂಡಳು. ಇದೇ ತ್ಯಾಗದ ರೀತಿ; ಇದೇ ತ್ಯಾಗ.

ತ್ಯಾಗವೆಂದರೆ ವೈರಾಗ್ಯದಿಂದ ಎಲ್ಲವನ್ನೂ ಬಿಟ್ಟು ಸಂನ್ಯಾಸ ತೆಗೆದುಕೊಂಡು ಅರಣ್ಯಕ್ಕೆ ಹೋಗಿ ತಪಸ್ಸು ಮಾಡಿಕೊಂಡಿರುವದು—ಎಂದು ಅರ್ಥವಲ್ಲ. ತ್ಯಾಗವೆಂದರೆ ಎಲ್ಲವನ್ನೂ ದೈವಭಾವದಿಂದ ಪವಿತ್ರ ಮಾಡಿಕೊಳ್ಳುವದು ಎಂದು ಅರ್ಥ. ಮಗುವನ್ನು ತ್ಯಾಗ ಮಾಡುವದೆಂದರೆ ಮಗುವನ್ನು ಬಿಟ್ಟುಹೋಗುವದು ಎಂದು ಅರ್ಥವಲ್ಲ. ಆದರೆ ಮಗುವನ್ನು ದೇವರೆಂದು ತಿಳಿದು, ಮೊಮ್ಮಗನೆಂಬ ಭಾವನೆಯನ್ನು ಬಿಡುವದೇ ತ್ಯಾಗ. ವೇದಾಂತದ ಪ್ರಕಾರ, ಪ್ರತಿಯೊಬ್ಬರಲ್ಲಿಯೂ ಎಲ್ಲರಲ್ಲಿಯೂ ದೇವತ್ವವನ್ನು ನೋಡುವದೇ ತ್ಯಾಗ. ಹೆಂಡತಿ, ಮಕ್ಕಳು ಯಾರನ್ನೂ ಬಿಡಬೇಕೆಂದು ವೇದಾಂತವು ಹೇಳುವದಿಲ್ಲ. "ಹೆಂಡತಿಯಲ್ಲಿ ಹೆಂಡತಿ ಎಂಬ ಭಾವನೆಯನ್ನು ಬಿಟ್ಟು ದೇವರನ್ನು ನೋಡಬೇಕು. ಶತ್ರುವನ್ನು ಶತ್ರುವಾಗಿ ಕಾಣದೇ ಅವನಲ್ಲಿಯೂ ದೇವರನ್ನು ಕಾಣಬೇಕು. ಮಿತ್ರನಲ್ಲಿಯೂ ಮಿತ್ರನೆಂಬ ಭಾವನೆಯನ್ನು ಬಿಟ್ಟು ದೇವರನ್ನು ನೋಡಬೇಕು." ಎಂದು ವೇದಾಂತವು ಹೇಳುತ್ತದೆ.

ರಾಮನು ಗೃಹಸ್ಥನಾಗಿದ್ದಾಗ ಅಭ್ಯಾಸದಲ್ಲಿಟ್ಟಿದ್ದ ವೇದಾಂತಶಾಸ್ತ್ರದ ಪ್ರಕಾರ ಹೆಂಡತಿಯು ಬೆಳಿಗ್ಗೆ ಮುಂಚೆ ಏಳುತ್ತಿದ್ದಳು. ರಾಮನು ಧ್ಯಾನದಲ್ಲಿ ಮಗ್ನವಾಗಿರುತ್ತಿದ್ದನು. ಅವನು ಧ್ಯಾನಭರದಿಂದ ದೇಹವನ್ನೂ ಮನಸ್ಸನ್ನೂ ಮರೆತು, ಮೀರಿ, ದೇವತ್ವದಲ್ಲಿ ಮುಳುಗಿರುತ್ತಿದ್ದನು. ದೇವರ ಭಾವದಲ್ಲಿಯೂ ಅರಿವಿನಲ್ಲಿಯೂ ಲೀನವಾಗಿರುವಾಗ ಮಧುರವಾದ ಅಮೃತಸ್ರಾವವನ್ನು—ಆನಂದರಸವನ್ನು ರಾಮನು ಸವಿಯುತ್ತಿದ್ದನು. ಆಗ ಪತ್ನಿಯು ಬರುತ್ತಿದ್ದಳು. ರೋಮನ್ ಕ್ಯಾಥೋಲಿಕ್ ಜನರು ಮೂರ್ತಿಗಳನ್ನು ಪೂಜಿಸುವಂತೆ ಆಕೆಯು ರಾಮನನ್ನು ಪೂಜ್ಯಭಾವದಿಂದ ನೋಡುತ್ತಿದ್ದಳು. ರಾಮನು ಧ್ಯಾನದಲ್ಲಿ ಹೇಗೆ ದೇಹವನ್ನು ಮರೆತು ಭೌತಿಕ ಭೂಮಿಕೆಯನ್ನು ಮೀರಿ, ಮೇಲೇರಿ, ದೇವತ್ವದಲ್ಲಿ ಒಂದಾಗಿರುತ್ತಿದ್ದನೋ ಹಾಗೆ ಪತ್ನಿಯೂ ರಾಮನ ದೇಹವನ್ನು ಮರೆತು ಒಳಗಿರುವ ದೇವರನ್ನು ನೋಡುತ್ತಿದ್ದಳು. ಆಕೆಯು ರಾಮನ ದೇಹದಿಂದ ಸ್ವಲ್ಪ ದೂರದಲ್ಲಿ ಕುಳಿತು ರಾಮನ ಹಣೆಯ ಮೇಲೆ ತನ್ನ ದೃಷ್ಟಿಯನ್ನು ನಾಟಿಸಿ ನೋಡುತ್ತಿದ್ದಳು. ಆಕೆಯು ಅಷ್ಟು ಹೆಚ್ಚಾಗಿ ಮುಂದು

ಮರಿದವಳು ಆಗಿರಲಿಲ್ಲವಾದ್ದರಿಂದ ಈ ದೇಹವನ್ನೇ ಚಿಂತನೆ ಮಾಡುತ್ತಿದ್ದಳು. ಓಂಕಾರವನ್ನು ಉಚ್ಚಾರಣೆ ಮಾಡುತ್ತಾ ಇತರ ಎಲ್ಲಾ ಭಾವನೆಗಳೂ ಆಲೋಚನೆಗಳೂ ಹೋಗಿ ತನ್ನ ದೇಹದ ಪ್ರಜ್ಞೆಯು ಕೂಡ ಪೂರ್ತಿಯಾಗಿ ಕಳೆದು ಹೋಗುವಷ್ಟು ತೀವ್ರವಾಗಿ ಆಕೆಯು ಈ ದೇಹವನ್ನು ತನ್ನ ಮನಸ್ಸಿನ ಲಕ್ಷ್ಯದಲ್ಲಿ ಇಟ್ಟುಕೊಂಡು ಧ್ಯಾನ ಮಾಡುತ್ತಿದ್ದಳು. ಆಕೆಯು ತನ್ನನ್ನು ತಾನು ರಾಮನ ದೇಹವಾಗಿ ಪರಿವರ್ತನೆ ಹೊಂದಿದಂತೆ ಅಥವಾ ರಾಮನ ದೇಹದಲ್ಲಿ ಐಕ್ಯವಾದಂತೆ (ಒಂದಾದಂತೆ) ಭಾವಿಸುತ್ತಿದ್ದಳು; ಅನುಭವ ಪಡೆಯುತ್ತಿದ್ದಳು. ಆಕೆಯ ಚೈತನ್ಯವೋ ? ಎಂದರೆ, ಆ ಭೂಮಿಕೆಯಲ್ಲಿ ತನ್ನ ಆತ್ಮವೇ ರಾಮನ ಆತ್ಮವೆಂದು ಮನಗಂಡು ಅರಿತಿದ್ದಳು, ಧ್ಯಾನಮಾಡುತ್ತಾ ದೇವರ ಪ್ರಜ್ಞೆಯಲ್ಲಿ ಮುಳುಗಿರುವುದು ರಾಮನಲ್ಲ, ತಾನೇ ಧ್ಯಾನ ಮಾಡುತ್ತಾ ದೇವರ ಪ್ರಜ್ಞೆಯಲ್ಲಿ ಮುಳುಗಿರುವುದು–ಎಂದು ಆಕೆಗೆ ಅನುಭವವಾಗುತ್ತಿತ್ತು. ರಾಮನ ಧ್ಯಾನವೇ ಆಕೆಯ ಧ್ಯಾನವಾಗಿತ್ತು; ಮತ್ತು ಇಡೀ ವಿಶ್ವವೇ ತಾನಾಗಿಯೂ ತನ್ನ ಆತ್ಮವೇ ಇಡೀ ವಿಶ್ವದ ಆತ್ಮವಾಗಿಯೂ ಅರಿತಳು. ಈ ರೀತಿಯಿಂದ ಆಕೆಯು ರಾಮನಿಗೆ ಸಹಾಯುವಾಗಿಯೂ ರಾಮನು ಆಕೆಗೆ ಸಹಾಯವಾಗಿಯೂ ಇದ್ದರು. ಆಕೆಯು ಹೇಗೆ ಸಹಾಯವಾಗಬಲ್ಲಳು ? ಎಂದರೆ, ಹೆಂಡತಿಯು ಗಂಡನನ್ನು ದೇವರೆಂದೂ ಭಾವಿಸುವುದಕ್ಕೆ ತೊಡಗಿದರೆ ಆಕೆಯ ಪ್ರಬಲವಾದ ಮನಶ್ಶಕ್ತಿಯು ಆ ಪರಿಶುದ್ಧವಾದ ಚಿಂತನಾಪ್ರವಾಹದ ಮೂಲಕ ಆಕೆಯ ಗಂಡನನ್ನು (ಸ್ವರೂಪದಿಂದ ದೇವರೇ ಆಗಿರುವವನನ್ನು) ದೇವರಾಗಿ ಮಾಡಲಾರದೆ ? ಗಂಡನು, ತನ್ನ ಆತ್ಮನೇ ಪರಮಾತ್ಮನೆಂದು ಅನುಭವ ಪಡೆಯುವುದಕ್ಕೆ ಆಕೆಯ ಸದ್ಭಾವನೆ ಸಹಾಯ ಮಾಡಲಾರದೆ ? ಅತ್ಯಂತ ನಿಶ್ಚಯವಾಗಿಯೂ ಸಹಾಯ ಮಾಡುತ್ತದೆ.

೧೦೧. ಹುಸಿಯಾದ ಅರ್ಪಣ ವಿರುದ್ಧ ನಿಜವಾದ ಸಮರ್ಪಣ

(ಮದ್ಯಪಾನ ಮತ್ತನ ವರ್ತನೆ—ಧ್ಯಾನಾನಂದ ಮತ್ತಯೋಗಿಯ ಸಮರ್ಪಣ)

ಒಬ್ಬ ಮನುಷ್ಯನು ಅಮಲು ಹತ್ತುವ ವರೆಗೂ ಮದ್ಯಪಾನ ಮಾಡುತ್ತಾನೆ. ಆ ಸ್ಥಿತಿಯಲ್ಲಿರುವಾಗ ಅವನು ಐದು ಸಾವಿರ ರೂಪಾಯಿ ಬೆಲೆಬಾಳುವ ತನ್ನ ಮನೆಯನ್ನು ಐದು ನೂರು ರೂಪಾಯಿಗಳಿಗೆ ಮಾರಾಟಮಾಡಿ ಕ್ರಯಪತ್ರವನ್ನು ಬರೆಯುತ್ತಾನೆ. ಇದನ್ನು ಅವನ ಹೆಂಡತಿಯು ತಿಳಿದು, ಕೂಡಲೇ ಅವನಿಗೆ ಹುಳಿ ರಸವನ್ನು (vinegar) ಕುಡಿಯಲು ಕೊಡುತ್ತಾಳೆ. ಇದನ್ನು ಕುಡಿದ ಕೂಡಲೇ ಅವನ ಅಮಲು ಇಳಿಯುತ್ತದೆ. ಇದರಿಂದ, ತನ್ನ ಅಷ್ಟು ದೊಡ್ಡ ಮನೆಯನ್ನು ಅತ್ಯಲ್ಪ ಬೆಲೆಗೆ ಮಾರಿದ ಹುಚ್ಚುತನಕ್ಕಾಗಿ ಅವನಿಗೆ ವಿಷಾದವಾಗುತ್ತದೆ. ಅಮಲಿನ ನೆಪದಿಂದ ಮನೆಯ ಮಾರಾಟವನ್ನು ರದ್ದುಪಡಿಸಬಹುದೆಂದು ಕೋರ್ಟಿಗೆ ಹೋಗುತ್ತಾನೆ. ಕೆಲವು ಯೋಗಸಾಧಕರ ಸ್ಥಿತಿಯೂ ಹೀಗೆಯೇ ಇದೆ. ಧ್ಯಾನಾನಂದದ ಮದವೇರಿದ ಕಾಲದಲ್ಲಿ ತಮ್ಮ ತಂದೆತಾಯಿಗಳನ್ನೂ ಸಹೋದರ-ಸಹೋದರಿಯರನ್ನೂ ಬಂಧು-ಮಿತ್ರರನ್ನೂ ಪತ್ನೀ-ಪುತ್ರರನ್ನೂ

ಎಲ್ಲಾ ಹಣವನ್ನೂ ಆಸ್ತಿ-ಪಾಸ್ತಿಗಳನ್ನೂ ಸಮಸ್ತವನ್ನೂ ದೇವರಿಗೆ ಮಾರು ತ್ತಾರೆ, ದಾನ ಮಾಡುತ್ತಾರೆ: ಅರ್ಪಣ ಮಾಡುತ್ತಾರೆ. ಅವರು ದೇವರಿಗಾಗಿ ಎಲ್ಲ ವನ್ನೂ ಕಳೆದುಕೊಳ್ಳುತ್ತಾರೆ. ಇದು ಒಳ್ಳೆಯದೇ. ಅವರು ಆಗ ಏಕಾಗ್ರತೆಯಲ್ಲಿ ಏಕೋ ಭಾವದಲ್ಲಿ ಇರುತ್ತಾರೆ. ಆದರೆ ಸ್ವಲ್ಪ ಕಾಲದ ಮೇಲೆ ಆ ಅಮಲು ಇಳಿದಾಗ, ಪ್ರಾಪಂಚಿಕ ಆಗತ್ಯಗಳೂ ಕೊರತೆಗಳೂ ಆಶೆಗಳೂ ಯೋಗ–ಕ್ಷೇಮದ ಚಿಂತೆಗಳೂ ಕರ್ತವ್ಯದ ಒತ್ತಡಗಳೂ ತಮ್ಮ ಇರುವಿಕೆಯನ್ನು ತೋರ್ಪಡಿಸಿಕೊಳ್ಳುತ್ತವೆ, ಅವರಿಗೆ ಹುಳಿರಸವನ್ನು ಕುಡಿಸಿದಂತೆ ಆಗಿ ಈಶ್ವರ ಧ್ಯಾನ ಮತ್ತು ಈಶ್ವರಾರ್ಪಣಗಳ ಅಮಲು ಇಳಿದು, ಅವರು ಪುನಃ ಎಲ್ಲವನ್ನೂ ದೇವರಿಂದ ಹಿಂದಿರುಗಿ ಕಸಿದುಕೊಳ್ಳುತ್ತಾರೆ. ದೇಹವೂ ಮನೆಯೂ ಎಲ್ಲವೂ ತಮ್ಮದೇ ಎಂದು ಅವರು ಭಾವಿಸುತ್ತಾರೆ. ಇದು ಬೇಕು, ಅದು ಬೇಕು ಎಂದು ಬಯಸುತ್ತಾ ನೆರೆಹೊರೆಯವರ ವಸ್ತುಗಳು ಸಹ ಅವರಿಗೆ ಬೇಕಾಗುತ್ತವೆ. ಆದರೆ ನಿಜವಾದ ಶಾಂತಿಯೂ ಸುಖವೂ ದೊರಕಬೇಕಾದರೆ, ಸಕಲ ವನ್ನೂ ಶಾಶ್ವತವಾಗಿ ದೇವರಿಗೆ ಒಪ್ಪಿಸಿ ಯಾವ ಆಶೆಗೂ ವಶವಾಗದಂತಹ ಅಭೇದ್ಯ ವಾದ ಶೀಲವನ್ನು ರಚಿಸಿರುವ ಪರಿಪೂರ್ಣತೆಗೇರಬೇಕು. ಆ ಸ್ಥಿತಿಯಲ್ಲಿ ಯಾವ ಚಿಂತೆಯೂ ಇಲ್ಲ; ಯಾವ ಭಯವೂ ಇಲ್ಲ; ಪ್ರಾಪಂಚಿಕವಾದ ಯಾವ ಭರವಸೆಯೂ ಇಲ್ಲ. ನೀವು ಈ ಎಲ್ಲವನ್ನೂ ಮೀರಿ ನಿಲ್ಲುತ್ತೀರಿ.

ವೇದಾಂತದ ಪ್ರಕಾರ, ಒಂದು ಕ್ಷಣ ಪರಮಾತ್ಮನ ಧ್ಯಾನಮಾಡಿದರೆ ಕೆಲವು ಸಿದ್ಧಿ ಗಳನ್ನು ಪಡೆಯಬಹುದು. ನೀವು ಕ್ರಮವಾಗಿ ತ್ಯಾಗದ ಉನ್ನತ ಶಿಖರಕ್ಕೆ ಏರಿದರೆ, ಸರ್ವವನ್ನೂ ಮನಃಪೂರ್ವಕವಾಗಿ ಸಮರ್ಪಣ ಮಾಡುವದರಲ್ಲಿ ನೀವು ಯಶಸ್ವಿಗಳಾದರೆ, ಇಡೀ ಜಗತ್ತೇ ನಿಮ್ಮದಾಗುವದಿಲ್ಲವೇ?

೧೦೨. ನಿಜವಾದ ತ್ಯಾಗರೂಪಸರ್ಪ

(ವಿಲಕ್ಷಣವಾದ ಸ್ವಪ್ನದಲ್ಲಿಯ ಸರ್ಪ)

ಒಬ್ಬ ಮನುಷ್ಯನು ನಿದ್ರೆ ಮಾಡುತ್ತಿದ್ದನು. ಆ ನಿದ್ರೆಯಲ್ಲಿ ಅವನು ತನ್ನನ್ನು ತಾನು ಕಡು ಬಡವನಾಗಿಯೂ ಭಿಕ್ಷುಕನಾಗಿಯೂ ಕಂಡನು. ಅವನು ಆ ಕನಸಿನಲ್ಲಿಯೇ ತನ್ನ ಕಷ್ಟವನ್ನು ಕಳೆದುಕೊಳ್ಳುವದಕ್ಕಾಗಿ ಹಲವು ದೇವರನ್ನು ಪ್ರಾರ್ಥಿ ಸಿದನು. ಪ್ರಯೋಜನವಾಗಲಿಲ್ಲ. ಬಡತನವನ್ನು ತಡೆಯಲಾರದೆ ಕಳವು ಮಾಡಿ ದನು ; ಆದರೆ ಸಿಕ್ಕಿಬಿದ್ದು ಆಪಾದಿತನಾದನು. ಮಿತ್ರರಲ್ಲಿಯೂ ಲಾಯರ್‌ಗಳ ಲ್ಲಿಯೂ ಮೊರೆಯಿಟ್ಟನು. ಯಾರೂ ಅವನಿಗೆ ಶಿಕ್ಷೆಯನ್ನು ತಪ್ಪಿಸುವದು ಸಾಧ್ಯ ವಾಗಲಿಲ್ಲ. ಅವನು ಕಾರಾಗೃಹದ ಬಂಧನದಲ್ಲಿ ಸಂಕಟಪಡುತ್ತಿದ್ದಾಗ ಒಂದು ಭಯಂಕರ ಸರ್ಪವು ಅವನನ್ನು ಕಡಿಯಿತು. ಅದರ ಕ್ರೂರವಾದ ಯಾತನೆಯಿಂದ ಅವನಿಗೆ ಎಚ್ಚರವಾಯಿತು. ಆ ಕನಸಿನಲ್ಲಿ ಕಚ್ಚಿದ ಹಾವಿಗೆ ಅವನು ಅತ್ಯಂತ ಕೃತಜ್ಞನಾಗಿರಬೇಕಾಗಿತ್ತು. ಏಕೆಂದರೆ ಅದರಿಂದಲೇ ಅವನಿಗೆ ಎಚ್ಚರವಾದ್ದರಿಂದ

ಕನಸಿನ ಸಮಸ್ಯೆಗಳೂ ಸಂಕಟಗಳೂ ಕರಗಿಹೋದವು. ಆ ಶ್ರೀಮಂತನು ಎಚ್ಚರವಾದಾಗ ತನ್ನ ಹಾಸಿಗೆಯ ಸುತ್ತಲೂ ಪ್ರಿಯಪತ್ನಿಯೂ ಅಕ್ಕರೆಯ ಮಕ್ಕಳೂ ಚಕ್ಕಂದ ವಾಡುತ್ತಿದ್ದುದನ್ನು ಕಂಡು ಸಂತೋಷಚಿತ್ತನಾದನು. ಕನಸಿನಲ್ಲಿ ಅವನು ಬಂಧನ ದಲ್ಲಿ ಸಿಕ್ಕಿದ್ದುದರಿಂದ ಅದರ ಬಿಡುಗಡೆಗಾಗಿ ಚಡಪಡಿಸುತ್ತಿದ್ದನು. ಸರ್ಪವು ಕಚ್ಚಿ ಅವನಿಗೆ ಮೋಕ್ಷವನ್ನು ಕೊಟ್ಟಿತು. ಆ ಸರ್ಪವು ಕನಸಿನಲ್ಲಿದ್ದ ಮಿಕ್ಕ ವಸ್ತುಗಳಂತೆಯೇ ಒಂದು ವಸ್ತುವಾದರೂ ಅದು ಅವನನ್ನು ಗಾಬರಿಪಡಿಸಿ ಎಚ್ಚರಗೊಳಿಸಿ ಉಪ ಕಾರಮಾಡಿತು. ಅದು ಅವನ ಕನಸಿನ ಜೀವವನ್ನು ನುಂಗಿತು. ಅಷ್ಟೇ ಅಲ್ಲ, ಅದು ಆ ಸೆರೆಮನೆಯನ್ನೂ ಕಾವಲುಗಾರರನ್ನೂ ಅಲ್ಲಿಯ ಸಂಕಷ್ಟಗಳನ್ನೂ ಎಲ್ಲವನ್ನೂ ನಾಶ ಮಾಡಿತು. ಆ ವಿಲಕ್ಷಣವಾದ ಸರ್ಪವು ತನ್ನನ್ನು ತಾನೇ ನುಂಗಿ ಬಿಡುವ ಅಸಾಧಾರಣ ಕಾರ್ಯವನ್ನು ಮಾಡಿತು. ಏಕೆಂದರೆ ಆ ಮನುಷ್ಯನಿಗೆ ಎಚ್ಚರವಾದ ಮೇಲೆ ಆ ವಿಚಿತ್ರ ಸರ್ಪವೂ ಇರಲಿಲ್ಲ.

ವೇದಾಂತದ ದೃಷ್ಟಿಯಿಂದ ನೀವು ಕಾಣುವ ಈ ಪ್ರಪಂಚವೆಲ್ಲಾ ಕೇವಲ ಸ್ವಪ್ನ, ಮಾಯೆ, ಕನಸು ಕಾಣುವ ನೀವೇ ಕಳ್ಳರು. ನಿಮ್ಮ ಮಿತ್ರರೂ ಮಿಕ್ಕವರೂ, ನಿಮ್ಮ ದೇವರುಗಳೂ—ಯಾರಿಂದ ನೀವು ಬಿಡುಗಡೆಯನ್ನು ಬಯಸುವಿರೋ ಆ— ಎಲ್ಲರೂ ನಿಮ್ಮೊಡನೆ ಸೆರೆಯಾಳುಗಳೇ. ಆದ್ದರಿಂದ ಆ ಹಾವು ಕಚ್ಚುವವರೆಗೂ ನಿಮಗೆ ಸಹಾಯವು ದೊರಕುವುದಿಲ್ಲ. ಸರ್ವಸಂಗ ಪರಿತ್ಯಾಗವೇ ಆ ಹಾವು. ಕರ್ತೃತ್ವ-ಭೋಕ್ತೃತ್ವ ತ್ಯಾಗವೇ ಆ ಸರ್ಪ; ಜೀವಭಾವ ತ್ಯಾಗವೇ ಆ ಸರ್ಪ. ಅವಿದ್ಯಾ ಬುದ್ಧಿಯ ತ್ಯಾಗವೂ ಕಾಮಾದಿಗಳ ತ್ಯಾಗವೂ ಸರ್ಪದೋಪಾದಿಯಲ್ಲಿ ಭಯಂಕರವಾಗಿ ತೋರಿ ಕಚ್ಚುವಂತಾಗುತ್ತದೆ. ಬ್ರಹ್ಮವಿದ್ಯೆಯೇ ನಿಜವಾದ ತ್ಯಾಗ. ಆತ್ಮೈಕತ್ವ ವಿದ್ಯೆಯೇ-ಆತ್ಮ ಒಂದೇ ಸತ್ಯವೆಂಬ ಜ್ಞಾನವೇ-ನಿಜವಾದ ತ್ಯಾಗ. ಅದೇ ವೇದಾಂತವು.

ಯಾವಾಗ ನಿಜವಾದ ತ್ಯಾಗವು ಬರುತ್ತದೆಯೋ ಆಗ ಜ್ಞಾನವು ಬರುತ್ತದೆ. "ನಾನೇ ಬ್ರಹ್ಮ" ಎನ್ನುವ ವೇದಾಂತ ಸಿದ್ಧಾಂತವು ಅನುಭವಕ್ಕೆ ಬರುತ್ತದೆ. ಅಮೆರಿ ಕನ್‌ರ ಮತ್ತು ಯೂರೋಪಿಯನ್‌ರ ಕಿವಿಗಳಿಗೆ "ನಾನು ಬ್ರಹ್ಮವಾಗಿದ್ದೇನೆ" ಎಂಬ ಮಾತು ಹಾವಿನ ಬುಸ್‌ಗುಟ್ಟುವ ಶಬ್ದದಂತೆ ಕೇಳಬಹುದು; ಆ ಬುಸ್‌ಗುಟ್ಟುವ ಸರ್ಪವು ನಿಮ್ಮನ್ನು ಕಡಿಯುತ್ತದೆ. "ಅಂಥಾ ಅಸಂಬದ್ಧ ಭಾವನೆಗೆ ಹೇಗೆ ಆಶ್ರಯ ಕೊಡಬೇಕು? ಅಂಥಾ ವಿಪರೀತವಾದ ಭಾವನೆ ಮಾಡುವದಕ್ಕೆ ಎಷ್ಟು ಧೈರ್ಯ?" ಎಂದು ನೀವು ಕೇಳಬಹುದು.

ಓ ಜನರೆ! ತ್ಯಾಗ ಸರ್ಪವು ನಿಮ್ಮನ್ನು ಕಚ್ಚಲಿ. ಅದನ್ನು ಸ್ವಾಗತಿಸಬೇಕು. ಅದು ನಿಮ್ಮನ್ನು ಎಲ್ಲಾ ಚಿಂತೆಗಳಿಂದಲೂ ವ್ಯಥೆಗಳಿಂದಲೂ ಬಿಡುಗಡೆ ಮಾಡುತ್ತದೆ, ಈ ಸತ್ಯವು ನಿಮ್ಮಲ್ಲಿ ವಿಷವನ್ನು ತುಂಬುವದಿಲ್ಲ; ಅಮೃತವನ್ನು ತುಂಬುತ್ತದೆ, ನೀವು

ಎಚ್ಚರಗೊಳ್ಳುತ್ತೀರಿ; ಕನಸು ಕಾಣುವ ಜೀವನೂ ಅದರ ಜೊತೆಗೆ ಜಗತ್ತೂ ಹೋಗಿ ಬಿಡುತ್ತವೆ.

ರಾಮನ ಮಾತು ಬರೀ ಊಹಾಪೋಹವಲ್ಲ. ಇದರ ಸತ್ಯತೆಯನ್ನು ನಿಮ್ಮ ಅನುಭವದಿಂದಲೇ ಪರೀಕ್ಷಿಸಿ ನೋಡಿಕೊಳ್ಳಬಹುದು, ಎಲ್ಲಾ ನೋವೂ ತೊಂದರೆಯೂ ಕ್ಲೇಶವೂ ಕೂಡಲೇ ತೊಲಗುತ್ತವೆ.

ನಿಮ್ಮಲ್ಲಿರುವ ನಿಜವಾದ ಆತ್ಮನು ತಾನೇ ತಾನಾಗಿ ಬೆಳಗುವದಕ್ಕೆ ಬಿಡದೆ ಅವನನ್ನು ಕದ್ದು ಅವಿದ್ಯಾ ಕಾಮುಕವರ್ಗಗಳಲ್ಲಿ ಮುಚ್ಚಿಟ್ಟುಕೊಂಡಿರುವದರಿಂದ ನೀವು ಆ ಕನಸಿನ ಕಳ್ಳನಂತಾಗಿದ್ದೀರಿ. "ಆತ್ಮ ಒಂದೇ ಸತ್ಯ; ಚೈತನ್ಯ ಸ್ವರೂಪವಾದ ಆತ್ಮನೇ ನಾನು" ಎಂಬ ತತ್ತ್ವಜ್ಞಾನದ ಸರ್ಪವು ಅನಾದಿಯಾದ ನಿಮ್ಮ ಮಾಯಾ ಸ್ವಪ್ನದಲ್ಲಿ ನಿಮ್ಮನ್ನು ಕರುಣೆಯಿಂದ ಕಚ್ಚಿದರೆ ನೀವು ಎಚ್ಚರಗೊಳ್ಳುತ್ತೀರಿ. ಆಗ ನಿಮ್ಮಲ್ಲಿರುವ ನಿಜವಾದ ಆತ್ಮನು ತನ್ನ ಪೂರ್ಣ ಮಹಿಮಾ ವೈಭವದಿಂದ ತಾನೇ ತಾನಾಗಿ ಬೆಳಗುತ್ತಾನೆ. ಆತ್ಮನು ಎಲ್ಲಾ ಭಾಷೆಯನ್ನೂ ಭಾವನೆಯನ್ನೂ ಊಹೆಯನ್ನೂ ವಿವರಣೆಯನ್ನೂ ಮೀರಿದ್ದಾನೆ.

೧೦೩. ಸಂಪತ್ತಿನ ಸಂಗ್ರಹಕ್ಕಾಗಿ ಪವಿತ್ರ ಜೀವನವನ್ನು ಕಳೆಯುವದು ಅವಿವೇಕ

(ಕಲ್ಲುಗಳನ್ನು ಕೂಡಿಹಾಕುವುದು)

ಒಬ್ಬ ಸಂನ್ಯಾಸಿಗಳು ತಮ್ಮ ಹತ್ತಿರ ಇದ್ದ ಕೆಲವು ತಾಮ್ರದ ನಾಣ್ಯಗಳನ್ನು ಕೆಲವು ಹುಡುಗರಿಗೆ ಕೊಟ್ಟುಬಿಡುವದರಲ್ಲಿ ಇದ್ದರು. ಅವನ್ನು ಪಡೆಯುವದಕ್ಕಾಗಿ ಹಲವರು ಬಡವರು ಅವರಲ್ಲಿಗೆ ಬಂದರು; ಆದರೆ ಆ ಯತಿಗಳು ಅವರಿಗೆ ಕೊಡಲೊಪ್ಪಲಿಲ್ಲ. ಕೊನೆಗೆ ಆನೆಯ ಮೇಲೆ ಕುಳಿತಿದ್ದ ಒಬ್ಬ ರಾಜನು ಅವರಲ್ಲಿಗೆ ಬಂದನು. ಆ ಸ್ವಾಮಿಗಳು ತಮ್ಮ ಕೈಯಲ್ಲಿದ್ದ ತಾಮ್ರದ ನಾಣ್ಯಗಳನ್ನು ರಾಜನು ಕುಳಿತಿದ್ದ ಆನೆಯ ಮೇಲಿನ ಅಂಬಾರಿಯೊಳಗೆ ಎಸೆದರು. ಸ್ವಾಮಿಗಳ ಈ ಅನಿರೀಕ್ಷಿತವಾದ ಕಾರ್ಯದಿಂದ ರಾಜನು ಆಶ್ಚರ್ಯಪಟ್ಟನು. ರಾಜನು ಅತ್ಯಂತ ದರಿದ್ರ ಮನುಷ್ಯನಾದುದರಿಂದ ಅವನಿಗಾಗಿಯೇ ತಾವು ಹಣವನ್ನು ಕೊಟ್ಟಿದ್ದೆಂದು ಸ್ವಾಮಿಗಳು ಹೇಳಿದರು. ತಾನು ಹೇಗೆ ಅತ್ಯಂತ ದರಿದ್ರನಾಗಬಹುದೆಂಬುದನ್ನು ರಾಜನು ಕೇಳಿದನು. ರಾಜನ ಸಂಪತ್ತಿಗಿಂತಲೂ ಮತ್ತೂ ಹೆಚ್ಚು ಹೆಚ್ಚು ರಾಜ್ಯಗಳು ತನಗೆ ಬೇಕೆಂದು ಎಡೆಬಿಡದ ಹಸಿವು ಬಾಯಾರಿಕೆಗಳು ರಾಜನಿಗಿರುವದರಿಂದಲೂ ಅವನು ಎಲ್ಲರಿಗಿಂತಲೂ ಹೆಚ್ಚು ಬಡವನೆಂದು ಯತಿಗಳು ಹೇಳಿದರು. ಆದ್ದರಿಂದ ರಾಜನು ಅತ್ಯಂತ ದರಿದ್ರನು ಎಂಬದು ಸಿದ್ಧವಾಯಿತು.

ಒಬ್ಬ ಮನುಷ್ಯನು ಒಂದು ಪೆಟ್ಟಿಗೆಯಲ್ಲಿ ರಾಶಿರಾಶಿಯಾಗಿ ಹಣವನ್ನು ಕೂಡಿ

ಇಡುತ್ತಿದ್ದನು. ಅಲ್ಲಿ ಒಬ್ಬ ಯತಿಯು ಸಮೀಪದಲ್ಲಿ ಹೋಗುತ್ತಿದ್ದನು. ದೊಡ್ಡ ದೊಡ್ಡ ಪೆಟ್ಟಿಗೆಗಳಲ್ಲಿಯೂ ಉಕ್ಕಿನ ಖಜಾನೆಗಳಲ್ಲಿಯೂ ಹಣವನ್ನು ಸಂಗ್ರಹಿಸುತ್ತಿದ್ದ ಆ ಸಾಹುಕಾರನ ಮನೆಗೆ ಆ ಯತಿಯು ಆಹ್ವಾನಿಸಲ್ಪಟ್ಟನು. ಯತಿಯು ಅದಕ್ಕೆ ಕಾರಣವನ್ನು ಕೇಳಿದನು. ಆ ಸಾಹುಕಾರನು "ಸ್ವಾಮೀ! ನಿಮಗೆ ಯಾವ ಚಿಂತೆ ಯಿದೆ? ಜನರು ನಿಮಗೆ ಭಿಕ್ಷೆ ನೀಡಿ, ಯೋಗಕ್ಷೇಮ ವಹಿಸುತ್ತಾರೆ. ಅವರು ಹಾಗೆ ಮಾಡದಿದ್ದರೂ ನಿಮ್ಮ ದೇಹಕ್ಕೆ ನೀವು ಹುಲ್ಲು ಕಡ್ಡಿಯಷ್ಟು ಗಮನಕೊಡುವ ದಿಲ್ಲ. ಆದರೆ ನಾವು ಗೃಹಸ್ಥರು, ಕುಟುಂಬಿಗಳು, ಆಶ್ರಿತರನ್ನು ರಕ್ಷಣೆ ಮಾಡ ಬೇಕು. ಅತಿಥಿಗಳನ್ನು ಸತ್ಕರಿಸಬೇಕು, ಬ್ರಹ್ಮಚಾರಿಗಳಾದ ವಿದ್ಯಾರ್ಥಿಗಳನ್ನೂ ಮನೆಯ ಬಾಗಿಲಿಗೆ ಬಂದ ವಿರಕ್ತರನ್ನೂ ಸಂನ್ಯಾಸಿಗಳನ್ನೂ ಪೋಷಣೆಮಾಡಬೇಕು. ಇವೆಲ್ಲಾ ನಮ್ಮ ಧರ್ಮವಾಗಿವೆ. ಸರಕಾರಕ್ಕೆ ಹಣವನ್ನು ಕೊಡಬೇಕು; ಸಮಾಜ ಸೇವೆಗೂ ದೇಶಸೇವೆಗೂ ದಾನಮಾಡಬೇಕು; ವ್ಯವಹಾರದಲ್ಲಿ ಅನಿವಾರ್ಯವಾಗಿ ಬರುವ ಎಷ್ಟೋ ಕಷ್ಟನಷ್ಟಗಳನ್ನು ಪರಿಹರಿಸಿಕೊಳ್ಳಬೇಕು. ಹೆಚ್ಚಿನ ವ್ಯವಹಾರ ಕ್ಕಾಗಿಯೂ ವಿವಾಹಾದಿ ವಿಶೇಷ ಶುಭಾಶುಭ ಕರ್ಮಗಳಿಗಾಗಿಯೂ ಅನಿರೀಕ್ಷಿತ ವಾಗಿ ಬರಬಹುದಾದ ವಿಪತ್ತುಗಳಿಗಾಗಿಯೂ ಹೆಚ್ಚಿನ ಹಣವನ್ನು ಸಂಗ್ರಹಿಸಿಟ್ಟಿರ ಬೇಕು........" ಎಂದು ಮೊದಲಾಗಿ ತನ್ನ ನೂರಾರು ಆವಶ್ಯಕತೆಗಳನ್ನೆಲ್ಲಾ ಹೇಳಿ ಕೊಂಡನು. ಆ ಯತಿಯು ಸುಮ್ಮನಿದ್ದನು; ಮೌನವಾಗಿದ್ದನು. ಮರುದಿನ ಈ ಸಾಹುಕಾರನು ಆ ಯತಿಗಳ ಹಳೆಯ ಲೊಡ್ಡಾದ ಗುಡಿಸಲಿಗೆ ಹೋದನು. ಅವನು ಅಲ್ಲಿಗೆ ಬಂದಾಗ ಆ ಸಂನ್ಯಾಸಿಗಳು ಕಷ್ಟಪಟ್ಟು ಒಂದು ದೊಡ್ಡ ಗುಂಡಿಯನ್ನು ತೋಡಿ, ಅದರಲ್ಲಿ ದುಂಡಾದ ಕಲ್ಲುಗಳನ್ನು ಹಗಲೆಲ್ಲಾ ರಾಶಿ ರಾಶಿಯಾಗಿ ಹಾಕುತ್ತಿ ದ್ದರು. ಇದನ್ನು ನೋಡಿ ಸಾಹುಕಾರನು "ಸ್ವಾಮಿ! ಸ್ವಾಮಿ! ಇದೇನು ಮಾಡು ತ್ತಿದ್ದೀರಿ?" ಎಂದು ಆಶ್ಚರ್ಯಖೇದದಿಂದ ಕೇಳಿದನು. ಅದಕ್ಕೆ ಆ ಯತಿಗಳು "ಈ ಕಲ್ಲುಗಳು ಎಷ್ಟು ದುಂಡಗೆ ಎಷ್ಟು ಸುಂದರವಾಗಿವೆ! ಕಾಣುವದಿಲ್ಲವೆ? ಇವುಗಳ ನ್ನೆಲ್ಲಾ ಸಂಗ್ರಹಿಸುತ್ತಿದ್ದೇನೆ" ಎಂದರು. ಆ ಧನಿಕನು ನಕ್ಕು "ಅದನ್ನೇಕೆ ಸ್ವಾಮಿ, ಕೂಡಿಸುತ್ತಾ ಇದ್ದೀರಿ? ಇವೇನು ಅಪರೂಪವೇ? ಅಲ್ಲಿ ನೋಡಿ ಇಂಥಾ ಕಲ್ಲುಗಳ ದೊಡ್ಡದೊಂದು ಪರ್ವತವೇ ಇದೆ. ಇಷ್ಟು ಶ್ರಮಪಟ್ಟು ಇವುಗಳನ್ನೆಲ್ಲಾ ರಾಶಿ ಹಾಕಿದ್ದರಿಂದ ಏನು ಪ್ರಯೋಜನ? ಎಂದು ಕೇಳಿದನು. ಆ ಯತಿಗಳು "ಇವುಗಳ ಆವಶ್ಯಕತೆಯ ಕಾಲವು ಬರಬಹುದೆಂದು ಕೂಡಿ ಹಾಕುತ್ತಿದ್ದೇನೆ, ಅಷ್ಟರಲ್ಲಿ ಯಾವ ದಾದರೂ ದೊಡ್ಡ ಪ್ರವಾಹವು ಬಂದು ಆ ಪರ್ವತವನ್ನೇ ಕೊಚ್ಚಿಕೊಂಡು ಹೋಗ ಬಹುದು. ಆಗ ಏನು ಮಾಡಬೇಕು? ಅದಕ್ಕಾಗಿ ಈ ಕಲ್ಲುಗಳನ್ನೆಲ್ಲಾ ಕೂಡಿ ಹಾಕುತ್ತಿದ್ದೇನೆ." ಎಂದು ಹೇಳಿದರು. ಸಾಹುಕಾರ: "ಅದು ಹೇಗೆ ಸಾಧ್ಯ? ಸ್ವಾಮಿ, ಪರ್ವತವೇ ಕೊಚ್ಚಿ ಹೋಗುವದು ಸಾಧ್ಯವೆ? ಎಂಥಾ ಹುಚ್ಚು ಕಲ್ಪನೆ!" ಯತಿಗಳು:

20082

"ಮಹಾಶಯ ! ನೀನೇ ಈ ಪಾಠವನ್ನು ನನಗೆ ಕಲಿಸಿದ್ದು. ದೇವರು ನಿನಗೆ ಆಹಾರ ವನ್ನು ಒದಗಿಸದಿರುವ ಕಾಲವೇ ಬರುವದಿಲ್ಲ. ಬೆಳ್ಳಿ ಬಂಗಾರಗಳನ್ನು ವಿಪುಲವಾಗಿ ಸಂಗ್ರಹಿಸುವದರಲ್ಲಿಯೇ ನಿನ್ನ ಕಾಲವನ್ನೆಲ್ಲಾ ಶಕ್ತಿಯನ್ನೆಲ್ಲಾ ದುಂದುಮಾಡುವ ದರಲ್ಲಿ ಏನು ಪ್ರಯೋಜನ ? ಈಗ ನನ್ನಿಂದ ಒಂದು ಪಾಠವನ್ನು ಕಲಿ. ಲಕ್ಷ್ಯವಿ ಲ್ಲದೆ ಹೀಗೆ ಪೋಲು ಮಾಡುವದಕ್ಕೂ ಹಾಳು ಮಾಡುವದಕ್ಕೂ ಜೀವನವಿಲ್ಲ. ಅಲ್ಪವೂ ಕ್ಷುದ್ರವೂ ಆದ ಯೋಗಕ್ಷೇಮದ ಚಿಂತೆಗಾಗಿಯೂ ನಿರ್ವಹಣೆಗಾಗಿಯೂ ಬಾಳನ್ನು ಹಾಳು ಮಾಡಿಕೊಳ್ಳಬಾರದು".

೧೦೪. ನೈಜವಾದ ತ್ಯಾಗ

(ಚೂಡಾಲಾ ಮತ್ತು ಶಿಖಿಧ್ವಜ)

ಪತಿಪತ್ನಿಯರು ಎಂದೂ ಪ್ರತಿಗ್ರಹ ಮಾಡುವದರಲ್ಲಿ ಉತ್ಸುಕರಾಗದೆ, ಯಾವಾಗಲೂ ಪ್ರದಾನಮಾಡುವದರಲ್ಲಿಯೇ ಉತ್ಸಾಹಶೀಲರಾಗುವದರಲ್ಲಿ ಗೃಹ ಜೀವನಸುಖದ ರಹಸ್ಯವಿದೆ. ಆಗ ಇಬ್ಬರೂ ಸುಖಿಗಳಾದಿರುತ್ತಾರೆ. ಏನನ್ನು ಕೊಡಬೇಕು, ಎನ್ನುವದೇ ಈಗ ಪ್ರಶ್ನೆ. ಪತಿಪತ್ನಿಯರು ತಮ್ಮ ತಮ್ಮ ಯೋಗ್ಯತೆ ಯಲ್ಲಿ ಇರುವಷ್ಟು ಜ್ಞಾನವನ್ನು ಒಬ್ಬರಿಗೊಬ್ಬರು ಕೊಡಬೇಕಲ್ಲದೆ ಹೊರಗೂ ಕೊಡಬೇಕು. ಪತಿಪತ್ನಿಯರಲ್ಲಿ ಒಬ್ಬರು ಇನ್ನೊಬ್ಬರನ್ನು ಜ್ಞಾನನಿಷ್ಠೆಗೆ ಪಾತ್ರರನ್ನಾಗಿ ಮಾಡಲು ಎಷ್ಟೆಷ್ಟು ಹೆಚ್ಚಾಗಿ ಪರಿಶುದ್ಧರನ್ನು ಮಾಡುತ್ತಾರೋ ಅವರು ಅಷ್ಟಷ್ಟು ನಿಜವಾದ ಪತಿಪತ್ನಿಯರಾಗುತ್ತಾರೆ. ಇದೇ ವಿಶ್ವನಿಯಮ.

ಭಾರತದೇಶದಲ್ಲಿ ಶಿಖಿಧ್ವಜನೆಂಬ ರಾಜನಿದ್ದನು, ಅವನು ಸಮರ್ಥನಾದ ಚಕ್ರವರ್ತಿಯಾಗಿದ್ದನು. ಅವನು ವಿವೇಕಿಯೂ ವಿಚಾರಶೀಲನೂ ಇದ್ದುದರಿಂದ, ಪ್ರಪಂಚ ಜೀವನದಲ್ಲಿ ದುಃಖದೋಷಗಳನ್ನೇ ಕಂಡು ವಿರಕ್ತನಾದನು. ಸರ್ವ ಜಗತ್ತಿಗೂ ಕಾರಣನಾದ ಭಗವಂತನನ್ನು ಕಂಡು ಶಾಂತಿಯನ್ನು ಪಡೆಯುವದಕ್ಕಾಗಿ ತನ್ನ ಸಂಸಾರ ಜೀವನವನ್ನೂ ರಾಜ್ಯವನ್ನೂ ತ್ಯಾಗಮಾಡಿ ಅರಣ್ಯದ ಏಕಾಂತ ವಾಸದಲ್ಲಿ ತಪಸ್ಸನ್ನು ಮಾಡುವದು ಅವಶ್ಯವೆಂದು ಅವನಿಗೆ ತೋರಿತು.

ಅವನಿಗೆ ಚೂಡಾಲಾ ಎನ್ನುವ ಪತ್ನಿಯಿದ್ದಳು. ಆಕೆಯು ಸಾಧ್ವಿಯೂ ಸುಸಂಸ್ಕೃತಳೂ ವಿದ್ಯಾವತಿಯೂ ವಿವೇಕಿಯೂ ಭಗವದ್ಭಕ್ತಳೂ ಯೋಗಿನಿಯೂ ಆಗಿದ್ದಳು. ಆಕೆಯು ತನ್ನ ಪತಿಯ ಮನಸ್ಸ್ಥಿತಿಯನ್ನು ತಿಳಿದು,ಆಗಾಗ ಸಮಯೋ ಚಿತ, ವಿನಯದಿಂದ ತತ್ತ್ವಬೋಧೆ ಮಾಡುತ್ತಿದ್ದರೂ ಮಹಾರಾಣಿಯ ಮಾತಿನಲ್ಲಿ ಅವನಿಗೆ ವಿಶೇಷ ವಿಶ್ವಾಸವುಂಟಾಗಲಿಲ್ಲ. ಆಕೆಯು ಪತ್ನಿಯಾಗಿದ್ದುದರಿಂದ ಅವಳ ನಿಜವಾದ ಯೋಗ್ಯತೆಯನ್ನು ಅವನು ಅರಿತಿರಲಿಲ್ಲ. ಆಕೆಯು ಯಾವಾಗಲೂ ಉಲ್ಲಸಿತ ವೃತ್ತಿಯವಳೂ ಸಂತೋಷಚಿತ್ತಳೂ ಆನಂದಪೂರ್ಣಳೂ ಲಾವಣ್ಯ ವತಿಯೂ ಇದ್ದುದರಿಂದ ಆ ಮಹಾರಾಜನು ಆಕೆಯಲ್ಲಿ ಅಸಾಧಾರಣವಾದ ತೇಜಸ್ಸನ್ನು

ಮಾತ್ರ ಕಂಡು ಮುಗ್ಧನಾಗುತ್ತಿದ್ದನು. ಭಗವಂತನ ಸಾಕ್ಷಾತ್ಕಾರವೆಂಬ ಮಹೋನ್ನತ ಸಾಧನ ಪಥದಲ್ಲಿ ಆಕೆಯೂ ಮಾರ್ಗದರ್ಶಿಯಾಗಬಲ್ಲಳೆಂಬುದನ್ನು ಅವನು ಅರಿತಿರಲಿಲ್ಲ.

ಶಿಖಿಧ್ವಜ ಮಹಾರಾಜನು, ತನ್ನ ಪತ್ನಿಗೂ ಯಾರಿಗೂ ತಿಳಿಯದಂತೆ ಒಂದು ಮಧ್ಯರಾತ್ರಿಯಲ್ಲಿ ರಾಜ್ಯವನ್ನು ತ್ಯಾಗಮಾಡಿ ಹಿಮಾಲಯಕ್ಕೆ ಹೊರಟುಹೋದನು. ತನ್ನ ಪತಿಯು ರಾಜ್ಯವನ್ನು ತ್ಯಾಗಮಾಡಿ ತಪಸ್ಸಿಗೆ ಹೋದ ಕಾರಣವನ್ನು ತಿಳಿದ ಚೂಡಾಲೆಯು ತಾನೇ ರಾಜ್ಯಭಾರವನ್ನು ವಹಿಸಿ ದಕ್ಷತೆಯಿಂದಲೂ ಚಾತುರ್ಯದಿಂದಲೂ ನಡೆಸುತ್ತಿದ್ದಳು. ಶಿಖಿಧ್ವಜನು ಹಿಮಾಲಯದ ಅರಣ್ಯಗಳಲ್ಲಿ ಅನೇಕ ವರ್ಷಗಳು ತಪಸ್ಸು ಮಾಡಿಕೊಂಡಿದ್ದನು.

ಅಷ್ಟು ವರ್ಷಗಳ ತಪಸ್ಸಿನಿಂದ ತನ್ನ ಪತಿಯ ಮನಸ್ಸು ಪರಿಶುದ್ಧವೂ ಪರಿಪಕ್ವವೂ ಆಗಿರಬಹುದೆಂದು ಯೋಚಿಸಿ ಚೂಡಾಲೆಯು ಅವನಿಗೆ ತತ್ತ್ವೋಪದೇಶ ಮಾಡಿ ಶಾಂತಿಸುಖಗಳ ನೆಲೆಯನ್ನು ತಿಳಿಸಬೇಕೆಂದು ಒಂದು ಉಪಾಯವನ್ನು ಮಾಡಿದಳು, ತನ್ನ ನಿಜರೂಪದಿಂದ ತೋರಿಕೊಂಡರೆ ಅವನಿಗೆ ವಿಶ್ವಾಸವುಂಟಾಗಲಾರದೆಂದೂ ವೈರಾಗ್ಯದ ಭರದಲ್ಲಿ ತಿರಸ್ಕಾರವೇ ಹುಟ್ಟಬಹುದೆಂದೂ ಭಾವಿಸಿ, ಸಂನ್ಯಾಸಿಯ ವೇಷದಲ್ಲಿ ಪತಿಯ ತಪೋವನದಲ್ಲಿ ಕಾಣಿಸಿಕೊಂಡಳು. ಬಹಳ ಹೊತ್ತು ಧ್ಯಾನಸ್ಥನಾಗಿ ಕುಳಿತಿದ್ದ ಶಿಖಿಧ್ವಜನು, ಬಾಹ್ಯಜ್ಞಾನವು ಬಂದು, ಕಣ್ಣು ತೆರೆದು ನೋಡಿ ತನ್ನ ಎದುರಿಗೇ ನಿಂತಿದ್ದ ಅಪೂರ್ವ ತೇಜಸ್ವಿಯಾದ ಆ ಮಹಾ ಯತೀಶ್ವರನನ್ನು ಕಂಡು ಆಶ್ಚರ್ಯಾನಂದದಿಂದ ಥಿಗ್ಗನೆದ್ದು ನಮಸ್ಕರಿಸಿ, ಭಯಭಕ್ತಿಯಿಂದ ಆ ಮಹಾತ್ಮನ ಪಾದಗಳ ಮೇಲೆ ಪುಷ್ಪಾಂಜಲಿಯನ್ನು ಅರ್ಪಿಸಿ, "ನಾರಾಯಣಸ್ವರೂಪಿಗಳಾದ ತಾವು ಯಾರೋ ತಿಳಿಯದು; ಆದರೆ, ದೇವರೇ ನನ್ನನ್ನು ಅನುಗ್ರಹಿಸಲು, ತಮ್ಮಲ್ಲಿ ಮೂರ್ತೀಭವಿಸಿ ಬಿಜಯ ಮಾಡಿಸಿದಂತೆ ತೋರುತ್ತದೆ." ಎಂದನು.

ಆ ಮಹಾತ್ಮನು, "ಮಹಾರಾಜ, ನಿಜಾನಂದ ಪ್ರಾಪ್ತಿಗಾಗಿ ನೀನು ಇಷ್ಟೆಲ್ಲಾ ಶ್ರಮಪಟ್ಟು ತಪಸ್ಸು ಮಾಡುತ್ತಿದ್ದಿ; ಪೂರ್ಣಾನಂದವನ್ನು ನೀನು ಅನುಭವಿಸಬೇಕಾದರೆ ಸರ್ವಸ್ವವನ್ನೂ ಸಂಪೂರ್ಣವಾಗಿ ತ್ಯಾಗಮಾಡಬೇಕು." ಎಂದನು. ಮಹಾರಾಜನಿಗೆ ಆಶ್ಚರ್ಯವಾಯಿತು; "ಮಹಾತ್ಮಾ, ನಾನು ಸಾಮ್ರಾಜ್ಯವನ್ನೂ ಸರ್ವಸಂಪತ್ತನ್ನೂ ಮಹಾಲಕ್ಷ್ಮಿಯಂಥ ಪತ್ನಿಯನ್ನೂ ಪುತ್ರರನ್ನೂ ಪರಿತ್ಯಾಗಮಾಡಿ ಬಂದಿದ್ದೇನೆ." ಎಂದನು. ಆ ಮಹಾತ್ಮನು, ' "ನೀನು ಏನನ್ನೂ ತ್ಯಾಗಮಾಡಿಲ್ಲ" ಎಂದನು, ಅವನು ದಿಗ್ಭ್ರಾಂತನಾದನು. "ಇದೇನು ಹೀಗೆ ಹೇಳುತ್ತೀರಿ? ನಾನು ರಾಜ್ಯವನ್ನೂ ಕುಟುಂಬವನ್ನೂ ಬಿಟ್ಟು ಬಂದಿಲ್ಲವೆ?" ಎಂದನು. ಆ ಮಹಾತ್ಮನೆಂದನು "ಇಲ್ಲ, ಇಲ್ಲ, ನೀನು ತ್ಯಾಗಮಾಡದಿರುವುದು ಇನ್ನೂ ನಿನ್ನಲ್ಲಿ

ಉಳಿದಿಲ್ಲವೆ? ಎಲ್ಲಿಯವರೆಗೆ ನೀನು ಒಂದು ವಸ್ತುವನ್ನು ಹೊಂದಿದ್ದೀಯೋ ಅಲ್ಲಿಯ ವರೆಗೆ ಅದೂ ನಿನ್ನನ್ನು ಹೊಂದಿರುತ್ತದೆ. ಕ್ರಿಯೆ - ಪ್ರತಿಕ್ರಿಯೆಗಳು ಪರಸ್ಪರ ವಿರುದ್ಧವೂ ಸರಿಸಮವೂ ಆಗಿವೆ. 'ರಾಜ್ಯವನ್ನು ಬಿಟ್ಟು ಬಂದರೂ ಈ ಕುಟೀರವೂ ದಂಡಕಮಂಡಲಗಳೂ ಮಾತ್ರ ನನ್ನವಾಗಿ ಉಳಿದಿವೆ,' ಎಂದು ಹೇಳುತ್ತಿ. ನೀನು ಒಂದು ವಸ್ತುವಿನಿಂದ ಹೊಂದಲ್ಪಡದೆ, ಅದನ್ನು ನೀನು ಹೊಂದುವಂತಿಲ್ಲ. ನೀನು ಒಂದರ ಸ್ವತ್ತಾದ ಹೊರತು, ಅದು ನಿನ್ನ ಸ್ವತ್ತಾಗುವಂತಿಲ್ಲ."

ಆಗ ಶಿಖಿಧ್ವಜನು ಪೂರ್ಣತ್ಯಾಗವನ್ನು ಸಾಧಿಸುವ ಆವೇಶದಿಂದ ಎದ್ದು ತನ್ನ ಕುಟೀರವನ್ನೆಲ್ಲಾ ಎಳೆದೆಳೆದು ಒಟ್ಟಿ ರಾಶಿಹಾಕಿ ಸುಟ್ಟನು. ತನ್ನ ದಂಡವನ್ನು ನದಿಯಲ್ಲಿ ಎಸೆದನು. ಕಮಂಡಲವನ್ನೂ ಜಪಸರವನ್ನೂ ತನ್ನ ಎಲ್ಲಾ ತಪಸ್ಸಾಮಗ್ರಿಗಳನ್ನೂ ಕುಟೀರದ ಬೆಂಕಿಯಲ್ಲಿಯೇ ಸುಟ್ಟುಹಾಕಿದನು. ಶಿಖಿಧ್ವಜನು "ಮಹಾತ್ಮಾ! ಈಗಲಾದರೂ ನಾನು ಸರ್ವಸ್ವತ್ಯಾಗ ಮಾಡಿದ್ದೇನೋ ಇಲ್ಲವೋ ಹೇಳು. ಈಗ ನಾನು ಸರ್ವವನ್ನೂ ತ್ಯಾಗಮಾಡಿರುವುದರಿಂದ ಕೇವಲ ಪರಿಶುದ್ಧನೂ ಜ್ಞಾನಿಯೂ ಆಗಿದ್ದೇನೆ; ಅತಿಶಯ ಶಾಂತನೂ ಸುಖಿಯೂ ಆಗಿದ್ದೇನೆ. ನಾನೀಗ ದಿಗಂಬರನಾಗಿದ್ದೇನೆ. ದೇವಾ! ಪೂರ್ಣತ್ಯಾಗದಲ್ಲಿ ಈಗ ಉಳಿದಿರುವದಾದರೂ ಏನು? ಹೇಳು." ಎಂದು ಕೇಳಿದನು.

ಇದಕ್ಕೆ ಆ ಮಹಾತ್ಮನು (ಚೂಡಾಲೆಯು) "ರಾಜಾ! ನೀನು ಈಗಲೂ ಕೂಡ ಸರ್ವತ್ಯಾಗವನ್ನು ಮಾಡಿಲ್ಲ. ಈ ಮೂರೂವರೆ ಮೊಳದುದ್ದ ಮಣ್ಣಿನ ದೇಹವನ್ನು ಇನ್ನೂ ನಿನ್ನದೆಂದೇ ತಿಳಿದಿದ್ದಿ. ಅಡವಿಯ ವಸ್ತುಗಳನ್ನು ತಂದು ಕಟ್ಟಿಕೊಂಡಿದ್ದ ಕುಟೀರವು ಎಂದೂ ನಿನ್ನದಾಗಿರಲಿಲ್ಲ. ಅವುಗಳನ್ನು ನೀನು ಸುಟ್ಟಿದ್ದು ತಪ್ಪು; ಅದರಿಂದ ನೀನು ಏನನ್ನೂ ಗಳಿಸಿದಂತಾಗಲಿಲ್ಲ. ಸರ್ವತ್ಯಾಗದಿಂದಾಗುವ ಆನಂದವನ್ನು ವ್ಯರ್ಥವಾಗಿ ನಟನೆಮಾಡಿ ತೋರಿಸುತ್ತಿದ್ದಿ. ನೀನು ಬಿಡದಿರುವ ಉತ್ತಮ ಭಾಗವು ಈಗಲೂ ನಿನ್ನಲ್ಲಿಯೇ ಇದೆ. ಅದೊಂದನ್ನು ಬಿಟ್ಟರೆ ಎಲ್ಲವನ್ನೂ ಬಿಟ್ಟಂತಾಗುತ್ತದೆ; ನೀನು ಶೋಕರಹಿತನಾಗುತ್ತಿ." ಎಂದು ಹೇಳಿದನು.

ಆಗ ರಾಜನು ತನ್ನೊಳಗೇ ವಿಚಾರಮಾಡಿ "ದಿವ್ಯಾತ್ಮಾ! ತಿಳಿಯಿತು; ಸರ್ವತ್ಯಾಗದಲ್ಲಿ ಈ ದೇಹ ಒಂದೇ ಉಳಿದಿದೆ; ಒಳ್ಳೆಯದು, ಈ ಉರಿಯುತ್ತಿರುವ ಬೆಂಕಿಯಲ್ಲಿ ಹಾರಿಕೊಂಡು ಸರ್ವತ್ಯಾಗವನ್ನು ಸಾಧಿಸುತ್ತೇನೆ." ಎಂದು ಹೇಳಿ ಆವೇಶದಿಂದ ಎದ್ದು ಬೆಂಕಿಯಲ್ಲಿ ಹಾರಿಕೊಳ್ಳಲು ಹೊರಟನು. ಆಗ ಚೂಡಾಲೆಯು ಅವನನ್ನು ತಡೆದು, "ರಾಜಾ, ನಿಲ್ಲು, ಈಗ ನಿನ್ನ ದೇಹವು ಪೂರಾ ಸುಟ್ಟು ಹೋಯಿತೆಂದು ತಿಳಿ. ಆಗ ಉಳಿಯುವದೇನು ?" ಎಂದು ಕೇಳಿದಳು.

ರಾಜಾ.—"ಉಳಿಯುವದೇನು, ಬೂದಿ; ಹಿಡಿ ಬೂದಿ ಉಳಿಯುತ್ತದೆ."

ಚೂಡಾಲಾ.—"ಯಾರ ಬೂದಿ ?"

ರಾಜಾ.—"ನನ್ನ ಬೂದಿ."

ಚೂಡಾಲಾ.—"ಓ, ನೋಡು, ಹಾಗಾದರೆ ಆ ಬೂದಿಯು ನಿನ್ನ ಆಸ್ತಿ, ಸ್ವತ್ತು; ಆದ್ದರಿಂದ ನೀನು ಬೂದಿಯ ಆಸ್ತಿ, ಸ್ವತ್ತು. ಬೂದಿಯು ನಿನಗೆ ಸೇರಿದ್ದಾದರೆ, ನೀನು ಬೂದಿಗೆ ಸೇರಿದವನು. ಬೆಂಕಿಯಲ್ಲಿ ಬಿದ್ದು ದೇಹವನ್ನು ಸುಟ್ಟು ಬೂದಿ ಮಾಡಿಕೊಂಡರೂ ನಿನಗೆ ತ್ಯಾಗವು ಸಿದ್ಧಿಸಲಿಲ್ಲ."

ರಾಜಾ.—(ರಾಜನು ಗಾಢಚಿಂತಾ ಮಗ್ನನಾಗಿ,) "ಆಹಾ! ಹೇಗೆ ತ್ಯಾಗಮಾಡಲಿ? ಏನನ್ನು ತ್ಯಾಗಮಾಡಲಿ?"

ಚೂಡಾಲಾ.—"ರಾಜಾ, ಇದು ಯಾರ ದೇಹ?"

ರಾಜಾ.— "ಇದು ನನ್ನ ದೇಹ"

ಚೂಡಾಲಾ.—"ನಿನ್ನ ಯಾವ ವಸ್ತುವೂ ಹೇಗೆ ನೀನಲ್ಲವೋ, ಹಾಗೆ ನಿನ್ನದೆನ್ನುವ ದೇಹವೂ ನೀನಲ್ಲ. ಈ ದೇಹವು ನಾನು ಎನ್ನುವ ಭ್ರಮೆಯನ್ನು, ತಪ್ಪು ತಿಳಿವಳಿಕೆಯನ್ನು ತ್ಯಾಗ ಮಾಡು. ಅದು ನೀನೂ ಅಲ್ಲ; ಅದು ನಿನ್ನದೂ ಅಲ್ಲ. ಹಾಗೆಯೇ ಇಂದ್ರಿಯಗಳೂ ಮನಸ್ಸೂ ಬುದ್ಧಿಯೂ ಯಾವದೂ ನೀನೂ ಅಲ್ಲ; ಅವು ನಿನ್ನವೂ ಅಲ್ಲ. ಅವು ನಿನ್ನವಾದರೆ, ಜಗತ್ತಿನಲ್ಲಿರುವ ಎಲ್ಲಾ ದೇಹಗಳೂ ಎಲ್ಲಾ ಮನಸ್ಸೂ ನಿನ್ನವೇ ಆಗಬೇಕು. ಆದ್ದರಿಂದ ಯಾವದೂ ನೀನಲ್ಲ; ನಿನ್ನದಲ್ಲ. ಮನಸ್ಸೂ ಈ ಅಹಂಕಾರವೂ ನಾನು, ಎನ್ನುವ ಅಜ್ಞಾನವನ್ನೂ ಭ್ರಮೆಯನ್ನೂ ತ್ಯಾಗಮಾಡಬೇಕು."

ರಾಜಾ.—"ಈ ದೇಹ, ಇಂದ್ರಿಯ, ಮನಸ್ಸು, ಬುದ್ಧಿ, ಅಹಂಕಾರ ಇವು ಯಾವವೂ ನಾನಲ್ಲವಾದರೆ, ನನ್ನ ಸ್ವರೂಪವೇನು? ನಿಜವಾದ ನಾನು ಯಾರು?"

ಚೂಡಾಲಾ.—"ಇದನ್ನೇ ವಿಚಾರಮಾಡಬೇಕು. ಚಿತ್ತವೇ ವಿವರ್ತವಾಗಿ—ಮಿಥ್ಯಾ ಪರಿಣಾಮವಾಗಿ-ಜಗದ್ರೂಪದಿಂದ ತೋರುತ್ತದೆ. ಮಹಾತ್ಯಾಗಿಗಳಾದ ಮಹಾತ್ಮರು ಚಿತ್ತತ್ಯಾಗವನ್ನೇ ಸರ್ವತ್ಯಾಗವೆನ್ನುತ್ತಾರೆ. ಚಿತ್ತದ ತ್ಯಾಗವನ್ನು ಮಾಡಿಬಿಟ್ಟರೆ ಪರಮ ಶಾಂತವೂ ನಿರ್ಮಲವೂ ಆನಂದವೂ ಚಿನ್ಮಾತ್ರ ಸ್ವರೂಪವೂ ಆದ ಆತ್ಮನ ಅನುಭವವಾಗುತ್ತದೆ.

"ಈ ದೇಹವೂ ನಿರ್ಮಲವಾದ ಮನಸ್ಸೂ ಇದ್ದರೆ, ವಿಚಾರಮಾಡಿ ನಿಜಾತ್ಮನ ಅನುಭವವನ್ನು ಪಡೆಯಬಹುದು. ಆದ್ದರಿಂದ ಒಂದು ವೇಳೆ ನೀನು ಶರೀರವನ್ನು ಬಿಟ್ಟರೂ ಸರ್ವತ್ಯಾಗವಾಗಲಾರದು. ಈ ಶರೀರವನ್ನು ಕಳೆದುಕೊಂಡು ಮೇಲೆ ಜ್ಞಾನ ಸಾಧನೆಗೆ ಅನುಕೂಲವಾದ ಮತ್ತೊಂದು ಅಧಿಕಾರಸಂಪನ್ನ ಶರೀರವು ಬರುವದೆಂಬ ಭರವಸೆಯಿಲ್ಲ; ಇದರಿಂದ ಸರ್ವತ್ಯಾಗವು ಮತ್ತಷ್ಟು ದುರ್ಲಭವೇ

ಆದೀತು. ನೀರು ತೆರೆನೊರೆಗಳಾದಂತೆ ವಿಚಿತ್ರವಾಸನಾಯುಕ್ತಚಿತ್ತವೇ ಅಹಂ ಭಾವಾದಿ ವಿಲಾಸದಿಂದ ವಿವರ್ತವಾಗುತ್ತದೆ ; ಸುಳ್ಳು ಪರಿಣಾಮವಾಗುತ್ತದೆ. ರಾಜಾ, ನೀನು ಯಾವ ಅಹಂಕಾರದ ಯೋಗದಿಂದ ಎಲ್ಲವನ್ನೂ ತ್ಯಾಗಮಾಡಿದ್ದೀಯೋ ಆ ಅಹಂಕಾರವನ್ನೂ ತ್ಯಾಗಮಾಡು; ನಾನು ತ್ಯಾಗ ಮಾಡಿದ್ದೇನೆ ಎಂಬ ರೂಪದ ಅಭಿಮಾನವನ್ನೂ ಬಿಟ್ಟು ವಿಮುಕ್ತನಾಗು.

“ಅನುಕಂಪವು, ದಯೆಯು ದಾನಶೀಲತೆಯು, ಧರ್ಮಬುದ್ಧಿಯು, ತ್ಯಾಗ ಗುಣವು ಮೊದಲು ಮನೆಯಲ್ಲಿ ಪ್ರಾರಂಭವಾಗಬೇಕೆಂದು ಹೇಳುತ್ತಾರೆ. ಆದ್ದರಿಂದ ನಮಗೆ ಅತ್ಯಂತ ಸಮೀಪವೂ ಅತ್ಯಂತ ಪ್ರಿಯವೂ ಆದ ವಸ್ತುಗಳನ್ನು ಮೊದಲು ತ್ಯಾಗಮಾಡಬೇಕು. ಆತ್ಮನಿಗೆ ಅತ್ಯಂತ ಸಮೀಪವೂ ಅತ್ಯಂತ ಪ್ರಿಯವೂ ಆದುದು ‘ನಾನು, ನಾನು’ ಎಂದು ಪ್ರತಿಯೊಂದರಲ್ಲಿಯೂ ತೋರಿಕೊಳ್ಳುವ ಸುಳ್ಳು ಅಹಂ ಕಾರ. ಈ ‘ನಾನು’ ನಿಜವಾದ ನಾನಲ್ಲ, ಆತ್ಮನಲ್ಲ. ಆದರೆ ಇದನ್ನೇ. ಆತ್ಮನೆಂದು ಭ್ರಮಿಸಿರುವದರಿಂದ ಎಲ್ಲಾ ಸಂಸಾರ ದುಃಖವೂ ಬಂಧವೂ ಉಂಟಾಗಿದೆ. ಈ ಸುಳ್ಳು ನಾನೇ ಸರ್ವಸಂಸಾರಕ್ಕೆ ಕಾರಣವಾಗಿದೆ. ಇದು ಬುದ್ಧಿಯನ್ನೂ ಮನಸ್ಸನ್ನೂ ಪ್ರಾಣವನ್ನೂ ಇಂದ್ರಿಯಗಳನ್ನೂ ದೇಹವನ್ನೂ ಅಭಿಮಾನಿಸಿ, ಬುದ್ಧಿಯು ನಾನು, ಮನಸ್ಸು ನಾನು,.........ದೇಹವು ನಾನು ಎಂದು ತೋರಿಕೋಳ್ಳುತ್ತಿದೆ. “ನಾನು ಈ ಕರ್ಮವನ್ನು ಮಾಡುತ್ತೇನೆ” ನಾನು ಈ ಫಲವನ್ನು ಭೋಗಿಸುತ್ತೇನೆ, ಅನುಭವಿಸು ತ್ತೇನೆ ಎಂಬೀ ರೀತಿಯಲ್ಲಿ ಈ ಸುಳ್ಳು ನಾನು ತೋರಿಕೊಂಡು ಸಂಕಟಪಡಿಸುತ್ತಿದೆ. ಹೀಗೆ ಸರ್ವ ಅನರ್ಥಗಳಿಗೂ ಮೂಲಕಾರಣವಾದ ಈ ಸುಳ್ಳು ಅಹಂಕಾರವನ್ನು ನಾವು ಮೊದಲು ತ್ಯಾಗಮಾಡಬೇಕು. ನಿಜವಾದ ಆತ್ಮಸ್ವರೂಪವನ್ನು ತಿಳಿಯುದಿರುವ ಅಜ್ಞಾನವೇ ಈ ಅಹಂಕಾರವಾಗಿದೆ. ಈ ತೋರಿಕೆಯ ಅಹಂಕಾರವು ಸುಳ್ಳು, ನಿಜವಲ್ಲ ಎಂದು ಅರಿತಕೂಡಲೇ ಅದು ನಾಚಿ ಮೈಗರೆಯುತ್ತದೆ. ಆದರೆ ಮತ್ತೆ ಮತ್ತೆ ಅದು ತಲೆಯೆತ್ತಿ ನಾಚಿಕೆಯಿಲ್ಲದೆ ತೋರಿಕೊಳ್ಳುತ್ತಿರುತ್ತದೆ ; ಮತ್ತೆ ಮತ್ತೆ ಅದನ್ನು ಗುರುತಿಸಿ ಅರಿಯುತ್ತಿರಬೇಕು. ಆ ಎಚ್ಚರದರಿವು ಯಾವಾಗಲೂ ಬೆಳಗುತ್ತಿರಬೇಕು. ಸರ್ವಕ್ಕೂ ಸರ್ವದಾ ಸಾಕ್ಷಿಯಾದ ಚೈತನ್ಯವೇ (ಅರಿವೇ) ನಾನು ಎಂದು ನಿಶ್ಚಯಿಸು ವದರಿಂದ ಅಹಂಕಾರದ ತ್ಯಾಗವಾಗುತ್ತದೆ. ನನ್ನ ದೇಹ, ನನ್ನ ಮನಸ್ಸು, ನನ್ನ ಹೆಂಡತಿ, ನನ್ನ ಗಂಡ, ನನ್ನ ಮಕ್ಕಳು, ನನ್ನ ವಸ್ತುವಾಹನಗಳು, ನನ್ನ ಮನೆ, ನನ್ನ ಐಶ್ವರ್ಯ, ಅಧಿಕಾರ ಇವೇ ಮೊದಲಾದ ಅಭಿಮಾನಗಳನ್ನು ಬಿಟ್ಟ ಹೊರತು ಆತ್ಮಾನುಭವವಾಗುವದಿಲ್ಲ.”

ಆ ಮಹಾತ್ಮನ ಈ ದಿವ್ಯಬೋಧೆಯನ್ನು ಕೇಳ ಕೇಳುತ್ತಾ ತಪಸ್ವಿಯಾದ ಶಿಖಿಧ್ವಜನ ನಿರ್ಮಲ ಚಿತ್ತವು ಆತ್ಮಸ್ವರೂಪದಲ್ಲಿ ಕರಗಿಹೋಯಿತು.

ಹೀಗೆ ಚೂಡಾಲೆಯು ಕೆಲವು ಕಾಲ ಆ ಯೋಗಿಯ ವೇಷದಿಂದ ರಾಜನ ಜೊತೆಗೇ ಇದ್ದುದರಿಂದ ರಾಜನ ಆತ್ಮಾನುಭವವು ಬೆಳೆಯುತ್ತಾ ಹೋಯಿತು.

ಆದರೆ, ದೇವತಾಸ್ತ್ರೀಯಾದ ಚೂಡಾಲೆಯ ಮಹಾ ಸಮಸ್ಯೆಯಲ್ಲಿ ಅರ್ಧ ಭಾಗವು ಮಾತ್ರ ಪರಿಹಾರವಾಗಿತ್ತು. ತನ್ನ ಪತಿಯನ್ನು ಪೂರ್ಣ ತತ್ತ್ವಜ್ಞಾನಿಯನ್ನಾಗಿ ಮಾಡಬೇಕಾಗಿದ್ದ ಪಾರಮಾರ್ಥಿಕಕರ್ತವ್ಯವು ಮಾತ್ರ ಸಾಧಿಸಿತ್ತು. ಆ ಮಹಾಪುರುಷನಿಗೆ ಪತ್ನಿಯಾದ ತನ್ನಲ್ಲಿ ವಿಶ್ವಾಸವನ್ನು ಹುಟ್ಟಿಸಿ, ಕ್ಷಾತ್ರಧರ್ಮವಾದ ರಾಜ್ಯ ಪರಿಪಾಲನ ಮಾಡುವ ಲೋಕಸಂಗ್ರಹ ಕಾರ್ಯವನ್ನು ಆತನು ನೆರವೇರಿಸುವಂತೆ ಮಾಡಬೇಕಾಗಿದ್ದ ಪ್ರಾಪಂಚಿಕ ಕರ್ತವ್ಯವನ್ನು ಆಕೆಯು ಸಾಧಿಸಬೇಕಾಗಿತ್ತು. ರಾಜನಿಗೆ ತಾರಕಗುರುವಾಗಿ, ಪರಮಪೂಜ್ಯನೆನಿಸಿದ್ದ ಆ ಯೋಗಿಯೇ ತಾನೆಂದು ಚೂಡಾಲೆಯು ಮೊದಲು ಪ್ರಕಟಪಡಿಸಬೇಕಾಗಿತ್ತು. ಅನಂತರ ತನ್ನಲ್ಲಿ ರಾಜನಿಗೆ ರತಿವುಂಟಾಗುವಂತೆ ಚೂಡಾಲೆಯು ಮಾಡಬೇಕಾಗಿತ್ತು. ಆದ್ದರಿಂದ ಚೂಡಾಲೆಯು ಬಹಳ ಚಾತುರ್ಯದಿಂದಲೂ ಉಪಾಯಾಂತರದಿಂದಲೂ ಕೆಲವು ಕಾಲದ ಮೇಲೆ ಆ ಯತಿಯು ತಾನೇ ಎಂದು ರಾಜನಿಗೆ ಆಶ್ಚರ್ಯಪ್ರೇಮಗಳು ಉಂಟಾಗುವಂತೆ ತೋರಿಸಿಕೊಂಡಳು.

ಆ ಅರಣ್ಯದಲ್ಲಿಯೇ ರಾಜನ ಜೊತೆಗೆ ಚೂಡಾಲೆಯು ಕೆಲವು ಕಾಲ ಸುಖವಾಗಿ ವಾಸಮಾಡುತ್ತಿರಲು, ಅವನ ನಿರಭಿಮಾನತೆಯನ್ನು ಪರೀಕ್ಷಿಸುವದಕ್ಕಾಗಿ ಆಕೆಯು ಒಂದು ದಿನ ಒಂದು ಉಪಾಯವನ್ನು ಮಾಡಿದಳು.

ಒಂದು ರಾತ್ರಿ, ಚಂದ್ರೋದಯವಾದಾಗ, ಶಿಖಿಧ್ವಜನು ಸಮೀಪದಲ್ಲಿರುವ ನದೀ ತೀರದಲ್ಲಿ ಸಂಧ್ಯೋಪಾಸನೆ ಮಾಡಿ ಎದ್ದು ಬಂದಾಗ, ಸಮೀಪದ ವನಸ್ಥಲಿಯಲ್ಲಿದ್ದ ಒಂದು ಪುಷ್ಪಾಲಂಕೃತ ಲತಾಗೃಹದಲ್ಲಿ, ಶಿಲಾಫಲಕದ ಮೇಲೆ, ಕುಸುಮ ಶಯ್ಯೆಯಲ್ಲಿ ಸುಂದರ ತರುಣನೋರ್ವನನ್ನು ದೃಢಾಲಿಂಗನ ಮಾಡಿಕೊಂಡು ಮಲಗಿರುವಂತೆ ತೋರಿಸಿಕೊಂಡಳು. ಶಿಖಿಧ್ವಜನಿಗೆ, ಅವರಿಬ್ಬರೂ ಕಾಮಾತುರತೆಯಿಂದ ನಿರ್ಭಯರೂ ನಿರ್ಲಜ್ಜರೂ ಆಗಿರುವಂತೆ ತೋರಿತು. ಆನಂದಭರದಲ್ಲಿರುವ ಅವರ ಭೋಗಸುಖಕ್ಕೆ ಭಂಗ ತರಬಾರದೆಂದೂ ಅವರವರ ಮನೋರಥವನ್ನು ಪೂರ್ಣ ಮಾಡಿಕೊಳ್ಳುವದಕ್ಕೆ ಅವರವರು ಸ್ವತಂತ್ರರೆಂದೂ ಭಾವಿಸಿ ರಾಜನು ಆ ಲತಾ ಗೃಹದಿಂದ ಹೊರಗೆ ಬಂದು ಕ್ರೋಧವನ್ನು ಜಯಿಸಿ ಸ್ವಸ್ಥ ಮನಸ್ಸಿನಿಂದ ಕುಳಿತನು.

ಅನಂತರ ಸ್ವಲ್ಪ ಹೊತ್ತಿನಲ್ಲಿಯೇ ವಿಲಾಸದಿಂದ ಬಳಲಿದ ಶರೀರವುಳ್ಳವಳಂತೆ ಚೂಡಾಲೆಯು ರಾಜನ ಹತ್ತಿರ ಬಂದು, ಲಜ್ಜಿತಳೂ ಖಿನ್ನಳೂ ಆಗಿ, "ಮಹಾರಾಜ! ಚಂಚಲವೂ ಚಪಲವೂ ಆದ ಸ್ತ್ರೀಸ್ವಭಾವಕ್ಕೆ ಅನುಗುಣವಾಗಿ ನನ್ನಿಂದ ಅಪರಾಧವಾಯಿತು. ನಾನು ವನಮಧ್ಯದಲ್ಲಿ ಮಧುರವಾದ ಬೆಳ್ದಿಂಗಳಿನಲ್ಲಿ ಏಕಾಂತದಲ್ಲಿರುವದನ್ನೂ ನೀನು ದೂರದಲ್ಲಿ ಧ್ಯಾನಸ್ಥನಾಗಿರುವದನ್ನೂ ನೋಡಿದ ಆ ಸುಂದರ

ಕಾಮುಕನು ನನ್ನನ್ನು ಪ್ರಾರ್ಥಿಸಿದನು. ಅಬಲೆಯಾದ ನಾನು ಆಗ ಅವನನ್ನು ತಿರಸ್ಕರಿಸದವಳಾದೆ. ನನ್ನ ಮೇಲೆ ದಯವಿಟ್ಟು ಕೋಪಮಾಡಿಕೊಳ್ಳದೆ ಕ್ಷಮಾ ಮಾಡಬೇಕು. ಸಾಧು ಪುರುಷರು ಸರ್ವದಾ ಕ್ಷಮಾಶೀಲರಲ್ಲವೆ ?" ಎಂದಳು.

ಶಿಖಿಧ್ವಜ, "ಓ ಬಾಲೆ, ಆಕಾಶವಲ್ಲಿಯ ವೃಕ್ಷದಂತೆ ನನ್ನಲ್ಲಿ ಕ್ರೋಧದ ಅತ್ಯಂತ ಅಭಾವವಿದೆ. ಪ್ರೇಮವೇ ನಮ್ಮ ಸ್ವರೂಪವಾದುದರಿಂದ ಯಾವ ಕಾಲಕ್ಕೂ ಯಾವ ಕಾರಣದಿಂದಲೂ ನನ್ನ ಪ್ರೇಮಕ್ಕೆ ಚ್ಯುತಿ ಬರುವದಿಲ್ಲ. ಪೂರ್ಣಿಮಾ ಪೂರ್ಣಚಂದ್ರನು ಒಳ್ಳೆಯವರಿಗೂ ಕೆಟ್ಟವರಿಗೂ ಸಮವಾಗಿ ತನ್ನ ಮಧುರವಾದ ಬೆಳ್ದಿಂಗಳಿಂದ ಸರ್ವದಾ ಆಹ್ಲಾದಪಡಿಸುವಂತೆ ನನ್ನ ಪ್ರೇಮವಿದೆ, ನನ್ನಲ್ಲಿ ನಿತ್ಯೋದಿತ ಆನಂದ ಸ್ವರೂಪನಾದ ಆತ್ಮನ ಅರಿವು ಇಲ್ಲದೆ, ಈ ದೇಹವು ಸತ್ಯವೆಂದೂ ಇದು ನಾನೆಂದೂ ನೀನು ನನ್ನವಳೆಂದೂ ತಿಳಿದಿದ್ದರೆ, ನಿನ್ನ ಕೆಟ್ಟ ನಡೆತೆಯು ನನಗೆ ದುಃಖವನ್ನು ಉಂಟುಮಾಡುತ್ತಿತ್ತು. ಸ್ವಾಮಿತ್ವವನ್ನು ಸಾಧಿಸುವ ಮನೋಭಾವಕ್ಕೂ ಬಯಕೆಗೂ ನಾನು ಬಲಿಯಾಗಿದ್ದರೆ, ಆ ರೋಗಕ್ಕೆ ನಾನು ತುತ್ತಾಗಿದ್ದರೆ, ನನಗೆ ತೀವ್ರ ವ್ಯಥೆಯೂ ಸಂತಾಪವೂ ಆಗುತ್ತಿತ್ತು. ಆದರೆ ಈಗಿರುವ ನನ್ನ ಮಾನಸ್ಸಿನ ಸ್ಥಿತಿಯಲ್ಲಿ, ನನ್ನ ದೇಹದಲ್ಲಿ ಗಂಡನನ್ನು ಕಾಣುವದಿಲ್ಲ. ನಾನು ನಿನ್ನ ಗಂಡನೆಂದು ಭಾವಿಸುವದಿಲ್ಲ. ಇನ್ನೊಂದನ್ನು ಕಟ್ಟಿಹಾಕಿರುವ ಯಾವ ಹಗ್ಗವನ್ನೂ ನಾನು ನನ್ನ ಕೈಯಲ್ಲಿ ಹಿಡಿದಿಲ್ಲ; ಯಾವದೂ ನನ್ನ ಸ್ವತ್ತಲ್ಲ; ನಾನು ಯಾವದರ ಸ್ವತ್ತೂ ಅಲ್ಲ. ನಾನು ಅನಂತನಾಗಿದ್ದೇನೆ. ಇಡೀ ಜಗತ್ತನ್ನು ಆಳುತ್ತಿರುವ ವಿಶ್ವಶಕ್ತಿಯೇ, ವಿಶ್ವೇಶ್ವರನೇ ನಾನಾಗಿದ್ದೇನೆ. ಸೂರ್ಯ, ಚಂದ್ರ, ನಕ್ಷತ್ರಗಳೂ ವಾಯ್ವಗ್ನಿ ಜಲದೇವತೆಗಳೂ ನನ್ನ ಮಹಿಮಾ ಪ್ರಕಾಶಕರು, ನೀನೂ ಪರಿಶುದ್ಧ ಪ್ರಜ್ಞಾಸ್ವರೂಪಳಾದ ವಿಶ್ವಶಕ್ತಿಯೇ ಆಗಿದ್ದಿ. ಇದನ್ನೇ ಚಿಂತಿಸು, ಧ್ಯಾನಿಸು, ನೀನು ಪರಿಶುದ್ಧಳಾಗುತ್ತಿ. ಆದರೆ ಈ ಲೋಕದಲ್ಲಿ ಪರಿಶುದ್ಧರಲ್ಲದಿರುವ ಅಪವಿತ್ರರಾದ-ಎಷ್ಟೋಜನ ಬಾಲಕಿಯರಿದ್ದಾರೆ; ಅವರೆಲ್ಲರೂ ನನ್ನವರೇ. ಅವರೆಲ್ಲರಲ್ಲಿಯೂ ಇರುವದು ನಾನೇ. ಆದ್ದರಿಂದ ಯಾರನ್ನು ದೂಷಿಸಲಿ ? ಯಾರನ್ನು ತಿರಸ್ಕರಿಸಲಿ ? ಅವರ ಕಷ್ಟವೇ ನನ್ನ ಕಷ್ಟ, ಅವರ ನೋವೇ ನನ್ನ ನೋವು, ಪುಣ್ಯ ಪಾಪಗಳ ಲೇಪವಿಲ್ಲದ ಪರಿಶುದ್ಧನಾದ ಅಂತರಾತ್ಮನೇ ಅವರಲ್ಲಿ ಬೆಳಗಲಿ ಎಂದು ಬಯಸುತ್ತೇನೆ. ಸಮಸ್ತ ಜಗತ್ತೂ ವಿಶ್ವವನ್ನೇ ಬೆಳಗುವ ನನ್ನದು; ನಾನು ಯಾವದಕ್ಕೆ ಕೋಪಗೊಳ್ಳಲಿ ? ಯಾವದಕ್ಕೆ ಸಂತೋಷಪಡಲಿ ?

ನೆರೆಹೊರೆಯವರು ಯಾರಾದರೂ ಪಾಪವನ್ನು ಮಾಡಿದರೆ ನಮಗೆ ದುಃಖವಾಗುವದಿಲ್ಲ; ಆದರೆ ನಮ್ಮ ಹೆಂಡತಿಯು ಒಂದು ಪಾಪವನ್ನು ಮಾಡಿದರೆ ನಮಗೆ ಅತಿಶಯವಾದ ಸಂತಾಪವೂ ಸಂಕಟವೂ ಆಗುತ್ತದೆ. ತನ್ನ ಸ್ವಾಮಿತ್ವವನ್ನು ಸ್ಥಾಪಿಸುವ ಸ್ವಾರ್ಥಸಾಧಕ ಮನೋಭಾವವೇ ಇದಕ್ಕೆ ಕಾರಣ".

ಮಹಾರಾಣೀ ಚೂಡಾಲೆಯು ಆಗಾಗ ತನ್ನ ರಾಜ್ಯಕ್ಕೆ ಹೋಗಿ, ರಾಜಕಾರ್ಯಗಳನ್ನು ನಿರ್ವಹಿಸಿ ಬರುತ್ತಿದ್ದಳು. ಒಂದುಸಲ ಚೂಡಾಲೆಯು ರಾಜನನ್ನು ಕುರಿತು, "ಓ ಮಹಾರಾಜ! ನೀನು ದೇವರೇ ಸರಿ, ಎಲ್ಲಾ ಜಗತ್ತೂ ನಿನ್ನದಾಗಿರುವಾಗ ನೀನು ಎಲ್ಲಿ ವಾಸಿಸಿದರೆ ಏನು? ಅರಮನೆಗಿಂತಲೂ ಹಿಮಾಲಯವು ನಿಮಗೆ ಹೆಚ್ಚಿನದೆ?–ಹೆಚ್ಚು ನಿಮ್ಮದೆ?" ಎಂದು ಕೇಳಿದಳು.

ರಾಜ, "ಚಿತ್‌ಸ್ವರೂಪಿಯಾದ ನಾನು ಎಲ್ಲೆಲ್ಲಿಯೂ ತುಂಬಿದ್ದೇನೆ. ಎಲ್ಲಾ ದೇಹಗಳೂ ನನ್ನವೇ; ಬೇರೆ ದೇಹಗಳಿಗಿಂತಲೂ ಈ ದೇಹವು ನನಗೆ ಹೆಚ್ಚಿನದೇನಲ್ಲ. ಜ್ಞಾನಿಯ ದೃಷ್ಟಿಯಲ್ಲಿ ಈ ದೇಹವೇ ಇಲ್ಲ. ಸತ್ಯವನ್ನು ಸಂಪೂರ್ಣವಾಗಿ ತಿಳಿಯುವವರಿಗೆ ಈ ದೇಹವಿದೆ. ಈ ಪ್ರಪಂಚವೆಲ್ಲಾ ನಮ್ಮ ಕಲ್ಪನೆಯಿಂದ ತೋರುತ್ತಿದೆ. ಗಣಿತಶಾಸ್ತ್ರದ ನಿಯಮದಷ್ಟು ಇದು ಸತ್ಯ, ಇದು ಸಾಹಸೋಕ್ತಿಯಂತೆ ಕಂಡರೂ ಬಹಳ ಸತ್ಯ".

ಚೂಡಾಲಿ, "ಪ್ರಭೂ! ಹಾಗಿದ್ದರೆ ನಾನು ಹೇಳಿದಂತೆ ಕೇಳಿ, ಅದರಂತೆ ಮಾಡಿ. ಅಜ್ಞಾನವು ನಾಶವಾಗಿರುವದರಿಂದಲೂ ಸರ್ವತ್ರ ಆತ್ಮನೊಬ್ಬನೇ ಇರುವನೆಂಬ ಜ್ಞಾನವಾಗಿರುವದರಿಂದಲೂ ಆಕಾಶದಂತೆ ನಿರ್ಮಲರೂ ಸ್ವಚ್ಛರೂ ಆಗಿದ್ದೇವೆ, ನಮಗೆ ಇಚ್ಛೆಯೂ ನಿರಿಚ್ಛೆಯೂ ಒಂದೇ ಆಗಿವೆ. ನಾವು ನಮ್ಮ ಜೀವನದ ಮೊದಲನ್ನೂ ಮಧ್ಯವನ್ನೂ ಕೊನೆಯನ್ನೂ ನೋಡಿದರೆ, ರಾಜ್ಯಭಾರವನ್ನು ಮಾಡುವದೇ ನಮಗೆ ಜನ್ಮದಿಂದ ಬಂದಂಥ ಕರ್ತವ್ಯವಾಗಿದೆ. ಆದ್ದರಿಂದ ತಾವು ಪೂರ್ವದಿಂದಲೂ ಬಂದಿರುವ ರಾಜ್ಯಭಾರವನ್ನು ನಡೆಸಬೇಕು" ಎಂದು ಹೇಳಿದಳು.

ಇದಕ್ಕೆ ರಾಜನು ಒಪ್ಪಿದ್ದರಿಂದ, ಇಬ್ಬರೂ ತಮ್ಮ ರಾಜ್ಯಕ್ಕೆ ಹೋಗಿ ರಾಜ್ಯಪರಿಪಾಲನೆ ಮಾಡುತ್ತಿದ್ದರು. ಸಕಲ ಭೋಗಭಾಗ್ಯಗಳ ಸಮೃದ್ಧಿಯಲ್ಲಿ ಅವರು ವಾಸಿಸುತ್ತಿದ್ದರೂ ಇಂದ್ರಿಯಗಳಿಗೆ ವಶರಾಗದೇ ಸ್ಥಿತಪ್ರಜ್ಞರಾಗಿ, ವಾತ್ಸಲ್ಯದಿಂದ ಪ್ರಜಾಕೋಟಿಯ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸುತ್ತಾ ಬಹುಕಾಲ ರಾಜ್ಯಭಾರಮಾಡಿದರು. ಶಿಖಿಧ್ವಜನು ಕೇವಲ ಮಹಾರಾಜನೂ ಚಕ್ರವರ್ತಿಯೂ ಮಾತ್ರ ಆಗಿರಲಿಲ್ಲ; ಅವನು ದೇವರೇ ಆಗಿದ್ದನು. ಇದೇ ನಿಜವಾದ ತ್ಯಾಗ.

ಅವನಿಗೆ ಹಂಸತೂಲಿಕಾತಲ್ಪವೂ ಮುಖಮಲ್ಲಿನ ಮೆತ್ತೆಗಳೂ ರೇಷ್ಮೆಯ ಮೃದಂಗಾದಿಗಳೂ ಮುಳ್ಳು ಗುಲಾಬಿಗಳೂ ಕಲ್ಲುಮುಳ್ಳುಗಳೂ ಶಿಲಾಫಲಕಗಳೂ ಹೊನ್ನೂ ಮಣ್ಣೂ ಅರಮನೆಯೂ ಹರಕುಗುಡಿಸಲೂ ಮೃಷ್ಟಾನ್ನ ಕದನ್ನಗಳೂ ಒಂದೇ ಆಗಿದ್ದವು.

ಆಸಕ್ತಿಯೂ ಇರಕೂಡದು, ಹಾಗೇ ದ್ವೇಷಾಸೂಯೆಗಳೂ ಇರಕೂಡದು, ಇಂಡಿಯಾದೇಶದಲ್ಲಿ ತಪಸ್ಸಾಧನೆಯು ಸತ್ಯದ ಅನುಭವಕ್ಕೆ ಏಣಿಯು ಮಾತ್ರ. ನೀವೇ ದೇವರೆಂದು ನಿಶ್ಚಯವಾದಾಗ ನಿಜವಾದ ಅನುಭವವಾಗುತ್ತದೆ, ಕೃತ್ರಿಮವಾದ

ತ್ಯಾಗದಿಂದ ಪ್ರಯೋಜನವಿಲ್ಲ. ಸಾಧ್ವಿಯೂ ಮಹಾಯೋಗಿನಿಯೂ ಆದ ಮಹಾರಾಣಿಯು ಸಾಹಸದಿಂದ ಮಹಾ ಸಮರ್ಥನಾದ ಸಮ್ರಾಟನು ತನ್ನೊಳಗಿರುವ ನಿಜವಾದ ದೇವತ್ವದ ಅನುಭವವನ್ನು ಪಡೆದನು. ಹೀಗೆ ವಿವಾಹಿತ ಸ್ತ್ರೀಪುರುಷರು ಪರಸ್ಪರ ಪ್ರೇಮದಿಂದ ಜೀವಿಸಿದ್ದು ಒಬ್ಬರಿಗೊಬ್ಬರು ಆತ್ಮಾನುಭವ ಮಾಡಿಕೊಡುವುದಕ್ಕೆ ಸಹಾಯಕರಾಗಿ ತಮ್ಮ ಮನೆಯನ್ನೇ ಸ್ವರ್ಗಸೀಮವನ್ನಾಗಿ ಮಾಡಿಕೊಳ್ಳಬಹುದು.

೧೦೫. ಆತ್ಮಪ್ರಾಪ್ತಿಯಿಂದಲೇ ಸರ್ವಪ್ರಾಪ್ತಿ

(ನೆರಳನ್ನು ಬೆನ್ನಟ್ಟಿ ಓಡುವ ಮಗು)

ಒಮ್ಮೆ ರಾಮನು, ಅಂಬೆಗಾಲಿಕ್ಕುತ್ತಿದ್ದ ಒಂದು ಮಗುವನ್ನು ನೋಡಿದನು. ಆ ಮಗುವು ತನ್ನ ನೆರಳನ್ನು ನೋಡಿಕೊಂಡು ಅದು ಬೇರಾವುದೋ ಒಂದು ವಿಲಕ್ಷಣ ವಸ್ತುವೆಂದು ಭಾವಿಸಿತು. ಅದಕ್ಕೆ ತನ್ನ ನೆರಳಿನ ತಲೆಯನ್ನು ಹಿಡಿದುಕೊಳ್ಳ ಬೇಕೆನ್ನಿಸಿತು. ಅದಕ್ಕಾಗಿ ಅದು ನೆರಳಿನ ತಲೆಯಕಡೆ ಕೈಚಾಚುತ್ತಾ ಅಂಬೆಗಾಲಿ ನಿಂದಲೇ ಓಡುವದಕ್ಕೆ ತೊಡಗಿತು, ಆದರೆ, ಆ ನೆರಳೂ ಓಡಿದ್ದರಿಂದ ಅದರ ತಲೆಯು ಕೈಗೆ ಸಿಕ್ಕದೆ ಮಗುವು ಅಳಹತ್ತಿತು. ಮಗುವು ಬಿದ್ದು ಮಲಗಿದಾಗ ನೆರಳೂ ಬಿದ್ದು ಜೊತೆಗೇ ಮಲಗಿತು; ಮಗುವು ಪುನಃ ಎದ್ದು ಓಡಿದಾಗ ಓಡುತ್ತಿರುವ ನೆರಳಿನ ಬೆನ್ನಟ್ಟಿ ಹೋಯಿತು. ಆ ಸಮಯದಲ್ಲಿ ಅಲ್ಲಿಗೆ ಬಂದ ಅದರ ತಾಯಿಯು, (ನೆರಳಿನ ತಲೆಯು ಕೈಗೆ ಸಿಕ್ಕದೆ) ಅಳುತ್ತಿರುವ ಮಗುವಿನ ಇಂಗಿತವನ್ನರಿತು ಕರುಣೆ ಯಿಂದ ಮಗುವಿನ ಕೈಯನ್ನು ಹಿಡಿದು ಅದರ ತಲೆಯ ಮೇಲಿಟ್ಟಳು. ಆಹಾ! ನೆರಳನ್ನೇ ನೋಡುತ್ತಿದ್ದ ಮಗುವಿಗೆ ಅದರ ತಲೆಯು ಆಗಲೇ ತನ್ನ ಕೈಗೆ ಸಿಕ್ಕಂತಾಗಿ ಆನಂದಪಟ್ಟಿತು. ಹೀಗೆ ನಿಮ್ಮ ತಲೆಯನ್ನು ನೀವು ಹಿಡಿದುಕೊಂಡರೆ ನೆರಳು ತಾನಾಗಿಯೇ ನಿಮ್ಮ ಹಿಡಿತಕ್ಕೆ ಸಿಕ್ಕುತ್ತದೆ.

ಸ್ವರ್ಗವಾಗಲೀ ನರಕವಾಗಲೀ ನಿಮ್ಮೊಳಗೇ ಇದೆ. ಶಕ್ತಿ, ಸಂತೋಷ, ಪ್ರಾಣ ಇವುಗಳ ಉಗಮವು ನಿಮ್ಮಲ್ಲಿಯೇ ಇದೆ. ದೇವತಾ ಪುರುಷರಾಗಲೀ ಪ್ರಕೃತಿಯಾಗಲೀ ದೇಶಗಳಾಗಲೀ ಎಲ್ಲಾ ನಿಮ್ಮಲ್ಲಿಯೇ ಇವೆ. ಓ ಜನರೇ! ಕೇಳಿರಿ, ಕೇಳಿರಿ. ದೊಡ್ಡ ದೊಡ್ಡ ನಗರಗಳಲ್ಲಿ ದೊಡ್ಡರಸ್ತೆಗಳು ಸೇರಿರುವ ಚೌಕ ಗಳಲ್ಲಿಯೂ ರಾಜಮಾರ್ಗಗಳಲ್ಲಿಯೂ ಎತ್ತರವಾದ ಭವನಗಳ ಉಪ್ಪರಿಗೆಗಳ ಮೇಲೂ ನಿಂತು ಉಚ್ಚವಾದ ಕಂಠದಿಂದ ಘೋಷಿಸುವುದಕ್ಕೆ ಅರ್ಹವಾದ ಮಹಾಸತ್ಯವಿದು;— ನೀವು ಒಂದು ವಿಷಯದ ಅನುಭವವನ್ನು ಪಡೆಯಬೇಕಾದರೆ ಅಥವಾ ವಸ್ತುವನ್ನು ಪಡೆಯಬೇಕಾದರೆ ನೆರಳಿನ ಬೆನ್ನಟ್ಟಿ ಓಡಬೇಡಿರಿ. ನಿಮ್ಮ ತಲೆಯನ್ನೇ ಮುಟ್ಟಿರಿ. ನಿಮ್ಮೊಳಗೇ ಹೋಗಿರಿ. ಇದನ್ನು ಅನುಭವಕ್ಕೆ ತಂದುಕೊಂಡರೆ ನಕ್ಷತ್ರಾದಿಗಳೆಲ್ಲಾ ನಿಮ್ಮ ಸೃಷ್ಟಿಯೇ ಎನ್ನುವದು ಗೋಚರವಾಗುತ್ತದೆ. ಮನೋಹರವಾದ ವಸ್ತು ಗಳೆಲ್ಲಾ ನಿಮ್ಮ ಪ್ರತಿಫಲನವೇ ಛಾಯೆಯೇ ಎನ್ನುವದು ನಿಮಗೆ ಗೋಚರವಾಗು ತ್ತದೆ. ಅಯ್ಯೋ ಇದೆಷ್ಟು ಅವಿವೇಕ!

೧೦೬. ದೇವರೆಂದರೇನು ?

(ಸ್ವಾಮಿ ರಾಮರಲ್ಲಿ ಒಬ್ಬ ರಾಜಕುಮಾರನ ಪ್ರಶ್ನೆ)

ಒಂದಾನೊಂದು ಸಮಯದಲ್ಲಿ ಇಂಡಿಯಾ ದೇಶದ ರಾಜಕುಮಾರನೊಬ್ಬ ಪರ್ವತಗಳಲ್ಲಿದ್ದ ರಾಮನಲ್ಲಿಗೆ ಬಂದು ಈ ಪ್ರಶ್ನೆಯನ್ನು ಹಾಕಿದನು. "ಸ್ವಾಮಿ! ಸ್ವಾಮಿ! ದೇವರೆಂದರೆ ಏನು ?" ಎಂದು ಕೇಳಿದನು. ಇದೊಂದು ಗಂಭೀರವಾದ ಪ್ರಶ್ನೆ; ಅತಿ ಕಠಿಣವಾದ ಸಮಸ್ಯೆ. ಇದೊಂದೇ ವಿಷಯವನ್ನೇ ಎಲ್ಲಾ ದೇವತಾ ಶಾಸ್ತ್ರಗಳೂ ಮತ್ತು ಎಲ್ಲಾ ಮತಧರ್ಮಗಳೂ ಪರೀಕ್ಷಿಸುವದಕ್ಕಾಗಿ ಹೊರಟಿವೆ. ಇಂಥಾ ಮಹದ್ವಿಷಯವನ್ನು ಜನರು ಒಂದೇ ನಿಮಿಷದಲ್ಲಿ ಸಂಪೂರ್ಣವಾಗಿ ತಿಳಿಯಬೇಕೆಂದು ಬಯಸುತ್ತಾರೆ. ಆ ಬಾಲಕನು ಮತ್ತೂ ಮುಂದುವರಿದು "ಈ ವಿಷಯವನ್ನು ತಿಳಿಸತಕ್ಕವರು ನಿಮ್ಮನ್ನು ಬಿಟ್ಟರೆ ಯಾರಿದ್ದಾರೆ ಸ್ವಾಮಿ! ಆದ್ದರಿಂದ ನೀವೇ ನನಗೆ ಇದನ್ನು ತಿಳಿಸಬೇಕು." ಎಂದು ಹೇಳಿದನು. ಅದಕ್ಕೆ ರಾಮನು "ಪ್ರಿಯ ರಾಜಪುತ್ರ! ನೀನು ದೇವರನ್ನು ತಿಳಿಯಲು ಬಯಸುತ್ತಿ: ಅಥವಾ ನೀನು ದೇವರ ಪರಿಚಯ ಮಾಡಿಕೊಳ್ಳಬೇಕೆನ್ನುತ್ತಿ. ಆದರೆ ದೊಡ್ಡವರನ್ನು ನೋಡಬೇಕೆನ್ನುವವರು ಮೊದಲು ತಮ್ಮ ಸ್ವಂತ ಹೆಸರು, ವಿಳಾಸಗಳ ಪರಿಚಯ ಪತ್ರಿಕೆಯನ್ನು ಅವರಿಗೆ ಕಳಿಸಿಕೊಡಬೇಕೆಂಬ ನಿಯಮವು ನಿನಗೆ ತಿಳಿಯದೆ? ನೀನು ಯಾರೆಂಬದನ್ನು ದೇವರಿಗೆ ತಿಳಿಸುವದು ಉತ್ತಮ. ನಿನ್ನ ಪರಿಚಯ ಪತ್ರಿಕೆಯನ್ನು ಅವನಿಗೆ ಕೊಡು. ರಾಮನು ಆ ಪತ್ರಿಕೆಯನ್ನು ನೇರಾಗಿ ದೇವರ ಕೈಯಲ್ಲಿಡುತ್ತಾನೆ. ಆಗ ದೇವರು ನಿನ್ನಲ್ಲಿಗೆ ಬರುತ್ತಾನೆ; ದೇವರು ಯಾರೆಂದು ನೀನು ನೋಡಬಹುದು" ಎಂದು ಹೇಳಿದನು. "ಒಳ್ಳೆಯದು; ಅದೆಲ್ಲಾ ಸರಿಯೇ. ಅದು ನ್ಯಾಯವಾಗಿಯೇ ಇದೆ. ನಾನು ಯಾರೆಂಬುದನ್ನು ನಿಮಗೆ ನೇರಾಗಿಯೇ ತಿಳಿಸುತ್ತೇನೆ. ನಾನು ಇಂಥಾ ರಾಜನ ಮಗ; ಉತ್ತರ ಇಂಡಿಯಾದಲ್ಲಿ ಹಿಮಾಲಯ ಪರ್ವತಗಳಲ್ಲಿ ವಾಸವಾಗಿದ್ದೇನೆ. ಇದು ನನ್ನ ಹೆಸರು." ಹೀಗೆಂದು ಆ ಬಾಲಕನು ಹೇಳಿ ಒಂದು ಚೂರು ಕಾಗದದ ಮೇಲೆ ಅದನ್ನು ಬರೆದನು. ಅವನ್ನು ರಾಮನು ತೆಗೆದುಕೊಂಡು ಓದಿದನು. ಅದನ್ನು ದೇವರ ಕೈಗೆ ನೇರಾಗಿ ಕೊಡದೆ, ರಾಜಕುಮಾರನ ಕೈಗೇ ಹಿಂದಿರುಗಿ ಕೊಟ್ಟನು, ಮತ್ತು ಅವನನ್ನು ಕುರಿತು "ಓ! ರಾಜಕುಮಾರ! ನೀನು ಯಾರೆಂಬುದು ನಿನಗೇ ತಿಳಿಯದು. ರಾಜನಾದ ನಿನ್ನ ತಂದೆಯನ್ನು ಕಾಣಬೇಕೆಂದು ಬರುವ ವಿದ್ಯೆ ಕಲಿಯದ ಅಜ್ಞಾನಿಯಂತೆ ನೀನಿದ್ದಿ. ಹೆಸರನ್ನು ಸಹ ಬರೆಯುವದಕ್ಕೆ ತಿಳಿಯದ ಪಾಮರನಿಗೆ ನಿನ್ನ ತಂದೆ ರಾಜನು ದರ್ಶನ ಕೊಡುವನೆ? ರಾಜಪುತ್ರ! ನಿನ್ನ ಹೆಸರನ್ನು ನೀನು ಬರೆಯಲಾರೆ, ದೇವರು ನಿನ್ನನ್ನು ಹೇಗೆ ಕರೆದುಕೊಳ್ಳುವನು? ಮೊದಲು ನೀನು ಯಾರು ಎನ್ನುವದನ್ನು ನಮಗೆ ಸರಿಯಾಗಿ ಹೇಳು. ಹಾಗಾದರೆ, ದೇವರೇ

ನೀನಿದ್ದಲ್ಲಿಗೆ ಬಂದು ನಿನ್ನನ್ನು ಬಿಚ್ಚಿದ ಬಾಹುಗಳಿಂದ ಆಲಿಂಗನಮಾಡಿ ಕರೆದುಕೊಳ್ಳುತ್ತಾನೆ." ಎಂದು ರಾಮನು ಹೇಳಿದನು.

ಆ ಬಾಲಕನು ಆಲೋಚನೆ ಮಾಡಿದನು. ಅವನು ಆ ವಿಷಯದ ಮೇಲೆ ಪುನಃ ಪುನಃ ಚಿಂತಿಸಿ ವಿಚಾರಮಾಡಿದನು. ಆಗ ಅವನು "ಸ್ವಾಮಿ! ಸ್ವಾಮಿ! ಆಹಾ! ಈಗ ಗೊತ್ತಾಯಿತು; ಈಗ ಗೊತ್ತಾಯಿತು. ನನ್ನ ಸ್ವಂತ ಹೆಸರನ್ನು ಬರೆಯುವದರಲ್ಲಿ ನಾನೊಂದು ತಪ್ಪು ಮಾಡಿದೆ. ಶರೀರದ ವಿಳಾಸವನು ಮಾತ್ರ ಕೊಟ್ಟಿದ್ದೇನೆ. ನಾನು ಏನಾಗಿದ್ದೇನೆಂಬದನ್ನು ನಾನು ಬರೆದಿಲ್ಲ." ಎಂದನು.

ಆಗ ಸಮೀಪದಲ್ಲಿ ಆ ರಾಜಕುಮಾರನ ಸೇವಕನೊಬ್ಬನು ನಿಂತಿದ್ದನು. ಈ ಮಾತುಗಳೆಲ್ಲಾ ಅವನಿಗೆ ಅರ್ಥವಾಗಲಿಲ್ಲ. ಆ ಸೇವಕನಿಗೆ ಆ ಮಾತಿನ ಅರ್ಥವನ್ನೂ ಸಂದರ್ಭವನ್ನೂ ವಿವರಿಸಿ ಹೇಳಲು, ರಾಜಕುಮಾರನು ಸೇವಕನನ್ನು ಈ ಪ್ರಶ್ನೆ ಕೇಳಿದನು. "ಏನಯ್ಯಾ! ಈ ಪತ್ರಿಕೆಯು ಯಾರದ್ದು?" ಆ ಸೇವಕ ಹೇಳಿದ "ಇದು ನನ್ನದು." ರಾಜಕುಮಾರನು ಸೇವಕನ ಕೈಯಲ್ಲಿರುವ ಕೋಲನ್ನು ತೆಗೆದುಕೊಂಡು "ಈ ಕೋಲು ಯಾರದು?" ಎಂದು ಕೇಳಿದನು. ಅದಕ್ಕೆ ಸೇವಕನು "ಇದು ನನ್ನದು" ಎಂದನು. ಪುನಃ ರಾಜಕುಮಾರನು, "ಒಳ್ಳೆಯದು, ಈ ರುಮಾಲು ಯಾರದು?" ಎಂದು ಕೇಳಿದನು. ಅದಕ್ಕೆ ಅವನು "ಇದೂ ನನ್ನದು" ಎಂದನು. ರಾಜಕುಮಾರನು ಹೇಳಿದ್ದೇನೆಂದರೆ, "ಅದೆಲ್ಲಾ ಸರಿ. ಈ ರುಮಾಲು ನಿನ್ನದಾದರೆ, ನೀನು ರುಮಾಲದ ಮಾಲೀಕ, ಆದ್ದರಿಂದ ನೀನೇನೂ ಈ ರುಮಾಲಲ್ಲ. ಹಾಗೆಯೇ ಈ ಪೆನ್ಸಿಲ್ ನಿನ್ನದಾದರೆ, ನೀನೇನೂ ಪೆನ್ಸಿಲ್ ಅಲ್ಲ. ಹಾಗೇ ಆ ಕಿವಿಗಳೂ, ಮೂಗುಗಳೂ ನಿನ್ನವೇ ಹೊರತು ಅವೇನೂ ನೀನಲ್ಲ. ಅದರಂತೆ ಈ ಶರೀರವು ನಿನ್ನದೇ ಹೊರತು ಈ ಶರೀರವು ನೀನಲ್ಲ. ನನ್ನ ದೇಹ, ನನ್ನ ಕಿವಿಗಳು; ನನ್ನ ತಲೆ, ನನ್ನ ಕೈಗಳು...ಎಂಬೀ ಮೊದಲಾದ ಮಾತುಗಳೇ, ನೀನೇ ಬೇರೆ, ಈ ಶರೀರಾದಿಗಳೇ ಬೇರೆ ಎಂಬದನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಶರೀರವು ನಿನಗೆ ಸೇರಿದ ಸೊತ್ತು, ವಸ್ತು. ನೀನು ಅದರ ಮಾಲಿಕ, ಒಡೆಯ. ಅದು ನೀನು ಧರಿಸುವ ಉಡುಗೆಯಂತಿದೆ, ವಸ್ತ್ರದಂತಿದೆ; ನೀನು ಅದರ ಮಾಲಿಕ. ದೇಹವು ನಿನ್ನ ಕುದುರೆ, ನೀನು ಅದರ ಸವಾರ. ಈಗ ಹೇಳು; ನೀನು ಯಾರು?" ಸೇವಕನಿಗೆ ಇಷ್ಟು ತಿಳಿಯಿತು. ರಾಜಕುಮಾರನು ಕಾಗದದ ಮೇಲೆ ದೇಹದ ವಿಳಾಸವನ್ನು ಬರೆದು, ಅದು ತನ್ನ ಸ್ವಂತ ವಿಳಾಸವೆಂದು ತಿಳಿದುದು ತಪ್ಪು ಎಂದೂ ಆ ಸೇವಕನಿಗೆ ಗೊತ್ತಾಯಿತು. "ನೀನು ದೇಹವಲ್ಲ, ಕಿವಿಗಳಲ್ಲ, ಮೂಗು ಅಲ್ಲ, ಕಣ್ಣುಗಳಲ್ಲ; ಇವು ಯಾವುವೂ ಅಲ್ಲ; ಹಾಗಾದರೆ ನೀನು ಯಾರು?" ತಾನು ತನ್ನ ಸೇವಕನಿಗೆ ಹೇಳಿದ ಈ ಮಾತನ್ನೇ ರಾಜಕುಮಾರನು

ಮನಸ್ಸನ್ನೇ ಮತ್ತೆ ಮತ್ತೆ ಮೆಲಕುಹಾಕತೊಡಗಿದನು. ಮತ್ತು ಅವನು "ಸರಿ, ಸರಿ. ನಾನು ಮನಸ್ಸಾಗಿದ್ದೇನೆ, ನಾನೇ ಮನಸ್ಸು; ನಾನು ಮನಸ್ಸೇ ಆಗಿರಬೇಕು." ಎಂದು ಹೇಳಿದನು.

ಆಗ ರಾಜಕುಮಾರನನ್ನು ಪ್ರಶ್ನೆ ಮಾಡಲಾಯಿತು. "ಆಹಾ! ಅದು ಹಾಗಿರಬಹುದು ಅಲ್ಲವೆ? ಒಳ್ಳೆಯದು; ಈಗ, ನಿನ್ನ ದೇಹದಲ್ಲಿ ಮೂಳೆಗಳೆಷ್ಟಿವೆ? ಹೇಳಬಲ್ಲೆಯ? ಇವತ್ತು ಬೆಳಿಗ್ಗೆ ನೀನು ತೆಗೆದುಕೊಂಡ ಆಹಾರವು ಈಗ ನಿನ್ನ ದೇಹದಲ್ಲಿ ಎಲ್ಲಿದೆ? ಏನಾಗುತ್ತಿದೆ? ಹೇಳಬಲ್ಲೆಯ?" ಇದಕ್ಕೆ ಉತ್ತರ ಹೇಳಲು ಅವನಿಗೆ ತಿಳಿಯಲಿಲ್ಲ. ಆದರೆ ಅವನು ಇಷ್ಟೇ ಹೇಳಿದ: "ನನ್ನ ಬುದ್ಧಿ ಅಷ್ಟು ದೂರ ಯೋಚಿಸಲಾರದು. ನಾನು ದೇಹರಚನಾ ಶಾಸ್ತ್ರವನ್ನಾಗಲೀ ಶರೀರ ವಿಜ್ಞಾನವನ್ನಾಗಲೀ ಓದಿಲ್ಲ. ನನ್ನ ಮೆದುಳೇ ಅದನ್ನು ಗ್ರಹಿಸಲಾರದು. ನನ್ನ ಮನಸ್ಸು ಅದನ್ನು ಅರ್ಥಮಾಡಿಕೊಳ್ಳಲಾರದು."

ಆಗ ಆ ರಾಜಪುತ್ರನಿಗೆ ಹೇಳಿದ್ದೇನೆಂದರೆ, "ಓ ಬಾಲಕ! ನಿನ್ನ ಮನಸ್ಸಿಗೂ ನಿನ್ನ ಮೆದುಳಿಗೂ ನಿನ್ನ ಬುದ್ಧಿಗೂ ನಿಲುಕುವದಿಲ್ಲವೆಂದೂ ತಿಳಿಯುವದಿಲ್ಲವೆಂದೂ ಹೇಳುತ್ತಿ. ಇದರಿಂದ ಮೆದುಳೂ ಮನಸ್ಸೂ ಬುದ್ಧಿಯೂ ನಿನ್ನವೆಂದು ಒಪ್ಪಿಕೊಳ್ಳುತ್ತಿ. ಆದ್ದರಿಂದ ನಿನ್ನ ವಸ್ತುಗಳಾಗಿರುವ ಮನ-ಬುದ್ಧಿಗಳು ನೀನಾಗಿಲ್ಲ; ನಿನ್ನ ಮೆದುಳಿಗೂ ಮನಸ್ಸಿಗೂ ಬುದ್ಧಿಗೂ ನೀನೂ ಒಡೆಯನೆಂಬುದು ನಿನ್ನ ಮಾತಿನಿಂದಲೇ ಸ್ಪಷ್ಟವಾಗುತ್ತದೆ. ಮೆದುಳೂ ಮನಸ್ಸೂ ಬುದ್ಧಿಯೂ ನೀನಲ್ಲ. ಹಾಗಾದರೆ, ನೀನು ಯಾರು? ಯೋಚನೆ ಮಾಡು, ದಯವಿಟ್ಟು ಚೆನ್ನಾಗಿ ಯೋಚನೆಮಾಡು. ನೀನಾರೆಂಬುದನ್ನು ಸರಿಯಾಗಿ ತಿಳಿಸಿದರೆ, ದೇವರೇ ನಿನ್ನಲ್ಲಿಗೆ ಬರುತ್ತಾನೆ; ದೇವರ ಪರಿಚಯ ನಿನಗಾಗುತ್ತದೆ. ಆದ್ದರಿಂದ ದಯವಿಟ್ಟು ಮೊದಲು ನೀನಾರೆಂಬದನ್ನು ತಿಳಿಸು."

ಆ ಬಾಲಕನು ಬಹಳ ಹೊತ್ತು ಆಲೋಚನೆ ಮಾಡಿ "ನನ್ನ ಬುದ್ಧಿಯು ಅಷ್ಟು ದೂರ ಓಡಲಾರದು." ಎಂದನು.

ಆಹಾ! ಎಷ್ಟು ಸತ್ಯ ಈ ಮಾತು! ಒಳಗಿರುವ ದೇವರನ್ನು ಬುದ್ಧಿಯು ನಿಶ್ಚಯವಾಗಿಯೂ ಸೇರಲಾರದು. ನಿಜವಾದ ಆತ್ಮನು, ನಿಜವಾದ ದೇವರು ಮಾತು-ಮನಗಳ ಗ್ರಹಿಕೆಗೆ ದೂರವಾಗಿದ್ದಾನೆ.

ಸ್ವಲ್ಪ ಹೊತ್ತು ಕುಳಿತು, ಅದುವರೆಗೆ ವಿಚಾರಮಾಡಿರುವ ವಿಷಯವನ್ನೇ ಚಿಂತಿಸುವಂತೆ ಆ ಬಾಲಕನಿಗೆ ತಿಳಿಸಿತು. ಅವನಿಗೆ ರಾಮನು ಹೇಳಿದ್ದೇನೆಂದರೆ, "ನಾನು ದೇಹವಲ್ಲ; ನಾನು ಮನಸ್ಸಲ್ಲ–ಇದು ನಿನಗೆ ತಿಳಿದಿದೆ. ಇದನ್ನೇ ತೀವ್ರವಾಗಿ ಭಾವಿಸು. ಇದನ್ನೇ ಅನುಭಾವದಲ್ಲಿಯೂ ಕೃತಿಯಲ್ಲಿಯೂ

ತೆಗೆದುಕೊಂಡು ಬಾ. ಇದೊಂದೇ ಭಾವನೆಯಲ್ಲಿ ನೀನು ಜೀವಿಸಿದರೆ, ಇಷ್ಟೇ ಸತ್ಯವನ್ನು ನೀನು ಕಾರ್ಯರೂಪಕ್ಕೆ ತಂದರೆ, ನೀನು ದೇಹ–ಮನಸ್ಸುಗಳನ್ನು ಮೀರಿ ನಿಂತರೆ ಎಲ್ಲಾ ಭಯ–ಚಿಂತೆಗಳಿಂದ ಮುಕ್ತನಾಗುತ್ತಿ. ದೇಹ–ಮನಸ್ಸುಗಳ ಮಟ್ಟವನ್ನು ಮೆಟ್ಟಿ ನಿಂತಾಗ ಭಯವೇ ಭಯಪಟ್ಟು ಓಡಿಹೋಗುತ್ತದೆ. ದೇಹ–ಮನಸ್ಸುಗಳ ಆಚೆ ನೀನು ಏನೋ ಆಗಿದ್ದಿ ಎಂಬದು ಇಷ್ಟೇ ನಿನಗೆ ತಿಳಿದರೂ ಎಲ್ಲಾ ಚಿಂತೆಗಳೂ ನೀಗುತ್ತವೆ ; ಎಲ್ಲಾ ದುಃಖಗಳೂ ಓಡಿಹೋಗುತ್ತವೆ."

ಅನಂತರ, ತಾನು ಏನಾಗಿದ್ದೇನೆಂಬದನ್ನು ಅನುಭವದಲ್ಲಿ ಕಾಣಲು ಆ ಬಾಲಕನಿಗೆ ಸ್ವಲ್ಪ ಸಹಾಯವಾಯಿತು. ಅವನನ್ನು ಕುರಿತು "ತಮ್ಮ ! ರಾಜಕುಮಾರ ! ಇವತ್ತು ನೀನು ಏನು ಮಾಡಿದ್ದಿ ? ಇವತ್ತು ಬೆಳಗಿನಿಂದಲೂ ನೀನು ಏನೇನು ಕಾರ್ಯಗಳನ್ನು ಮಾಡಿದ್ದೇಯೆಂಬದನ್ನು ದಯವಿಟ್ಟು ನಮಗೆ ಹೇಳು." ಎಂದು ರಾಮನು ಕೇಳಿದನು.

ಅವನು ಹೇಳಲು ತೊಡಗಿದನು. "ನಾನು ಬೆಳಿಗ್ಗೆ ಮುಂಚೆ ಎದ್ದೆ ; ಸ್ನಾನ ಮಾಡಿದೆ; ಉಪಾಹಾರ ತೆಗೆದುಕೊಂಡೆ, ಬಹಳ ಹೊತ್ತು ಓದಿದೆ; ಕೆಲವು ಪತ್ರಗಳನ್ನು ಬರೆದೆ ; ಕೆಲವು ಸ್ನೇಹಿತರನ್ನು ಕಂಡು ಮಾತನಾಡಿ, ಇಲ್ಲಿಗೆ ಸ್ವಾಮಿಗಳ ಸಂದರ್ಶನಕ್ಕಾಗಿ ಬಂದೆ."

ಆಗ ಸ್ವಾಮಿಯು ಕೇಳಿದನು ; "ಇಷ್ಟೇಯೆ ? ಇನ್ನೂ ಹೆಚ್ಚಿನ ಯಾವ ಕೆಲಸಗಳನ್ನೂ ಮಾಡಿಲ್ಲವೆ ? ಸ್ವಲ್ಪ ವಿಚಾರಮಾಡಿ ನೋಡು." ಆ ಬಾಲಕನು ಬಹಳ ಯೋಚನೆಮಾಡಿ, ಅದೇ ಬಗೆಯ ಇನ್ನೂ ಕೆಲವು ಕಾರ್ಯಗಳನ್ನು ಹೇಳಿದನು. ಆಗ ರಾಮನೆಂದನು ; "ತಮ್ಮಾ ! ಅಷ್ಟೇ ಅಲ್ಲ. ನೀನು ಬೇರೆ ನೂರಾರು, ಸಾವಿರಾರು, ಲಕ್ಷಾಂತರ ಕಾರ್ಯಗಳನ್ನು ಮಾಡಿದ್ದಿ. ನೀನು ಲೆಕ್ಕವಿಲ್ಲದಷ್ಟು ಕಾರ್ಯಗಳನ್ನು ಮಾಡಿದ್ದರೂ ಅವುಗಳನ್ನು ಹೇಳಲು ಹಿಂಜರಿಯುತ್ತಿ. ಇದು ಸರಿಯಲ್ಲ. ಏನೇನು ಮಾಡಿದ್ದಿ, ಎಲ್ಲವನ್ನೂ ಹೇಳು."

"ನೀನು ಲಕ್ಷಾಂತರ ಕಾರ್ಯಗಳನ್ನು ಮಾಡಿದ್ದಿ" ಎಂಬ ಮಾತನ್ನು ಕೇಳಿ, ರಾಜಕುಮಾರನಿಗೆ ಆಶ್ಚರ್ಯವಾಯಿತು. "ಸ್ವಾಮಿ ! ನಿಮಗೆ ಹೇಳಿಕೊಂಡಿದ್ದಕ್ಕಿಂತಲೂ ಹೆಚ್ಚಾಗಿ ನಾನು ಏನನ್ನೂ ಮಾಡಿಲ್ಲ." ಎಂದನು.

ಬಾಲಕನನ್ನು ಕುರಿತು "ಈಗ ಸ್ವಾಮಿಯನ್ನು ನೋಡುತ್ತಿರುವವರು ಯಾರು ?" ಎಂದು ಕೇಳಲಾಯಿತು. ಅವನು "ನಾನು" ಎಂದನು. "ನೀನು ಈ ಮುಖವನ್ನೂ ಪಕ್ಕದಲ್ಲಿ ಹರಿಯುತ್ತಿರುವ ಗಂಗೆಯನ್ನೂ ನೋಡುತ್ತಿದ್ದೀ ಅಲ್ಲವೆ ? ಹಾಗಾದರೆ ಕಣ್ಣಿನಲ್ಲಿರುವ ಆ ಮಾಂಸಖಂಡಗಳನ್ನು ಅಥವಾ ಸ್ನಾಯುಗಳನ್ನು ಚಲಿಸುವಂತೆ ಮಾಡುವವರಾರು ? ಅದು ಬೇರೆ ಯಾರೂ ಆಗಿರಲಾರರು. ಕಣ್ಣುಗಳು ನೋಡುವಂತೆ ಮಾಡತಕ್ಕವನು ನೀನೇ, ನಿನ್ನ ನಿಜವಾದ

ಆತ್ಮನೇ ಆಗಿರಬೇಕು. ನೀನೂ ಈ ಬೋಧೆಯನ್ನು ಕೇಳುತ್ತಿದ್ದಿ. ಈ ಮಾತನಾಡುವ ಮತ್ತು ಈ ಮಾತುಗಳನ್ನು ಕೇಳುವ ವಾಗಿಂದ್ರಿಯ ಮತ್ತು ಶ್ರೋತ್ರೇಂದ್ರಿಯ ನರಗಳನ್ನು ಸ್ಪಂದನಗೊಳಿಸತಕ್ಕವರಾರು ? ಅದೂ ನೀನೇ ಆಗಿರಬೇಕು. ಬೇರೆ ಯಾರೂ ಆಗಿರಲು ಸಾಧ್ಯವಿಲ್ಲ. ನೀನು ಬೆಳಿಗ್ಗೆ ಆಹಾರವನ್ನು ತೆಗೆದುಕೊಂಡಿದ್ದರೆ, ಮಲ ಮೂತ್ರಗಳನ್ನು ವಿಸರ್ಜನೆಮಾಡತಕ್ಕವನೂ ನೀನೇ ; ಆಹಾರವನ್ನು ಜೀರ್ಣಿಸಿಕೊಳ್ಳತಕ್ಕವನೂ ಅದರ ಸಾರವನ್ನು ಹೀರಿಕೊಳ್ಳತಕ್ಕವನೂ ಎಲ್ಲಾ ನೀನೇ ಇರಬೇಕು. ಅದು ಬೇರೆಯವರಾಗಿರಲು ಸಾಧ್ಯವಿಲ್ಲ. ಪ್ರಕೃತಿಯಲ್ಲಿಯ ವ್ಯಾಪಾರಗಳಿಗೆ ಹೊರಗಿನ ಕಾರಣಗಳನ್ನು ನಂಬುವ ಆ ಕಾಲವು ಕಳೆದು ಹೋಯಿತು. ಹಿಂದೆ, ಒಬ್ಬ ಮನುಷ್ಯನು ಬಿದ್ದರೆ, ಅದಕ್ಕೆ ಹೊರಗಿನ ಯಾವದೋ ಭೂತವು ಕಾರಣವಾಗಿದೆಯೆಂದು ಹೇಳುತ್ತಿದ್ದರು. ಭೌತಿಕ ವಿಜ್ಞಾನವು ಇಂಥಾ ವಿವರಣೆಗಳನ್ನು ಒಪ್ಪುವದಿಲ್ಲ, ಯಾವದೊಂದು ಪ್ರಕೃತಿಯ ವ್ಯಾಪಾರಕ್ಕೆ ಕಾರಣವನ್ನು ಹುಡುಕುವುದಾದರೆ ಆ ಪ್ರಕೃತಿವಿಲಾಸದಲ್ಲಿಯೇ ಹುಡುಕಬೇಕೆಂದು ವಿಜ್ಞಾನ ಶಾಸ್ತ್ರವೂ ಭೌತಶಾಸ್ತ್ರವೂ ಹೇಳುತ್ತವೆ.

ರಾಜಪುತ್ರನು ಇದನ್ನೆಲ್ಲಾ ಒಪ್ಪಿಕೊಂಡನು, ರಾಮನು ಅವನನ್ನು ಕುರಿತು "ಪ್ರಿಯ ಕುಮಾರ ! ಸ್ವಲ್ಪ ವಿಚಾರಮಾಡು. ಪಚನಕ್ರಿಯೆಯಲ್ಲಿ ನೂರಾರು ಬಗೆಯ ಚಲನೆಗಳು ಸೇರಿಕೊಂಡಿವೆ. ಆಹಾರವನ್ನು ಬಾಯಿಯಲ್ಲಿ ಹಾಕಿಕೊಂಡ ಕೂಡಲೇ ಅದನ್ನು ಅಗಿಯುವಾಗ ಬಾಯಲ್ಲಿರುವ ಗ್ರಂಥಿಗಳ ಲಾಲಾ ರಸ ಅಥವಾ ಜೊಲ್ಲಿನ ರಸ ಉತ್ಪತ್ತಿಯಾಗುತ್ತದೆ. ಅನಂತರ ಆಹಾರವು ಆಮ್ಲ ಜನಕದಿಂದ ಸಂಯುಕ್ತವಾಗುತ್ತದೆ. ರಕ್ತವು ಉತ್ಪತ್ತಿಯಾಗುತ್ತದೆ ; ನರನಾಡಿಗಳಲ್ಲಿ ರಕ್ತವು ಸಂಚರಿಸುತ್ತದೆ. ಆಹಾರವು ಮೂಳೆ, ಮಾಂಸ ಮೊದಲಾದ ಸಪ್ತ ಧಾತುಗಳಾಗಿ ಪರಿವರ್ತನೆಯಾಗುತ್ತದೆ. ಪ್ರತಿನಿಮಿಷವೂ ದೇಹದಲ್ಲಿ ಬೆಳವಣಿಗೆ ನಡೆಯುತ್ತಿದೆ. ಈ ಎಲ್ಲಾ ಕ್ರಿಯೆಗಳೂ ಜೀರ್ಣಕಾರ್ಯಕ್ಕೆ ಸಂಬಂಧಪಟ್ಟವೇ. ನೀನು ಆಹಾರವನ್ನು ತೆಗೆದುಕೊಂಡರೆ, ಶ್ವಾಸೋಚ್ಛ್ವಾಸಕ್ಕೂ ನೀನೇ ಕಾರಣ. ನರನಾಡಿಗಳಲ್ಲಿ ರಕ್ತವು ಹರಿಯುವಂತೆ ಮಾಡತಕ್ಕವನೂ ನೀನೇ. ಕೂದಲುಗಳು ಬೆಳೆಯುವಂತೆ ಮಾಡತಕ್ಕವನೂ ನೀನೇ. ದೇಹವನ್ನು ಬೆಳೆಸುವವನೂ ನೀನೇ. ಇವುಗಳಲ್ಲೆಲ್ಲಾ ಎಷ್ಟು ಕ್ರಿಯಾ ಕ್ರಮಗಳಿವೆಯೆಂಬುದನ್ನು ಚೆನ್ನಾಗಿ ಗುರುತಿಸಿ ನೋಡು. ನೀನು ಬದುಕಿರುವದಕ್ಕೆ ಪ್ರತಿನಿಮಿಷವೂ ಎಷ್ಟೆಷ್ಟು ಅಸಂಖ್ಯಾತ ಕ್ರಿಯೆಗಳನ್ನು ಅವಿರತವಾಗಿ ನಡೆಸುತ್ತಿದ್ದಿಯೆಂಬುದನ್ನು ಗಮನಿಸು.

ಆ ಬಾಲಕನು ಆಲೋಚಿಸತೊಡಗಿ, "ನಿಜ ! ನಿಜ ! ಸ್ವಾಮಿ ! ಈ ನನ ಶರೀರದಲ್ಲಿ ನನ್ನ ಬುದ್ಧಿಯು ವಿಚಾರಿಸದಿರುವ, ನನ್ನ ಮನಸ್ಸು ಅರಿಯದಿರುವ ಸಹಸ್ರಾರು, ಲಕ್ಷಾಂತರ ಸೂಕ್ಷ್ಮ ಕ್ರಿಯಾಕ್ರಮಗಳು ನಡೆಯುತ್ತಲೇ ಇವೆ;

ನಿಜವಾಗಿಯೂ, ಅರಿಯದಿದ್ದರೂ, ಇವುಗಳನ್ನೆಲ್ಲಾ ನಾನೇ ನಡೆಸುತ್ತಿರಬೇಕು. ನನ್ನ ಶರೀರದಲ್ಲಿ ನಾನೊಬ್ಬನಲ್ಲದೆ ಬೇರೆ ಯಾರಿದ್ದಾರೆ? ಬೆಳಗಿನಿಂದ ನಾನು ಕೆಲವೇ ಕಾರ್ಯಗಳನ್ನು ನಡೆಸಿದೆನೆಂದು ಹೇಳಿದ್ದು ತಪ್ಪೇ ಸರಿ." ಎಂದನು.

ಸ್ವಾಮಿಯು, ಅವನನ್ನು ಕುರಿತು, "ಅಪ್ಪ, ಮಗು! ಇದನ್ನೇ ಇನ್ನಷ್ಟು ಸ್ಪಷ್ಟಪಡಿಸುವುದು ಅಗತ್ಯ. ಈ ನಿನ್ನ ಶರೀರದಲ್ಲಿ ಎರಡು ಬಗೆಯ ಕಾರ್ಯವ್ಯವಸ್ಥೆಯು ನಡೆದಿದೆ; ಒಂದು ಇಚ್ಛಾಪೂರ್ವಕವಾಗಿ ನಡೆಯುವ ಕಾರ್ಯಗಳು, ಇನ್ನೊಂದು ನಿನ್ನ ಇಚ್ಛೆಯಿಲ್ಲದಿದ್ದರೂ ನೀನು ಅರಿಯದಿದ್ದರೂ ನಡೆಯುತ್ತಿರುವ ಕಾರ್ಯಗಳು. ಆಟ, ಊಟ, ಓಟ, ನೋಟ, ಪಾಠ; ಮಾತು, ಬರೆಯುವುದು, ಈ ಮೊದಲಾದುವುಗಳೆಲ್ಲಾ ಮನಃಪೂರ್ವಕವಾಗಿ ಉದ್ದೇಶಪಟ್ಟು ಮಾಡತಕ್ಕ ಕಾರ್ಯಗಳು. ಉಸಿರಾಡುವುದು, ರಕ್ತ ಸಂಚಾರ, ಆಹಾರಪಚನ, ರಸಗಳ ಉತ್ಪಾದನಾ, ವಿಸರಣ; ಕಣ್ಣುರೆಪ್ಪೆ ಹೊಡೆಯುವುದು: ಆಹಾರದಿಂದ ಸಪ್ತಧಾತುಗಳ ರಚನೆ, ಶರೀರದ ಬೆಳವಣಿಗೆ ಈ ಮೊದಲಾದ ಅನಂತ ಕಾರ್ಯಗಳು ಮಧ್ಯವರ್ತಿಗಳಾದ ಮನೋಬುದ್ಧಿಗಳ ಅರಿವಾಗಲೀ ಇಚ್ಛೆಯಾಗಲೀ ಕರ್ತೃತ್ವವಾಗಲೀ ಇಲ್ಲದೆ ನೇರಾಗಿ ನಡೆಯುತ್ತಿವೆ.

ಜನರು, ಇಚ್ಛಾಪೂರ್ವಕವಾಗಿ ನಡೆಸಿದ ಕಾರ್ಯಗಳನ್ನು ಮಾತ್ರ ನಡೆಸಿದ್ದೆಂದು ತಿಳಿಯುತ್ತಾರೆ; ಒಪ್ಪುತ್ತಾರೆ. ಆದರೆ ಮಧ್ಯವರ್ತಿಗಳಾದ ಮನೋಬುದ್ಧಿಗಳ ಅರಿವಿಲ್ಲದಿದ್ದರೂ ಕರ್ತೃತ್ವವಿಲ್ಲದಿದ್ದರೂ ನೇರಾಗಿ ನಡೆಯುತ್ತಿರುವ ಮಿಕ್ಕ ಅನೇಕ ಅನೈಚ್ಛಿಕ ಕಾರ್ಯಗಳನ್ನು ಅವರು ಏನು ಮಾತ್ರವೂ ಒಪ್ಪುವುದಿಲ್ಲ. ಇದು ಎದ್ದು ಕಾಣುವ ದೊಡ್ಡ ತಪ್ಪು. ನಮ್ಮ ಶಕ್ತಿಯ ವ್ಯಾಪ್ತಿ ಎಷ್ಟು ಅಪಾರವಾಗಿದೆ, ಎಂಬುದನ್ನು ತಿಳಿಯುವುದಕ್ಕೆ ಈ ಅಜ್ಞಾನವೇ ಅಡ್ಡಿಯಾಗಿರುವದರಿಂದ ಇದು ಮಹಾಪರಾಧವೇ ಸರಿ. ತಮಗೆ ಅರಿವಿಲ್ಲದಿದ್ದರೂ ಇಚ್ಛೆಯಿಲ್ಲದಿದ್ದರೂ ತಪ್ಪದೇ ನಡೆಯುತ್ತಿರುವ ಅನಂತ ಕಾರ್ಯಗಳನ್ನು ಜನರು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದ್ದಾರೆ. ತಾನು ಮಾಡಿದೆನೆಂಬ ಮನಸ್ಸಿನ ಕರ್ತೃತ್ವ ಭಾವನೆಯಿಂದ ನಡೆಯುತ್ತಿರುವ ಕೆಲವೇ ಕಾರ್ಯಗಳನ್ನು ಮಾತ್ರ ಜನರು ಒಪ್ಪುವುದರಿಂದ, ತಮ್ಮ ನಿಜವಾದ ಆತ್ಮನನ್ನು, ತಮ್ಮ ಅನಂತ ಶಕ್ತಿಯನ್ನು ಮರೆತು, ಈ ಮನಸ್ಸು ಹೊರ ತೋರುವ ತಮ್ಮ ಪುಟ್ಟ ಮೆದುಳನ್ನೇ ತಾವೆಂದು ತಿಳಿಯುತ್ತಾರೆ. ಇದರಿಂದ ತಮ್ಮ ಅನಂತಶಕ್ತಿಯನ್ನು ಕ್ಷುದ್ರವಾದ ಮಾಂಸಮಯ ಮೆದುಳಿನಲ್ಲಿ ಸೆರೆಹಾಕಿ ಜನರು ತಮ್ಮನ್ನು ತಾವು ಹೀನದೀನರನ್ನಾಗಿಯೂ ದುಃಖಿತರನ್ನಾಗಿಯೂ ನಿರ್ಭಾಗ್ಯರನ್ನಾಗಿಯೂ ಮಾಡಿಕೊಳ್ಳುತ್ತಾರೆ. "ಓ! ದೇವರು ನನ್ನೊಳಗೇ ಇದ್ದಾನೆ." ಎಂದು ಜನರು ಹೇಳುವದುಂಟು. ಬಹಳ ಒಳ್ಳೆಯದು; ಅದೆಲ್ಲಾ ಸರಿ. ಸ್ವರ್ಗ ಸಾಮ್ರಾಜ್ಯವೇ ನಿಮ್ಮೊಳಗೆ ಇದೆ; ದೇವರೇ ನಿಮ್ಮೊಳಗೆ ಇದ್ದಾನೆ. ಆ ಪರಮ ಸಾರವೇ ತಿರುಳೇ ನಿಮ್ಮೊಳಗೆ ಇದೆ. ಆಗಲಿ. ಅದು ಹೇಗೆ? ತೆಂಗಿನಕಾಯಿಯ

ತಿರುಳು ತೆಂಗಿನ ಚಿಪ್ಪಿನಲ್ಲಿ ಇದ್ದಂತೆಯೇನೋ ? ಹಾಗಾದರೆ, ದೇವರು ತಿರುಳು ; ನೀವು ಚಿಪ್ಪು. ಆ ತಿರುಳಿನಿಂದ ಪ್ರಯೋಜನವೇನು ? ತನ್ನೊಳಗೇ ಯಾವಾಗಲೂ ತಿರುಳಿದ್ದರೂ ಚಿಪ್ಪು ಯಾವಾಗಲೂ ಬರಡು ಚಿಪ್ಪೇ ಸರಿ. ಅಯ್ಯೋ! ಹೀಗಲ್ಲ. ನೀವೇ ತಿರುಳು ; ಈ ದೇಹವೇ ಚಿಪ್ಪು. ನೀವೇ ಅಮೃತ ; ಈ ದೇಹವು ಘಟ. ಚೆನ್ನಾಗಿ ವಿಚಾರಮಾಡಿ ; ತಲೆಕೆಳಗಾಗಿ ಆಲೋಚಿಸಬೇಡಿ. ಒಳಗಿರುವ ತಿರುಳಾದ ಆ ದೇವರೇ ನೀವು ; ನೀವು ಹೊರಗಿನ ಚಿಪ್ಪಲ್ಲ, ಬರೀ ಬರಡು ಕರಟವಲ್ಲ. ನೀವು ಚರಟವೋ ಕರಟವೋ ಅಥವಾ ಸಾರಭೂತವಾದ ತಿರುಳೋ ಎಂಬುದನ್ನು ಗಂಭೀರವಾಗಿ ಆಲೋಚಿಸಿ.

ಕೆಲ ಜನರು ಹೇಳುವದುಂಟು : "ಓ ಸ್ವಾಮಿ! ನಾನು ತಿನ್ನುತ್ತೇನೆ ; ಪ್ರಕೃತಿಯು ಜೀರ್ಣಮಾಡುತ್ತದೆ ; ನಾನು ಕೇಳುತ್ತೇನೆ. ಆದರೆ, ಶಬ್ದದ ಸಂವೇದನೆಯು ಒಳಗೆ ಆಗುವಂತೆ ಸಂಬಂಧಪಟ್ಟ ನರಗಳನ್ನು ಸ್ಪಂದನಗೊಳಿಸುವದು ಪ್ರಕೃತಿ." ಎಂದು.

ಸತ್ಯಕ್ಕಾಗಿ, ಧರ್ಮಕ್ಕಾಗಿ, ನ್ಯಾಯಕ್ಕಾಗಿ ದಯವಿಟ್ಟು ನಿಜವೇನೆಂಬುದನ್ನು ಗುರುತಿಸಿ, ಅರಿಯಿರಿ. ನೀವು ದುಃಖದಿಂದ ಬಿಡುಗಡೆ ಹೊಂದುವದಕ್ಕಾಗಿ ವಿಚಾರಮಾಡಿ ; ಆ ಪ್ರಕೃತಿಯೇ ನೀವಲ್ಲವೇ ? ನೀವು ಬರೀ ದೇಹವೆ ? ಆ ಸರ್ವ ವ್ಯಾಪಿಯಾದ ಪ್ರಕೃತಿಯೇ ನೀವು. ಆ ಸರ್ವಕರ್ತೃವಾದ ಪ್ರಕೃತಿಯೇ ನೀವು. ಆ ಅನಂತ ಶಕ್ತಿಯೇ, ಪರಮಾತ್ಮನೇ ನೀವು. ವಿಚಾರವಿಲ್ಲದೆ. ಮನಸ್ಸಿನಲ್ಲಿ ಮೊದಲೇ ಸೇರಿಕೊಂಡಿರುವ ಭ್ರಮೆಗಳನ್ನೆಲ್ಲಾ ತೂರಿ, ಕಲ್ಪನೆಗಳನ್ನೆಲ್ಲಾ ಕಾರಿ ಈ ವಿಷಯವನ್ನು ಆಳವಾಗಿ ಆಲೋಚಿಸಿ, ಪರಿಶೋಧಿಸಿ ಪರೀಕ್ಷಿಸಿದರೆ, ಚರ್ಚಿಸಿದರೆ. ಈ ರಾಮನ ಅನುಭವವೇ ನಿಮಗೂ ಬರುತ್ತದೆ. ಸಂಪೂರ್ಣ ಪ್ರಕೃತಿ ಮಂಡಲವೇ ನೀವಾಗಿದ್ದೀರೆಂಬುದು ನಿಮ್ಮ ಅನುಭವಕ್ಕೆ ಬರುತ್ತದೆ.

ಇದುವರೆಗೆ ನಡೆಸಿರುವ ವಿಚಾರಕ್ರಮದ ದಿಶೆಯೇನು ? ಗತಿಯೇನು ? ಅರ್ಥವೇನು ? ಉದ್ದೇಶವೇನು ? ಎನ್ನುವದನ್ನು ನಿಮ್ಮಲ್ಲಿ ಅನೇಕರು ಗ್ರಹಿಸಿರಬಹುದು. ಆದರೆ ಆ ಬಾಲಕನಾದ ರಾಜಕುಮಾರ ಅದನ್ನು ಸಂಪೂರ್ಣವಾಗಿ ಗ್ರಹಿಸಲಿಲ್ಲ. ಅವನು ಹೇಳಿದ್ದೇನೆಂದರೆ, "ಒಳ್ಳೆಯದು, ಸರಿ! ನಾನು ಬುದ್ಧಿಯ ಆಚೆ, ಬುದ್ಧಿಯನ್ನು ಮೀರಿ, ಬುದ್ಧಿಯಿಂದ ದೂರವಾಗಿ ಏನೋ ಆಗಿದ್ದೇನೆಂದು ಇದುವರೆಗೆ ನಾನು ಕೇಳಿದ ತಮ್ಮ ಬೋಧೆಯಿಂದ ಗೊತ್ತಾಯಿತು, ಸ್ವಾಮಿ!" ಎಂದನು.

ಆ ಸಮಯದಲ್ಲಿ ರಾಜಕುಮಾರನ ಸೇವಕನು, "ಸ್ವಾಮಿ! ಅದು ನನಗೆ ಇನ್ನೂ ಚೆನ್ನಾಗಿ ತಿಳಿದಿಲ್ಲ; ದಯವಿಟ್ಟು ಅದನ್ನೇ ಹೆಚ್ಚು ಸ್ಪಷ್ಟವಾಗಿ ತಿಳಿಸಿ." ಎಂದನು. ಅದಕ್ಕೆ ಅವನನ್ನು ಕೇಳಲಾಯಿತು : "ಏನಪ್ಪಾ! ನೀನು ಮಲಗಿ

ನಿದ್ರಿಸಿದಾಗ ಸತ್ತಿರುತ್ತೀಯೋ ಬದುಕಿರುತ್ತೀಯೋ ?" "ನಾನು ಬದುಕಿರುತ್ತೇನೆ; ಸಾಯುವದಿಲ್ಲ." ಎಂದನು. "ನಿನ್ನ ಬುದ್ಧಿಯು ಏನು ಮಾಡುತ್ತಿರುತ್ತದೆ ?" ಎಂದು ಕೇಳಿದ್ದಕ್ಕೆ "ನಾನು ಕನಸು ಕಾಣುತ್ತಿರುತ್ತೇನೆ; ಅಲ್ಲಿ ವಿಚಾರ ಸ್ವಭಾವದ ಬುದ್ಧಿಯು ಸುಮ್ಮನಿರುತ್ತದೆ." ಎಂದನು. "ಕನಸೂ ಇಲ್ಲದ ಗಾಢನಿದ್ರೆಯಲ್ಲಿದ್ದಾಗ ಬುದ್ಧಿ ಎಲ್ಲಿರುತ್ತದೆ? ನಿನ್ನ ಮನಸ್ಸು ಎಲ್ಲಿರುತ್ತದೆ?" ಎಂದು ಕೇಳಿದಾಗ ಅವನು ಬಹಳ ಯೋಚನೆಮಾಡಿ "ಓಹೋ ! ಗಾಢನಿದ್ರೆಯಲ್ಲಿ ಮನಸ್ಸು, ಬುದ್ಧಿ ಎಲ್ಲಿ ಬರಬೇಕು? ಆಗ ಎರಡೂ ಇಲ್ಲ, ಯಾವದೂ ಇಲ್ಲ, ಏನೂ ಇಲ್ಲದಿರುವಿಕೆಯಲ್ಲಿ ಅವು ಕರಗಿಬಿಡುತ್ತವೆ." ಎಂದನು.

"ಆದರೆ, ಅಲ್ಲಿ ನೀನಿದ್ದೀಯೋ ಇಲ್ಲವೊ?" ಎಂದು ಸ್ವಾಮಿಯು ಕೇಳಿದ್ದಕ್ಕೆ ಅವನು, "ಓ ನಿಶ್ಚಯವಾಗಿಯೂ ಅಲ್ಲಿ ನಾನಿರಲೇ ಬೇಕು. ನಾನೇನೂ ಸತ್ತಿರುವದಿಲ್ಲ; ಆದ್ದರಿಂದ ಆಗ ನನಗೇನೂ ತಿಳಿಯದಿದ್ದರೂ ನಾನಿದ್ದೇ ಇರುತ್ತೇನೆ" ಎಂದನು.

ಇಲ್ಲಿಯೇ ಚೆನ್ನಾಗಿ ವಿಚಾರಮಾಡಬೇಕಾದ ವಿಷಯವಿದೆ. ಗಾಢನಿದ್ರೆಯಲ್ಲಿ ಬುದ್ಧಿಯ ವ್ಯಾಪಾರವೂ ಮನಸ್ಸಿನ ಕಾರ್ಯವೂ ನಿಂತಿವೆ. ರಾತ್ರಿ ಮಲಗುವಾಗ ಮೇಲಂಗಿಯನ್ನು, ಮೈಮೇಲಿನ ವಸ್ತ್ರವನ್ನು ಒಂದು ಗೂಟಕ್ಕೆ ತೆಗೆದಿಟ್ಟು ಬರಿಮೈಯಲ್ಲಿ ಮಲಗುವಂತೆ ಬುದ್ಧಿಯನ್ನು ಬಿಟ್ಟು ಬಚ್ಚಬರಿ ಆತ್ಮನೊಬ್ಬನೇ ಬೆತ್ತಲೆಯಾಗಿ ನಿದ್ರೆಯಲ್ಲಿರುತ್ತಾನೆ. ನೀವೇನೂ ಅಲ್ಲಿ ಸತ್ತುಹೋಗುವದಿಲ್ಲ. ನೀವು ಪೂರಾ ಸುಮ್ಮನಿರುತ್ತೀರಿ, ಅಷ್ಟೆ. ಇಷ್ಟು ವಿವರಣೆಯನ್ನು ಕೇಳಿ ಬಾಲಕನು, "ಬುದ್ಧಿ ಅಲ್ಲಿರುವದಿಲ್ಲ; ಆದರೆ ನಾನು ಮಾತ್ರ ಸಾಯುವದಿಲ್ಲ. ಇದೇ ನನಗೆ ಸರಿಯಾಗಿ ಅರ್ಥವಾಗುವದಿಲ್ಲ; ಬಹಳ ಗೂಢವಾಗಿದೆ." ಎಂದನು.

ಆಗ ರಾಮನು ಆ ರಾಜಕುಮಾರನನ್ನು ಕುರಿತು "ನೀನು ಗಾಢ ನಿದ್ರೆಯನ್ನು ಮಾಡಿ ಎಚ್ಚರವಾದ ಮೇಲೆ, 'ಇವತ್ತು ನಾನು ಸುಖವಾಗಿ ನಿದ್ರೆ ಮಾಡಿದೆ. ಯಾವ ಕನಸನ್ನೂ ಕಾಣಲಿಲ್ಲ' ಎಂದು ಹೇಳುವದಿಲ್ಲವೆ?" ಎಂದು ಕೇಳಿದನು; ಅದಕ್ಕೆ ಅವನು "ಹೌದು" ಎಂದು ಒಪ್ಪಿಕೊಂಡನು. ಈ ವಿಷಯವು ಅತಿ ಸೂಕ್ಷ್ಮವಾಗಿದೆ. ನೀವೆಲ್ಲರೂ ಮನಸ್ಸಿಟ್ಟು ನಿಕಟವಾಗಿ ಆಲಿಸಬೇಕು. "ಸ್ವಲ್ಪವೂ ಕನಸನ್ನು ಕಾಣದಂತೆ ಸುಖವಾಗಿ ನಿದ್ರೆಮಾಡಿದೆ. ನಾನು ಅಲ್ಲಿ ನದಿಗಳನ್ನಾಗಲೀ ಪರ್ವತಗಳನ್ನಾಗಲೀ ಕಾಣಲಿಲ್ಲ. ನಿದ್ರಾವಸ್ಥೆಯಲ್ಲಿ ತಂದೆಯಿಲ್ಲ, ತಾಯಿಯಿಲ್ಲ, ಮನೆಯಿಲ್ಲ, ಕುಟುಂಬವಿಲ್ಲ, ಯಾವ ಸಂಸಾರವೂ ಇಲ್ಲ; ಏನೇನೂ ಇಲ್ಲ; ಎಲ್ಲಾ ಕರಗಿ ಕಣ್ಮರೆಯಾಗಿದ್ದವು, ಅಲ್ಲಿ ಏನೊಂದೂ ಎಷ್ಟು ಮಾತ್ರವೂ ಇಲ್ಲವೇ ಇಲ್ಲ" ಸುತರಾಂ ಇಲ್ಲ. ನಾನು ಮಾತ್ರ ನಿದ್ರೆ ಮಾಡಿದೆ; ಅಲ್ಲಿ ಏನೂ ಇರಲಿಲ್ಲ. ಎಂದು ನಿದ್ರೆ ಮಾಡಿದವನು ಎಚ್ಚರವಾದ ಮೇಲೆ ಹೇಳುತ್ತಾನೆ. ಈ ಮಾತು

ಹೇಗಿದೆಯೆಂದರೆ, "ಸರಿರಾತ್ರಿಯಲ್ಲಿ ಆ ಶ್ಮಶಾನಪಲ್ಲಿ ಮನುಷ್ಯಮಾತ್ರದವರಾರೂ ಇರಲಿಲ್ಲ." ಎಂದು ಶ್ಮಶಾನದ ಸರ್ವಶೂನ್ಯತೆಯನ್ನು ಸ್ವತಃ ಅನುಭವಿಸಿ ಸಾಕ್ಷಿ ಹೇಳಿದವನ ಉದ್ಗಾರದಂತಿದೆ. ಈ ಸಾಕ್ಷಿಯು ಹೇಳಿಕೆಯನ್ನು ಕೇಳಿದ ನ್ಯಾಯಾಧೀಶನು ಈ ಮಾತನ್ನೇ ಕಾಗದದ ಮೇಲೆ ಬರೆದಿಡಲು ಹೇಳಿದನು. ಆ ಶೂನ್ಯಸಾಕ್ಷಿಯು ಹಾಗೆಯೇ ಮಾಡಿದನು. ನ್ಯಾಯಾಧೀಶನು ಅವನನ್ನು ಕುರಿತು, "ಏನಯ್ಯಾ! ನಿನ್ನ ಹೇಳಿಕೆ ನಿಜವಾದುದೆ? ಬೇರೊಬ್ಬರು ಹೇಳಿದ ಮಾತನ್ನು ಕೇಳಿ ನೀನು ಹೇಳುತ್ತೀಯಾ? ಅಥವಾ ನಿನ್ನ ಅನುಭವವನ್ನೇ ನೀನು ಹೇಳುತ್ತೀಯಾ? ಅಲ್ಲಿ ಆಗ ಯಾರೂ ಇರಲಿಲ್ಲವೆಂಬುದನ್ನು ನೀನು ಆಗ ಅಲ್ಲಿದ್ದು ಕಣ್ಣಾರೆ ಕಂಡೆಯಾ?" ಎಂದು ಕೇಳಿದನು. ಅದಕ್ಕೆ ಆ ಸಾಕ್ಷಿಯು "ಹೌದು ಸ್ವಾಮಿ! ಅದನ್ನು ನಾನು ಕಣ್ಣಾರೆ ಕಂಡ ಸಾಕ್ಷಿ. ಇನ್ನೊಬ್ಬರ ಮಾತನ್ನು ನಾನು ಹೇಳುತ್ತಿಲ್ಲ,'' ಎಂದನು, ನ್ಯಾಯಾಧೀಶನು ಹೇಳಿದ್ದೇನೆಂದರೆ, "ಏನಯ್ಯ! ನೀನು ಬರೆದಿಟ್ಟಿರುವಂತೆ ಆ ಕಾಲದಲ್ಲಿ, ಆ ಸ್ಥಳದಲ್ಲಿ ಯಾವನೊಬ್ಬ ಮನುಷ್ಯ ಮಾತ್ರನೂ ಇರಲಿಲ್ಲ-ಎನ್ನುತ್ತೀಯೆ...ಇದೇ ಪರಮಸತ್ಯ ಸ್ವಾಮಿ--ಎನ್ನುತ್ತೀಯೆ. ಆ ಕಾಲದಲ್ಲಿ ಆ ಸ್ಥಳದಲ್ಲಿ ನೀನೇ ಸ್ವತಃ ಇದ್ದು, ಯಾರೂ ಇಲ್ಲದ್ದನ್ನು ನೀನೇ ಕಣ್ಣಾರೆ ಕಂಡೆ–ಎನ್ನುತ್ತೀಯೆ. ಒಳ್ಳೆಯದು; ಅಲ್ಲಿದ್ದ ನೀನು ಯಾರು? ನೀನು ಮನುಷ್ಯನು ಹೌದೋ ಅಲ್ಲವೋ...ಅದಕ್ಕೂ ಹೌದು ಎನ್ನುತ್ತೀಯೆ. ಹಾಗಾದರೆ, ನಿನ್ನ ಮಾತಿನಂತೆ ನಿನ್ನ ಹೇಳಿಕೆ ನಿಜವಾದರೆ, ನಮ್ಮ ಅಭಿಪ್ರಾಯದಂತೆ ಅದು ಸುಳ್ಳಿರ ಬೇಕು! ಅಥವಾ ತಪ್ಪಿರಬೇಕು. ಏಕೆಂದರೆ, ನೀನು ಮನುಷ್ಯನಾದ್ದರಿಂದಲೂ ನೀನೇ ಅಲ್ಲಿದ್ದುದರಿಂದಲೂ 'ಆಗ ಯಾವನೊಬ್ಬ ಮನುಷ್ಯನೂ ಅಲ್ಲಿರಲಿಲ್ಲ'—ಎಂಬ ನಿನ್ನ ಮಾತು ಅಕ್ಷರಶಃ ಸರಿಯಲ್ಲ; ನಿಜವಲ್ಲ. ನೀನೇ ಅಲ್ಲಿದ್ದೆಯಲ್ಲ; ಅಲ್ಲಿ ಯಾರೂ ಇಲ್ಲದಿರುವುದನ್ನು ನೋಡುವುದಕ್ಕೂ ಹೇಳುವುದಕ್ಕೂ ನೀನಾದರೂ ಒಬ್ಬ ಅಲ್ಲಿರಲೇ ಬೇಕು,"

ಹೀಗೆ, "ಗಾಢ ನಿದ್ರೆಯಲ್ಲಿ ನಾನು ಏನನ್ನೂ ನೋಡಲಿಲ್ಲ" ಎಂದು ಎಚ್ಚರವಾದ ಮೇಲೆ ಹೇಳಿದರೆ, ತನ್ನ ನಿದ್ರೆಯಲ್ಲಿ ಅಭಾವವನ್ನು ಕಂಡ ತಾನು ಮಾತ್ರ ಆಗ ಅಲ್ಲಿರಲೇ ಬೇಕು ಎಂಬುದು ಸ್ಪಷ್ಟವಾಗುತ್ತದೆ. ಅಲ್ಲಿ ತಂದೆ, ತಾಯಿ, ಗಂಡ, ಹೆಂಡತಿ, ಮನೆ ಮೊದಲಾದ ಯಾವುದೂ ಇಲ್ಲವಾದರೂ ನೀವು ಮಾತ್ರ ಅಲ್ಲಿದ್ದಿರಿ, ಎಂಬುದು ಸಿದ್ಧವಾಗುತ್ತದೆ. ನಿದ್ರೆಯ ಅಭಾವವನ್ನು ಅನುಭವಿಸಿ ಹೇಳುವ ಸಾಕ್ಷಿಯು –ಅದರ ಸ್ವರೂಪ ಏನಾದರೂ ಇರಲಿ–ನಿದ್ರೆ ಮಾಡಿರಲಿಲ್ಲವೆಂಬುದೂ ಸ್ಪಷ್ಟವಾಗುತ್ತದೆ. ನಿಮ್ಮ ಸ್ವರೂಪವೇ, ನಿಮ್ಮ ನಿಜವಾದ ಆತ್ಮನೇ ನಿದ್ರೆ ಮಾಡಿದ್ದರೆ, ಅಲ್ಲಿ ಏನೂ ಇಲ್ಲವೆಂಬುದನ್ನಾದರೂ ಹೇಳಲು ಯಾರಿಗೆ ಸಾಧ್ಯವಿತ್ತು? ಆದರೆ ನಿದ್ರೆಯಲ್ಲಿಯೂ ಶೂನ್ಯದ ಅನುಭವದಿಂದ ಸದಾ ಎಚ್ಚರವಾಗಿರುವ ಸಾಕ್ಷಿಗೆ ಮಾತ್ರ ಅದು ಸಾಧ್ಯ.

ಆ ಸಾಕ್ಷಿಯ ಸ್ವರೂಪವೇನೆಂಬದನ್ನು ಇನ್ನೂ ವಿಚಾರಮಾಡಿಲ್ಲವಾದರೂ ಅದು ಬುದ್ಧಿಯಿಂದ ಆಚೆ ಏನೋ ಒಂದು ವಸ್ತುವಾಗಿದೆ ಎಂಬುದಕ್ಕಂತೂ ಸಂದೇಹವಿಲ್ಲ. ಬುದ್ಧಿಯು ನಿದ್ರಿಸಿತ್ತು; ಒಂದು ರೀತಿಯಿಂದ ಮೆದುಳೂ ನಿಷ್ಕ್ರಿಯವಾಗಿ ವಿಶ್ರಮಿಸಿತ್ತು; ಆದರೆ ನೀವು ಮಾತ್ರ ನಿದ್ರಿಸಿರಲಿಲ್ಲ. ನೀವೂ ನಿದ್ರೆ ಮಾಡಿದ್ದರೆ ಉಸಿರಾಟವನ್ನು ನಡೆಸುತ್ತಿದ್ದವರು ಯಾರು? ರಕ್ತನಾಳಗಳಲ್ಲಿ ರಕ್ತವು ಸಂಚರಿಸು ವಂತೆ ಮಾಡುತ್ತಿದ್ದವರು ಯಾರು? ಜಠರದಲ್ಲಿ ಅನ್ನಪಚನ ಕ್ರಿಯೆಯನ್ನು ಮುಂದರಿಸುತ್ತಿದ್ದವರು ಯಾರು? ನೀವು ನಿಜವಾಗಿಯೂ ಗಾಢನಿದ್ರೆಯಲ್ಲಿ ಮುಳುಗಿ ಹೋಗಿದ್ದರೆ ಶರೀರದ ಸರ್ವಾಂಗಗಳ ಬೆಳವಣಿಗೆಯನ್ನು ಸಾಗಿಸುತ್ತಿದ್ದವರು ಯಾರು? ಆದ್ದರಿಂದ ನೀವು ಎಂದೂ ನಿದ್ರೆಮಾಡದಿರುವ ಏನೋ ಒಂದು ಆಗಿದ್ದೀರಿ. ಬುದ್ಧಿಯು ನಿದ್ರಿಸುತ್ತದೆ; ಆದರೆ, ನೀವು ಎಂದೂ ನಿದ್ರಿಸುವದಿಲ್ಲ. ನೀವು ದೇಹವನ್ನೂ ಮನಸ್ಸನ್ನೂ ಬುದ್ಧಿಯನ್ನೂ ಮೀರಿ ಏನೋ ಒಂದು ಆಗಿದ್ದೀರಿ. ಅದೇ ನಾನೂ ಆಗಿದ್ದೇನೆ.

ಆಗ ಆ ಬಾಲಕನು ಹೇಳಿದನು, "ಸ್ವಾಮಿ! ಸ್ವಾಮಿ! ಅಷ್ಟರವರೆಗೆ ನನಗೆ ಅರ್ಥವಾಯಿತು. ಎಂದೂ ನಿದ್ರಿಸದಿರುವ ನಿರ್ವಿಕಾರವಾದ ಅನಂತ ದೈವ ಶಕ್ತಿಯೇ ನಾನೆಂದು ನನಗೆ ತಿಳಿಯಿತು. ನನ್ನ ಯೌವನದಲ್ಲಿ ನನ್ನ ದೇಹವು ಬೇರೆಯಿರುತ್ತದೆ; ಈಗಿರುವ ನನ್ನ ಮನಸ್ಸು ನನ್ನ ಶೈಶವದಲ್ಲಿರಲಿಲ್ಲ. ಈಗಿನ ದೇಹವು ಆಗಿರಲಿಲ್ಲ; ನನ್ನ ಶೈಶವದಲ್ಲಿದ್ದ ದೇಹವೂ ಮೆದುಳೂ ಮನಸ್ಸೂ ಬುದ್ಧಿಯೂ ಈಗಿರುವ ನನ್ನ ದೇಹಾದಿಗಳಿಗಿಂತಲೂ ಸಂಪೂರ್ಣ ಬೇರೆಯೇ ಆಗಿದ್ದವು. ಹೀಗೆ ಎಲ್ಲವೂ ಬದಲಾವಣೆ ಹೊಂದತಕ್ಕವಾದರೂ ನಾನು ಮಾತ್ರ ಬದಲಾವಣೆ ಹೊಂದತಕ್ಕವನಲ್ಲವೆಂದು ನನಗೆ ತೋರುತ್ತದೆ." ಆಗ ರಾಮನು ಹೇಳಿದ್ದೇನೆಂದರೆ, "ಅಪ್ಪ! ನೀನು ಹೇಳಿದ್ದು ಸರಿ. ನಮ್ಮ ಇಡೀ ಶರೀರವೇ ಏಳು ವರ್ಷಗಳ ಅನಂತರ ಸಂಪೂರ್ಣವಾಗಿ ಬದಲಾವಣೆ ಹೊಂದುತ್ತದೆಯೆಂದು ವೈದ್ಯರು ನಮಗೆ ಹೇಳುತ್ತಾರೆ. ಪ್ರತಿಯೊಂದು ಕ್ಷಣವೂ ದೇಹವು ಬದಲಾಯಿಸುತ್ತಿದೆ. ಪ್ರತಿ ಸೆಕೆಂಡಿನಲ್ಲಿಯೂ ಮನಸ್ಸು ಬದಲಾಯಿಸುತ್ತಿದೆ. ಬಾಲ್ಯದಲ್ಲಿದ್ದ ಭಾವನೆಗಳೂ ಆಲೋಚನೆಗಳೂ ಈಗ ಎಲ್ಲಿವೆ ? ಬಾಲ್ಯದಲ್ಲಿ ಸೂರ್ಯಮಂಡಲವನ್ನು ದೇವತೆಗಳು ತಿನ್ನತಕ್ಕ ಒಂದು ಸೊಗಸಾದ ದೋಸೆಯೆಂದೂ ಚಂದ್ರನನ್ನು ಸುಂದರವಾದ ಬೆಳ್ಳಿಯ ತಟ್ಟೆಯೆಂದೂ ಭಾವಿಸಿರಬಹುದು. ನಕ್ಷತ್ರಗಳಂತೂ ಆಗ ವಜ್ರಗಳಂತೆ ಕಾಣಿಸುತ್ತಿದ್ದವು. ಆ ಭಾವನೆಗಳೆಲ್ಲಾ ಈಗ ಎಲ್ಲಿ ಹೋದವು? ಮನ-ಬುದ್ಧಿಗಳು ಸಹ ಸಂಪೂರ್ಣ ಬದಲಾವಣೆಯಾಗಿವೆ. ಆದರೂ "ನಾನು ಮಗುವಾಗಿದ್ದಾಗ, ನಾನು ಹುಡುಗನಾಗಿದ್ದಾಗ, ನನಗೆ ಇಪ್ಪತ್ತು ವರ್ಷವಾದಾಗ" ಎಂದು ಮೊದಲಾಗಿ ಹೇಳುತ್ತೀರಿ. ಮಗುವಿನಲ್ಲಿಯೂ ಹುಡುಗನಲ್ಲಿಯೂ ಮುಪ್ಪಿನಲ್ಲಿಯೂ ನೀವು

ಮಾತ್ರ ಬದಲಾಯಿಸದೆ ಒಂದೇ ಆಗಿದ್ದೀರಿ—ಎಂಬುದನ್ನು ಈ ಮಾತು ತೋರಿಸುತ್ತದೆ. ಹಾಗೇ "ನಾನು ಕನಸು ಕಂಡೆ; ನಾನು ಗಾಢನಿದ್ರೆ ಮಾಡಿದೆ, ನಾನು ಎಚ್ಚರಗೊಂಡೆ" ಎಂಬೀ ಮಾತೂ ಎಚ್ಚರ, ಕನಸು, ನಿದ್ರೆಗಳಲ್ಲಿ ನಿಮ್ಮಲ್ಲಿರುವ ನಿಜವಾದ "ನಾನು" ನಿಜವಾದ ಆತ್ಮ ಬದಲಾವಣೆಯಾಗದೇ ಒಂದೇ ಆಗಿದೆ, ಎಂಬುದನ್ನೂ ಸೂಚಿಸುತ್ತದೆ. ನಿದ್ರೆಯಲ್ಲಿಯೂ ಮೂರ್ಛೆಯಲ್ಲಿಯೂ ಮರಣದಲ್ಲಿಯೂ ಮುಕ್ತಿಯಲ್ಲಿಯೂ ಎಚ್ಚರದಲ್ಲಿ ಎಲ್ಲಾ ಕಾರ್ಯಗಳಲ್ಲಿಯೂ ಆ "ನಾನು" ಒಂದೇ ಸಮನಾಗಿರುತ್ತದೆ. ಸ್ವಲ್ಪ ಯೋಚಿಸಿ, ವಿಚಾರಿಸಿ. ಎಲ್ಲಾ ಕಾಲಗಳಲ್ಲಿಯೂ ಎಲ್ಲಾ ಸಂದರ್ಭಗಳಲ್ಲಿಯೂ ಸ್ವಲ್ಪವೂ ಬದಲಾಯಿಸದಿರುವ ಏನೋ ಒಂದು ನೀವಾಗಿದ್ದೀರಿ. ಹಾಗಿದ್ದರೆ, ಇನ್ನೂ ಸ್ವಲ್ಪ ಹೆಚ್ಚಾಗಿ, ಚಿಂತಿಸಿ, ವಿಚಾರಿಸಿ; ನೀವು ಕೂಡಲೇ ನೇರವಾಗಿ ದೇವರನ್ನು ಕಾಣುತ್ತೀರಿ. ರಾಜಕುಮಾರ ! ನಿನ್ನನ್ನು ನೀನು ಅರಿತುಕೋ, ಕಾಗದದ ಮೇಲೆ ನಿನ್ನ ನಿಜವಾದ ವಿಳಾಸವನ್ನು ಬರಿ; ಕೂಡಲೇ ನಿಮಗೆ ದೇವರ ಪರಿಚಯವಾಗುತ್ತದೆ."

ಸ್ವಾಮಿಯು ಇಷ್ಟೆಲ್ಲಾ ಉಪದೇಶವನ್ನು ಕೇಳಿದ್ದರಿಂದ ತಾನಾರೆಂದು ತನಗೆ ತಿಳಿಯಿತೆಂದು ಆ ರಾಜಕುಮಾರನಿಗೆ ಸಂತೋಷವಾಯಿತು, ತಾನು ಎಂದೂ ಬದಲಾಯಿಸದಿರುವ, ಎಂದೆಂದಿಗೂ ಒಂದೇ ಸ್ಥಿರರೂಪವಾಗಿರುವ, ಎಂದೂ ನಿದ್ರಿಸದಿರುವ, ಏನೋ ಒಂದು ತಾನಾಗಿರುವೆನೆಂದು ಆ ಬಾಲಕನಿಗೆ ಮನವರಿಕೆಯುಂಟಾಯಿತು. ಈಗ ತಾನಾರೆಂದು ತಿಳಿದುದರಿಂದ, ದೇವರು ಯಾರೆಂದು ತಿಳಿಯಬೇಕೆನ್ನಿಸಿತು. ಆಗ ರಾಮನು "ತಮ್ಮ! ವಿಚಾರಮಾಡು; ಇಲ್ಲಿ ಬೆಳೆಯುತ್ತಿರುವ ಎಷ್ಟೋ ಮರಗಳಿವೆ; ಅಲ್ಲಿಯೂ ಎಷ್ಟೋ ಮರಗಳಿವೆ. ಈ ಮರಗಳನ್ನು ಬೆಳೆಸುವ ಶಕ್ತಿಯು, ಆ ಮರಗಳನ್ನು ಬೆಳೆಸುವ ಶಕ್ತಿಯಿಂದ ಬೇರೆಯೇನು? ಬೇರೆಯಲ್ಲವೆನ್ನುತ್ತಿ. ಹಾಗಾದರೆ, ಮರಗಳನ್ನು ಬೆಳೆಸುವ ಶಕ್ತಿಯು ಪ್ರಾಣಿಗಳ ದೇಹಗಳನ್ನು ಬೆಳೆಸುವ ಶಕ್ತಿಯಿಂದ ಬೇರೆಯೇನು? ಅದೂ ಬೇರೆಯಲ್ಲವೆಂದರೆ, ಗ್ರಹನಕ್ಷತ್ರಗಳ ಚಲನೆಗೆ ಕಾರಣವಾದ ಶಕ್ತಿಯು ಈ ನದಿಗಳು ಹರಿಯುವಂತೆ ಮಾಡುವ ಶಕ್ತಿಯಿಂದ ಬೇರೆಯೇನು?" ಎಂದು ಕೇಳಿದನು. ಅದಕ್ಕೆ ಆ ಬಾಲಕನು "ಸ್ವಾಮಿ! ಸಸ್ಯಗಳೂ ಪ್ರಾಣಿಗಳೂ ಜಡ ವಸ್ತುಗಳೂ ಬೇರೆ ಬೇರೆ ಅನೇಕವಾಗಿರುವವೇ ಹೊರತು, ಆ ಎಲ್ಲವುಗಳನ್ನೂ ಬೆಳೆಸುವ ಅಥವಾ ಸಂಚಲನೆಮಾಡುವ ಶಕ್ತಿಯು ಮಾತ್ರ ಖಂಡಿತವಾಗಿಯೂ ಒಂದೇ ಆಗಿರಬೇಕು." ಎಂದನು.

ರಾಮನು ಆ ವಿಚಾರ ಲಹರಿಯನ್ನೇ ಮುಂದುವರಿಸಿದನು, "ಒಳ್ಳೆಯದು. ಸಸ್ಯಜಾತಿಯನ್ನೂ ಪ್ರಾಣಿಜಾತಿಯನ್ನೂ ವಸ್ತುಜಾತಿಯನ್ನೂ ಬೆಳೆಸುವ (ಸಂಚಲನ ಮಾಡುವ) ಶಕ್ತಿಯು ನಿನ್ನ ಕೂದಲುಗಳನ್ನೂ ಉಗುರುಗಳನ್ನೂ ಇಡೀ ದೇಹವನ್ನೂ

ಬೆಳಗಿಸುವ ಶಕ್ತಿಗಿಂತ ಬೇರೆಯಲ್ಲ. ಯಾವ ಶಕ್ತಿಯು ಸೂರ್ಯ ಚಂದ್ರ ನಕ್ಷತ್ರಗಳನ್ನು ಪ್ರಕಾಶಿಸುವಂತೆ ಮಾಡುತ್ತಿದೆಯೋ ಅದೇ ಶಕ್ತಿಯೇ ನಿನ್ನ ಕಣ್ಣುಗಳನ್ನೂ ಥಳಥಳಿಸುವಂತೆ ಮಾಡುತ್ತಿದೆ. ಮಿಕ್ಕ ಎಲ್ಲಾ ಸೃಷ್ಟಿಯನ್ನೂ ಬೆಳೆಸುತ್ತಿರುವ ಶಕ್ತಿಯೇ ನಿನ್ನದೆಂದು ತಿಳಿದಿರುವ ದೇಹವನ್ನೂ ಎಲ್ಲಾ ಮಾನವಜಾತಿಯ ದೇಹಾದಿಗಳನ್ನೂ ಬೆಳೆಸುತ್ತಿದೆ. ನಿನ್ನ ದೇಹದಲ್ಲಿಯೂ ಇತರ ಎಲ್ಲಾ ಪ್ರಾಣಿಗಳ ದೇಹಗಳಲ್ಲಿಯೂ ಉಸಿರಾಡುವುದಕ್ಕೂ ರಕ್ತ ಸಂಚಾರಕ್ಕೂ ಆಹಾರ ಪಚನಕ್ಕೂ ಜೀವನದ ಎಲ್ಲಾ ಅನಂತಕ್ರಿಯೆಗಳಿಗೂ ಕಾರಣವಾಗಿರುವದು ಒಂದೇ ಶಕ್ತಿ, ಸರ್ವವ್ಯಾಪಿಯಾದ ಒಂದೇ ವಿಶ್ವಶಕ್ತಿ ; ಅದ್ಭುತವಾದ ಒಂದೇ ದೈವೀ ಶಕ್ತಿ. ರಾತ್ರಿ ನೀನು ಮಲಗಿರುವಾಗ, ನಿನ್ನ ಮನಸ್ಸೂ ಬುದ್ಧಿಯೂ ನಿದ್ರಿಸುತ್ತಿರುವಾಗ ನಿನ್ನ ದೇಹದಲ್ಲಿ ಪ್ರಾಣವು ಕ್ರೀಡಿಸುತ್ತಿರುವದಕ್ಕೂ ರಕ್ತವು ಪ್ರವಹಿಸುತ್ತಿರುವದಕ್ಕೂ ಆಹಾರವು ಜೀರ್ಣಿಸುತ್ತಿರುವದಕ್ಕೂ ಅದರಿಂದ ಸಪ್ತಧಾತುಗಳೂ ರಚನೆಯಾಗಿ ದೇಹದ ಸರ್ವಾಂಗಗಳೂ ಇಡೀ ದೇಹವೂ ಬೆಳೆಯುತ್ತಿರುವದಕ್ಕೂ ಒಂದು ಕ್ಷಣವೂ ನಿದ್ರಿಸದೇ ಯಾವಾಗಲೂ ಎಚ್ಚರವಾಗಿರುವ ನೀನೇ ಕಾರಣವಾದ ಗೂಢ—ಶಕ್ತಿ ಎಂದು ಸ್ವಲ್ಪ ಹಿಂದೆಯೇ ನಮ್ಮ ವಿಚಾರಕ್ರಮದಿಂದ ನಿಶ್ಚಯಮಾಡಿದ್ದೇವೆ. ಹಾಗಾದರೆ ಎಲೈ ಬಾಲಕನೆ! ನೀನು ಯಾರು ? ಈಗ ಹೇಳು. ಇಡೀ ವಿಶ್ವಸೃಷ್ಟಿಯ ಲೀಲೆಗೆ ಕಾರಣವಾದ ಆ ದಿವ್ಯಶಕ್ತಿಯೇ ನೀನು ! ಆ ದೇವರೇ ನೀನು ! 'ಮನಸ್ಸಿಗೂ ಬುದ್ಧಿಗೂ ನಿಲುಕದೆ ದೂರವಿರುವ ಏನೋ ಒಂದು ನಾನಾಗಿದ್ದೇನೆ.' ಎಂದು ನೀನೇ ಹಿಂದೆ ಹೇಳಿದ್ದೆಯಲ್ಲವೆ ? ಎಲ್ಲೆಲ್ಲಿಯೂ ತುಂಬಿರುವ, ಆದರೆ ಮನೋಬುದ್ಧಿಗಳ ಅರಿವಿಗೆ ಸಾಮಾನ್ಯವಾಗಿ ನಿಲುಕದಿರುವ ಆ ಮಹಾದ್ಭುತ ಶಕ್ತಿಯೇ ವಿಶ್ವಶಕ್ತಿಯೇ ಆ ಪರಮಾತ್ಮನೇ ನೀನು. ಅದೇ ಅದೇ ನೀನಾಗಿದ್ದೀಯೆ.

ಆ ಬಾಲಕನು ತುಂಬಾ ಚಕಿತನಾದನು. "ದೇವಾ ! ದೇವಾ ! ನಿಜವಾಗಿಯೂ ನನಗೆ ದೇವರನ್ನು ತಿಳಿಯಬೇಕೆನ್ನಿಸಿತು. ಅದಕ್ಕಾಗಿ ದೇವರು ಯಾರೆಂದು ತಮ್ಮನ್ನು ಕೇಳಿದೆ. ಈಗ, ತಮ್ಮ ಉಪದೇಶವನ್ನು ಕೇಳಿ ಸ್ವತಃ ನಾನೇ, ನನ್ನ ನಿಜವಾದ ಆತ್ಮನೇ ದೇವರೆಂದು ಮನಗಂಡೆ. ಆಹಾ ! ನಾನೇನು ಕೇಳಿಬಿಟ್ಟೆ ? ಎಂಥಾ ಕ್ಷುದ್ರ ಪ್ರಶ್ನೆ ? ಎಂಥಾ ಮೂರ್ಖ ಪ್ರಶ್ನೆ ? ನಾನಾರೆಂಬುದು ನನಗೇ ತಿಳಿಯದು ! ಎಂಥಾ ನಗೆಗೇಡು ! ನನ್ನನ್ನು ನಾನೇ ತಿಳಿಯಬೇಕಾಯಿತು. ನನ್ನನ್ನು ನಾನೇ ತಿಳಿದಾಗ ದೇವರನ್ನು ತಿಳಿದೆ." ರಾಜಕುಮಾರನು ಆಶ್ಚರ್ಯಾನಂದದಿಂದ ಹೀಗೆ ಉದ್ಗಾರ ಮಾಡಿದನು !

ದೇವರನ್ನು ಹೀಗೆ ತಿಳಿಸಲಾಯಿತು. ಈ ಸತ್ಯವನ್ನು ಅನುಭವಕ್ಕೆ ತಂದುಕೊಳ್ಳುವದರಲ್ಲಿ ಒಂದೇ ಒಂದು ಕಷ್ಟವೇನೆಂದರೆ, ಜನರು ಹುಡುಗಾಟಿಕೆಯ ಸ್ವಭಾವವನ್ನು ಬಿಡುವದಿಲ್ಲ. ಮಕ್ಕಳಿಗೆ ಕೆಲವು ಸಮಯ ಯಾವದೋ ಒಂದು

ಬಗೆಯು ತಟ್ಟೆಯು ಮೇಲೆ ಕಾರಣವಿಲ್ಲದೆ ಖಯಾಲು ಬರುತ್ತದೆ. ಯಾವ ತಿಂಡಿಯನ್ನಾದರೂ ಅವರ ಆ ಮೆಚ್ಚಿನ ತಟ್ಟೆಯಲ್ಲಿ ನೀಡದಿದ್ದರೆ, ಅವರು ತಿನ್ನುವದೇ ಇಲ್ಲ. "ಓ ಮಕ್ಕಳಿರಾ! ನಿಮ್ಮದೆಂದು ಮೆಚ್ಚಿಕೊಂಡಿರುವ ಈ ಒಂದೊಂದು ತಟ್ಟೆಗಳು ಮಾತ್ರ ನಿಮ್ಮವೇ? ನಿಮ್ಮ ಮನೆಯಲ್ಲಿರುವ ಎಲ್ಲಾ ತಟ್ಟೆಗಳೂ ನಿಮ್ಮವಲ್ಲವೆ? ಎಲ್ಲಾ ಬಂಗಾರದ ತಟ್ಟೆಗಳೂ ನಿಮ್ಮವಾಗಿವೆ. ವೃಥಾಭಿಮಾನದ ಈ ಭ್ರಮೆಯೇ ಒಂದು ದೊಡ್ಡ ತಪ್ಪು. ಜಗತ್ತಿನಲ್ಲಿರುವ ಜನರೆಲ್ಲಾ ತಮ್ಮನ್ನು ತಾವು ತಿಳಿದರೆ, ತಮ್ಮ ನಿಜವಾದ ಆತ್ಮನೇ ಸರ್ವಸಮರ್ಥನಾದ ಪರಮಾತ್ಮನೆಂದು, ಅನಂತಾಪಾರ ಶಕ್ತಿಯೆಂದು ಕಂಡುಕೊಳ್ಳುತ್ತಾರೆ; ಆದರೆ ವಿಚಾರಹೀನ ಚಿಕ್ಕಮಕ್ಕಳಂತೆ ತಮ್ಮ ತಲೆಯೆಂಬ, ತಮ್ಮ ಮೆದುಳೆಂಬ, ಈ ಒಂದು ಕ್ಷುದ್ರವಾದ ತಟ್ಟೆಯ ಮೇಲೆ ಅವರು ಖಯಾಲು ಹಚ್ಚಿಕೊಂಡಿದ್ದಾರೆ. "ಈ ಮೆದುಳಿನ ಮೂಲಕ ಮಾಡಿದ ಆಲೋಚನೆ ಮೊದಲಾದ ಕಾರ್ಯಗಳನ್ನು ಮಾತ್ರ ನಾನು ಮಾಡಿದ್ದು; ಮನಸ್ಸಿನಿಂದಲೂ ಬುದ್ಧಿಯಿಂದಲೂ ಮಾಡಿದ ಕ್ರಿಯೆಗಳನು ಮಾತ್ರ ನಾನು ಮಾಡಿದ್ದು; ಇನ್ನು ಯಾವದೇ ರೀತಿಯ ಕಾರ್ಯಗಳು ನಡೆದರೂ ಬೇರೆ ಒಂದನ್ನೂ ನಾನು ಒಪ್ಪಿಕೊಳ್ಳುವದಿಲ್ಲ. ನನ್ನ ಮೆದುಳೆಂಬ ಈ ಒಂದು ನನ್ನ ಮೆಚ್ಚಿನ ತಾಟಿನ ಮೂಲಕ ಒದಗಿಸಿದ್ದನ್ನು ಮಾತ್ರ ನಾನು ಸೇವಿಸುತ್ತೇನೆ." ಎಂದವರು ಹೇಳುತ್ತಾರೆ. ಇಲ್ಲಿಯೇ ಸ್ವಾರ್ಥಪರತೆ ಬರುವದು. ಈ ಒಂದು ಗಂಗಳವನ್ನೇ ತಮ್ಮದೆಂದುಕೊಂಡಿದ್ದಾರೆ; ಈ ಸಣ್ಣ ತಾಟಿನ ಸುತ್ತಲೂ ಮಾತ್ರ ಎಲ್ಲವೂ ಸಂಗ್ರಹವಾಗಿ ರಾಶಿಬೀಳಬೇಕೆನ್ನುತ್ತಾರೆ; ಈ ಮೆದುಳೆಂಬ ತಟ್ಟೆಯನ್ನೇ ತಾವೆಂದುಕೊಂಡಿದ್ದಾರೆ. ತಾವೇ ಮೆದುಳು; ಮೆದುಳೇ ತಾವು; ಆದ್ದರಿಂದ ಪ್ರತಿಯೊಂದೂ ಅದರ ಮೂಲಕವೇ ನಡೆಯಬೇಕು: ಅದರಿಂದ ನಡೆಸಿದ್ದೇ ತಾವು ನಡೆಸಿದ್ದು—ಅದರ ಯೋಗ್ಯತೆಯೇ ತಮ್ಮ ಯೋಗ್ಯತೆ, ಅದರ ಸಾಮರ್ಥ್ಯವೇ ತಮ್ಮ ಸಾಮರ್ಥ್ಯ—ಎಂಬ ಹುಚ್ಚು ಭ್ರಮೆಗೆ ಬಿದ್ದು ಗೌರವ ಬಯಸಿ ಸಾಯುತ್ತಾರೆ. ಎಲ್ಲಾ ಸ್ವಾರ್ಥತೆಗೂ ಚಿಂತೆಗೂ ಕಳವಳಕ್ಕೂ ಕ್ಲೇಶಕ್ಕೂ ಇದೇ ಕಾರಣ. ಈ ತಪ್ಪು ಕಲ್ಪನೆಯನ್ನು ಒಗೆಯಿರಿ. ಈ ಸ್ವಾರ್ಥಪರ ಅಹಂಕಾರವನ್ನು ಮೆಟ್ಟಿ ಮೇಲೇರಿ. ನಿಮ್ಮ ನಿಜವಾದ ಆತ್ಮನೇ ಸರ್ವವೂ ಆಗಿದೆಯೆಂಬುದನ್ನು ಕಂಡುಕೊಳ್ಳಿ; ಇಡೀ ವಿಶ್ವವೇ ನೀವೆಂಬುದನ್ನು ಮನಗಾಣುತ್ತೀರಿ; ಈ ಕ್ಷಣವೇ ನೀವು ಸುಖಿಯಾಗುತ್ತೀರಿ.

"ನೀನಿರುವದೆಲ್ಲಿ?" ಎಂದು ರಾಮನು ಆ ರಾಜಕುಮಾರನನ್ನು ಕೇಳಿದ ಮಾತಿನಲ್ಲಿ ಅವನನ್ನೂ ಸಿಕ್ಕಿಸಿಕೊಂಡು ಅವನ ತಪ್ಪನ್ನು ತೋರಿಸುವದಕ್ಕಾಗಿ ಮಾಡಿದ ಪ್ರಶ್ನೆಯಿದು. ಅದಕ್ಕೆ ಸರಿಯಾಗಿ ಅವನು ತನ್ನ ದೇಶದ ರಾಜಧಾನಿಯಲ್ಲಿ ತಾನು ವಾಸಿಸಿರುವದಾಗಿ ಹೇಳಿದ. "ಅಪ್ಪ ಮಗು! ಆ

ರಾಜಧಾನಿಯು ಮಾತ್ರ ನಿನ್ನದಲ್ಲ; ಇಡೀ ರಾಜ್ಯವೇ ಇಡೀ ದೇಶವೇ ನಿನ್ನದಾಗಿದೆ; ನಿನ್ನ ರಾಜ್ಯದ ಮುಖ್ಯನಗರವು ಮಾತ್ರ ನಿನ್ನದಲ್ಲ. ಈ ಎಲ್ಲಾ ಭವ್ಯಪ್ರದೇಶಗಳೂ ಈ ಸಮ್ಮೋಹಕ ದೃಶ್ಯಗಳೂ ಈ ಗಂಭೀರವಾದ ಹಿಮಾಲಯದ ಶೋಭೆಯೂ ಇವೆಲ್ಲಾ ನಿನ್ನವೇ. ತಮ್ಮಾ; ಆ ಪುಟ್ಟ ಪಟ್ಟಣ ಮಾತ್ರ ನಿನ್ನದಲ್ಲ." ಎಂದು ರಾಮನು ಹೇಳಿದನು.

ಜನರು ಮಾಡುವ ತಪ್ಪು ಇದೇ. ನಿಮ್ಮ ನಿಜವಾದ ಆತ್ಮನ ರಾಜಧಾನಿಯು ನಿಮ್ಮ ಬುದ್ಧಿ, ನಿಮ್ಮ ಮೆದುಳು ಎನ್ನಬಹುದು. ಆದರೆ, ಈ ಪುಟ್ಟ ಮೆದುಳಿನ ರಾಜಧಾನಿಯು ಮಾತ್ರ, ಈ ಮನೋಬುದ್ಧಿಗಳ ರಾಜಧಾನಿಯು ಮಾತ್ರ ನಿಮ್ಮದಲ್ಲ, ಮಿಕ್ಕ ಎಲ್ಲವನ್ನೂ ನಿಮ್ಮದಲ್ಲವೆಂದು ಅಲ್ಲಗಳೆದು ಇದೊಂದನ್ನು ಮಾತ್ರ ನಿಮ್ಮದೆಂದು ಹಕ್ಕು ಸಾಧಿಸುವುದಕ್ಕೆ ನಿಮಗೇನು ಅಧಿಕಾರ? ವಿಶಾಲ ಜಗತ್ತೇ ಇಡೀ ವಿಶ್ವವೇ ನಿಮ್ಮದು. ಈ ಎಲ್ಲಾ ಸೂರ್ಯರೂ ಚಂದ್ರರೂ ಎಲ್ಲಾ ನಕ್ಷತ್ರ ನೀಹಾರಿಕೆಗಳೂ ಗ್ರಹಗಳೂ ಭೂಮಿಗಳೂ ಪ್ರಕಾಶಮಾನವಾದ ಕ್ಷೀರಪಥಗಳೂ ಎಲ್ಲವೂ ನಿಮ್ಮವೇ! ಅಖಿಲಾಂಡಕೋಟಿ ಬ್ರಹ್ಮಾಂಡಗಳೂ ನಿಮ್ಮವೇ! ನೀವೇ ಅಖಿಲಾಂಡಕೋಟಿ ಬ್ರಹ್ಮಾಂಡಗಳ ನಾಯಕರು; ಸಮಸ್ತ ಲೋಕಗಳ ಪ್ರಭುಗಳು. ಇದನ್ನೇ ಅನುಭವದಲ್ಲಿ ತಂದುಕೊಳ್ಳಿ. ಮರೆತು ಕಳೆದು ಕೊಂಡಂತಿರುವ ನಿಮ್ಮ ಜನ್ಮಸಿದ್ಧವಾದ ಹಕ್ಕನ್ನು ನೆನೆದು ಪುನಃ ಸಂಪಾದಿಸಿ ದಂತಾಗಲಿ. ನಿಮ್ಮ ಎಲ್ಲಾ ಚಿಂತೆಗಳೂ ಸಂಕಟಗಳೂ ಮುಕ್ತಾಯವಾಗುತ್ತವೆ.

೧೦೭. ನೀರನ್ನು ದ್ರಾಕ್ಷಾರಸವಾಗಿ ಪರಿವರ್ತಿಸಿದ ಪವಾಡ

(ಕ್ರಿಸ್ತನ ಒಂದು ಪವಾಡದ ಮೇಲಿನ ಪ್ರಬಂಧ)

ಕ್ರಿಸ್ತನು ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿದ ಪವಾಡದ ವಿಷಯದಲ್ಲಿ ಒಮ್ಮೆ ವಿದ್ಯಾರ್ಥಿಗಳು ಒಂದು ಪರೀಕ್ಷೆಯಲ್ಲಿ ಪ್ರಬಂಧವನ್ನು ಬರೆಯಬೇಕಾಗಿತ್ತು. ಆ ಪರೀಕ್ಷಾಮಂದಿರದಲ್ಲಿ ತುಂಬಿದ್ದ ವಿದ್ಯಾರ್ಥಿಗಳು ಬರೆಯುತ್ತಿದ್ದರು. ಪಾಪ! ಒಬ್ಬ ಬಡಪಾಯಿ ವಿದ್ಯಾರ್ಥಿಯು ಮಾತ್ರ, ಒಂದು ಶಬ್ದವನ್ನೂ ಒಂದಕ್ಷರವನ್ನೂ ಬರೆಯದೆ ಅತ್ತಿತ್ತ ನೋಡುತ್ತಾ ಸಣ್ಣಗೆ ಹಾಡಿಕೊಳ್ಳುತ್ತಾ ನಿಶ್ಚಿಂತೆಯಿಂದ ಕುಳಿತಿದ್ದನು. ಆ ಪರೀಕ್ಷಾ ಸಮಯದಲ್ಲಿ ಕೂಡ ಅವನು ತಮಾಷೆ ಮಾಡುತ್ತಾ ವಿನೋದವಾಗಿದ್ದ. ಅವನು ಸ್ವತಂತ್ರ ಮನೋಧರ್ಮದ ವ್ಯಕ್ತಿಯಾಗಿದ್ದ. ಆಗಿನ ಕಾಲಾವಧಿಯು ಮುಗಿದು ಮೇಲ್ವಿಚಾರಕ ಅಧಿಕಾರಿಯು ಎಲ್ಲರ ಉತ್ತರ ಪತ್ರಿಕೆ ಗಳನ್ನೂ ಸಂಗ್ರಹಿಸುತ್ತಿರುವಾಗ ಅವನು ಏನನ್ನೂ ಬರೆಯದೆ ಮೋಜಾಗಿ ಕುಳಿತಿದ್ದ. ಆ ವಿದ್ಯಾರ್ಥಿ "ಬೈರನ್" ಅನ್ನು ಕುರಿತು "ಆಹಾ! ನೀನು ಬಹಳ ದೀರ್ಘವಾದ ಪ್ರಬಂಧವನ್ನು ಬರೆದು ಆಯಾಸಪಟ್ಟಿದ್ದಿ ಪಾಪ! ಅಲ್ಲವೆ?" ಎಂದು ತಮಾಷೆ ಮಾಡಿದನು. ಆದರೆ ಆಗ ಬೈರನ್ನನು ಲೇಖನಿಯನ್ನು ತೆಗೆದುಕೊಂಡು ಉತ್ತರ

ಪತ್ರಿಕೆಯ ಮೇಲೆ ಸರ್ರನೆ ಒಂದೇ ವಾಕ್ಯವನ್ನು ಬರೆದು, ಆ ಅಧಿಕಾರಿಗೆ ಪತ್ರಿಕೆಯನ್ನು ಕೊಟ್ಟನು, ಆದರೆ ಪರೀಕ್ಷಾ ಫಲಿತಾಂಶವು ತಿಳಿದಾಗ ಬೈರನ್ನನು ಪ್ರಥಮ ಬಹುಮಾನ ಪಡೆದಿದ್ದನು. ಬೈರನ್ ಸೋಮಾರಿಯೆಂದು ತಿಳಿದಿದ್ದ ಆ ಸೂಪರಿನ್‌ಟೆಂಡೆಂಟರು, ಅವಸರದಿಂದ ಒಂದೇ ವಾಕ್ಯವನ್ನು ಗೀಚಿಕೊಟ್ಟಿದ್ದ ಆತನಿಗೆ ಮೊದಲನೆಯ ಬಹುಮಾನ ಬಂದಿರುವದನ್ನು ನೋಡಿ ಆಶ್ಚರ್ಯಪಟ್ಟರು. ಪ್ರಥಮ ಬಹುಮಾನವನ್ನು ಪಡೆದಿದ್ದ ಆ ಪ್ರಬಂಧವನ್ನು ತಮ್ಮೆಲ್ಲರ ಎದುರಿಗೂ ಓದಿ ಹೇಳಬೇಕೆಂದು ಪರೀಕ್ಷಾ ಸ್ಪರ್ಧಿಗಳಾದ ಎಂಕ್ಕ ವಿದ್ಯಾರ್ಥಿಗಳು ಸೂಪರಿನ್‌ಟೆಂಡೆಂಟರನ್ನು ಪ್ರಾರ್ಥಿಸಿದರು. ಅದರಂತೆ ಅವರು ಓದಿ ಹೇಳಿದರು. "ನೀರು (ಜಲ ದೇವಿಯು) ತನ್ನ ಪ್ರಭುವನ್ನು ಕಂಡು ನಾಚಿಕೆಯಿಂದಲೂ ಸಂತೋಷದಿಂದಲೂ ಮುಖದಲ್ಲಿ ಕೆಂಪೇರಿದಳು." ಆ ಪ್ರಬಂಧವು ಇಷ್ಟೇ ಆಗಿತ್ತು, ಕ್ರಿಸ್ತನು ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿದ ಪವಾಡವೇ ವಿಷಯವಾಗಿತ್ತು. ಇಡಿಯ ಪ್ರಬಂಧವೇ ಅದಾಗಿತ್ತು, ಬೈರನ್ನಿನ ಪ್ರಬಂಧವು ವಿಚಿತ್ರವಾಗಿತ್ತು. ಲಜ್ಜೆಯಿಂದ ಮುಖವು ಕೆಂಪೇರುತ್ತದೆ. ನೀರು ಕೆಂಪಾದ ದ್ರಾಕ್ಷಾರಸವಾಗಿತ್ತು, ತರುಣಿಯು ತನ್ನ ಪ್ರಿಯನ ದರ್ಶನ ಸ್ಪರ್ಶನಾದಿಗಳಿಂದ ಲಜ್ಜಿತಳಾಗುತ್ತಾಳೆ. ನೀರೂ, ಆಪೋ ದೇವಿಯೂ, ಹಾಗೆಯೇ ಆದಳು. ಅಷ್ಟೇ. ದಿವ್ಯವಾದ ಭಾವನೆ! ಸೊಗಸಾದ ಪ್ರಬಂಧ!

ನಿಮ್ಮೊಳಗಿರುವ ಆತ್ಮನ ಅನುಭವ ಪಡೆಯಿರಿ. ತಂದೆಯೂ ಮಗನೂ ಒಂದೇ ಎಂಬದನ್ನು ಕ್ರಿಸ್ತನಂತೆ ಮನಗಾಣಿ. "ಆದಿಯಲ್ಲಿ ಶಬ್ದವಿತ್ತು; ಆ ಶಬ್ದವು ದೇವರಲ್ಲಿತ್ತು." ಇದನ್ನು ತಿಳಿಯಿರಿ. ಸ್ವರ್ಗಗಳ ಸ್ವರ್ಗವೇ ನಿಮ್ಮೊಳಗಿದೆ. ಅದನ್ನು ತಿಳಿಯಿರಿ. ನೀವದನ್ನು ಅನುಭವಕ್ಕೆ ತಂದುಕೊಂಡರೆ, ನೀವೆಲ್ಲಿ ಹೋದರೂ ಅತ್ಯಂತ ಮಲಿನವಾದ ನೀರು ಸಹ ನಿಮಗೆ ತಳತಳಿಸುವ ದ್ರಾಕ್ಷಾರಸವಾಗುತ್ತದೆ. ಕತ್ತಲುಗವಿಯಾದ ಕಾರಾಗೃಹ ಸಹಿತ ನಿಮಗೆ ಸ್ವರ್ಗಗಳ ಸ್ವರ್ಗವಾಗಿ ಪರಿವರ್ತನೆಯಾಗುತ್ತದೆ. ನಿಮಗೆ ಕಷ್ಟಲೇಶವೂ ಇರುವದಿಲ್ಲ. ನೀವೇ ಸರ್ವೇಶ್ವರರಾಗುತ್ತೀರಿ.

೧೦೮. ಆತ್ಮಾನುಭವಕ್ಕೆ (ಮೋಕ್ಷಕ್ಕೆ) ಉಪಾಯ

(ಗಿಳಿಯೂ ಮತ್ತು ಮುನಿಯೂ)

ಒಮ್ಮೆ ಇಂಡಿಯಾ ದೇಶದಲ್ಲಿ, ಪ್ರಾಜ್ಞರು ಸೇರಿದ್ದ ಒಂದು ಸಭೆಯಲ್ಲಿ, ವಿದ್ವಾಂಸರು ಹಿಂದುಗಳ ವೇದಶಾಸ್ತ್ರಗಳಿಂದ ಪವಿತ್ರಗ್ರಂಥವೊಂದನ್ನು ವಾಚನಮಾಡಿ, ವಿವರಿಸುತ್ತಿದ್ದರು. ಆ ದಿನದ ಸಭಾಕಾರ್ಯವು ಮುಕ್ತಾಯವಾಗುವ ಸಮಯದಲ್ಲಿ ಶ್ರೋತೃವೊಬ್ಬರು ಎದ್ದು, ಆ ಪಟ್ಟಣಕ್ಕೆ ಹೊಸದಾಗಿ ಬಂದು ನದೀ ತೀರದಲ್ಲಿ ವಾಸ ಮಾಡುತ್ತಿದ್ದ ಮಹಾತ್ಮರೊಬ್ಬರ ವಿಷಯವನ್ನು ಹೇಳಿ, ಅವರ ಯೋಗ್ಯತೆಯನ್ನು

ಬಹಳವಾಗಿ ಕೊಂಡಾಡಿದರು. ಆಗ, ಆ ಮಹಾತ್ಮರ ವಿಚಾರವನ್ನು ಹೆಚ್ಚಾಗಿ ತಿಳಿಯಬೇಕೆಂದು ಜನರು, ಸ್ವಾಭಾವಿಕವಾಗಿ ಕಾತರರಾದರು. ಅಲ್ಲಿ ಬಹುಕಾಲದಿಂದ ಬಂಧನದಲ್ಲಿದ್ದ ಗುಲಾಮನಂತೆ, ಒಂದು ಪಂಜರದಲ್ಲಿದ್ದ ಗಿಳಿಯೂ ಆ ಪಟ್ಟಣಕ್ಕೆ ಹೊಸದಾಗಿ ಬಂದಿದ್ದ ಸಾಧುಗಳ ವಿಷಯವನ್ನು ಆಲಿಸುತ್ತಿತ್ತು. ಸಭೆಯಲ್ಲಿ ಎಲ್ಲರಿಗೂ ಆ ಸುದ್ದಿಯನ್ನು ಹೇಳಿದ ಆ ಸಭ್ಯನನ್ನು ಕುರಿತು ಆ ಗಿಳಿಯು, "ಸ್ವಾಮಿ! ಬಹುಕಾಲದಿಂದ ಸೆರೆಯಲ್ಲಿ ಸಿಕ್ಕು ನರಳುತ್ತಿರುವ ಈ ಗಿಳಿಯ ಪರವಾಗಿ ಅಥವಾ ಬಂಧನದಲ್ಲಿರುವ ಒಬ್ಬ ಗುಲಾಮನ ಪರವಾಗಿ, ದಯವಿಟ್ಟು ತಾವು ಆ ಮಹಾತ್ಮರಲ್ಲಿಗೆ ಹೋಗಿ, ನನ್ನಂಥ ಸೆರೆಯಾಳುಗಳ ಬಿಡುಗಡೆಗೆ ಉಪಾಯವೇನು ? ಎಂಬದನ್ನು ಕೇಳಿ, ಅವರ ಉತ್ತರವನ್ನು ನನಗೆ ತಿಳಿಸಬೇಕು" ಎಂದು ಹೇಳಿತು. ಅದರಂತೆ ಆ ಸಜ್ಜನನು ನದಿಗೆ ಹೋಗಿ, ಅಲ್ಲಿ ಸ್ನಾನ ಮಾಡುತ್ತಿದ್ದ ಆ ಮಹಾತ್ಮರನ್ನು ಕುರಿತು, "ಗುರುವೇ! ಸೆರೆಯಲ್ಲಿದ್ದ ಒಂದು ಗಿಳಿಯು ಅಥವಾ ಗುಲಾಮನು ಬಿಡುಗಡೆ ಹೊಂದುವ ಬಗೆಯೇನು ?" ಎಂದು ಪ್ರಶ್ನಿಸಿದನು. ಈ ಪ್ರಶ್ನೆಯನ್ನು ಕೇಳಿದ ಕೂಡಲೇ, ಆ ಮುನಿಯು ಕಣ್ಣು ಮುಚ್ಚಿ, ಮುಳುಗಿ, ಆ ಪ್ರವಾಹದಲ್ಲಿ ತೇಲಿ ಹೋದನು. ಅದನ್ನು ನೋಡುತ್ತಿದ್ದ ಜನರು, ಆ ಮುನಿಯು ಸತ್ತನೆಂದೇ ತಿಳಿದರು. ಅವರಿಗೆ ವಿಸ್ಮಯವೂ ವಿಷಾದವೂ ಆಯಿತು. ಆ ಗಿಳಿಯ ಅಥವಾ ಗುಲಾಮನ ಬಂಧನದ ದುಃಖವನ್ನು ಕೇಳಿ, ಸಹಿಸಲಾರದೇ ಕೋಮಲ ಮನಸ್ಸಿನ ಸಾಧುಗಳು, ನದಿಯಲ್ಲಿ ಮೂರ್ಛೆ ಹೊಂದಿದುದರಿಂದ ಜೀವ ಬಿಟ್ಟಿರಬಹುದೆಂದು ಊಹಿಸಿ ಜನರು. ವಿವೇಚನೆಯಿಲ್ಲದೆ, ಅವರು ಸ್ನಾನ ಮಾಡುವಾಗ ಪ್ರಶ್ನೆ ಕೇಳಿದ ಮನುಷ್ಯನನ್ನು ದೂಷಿಸಿದರು. ಮರುದಿನ, ಪಂಜರದಲ್ಲಿ ಗಿಳಿಯಿದ್ದ ಸ್ಥಳದಲ್ಲಿಯೇ ಪುನಃ ಸಭೆ ಸೇರಿತು. ಗಿಳಿಯು ಬಹಳ ಕಾತರದಿಂದ, ತನ್ನ ಸಂದೇಶಕ್ಕೆ ಆ ಮಹಾತ್ಮರ ಉತ್ತರವೇನಿರಬಹುದೆಂದು ಆ ಮನುಷ್ಯನನ್ನೇ ಕೇಳಿತು. ಅಯ್ಯೋ! ಆ ಪಾಪಿಷ್ಠ ಗಿಳಿಯ ಅಥವಾ ಗುಲಾಮನ ದುರ್ದೈವದ ಸಂದೇಶವನ್ನು ಆ ಮಹಾತ್ಮನಿಗೆ ವಹಿಸಿದ ಮಹಾಪರಾಧಕ್ಕೆ, ಒದಗಿದ ಮಹಾ ವಿಪತ್ತನ್ನು ವರ್ಣಿಸಲಾರೆನೆಂದು, ಅವನು ಕೋಪ-ತಾಪಗಳನ್ನು ತೋರಿಸಿದನು, ಗಿಳಿಯು ಬಿಡದೆ ಬಹಳ ಗೋಗರೆದು, ಏನಿದ್ದರೂ ತನಗೆ ತಿಳಿಸಿ ಕಾಪಾಡಬೇಕೆಂದು ಬೇಡಿತು. ಅವನು ಎಲ್ಲವನ್ನೂ ವಿವರಿಸಿ, ಗಿಳಿಯ ಸಮಸ್ಯೆಯನ್ನು ನದಿಯಲ್ಲಿ ಸ್ನಾನಮಾಡುತ್ತಿದ್ದ ಆ ಮುನಿಗೆ ತಿಳಿಸಿದೊಡನೆಯೇ ಅವನು ಪ್ರಾಯಶಃ ಅನುಕಂಪದಿಂದ ಆಘಾತಹೊಂದಿ, ಮೂರ್ಛೆಗೊಂಡು ನೀರಿನಲ್ಲಿ ಮುಳುಗಿ, ತೇಲಿಹೋದನೆಂದೂ ಅವನು ಸತ್ತಿರಬೇಕೆಂದೂ ಆ ಗಿಳಿಗೆ ತಿಳಿಸಿದನು. ಈ ವಿಚಾರವನ್ನು ಕೇಳಿದೊಡನೆಯೇ ಗಿಳಿಯೂ ಪಂಜರದಲ್ಲಿ ಕಣ್ಣುಗಳನ್ನರಳಿಸಿ, ಗಿರ್ರನೆ ತಿರುಗಿ, ಚಿಟ್ಟನೆ ಚೀರಿ, ಪಟಪಟನೆ ರೆಕ್ಕೆಗಳನ್ನು ಬಡಿದು, ಬಿದ್ದು ತಲೆ ಮುರಿದಂತೆ ತೋರಿ ಸತ್ತಿತು. ಸುತ್ತಲು ನೆರೆದಿದ್ದ ಸಭಾಸದರೆಲ್ಲಾ ಹಿಂದಿನ ದಿನದ ಸಭಾ ಮುಕ್ತಾಯದಿಂದ ಆ ನಿಮಿಷದ ವರೆಗೆ ನಡೆದ ಅನಿರೀಕ್ಷಿತ ಘಟನಾವಳಿಗಳನ್ನೆಲ್ಲಾ ನೆನೆನೆನೆದು ವಿಮರ್ಶಿಸಿ, ಅದರ ರಹಸ್ಯವೇನೆಂದು

ತಿಳಿಯಂದೆ ಆಶ್ಚರ್ಯಪಟ್ಟರು. ಗಿಳಿಯ ಸಂದೇಶವನ್ನು ಕೇಳಿ ಮುನಿಯು ಏಕೆ ಎಚ್ಚರದಪ್ಪಿ ಮುಳುಗಬೇಕು ? ಆ ವರ್ತಮಾನವನ್ನು ಕೇಳಿದೊಡನೆಯೇ ಹೀಗೆ ಗಿಳಿಯೂ ಏಕೆ ಸಾಯಬೇಕು ? ಇದರ ಗೂಢವೇನೆಂದು ಜನರು ತಿಳಿಯದೆ ಬೆಕ್ಕಸ ಬೆರಗಾಗಿದ್ದರು. ಆಗ, ಮುನಿಯು ವಾತ್ಸಲ್ಯದಿಂದ ಸತ್ತ ಗಿಳಿಗೆ ಸಮಾಧಿಯನ್ನಾದರೂ ಮಾಡಬೇಕೆಂದು, ಅದನ್ನು ಪಂಜರದಿಂದ ಹೊರಗೆ ತೆಗೆದಿಟ್ಟರು. ಜನರು ಆಶ್ಚರ್ಯಸಾಗರದಲ್ಲಿ ಮುಳುಗಿ, ಎಚ್ಚರದಪ್ಪಿರಲು, ಹೊರಗಿಟ್ಟ ಗಿಳಿಯು ಆ ನಿಮಿಷವೇ ಪುರ್ರನೆ ಹಾರಿ, ಮಿಂಚಿನ ವೇಗದಿಂದ ದೂರ ಹೋಗಿ, ಆ ಜನರನ್ನು ಕುರಿತು ಹೇಳಿತು:—"ಓ ಶ್ರೋತೃಗಳೆ ! ಭಕ್ತರೆ ! ನಿತ್ಯವೂ ನೀವು ಇಲ್ಲಿ ಧರ್ಮಸಭೆ ಸೇರಿ, ಪವಿತ್ರವಾದ ಶಾಸ್ತ್ರವಿಚಾರಗಳನ್ನು ಶ್ರವಣ ಮಾಡುತ್ತೀರಿ. ಆದರೆ, ಆತ್ಮಾನುಭವವನ್ನೂ ಮೋಕ್ಷವನ್ನೂ ದಿವ್ಯಸ್ಫೂರ್ತಿಯನ್ನೂ ದೈವ ಪ್ರೇರಣೆಯನ್ನೂ ಹೇಗೆ ಸಂಪಾದಿಸಬೇಕೆಂಬುದನ್ನು ನೀವು ತಿಳಿದಿಲ್ಲ. ನನ್ನ ಸಂದೇಶಕ್ಕೆ ಆ ಮಹರ್ಷಿಯಿಂದ ದೊರೆತ ಉತ್ತರದಿಂದ ಇವತ್ತು ನಾನು ಆ ಉಪಾಯವನ್ನು ತಿಳಿದೆ, ಆ ಮುನಿಯು ಮೂರ್ಛೆಗೊಳ್ಳಲಿಲ್ಲ. ಅವನು ನನ್ನ ಪ್ರಶ್ನೆಗೆ ಉತ್ತರವಿತ್ತ. ಅವನು ಮೂರ್ಛೆಹೊಂದಿದಂತೆ ಬಿದ್ದು ನನ್ನ ಮೋಕ್ಷಕ್ಕೆ ಮಾರ್ಗವನ್ನು ಸೂಚಿಸಿದ. ಅವನಾ ಮೌನಬೋಧೆಯ ಗೂಢಾರ್ಥವನ್ನು ತಿಳಿದ ನಾನು, ನೀವೆಲ್ಲರೂ ನೋಡುತ್ತಿರುವಂತೆ ಮುಕ್ತನಾಗಿದ್ದೇನೆ. ಮೋಕ್ಷಕ್ಕೆ ಉಪಾಯವೆಂದರೆ, ತೋರಿಕೆಯ ಸಾವು. ಮುಮುಕ್ಷುವು ಬದುಕಿಯೂ ಸತ್ತಂತಿರಬೇಕು ; ಅದರ ಹೊರತು ಬೇರೆ ಗತಿಯಿಲ್ಲ ; ದೇಹದ ಮೋಹವನ್ನು ಶಿಲುಬೆಗೇರಿಸಬೇಕು. ದೈವೀಸ್ಫೂರ್ತಿಗೆ ಅದೊಂದೇ ಮಾರ್ಗ. ಆತ್ಮಾನುಭವಕ್ಕೆ ಹಾದಿಯೆಂದರೆ, ದೇಹವನ್ನು ಮೀರಿ ನಿಲ್ಲುವುದು ; ಆ ಸ್ಥಿತಿಗೆ ಆಧ್ಯಾತ್ಮಿಕವಾಗಿ ಏರಬೇಕು ; ಅಲ್ಲಿ ದೇಹವು ಸತ್ತಂತೆ ಇರುತ್ತದೆ ; ಅಲ್ಪವಾದ ವ್ಯಕ್ತಿಭಾವನೆಯು ಮರೆತಿರುತ್ತದೆ ; ಪೂರಾ ನಷ್ಟವಾಗಿರುತ್ತದೆ. ಸಂಪೂರ್ಣವಾಗಿ ಹಿಂದೆ ಬಿದ್ದಿರುತ್ತದೆ. ನಮ್ಮೊಳಗೆ 'ನಾನು' ಎನ್ನುವುದು ಸಾಯಬೇಕು ; ಅಥವಾ ಅದು ತೋರಿದರೂ ತನ್ನ ದೃಷ್ಟಿಗೆ ಅದು ಇಲ್ಲದಂತಿರಬೇಕು. ನಮ್ಮ ಆಶೆಗಳೂ ಆಸಕ್ತಿಗಳೂ ಸಾಯಬೇಕು ; ಹೊರಗಿನ ಲೋಕದ ಎಲ್ಲಾ ಸಂಬಂಧಗಳಿಗೂ 'ನಾನು' ಸಾಯಬೇಕು. ಹೀಗೆ ಉತ್ತಮವಾದ ಜೀವನಕ್ಕೆ ಮಿಥ್ಯಾವೃತ್ತಿಗಳ ಸಾವೇ ಸಾಧನ. ಭಗವಂತನ ಪ್ರೇರಣೆಗೂ ಅಕ್ಷಯವಾದ ದಿವ್ಯಸ್ಫೂರ್ತಿಗೂ ಸುಲಭವಾದ ಮೋಕ್ಷಕ್ಕೂ ಇದೊಂದೇ ಉಪಾಯ !" ಆ ಶುಕಋಷಿಯು ಹೀಗೆ ಬೋಧಿಸಿ, ಕಣ್ಮರೆಯಾಯಿತು.

೧೦೯. ವೇದಾಂತ ಬೋಧೆಯ ಜೋಗುಳ

(ಮದಾಲಸಾ ಮಹಾರಾಣಿ ಮತ್ತು ರಾಜಕುಮಾರರು)

ಇಂಡಿಯಾದೇಶದ ಇನ್ನೊಬ್ಬ ಮಹಾರಾಣಿಯ ಕಥೆಯಿದೆ. ಆಕೆ ತನ್ನ ಎಲ್ಲಾ ಮಕ್ಕಳೂ ಆತ್ಮಜ್ಞಾನದಿಂದ ಪರಿಪೂರ್ಣರಾಗುವಂತೆ ತಾನು ಮಾಡಬೇಕೆಂದು

ಪ್ರತಿಜ್ಞೆ ಮಾಡಿದಳು. ತನ್ನ ಎಲ್ಲಾ ಮಕ್ಕಳನ್ನೂ ಜನನ ಮರಣ ರೂಪ ಸಂಸಾರ ದಿಂದ ಬಿಡುಗಡೆ ಮಾಡಬೇಕೆಂದು ವ್ರತವನ್ನು ತೊಟ್ಟಳು. ಇಂಡಿಯಾದೇಶದಲ್ಲಿ ತಾಯಿಯರ ಒಂದೇ ಒಂದು ಧ್ಯೇಯವು ತಮ್ಮ ಮಕ್ಕಳನ್ನು ಸಂಸಾರದಿಂದ ಮುಕ್ತ ರನ್ನಾಗಿ ಮಾಡುವುದೇ ಆಗಿದೆ. ಮುಕ್ತನಾದ ಅನುಭಾವಿಯು ಮತ್ತೆಂದೂ ಹುಟ್ಟುವುದಿಲ್ಲ. ಆಕೆಯು ತನ್ನ ರಾಜ್ಯಗಳಲ್ಲೆಲ್ಲಾ ಆತ್ಮಾನುಭವಿಗಳಾದ ದೈವೀ ಮನುಷ್ಯರನ್ನೇ ತುಂಬಬೇಕೆಂದೂ ಪ್ರತಿಜ್ಞೆ ಮಾಡಿದಳು.

ತನ್ನ ಪ್ರಜೆಗಳನ್ನೆಲ್ಲಾ ದೈವೀ ಜನರನ್ನಾಗಿ ಮಾಡಲು ಆಕೆ ಇಚ್ಛಿಸಿದಳು. ಇವೆಲ್ಲಾ ಒಬ್ಬ ತಾಯಿಯ ವ್ರತವಾಗಿತ್ತು; ಅದರಲ್ಲಿ ಆಕೆಯು ಯಶಸ್ವಿಯಾದಳು. ಆಕೆಯ ಮಕ್ಕಳೆಲ್ಲಾ ದೇವ-ಮಾನವರಾಗಿದ್ದರು. ಅವರು ಮಹಾ ತ್ಯಾಗಿಗಳೂ ಯೋಗಿಗಳೂ ಆಗಿದ್ದರು. ಇಡೀ ಜನಾಂಗವನ್ನೇ ಅವರು ಆಳಿದರು, ಆಕೆಯ ಪ್ರಜೆಗಳೆಲ್ಲಾ ಮುಕ್ತರಾದರು, ಇಷ್ಟೆಲ್ಲಾ ಒಬ್ಬಳೇ ಹೆಂಗಸು ಮಾಡಿದಳು. ಆಕೆಯ ವಿಧಾನ ಏನಾಗಿತ್ತೆಂದರೆ, ಆಕೆಯು ತನ್ನ ಸಣ್ಣ ಮಕ್ಕಳನ್ನು ತೊಟ್ಟಿಲಲ್ಲಿಟ್ಟು ತೂಗು ವಾಗಲೂ ಸ್ತನ್ಯಪಾನ ಮಾಡಿಸುವಾಗಲೂ ಆಡಿಸುವಾಗಲೂ ಯಾವಾಗಲೂ ಹಾಡು ತ್ತಿದ್ದಳು; ಅಧ್ಯಾತ್ಮ ಗೀತೆಗಳನ್ನು ಮಂಜುಳವಾಗಿ ಗಾನಮಾಡುತ್ತಿದ್ದಳು. ತನ್ನ ಹಾಲಿನ ಜೊತೆಗೇ ಆತ್ಮಜ್ಞಾನದ ಅಮೃತವನ್ನೂ ಆಕೆ ಮಕ್ಕಳಿಗೆ ಹನಿಹನಿಯಾಗಿ ಕುಡಿಸುತ್ತಿದ್ದಳು. ಅವರು ಬೆಳೆಬೆಳೆದಂತೆ ತಿಳಿಯಾದ ಮಾತಿನಲ್ಲಿ—ಅವರು ತಿಳಿಯು ವಂತೆ—ಪರಮಾರ್ಥತತ್ತ್ವಗಳನ್ನೇ ತಿಳಿಸುತ್ತಿದ್ದಳು. ಆಕೆ ತೊಟ್ಟಿಲು ತೂಗುವಾಗ ಜೋಗುಳವನ್ನು ಹಾಡುತ್ತಾ ಮಕ್ಕಳಿಗೆ ವೇದಾಂತ ಸುಧೆಯನ್ನು ಕುಡಿಸುತ್ತಿದ್ದಳು.

ಮದಾಲಸಾ ಮಾತೆಯ ಜೋಗುಳ

1

ಮಲಗು ನಿದ್ರಿಸು ಮಗುವೆ ಸುಖದಿ ಮಲಗು ;
ಮಲಗು ಮಗು ಬಿಕ್ಕದಲೆ, ಕಿರಿಚದಲೆ, ಅಳದೆ ಮಲಗು.
ಶಾಂತಿಯಿಂ ವಿಶ್ರಮಿಸು, ಭಯಗಳೆಲ್ಲವನು ದೂಡಿ,
ದೇವತೆಗಳೆಲ್ಲ ಭಲೆ! ನಿನ್ನ ಕೊಂಡಾಡುವರು ಹಾಡಿ,
ಸ್ವೇಚ್ಛೆಯಿಂ ಸೌಂದರ್ಯ, ಸಂಪತ್ತು, ವರಪ್ರದಾತ
ನಿನ್ನಯಾ ನಿಷ್ಕಳಂಕಾತ್ಮ ಪಾಲಿಪ ವಿಧಾತ.

ಮಲಗು ಮುದ್ದುಮಗ ಸ್ವಸ್ಥ ಸುಖದಿ ಮಲಗು

2

ಕೋಮಲ ಗುಲಾಬಿಗಳು, ಬೆಳ್ಳಿ ಮಂಜುಹನಿ ಮಧುರ,
ಜೇನು, ಪರಿಮಳವು, ಮಂದಾನಿಲ, ಸುಖೋಷ್ಣ ಪ್ರಸಾರ

ಮಂಜುಳದ ಗಾನಗಳಂ, ಪ್ರಿಯತಮ ಸಂಗೀತೆಗಳಂ,
ಕಣ್ಣು ಕಿವಿಗಳ ತೋಷಿಪ ಸಮಸ್ತ ಪ್ರಿಯ ವಿಷಯಂಗಳಂ
ಬರುಮವದೈ(ಸುರಿವದೈ) ನಿನ್ನ ಸ್ವರ್ಗೀಯ ಸೌಖ್ಯದ ಸೆಲೆಯಿಂದೆ
ಶುದ್ಧ, ಪರಿಶುದ್ಧ ನೀ ನಿರ್ಮಲಾತ್ಮನೆ ಇರುವೆ ಓಂ.
ಮಲಗು ನಿದ್ರಿಸು ಯೋಗಸುಖದಿ ಮಲಗು

3

ಇಲ್ಲ ವೈರಿಗಳಂ, ಭಯಮಿಲ್ಲವೈ ಬಾಧೆಯಿಲ್ಲ,
ನಿತ್ಯಾತ್ಮ ! ನೀ ಶುದ್ಧ ನಿನಗಾವ ಸೋಂಕೆ ಇಲ್ಲ,
ನಿದ್ರೆಯಾ ಸವಿ, ಸೊಗಸು, ಕೋಮಲತೆ, ಸೌಮ್ಯಶಾಂತಿ,
ನಿನ್ನಾತ್ಮವನು ಪೋಷಿಪುದು ಸೌಖ್ಯದಾ ಪ್ರಶಾಂತಿ,
ಓ ! ಪ್ರಿಯತಮೋಂಕಾರ ! ಎತ್ತಿ ನಿಲಿಸಿದೆ ನೀನೆ.
ಥಳಥಳಿಪ ನಕ್ಷತ್ರದಾಗಸದ ಗುಮ್ಮಟವನೇ.
ಮಲಗು ಮೋಹನ ! ಆತ್ಮಸುಖದಿ ಮಲಗು,

4

ನಿನ್ನಾಟದಾ ಚೆಂಡುಗಳು ಸೂರ್ಯ ಚಂದ್ರಮರು,
ನಿನ್ನ ಮಂದಿರವ ರಂಜಿಪವು ಮಳೆಬಿಲ್ಲು ನೂರು.
ಕ್ಷೀರಪಥಗಳು, ನಿನ್ನಯ ವಿಹಾರಕಾಗಿಹವು,
ಮೋಡಗಳು ಕೂಡಿದರೆ ನಿನ್ನ ಮಾತಾಡುವವು,
ಗೋಳಗಳೆ ಗೊಂಬೆಗಳು ಹಾಡಿ ಕುಣಿದಲೆಯುವವು,
ಓಂ ತತ್ಸದೋಂ ಓಂ ಎನುತ ನಿನ್ನ ನುತಿಸುತಿಹವು.
ಮಲಗು ದೇವನೆ ! ನಿತ್ಯ ಸುಖದಿ ಮಲಗು.

5

ಕಮಲ ಮಲ್ಲಿಗೆಗಳಲಿ ಪುಷ್ಕರಿಣಿ ನದಿಗಳಲಿ,
ನಿನ್ನ ನಿದ್ರಿಪ ಸೊಗಸ ನಾನೆನಿತು ವರ್ಣಿಸಲಿ !
ದೇಶಕಾಲಗಳೆಂಬ ಬೆಚ್ಚನೆಯ ಹೊದಿಕೆಗಳು
ಉರುಳಿದವು ನಿದ್ರಿಸುವ ತೋಳಿನಿಂ ತೆರೆದು ಮುಖವ
ನಗುತಿರುವ ಕಣ್ಣುಗಳ ತುಂಟ ಪಗು ಮಲಗಿರಲು
ಓರೆಗಣ್ಣಿಂ ನೋಡಿ ನಲಿ ; ದೇವನವ ಬೆಳಗಿರಲು,
ಮಲಗು ಸುಮ್ಮನೆ, ಚಿಂತೆ ಮಾಡದಲೆ ಮಲಗು.

6

ಕೋಕಿಲೆಗಳಾ ತೀಕ್ಷ್ಣ, ಉಚ್ಚವಾದಿಂಚರವು
ನಿನ್ನಾಯ್ಕೆಯಾ ಸಿಳ್ಳು ಸೀಟಿಗಳು ಕಲರವವು,
ಗುಬ್ಬಿಗಳು ಗಾಳಿಗಳು ಮತ್ತೆಲ್ಲ ತಾರೆಗಳು,
ಅವು ನಿನ್ನ ಆಟದಾ ಬೊಂಬೆಗಳು ತೇರುಗಳು,
ಜಗವು ಕೇವಲ ನಿನ್ನ ಲೀಲಾಮಯ ಸ್ವಪ್ನವಿದು.
ಹೊರೆಗೆಲ್ಲ ತೋರಿಬರು ನಿನ್ನೊಳಗೇ ಇರುತಿಹುದು.

ಮಲಗು ವತ್ಸನೆ ಪ್ರೇಮ ಸುಖದಿ ಮಲಗು

7

ವಿಶ್ರಾಂತಿ ನಿದ್ರೆಗಳ ಓ! ಎಚ್ಚರದ ನೆಲೆಯೆ!
ಗಂಭೀರ ವಿಜ್ಞಾನ ಸುಖದ ಓ! ಪಟು ಸೆಲೆಯೆ!
ಜೀವನದ ಮೇಣ್ ಕ್ರಿಯೆಯ ಓ! ಶಾಂತ ಚಿಮ್ಮ ಚಿಲುಮೆ!
ಹೋರಾಟ ಒಡಕುಗಳ ಓ! ಮುಂದು ಕಾರಣದೊಲುಮೆ!
ಮಿಂತಿಗೊಳಿಪ ಕತ್ತಲೆಗೆ ಬೆಸಸು ನೀ ಓ! ನಮಸ್ತೇ!
ಓ! ನಮೋ! ಸ್ವಸ್ತಿ! ಭೋ! ಭೋ! ಸ್ವಸ್ತಿ! ಓ! ನಮಸ್ತೇ!

ಪವಡಿಸೈ ಪರಮಾತ್ಮ! ಶಿಶುವೆ ನೀ ಪವಡಿಸೈಯಾ

8

ಓ! ಪಕ್ಷಿ ರಾಜೇಂದ್ರ! ದಿವ್ಯಾತ್ಮ ಗರುಡ! ನಿನ್ನ,
ಒಡಿಯುತಿಹ ರೆಕ್ಕೆಗಳ ಹೊಗಳು ಶಬ್ದಗಳೆ ಚೆನ್ನ
ಅವೆ ರಮ್ಯ ವಸ್ತುಗಳು ಮೋಹಕ ಪದಾರ್ಥಗಳು,
ಇಲ್ಲದಿರೆ ನಿನ್ನ ರೆಕ್ಕೆಯು ಓಡುವಾ ನೆರಳುಗಳು.
ಮುಗ್ಧಗೊಳಿಸುವ ಸೊಬಗು ಅರೆತೆರೆದು ಮೆರೆಸುತಿದೆ,
ಮತ್ತೆ ತೆರೆಯಂತೆ ಅದು ಅರೆಮುಚ್ಚಿ ಮರೆಸುತಿದೆ.
ಈ ತೆರೆಯ ಧರಿಸಿರ್ಪ ನೀನೆ ಮಧುರಾತ್ಮ ಓಂ,
ಸತ್ಯಾತ್ಮ ನೀನೆ ಓಂ, ಪರಮಾತ್ಮ ನೀ ತತ್ಸದೋಂ.

ಮಲಗು...............

ಆಕೆಯು ಏಳುಜನ ಮಕ್ಕಳು ತಮ್ಮಲ್ಲಿ ದಿಟ್ಟತೆಯನ್ನು ತುಂಬಿಕೊಂಡು ಮನೆಯನ್ನು ಬಿಟ್ಟು ಹೊರಟರು. ಅವರಿಂದ ವೇದಾಂತವು ಪ್ರಚಾರವಾಯಿತು. ರಾಜ್ಯಕ್ಕೆ ಉತ್ತಾರಾಧಿಕಾರಿಯು ಬೇಕೆಂದು ರಾಜನು ಎಂಟನೆಯ ಮಗನನ್ನು ತನಗಾಗಿ

ಇಟ್ಟುಕೊಂಡನು. ಆ ತಾಯಿಯು(ಮದಾಲಸಾ) ಆ ಮಗುವಿಗೆ ಮಾತ್ರ ತನ್ನ ಇತರ ಮಕ್ಕಳಿಗೆ ಬೋಧಿಸಿದಂತೆ ಬೋಧಿಸಲಿಲ್ಲ. ಆ ಜೋಗುಳವನ್ನು ಹಾಡಲಿಲ್ಲ. ಆ ಎಂಟನೆ ಮಗನನ್ನು ಬೆಳೆಸಲು ಬೇರೊಬ್ಬ ದಾದಿಯ ವಶಕ್ಕೆ ಒಪ್ಪಿಸಿದ್ದರು. ಆದರೆ ತನ್ನ ಮಕ್ಕಳು ಸಂಸಾರ ದುಃಖವನ್ನು ಅನುಭವಿಸದಂತೆ ಮಾಡಬೇಕೆಂಬ ಆಕೆಯ ವ್ರತವು ಬೇರೆ ರೀತಿಯಿಂದ ನೆರವೇರಬೇಕಾಯಿತು. ಆಕೆಯು ಸಾಯುವ ಸಮಯದಲ್ಲಿ ಆ ಎಂಟನೇ ಮಗನನ್ನು ಆಕೆಯು ಸಮೀಪಕ್ಕೆ ಕರೆದುಕೊಂಡು ಬಂದರು. ತನ್ನ ಇತರ ಎಲ್ಲಾ ಮಕ್ಕಳನ್ನೂ ಮುಕ್ತರನ್ನಾಗಿ ಮಾಡಿದ್ದ ತನ್ನ ಅಧ್ಯಾತ್ಮ ಗೀತೆಯ ಜೋಗುಳವನ್ನು ಬರೆದಿದ್ದ ಕಾಗದವನ್ನು ಮಡಿಸಿ, ಪೀತಾಂಬರದಲ್ಲಿ ಮುಚ್ಚಿ, ರತ್ನಾಭರಣಗಳಿಂದ ಸುತ್ತಿ, ಅವನ ಕೈಗೆ ತಾನೇ ಕೊಟ್ಟಳು, ಅವನ ತೋಳಿಗೆ ಅದನ್ನು ತಾನೇ ಕಟ್ಟಿದಳು. ಆ ರಕ್ಷಾಯಂತ್ರವನ್ನು ಅತ್ಯಂತ ಪವಿತ್ರವಾಗಿ ಭಾವಿಸಿ ರಕ್ಷಿಸಿಕೊಳ್ಳಬೇಕೆಂದೂ ಹೇಳಿದಳು. ಅದರಲ್ಲಿ ಏನಿದೆ ಎಂಬುದನ್ನು ಆಗ ನೋಡಬಾರದೆಂದೂ ಗಂಡಾಂತರ ಕಾಲ ಬಂದಾಗ ಮಾತ್ರ ಬಿಚ್ಚಿ ನೋಡಬೇಕೆಂದೂ ಹೇಳಿದಳು. ಆಗ ಆ ಯಂತ್ರದಲ್ಲಿರುವ ಪತ್ರವನ್ನು ಓದಿ ನೋಡಬೇಕೆಂದೂ ಆ ವಿಷಯವನ್ನು ವಿಚಾರಮಾಡಿ, ಭಾವಿಸಿದರೆ ಅವನ ಎಲ್ಲಾ ದುಃಖವನ್ನೂ ಕಳೆದು ಅದು ಅವನಿಗೆ ಮುಕ್ತಿ ಕೊಡುವುದೆಂದೂ ಹೇಳಿದಳು. ಆ ತಾಯಿಯೂ ಅವನ ತಂದೆಯೂ ಇಬ್ಬರೂ ಸತ್ತರು, ಈ ಎಂಟನೇ ಮಗನೇ ರಾಜನಾಗಿ ಅನೇಕ ವರ್ಷಗಳು ರಾಜ್ಯವಾಳಿದನು.

ಒಂದು ದಿನ ಈ ರಾಜನ ಅಣ್ಣಂದಿರೆಲ್ಲಾ ಇವನ ರಾಜಧಾನಿಗೆ ಬಂದರು. ಅವನಿಗೆ ಒಂದು ಸಂದೇಶವನ್ನು ಕಳಿಸಿದರು. ತಾವೇ ಹಿರಿಯ ಅಣ್ಣಂದಿರಾಗಿ ರಾಜ್ಯಕ್ಕೆ ನಿಜವಾದ ಹಕ್ಕುದಾರರಾದುದರಿಂದ ತಮಗೆ ರಾಜ್ಯವನ್ನು ಬಿಟ್ಟುಕೊಡಬೇಕಾಗಿ ಆ ಅಲರ್ಕರಾಜನಿಗೆ ತಿಳಿಸಿದರು. ಹಿರಿಯ ಅಣ್ಣನಿಗಾಗಿ ಸಿಂಹಾಸನವನ್ನು ಬಿಟ್ಟುಕೊಡಬೇಕೆಂದು ಹೇಳಿದರು. ಇದನ್ನು ನೋಡಿ ಅಲರ್ಕನಿಗೆ ಬಹಳ ಭಯವೂ ದುಃಖವೂ ಉಂಟಾಯಿತು. ತನ್ನ ಎಲ್ಲಾ ರಾಜ್ಯವನ್ನೂ ಐಶ್ವರ್ಯವನ್ನೂ ವೈಭವವನ್ನೂ ಬಿಟ್ಟುಕೊಡಬೇಕಾಯಿತೆಂದು ಅವನಿಗೆ ಬಹಳ ವ್ಯಥೆಯಾಯಿತು. ಆ ರಾತ್ರಿ ಅವನು ಸಂಕಟಪಡುತ್ತಾ ಮಲಗಿರುವಾಗ ಅವನ ತಾಯಿಯು ತೋಳಿನಲ್ಲಿ ಕಟ್ಟಿದ್ದ ಆ ರಕ್ಷಾಯಂತ್ರವು ಕಣ್ಣಿಗೆ ಬಿದ್ದಿತು. ವಿಪತ್ತು ಬಂದಾಗ ಅದನ್ನು ಬಿಚ್ಚಿನೋಡಬೇಕೆಂದೂ ಅದರಿಂದ ಎಲ್ಲಾ ದುಃಖವೂ ಪರಿಹಾರವಾಗುವುದೆಂದೂ ತಾಯಿಯು ಹೇಳಿದ್ದ ಮಾತು ಅವನ ನೆನಪಿನಲ್ಲಿ ಹೊಳೆಯಿತು. ತತ್‌ಕ್ಷಣವೇ ಆ ಯಂತ್ರವನ್ನು ಬಿಚ್ಚಿನೋಡಿ ಅದರಲ್ಲಿದ್ದ ಕಾಗದವನ್ನು ಓದಲು ತೊಡಗಿದನು. ಓದುತ್ತಾ ಓದುತ್ತಾ ಕಣ್ಣುಗಳ ತುಂಬಾ ನೀರು ತುಂಬಿದವು. ಅದರಲ್ಲಿ ಹೀಗಿದ್ದಿತು: "ನೀನು ಪರಿಶುದ್ಧ, ನಿರ್ವಿಕಲ್ಪ, ನಿರ್ವಿಕಾರ, ನೀನೇ ಸರ್ವಜ್ಞ, ಸರ್ವಶಕ್ತ, ಸರ್ವತಂತ್ರ ಸ್ವತಂತ್ರ, ಸತ್ಯವೂ ಶಿವವೂ ಸುಂದರವೂ ನೀನೆ; ಎಲ್ಲಾ ಆನಂದವೂ ನೀನೇ. ದೇಹವು

ನೀನೆಂದು ತಿಳಿಯಬೇಡ. ಪ್ರಾಪಂಚಿಕ ವಸ್ತುಗಳನ್ನು ನಂಬಬೇಡ, ಅವನ್ನೆಲ್ಲಾ ಮೀರಿ ನಿಲ್ಲು. ಇದನ್ನು ವಿಚಾರಮಾಡು; ಭಾವನೆ ಮಾಡು, ಇದನ್ನೇ ಧ್ಯಾನಿಸು. ಶತ್ರುವೂ ಮಿತ್ರನೂ ನೀನೇ." ತನ್ನ ದಿವ್ಯಮಾತೆಯ ಈ ಉಪದೇಶವನ್ನು ಓದುತ್ತಾ ಓದುತ್ತಾ ಮನನವನ್ನೂ ವಿಚಾರವನ್ನೂ ಮಾಡಿದನು; ಚೆನ್ನಾಗಿ ಅನುಭವ ಬಂದಿತು. ಅವನ ಭಯ-ಚಿಂತೆಗಳು ಹಾರಿಹೋದವು. ಉಲ್ಲಾಸವೂ ಸಂತೋಷವೂ ಆಯಿತು. ಅದನ್ನೇ ಪುನಃ ಪುನಃ ಹಾಡಿಕೊಂಡನು. ಆ ಗೀತೆಯಲ್ಲಿದ್ದ ಅರ್ಥ ಗುಣಗಳಿಂದಲೂ ಪರಮೋದಾತ್ತ ಭಾವನೆಯಿಂದಲೂ ಆ ಮಹಾಮಾತೆಯ ಆಶೀರ್ವಾದದಿಂದಲೂ ಎಲ್ಲಾ ಭಯಸಂಶಯಗಳೂ ಚಿಂತಾವ್ಯಥೆಗಳೂ ಓಡಿದ್ದವು. ಅವನು ಪ್ರಾಪಂಚಿಕವಾದ ಎಲ್ಲಾ ಅಪೇಕ್ಷೆಗಳಿಗೂ ನಿರೀಕ್ಷೆಗಳಿಗೂ ಕ್ಷುದ್ರವಾದ ಆಶೆಗಳಿಗೂ ಕೊನೆಯ ನಮಸ್ಕಾರ ಹಾಕಿದನು. ಅವನಲ್ಲಿ ನಿರ್ಮಲತೆಯೂ ನಿಸ್ಸ್ಪೃಹತೆಯೂ ದೈವೀಭಾವವೂ ಉತ್ಸಾಹ ಶಕ್ತಿಯೂ ತುಂಬಿ ಉಕ್ಕಿ ಹರಿಯುವಂತಾಯಿತು. ಅವನು ನಿದ್ರೆಯನ್ನೇ ಮರೆತನು. ಅವನು ಆ ಕ್ಷಣವೇ ಎದ್ದು ಹೊರಟನು. ಅವನ ಅಣ್ಣಂದಿರು ಮಲಗಿದ್ದ ಸ್ಥಳಕ್ಕೆ ಹೋಗಿ ಪ್ರೇಮಾವೇಶದಿಂದ ಕೂಗಿ ಕರೆದನು. "ಸಹೋದರರೇ, ಬನ್ನಿ ಬನ್ನಿ. ನನ್ನೀ ಭಾರವನ್ನು ಇಳಿಸಿರಿ. ನನಗೆ ತಲೆ ಶೂಲೆಯನ್ನು ತಂದಿರುವ ಈ ಕಿರೀಟದ ಹೊರೆಯನ್ನು ವಹಿಸಿಕೊಳ್ಳಿ. ಈ ರಾಜ್ಯ(ದ) ಭಾರದಿಂದ ನನ್ನನ್ನು ಬಿಡುಗಡೆ ಮಾಡಿ; ದಯಮಾಡಿ; ಸಿಂಹಾಸನದ ಮೇಲೆ ಕುಳಿತು ರಾಜ್ಯಭಾರ ಮಾಡಲು ಅಪೇಕ್ಷಿಸುವ ಈ ಎಲ್ಲಾ ದೇಹಗಳೂ ವ್ಯಕ್ತಿಗಳೂ ನಾನೇ ಎಂಬುದು ನನಗೆ ಗೊತ್ತಿದೆ. ನಾನೇ ನೀವು. ನಾನೂ ನೀವೂ ಒಂದೇ ಆಗಿದ್ದೇವೆ. ನಮ್ಮಲ್ಲಿ ಯಾವ ಭೇದವೂ ಇಲ್ಲ.

ಅಲರ್ಕನ ತ್ಯಾಗವೈರಾಗ್ಯಗಳನ್ನೂ ಅಭೇದಭಾವವನ್ನೂ ಅನಾಸಕ್ತಿಯನ್ನೂ ನೋಡಿ ಆ ಸಹೋದರರಿಗೆ ತುಂಬಾ ಆನಂದವಾಯಿತು. ಆಗ ಅವರು ಹೇಳಿದರು: "ನಾವು ರಾಜ್ಯದ ಮೋಹದಿಂದ ಬಂದವರಲ್ಲ; ಅಧಿಕಾರದಾಹ ನಮಗಿಲ್ಲ. ನಮಗೆ ಸಿಂಹಾಸನವು ಬೇಕಿಲ್ಲ. ನಾವು ಇಡೀ ಜಗತ್ತಿಗೇ ಮಹಾರಾಜರು; ಮಹಾಪ್ರಭುಗಳು. ನಿನ್ನ ಜನ್ಮಸಿದ್ಧವಾದ ಹಕ್ಕೂ ಅದೇ ಆಗಿದೆ. ನೀನು ಅದನ್ನು ಕಳೆದುಕೊಳ್ಳಬಾರದೆಂದು ನಿನ್ನನ್ನು ಎಚ್ಚರಿಸಲು ಬಂದೆವು, ಅಷ್ಟೇ. ನೀನು ಸೂರ್ಯಚಂದ್ರ ನಕ್ಷತ್ರಗಳಿಗೂ ಈ ಎಲ್ಲಾ ಲೋಕಗಳಿಗೂ ಸಾರ್ವಭೌಮನು. ಓ! ತಮ್ಮ! ಬಾ! ನೀನೇ ಅನಂತನೆಂದೂ ಪ್ರಕಾಶಗಳಿಗೆಲ್ಲಾ ಪ್ರಕಾಶನೆಂದೂ ಸೂರ್ಯರಿಗೆಲ್ಲಾ ಸೂರ್ಯನೆಂದೂ ನಿರ್ವಿಕಾರನೆಂದೂ ತಿಳಿ." ಹೀಗೆ ಉಪದೇಶ ಮಾಡಿ ಆ ಮಹಾತ್ಮರು ಸ್ವೇಚ್ಛೆಯಾಗಿ ಹೊರಟು ಹೋದರು. ಅಲರ್ಕ ಮಹಾರಾಜನು ಈ ಸತ್ಯವನ್ನು ಅರಿತನು; ಅನೇಕ ವರ್ಷಗಳು ರಾಜ್ಯವಾಳಿದನು. ಆದರೆ ಈ ವಿಶ್ವನಾಟಕದಲ್ಲಿ ತಾನೊಬ್ಬ ಪಾತ್ರಧಾರಿ ಎಂದು ನೋಡುತ್ತಿದ್ದನು. ಅವನು ಬಹಳ ವಿವೇಕಿಯೂ

ಪ್ರಾಜ್ಞನೂ ಆಗಿದ್ದನು. ಅವನು ದುಃಖರಹಿತನಾಗಿದ್ದನು. ಜಗತ್ತಿನಲ್ಲಿ ಅತ್ಯಂತ ಸಮರ್ಥನೂ ಯಶಸ್ವಿಯೂ ಆದ ಸಾರ್ವಭೌಮನಾಗಿದ್ದನು. ಯಶಸ್ಸೇ ಅವನನ್ನು ಹುಡುಕಿಕೊಂಡು ಹೋಗಿ ಸೇರಿತು.

೧೧೦. ದೇವರು ಎಲ್ಲಾ ಕಾಲದಲ್ಲಿಯೂ ಎಲ್ಲೆಡೆಯಲ್ಲಿಯೂ ಎಲ್ಲವನ್ನೂ ನೋಡುತ್ತಾ ಇದ್ದಾನೆ

(ಇಬ್ಬರು ವಿದ್ಯಾರ್ಥಿಗಳ ಶೋಧಕ ಪರೀಕ್ಷೆ)

ಇದು ಮೂರನೇ ಸ್ಥಿತಿ ; ಇದಕ್ಕೂ ಮೇಲೆ ಎಲ್ಲಾ ನಿರೂಪಣೆಯನ್ನೂ ವಿವರಣೆಯನ್ನೂ ಮೀರಿದ ಸ್ಥಿತಿಯು ಇದೆ.

ಇದುವರೆಗೆ ಹೇಳಿದ ಕತೆಗಳು ಪ್ರೇಮದ ಮೂರನೆಯ ಬಗೆಯನ್ನು ತಿಳಿಸುತ್ತವೆ. ಈ ಮುಂದಿನ ದೃಷ್ಟಾಂತವು 'ತವೈವಾಹಂ' ಎನ್ನುವ ಅಧ್ಯಾತ್ಮ ವಿಕಾಸದ ಎರಡನೆಯ ಸ್ಥಿತಿಯನ್ನೂ ಘಟ್ಟವನ್ನೂ ತಿಳಿಸುತ್ತದೆ. ಇಬ್ಬರು ವಿದ್ಯಾರ್ಥಿಗಳು ಗುರುಗಳಲ್ಲಿ ಬಂದು ತಮಗೆ ಧರ್ಮ ತತ್ತ್ವವನ್ನು ಉಪದೇಶ ಮಾಡಬೇಕೆಂದು ಬೇಡಿಕೊಂಡರು. ಅವರ ಅರ್ಹತೆಯನ್ನು ಪರೀಕ್ಷೆಮಾಡಿ ಬೋಧಿಸುವದಾಗಿ ಗುರುಗಳು ಹೇಳಿ, ಅವರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಪಾರಿವಾಳದ ಹಕ್ಕಿಯನ್ನು ಕೊಟ್ಟರು. ಯಾರೊಬ್ಬರೂ ನೋಡದಿರುವಲ್ಲಿ ಆ ಹಕ್ಕಿಗಳನ್ನು ಕೊಂದು ತರಬೇಕೆಂದು ಅವರು ಇಬ್ಬರಿಗೂ ಹೇಳಿ ಕಳುಹಿಸಿದರು. ಅವರಲ್ಲಿ ಒಬ್ಬನು ಜನಭರಿತವಾದ ರಾಜಬೀದಿಗೆ ಹೋಗಿ, ಜನರ ಕಡೆ ಬೆನ್ನು ತಿರುಗಿಸಿ, ತನ್ನ ತಲೆಯ ಮೇಲೆ ಮುಸುಕು ಹಾಕಿಕೊಂಡು, ಯಾರೂ ಕಾಣರೆಂದು, ಪಾರಿವಾಳವನ್ನು ಕತ್ತು ಹಿಸುಕಿ ಕೊಂದು, ಗುರುಗಳಲ್ಲಿ ಬಂದು "ಸ್ವಾಮಿ, ಸ್ವಾಮಿ ! ತಾವು ಹೇಳಿದಂತೆಯೇ ಯಾರೂ ಕಾಣದಲ್ಲಿ ಪಾರಿವಾಳವನ್ನು ಕೊಂದುತಂದಿದ್ದೇನೆ ; ದಯವಿಟ್ಟು ನನಗೆ ಉಪದೇಶ ಮಾಡಬೇಕು" ಎಂದು ಹೇಳಿದನು.

ಇನ್ನೊಬ್ಬ ಬಾಲಕನು ದಟ್ಟವಾದ ಅರಣ್ಯಕ್ಕೆ ಹೋಗಿ, ನಿರ್ಜನವಾದ ಸ್ಥಳದಲ್ಲಿ ಪಾರಿವಾಳದ ಕುತ್ತಿಗೆಯನ್ನು ಮುರಿಯುವದಕ್ಕೆ ತೊಡಗಿದಾಗ ಆಹಾ ! ಆ ಪಾರಿವಾಳದ ಸೌಮ್ಯವೂ ಮೃದುವೂ ಗಂಭೀರವೂ ಪ್ರಕಾಶಮಾನವೂ ಆದ ಕಣ್ಣುಗಳೇ ತನ್ನನ್ನು ನೇರವಾಗಿ ಕರುಣಾಜನಕವಾಗಿ ನೋಡುತ್ತಿರುವಂತೆ ಅವನಿಗೆ ಭಾಸವಾಯಿತು. ಅದರ ನೋಟದಲ್ಲಿ ಅವನ ನೋಟವೂ ಸೇರಿದಾಗ ಅವನ ಹೃದಯವು ತಲ್ಲಣಿಸಿತು. ಅತಿ ಕಠಿಣವಾದ ಪರೀಕ್ಷೆಗೆ ಗುರುವು ತನ್ನನ್ನು ಗುರಿಪಡಿಸಿದಂತೆ ಅವನಿಗೆ ತೋರಿತು ; ಏಕೆಂದರೆ, ಎಲ್ಲ ಕಾಲದಲ್ಲಿಯೂ ಎಲ್ಲ ಸ್ಥಳದಲ್ಲಿಯೂ ಎಲ್ಲವನ್ನೂ ನೋಡಬಲ್ಲ ಸರ್ವಸಾಕ್ಷಿಯು ಆ ಪಾರಿವಾಳದಲ್ಲಿಯೂ ಇದ್ದು, ಅದರ ಕಣ್ಣುಗಳ ಮೂಲಕ ತನ್ನ ಕೃತ್ಯವನ್ನು ನೋಡುತ್ತಿರುವಂತೆ ಅವನಿಗೆ ಕಂಡಿತು. ಅವನು ಎಲ್ಲೆಲ್ಲಿ ಹೋಗಿ ಯಾವ

ಯಾವ ನಿರ್ಜನ ಸ್ಥಳದಲ್ಲಿ ಅದನ್ನು ಕೊಲ್ಲಲು ಪ್ರಯತ್ನ ಮಾಡಿದರೂ ಸರ್ವಸಾಕ್ಷಿಯು ಆ ಪಾರಿವಾಳದ ಕಣ್ಣುಗಳಿಂದ ನೋಡುತ್ತಲೇ ಇದ್ದಿತು. ಅದರ ದೃಷ್ಟಿಯಿಂದ ತಪ್ಪಿಸಿಕೊಳ್ಳುವದು ಅವನಿಗೆ ಸಾಧ್ಯವೇ ಆಗಲಿಲ್ಲ.

ಆದ್ದರಿಂದ ನಿರಾಶನಾದ ಬಾಲಕನು ಭಯದಿಂದಲೂ ಅಸಂತುಷ್ಟಿಯಿಂದಲೂ ಪಾರಿವಾಳವನ್ನು ತಂದು ಗುರುಗಳ ಪಾದದಡಿಯಲ್ಲಿಟ್ಟು "ಸ್ವಾಮಿ! ಕ್ಷಮಿಸಬೇಕು. ತಮ್ಮ ಆಜ್ಞೆಯನ್ನು ನಡೆಸುವದು ನನ್ನಿಂದ ಸಾಧ್ಯವಾಗಲಿಲ್ಲ. ಎಲ್ಲಿ ಹೋದರೂ ತಪ್ಪದೇ ನೋಡುತ್ತಿರುವ ಪಾರಿವಾಳದ ಕಣ್ಣನ್ನು ತಪ್ಪಿಸಿ ಅದನ್ನು ಕೊಲ್ಲುವದು ಸಾಧ್ಯವಾಗುವದಿಲ್ಲ. ಈ ಅತ್ಯಂತ ಕಠಿಣ ಪರೀಕ್ಷೆಯಲ್ಲಿ ನಾನು ತೇರ್ಗಡೆ ಹೊಂದಲಾರೆ. ಆದರೂ ದಯಮಾಡಿ ನನ್ನ ಮೇಲೆ ಕರುಣೆಯಿಟ್ಟು ನನಗೆ ದಿವ್ಯವಾದ ಜ್ಞಾನವನ್ನು ಉಪದೇಶ ಮಾಡಬೇಕು. ನನಗೆ ಖಂಡಿತವಾಗಿಯೂ ಅದೊಂದೇ ಬೇಕು. ದಯಾಸಾಗರರಾದ ತಾವು ಅನುಗ್ರಹಮಾಡಬೇಕು" ಎಂದು ಅಳುತ್ತಾ ಬೇಡಿಕೊಂಡನು. ಗುರುಗಳಿಗೆ ಬಹಳ ಸಂತೋಷವಾಯಿತು. ಅವರು ಮಗನನ್ನು ಮುದ್ದಾಡುವಂತೆ ಅವನನ್ನು ಪ್ರೀತಿಯಿಂದ ಮುದ್ದಾಡಿ, ಪಾದಗಳಲ್ಲಿ ಬಿದ್ದವನನ್ನು ಎತ್ತಿ ಆಲಂಗಿಸಿಕೊಂಡು, ಬೆನ್ನು ತಟ್ಟಿ, "ಎಲೈ ವತ್ಸ! ನೀನು ಕೊಲ್ಲಬೇಕೆಂದಿದ್ದ ಪಾರಿವಾಳದ ಕಣ್ಣಿನಲ್ಲಿ ವೀಕ್ಷಕನನ್ನು ಅಥವಾ ಸಾಕ್ಷಿ ಪುರುಷನನ್ನು ನೋಡಿದಂತೆಯೇ ನೀನು ಎಲ್ಲಿ ಹೋದರೂ ಏನು ಮಾಡಿದರೂ ಯಾವ ಅಪರಾಧವನ್ನು ನಡೆಸಿದರೂ ಎಲ್ಲವನ್ನೂ ನೋಡತಕ್ಕ ದೇವರು ಇದ್ದಾನೆಂದು ಮನಗಾಣಬೇಕು. ನೆನಪಿನಲ್ಲಿಟ್ಟಿರಬೇಕು. ನೀನು ಹಂಬಲಿಸುತ್ತಿರುವ ಹೆಣ್ಣಿನ ಕಣ್ಣುಗಳಲ್ಲಿಯೂ ಮಾಂಸದಲ್ಲಿಯೂ ಸರ್ವಸಾಕ್ಷಿಯಾದ ಚೈತನ್ಯವೇ ಇದೆಯೆಂದು ಅರಿಯಬೇಕು. ಅವಳ ಕಣ್ಣುಗಳಲ್ಲಿ ಕೂಡ ಗುರುವೇ ನೋಡುತ್ತಿರುವನೆಂದು ತಿಳಿ. ಯಾವಾಗಲೂ ಆ ಮಹಾ ಗುರು ಪರಮೇಶ್ವರನ ಸನ್ನಿಧಿಯಲ್ಲಿಯೇ, ಸಮ್ಮುಖದಲ್ಲಿಯೇ ಅವನ ಕಣ್ಣೆದುರಿಗೇ ಇರುವವನಾಗಿ ತಿಳಿದು—ಆ ಪ್ರಿಯತಮನು ಸರ್ವದಾ ನೋಡುತ್ತಿರುವನೆಂದು ತಿಳಿದು—ವರ್ತಿಸು.

೧೧೧. ಎಲ್ಲ ವಸ್ತುಗಳಲ್ಲಿಯೂ ಇದ್ದು, ಎಲ್ಲವೂ ಆಗಿರುವುದು ಆತ್ಮನೇ

(ಡಾ॥ ಜಾನ್‌ಸನ್ ಕಂಡ ಸ್ವಪ್ನ)

ಡಾಕ್ಟರ್ ಜಾನ್‌ಸನ್ನನು ವಾಗ್ಮಿಗಳಲ್ಲೆಲ್ಲಾ ರಾಜನಾಗಿದ್ದನು. ಅವನು ಮಾತಿನಲ್ಲಿ ಆಗಲಿ ವಾದದಲ್ಲಿ ಆಗಲಿ ಯಾರಿಗೂ ಸೋಲುವದೆಂಬುದೇ ಇರಲಿಲ್ಲ. ಯುಕ್ತಿಯಿಂದಲೋ ಕುಯುಕ್ತಿಯಿಂದಲೋ ಯಾವಾಗಲೂ ಜಯವು ಅವನದೇ ಆಗುತ್ತಿತ್ತು.

"If his pistol misses fire he knocks you down with the butt end of it." "ಅವನ ಪಿಸ್ತೂಲಿನ ಗುಂಡಿನೇಟು ಒಂದು ವೇಳೆ ತಪ್ಪಿದರೆ, ಅದರ ಹಿಂದಿನ ತುದಿಯಿಂದ ಅವನು ನಿಮ್ಮನ್ನು ಹೊಡೆದು ಕೆಡವುತ್ತಾನೆ." ಎಂದು ಅವನ

ವಿಷಯದಲ್ಲಿ ಹೇಳುತ್ತಿದ್ದರು, ಯಾವ ವಾದದಲ್ಲಿ ಆಗಲಿ ಕೊನೆಯ ತೀರ್ಮಾನವನ್ನು ಅವನು ತಾನೇ ಉಚ್ಚರಿಸಿಕೊಳ್ಳುತ್ತಿದ್ದನು. ಆದರೆ ಅಂಥವನು ಒಂದು ದಿನ ಕನಸಿನಲ್ಲಿ ತನ್ನ ವಿರೋಧಿಯಾದ ಬರ್ಕ್ ಮಹಾಶಯನಿಂದ ವಾದದಲ್ಲಿ ಸೋಲಿಸಲ್ಪಟ್ಟಂತೆ ಕಂಡನು. ಜಾನ್‌ಸನ್ನನ ಗುಣ ಸ್ವಭಾವವುಳ್ಳ ಯಾರಿಗಾಗಲೀ ಅದೊಂದು ಭಯಂಕರ ದುಸ್ಸ್ವಪ್ನವೇ ಎಂದು ತೋರುತ್ತಿತ್ತು. ಎಂದೂ ಸೋಲನ್ನು ಕನಸಿನಲ್ಲಿಯೂ ಕಾಣದಿದ್ದ ಜಾನ್‌ಸನ್‌ಗೆ ಇದರಿಂದ ಆಘಾತವೇ ಆಯಿತು. ಕೂಡಲೇ ಅವನು ಎದ್ದು ಕುಳಿತನು ; ಸಮಾಧಾನವಿಲ್ಲದೆ ಇತ್ತಿಂದತ್ತ ಗುಡುಗಾಡಿದನು ಸೋಲಿನ ಕಲ್ಪನೆಯನ್ನೂ ಸಹಿಸಲಾರದ ಅವನ ಮನಸ್ಸಿಗೆ ಹುಚ್ಚೇ ಹಿಡಿದಂತಾಯಿತು. ಅವನಿಗೆ ನಿದ್ರೆ ಬರಲಿಲ್ಲ. ಇನ್ನೂ ಮಧ್ಯರಾತ್ರಿ. ಎಂದೂ ಊಹಿಸದಿದ್ದ ಅವಮಾನವನ್ನು ಅವನು ಅನುಭವಿಸಿದ್ದನು. ಆದರೆ, ಮನಸ್ಸು ತನ್ನ ಸ್ವಂತ ಸ್ವಭಾವದಲ್ಲಿ—ದೈವೀ ಸ್ವಭಾವದಲ್ಲಿ—ಬಹಳ ಹೊತ್ತು ವಿಶ್ರಾಂತಿಯಿಲ್ಲದೆ, ಅಶಾಂತವಾಗಿ ಇರಲಾರದು. ಅವನು ಹೇಗಾದರೂ ತನ್ನನ್ನು ತಾನು ಸಂತೈಸಿಕೊಳ್ಳಲೇಬೇಕಾಗಿತ್ತು ; ಸಮಾಧಾನವನ್ನು ತಂದುಕೊಳ್ಳಲೇಬೇಕಾಗಿತ್ತು. ಅವನು ಹೀಗೇಕಾಯಿತೆಂದು ಬಹಳ ಆಲೋಚನೆ ಮಾಡಿದನು. ಕೊನೆಗೆ ಅವನಿಗೆ ನಿಜವು ಹೊಳೆದು ವಿಸ್ಮಯವೂ ಸಂತೋಷವೂ ಆಯಿತು. ಅವನು ತನ್ನ ಕನಸಿನಲ್ಲಿ, ಬರ್ಕ್‌ನಿಂದ ಮಾಡಲ್ಪಟ್ಟ ವಾದವೂ ತನ್ನ ಮನಸ್ಸಿನಿಂದಲೇ ಹೂಡಲ್ಪಟ್ಟ ವಾದವೆಂದು ಕಂಡುಕೊಂಡನು. ನಿಜವಾದ ಬರ್ಕ್‌ನಿಗೆ ಇದು ಯಾವುದೂ ಗೊತ್ತಿರಲಿಲ್ಲ. ಹೀಗೆ ಕನಸಿನಲ್ಲಿ ತಾನೇ ಬರ್ಕ್‌ನಾಗಿಯೂ ತೋರಿಕೊಂಡು ತನ್ನನ್ನು ತಾನು ಜಯಿಸಿದ್ದನು, ಅಲ್ಲಿ ತನ್ನ ಹೊರತು, ತನ್ನ ಮನಸ್ಸಿನ ಹೊರತು ಬೇರೆ ಯಾವುದೂ ಇರಲಿಲ್ಲ. ತಾನೇ ಎಲ್ಲವೂ ಆಗಿದ್ದನು. ಅದ್ದರಿಂದ ನಿಮಗೆ ನೀವೇ ಭೂತ ಪ್ರೇತಗಳಾಗಿಯೂ ಪಿಶಾಚಿಗಳಾಗಿಯೂ ಶತ್ರುಗಳಾಗಿಯೂ ಮಿತ್ರರಾಗಿಯೂ ನೆರೆಹೊರೆಯವರಾಗಿಯೂ ನದೀ–ಸರೋವರ–ಪರ್ವತಗಳಾಗಿಯೂ ನಿಮ್ಮ ಕನಸಿನಲ್ಲಿ ನದಿಗಳನ್ನೂ ಪರ್ವತಾದಿಗಳನ್ನೂ ಕಾಣುತ್ತೀರಿ. ಅವು ನಿಮ್ಮ ಹೊರಗೆ ನಿಜವಾಗಿ ಇದ್ದರೆ ನದಿಯಿಂದ ಹಾಸಿಗೆಯೆಲ್ಲಾ ನೆನೆದು ಹೋಗಬೇಕಾಗಿತ್ತು ; ಪರ್ವತ ಭಾರದಿಂದ ನೀವೂ ನಿಮ್ಮ ಶಯ್ಯಾಗೃಹವೂ ಎಲ್ಲಾ ಪುಡಿಪುಡಿಯಾಗಬೇಕಾಗಿತ್ತು. ಉಕ್ಕಿ ಹರಿಯುವ ಹೊಳೆಗಳೂ ದೈತ್ಯ ಪರ್ವತಗಳೂ ಎಲ್ಲಾ ನಿಮ್ಮೊಳಗೇ ಇವೆ. ನಿಮ್ಮನ್ನು ನೀವು ಒಂದು ಕಡೆ ಹೊರಗಿನ ವಿಲಾಸದ ಜ್ಞೇಯ ವಿಷಯವಾಗಿಯೂ ಇನ್ನೊಂದು ಕಡೆ ಜ್ಞಾತೃವಾದ ವಿಷಯಿಯಾಗಿಯೂ ಒಡೆದುಕೊಳ್ಳುತ್ತೀರಿ. ನಿಜವಾಗಿ ನೋಡಿದರೆ ವಿಷಯವೂ ನೀವೇ ವಿಷಯಿಯೂ ನೀವೇ. ಆತ್ಮನೂ ನೀವೇ ಅನಾತ್ಮವೂ ನೀವೇ. ಸುಂದರವಾದ ಗುಲಾಬಿಯೂ ನೀವೇ ಅದನ್ನು ಪ್ರೀತಿಸುವ ಬುಲ್ ಬುಲ್ ಪಕ್ಷಿಯೂ ನೀವೇ. ಪುಷ್ಪವೂ ನೀವೇ ಅದರ ಪರಾಗ ಪಾನಮಾಡುವ ದುಂಬಿಯೂ ನೀವೇ. ಎಲ್ಲವೂ ನೀವೇ. ಭೂತ-ಪ್ರೇತಗಳೂ ನೀವೇ. ದೇವಾಧಿದೇವತೆಗಳೂ ನೀವೇ. ಪಾಪಿಗಳೂ ನೀವೇ, ಪುಣ್ಯವಂತ ಸಂತ ಮಹಾಂತರೂ ನೀವೇ. ಎಲ್ಲಾ ನೀವೇ ಎನ್ನುವುದನ್ನು ಅರಿಯಿರಿ, ಭಾವಿಸಿರಿ,

ಅನುಭವ ಮಾಡಿರಿ. ನೀವು ಮುಕ್ತರಾಗುತ್ತೀರಿ ; ಮುಕ್ತರಾಗಿದ್ದೀರಿ. ಇದೇ ಜ್ಞಾನ-ವೈರಾಗ್ಯಗಳ ತ್ಯಾಗಮಾರ್ಗ, ನಿವೃತ್ತಿ ಮಾರ್ಗ. ನಿಮ್ಮ ಗುರುತ್ವ ಕೇಂದ್ರವನ್ನು ನಿಮ್ಮ ಹೊರಗೆ ಬೀಳಿಸಿದರೆ ನೀವೂ ಬೀಳುತ್ತೀರಿ. ನಿಮ್ಮ ಎಲ್ಲಾ ವಿಶ್ವಾಸವನ್ನೂ ನಂಬಿಕೆಯನ್ನೂ ನೆಚ್ಚಿಕೆಯನ್ನೂ ನಿಮ್ಮೊಳಗೇ ಇಟ್ಟುಕೊಳ್ಳಿ. ಆತ್ಮ ವಿಶ್ವಾಸವನ್ನು ದೃಢವಾಗ ಬೆಳೆಸಿರಿ. ನಿಮ್ಮ ಆತ್ಮ ಕೇಂದ್ರದಲ್ಲಿ ನೀವಿದ್ದರೆ ನಿಮ್ಮನ್ನು ಯಾವದೂ ಎಂದೂ ಅಲ್ಲಾಡಿಸಲಾರದು!

೧೧೧. ದೇವತ್ವವೇ ನಮ್ಮ ಜನ್ಮಸಿದ್ಧವಾದ ಹಕ್ಕು

(ಮೋಸೆಸ್ ಮತ್ತು ಸರ್ಪ)

ಮೋಸೆಸ್ಸನು ಗುಲಾಮಗಿರಿಯಲ್ಲಿದ್ದ ಜನರ ಕುಲಕ್ಕೆ ಸೇರಿದವನಾಗಿದ್ದನು. ಆಗಿನ ಕಾಲದಲ್ಲಿ ಯಹೂದಿಗಳು ಬಹಳ ಕಷ್ಟ ಸ್ಥಿತಿಯಲ್ಲಿದ್ದರು. ಅವರ ತೌರುನಾಡಿನಿಂದ ಅವರು ಹೊರ ಓಡಿಸಲ್ಪಟ್ಟಿದ್ದರಿಂದ ಅಲೆದಾಟದವರಾಗಿದ್ದರು. ಅವರು ಅನೇಕ ಪೀಡೆಗಳಿಗೂ ಹಿಂಸೆಗಳಿಗೂ ಗುರಿಯಾಗಿದ್ದರಿಂದ ದೇವರನ್ನೂ ಸಂಪೂರ್ಣ, ನಿರಂಕುಶ ಪೀಡಕ ಪ್ರಭುವಿರಬೇಕೆಂದು ನಂಬಿದ್ದುದು ಸ್ವಾಭಾವಿಕವೇ ಆಗಿದೆ.

ಹೋರಿಗಳು ಸೇರಿ ವಿಶ್ವಧರ್ಮ ಸಮ್ಮೇಳನವನ್ನು ನಡೆಸಿದರೆ, ದೇವರ ವಿಷಯದಲ್ಲಿ ಅವುಗಳ ಕಲ್ಪನೆಯೂ ವಿವರಣೆಯೂ ಹೇಗಿರಬಹುದು ? ದೇವರೆಂದರೆ ಬೇರೆ ಯಾವ ಹೋರಿಯನ್ನಾದರೂ ಹೆದರಿಸಿ ಸಾಯಿಸಿ ಬಿಡುವಷ್ಟು ಮಹಾ ಬಲಿಷ್ಠವೂ ಭಯಂಕರವೂ ಆದ ಗೂಳಿ, ಮಹಾ ವೃಷಭ, ವೃಷಭರಾಜ ಎಂದೇ ವಿವರಿಸಬಹುದು, ಅಥವಾ ವರ್ಣಿಸಬಹುದು, ಸಿಂಹಗಳೆಲ್ಲಾ ಒಂದು ವೇಳೆ ಒಟ್ಟುಸೇರಿ ತಮ್ಮದೇ ಆದ ಧಾರ್ಮಿಕ ಸಮ್ಮೇಳನವನ್ನು ನಡೆಸುವದಾದರೆ ತಮ್ಮೊಳಗೆಲ್ಲಾ ಅತ್ಯಂತ ದೊಡ್ಡದೂ ಅತ್ಯಂತ ಬಲಿಷ್ಠವೂ ಅತ್ಯಂತ ಭಯಂಕರವೂ ಆದ ಸಿಂಹವೇ ದೇವರೆಂದು ತಿಳಿಯುತ್ತಿದ್ದವು. ನಿಮಗಿರುವ ಭಾವನಾಶಕ್ತಿಗಿಂತಲೂ, ಹೆಚ್ಚಾಗಿ ಅದನ್ನು ಮೀರಿ ಏನಾದರೂ ಭಾವಿಸಬಲ್ಲಿರಾ? ನಿಮ್ಮನ್ನು ಎಲ್ಲ ಕಡೆಯಿಂದಲೂ ಸುತ್ತಿಕೊಂಡಿರುವ ದೇಹದ ಚರ್ಮದಿಂದ ಹೊರಗೆ ಹಾರಬಲ್ಲಿರಾ ? ಇಲ್ಲ ; ಸಿಂಹಗಳೆಲ್ಲಾ ಸೇರಿ ಬೇಕಾದಷ್ಟು ವಿಚಾರಮಾಡಲಿ, ಅವುಗಳು ಒಂದು ಮಹಾದ್ಭುತ ಸಿಂಹವನ್ನೇ ದೇವರೆಂದು ತೀರ್ಮಾನಿಸುವದು ಖಂಡಿತ, ಹಾಗೆಯೇ ಭಯಗ್ರಸ್ತ ಜನರು ದೇವರನ್ನು ಭಾವಿಸುವದಕ್ಕೆ ತೊಡಗಿದರೆ, ಅವನು ಗುಲಾಮರಿಗೆಲ್ಲಾ ಗುರುವೆಂದೂ ಮಹಾ ಭೂತವೆಂದೂ ಮಹಾ ಪ್ರಭುವೆಂದೂ ಘೋರ ರುಂದ್ರನೆಂದೂ ಅವರು ಭಾವಿಸದಿರಲು ಸಾಧ್ಯವೇ ಇಲ್ಲ. ಆದ್ದರಿಂದಲೇ ಯಹೂದಿಗಳು ದೇವರನ್ನು ಅದ್ಭುತವೂ ಭವ್ಯವೂ ಆದ ಪ್ರಭುವೆಂದೂ ಗುರುವೆಂದೂ ಸ್ವಾಭಾವಿಕವಾಗಿ ವರ್ಣಿಸಿದರು, ಚಿತ್ರಿಸಿದರು.

ಅನೇಕ ಪೌರ್ವಾತ್ಯ ಭಾಷೆಗಳಲ್ಲಿ, ಅದರಲ್ಲಿಯೂ ಮುಖ್ಯವಾಗಿ ಸೆಮೆಟಿಕ್ (Semetic); ಯೆಹೂದ್ಯ, ಆರಮಿಯನ್, ಫಿನಿಷಿಯನ್, ಅರಬ್, ಅಸ್ಸೀರಿಯನ್

ಮೊದಲಾದ ಭಾಷೆಗಳಲ್ಲಿ ದೇವರಿಗೆ ಮಲಿಕ್ ಎನ್ನುತ್ತಾರೆ. ಮಲಿಕ್ ಎನ್ನುವದನ್ನು ಗುರು ಎಂದು ಭಾಷಾಂತರಿಸುತ್ತಾರೆ. ಈ ನಾಮದ ಮೂಲವೇನು? ಉತ್ಪತ್ತಿ ಹೇಗೆ ಎನ್ನುವ ವಿಷಯದಲ್ಲಿ ಕೆಲವು ಮಾತುಗಳು ಅಪ್ರಸಕ್ತವಾಗಲಾರದು.

ಯಹೂದಿಗಳಲ್ಲಿ ಅನೇಕ ವಂಶಗಳಿದ್ದವು. ಪ್ರತಿಯೊಂದು ಕುಲಕ್ಕೂ ಸಂಬಂಧಪಟ್ಟ ಒಂದು ದೇವರಿತ್ತು. ಒಂದು ವಂಶದ ದೇವರನ್ನು ಒಂದಾನೊಂದು ಕಾಲದಲ್ಲಿ'Moloch' ಮೊಲಕ್ ಎನ್ನುತ್ತಿದ್ದರು. ಈ ಬೇರೆ ಬೇರೆ ವಂಶಗಳಿಗೆ ಪರಸ್ಪರವಾಗಿ ನಡೆಯುತ್ತಿದ್ದ ಯುದ್ಧಗಳಲ್ಲಿ ಮೊಲಿಕ್ ದೇವರುಳ್ಳ ಇಸ್ರೇಯಿಲ್ ವಂಶಕ್ಕೆ ವಿಜಯವಾದುದರಿಂದ ಈ ಮೊಲಕ್ ದೇವರು ಮಿಕ್ಕೆಲ್ಲಾ ದೇವರುಗಳನ್ನೂ ಜಯಿಸಿ, ಎಲ್ಲಾ ಯಹೂದಿಗಳಿಗೂ ದೇವರಾಯಿತು. ಆದ್ದರಿಂದ ಸೆಮೆಟಿಕ್ ಜನಾಂಗದ ಸಗುಣ-ಸಾಕಾರನಾದ ಏಕೋ ದೇವನ (ಮಾಲಿಕ್) (Malick or Master) ಎಂಬ ಹೆಸರಿನ ಮೂಲವು ಇದೇ ಆಗಿದೆ. ಏಕೋ ದೇವನಾದ ಗುರುವಿನ (ಅಥವಾ ಲೋಕಕ್ಕೆಲ್ಲಾ ಗುರುವಾದ ದೇವರು ಒಬ್ಬನೇ ಎಂಬ) ಭಾವನೆಯೇ ಆಗಿನ ಕಾಲಕ್ಕೆ ದೊಡ್ಡ (Science, ಸೈನ್ಸ್) ವಿಜ್ಞಾನವಾಗಿತ್ತು. ಅವರು ಅಜ್ಞೇಯದ (ಅರಿವನ್ನು ಮೀರಿದ ತತ್ತ್ವದ) ಮಹಾ ಖಾರಿಯ(ಕಂದರದ) ಒಳಕ್ಕೆ ತೂರಿ ನೋಡಲು ಮಾಡಿದ ಮಹಾ ಪ್ರಯತ್ನವೇ ಅದು. ಅದೇನೋ ಆಗ ಅವರಿಗೆ ಒಪ್ಪಾಗಿತ್ತು. ಆದರೆ ಈಗ ಸನ್ನಿವೇಶ-ಸಂದರ್ಭಗಳೇ ಬದಲಾಗಿವೆ. ಈಗ ಅತ್ಯಂತ ಹೆಚ್ಚಿನ ಸಂಖ್ಯೆಯ ಜನರಿಗೆ ಚಕ್ರಾಧಿಪತ್ಯವು ಬೇಕಾಗಿಲ್ಲ. ಈಗ ಸ್ವರಾಜ್ಯವು-ಸ್ವಯಂಪ್ರಭುತ್ವವು-ಬೇಕಾಗಿದೆ. ಅಮೆರಿಕಾದಲ್ಲಿಯೂ ಇಂಗ್ಲೆಂಡಿನಲ್ಲಿಯೂ ಎಲ್ಲೆಲ್ಲಿಯೂ ಸ್ವಾತಂತ್ರ್ಯವೂ ವಿಮೋಚನೆಯೂ ಬೇಕಾಗಿವೆ. ವಿಜ್ಞಾನವು ಮುಂದುವರೆದಿದೆ; ಅಭಿವೃದ್ಧಿಯನ್ನು ಹೊಂದಿದೆ, ಪ್ರಗತಿ ಪಡೆದಿದೆ. ಪ್ರತಿಯೊಂದೂ ವಿಕಾಸವನ್ನೂ ಉತ್ಕರ್ಷವನ್ನೂ ಹೊಂದಿದೆ. ದರ್ಪ-ಉದ್ಧಟ ಭಾವಗಳಿಂದ ಪ್ರಬಲವಾಗಿ ಪ್ರಭುತ್ವ ನಡೆಸುತ್ತಿದ್ದ ಹಳೆಯ ದೇವರ ಭಾವನೆಯು ವೇದಾಂತದಿಂದ ಉಪದಿಷ್ಟವಾದ 'ನಾನೇ ದೇವರು' ಎಂಬ ಸ್ವಾತಂತ್ರ್ಯ ಪ್ರೇರಕವಾದ ಭಾವನೆಯೊಳಗೆ ವಿಕಾಸವಾಗಲು ಈಗ ಮೀರಿ ಬರುತ್ತಿರುವ ಕಾಲವಾಗಿದೆ, ಅತ್ಯುತ್ತಮ ಕಾಲವಾಗಿದೆ. ಹೇಗೆ ಇಂಗ್ಲೆಂಡಿನ ಹಳೆಯ ನಿರಂಕುಶ ಪ್ರಭುತ್ವವನ್ನು ಹಂತಹಂತವಾಗಿ-ಕ್ರಮಕ್ರಮವಾಗಿ—ಪರಿಮಿತಗೊಳಿಸುತ್ತಾ ಬಂದರೊ ಹಾಗೆ ಹಳೆಯ ದೇವರ ವ್ಯಕ್ತಿತ್ವದ ದರ್ಪ-ದೌರ್ಜನ್ಯಗಳ ಸ್ವಭಾವದಿಂದ (ನಿಮ್ಮಿಂದಲೇ ಕಲ್ಪಿತವಾದ) ಎಲ್ಲಾ ಅಧಿಕಾರಗಳನ್ನೂ ಆದಿಪತ್ಯಗಳನ್ನೂ ಕಿತ್ತುಕೊಂಡು ನೀವು ಧಾರ್ಮಿಕ—ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಸಾಧಿಸುವದಕ್ಕೆ ಇದು ಸಕಾಲವಾಗಿದೆ.

ಯಹೂದಿಗಳು ರಾಜಕೀಯ ದಾಸ್ಯದಲ್ಲಿ ಜೀವಿಸಿದ್ದುದರಿಂದ ಅವರ ದೇವರು ಅವರಿಂದ ಬೇರೆಯಾದ ಪ್ರಭುವಾಗಿರಬೇಕಾಯಿತು. ನೀವು ರಾಜಕೀಯ ಹಾಗೂ ಸಾಮಾಜಿಕ ಸ್ವಾತಂತ್ರ್ಯ ಸುಖವನ್ನು ಅನುಭವಿಸುತ್ತಿರುವದರಿಂದ ನಿಮ್ಮ ದೇವರು

ನಿಮ್ಮ ಆತ್ಮನೇ ಆಗಬೇಕಾಗಿದೆ. ಜನರಿಗೆ ಈಗ ಗುಲಾಮಗಿರಿಯು ಬೇಕಾಗಿಲ್ಲ. ಬಂಧನವೂ ದಾಸ್ಯವೂ ಈಗ ವೇಗವಾಗಿ ದೂರವಾಗುತ್ತಿದೆ. ವಿಕಾಸವು ಕಾರ್ಯಶೀಲವಾಗಿದೆ; ಪ್ರತಿಯೊಂದೂ ಮೇಲು ಮೇಲೂ ಮುಂದು ಮುಂದೂ ಪ್ರಗತಿಯನ್ನು ಹೊಂದಬೇಕಾಗಿದೆ, ನಿಮ್ಮ ದೇವರ ವ್ಯಕ್ತಿತ್ವವು ಮಾತ್ರ ವಿಕಾಸವಾಗಿದೆ. ತಟಸ್ಥ–ಜಡವಾಗಿರಬೇಕೆ? ಕೂಡದು.

ಒಂದು ಕಾಲದಲ್ಲಿ ದೇವರಿಗೆ ಶತ್ರುವಾದ ಸೈತಾನನಿದ್ದನು. ಮತ್ತು ದೇವರ ಇರುವಿಕೆಯನ್ನು ಪರಿಮಿತಗೊಳಿಸುವದಕ್ಕೆ ಅವನಿಗೆ ದೇವತೆಗಳೂ ಸೇವಕರೂ ಇದ್ದರು. ಅವನು ಏಳು ದಿನಗಳಲ್ಲಿ ಜಗತ್ತನ್ನು ಸೃಷ್ಟಿ ಮಾಡಿದನು. ಅದು ಯಾವಾಗ? ಅದು ಮೋಸೆಸ್ಸನು ತನ್ನ ಗ್ರಂಥಗಳನ್ನು ಬರೆದಾಗ ಆಗಿತ್ತು. ಮೋಸೆಸ್ಸನು ಆ ದಿನಗಳಿಂದ ಈಗ ಸಹಸ್ರಾರು ವರ್ಷಗಳು ಕಳೆದು ಹೋಗಿವೆಯೆಂದು ನಿಮಗೆ ಗೊತ್ತಿದೆ. ಪ್ರಪಂಚವು ಕ್ರಾಂತಿಗೊಳಗಾಗಿದೆ. ಎಲ್ಲಾ ಬೆಳೆಯುತ್ತಿದ್ದರೂ ತಾನು ಮಾತ್ರ ಬೆಳೆಯದಿರುವವನು ಎಂಥಾ ದೇವರು? ಎಲ್ಲಾ ವಸ್ತುಗಳೂ ಬೆಳೆಯಬೇಕು; ವಿಕಾಸವಾಗಬೇಕು ಎನ್ನುವದೇ ಪ್ರಕೃತಿ ನಿಯಮ. ಇಷ್ಟರೊಳಗೆ ಅವನೊಡನೆ ಸೈತಾನನಂಥ ಶತ್ರು ಇರಬಾರದಾಗಿತ್ತು. ದೇವರ ಇರುವಿಕೆಯನ್ನು ಪರಿಮಿತಗೊಳಿಸುವದಕ್ಕೆ ಬೇರಾವುದೂ ಇರಬಾರದು. ಅವನು ಪ್ರಪಂಚದ ನಿರ್ಮಾಪಕ ಅಥವಾ ಸೃಷ್ಟಿಕರ್ತಾ ಎನ್ನುವ ಶಿಲ್ಪವೃತ್ತಿಯನ್ನು ಅಥವಾ ಶಿಲ್ಪಿಯ ಕಸುಬನ್ನು ಮೀರಿ ಬಹಳ ಮೇಲಿರಬೇಕು. ಇಡೀ ಜಗತ್ತೇ ವೇದಾಂತವನ್ನು ತಿಳಿದು ಅಭ್ಯಾಸ ಮಾಡುವದಕ್ಕೆ ಇದು ಹೆಚ್ಚಿನ ಕಾಲವಾಗಿದೆ. ಬುಸುಗುಟ್ಟುವ ಭಯಂಕರ ಸರ್ಪದಂತೆ ತೋರುವ "ನಾನೇ ದೇವರು" ಎಂಬುವ ವೇದಾಂತ ಸತ್ಯವನ್ನು ಗ್ರಹಿಸುವದಕ್ಕೆ (ಹಿಡಿದುಕೋಡು ಅರ್ಥಮಾಡಿಕೊಳ್ಳುವದಕ್ಕೆ) ಇಡೀ ಜಗತ್ತೇ ಧೈರ್ಯ ಮಾಡಲು ಇದು ಉನ್ನತಕಾಲವಾಗಿದೆ. ವೇದಾಂತದ ಕೇವಲ ಸತ್ಯವು ಪೂರ್ಣ ನಿರವಲಂಬ ಸತ್ಯವು ನಿಮ್ಮಲ್ಲಿಗೆ ಬಂದು "ನೀವೇ ದೇವರು" ಎಂದು ಹೇಳುತ್ತದೆ; ದೇವರು ನಿಮ್ಮಿಂದ ಬೇರೆಯಲ್ಲವೆಂದೂ ದೇವರು ಈ ಸ್ವರ್ಗದಲ್ಲಿಯೋ ಆ ನರಕದಲ್ಲಿಯೋ ಇಲ್ಲವೆಂದೂ ನಿಮ್ಮ ಸ್ವರೂಪವೇ ಆಗಿದೆಯೆಂದೂ ವೇದಾಂತವು ಹೇಳುತ್ತದೆ. ಈ ಭಾವವನ್ನು ನಿಮ್ಮ ಅನುಭವಕ್ಕೆ ತಂದುಕೊಂಡರೆ, ಈ ಸತ್ಯವನ್ನು ನೀವು ಮನಗಂಡರೆ ನೀವು ಪೂರ್ಣ ವಿಮುಕ್ತರಾಗುತ್ತೀರಿ.

ಭಯದಿಂದ ನಿಮ್ಮ ಮನಸ್ಸನ್ನೂ ಮೆದುಳನ್ನೂ ಏಕೆ ಕುಗ್ಗಿಸಬೇಕು? ದೈನ್ಯಾವಸ್ಥೆಯ ಪ್ರಾರ್ಥನೆಗಳಿಂದ ನಿಮ್ಮ ಶಕ್ತಿಗಳನ್ನೆಲ್ಲಾ ಏಕೆ ಹಿಗ್ಗಿ ಮುಗಿಲಿಗೇರಿಸಬೇಕು? ನಿಮ್ಮ ನಿಜ ಸ್ವಭಾವವನ್ನು ಪ್ರಕಾಶ ಪಡಿಸಿರಿ. ಸತ್ಯವನ್ನು ನುಗ್ಗು ಬಡಿಯಬೇಡಿ. ಧೈರ್ಯವಾಗಿ ಹೊರಬನ್ನಿ; ನಿಮ್ಮ ಧ್ವನಿಯ ಅತ್ಯುಚ್ಚ ಸ್ವರದಲ್ಲಿ "ನಾನೇ ದೇವರು, ನಾನೇ

ದೇವರು" ಎಂದು ನಿರ್ಭಯವಾಗಿ ಕೂಗಿರಿ ; ಕಿರಿಚಿರಿ. ಅದು ನಿಮ್ಮ ಜನ್ಮಸಿದ್ಧವಾದ ಹಕ್ಕು.

ಮೋಸೆಸ್ಸನು ಆ ದೈವೀ ವಾಣಿಯನ್ನು ಕೇಳಿದಾಗ ಯಾವ ಮನಸ್ಸಿನ ಸ್ಥಿತಿಯಲ್ಲಿ ಇದ್ದನೋ ಆ ಸ್ಥಿತಿಯಲ್ಲಿಯೇ ಸಾಮಾನ್ಯ ಜನರೆಲ್ಲಾ ಇರುವದು. ಮೋಸೆಸ್ಸನು ದಾಸ್ಯದಲ್ಲಿದ್ದನು ; ಅವನು ಸರ್ಪವನ್ನು ಕಂಡೊಡನೆ ನಡುಗಿದನು. "ನಾನಿದ್ದೇನೆ ; ನಾನು ದೇವರಾಗಿದ್ದೇನೆ" ಎನ್ನುವ ಶುದ್ಧವಾದ ಜ್ಞಾನವನ್ನೂ ಶುದ್ಧವಾದ ಸತ್ಯವನ್ನೂ (ಈ ಓಂಕಾರವನ್ನು) ಪ್ರಕಟ ಮಾಡಿದ್ದನ್ನು ಕೇಳಿದೊಡನೆ ಜನರು ಮೆಟ್ಟಿ ಬೀಳುತ್ತಾರೆ; ಹೌಹಾರಿ ನಡಗುತ್ತಾರೆ. ಅದನ್ನು ಹಿಡಿದುಕೊಳ್ಳುವ ಧೈರ್ಯವು ಅವರಿಗಿಲ್ಲ; ಶಂಕಿಸಿ ಹಿಂಜರಿಯುತ್ತಾರೆ. ಆ ಮಾತುಗಳು ಅವರಿಗೆ ಘೋರ ಸರ್ಪದ ಬುಸುಗುಟ್ಟುವ ಭಯಾನಕ ಶಬ್ದದಂತೆ ಕೇಳಿಸುತ್ತಿದೆ. "ಅಯ್ಯಾ ! ನೀವೇಕೆ ಹೆದುರುತ್ತೀರಿ ? ನೀವೇ ದೇವರು ; ಪವಿತ್ರಗಳಿಗೆಲ್ಲಾ ನೀವೇ ಪವಿತ್ರ. ಪ್ರಪಂಚವು ಪ್ರಪಂಚವೇ ಅಲ್ಲ ; ಅದೂ ದೇವರೇ. ಪ್ರಪಂಚವೂ ದೇವರೇ ; ದೇವರೇ ಪ್ರಪಂಚವಾಗಿ ತೋರುತ್ತಿದ್ದಾನೆ. ಅದೂ ದೇವರ ರೂಪದಿಂದ ಸತ್ಯ ; ಪ್ರಪಂಚವಾಗಿ ತೋರುವ ರೂಪದಿಂದ ಮಿಥ್ಯಾ, ಹುಸಿ. ನೀವು ಸಕಲದರಲ್ಲಿಯೂ ಸಕಲವಾಗಿದ್ದೀರಿ. ನೀವೇ ಪರಮಾಧಿಕವಾದ ಶಕ್ತಿ ; ಅದನ್ನು ಯಾವ ಮಾತೂ ಮನಸ್ಸೂ ಯಾರೂ ವರ್ಣಿಸಲಾರರು. ಆ ಶುದ್ಧವಾದ "ನಾನಿದ್ದೇನೆ" ಎನ್ನುವದೇ ನೀವು. 'ಅಸ್ಮಿ', 'ಅಹಮಸ್ಮಿ', ಅಹಂ ಬ್ರಹ್ಮಾಸ್ಮಿ'.

ನಿಮ್ಮ ಆತ್ಮ ರತ್ನದ, ಆತ್ಮವೆಂಬ ಸ್ಫಟಿಕ ಮಣಿಯ ಸಮೀಪದಲ್ಲಿಟ್ಟಿರುವ ಕ್ಷುದ್ರವಾದ, ಹಳದಿ, ಕೆಂಪು, ಕಪ್ಪು ಬಣ್ಣದ ಕಾಗದಗಳನ್ನು ತೆಗೆದೊಗೆಯಿರಿ, ನಿಮ್ಮ ನಿಜ ಸ್ವರೂಪವೇನೆಂಬುದರಲ್ಲಿ ಎಚ್ಚರಗೊಳ್ಳಿರಿ. "ನಾನೇ ಅವನು ! ನಾನೇ ಸರ್ವವೂ" ಎಂಬ ನೈಜವನ್ನು ತಿಳಿಯಿರಿ. ಜನರು ಭಯದಿಂದ ಅದನ್ನು ದೂರವಿಡಬೇಕೆಂದು ಬಯಸುತ್ತಾರೆ. ಅವರಿಗೆ ಆ ತೋರಿಕೆಯು ಸರ್ಪದ ಭಯ. ಓ ! ಹೆದರಬೇಡಿ, ಆ ಸರ್ಪವನ್ನು ಹಿಡಿಯುವ ಸಾಹಸ ಮಾಡಿರಿ. ಆಗ ನೋಡಿ. ಆಶ್ಚರ್ಯವೋ ಆಶ್ಚರ್ಯ ! ನಿಮ್ಮ ಕೈಯಲ್ಲಿ ಆ ಸರ್ಪವು ಮಹಾ ರಾಜದಂಡವಾಗಿ ಪರಿಣಮಿಸುತ್ತದೆ, ಶೋಭಿಸುತ್ತದೆ. ಆ ಬುಸ್ ನಾಗರವು ನೀವು ಹಸಿದು ಕೊಂಡಾಗ ನಿಮಗೆ ಉಣಿಸುತ್ತದೆ ; ನೀವು ನೀರಡಿಸಿದಾಗ ನಿಮ್ಮ ದಾಹ ಶಮನ ಮಾಡುತ್ತದೆ ; ನಿಮ್ಮ ದಾರಿಯಿಂದ ಎಲ್ಲಾ ಕಷ್ಟಗಳನ್ನೂ ಕ್ಲೇಶಗಳನ್ನೂ ಗುಡಿಸಿ ಹಾಕುತ್ತದೆ.

ಮೋಸೆಸ್ಸನು ಅಡವಿಯಲ್ಲಿದ್ದಾಗ ಆ ಯೋಗದಂಡದಿಂದ ಒಂದು ಬಂಡೆಯನ್ನು ಮುಟ್ಟಿದ ಕೂಡಲೇ ಆ ಬಂಡೆಯಿಂದ ಹೊಚ್ಚ ಹೊಸದಾಗಿ ಥಳಥಳಿಸುವ ನಿರ್ಮಲವಾದ ನೀರು ಉಕ್ಕುಕ್ಕಿ ಬಂದಿತು. ಇಸ್ರೈಲ್ ಯಹೂದಿಗಳು ರಕ್ಷಣೆಗಾಗಿ ಓಡಿ ಹೋಗುತ್ತಿದ್ದಾಗ ಕೆಂಪು ಸಮುದ್ರವನ್ನು ದಾಟಬೇಕಾಯಿತು. ಆ ಘೋರ ಸಾಗರವು ಅವರನ್ನು ನುಂಗಲು ಬಾಯಿ ಕಳೆದುಕೊಂಡಿರುವ ಗೋರಿಯಂತೆ ಅವರೆದುರಿಗೆ

ಭೀಕರವಾಗಿದ್ದಿತು. ಮೋಸೆಸ್ಸನು ಆ ದೈವದತ್ತವಾದ ದಂಡದಿಂದ ಆ ಕೆಂಪು ಸಮುದ್ರವನ್ನು ಸ್ಪರ್ಶ ಮಾಡಿದ ಕೂಡಲೇ ಆ ನೀರು ಎರಡು ಭಾಗವಾಯಿತು; ಒಣಗಿದ ನೆಲವು ಕಂಡಿತು ; ಆ ಇಸ್ರೈಲ್ ಜನರು ಅದರ ಮೇಲೆ ನಡೆದು ಹೋದರು.

ತೋರಿಕೆಗೆ ಬುಸ್ ಎನ್ನುವ ಈ ಹಾವು, ಈ ಸತ್ಯವು ನೋಡುವದಕ್ಕೆ ಭಯಂಕರವಾಗಿ ಕಾಣುತ್ತದೆ. ಆದರೆ ನೀವು ಮಾತ್ರ ಅದನ್ನು ಕೈಗೆತ್ತಿಕೊಳ್ಳಲು ಧೈರ್ಯ ಮಾಡಿ ಬಲವಾಗಿ ಹಿಡಿದುಕೊಳ್ಳಬೇಕು. ನೀವೇ ವಿಶ್ವದ ಸಾರ್ವಭೌಮರೆಂಬುದನ್ನೂ ಪಂಚ ಭೂತಗಳಿಗೂ ಸ್ವಾಮಿ ಎಂಬದನ್ನೂ ನಕ್ಷತ್ರಾದಿಗಳಿಗೂ ಅಂತರಿಕ್ಷಕ್ಕೂ ಪ್ರಭುವೆಂಬುದನ್ನೂ ನೀವೇ ಸರ್ವಸ್ವವೆಂಬುದನ್ನೂ ಕಂಡುಕೊಂಡು ಆಶ್ಚರ್ಯ ಪಡುತ್ತೀರಿ, ಈ ಸತ್ಯವನ್ನು ಅನ್ವಯಿಸುವದಕ್ಕೂ ಈ ದಿವ್ಯ ತತ್ತ್ವವನ್ನು ಆಲಂಗಿಸುವದಕ್ಕೂ ಜನರಿಗೆ ಲಜ್ಜೆಯಿದೆ. ಬನ್ನಿ, ಬನ್ನಿ, ಸಂಕೋಚ ಪಡಬೇಡಿ. ನಿರ್ಭಯವಾಗಿ ಈ ಸತ್ಯವನ್ನು ಹಿಡಿದುಕೊಳ್ಳಿರಿ. ಸತ್ಯವನ್ನು ಕಂಡುಕೊಳ್ಳಿರಿ ; ಅದು ನಿಮ್ಮನ್ನು ಬಿಡು ಬಿಚ್ಚಾಗಿ ಮಾಡುತ್ತದೆ.

“ನಾನು ದೇವರು” ಎನ್ನದಿದ್ದರೆ ಮಹಾ ಪಾಪ. ಆತ್ಮನನ್ನು (ತಾನೆನ್ನದೆ) ಕದಿಯುವದು ಅತ್ಯಂತ ಕೀಳಾದ ಕಳ್ಳತನ. ನಾನೊಬ್ಬ ಗಂಡಸು ಅಥವಾ ಹೆಂಗಸು ಎನ್ನುವದು, ಅಥವಾ ನಾನೊಂದು ಹರಿದಾಡುವ ಬಡಜೀವಿ ಎನ್ನುವದು ಸುಳ್ಳು ಮತ್ತು ನಾಸ್ತಿಕತೆ. ಕೃಪಣಾಗ್ರೇಸರ ಚಕ್ರವರ್ತಿಯಂತೆ ನಡೆದುಕೊಳ್ಳಬೇಡಿ. ಸಕಲೈಶ್ವರ್ಯಗಳೂ ತನ್ನ ಮನೆಯಲ್ಲಿದ್ದರೂ ಲೋಭಿಯು ಒಂದು ಬಿಡಿ ಕಾಸನ್ನೂ ಕೈ ಬಿಡಲು ಇಷ್ಟ ಪಡುವದಿಲ್ಲ. ಇಡೀ ಜಗತ್ತೇ ನಿಮ್ಮ ಒಳಗಿದೆ ; ಇಡೀ ವಿಶ್ವವೇ ನಿಮ್ಮದಾಗಿದೆ. ಅದನ್ನೇಕೆ ಮುಚ್ಚಿಟ್ಟುಕೊಳ್ಳುತ್ತೀರಿ ? ಅದನ್ನೇಕೆ ಉಪಯೋಗಿಸಬಾರದು ? ಅದನ್ನು ಆಚರಣೆಯಲ್ಲಿ ತನ್ನಿರಿ ; ನಿಮ್ಮ ಆತ್ಮನ ಅಮೃತವನ್ನು ಆಳವಾಗಿ ಹೀರಿ, ನಿಮ್ಮ ಸ್ವಾಭಾವಿಕ ಅಂತರ್ನಿಹಿತವಾದ ರಾಜತ್ವದ ಲಾಭವನ್ನೇಕೆ ಪಡೆಯಬಾರದು ?

ಈ ಸಂಪೂರ್ಣ ಸತ್ಯವನ್ನು ಪ್ರಾಪ್ತಿ ಮಾಡಿಕೊಳ್ಳುವದೆಂದರೆ, ಮರೆತಿದ್ದ ಕಂಠಾಭರಣವನ್ನು ಪುನಃ ಪ್ರಾಪ್ತಿ ಮಾಡಿಕೊಂಡಂತೆ-ಎಂದು ಇಂಡಿಯಾದ ಜನರು ಅಥವಾ ವೇದಾಂತಿಗಳು ಹೇಳುತ್ತಾರೆ. ತರುಣಿಯೊಬ್ಬಳು ತನ್ನ ಕೊರಳಲ್ಲಿ, ವಕ್ಷಸ್ಥಳದ ಮೇಲೆ ಶೋಭಿಸುತ್ತಿದ್ದ ಒಂದು ರತ್ನದ ಹಾರವನ್ನು ಧರಿಸುತ್ತಿದ್ದಳು, ಆಕೆಯು ಮಲಗಿದ್ದಾಗ ಅದು ಬೆನ್ನ ಹಿಂದೆ ಜಾರಿಕೊಂಡಿದ್ದರಿಂದ ಎದ್ದ ಮೇಲೆ ಮರೆತು ತನ್ನ ಎದೆಯ ಮೇಲೆ ಅದು ನಿತ್ಯದಂತೆ ಜೋಲಾಡದಿದ್ದುದನ್ನು ನೋಡಿ, ಗಾಬರಿಯಾಗಿ, ಮಲಗುವದಕ್ಕೆ ಮೊದಲು ಸ್ನಾನಮಾಡುವಾಗ, ತಾನೆಲ್ಲಿಯೋ ತೆಗೆದಿಟ್ಟು ಮರೆತಿರಬೇಕೆಂದು ಮನೆಯಲ್ಲೆಲ್ಲಾ ಹುಡುಕಿದಳು. ಎಲ್ಲಿಯೂ ಸಿಕ್ಕದಿರಲು ಆ ಅಮೂಲ್ಯವಾದ ರತ್ನಾಭರಣವನ್ನು ಕಳೆದುಕೊಂಡದ್ದಕ್ಕಾಗಿ ಬಹಳ ಅತ್ತು ಗೋಳಾಡಿದಳು. ಅಷ್ಟರಲ್ಲಿ ಅಲ್ಲಿಗೆ ಬಂದ ಆಕೆಯ ಸ್ನೇಹಿತಳಿಗೆ ತನ್ನ ಕಷ್ಟವನ್ನೂ ನಷ್ಟವನ್ನೂ ಹೇಳಿಕೊಂಡು, ತನಗಾಗಿ

ಆಕೆಯೂ ಆ ಮನೆಯಲ್ಲಿ ಸ್ವಲ್ಪ ಹುಡುಕಿ ನೋಡಬೇಕೆಂದು ಕೇಳಿಕೊಂಡಳು. ಆ ಗೆಳತಿಯು ಆಕೆಯ ಕಂಠದಲ್ಲಿ ಹಿಂದಕ್ಕೆ ಸರಿದು ಮರೆಯಾಗಿದ್ದ ಆ ಮಾಲಿಕೆಯನ್ನು ತನ್ನ ಕಣ್ಣೆದುರಿಗೇ ಕಂಡಿದ್ದರಿಂದ, "ಒಳ್ಳೆಯದು; ಆ ಹಾರವನ್ನು ನಿನಗಾಗಿ ಹುಡುಕಿಕೊಟ್ಟರೆ, ನನಗೇನು ಕೊಡುತ್ತಿ ?" ಎಂದು ಕೇಳಿದಳು. "ನೀನು ಏನನ್ನು ಕೇಳಿದರೂ ಕೊಡುತ್ತೇನೆ" ಎಂದು ಉತ್ಸಾಹದಿಂದ ಆಕೆ ಉತ್ತರಿಸಿದಳು. ಆಗ ಆ ಸಖಿಯು ತನ್ನ ಕೈ ಬೆರಳುಗಳಿಂದ ಆಕೆಯ ಕೊರಳಿನಲ್ಲಿ ಸರಿದು ಆಕೆಗೇ ಕಾಣದಂತಾಗಿದ್ದ ಸರವನ್ನು ಹಿಡಿದೆಳೆದು "ಇಗೋ ನೋಡು, ಆ ಸರವು ನಿನ್ನ ಕೊರಳಲ್ಲಿಯೇ ಇದೆ. ಅದೇನೂ ಕಳೆದಿರಲಿಲ್ಲ, ಅದು ನಿನ್ನ ಕೊರಳಲ್ಲಿಯೇ ಇದ್ದರೂ ನೀನದನ್ನು ಮರೆತಿದ್ದೆ. ಆಹಾ ! ಎಂಥಾ ಪ್ರಿಯಂಕರವಾದ ಆಶ್ಚರ್ಯ !" ಎಂದು ಹೇಳಿದಳು.

ಹೀಗೆಯೇ ನಿಮ್ಮ ದೇವತ್ವವು ನಿಮ್ಮ ಹೊರಗಿಲ್ಲ, ನೀವು ದೇವರಾಗಿಯೇ ಇದ್ದೀರಿ. ನಿಮ್ಮ ಸ್ವರೂಪವನ್ನೇ ನಿಮ್ಮ ದೇವತ್ವವನ್ನೇ ಮರೆಯುವಂತೆ ಮಾಡಿರುವ ಅವಿದ್ಯೆಯು ಬಹಳ ವಿಲಕ್ಷಣವಾದುದು ; ಆಶ್ಚರ್ಯಕರವಾದುದು. ಈ ಅಜ್ಞಾನವನ್ನು ಕಳೆದರೆ, ಈ ಅಂಧಕಾರವನ್ನು ನಾಶ ಮಾಡಿದರೆ, ನೀವು ಆಗಲೇ ದೇವರು, ಸ್ವರೂಪದಿಂದ ನೀವು ಮುಕ್ತರೇ ಆಗಿದ್ದೀರಿ. ನಿಮ್ಮ ದಾಸ್ಯ ಸ್ಥಿತಿಯಲ್ಲಿ ನಿಮ್ಮನ್ನು ನೀವು ಮರೆತಿದ್ದೀರಿ.

ಒಬ್ಬ ರಾಜನು ತಾನು ಭಿಕ್ಷುಕನೆಂದು ಕನಸು ಕಾಣಬಹುದು ; ಆದರೆ ಅವನ ನಿಜವಾದ ರಾಜತ್ವಕ್ಕೇನೂ ಆದರಿಂದ ಬಾಧೆಯಾಗುವದಿಲ್ಲ.

ಓ ! ರಾಜಾಧಿರಾಜರೇ ! ಈ ಎಲ್ಲಾ ದೇಹಗಳಲ್ಲಿರುವ ನನ್ನ ಪ್ರಿಯ ಆತ್ಮವೇ ! ಸಂಪೂರ್ಣ ಸಾರ್ವಭೌಮವೇ ! ಭಗವದನುಗ್ರಹದ ಸಾರಸರ್ವಸ್ವವೇ ! ಓ ಪ್ರೇಮಾತ್ಮ ! ಅಜ್ಞಾನ ನಿದ್ರೆಯ ಮೋಹದ ಕನಸಿನಲ್ಲಿ ನಿಮ್ಮನ್ನು ನೀವು ಗುಲಾಮರನ್ನಾಗಿ ಮಾಡಿಕೊಳ್ಳಬೇಡಿ. ಏಳಿರಿ, ಎಚ್ಚರಗೊಳ್ಳಿರಿ, ನೀವೇ ದೇವರು ; ನೀವು ಬೇರೆ ಯಾರೂ ಅಲ್ಲ. ನಿಮ್ಮ ಪರಮಾಧಿಕಾರವನ್ನು ಚಲಾಯಿಸಿ ಪ್ರಭುತ್ವ ನಡೆಸಿರಿ. ಎಲ್ಲಾ ಸಂದೇಹಗಳನ್ನೂ ಸಂಕೋಚಗಳನ್ನೂ ಸತ್ತ್ವಹೀನತೆಯನ್ನೂ ದೌರ್ಬಲ್ಯವನ್ನೂ ತೊರೆದುಬಿಟ್ಟು "ನಾನಿದ್ದೇನೆ" "ನಾನು ದೇವರಾಗಿದ್ದೇನೆ" ಎನ್ನುವ ಪರಿಶುದ್ಧ ಭಾವದಲ್ಲಿ–ಆತ್ಮನಲ್ಲಿ-ಒಳಗಿನ ಪೂರ್ಣ ಶಕ್ತಿಯಿಂದ ಪುಟಿದು ಚಿಮ್ಮಿರಿ, ಧುಮುಕಿರಿ. ನೀವೇ ದೇವರು ; ಅವನು ಮತ್ತು ನಾನು ಒಂದೇ. ಕೇವಲ ಭಾವನೆಯ ದೃಷ್ಟಿಯಿಂದ ನೋಡಿದರೂ ಎಂಥಾ ಉಪಶಾಮಕವೂ ಶಾಂತಿಪ್ರದವೂ ಆದ ಭಾವನೆ ! ಎಂಥಾ ದಿವ್ಯವಾದ ಭಾವನೆ ! ಅದು ಎಲ್ಲಾ ದುಃಖಗಳನ್ನೂ ಕಳೆಯುತ್ತದೆ ; ನಮ್ಮ ಎಲ್ಲಾ ಹೊಣೆಗಳನ್ನೂ ಇಳಿಸುತ್ತದೆ, ಅಳಿಸುತ್ತದೆ.

ನಿಮ್ಮ ನಿಜವನ್ನು ನೀವು ಬಿಟ್ಟು ಹೊರಗೆ ಹರಿಯಬೇಡಿ. ನಿಮ್ಮ ಕೇಂದ್ರವನ್ನು ನಿಮ್ಮೊಳಗೇ ಇಟ್ಟುಕೊಳ್ಳಿ. "ಪ್ರಪಂಚದ ಹೊರಗೆ, ನನ್ನ ವಿೀಟದ ಕೋಲಿಗೆ

ಸ್ಥಿರವಾದೊಂದು ಆಧಾರವು ಸಿಕ್ಕುವದಾದರೆ, ಪ್ರಪಂಚವನ್ನೇ ಅಲ್ಲಾಡಿಸಬಹುದು; ಎತ್ತಿ ಒಗೆಯಬಹುದು." ಎಂದು ವಿಜ್ಞಾನಿ ಆರ್ಕಿಮಿಡೀಸ್ ಮಹಾಶಯನು ಹೇಳಿದ್ದನಂತೆ. ಪಾಪ! ಆ ಬಡಪಾಯಿಯು ಸ್ಥಿರವಾದ ಆಧಾರವನ್ನು ಕಂಡುಕೊಳ್ಳಲಾರದಾದನು. ಆ ಸ್ಥಿರ ಬಿಂದುವು ನಿಮ್ಮೊಳಗೇ ಇದೆ. ಅದು ನೀವೇ. ಅದನ್ನು ನೀವು ಬಲವಾಗಿ ಹಿಡಿದರೆ, ಇಡೀ ವಿಶ್ವವನ್ನೇ ನೀವು ಅಲ್ಲಾಡಿಸಬಲ್ಲಿರಿ!

೧೧೩. ಸಾಧನಾನುಭವಗಳ ಬೆಲೆ

(ನಾರ್ಮ್ಲೇ ವೋ!)

ಜಗತ್ತಿನ ಅತ್ಯಂತ ಶ್ರೇಷ್ಠ ಕವಿಗಳಲ್ಲಿ ಒಬ್ಬನಾದ ಹಫೀಜ್ ಎಂಬವನಿಂದ ಪರ್ಷಿಯನ್ ಭಾಷೆಯಲ್ಲಿ ಬರೆಯಲ್ಪಟ್ಟಿರುವ ಒಂದು ಸುಂದರವಾದ ಪದ್ಯವಿದೆ. ಅದು 'ಎಮರ್‌ಸನ್' ಮಹಾಕವಿಯಿಂದ ಕೆಲವು ಮಟ್ಟಿಗೆ ಭಾಷಾಂತರಿಸಲ್ಪಟ್ಟಿದೆ. ಅದರ ಅರ್ಥವೇನೆಂದರೆ, "ಓ ಮನಸ್ಸೆ! ಈ ಎಲ್ಲಾ ಸಂಶಯಗಳನ್ನೂ ಚರ್ಚೆಗಳನ್ನೂ ಅತ್ತಲಾಗಿ ಎಸೆದುಬಿಡು. ಬಾ, ಬಾ, ಸ್ವರ್ಗದ ಬಾಗಿಲ ಬೀಗದ ಕೈಯನ್ನು ಕೊಡುವ ಮಾಣಿಕ್ಯ ಮಧುವನ್ನು ತುಂಬಿರುವ ಬಟ್ಟಲನ್ನು ತೆಗೆದುಕೊಂಡು ಬಾ." ಇದರಿಂದ ನೀವು ಬಚ್ಚೂಸ್‌ನ ಶಿಷ್ಯರಾಗಬೇಕೆಂದು ಅರ್ಥವಲ್ಲ. ದೇವತ್ವದ ಅಮೃತವೆಂಬ ಮಧುವನ್ನು ಸೇವಿಸೋಣ; ದೈವೀಭಾವದ ಹುಚ್ಚನ್ನು ಹಿಡಿಸುವ ಏನನ್ನಾದರೂ ಆಸ್ವಾದಿಸೋಣ. ಮಾಯಾ ಸ್ವಪ್ನವನ್ನು ಕಾಣುತ್ತಿದ್ದ ಆ ನಿರ್ಭಾಗ್ಯ ಕಳ್ಳನನ್ನು ಎಚ್ಚರಗೊಳಿಸಿದ ಆ ಸರ್ಪದಂಶವು ನಮಗಿರಲಿ; ಸ್ವರ್ಗದ್ವಾರದ ಬೀಗವನ್ನು ತೆಗೆಯುವ ರೀತಿಯೇ ಇದು; —ಇದೇ ಇದರ ಅರ್ಥ.

ಆದ್ದರಿಂದ ರಾಮನು ಹೇಳುವದೇನೆಂದರೆ, ಸ್ವಲ್ಪ ಕಾಲ ಈ ಬಯಕೆಗಳನ್ನೂ ಹಂಬಲಗಳನ್ನೂ ಆಚೆಗೆ ಎಸೆಯಿರಿ; ರಾಮನೊಡನೆ ದಿವ್ಯೋನ್ಮಾದವನ್ನು—ದೈವೀ ಹುಚ್ಚನ್ನು—ಅನುಭವಿಸಿ ಆನಂದ ಪಡಿ. ರಾಮನು ತನ್ನಲ್ಲಿರುವ ಗುಟ್ಟನ್ನೆಲ್ಲಾ ಹೇಳಿಕೊಳ್ಳಬೇಕು. ರಾಮನು ಇನ್ನು ಮುಂದೆ ನಿಮ್ಮ ವಿಚಾರಗಳನ್ನೂ ಬಯಕೆಗಳನ್ನೂ ಆದರಿಸುವದು ಸಾಧ್ಯವಲ್ಲ; ನಿಮ್ಮ ಅಭಿರುಚಿಗಳನ್ನು ಹೆಚ್ಚಾಗಿ ಅಭಿಮಾನಿಸುವದೂ ಸಾಧ್ಯವಿಲ್ಲ.

ಓ ಅಮೆರಿಕಾದ ಜನರೆ, ಇಡೀ ಜಗತ್ತಿನ ಜನರೆ, ಸತ್ಯವೇನೆಂದರೆ, ದೇವರನ್ನೂ ದೆವ್ವವನ್ನೂ ಅಥವಾ ಧನಪಿಶಾಚಿಯನ್ನೂ ಏಕಕಾಲದಲ್ಲಿ—ಪ್ರಭುಗಳಿಬ್ಬರನ್ನೂ—ಸೇವಿಸುವದು ಸಾಧ್ಯವಿಲ್ಲ. ಭೋಗವನ್ನೂ ತ್ಯಾಗವನ್ನೂ (ಸತ್ಯಾನುಭವವನ್ನೂ) ಒಂದೇ ಸಮಯದಲ್ಲಿ ಸಾಧಿಸುವದು ಸಾಧ್ಯವಲ್ಲ.

ಹೀಗೆ ಪೂರ್ಣ ಸತ್ಯವನ್ನು ತಿಳಿಯುವದಕ್ಕಾಗಿ ಪ್ರಾಪಂಚಿಕವಾದ ಎಲ್ಲಾ ಬಯಕೆಗಳನ್ನೂ ಬಿಡಬೇಕು; ನೀವು ಪ್ರಾಪಂಚಿಕವಾದ ಎಲ್ಲಾ ಆಸಕ್ತಿಗಳನ್ನೂ ದ್ವೇಷಾಸೂಯೆಗಳನ್ನೂ ಮೀರಬೇಕು. ನೀವು ಅಭಿಮಾನದಿಂದ ಅಂಟಿಕೊಳ್ಳುವದಕ್ಕೂ

ಗುಲಾಮಗಿರಿಗೂ ಕಾರಣವಾದ ಎಲ್ಲಾ ಬಂಧಗಳಿಗೂ ಸಂಬಂಧಗಳಿಗೂ ಕೊನೆಯ ನಮಸ್ಕಾರ ಹೊಡೆಯಬೇಕು. ನೀವು ಈ ಎಲ್ಲವನ್ನೂ ಮೀರಬೇಕು. ಆತ್ಮ ವಸ್ತು ಲಾಭವಾಗಬೇಕಾದರೆ ಇದೇ ಬೆಲೆ ; ನೀವು ಈ ಬೆಲೆಯನ್ನು ಕೊಟ್ಟ ಹೊರತು ನಿಮಗೆ ಸತ್ಯದ ಅನುಭವವಾಗುವದಿಲ್ಲ. ಈ ಬೆಲೆಯನ್ನು ಕೊಡುವದಕ್ಕೆ ನೀವು ಸಿದ್ಧವಿಲ್ಲ ದಿದ್ದರೆ, ಜನ್ಮ, ಕರ್ಮ, ಸುಖ-ದುಃಖರೂಪವಾದ ಸಂಸಾರ (ಭೋಗ) ವಿಷವನ್ನು ಅನಂತಕಾಲ ಸೇವಿಸುತ್ತಿರುವ ನಿಮ್ಮ ದುರ್ದೈವದ ಹಣೆಯ ಬರಹದಲ್ಲಿಯೇ ನೀವು ಸಂತೃಪ್ತರಾಗಿರಬಹುದು. ನಿಮಗೆ ಆತ್ಮಾನುಭವವು–ಬ್ರಹ್ಮಪ್ರಜ್ಞೆಯು—ಬೇಕಾದರೆ, ದಯವಿಟ್ಟು ಬನ್ನಿ, ಬೆಲೆಯನ್ನು ಚೆಲ್ಲಿ, ನಿಮಗೆ ಸಕಲವೂ ಲಭಿಸುತ್ತವೆ. ಕ್ರಿಸ್ತನು ಈ ಮಾತುಗಳನ್ನು ನಿರ್ದಾಕ್ಷಿಣ್ಯವಾಗಿ ಹೇಳಿದನು. ಆದರೆ ಓ ಜನರೆ ! ಈಗ ಆ ಮಾತುಗಳನ್ನು ನಮ್ಮ ಮನಕ್ಕೆ ಇಷ್ಟವಾದ ಅರ್ಥವನ್ನು ಕೊಡುವದಕ್ಕಾಗಿ ಎಷ್ಟೆಷ್ಟು ತಿರುಚಿ, ವಿಕಾರಗೊಳಿಸಿದ್ದೇವೆ. ಶಾಸ್ತ್ರವಾಕ್ಯಗಳನ್ನು ನಾವು ಎಷ್ಟು ಚಿತ್ರಹಿಂಸೆ ಗೊಳಿಸಿದ್ದೇವೆ.

ಈ ಪ್ರಸಂಗವು ರಾಮನಿಗೆ ಒಂದು ಕತೆಯನ್ನು ನೆನಪುಗೊಡುತ್ತದೆ. ಇಂಡಿಯಾ ದೇಶದಲ್ಲಿ ದಿವ್ಯಭಾವದಿಂದ ಉನ್ಮತ್ತನಾದ ಒಬ್ಬ ಪ್ರಸಿದ್ಧ ಮಹಾತ್ಮನಿದ್ದನು, ಅವನು ಅತ್ಯುಚ್ಚವಾದ ಧ್ವನಿಯಲ್ಲಿ "ಓ ! ದೇವರು ಬೇಕೆನ್ನುವ ಗಿರಾಕಿಗಳೆ ಬನ್ನಿ ಬನ್ನಿ. ಪರ ಮಾತ್ಮ ಜ್ಞಾನವನ್ನು ಅಪೇಕ್ಷಿಸತಕ್ಕವರೆಲ್ಲಾ ಬನ್ನಿ. ಸಂಸಾರ ಭಾರವನ್ನು ಹೊರ ಲಾರದವರೆಲ್ಲಾ ಬನ್ನಿ. ಅದಕ್ಕಾಗಿ 'ನಾಮ್ ಲೇ ಲೋ, ನಾಮ್ ಲೇ ಲೋ" ಎಂದು ಬೀದಿಗಳಲ್ಲಿ ಕೂಗುತ್ತಾ ಹೋಗುತ್ತಿದ್ದನು. 'ನಾಮ್' ಎನ್ನುವದಕ್ಕೆ ಎರಡು ಅರ್ಥಗಳಿವೆ. ನಾಮ್ ಎಂದರೆ ರಾಮ್ ಅಥವಾ ದೇವರು ಎನ್ನುವುದು ಒಂದು ಅರ್ಥ. ಇನ್ನೊಂದು ಅರ್ಥ, ಕೊರಳಿಗೆ ಹಾಕುವ ಸುಂದರವಾದ ರತ್ನಾಭರಣ. ಆ ಮಹಾತ್ಮನು ದೇವರು ಎನ್ನುವ ಅರ್ಥದಲ್ಲಿ 'ನಾಮ್' ಎಂಬ ಶಬ್ದವನ್ನು ಉಪಯೋಗಿಸುತ್ತಿದ್ದನು. ಇಂಡಿಯಾ ದೇಶದಲ್ಲಿ ವಿವಾಹಕಾಲದಲ್ಲಿ ಕನ್ಯೆಯನ್ನು ಅಲಂಕರಿಸುವದಕ್ಕಾಗಿ ಅಮೂಲ್ಯವಾದ ರತ್ನಾಭರಣಗಳನ್ನು ಉಪಯೋಗಿಸುತ್ತಾರೆ. ಆಭರಣವು ಬೇಕಾದ ಶ್ರೀಮಂತನೊಬ್ಬನು ಒಂದು ದಿನ ಪೇಟೆಯಲ್ಲಿ ಹೋಗು ತ್ತಿರುವಾಗ 'ನಾಮ್ ಲೇ ಲೋ' ಎನ್ನುವ ಕೂಗನ್ನು ಕೇಳಿ, ಆ ರತ್ನಮಾಲೆಯನ್ನು ರಹಸ್ಯವಾಗಿ ಕೊಳ್ಳುವದಕ್ಕಾಗಿ, ಆ ಮಹಾತ್ಮನ ಮನೆಯನ್ನು ಹುಡುಕಿಕೊಂಡು ಹೋದನು. ಆದರೆ ಆ ಸಮಯದಲ್ಲಿ ಅವನು ಮನೆಯಲ್ಲಿರಲಿಲ್ಲವಾದ್ದರಿಂದ ಒಂದು ಸಣ್ಣ ಮಗುವು ಬಂದು, "ನನ್ನ ತಂದೆಯವರು ಮನೆಯಲ್ಲಿಲ್ಲ ; ಸಂಜೆಗೆ ಬರುತ್ತಾರೆ, ಅವರಿಂದ ಏನಾಗಬೇಕೆಂಬುದನ್ನು ತಿಳಿಸಿ" ಎಂದು ಕೇಳಿತು. ಅವನು, ತಾನು ನಾಮ ವನ್ನು ಕೊಳ್ಳಬೇಕೆಂದು ಹೇಳಿದನು. ಆ ಮಗುವು, "ದಯವಿಟ್ಟು ಸ್ವಲ್ಪ ತಡೆ ಯಿರಿ ; ನಾಮವನ್ನು ಒಳಗಿನಿಂದ ತಂದು ಕೊಡುತ್ತೇನೆ" ಎಂದು ಹೇಳಿ ಒಳಗೆ

ಹೋಯಿತು. ಆ ಮುದ್ದಾದ ಮಗುವಿನ ಮಾತಿನಿಂದ ಮೋಹಿತನಾಗಿ ಆ ಶ್ರೀಮಂತನು ಹೊರಗೆ ಕಾಯುತ್ತಾ ಕುಳಿತನು. ಅರ್ಧ ಗಂಟೆಯು ಮೇಲಾದರೂ ಆ ಮಗುವು ಹೊರಗೆ ಬಾರದಿರಲು, ಹೆಚ್ಚು ಹೊತ್ತು ಕಾದಿರುವದಕ್ಕೆ ಸಮಾಧಾನವಿಲ್ಲದೆ, ಅವನು ಕಿಂಡಿಯ ಹಲದಿಂದ ಒಳಗೆ ಹಣಕಿ ನೋಡಿದನು. ಆ ಮಗುವು ದೊಡ್ಡದೊಂದು ಚಾಕು ವನ್ನು ಮಸೆಯುತ್ತಿದ್ದಿತು. ಅವನು ಅಸಮಾಧಾನದಿಂದ "ಇಷ್ಟು ಹೊತ್ತು ಏನು ಮಾಡುತ್ತಿದ್ದೆ ಮಗು ? ನಾನು ಎಷ್ಟು ದೊಡ್ಡ ಮನುಷ್ಯ ಎನ್ನುವದು ನಿನಗೇನು ಗೊತ್ತು ? ನನ್ನ ಹತ್ತಿರ ಹೀಗೆ ಹುಡುಗಾಟವಾಡಬಹುದೆ ? ಚಾಕುವನ್ನೇಕೆ ಮಸೆ ಯುತ್ತಿ ? ಬೇಗ ಆ ರತ್ನಹಾರವನ್ನು ತೆಗೆದುಕೊಂಡು ಬಾ. ನಿನ್ನ ಆ 'ನಾಮ'ಕ್ಕೆ ಒಬ್ಬ ಸರಾಫರಿಂದ ಬೆಲೆಯನ್ನು ತಿಳಿಯಬೇಕು" ಎಂದನು. ಆ ಮಗುವು "ಬೀದಿಯ ಸರಾಫರು ಬೆಲೆಯನ್ನು ಕಟ್ಟುವ ಬಡಹಾರವು-ಬಡನಾಮವು-ನಮ್ಮದಲ್ಲ ; ಬೆಲೆ ಯಿಲ್ಲದ ಬೆಲೆಯನ್ನು ಅದಕ್ಕೆ ಕಟ್ಟಿಯೇ ಬಿಟ್ಟಿದೆ. ಅದನ್ನು ಹೆಚ್ಚು ಕಡಿಮೆ ಮಾಡು ವಂತೆಯೇ ಇಲ್ಲ. ಆದರೆ ಮೊದಲು ಬೆಲೆಯನ್ನು ಕೊಡಬೇಕು. ನಾಮವನ್ನು ಪಡೆಯಬೇಕಾದರೆ ಜೀವವನ್ನು ತೆರಬೇಕು. ಆದಕ್ಕಾಗಿಯೇ ಈ ಚಾಕುವನ್ನು ಮಸೆಯುತ್ತಿದ್ದೇನೆ. ಜೀವವನ್ನು ಉಳಿಸಿಕೊಳ್ಳಬೇಕಾದರೆ ನಾಮವನ್ನು ಕಳೆದು ಕೊಳ್ಳಬೇಕು" ಎಂದಿತು.

ಅರಬ್ಬೀ ಭಾಷೆಯಲ್ಲಿ ಒಂದು ಪದ್ಯವಿದೆ. ಅದರ ಅರ್ಥವೇನೆಂದರೆ, "ನಿನ್ನನ್ನು ಸಮಾಧಿ (ಗೋರಿ) ಮಾಡುವದರೊಳಗೆ ನೀನು ಸಾಯಬೇಕು, ಹಾಗೆ ಮಾಡುವದ ರಿಂದ ಈ ಲೋಕವನ್ನು ನೀನು ಭೂವೈಕುಂಠವಾಗಿ ಮಾಡುತ್ತಿ," ಸಂಸ್ಕೃತ ಸುಭಾ ಷಿತಗಳಲ್ಲಿಯೂ ಹೀಗೆಯೇ ಹೇಳಿದೆ.

ನಿಮ್ಮ ಇಡೀ ಜೀವನವೇ ಪ್ರಪಂಚದಿಂದ ಹಿಂದಿರುಗಿದಾಗ ನಿಮ್ಮನ್ನು ನೀವು ಶಿಲುಬೆಗೇರಿಸಿ, ಪ್ರಪಂಚದ ವಿಷಯಕ್ಕೆ ನೀವು ಸತ್ತಾಗ ಬದುಕಿಯೇ ಬದುಕುತ್ತೀರಿ. ಉಪದೇಶಕರ ಮತ್ತು ಬೋಧಕರ ಮೆಚ್ಚುಗೆಯ ಮಾತಿನಿಂದ ಮರುಳಾಗಬೇಡಿ. ರಾಮನು ನಿಮಗೆ ಸತ್ಯವನ್ನೇ ಹೇಳುತ್ತಾನೆ. ಅವನು ನಿಮ್ಮನ್ನು ವ್ಯರ್ಥವಾಗಿ ಹೊಗ ಳುವದಿಲ್ಲ. ವೇದಗಳಲ್ಲಿ ಸುಂದರವಾದೊಂದು ಸಂಸ್ಕೃತ ಶ್ಲೋಕವಿದೆ, ಅದರ ಅರ್ಥವೇನೆಂದರೆ-ಮನುಷ್ಯನ ದೇಹವು ಭದ್ರವಾದ ದುರ್ಗದಂತಿದೆ. ಇಂದ್ರಿಯ ಗಳೇ ಅದರಲ್ಲಿರುವ ಕಿಂಡಿಗಳು. ಅವುಗಳಲ್ಲಿ ನಾವು ಗುಂಡುಗಳನ್ನೂ ಫಿರಂಗಿಗಳನ್ನೂ ಇಟ್ಟು ಒಳಗಿನಿಂದ ಹೊರಗೆ ಉಡಾಯಿಸುತ್ತೇವೆ. ಹಾಗೆಯೇ ನಿಮ್ಮಿಂದ ಪ್ರೇಕ್ಷಕರ ತಲೆಗಳೊಳಗೂ ಹೃದಯಗಳೊಳಗೂ ದೃಷ್ಟಿಯ ಫಿರಂಗಿ ಗುಂಡುಗಳು ಹೊಡೆಯ ಲ್ಪಡುತ್ತವೆ ; ಕಿವಿಗಳ ಕಿಂಡಿಗಳಿಂದ ಭಾವನೆಗಳು ಹೊರಸಿಡಿಯುತ್ತವೆ. ಈ ಮನುಷ್ಯ ದುರ್ಗದ ಸೃಷ್ಟಿಕರ್ತನಾದ ಆತ್ಮನು ಮಾನವನೊಡನೆ ಒಂದು ಪರಿಹಾಸ ಮಾಡಿದ್ದಾನೆ. ಎಲ್ಲಾ ಫಿರಂಗಿಯ ಗುಂಡುಗಳೂ ಒಳಗಿನಿಂದ ಹೊರಗೆ ಹಾರುವದರಿಂದ

ಮನುಷ್ಯನು ದಿಗ್ಭ್ರಾಂತನಾಗಿದ್ದಾನೆ. ಅವನು ತಾನು ಪ್ರಪಂಚವನ್ನು ಜಯಿಸುತ್ತಿದ್ದೇನೆಂದೂ ಲಾಭವನ್ನು ಗಳಿಸುತ್ತಿದ್ದೇನೆಂದೂ ತನ್ನ ಆಸ್ತಿಯನ್ನೂ ಪ್ರಭಾವವನ್ನೂ ಬೆಳೆಸುತ್ತಿದ್ದೇನೆಂದೂ ತಿಳಿಯುತ್ತಾನೆ ; ಆದರೆ ವಾಸ್ತವವಾಗಿ ತನ್ನನ್ನು ತಾನು-ತನ್ನ ಆತ್ಮವನ್ನು ತಾನು-ಕಳೆದುಕೊಳ್ಳುತ್ತಿದ್ದಾನೆ. ಮನುಷ್ಯನು ಈ ಕೋಟೆಯೊಳಗೆ ತಾನು ಜ್ಞಾನವನ್ನು ಸಂಪಾದಿಸುತ್ತಾ ಪ್ರಪಂಚದಲ್ಲಿ ಜಯಶಾಲಿಯಾಗುತ್ತಿರುವದಾಗಿ ಭಾವಿಸುತ್ತಾನೆ. ಆದರೆ ವಾಸ್ತವವಾಗಿ ತನ್ನ ನಿಜವಾದ ಆತ್ಮನನ್ನು ಅವನು ಉಪವಾಸ ಸಾಯಿಸುತ್ತಿದ್ದಾನೆ. ಆ ಶ್ಲೋಕದಲ್ಲಿ ಹೇಳುವದೇನೆಂದರೆ "ಯಾರ ಕಣ್ಣುಗಳು ಹೊರಗೆ ನೋಡುವದಕ್ಕೆ ಬದಲು ಒಳಗೆ (ಕಣ್ಣಿಗೆ ಕಣ್ಣಾದ) ನೋಟದ ಮೂಲವನ್ನು ನೋಡುವವೋ ಯಾರ ಕಿವಿಗಳು ಹಿಂದಿರುಗಿ ಒಳಗೆ, ಕೇಳುವ ಶಕ್ತಿಗೆ ಮೂಲವಾದ ಆತ್ಮನ ಶಬ್ದವನ್ನು ಕೇಳುವವೋ, ಯಾರ ಮನಸ್ಸು ಒಳ ತಿರುಗಿ ತನ್ನ ಕ್ರಿಯಾಶಕ್ತಿಯ ಮೂಲವನ್ನು ನೋಡಬಲ್ಲದೋ, ಹೀಗೆ ಯಾರು ತಮ್ಮ ಫಿರಂಗಿಗಳ ಮತ್ತು ಕೋವಿಗಳ ಬಾಯಿಗಳನ್ನು ಒಳ ತಿರುಗಿಸಿ ಗುಂಡುಗಳನ್ನು ಹಾರಿಸಬಲ್ಲರೋ ಅವರು ಪ್ರಪಂಚವನ್ನೆಲ್ಲಾ ಜಯಿಸಬಲ್ಲರು."

ಒಳಗೆ ನೋಡಿ ! ಕಣ್ಣುಗಳು ನೋಡುವಂತೆಯೂ ಕಿವಿಗಳು ಕೇಳುವಂತೆಯೂ ಕೂದಲು ಬೆಳೆಯುವಂತೆಯೂ ಮಾಡುವವನು ಯಾವನು ? ಅವೇ ಆತ್ಮ, ದೇವರು. ಇದು ಎಷ್ಟು ಸರಳ ಸುಲಭವಾಗಿದೆ ! ಒಂದು ಕ್ಷಣ ಮಾತ್ರವೇ ಈ ಸತ್ಯದ ಕಡೆ ನೀವು ಗಮನವಿಟ್ಟು ಆಲೋಚಿಸುವದಾದರೆ, ನೀವು ದೇವರು ಹೊರತು ಬೇರೆ ಅಲ್ಲವೆಂಬುದನ್ನು ಮನಗಾಣಬಹುದು. ನಿಮ್ಮೊಳಗೆ ಆ ದೇವತ್ವವಿರುವದನ್ನು ಭಾವಿಸಿರಿ ; ನೀವೇ ವಿಶ್ವದ ಪ್ರಭುಗಳೂ ವ್ಯವಸ್ಥಾಪಕರೂ ಸಾರ್ವಭೌಮರೂ ಆಗಿರಿ. ಆದರೆ ಈ ಜೀವವು ಬೆಳೆದು ಮುಪ್ಪಾಗುತ್ತದೆ. ಅನಂತರ ಸಾವೂ ಬರುತ್ತದೆ. ಬೀಜವು ಮೊಳಕೆಯೊಡೆದು ಬೆಳೆದಷ್ಟೂ ಕ್ಷೀಣವಾಗುತ್ತದೆ. ದೀಪವು ಬೆಳಗಬೇಕಾದರೆ ಬತ್ತಿಯೂ ಎಣ್ಣೆಯೂ ಉರಿಯಬೇಕು. ಆದ್ದರಿಂದ ದೇವರಾಗಿ ಬದುಕ ಬೇಕಾದರೆ, ಹೊರಗೆ ಹರಿಯುವ ಪ್ರವೃತ್ತಿಯು ನಿಲ್ಲಬೇಕು, ಕ್ಷುದ್ರವಾದ ಅಹಂಕಾರವು, ಮಿಥ್ಯಾ ಆತ್ಮವು, 'ಹುಸಿ ನಾನು' ಉರಿದು ಹೋಗಬೇಕು.

ಈ ವಿಚಾರವು ನಮ್ಮ ಹಿಂದಿನ ಕಥೆಯಿಂದ ದೂರ ಒಯ್ಯಬಹುದು. ಅದನ್ನೇ ಮುಂದುವರಿಸೋಣ. ಆ ಬಾಲಕಿಯು ಹೇಳಿದಳು ; "ನಾಮಕ್ಕೆ ಬೆಲೆಯು ನಿಶ್ಚಿತವಾಗಿದೆಯೆಂದು ತಿಳಿಯದೆ ಸ್ವಾಮಿ ! ನಿಮಗೆ ನಾಮವು ಬೇಕಾದರೆ ಈ ಕತ್ತಿಯಿಂದ ನಿಮ್ಮ ತಲೆಯನ್ನು ಕತ್ತರಿಸಿ ಹಾಕಬೇಕು. ಹಾಗಾದರೇ ನಿಮಗೆ ನಾಮವು ದೊರಕುವದು." ಇಲ್ಲಿ ನಾಮವೆಂದರೆ ಬಾಲಕಿಗೆ ದೇವರ ನಾಮವೆಂದೂ ದೇವರೆಂದೂ ಆ ಸಾಹುಕಾರನಿಗೆ ರತ್ನಮಾಲಿಕೆಯೆಂದೂ ಅಭಿಪ್ರಾಯವಿತ್ತು. ಆ ಮಗುವು ನಿರ್ಭಯವಾಗಿಯೂ ನಿರ್ದಾಕ್ಷಿಣ್ಯವಾಗಿಯೂ ಸಮಾಧಾನವಾಗಿಯೂ "ನಿಮಗೆ ನಾಮವು ಬೇಕಾದರೆ

ನಿಮ್ಮ ತಲೆಯನ್ನು ಬಲಿಕೊಡಬೇಕು" ಎಂದು ಹೇಳುತ್ತಿತ್ತು. ಆ ಬಡ ಗಿರಾಕಿಗೆ ಭಯವಾಗಿ ಉದ್ವೇಗದಿಂದ ಕೂಗುವದಕ್ಕೆ ತೊಡಗಿದನು. ನೆರೆಹೊರೆಯವರೆಲ್ಲಾ ಓಡಿಬಂದರು. ಅಷನು "ನೋಡಿ, ಈ ಹಾಳು ಗುಡಿಸಿಲಿನಲ್ಲಿ ಕಟುಕರೂ ಕೊಲೆ ಪಾತಕಿಗಳೂ ನರಘಾತಕರೂ ತುಂಬಿದ್ದಾರೆ. ಈ ಹುಡುಗಿಯ ತಂದೆ ತಾಯಿಗಳು ಇನ್ನೂ ಹೆಚ್ಚು ಪಾಪಿಷ್ಠರೂ ಕೊಲೆಗಡುಕರೂ ಇರಬೇಕು, ಇದನ್ನು ಪೋಲೀಸ್ ಅಧಿಕಾರಿಗಳಿಗೆ ತಿಳಿಸಬೇಕು." ಎಂದು ಕೂಗುತ್ತಿದ್ದನು. ಆದರೆ ಜನರು, "ಓ, ಹಾಗೆ ಹೇಳಬೇಡಿ ; ಈ ಬಾಲಕಿಯ ಮಾತಾಪಿತೃಗಳು ಬಹಳ ಸಾತ್ತ್ವಿಕರು, ಧಾರ್ಮಿಕರು, ದೈವೀ ಸಂಪತ್ತುಳ್ಳವರು." ಎಂದು ಹೇಳಿದರು. ಅವನು "ಇಂಥಾ ವೇಷಧಾರಿಗಳು ಧರ್ಮದ ಸೋಗಿನಲ್ಲಿ ಮಾಡಬಾರದುದನ್ನು ಮಾಡುತ್ತಾರೆಂಬುದನ್ನು ನಾನು ಬಲ್ಲೆ" ಎಂದು ಕೂಗುತ್ತಿದ್ದನು. ಆಗ ಆ ದೊಡ್ಡ ಗೊಂದಲದಲ್ಲಿ ಆ ಬಾಲಕಿಯ ತಂದೆಯು ಒಮ್ಮೆಗೇ ತೋರಿಕೊಂಡನು. ಅದನ್ನು ತಿಳಿದ ಉದ್ರಿಕ್ತನಾದ ಸಾಹುಕಾರನು ಅವನ ಕುತ್ತಿಗೆಯನ್ನು ಹಿಸುಕಬೇಕೆಂಬಷ್ಟು ಸಿಟ್ಟಿನಿಂದ ಕ್ರೂರವಾದ ಭಾಷೆಯಲ್ಲಿ "ಇಷ್ಟು ಸಣ್ಣ ಮಕ್ಕಳನ್ನು ಸಹ ಕೊಲೆಗಾರರನ್ನಾಗಿ ಮಾಡುವಷ್ಟು ಕೊಲೆಪಾತಕಿಗಳೇನಯ್ಯ ನೀವು ? ನಿಮಗೆ ಎಂಥಾ ಘೋರಶಿಕ್ಷೆಯನ್ನು ಕೊಟ್ಟರೂ ಸಾಲದಾಗಿದೆ..." ಎಂದು ಮೊದಲಾಗಿ ಕೂಗಾಡಿದನು. ಆದರೆ ಆ ಸಾಧುಪುರುಷನು ಕ್ಷುಬ್ಧನಾಗದೆ, ಸಮಾಧಾನದಿಂದ ಎಲ್ಲಾ ವಿಷಯವನ್ನೂ ತಿಳಿದ ಕೂಡಲೇ ಭಾವಾವಿಷ್ಟನಾದನು. ಅವನ ಹೃದಯವು ದೈವಭಾವದಿಂದ ತುಂಬಿ ತುಳುಕುತ್ತಿತ್ತು. ಅವನು ಆನಂದಪುಳಕಿತನಾದನು. ಅವನ ಕೆನ್ನೆಗಳ ಮೇಲೆ ಆನಂದ ಬಾಷ್ಪವು ಸುರಿಯುತ್ತಿತ್ತು. ಅವನು ಗದ್ಗದ ಕಂಠದಿಂದ "ಓ ಸಂತರೆ, ಮಹಾತ್ಮರೆ, ದೇವತೆಗಳೆ, ದೇವರೆ ! ಮೂಢ ಬಾಲಕಿಯಿಂದ ಅನರ್ಘವಾದ ದೇವರ ನಾಮವು ಇಷ್ಟು ಅಗ್ಗವಾಯಿತೆ ? ಇಷ್ಟು ಅಪಮಾನಿತವಾಯಿತೆ ? ಒಂದು ತಲೆಗೋ ಹೃದಯಕ್ಕೋ ಕೊಡುವಷ್ಟು ನಾಮದ ಬೆಲೆಯು ಕೀಳಾಯಿತೆ ? ಅತ್ಯಂತ ಪ್ರಿಯವಾದ ಸ್ವರ್ಗವೂ ಅಪವರ್ಗವೂ ಅಮೃತವೂ ದೇವತ್ವವೂ ಒಂದು ಜೀವದ ಬೆಲೆಗೆ ತೆರುವಷ್ಟು ಭಯಂಕರ ನಿಕೃಷ್ಟವಾಯಿತೆ ! ಸತ್ಯಸ್ವರೂಪದ ಕ್ಷಣಮಾತ್ರ ದರ್ಶನವನ್ನು ಪಡೆಯಬಹುದಾದರೆ, ಕೋಟಿ ಕೋಟಿ ಜೀವಗಳು ಸೃಷ್ಟಿಯಾಗಿ ನಾಶವಾಗಲಿ ! ಪವಿತ್ರವಾದ ಪರಮಾತ್ಮ ಜ್ಞಾನವು ಒಂದು ಕ್ಷಣವೇ ಹೊಳೆಯುವದಾದರೆ, ಕೋಟಿ ಕೋಟಿ ಜೀವಗಳೂ ತಲೆಗಳೂ ತುಂಡು ತುಂಡಾಗಲಿ, ಕತ್ತರಿಸಿ, ಕತ್ತರಿಸಿ ಬೀಳಲಿ !" ಎಂದು ಉದ್ಗಾರ ಮಾಡಿದನು.

ಉತ್ಕಟವಾದ ಭಾವಾವೇಶದಿಂದ ಆ ಮಹಾತ್ಮನು ತನ್ನಷ್ಟಕ್ಕೆ ತಾನು ಹೀಗೆ ಆಲಾಪ ಮಾಡಿದೊಡನೆ ಆ ವಿಚಿತ್ರ ಗಿರಾಕಿಯ ಮನಸ್ಸು ಕರಗಿತು. ಸುತ್ತಲೂ ನೆರೆದಿದ್ದ ಜನರೂ ಬೆರಗಾಗಿ ನಿಂತಿದ್ದರು. ಬಾಲಕಿಗೂ ಆಕೆಯ ತಂದೆ ತಾಯಿಗಳಿಗೂ ನಾಮವೆಂದರೆ ಪರಮಾಮೃತವಾದ ದೇವರ ನಾಮವೆಂಬ ಭಾವನೆಯಿದ್ದುದನ್ನು

ತಿಳಿದುಕೊಳ್ಳಲಾರದ ಪ್ರಾಪಂಚಿಕವಾದ ತಮ್ಮ ಮನಸ್ಸಿನ ಮೌಢ್ಯಕ್ಕಾಗಿ ಆ ಸಾಹುಕಾರನಿಗೂ ಜನರಿಗೂ ನಾಚಿಕೆಯೂ ವಿಸ್ಮಯವೂ ವಿಷಾದವೂ ಆಯಿತು.

ಮಧುರವಾದ ಜ್ಞಾನಾಮೃತವನ್ನು ಸವಿಯಬೇಕಾದರೆ, ನಾವು ತೆರಬೇಕಾಗಿರುವ ಬೆಲೆ ಏನು-ಎನ್ನುವದನ್ನು ಈ ಕಥೆಯು ತಿಳಿಸುತ್ತದೆ. ಆತ್ಮಾನುಭವಕ್ಕೆ ಅನಿವಾರ್ಯವಾಗಿ ಸಲ್ಲಿಸಬೇಕಾಗಿರುವ ಬೆಲೆಯೆಷ್ಟು-ಎನ್ನುವದನ್ನು ಈ ಕಥೆಯು ಬೋಧಿಸುತ್ತದೆ.

ಕುತ್ಸಿತವಾದ ವಿಷಯ ಭೋಗವನ್ನು ಬಿಡದೆ ಆತ್ಮಾನುಭವವನ್ನು ಪಡೆಯುವದು ಸಾಧ್ಯವಿಲ್ಲವೆನ್ನುವದನ್ನು ಲಕ್ಷ್ಯದಲ್ಲಿಡಬೇಕು.

ಸಾಧುಗಳು ನಾವೆಂಬ ರತ್ನಾಭರಣದ ವ್ಯಾಪಾರಿಗಳು. ನಿಮ್ಮ ಪಶು ಸ್ವಭಾವದ ತಲೆಯ ಬೆಲೆಯನ್ನು ಕೊಟ್ಟು ಹೊರತು ಆ ಸ್ವರ್ಗ ಸೀಮದ ಸುಖವು ನಿಮಗೆ ದಕ್ಕುವದಿಲ್ಲ. ಆತ್ಮ ಸುಖವೇ ಸುಂದರವಾದ ರತ್ನಾಭರಣ, ಆ ಪೂರ್ಣ ಜ್ಞಾನದ ಆನಂದವು ನಿಮಗೆ ಲಭಿಸಿಲ್ಲವಾದರೆ, ನೀವು ಸರಿಯಾದ ಬೆಲೆಯನ್ನು ತೆತ್ತಿಲ್ಲವೆಂದೇ ಅರ್ಥವು. ಆದ್ದರಿಂದ ಆ ಬೆಲೆಯನ್ನು ಚೆಲ್ಲಿರಿ ; ಈ ನಿಮಿಷವೇ ಪರಮಾನಂದವನ್ನು ಅನುಭವಿಸುವಿರಿ.

೧೧೪. ಭಕ್ತನ ಹೃದಯ ವೀಣೆಯನ್ನು ನುಡಿಸಿ, ಸುಂದರ ಮಧುರ ಗಾನವನ್ನು ಹರಿಸಬಲ್ಲ ಕಲಾಕೋವಿದ, ಗುರುದೇವನೇ !

(ಕ್ರೈಸ್ತ ದೇವಾಲಯದ ವಾದ್ಯ-ವಾದನ ನಿಪುಣ ಗಾನಕಲಾ ಗುರು)

ಒಂದು ಕ್ರೈಸ್ತ ದೇವಾಲಯದಲ್ಲಿ ಒಂದು ಸೊಗಸಾದ ವಾದ್ಯವಿತ್ತು. ಅದು ಎಷ್ಟು ಸೊಗಸಾಗಿತ್ತೆಂದರೆ, ಅದರ ರಕ್ಷಕರು ಅದನ್ನು ಮುಟ್ಟುವದಕ್ಕೆ ಸಾಮಾನ್ಯ ಸಂಗೀತಗಾರರಿಗೆ ಅವಕಾಶ ಕೊಡುತ್ತಿರಲಿಲ್ಲ. ಒಂದು ದಿನ ದೇವಾಲಯದಲ್ಲಿ ಪ್ರಾರ್ಥನೆಯನ್ನು ನಡೆಸುತ್ತಿದ್ದಾಗ ಬಡ ಉಡಿಗೆಗಳನ್ನು ಧರಿಸಿದ್ದ ಅಪರಿಚಿತನೊಬ್ಬನು ಒಳಗೆ ಬಂದು ಆ ವಾದ್ಯವನ್ನು ಬಾರಿಸಲು ಬಯಸಿದನು. ಆದರೆ ಅವನಿಗೆ ಅವಕಾಶ ಕೊಡಲಿಲ್ಲ. ಆ ಪಾದ್ರಿಗೂ ಅವನ ಪರಿಚಯವಿರಲಿಲ್ಲವಾದ್ದರಿಂದಲೂ ಅವಕಾಶ ಕೊಡುವದು ಅಸಾಧಾರಣ ಅನುಗ್ರಹವೆನಿಸಿದ್ದರಿಂದಲೂ ಅವನಿಗೆ ವಾದ್ಯವನ್ನು ಕೊಡಲಿಲ್ಲ. ಆ ಕಲಾಪಗಳು ಮುಗಿದು, ಬಾರಿಸುತ್ತಿದ್ದ ಸಂಗೀತಗಾರನು ಆ ವಾದ್ಯವನ್ನು ಬಿಟ್ಟ ಮೇಲೆ, ಈ ಹೊಸ ಮನುಷ್ಯನು ಯಾರಿಗೂ ತಿಳಿಯದಂತೆ ಕಳ್ಳತನದಿಂದ ಮೆಲ್ಲನೆ ಆ ವಾದ್ಯದ ಹತ್ತಿರಕ್ಕೆ ಹೋದನು. ಅವನು ವಾದ್ಯದ ಮೇಲೆ ಕೈಯಿಟ್ಟ ಕೂಡಲೇ ಆ ವಾದ್ಯವು ತನ್ನ ವಲ್ಲಭನನ್ನು ಗುರುತಿಸಿ ಗೌರವಿಸಿದಂತೆ ಸ್ವರ್ಗೀಯ ಗಾನವನ್ನು ಸುರಿಸುವದಕ್ಕೆ ತೊಡಗಿತು. ಮೇಲೆದ್ದು ದೇವಾಲಯವನ್ನು ಬಿಡುವದರಲ್ಲಿದ್ದ ಭಕ್ತವೃಂದವು ತರಂಗ ತರಂಗವಾಗಿ ಬರುತ್ತಿದ್ದ ಭವ್ಯವಾದ ಆ ಮಧುರ

ನಾದವನ್ನು ಕೇಳಿ ಬೆರಗಾಗಿ, ಮಂತ್ರಮುಗ್ಧರಾದಂತೆ ಆನಂದ ಪರವಶರಾದರು. ಅವರು ಆ ಸ್ಥಳವನ್ನು ಬಿಡದೆ, ಹೊರಟವರು ಕುಳಿತೇ ಬಿಟ್ಟರು. ಆಶ್ಚರ್ಯಕರವಾದ ಈ ಸಂಗಾನವನ್ನು ಪ್ರಯೋಗಿಸಿ ಬಾಜಿಸಿದವನು ಗಾನವಿದ್ಯಾ ವಿಶಾರದ ರಾಜಗುರುವಾಗಿದ್ದನು. ಆ ಬಗೆಯ ವಾದ್ಯವನ್ನು ನೂತನವಾಗಿ ಕಂಡು ಹಿಡಿದು ನಿರ್ಮಾಣ ಮಾಡಿದ ಕಲಾಕೋವಿದನೇ ಅವನಾಗಿದ್ದನು,

ನಮಗಾಗಿ ಒಂದು ಮಹಾಕಾರ್ಯ ಮಾಡುವದಕ್ಕೆ ನಮ್ಮ ಆತ್ಮನಿಗೂ ದೇವರಿಗೂ ಅವನ ಪ್ರೇಮಕ್ಕೂ ಅವಕಾಶ ಕೊಡುವದಿಲ್ಲ. ಈ ದೇಹಕ್ಕೂ ಮನಸ್ಸಿಗೂ ನಾವು ಗಮನ ಕೊಡುವದು ಹೆಚ್ಚು. ಅದರ ಯೋಗ ಕ್ಷೇಮ ನಿರ್ವಹಣೆಯಲ್ಲಿಯೇ ನಮ್ಮ ಕಾಲವೂ ಶಕ್ತಿಯೂ ಎಲ್ಲಾ ವ್ಯಯವಾಗುತ್ತವೆ. ಆದ್ದರಿಂದ ಅವುಗಳಿಂದ ಹೊರಡುವದು ಅತಿ ಸಾಮಾನ್ಯವಾದ ಸ್ವರವೇ. ಆ ಮಹಾ ಪ್ರಭು ಗುರುದೇವನೇ ಈ ವಾದ್ಯದ ಮೇಲೆ ಆಡಲಿ, ಕೈ ಆಡಲಿ, ನುಡಿಸಲಿ, ಅವನ ಮಹಾ ಪ್ರೇಮವು ನಮ್ಮ ಹೃದಯ ತಂತಿಯನ್ನು ಮಿಡಿದ ಒಡನೆಯೇ ಎಂದೆಂದೂ ಕನಸಿನಲ್ಲಿ ಸಹ ಕಂಡಿರದಂಥ ಸುಂದರ ಮಧುರ ಗಾನವು ಹರಿಯ ತೊಡಗುತ್ತದೆ. ವಿಸ್ಮಯಕರವಾದ ಬೆಳಕೂ ಇಂಪಾದ ಸ್ವರ ಮೇಳವೂ ಸುರಿಯ ತೊಡಗುತ್ತದೆ ; ದಿವ್ಯವಾದ ಮಧುರರಾಗವು ಸ್ಫೋಟವಾಗ ತೊಡಗುತ್ತದೆ ; ಸ್ವರ್ಗೀಯ ಅತ್ಯಾವೇಶದ ಮಹಾ ಕಾವ್ಯವು ಉದಯವಾಗುತ್ತದೆ.

೧೧೫, ಇಡೀ ಜಗತ್ತೇ ನಿನ್ನೊಳಗಿದೆ: ನೀನೇ ಜಗತ್ತಾಗಿದ್ದಿ

(ನೀರಿನ ಹನಿ)

ಪರ್ಷಿಯನ್ ಭಾಷೆಯಲ್ಲಿ ಒಂದು ಸುಂದರವಾದ ಪದ್ಯವಿದೆ. ಅದರ ಸಾರವೇನೆಂದರೆ, ಮೋಡಗಳಿಂದ ಕಣ್ಣೀರಿನ ರೂಪದಲ್ಲಿ ಒಂದು ಹನಿ ನೀರು ಬಿತ್ತು. ಕಣ್ಣೀರ ಹನಿಗಳ ಸುರಿಮಳೆ ಆಯಿತು. "ಈ ಅಳು ಏಕೆ ? ಏಕೆ ಅಳುತ್ತಿ ?" ಎಂದು ಕವಿಯು ಮೋಡಗಳನ್ನು ಕೇಳಿದನು. ಅದಕ್ಕೆ ಮೋಡ ಹೇಳಿತು, "ಓ, ನಾನು ಎಷ್ಟು ಅಲ್ಪ ಚಿಕ್ಕ ವಸ್ತು, ಅನಾಮಧೇಯ ವಸ್ತು ! ಓ ನಾನು ಅತ್ಯಂತ ಅಲ್ಪನಾದವನು, ಕ್ಷುದ್ರನಾದವನು. ಆದರೆ ಸಾಗರವು ಎಷ್ಟು ಮಹತ್ತಾದುದು, ಅಪಾರವಾದುದು ! ಸಾಗರದ ಅಪಾರತೆಗೆ ಹೋಲಿಸಿದರೆ. ನಾನು ಎಷ್ಟು ತುಚ್ಛ ಎನ್ನುವದಕ್ಕಾಗಿ ಅಳುತ್ತೇನೆ." ಆ ಕವಿಯು, ಆ ಮೋಡವನ್ನು ಕುರಿತು "ಅಳಬೇಡ, ನೀನು ನಾಮ ರೂಪಗಳಲ್ಲಿ ಸೆರೆಯೆಂದು ತಿಳಿಯಬೇಡ. ಆದರೆ, ನೀನು ಯಾರು, ಎಂದು ನಿನ್ನೊಳಗೆ ನೋಡಿಕೊ. ನೀನು ನೀರಲ್ಲವೆ ? ಸಮುದ್ರವೇನು ? ಅದೂ ನೀರಲ್ಲವೆ ? ದೇಶಕಾಲ ವಸ್ತುಗಳ ಪರಮಿತಿಯಲ್ಲಿ ಸಿಕ್ಕಿಕೊಂಡಿದ್ದೇನೆಂದು ತಿಳಿಯಬೇಡ. ದೇಶಕಾಲಗಳ ಆಚೆ ನೋಡಿ, ನಿನ್ನ ನಿಜವೇನು ಎನ್ನುವದನ್ನು ತಿಳಿ." ಎಂದು ಹೇಳಿದನು. ಒಂದು ವಸ್ತುವಿಗೆ

ಸಮವಾದ ವಸ್ತುಗಳು, ಪರಸ್ಪರ ಸಮವಾದವುಗಳು; ನೀವು ಕಾಲದಲ್ಲಿ ಸಿಕ್ಕಿಕೊಂಡ ಕೂಡಲೇ ದುಃಖಿಯಾಗುತ್ತೀರಿ. ದೇಶಕಾಲ ವಸ್ತುಗಳನ್ನು ಮೀರಿ, ಮೇಲೇಳಿ. ವಸ್ತು ಮತ್ತು ಚೇತನಗಳು, ಜಡ ಮತ್ತು ಚೈತನ್ಯ ಮಾತ್ರ ಒಂದಾಗಿಲ್ಲ; ಎಲ್ಲವೂ ಚೈತನ್ಯವಾದ್ದರಿಂದ ಒಂದಾಗಿವೆ. ನಿಜವಾದ ಆತ್ಮವು ಎಲ್ಲಾ ಕಾಲವನ್ನೂ ಮೀರಿದೆ. ಇಡೀ ಜಗತ್ತೇ ನಿನ್ನೊಳಗೆ ಇದೆ. ಕನಸಿನಲ್ಲಿ ನೀವು ಪರ್ವತಗಳ ಮಧ್ಯದಲ್ಲಿ ಅರಣ್ಯದಲ್ಲಿ ಒಂದು ನದಿಯ ತೀರದಲ್ಲಿ ಇದ್ದಂತೆ ಕಾಣುತ್ತೀರಿ. ಅವೆಲ್ಲಾ ನಿಮ್ಮ ಹೊರಗೆ ಇರುವಂತೆ ಕಾಣುತ್ತವೆ. ಆದರೆ ಎಲ್ಲವೂ ನಿಮ್ಮ ಒಳಗೇ ಇರುತ್ತವೆ. ಕನಸಿನಲ್ಲಿ ಕಂಡ ಆ ಪರ್ವತವು ಹೊರಗೆ ಇದ್ದಿದ್ದರೆ. ನೀವು ಮಲಗಿರುವ ಮನೆಯೂ ನಿಮ್ಮ ದೇಹವೂ ಪುಡಿಪುಡಿಯಾಗುತ್ತಿದ್ದವು; ಆ ಕನಸಿನ ನದಿಯು ಹೊರಗೆ ಹರಿಯುತ್ತಿದ್ದರೆ ನಿಮ್ಮ ಹಾಸಿಗೆಯು ಒದ್ದೆಯಾಗಿ ಕೊಚ್ಚಿಹೋಗುತ್ತಿತ್ತು.

ಹೀಗೆ ವೇದಾಂತವು ಹೇಳುವದೇನೆಂದರೆ, ಎಲ್ಲಾ ಪ್ರಪಂಚವೂ ನಿಮ್ಮ ಒಳಗೇ ಇದೆ. ಸೂಕ್ಷ್ಮ ಮತ್ತು ಮಾನಸ ಪ್ರಪಂಚಗಳು ಎಲ್ಲಾ ನಿಮ್ಮೊಳಗೇ ಇವೆ. ಆದರೆ ನೀವು ಅವುಗಳೊಳಗೆ ಇರುವದಾಗಿ ಭಾವಿಸುತ್ತೀರಿ. ತನ್ನ ಹೆಬ್ಬೆರಳಲ್ಲಿ ಇಟ್ಟುಕೊಂಡಿರುವ ಒಂದು ಕನ್ನಡಿಯಲ್ಲಿ ಒಬ್ಬ ಕನ್ಯೆಯು ತನ್ನನ್ನು ತಾನು ನೋಡಿಕೊಂಡು, ತಾನು ಕನ್ನಡಿಯಲ್ಲಿ ಇರುವದಾಗಿ ತಿಳಿದರೂ ಆಕೆಯು ಹೊರಗೇ ಇರುತ್ತಾಳೆ. ಹೀಗೆ ನೀವು ಪ್ರಪಂಚದಲ್ಲಿ ಇರುವಂತೆ ತೋರುತ್ತಿದ್ದರೂ ಪ್ರಪಂಚವೇ ನಿಮ್ಮ ಒಳಗೆ ಇವೆ, ನೀವು ಪ್ರಪಂಚದಲ್ಲಿಲ್ಲ. ಎರಡು ಬಗೆಯ ಮಾತುಗಳಿವೆ: ತಲೆಯಿಂದ ಹೊರಡುವ ಮಾತು ಹೃದಯದಿಂದ ಹೊರಡುವ ಮಾತು. ತಲೆಯಿಂದ ಆಡುವ ಮಾತನ್ನು ನಾವು ಯಾವಾಗ ಬೇಕಾದರೂ ನಮ್ಮ ಇಷ್ಟದಂತೆ ಹಿಡಿದಾಡಬಹುದು, ಬಳಸಬಹುದು. ಹೃದಯದಿಂದ ಮಾತು ಹೊರಚಿಮ್ಮಿದಾಗ ಅದರ ಪ್ರಭಾವವೇ ಮಹಿಮೆಯೇ ಬೇರೆಯಾಗುತ್ತದೆ.

ಹಲವು ಬಗೆಯ ಸೀಟಿಗಳಿವೆ. ಕೆಲವು ನೋಡುವದಕ್ಕೆ ಮಾತ್ರ ರೂಪ-ವರ್ಣಗಳಲ್ಲಿ ನವಿಲಿನಂತೆ ಇರುತ್ತವೆ ; ಕೆಲವು ನವಿಲಿನಂತೆ ಧ್ವನಿಮಾಡುತ್ತವೆ ; ಇನ್ನು ಕೆಲವು ಕೋಳಿಯಂತೆ, ಹಂದಿಯಂತೆ ಕೂಗುತ್ತವೆ. ನೀವು ಈ ಸಿಳ್ಳಿಗಳನ್ನು ಊದಿದಾಗ ನಿಮ್ಮ ಇಷ್ಟಪ್ರಕಾರ, ನವಿಲಿನಂತೆಯೋ ಕೋಳಿಯಂತೆಯೋ ಹಂದಿಯಂತೆಯೋ ಹಂಸನಂತೆಯೋ ಧ್ವನಿಮಾಡಬಹುದು. ಆದರೆ ನಿಜವಾದ ನವಿಲನ್ನೂ ಕೋಳಿ, ಹಂದಿ, ಹಂಸ ಮೊದಲಾದ ಪ್ರಾಣಿಗಳನ್ನೂ ನಿಮಗೆ ಬೇಕಾದಾಗ ಕೂಗಿಸುವದಕ್ಕೂ ಆಗುವದಿಲ್ಲ ; ಅವು ತಾವಾಗಿಯೇ ಖುಷಿ ಬಂದು ಕೂಗುವಾಗ ಅದನ್ನು ನಿಲ್ಲಿಸುವದಕ್ಕೂ ಆಗುವದಿಲ್ಲ. ನೈಜವು ದೇಶ-ಕಾಲ-ವಸ್ತುಗಳ ಕಟ್ಟಿಗೆ ಒಳಗಾಗುವದಿಲ್ಲ. ಹಿಮಾಲಯದಲ್ಲಿ ಚರಾಚರ ಪ್ರಕೃತಿಯ ಮಧುರಗಾನವಾಹಿನಿಯು ನಿರಂತರವಾಗಿ, ರೋಮಾಂಚಕಾರಿಯಾಗಿ ಪ್ರವಹಿಸುತ್ತಿದೆ. ಅದು ದಿವ್ಯ ಭಾವೋನ್ನತಿಯದಾಗಿ ರೂಪಗೊಂಡು

ಯಾರಿಗೂ ತಿಳಿಯದ ಯಾವದೋ ಅವ್ಯಕ್ತಾನಂತವಾದ ಅಮೃತ ಸಾಗರಕ್ಕೆ ಪ್ರವಹಿಸುತ್ತಿದೆ. ಅದು ನಾಶವಾಗುವದೆ ? ಇಲ್ಲ. ಆ ಮಹಾಭಾವಸ್ಪಂದನಗಳನ್ನು ಗಿಡಮರಬಳ್ಳಿಗಳು ಹಿಡಿದಿಟ್ಟುಕೊಂಡು ಕಾಪಾಡುತ್ತವೆ ; ನದಿಗಳು ಆ ಭಾವಸಾರವನ್ನು ಹೀರಿಕೊಂಡು ಹರಿದಲ್ಲಿ ಎಲ್ಲಕಡೆಗೂ, ಸೇವಿಸಿದವರನ್ನೂ ಪವಿತ್ರಮಾಡುತ್ತವೆ. ಭೂಮಿಯು ಅದನ್ನು ಸಂಗ್ರಹಿಸಿ ಸಂರಕ್ಷಿಸುತ್ತದೆ ; ಅದನ್ನು ಗ್ರಹಿಸುವ ಯೋಗ್ಯತೆ ಯುಳ್ಳ–ಅರ್ಹತೆಯುಳ್ಳ–ಒಂದು ವ್ಯಕ್ತಿಯು, ಒಂದು ಮಹಾವ್ಯಕ್ತಿಯು ಸಿಕ್ಕುವ ವರೆಗೂ ಗಾಳಿಯು ಅದನ್ನು ತನ್ನ ತಲೆಯ ಮೇಲೆ ಹೊತ್ತು ವಾತಾವರಣದಲ್ಲಿ ಸೇರಿಸಿ, ಇಡೀ ವಿಶ್ವದ ಮೇಲೆಲ್ಲಾ ಬೀಸುತ್ತದೆ.

ಎಲ್ಲಾ ಭಾವಗಳೂ ವಿಚಾರಗಳೂ ದೇವರಿಂದಲೇ ನೇರವಾಗಿ ಬರುತ್ತವೆ. ಅವು ಈ ಸುಳ್ಳಾದ ಹೊಣೆ ಹೊತ್ತು, ಸ್ವಾಮಿತ್ವದ ಹಕ್ಕು ಸಾಧಿಸುವ ಅಹಂಕಾರದಿಂದ ಹೊರಹೊಮ್ಮುವದಿಲ್ಲ. ಆದರೆ ಆ ಮಿಥ್ಯಾ ಅಹಂಕಾರವು ತೊಲಗಿದಾಗಲೇ ದಿವ್ಯ ಭಾವಗಳು ತಾವೇ ತಾವಾಗಿ ಒಳಗಿನಿಂದ ಪ್ರವಹಿಸುತ್ತವೆ.

ರಾಮನ ಅಭಿಪ್ರಾಯದಲ್ಲಿ, ಪ್ರತಿಯೊಂದು ಪುಸ್ತಕವೂ ಭಗವತ್ ಪ್ರೇರಣೆ ಯಿಂದ ಬರೆದ ಪುಸ್ತಕವೇ, ಭಗವಂತನ ಪುಸ್ತಕವೇ. ಬೈಬಲ್ ಒಂದೇ ಅಲ್ಲ, ಎಮರ್‌ಸನ್, ಡಾರ್‌ವಿನ್, ಷೇಕ್ಸ್‌ಪಿಯರ್ ಮೊದಲಾದ ಎಲ್ಲರ ಪುಸ್ತಕಗಳೂ ವೇದಗಳಷ್ಟೇ ದೈವಪ್ರೇರಿತವಾದವುಗಳು ; ಏಕೆಂದರೆ, ಮನುಷ್ಯನ ಅಲ್ಪವಾದ ಅಹಂಕಾರವು ತೊಲಗಿದ ಹೊರತು ಅಂಥಾ ವಿಚಾರಗಳ ಸ್ಫೂರ್ತಿಯು ಬರುವದಿಲ್ಲ.

೧೧೬. ದಾರಿಗಳು ಬೇರೆ ಬೇರೆ, ಆದರೆ ಊರು (ತೌರು) ಒಂದೇ

(ತಂದೆಗೆ ಬುದ್ಧನ ಉತ್ತರ)

ಬುದ್ಧದೇವನಲ್ಲಿಗೆ ಒಬ್ಬ ಮನುಷ್ಯನು ಬಂದು ಅವನ (ಬುದ್ಧನ) ಕುಟೀರಕ್ಕೆ ಹೋಗಲು ಹೇಳಿದನು. ಬುದ್ಧ ದೇವನು ಹಿಂದೆ ರಾಜಕುಮಾರನೂ ಚಕ್ರವರ್ತಿಯೂ ಆದ ಗೌತಮನಾಗಿದ್ದು ಮುಂದೆ ಪರಿವ್ರಾಜಕನಾದನು. ಅವನು ಸರ್ವಸ್ವವನ್ನೂ ತ್ಯಾಗಮಾಡಿ ಸಂನ್ಯಾಸಿಯಾದನು. ಅವನು ಪರಿವ್ರಾಜಕನಾಗಿ ಏನನ್ನೂ ಕೇಳದೆ ಬೇಡದೆ ಊರಿಂದೂರಿಗೆ ತಿರುಗುತ್ತಿದ್ದನು. ಅವನು ತನ್ನ ಕೈಯಲ್ಲಿ ಹಿಡಿದುಕೊಂಡು ಹೋಗು ತ್ತಿದ್ದ ಪಾತ್ರೆಯಲ್ಲಿ ಯಾರಾದರೂ ಏನಾದರೂ ಆಹಾರವನ್ನು ಹಾಕಿದರೆ ಒಳ್ಳೆಯ ದಾಯಿತು ; ಇಲ್ಲವಾದರೆ ಬುದ್ಧನು ತನ್ನ ದೇಹಕ್ಕಾಗಿ ಹುಲ್ಲುಕಡ್ಡಿಯಷ್ಟೂ ಚಿಂತಿ ಸುತ್ತಿರಲಿಲ್ಲ ; ಈ ಪ್ರಾಪಂಚಿಕ ಜೀವನವನ್ನು ಅವನು ಸ್ವಲ್ಪವೂ ಲೆಕ್ಕಿಸುತ್ತಿರಲಿಲ್ಲ. ಅವನು ತನ್ನ ತಂದೆಯ ರಾಜ್ಯಕ್ಕೆ ಹೋಗಿ, ಭಿಕ್ಷುಕನ ವೇಷದಲ್ಲಿ–ಸಂನ್ಯಾಸಿಯ ಉಡಿಗೆ ಯಲ್ಲಿ ಬೀದಿಗಳಲ್ಲಿ ಸಂಚರಿಸುತ್ತಿದ್ದನು. ಬುದ್ಧನನ್ನು ಭಿಕ್ಷುಕನೆಂದು ಕರೆಯುವದು ತಪ್ಪಾಗಬಹುದು. ಅವನದು ಭಿಕ್ಷುಕವೃತ್ತಿಯಲ್ಲ. ಅವನು ರಾಜಾಧಿರಾಜ, ಅವನದು

ರಾಜಶ್ರೀ, ರಾಜವೈಭವ, ರಾಜವಿಭೂತಿ, ಮಹಾ ಭವ್ಯತೆ. ಅವನು ಯಾವದನ್ನೂ ಬಯುಸುವದಿಲ್ಲ. ಅವನು ಏನನ್ನೂ ಕೇಳುವದಿಲ್ಲ. ದೇಹವು ಸತ್ತರೇನು ? ಸಾಯಲಿ— ಎಂದು ಅವನ ಭಾವನೆ. ಶರೀರದ ಯೋಗಕ್ಷೇಮದ ಚಿಂತೆಯು ಸಹ ಅವನಿಗಿಲ್ಲ. ಅವನು ಆಹಾರ ವಸ್ತ್ರಗಳನ್ನು ಕೇಳುವದಕ್ಕೆ ಸಹ ನಿಮ್ಮಲ್ಲಿಗೆ ಬರುವದಿಲ್ಲ.

ಆ ಭಿಕ್ಷುವಿನ ಉಡುಪಿನಲ್ಲಿ ಬುದ್ಧನು ಬೀದಿಗಳಲ್ಲಿ ತಿರುಗುತ್ತಿರುವದನ್ನು ಕೇಳಿದ ಅವನ ತಂದೆಯು ಬಹಳ ವ್ಯಥೆಯಿಂದ ಅವನಲ್ಲಿಗೆ ಬಂದು ಕಣ್ಣೀರುಗರೆಯುತ್ತಾ "ವತ್ಸ ! ಪ್ರಿಯ ರಾಜಕುಮಾರ, ನಾನೆಂದೂ ಈ ನಿನ್ನ ಕಾರ್ಯವನ್ನು ಮಾಡಲಿಲ್ಲ. ನಿನ್ನ ಈ ವೇಷವನ್ನು ಹಾಕಲಿಲ್ಲ. ನನ್ನ ತಂದೆಯೂ ಅಂದರೆ ನಿನ್ನ ಅಜ್ಜನೂ ಈ ನಿನ್ನ ಭಿಕ್ಷುಕನ ಉಡಿಗೆಯನ್ನು ಧರಿಸಲಿಲ್ಲ. ನಿನ್ನ ಮುತ್ತಜ್ಜನೂ ಈ ವೃತ್ತಿಯನ್ನು ನಡೆಸಲಿಲ್ಲ. ನಾವೆಲ್ಲರೂ ಪರಂಪರೆಯಾಗಿ ರಾಜರಾಗಿದ್ದೇವೆ ; ನೀನೂ ರಾಜವಂಶಕ್ಕೆ ಸೇರಿದವನು. ಈ ಭಿಕ್ಷುವೃತ್ತಿಯಿಂದ ನಮ್ಮ ಇಡೀ ರಾಜವಂಶಕ್ಕೇ ಅಪಕೀರ್ತಿಯನ್ನೂ ನಾಚಿಕೆಗೇಡನ್ನೂ ಈಗ ನೀನೇಕೆ ತರುತ್ತಿದ್ದಿ ? ದಯವಿಟ್ಟು ಹೀಗೆ ಮಾಡಬೇಡ. ಹೀಗೆ ಮಾಡಬೇಡ, ನಮ್ಮ ಗೌರವವನ್ನು ಉಳಿಸು" ಎಂದು ಕೇಳಿಕೊಂಡನು.

ಬುದ್ಧನು ಮುಗುಳು ನಗೆಯಿಂದ "ನಾನು ಯಾವ ವಂಶಕ್ಕೆ ಸೇರಿದವನೆಂಬುದನ್ನು ಹಿಂದಿರುಗಿ ನೋಡುತ್ತೇನೆ. ನನ್ನ ಹಿಂದಿನ ಜನ್ಮಗಳನ್ನೂ ಸ್ಮರಿಸುತ್ತೇನೆ, ನಾನು ಬಂದಿರುವ ವಂಶವು ಉದ್ದಕ್ಕೂ ಎಲ್ಲಾ ಕಾಲದಲ್ಲಿಯೂ ಭಿಕ್ಷುಕರ ವಂಶವೇ ಆಗಿದೆ. ಅದಕ್ಕೆ ನಿದರ್ಶನವೆಂದರೆ, ಇಲ್ಲಿ ಒಂದು ಬೀದಿ ಇದೆ. ಆ ಕಡೆಯಿಂದಲೂ ಇನ್ನೊಂದು ಬೀದಿಯು ಬರುತ್ತಿದೆ. ನೀವೂ ನಿಮ್ಮ ಹಿಂದಿನ ಜನ್ಮಗಳಿಂದ ಆ ರಸ್ತೆಯಲ್ಲಿ ಬಂದಿದ್ದೀರಿ ; ನಾನು ಈ ರಸ್ತೆಯಿಂದ ಬರುತ್ತಿದ್ದೇನೆ. ಈ ಜನ್ಮದಲ್ಲಿ ನಾವು ಈ ಎರಡು ರಸ್ತೆಗಳೂ ಸಂಧಿಸುವ ಕತ್ತರಿಯಲ್ಲಿ ಸೇರಿದ್ದೇವೆ. ಈಗ ನಾನು ನನ್ನ ದಾರಿಯಲ್ಲಿ ಹೋಗಬೇಕು ; ನೀವು ನಿಮ್ಮ ದಾರಿಯಲ್ಲಿ ಮುಂದುವರಿಯಬೇಕು" ಎಂದು ಹೇಳಿದನು.

ಈ ಬಂಧುಗಳೂ ಸಂಬಂಧಗಳೂ ಎಲ್ಲಿವೆ ? ನಿಮಗೆ ಮಕ್ಕಳಿದ್ದಾರೆಂದು ಹೇಳುತ್ತೀರಿ. ಈ ದೇಶದ ನಾಗರಿಕತೆಯಲ್ಲಿ ಅಸಭ್ಯವೆಂದು ತಿಳಿದಿರುವದನ್ನು ರಾಮನೇನಾದರೂ ಹೇಳಿದರೆ, ನೀವು ದಯವಿಟ್ಟು ಕ್ಷಮಿಸಬೇಕು, ಈ ಮಕ್ಕಳು ನಿಮ್ಮವರೆಂದು ಹೇಳುತ್ತೀರಿ. ಈ ಮಗನು ನನ್ನ ಮಾಂಸದ ಮಾಂಸವೆಂದೂ ನನ್ನ ರಕ್ತದ ರಕ್ತವೆಂದೂ ನನ್ನ ಮೂಳೆಯ ಮೂಳೆಯೆಂದೂ ಹೇಳುತ್ತೀರಿ. ಮುದ್ದು ಮಗನೆಂದು ಅಪ್ಪಿಕೊಳ್ಳುತ್ತೀರಿ ; ಹತ್ತಿರವೇ ಇಟ್ಟುಕೊಳ್ಳುತ್ತೀರಿ. ಆದರೆ ಇದರಲ್ಲಿರುವ ತತ್ತ್ವವನ್ನು ದಯವಿಟ್ಟು ವಿಚಾರಮಾಡಿ. ನಿಮ್ಮ ಮತ್ತು ನಿಮ್ಮ ಮಗನ ಸಂಬಂಧವನ್ನು ಶಾಶ್ವತಗೊಳಿಸಬೇಕೆಂದು ಬಯಸುತ್ತೀರಿ. ನಿಮ್ಮ ಶರೀರದಿಂದ ನಿಮ್ಮ ಮಗನು ಹುಟ್ಟಿರುವನೆಂಬ ಕಾರಣದಿಂದ ಆ ಸಂಬಂಧವನ್ನು ನಿರಂತರಗೊಳಿಸ

ಬೇಕೆಂದು ನೀವು ವಾದಿಸುವದಾದರೆ, ನಿಮ್ಮ ಶರೀರದಲ್ಲಿಯೇ ಹುಟ್ಟಿರುವ ಹೇನು-ಚೀರುಗಳ ಗತಿಯೇನು? ಅವುಗಳೂ ನಿಮ್ಮ ಬೆವರಿನಿಂದ ಹುಟ್ಟಿದ ಮಕ್ಕಳಲ್ಲವೆ? ಅವೂ ನಿಮ್ಮ ರಕ್ತದ ರಕ್ತವಲ್ಲವೆ? ಅವುಗಳಲ್ಲಿರುವ ರಕ್ತವು ನಿಮ್ಮಿಂದ ಹೀರಿದ ರಕ್ತವಲ್ಲವೆ? ಅವುಗಳಲ್ಲಿರುವ ಜೀವವು ನಿಮ್ಮ ಜೀವವೇ ಅಲ್ಲವೆ? ಸ್ವಲ್ಪ ಹೇಳಿ. ಆ ಒಂದು ಬಗೆಯ ಮಕ್ಕಳನ್ನು ಮುದ್ದಿಸಿ, ನಿಮ್ಮ ಪ್ರೇಮವನ್ನೆಲ್ಲಾ ಸುರಿದು ಪೋಷಿಸುತ್ತಿರುವಾಗ ಈ ಬಗೆಯ (ಹೇನು-ಕೂರೆಗಳು) ಮಕ್ಕಳನ್ನು ಕೊಲ್ಲುವದು ಎಷ್ಟು ಅವಿವೇಕ? ಎಷ್ಟು ಅನ್ಯಾಯ? ನಿಮ್ಮ ತರ್ಕವನ್ನೂ ನ್ಯಾಯವನ್ನೂ ವಿಚಾರಮಾಡಿ. ಹೀಗೆ ಹೇಳಿದ್ದರಿಂದ, ನೀವು ನಿಮ್ಮ ಮಕ್ಕಳ ವಿಷಯದಲ್ಲಿ ಕ್ರೂರವಾಗಿರಬೇಕೆಂದೂ ಅವರ ಯೋಗಕ್ಷೇಮವನ್ನು ವಹಿಸಬಾರದೆಂದೂ ಅರ್ಥವಲ್ಲ. ರಾಮನು ಹಾಗೆ ಹೇಳುವನೆಂದು ತಿಳಿಯಬೇಡಿ. ಇಡಿಯ ಜಗತ್ತನ್ನೇ ನಿಮ್ಮ ಸ್ವರೂಪವಾಗಿ ಕಾಣಬೇಕೆಂದು ರಾಮನು ಹೇಳುವಾಗ ನಿಮ್ಮ ಮಕ್ಕಳನ್ನು ಬಿಡಬೇಕೆಂದು ಹೇಳುತ್ತಾನೆಯೇ? ಇಡಿಯ ಜಗತ್ತಿನಲ್ಲಿ ನಿಮ್ಮ ಮಕ್ಕಳು ಸೇರುವದಿಲ್ಲವೆ? ರಾಮನ ಮಾತನ್ನು ಅಪಾರ್ಥ ಮಾಡಿಕೊಳ್ಳಬೇಡಿ. ರಾಮನು ಹೇಳುವದಿಷ್ಟೆ: "ನಿಮ್ಮ ಕುಟುಂಬ ಸಂಬಂಧಗಳು ನಿಮ್ಮ ಅಭ್ಯುದಯವನ್ನು ಹಿಮ್ಮೆಟ್ಟಿಸುವದಕ್ಕೆ ಅವಕಾಶ ಕೊಡಬೇಡಿ; ಅವು ನಿಮ್ಮ ಅಧ್ಯಾತ್ಮ ಮಾರ್ಗದಲ್ಲಿ ಎಡರು ತೊಡರಾಗದಿರಲಿ. ಪರಮಾರ್ಥಪಥದಲ್ಲಿ ಮುಂದುವರಿಯುವದಕ್ಕೆ ಕುಟುಂಬ ಸಂಬಂಧಗಳು ನಿಮಗೆ ಅಡ್ಡಿಯಾಗದಿರಲಿ.

20082

೧೧೭. ಒಂದು ನಿಜವೇ ಬಗೆ ಬಗೆಯಾಗಿ ತೋರಿಕೊಳ್ಳುತ್ತದೆ.

(ಶಾಹನೂ ಬೀರ್ಬಲ್ಲನು)

ವೇದಾಂತದ ಪ್ರಕಾರ, ಇನ್ನೊಂದು ದೃಷ್ಟಿಯಲ್ಲಿ, ಅಜ್ಞ ಮನುಷ್ಯನು ನಿಜಸ್ಥಿತಿಯ ಗುಟ್ಟನ್ನು ತಿಳಿಯದೆ, ಸುಳ್ಳು ವಿಷಯದ ಹೊರಗಿನ ರೂಪದ ಮೋಹದಲ್ಲಿ ಸಿಕ್ಕು ಬೀಳುತ್ತಾನೆ. ಆ ಸಂಯೋಗದ ಹೊರಗಿನ ಸಂಕೇತಗಳನ್ನೂ ಪರಿಣಾಮಗಳನ್ನೂ ಮಾತ್ರ ಚಿಂತಿಸಿ ಆತ್ಮವನ್ನು ನಿರ್ಲಕ್ಷ್ಯ ಮಾಡುತ್ತಾನೆ. ಪುರುಷನು ಸಂಯೋಗದಲ್ಲಿ ಸುಖವನ್ನು ಕಾಣುತ್ತಾನೆ; ಅದು ಸ್ತ್ರೀಯಿಂದಾಗಲೀ ಪುರುಷನಿಂದಾಗಲೀ ಉಂಟಾದುದಲ್ಲ; ಆ ಸುಖವು ಆತ್ಮನದೇ. ಆದರೆ ಆ ಸಂಯೋಗವು ಮನಸ್ಸನ್ನು ಕ್ಷಣಿಕವಾಗಿ ಒಳಮುಖ ಮಾಡಿ ನಿರ್ಮಲವೂ ನಿಶ್ಚಲವೂ ಆಗುವಂತೆ ಮಾಡುತ್ತದೆ. ಆ ನಿರ್ಮಲವಾದ ಮನಸ್ಸಿನಲ್ಲಿ ಆತ್ಮನ ಸುಖರೂಪವು ಪ್ರತಿಫಲಿಸಿ ತೋರುತ್ತದೆ. ಅದನ್ನು ಅರಿಯದಿರುವ ಅಜ್ಞನು, ಅದು ವಿಷಯಸುಖವೆಂದು ಭ್ರಮಿಸುತ್ತಾನೆ.

ದೇಶ-ಕಾಲ-ನಿಮಿತ್ತಗಳನ್ನು ಮೀರಿರುವ ದಿವ್ಯಶಕ್ತಿಯ ಮಹಾಸಾಗರದಲ್ಲಿ ಸೂರ್ಯ, ಚಂದ್ರ, ನಕ್ಷತ್ರಾದಿಗಳೂ ನಿಮ್ಮ ದೇಹಗಳೂ, ಅಲೆಗಳೂ ತೆರೆಗಳೂ

ಆಗಿವೆ. ಅಲೆಗಳು ಒಂದಕ್ಕೊಂದು ತಾಕಲಾಡಿ ಒಡೆದರೆ ನೀರೇ ಉಳಿಯುತ್ತದೆ. ಹಾಗೆ ದೇಹಗಳ ಸಂಯೋಗದಿಂದ ದೇಹಭಾವಗಳು (ಅಲೆಗಳಂತೆ) ಅಡಗಿ ತೋರುವ ಸುಖವು-ಅಲೆಗಳು ಒಡೆದಾಗ ವ್ಯಕ್ತವಾಗುವ ನೀರಿನಂತೆ-ಆತ್ಮರೂಪವಾದುದು.

ರಾಜನು ಬೀರ್ಬಲ್ಲನನ್ನು—ಪ್ರಪಂಚದಲ್ಲಿ ಕುರುಡರು ಹೆಚ್ಚಾಗಿದ್ದಾರೋ ಕಣ್ಣು ಸರಿಯಾಗಿ ಕಾಣುವವರು ಹೆಚ್ಚಾಗಿದ್ದಾರೋ ಎಂದು ಕೇಳಿದನು. ರಾಜನ ಸಭಿಕರಲ್ಲಿ ಚರ್ಚೆ ನಡೆಯಿತು; ರಾಜನು ಅಲ್ಪಸಂಖ್ಯಾತರೇ ಕುರುಡರೆಂದು ತಿಳಿದಿದ್ದನು. ಆಗ ಬೀರ್ಬಲ್ಲನು ಪರೀಕ್ಷೆ ಮಾಡುವದಕ್ಕಾಗಿ ಒಂದು ಬಟ್ಟೆಯನ್ನು ತಂದನು. ಅದನ್ನು ಅವನು ತಲೆಗೆ ಸುತ್ತಿಕೊಂಡು ಅಲ್ಲಿಯ ಜನರನ್ನು "ಇದೇನು ?" ಎಂದು ಕೇಳಿದನು. "ರುಮಾಲು" ಎಂದು ಉತ್ತರ ಬಂದಿತು. ಅದನ್ನೇ ಹೆಗಲ ಮೇಲೆ ಹಾಕಿಕೊಂಡು ಕೇಳಿದನು ; ಅದಕ್ಕೆ "ಶಾಲು" ಎಂದು ಹೇಳಿದರು. ಅದನ್ನೇ ಸೊಂಟಕ್ಕೆ ಸುತ್ತಿ ಉಟ್ಟುಕೊಂಡು ತೋರಿಸಿದನು. ಅದನ್ನು "ಪಂಚೆ" ಎಂದರು. ಆಗ ಬೀರ್ಬಲ್ಲನು "ನೀವೆಲ್ಲಾ ಕುರುಡರು, ಇದು ರುಮಾಲೂ ಅಲ್ಲ, ಶಾಲೂ ಅಲ್ಲ, ಪಂಚೆಯೂ ಅಲ್ಲ, ಇದು ಬರೀ ಬಟ್ಟೆ" ಎಂದು ಕೂಗಿದನು. ತೋರಿಕೆಯ ನಾಮ ರೂಪಗಳಲ್ಲಿ ಬಟ್ಟೆಯು ಅಡಗಿದ್ದಿತು.

ನೀವು ಹೆಣ್ಣು, ಗಂಡು, ತೆರೆಗಳು, ಹೆದ್ದೆರೆಗಳು, ಸುಳಿಗಳು, ರುಮಾಲು, ಶಾಲು—ಎನ್ನುವಾಗ ಅವುಗಳಲ್ಲಿರುವ ನಿಜವನ್ನು ನೋಡುವದಿಲ್ಲ. ಮದುವೆಯು ಧರ್ಮಕ್ಕೆ ವಿರುದ್ಧವೆಂದು ತಿಳಿಯಬೇಡಿರಿ. ಸಾಧಕನು ಸತ್ಯವೂ ಮೂಲತತ್ತ್ವವೂ ಆದ ನಿಜಾನಂದವನ್ನೇ ಧ್ಯಾನಿಸುವದರಿಂದ ಎಲ್ಲಾ ಬಗೆಯ ವಿಷಯೋಪಭೋಗದ ಉಪಾಧಿಯಿಂದ ಲಭಿಸುವ ಸುಖವೂ ನಿಜಾನಂದದ ಅಂಶವೇ ಎಂದು ತಿಳಿಯಬೇಕು. ಏಕೆಂದರೆ, ಆನಂದರೂಪನಾದ ಆತ್ಮನನ್ನು ಬಿಟ್ಟು ಇನ್ನೊಂದು ಯಾವದೂ ಇಲ್ಲವೇ ಇಲ್ಲ. ಅದರಲ್ಲಿ ಒಂದಾಗಿರುವ ಅರಿವು ತಪ್ಪಿದ ಕೂಡಲೇ ಕಾರಣವನ್ನು ವಿಚಾರಿಸಿ, ಅದನ್ನು ಕಳೆದು, ಧ್ಯಾನದಿಂದ ಅದರಲ್ಲಿಯೇ ಮುಳುಗಬೇಕು.

ಪ್ರಪಂಚವೆಲ್ಲಾ ಆನಂದಸಾಗರದ ಅಲೆಗಳಾದ್ದರಿಂದ ಅಲ್ಪವಾದ ವಿಷಯ ಸುಖಕ್ಕೆ ನಾವೇಕೆ ಹಂಬಲಿಸಬೇಕು? ತೊಳಲಬೇಕು? ದೇಹಭಾವನೆಯಲ್ಲಿ ಕಾಮವಿದೆ; ಮೋಹವಿದೆ ; ಕಾಮದಲ್ಲಿ ತೃಪ್ತಿಯಿಲ್ಲ; ವಿಷಯವಾಸನೆಯು ಬೆಳೆಯುತ್ತಲೇ ಹೋಗುತ್ತದೆ. ಇವೆಲ್ಲಾ ನಿರಂತರ ದುಃಖಪರಂಪರೆಗೇ ಕಾರಣ. ವಿಷಯವು(ಪ್ರಪಂಚವು) ಸತ್ಯವೆಂದೂ ಅದರಿಂದ ಸುಖವೆಂದೂ ನಮಗಿರುವ ಭ್ರಮೆಯೇ ಮೂಲಕಾರಣ. ಆನಂದಸ್ವರೂಪವಾದ ಆತ್ಮನೊಬ್ಬನೇ ಸತ್ಯ ; ಪ್ರಪಂಚವೆಲ್ಲಾ ಅವನ ತೋರಿಕೆ ಮಾತ್ರ ; ಆನಂದಸಾಗರದ ಅಲೆಗಳು ಮಾತ್ರ. ನೀರು ಒಂದೇ ಸತ್ಯ ; ತೋರಿಕೆಗೆ ನಾವು ಮರುಳಾಗಬಾರದು." ಹೀಗೆ ನಿಮ್ಮಲ್ಲಿಯೇ ವಿಚಾರ ಮಾಡಬೇಕು ; ವಾದ ಮಾಡಬೇಕು ; ತರ್ಕ ಮಾಡಬೇಕು. ಮನಸ್ಸನ್ನು ಶುದ್ಧಿ ಮಾಡಬೇಕು. ನರನಾಡಿಗಳ

ಜಾಲದಿಂದ ಇಚ್ಛಾಶಕ್ತಿಯ ಪ್ರವಾಹವು ಹೀಗೆ ಮೇಲೆ ಮೇಲೆ ಏರುತ್ತದೆ. ಮೆದುಳಿನ ಮೂಲಕ ವಿಚಾರದ ಒತ್ತಡವು ಏರಿ ಮತ್ತೂ ಮೇಲೇರುತ್ತದೆ. ಸ್ವಾಭಾವಿಕ ಕಾರ್ಯಗತಿಯಲ್ಲಿ ಮೋಹವು-ಕಾಮವು-ಕಡಮೆಯಾಗುತ್ತದೆ. ನಿಗ್ರಹಿಸಲ್ಪಡುವ ಪ್ರತಿಯೊಂದೂ ಕಡಮೆಯಾಗುತ್ತದೆ. ಏಕೆಂದರೆ, ಉಜ್ಜ್ವಲವಾದ ಸೂರ್ಯ ಪ್ರಕಾಶದಲ್ಲಿ ವಿದ್ಯುದ್ದೀಪ ಕಾಣಿಸುವದೇ ಇಲ್ಲ. ಕತ್ತಲೆಯಲ್ಲಿ ಮಾತ್ರ ಅದು ಬೆಳಕನ್ನು ಕೊಡುತ್ತದೆ. ಆತ್ಮಾನಂದದ ಸೂರ್ಯಪ್ರಕಾಶದಲ್ಲಿ ವಿಷಯಸುಖದ ವಿದ್ಯುದ್ದೀಪವು ಬೆಳಗುವದೇ ಇಲ್ಲ. ವಿಷಯಸುಖವನ್ನು ನಿಂದಿಸುವದಾಗಲೀ ತಿರಸ್ಕರಿಸುವದಾಗಲೀ ಸ್ವಭಾವಕ್ಕೆ ವಿರುದ್ಧವಾದುದು. ಇದನ್ನು ತುಳಿದಿಡುವುದಕ್ಕೆ ಆಗುವುದಿಲ್ಲ; ಅದನ್ನು ಮೀರಿ ಮೇಲೇರಬಹುದು, ಬಂಧುಗಳೆ! ಸಾಧನಮಾಡಿ ಮೇಲೇರಿ.

೧೧೮. ಸ್ವಾವಲಂಬನೆ

(ಹೋಗು, ಹೋಗು ; ಬಾ, ಬಾ)

ಸಹೋದರರಿಬ್ಬರ ಉನ್ನತ ನೀತಿಬೋಧಕವಾದ ಒಂದು ಕಥೆಯಿದೆ. ಇಬ್ಬರು ಸಹೋದರರು ತಮ್ಮ ತಂದೆಯ ಆಸ್ತಿಯನ್ನು ಸಮವಾಗಿ ಹಂಚಿಕೊಂಡಿದ್ದರು. ಆದರೆ ಕೆಲವು ವರ್ಷಗಳಲ್ಲಿ ಹಿರಿಯನು ಲಕ್ಷಾಧೀಶನಾದ; ಕಿರಿಯನು ಭಿಕ್ಷಾಧೀಶನಾದ. ಒಮ್ಮೆ ಆ ಲಕ್ಷಾಧಿಪನ ಮಿತ್ರನೊಬ್ಬನು ಅವನನ್ನು ಕುರಿತು "ಪ್ರಾರಂಭದಲ್ಲಿ ನೀವಿಬ್ಬರೂ ಸಮವಾದ ಧನಬಲವುಳ್ಳವರಾಗಿದ್ದರೂ ಕೆಲವು ವರ್ಷಗಳಲ್ಲಿ ನೀನು ಹೆಚ್ಚು ಧನಿಕನಾಗುವದಕ್ಕೂ ನಿನ್ನ ತಮ್ಮನು ದಟ್ಟದರಿದ್ರನಾಗುವದಕ್ಕೂ ಕಾರಣ ವೇನು? ಈ ವಿಷಮತೆ ಏಕಾಯಿತು? ಮತ್ತು ಹೇಗಾಯಿತು?" ಎಂದು ಕೇಳಿದನು. ಅದಕ್ಕೆ ಅವನೆಂದನು. "ನನ್ನ ತಮ್ಮನು ಯಾವಾಗಲೂ 'ಹೋಗು-ಹೋಗು' ಎನ್ನುತ್ತಿದ್ದನು; ನಾನಾದರೋ ಸರ್ವದಾ 'ಬಾ-ಬಾ' ಎನ್ನುತ್ತಿದ್ದೆನು. ಆದರಿಂದ ಅವನ ಧನ ಹೋಯಿತು, ನನಗೆ ಧನ ಬಂದಿತು. ಅಂದರೆ ನನ್ನ ತಮ್ಮನು ತನ್ನ ಆಳುಗಳಿಗೆ 'ನೀನು ಆ ಕೆಲಸಕ್ಕೆ ಹೋಗು; ನೀನು ಈ ಕೆಲಸಕ್ಕೆ ಹೋಗು'; ಎಂದು ಆಜ್ಞೆಮಾಡಿ, ತಾನು ಮಾತ್ರ ಸುಪ್ಪತ್ತಿಗೆಯ ಮೇಲೆ ಸುಖವಾಗಿ ಕುಳಿತು, ಮಲಗಿ ಮಜಾಮಾಡುತ್ತಾ ಹರಟೆಹೊಡೆಯುತ್ತಾ ಚಕ್ಕಂದವಾಡುತ್ತಿದ್ದನು. ಆದರೆ ನಾನು ಮಾತ್ರ ಯಾವಾಗಲೂ ಟೊಂಕಕಟ್ಟಿ ನನ್ನ ಕರ್ತವ್ಯ ಕರ್ಮಗಳನ್ನು ಸ್ವತಃ ಶ್ರದ್ಧೆಯಿಂದ ಮಾಡುತ್ತಿದ್ದೆ. ನನ್ನ ಸಹಾಯಕ್ಕೆ ಮಾತ್ರ ಆಳುಗಳನ್ನು 'ಬಾ-ಬಾ' ಎಂದು ಕರೆದುಕೊಂಡು 'ಇದನ್ನು ಮಾಡು, ಹೀಗೆ ಮಾಡು' ಎಂದು ಹೇಳಿ ಅವರಿಂದ ಮಾಡಿಸಿ ನಾನೂ ಮಾಡುತ್ತಿದ್ದೆ. ನಾನೂ ಆತ್ಮವಿಶ್ವಾಸವುಳ್ಳವನೂ ಸ್ವಾವಲಂಬಿಯೂ ಆಗಿ 'ಬಾ-ಬಾ' ಎನ್ನುತ್ತಿದ್ದುದರಿಂದ ಲಕ್ಷ್ಮಿಯೇ ನನ್ನಲ್ಲಿಗೆ ಓಡಿ ಬಂದಳು. ನನ್ನ ತಮ್ಮನಾದರೋ ಪರಾವಲಂಬಿಯಾಗಿ 'ಹೋಗು-ಹೋಗು' ಎನ್ನುತ್ತಿದ್ದುದರಿಂದ

ಲಕ್ಷ್ಮಿಯೂ ಅವನ ಆಜ್ಞೆಯನ್ನು ಪಾಲಿಸಿ, ಅವನನ್ನು ಬಿಟ್ಟು ಹೋದಳು. ಹೀಗೆ ಅವನು ಏಕಾಕಿಯಾದನು. ರಾಮನು ಹೇಳುವದೇನೆಂದರೆ, "ಬನ್ನಿ, ಸಹೋದರರೇ! ಬನ್ನಿ, ರಾಮನ ಯಶಸ್ಸನ್ನೂ ಗೆಲುವನ್ನೂ ಸಿದ್ಧಿಯನ್ನೂ ಸುಖವನ್ನೂ ನೀವೂ ಅನುಭವಿಸಿ."

೧೧೯. ಸ್ವಾತಂತ್ರ್ಯ–ಪಾರತಂತ್ರ್ಯ

(ಕುದುರೆ–ಸಾರಂಗ)

ಇದು ಎಷ್ಟು ಅನಿಷ್ಟಕರವಾಗುವದೆಂದರೆ, ಒಂದು ಪ್ರಸಂಗವು ನೆನಪಾಗುತ್ತದೆ. ಮನುಷ್ಯನೂ ಬಹಳ ಹಿಂದೆ ಜಂಗಲಿಯಲ್ಲಿಯೇ ವಾಸಮಾಡುತ್ತಿದ್ದನು, ಬೇರೆ ಮೃಗಗಳ ಜೊತೆಯಲ್ಲಿ ಕುದುರೆ ಮೊದಲಾದ ಪ್ರಾಣಿಗಳೂ ಜಂಗಲಿಯಲ್ಲಿಯೇ ವಾಸ ಮಾಡುತ್ತಿದ್ದವು. ಒಮ್ಮೆ ಕುದುರೆಯು ಕವಲುಗೊಂಬುಗಳುಳ್ಳ ಸಾರಂಗದೊಡನೆ ಹೋರಾಡಿ ಸೋತು ಬಹಳ ಗಾಸಿಯಾಯಿತು. ಸಾರಂಗವು ತನ್ನ ಕವಲ್ಗೊಂಬಿನಿಂದ ಕುದುರೆಯನ್ನು ತಿವಿದು, ಇರಿದು ಅತಿಶಯ ಭಂಗಪಡಿಸಿತ್ತು. ಕುದುರೆಯು ಮನುಷ್ಯನಲ್ಲಿ ಬಂದು ಶರಣಾಗತಿಯಾಯಿತು; ಸಹಾಯವನ್ನು ಬೇಡಿತು. ಮನುಷ್ಯ ಹೇಳಿದ: "ಒಳ್ಳೆಯದು, ನಿನಗೆ ಸಹಾಯವನ್ನು ಮಾಡುತ್ತೇನೆ. ನನ್ನ ಕೈಯಲ್ಲಿ ಬಾಣಗಳಿವೆ; ನಿನ್ನ ಬೆನ್ನಮೇಲೆ ನನ್ನನ್ನು ಕೂರಿಸಿಕೊಂಡು ಕರೆದುಕೊಂಡು ಹೋಗು; ನಿನ್ನ ಶತ್ರುಗಳನ್ನು ಕೊಲ್ಲುತ್ತೇನೆ" ಎಂದನು. ಹಾಗೆ ಅದು ಒಪ್ಪಿದ್ದರಿಂದ ಮನುಷ್ಯನು ಕುದುರೆಯ ಮೇಲೆ ಸವಾರಿ ಮಾಡಿಕೊಂಡು ಅರಣ್ಯದೊಳಗೆ ಹೋಗಿ ಆ ಸಾರಂಗ ವನ್ನು ಕೊಂದನು. ಅವರು ಜಯಶಾಲಿಗಳಾಗಿ ಮನೆಗೆ ಹಿಂದಿರುಗಿ ಬಂದರು. ಕುದುರೆಗೆ ಬಹಳ ಸಂತೋಷವಾಗಿತ್ತು. ಕುದುರೆಯು ತಾನು ಸ್ವೇಚ್ಛೆಯಾಗಿ ಮೊದಲಿನಂತೆ ಹೋಗುವದಕ್ಕಾಗಿ ಮನುಷ್ಯನನ್ನು ಕುರಿತು "ಮಹಾಸ್ವಾಮಿ! ನಿಮ್ಮಿಂದ ನನಗೆ ಬಹಳ ಉಪಕಾರವಾಯಿತು; ನಿಮಗೆ ಅನೇಕ ನಮಸ್ಕಾರಗಳು. ನಿಮ್ಮ ಉಪಕಾರವನ್ನು ನಾನು ಎಂದೂ ಮರೆಯುವದಿಲ್ಲ; ಈಗ ಹೋಗಿಬರುತ್ತೇನೆ" ಎಂದು ಹೇಳಿತು. ಅದಕ್ಕೆ ಮನುಷ್ಯನು "ಓ ಕುದುರೆ! ಎಲ್ಲಿಗೆ ಹೋಗಬೇಕೆನ್ನುತ್ತಿ? ನಾನು ಎಷ್ಟು ಸಹಾಯ ಮಾಡಿ ನಿನ್ನ ಜೀವವನ್ನು ಉಳಿಸಿದ್ದೇನೆ; ನಿನ್ನ ಉಪಯೋಗ ವನ್ನೂ ಮನಗಂಡಿದ್ದೇನೆ. ಆದ್ದರಿಂದ ನಿನ್ನನ್ನು ಕೈ ಬಿಡುವುದಿಲ್ಲ; ನೀನು ಇಲ್ಲಿಯೇ ನನ್ನ ಸೇವಕನಾಗಿರಬೇಕು" ಎಂದು ಹೇಳಿ ಅದನ್ನು ಬಲವಾಗಿ ಕಟ್ಟಿಹಾಕಿದನು. ಕುದುರೆಯು ಸಾರಂಗ, ಜಿಂಕೆ, ಹುಲಿ ಮೊದಲಾದ ಅರಣ್ಯಮೃಗಗಳ ಅಪಾಯವನ್ನೂ ಭಯವನ್ನೂ ತಪ್ಪಿಸಿಕೊಂಡಿತು; ಆದರೆ ತನ್ನ ಸ್ವಾತಂತ್ರ್ಯವನ್ನು ಕಳೆದು ಕೊಂಡಿತು. ಗುಲಾಮಗಿರಿಯೇ ಅದಕ್ಕೆ ಹೊರಗಿನ ಗೆಲುವಿನ ಫಲವಾಯಿತು. ಅದರ ಸ್ವಾತಂತ್ರ್ಯದ ನಷ್ಟವನ್ನು ಗೆಲುವಿನ ಲಾಭವೇನೂ ಸರಿದೂಗಲಿಲ್ಲ.

ಮನುಷ್ಯನ ಪರಿಸ್ಥಿತಿಯೂ ಹೀಗೇ ಇದೆ. ಅವನು ಮದುವೆಯಾದ ಮೇಲೆ

ಆ ಕುದುರೆಯಂತಾಗುತ್ತಾನೆ. ಅವನು ಹೊರಗಿನ ಅಪಾಯಗಳನ್ನು ತಪ್ಪಿಸಿಕೊಂಡರೂ ಹೆಂಡತಿಯ ಸಂಬಂಧದಲ್ಲಿ ಅವನಿಗಾದ ಗುಲಾಮಗಿರಿಯ ಬಂಧನವು, ಮನುಷ್ಯನಿಂದ ಕುದುರೆಗಾದ ಗತಿಯಂತೆ ಹೆಚ್ಚಿನ ಅಪಾಯವೇ ಆಗುತ್ತದೆ.

ಹೆಂಡತಿಯು ಗಂಡನನ್ನು ತನ್ನ ಗುಲಾಮನನ್ನಾಗಿ ಮಾಡಿಕೊಳ್ಳಬಾರದು; ಗಂಡನೂ ಆಕೆಯ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬಾರದು. ಇದು ಮುಂದಿನ ಹೆಜ್ಜೆ. ಇದೊಂದಾದರೆ ಮುಂದಿನ ಸಾಧನೆಗೆ ಎಷ್ಟೋ ಭರವಸೆ ಉಂಟಾಗುತ್ತದೆ. ಇದು ಸಾಮಾನ್ಯವಾಗಿ ನಿಮ್ಮ ಗಮನಕ್ಕೆ ಬರುವದು ಕಡಿಮೆ; ಆದರೆ ಇದು ವಾಸ್ತವವಾದುದು. ಕ್ರಿಸ್ತನು ಮಾನವ ಕುಲವನ್ನೇ ಉದ್ಧಾರ ಮಾಡತಕ್ಕವನೆಂದೂ ಪ್ರಪಂಚದಿಂದ ಎಲ್ಲಾ ಪಾಪಗಳನ್ನೂ ತೊಳೆದು, ಕಳೆದು, ಭೂಮಿಯ ಮೇಲೆ ಸ್ವರ್ಗ ಸಾಮ್ರಾಜ್ಯವನ್ನು ಸ್ಥಾಪಿಸತಕ್ಕವನೆಂದೂ ಅವನ ಭಕ್ತರು ತಿಳಿದಿದ್ದರು. ಆದರೆ ಇಂಥಾ ಎಷ್ಟೋ ಜನ ಮಹಾತ್ಮರು ಅವತಾರಮಾಡಿ ಬಂದರೂ ಬೇಕಾದಷ್ಟು ಬೈಬಲ್ಲುಗಳೂ ಕೊರಾನುಗಳೂ ವೇದಗಳೂ ಲೋಕದಲ್ಲಿ ಇದ್ದರೂ ಅವರೆಲ್ಲಾ ಅವತರಿಸುವದಕ್ಕೂ ಈ ಗ್ರಂಥಗಳೆಲ್ಲಾ ಬರುವದಕ್ಕೂ ಮುಂಚೆ ಈ ಪ್ರಪಂಚವು ಹೇಗಿದ್ದಿತೋ ಇವತ್ತಿಗೂ ಹಾಗೆಯೇ ಪಾಪಪೂರಿತವಾಗಿಯೇ ಧರ್ಮಹೀನವಾಗಿಯೇ ದೈವಭಕ್ತಿ—ಶೂನ್ಯವಾಗಿಯೇ ಇದೆ. ಇದರ ಕಾರಣವೇನು? ಇಷ್ಟೆಲ್ಲಾ ಕೆಡುಕಿನ ನಿಜವಾದ ಕಾರಣವು ನಿರ್ಮೂಲವಾಗಿಯೇ ಇಲ್ಲ. ನಿಜವಾದ ಕಷ್ಟವು ನಿಮ್ಮ ಕುಟುಂಬ ವರ್ತುಲದಲ್ಲಿಯೇ ಇದೆ. ಗಂಡಹೆಂಡಿರು ಅನ್ಯೋನ್ಯವಾಗಿ ನಿಜವಾದ ಹಿತವನ್ನು ಸಾಧಿಸಿದ ಹೊರತು ಧರ್ಮವು ಬೆಳೆಯುವದೇ ಇಲ್ಲ; ಧರ್ಮಕ್ಕೆ ಉಳಿಗಾಲವೇ ಇಲ್ಲ.

ಕ್ರಿಯೆ—ಪ್ರತಿಕ್ರಿಯೆಗಳು ಸರಿಸಮವೂ ಪರಸ್ಪರ ವಿರುದ್ಧವೂ ಇವೆ. ಗಂಡನು ಹೆಂಡತಿಯನ್ನು ದಾಸಿಯನ್ನಾಗಿ ಮಾಡಿಕೊಂಡರೆ, ಹೆಂಡತಿಗೂ ಗಂಡನು ದಾಸನಾಗ ಬೇಕಾಗುತ್ತದೆ. ಇದೊಂದು ಭಯಂಕರವಾದ ಭಾಷಣವೇ ಆಯಿತು. ಸತ್ಯವು ಯಾವಾಗಲೂ ಅಪ್ರಿಯವೂ ಕಠೋರವೂ ಇರುತ್ತದೆ. ಕ್ರಿಸ್ತನು ಆ ಸತ್ಯವನ್ನೇ ಬೋಧಿಸಿದ; ಅವನನ್ನು ಬೇಟೆಯಾಡಿ ಬಲಿಹಾಕಿದರು; ಶಿಲುಬೆಗೇರಿಸಿ ಮೈಗೆಲ್ಲಾ ಮೊಳೆ ಜಡಿದರು. ಸಾಕ್ರೆಟಿಸನು ಈ ಅಪ್ರಿಯವಾದ ಸತ್ಯವನ್ನು ಹೇಳಿದ್ದಕ್ಕಾಗಿಯೇ ಅವನಿಗೆ ಹೆಮ್‌ಲಾಕ್ ವಿಷವನ್ನು ಕುಡಿಸಿ ಕೊಂದರು.

ಎತ್ತಿನ ಕುತ್ತಿಗೆಗೆ ಹಗ್ಗವನ್ನು ಕಟ್ಟಿ ಕೈಯಲ್ಲಿ ಹಿಡಿದಿರುವ ಮನುಷ್ಯನು ತನ್ನನ್ನು ಬಿಟ್ಟು ಎತ್ತು ಹೋಗಲಾರದಾದ್ದರಿಂದ ಅದು ತನ್ನ ಅಧೀನದಲ್ಲಿದೆಯೆಂದು ಹೇಳುತ್ತಾನೆ. ಇದೊಂದೇ ಕಾರಣವಾದರೆ ಎತ್ತನ್ನು ಬಿಟ್ಟು ಅವನೂ ಹೋಗಲಾರ ನಾದ್ದರಿಂದ ಅವನೂ ಎತ್ತಿನ ಸ್ವಾಧೀನದಲ್ಲಿಯೇ ಇದ್ದಂತಾಯಿತು. ಅವನು ಎತ್ತಿನ ಸೇವಕನಾಗದಿದ್ದರೆ, ಎತ್ತೂ ಅವನ ಸೇವಕನಾಗುತ್ತಿರಲಿಲ್ಲ. ಇದೇ ನಿಯಮ.

ಪ್ರಕೃತಿಯ ಯೋಜನಾ ರಹಸ್ಯವೇ ಸ್ವಾತಂತ್ರ್ಯ, ಸ್ವಾತಂತ್ರ್ಯ, ಸ್ವಾತಂತ್ರ್ಯ! ಈ ದಾರಿಯಲ್ಲಿ ಪ್ರತಿಯೊಬ್ಬನೂ ಪ್ರತಿಯೊಬ್ಬಳೂ ವಿಕಾಸಹೊಂದಿ ತನ್ನಲ್ಲಿರುವ ಸತ್ಯವನ್ನು-ದೇವರನ್ನು-ಕಂಡುಕೊಂಡರೆ ಪ್ರತಿಯೊಬ್ಬನೂ ಪ್ರತಿಯೊಬ್ಬಳೂ ಸುಖಿ, ಇಲ್ಲವಾದರೆ ದುಃಖಿ. ನಿನ್ನ ಹೆಂಡತಿಯನ್ನು ನಿನ್ನಿಂದ ವಿಮುಕ್ತಳನ್ನಾಗಿ–ಬಿಡುಬಿಚ್ಚಾಗಿ–ಮಾಡಿದರೆ, ನೀನೂ ಆಕೆಯಿಂದ ವಿಮುಕ್ತನಾಗುತ್ತಿ, ಸ್ವತಂತ್ರನಾಗುತ್ತಿ. ಹೀಗೆಂದರೆ, ಈ ಜಗತ್ತಿನಲ್ಲಿ ಪ್ರತಿಯೊಂದು ಹೆಣ್ಣೂ ಗಂಡೂ ಸ್ವೇಚ್ಛೆಯಾಗಿರಬೇಕೆಂದು ಅರ್ಥವೇ ? ಅಲ್ಲ ಅಲ್ಲ, ಅಲ್ಲವೇ ಅಲ್ಲ. ಸ್ವಾತಂತ್ರ್ಯವನ್ನು ಹಾಗೆ ಸಂಪಾದಿಸಲಾಗುವದಿಲ್ಲ. ಸ್ವೇಚ್ಛಾವರ್ತನೆಯು ಪಾಶವೀಧರ್ಮದ ಗುಲಾಮಗಿರಿಯಾಗುತ್ತದೆ. ನಿಮ್ಮ ಸಂಗಾತಿಯು ನಿಮ್ಮ ದೇಹವನ್ನು ನಂಬಿಕೊಳ್ಳದೆ ನಿಮ್ಮಲ್ಲಿರುವ ದೇವರನ್ನು ನಂಬುವಂತೆ ಮಾಡಿದರೆ ನೀವು ಸಂಗಾತಿಗೆ ಸ್ವಾತಂತ್ರ್ಯ ಕೊಟ್ಟಂತೆ–ವಿಮೋಚನೆ ಮಾಡಿದಂತೆ ಆಗುತ್ತದೆ. ನೀವು ಹೆಂಡತಿಯನ್ನು ಪ್ರೀತಿಸುವಾಗ ಹೆಂಡತಿಯಲ್ಲಿರುವ ದೇವರನ್ನು ಪ್ರೀತಿಸಬೇಕು ; ಮತ್ತೂ ಆಕೆಯೂ ನಿಮ್ಮಲ್ಲಿರುವ ದೇವರನ್ನು ಪ್ರೀತಿಸುವಂತೆ ಮಾಡಬೇಕು. ಈ ಮಾಂಸಮಯವಾದ ದೇಹವು ಒಳಗಿರುವ ದೇವರನ್ನು ನೋಡುವದಕ್ಕೆ ಪಾರದರ್ಶಕವಾದ ಪರದೆಯಾಗಬೇಕು ; ಅಥವಾ ಕನ್ನಡಿಯಾಗಬೇಕು.

ನಾವು ಒಂದು ಹಕ್ಕಿಯಂತಿರಬೇಕು. ಅದು ತೂಗಾಡುವ ಒಂದು ಸಣ್ಣ ರೆಂಬೆಯ ಮೇಲೆ ಕೂತುಕೊಳ್ಳುತ್ತದೆ. ರೆಂಬೆಯು ತೂಗಾಡುತ್ತಿದ್ದರೂ ಅದು ಭಯಪಡದೆ ಕುಳಿತು ಆನಂದದಿಂದ ಹಾಡುತ್ತಾ ಇರುತ್ತದೆ. ಏಕೆಂದರೆ ತನಗೆ ರೆಕ್ಕೆಗಳಿವೆಯೆಂಬ ಭರವಸೆ ಹಕ್ಕಿಗಿದೆ. ಆ ತೂಗಾಡುತ್ತಿರುವ ರೆಂಬೆಯನ್ನು ತಾನು ನಂಬಿಲ್ಲವೆಂದೂ ತನ್ನ ಸ್ವಂತ ರೆಕ್ಕೆಗಳನ್ನೇ ತಾನು ನಂಬಿರುವದೆಂದೂ ಆ ಹಕ್ಕಿಗೆ ಗೊತ್ತು. ಹೀಗೆ, ನಿಮ್ಮ ಹೆಂಡತಿಯಲ್ಲಿಯೂ ಮಕ್ಕಳಲ್ಲಿಯೂ ನೀವು ಎಷ್ಟೇ ಆಸಕ್ತಿಯನ್ನು ವಹಿಸಿದರೂ ನಿಮ್ಮ ಹೃದಯವನ್ನು ಮಾತ್ರ ಅಲ್ಲಿಡಬೇಡಿ. ನಿಮ್ಮ ಹೃದಯಗಳು ಯಾವಾಗಲೂ ದೇವರಲ್ಲಿರಲಿ. ಏಕೆಂದರೆ ಹೊರಗಿನ ವಸ್ತುಗಳ ಸ್ಥಿತಿಗತಿಗಳು ಯಾವಾಗಲೂ ಅನಿಶ್ಚಿತ, ತೂಗಾಡುತ್ತಿರುತ್ತವೆ ; ಹರ್ಷ–ವಿಷಾದಗಳ ನಡುವೆ ತೂಗಾಡುತ್ತಿರುತ್ತವೆ. ಇವುಗಳ ಮೇಲೆ ಕೂತಿದ್ದರೂ ಇವೆರಡನ್ನೂ ನಂಬದೆ ಸುಖಶಾಂತಾನಂದದಲ್ಲಿರಬೇಕಾದರೆ ದೈವನಿಷ್ಠೆ ಎನ್ನುವ ರೆಕ್ಕೆಗಳ ಮೇಲೆ ಭರವಸೆ ಇರಬೇಕು. ನೀವೂ ಈ ಭಾವವನ್ನು ಬೆಳೆಸಿಕೊಂಡು ನಿಮ್ಮ ಹೆಂಡತಿ ಮಕ್ಕಳೂ ಈ ಭಾವವನ್ನು ಬೆಳೆಸಲು ಸಹಾಯಮಾಡಿ. ಹಾಗಾದರೆ ನೀವೂ ಅವರಿಂದ ಬಿಡುಗಡೆಯನ್ನು—ವಿಮೋಚನೆಯನ್ನು—ಸ್ವಾತಂತ್ರ್ಯವನ್ನು—ಪಡೆಯುತ್ತೀರಿ ; ಅವರೂ ನಿಮ್ಮಿಂದ ಬಿಡುಗಡೆಯನ್ನು ಹೊಂದುತ್ತಾರೆ. ಒಬ್ಬರ ಮೇಲೆ ಇನ್ನೊಬ್ಬರ ಅವಲಂಬನೆ ಇಲ್ಲವೇ ಇಲ್ಲ. ಪ್ರತಿಯೊಬ್ಬರೂ ಸ್ವತಂತ್ರ. ಹೀಗೆ ಪ್ರತಿಯೊಬ್ಬ ಅಮೆರಿಕನ್ನನೂ ಸ್ವತಂತ್ರನಾಗಿರಬಹುದು.

ಈಗೊಂದು ಸ್ವಾರಸ್ಯವಾದ ವಿಚಾರವಿದೆ.

ಬಹಳ ಸುಂದರವಾದ ಒಂದು ಚಿತ್ರವಿತ್ತು. ಅದರಲ್ಲಿ ಭವ್ಯವಾದ ಒಂದು ರಾಜರಥವಿತ್ತು. ರಥದಲ್ಲಿ ರಾಜಯೋಗ್ಯವಾದ ಸುಪ್ಪತ್ತಿಗೆಗಳಿದ್ದವು. ಸುಪ್ಪತ್ತಿಗೆಯ ಮೇಲೆ ಅತ್ಯಂತ ಸುಂದರಿಯಾದ ಮಹಾರಾಣಿ ಮಲಗಿದ್ದಳು. ಸುತ್ತಲೂ ಮಕ್ಕಳಿದ್ದವು; ರಾಜನೂ ಸಮೀಪದಲ್ಲಿ ಒಂದು ಸಿಂಹಪೀಠದ ಮೇಲೆ ಕೂತಿದ್ದನು, ಚಿತ್ರಕಾರನು ಎಲ್ಲವನ್ನೂ ಬಹಳ ಮನೋಹರವಾಗಿ ಚಿತ್ರಿಸಿದ್ದನು. ಆದರೆ ಆ ರಾಣಿಯು ಏನೋ ಕಾಹಿಲೆಯಿಂದ ಮೃತ್ಯುಶಯ್ಯೆಯಲ್ಲಿ ಸಾವಿನ ದವಡೆಯಲ್ಲಿದ್ದಳು, ರಾಜನು ಆಕೆಯನ್ನು ಸಂತೈಸುತ್ತಾ ಕಣ್ಣೀರು ಹಾಕುತ್ತಿದ್ದನು. ಆಕೆಯ ಮಗನೂ ಮಗಳೂ ಅಳುತ್ತಿದ್ದರು. ಅಂಥಾ ರಾಜ ವೈಭವದ ಸಂಪತ್ತಿನಲ್ಲಿಯೂ ಇಂಥಾ ಹೃದಯವಿದ್ರಾವಕವಾದ ಕೌಟುಂಬಿಕ ದುಃಖವನ್ನು ಚಿತ್ರಕಾರನು ಅತಿಶಯ ಭಾವಪೂರ್ಣವಾಗಿ ಚಿತ್ರಿಸಿದ್ದನು. ಆ ಜೀವಂತವಾದ ಚಿತ್ರವನ್ನು ಎಲ್ಲರೂ ಬಹಳ ಕುತೂಹಲದಿಂದ ನೋಡಿ ಆಶ್ಚರ್ಯಾನಂದಭರಿತರಾಗುತ್ತಿದ್ದರು. ನೀವು ಅದನ್ನು ಕಂಡಿದ್ದರೂ ಖಂಡಿತ ಕೊಂಡುಕೊಳ್ಳುತ್ತಿದ್ದಿರಿ. ಅಂಥಾ ಚಿತ್ತಾಕರ್ಷಕವಾದ ರಮ್ಯತೆ ಆ ಚಿತ್ರದಲ್ಲಿ ಮೈತಳೆದಿತ್ತು. ನೋಡಿದವರೆಲ್ಲಾ ಮೆಚ್ಚಿ ಮುಗ್ಧರಾಗುತ್ತಿದ್ದರು. ಆದರೆ ನಿಮ್ಮಲ್ಲಿ ಯಾರಾದರೂ ಆ ಮಹಾರಾಜನನ್ನೂ ರಾಜಕುವರ–ಕುವರಿಯರನ್ನೂ ರಾಜವೈಭವವನ್ನೂ ಬಿಟ್ಟು ಸಾಯುತ್ತಿದ್ದ ಆ ಮಹಾರಾಣಿಯಾಗಲು ಒಪ್ಪುವಿರಾ? ಅಥವಾ ಅಂಥ ಸ್ವರ್ಗಸುಂದರಿಯಾದ ರಾಣಿಯನ್ನು ತನ್ನ ಪ್ರೌಢ ವಯಸ್ಸಿನಲ್ಲಿ ಕಳೆದುಕೊಳ್ಳುತ್ತಿದ್ದ ರಾಜನಾಗಲು ಒಪ್ಪುವಿರಾ? ಅಥವಾ ಅಂಥಾ ದುರ್ದೈವಿಗಳಾದ ಮಕ್ಕಳಾಗಲು ಒಪ್ಪುವಿರಾ? ಇಲ್ಲ. ಹಾಗಾದರೆ ಆ ಚಿತ್ರವನ್ನು ನೋಡಿ ಎಲ್ಲರೂ ಮೆಚ್ಚುವುದಕ್ಕೆ ಕಾರಣವೇನು? ಚಿತ್ರದೊಳಗೇ ಸಿಕ್ಕಿಕೊಂಡರೆ ದುಃಖ; ಅವರಲ್ಲಿ ತಾನು ಒಂದಾದರೆ ದುಃಖ. ಆದರೆ ಅದರೊಳಗೆ ಸಿಕ್ಕಿಕೊಳ್ಳದೆ ಹೊರಗೆ ಬೇರೆಯಾಗಿ ನಿಂತು ಸಾಕ್ಷಿಯಾಗಿ ನೋಡಿದರೆ. ವ್ಯಕ್ತಿಗಳ ಅಭಿಮಾನವಿಲ್ಲದೆ ವ್ಯಕ್ತಿತ್ವವನ್ನು ಮೀರಿ ನೋಡಿದರೆ ಆ ದುರ್ದೈವದ ಚಿತ್ರದಲ್ಲಿಯೂ ಸ್ವಾರಸ್ಯವನ್ನು ಕಾಣಬಹುದು.

ನೀವೂ ಹಾಗೆಯೇ ನಿಮ್ಮ ಕುಟುಂಬ ಜೀವನದ ಸುಖದುಃಖಗಳಲ್ಲಿ ಬೆರತು ಒಂದಾಗದೆ, ಯಾವ ಏರುಪೇರುಗಳಲ್ಲಿಯೂ ಸಿಕ್ಕಿಕೊಳ್ಳದೆ ರೂಪ ವ್ಯಕ್ತಿತ್ವಾದಿಗಳಿಲ್ಲದ ದೇವರಂತೆ ಸಾಕ್ಷಿಯಾಗಿ ಎಲ್ಲವನ್ನೂ ನೋಡುತ್ತಿರಬೇಕು—ಹಾಗಾದರೆ ನೀವು ಮುಕ್ತರು; ನಿಮ್ಮ ಸಮಂತಾನಂದಕ್ಕೆ ಚ್ಯುತಿ ಬರುವುದಿಲ್ಲ—ಎಂದು ವೇದಾಂತವು ಹೇಳುತ್ತದೆ. ಗೃಹಕೃತ್ಯದ ವಿಷಯಗಳನ್ನು ಆ ಚಿತ್ರವನ್ನು, ನೋಡಿದಂತೆ ನೋಡಿರಿ. ನೀವು ಸಾಕ್ಷಿಯಾಗಿ ನೋಡಿದಾಗ ಅದು ಸ್ವಾರಸ್ಯವಾಗಿ ಕಾಣುತ್ತದೆ; ಸಂತೋಷಕ್ಕೆ ಕಾರಣವಾಗಿರುತ್ತದೆ. ಅದರಲ್ಲಿಯೇ ಸಿಕ್ಕಿಕೊಂಡಾಗ ಅದೇ ದುಃಖಕ್ಕೆ ಕಾರಣವಾಗುತ್ತದೆ. ಈ ಪ್ರಪಂಚದ ವ್ಯಾಪಾರ ವಿಲಾಸಗಳಲ್ಲಿ ತೊಡಕಿಕೊಂಡರೆ ನಾವು

ಶೋಚನೀಯ ಸ್ಥಿತಿಯಲ್ಲಿ ಸಿಕ್ಕಿಕೊಳ್ಳುತ್ತೇವೆ. ಆದರೆ ಅದನ್ನೇ ವ್ಯಕ್ತಿಭಾವನೆಯನ್ನು ಬಿಟ್ಟು ಸಾಕ್ಷಿಯಾಗಿ ನೋಡಿದರೆ ಅದು ವಿನೋದವಾಗಿಯೂ ಅಂದವಾಗಿಯೂ ಕಾಣುತ್ತದೆ. ಹಾಗೆಯೇ ಒಳಗಿನ ದೇವತ್ವವನ್ನು ಅರಿಯಿರಿ.

೧೨೦. ತನ್ನೊಳಗಿರುವ ದೇವತ್ವದಲ್ಲಿ ಇಡುವ ಗೌರವವೇ ನಿಜವಾದ ಆತ್ಮಗೌರವ

(ಉದ್ಯೋಗಿ-ಅಧಿಕಾರಿ)

ನಿಮ್ಮ ದೇಹ ಚಿಕ್ಕದಾಗಿರಬಹುದು; ಆದರೆ ಚಿಕ್ಕದೇಹ ಮಾಡಬೇಕಾದ ಕರ್ತವ್ಯಗಳೇ ಇವೆ, ಅವನ್ನು ದೊಡ್ಡ ದೇಹ ಮಾಡಲಾರದು. ಅಳಿಲು ಪರ್ವತದಷ್ಟು ದೊಡ್ಡದಲ್ಲವಾದರೆ, ಪರ್ವತವೂ ಅಳಿಲಿನಷ್ಟು ಸಣ್ಣದಾಗಲು ಸಾಧ್ಯವಲ್ಲ. ಪರ್ವತವು ಅರಣ್ಯಗಳನ್ನು ಹೊತ್ತಿರಬಹುದು; ಆದರೆ ಅಳಿಲಿನಂತೆ ಒಂದು ಕಾಯನ್ನು ಕಡಿಯುಲಾರದು. ಸಹಜ ಶಕ್ತಿಗಳು ಬೇರೆ ಬೇರೆ ಇರಬಹುದು. ಆದರೆ ಒಂದಕ್ಕಿಂತ ಒಂದು ಶ್ರೇಷ್ಠವೂ ಅಲ್ಲ, ಕನಿಷ್ಠವೂ ಅಲ್ಲ, ಎಲ್ಲವೂ ಅಗತ್ಯ; ಆದ್ದರಿಂದ ಶ್ರೇಷ್ಠ.

ಒಂದು ದಿನ ಒಬ್ಬ ಸಭ್ಯ ಮನುಷ್ಯನು ರಾಮನಲ್ಲಿಗೆ ಬಂದು ತನ್ನ ಮೇಲಿನ ಅಧಿಕಾರಿಯು ತನ್ನನ್ನು ಯಾವಾಗಲೂ ತಿರಸ್ಕಾರದಿಂದ ಕಾಣುತ್ತಾನೆಂದು ಹೇಳಿ ಏನು ಮಾಡಬೇಕೆಂದು ಕೇಳಿದನು. "ನಿನ್ನನ್ನು ನೀನು ತಿರಸ್ಕಾರದಿಂದ ಕಾಣುವದರಿಂದ ನಿನ್ನ ಮೇಲಿನ ಅಧಿಕಾರಿಯೂ ನಿನ್ನನ್ನು ತಿರಸ್ಕಾರದಿಂದ ಕಾಣುತ್ತಾನೆ. ನಿನ್ನನ್ನು ನೀನು ಗೌರವದಿಂದ ಕಂಡರೆ ಎಲ್ಲರೂ ನಿನ್ನನ್ನು ಗೌರವಿಸುತ್ತಾರೆ. ಎಲ್ಲಕ್ಕಿಂತಲೂ ದೊಡ್ಡದಾದ ನಿನ್ನೊಳಗಿರುವ ದೇವತ್ವವನ್ನು ಅರಿತು ಭಾವಿಸುತ್ತಿರು." ಎಂದು ರಾಮನು ಹೇಳಿ ಕಳುಹಿಸಿದನು. ಅವನು ಹಾಗೇ ಅಭ್ಯಾಸ ಮಾಡಿದ್ದರಿಂದ ಅವನ ಮೇಲಿನ ಅಧಿಕಾರಿಯೂ ಅವನನ್ನು ಗೌರವದಿಂದ ಕಾಣುವದಕ್ಕೆ ತೊಡಗಿದನು. ಒಂದು ದಿನ ಆ ಅಧಿಕಾರಿಯು ಇವನ ಮೇಲೆ ಬಹಳ ಸಿಟ್ಟು ಮಾಡಿದನು; ಆಗ ಈ ಮನುಷ್ಯನು ವಿನಯದಿಂದ ಪ್ರಿಯವಾಗಿಯೇ ಹೀಗೆ ಹೇಳಿದನು; "ಒಳ್ಳೆಯದು ಸ್ವಾಮಿ! ನನಗಿಂತಲೂ ತಮಗೆ ಹೆಚ್ಚಾದ ವೇತನ ಬರುತ್ತದೆ. ನನ್ನಿಂದ ಆಗಲಾರದ ಕೆಲಸವನ್ನು ನೀವು ಮಾಡುತ್ತೀರಿ. ನನಗೆ ನಿಮ್ಮ ಆವಶ್ಯಕತೆ ಇದೆಯೆಂಬುದು ನಿಜ. ಆದರೆ ನನ್ನ ಆವಶ್ಯಕತೆಯೂ ನಿಮಗಿದೆ ಎಂಬುದೂ ಅಷ್ಟೇ ನಿಜ. ನನ್ನ ಸ್ಥಾನದಲ್ಲಿ ಯಾರೂ ಇಲ್ಲವಾದರೆ ನೀವು ಕೆಲಸ ಸಾಗಿಸಬಲ್ಲಿರಾ? ಸಾಧ್ಯವಿಲ್ಲ. ಆದ್ದರಿಂದ ಈ ಕೆಲಸಕ್ಕೆ ಯಾರಾದರೂ ಬೇಕೆಂದು ಹೇಳಿಕಳಿಸಿದಿರಿ. ನಾನು ಬಂದೆ. ವಾಸ್ತವವಾಗಿ ಮೊದಲು ಬೇಕಾದುದು ನಿಮಗೇ. ನಾನೇನೂ ನಿಮ್ಮನ್ನು ಸೇವಿಸುತ್ತಿಲ್ಲ. ನಾನು ಸೇವಕನಾಗಿದ್ದರೆ ನನ್ನ ಆವಶ್ಯಕತೆಗಳನ್ನೂ ಉದ್ದೇಶವನ್ನೂ ನಾನು ಸೇವಿಸುತ್ತಿದ್ದೇನೆ. ನಾನು ನನಗೇ ಸೇವಕ; ನಾನು ಬೇರೆ ಯಾರಿಗೂ ಸೇವಕನಲ್ಲ. ಉದಾತ್ತಭಾವದಿಂದ ಸೇವಿಸುವದಾದರೆ ಒಳ್ಳೆಯದೇ."

ಯಾರೂ ಯಾರ ಸೇವಕರೂ ಅಲ್ಲ ; ಪ್ರತಿಯೊಬ್ಬನೂ ಅವನ ಆಶಾ-ಆವಶ್ಯಕತೆಗಳ ಸೇವಕ. ದೇವರನ್ನೋ ಕ್ರಿಸ್ತನನ್ನೋ ಮಹಮ್ಮದನನ್ನೋ ಬುದ್ಧನನ್ನೋ ಕೃಷ್ಣನನ್ನೋ ಈ ಪ್ರಪಂಚದ ಬೇರಾವ ಮಹರ್ಷಿಯನ್ನೋ ಅವಲಂಬಿಸಿರುವಂತೆ ಏಕೆ ಭಾವಿಸುತ್ತೀರಿ ? ಪ್ರತಿಯೊಬ್ಬರೂ ಸ್ವತಂತ್ರರು, ಮುಕ್ತರು. ಸ್ವತಂತ್ರ ಭಾವನೆಯು ನಿಮ್ಮ ಹೃದಯದಲ್ಲಿ ನಾಟಿದರೇ ಆನಂದವುಂಟಾಗುವದು.

೧೨೧. ಆತ್ಮವಿಶ್ವಾಸ—ಅತಿ ಧೈರ್ಯ

(ರಾಜನ ಆಗ್ರಹ ಮತ್ತು ಯುವಧೈರ್ಯದ ಅಪರಾಧಿ)

ದೊರೆಯ ಮುಂದೆ ಬಾಗಿ ನಮಸ್ಕರಿಸಲಿಲ್ಲವೆಂಬ ಅಪರಾಧಕ್ಕಾಗಿ ಒಬ್ಬನನ್ನು ಏಷ್ಯಾದ ರಾಜನೊಬ್ಬನ ಮುಂದೆ ಕರೆದುಕೊಂಡು ಹೋದರು. ಆ ವೃದ್ಧ ರಾಜನು ಯಾರಾದರೂ ತನಗೆ ನಮಸ್ಕಾರ ಮಾಡದಿದ್ದರೆ ತನಗೆ ಅಪಮಾನ ಮಾಡಿದರೆಂದು ಭಾವಿಸುತ್ತಿದ್ದನು. ರಾಜನು ತನ್ನ ಎದುರಿನಲ್ಲಿ ನಿಂತಿದ್ದ ಅಪರಾಧಿಗೆ ಹೇಳಿದನು, "ನಾನು ಎಂಥ ಪ್ರಬಲನೂ ಕಠೋರನೂ ಆದ ಚಕ್ರವರ್ತಿಯೆಂಬುದು ನಿನಗೆ ಗೊತ್ತಿಲ್ಲವೆ ? ನೀನು ಮಹಾ ದುರ್ವಿನೀತ, ದುರಹಂಕಾರಿ ಇದ್ದೀಯ ; ನಿನ್ನನ್ನು ಕೊಲ್ಲುತ್ತೇನೆಂಬುದು ನಿನಗೆ ಗೊತ್ತಿಲ್ಲವೆ ?" ಎಂದು ಉಗ್ರಭಾವದಿಂದ ಕೇಳಿದನು. ಆ ಮನುಷ್ಯನು ತತ್‌ಕ್ಷಣವೆ ರಾಜನ ಮುಖದ ಮೇಲೆ 'ಥೂ' ಎಂದು ಉಗಳಿದನು ; ಮತ್ತೂ ಅವನನ್ನು ಭಯಂಕರ ತೀಕ್ಷ್ಣ ದೃಷ್ಟಿಯಿಂದ ನೋಡಿದನು. ರಾಜನೂ ಕ್ಷಣಕಾಲ ತಲ್ಲಣಿಸಿ ಅಪ್ರತಿಭನಾದನು. ಆ ಮನುಷ್ಯ ಅತ್ಯಂತ ತಿರಸ್ಕಾರದಿಂದ ಹೇಳಿದ : "ಮುಟ್ಠಾಳ ! ನೀನೊಬ್ಬ ಗೊಂಬೆಯ ರಾಜ. ನನ್ನನ್ನು ಕೊಲ್ಲುವದಕ್ಕೆ ನಿನಗೆ ಶಕ್ತಿಯೂ ಇಲ್ಲ ; ಅಧಿಕಾರವೂ ಇಲ್ಲ. ನನಗೆ ನಾನೇ ಪ್ರಭು ರಾಜ. ನಿನ್ನ ಮುಖದ ಮೇಲೆ ಉಗಿಯುವದು ನನ್ನ ಅಧಿಕಾರದಲ್ಲಿದೆ ನೋಡು ; ನಿನ್ನನ್ನು ಅಪಮಾನ ಗೊಳಿಸುವದೂ ನನ್ನ ಅಧಿಕಾರದಲ್ಲಿದೆ ; ಈ ದೇಹವನ್ನು ಶಿಲುಬೆಗೇರಿಸುವದೋ ಗಲ್ಲಿಗೇರಿಸುವದೋ ನನ್ನ ಅಧಿಕಾರದಲ್ಲಿದೆ. ನನ್ನ ದೇಹಕ್ಕೆ ನಾನೇ ಪ್ರಭು. ನಿನ್ನ ಅಧಿಕಾರ ಎರಡನೇ ದರ್ಜೆಯದು ; ನನ್ನ ಅಧಿಕಾರವೇ ಮೊಟ್ಟಮೊಲನೆಯದು". ಹೀಗೆ ನಿಮಗೆ ನೀವೇ ಪ್ರಭುವೆಂಬುದನ್ನು ಯಾವಾಗಲೂ ಮನಗಾಣಿರಿ; ಭಾವಿಸಿರಿ. ನೀವು ಸ್ವತಂತ್ರರೆಂಬುದನ್ನೂ ನೆನಪಿನಲ್ಲಿಡಿ.

೧೨೨. ಗೌರವದ ತಪ್ಪು ಭಾವನೆ

(ಗುರು ಮತ್ತು ಶಿಷ್ಯ)

ಎಷ್ಟೋ ಸಂದರ್ಭಗಳಲ್ಲಿ ಎಷ್ಟು ಜನರು ಶಾಸ್ತ್ರಗಳಿಗೆ ಎಷ್ಟು ಅಪಾರ್ಥಗಳನ್ನು ಕಲ್ಪಿಸುತ್ತಾರೆ—ಎಂಬುವದನ್ನೂ ಈ ಪ್ರಶ್ನೆಯು ಸೂಚಿಸುತ್ತದೆ. ಸಮಾಜದಲ್ಲಿ ಇದೊಂದು ದೊಡ್ಡ ಪಿಡುಗು ; ಬೇನೆ.

ಮಿಲ್ಟನ್ ಕವಿಯನ್ನು ಅರ್ಥಮಾಡಿಕೊಳ್ಳಲು ಮಿಲ್ಟನ್ ಕವಿಯೇ ಬೇಕೆಂದೂ ಮಹಾಕವಿ ಕಾಳಿದಾಸನ ಕೃತಿಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಕಾಳಿದಾಸನೇ ಆಗಬೇಕೆಂದೂ ಷೇಕ್ಸ್‌ಪಿಯರನ್ನು ಓದಿ ತಿಳಿಯಲು ಷೇಕ್ಸ್‌ಪಿಯರನೇ ಬೇಕೆಂದೂ ತಿಳಿದವರು ಹೇಳುತ್ತಾರೆ. ನಾವು ಕ್ರಿಸ್ತನನ್ನು ತಿಳಿಯಬೇಕಾದರೆ ಕ್ರಿಸ್ತನೇ ಆಗಬೇಕು. ವೇದಗಳನ್ನು ಅರ್ಥಮಾಡಿಕೊಳ್ಳಲು ನಾವು ವೇದ ಋಷಿಗಳೇ ಆಗಬೇಕು. ವೇದಾಂತಿಗಳು ಕೃತಿಗಳನ್ನು ಉಪಯೋಗಿಸುತ್ತಿದ್ದೇವೇ ಹೊರತು ಅವರ ಹೆಸರನ್ನಲ್ಲ. ವೇದಗಳಲ್ಲಿ ಹೇಳಿರುವದೇನೆಂದರೆ "ಓ ಜನರೆ! ವೇದಗಳನ್ನು ಮೀರಿ ನಿಲ್ಲಿರಿ. ಅದರ ಬೋಧೆಯನ್ನು ಮಾತ್ರ ಉಪಯೋಗ ಮಾಡಿಕೊಳ್ಳಿರಿ. ದೇವರುಗಳನ್ನೂ ದೇವತೆಗಳನ್ನೂ ಮೀರಿ, ಮೇಲೇರಿರಿ. ನಿಮ್ಮ ನಿಜರೂಪವೇನು ? ತಿಳಿಯಿರಿ. ಸಕಲವೂ ನೀವೇ ಆಗಿದ್ದೀರಿ." ಯೇಸುಕ್ರಿಸ್ತನೂ ಹೀಗೆ ಹೇಳಿದ್ದಾನೆ, "ಸ್ವರ್ಗ ಸಾಮ್ರಾಜ್ಯವು ನಿಮ್ಮೊಳಗೇ ಇದೆ." ಆದರೂ ಜನರು ಇಂಥಾ ವಾಕ್ಯಗಳ ಅಪಾರ್ಥವನ್ನೂ ದುರುಪಯೋಗವನ್ನೂ ಮಾಡುತ್ತಾರೆ. ರಾಮುನಿಗೆ, ಈ ಸಂದರ್ಭಕ್ಕೆ ಸಂಬಂಧಪಟ್ಟ ಒಂದು ಕಥೆಯು ನೆನಪಾಗುತ್ತದೆ.

ಒಮ್ಮೆ ಒಬ್ಬ ಗುರುಗಳು ಬಹಳ ಬಳಲಿದ್ದವರಾದ್ದರಿಂದ ಸುಪ್ಪತ್ತಿಗೆಯ ಮೇಲೆ ನೀಳವಾಗಿ ಮಲಗಿ ವಿಶ್ರಾಂತಿ ಪಡೆಯುತ್ತಿದ್ದರು. ಅವರಿಗೆ ಮೈಕೈಗಳು ನೋಯುತ್ತಿದ್ದುದರಿಂದ ಶಿಷ್ಯನನ್ನು ಕರೆದು, ತಮ್ಮ ಕಾಲುಗಳ ಮೇಲೆ ಅವನು ಚೆನ್ನಾಗಿ ತುಳಿದು ತುಳಿದು ನಡೆಯುತ್ತಾ ಅವನ ಕಾಲುಗಳಿಂದ ತಮ್ಮ ಕಾಲುಗಳನ್ನು ಹಿಸುಕಿ ಹಿಸುಕಿ ಹಿತವಾಗುವಂತೆ, ನೋವನ್ನು ಕಳೆಯಲು ಹೇಳಿದರು. ಇಂಡಿಯಾ ದೇಶದಲ್ಲಿ ಹೀಗೆ ಮಾಡುವ ರೂಢಿ ಇದೆ. ಆದರೆ ಆ ಶಿಷ್ಯನು ಹೇಳಿದ "ಛೇ! ಛೇ! ಎಲ್ಲಿಯಾದರೂ ಉಂಟೆ ? ನಿಮ್ಮ ದೇಹವೂ ನಿಮ್ಮ ವ್ಯಕ್ತಿಯೂ ಅತ್ಯಂತ ಪವಿತ್ರವೂ ಪೂಜ್ಯವೂ ಇರುವುದರಿಂದ ನನ್ನ ಕಾಲನ್ನು ತಮಗೆ ಮರೆತು ಕೂಡ ಸೋಕಿಸುವದೂ ಇಲ್ಲ. ಒಂದು ವೇಳೆ ಹಾಗೆ ಮಾಡಿದರೆ ದೈವದ್ರೋಹವೂ ಮಹಾ ಪಾಪವೂ ಆದೀತು! ಅವಶ್ಯವಾದರೆ ತಮಗಾಗಿ ಪ್ರಾಣವನ್ನಾದರೂ ಕೊಟ್ಟೇನೇ ಹೊರತು ಎಂದೆಂದಿಗೂ ತಮ್ಮನ್ನು ತುಳಿಯಲಾರೆ." ಅದಕ್ಕೆ ಆ ಗುರುಗಳು ಹೇಳಿದರು, "ಬಾರಪ್ಪಾ ಮಗು! ನೀನು ನನಗೆ ಹಿತವಾಗುವಂತೆ ನನ್ನ ಇಷ್ಟ ಪ್ರಕಾರವೇ ನನ್ನನ್ನು ತುಳಿದರೆ ಪರವಾ ಇಲ್ಲ; ಬಾ, ಬಾ" ಎಂದರು. ಆ ಶಿಷ್ಯನು ಅಳುವದಕ್ಕೆ ತೊಡಗಿದನೇ ಹೊರತು, ಗುರುಗಳು ಎಷ್ಟು ಪ್ರೋತ್ಸಾಹಿಸಿದರೂ ಅವನು ಒಪ್ಪಲಿಲ್ಲ. ಆಗ ಗುರುಗಳು "ಮೂರ್ಖ! ನನ್ನ ದೇಹದ ಕೆಳಭಾಗವನ್ನು ನೀನು ತುಳಿಯಲಾರೆ; ಆದರೆ ಹೆಚ್ಚು ಪವಿತ್ರವಾದ ನನ್ನ ತುಟಿಗಳ ಮೇಲೂ ಮುಖದ ಮೇಲೂ ಸಂತೋಷದಿಂದ ತುಳಿದಾಡುತ್ತೀಯೆ. ಗುರುಗಳ ಇಚ್ಛೆಯಂತೆ, ಅವರಿಗೆ ಹಿತವಾಗುವಂತೆ ನೀವುವದಕ್ಕಾಗಿ ಅವರನ್ನು ತುಳಿಯುವದು ಪಾಪಕರವೋ ? ಅವರ ಇಚ್ಛೆಗೆ ವಿರುದ್ಧವಾಗಿ

ಅವರ ಅತ್ಯಂತ ಪವಿತ್ರವಾದ ವಾಕ್ಯಗಳನ್ನೇ ತುಳಿದಾಡುವದು ಹೆಚ್ಚು ಪಾಪಕರವೊ ?" ಎಂದು ಕೇಳಿದರು.

ಯೇಸುಕ್ರಿಸ್ತನ ಅಥವಾ ಮಹಮ್ಮದನ ಅಥವಾ ವೇದ ಪುರುಷನ ವಾಣಿಯನ್ನೂ ಬೋಧೆಯನ್ನೂ ಜನರು ನಿಶ್ಶಂಕೆಯಿಂದ ದಯಾದಾಕ್ಷಿಣ್ಯಗಳಿಲ್ಲದೆ ತುಳಿತುಳಿದು ಕಸದಂತೆ ಹೊಸಕಿ ಹಾಕುತ್ತಾರೆ ; ಆದರೆ ಅವರೇ ಯೇಸುವಿನ ಅಥವಾ ಮಹಮ್ಮದನ ಅಥವಾ ವೇದ ಋಷಿಗಳ ಮಾಂಸರಕ್ತಗಳ ದೇಹವನ್ನು ಅಥವಾ ರೂಪವನ್ನು ಗೌರವದಿಂದ ಪೂಜಿಸುತ್ತಿರಬಹುದು. ಅವರು ತಮ್ಮ ದೇಹವನ್ನು, ದೇಹಾಭಿಮಾನವನ್ನು ತುಳಿದು ಮೇಲೇರಿ ತಮ್ಮ ಬೋಧೆಯನ್ನು ಆದರಿಸಿ ಅರ್ಥ ಮಾಡಿಕೊಂಡು ಆನಂದ ಪಡಬೇಕೆಂದು ಜನರಿಗೆ ಹೇಳುತ್ತಾರೆ. ಆದರೆ ನೀವು ಅವರ ಪವಿತ್ರವಾದ ವಾಣಿಯನ್ನು, ಉಪದೇಶವನ್ನು ತುಳಿದಾಡಿದರೂ ಅವರಿಗೆ ಸಂತೋಷವಾಗುವಂತೆ ಅವರ ಮೈ ತುಳಿದು ಹಿಸುಕುವದಿಲ್ಲ.

ವ್ಯಕ್ತಿಭಾವನೆಯನ್ನು ಮೀರಿ ಒಳಗಿರುವ ದೇವರನ್ನು ಹುಡುಕಿ. ಕ್ರಿಸ್ತನು ಎಂದಾದರೂ ಪ್ರಪಂಚದಲ್ಲಿದ್ದುದು ನಿಜವಾದರೆ ಅವನು ಯಾವಾಗಲೂ ನಿಮ್ಮ ದೇಹಗಳಲ್ಲಿಯೇ ಇರುತ್ತಾನೆ. ಕ್ರಿಸ್ತನಾಗಲೀ ಯಾವ ಗುರುವಾಗಲೀ ನಿಮ್ಮ ಅಭ್ಯುದಯ-ನಿಶ್ಶ್ರೇಯಸ್ಸುಗಳ ಪ್ರಾರಂಭ ಬಿಂದುವಾಗಬೇಕೇ ಹೊರತು ಪರಿಧಿ, ಗಡಿ, ಮೇರೆ ಆಗಬಾರದು ; ಗುರುವು ನಿಮ್ಮ ಸುತ್ತಲಿನ ಮುಳ್ಳುಬೇಲಿ ಆಗಬಾರದು. ನೀವೇ ಕ್ರಿಸ್ತರಾಗಿ ಕ್ರಿಸ್ತನ ಅರ್ಥವನ್ನು ತಿಳಿಯಿರಿ. ದೇವರ ಭೂಮಿಕೆಗೆ ನೀವು ಏರಬೇಕೇ ಹೊರತು ದೇವರನ್ನು ನಿಮ್ಮ ಮಟ್ಟಕ್ಕೆ ಇಳಿಸಬಾರದು.

೧೨೩. ಗೌರವದ ವಿಹಿತ ಭಾವನೆ

(ರಾಜಕುಮಾರನ ಕಣ್ಣಾಮುಚ್ಚಾಲೆ ಮತ್ತು ಇಮಾಂ ಘಿಜಲಿ-ಖ್ವಾಜಾಬಿಜಾರ್)

ಪ್ರಶ್ನೆ: ಸ್ವಾಮೀಜೀ ! ನಮ್ಮ ಆತ್ಮನೇ ಸಂಪೂರ್ಣ ಜ್ಞಾನ ಸ್ವರೂಪವೆಂದು ಹೇಳುತ್ತೀರಿ. ಆದ್ದರಿಂದ ಪುಸ್ತಕಗಳನ್ನು ಓದದೆ, ಈಗ ಬರಲಿರುವ ನನ್ನ ನ್ಯಾಯಶಾಸ್ತ್ರದ ಪರೀಕ್ಷೆಯಲ್ಲಿ ಅತ್ಯಂತ ಶ್ರೇಷ್ಠ ಬಹುಮಾನವನ್ನು ಪಡೆಯುವದಕ್ಕೆ ಯಾವದಾದರೂ ವೇದಾಂತ ಸಾಧನೆಯು ದಿವ್ಯದೃಷ್ಟಿಯಿದ್ದರೆ ದಯವಿಟ್ಟು ನನಗೆ ಹೇಳಿ.

ಉತ್ತರ: ಒಬ್ಬ ರಾಜಕುಮಾರನು ಬಾಲ್ಯದಲ್ಲಿ ಶ್ರೀಮಂತರ ಬಾಲಕರೊಡನೆ ಕಣ್ಣಾಮುಚ್ಚಾಲೆ ಆಟವಾಡುತ್ತಿದ್ದನು. ಹುಡುಗರನ್ನು ಹುಡುಕಲು ಅವನು ಬಹಳ ಕಷ್ಟಪಡಬೇಕಾಗುತ್ತಿತ್ತು. ಅದನ್ನು ನೋಡುತ್ತಿದ್ದ ಸಮೀಪಸ್ಥನೊಬ್ಬ "ರಾಜಪುತ್ರ! ಈ ಬಾಲಕರನ್ನು ಕಂಡುಹಿಡಿಯಲು ಇಷ್ಟೊಂದು ಗೊಂದಲವೇಕೆ ಮಾಡುತ್ತಿ? ನೀನು ಯಾರೆಂಬದನ್ನು ಮರೆತೆಯಾ? ನಿನ್ನ ರಾಜತ್ವದ ಅಧಿಕಾರವನ್ನು ಚಲಾಯಿಸಿ ಆಜ್ಞೆ ಮಾಡಿದರೆ, ಈ ಕ್ಷಣವೇ ಎಲ್ಲರೂ ಓಡಿ ಬಂದು ನಿನಗೆ ನೆಲಮುಟ್ಟಿ ನಮಸ್ಕರಿಸುತ್ತಾರೆ"

ಎಂದನು. ಆಗ ರಾಜಕುಮಾರನು "ಪೆದ್ದಪ್ಪ! ಹಾಗಾದರೆ ಆಟದ ರುಚಿಯೇ ಹೋಗಿ ಬಿಡುತ್ತದೆ. ಈ ಕ್ರೀಡೆಯಲ್ಲಿ ಸ್ವಾರಸ್ಯವೇ ಉಳಿಯುವದಿಲ್ಲ." ಎಂದು ಹೇಳಿದನು. ಓಗೆಯೋ ನೀವು ನಿಜವಾಗಿಯೂ ಸರ್ವಜ್ಞ—ಸರ್ವಶಕ್ತನಾದ ಸಮಸ್ತವನ್ನೂ ಆಳುವ ಪರಮೇಶ್ವರನೇ. ಆದರೂ ನಿಮ್ಮ ವಿದ್ಯಾ ವಿಷಯಗಳ ಶೋಧವನ್ನು ನೀವೇ ವಿನೋದವಾಗಿ ಪ್ರಾರಂಭಿಸಿರುವದರಿಂದ [ಜಗತ್ತಿನ ಎಲ್ಲಾ ಬಗೆಯ ಅಧ್ಯಯನ ಮತ್ತು ಸಾಧನಗಳ ಕಣ್ಣಾ ಮುಚ್ಚಾಲೆಯ ಚಕ್ರಭ್ರಮಣ ಕೋಟೆಯಲ್ಲಿ] ಇದೇ ಆಟವನ್ನೇ ಪೂರಾ ಸೋಲಿಸುವ ಅಧಿಕಾರವನ್ನು ಪ್ರಯೋಗಿಸುವದು ನ್ಯಾಯವಲ್ಲ. ಯಾವ ಭೂಮಿಕೆಯಲ್ಲಿ ಭೂತ—ಭವಿಷ್ಯತ್—ವರ್ತಮಾನಗಳು ಮತ್ತು ಸಹಸ್ರಾರು ಸೂರ್ಯ ಚಂದ್ರ ನಕ್ಷತ್ರಗಳೂ ನಿಮ್ಮ ಆತ್ಮನೇ ಆಗಿವೆಯೋ, ಅಲ್ಲ, ನಿಮ್ಮ ಅಪಾರವಾದ ಜ್ಞಾನ ಸಾಗರದಲ್ಲಿ ಎಲ್ಲಾ ವಸ್ತುಗಳೂ ಕೇವಲ ಅಲೆಗಳೂ ಸುಳಿಗಳೂ ಆಗಿವೆಯೋ ಅಲ್ಲಿ ನಿಮ್ಮ ನ್ಯಾಯಶಾಸ್ತ್ರದ ಪರೀಕ್ಷೆಗಳೂ ಪ್ರಾಪಂಚಿಕ ಯಶಸ್ಸೂ ಯಾವ ಮಹತ್ತ್ವದವು? ನಿಮಗೆ ದಿವ್ಯದೃಷ್ಟಿಯೂ, ಅತೀಂದ್ರಿಯ ದೃಷ್ಟಿಯ ಶಕ್ತಿಯೂ ಬೇಕಾದರೆ, ಯಾವದರಿಂದ ಯಾವದಕ್ಕಾಗಿ ಅದನ್ನು ಅಪೇಕ್ಷಿಸುತ್ತೀರೋ ಆ ಇಂದ್ರಿಯ ಭೂಮಿಕೆಯನ್ನೇ ಬಿಡಬೇಕು ಅಥವಾ ಜಟ್ಟು ಮೇಲೇರಬೇಕು.

ಮೀನನ್ನು ಹಿಡಿಯುವದಕ್ಕೆ ದೊಡ್ಡ ಬಲೆಯನ್ನು ಬೀಸಿತ್ತು. ಮೀನುಗಳು ಬಲೆಯಲ್ಲಿ ಬಿದ್ದ ಮೇಲೆ ಅವುಗಳ ಅದ್ಭುತ ಶಕ್ತಿಯಿಂದ ಆ ಬಲೆಯನ್ನೇ ಎಳೆದುಕೊಂಡು ಒಯ್ದುಬಿಟ್ಟವು. ವೇದಾಂತದ ಆ ನೂತನ ದಿವ್ಯದೃಷ್ಟಿಯು ಆಶಾಜಾಲವನ್ನೇ ಪೂರಾ ಹೊತ್ತುಕೊಂಡು ಒಯ್ಯುವ ಆ ವಿಲಕ್ಷಣ ಮೀನು. ಯಾವದಾದರೂ ಗ್ರಂಥವನ್ನು ಓದುವಾಗ ಅಥವಾ ಜ್ಞಾನವನ್ನು ಅಭ್ಯಾಸಮಾಡುವಾಗ ಅಹಂಕಾರದಿಂದಲೂ ದ್ವೈತ ಭಾವದಿಂದಲೂ ಅರಿವಿಲ್ಲದೆ ತಪ್ಪಿಸಿಕೊಳ್ಳುವದರಿಂದ, ಜ್ಞಾನಾರ್ಜನೆಯ ಸಾಮಾನ್ಯ ಪದ್ಧತಿಯು ಅತೀಂದ್ರಿಯ ದೃಷ್ಟಿಯ ವೇದಾಂತ ಸಾಧನೆಯೇ, ಆಗಿದೆ,

ಮಹಮ್ಮದೀಯ ಸಾಧುವಾದ ಇಮಾಂ ಘಜಲಿಯು, ವಿದ್ಯಾರ್ಥಿ ಜೀವನದಲ್ಲಿ, ಅವನ ನಿತ್ಯದ ಶ್ರಮಪೂರಿತವಾದ ಅಭ್ಯಾಸದನಂತರ ಒಂದು ರಾತ್ರಿ ಓದುತ್ತಿರುವಾಗ ನಿದ್ರೆಮಾಡಿದನು. ಆಗ ಅವನಿಗೆ ವಿದ್ಯಾಧಿದೇವತೆಯಾದ ಖ್ವಾಜಾ ಖಿಜಾರನು ದರ್ಶನ ಕೊಟ್ಟು ಅವನ ಕಿವಿಗಳಲ್ಲಿಯೂ ಬಾಯಿಯಲ್ಲಿಯೂ ಸುಮ್ಮನೆ ಊದುವದರಿಂದ ಪ್ರಪಂಚದ ಸಮಸ್ತ ಜ್ಞಾನವನ್ನೂ ಅವನಿಗೆ ಅನುಗ್ರಹಿಸುವದಾಗಿ ಹೇಳಿದನು. ಆದರೆ ಇಮಾಂ ಘಜಲಿಯ ಸ್ವಾಭಿಮಾನವು ಅದನ್ನು ನಿರಾಕರಿಸಿತು. ಆದರೆ ಅದಕ್ಕೆ ಬದಲಾಗಿ ಅವನು ಮಧ್ಯ ರಾತ್ರಿಯ ವರೆಗೂ ಓದುತ್ತಿರುವದಕ್ಕೆ ಬೇಕಾದ ದೀಪದ ಎಣ್ಣೆಯನ್ನು ಒದಗಿಸುವ ವರವನ್ನು ಬೇಡಿದನು. ಸ್ವರ್ಗದ ಹಿಂಬಾಗಿಲಿನಿಂದ ಕದ್ದು ಒಳಗೆ ಪ್ರವೇಶಿಸುವದಕ್ಕೆ ಮನಸ್ಸೊಪ್ಪದೆ, ಸಮೀಪದ ಕಳ್ಳುದಾರಿಗಿಂತಲೂ ದೂರದಾರಿಯನ್ನೇ ಅವನು ಉತ್ತಮವೆಂದು ಆರಿಸಿಕೊಂಡನು.

ದೇವರು ಹೇಗೆ ನಡೆದುಕೊಳ್ಳಬೇಕೆಂದು ಅವನಿಗೆ ಬುದ್ಧಿಯನ್ನು ಹೇಳಬೇಡಿ. ನಿಮ್ಮ ಇಚ್ಛೆಯನ್ನು ಅವನಿಗೆ ಆದೇಶವನ್ನಾಗಿ ನೀಡಬೇಡಿ. ನಿಮ್ಮನ್ನು ನೀವು ಸಮರ್ಪಣ ಮಾಡಿಕೊಳ್ಳಿ. ನಾನು ಎನ್ನುವ ಚಿಕ್ಕ ಆತ್ಮವನ್ನು—ಅಹಂಕಾರವನ್ನು—ಬಿಟ್ಟು ಬಿಡಿ; ಸುಳ್ಳು ಬಯಕೆಗಳನ್ನು ತ್ಯಜಿಸಿ, ಹೀಗೆ ಮಾಡಿದರೆ ನಿಮ್ಮ ತನುಮನಗಳಲ್ಲಿ ಬೆಳಕೇ ತುಂಬಿಕೊಳ್ಳುತ್ತದೆ. ಹೆಸರಿಗೆ ಯೋಗ್ಯವಾದ ಎಲ್ಲಾ ನಿಜವಾದ ಜ್ಞಾನವೂ ವಿದ್ಯೆಯೂ ಒಳಗಿನಿಂದಲೇ ಬರುತ್ತವೆ; ಪುಸ್ತಕಗಳಿಂದಾಗಲೀ ಹೊರಗಿನ ಮನಸ್ಸುಗಳಿಂದಾಗಲೀ ಬರುವದಿಲ್ಲ. ಅಸಾಧಾರಣ ಪ್ರತಿಭಾಶಾಲಿಗಳೂ ಸಂಶೋಧನಾ ಕ್ಷೇತ್ರಗಳಲ್ಲಿ ಮೂಲಭೂತವಾದ ಕಾರ್ಯ ನಡೆಸಿದವರೂ ಎಲ್ಲಾ ಹಂಬಲಗಳಿಂದಲೂ ಆತುರ ಕಾತರಗಳಿಂದಲೂ ಬಹಳ ದೂರ ದೂರವಾಗಿ, ತಮ್ಮ ಮನಸ್ಸನ್ನೂ ವ್ಯಕ್ತಿತ್ವವನ್ನೂ ಸ್ವಾರ್ಥಪರವಾದ ಒಲವುಗಳಿಂದ ಬಿಡುಗಡೆ ಮಾಡಿ, ಕೇವಲ ಭಾವದಲ್ಲಿ ಮುಳುಗಿರುವಾಗಲೇ ತಮ್ಮ ಪರೀಕ್ಷೆಗಳನ್ನೂ ಶೋಧಗಳನ್ನೂ ನಡೆಸಿದ್ದಾರೆ. ಅವರು ತಮ್ಮನ್ನು ತಾವು ಪಾರದರ್ಶಕವಾಗಿ ಮಾಡಿಕೊಂಡಿದ್ದರಿಂದ ಜ್ಞಾನಪ್ರಕಾಶವು ಆದರ ಮೂಲಕ ಬೆಳಗಿದೆ; ಅವರು ಪುಸ್ತಕಗಳ ಮೇಲೆ ಬೆಳಕನ್ನು ಚೆಲ್ಲಿದರು; ಪುಸ್ತಕ ಭಂಡಾರಗಳನ್ನೆಲ್ಲ ಪ್ರಕಾಶಪಡಿಸಿದರು. ಕಾರ್ಯವೆಂದರೆ ಇದು. ರಾಮನು ಕೆಲಸವೆಂದರೆ ಕತ್ತೆ ಚಾಕರಿ. ಗುಲಾಮ ಚಾಕರಿ ಎಂದು ಎಂದೂ ಅರ್ಥಮಾಡುವದಿಲ್ಲ. ಕರ್ಮವೆಂದರೆ ವೇದಾಂತದಲ್ಲಿ ನಿಜಾತ್ಮನೊಡನೆ ಅವಿರೋಧವಾದ ಏಕತಾಲ—ಮಧುರಸ್ವರ ಸ್ಪಂದನಗಳು; ಮತ್ತು ವಿಶ್ವದೊಡನೆ ಸುಸ್ವರ—ಸ್ನೇಹ ಸಂಬಂಧ. ಒಂದೇ ಆದ ನಿಜತತ್ತ್ವದಲ್ಲಿ ನಿಸ್ವಾರ್ಥವಾದ ಸಂಗಮ—ಇದೇ ನಿಜವಾದ ಕರ್ಮ; ಆದರೆ ಇದು, ಅನೇಕ ವೇಳೆ ಕರ್ಮವಲ್ಲವೆಂದೂ ಸೋಮಾರಿತನವೆಂದೂ ಇದಕ್ಕೆ ಹಣೆಯಬರಹದ ತಲೆಚೀಟಿಯನ್ನು ಹಚ್ಚಿ ನಿಂದನೆಯ ಸುಡು ಮುದ್ರೆಯನ್ನು ಒತ್ತುತ್ತಾರೆ. ವೇದಾಂತದ ಮನೋಭಾವದಲ್ಲಿ ಕೈಗೊಂಡ ಅತ್ಯಂತ ಪ್ರಯಾಸಕರವಾದ ಕಾರ್ಯವೂ ಕೂಡ ಸಂಪೂರ್ಣ ಸಂತೋಷವಾಗಿಯೂ ಆಟವಾಗಿಯೂ ಕಾಣುವದೇ ಹೊರತು, ಶ್ರಮಪೂರಿತ ಕರ್ಮವಾಗಿಯೂ ಹೊರೆಯಾಗಿಯೂ ತೋರುವದಿಲ್ಲ,

''Having nothing to do, be always doing'' sums up Vedantic teaching.

"ಮಾಡುವದಕ್ಕೆ ಯಾವ ಕಾರ್ಯವೂ ಇಲ್ಲದೆ, ಯಾವಾಗಲೂ ಮಾಡುತ್ತಿರು." ಎಂಬೀ ವಾಕ್ಯದಲ್ಲಿ ವೇದಾಂತದ ಬೋಧೆಯ ಸಾರವೆಲ್ಲಾ ಸಂಗ್ರಹವಾಗಿದೆ. ಓ ಸಂತೋಷಿಯಾದ ಕೆಲಸಗಾರನೆ, ನೀನು ಯಶಸ್ಸನ್ನು ಬೆನ್ನುಹತ್ತಿ ಬಯಸುವದನ್ನು ಬಿಟ್ಟರೆ, ಯಶಸ್ಸು ನಿನ್ನನ್ನು ಹುಡುಕಿಕೊಂಡು ಬೆನ್ನುಹತ್ತಿ ಬರುತ್ತದೆ.

೧೨೪. ದುರಾಶೆಯ ದುಷ್ಫಲ

(ಯಜಮಾನ ಮತ್ತು ಸೇವಕ-ಇವರ ಕನಸುಗಳು)

ನೀವು ಸತ್ತ ಮೇಲೆ ಸೇರಬೇಕಾದ ಸ್ಥಾನಗಳೆಂದು ನಿಮ್ಮ ಶಾಸ್ತ್ರಗಳು ಹೇಳುತ್ತಿರುವ

ಲೋಕಾಂತರಗಳ ವಿಚಾರವನ್ನು ತಿಳಿಯುವದಕ್ಕೆ ನೀವು ಬಹಳ ಕುತೂಹಲಿಗಳಾಗಿದ್ದೀರಿ, ಮೊದಲು ಆ ವಿಷಯಕ್ಕೆ ಒಂದು ಕಥೆಯನ್ನು ಹೇಳುತ್ತೇನೆ. ಕೃಪಣನೂ ಕ್ರೂರಿಯೂ ಆಗಿದ್ದ ಒಬ್ಬ ಸಾಹುಕಾರನಿದ್ದ. ಅವನ ಮನೆಯಲ್ಲಿ ಒಬ್ಬ ಅಡಿಗೆಯವನೂ ಇದ್ದ. ಸಾಹುಕಾರನು ಒಂದು ರಾತ್ರಿ ತನಗೆ ಬೇಕಾದ ರುಚಿ ರುಚಿಯಾದ ಭಕ್ಷ್ಯಗಳನ್ನು ಅಡಿಗೆಯವನಿಂದ ಮಾಡಿಸಿದನು. ಅದರಲ್ಲಿ ಅಡಿಗೆಯವನಿಗೆ ಒಂದು ಭಾಗವನ್ನು ಕೊಡುವದಕ್ಕೆ ಅವನಿಗೆ ಇಷ್ಟವಿರಲಿಲ್ಲ. ಅದನ್ನು ಪೂರಾ ತಾನೇ ತಿನ್ನಬೇಕೆಂದು ಒಂದು ಉಪಾಯ ಮಾಡಿದನು. ಆಗ ತನಗೆ ಹಸಿವಿಲ್ಲವೆಂದೂ ಎಲ್ಲಾ ಭಕ್ಷ್ಯವನ್ನೂ ಹಾಗೇ ಇಡಬೇಕೆಂದೂ ಆದರೆ ರಾತ್ರಿ ಯಾರು ಅತ್ಯುತ್ತಮವೂ ಅತ್ಯಂತ ಮಧುರವೂ ಆದ ಕನಸನ್ನು ಕಾಣುತ್ತಾರೋ ಅವರೊಬ್ಬರೇ ಅದನ್ನು ಬೆಳಿಗ್ಗೆ ತಿನ್ನಬೇಕೆಂದೂ ಅಂಥಾ ಕನಸನ್ನು ಅಡಿಗೆಯವನೇ ಕಂಡರೆ ಅವನೇ ಎಲ್ಲವನ್ನೂ ತಿನ್ನಬಹುದೆಂದೂ ಹೇಳಿ ಆಗ ಮಲಗಬೇಕೆಂದು ಅಡಿಗೆಯವನನ್ನು ಕಳಿಸಿದನು. ಬೆಳಗಾಯಿತು. ಇಬ್ಬರೂ ಬಂದು ಒಬ್ಬರ ಮುಂದೆ ಒಬ್ಬರು ಕುಳಿತರು. ಸೇವಕನೇ ಮೊದಲು ಕನಸನ್ನು ಹೇಳಬೇಕೆಂದು ಯಜಮಾನನು ಸೂಚಿಸಿದನು. ಯಜಮಾನನು ಶ್ರೇಷ್ಠನಾದುದರಿಂದ ಮೊದಲು ಹೇಳುವ ಗೌರವವು ಅವನಿಗೇ ಇರಬೇಕೆಂದೂ ಅನಂತರ ತಾನು ಹೇಳುವದಾಗಿಯೂ ಅಡಿಗೆಯವನು ಬೇಡಿದನು. ಅದರಂತೆ ಯಜಮಾನನು ತನ್ನ ಕನಸನ್ನು ಹೇಳಿದನು: "ನನ್ನ ಕನಸಿನಲ್ಲಿ ನಾನು ಇಂಡಿಯಾ ದೇಶದ ಚಕ್ರವರ್ತಿಯಾಗಿದ್ದೆ. ಯೂರೋಪ್–ಅಮೇರಿಕಾ ದೇಶಗಳೆಲ್ಲಾ ಇಂಡಿಯಾ ಚಕ್ರವರ್ತಿಯ ಅಧೀನಕ್ಕೆ ತರಲ್ಪಟ್ಟಿದ್ದವು. ಹೀಗೆ ಇಂಡಿಯಾದ ಚಕ್ರವರ್ತಿಯಾದ ನಾನು ಇಡೀ ಜಗತ್ತಿಗೇ ಸಾರ್ವಭೌಮನಾಗಿ ಆಳುತ್ತಿದ್ದೆ. ಪ್ರಪಂಚದ ಎಲ್ಲಾ ದೇಶಗಳ ರಾಜರೂ ಅಲ್ಲದೆ ದೇವತೆಗಳೂ ಸಹ ನನ್ನ ಎರಡು ಪಾರ್ಶ್ವಗಳಲ್ಲಿಯೂ ಬಂದು ಓಲೈಸುತ್ತಾ ಇದ್ದರು." ಅವಿದ್ಯಾವಂತನೂ ಪೆದ್ದನೂ ಆದ ಅಡಿಗೆಯವನು ಇಂಥಾ ಚಮತ್ಕಾರದ ಕನಸನ್ನು ಸೃಷ್ಟಿಸಲಾರನೆಂಬ ಧೈರ್ಯೋತ್ಸಾಹಗಳಿಂದ ಸಾಹುಕಾರನು ಈಗ ಅವನ ಕನಸನ್ನು ಹೇಳಬಹುದೆಂದು ಅಡಿಗೆಯವನನ್ನು ಕೇಳಿದನು. ಪಾಪ! ಅಡಿಗೆಯವನು ನಡುಗುತ್ತಾ ಅಂಥಾ ಅದ್ಭುತ ಕನಸನ್ನೇನೂ ತಾನು ಕಾಣಲಿಲ್ಲವೆಂದು ಹೇಳಿದನು. ಇನ್ನು ಎಲ್ಲಾ ಭಕ್ಷ್ಯವನ್ನು ತಾನೇ ತಿನ್ನಬಹುದೆಂದು ಯಜಮಾನನಿಗೆ ಸಂತೋಷವಾಯಿತು. "ಆದರೆ", ಎಂದು ಅಡಿಗೆಯವನು ಶುರುಮಾಡಿದನು. "ಸ್ವಾಮಿ, ನನ್ನ ಕನಸಿನಲ್ಲಿ ಅತ್ಯಂತ ಕುರೂಪಿಯಾದ ಭಯಂಕರ ಭೂತ ಒಂದು ಕೈಯಲ್ಲಿ ಕತ್ತಿಯನ್ನು ಝಳಿಪಿಸುತ್ತಾ ನನ್ನ ಬೆನ್ನಟ್ಟಿ ಬಂದಿತು" ಎಂದನು. ಸಾಹುಕಾರನು, "ಹಾ! ಹಾ! ಮುಂದೆ ಮುಂದೆ" ಎಂದನು. "ಸ್ವಾಮಿ! ಆ ಪ್ರಚಂಡ ಪಿಶಾಚಿಯು ನನ್ನನ್ನು ಓಡಿಸಿಕೊಂಡು ಬಂದು ಕತ್ತಿಯನ್ನು ಬೀಸಿ ನನ್ನನ್ನು ಕೊಲ್ಲುತ್ತಿತ್ತು" ಯಜಮಾನನಿಗೆ

ಸಂತೋಷವಾಯಿತು; "ನೀನೇನು ಮಾಡಿದೆ?" ಎಂದನು. "ಸ್ವಾಮಿ! ಆ ದೈತ್ಯ ಕಣ್ಣುಗಳನ್ನು ಕೆಂಪಗೆ ಮಾಡಿ ಹಲ್ಲುಗಳನ್ನು ಕಡಿಯುತ್ತಾ 'ಆ ಭಕ್ಷ್ಯವನ್ನು ತಿನ್ನುತ್ತೀಯೋ ನಿನ್ನನ್ನೇ ತಿಂದು ಬಿಡಲೋ?' ಎಂದು ಭಯಂಕರವಾಗಿ ಕಿರಿಚಿ ಅಡಿಗೆಯ ಮನೆಯೊಳಕ್ಕೆ ನನ್ನನ್ನು ರಭಸದಿಂದ ನೂಕಿಬಿಟ್ಟಿತು." ಯಜಮಾನನು ಬಹಳ ಗಾಬರಿಯಾಗಿ ನಿರಾಶೆಯಿಂದ ಕೇಳಿದನು "ಹಾ! ಹಾ! ನೀನೇನು ಮಾಡಿಬಿಟ್ಟೆ? ಅಯ್ಯೋ!" ಎಂದನು. ಸೇವಕ ಹೇಳಿದ "ಅಯ್ಯೋ! ಇನ್ನೇನು ಮಾಡಲಿ? ಪಿಶಾಚಿಯ ಕೈಯಲ್ಲಿ ಸಾಯಲಾರದೆ ಎಲ್ಲವನ್ನೂ ತಿಂದುಬಿಟ್ಟೆ!" ಯಜಮಾನ ಕ್ರೋಧ-ವಿಷಾದಗಳಿಂದ ಕೇಳಿದ "ನೀನೊಬ್ಬನೇ ಎಲ್ಲವನ್ನೂ ತಿಂದು ಬಿಟ್ಟೆಯ? ಮಂಟಪ್ಪಾಳ ನನ್ನನ್ನೇಕೆ ಎಬ್ಬಿಸಲಿಲ್ಲ?" ಸೇವಕ ಹೇಳಿದ "ಮಹಾ ಪ್ರಭೋ! ತಾವು ಇಡೀ ವಿಶ್ವದ ಸಾರ್ವಭೌಮರಾಗಿದ್ದಿರಿ. ತಾವು ಓಡ್ಡೋಲಗದಲ್ಲಿ ಸಿಂಹಾಸನದ ಮೇಲೆ ಕುಳಿತಿದ್ದಿರಿ, ತಮ್ಮ ದರ್ಬಾರಿನಲ್ಲಿ ರಾಜಾಧಿರಾಜರೆಲ್ಲಾ ಕೈಕಟ್ಟಿ ನಿಂತಿದ್ದರು ಬಿಚ್ಚುಕತ್ತಿಗಳನ್ನು ಹಿಡಿದಿದ್ದ ಪಹರೆಯವರು ನನ್ನನ್ನು ಒಳಗೆ ಬಿಡಲಿಲ್ಲ. ಆದರೂ ನಾನು ಕೂಗಿದೆ 'ಸ್ವಾಮಿ! ತಮಗೆ ಕೇಳಿತೋ ಇಲ್ಲವೋ!' ಆದರೆ ಪಿಶಾಚಿಯು ನನ್ನನ್ನು ಬಿಡದೆ ದಬ್ಬಿಕೊಂಡು ಹೋಯಿತು, ತಿಂದುಬಿಟ್ಟೆ ಬಹಳ ರುಚಿಯಾಗಿತ್ತು ಮಹಾ ಸ್ವಾಮಿ" ಎಂದನು.

ಹೀಗೆ ನೀವು ನಿಮ್ಮ ಶಾಸ್ತ್ರಗಳು ಭರವಸೆಯಿತ್ತಿರುವ ಸ್ವರ್ಗದ ಕನಸನ್ನೂ ಲೋಕಾಂತರಗಳ ಕನಸನ್ನೂ ಕಾಣುತ್ತಿದ್ದೀರಿ. ಈ ಮಧುರವಾದ ಸ್ವಪ್ನಗಳಲ್ಲಿ ನೀವು ಮಹಡಿಗಳ ಮೇಲೆ ಮಹಡಿಗಳನ್ನು ಕಟ್ಟಿ ಅಂತರಿಕ್ಷದಲ್ಲಿ ಏರಿಸುತ್ತಿರುವುದು ಬರೀ ಮರಳ ಮೇಲೆ ಇರಬಹುದು. ಅದಕ್ಕಾಗಿ ಇಲ್ಲಿ ಹೀಗೆ ಮಾಡಬೇಕು ಹಾಗೆ ಮಾಡಬೇಕು; ಸೈತಾನನಿಗೆ ಹೆದರಬೇಕು, ದೇವರಿಗೆ ಹೆದರಬೇಕು. ಬದುಕಿರುವಾಗ ಹೀಗೆ ಹೀಗೆ ನಡೆದುಕೊಳ್ಳದಿದ್ದರೆ ಇಂಥ ದೇವತೆಯು ನಿಮ್ಮನ್ನು ಮರಣಾನಂತರದ ಪ್ರಾಯಶ್ಚಿತ್ತ ಲೋಕದಿಂದ (Purgatory) ಸ್ವರ್ಗದೊಳಗೆ ಬಿಡುವುದಿಲ್ಲ—ಎಂದು ಮೊದಲಾಗಿ ಕನಸುಗಳನ್ನು ಕಾಣುತ್ತಿದ್ದೀರಿ. ಆದರೆ ರಾಮನು ನಿಮಗೆ ಹೇಳುವ ದೇನೆಂದರೆ, ಭೂತದ ಭಯದಿಂದ ಮಧುರವಾದ ಭಕ್ಷ್ಯವನ್ನು ಮೊದಲೇ ತಿಂದು ಹಾಕಿದ ಆ ಸೇವಕನಾಗಿರುವುದು ಉತ್ತಮ. ಏಕೆಂದರೆ ಅದು ಏನಾದರೂ, ವರ್ತಮಾನಕಾಲಕ್ಕೆ ಸಂಬಂಧಪಟ್ಟದ್ದಾಗಿತ್ತು; ತತ್ಕಾಲದಲ್ಲಿಯಾದರೂ ನಿಜವಾಗಿತ್ತು. ನಿಮ್ಮ ಹೃದಯಕ್ಕೆ ಅತ್ಯಂತ ಸಮೀಪವಾದ ವಿಷಯಗಳಿಗೂ ನಿಮ್ಮ ವ್ಯವಹಾರಕ್ಕೂ, ನಿಮ್ಮ ವಿಶ್ವಾಸದ ವಿಚಾರಗಳಿಗೂ ಮೊದಲು ಗಮನ ಕೊಡುವುದು ಹೆಚ್ಚು ಜಾಣತನ; ಸ್ವಪ್ನಲೋಕವು ತನ್ನ ಗತಿಯನ್ನು ತಾನು ನೋಡಿಕೊಳ್ಳುತ್ತದೆ. ಮಮತೆಯೂ ವಿಶ್ವಾಸವೂ ಉದಾರತೆಯೂ ಮೊದಲು ನಿಮ್ಮ ಮನೆಯಿಂದ ಆರಂಭವಾಗಬೇಕು. ಮನೆಯನ್ನು ಮೆಚ್ಚಿಸಿ, ಮಂದಿಯನ್ನು ಮೆಚ್ಚಿಸಬೇಕು. ಆದ್ದರಿಂದ ಮನೆಯ ವಿಚಾರ ದಿಂದ ಪ್ರಾರಂಭಿಸೋಣ.

೧೨೫. ಸ್ವೇಚ್ಛೆಯಾಗಿ ತಪ್ಪಾದ ಅರ್ಥಮಾಡುವದು

(ಸೈನಿಕನ ಪ್ರೇಯಸಿ—ಕೂಡಲೇ ಸೇರಿಕೊಳ್ಳಿ)

ಒಬ್ಬ ಸೈನಿಕನು ತರುಣಿಯೊಬ್ಬಳನ್ನು ಪ್ರೀತಿಸುತ್ತಿದ್ದ. ಅವನ ಮೇಲಿನ ಅಧಿಕಾರಿಯೂ ಆಕೆಯನ್ನೇ ಪ್ರೀತಿಸುತ್ತಿದ್ದ. ಆದರೆ, ಆ ಪ್ರೇಯಸಿಯು ಆ ಸೈನಿಕನನ್ನೇ ಹೆಚ್ಚು ಪ್ರೀತಿಸುತ್ತಿದ್ದಳು. ಒಮ್ಮೆ ಆ ಸೈನಿಕನು ರಜೆಯನ್ನು ಪಡೆದು ಊರಿಗೆ ಹೋದನು. ಅದೇ ಸಮಯವನ್ನು ಸಾಧಿಸಿ ಆ ನಲ್ಲೆಯೂ ಅವನ ಮನೆಗೇ ಹೋದಳು. ಅನಂತರ ಅವರಿಬ್ಬರಿಗೂ ಮದುವೆಯೇ ಏರ್ಪಾಟಾದ್ದರಿಂದ ತನ್ನ ರಜೆಯನ್ನು ಹದಿನೈದು ದಿನಗಳು ಮುಂದುವರಿಸಿಕೊಡಬೇಕೆಂದು ಆ ಸೈನಿಕನು ತನ್ನ ಮೇಲಿನ ಆ ಆಫೀಸರಿಗೆ ಟೆಲಿಗ್ರಾಂ ಮಾಡಿದನು. ಆಗ, ಅವರಿಬ್ಬರೂ ಲಗ್ನಮಾಡಿಕೊಳ್ಳುವದಕ್ಕಾಗಿ ಮಾಡಿಕೊಂಡಿರುವ ಯೋಚನೆಯೂ ಹೂಡಿಕೊಂಡಿರುವ ಯೋಜನೆ-ಉಪಾಯಗಳೂ ಆ ಮೇಲಧಿಕಾರಿಗೆ ತಿಳಿಯಿತು, ಆತನೂ ಆಕೆಯನ್ನು ಪ್ರೀತಿಸುತ್ತಿದ್ದುದರಿಂದ ಅವನಿಗೆ ಸ್ವಾಭಾವಿಕವಾಗಿ ಅಸೂಯೆ ಉಂಟಾಯಿತು. ಆದ್ದರಿಂದ ಆ ಸೈನಿಕನಿಗೆ ರಜೆಯನ್ನು ಮಂಜೂರು ಮಾಡುವದು ಇಷ್ಟವಿಲ್ಲದೆ ಅವನ ಟೆಲಿಗ್ರಾಂಗೆ ಉತ್ತರವಾಗಿ, ಸಂಕ್ಷಿಪ್ತವಾಗಿ "Join at once." "ಕೂಡಲೇ ಸೇರಿಕೊ ; ಅಥವಾ ಕೂಡಲೇ ಸೇರಿಕೊಳ್ಳಿ." ಎಂದು ಆ ಆಫೀಸರನು ಅವಸರದ ಟೆಲಿಗ್ರಾಂ ಕೊಟ್ಟನು. ಆ ಸೈನಿಕನು ಕೂಡಲೇ ಬಂದು ಸೈನ್ಯದಲ್ಲಿ ತನ್ನ ಉದ್ಯೋಗಕ್ಕೆ ಸೇರಿಕೊಳ್ಳಬೇಕು—ಎಂದು ಆ ಟೆಲಿಗ್ರಾಂ ಕೊಟ್ಟವರ ಅಭಿಪ್ರಾಯವಾಗಿತ್ತು ; ಆಜ್ಞೆಯಾಗಿತ್ತು. ಆ ಟೆಲಿಗ್ರಾಂ ಉತ್ತರವು ಆ ಸೈನಿಕನಿಗೆ ತಲ್ಪಿದ ಕೂಡಲೇ ಅವನು ಅದನ್ನು ಓದಿಕೊಂಡು, "ಈ ಕೂಡಲೇ ಬಂದು ನಿನ್ನ ಕೆಲಸದ ಮೇಲೆ ಹಾಜರಾಗಬೇಕು." ಎಂಬ ಸರಿಯಾದ ಅರ್ಥವನ್ನು ಅರಿತುಕೊಂಡು, ಮದುವೆಗೆ ರಜೆಯು ಸಿಕ್ಕಲಿಲ್ಲವಲ್ಲಾ –ಎಂದು ತುಂಬಾ ವ್ಯಥೆ ಪಡುತ್ತಿದ್ದನು. ಅವನ ಪ್ರಿಯತಮೆಯು ಬಂದು ತನ್ನ ನಲ್ಲನ ನಿರಾಶಾ-ದುಃಖಗಳ ಸ್ಥಿತಿಯನ್ನು ನೋಡಿ ಕಾರಣವನ್ನು ಕೇಳಿದಳು. ಅವನು ಆಕೆಗೆ ಆ ಟೆಲಿಗ್ರಾಮನ್ನು ತೋರಿಸಿದನು. ಆಕೆಯು ಅದನ್ನು ಓದಿಕೊಂಡ ಕೂಡಲೇ ಆಕೆಯ ತೀಕ್ಷ್ಣಮತಿಗೆ ಏನೋ ವಿಚಾರವು ಹೊಳೆದು, ಸಂತೋಷದಿಂದ ಕುಣಿಯುವದಕ್ಕೆ ತೊಡಗಿದಳು. ಅವನಿಗೆ ಆಶ್ಚರ್ಯವಾಯಿತು. "ನಾನು ನಮ್ಮ ಆಶೆಯೆಲ್ಲಾ ಮಣ್ಣುಗೂಡಿತಲ್ಲಾ ಎಂದು ಸಂಕಟಪಡುತ್ತಿರುವಾಗ ನೀನು ಸಂತೋಷದಿಂದ ಕುಣಿಯುತ್ತಿರುವೆಯಲ್ಲಾ ಇದೇನಾಶ್ಚರ್ಯ ?" ಎಂದು ಕೇಳಿದನು. ಅದಕ್ಕವಳು "ನಿಮ್ಮ ವಿಷಾದಕ್ಕೆ ಕಾರಣವೇ ಇಲ್ಲ ; ಆ ಟೆಲಿಗ್ರಾಮನ್ನು ನೀವು ಸರಿಯಾಗಿ ಅರ್ಥಮಾಡಿಕೊಂಡಿಲ್ಲ ; 'ಕೂಡಲೇ ನೀವು (ಪ್ರಿಯ-ಪ್ರೇಯಸಿಯರು) ಸೇರಿಕೊಳ್ಳಿ' ಎಂದು ನಿಮ್ಮ ಆಫೀಸರ್ ಬಹಳ ದಯೆಯಿಂದ ಅಜ್ಞೆಮಾಡಿದ್ದಾರೆ. ಆದ್ದರಿಂದ ಕೂಡಲೇ ನಮ್ಮ ಮದುವೆಯ ಪ್ರಯತ್ನ ಮಾಡೋಣ." ಎಂದು ಹೇಳಿದಳು.

ವೇದಶಾಸ್ತ್ರಗಳಲ್ಲಿಯೂ ಜನರು ಹೀಗೆಯೇ ತಮಗೆ ಬೇಕಾದ ಅರ್ಥವನ್ನೇ ಹೊಂದಿಸಿ ತೋರಿಸುತ್ತಾರೆ. ಮದುವೆಯಾಗಬೇಕೆಂದಿದ್ದ ಆ ಹೆಣ್ಣಿಗೆ ಆ ಅರ್ಥವು ಅನುಕೂಲವಾಗಿರಬಹುದು. ಆದರೆ ನಿಜವಾದ ಕಲ್ಯಾಣವನ್ನು ಬಯಸುವ ಜನರು ಶಾಸ್ತ್ರಗಳಿಗೆ ಹೀಗೆ ಸ್ವೇಚ್ಛೆಯಾಗಿ ಅರ್ಥಮಾಡಿದರೆ ಅನರ್ಥವೇ ಆದೀತು.

"ದೇಹೋ ದೇವಾಲಯಃ ಪ್ರೋಕ್ತಃ" ದೇಹವು ದೇವರ ಮಂದಿರವೆಂದು, ದೇವಾಲಯವೆಂದು ಶಾಸ್ತ್ರದಲ್ಲಿ ಹೇಳಿದೆ, ಇದರಿಂದ ಒಳಗಿರುವ ದೇವರನ್ನು ಮರೆತು ದೇವಾಲಯವನ್ನೇ ಅತ್ಯಂತ ಪ್ರಾಮುಖ್ಯವಾಗಿ ಎಣಿಸಬೇಕೆಂದು ಹೇಳಿದಂತಾಯಿತೆ ? ದೇವಾಲಯದ ಮೂಲ ಉದ್ದೇಶವು ಇಂದಿನ ರೋಮನ್ ಕ್ಯಾಥೋಲಿಕ್ ದೇವಾಲಯದ ಉದ್ದೇಶದಂತೇನೂ ಇರಲಿಲ್ಲ. ದೇವರನ್ನು ಪೂಜಿಸಬೇಕೇ ಹೊರತು ದೇವಾಲಯವನ್ನಲ್ಲ. ಆದರೆ ಜನರು ದೇವರನ್ನು ಮರೆತು ದೇವಾಲಯವನ್ನೇ–ದೇಹವನ್ನೇ–ವೈಭವದಿಂದ ಮೆರೆಸುತ್ತಾರೆ. ಅವರು ತಮ್ಮ ಅಜ್ಞಾನವನ್ನೂ ಅಹಂಕಾರವನ್ನೂ ಆಡಂಬರವನ್ನೂ ಮುಚ್ಚಿ ಆಢ್ಯತೆಯನ್ನು ಮೆರೆಸುವದಕ್ಕಾಗಿ ಈ ಶಾಸ್ತ್ರ ವಾಕ್ಯವನ್ನು ಉದಾಹರಿಸುತ್ತಾರೆ. ಶಾಸ್ತ್ರದ ದೂಷಣೆಗೂ ದುರುಪಯೋಗಕ್ಕೂ ಇದೊಂದು ದೃಷ್ಟಾಂತ. ಒಳಗಿರುವಾಗ ದೇವರನ್ನು ಕಂಡುಕೊಂಡು ದೇಹವನ್ನು ಮರೆಯುವದಕ್ಕಿಂತಲೂ ದೇಹಕ್ಕೆ ಹೆಚ್ಚಿನ ಉಪಯೋಗ–ಗೌರವ ಮತ್ತೊಂದಿಲ್ಲ.

೧೨೬. ಅಹಂಕಾರದ ಫಲ

(ಮೃತ್ಯುವನ್ನು ಮೋಸಪಡಿಸುವುದು)

ಮೂಲರೂಪದಿಂದ ಪ್ರತಿರೂಪ ಯಾವದೆಂಬುದನ್ನು ಹೇಳಲಾರದಷ್ಟು ಪೂರ್ಣತೆಯಿಂದ ತನ್ನನ್ನು ತಾನು ಪ್ರತಿರೂಪ ಮಾಡಿಕೊಳ್ಳತಕ್ಕಂಥ ಜಾಣ ಮನುಷ್ಯನೊಬ್ಬನು ಒಂದಾನೊಂದು ಕಾಲದಲ್ಲಿ ಇದ್ದನು. ಮೃತ್ಯುದೇವತೆಯು ತನ್ನಲ್ಲಿಗೆ ಬರುತ್ತಾನೆಂಬುದು ಅವನಿಗೆ ಗೊತ್ತಿತ್ತು; ಅವನಿಂದ ತಪ್ಪಿಸಿಕೊಳ್ಳುವದಕ್ಕೆ ಏನು ಮಾಡುವದೆಂಬುದು ತಿಳಿಯದೆ, ಕೊನೆಗೆ ಸಮರ್ಥವೆನ್ನಬಹುದಾದ ಒಂದು ಉಪಾಯವನ್ನು ನಿಶ್ಚಯಿಸಿದನು. ಅವನು ತನ್ನನ್ನು ತಾನು ಹನ್ನೆರಡು ರೂಪಗಳನ್ನಾಗಿ ಮಾಡಿಕೊಂಡನು. ಮೃತ್ಯು ದೇವತೆಯು ಬಂದಾಗ ನಿಜವಾದ ಮನುಷ್ಯನಾರೆಂಬುದು ತಿಳಿಯದೆ ಇದ್ದುದರಿಂದ ಯಾರನ್ನೂ ಮುಟ್ಟದೇ ಬಿಟ್ಟು ಹೋದನು. ಆ ದೇವತೆಯು ದೇವರಲ್ಲಿಗೆ ಬಂದು, ಇಂಥಾ ಪರಿಸ್ಥಿತಿಯಲ್ಲಿ ತನ್ನ ಕರ್ತವ್ಯವನ್ನು ಹೇಗೆ ನಿರ್ವಹಿಸಬೇಕೆಂದು ಕೇಳಿದನು. ಈ ಮನುಷ್ಯನನ್ನು ತೆಗೆದುಕೊಂಡು ಹೋಗುವದಕ್ಕೆ ಪುನಃ ಪ್ರಯತ್ನ ಮಾಡುವದಕ್ಕಾಗಿ, ದೇವರ ಸಲಹೆಯನ್ನು ಪಡೆದು ಭೂಲೋಕಕ್ಕೆ ಹಿಂದಿರುಗಿದನು. ಮೃತ್ಯು ದೇವನು ಆಶ್ಚರ್ಯದಿಂದ ಹೇಳಿದನು : "ಮಹಾಪುರುಷ ! ನಿನ್ನ ಜಾಣ್ಮೆಯೂ ಮಹಿಮೆಯೂ ಆಶ್ಚರ್ಯಕರವಾಗಿದೆ. ಹೇಗೆ ಒಂದೇ ಬಗೆಯ ಹನ್ನೆರಡು

ಪ್ರತಿರೂಪಗಳನ್ನು ಮಾಡಿದ್ದಿ ! ನಿನ್ನ ಸಿದ್ಧಿಯು ಅದ್ಭುತವಾದುದು ; ಒಂದ ಕ್ಕೊಂದಕ್ಕೆ ಯಾವದರಲ್ಲಿಯೂ ಸ್ವಲ್ಪವೂ ವ್ಯತ್ಯಾಸವಿಲ್ಲ. ಆದರೆ, ಒಂದೇ ಒಂದು ದೋಷವಿದೆ ; ಒಂದರಲ್ಲಿ ಮಾತ್ರವೇ ತಪ್ಪಿದ್ದಿ" ಎಂದನು. ಒಮ್ಮೆಗೇ ನಿಜವಾದ ಆ ಮೂಲ ಮನುಷ್ಯನು ಹಾರಿ ಮುಂದೆ ಬಂದು "ಹಾ ! ಹಾ ! ಯಾವದರಲ್ಲಿ ತಪ್ಪಿದ್ದೇನೆ ? ಹೇಳು." ಎಂದು ಆತುರದಿಂದ ಕೇಳಿದನು. ಮೃತ್ಯುವು "ಓಹೋ ! ಇದರಲ್ಲಿಯೇ, ಈ ಪ್ರಶ್ನೆಯಲ್ಲಿಯೇ !" ಎಂದು ಜಡವಾದ ಮಿಕ್ಕ ಮೂಲ ಪ್ರತಿರೂಪ ಗಳಿಂದ ಈ ಜಾಣನನ್ನು ಬೇರ್ಪಡಿಸ ಹೇಳಿದನು. ಯಾರಲ್ಲಿಯಾದರೂ ಒಂದೇ ತಪ್ಪೆಂ ದರೆ, "ನಾನು ಸರಿಯೇ? ನಾನು ಯೋಚನೆ ಮಾಡಿದ್ದು ಸರಿಯೇ? ನಾನು ಮಾತಾಡಿದ್ದು ಸರಿಯೆ ? ನಾನು ಮಾಡಿದ್ದು ಸರಿಯೇ ?" ಎಂದು ಕೇಳುವದು. ಪ್ರೇಮಾತ್ಮ ! ನೀನು ಸರಿಯಲ್ಲದೆ ಮತ್ತೇನಾಗಬಲ್ಲೆ ? ಹಾನು ಕರ್ತೃ, ನಾನು ಭೋಕ್ತೃ "ನಾನು ಮಾಡ ತಕ್ಕವನು, ನಾನು ಅನುಭವಿಸತಕ್ಕವನು" ಎಂಬ ಸಣ್ಣ ಹಸುಳೆಯನ್ನು ಮೃತ್ಯುವು ಅಪ ಹರಿಸಿ, ಒಯ್ಯುತ್ತದೆ.

೧೨೭. ಸ್ವಾರ್ಥದ ಫಲ

(ಇದು ನನ್ನ ಮೂಲಂಗಿ)

ಕ್ಷಾಮಕಾಲದಲ್ಲಿ ಒಬ್ಬ ಒಡವಿಯು ಸತ್ತಳು. ಯಮಧರ್ಮರಾಜನು ಚಿತ್ರ ಗುಪ್ತರ [ಗುಪ್ತಚಿತ್ರದ] ಸಹಾಯದಿಂದ ಆಕೆಯ ಪುಣ್ಯ ಪಾಪ ಕರ್ಮಗಳ ಮರಣಾ ನಂತರದ ಶೋಧವನ್ನು ನಡೆಸುವಾಗ, ಹೊಟ್ಟೆಗಿಲ್ಲದೆ ಸಾಯುತ್ತಿದ್ದ ಒಬ್ಬ ಭಿಕ್ಷುಕ ನಿಗೆ ಒಂದು ಮೂಲಂಗಿಯನ್ನು ಒಮ್ಮೆ ದಾನ ಮಾಡಿದ್ದು ಹೊರತು ಬೇರೆ ಯಾವ ದಾನಧರ್ಮವನ್ನೂ ಆಕೆಯು ಮಾಡಿರಲಿಲ್ಲವೆಂದು ಸಿದ್ಧವಾಯಿತು. ಯಮನ ಆಜ್ಞೆ ಯಂತೆ ಆ ಮೂಲಂಗಿಯು [ಅದರ ಪ್ರತಿರೂಪವು] ತರಲ್ಪಟ್ಟಿತು. ಈ ಮೂಲಂ ಗಿಯು ಆಕೆಯನ್ನು ಸ್ವರ್ಗಕ್ಕೆ ಒಯ್ಯಬೇಕಾದುದಾಗಿತ್ತು. ಆಕೆಯು ಅವನ್ನು ಹಿಡಿದು ಕೊಂಡಳು ; ಅದು ಆಕೆಯನ್ನು ಎತ್ತಿಕೊಂಡು ಮೇಲಕ್ಕೆ ಏರುವದಕ್ಕೆ ತೊಡಗಿತು.

ಅಷ್ಟರೊಳಗೆ ಅಲ್ಲಿಗೆ ಆ ಹಳೆಯ ಭಿಕ್ಷುಕ ಬಂದನು. ಅವನು, ಅಂತರಿಕ್ಷದಲ್ಲಿ ಏರಿಹೋಗುತ್ತಿದ್ದ ಆಕೆಯ ಹರಕು ಸೀರೆಯ ಜೂಲನ್ನು ಹಿಡಿದುಕೊಂಡನು. ಆಕೆ ಯೊಡನೆ ಅವನೂ ಏರಲು ತೊಡಗಿದನು. ಮೂರನೆಯ ಮನುಷ್ಯನೊಬ್ಬನು ಅಷ್ಟರಲ್ಲಿ ಓಡಿಬಂದು, ದೈನ್ಯದಿಂದ ಬೇಡಿಕೊಂಡು, ಆ ಭಿಕ್ಷುಕನ ಕಾಲುಗಳನ್ನು ಹಿಡಿದುಕೊಂಡನು. ಆ ಪಾದಗಳಿಂದ ಜೋತುಬಿದ್ದ ಅವನೂ ಮೇಲಕ್ಕೆ ಏರಲು ತೊಡಗಿದನು. ಹೀಗೆ ಆ ಒಂದು ಮೇಲೆತ್ತುವ ಮೂಲಂಗಿಯಿಂದ ಒಬ್ಬರ ಕೆಳಗೆ ಒಬ್ಬ ರಂತೆ ಅನೇಕ ಜನರ ಒಂದು ದೀರ್ಘ ಮಾಲೆಯೇ ಮೇಲೆ ಒಯ್ಯಲ್ಪಡತೊಡಗಿತು. ಆಶ್ಚರ್ಯವೆಂದರೆ, ತನ್ನೊಬ್ಬಳನ್ನೇ ಹಿಡಿದು ಮೇಲೇರುತ್ತಿದ್ದ ಇಷ್ಟೆಲ್ಲಾ ಜನರ ತೂಕವೂ ಆಕೆಗೆ ಭಾರವೆನಿಸಲಿಲ್ಲ. [ಕನಸಿನಲ್ಲಿಯೂ ಎಷ್ಟೋ ಸಲ ಹೀಗೆಯೇ ಕಾಣುವದಿಲ್ಲವೆ ?]

ಸುರಕ್ಷಿತರಾದ ಈ ಜನರು ಸ್ವರ್ಗದ್ವಾರದ ವರೆಗೂ ಮೇಲೆ ಮೇಲೆ ಏರುತ್ತಲೇ ಹೋದರು. ಅಲ್ಲಿ ಆ ಮುದುಕಿಯು ಕೆಳಗೆ ನೋಡಿದಳು. ಆಕೆಯು ಯಾವ ಭಾವನೆಯಿಂದ ಪ್ರೇರಿತಳಾದಳೋ ತಿಳಿಯದು; ಎಂಜಿನ್ನಿನ ಬೆನ್ನು ಹತ್ತಿದ್ದ ರೈಲು ಗಾಡಿಗಳಂತಿದ್ದ ಆ ಜನ ಪರಂಪರೆಯನ್ನು ನೋಡಿ "ಇಷ್ಟೊಂದು ಜನ ನನ್ನ ಸೀರೆಯ ಚುಂಗನ್ನು ಹಿಡಿದು ಮೇಲೇರಿ ಬಂದಿದ್ದೀರಾ? ಮುಟ್ಠಾಳರೇ! ತೊಲಗಿ; ಇದು ನನ್ನ ಮೂಲಂಗಿ" ಎಂದು ಹೇಳಿ, ಅವರನ್ನು ಅಟ್ಟುವಂತೆ ಮೂಲಂಗಿಯನ್ನು ಹಿಡಿದುಕೊಂಡಿದ್ದ ಎರಡೂ ಕೈಗಳನ್ನು ಎಚ್ಚರವಿಲ್ಲದೆ ಬಿಚ್ಚಿ ಬೀಸಿದಳು. ಆ ಮೂಲಂಗಿಯನ್ನು ಬಿಟ್ಟು ಕಳಚಿಕೊಂಡ ಕೂಡಲೇ ಆ ಮುದುಕಿಯೊಡನೆ ಆ ಜನ ರೈಲಿನ ಸಾಲೇ ಪೂರಾ ಭೂಮಿಗೆ ಬಿದ್ದಿತು.

ವಿಷಯವನ್ನು ಸರಳವಾಗಿ ತಿಳಿಸಿದೆ; ಇದರ ನೀತಿಯೂ ತತ್ತ್ವವೂ ಏನೆಂಬುದನ್ನು ನೀವೇ ತಿಳಿದುಕೊಳ್ಳಿ.

೧೩೮. ಪಾಪದ ಕಾರಣ

(ಔಷಧಿಗಳನ್ನು ತಪ್ಪಾಗಿ ಉಪಯೋಗಿಸಿದ ರೋಗಿ)

ನಾವು ಉಳಿದ ಬೇರೆ ಪಾಪಗಳ ವಿಚಾರದಲ್ಲಿ ಪ್ರವೇಶಮಾಡುವದೇ ಬೇಡ. ವೇದಾಂತವು ಎಲ್ಲಕ್ಕೂ ಇದೇ ಬಗೆಯ ವಿವರಣೆಯನ್ನೂ ಸಮಾಧಾನವನ್ನೂ ಕೊಡುತ್ತದೆ. ಈ ಎಲ್ಲಾ ಘೋರ ಪಾಪಗಳನ್ನೂ ಕಳೆಯುವದಕ್ಕೆ ಎಲ್ಲರಲ್ಲಿಯೂ ತುಂಬಿರುವ ಅಜ್ಞಾನವನ್ನು ಕಳೆಯುವದೇ ನಿಜವಾದ ಸಾಧನವಾಗಿದೆ. ಅಜ್ಞಾನವೆಂದರೆ, ಒಂದನ್ನು ಇನ್ನೊಂದನ್ನಾಗಿ ತಿಳಿಯುವ, ಅದಿಲ್ಲದಿರುವದನ್ನು ಅದೆಂದು ತಿಳಿಯುವ (ಅತಸ್ಮಿನ್ ತದ್ಬುದ್ಧಿಃ– ಶಾಂಕರಭಾಷ್ಯ: ಹಗ್ಗವನ್ನು ಹಾವೆಂದು ತಿಳಿಯುವ) ಅಧ್ಯಾಸವೇ (ಗೊಂದಲವೇ) ಆಗಿದೆ.

ಒಬ್ಬ ಮನುಷ್ಯನು ಎರಡು ಬಗೆಯ ರೋಗಗಳಿಂದ ವ್ಯಥೆಪಡುತ್ತಿದ್ದ. ಅವನಿಗೆ ಕಣ್ಣುನೋವೂ ಇತ್ತು; ಹೊಟ್ಟೆನೋವೂ ಇತ್ತು. ಅವನು ಒಬ್ಬ ವೈದ್ಯರಲ್ಲಿ ಬಂದು ಚಿಕಿತ್ಸೆಯನ್ನು ಕೇಳಿದ. ಆ ವೈದ್ಯರು ಅವನಿಗೆ ಎರಡು ಬಗೆಯ ಔಷಧಿಯನ್ನು ಕೊಟ್ಟರು. ಎರಡೂ ಪುಡಿಗಳಾಗಿದ್ದವು. ಒಂದು 'ಆಂಟಿಮೊನಿ' ಅಥವಾ 'ಲೆಡ್ ಸಲ್ಫೈಡ್' ಆಗಿತ್ತು. ಇದು ಕಣ್ಣಿಗೆ ಔಷಧಿಯಾಗಿತ್ತು; ಆದರೆ ಅದು ಹೊಟ್ಟೆಗೆ ವಿಷವಾಗಿತ್ತು, ಇನ್ನೊಂದು ಪುಡಿಯು ಮೆಣಸಿನ ಕಾಳಿನ ಪುಡಿಯಾಗಿತ್ತು. ಇದು ಹೊಟ್ಟೆಗೆ ಔಷಧಿಯೂ ಕಣ್ಣಿಗೆ ವಿಷವೂ ಆಗಿತ್ತು. ಆದರೆ, ಆ ರೋಗಿಯು ಮಾನಸಿಕ ಗೊಂದಲದಿಂದ ಈ ಪುಡಿಗಳನ್ನು ಅದಲುಬದಲು ಮಾಡಿದ. ಕಣ್ಣಿಗೆ ಹಾಕಬೇಕಾದ ಪುಡಿಯನ್ನು ಹೊಟ್ಟೆಗೂ ಹೊಟ್ಟೆಗೆ ಸೇವಿಸಬೇಕಾಗಿದ್ದ ಮೆಣಸಿನ ಪುಡಿಯನ್ನು ಕಣ್ಣಿಗೂ ಉಪಯೋಗಿಸಿದ. ಇದರಿಂದ ಕಣ್ಣುಗಳು ಕುರುಡಾದವು; ಹೊಟ್ಟೆಯು ಮತ್ತಷ್ಟು ಕೆಟ್ಟಿತು.

ಜನರು ಹೀಗೆಯೇ ಮಾಡುತ್ತಿದ್ದಾರೆ. ಪ್ರಪಂಚದಲ್ಲಿ ಪಾಪಗಳೆನಿಸಿ ಕೊಳ್ಳುವ ಎಲ್ಲಕ್ಕೂ ಇದೇ ಕಾರಣವಾಗಿದೆ. ನಿಮ್ಮಲ್ಲಿ ಪ್ರಕಾಶಗಳಿಗೆ ಪ್ರಕಾಶವೂ ಕಣ್ಣುಗಳಿಗೆ ಕಣ್ಣೂ ಆದ ಆತ್ಮನಿದ್ದಾನೆ; ದೇಹವೂ ಇದೆ. ಈ ದೇಹವನ್ನು ಉದಾಹರಣೆಯಲ್ಲಿರುವ ಉದರಕ್ಕೆ ಹೋಲಿಸಬಹುದು. ಆತ್ಮನಿಗೆ ಮಾಡಬೇಕಾದು ದನ್ನು ದೇಹಕ್ಕೂ ದೇಹಕ್ಕೆ ಮಾಡಬೇಕಾದುದನ್ನು ಆತ್ಮನಿಗೂ ಮಾಡುತ್ತಿದ್ದೇವೆ. ಆತ್ಮನಿಗೆ ಸಲ್ಲಿಸಬೇಕಾದ ಮರ್ಯಾದೆಯನ್ನೂ ಗೌರವವನ್ನೂ ವೈಭವವನ್ನೂ ದೇಹಕ್ಕೆ ಸಲ್ಲಿಸುತ್ತಿದ್ದೇವೆ. ಎಲ್ಲವನ್ನೂ ಕಲಬೆರಿಕೆಮಾಡಿ ಗೊಂದಲದಲ್ಲಿ ಕೆಡವಿದ್ದೇವೆ. ಈ ಪ್ರಪಂಚದಲ್ಲಿ ಪಾಪಗಳೆನಿಸಿಕೊಳ್ಳುವ ವಿಚಿತ್ರ ವಿಲಾಸಕ್ಕೆ ಇದೇ ಕಾರಣ. ಎಲ್ಲವನ್ನೂ ಸರಿಪಡಿಸಿ ಯೋಗ್ಯವಾಗಿಯೂ ವ್ಯವಸ್ಥಿತವಾಗಿಯೂ ಇಟ್ಟರೆ, ಭೌತಿಕವಾಗಿಯೂ ವ್ಯಾವಹಾರಿಕವಾಗಿಯೂ ನೀವು ಅಭ್ಯುದಯವನ್ನು ಪಡೆಯುವದಲ್ಲದೆ ಪಾರಮಾರ್ಥಿಕವಾಗಿಯೂ ನೀವು ದೇವರ ದೇವರಾಗಿರುವದನ್ನು ಅರಿಯುತ್ತೀರಿ.

ಹಾಗೆಯೇ ನಿಮ್ಮಲ್ಲಿಯೇ ಸಕಲವೂ ಇವೆ; ಆದರೆ ಅವ್ಯವಸ್ಥೆಯಿಂದ ದೇವರನ್ನು ಕೆಳಗೆ ತಳ್ಳಿ ದೇಹವನ್ನು ಮೇಲೇರಿಸಿದ್ದೀರಿ ; ಅತ್ಯಂತ ಶ್ರೇಷ್ಠ ಸ್ವರ್ಗವನ್ನು ಪ್ರತ್ಯಕ್ಷ ಹೀನ ನರಕವನ್ನಾಗಿ ಮಾಡಿಕೊಂಡಿದ್ದೀರಿ. ವಿವೇಕದಿಂದ ವಿಹಿತವಾದ ವ್ಯವಸ್ಥೆ ಮಾಡಿದರೆ, ಈ ಘೋರವೂ ಹೇಯವೂ ಅಸಹ್ಯಕರವೂ ಆಗಿ ತೋರುವ ಪಾಪಗಳೆಂಬ ವಿಚಿತ್ರ ವ್ಯಾಪಾರ ಸಹಿತ ನಿಮ್ಮ ನಿಜವಾದ ದೇವತ್ವವನ್ನೂ ಪವಿತ್ರತೆ ಯನ್ನೂ ಬೋಧಿಸುತ್ತದೆ. ಸರಿಯಾದ ದೃಷ್ಟಿಯಿಂದ ನೋಡಿದರೆ, ನೀವೇ ದೇವರಿಗೆಲ್ಲಾ ದೇವರು, ಮಹಾದೇವರು.

೧೨೯. ಪಾಪದಲ್ಲಿಯೂ ದೇವತ್ವವನ್ನೇ ನೋಡಿ

(ಆಸ್ತಿಕತೆಗೆ ಪರಿವರ್ತನೆ ಹೊಂದಿದ ನಾಸ್ತಿಕ)

ಒಬ್ಬ ನ್ಯಾಯವಾದಿಯು (ಲಾಯರ್) ನಾಸ್ತಿಕನಾಗಿದ್ದನು. ದೇವರಲ್ಲಿ ನಂಬಿಕೆಯಿಲ್ಲದ ಅವನು ತನ್ನ ಮನೆಯ ಗೋಡೆಗಳ ಮೇಲೆಲ್ಲಾ ಆಂಗ್ಲಭಾಷೆಯಲ್ಲಿ 'God is nowhere.'' ಎಂದು ಬರೆದಿದ್ದನು. ಒಮ್ಮೆ ಅವನ ಕಕ್ಷಿಗಾರ ನೊಬ್ಬನು, ಅವನಲ್ಲಿಗೆ ಬಂದು, ತನ್ನ "ಕೇಸಿ"ಗಾಗಿ ೫೦೦ ರೂಪಾಯಿ ಕೊಡುವದಾಗಿ ಹೇಳಿದನು. ಆದರೆ ಆ ಲಾಯರು ೧೦೦೦ ರೂಪಾಯಿಗಳನ್ನು ಕೊಟ್ಟ ಹೊರತು ಅವನ ಕೇಸನ್ನು ಹಿಡಿಯುವದಿಲ್ಲವೆಂದು ಹೇಳಿದನು. ಐನೂರು ರೂಪಾಯಿ ಗಳನ್ನಾದರೆ ಮೊದಲೇ ಕೊಡುವದಾಗಿಯೂ ಒಂದು ಸಾವಿರ ರೂಪಾಯಿಗಳನ್ನಾದರೆ ತನ್ನ ಕೇಸನ್ನು ಗೆದ್ದುಕೊಟ್ಟ ಮೇಲೆ ಕೊಡುವದಾಗಿಯೂ ಕಕ್ಷಿಗಾರನು ಹೇಳಿದನು. ಆ ಕೇಸಿನಲ್ಲಿ ತಾನು ಖಂಡಿತ ಗೆದ್ದೇ ಗೆಲ್ಲುವದಾಗಿ ಆ ಲಾಯರಿಗೆ ಬಹಳ ಭರವಸೆ ಯಿದ್ದರೂ ಎದಿರು ಪಕ್ಷದ ಲಾಯರು ಕೋರ್ಟಿನಲ್ಲಿ ಹೆಚ್ಚು ಪ್ರಬಲತರ ಯುಕ್ತಿ ಗಳನ್ನು ಹೂಡಿದ್ದರಿಂದ, ಮೊದಲನೆಯ ಲಾಯರು ಸೋಲಬೇಕಾಯಿತು, ಆದ್ದರಿಂದ

ಅವನು ಸಾವಿರ ರೂಪಾಯಿಗಳನ್ನೂ ಕಳೆದುಕೊಂಡು ಅತ್ಯಂತ ಖಿನ್ನನಾಗಿ ಮನೆಗೆ ಬಂದು ಕುಸಿದು ಕೂತಿದ್ದನು. ಆಗ ಅವನಲ್ಲಿಗೆ ಅವನ ಮುದ್ದು ಮಗುವೊಂದು ಬಂದಿತು. ಅದು, ಆಗತಾನೇ ಅಕ್ಷರಗಳನ್ನು ಜೋಡಿಸಿ ಇಂಗ್ಲೀಷ್ ಶಬ್ದಗಳನ್ನು ಓದಲು ಕಲಿಯುತ್ತಿತ್ತು. ಅದು ಗೋಡೆಯ ಮೇಲೆ ಬರೆದಿದ್ದ "God is......" ಎನ್ನುವದನ್ನು ಓದುವದಕ್ಕೆ ತೊಡಗಿತು. ಆದರೆ ಅದು ಆ ಮಗುವಿಗೆ ಉದ್ದವಾದ ವಾಕ್ಯವಾಗಿತ್ತಾದ್ದರಿಂದ ಆ ವಾಕ್ಯವನ್ನು ಉಚ್ಚಾರಣೆ ಮಾಡುವದಕ್ಕೆ ಕಲಿಸಬೇಕೆಂದು ತನ್ನ ತಂದೆಯನ್ನು ಕಾಡುವದಕ್ಕೆ ತೊಡಗಿತು. ಆದ್ದರಿಂದ ಆ ಲಾಯರು ಮುದ್ದು ಮಗುವಿನ ಪ್ರೀತಿಯಿಂದ ತನ್ನ ವ್ಯಥೆಯನ್ನೂ ಮರೆತು ಆ ವಾಕ್ಯವನ್ನು ಒಡೆದು ಬಿಡಿಸಿ ಬಿಡಿಸಿ ಉಚ್ಚಾರಣೆ ಮಾಡಲು ಅದಕ್ಕೆ ಕಲಿಸತೊಡಗಿದನು. "God is......" ಎನ್ನುವ ಮೊದಲ ಎರಡು ಶಬ್ದಗಳನ್ನು ಹೇಳಿಕೊಟ್ಟು "Nowhere" ಎನ್ನುವ ಕೊನೆಯ ಶಬ್ದವನ್ನು ಆ ಮಗುವಿಗೆ ಸುಲಭಗೊಳಿಸುವದಕ್ಕಾಗಿ "now here" ಎಂದು ಬಿಡಿಸಿ ಹೇಳಿಕೊಟ್ಟನು. ಆ ಮಗುವು ಆ ವಾಕ್ಯದ ಉಚ್ಚಾರಣೆಯನ್ನು ಹೊಸದಾಗಿ ಕಲಿತ ಉತ್ಸಾಹದಿಂದ "God is now here" "God is now here" ಎಂದು ಪುನಃ ಪುನಃ ಗಟ್ಟಿಯಾಗಿ ಉಚ್ಚರಿಸುತ್ತಾ ಕುಣಿಯ ಹತ್ತಿತು. "God is nowhere" "ದೇವರು ಎಲ್ಲಿಯೂ ಇಲ್ಲ" ಎಂದು ಬರೆದಿದ್ದ ನಾಸ್ತಿಕನಾದ ತಂದೆಗೆ ಅದೇ ವಾಕ್ಯವನ್ನು "God is now here" "ದೇವರು ಈಗಲೇ ಇಲ್ಲಿಯೇ ಇದ್ದಾನೆ" ಎಂದು ಓದಿ ಹೇಳುತ್ತಿರುವ ಮಗುವನ್ನು ಕಂಡು ಆಶ್ಚರ್ಯವೂ ಚಿಂತೆಯೂ ಆಯಿತು. ಆ ನೊಂದ ಸಮಯದಲ್ಲಿ ಅವನ ವಿಚಾರವು ಕೆರಳಿತು. ಅವನ ಆ ನಾಸ್ತಿಕ ಭಾವದಲ್ಲಿಯೇ ಆಸ್ತಿಕ ಭಾವವನ್ನು ಕಂಡುಹಿಡಿದು ಬೋಧಿಸುತ್ತಿದ್ದ ಮಗುವಿನಿಂದ ವಿಚಾರ–ಧ್ಯಾನ ಮಗ್ನನಾದನು.

ಹಾಗೆಯೇ ವೇದಾಂತವು ಯಾವುದನ್ನೂ ತಪ್ಪಾಗಿ ತಿಳಿಯದೆ, ಸದ್ಭಾವನೆಯಿಂದ ಸರಿಯಾಗಿ ತಿಳಿಯಬೇಕೆಂದು ಹೇಳುತ್ತದೆ. "God is nowhere" ದೇವರು ಎಲ್ಲಿಯೂ ಇಲ್ಲ ಎನ್ನುವದನ್ನು "God is nowhere" ದೇವರು ಈಗಲೇ ಇಲ್ಲಿಯೇ ಇದ್ದಾನೆ—ಎಂದು ಓದಿದಂತೆ ಜನರ ಅಪರಾಧಗಳಲ್ಲಿಯೂ ಪಾಪಗಳಲ್ಲಿಯೂ ಅಡಗಿರುವ ದೇವತ್ವವನ್ನೇ ಹುಡುಕಿ ನೋಡಬೇಕು. ಈ ಸದ್ಭಾವನೆಯನ್ನು ಸರಿಯಾಗಿ ಮೈಗೂಡಿಸಿಕೊಂಡರೆ, ಇಡಿಯ ಜಗತ್ತೇ ನಿಮಗೆ ನಂದನವನವಾಗಿಯೂ ಸ್ವರ್ಗಲೋಕವಾಗಿಯೂ ಪರಿಣಾಮಗೊಳ್ಳುತ್ತದೆ.

೧೩೦. ತಪ್ಪುರೀತಿಯ ಬೋಧನೆ

(ವಿಚಾರಹೀನ–ವಿಧಿನಿಷೇಧ ; ಜಪಕಾಲದಲ್ಲಿ ಕಪಿ ಚಿಂತೆ)

ನಿಮ್ಮ ಬೈಬಲ್ಲಿನಲ್ಲಿ 'love your neighbour as yourself.'

"ನಿಮ್ಮ ನೆರೆಯವಳನ್ನು ನಿಮ್ಮಂತೆಯೇ ಪ್ರೀತಿಸಿರಿ" ಎಂಬ ಉಪದೇಶವಿದೆ.

ಆದರೆ ಅಲ್ಲಿ ಅದಕ್ಕೆ ಯಾವ ಕಾರಣವನ್ನೂ ಯುಕ್ತಿ ವಿಚಾರವನ್ನೂ ತತ್ತ್ವಾಧಾರ ವಿವೇಚನೆಯನ್ನೂ ಕೊಟ್ಟಿಲ್ಲ. ನಾವು ಒಂದು ಮಗುವಿಗೆ, ಯಾವ ಕಾರಣವನ್ನೂ ಯುಕ್ತಿಯನ್ನೂ ಹೇಳದೆ, ಸುಮ್ಮನೆ, 'ಹೀಗೆ ಮಾಡು, ಇದನ್ನು ಮಾಡು ; ಇದನ್ನು ಮಾಡಬೇಡ, ಹೀಗೆ ಮಾಡಬೇಡ' ಎಂದು ಇಷ್ಟೇ ಹೇಳಿದರೆ, ವಿವೇಚನಾಶಕ್ತಿಯುಳ್ಳ ಪ್ರಾಣಿಯಲ್ಲಿರುವ (Rational animal) ಹೆಚ್ಚು ಉನ್ನತವಾದ ಸ್ವಭಾವವನ್ನು ದಾಸ್ಯದಲ್ಲಿ ನೂಕುತ್ತೇವೆ, ಎಂದು ಪುಣ್ಯಾತ್ಮ ಹರ್ಬರ್ಟ್‌ಸ್ಪೆನ್ಸರ್ ಹೇಳಿದ್ದಾನೆ. ನ್ಯಾಯಶಾಸ್ತ್ರಜ್ಞರು ಮಾನವನನ್ನು ವಿವೇಚನಾಶಕ್ತಿಯುಳ್ಳ ಪ್ರಾಣಿ ಎಂದು ಕರೆದಿದ್ದಾರೆ. ಒಂದು ಕೆಲಸವನ್ನು ಮಾಡಬೇಕೆಂದು ಒಂದು ಮಗುವಿಗೆ ನಾವು ಅಧಿಕಾರಯುತವಾಗಿ ಹೇಳಿದರೆ, ಅದರಲ್ಲಿರುವ ಯುಕ್ತಾಯುಕ್ತ ಪರಿಜ್ಞಾನವನ್ನು ಹತ್ತಿಕ್ಕುತ್ತೇವೆ, ಅಡಿಯಾಳುಮಾಡುತ್ತೇವೆ. ನಿಮಗೆ ಇಷ್ಟವಾದುದನ್ನು ಒಂದು ಮಗುವು ಮಾಡಬೇಕೆಂದಿದ್ದರೆ, ಅದು ಸ್ವತಂತ್ರವಾಗಿ, ತನ್ನ ಸ್ವಂತ ಅಧಿಕಾರದ ಮೇಲೆ ತನ್ನ ಇಷ್ಟವೆಂಬಂತೆ ಅದು ಮಾಡುವಂತೆ ಮಾಡಬೇಕು. 'ಮಾಡು' 'ಬೇಡ' ಎಂದು ಹೇಳಿದ ಕ್ಷಣವೇ ಅದನ್ನು ಗುಲಾಮಗಿರಿಗೆ ಹಾಕುತ್ತೀರಿ. ಒಮ್ಮೆ ಒಂದು ಮಗುವನ್ನು 'ನಿನ್ನ ಹೆಸರೇನು ?' ಎಂದು ಯಾರೋ ಕೇಳಿದರು; ಅದು ಕೂಡಲೆ "ನನಗೆ ಗೊತ್ತಿಲ್ಲ ; ಆದರೆ ನನ್ನ ತಾಯಿ ನನ್ನನ್ನು ಯಾವಾಗಲೂ 'ಬೇಡ' 'ಬೇಡ' ಎಂದು ಕರೆಯುತ್ತಾಳೆ." ಎಂದಿತು; ನೀವು "ನಿನ್ನ ನೆರೆಯವನನ್ನು ನಿನ್ನಂತೆ ಪ್ರೀತಿಸು" ಎಂದು ಹೇಳುವಾಗ ನೀವು ನಮಗೆ, ಹೇಗೆ ಪ್ರೀತಿಸಬೇಕು ? ಏಕೆ ಪ್ರೀತಿಸಬೇಕು ? ಎಂಬುದನ್ನೂ ಹೇಳಬೇಕು. ಕ್ರಿಸ್ತನ ಈ ಉಪದೇಶವನ್ನು ಗಿಳಿಯಂತೆ ನುಡಿಯುತ್ತಿರುವ ಕ್ರೈಸ್ತ ಪಾದ್ರಿಗಳೂ ಪುರೋಹಿತರೂ 'ಡಾಕ್ಟರ್ಸ್ ಆಫ್ ಡಿವಿನಿಟಿ' ಪೂಜ್ಯಗುರುಗಳೂ ತಮ್ಮ ಹೃದಯದ ತಳದಿಂದಲೂ ಹಿಂದೂಗಳನ್ನು ದ್ವೇಷಿಸುತ್ತಿರುವಾಗ, ಅವರ ಉಪದೇಶದಿಂದ ಇತರರು ತಮ್ಮ ನೆರೆಯವರನ್ನು ತಮ್ಮಂತೆ ಪ್ರೀತಿಸುವುದು ಹೇಗೆ ಸಾಧ್ಯ ? ಜಗತ್ತಿನಲ್ಲಿ ಈ ವಿಧಿ ನಿಷೇಧಗಳನ್ನು ಸಂದೇಹವಿಲ್ಲದಂತೆ ಅನವಚ್ಛಿನ್ನವಾಗಿ ಸಹಸ್ರಾರು ವರ್ಷಗಳಿಂದ ಬೋಧಿಸುತ್ತಲೇ ಇದೆ ; ಆದರೂ ಈ ಪ್ರಪಂಚವು ಎಂದಿನಂತೆ ಒಂದೇ ರೀತಿಯಾಗಿದೆ. ಕೃಷ್ಣ, ಕನ್‌ಫ್ಯೂಷಿಯಸ್, ಜೊರೋಸ್ಟರ್ ಮೊದಲಾದವರೆಲ್ಲಾ ಉಪದೇಶಿಸಿದರು ; ಆದರೂ ಜಗತ್ತಿನಲ್ಲಿ ಮೊದಲಿನಂತೆಯೇ ಪಾಪಗಳಿವೆ. ಇವತ್ತು ಈ ಪ್ರಪಂಚವು ಹೆಚ್ಚು ಸುಖವಾಗಿದೆಯೆ ? ಪ್ರಪಂಚವು ನಾಯಿಯ ಬಾಲದಂತೆ ಇದೆಯೆಂದು ಹೇಳಿದ್ದಾರೆ. ನಾಯಿಯ ಬಾಲವನ್ನು ಒಂದು ನೇರವಾದ ನಳಿಕೆಯಲ್ಲಿ ಹನ್ನೆರಡು ವರ್ಷಗಳು ಹಾಕಿಟ್ಟಿದ್ದರೂ ಸಹ ಅದನ್ನು ಹೊರಗೆ ತೆಗೆದ ಕೂಡಲೇ ಅದು ಹಿಂದಿನಂತೆಯೇ ಸುರುಳಿ ಸುತ್ತಿಕೊಳ್ಳುತ್ತದೆ. ಪ್ರಪಂಚ ಸ್ವಭಾವದ ಹಣೆಯಬರಹವೂ ಹೀಗೆಯೇ

ಇದೆ. ನಾಯಿಯ ಬಾಲವನ್ನು ನೆಟ್ಟಗೆ ಮಾಡುವದಕ್ಕೆ ಪ್ರಯತ್ನಮಾಡಿ; ಅದನ್ನು ಕೈಬಿಟ್ಟಕೂಡಲೇ ಅದು ಹಿಂದಿನಂತೆಯೇ ವಕ್ರವಾಗುತ್ತದೆ. ಪ್ರಪಂಚಸ್ಥಿತಿಯೂ ಹೀಗೆಯೇ. ಈ ಸಂದರ್ಭಕ್ಕೆ ಸರಿಯಾಗಿ ರಾಮನಿಗೆ ಒಂದು ಕಥೆಯು ನೆನಪಾಗಿದೆ; ಒಬ್ಬ ಕಾಮುಕ ತರುಣನು ಒಮ್ಮೆ ಒಬ್ಬ ಕಪಟ ಸಾಧುವಿನಲ್ಲಿ ಹೋಗಿ, ತರುಣಿಯೊಬ್ಬಳ ಪ್ರೇಮವನ್ನು ತನ್ನ ಕಡೆಗೆ ಸೆಳೆಯುವಂಥ (ಶಕ್ತಿಯುಳ್ಳ) ಸಾಧನೆಯನ್ನು ತನಗೆ ಉಪದೇಶಮಾಡಬೇಕೆಂದು ಬೇಡಿದನು. ಆ ಆಭಾಸ ಸಾಧುವು ಹೇಳಿದ್ದೇನೆಂದರೆ, "ನಿನಗೊಂದು ಮಂತ್ರವನ್ನು ಉಪದೇಶಿಸುತ್ತೇನೆ. ಅದನ್ನು ನಿರಂತರವಾಗಿ ಜಪಿಸುತ್ತಿರು; ಆ ಹುಡುಗಿಯು ನಿನ್ನ ಕಡೆಗೆ ಆಕರ್ಷಿತಳಾಗುತ್ತಾಳೆ. ಆದರೆ, ನೀನು ಜಪಮಾಡುವಾಗ ಕಪಿಯ ನೆನಪು ನಿನ್ನ ಮನಸ್ಸಿನಲ್ಲಿ ಬರಬಾರದು" ಆ ತರುಣನು ಬಹಳ ಸಂತೋಷ–ಉತ್ಸಾಹಗಳಿಂದ ಆ ಮಂತ್ರವನ್ನು ಜಪಿಸುವದಕ್ಕೆ ತೊಡಗಿದನು. ಆದರೆ, ಆಹಾ! ದುರ್ದೈವದಿಂದಲೋ ಎನ್ನುವಂತೆ ಜಪಮಾಡುವಾಗಲೆಲ್ಲಾ ಕಪಿಯ ನೆನವು ಮನಸ್ಸಿನಲ್ಲಿ ಎಡೆಬಿಡದೆ ಬರುತ್ತಿತ್ತು. ಏನು ಮಾಡಿದರೂ ಅದನ್ನು ತಪ್ಪಿಸುವದು ಸಾಧ್ಯವಿಲ್ಲದೆ, ಪುನಃ ಆ ಗುರುಗಳಲ್ಲಿ ಬಂದು ಹೇಳಿಕೊಂಡನು; "ಸ್ವಾಮಿ, ನೀವು ನನಗೆ, 'ಮಂಗನನ್ನು ನೆನೆಯಬೇಡ' ಎಂದು ಹೇಳದೇ ಇದ್ದಿದ್ದರೆ, ನನ್ನ ಜೀವಮಾನದಲ್ಲಿಯೇ ಎಂದೂ ನಾನದನ್ನು ನೆನೆಸುತ್ತಿರಲಿಲ್ಲ. ನೀವಾಗಿಯೇ ನಿಷೇಧಾಜ್ಞೆಯಿಂದ ಒಂದು ವಿಷಯವನ್ನು ನನ್ನ ಮನಸ್ಸಿನಲ್ಲಿ ಚುಚ್ಚಿ ಹೊಗಿಸಿದಂತಾಯಿತು."

೧೩೧. ಸಿದ್ಧಿಗಳು—ಅತೀಂದ್ರಿಯ ಶಕ್ತಿಗಳು
ಇತರರ ಆಲೋಚನಾ ಭಾವನೆಗಳನ್ನು ಅರಿಯುವ ಶಕ್ತಿ
(ಮಂತ್ರವಾದಿ)

ಒಂದೊಂದು ವೇಳೆ ವಿಜ್ಞಾನಿಯೂ (Scientist), ಪ್ರಯೋಗವಾದಿ ತತ್ತ್ವಜ್ಞಾನಿಯೂ (Empirical philosopher), ಹಾಗೆಯೇ ಪ್ರೇತ ವಿಜ್ಞಾನಿಯೂ (Spiritualist) ನಿಜವಾದ ಪರಮಾತ್ಮ ಜ್ಞಾನವನ್ನೂ ಪಡೆದಿರಬಹುದು. ಅವರವರ ವಿಶಿಷ್ಟ ವಿಜ್ಞಾನಗಳು ಅವರ ನಿಜವಾದ ಪರಮಾತ್ಮ ವಿಜ್ಞಾನಕ್ಕೆ, ರಾಮನ ಗಣಿತ ಶಾಸ್ತ್ರ ವಿಜ್ಞಾನವು ಅವನ ವೇದಾಂತಕ್ಕೆ ಸಂಬಂಧಪಟ್ಟಿರುವಂತೆಯೇ ಸಂಬಂಧಪಟ್ಟಿರುತ್ತವೆ. ರಾಮನು ಲಾಹೋರಿನಲ್ಲಿ ಗಣಿತ ಶಾಸ್ತ್ರದ ಪ್ರಾಧ್ಯಾಪಕ (ಮ್ಯಾಥಮ್ಯಾಟಿಕ್ಸ್ ಪ್ರೊಫೆಸರ್) ನಾಗಿದ್ದನು. ಆದರೆ ಅವನೀಗ ಉಪದೇಶಿಸುತ್ತಿರುವ ವೇದಾಂತಕ್ಕೂ ಅವನ ಗಣಿತ ಶಾಸ್ತ್ರದ ಪರಿಣತಿಗೂ ಏನೂ ಸಂಬಂಧವಿಲ್ಲ. ನಾವು ಎರಡನ್ನೂ ಕಲಬೆರಿಕೆ ಮಾಡಿ ಗೊಂದಲದಲ್ಲಿ ಬೀಳಬಾರದು.

ಭಾರತ ದೇಶದಲ್ಲಿ ರಾಮನ ಆಪ್ತ ಮಿತ್ರನೊಬ್ಬ ಪ್ರೇತ ವಿಜ್ಞಾನಿ (Spiritualist) ಆಗಿದ್ದನು. ಅವನ ಕಣ್ಣುಗಳನ್ನು ಬಲವಾಗಿ ಕಟ್ಟಿ, ಅವನನ್ನು ಬೇರೊಂದು ಸ್ಥಳಕ್ಕೆ ಕರೆದು

ಕೊಂಡು ಹೋಗಿ ಅವನೆದುರಿನಲ್ಲಿ ಒಂದು ಗಣಿತ ಶಾಸ್ತ್ರದ ಪುಸ್ತಕವನ್ನಿಟ್ಟರು. ಈ ಪುಸ್ತಕವನ್ನು ಅವನೆಂದೂ ನೋಡಿರಲಿಲ್ಲ. ಆದರೆ ಕಣ್ಣುಗಳನ್ನು ಕಟ್ಟಿದ ಈ ಸ್ಥಿತಿಯಲ್ಲಿಯೇ ಅವನು ಆ ಪುಸ್ತಕವನ್ನು ಓದಬಲ್ಲವನಾದ. ಆದರೆ ಆ ಪುಸ್ತಕದಲ್ಲಿ ಅವನಿಗೆ ತಿಳಿಯದಿದ್ದ ಗಣಿತ ಶಾಸ್ತ್ರದ ಅನೇಕ ಸಾಂಕೇತಿಕ ಚಿಹ್ನೆಗಳಿದ್ದುವು. ಆದ್ದರಿಂದ ಅವನು ಒಂದು ಖಾಲಿ ಕಾಗದವನ್ನು ತರಿಸಿಕೊಂಡು ಆ ಪುಸ್ತಕದಲ್ಲಿದ್ದ ಆ ಎಲ್ಲವನ್ನೂ ಬರೆದಿಟ್ಟನು. ಆ ಗುರುತುಗಳ ಸರಿಯಾದ ಹೆಸರುಗಳನ್ನು ಅವನು ಹೇಳಲಾರದವನಾಗಿದ್ದನಾದ್ದರಿಂದ ಅವುಗಳನ್ನೇ ನಕಲು ಮಾಡಿ ಇಟ್ಟನು. ಅವನು ನಿಮ್ಮ ಮನಸ್ಸಿನಲ್ಲಿ ಇರುವುದನ್ನೆಲ್ಲಾ ಹೇಳಬಲ್ಲವನಾಗಿದ್ದನು; ಅವನಿಗೆ ತಿಳಿಯದಂತೆ ನೀವು ಪ್ರತ್ಯೇಕವಾಗಿ ನಿಮ್ಮ ಕೈಯಿಂದಲೇ ಏನನ್ನು ಬರೆದಿಟ್ಟರೂ ಅವನು ಅದನ್ನು ಬರೆದಿಡುತ್ತಿದ್ದನು. ಇವನೊಬ್ಬ ಮಂತ್ರವಾದಿಯು ಅಥವಾ ಪ್ರೇತ ವಿಜ್ಞಾನಿ (Spiritualist) ಆಗಿದ್ದನು. ಆದರೆ ಇವನು ಪವಿತ್ರ ಮನುಷ್ಯನಾಗಿರಲಿಲ್ಲ; ಸಂತನಾಗಿರಲಿಲ್ಲ. ಭಕ್ತನೂ ತತ್ತ್ವಜ್ಞಾನಿಯೂ ಆಗಿರಲಿಲ್ಲ; ಪರಮಾರ್ಥ ಮಾರ್ಗದಿಂದ ಅವನು ಬಹಳ ದೂರನಾಗಿದ್ದ. ಅವನಲ್ಲಿ ಎಳ್ಳಷ್ಟೂ ಅದರ ಸಂಸ್ಕಾರವಿರಲಿಲ್ಲ. ಅವನು ಕೇವಲ ಲೌಕಿಕ ಮನುಷ್ಯನಾಗಿದ್ದನು; ಸಂಸಾರಿಯಾಗಿದ್ದನು. ಅವನು ಪವಿತ್ರನಾಗಿರಲಿಲ್ಲ. ಪ್ರೇತ ಸಂಬಂಧವಾದ ವ್ಯವಹಾರ ಜ್ಞಾನವೂ ಒಂದು ವಿಜ್ಞಾನವೆಂದು ಪರಿಗಣಿಸಲ್ಪಟ್ಟಿದೆ. ಅಷ್ಟರ ಮಟ್ಟಿಗೆ ಅದನ್ನು ಗೌರವಿಸಬಹುದು. ಆದರೆ ಎಲ್ಲಾ ಲೋಭ ಮೋಹಗಳನ್ನೂ ನೀವು ಮೆಟ್ಟಿ ಮೇಲೇರುವಂತೆ ಮಾಡಬಲ್ಲ ನಿಜ ಸುಖಕ್ಕೂ ಪೂರ್ಣಾನಂದಕ್ಕೂ ಆ ಕ್ಷುದ್ರ ವಿಜ್ಞಾನಕ್ಕೂ ಯಾವ ಸಂಬಂಧವೂ ಇಲ್ಲ. ಒಂದನ್ನು ಇನ್ನೊಂದನ್ನಾಗಿ ತಪ್ಪು ತಿಳಿಯಬಾರದು.

೧೩೨. ದೀರ್ಘಕಾಲ ಪ್ರಾಣಸ್ತಂಭನ
(ಖೇಚರೀ ಮುದ್ರಾ)

ಇಂಡಿಯಾದಲ್ಲಿ ಒಬ್ಬ ಮನುಷ್ಯನು ಆರು ತಿಂಗಳ ಕಾಲ, ನೋಡತಕ್ಕವರಿಗೆ ಎಲ್ಲಾ ಬಗೆಯಿಂದಲೂ ಸತ್ತವನಾಗಿಯೇ ಇದ್ದನೆಂಬುದು ನಮಗೆ ಗೊತ್ತಿದೆ. ಹೀಗೆ ತಾತ್ಕಾಲಿಕವಾಗಿ ಪ್ರಾಣ ಶಕ್ತಿಯ ವ್ಯಾಪಾರವನ್ನು ತಡೆದು ನಿಲ್ಲಿಸುವುದನ್ನು 'ಖೇಚರೀಮುದ್ರಾ' ಎನ್ನುತ್ತಾರೆ. ಹಠಯೋಗ ಶಾಸ್ತ್ರದಲ್ಲಿ ಈ ಸಾಧನ ಕ್ರಮದ ಪೂರ್ಣ ವಿವರಣೆಯನ್ನು ಕೊಟ್ಟಿದೆ. ಅವನ ದೇಹದಲ್ಲಿ ಜೀವವಿದೆಯೆಂಬ ಯಾವ ಲಕ್ಷಣವೂ ಚಿಹ್ನೆಯೂ ಇರಲಿಲ್ಲ. ಆ ದೇಹದಲ್ಲಿ ಉಸಿರಾಟವಿರಲಿಲ್ಲ, ರಕ್ತ ಸಂಚಾರವಿರಲಿಲ್ಲ, ನಾಡೀ ಸ್ಪಂದನವಿರಲಿಲ್ಲ. ಹೀಗಿದ್ದರೂ ಆ ದೇಹವು ಕೆಡಲಿಲ್ಲ; ಆರು ತಿಂಗಳ ಮೇಲೆ ಅದರಲ್ಲಿ ಪುನಃ ಪ್ರಾಣ ಸಂಚಾರವಾಯಿತು; ಜೀವದ ಎಲ್ಲಾ ವ್ಯಾಪಾರವೂ ನಡೆಯಿತು. ಈ ಮನುಷ್ಯನು ಆಶ್ಚರ್ಯಗಳಲ್ಲೆಲ್ಲಾ ಆಶ್ಚರ್ಯ ಪುರುಷನೆಂದು ಯಾರಾದರೂ ಎಣಿಸಬಹುದು. ಇವನು ಇನ್ನೊಬ್ಬ ಕ್ರಿಸ್ತನಾಗಿದ್ದನು; ಕ್ರಿಸ್ತನಂತೆ ಮೂರು ದಿನಗಳ ಮೇಲೆ ಬದುಕದೆ ಆರು ತಿಂಗಳುಗಳ ಮೇಲೆ ಪುನಃ ಜೀವಂತನಾಗಿದ್ದನು. ಆದರೆ ಈ ಮನುಷ್ಯನು

ಸುಖಿಯಾಗಿರುವದಕ್ಕೂ ಮುಕ್ತನಾಗಿರುವದಕ್ಕೂ ಬಹಳ ದೂರವಾಗಿದ್ದನು. ಅವನು ಮಾಡಿದ ಅಪರಾಧಗಳನ್ನೂ ಪಾಪಗಳನ್ನೂ ರಾಮನು ಇಲ್ಲಿ ತಿಳಿಸಬೇಕಾಗಿಲ್ಲ. ಯಾವ ರಾಜನ ಆಸ್ಥಾನದಲ್ಲಿ ಈ ಮನುಷ್ಯನಿದ್ದು ಈ ಸಾಧನವನ್ನು ಮಾಡಿ ಪ್ರದರ್ಶನ ನಡೆಸಿದನೋ ಆ ರಾಜನು ಇವನ ಅಪರಾಧಗಳಿಗಾಗಿ ಇವನನ್ನು ತನ್ನ ಸಂಸ್ಥಾನದಿಂದಲೇ ಹೊರಗೋಡಿಸಿದನು.

೧೩೩. ಅಘಿಮಾ

(ನೀರಿನ ಮೇಲೆ ನಡೆಯುವುದು)

ನೀರಿನ ಮೇಲೆ ನಡೆಯುತ್ತಿದ್ದ ಇನ್ನೊಬ್ಬ ಮನುಷ್ಯನಿದ್ದನು. ಒಬ್ಬ ನಿಜವಾದ ಸತ್ಪುರುಷನು ಇದನ್ನು ತಿಳಿದು ನಕ್ಕು, ಈ ಸಿದ್ಧಿಯನ್ನು ಪಡೆಯಲು ಎಷ್ಟು ಕಾಲವು ಹಿಡಿಯಿತೆಂದು ಅವನನ್ನು ಕೇಳಿದನು. ಹದಿನೇಳು ವರ್ಷಗಳು ಬೇಕಾಯಿತೆಂದು ಆ ಯೋಗಿಯು ನುಡಿದನು. ಆ ಸಂತನು ಬಹಳ ವಿಷಾದದಿಂದ "ನಾವು ಎರಡು ಆಣೆಗಳನ್ನು ಕೊಟ್ಟರೆ ಅಂಬಿಗನು ದೋಣಿಯನ್ನು ನಡೆಸಿ ನದಿಯನ್ನು ದಾಟಿಸುತ್ತಾನೆ. ಅಯ್ಯೋ ! ಹದಿನೇಳು ವರ್ಷಗಳು ಉಪವಾಸ–ವನವಾಸಗಳಿಂದ ಕಷ್ಟಪಟ್ಟು ತಪಸ್ಸು ಮಾಡಿ, ಕೇವಲ ಎರಡಾಣೆ ಬೆಲೆಯ ಸಿದ್ಧಿಯನ್ನು ಸಂಪಾದಿಸಿದಂತಾಯಿತಲ್ಲ ; ಎಷ್ಟು ಶೋಚನೀಯ !" ಎಂದು ಉದ್ಗಾರ ಮಾಡಿದನು.

ವ್ಯಕ್ತಿಯು ಸಂಪಾದಿಸಬಹುದಾದ ಎಲ್ಲಾ ಶಕ್ತಿಗಳಿಗೂ ಮಿಂತಿಯಿದೆ. ಪ್ರಾಪಂಚಿಕವಾದ ಎಲ್ಲಾ ಆಸ್ತಿ–ಪಾಸ್ತಿಗಳೂ ಸಂಪತ್ತೂ ಬಂಧಿಸುವಷ್ಟೇ ಈ ಶಕ್ತಿಗಳೂ ಸಿದ್ಧಿಗಳೂ ಬಂಧಿಸುತ್ತವೆ. ಕಬ್ಬಿಣದ ಸರಪಳಿಯಾದರೇನು ಬಂಗಾರದ ಸರಪಳಿಯಾದರೇನು, ಸರಪಳಿಯು ಸರಪಳಿಯೇ. ಬಂಧಿಸುವದರಲ್ಲಿ ಎರಡೂ ಸಮಾನವೇ.

ವಿಶೇಷ ಶಕ್ತಿಗಳೇ ಒಬ್ಬ ಮನುಷ್ಯನನ್ನು ವಿಶೇಷ ಪವಿತ್ರನನ್ನಾಗಿ ಮಾಡುವದಾಗಿದ್ದರೆ ನಾಯಿಗಳು ಪವಿತ್ರ ಪ್ರಾಣಿಗಳೆನಿಸಬಹುದಾಗಿತ್ತು. ಏಕೆಂದರೆ ಅವುಗಳಿಗೆ ವಾಸನಾ ಗ್ರಹಣಶಕ್ತಿಯು ವಿಶೇಷವಾಗಿದೆ. ದೂರದಲ್ಲಿ ಮರೆಯಲ್ಲಿರುವ ಜಿಂಕೆಗಳನ್ನಾದರೂ ಅವು ವಾಸನೆಯಿಂದಲೇ ಕಂಡುಹಿಡಿಯುತ್ತವೆ. ಆ ಶಕ್ತಿಯು ಮನುಷ್ಯನಿಗಿಲ್ಲ. ಆದ್ದರಿಂದ ಅವು ಹೆಚ್ಚು ಪವಿತ್ರವಾದವುಗಳೇ ಸರಿ ಎನ್ನಬಹುದೆ ?

೧೩೪. ಸಿದ್ಧಿಗಳು

(ರಾಜನಿರ್ಮಾಪಕ ಫಕೀರ)

ಯಾವನನ್ನಾದರೂ ರಾಜನನ್ನಾಗಿ ಮಾಡಬಲ್ಲ ಒಬ್ಬ ಫಕೀರನಿದ್ದ. ಅವನು ಈ ಶಕ್ತಿಯನ್ನು ಹೇಗೆ ಸಂಪಾದಿಸಿದ್ದನೆಂದು ಅವನನ್ನು ಕೇಳಿದರೆ, ಅನೇಕ ದಿನಗಳು ಉಪವಾಸಮಾಡಿ ಅನಂತರ ದನಗಳ ಸಗಣಿಯನ್ನು ತಿನ್ನುತ್ತಿದ್ದುದಾಗಿ ಹೇಳಿದನು. ಅವನು ಯಾವದೋ ರೀತಿಯಲ್ಲಿ ಜೀವನವನ್ನು ನಡೆಸಿ, ಸಾಧನ ಮಾಡಿ ಈ ವಿಶೇಷ ಶಕ್ತಿಯನ್ನು

ಪಡೆದಿದ್ದನು. ಒಬ್ಬ ವಿಚಾರಶೀಲ ಮನುಷ್ಯ ಅವನಿಗೆ ಹೇಳಿದ: "ನೀನು ಯಾರಿಗಾದರೂ ರಾಜಪದವಿಯನ್ನೂ ರಾಜಭೋಗವನ್ನೂ ಕೊಡಬಲ್ಲೆ; ಆದರೆ ನಿನಗೆ ಮಾತ್ರ ಆಕಳ ಸಗಣಿಯೇ ಗತಿಯಾಯಿತು" ಎಂದನು. ಹೀಗೆ ಭಾರತೀಯರು ವಿಶೇಷ ಶಕ್ತಿಯುಳ್ಳವರನ್ನು ಗೌರವಿಸುತ್ತಾರೆ; ಅಷ್ಟೆ. ಆದರೆ ಎಲ್ಲಾ ಆಶೆಗಳನ್ನೂ ಕೊರತೆಗಳನ್ನೂ ಮೀರುವ ಶಕ್ತಿಯು ನಮಗೆ ಆತ್ಮಜ್ಞಾನದಿಂದಲೇ ಬರುತ್ತದೆಯೆಂಬುದನ್ನು ಅವರು ಬಲ್ಲರು.

೧೩೫. ಜಡಸಮಾಧಿ

(ಹಠಯೋಗಿ)

ಇಂಡಿಯಾ ದೇಶದಲ್ಲಿ ಒಬ್ಬ ರಾಜನಲ್ಲಿಗೆ ಒಬ್ಬ ಹಠಯೋಗಿಯು ಬಂದನು. ತನ್ನ ವಿಶೇಷ ಸಿದ್ಧಿಯನ್ನು ತೋರಿಸುವದಕ್ಕಾಗಿ ಅವನು ದೀರ್ಘಕಾಲ ಸಮಾಧಿ ಸ್ಥಿತಿಯನ್ನು ತಂದುಕೊಂಡನು. ಅವನ ದೇಹದಲ್ಲಿ ಪ್ರಾಣವಿರುವದರ ಚಿಹ್ನೆಯೇ ತೋರುತ್ತಿರಲಿಲ್ಲ. ಅವನ ದೇಹವನ್ನು ಮಳೆಗಾಳಿಗಳಿಂದ ರಕ್ಷಣೆ ಮಾಡುವದಕ್ಕಾಗಿ ಜನರು ಅವನ ದೇಹದ ಮೇಲೆ ಒಂದು ಕುಟೀರವನ್ನು ಕಟ್ಟಿದರು. ಒಂದು ರಾತ್ರಿ ಭಯಂಕರವಾದ ಬಿರುಗಾಳಿ ಬೀಸಿದ್ದರಿಂದ ಯೋಗಿಯ ತಲೆಯ ಮೇಲೆ ಇಟ್ಟಿಗೆಗಳು ಬಿದ್ದು ಪುನಃ ಚೇತನಗೊಂಡನು. ಜೀವ ಬಂದು ಎಚ್ಚರವಾದ ಕೂಡಲೇ ಅವನಾಡಿದ ಮೊದಲ ಮಾತುಗಳೆಂದರೆ, "ಓ ರಾಜ! ನನ್ನ ಸಿದ್ಧಿಯ ಪ್ರದರ್ಶನಕ್ಕಾಗಿ ನೀನು ನನಗೆ ಒಂದು ಕುದುರೆಯನ್ನು ಬಹುಮಾನವಾಗಿ ಕೊಡಬೇಕು. ಒಂದು ಕುದುರೆ, ಒಂದು ಕುದುರೆ, ರಾಜ!" ಅವನು ಹೀಗೆ ಕೂಗಲು ತೊಡಗಿದನು. ಹೀಗೆ, ಇಂಥಾ ಜನರು ಆ ಸಮಾಧಿ ಸ್ಥಿತಿಯಲ್ಲಿರುವವರೆಗೂ ಚೆನ್ನಾಗಿರುತ್ತಾರೆ; ಸುಖವಾಗಿರುತ್ತಾರೆ. ಆದರೆ ಅವರು ಎಚ್ಚರಗೊಂಡು ಸಾಮಾನ್ಯ ಸ್ಥಿತಿಗೆ ಬಂದ ಕೂಡಲೇ ಎಲ್ಲರಂತೆ ಸಂಸಾರಿಗಳೂ ದುಃಖಿಗಳೂ ಆಗುತ್ತಾರೆ—ಎಂದು ಭಾರತೀಯರು ಬಲ್ಲರು.

ಒಂದು ಕಠಾರಿಯನ್ನೋ ಖಡ್ಗವನ್ನೋ ಅಥವಾ ಒಂದು ದೊಡ್ಡ ಚಾಕುವನ್ನೋ ಬಾಯಿಯಿಂದ ನುಂಗುವದು, ಚರ್ಮದ ಮೂಲಕ ಸೂಜಿಗಳನ್ನು ಎಳೆಯುವದು ಇನ್ನೂ ಅನೇಕ ಬಗೆಯ ಆಶ್ಚರ್ಯ ಚರ್ಯೆಗಳನ್ನು ತೋರಿಸುವದು ಇಂಡಿಯಾದಲ್ಲಿ ಅತಿಸಾಮಾನ್ಯವಾಗಿವೆ.

Again, keeping the mind in a state of trance for three or four hours is not a state of trance necessarily brought about by divine wisdom.

ಮತ್ತೇನೆಂದರೆ, ಮನಸ್ಸನ್ನು ಮೂರು ನಾಲ್ಕು ಗಂಟೆಗಳ ಕಾಲ ಸಮಾಧಿಸ್ಥಿತಿಯಲ್ಲಿ ಇಟ್ಟಿರುವದು, ದಿವ್ಯವಾದ ಆತ್ಮಜ್ಞಾನದಿಂದ ಅವಶ್ಯವಾಗಿ ತರಲ್ಪಟ್ಟ ಸಮಾಧಿ ಸ್ಥಿತಿ (ತನ್ಮಯತಾವಸ್ಥೆ) ಏನಲ್ಲ. ಇಂಡಿಯಾದಲ್ಲಿ ಸಾವಿರಾರು ಜನರು ಅಂಥಾ ಸಮಾಧಿಯನ್ನು

ಅಭ್ಯಾಸಮಾಡುತ್ತಾರೆ. ಆದರೆ ಅನೇಕ ಸಂದರ್ಭಗಳಲ್ಲಿ ಅದು ಕೇವಲ "ಪ್ರೊಮೆಥಿಯಸ್ಸನು ಸ್ವರ್ಗದಿಂದ ಬೆಂಕಿಯನ್ನು ಕದ್ದು ತಂದಂತೆ" ವಂಚನೆಯಾಗಿರುತ್ತದೆ. ಸತ್ಯವನ್ನು ಮರೆಮಾಡಿರುವ ಪರದೆಯನ್ನು–ಆವರಣವನ್ನು–ಶಾಶ್ವತವಾಗಿ ತೆಗೆದೊಗೆಯದೆ, ತಾತ್ಕಾಲಿಕವಾಗಿ ಮಾತ್ರ ಸ್ವಲ್ಪ ಸರಿಸಿದಂತೆ ಆಗುತ್ತದೆ–ಅದು.

೧೩೬. ಅರ್ಥವಿಲ್ಲದ ಸಾಧನೆ

(ಡಾಕ್ಟರನ ಭ್ರಾಂತಿಯ ಚಿಕಿತ್ಸೆ)

ಜಾಣ್ಮೆಯಿಂದ ಒಂದು ವಿಚಾರವನ್ನು ಸಾಧನೆಯಲ್ಲಿ ತರುವದೇ ಒಂದು ವಿಷಯ; ಆದರೆ ಅದರ ಮೂಲಭೂತವಾದ ಅರ್ಥವನ್ನು ಗ್ರಹಿಸುವುದೇ ಬೇರೊಂದು ವಿಷಯ. ಕೆಲವು ಸಾಮಾನ್ಯ ನಿಯಮಗಳನ್ನು ಪಾಲಿಸುವದರಿಂದ ಒಂದುವೇಳೆ ಇವತ್ತು ಒಂದು ರಾಷ್ಟ್ರವು ಅಭಿವೃದ್ಧಿಯನ್ನು ಹೊಂದುತ್ತಿದ್ದರೂ ಆ ನಿಯಮಗಳಿಗೆ ಆಧಾರವಾದ ತಾತ್ತ್ವಿಕ ವಿಚಾರವಾವುದು ಎಂಬುದನ್ನು ಸ್ಪಷ್ಟವಾಗಿ ತಿಳಿಯದಿದ್ದರೆ, ಆ ರಾಷ್ಟ್ರವು ಅವನತಿಯನ್ನು ಪಡೆಯುವುದಕ್ಕೆ ಅನೇಕ ಅಪಾಯಗಳಿವೆ. ಒಂದು ರಾಸಾಯನಿಕ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಬಲ್ಲ ಒಬ್ಬ ಕೂಲಿಯವನು ರಸಾಯನಶಾಸ್ತ್ರಜ್ಞನಾಗಲಾರ; ಏಕೆಂದರೆ, ಅವನ ಕಾರ್ಯವು ಶಾಸ್ತ್ರೀಯ ವಿಚಾರದ ಸಹಾಯವನ್ನು ಪಡೆದಿರುವದಿಲ್ಲ. ಆವಿಯ ಇಂಜಿನ್ ಅನ್ನು ಯಶಸ್ವಿಯಾಗಿ ನಡೆಸಬಲ್ಲ ಒಬ್ಬ ಬೆಂಕಿಯನ್ನುರಿಸುವ ಮನುಷ್ಯನು ಇಂಜಿನಿಯರ್ ಆಗಲಾರ; ಏಕೆಂದರೆ, ಅವನ ಕೆಲಸವು ಕೇವಲ ಯಾಂತ್ರಿಕವಾದುದು. ನೋವಿನ ಭಾಗವನ್ನು ಒಂದುವಾರ ಪೂರಾ ಲಿನನ್ ಪಟ್ಟಿಗಳಿಂದ ಕಟ್ಟಿಟ್ಟು, ಒಬ್ಬ ಡಾಕ್ಟರ್, ನಿತ್ಯವೂ ಅದನ್ನು ಕತ್ತಿಯಿಂದ ಸ್ಪರ್ಶಮಾಡಿ ಗಾಯಗಳನ್ನು ಗುಣಪಡಿಸುತ್ತಿದ್ದ–ಎಂಬ ವಿಚಾರವನ್ನು ಕೇಳಿದ್ದೇವೆ. ಪಟ್ಟಿಗಳಿಂದ ಗಾಯವನ್ನು ಮುಚ್ಚಿ ಹೊರಗಿನ ಗಾಳಿಗೆ ತೆರೆದಿಡದೆ ಇದ್ದುದರಿಂದಲೇ ಗಾಯವು ಮಾಯುತ್ತಿತ್ತು. ಆದರೆ, ಆ ವಿಚತ್ರವಾದ ಚಿಕಿತ್ಸಕ ಗುಣವು ಆ ಕತ್ತಿಯ ಸ್ಪರ್ಶದಲ್ಲಿ ಇದೆಯೆಂದು ಆ ವೈದ್ಯನು, ಹೇಳಿಕೊಳ್ಳುತ್ತಿದ್ದನು. ಅವನ ರೋಗಿಗಳೂ ಹಾಗೆಯೇ ನಂಬಿದ್ದರು. ಆದರೆ ಬ್ಯಾಂಡೇಜುಗಳಿಂದ ಮುಚ್ಚಿಡುವದು ಮಾತ್ರ ಸಾಲದೇ ಬೇರೆ ಚಿಕಿತ್ಸೆಯೂ ಅವಶ್ಯವಿದ್ದ ಅನೇಕ ಗಾಯಗಳಿಗೆ ಈ ಭ್ರಾಂತಿಯ ವಿಚಾರದಿಂದ ಯಾವ ಗುಣವೂ ಉಂಟಾಗದೆ, ಚಿಕಿತ್ಸೆಯಲ್ಲಿ ಸೋಲುಗಳ ಮೇಲೆ ಸೋಲುಗಳು ಉಂಟಾದವು. ಆದ್ದರಿಂದ, ಸರಿಯಾದ ಬೋಧೆಯೂ ಸರಿಯಾದ ಸಾಧನೆಯೂ ಒಂದಕ್ಕೊಂದು ಸಹಾಯವಾಗಿ ಜೊತೆ ಜೊತೆಗೇ ಸಾಗಬೇಕಾದುದು ಅತ್ಯಂತ ಅಗತ್ಯವಾದುದು. ರಾಮನು ಜಪಾನನ್ನು ತನ್ನ ದೇಶವನ್ನಾಗಿಯೂ ಅದರ ಜನತೆಯನ್ನು ತನ್ನ ದೇಶದ ಜನತೆಯನ್ನಾಗಿಯೂ ಪರಿಗಣಿಸುತ್ತಾನೆ. ಆದಿಯಲ್ಲಿ ನಿಮ್ಮ ಪೂರ್ವಜರು ಇಂಡಿಯಾದಿಂದ ವಲಸೆ ಬಂದವರೆಂದು ಯುಕ್ತಿಯುಕ್ತವಾದ ವಿಚಾರಗಳ ಆಧಾರದಿಂದ ರಾಮನು ತೋರಿಸಿಕೊಡಬಲ್ಲನು.

೧೩೭. ಗೆಲುವಿನ ಗುಟ್ಟು

(ಅಕ್ಬರ್ ಮತ್ತು ಇಬ್ಬರು ರಜಪೂತ ವೀರರು)

ಇಂಡಿಯಾದ ಮಹಾ ಮೊಗಲ್ ಚಕ್ರವರ್ತಿಯಾದ ಅಕ್ಬರನಲ್ಲಿ ಉದ್ಯೋಗವನ್ನು ಬಯಸಿ ಹೋದ, ರಜಪುತ್ ಇಬ್ಬರ ಕಥೆಯೊಂದಿದೆ. ಅಕ್ಬರನಲ್ಲಿ ಅವರು ಉದ್ಯೋಗವನ್ನು ಕೇಳಿದಾಗ ಅವರಿಗಿರುವ ಅರ್ಹತೆ ಏನೆಂದು, ಚಕ್ರವರ್ತಿಯು ಪ್ರಶ್ನೆಮಾಡಿದನು. ತಾವು ಶೂರರೆಂದು ಅವರು ಹೇಳಿದರು. ಅವರ ಶೌರ್ಯವನ್ನು ಪ್ರದರ್ಶಿಸಬೇಕೆಂದು ಅಕ್ಬರ್ ಕೇಳಿದನು. ಆಗ ಅವರಿಬ್ಬರೂ ತಮ್ಮ ತಮ್ಮ ಒರೆಗಳಿಂದ ಸರ್ರನೆ ಕತ್ತಿಗಳನ್ನು ಹಿರಿದರು. ಅಕ್ಬರನ ಅಸ್ಥಾನದಲ್ಲಿ ಒಮ್ಮೆಗೇ ಎರಡು ಕೋಲ್ಮಿಂಚುಗಳು ಥಳಾರನೆ ಹೊಳೆದಂತಾಯಿತು. ಅವರು ಝಳಪಿಸಿದ ಕಠಾರಿಗಳ ಹೊಳಪೇ ಅವರ ಶೌರ್ಯದ ಸಂಕೇತವಾಗಿತ್ತು. ಆ ಸೆಳೆಮಿಂಚುಗಳ ಹೊಳಪು ಅವರ ಎರಡು ದೇಹಗಳನ್ನೂ ಕೂಡಿಸಿತ್ತು. ಒಬ್ಬೊಬ್ಬನೂ ಇನ್ನೊಬ್ಬನ ಎದೆಯಲ್ಲಿ ತನ್ನ ಕಠಾರಿಯ ಮೊನಚನ್ನು ಅನುದ್ವಿಗ್ನ ಶಾಂತಿಯಿಂದ ಚುಚ್ಚಿ ತೂರುವದರ ಮೂಲಕ ಇಬ್ಬರೂ ತಮ್ಮ ಶೌರ್ಯವನ್ನು ಮೆರೆದರು, ಆ ದೇಹಗಳು ಬಿದ್ದವು ; ಆ ಚೇತನಗಳು ಸೇರಿದವು ; ಅವರು ಕ್ಷತ್ರಿಯ ವೀರರೆಂದು ಪ್ರದರ್ಶನವಾಯಿತು. ಈ ನಾಗರಿಕ ಯುಗದಲ್ಲಿ ಆಘಾತವನ್ನುಂಟುಮಾಡಬಹುದಾದ ಆ ಕಥೆಯು ಮುಖ್ಯವಲ್ಲ. ಅದರಿಂದ ಕಲಿಯಬಹುದಾದ ನೀತಿಯು ಮುಖ್ಯ. ಕಾರ್ಯಸಾಧನೆಯ ಭರದಲ್ಲಿ ನಿಮ್ಮನ್ನು ನೀವು ಮರೆತರೆ—ನಿಮ್ಮ ಅಲ್ಪವಾದ ಅಹಂಕಾರವನ್ನು ಬಲಿಗೊಟ್ಟರೆ—ಜಯವು ನಿಮ್ಮದಾಗಲೇ ಬೇಕು—ಎನ್ನುವದೇ ಆ ನೀತಿ. ಅದು ಅನ್ಯಥಾ ಆಗಲೇ ಆರದು—ಎಂದು ರಾಮನು ಹೇಳುತ್ತಾನೆ. ಗೆಲುವನ್ನು ಪಡೆಯುವದಕ್ಕೆ ಮೊದಲು ಕಾರ್ಯನಿರ್ವಹಣೆಯ ಭರದಲ್ಲಿ ಗೆಲುವಿನ ಬಯಕೆ ಸಾಯಬೇಕು.

೧೩೮. ಅಜೇಯರಾಗುವ ರಹಸ್ಯ

(ಮೂವರು ಅಸುರರು)

ರಾಮನು ಒಂದು ಕಥೆಯನ್ನು ಹೇಳಿ, ಇದನ್ನು ಮುಗಿಸುತ್ತಾನೆ. ಹಿಂದುಗಳ ಶಾಸ್ತ್ರಗ್ರಂಥಗಳಲ್ಲಿ ಮೂರು ಜನ ಅಸುರರ ಒಂದು ದಿವ್ಯವಾದ ಕಥೆಯಿದೆ. ಆ ಮೂರು ಜನರಿಗೆ ಆಶ್ಚರ್ಯ ಶಕ್ತಿಗಳಿದ್ದವು. ಅವರು ಮಹಾ ವೀರರಿದ್ದರು. ಯಾರೂ ಅವರನ್ನು ಯುದ್ಧದಲ್ಲಿ ಸೋಲಿಸುವುದು ಸಾಧ್ಯವಿರಲಿಲ್ಲ. ಅವರು ಆಶ್ಚರ್ಯ ವ್ಯಕ್ತಿಗಳಾಗಿದ್ದರು. ಅನೇಕ ಜನ ಯೋಧರು ಬಂದು, ಅವರೊಡನೆ ಯುದ್ಧಮಾಡಿ, ಕೂಡಲೇ ಸೋತುಹೋಗುತ್ತಿದ್ದರು. ಸಹಸ್ರಾವಧಿ ಶತ್ರುಗಳು ಯುದ್ಧಮಾಡಿ ಸೋತಿದ್ದರು. ಅದರಲ್ಲಿ ಆಶ್ಚರ್ಯವೆಂದರೆ, ಇವರು ಮೂರೇ ಜನ ಎಲ್ಲರನ್ನೂ ಸೋಲಿಸಿದ್ದರು. ಅನೇಕ ಸಲ ಸೋತಿದ್ದ ಕೆಲವು ಶತ್ರುಗಳು ಒಬ್ಬ ಮಹರ್ಷಿಗಳಲ್ಲಿ ಹೋಗಿ ಆ ಮೂರು ಜನರನ್ನು ಜಯಿಸುವ ಉಪಾಯವೇನೆಂದು ಕೇಳಿದರು. ಅದಕ್ಕೆ

ಅವರು, ಆ ಅಸುರರು ಅಜೇಯರಾಗಿರುವುದಕ್ಕೆ ಕಾರಣವನ್ನು ಶೋಧಿಸಬೇಕೆಂದು ಹೇಳಿದರು. ಅದರಂತೆ ಅತಿಶ್ರಮದಿಂದ ಅದರ ಕಾರಣವನ್ನು ಶೋಧಿಸಿದರು. ಆ ಅಸುರರು ಎಷ್ಟೇ ಯುದ್ಧಮಾಡಿ ಗೆದ್ದರೂ ತಾವು ಯುದ್ಧ ಮಾಡತಕ್ಕವರೆಂದೂ ಅದರ ಫಲವನ್ನು ಅನುಭವಿಸತಕ್ಕವರೆಂದೂ ಅವರು ಎಂದೂ ಸ್ವಲ್ಪವೂ ತಿಳಿಯುತ್ತಿರಲಿಲ್ಲ. ಅವರು ಜಯಿಸಿದಾಗಲೂ ಅದನ್ನು ಸ್ವಲ್ಪವೂ ಚಿಂತಿಸುತ್ತಿರಲಿಲ್ಲ. ಅವರು ಗೆಲುವಿನ ಸಂತೋಷವನ್ನು ಅನುಭವಿಸುವ ಕೀಳುಮಟ್ಟಕ್ಕೆ ಎಂದೂ ಇಳಿಯುತ್ತಿರಲಿಲ್ಲ. ಅವರು ಯುದ್ಧ ಮಾಡುತ್ತಿದ್ದಾಗ, "ಈ ದೇಹದಿಂದ ನಾನು ಯುದ್ಧಮಾಡುತ್ತಿದ್ದೇನೆ" "ನಾನು ಯುದ್ಧ ಮಾಡುತ್ತಿದ್ದೇನೆ" ಎಂಬ ಭಾವವು ಅವರಿಗೆ ಸ್ವಲ್ಪವೂ ಬರುತ್ತಿರಲಿಲ್ಲ. ಈ ಪ್ರಪಂಚದಲ್ಲಿ ಅಂಥಾ ಶೂರರೂ ಇದ್ದಾರೆ. ಪ್ರತಿಯೊಬ್ಬ ಶೂರನೂ ಪ್ರತ್ಯಕ್ಷ ಯುದ್ಧದಲ್ಲಿ ತೊಡಗಿದಾಗ—"ನಾನು ಮೈಯೆಲ್ಲಾ ಕಿವಿಯಾಗಿ ಕೇಳುತ್ತಿದ್ದೇನೆ ; ಸಹಸ್ರಾಕ್ಷನಾಗಿ, ಮೈಯೆಲ್ಲಾ ಕಣ್ಣಾಗಿ ನೋಡುತ್ತಿದ್ದೇನೆ" ಎಂದು ಜನ ಹೇಳುವಂತೆ,—ಅವನ ಸರ್ವಭಾವವೂ ಯುದ್ಧ ಕಾರ್ಯವೇ ಆಗಿರುತ್ತದೆ. 'ನಾನು ಯುದ್ಧ ಮಾಡುತ್ತಿದ್ದೇನೆ' ಎಂದು ಭಾವಿಸುವುದಕ್ಕೆ—ಆ ರಣೋತ್ಸಾಹ—ವೀರಾವೇಶ ಶೌರ್ಯೋನ್ಮಾದಗಳಲ್ಲಿ—ಅವಕಾಶವೇ ಇರುವುದಿಲ್ಲ. ಅವನ ದೇಹವು, ಯಾಂತ್ರಿಕವಾಗಿ ತನ್ನ ಕಾರ್ಯವನ್ನು ಮಾಡುತ್ತಿರುತ್ತದೆ. ಅದರ ಚಾಲನೆಗೆ ಒಳಗಿನ ಶೌರ್ಯವು ಶಕ್ತಿಯಾಗಿರುತ್ತದೆ. ಆಗ ಆ ಯೋಧನೆಂದರೆ, ಯುದ್ಧಕಾರ್ಯವೇ ಆಗಿರುತ್ತಾನೆ. ಅವರ ತಲೆಯೂ ಕಾಲುಗಳೂ ಕೈಗಳೂ ಅಹಂಕಾರವಿಲ್ಲದ ದೈವತ್ವದಿಂದ ಪೂರ್ಣ ತನ್ಮಯವಾಗಿರುತ್ತವೆ. ಆದ್ದರಿಂದ ಅವರು ಅಜೇಯರಾಗುತ್ತಾರೆ. ಹೀಗೆ ಆ ಅಸುರರು, ಯುದ್ಧಮಾಡುವಾಗಲೆಲ್ಲಾ ಅವರ ದೇಹಗಳು ಯಂತ್ರದಂತೆ, ದೇವರ ಪ್ರೇರಣೆಯಿಂದ ನಡೆಯುವ ಯಂತ್ರದಂತೆ, ಕೇವಲ ರಣಕಾರ್ಯವೇ ಆಗಿ, ಪೂರಾ ರಣಕಾರ್ಯವೇ ಆಗಿ, 'ನಾನು ಯುದ್ಧಮಾಡುತ್ತಿದ್ದೇನೆ' ಎಂಬ ಕಲ್ಪನೆಗೇ ಅವಕಾಶ ಕೊಡದಂತೆ, ವೀರಾವೇಶದಿಂದ ಯುದ್ಧಮಾಡುತ್ತಿದ್ದರು. ಇದೇ ಅವರ ನಿರಂತರ ಜಯದ ರಹಸ್ಯವಾಗಿತ್ತು. ಯಾರೂ ಅವರನ್ನು ಗೆಲ್ಲುವುದು ಸಾಧ್ಯವಿರಲಿಲ್ಲ. ಆ ಮಹರ್ಷಿಗಳು ಈ ರಹಸ್ಯವನ್ನು ತಿಳಿದು, ಅವರನ್ನು ಜಯಿಸುವ ಉಪಾಯವನ್ನು ಆ ಅಸುರರ ಶತ್ರುಗಳಿಗೆ ತಿಳಿಸಿದರು. ಆ ಅಸುರರಿಗೆ ಯುದ್ಧ ಕೊಡುತ್ತಾ ಕೊಡುತ್ತಾ ಅವರನ್ನು ಯುದ್ಧದಲ್ಲಿ ಛಳೆದು ಸೋತಂತೆ ನಟಿಸಿ, ಮತ್ತೆಮತ್ತೆ ಓಡಿಹೋಗಬೇಕೆಂದು ಆ ಅಸುರರ ಶತ್ರುಗಳಿಗೆ ಹೇಳಿಕೊಟ್ಟರು. ಅದರಂತೆ ಆ ಶತ್ರುಗಳು ಅಸುರರನ್ನು ಯುದ್ಧದಲ್ಲಿ ತೊಡಗಿಸುತ್ತಾ, ತಾವು ಸೋತಂತೆ ತೋರಿಸಿ ಓಡಿಹೋಗುತ್ತಾ, ಪುನಃ ಯಾವಾಗಲೋ ಬಂದು ಧಾಳಿಮಾಡುತ್ತಾ, ಅವರು ಆವೇಶದಿಂದ ಯುದ್ಧಮಾಡುತ್ತಿದ್ದಾಗ, ಮತ್ತೆ ಓಡಿಹೋಗುತ್ತಾ, ಅನೇಕ ಬಾರಿ, ಹೀಗೆ ರಣರಂಗವನ್ನು ಎಳೆದಾಡಿದರು. ಈ ಯುದ್ಧತಂತ್ರದಿಂದ ಅಸುರರೂ ಅವರ ಅಜೇಯವಾದ ನಿರಹಂಕಾರ ಸ್ಥಾನದಿಂದ ಹೊರಗೆ ಎಳೆಯಲ್ಪಟ್ಟರು. ಶತ್ರುಗಳು ಸೋತು ಸೋತು

ಓಡಿಹೋಗುತ್ತಿದ್ದುದರಿಂದ ತಾವು ಆಕ್ರಮಣಕಾರರೆಂದೂ ಜಯಶಾಲಿಗಳೆಂದೂ ಅಸುರರಿಗೆ ಅಭಿಮಾನ ಬಂದಿತು. ಯಾರೂ ಎಂದೂ ತಮ್ಮನ್ನು ಸೋಲಿಸಲಾರ ರೆಂದೂ ತಾವು ಅಜೇಯರೆಂದೂ ಮೂರು ಲೋಕಗಳಿಗೂ ತಾವು ಅಧಿಪತಿಗಳೆಂದೂ ಆ ಅಸುರರಿಗೆ ಅಹಂಕಾರ ಬಂದಿತು. ಅಭಿಮಾನವು ಅವರನ್ನು ಕೆಳಗೆ ಎಳೆದು ತಂದು, ದೇಹ ಪಂಜರದಲ್ಲಿ ಸೆರೆಹಾಕಿತು. "ನಾವು ಮಹಾ ವೀರರು, ಶೌರ್ಯ ದಿಂದ ಯುದ್ಧಮಾಡುವುದರಿಂದ ಗೆಲ್ಲುತ್ತೇವೆ ; ನಮ್ಮ ಸಮಾನರಿಲ್ಲ..." ಎಂಬ ಅತಿ ಯಾದ ಅಭಿಮಾನವು ಆ ಅಸುರರಿಗೆ ಬಂದಿತು. ತಮ್ಮ ಶಕ್ತಿಯಲ್ಲಿಯೂ ಶೌರ್ಯ ದಲ್ಲಿಯೂ ಅತಿ ನಂಬಿಕೆಯೂ ಅತಿ ಭರವಸೆಯೂ ಅಭಿಮಾನವೂ ಬಂದುದರಿಂದ ಅವರು, ಮೊದಲಿನಂತೆ ಮೈಮರೆತು ವೀರಾವೇಶದಿಂದ ಯುದ್ಧಮಾಡುವುದು ಸಾಧ್ಯ ವಿಲ್ಲವಾಯಿತು. ಆದ್ದರಿಂಧ, ಶತ್ರುಗಳು ಕೂಡಲೇ ಸುಲಭವಾಗಿ ಆ ಅಸುರರನ್ನು ಸೋಲಿಸಿ ಸೆರೆಯಲ್ಲಿಟ್ಟರು.

ಈಗ, ಈ ಕಥೆಯ ತತ್ತ್ವಾರ್ಥವೇನು ? ಇದನ್ನು ಹೇಗೆ ಅನ್ವಯಿಸಬೇಕು ? ಎನ್ನುವುದನ್ನು ವಿಚಾರಮಾಡಬೇಕು. ದೇವರ ಕೈಯಲ್ಲಿರುವ ಒಂದು ಯಂತ್ರದಂತೆ ನಿಮ್ಮ ದೇಹವು ಕೆಲಸವನ್ನು ಮಾಡುತ್ತಿರುವವರೆಗೂ, ನಿಮ್ಮ ವ್ಯಕ್ತಿಭಾವನೆಯು ದಿವ್ಯ ಭಾವದಲ್ಲಿ-ದೇವತ್ವದಲ್ಲಿ-ಮುಳುಗಿರುವವರೆಗೂ, ಆ ಅಸುರರಂತೆ ನೀವೂ ಅಜೇಯರು. "ನಾನು ಮಾಡುತ್ತೇನೆ—ನಾನು ಅನುಭವಿಸುತ್ತೇನೆ" ಎಂಬ ಕಲ್ಪನೆಯು ನಿಮ್ಮಲ್ಲಿಯೂ ಇಲ್ಲ. ಆದರೆ ಜನರು, ನಿಮ್ಮಲ್ಲಿಗೆ ಬಂದು ನಿಮ್ಮ ಕಾರ್ಯವನ್ನೂ ನಿಮ್ಮ ಯೋಗ್ಯತೆಯನ್ನೂ ಮೆಚ್ಚಿ ಮೆಚ್ಚಿ ಹೊಗಳಿ, ನಿಮ್ಮನ್ನು ಉಬ್ಬಿಸುವುದಕ್ಕೆ ತೊಡಗುತ್ತಾರೆ. ಎಲ್ಲ ಕಡೆಯಿಂದಲೂ ನಿಮ್ಮನ್ನು ಅನುಕೂಲವಾಗಿ ವಿಮರ್ಶೆ ಮಾಡುತ್ತಾರೆ. ಆಗ "ನಾವು ಮಹಾಶೂರರು. ನಮ್ಮ ಸಮಾನರಿಲ್ಲ, ನಾವು ಎಲ್ಲೆಡೆಯಲ್ಲಿಯೂ ಜಯಶೀಲರು, ನಾವು ಮಹಾವಿದ್ವಾಂಸರು, ಜ್ಞಾನಿಗಳು..." ಮೊದಲಾಗಿ ನಿಮ್ಮಲ್ಲಿ ಅಭಿಮಾನವು ಬೆಳೆಯುತ್ತದೆ. "ನಾನು ಮಾಡುತ್ತೇನೆ, ನಾನು ಅನುಭವಿಸುತ್ತೇನೆ" ಎಂಬ ಈ ಅಹಂಕಾರ ಕಲ್ಪನೆಗಳಿಂದ ಈ ದೇಹಪಂಜರ ದಲ್ಲಿ ಇಳಿದು ಬಂದು, ಸೆರೆಯಾಗುತ್ತೀರಿ. ಇದರಿಂದ ನೀವೂ ಆ ಅಸುರರಂತೆ ಪರಾಜಿತ ರಾಗುತ್ತೀರಿ. ನಿಮ್ಮ ಶಕ್ತಿಯು ಕೆಡುತ್ತದೆ; ಕಡೆಗೆ ಕಳೆದುಹೋಗುತ್ತದೆ; ನಷ್ಟವಾಗುತ್ತದೆ.

೧೩೯. ನೋವಿಲ್ಲದೆ ನಲವಿಲ್ಲ

(ಪೈಲ್ವಾನ–ಸಿಂಹದ ಹಚ್ಚೆ)

ಭಾರತದಲ್ಲಿ, ಕುಸ್ತಿಯಲ್ಲಿ ಕುಶಲನಾದಂಥ ಒಬ್ಬ ದೊಡ್ಡ ಪೈಲ್ವಾನನಿದ್ದನು. ಅವನು ತನ್ನ ಕೈಮೇಲೆ ಒಂದು ಸಿಂಹದ ಚಿತ್ರವನ್ನು ಹಚ್ಚೆ ಚುಚ್ಚಿಸಿಕೊಳ್ಳಬೇಕೆಂದು ಬಯಸಿ ಒಬ್ಬ ಹಜಾಮನನ್ನು ಕರೆದನು. ಅವನು, ತನ್ನ ಎರಡೂ ಕೈಗಳ ಮೇಲೆ ಭವ್ಯವಾದ ದೊಡ್ಡ ಸಿಂಹವನ್ನು ಚಿತ್ರಿಸಬೇಕೆಂದು ಆ ಕ್ಷೌರಿಕನಿಗೆ ಹೇಳಿದನು. ಅವನು,

ತಾನು ಸಿಂಹಲಗ್ನದಲ್ಲಿಯೂ ಸಿಂಹರಾಶಿಯಲ್ಲಿಯೂ ಹುಟ್ಟಿರುವುದರಿಂದ ಅದರ ಪೂರ್ಣ ಪ್ರಭಾವದಿಂದ ಸಿಂಹದಂತೆ ಶೂರನೂ ಧೈರ್ಯಶಾಲಿಯೂ ಇರುವದಾಗಿ ಹೇಳಿಕೊಳ್ಳುತ್ತಿದ್ದನು. ಅದರ ಸಂಕೇತವಾಗಿ ಕೈಗಳ ಮೇಲೆ ಸಿಂಹದ ಚಿತ್ರವನ್ನು ಹಚ್ಚೆ ಹೊಯ್ಸಿಕೊಳ್ಳುವುದಾಗಿಯೂ ಹೇಳಿದನು. ಕ್ಷೌರಿಕನು ತನ್ನ ಸೂಜಿಯನ್ನು ತೆಗೆದು ಕೊಂಡು ಆ ಪೈಲ್ವಾನನ ಕೈಯ ಮೇಲೆ ಹಚ್ಚೆ ಚುಚ್ಚುವುದಕ್ಕೆ ಪ್ರಾರಂಭ ಮಾಡಿದನು. ಅವನು ಸ್ವಲ್ಪ ಚುಚ್ಚುವುದರೊಳಗೆ ಆ ಜಟ್ಟಿಯು ಅದನ್ನು ಸಹಿಸುವುದು ಸಾಧ್ಯವಾಗ ಲಿಲ್ಲ. ಅವನು ಏದುಸಿರು ಬಿಡುತ್ತಾ "ನಿಲ್ಲು, ನಿಲ್ಲು. ಏನು ಮಾಡುತ್ತಿದ್ದಿ?" ಎಂದು ಆ ಕ್ಷೌರಿಕನನ್ನು ಕೇಳಿದನು. ಅವನು "ಸಿಂಹದ ಬಾಲವನ್ನು ಚಿತ್ರಿಸುತ್ತಿದ್ದೇನೆ" ಎಂದು ಹೇಳಿದನು. ಅದಕ್ಕೆ ಆ ಮಲ್ಲನು "ಲಕ್ಷಣವಾದ ಮಾದರಿಯನ್ನು ಬಯಸತಕ್ಕವರು (Fashionable People) ತಮ್ಮ ನಾಯಿಗಳ ಮತ್ತು ಕುದುರೆಗಳ ಬಾಲಗಳನ್ನು ಕತ್ತರಿಸಿ ಹಾಕುತ್ತಾರೆ ಎಂಬುದು ನಿನಗೆ ಗೊತ್ತಿಲ್ಲವೆ? ಮತ್ತು ಬಾಲವಿಲ್ಲದ ಸಿಂಹವನ್ನು ಜನರು ಬಹಳ ಬಲಿಷ್ಠವಾದುದೆಂದು ತಿಳಿಯುತ್ತಾರೆ. ನೀನೇಕೆ ಅದರ ಬಾಲವನ್ನು ಚುಚ್ಚುತ್ತಿದ್ದಿ ? ಸಿಂಹದ ಬಾಲವು ಅವಶ್ಯವಿಲ್ಲ" ಎಂದು ವಿಚಿತ್ರವಾದ ನೆಪವನ್ನು ಹೇಳಿದನು. ಹಜಾಮನು "ಒಳ್ಳೆಯದು, ಬಾಲವನ್ನು ಬಿಟ್ಟು ಸಿಂಹದ ಬೇರೆ ಅಂಗ ಗಳನ್ನು ಚಿತ್ರಿಸುತ್ತೇನೆ" ಎಂದು ಹೇಳಿ ಪುನಃ ಸೂಜಿಯನ್ನು ತೆಗೆದುಕೊಂಡು ಅವನ ಕೈಯ ಚರ್ಮದಲ್ಲಿ ಚುಚ್ಚುವುದಕ್ಕೆ ತೊಡಗಿದನು. ಪಾಪ! ಆ ಮನುಷ್ಯನು ಅದನ್ನೂ ಸಹಿಸಲಾರದಾದ. "ಈಗೇನು ಮಾಡುತ್ತಿದ್ದಿ ?" ಎಂದು ಆಕ್ಷೇಪಿಸಿದನು. "ನಾನೀಗ ಸಿಂಹದ ಕಿವಿಯನ್ನು ಬರೆಯುತ್ತಿದ್ದೇನೆ" ಎಂದು ಆ ನಾಪಿತನು ಹೇಳಿದನು. ಪುನಃ ಆ ಜಟ್ಟಿಯು "ಏನಯ್ಯ! ಎಂಥಾ ಮೂರ್ಖ ನೀನು. ಜನರು ತಮ್ಮ ನಾಯಿಗಳ ಕಿವಿಗಳನ್ನು ಕತ್ತರಿಸಿ ಹಾಕುತ್ತಾರೆಂಬುದು ನಿನಗೆ ತಿಳಿಯದೆ? ಉದ್ದ ಕಿವಿಗಳುಳ್ಳ ನಾಯಿಗಳು ಅವರಿಗೆ ಬೇಕಾಗಿಲ್ಲ. ಕಿವಿಗಳಿಲ್ಲದ ಸಿಂಹವೇ ಶ್ರೇಷ್ಠವೆಂಬುದು ನಿನಗೆ ತಿಳಿಯದೆ ?" ಎಂದು ಹೇಳಿದನು. ಆ ಹಜಾಮನು ಸ್ವಲ್ಪ ಹೊತ್ತು ತಡೆದು, ಪುನಃ ಚುಚ್ಚುವುದಕ್ಕೆ ತೊಡಗಿದನು. ಆ ಪೈಲ್ವಾನನು ಅದನ್ನೂ ಸೈರಿಸಲಾರದೆ, "ಏ ಹಜಾಮ! ಏನು ಮಾಡುತ್ತಿದ್ದಿ ?" ಎಂದು ರೇಗಿದನು. 'ನಾನೀಗ ಸಿಂಹದ ಸೊಂಟವನ್ನು ಚಿತ್ರಿಸುತ್ತಿದ್ದೇನೆ' ಎಂದು ಅವನು ಹೇಳಿದನು. "ಎಂಥಾ ಅವಿವೇಕಿ ನೀನು ! ಭಾರ ತೀಯ ಕವಿಗಳ ಕವಿತೆಗಳನ್ನು ನೀನು ಓದಿಲ್ಲವೆ ? ಅವರು ಸಿಂಹಕ್ಕೆ ಸಣ್ಣ ತೆಳುವಾದ, ಹೆಸರಿಗೆ ಮಾತ್ರ ಇರುವ, 'ಕೃಶಕಟಿ' 'ಸಿಂಹಕಟಿ' ಯನ್ನು ವರ್ಣಿಸಿಲ್ಲವೆ ? ನೀನು ಸಿಂಹಕ್ಕೆ ಸೊಂಟವನ್ನೇ ತೋರಿಸಬೇಕಾಗಿಲ್ಲ" ಎಂದನು. ಆ ಹಜಾಮನು ಸಿಟ್ಟಿನಿಂದ ತನ್ನ ಸೂಜಿಯನ್ನೂ, ಬಣ್ಣಗಳನ್ನೂ ತೆಗೆದೊಗೆದು, ಆ ಹೇಡಿಗೆ ತನ್ನ ಸಮೀಪದಿಂದ ಹೊರಟು ಹೋಗಲು ಹೇಳಿದನು.

ಈ ಮನುಷ್ಯನು ತಾನು ಸಿಂಹರಾಶಿಯ ಪ್ರಭಾವದಲ್ಲಿ ಹುಟ್ಟಿದವನಾದುದರಿಂದ ಪುರುಷಸಿಂಹನೆಂದೂ ತನ್ನ ಸಮಾನ ಜಟ್ಟಿಗಳೂ ಕುಸ್ತಿಮಾಡತಕ್ಕವರೂ ಇಲ್ಲವೆಂದೂ

ನಟನೆ ಮಾಡುತ್ತಿದ್ದ, ಅದನ್ನು ಜನರಿಗೆ ತೋರಿಸುವದಕ್ಕಾಗಿ ತನ್ನ ಮೈ ಮೇಲೆಲ್ಲಾ ಹಚ್ಚೆ ಚುಚ್ಚಿಸಿಕೊಳ್ಳುವುದರ ಮೂಲಕ ಸಿಂಹಗಳನ್ನು ಪ್ರದರ್ಶಿಸಬೇಕೆಂದು ಬಯಸುತ್ತಿದ್ದ. ಆದರೆ ಅವನು ಸೂಜಿಯ ಚುಚ್ಚಿನ ನೋವನ್ನು ಮಾತ್ರ ಸಹಿಸಲಾರದಾದ. ದೇವರನ್ನು ನೋಡಬೇಕೆನ್ನುವವರಲ್ಲಿ, ವೇದಾಂತ ತತ್ತ್ವವನ್ನು ಅನುಭವ ಮಾಡಬೇಕೆಂದು ಬಯಸುವವರಲ್ಲಿ, ಈ ನಿಮಿಷವೇ ಸತ್ಯವನ್ನು ಸಂಪೂರ್ಣವಾಗಿ ಅರಿಯಬೇಕೆನ್ನುವವರಲ್ಲಿ, ಕಣ್ಣು ಮಿಳುಕಿಸುವದರೊಳಗೆ ಸಮಸ್ತವನ್ನೂ ಸಾಧಿಸಬೇಕೆನ್ನುವವರಲ್ಲಿ, ಅರ್ಧ ನಿಮಿಷದಲ್ಲಿ ಕ್ರಿಸ್ತನಾಗಬೇಕೆನ್ನುವವರಲ್ಲಿ ಬಹುಭಾಗ ಜನರು ಇಂಥವರೇ ಇರುತ್ತಾರೆ. ಆದರೆ, ಅವರ ಆತ್ಮಗಳಲ್ಲಿ ಆ ಸಿಂಹವನ್ನು—ಆ ಸತ್ಯವನ್ನು—ಚಿತ್ರಿಸಿಕೊಳ್ಳುವಾಗ, ಅವರ ಜೀವದಿರುವಿಕೆಯಲ್ಲಿ ಸತ್ಯ-ಧರ್ಮಗಳ ಸಿಂಹವನ್ನು ಮುದ್ರಿಸಿಕೊಳ್ಳುವಾಗ, ಚುಚ್ಚಿಸಿಕೊಳ್ಳುವಾಗ, ಆ ಕುಟುಕಿನ ನೋವನ್ನು ಮಾತ್ರ ಅವರು ಸಹಿಸಕೊಳ್ಳಲಾರರು. ಯಾವದೊಂದು ಸಾಧನೆಯಲ್ಲಿ ಶ್ರಮವೋ ವ್ಯಥೆಯೋ ಇದೆಯೆಂದರೆ, ಅವರು ಹಿಂಜರಿಯುತ್ತಾರೆ. 'ಬೆಲೆಯನ್ನು ನಾನು ಕೊಡಲಾರೆ, ಆದರೆ ಫಲವು ಮಾತ್ರ ನನಗೆ ಬೇಕು ; ವಸ್ತುವು ಮಾತ್ರ ಬೇಕು' ಎಂದು ಹೇಳುವ ಮನೋಭಾವದವರು ಅವರು.

ನೀವು ಸತ್ಯವನ್ನು ಸೇರುವುದಕ್ಕೋಸ್ಕರ ಮತ್ತು ದೇವತ್ವದ ಅನುಭವ ಪಡೆಯುವದಕ್ಕೋಸ್ಕರ ನಿಮ್ಮ ಅತ್ಯಂತ ಪ್ರಿಯವಾದ ಬಯಕೆಗಳೂ ಆಶೆಗಳೂ ಒಳಹೊರಗೆಲ್ಲಾ ಚುಚ್ಚಲ್ಪಡುತ್ತವೆ ; ನಿಮ್ಮ ಪ್ರಿಯತಮವಾದ ವಾಂಛೆಗಳೂ ಕೋರಿಕೆಗಳೂ ಮತ್ತು ಅನುರಾಗಗಳೂ ಆಸಕ್ತಿಗಳೂ ಕತ್ತರಿಸಲ್ಪಡಬೇಕಾಗುತ್ತದೆ ; ನಿಮ್ಮ ಎಲ್ಲಾ ಅಚ್ಚುಮೆಚ್ಚಿನ ಮೂಢ ನಂಬಿಕೆಗಳೂ ಮೂಢ ಭಕ್ತಿಗಳೂ ಮೂಢಾಚರಣೆಗಳೂ ಅವಿಚಾರ ಭಾವನೆಗಳೂ ಪೂರ್ವಗ್ರಹಗಳೂ ತೊಡೆದು ಹಾಕಲ್ಪಡಬೇಕು, ನಿರ್ಮೂಲ ಮಾಡಲ್ಪಡಬೇಕು ; ವಿಚಾರಕ್ಕೆ ಮೊದಲೇ ಮಾಡಿಕೊಂಡ ಕಲ್ಪನೆಗಳೂ ಅಭಿಪ್ರಾಯಗಳೂ ಹರಿದು ಹರಿದು ಹಾಕಲ್ಪಡಬೇಕು. ನಿಮ್ಮನ್ನು ಹೀನಾಯಗೊಳಿಸುವ, ಭ್ರಷ್ಟರನ್ನಾಗಿ ಮಾಡುವ ಎಲ್ಲಾ ಹಂಬಲಿಕೆಗಳಿಂದಲೂ ವಿಮೋಚನೆಯನ್ನು ಹೊಂದಬೇಕು ; ಬಿಡುಗಡೆಯನ್ನು ಪಡೆಯಬೇಕು. ನಿಮ್ಮನ್ನು ನೀವು ಪರಿಶುದ್ಧಿಗೊಳಿಸಬೇಕು. ಪರಿಶುದ್ಧಿ, ಪರಿಶುದ್ಧಿ, ಮನಶ್ಶುದ್ಧಿ—ಇದೇ ಬ್ರಹ್ಮಪ್ರಾಪ್ತಿಯ ಬೀಜಮಂತ್ರ. ಬೆಲೆಯನ್ನು ಕೊಡದೆ ನೀವು ದೇವರನ್ನು ಸೇರಲಾರಿರಿ. ಜನ್ಮಸಿದ್ಧವಾದ ನಿಮ್ಮ ಹಕ್ಕನ್ನೇ ನೀವು ತಿರುಗಿ ಪಡೆಯಲಾರಿರಿ. "Blessed are the pure in heart, for they shall see God" "ಹೃದಯ ಶುದ್ಧಿಯುಳ್ಳವರು ಪುಣ್ಯಾತ್ಮರು, ಧನ್ಯರು, ಏಕೆಂದರೆ, ಅವರು ದೇವರನ್ನು ಕಾಣುತ್ತಾರೆ." ಹೃದಯದ ಶುದ್ಧಿ—ಎಂದರೆ ಏನು? (ಸ್ತ್ರೀಪುರುಷ) ಕಾಮ ಸಂಬಂಧವಾದ ಪಾಪದಿಂದ ಮಾತ್ರ ವಿಮುಖವಾಗಿರುವದು—ಎಂದು ಇದರ ಅರ್ಥವಲ್ಲ. ಆ ಅರ್ಥವೂ ಸರಿ ; ಆದರೆ ಅಷ್ಟೇ ಅರ್ಥವಲ್ಲ ; ಹೃದಯ ಶುದ್ಧಿಯೆನ್ನುವದಕ್ಕೆ ಬಹಳ

ಹೆಚ್ಚಾದ ಅರ್ಥವಿದೆ. ಇವತ್ತು ನಿಮಗೆ ಈ ಮಾತುಗಳು ರುಚಿಸದೇ ಇರಬಹುದು ; ಒಂದು ದಿನವಲ್ಲದಿದ್ದರೆ ಇನ್ನೊಂದು ದಿನ ನೀವು ಅದನ್ನು ಒಪ್ಪಲೇ ಬೇಕು. ಇವತ್ತೋ ನಾಳೆಯೋ ನೀವು ಈ ತೀರ್ಮಾನಕ್ಕೆ ಬರಲೇ ಬೇಕು. ಈ ತೀರ್ಮಾನವೇನೆಂದರೆ, ಎಲ್ಲಾ ಆಸಕ್ತಿಗಳೂ—ಅದು ನಿಮ್ಮ ಮನೆಯ ಅಭಿಮಾನ ಆಸಕ್ತಿಗಳೇ ಇರಲಿ, ನಿಮ್ಮ ಗಡಿಯಾರದಲ್ಲಿ, ನಿಮ್ಮ ನಾಯಿಯಲ್ಲಿ, ಅದು ಯಾವುದರಲ್ಲಿಯಾದರೂ ಅಭಿಮಾನ ವಾಗಿರಲಿ, ತಂದೆ ತಾಯಿಗಳಲ್ಲಿಯೇ ಅಭಿಮಾನವಿರಲಿ ಮಗುವಿನಲ್ಲಿಯೇ ಹೆಂಡತಿ ಯಲ್ಲಿಯೇ ಮಮತೆಯಿರಲಿ–ಸತ್ಯವನ್ನು ಅನುಭವ ಮಾಡಬೇಕೆಂಬ ಹಂಬಲವುಳ್ಳವನಿಗೆ ಸಂಪೂರ್ಣ ಸತ್ಯವನ್ನೇ—ಈ ನಿಮಿಷದಲ್ಲಿ–ಸ್ವಾಧೀನಪಡಿಸಿಕೊಳ್ಳಬೇಕೆಂದು ಬಯಸ ತಕ್ಕವನಿಗೆ, ಅಂಥಾ ಉದಾತ್ತವಾದ ಆಕಾಂಕ್ಷೆಯುಳ್ಳವನಿಗೆ, ಆ ಅಭಿಮಾನ–ಆಸಕ್ತಿಗಳು ವ್ಯಭಿಚಾರದಷ್ಟೇ ಹೀನಾಯವೂ ಅಪಮಾನಕರವೂ ಅವನತಿಪ್ರದವೂ ದೌರ್ಬಲ್ಯವೂ ಆಗಿವೆ. ಇದೇ ಆ ಅಂತಿಮ ನಿರ್ಣಯ. ಯಾವ ಪ್ರಾಪಂಚಿಕ ವಿಷಯಕ್ಕೂ ಅಂಟಿ ಕೊಳ್ಳದಂತೆ, ಜೋತುಬೀಳದಂತೆ, ಎಲ್ಲಾ ವಿಷಯಾಸಕ್ತಿಗಳಿಂದಲೂ ನಿಮ್ಮನ್ನು ನೀವು ಬಿಡುಗಡೆ ಮಾಡಿಕೊಳ್ಳುವುದೇ ಹೃದಯ ಶುದ್ಧಿಯಾಗಿದೆ. ಪರಮಾತ್ಮ ಪ್ರಾಪ್ತಿ ಯಾಗುವುದಕ್ಕೆ ಪರಮಾತ್ಮನಲ್ಲಿ ಅವ್ಯಭಿಚಾರಿಯಾದ ಭಕ್ತಿಯು ಬೇಕು ; (ಭಕ್ತಿರವ್ಯಭಿ ಚಾರಿಣೀ) ಪ್ರೀತಿಯು ಬೇಕು. ವ್ಯಭಿಚಾರವೆಂದರೆ ಪ್ರೀತಿಗೆ ಒಂದೇ ವಸ್ತುವಿನಲ್ಲಿ ನಿಷ್ಠೆಯಿಲ್ಲದೆ ಬೇರೆ ಬೇರೆ ವಸ್ತುಗಳಲ್ಲಿ ಹರಿದಾಡುತ್ತಿರುವುದು ; ಅಥವಾ ಪ್ರೀತಿಯು ಒಂದೇ ವಸ್ತುವಿನಲ್ಲಿ ನೆಲೆಯಾಗಿ ನಿಲ್ಲದೆ, ಇನ್ನೊಂದಕ್ಕೆ ಹರಿಯುವದೇ ವ್ಯಭಿಚಾರ. ಪ್ರೀತಿಯು ಪರಮಾತ್ಮನನ್ನು ಬಿಟ್ಟು ಬೇರೆ ಯಾವ ವಸ್ತುವಿನಲ್ಲಿ ಇದ್ದರೂ, ಆ ಅಭಿಮಾನವೂ ಆಸಕ್ತಿಯೂ ವ್ಯಭಿಚಾರವೇ. ಆದ್ದರಿಂದ ಯಾವ ಆಸಕ್ತಿಯಾದರೂ– ಆಧ್ಯಾತ್ಮ ದೃಷ್ಟಿಯಿಂದ-ನೈತಿಕ ವ್ಯಭಿಚಾರದಷ್ಟೇ ಕೀಳಾದುದು, ಪತನಕ್ಕೆ ಕಾರಣ ವಾದುದು. ಆದ್ದರಿಂದ ಎಲ್ಲಾ ಆಸಕ್ತಿಗಳನ್ನೂ ಕಳೆದುಕೊಂಡ ಶುದ್ಧವಾದ ಹೃದಯಕ್ಕೇ ದೇವರ ದರ್ಶನವಾಗುತ್ತದೆ. ಹೃದಯಶುದ್ಧಿ ಎಂದರೆ ತ್ಯಾಗ, ಸರ್ವಸ್ವತ್ಯಾಗ. ತ್ಯಾಗ ದಲ್ಲಿ ಸ್ವಲ್ಪ ನ್ಯೂನತೆಯಾದರೂ ಕೊರತೆಯಾದರೂ ಹೃದಯವು ಶುದ್ಧವಾಗುವುದಿಲ್ಲ. ಆದ್ದರಿಂದಲೇ 'ಹೃದಯದಲ್ಲಿ ಪರಿಶುದ್ಧರಾಗಿರತಕ್ಕವರು ದೇವರನ್ನು ನಿಶ್ಚಯವಾಗಿಯೂ ಕಾಣುತ್ತಾರಾದ್ದರಿಂದ ಧನ್ಯರು' ಎಂದು ಹೇಳಿದೆ. ಮನಸ್ಸಿನಲ್ಲಿ ಈ ಶುದ್ಧಿಯನ್ನು ಸಂಪಾದಿಸಿಕೊಳ್ಳಿ, ನೀವು ದೇವರನ್ನು ಕಂಡೇ ಕಾಣುತ್ತೀರಿ.

೧೪೦. ಎಲ್ಲಾ ನೋವುಗಳ ಸ್ವಭಾವ

(ಭಿಕ್ಷುಕ–ಗೊಲ್ಲತಿ)

ನಮ್ಮ ರಿಯಾಯಿತಿಗಳಿಗೂ ವಿನೀತತೆಗೂ ದಯಾಪರತೆಗೂ ದೇವತೆಗಳು ತಮ್ಮೊಳಗೇ ನಗುತ್ತಾರೆ, ಓ,ನಮ್ಮ ಅತ್ಯಂತ ಸಮೀಪದ ನೆರೆಯವನ ಆತ್ಮಕ್ಕೆ ದ್ರೋಹ ಮಾಡಿ, ದೂರದ ನೆರೆಯವನಿಗೆ ವಿಶ್ವಾಸಿಗಳಾಗುವದಕ್ಕೆ ಪ್ರಯತ್ನ ಮಾಡುವದರಲ್ಲಿ

ಎಂಥಾ ನಗೆಗೀಡಾದ ಸುಳ್ಳು ಸಾಕ್ಷ್ಯವನ್ನು ಹೇಳುತ್ತೇವೆ. ಒಬ್ಬ ಬಡ ಅಲೆಮಾರಿ ಭಿಕ್ಷುಕನು ದನಗಾವಲಿನ ಗೊಲ್ಲತಿಯಿಂದ ರೊಟ್ಟಿಯನ್ನು ಬೇಡುತ್ತಾನೆ. ಆಕೆ, ಪಾಪ, ಬಡಪಾಯಿ! ಮನೆಯಿಲ್ಲದೆ, ನೆಲೆಯಿಲ್ಲದೆ, ತೊಳಲಾಡುವ ಆ ಅಲೆಮಾರಿಯ ಸ್ವಾತಂತ್ರ್ಯವನ್ನು ಕಂಡು ಅಸೂಯೆ ಪಡುತ್ತಾಳೆ. ಆ ಭಿಕಾರಿಯು ಹೋದ ಮೇಲೆ ಆಕೆಯು ತನ್ನ ತಾಯಿಯು ಸತ್ತಳೆಂದು ಪತ್ರ ಬಂದಿರುವದಾಗಿ ಗಂಡನ ಮುಂದೆ ಹೇಳಿ ಶೋಕವನ್ನು ನಟಿಸುತ್ತಾಳೆ. ಆಕೆಯ ಸತ್ತ ತಾಯಿಯು ತಮಗೇನಾದರೂ ಆಸ್ತಿಯನ್ನು ಬಿಟ್ಟಿರಬಹುದೇನೊ ಎಂದು ಆಕೆಯು ತೌರುಮನೆಗೆ ಹೋಗುವದಕ್ಕೆ ಆ ಸಂಜೆ ಆಕೆಯ ಗಂಡನು ಅನುಮತಿ ಕೊಡುತ್ತಾನೆ. ಆಕೆಯು ಹತ್ತಿರಿರುವ ರೈಲ್ವೇ ಸ್ಟೇಷನ್ನಿನಲ್ಲಿ ಟಿಕೆಟ್ಟನ್ನು ಕೊಂಡು ಪ್ರಯಾಣ ಮಾಡುತ್ತಾಳೆ. ಬಹುಕಾಲ ಬೇಸರ–ಬಳಲಿಕೆಗಳ ಸೆರೆಮನೆಯ ವಾಸದ ಅನಂತರ, ಪಂಜರದಿಂದ ಬಿಡುಗಡೆ ಹೊಂದಿದ ಪಕ್ಷಿಯಂತೆ ಅರಣ್ಯದೊಳಗೆ ಓಡಿಹೋಗಿ, ಹೊಟ್ಟೆ ಒಡೆಯುವಂತೆ ನಕ್ಕು ನಕ್ಕು ತನ್ನ ಬಹುಕಾಲದ ಬಳಲಿಕೆಯ ಹೊರೆಯನ್ನು ಇಳಿಸಿಕೊಳ್ಳುತ್ತಾಳೆ. ಆಕೆ ಸ್ವಚ್ಛಂದವಾಗಿ ಸುತ್ತಾಡಿ, ಸುತ್ತಲ ಹಳ್ಳಿಯ ರೈತರಿಂದ ಕೊಂಡು ತಂದು ಊಟಮಾಡಿ, ಸೂರ್ಯ ಮುಳುಗಿದಾಗ ಒಂದು ಹುಲ್ಲು ಬಣವೆಯ ಕೆಳಗೆ ಮಲಗಿದಳು, ಮರುದಿನ ಬೆಳಿಗ್ಗೆ ಆಕೆಯು ಪುನಃ ಸ್ವಚ್ಛಂದವಾಗಿ ಸುತ್ತುವದಕ್ಕೆ ತೊಡಗಿದಳು. ಆದರೆ ಅಯ್ಯೋ! ಆಕೆಯು ತನ್ನ ಗಂಡನ ಧ್ವನಿಯನ್ನೇ ದೂರದಲ್ಲಿ ಕೇಳಿ ತೀರಾ ಹೌಹಾರಿದಳು, ಹಿಂದಿನ ದಿನದ ಭಿಕ್ಷುಕನೊಡನೆ ಆಕೆಯ ಗಂಡನೂ ಸ್ವೇಚ್ಛೆಯಾಗಿ ತಿರುಗಾಡಲು ಬಂದಿದ್ದನು. ಆತನೂ ಆಕೆಯಂತೆಯೇ ಬೇಸರ–ಬಳಲಿಕೆಗಳ ಸಂಕಟಕರವಾದ ಹೊರೆಯಿಂದ ನರಳುತ್ತಿದ್ದನು. ಆದ್ದರಿಂದ ಕೆಲವು ಕಾಲ ಸ್ವೇಚ್ಛೆಯಾಗಿರುವ ವಿರಾಮ ಜೀವನವನ್ನು ಅವನೂ ಬಯಸಿದ್ದನು. ಅವಿಶ್ವಾಸವನ್ನು ತೋರಿಸಿಕೊಳ್ಳಬೇಕಾದೀತೆಂಬ ಭಯದಿಂದ ಗಂಡ ಹೆಂಡರಿಬ್ಬರು ತಮ್ಮ ಹೃದಯಗಳಲ್ಲಿದ್ದ ವ್ಯಥೆಯನ್ನು ಪರಸ್ಪರ ಹೇಳಿಕೊಳ್ಳಲಾರದವರಾಗಿದ್ದರು. ಇತರರನ್ನು ಸಂತೋಷಪಡಿಸುವ ನಮ್ಮ ಎಲ್ಲಾ ವ್ಯಥೆಗಳೂ ಈ ಬಗೆಯವೇ ಇವೆ. ನಿಮ್ಮ ಆತ್ಮಕ್ಕೆ ನೀವು ಸತ್ಯವಾಗಿರಿ; ಕ್ರೈಸ್ತಶಾಸ್ತ್ರದ ಕಲ್ಪನೆಯಂತೆ ಜಗದಾದಿ ದಂಪತಿಗಳಾದ ಆಡಂ–ಈವ್ ಪ್ರಸಂಗವನ್ನು ಹಿಂಬಾಲಿಸಿ, ರಾತ್ರಿ ಬಂದಂತೆ ಮುಚ್ಚಿಟ್ಟುಕೊಳ್ಳುವ ನಾಚಿಕೆಯ ಭಾವನೆಯೇ ಇವತ್ತಿನ ಎಲ್ಲಾ ಪಾಪಗಳ (ಜನನೀ) ಜನಕವಾಗುತ್ತದೆ. ಬೇರೆಯವರ ಇರುವಿಕೆಯಿಂದಲೇ ತುಳಿಯಲ್ಪಟ್ಟಂತೆ ಭಾವನೆ ಬಂದರೆ, ಅದು ಪರಮ ಶ್ರೇಷ್ಠ ಆತ್ಮನಾದ ಒಬ್ಬನೇ ದೇವರ ವಿರುದ್ಧ ಅತ್ಯಂತ ಹೀನವಾದ ದೂಷಣೆಯೇ ಸರಿ. ಪರಮಾತ್ಮನಾದ ತನ್ನ ಪ್ರತ್ಯಗಾತ್ಮನಿಗೆ ಪ್ರಾಮಾಣಿಕ ನಿಷ್ಠೆಯಿಂದ ಇರುವದರಿಂದ ಮಾತ್ರ ಒಬ್ಬನು ಪ್ರಪಂಚಕ್ಕೇ ಬೆಳಕಾಗಬಲ್ಲನು. ಅತ್ಯಂತ ಶ್ರೇಷ್ಠ ವ್ಯಕ್ತಿಭಾವನೆಯು ಪರಾರ್ಥಭಾವನೆಯೇ ಆಗುತ್ತದೆ. ವಾಸ್ತವವಾಗಿಯೂ ಪರಾರ್ಥವಾದವೆಂಬುದೇ ತಪ್ಪು ಹೆಸರು; ಅಪಪ್ರಯೋಗ. ಪರಹಿತ ಸಾಧನೆಯ ಭಾವನೆಯು ಗುರುತ್ವಾಕರ್ಷಣ ಕೇಂದ್ರವನ್ನು

ನಮ್ಮಿಂದ ಹೊರಗೆಸೆಯುತ್ತದೆ. ಯಾವದರಿಂದ ನ್ಯೂಟನ್ ಮಹಾಶಯನು ಮಾನವ ಕುಲದ ಪರಮೋಪಕಾರಿಗಳಲ್ಲಿ ಒಬ್ಬನೆನಿಸಿದನೋ ಅಂಥಾ ಗುರುತ್ವಾಕರ್ಷಣ ನಿಯಮವನ್ನು ಅವನು ಕಂಡು ಹಿಡಿಯುತ್ತಿದ್ದಾಗ ನಿಜವಾಗಿಯೂ ಅವನೆಂದಿಗೂ ಪರರ ಚಿಂತೆಯನ್ನು ಮಾಡುತ್ತಿರಲಿಲ್ಲ. ಎಲ್ಲಾ ಅಪಪ್ರಯೋಗಗಳನ್ನೂ ನಾವು ಕೈಬಿಡೋಣ. ಡಾಕ್ಟರ್ ಜಾನ್‌ಸನ್ "ಒಬ್ಬ ಬಾಲಕನು ಯಾವದೋ ಒಂದು ಕಿಟಕಿಯಿಂದ ನೋಡಿ, ಇನ್ನೊಂದು ಕಿಟಕಿಯಿಂದ ನೋಡಿದೆನೆಂದರೆ ಅವನನ್ನು ಬಾರುಕೋಲಿನಿಂದ ಬಾರಿಸಿ," ಎಂದು ಹೇಳಿದ್ದಾನೆ.

೧೪೧. ಹೊಗಳಿಕೆಯ ಬಲೆ

(ಬೆಂಜಾಮಿನ್ ಫ್ರ್ಯಾಂಕ್ಲಿನ್ ಮಹಾಶಯನ ಅನುಭವ)

ಬೆಂಜಾಮಿನ್ ಫ್ರ್ಯಾಂಕ್ಲಿನ್‌ನು ತನ್ನ ಸ್ವಂತ ಜೀವನ ಚರಿತ್ರೆಯಲ್ಲಿ ತನ್ನ ಬಾಲ್ಯದ ಒಂದು ಅನುಭವವನ್ನು ಹೇಳಿದ್ದಾನೆ. ಅವನು ಹುಡುಗನಾಗಿದ್ದಾಗ ಫಿಲಿಡಲ್‌ಫಿಯಾದಲ್ಲಿ ಸ್ಕೂಲಿಗೆ ಹೋಗುತ್ತಿದ್ದನು. ಒಂದು ದಿನ ಅವನು ಶಾಲೆಗೆ ಹೋಗುತ್ತಿದ್ದಾಗ ಒಬ್ಬ ಕಮ್ಮಾರನು ಕೆಲಸಮಾಡುತ್ತಿದ್ದುದನ್ನು ನೋಡಿದನು. ಆಗಿನ ಕಾಲದಲ್ಲಿ ಯಂತ್ರೋಪಕರಣಗಳು ಈಗಿನ ಕಾಲದಷ್ಟು (೧೯೦೪-೫) ಸಂಧಾರಣೆಯಾಗಿ ಉತ್ತಮ ಸ್ಥಿತಿಗೆ ಬಂದಿರಲಿಲ್ಲ. ಆ ಕಮ್ಮಾರನು ತನ್ನ ಕುಲುಮೆಯಲ್ಲಿ ಕೆಲಸ ಮಾಡುತ್ತಿದ್ದನು. ಬೆಂಜಾಮಿನ್‌ನು ಒಬ್ಬ ಕುತೂಹಲಿಯಾದ ಬಾಲಕನಂತೆ ಅಲ್ಲಿ ನಿಂತು ಅವನ ಕೆಲಸವನ್ನು ನೋಡುತ್ತಿದ್ದನು. ಮಕ್ಕಳು ತಮಗೆ ಆಸಕ್ತಿಯಿರುವ ಯಾವ ಭಾವನೆಯಲ್ಲಿ ಆದರೂ ಮುಳುಗಿ ಮೈಮರೆಯುತ್ತಾರೆ. ಅವನು ಸ್ಲೇಟು ಪುಸ್ತಕಗಳ ಚೀಲವನ್ನು ಹೆಗಲಿಗೆ ಹಾಕಿಕೊಂಡು ಸ್ಕೂಲಿಗೆ ಹೋಗುತ್ತಿದ್ದನು; ಆದರೆ ಆ ಕಮ್ಮಾರನ ಕೆಲಸವನ್ನು ನೋಡುವ ವಿನೋದ ಸುಖದಲ್ಲಿ ಅವನು ತನ್ನ ಶಾಲೆಯನ್ನೇ ಮರೆತುಬಿಟ್ಟನು. ಆ ಕಮ್ಮಾರನು ಈ ಹುಡುಗನ ಅತಿಯಾದ ಆಸಕ್ತಿಯನ್ನು ಗಮನಿಸಿದನು. ಅವನು ತನ್ನ ಆಯುಧಗಳನ್ನೂ ಉಪಕರಣಗಳನ್ನೂ ಕತ್ತಿ, ಚಾಕುಗಳನ್ನೂ ಸಾಣೆ ಹಿಡಿಯುತ್ತಿದ್ದನು. ಕಮ್ಮಾರನ ಸಹಾಯಕ ಕೆಲಸಗಾರನು ಆ ದಿನ ಕೆಲಸಕ್ಕೆ ಬಂದಿರಲಿಲ್ಲ, ತನ್ನ ಕೆಲಸದಲ್ಲಿ ಆ ಹುಡುಗನಿಗಿದ್ದ ಅಷ್ಟೊಂದು ಪ್ರೀತಿಯನ್ನು ನೋಡಿ ಕಮ್ಮಾರನು ಹುಡುಗನನ್ನು ಕರೆದನು. ಬೆಂಜಾಮಿನ್ನನು ಅವನಲ್ಲಿಗೆ ಹೋದನು. ಆ ಕಮ್ಮಾರನು "ಆಹಾ! ನೀನು ಎಷ್ಟು ಒಳ್ಳೆಯ ಹುಡುಗ, ಎಷ್ಟು ಸೊಗಸಾಗಿದ್ದಿ, ಬಹಳ ಜಾಣನಾಗಿ ತೋರುತ್ತಿದ್ದಿ!" ಎಂದನು. ಚಿಕ್ಕ ಬೆಂಜಾಮಿನ್ನನು ಈ ಹೊಗಳಿಕೆಯಿಂದ ಬಹಳ ಸಂತೋಷಗೊಂಡು ಉಬ್ಬಿದನು. ಕಮ್ಮಾರನು ಬೆಂಜಾಮಿನ್ನನ ಮುಖದ ಮೇಲೆ ಉಕ್ಕುತ್ತಿದ್ದ ಸಂತೋಷದ ಕಳೆಯನ್ನು ನೋಡಿ ಮತ್ತಷ್ಟು ತನ್ನ ಹತ್ತಿರಕ್ಕೆ ಕರೆದು ಬೆನ್ನು ಚಪ್ಪರಿಸಿ, ಮುದ್ದಿಸಿ, ಆ ಸಾಣೆಯ ಕಲ್ಲನ್ನು ತಿರುಗಿಸುವದರಲ್ಲಿ ತನಗೆ ಸಹಾಯವಾಗಬೇಕೆಂದು ಕೇಳಿದನು. ಬೆಂಜಾಮಿನ್ನನು

ಕೂಡಲೇ ಆ ಕೆಲಸ ಮಾಡುವದಕ್ಕೆ ತೊಡಗಿದನು. ಮಕ್ಕಳು ಸ್ವಾಭಾವಿಕವಾಗಿಯೇ ಬಹಳ ಚಟುವಟಿಕೆಯುಳ್ಳವರಾಗಿರೆತ್ತಾರೆ; ಮತ್ತು ಏನಾದರೂ ಕೆಲಸ ಮಾಡುತ್ತಿರ ಬೇಕೆಂದು ಬಯಸುತ್ತಾರೆ. ಅವರ ಹಾಸ್ಯ ಪ್ರವೃತ್ತಿಯನ್ನು ಸ್ವಲ್ಪ ಕೆರಳಿಸಿ, ಉಪಾಯದಿಂದ ಒಲಿಸಿಕೊಂಡರೆ, ಅವರನ್ನು ಪ್ರಪಂಚದ ಇನ್ನೊಂದು ತುದಿಗೆ ಸಹ ಕಳಿಸಿಕೊಡಬಹುದು. ಬೆಂಜಾಮಿನ್ನನು ಸಾಣೆಯ ಯಂತ್ರವನ್ನು ತಿರುಗಿಸುತ್ತಿದ್ದಾಗ ಆ ಕಮ್ಮಾರನು ಅವನನ್ನು ಹೊಗಳುತ್ತಾ ತಮಾಷೆ ಮಾಡುತ್ತಾ ಅವನಿಂದ ಕೆಲಸ ಮಾಡಿಸುತ್ತಾ ಹೋದನು. ಆ ಹುಡುಗನೂ ಖುಷಿಯಾಗಿ ಕೆಲಸಮಾಡುತ್ತಾ ಹೋದನು. ಅಷ್ಟರೊಳಗೆ ಆ ಕಮ್ಮಾರನು ಅನೇಕ ಚಾಕುಗಳನ್ನೂ ಕತ್ತಿಗಳನ್ನೂ ಕೊಡಲಿಗಳನ್ನೂ ಸಾಣೆಗೆ ಹಿಡಿದು ಹರಿತ ಮಾಡಿಕೊಂಡನು. ಬಹಳ ಹೊತ್ತಾದುದರಿಂದ ಆ ಹುಡುಗನಿಗೆ ಆಯಾಸವಾಗಿ ಶಾಲೆಯ ಮತ್ತು ಬಾಲಕರ ಪ್ರಾರ್ಥನೆಯ ಸಮಯದ ನೆನಪು ಬಂದು, ಆ ಕೆಲಸವನ್ನು ಬಿಟ್ಟು ಹೊರಡಬೇಕೆನ್ನಿಸಿತು. ಆದರೆ ಅವನನ್ನು ಹೊಗಳುತ್ತಾ ತಮಾಷೆ ಮಾಡುತ್ತಾ ಇದ್ದ ಕಮ್ಮಾರನು "ಓ, ಎಷ್ಟು ಒಳ್ಳೇ ಹುಡುಗ ನೀನು; ಎಷ್ಟು ಚುರುಕಾಗಿದ್ದಿ, ಮುದ್ದಾಗಿದ್ದಿ, ಶಾಲೆಯಲ್ಲಿ ನಿಮ್ಮ ಉಪಾಧ್ಯಾಯರು ಯಾರೂ ನಿನ್ನನ್ನು ಶಿಕ್ಷಿಸುವದಿಲ್ಲವೆನ್ನುವದು ನನಗೆ ಗೊತ್ತು. ಬೇರೆ ಹುಡುಗರು ಮೂರು ಗಂಟೆಗಳಲ್ಲಿ ಮಾಡುವ ಅಭ್ಯಾಸವನ್ನು ನೀನು ಒಂದೇ ಗಂಟೆಯಲ್ಲಿ ಮಾಡಬಲ್ಲೆ. ಆದ್ದರಿಂದ ನಿನ್ನ ಗುರುಗಳು ನಿನ್ನ ಮೇಲೆ ಸಿಟ್ಟು ಮಾಡುವದಿಲ್ಲ. ನೀನು ಎಲ್ಲರಿಗೂ ಬಹಳ ಅಚ್ಚು ಮೆಚ್ಚಾಗಿದ್ದಿ" ಎಂದು ಪ್ರೋತ್ಸಾಹಿಸುತ್ತಿದ್ದನು. ಒಂದಾದ ಮೇಲೆ ಒಂದರಂತೆ ಅವನು ತನ್ನ ಆಯುಧಗಳನ್ನು ಹರಿತ ಮಾಡುತ್ತಲೇ ಇದ್ದನು; ಆ ಬಾಲಕನನ್ನು ಬಿಡಲೇ ಇಲ್ಲ. ಬೆಳಿಗ್ಗೆ ೧೦ ಗಂಟೆಗೆ ಪ್ರಾರ್ಥನೆಯ ಸಮಯವಾದರೆ, ೧೨ ಗಂಟೆಗೆ ಕಮ್ಮಾರನಿಂದ ಬಿಡುಗಡೆ ಆಯಿತು. ಆಗ ಅವನು ಶಾಲೆಗೆ ಹೋದನು. ಆ ದಿನ ಅವನು ಬಹಳ ತಡವಾಗಿ ಬಂದುದರಿಂದ ಉಪಾಧ್ಯಾಯರು ಅವನನ್ನು ಬೆತ್ತದಿಂದ ಚೆನ್ನಾಗಿ ಹೊಡೆದರು. ಕಮ್ಮಾರನ ಕುಲುಮೆಯಲ್ಲಿ ಬಹಳ ಹೊತ್ತು ಕೆಲಸಮಾಡಿ ಸೋತಿದ್ದ ಕೈಗಳು ಮಾಷ್ಟರಿಂದ ಏಟನ್ನೂ ತಿಂದು ಹುಣ್ಣಾದವು. ಇದರ ಪರಿಣಾಮವಾಗಿ ಒಂದು ವಾರ ಅವನು ನರಳಬೇಕಾಯಿತು. ಆಗ ಅವನು ಪಾಠವನ್ನು ಓದುವದೂ ಸಾಧ್ಯವಾಗಲಿಲ್ಲ. ಅಂದಿನಿಂದ ಅವನ ಜೀವಮಾನದಲ್ಲೆಲ್ಲಾ ಯಾರಾದರೂ ಅವನನ್ನು ಹೊಗಳಿದ ಕೂಡಲೇ "He has an axe to grind" "ಅವನು ಮಸೆದು ಕೊಳ್ಳಬೇಕಾದ ಕೊಡಲಿ ಇದ್ದೇ ಇದೆ; ಅದರಲ್ಲಿ ಅವನ ಸ್ವಾರ್ಥ ಸಾಧನೆಯ ಉದ್ದೇಶವು ಇದ್ದೇ ಇದೆ" ಎಂದು ಅವನ ಮನಸ್ಸಿನಲ್ಲಿ ಬರುತ್ತಿತ್ತು, ಬಾಲ್ಯದ ಆ ಘಟನೆಯ ಅನಂತರ ಬೆಂಜಾಮಿನ್ ಫ್ರ್ಯಾಂಕ್ಲಿನ್ನನು ಮುಖಸ್ತುತಿಯ ಜಾಲದಲ್ಲಿ ಎಂದೂ ಬೀಳಲಿಲ್ಲ; ಹೊಗಳಿಕೆಗೆ ಮೋಸಹೋಗಲಿಲ್ಲ.

೧೪೨. ಮಾಯೆ-ವೈಷಯಿಕ ಸುಖ-ದುಃಖ

(ಗುಲಾಬಿ-ದುಂಬಿ)

ಭಾರತದಲ್ಲಿ ಕೆಲವು ಪ್ರಾಂತ್ಯಗಳಲ್ಲಿ ಬೆಂಕಿಯ ಕೊಳ್ಳಿಯನ್ನು ಅಥವಾ ಪಂಜಿನ ಜ್ವಾಲೆಯನ್ನು (Mahratti jwala) ತಿರುಗಿಸುವದು ಅಸಾಧಾರಣವೇನಲ್ಲ. ಭರಭರನೆ ಉರಿಯುವ ಪಂಜನ್ನು ಗಿರಗಿರನೆ ಸುತ್ತಿಸುವಾಗ ನಿಗಿ ನಿಗಿ ಹೊಳೆಯುವ ಜ್ವಾಲೆಯು ಒಮ್ಮೆ ಬೆಳಕಿನ ವಿಶಾಲವಾದ ವೃತ್ತದಂತೆ, ಇನ್ನೊಮ್ಮೆ ತುಂಡಾಗದಿರುವ ಬೆಂಕಿಯ ರೇಖೆಯಂತೆ, ಗೆರೆಯಂತೆ, ಪಟ್ಟಿಯಂತೆ, ಮತ್ತೊಮ್ಮೆ ಪ್ರಕಾಶದ ಅಂಡ ವೃತ್ತಾಕೃತಿಯಂತೆ, ಮೇಲೇರಿ, ಕೆಳಗಿಳಿದು, ಅಡ್ಡತಿರುಗಿ, ತನ್ನ ತೀವ್ರವಾದ ಪರಿಭ್ರಮಣದಲ್ಲಿ ವಿಸ್ಮಯಕಾರಕವಾದ, ವಿನೋದಕರವೂ ಆದ ವಿವಿಧ ಆಕೃತಿಗಳನ್ನೂ ರೂಪಗಳನ್ನೂ ಪಡೆದಂತೆ ತೋರುತ್ತದೆ. ಈಗ ಎಲ್ಲಾ ಆಕೃತಿವೈಚಿತ್ರ್ಯಗಳು ಆ ಪಂಜಿನ ಉರಿಯಲ್ಲಿ ಸ್ವಭಾವಸಿದ್ಧವಾಗಿ, ಅಂತರ್ಗತವಾಗಿ ಇವೆಯೋ ? ಅವು ಆ ಕೊಳ್ಳಿಯಿಂದ ಹೊರಗೆ ಬರುವವೆ ? ಅಥವಾ ಅವು ಹೊರಗಿಂದ ಬರುತ್ತವೆಯೆ ? ಆ ಪಂಜನ್ನು ಗಿರ್ರನೆ ತಿರುಗಿಸದಿರುವಾಗ ಆ ವಿಚಿತ್ರವಿಲಾಸವು ಅದರೊಳಗೆ ಪ್ರವೇಶಿಸುವದೆ ? ಅಥವಾ ಅದು ಹೊರಗೆ ಬೇರೆ ಎಲ್ಲಿಗಾದರೂ ಹೋಗುವದೆ ? ಕುತೂಹಲ ಕರವಾದ ಬಗೆ ಬಗೆಯ ಈ ಎಲ್ಲಾ ಪ್ರಶ್ನೆಗಳಿಗೂ "ಇಲ್ಲ, ಇಲ್ಲ, ಇಲ್ಲ" ಎಂದು ನಿಷೇಧರೂಪವಾದ ಉತ್ತರವನ್ನೇ ಕೊಡಬೇಕಾಗುತ್ತದೆ. ಪಂಜು ಚಲಿಸಿ, ಗಿಮಿ ಗಿಮಿ ವೇಗದಿಂದ ಸುತ್ತುವಾಗ ನೇರವಾದ ಮತ್ತು ವಕ್ರವಾದ ರೇಖೆಗಳನ್ನು ತೋರಿಸುತ್ತದೆ ; ಆ ಚಲನೆಯು ನಿಂತಾಗ ಪಂಜಿನಲ್ಲಿ ಅಂಥಾ ವಿಚಿತ್ರ ತೋರಿಕೆಯ ಸುಳಿವೂ ಇರುವದಿಲ್ಲ. ಪಂಜು ವೇಗವಾದ ಪರಿಭ್ರಮಣೆಯಲ್ಲಿ ಇದ್ದಾಗ ಕೂಡ ಆ ವಕ್ರ ರೇಖೆಗಳ ಯಾವ ಆಕೃತಿಗಳೂ ನಿಜವಾಗಿ ಇರಲಿಲ್ಲ. ಅವು ತೋರಿಕೆ ಮಾತ್ರ ; ಅವು ಕ್ಷಣಿಕವಾಗಿ ತೋರಿ ಅಡಗಿದವು.

ಇದೇ ಪ್ರಕಾರ, ಚಲಿಸದೆ ಸುಮ್ಮನಿರುವ ಪಂಜಿನಂತೆ, ಶುದ್ಧ ಚೈತನ್ಯದಲ್ಲಿ ಅನೇಕ ವಿಧವಾದ ನಾಮರೂಪಗಳ-ದೃಶ್ಯ ಪ್ರಪಂಚದ-ಸೆಲೆಯೋ ಇಲ್ಲ. ಬಗೆ ಬಗೆಯ ನಾಮರೂಪಗಳು ತೋರುತ್ತಿರುವಾಗಲೂ ಪಂಜಿನ ಬೆಳಕಿನ (ಬೆಂಕಿಯ) ಆಕೃತಿಗಳಂತೆ ಅವು ಕೇವಲ ಭ್ರಮಾತ್ಮಕವಾದುವು. ದೃಶ್ಯವಿಲಾಸದ ದೋಷವು ಶುದ್ಧ ಚಿತ್ತನ್ನು ಚೈತನ್ಯವನ್ನು —ಎಂದೂ ಸೋಂಕುವದಿಲ್ಲ. ಚೈತನ್ಯವನ್ನು ದೃಶ್ಯವಿಲಾಸವು ಸೋಕುವದೂ ಇಲ್ಲ, ಬಾಧಿಸುವದೂ ಇಲ್ಲ. ಅವಿಭಾಜ್ಯವಾದ ಒಂದೇ ಜ್ಯೋತಿಯು ಯಾವಾಗಲೂ ಎಲ್ಲಾ ದೃಶ್ಯವಿಲಾಸಗಳಲ್ಲಿಯೂ ಸಮನಾಗಿದೆ ; ಆದರೆ ದೃಶ್ಯ ವಿಲಾಸವು ಮಾತ್ರ ಎಂದೂ ಜ್ಯೋತಿ (ಜ್ವಾಲೆ) ಯಲ್ಲಿ ಇಲ್ಲ. ಇದೇ ರೀತಿಯಲ್ಲಿ ಎಲ್ಲಾ ನಾಮ ರೂಪಗಳಲ್ಲಿಯೂ ಬ್ರಹ್ಮವಾಗಿರುವ ರಾಮನು ಅಭಿವ್ಯಕ್ತನಾಗಿದ್ದಾನೆ ; ಆದರೆ ರಾಮನಲ್ಲಿ ನಾಮರೂಪಗಳು ಕ್ಷಣಿಕವೂ ಶೂನ್ಯಪ್ರಾಯವೂ ಆದುವು.

ಪಂಚಿನ ಘಟನೆಯಲ್ಲಿ ಗೋಚರವಾಗುವ ದೃಶ್ಯಚಮತ್ಕಾರಕ್ಕೆ ಹೇಗೆ ಚಲನೆಯೇ ಕಾರಣವೋ ಹಾಗೆ ನಾಮರೂಪಾತ್ಮಕ ಪ್ರಪಂಚದ ನಾನಾತ್ವದ–ವೈವಿಧ್ಯತೆಯ–ತೋರಿಕೆಗೆ ಚೈತನ್ಯದ ಮಾಯಾಶಕ್ತಿಯೇ ಕಾರಣ.

ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ !

ಶಕ್ತಿಗೆ ಸ್ವತಂತ್ರವಾದ, ತನ್ನ ಸ್ವಂತ ಇರುವಿಕೆ ಇಲ್ಲ. ಅದು ಒಮ್ಮೆ ವ್ಯಕ್ತವಾಗಬಹುದು; ಇನ್ನೊಮ್ಮೆ ವ್ಯಕ್ತವಾಗದೆ ಇರಬಹುದು. ಹೇಗಾದರೂ ಅದು ಆತ್ಮನನ್ನು ಬಿಟ್ಟು ಬೇರೆ ಇರಲಾರದು. ಈ ಮಾಯಾ ಶಕ್ತಿಯು ವ್ಯಕ್ತಿ ಸಂಬಂಧದಲ್ಲಿ ಅರಿವು ಎನ್ನಬಹುದಾದರೆ ಆ ಅರಿವು, ಚಲನೆ, ಚಲನವಲನ, ಚಟುಪಟಿಕೆ, ಕ್ರಿಯೆ, ಮನಸ್ಸು—ಈ ರೂಪಗಳಾಗಿ ತೋರಿಕೊಳ್ಳುತ್ತದೆ. ಚಲನೆಯಲ್ಲಿರುವ ಮನಸ್ಸು ಮತ್ತು ದೃಶ್ಯಪ್ರಪಂಚ ಇವೆರಡೂ ಒಂದೇ ವಸ್ತುವಿನ ಮುಮ್ಮುಖ, ಹಿಮ್ಮುಖಗಳಾಗಿವೆ. ಚಲಿಸದೆ ಸುಮ್ಮನಿರುವ ಮನಸ್ಸು ಅರಿವಿನೊಡನೆ (Consciousness) ಒಂದಾಗಿದೆ. ಕಾಮಗಳ ಮತ್ತು ಆಸಕ್ತಿಗಳ ಕಶ್ಮಲವನ್ನು ಕಳೆದ ಕೇವಲ (ಬ್ರಹ್ಮ) ಮನಸ್ಸು ತನ್ನ ಚಾಂಚಲ್ಯವನ್ನು ಬಿಟ್ಟು, ಸ್ಥಿರವಾಗುವ ಒಲವನ್ನು ಪಡೆಯುತ್ತದೆ. ಸಂಪೂರ್ಣ ಸ್ಥಿರತೆಯುಂಟಾದರೆ, ಮನಸ್ಸು ಬ್ರಹ್ಮದೊಡನೆ ಒಂದಾಗಿದೆ, ಅಥವಾ ಮನಸ್ಸು ಬ್ರಹ್ಮವಾಗಿದೆ. ಈ ಸಾಕ್ಷಾತ್ಕಾರದಿಂದ ಮಾಯೆಯನ್ನು ಮೀರಬಹುದು, ಜಯಿಸಬಹುದು; ಪ್ರಪಂಚವು ಪರಿವರ್ತನೆಯಾಗಿ ನಂದನ ವನವಾಗುತ್ತದೆ. ಕಳೆದುಹೋದ ಸ್ವರ್ಗವು ಕೂಡಲೇ ಪುನಃ ಲಭಿಸುತ್ತದೆ. ಎಲ್ಲೆಲ್ಲಿಯೂ ಸೌಂದರ್ಯವು ಒಡೆದು ತೋರುತ್ತದೆ. ಭೇದಜ್ಞಾನವು ನಾಶವಾಗುವದರಿಂದ ಎಲ್ಲಾ ಚಿಂತೆಗಳೂ ಕಳವಳಗಳೂ ಪರಮ ದಿವ್ಯ ಸಚ್ಚಿದಾನಂದ ಸ್ವರೂಪದಲ್ಲಿ ಎಂದೆಂದಿಗೂ ಲೀನವಾಗಿ ಹೋಗುತ್ತವೆ.

ರಾಮನ ಸಮ್ಮುಖದಲ್ಲಿ, ಒಬ್ಬ ಯುವಕನು ಸುಗಂಧದ ಸುಖಾನುಭವಕ್ಕಾಗಿ ಒಂದು ಸುಂದರವಾದ ಗುಲಾಬಿಯನ್ನು ಗಿಡದಿಂದ ಕಿತ್ತನು. ಅದರ ಪರಿಮಳವನ್ನು ಸೇವಿಸುವದಕ್ಕಾಗಿ ಅದನ್ನು ಅವನು ತನ್ನ ಮೂಗಿನ ಹತ್ತಿರ ತಂದ ಕೂಡಲೇ ಅದರೊಳಗಿಂದ ಒಂದು ಜೇನುಹುಳುವು ಹಾರಿ ಅವನ ಮೂಗಿನ ತುದಿಯನ್ನು ಕಡಿಯಿತು. ನೋವಿನಿಂದ ಅವನು ಕೂಗಿಕೊಂಡನು, ಕೈಯಿಂದ ಆ ಗುಲಾಬಿಯು ಜಾರಿಬಿದ್ದಿತು.

ಪ್ರತಿಯೊಂದು ಗುಲಾಬಿಯು ದಳಗಳೂ ಒಂದು ಜೇನುಹುಳುವನ್ನು ಮುಚ್ಚಿಟ್ಟು ಕೊಳ್ಳುವುದೆ? ಖಂಡಿತವಾಗಿಯೂ; ಪೀಡಾಕರವಾದ ಜೇನುಹುಳುವನ್ನು ಮುಚ್ಚಿಟ್ಟುಕೊಳ್ಳದ ವಿಷಯ ಸುಖದ ಒಂದು ಗುಲಾಬಿಯೂ ಇಲ್ಲ. ಅಂಕೆಯಿಲ್ಲದ ಆಶೆಗಳನ್ನು ಅನಿವಾರ್ಯವಾದ ದುಃಖಗಳು ಶಿಕ್ಷಿಸುತ್ತವೆ.

ಭಯಂಕರವಾದ ಮರೆವೆಗೆ ತುತ್ತಾಗಿರುವ ಓ ಜನರೆ, ನಿಮ್ಮನ್ನು ನೀವು ಮರೆಯಬೇಡಿರಿ. ಬೆಡಗಿನ ಗುಲಾಬಿಯನ್ನು ನೀವು ಕೀಳಬೇಕಾದುದಿಲ್ಲ. ಪ್ರತಿಯೊಂದು

ಪ್ರಫುಲ್ಲಿತ ಗುಲಾಬಿಯಲ್ಲಿರುವ ಮಧುರ ಸೌಂದರ್ಯವೂ ಸೌಗಂಧವೂ ನಿಮ್ಮದೇ, ನೀವೇ, ರಾಜನೂ ಅವನ ಪರಿವಾರವೂ ನಿಮ್ಮವೇ ಆಗಿವೆ, ಸೌಂದರ್ಯವೂ ಆಕೆಯ ಮೋಹಾಕರ್ಷಣೆಯೂ ರತ್ನ-ಬಂಗಾರಗಳೂ ಅವುಗಳ ಕಾಂತಿಯೂ ನಿಮ್ಮವೇ. ವ್ಯರ್ಥವಾದ ಕಾಮಂಗಳನ್ನು ಏತಕ್ಕಾಗಿ ಬೆಳೆಸಬೇಕು ? ಸರ್ವಸ್ವದಲ್ಲಿ, ದೇವರಲ್ಲಿ ನಿಮ್ಮ ಏಕತ್ವವನ್ನು ಅರಿಯಿರಿ. ಏಕಕಾಲದಲ್ಲಿ, ಸಹಸ್ರಾರು ಗೋಪಸ್ತ್ರೀಯರ ಒಬ್ಬೊಬ್ಬರ ಕೈಯಲ್ಲಿಯೂ ಕೈಯಿಟ್ಟು ರಾಸಕ್ರೀಡೆಯಾಡಿದ ದಿವ್ಯ ಕೃಷ್ಣನೇ ನೀವು. ಸಮುದ್ರದಲ್ಲಿಯೂ ಅರಮನೆಯಲ್ಲಿಯೂ, ಹೂದೋಟದಲ್ಲಿಯೂ ಮರುಭೂಮಿಯಲ್ಲಿಯೂ, ಯುದ್ಧ ರಂಗದಲ್ಲಿಯೂ ಅಂತಃಪುರದಲ್ಲಿಯೂ ನೀವು ಯಾವಾಗಲೂ ಸಮವಾಗಿ ಇರುತ್ತೀರಿ.

ಅತ್ಯಂತ ಉನ್ನತವಾದ ಪರ್ವತಶಿಖರಗಳ ತುದಿಯಲ್ಲಿ ನಿಂತು ರಾಮನು ಕೂಗಿ ಹೇಳುತ್ತಾನೆ; ದಾರಿದ್ರ್ಯ ಮತ್ತು ದೌರ್ಬಲ್ಯಗಳನ್ನು ಹೇಳಿಕೊಳ್ಳುತ್ತಿರುವ ದುಃಖಿಗಳೇ, ಸರ್ವಸಮರ್ಥನಾದ ಪರಮಾತ್ಮನೇ, ರಾಮನೇ ನೀವು ನಿಮ್ಮನ್ನು ನೀವು ಅಜ್ಞಾನದಲ್ಲಿ ಸೆರೆಹಾಕಿಕೊಳ್ಳಬೇಡಿ; ನಿಮ್ಮ ಅವಿದ್ಯಾನಿದ್ರೆಯನ್ನೂ ಪ್ರಪಂಚದ ಸ್ವಪ್ನವನ್ನೂ ಝಾಡಿಸಿ, ಓಡಿಸಿರಿ. ಸರ್ವವಸ್ತುಗಳಲ್ಲಿಯೂ ಸರ್ವ ಸಾರವಾಗಿರುವುದು ನಿಮ್ಮ ಹೊರತು ಬೇರೆ ಇಲ್ಲದಿರುವಾಗ, ದುಃಖದುರವಸ್ಥೆಗಳಲ್ಲಿ ಸಹಾಯಶೂನ್ಯರಾಗಿ ಏಕೆ ಹೊರಳಾಡುತ್ತೀರಿ ? ನಿಮ್ಮನ್ನು ನೀವು ಅರಿತರೆ ಎಲ್ಲಾ ದುಃಖಗಳೂ ಮಾಯವಾಗುತ್ತವೆ. ಸರ್ವಸುಖದ ಸಾರವೇ ನೀವು; ಎಲ್ಲಾ ಮೋದ ಪ್ರಮೋದಗಳ ಆತ್ಮವೇ ನೀವು. ನಿಮ್ಮನ್ನು ಯಾವದೂ ಬಾಧಿಸಲಾರದು. ಈ ರಾಮನಿಗಾಗಿ ಆದರೂ ನಿಮ್ಮ ಆತ್ಮನನ್ನು ಅರಿಯಿರಿ; ತಡವೇಕೆ ? ಅದು ಹೇಗಿದೆಯೋ ಹಾಗೆ ಅರಿಯಿರಿ; ಅದನ್ನು ಅರಿಯಲೇ ಬೇಕು. ಕುಂದದ ಸತತೋತ್ಸಾಹದಿಂದಲೂ ಶಕ್ತಿಗುಂದದ ಪ್ರಯತ್ನಗಳಿಂದಲೂ ಆದರೆ, ಎಂದಿಗೂ ಸೋಲದಿರುವ ಸೋಲಿನಿಂದಲೂ ರಾತ್ರಿಹಗಲೂ ನೀವು ಸುಖದ ಬೆನ್ನು ಹತ್ತಿ ಬೇಟೆಯಾಡುತ್ತಿಲ್ಲವೆ ? ತಿಳಿಗೇಡಿಗಳೂ ಮೂರ್ಖರೂ ಆಗಬೇಡಿ. ಇಂದ್ರಿಯ ಗೋಚರ ವಿಷಯಂಗಳಲ್ಲಿ ಸುಖವನ್ನು ಹುಡುಕಬೇಡಿ. ಇಂದ್ರಿಯಂಗಳಿಂದ ವಂಚಿತರಾದವರೆ ! ಹೊರಗೆ ವ್ಯರ್ಥವಾಗಿ ಹುಡುಕುವದನ್ನು ಬಿಡಿ. ಅಮೃತಸಾಗರವು ನಿಮ್ಮೊಳಗೇ ಇದೆ. ಸ್ವರ್ಗಸಾಮ್ರಾಜ್ಯವು ನಿಮ್ಮೊಳಗೇ ಇದೆ. ಅಮೃತಗಳಿಗೆಲ್ಲಾ ಅಮೃತವು ನೀವೇ. ಮನಸ್ಸೂ ಮತ್ತು ಪ್ರಪಂಚವೂ ಎರಡೂ ಕೂಡ ಪರಮಾತ್ಮನ ಅರಿವಿನಲ್ಲಿ ಮುಳುಗಿ ಹೋಗಲಿ. ದಿವ್ಯವಾದ ಆನಂದೋನ್ಮಾದದಲ್ಲಿ ನಿಮ್ಮ ವ್ಯಕ್ತಿಗತವಾದ ಪುಟ್ಟ ಅಹಂಕಾರವನ್ನು ತೂರಿಬಿಡಿರಿ. ಪ್ರತ್ಯೇಕವಾದ ಈ ಮರ್ತ್ಯದೇಹಕ್ಕಾಗಿ, ಓ ಪ್ರೇಮಾತ್ಮರೆ ! ಅಷ್ಟೇಕೆ ಚಿಂತೆ ಮಾಡುತ್ತೀರಿ ? ಈ ಅನಾತ್ಮದ ಗತಿ ಏನಾಗುವದೋ ಎಂದು ಒಂದು ಆಲೋಚನೆಯನ್ನೂ ಮಾಡಬೇಡಿ.

ಎಲ್ಲಾ ಸಂಬಂಧಗಳ ಮೂಢ ನಂಬಿಕೆಯನ್ನೂ ತೊಲಗಿಸಿರಿ. ಪರಮಾತ್ಮನನ್ನು ನೋಡದಿರುವ ಕಣ್ಣುಗಳು ನಾಶವಾಗಲಿ. ಕಾಮಗಳ ರೋಗವನ್ನು ಪೋಷಿಸುವ ಹೃದಯವು ಹಾಳಾಗಲಿ. ದೇವತ್ವವಿಲ್ಲದ ಎಲ್ಲವನ್ನೂ ತೊಡೆದು ಹಾಕಿ. ನಿಮ್ಮಲ್ಲಿ ಆತ್ಮನಿಷ್ಠೆಯು ದೃಢವಾಗಿರಲಿ. ಅಲ್ಲಿ ನಿಂದಾಸ್ತುತಿಗಳು ಪ್ರವೇಶಿಸಲಾರವು ; ಆಗ ಅಲ್ಪವಾದ ಸುಖದುಃಖಗಳು ಕದಲಿಸಲಾರವು. ನಿಮ್ಮ ಹೃದಯ ನೌಕೆಯಲ್ಲಿ ದೇವತ್ವವನ್ನು ಸ್ವೀಕರಿಸಿ ಎಲ್ಲವನ್ನೂ ಹೋಗಬಿಡಿ ;—ಸಮುದ್ರದ ತೀರವನ್ನು ಬಿಡಿ ; ಅಹಂಕಾರವನ್ನು ಹೋಗ ಬಿಡಿ, ನೌಕಾಪಟವನ್ನು ಹೋಗ ಗೊಡಿ ! ಆದರೂ ವಿರಕ್ತಿ-ಭಕ್ತಿಗಳ ಬಿರುಗಾಳಿಯು ನಶ್ವರವಾದ ಮಾನವ ಜೀವದ ಸತ್ತ್ವವಿಲ್ಲದ ಕಪ್ಪು ಹತ್ತಿಯ ಬಡಪಟವನ್ನು ಬಿಡದೆ ತುಂಬಿಕೊಂಡು ಪರಮಾತ್ಮಪ್ರಜ್ಞೆಯ ಮಹಾ ಸಾಗರದ ಮೇಲೆ ನೇರವಾಗಿ ತಡೆಯಿಲ್ಲದೆ ತೇಲಿಸಿ ಸಾಗಿಸುತ್ತದೆ. ದಿವ್ಯವಾದ ಆನಂದಪರವಶತೆಯಲ್ಲಿ ಮುಳುಗಿ ಸತ್ತವನು ಸುಖಿ, ಸುದೈವಿ. ದಿವ್ಯೋನ್ಮಾದದಲ್ಲಿ ಪ್ರಜ್ಞಾಶೂನ್ಯನಾಗುವಷ್ಟು ಅಮಲೇರಿದವನು ಧನ್ಯ ! ಪ್ರಪಂಚದ ವಿಷಯಕ್ಕೆ ಇಲ್ಲದವನಾಗಿ ಆಳವಾದ ಆತ್ಮಾನಂದದ ಪರಮಾನಂದದಲ್ಲಿ ಮುಳುಗಿ ಲೀನನಾದವನೇ ಪರಮ ಪೂಜ್ಯ.

೧೪೩. ನಾಮರೂಪಗಳು ಅನೇಕ–ಆತ್ಮ ಏಕೈಕ

(ಕನ್ನಡಿಯ ಮನೆ–ನಾಯಿ–ರಾಜಕುಮಾರ)

ನಾವು ಕಾಣುತ್ತಿರುವ ಪ್ರಪಂಚ ವಿಲಾಸವು ಜ್ಞಾತೃ ಅಥವಾ ದ್ರಷ್ಟಾ ಮತ್ತು ಜ್ಞೇಯ ಅಥವಾ ದೃಶ್ಯ ಈ ಎರಡರ ಸಂಯೋಗದಿಂದ ಉಂಟಾಗುತ್ತದೆ. ಇವೆರಡೂ ಒಂದನ್ನೊಂದು ಅವಲಂಬಿಸಿವೆ, ಆದ್ದರಿಂದ ಪ್ರಪಂಚವಿಲಾಸವು ಒಂದರಿಂದಲೇ ಉಂಟಾಗುವುದಿಲ್ಲ. ಇದರಿಂದ ದೃಶ್ಯವಿಲಾಸದ ವಿವರಣೆಯನ್ನು ಕೊಡಬೇಕಾದರೆ ವಿಜ್ಞಾನ-ಸತ್ಯತಾ ವಾದಿಯೂ ಮತ್ತು ವಸ್ತು-ಸತ್ಯತಾ ವಾದಿಯೂ ಇಬ್ಬರೂ ಸೇರಿ ಸ್ನೇಹದಿಂದ ಪರಸ್ಪರ ಪೂರಕವಾಗಿ ಹೇಳಿಕೆ ಕೊಡಬೇಕಾಗುತ್ತದೆ. ಯಾರೊಬ್ಬರಿಂದಲೇ ಸಾಧ್ಯವಿಲ್ಲ.

ಇಂಡಿಯಾದಲ್ಲಿ ಕೆಲವು ಮನೆಗಳಲ್ಲಿ ಅನೇಕ ಕನ್ನಡಿಗಳಿರುತ್ತವೆ ; ಗೋಡೆಗಳನ್ನೂ ಮೇಲು ಮಾಳಿಗೆಯ ಒಳಮುಖವನ್ನೂ ಕನ್ನಡಿಗಳಿಂದ ಮುಚ್ಚಿರುವುದುಂಟು. ಅಂಥಾ ಒಂದು ಮನೆಯಲ್ಲಿ ಒಮ್ಮೆ ಒಂದು ನಾಯಿಯು ಪ್ರವೇಶಮಾಡಿತು. ಅದು ತನ್ನ ಸುತ್ತಲೂ ನೂರಾರು ನಾಯಿಗಳನ್ನು ನೋಡಿತು. ಅದು ಮೇಲೆ ನೋಡಿದಾಗಲೂ ಅಲ್ಲಿಯೂ ತನ್ನ ಮೇಲೆ ನೂರಾರು ನಾಯಿಗಳು ಎರಗಿ ಬೆನ್ನಟ್ಟಿ ಬಂದಂತೆ ಕಂಡು ಗಾಬರಿಗೊಂಡು, ಬೊಗಳುವದಕ್ಕೂ ಕಿರಿಚುವದಕ್ಕೂ ಅವುಗಳ ಮೇಲೆ ತಾನೂ ಬಿದ್ದು ಸುತ್ತಲೂ ಕಚ್ಚುವದಕ್ಕೂ ಕುಣಿಯುವುದಕ್ಕೂ ತೊಡಗಿತು. ಇದು ಬಾಯಿ ಕಳೆದು ಕಚ್ಚುವುದಕ್ಕೆ ಹೋದಾಗ ಸುತ್ತಲೂ–ಅವುಗಳೂ ಬಾಯಿ ಕಳೆದು ಕಚ್ಚುವುದಕ್ಕೆ

ಓಡಿ ಬರುತ್ತಿದ್ದವು. ಹೀಗೆ ಸುತ್ತಲೂ ಕಚ್ಚುವದಕ್ಕೆ ಓಡಿ ಬರುತ್ತಿರುವ ನಾಯಿಗಳ ಮಧ್ಯದಿಂದ ತಪ್ಪಿಸಿಕೊಳ್ಳಲಾರದೆ, ಒಳಗೇ ದಿಕ್ಕೆಟ್ಟು ಓಡೋಡಿ ಗೋಡೆಗೆ ಬಡಿದು ಹಿಂದಕ್ಕೆ ಬಿದ್ದು, ಎಗರಾಡಿ, ಕೂಗಿ ಕೂಗಿ, ಕುಣಿ ಕುಣಿದು ಸುಸ್ತಾಗಿ ಕೆಳಗೆ ಬಿದ್ದಿತು. ಅದು ಭಯದಿಂದಲೂ ಸಿಟ್ಟಿನಿಂದಲೂ, ಕುಣಿದಾಟ–ಕೂಗಾಟಗಳಿಂದಲೂ ಧಾಳಿಯಿಂದಲೂ ಅತೀವ ಆಯಾಸಪಟ್ಟು, ನಿರ್ವಿಣ್ಣವಾಗಿ ನೆಲವನ್ನು ಕಚ್ಚಿ ಪ್ರಾಣ ಬಿಟ್ಟಿತು. ಮನೆಯ ಯಜಮಾನನು ಒಳಗೆ ಬಂದು ನೋಡಿ ಸತ್ತು ಬಿದ್ದಿದ್ದ ನಾಯಿಯನ್ನು ಹೊರಗೆತ್ತಿ ಹಾಕಿದನು.

ಅನಂತರ ಒಬ್ಬ ಸುಂದರ ರಾಜಕುಮಾರನು ಆ ಕೋಣೆಯೊಳಗೆ ಬಂದು ಸುತ್ತಲಿರುವ ಕನ್ನಡಿಗಳಲ್ಲಿ 'ತನ್ನದೇ ಆದ ನೂರಾರು ಸುಂದರವಾದ ಪ್ರತಿಬಿಂಬಗಳನ್ನು ನೋಡಿ ಮೆಚ್ಚಿ ಸಂತೋಷಪಟ್ಟನು. ಅವನು ಆ ಕನ್ನಡಿಗಳ ಪ್ರತಿಬಿಂಬಗಳಲ್ಲಿ ಮೊದಲು ತನ್ನ ಚೆಲುವಾದ ಮುಖಭಾವವನ್ನೂ ರೂಪಲಕ್ಷಣಗಳನ್ನೂ ವರ್ಚಸ್ಸನ್ನೂ ವಿಶಾಲವಾದ ನೇತ್ರವನ್ನೂ ಮಾಟಾದ ಮೂಗು–ಬಾಯಿಗಳನ್ನೂ ಅನಂತರ ಕೇಶ, ಕಿರೀಟ, ಉಡಿಗೆಗಳನ್ನೂ, ಹೀಗೆ ಒಂದೊಂದನ್ನೇ ನೋಡಿ ಮೆಚ್ಚಿ ಸಂತೋಷಪಡುತ್ತಿದ್ದನು. ಸುತ್ತಲೂ ಕಾಣುವ ಬೇರೆ ಬೇರೆ ನೂರಾರು ರೂಪಗಳೆಲ್ಲಾ ತನ್ನ ಒಬ್ಬನದೇ ಎಂದು ಅವನು ನಿಶ್ಚಿತವಾಗಿ ತಿಳಿದಿದ್ದರಿಂದ ಅವನಿಗೆ ಆನಂದವಾಯಿತು. ಪ್ರಪಂಚದಲ್ಲಿ ನಾನಾ ವಸ್ತುಗಳೂ ನಾಮರೂಪಗಳೂ ಕಂಡರೂ ಎಲ್ಲವುಗಳಲ್ಲಿಯೂ ಇರುವ ಆತ್ಮನು ತಾನೊಬ್ಬನೇ, ತಾನೇ ಬೇರೆ ಬೇರೆ ನಾಮ ರೂಪಗಳಿಂದ ತೋರಿಕೊಳ್ಳುತ್ತಿರುವದು,—ಎಂದು ನಿಶ್ಚಯವಾಗಿ ತಿಳಿದಾಗಲೇ ಆ ತತ್ತ್ವಜ್ಞನಿಗೆ ವಿಶ್ರಾಂತಿ ದೊರಕುತ್ತದೆ. ಇಲ್ಲವಾದರೆ ನಮ್ಮ ಪಾಡು ಆ ನಾಯಿಯ ಪಾಡಾಗುತ್ತದೆ. ನಮಗೆ ಯಾವಾಗಲೂ ಎಲ್ಲರಿಂದಲೂ ಭಯವೇ–ಸಂಶಯವೇ—ಅಪಾಯವೇ. ಇವನು ನನ್ನನ್ನು ಮೋಸಮಾಡಬಹುದು ; ಅವನು ನನಗೆ ಏನೋ ಅಪಾಯಮಾಡುತ್ತಾನೆ. ಆ ಇನ್ನೊಬ್ಬನು ನನ್ನಿಂದ ಏನು ಕಸಿದುಕೊಳ್ಳುತ್ತಾನೋ? ಹೀಗೆ ಪ್ರತಿಯೊಬ್ಬನೂ ತನ್ನಿಂದ ಬೇರೆ ಎಂದು ತಿಳಿದಿರುವದರಿಂದ ಎಲ್ಲರೊಡನೆಯೂ ನಮಗೆ ಹೋರಾಟವೇ ತಪ್ಪುವದಿಲ್ಲ. ಆದರೆ ಒಮ್ಮೆ ನಾವು ಸತ್ಯವನ್ನು ಮನಗಂಡು ಆ ರಾಜಕುಮಾರನಂತೆ ಸಂತೋಷದಿಂದ ಸುಮ್ಮನಾದೆವಾದರೆ, ನಿರ್ವಿಕಾರಿಯೂ ಮುಕ್ತವೂ ಆದ ಆತ್ಮವನ್ನು ಯಾರೂ ವಂಚಿಸಲಾರರೆಂದು ನಿಶ್ಚಿಂತರಾಗುತ್ತೇವೆ. ನಾವು ಬಾಳಿನಲ್ಲಿ ಮೇಲೆ ಮೇಲೆಯೇ ತೇಲುತ್ತಿರುವಾಗ ನಾಯಿಯಂತೆ ಕೂಗಿ ಕಚ್ಚಾಡುತ್ತಿರುತ್ತೇವೆ ; ಆದರೆ ಆಳವಾಗಿ ಮುಳುಗಿದಾಗ ಸತ್ಯವನ್ನರಿತು ಸಮಾಧಾನ ಹೊಂದಿ ಸುಮ್ಮನಾಗುತ್ತೇವೆ. ಅಥವಾ ನಾಯಿಯಂತೆ ಕಚ್ಚಾಡುವಾಗ ಜೀವಸಾಗರದ ಮೇಲೆ ಮೇಲೆ ತೇಲಾಡುತ್ತಾ, ಸತ್ಯವನ್ನರಿತಾಗ ಮೇಲ್ಮೈಯ ಒಳಗೆ ಮುಳುಗಿ ಆಳದಲ್ಲಿ ಕೇವಲ ಸತ್ಯದ ಸಾಮ್ರಾಜ್ಯದಲ್ಲಿ ನೆಲೆಸಿರುತ್ತೇವೆ.

೧೪೪. ಸಲ್ಲದ ಸೌಜನ್ಯ
(ನಾಚಿಕೆಯ ವಿದ್ಯಾರ್ಥಿ)

ಸಿಂಹದ ದೇಹವು ಆನೆಯ ದೇಹಕ್ಕಿಂತಲೂ ಬಹಳ ಸಣ್ಣದಾದರೂ ತನ್ನ ಶಕ್ತಿಯು ಅನಂತವಾಗಿದೆಯೆಂದು ಸಿಂಹವು ವಾಸ್ತವವಾಗಿಯೂ ತಿಳಿಯುವುದರಿಂದಲೇ ಆನೆಗಳ ಹಿಂಡುಗಳನ್ನೇ ಹೆದರಿಸಿ ಓಡಿಸಬಲ್ಲದು. ಆನೆಗಳು ನಲವತ್ತು, ಐವತ್ತು, ಕೆಲವು ಸಮಯ ನೂರು ಇನ್ನೂರು ಒಟ್ಟು ಸೇರಿ ಗುಂಪುಗಳಲ್ಲಿ ವಾಸಮಾಡುತ್ತವೆ. ಅವು ವಿಶ್ರಾಂತಿ ತೆಗೆದುಕೊಳ್ಳುವಾಗ ಒಂದು ಬಲಿಷ್ಠವಾದ ಆನೆಯನ್ನು ಕಾಯು ವುದಕ್ಕಾಗಿಯೂ ರಕ್ಷಣೆಗಾಗಿಯೂ ಬಿಟ್ಟಿರುತ್ತವೆ. ತಮ್ಮ ಶತ್ರುಗಳು ಮೇಲೆರಗಿ ಕೊಲ್ಲಬಹುದೆಂದು ಯಾವಾಗಲೂ ಹೆದರುತ್ತವೆ. ತಮ್ಮಲ್ಲಿ ತಮಗೆ ನಂಬಿಕೆಯಿದ್ದರೆ ಒಂದೇ ಆನೆಯು ನೂರಾರು ಸಿಂಹಗಳನ್ನು ಧ್ವಂಸಮಾಡಬಹುದೆಂದು ಅವು ತಿಳಿಯವು. ಆನೆಗಳು ದೇಹವನ್ನು ನಂಬಿ ಹೇಡಿಗಳಾಗಿವೆ. ಸಿಂಹವು ವಾಸ್ತವವಾಗಿಯೂ ದೇಹವನ್ನು ನಂಬದೆ, ತನ್ನ ಚೈತನ್ಯಶಕ್ತಿಯಲ್ಲಿ ನಂಬಿಕೆಯಿಟ್ಟಿದೆ ; ಆದ್ದರಿಂದ ಅದಕ್ಕೆ ಮಹಾ ಧೈರ್ಯವಿದೆ. ಇದರಿಂದ ಅದರಲ್ಲಿ ಆತ್ಮವಿಶ್ವಾಸವೂ ಆತ್ಮಾವಲಂಬನೆಯೂ ಬೆಳೆದಿದೆ.

ನಿನ್ನನ್ನು ನೀನು ಹೀನ–ದೀನನೆಂದೂ ಪಾಪಿಯೆಂದೂ ತಿಳಿಯಬೇಡವೆಂದು ವೇದಾಂತವು ಹೇಳುತ್ತದೆ. ಅನಂತ ಶಕ್ತಿಯುಳ್ಳ ಸರ್ವೇಶ್ವರನೇ ನೀವು. ಇದನ್ನು ನಂಬಿ. ಆಹಾ ! ಎಂಥಾ ಸ್ಫೂರ್ತಿದಾಯಕವಾದ ಸತ್ಯ ! ಅದರ ಹೊರತು ಹೊರ ಗಿನದರಲ್ಲಿ ನಂಬಿಕೆಯಿಟ್ಟರೆ ಸೋಲೇ ಫಲ. ಇದೇ ದೈವೀ ನಿಯಮ.

ನಿಮ್ಮನ್ನು ನೀವು ಕ್ಷುಲ್ಲಕವಾದ ನುಸುಳುಗಳ್ಳಹುಳುವೆಂದು ಭಾವಿಸಿದರೆ ಅದೇ ನೀವಾಗುವಿರಿ ; ನಿಮ್ಮನ್ನು ನೀವು ಗೌರವಿಸಿ, ನಿಮ್ಮನ್ನು ನೀವು ನಂಬಿದರೆ, ಘನವಾಗಿ ಜಯಶೀಲರಾಗುತ್ತೀರಿ. ನೀವೇನು ಯೋಚಿಸುತ್ತೀರೋ ಅದೇ ನೀವಾಗ ಬೇಕು—ನೀವಾಗುತ್ತೀರಿ.

ಇಂಡಿಯಾದಲ್ಲಿ ಒಮ್ಮೆ, ಒಂದು ಶಾಲೆಗೆ ಒಬ್ಬ (ಇನ್‌ಸ್ಪೆಕ್ಟರ್) ತನಿಖಾಧಿ ಕಾರಿ ಬಂದರು. ಒಬ್ಬ ವಿದ್ಯಾರ್ಥಿಯನ್ನು ತೋರಿಸಿ, ಒಬ್ಬ ಅಧ್ಯಾಪಕರು ಹೇಳಿದರು— ಇವನು ಮಿಲ್ಟನ್ ಕವಿಯ "ಪ್ಯಾರಡೈಸ್ ಲಾಸ್ಟ್" ಎಂಬ ಕಾವ್ಯವನ್ನು ಕಂಠಪಾಠ ಮಾಡಿದ್ದಾನೆ ; ಅದನ್ನು ಸಾದ್ಯಂತ ಹೇಳಬಲ್ಲನು-ಎಂದು. ಆ ವಿದ್ಯಾರ್ಥಿಯನ್ನು ಆ ಇನ್ಸ್‌ಪೆಕ್ಟರರ ಎದುರಿಗೆ ನಿಲ್ಲಿಸಿದರು. ಆದರೆ ಆ ವಿದ್ಯಾರ್ಥಿಯಲ್ಲಿ ವೇದಾಂತದ ಮನೋಧರ್ಮ (ಸ್ಪಿರಿಟ್) ಇರಲಿಲ್ಲ. ಆ ವಿದ್ಯಾರ್ಥಿಯು ನಾಚಿಕೆ–ಸಂಕೋಚ ಗಳಿಂದ ಸಲ್ಲದ ಸೌಜನ್ಯವನ್ನು ವಹಿಸಿ "ಇಲ್ಲಾ ಸಾರ್ ! ನಾನೆಷ್ಟರವನು ! ನನ ಗೇನೂ ಗೊತ್ತಿಲ್ಲ." ಎಂದನು. ಆ ಮುಖಹೇಡಿಯು ಆ ರೀತಿಯನ್ನು ಸೌಜನ್ಯವೆಂದು ತಿಳಿದನು. ಆ ಇನ್ಸ್‌ಪೆಕ್ಟರ್ ಮತ್ತೆ ಮತ್ತೆ ಅವನನ್ನು ಪ್ರೋತ್ಸಾಹಿಸಿ ಕೇಳಿದರೂ

ಅವನು "ಇಲ್ಲಾ ಸಾರ್ ! ಇಲ್ಲಾ ಸಾರ್ ! ಅದನ್ನು ನಾನು ಕಲಿತಿಲ್ಲ" ಎಂದನು. ಆ ಶಾಲಾಮಾಸ್ತರಿಗೆ ಬಹಳ ಸಿಟ್ಟು ಬಂದಿತು; ವ್ಯಥೆಯೂ ಆಯಿತು. ಅಲ್ಲಿ ಇನ್ನೊಬ್ಬ ವಿದ್ಯಾರ್ಥಿ ಇದ್ದನು ! ಆದರೆ, ಅವನು ಮೊದಲ ವಿದ್ಯಾರ್ಥಿಯಷ್ಟು ಅಭ್ಯಾಸ ಮಾಡಿದವನಲ್ಲವಾದರೂ ಛಾತಿವಂತ, ಧೈರ್ಯಶಾಲಿ. ಸಾಹಸಿಯೂ ಆಗಿದ್ದನು. ಮಾಸ್ತರ್, ತಮ್ಮ ಮತ್ತು ಎಲ್ಲಾ ವಿದ್ಯಾರ್ಥಿಗಳ ಮರ್ಯಾದೆಯನ್ನು ಉಳಿಸಿಕೊಳ್ಳುವುದಕ್ಕೋಸ್ಕರವೆನ್ನುವಂತೆ ಆವನ ಕಡೆ ನೋಡಿದರು. ಅವನು ಕೂಡಲೇ ಉತ್ಸಾಹದಿಂದ "ನನಗೆ ಗೊತ್ತಿದೆ ಸಾರ್ ! ತಾವು ಅದರಲ್ಲಿ ಯಾವ ಭಾಗವನ್ನಾದರೂ ಕೇಳಿ ಸಾರ್! ನಾನು ಹೇಳಬಲ್ಲೆ ಎನಿಸುತ್ತೆ" ಎಂದನು. ಆ ಇನ್‌ಸ್ಪೆಕ್ಟರಿಗೂ ಉಪಾಧ್ಯಾಯರಿಗೂ ಸಂತೋಷವಾಯಿತು. ಇನ್‌ಸ್ಪೆಕ್ಟರ್ ಅವನಿಗೆ ಕೆಲವು ಪ್ರಶ್ನೆಗಳನ್ನು ಹಾಕಿದರು. ಅವನು ಎಲ್ಲವನ್ನೂ ಕೂಡಲೇ ಉತ್ತರಿಸಿದನು. ಭಾಗಭಾಗಗಳನ್ನು ಉಜ್ಜ್ವಲವಾಗಿ ಹೇಳಿ ಅವನು ಬಹುಮಾನವನ್ನು ಪಡೆದನು. ಇವನಲ್ಲಿ ವಾಸ್ತವ ವೇದಾಂತದ ಉಜ್ಜ್ವಲ ಉತ್ಸಾಹದ ಚೇತನವಿದ್ದಿತು. ಮೊದಲಿನ ವಿದ್ಯಾರ್ಥಿಯು ಪೆಚ್ಚಾದನು.

ನಮ್ಮ ಯೋಗ್ಯತೆಯಲ್ಲಿ ನಮಗೆ ಎಷ್ಟು ಹೆಚ್ಚಿನ ಭರವಸೆಯಾದರೂ ಬೆಲೆಯಾದರೂ ಇರಬಹುದು. ಅದಕ್ಕೆ ಯಾರೂ ಅಡ್ಡಿ ಮಾಡಲಾರರು; ನಮ್ಮ ಮನೋದೌರ್ಬಲ್ಯದ ಹೀನ ದೀನ ಕಾರ್ಪಣ್ಯ ಭಾವನೆ ಒಂದೇ ಅಡ್ಡಿಯಾಗಬಹುದು. ಆದರೆ, ನಮಗೆ ನಾವು ಕಟ್ಟಿಕೊಂಡಿರುವ ಬೆಲೆಗಿಂತಲೂ ಹೆಚ್ಚಿನ ಬೆಲೆಯನ್ನು ಯಾರೂ ಎಂದೂ ಕಟ್ಟಲಾರರು. (ವಿಶ್ವದಲ್ಲಿಯೇ ಅತ್ಯಂತ ಪ್ರಭೂತ ಯೋಗ್ಯತೆಯೆಂದರೆ, ಅದು ಈಶ್ವರತ್ವವೇ. ಆ ಈಶ್ವರನೇ ನೀನೆಂದು ವೇದಾಂತವು ಪ್ರತಿಯೊಬ್ಬನಿಗೂ ಹೇಳುತ್ತಿದ್ದರೂ ನಮಗೆ ಇಲ್ಲಸಲ್ಲದ ಸಂಕೋಚ -ಸೌಜನ್ಯ-ಕಾರ್ಪಣ್ಯ. ನಾವು ಕೇವಲ ಅಪ್ರಯೋಜಕ ಅಲ್ಪರೆಂದು ಭಾವಿಸುವುದರಲ್ಲಿ ನಮಗೆ ಸಂತೋಷ, ಹೆಮ್ಮೆ. ತನ್ನಲ್ಲಿ ಮಹತ್ತಾದ ಭಾವನೆಯನ್ನು ಮಾಡುವುದು ಧರ್ಮಕ್ಕೂ ದೈವಕ್ಕೂ ದ್ರೋಹ ಮಾಡಿದಂತೆ ಎಂದು ಕೆಲವರ ಎಣಿಕೆ. ದೇಹ ಮನಸ್ಸುಗಳು ಅಲ್ಪವೇ ಸರಿ. ಆದರೆ ಅವು ಸುಳ್ಳು, ನಾವಲ್ಲ. ಆದ್ದರಿಂದ ಒಳಗಿನ ನಿಜವಾದ ಚೈತನ್ಯ ದೃಷ್ಟಿಯಿಂದ ಎಲ್ಲರಿಗೂ ತಮ್ಮಲ್ಲಿಯೂ ಈ ಇತರರಲ್ಲಿಯೂ ಮಹದ್ಭಾವನೆ ಬೇಕು; ಈಶ್ವರ ಭಾವನೆ ಬೇಕು.

ಆದ್ದರಿಂದ ದಯವಿಟ್ಟು, ಹಲ್ಲುಗಿಂಜಿ ಅತಿದೈನ್ಯವನ್ನು ತೋರಿಸುವ ಕ್ಷುದ್ರ ಪ್ರಾಣಿಯಾಗಿ, ನಿಮ್ಮನ್ನು ನೀವು ಮಾಡಿಕೊಳ್ಳಬೇಡಿ. ನಿಮ್ಮನ್ನು ನೀವು ಹೇಗೆ ಭಾವಿಸುತ್ತೀರೊ ಹಾಗೆ ನೀವಾಗಿರುತ್ತೀರಿ. ನಿಮ್ಮನ್ನು ನೀವು ದೇವರೆಂದು ತಿಳಿದರೆ, ದೇವರೇ ನೀವಾಗುತ್ತೀರಿ, ನೀವಾಗಿರುವಿರಿ. ನಿಮ್ಮನ್ನು ನೀವು ಮುಕ್ತರೆಂದು ಭಾವಿಸಿರಿ; ಈ ಕ್ಷಣವೇ ನೀವು ಮುಕ್ತರು.

೧೪೫. ಸತ್ಯವೂ ಪ್ರಿಯವೂ ಹಿತವೂ ಆದ ಕಲ್ಪನೆ

(ಕಾಲ್ಪನಿಕ ರೊಟ್ಟಿ-ಖಾರದ ಪಲ್ಯ)

ಹಗಲು ಕನಸು ಕಾಣುವ ಸ್ವಭಾವವಿದ್ದ ಒಬ್ಬ ಮನುಷ್ಯನು, ಒಂದು ದಿನ, ಹಸಿವಾದಾಗ ಆಹಾರವೇನೂ ಸಿಕ್ಕದಿರಲು, ದಾರಿಯಲ್ಲಿ ಒಂದು ಮರದ ಕೆಳಗೆ ಕುಳಿತು ಕಣ್ಣು ಮುಚ್ಚಿಕೊಂಡು, ಮನಸ್ಸಿನಲ್ಲಿ ಬಿಸಿ ಬಿಸಿ ರೊಟ್ಟಿಯನ್ನೂ ಪಲ್ಯವನ್ನೂ ತಿನ್ನು ವುದಕ್ಕೆ ತೊಡಗಿದನು. ಕಲ್ಪನಾ ಬಲವುಳ್ಳ ಆ ಬಡಪಾಯಿಯು, ಸ್ವಲ್ಪ ಹೊತ್ತು ಮೈಮರೆತು, ಆ ಬಿಸಿ ಬಿಸಿ ರೊಟ್ಟಿಯನ್ನು ತಿನ್ನುವುದರೊಳಗೆ, ಆ ಪಲ್ಯದಲ್ಲಿ ಖಾರ ವಾದೊಂದು ಮೆಣಸಿನಕಾಯಿಯು ಬಂದಿತು. ಅದು ಬಹಳ ಖಾರವಾಗಿತ್ತು. ಬಿಸಿಯ ಜೊತೆಗೆ ಆ ಖಾರವೂ ಸೇರಿ, ಅವನ ಕಿವಿಗಳಲ್ಲಿ ಸಲಾಕಿಯನ್ನು ಚುಚ್ಚಿದಂತಾ ಯಿತು. ಕಣ್ಣುಗಳಲ್ಲಿಯೂ ನೀರು ಬಂದಿತು. ಆದರೆ ಅವನು ತಿನ್ನುವಾಗ ನೀರನ್ನು ಇಟ್ಟುಕೊಳ್ಳುವದಕ್ಕೆ ಮರೆತಿದ್ದನು. ಮಧ್ಯದಲ್ಲಿ ಏಳುವ ಪದ್ಧತಿಯೂ ಇರಲಿಲ್ಲ; ತಂದು ಕೊಡುವವರೂ ಇರಲಿಲ್ಲ. ಅವನ ಕಲ್ಪನೆಯಲ್ಲಿ ನೀರೇ ಸಿಕ್ಕಲಿಲ್ಲ. ಅವನಿಗೆ ಬಹಳ ಕಷ್ಟವಾಯಿತು. (ನಮ್ಮ ಕನಸಿನಲ್ಲಿ ಆಗುವುದೂ ಹೀಗೇ ಅಲ್ಲವೇ !) ಆ ಬಡ ಪಾಯಿಯು ನಾಲಿಗೆಯನ್ನು ಗಾಳಿಗೆ ಚಾಚಿ, ಖಾರವನ್ನು ಕಳೆಯಲು ಗಾಳಿಯನ್ನು ಸೇವಿಸುತ್ತಾ ಕುಳಿತಿದ್ದನು. ಆ ದಾರಿಯಲ್ಲಿ ಹೋಗುವವನೊಬ್ಬನು ಅವನನ್ನು ನೋಡಿದನು. ಕಣ್ಣನ್ನು ಮುಚ್ಚಿಕೊಂಡು ಬಾಯಿತೆರೆದು ನಾಲಿಗೆಯನ್ನು ಹೊರಕ್ಕೆ ಚಾಚಿ ನೀರು ಸುರಿಸುತ್ತಿರುವ ಈ ಮನುಷ್ಯನ ಫಜೀತಿಯನ್ನು ನೋಡಿ, ಅವನಿಗೆ ಆಶ್ಚರ್ಯವೂ ಕನಿಕರವೂ ಆಯಿತು. ಆತನು ಇವನನ್ನು ಎಚ್ಚರಗೊಳಿಸಿ, ವಿಚಾರ ವೇನೆಂದು ಕೇಳಿದನು. ಆಗ ಅವನು ಬೆಚ್ಚಿಬಿದ್ದು, ಎಚ್ಚರಗೊಂಡು, ತನ್ನ ಕಲ್ಪನಾ ಕಥೆಯನ್ನು ವಿಷಾದದಿಂದ ಹೇಳಿದನು. ಆ ದಾರಿಹೋಕನು ಬಿದ್ದು ಬಿದ್ದು ನಗುತ್ತಾ ಹೇಳಿದನು: "ಅಲ್ಲಯ್ಯಾ ! ಮಂಕುತಿಮ್ಮಯ್ಯಾ ! ಎಂಥಾ ಮರುಳು ಸಿದ್ಧೇಶ್ವರನಯ್ಯಾ ನೀನು ! ಕಾಲ್ಪನಿಕ ಆಹಾರದ ಮೇಲೆಯೇ ನೀನು ಬದುಕಬೇಕಾಗಿದ್ದರೆ, ಖಾರದ ಮೆಣಸಿನಕಾಯಿಯನ್ನು ಬಿಟ್ಟು, ಸಿಹಿತಿಂಡಿಗಳನ್ನೇಕೆ ಆರಿಸಿಕೊಳ್ಳಲಿಲ್ಲ ? ನಿನ್ನ ಸ್ವಂತ ಸೃಷ್ಟಿಯೇ, ನಿನ್ನ ಮೋಜಿನ ಕಲ್ಪನೆಯೇ ಆಗಿದ್ದುದರಿಂದ, ಉತ್ತಮೋತ್ತಮವಾದ ಆಯ್ಕೆಯನ್ನೇಕೆ ಮಾಡಿಕೊಳ್ಳಲಿಲ್ಲ ? ಪ್ರಿಯಕರವೂ ಹಿತಕರವೂ ಸುಖಕರವೂ ಆದ ಸೃಷ್ಟಿಯು ಅಷ್ಟೇ ಸುಲಭವಾಗಿದ್ದರೂ ಅದನ್ನೇಕೆ ಅವಿವೇಕದಿಂದ ಬಿಟ್ಟು, ಕಷ್ಟವನ್ನು ಕಲ್ಪಿಸಿಕೊಂಡೆ ?" ಎಂದು ಕೇಳಿದನು. ಅದಕ್ಕೆ ಆ ಮಡಿಯನು "ಆಹಾ ! ನೀನು ಹೇಳುವುದು ನಿಜವಾಗಿ ತೋರುತ್ತದೆ. ಅಬ್ಬಾ ! ನನಗಿದು ಹೊಳೆದೇ ಇರಲಿಲ್ಲ. ಆದರೆ ಅದೇಕೋ ಮೊದಲಿನಿಂದಲೂ ನನಗಿದೇ ಅಭ್ಯಾಸವಾಗಿದೆ ; ಅಷ್ಟೇ ಅಲ್ಲ, ಹೆಚ್ಚು ಸುಲಭವೂ ಪ್ರಿಯವೂ ಆಗಿದೆ. ಇಷ್ಟವಲ್ಲದ ಕಷ್ಟ ತಪ್ಪಿಲ್ಲವೆಂಬುದೂ ನಿಜ" ಎಂದನು.

ವೇದಾಂತದ ರೀತ್ಯಾ ಪ್ರಪಂಚವೆಲ್ಲಾ ನಿಮ್ಮ ಸೃಷ್ಟಿಯೇ ಆಗಿರುವುದರಿಂದ, ನಿಮ್ಮನ್ನು ನೀವು ಹೀನವಾಗಿ, ತುಚ್ಛ ಪಾಪಿಗಳೆಂದೇಕೆ ಭಾವಿಸಿಕೊಳ್ಳುತ್ತೀರಿ? ನಿರ್ಭಯವಾದ ಆತ್ಮ ವಿಶ್ವಾಸದಿಂದ ನಿಮ್ಮನ್ನು ನೀವು ಪರಮೇಶ್ವರನ ಅವತಾರ ವೆಂದೇಕೆ ಕಲ್ಪಿಸಿಕೊಳ್ಳುವುದಿಲ್ಲ?

ಸತ್ಯದಲ್ಲಿ ಜೀವಂತವಾದ ವಿಶ್ವಾಸವನ್ನಿಡಿ; ನಿಮ್ಮ ಸುತ್ತಲಿರುವ ವಸ್ತುಗಳ ನಿಜವಾದ ಅರಿವನ್ನು ಹೊಂದಿ; ಈ ಪ್ರಪಂಚವು ನಿಮಗೆ ಸುಳ್ಳಾಗಿ ತೋರುವಷ್ಟು ಉತ್ಕಟವಾಗಿ, ಚೈತನ್ಯಾನುಭವವನ್ನು ಪಡೆಯಿರಿ. ಖಗೋಳಶಾಸ್ತ್ರದಲ್ಲಿ ಗ್ರಹ ನಕ್ಷತ್ರಗಳ ದೂರವನ್ನು ಗುಣಿಸುವಾಗ, ಈ ಪ್ರಪಂಚವು ಗಣಿತಶಾಸ್ತ್ರದ ಬಿಂದು ವಾಗಿಯೂ, ಈ ಭೂಮಿಗಿಂತಲೂ ಕೋಟಿ ಕೋಟಿ ಪಟ್ಟು ದೊಡ್ಡದಾಗಿ, ಕೋಟಿ ಕೋಟಿ ಮೈಲುಗಳ ದೂರದಲ್ಲಿ ಗ್ರಹ ನಕ್ಷತ್ರಗಳಿಗೆ ಹೋಲಿಸಿದರೆ, ಈ ನಮ್ಮ ಪ್ರಪಂಚವು ಶೂನ್ಯವಾಗಿಯೂ ತೋರುತ್ತದೆಯೆಂಬುದು ನಿಮಗೆ ತಿಳಿಯದೇ? ಹೀಗಿರುವಾಗ ಪರಮೋತ್ತಮ ಅನಂತ ಶಕ್ತಿಯಾದ ಆತ್ಮನಿಗೆ, ವಿರುದ್ಧವಾಗಿ ಹೋಲಿಸಿ ದರೆ, ಈ ಪ್ರಪಂಚವು ಅತ್ಯಂತ ಕ್ಷುದ್ರ ವಸ್ತುವಿಗಿಂತಲೂ ಕಡೆಯಾಗಿ ತೋರಲಾರದೆ? ಇದನ್ನು ಮನಗಾಣಿರಿ; ಅನುಭವಮಾಡಿರಿ. ಎಲ್ಲಾ ಪ್ರಕಾಶಗಳಿಗೂ ನೀವೇ ಪ್ರಕಾಶ ವಾಗಿದ್ದೀರಿ. ಎಲ್ಲಾ ಮಹಿಮೆಯೂ ನಿಮ್ಮದೇ. ಈ ಪ್ರಪಂಚವೂ ಇದರ ಸಂಬಂಧ ಗಳೂ ಜನಪ್ರಿಯತೆ-ಅಪ್ರಿಯತೆಗಳೂ ಪ್ರಾಪಂಚಿಕವಾದ ಗೌರವ–ಅಗೌರವಗಳೂ ಶತ್ರುಗಳ ಟೀಕೆಗಳೂ ಮಿತ್ರರ ಮೆಚ್ಚುಗೆಯೂ ಅರ್ಥಶೂನ್ಯವಾಗಿ ಕಾಣುವಷ್ಟು ಆತ್ಮಾನುಭವವನ್ನು ಬೆಳಿಸಿಕೊಳ್ಳಿ. ಇದೇ ಯಶಸ್ಸಿನ ರಹಸ್ಯ; ಗೆಲುವಿನ ಗುಟ್ಟು.

೧೪೬. ನಿಷೇಧಾಜ್ಞೆಗಳ ದುಷ್ಪರಿಣಾಮ

(ಜನ–ಕಪಿ; ಮಗು: ನನ್ನ ಹೆಸರು, "ಬೇಡ")

ಹೆಂಗಸರೂ, ಮಕ್ಕಳೂ, ಶೂದ್ರರೂ ಬ್ರಹ್ಮವಿದ್ಯೆಗೆ ಅಧಿಕಾರಿಗಳಲ್ಲವೆಂದು ಕೆಲ ವರು ಹೇಳುತ್ತಾರೆ. ಈ ದೃಷ್ಟಿಯೇ ಭಾವನೆಯೇ ವೇದಾಂತವನ್ನು ಮಹತ್ತಾದ ಆದರೆ ಸಂಶಯಾಸ್ಪದವಾದ ಸೂತ್ರವಾಗಿಯೂ ಕೇವಲ ತತ್ತ್ವವಾಕ್ಯವಾಗಿಯೂ ಉಳಿಸಿದೆ. ಜನರು ಅದನ್ನು ಸತ್ಯವೆಂದು ತಿಳಿದಿಲ್ಲ.

ಪ್ರತಿಯೊಂದು ಮಗವೂ ಸೂರ್ಯನ ಬೆಳಕಿಗೂ ಗಾಳಿಗೂ ಅರ್ಹತೆಯುಳ್ಳ ದಾದರೆ, ಆಧ್ಯಾತ್ಮಿಕವಾದ ಬೆಳಕಿಗೂ ಗಾಳಿಗೂ ಏಕೆ ಅರ್ಹವಲ್ಲ? ಬ್ರಹ್ಮ ವಿದ್ಯೆಗೆ ಯಾರನ್ನಾದರೂ ಏಕೆ ಹೊರಗಿರಿಸಬೇಕು? ಅಜ್ಞಾನ ಮತ್ತು ದೌರ್ಬಲ್ಯಗಳ ರಹಸ್ಯ ಮಂದಿರಗಳನ್ನೂ ಮುಚ್ಚಿದ ಮನೆಗಳನ್ನೂ ನೆಲಮಾಳಿಗೆಯ ಒಕ್ಕೋಣೆಗಳನ್ನೂ ತುಳಿದು ಹಾಕಿರಿ. ದಿವ್ಯವಾದ ಬೆಳಕೂ ಗಾಳಿಯೂ ಎಲ್ಲರನ್ನೂ ಅನುಗ್ರಹಿಸಲಿ!

ನೈತಿಕ ವಿಧಿಗಳನ್ನೂ ಆಜ್ಞೆಗಳನ್ನೂ ಜನರ ಮೇಲೆ ಹೇರುವದರಿಂದ ಆಧ್ಯಾತ್ಮಿಕ ದಾರಿದ್ರ್ಯವು [ಭಿಕಾರಿತನವು] ಉಂಟಾಗುತ್ತದೆ. ಉನ್ಮತ್ತ ನೀತಿ ಬೋಧಕರು ಸತ್ಯ

ಸ್ವರೂಪದ ಜ್ಞಾನವನ್ನು ತಾವೂ ಪಡೆದು ಇತರರಿಗೂ ತಿಳಿಸುವದಕ್ಕೆ ಬದಲು ಸದ್ಗುಣ ಸಚ್ಛೀಲಗಳ ಬಾಹ್ಯ ರೂಪಗಳನ್ನು ಒತ್ತಾಯದಿಂದ ಹೇರುವದರಿಂದ ತಮ್ಮ ಉದ್ದೇಶ ವನ್ನು ತಾವೇ ನಿಷ್ಫಲಗೊಳಿಸಿಕೊಳ್ಳುತ್ತಾರೆ. ಪ್ರತಿಯೊಬ್ಬರೂ ತಮ್ಮ ತಮ್ಮ ಬೆಳಕಿಗೆ ಅನುಗುಣವಾಗಿ ನಡೆಯುತ್ತಾರೆ. ತಮ್ಮ ಮುಂದಿರುವ ಬಾವಿಯನ್ನು ಕಂಡವರು ಯಾರೂ ಅದರೊಳಗೆ ಬೀಳುವದಿಲ್ಲ. "ಹೀಗೆ ಮಾಡು" "ಹೀಗೆ ಮಾಡಬೇಡ" ಎನ್ನುವ ನಮ್ಮ ವಿಧಿ ನಿಷೇಧಗಳೆಲ್ಲಾ ಮನುಷ್ಯನಲ್ಲಿರುವ ಪಶುತ್ವಕ್ಕೆ ಮಾತ್ರ ಅನ್ವಯಿಸುತ್ತವೆ. ನಾವು ಒಬ್ಬ ಬಾಲಕಗೋ ಬಾಲಕಿಗೋ "ನೀನು ಇದನ್ನು ಮಾಡಲೇಬೇಕು, ಅಥವಾ ಅದನ್ನು ಮಾಡಲೇಬೇಕು" ಎಂದು ವಿಧಿಸಿದರೆ ಅವನಲ್ಲಿ ಅಥವಾ ಅವಳಲ್ಲಿ ಇರುವ ವಿಚಾರ ಶಕ್ತಿಯು ತನ್ನನ್ನು ಅಲಕ್ಷ್ಯ ಮಾಡಿದರೆಂದೂ ಕಡೆಗಣಿಸಿದರೆಂದೂ ಕೋಪಿಸಿಕೊಂಡು ಪ್ರತಿಭಟಿಸುತ್ತದೆ. ನಮ್ಮ ವಿಧಿರೂಪ ಆಜ್ಞೆಗಳು. ಶಾಸನಗಳು ಕುದುರೆಯನ್ನು [ಪಶುವನ್ನು] ಅದರ ಸವಾರನ [ವಿಚಾರ ಶಕ್ತಿಯ] ಕೆಳಗಿನಿಂದ ಓಡಿ ಸುವುದಕ್ಕೆ ಪ್ರಯತ್ನಪಟ್ಟಂತೆ ಆಗುತ್ತದೆ. ಮಕ್ಕಳನ್ನು ಆಳುವ ಪ್ರಯತ್ನದಲ್ಲಿ ಅಥವಾ ಅವರ ಸ್ವಂತ ವಿಚಾರದ ಹೊರತು ಬೇರೆ ಅಧಿಕಾರವನ್ನು ಅವರ ಮೇಲೆ ಚಲಾಯಿಸುವ ಯತ್ನದಲ್ಲಿ, ಅವರು ದುಗೆಯೇಳುವ, ಎದುರು ಬೀಳುವ, ಪ್ರತಿಭಟಿ ಸುವ ಮನೋಭಾವವನ್ನು ಅವರಿಗೆ ಕಲಿಸುತ್ತೇವೆ. ಎಲ್ಲಿ ಒತ್ತಾಯದ ಆಳಿಕೆಯೂ ನಿಯಮ ನಿಬಂಧನೆಗಳೂ ಪ್ರತಿಭಟನೆಯನ್ನು ಹುಟ್ಟಿಸುವದಿಲ್ಲವೋ ಅಲ್ಲಿ ಕ್ಷೀಣತೆ ಯನ್ನೂ ವಿನಾಶವನ್ನೂ ಉಂಟು ಮಾಡುತ್ತದೆ. ಮನಶ್ಶಾಸ್ತ್ರದ ಒಂದು ನಿಯಮ ದಂತೆ, ಯಾವದೊಂದು ಸೂಚನೆಯು ಪ್ರತ್ಯಕ್ಷವಾಗದೆ—ನೇರವಾಗದೆ—ಹೆಚ್ಚು ಪರೋಕ್ಷ ವಾದಷ್ಟೂ ಮನುಷ್ಯನ ಸ್ವಾಭಾವಿಕ ಸ್ಥಿತಿಯಲ್ಲಿ, ಅದರ ಪರಿಣಾಮವು ಹೆಚ್ಚು ಪ್ರಬಲ ವಾಗಿರುತ್ತದೆ. ನಮ್ಮ ಒತ್ತಾಯದ ನೀತಿ ಬೋಧನೆಗಳಲ್ಲಿ, ಒಬ್ಬ ಸಾಮಾನ್ಯ ಮನುಷ್ಯನು, ಸ್ವಾಭಾವಿಕವಾಗಿ, ಒಂದು ಸೂಚನೆಯನ್ನು ವಿರೋಧವಾಗಿಯೇ ತೆಗೆದು ಕೊಳ್ಳುತ್ತಾನೆ. ಯಾವದೊಂದನ್ನು ನಿಷೇಧ ಮಾಡುವದರಿಂದಲೂ ತಿರಸ್ಕಾರ ಮಾಡು ವದರಿಂದಲೂ ಅದರ ಆಶೆಯನ್ನು ಮತ್ತಷ್ಟು ಬೆಳೆಸುತ್ತದೆ.

ಜನರ ಸ್ವಭಾವವೂ ಪದ್ಧತಿಯೂ ದೇವರನ್ನು ಸಹ ಉಳಿಸುವದಿಲ್ಲ. ಪ್ರತಿ ದಿನದ ಅಥವಾ ತಿಂಗಳು ತಿಂಗಳ ಅನ್ನವನ್ನು ಕೊಟ್ಟು ಸೇವಿಸುವದಕ್ಕಾಗಿ ಅವರ ಅಮೋಘವಾದ ಜೀವಾತ್ಮನ ಮುಂದೆ, ಮನೆಯ ಬಾಗಿಲಲ್ಲಿ ಪರಮಾತ್ಮನೂ ಕೈಕಟ್ಟಿ ಕೊಂಡು ನಿಂತಿರಬೇಕು. ಯೋಗ ಸಿದ್ಧಿಗಳನ್ನು ಬಯಸುವ ಒಬ್ಬ ಗಿರಾಕಿಯು ಧರ್ಮದ ವ್ಯಾಪಾರಿಯೊಬ್ಬರಲ್ಲಿ ಹೋದನು. ತನಗೆ ಅತ್ಯಂತ ಪ್ರಿಯವಾದ ಪ್ರಾಪಂಚಿಕ ಇಷ್ಟಾ ರ್ಥವನ್ನು ಸಾಧಿಸುವದಕ್ಕೆ, ಪುರಶ್ಚರಣೆಗಾಗಿ ಸಹಾಯವಾಗುವ ಒಂದು ದಿವ್ಯವಾದ ಮಂತ್ರವನ್ನು ಉಪದೇಶ ಮಾಡಬೇಕೆಂದು ಆ ಪೂಜ್ಯ ಸಿದ್ಧನನ್ನು ಆ ಗಿರಾಕಿಯು ಕೇಳಿ ದನು. ಆ ಫಕೀರನು ಆ ಮಂತ್ರವನ್ನು ಹೇಳಿದನು ; ಆದರೆ ಅದು ಫಲಿಸುವದಕ್ಕಾಗಿ

ಒಂದು ವಿಚಿತ್ರವೆನ್ನುವ ನಿಬಂಧನೆಯನ್ನು ವಿಧಿಸಿದನು: "ಇಷ್ಟು ನಿಯಮಿತ ವಾದ ಕಾಲದಲ್ಲಿ ನೀನು ಈ ಮಂತ್ರವನ್ನು ಜಪಿಸುತ್ತಿರುವಾಗ ಒಂದು ಮಂಗನ ಕಲ್ಪನೆಯು ನಿನ್ನ ಮನಸ್ಸಿನಲ್ಲಿ ಹಾಯದಿರಲಿ." ಆ ಫಕೀರನು ಹೀಗೆ ಹೇಳಿದನು. ಆ ಬಡಪಾಯಿಯು ಮರುದಿನವೇ ಹಿಂದಿರುಗಿ ಆ ಗುರುಗಳಲ್ಲಿ ಬಂದನು. "ಸ್ವಾಮಿ ! ಅದು ಬರಬಾರದೆಂದು ತಾವು ಮೊದಲೇ ಹೇಳದೇ ಇದ್ದಿದ್ದರೆ ಮಂಗ ಎನ್ನುವ ಭಾವನೆಯು ನನ್ನ ಮನಸ್ಸಿಗೆ ಎಂದೆಂದಿಗೂ ಬರುತ್ತಿರಲಿಲ್ಲ. ಆದರೆ ಈಗ ಮಂಗನ ಭಾವನೆಯು ನನ್ನನ್ನು ಮಂಗನ ಮುಷ್ಟಿಯಿಂದ ಬಿಡದಂತೆ ಹಿಡಿದುಕೊಂಡು ಬಿಟ್ಟಿದೆ. ಏನು ಮಾಡಿದರೂ ಅದನ್ನು ನಾನು ತಪ್ಪಿಸಿಕೊಳ್ಳಲಾರೆನು" ಎಂದು ಹೇಳಿ ಪೇಚಾಡಿದನು. ಹೀಗೆ ಪುಣ್ಯವಂತರಾದ ನಮ್ಮ ಗುರುಗಳು ಅಪವಿತ್ರತೆಯನ್ನೂ ಇತರ ಪಾಪಗಳನ್ನೂ ತಿರಸ್ಕರಿಸುವದರಲ್ಲಿ ಎಡೆಬಿಡದೆ ಅವುಗಳನ್ನು ಖಂಡಿಸುತ್ತಾ ಬರದಿದ್ದರೆ, ಅವುಗಳು ಎಂದೋ ಈ ಲೋಕವನ್ನು ಬಿಟ್ಟು ಹೋಗುತ್ತಿದ್ದವು. ದಿವ್ಯವೂ ಭವ್ಯವೂ ಆದ ಈಡನ್ ತೋಟದ ಅಭುಕ್ತ ಮೂಲೆಯಲ್ಲಿ ಅಲಕ್ಷ್ಯವಾಗಿದ್ದ ಯಾವದೋ ಒಂದು ಮರವನ್ನು ನಿಷಿದ್ಧವೆಂದು ಬೈಬಲಿನ ದೇವರು ಪ್ರತ್ಯೇಕವಾಗಿ ಸೂಚಿಸದೇ ಇದ್ದಿದ್ದರೆ ಆ ಬಡಪಾಯಿ ಆಡಮ್‌ನು ಅದರ ಹಣ್ಣನ್ನು ತಿನ್ನಬೇಕೆಂದು ಎಂದೆಂದಿಗೂ ಯೋಚಿಸುತ್ತಿರಲಿಲ್ಲ.

ಸುಧಾರಣೆಯ ಹೆಸರಿನಲ್ಲಿ ನಾವು ನಮ್ಮ ಸರ್ವಾಧಿಕಾರದ ನಿರ್ದೇಶಗಳನ್ನು ಪರಮಾವಧಿಗೆ ಒಯ್ಯುತ್ತೇವೆ. ಒಮ್ಮೆ, ನಿನ್ನ ಹೆಸರೇನು ?–ಎಂದು ಒಂದು ಮಗುವನ್ನು ಕೇಳಿದಾಗ "ಅಮ್ಮನು ನನ್ನನ್ನು ಯಾವಾಗಲೂ ಬೇಡ ! ಬೇಡ ! ಎಂದು ಕರೆಯುತ್ತಾಳೆ. ಅದೇ ನನ್ನ ಹೆಸರಿರಬೇಕು" ಎಂದು ಹೇಳಿತು. ಆದ್ದರಿಂದ ನಿಯಮ–ನಿಬಂಧನೆಗಳ ಆಜ್ಞೆಗಳ ಭಾರದ ಕೆಳಗೆ ಜನರು ತಮ್ಮ ನಿಜವಾದ ಆತ್ಮವನ್ನು ಕಳೆದುಕೊಂಡು ಬಿಟ್ಟಿದ್ದಾರೆ. ತಮ್ಮನ್ನು ತಾವು ಕೇವಲ ನಾಮರೂಪಗಳೆಂದು ಕಲ್ಪಿಸಿಕೊಂಡಿದ್ದಾರೆ.

ಇಂಡಿಯಾದಲ್ಲಿ ವ್ಯವಹಾರ ವೇದಾಂತವು ಆರೋಗ್ಯ ಸಾಧನೆಯಿಂದ ಪ್ರಾರಂಭಿಸಬೇಕಾಗಿರುವಷ್ಟು ಪುಸ್ತಕಗಳ ಮೂಲಕ ಆಗಬೇಕಾಗಿಲ್ಲ. ವೇದಾಂತವು ದೈಹಿಕವೂ ಮಾನಸಿಕವೂ ಆಧ್ಯಾತ್ಮಿಕವೂ ಆದ ಆರೋಗ್ಯವು. ಹೊಟ್ಟೆಯ ಆರೋಗ್ಯವೊಂದನ್ನು ಸರಿಯಾದಿಟ್ಟು ಕೊಂಡಿದ್ದರೆ, ಶೀತ, ನೆಗಡಿ, ಕೆಮ್ಮು, ಜ್ವರ, ಮಧುಮೂತ್ರ ಮೊದಲಾದ ರೋಗಗಳು ಮಾತ್ರವಲ್ಲ, ಆದರೆ ಅಸೂಯೆ, ಆಲಸ್ಯ, ಅಸಮಾಧಾನ, ಕೆಟ್ಟಭಾವನೆಗಳು. ದೌರ್ಬಲ್ಯ, ಇತರ ಬಗೆಯ ಅಪವಿತ್ರ ಭಾವನೆಗಳೂ ಎಲ್ಲವೂ ಕೂಡಲೇ ಕೊಚ್ಚಿ ಹೋಗುತ್ತವೆ.

೧೪೭. ನಡತೆ ಒಂದೇ ಮನುಷ್ಯನಲ್ಲಿ—ಭಾವನೆಯೇ ಮನುಷ್ಯ

(ಕಳ್ಳನು ಭಯದಿಂದ ಸಂನ್ಯಾಸವನ್ನು ಸಂಕಲ್ಪಿಸುವದು)

ರಾಮನು ತನ್ನ ಬಾಲ್ಯದಲ್ಲಿ ಒಂದು ಕಾಡಿನ ಹಳ್ಳಿಯಲ್ಲಿದ್ದಾಗ ಒಬ್ಬ ದೊಡ್ಡ ಕಳ್ಳನೇ ತನ್ನ ಸ್ನೇಹಿತರಿಗೆ ಗುಟ್ಟಾಗಿ ಹೇಳುತ್ತಿದ್ದ ಅವನ ಒಂದು ಕಳ್ಳತನದ ಅನುಭವವನ್ನು ಕೇಳಿದನು. ರಾಮನು ಬಾಲಕನಾಗಿದ್ದುದರಿಂದ ಆ ಕಳ್ಳನು ಅವನ ಕಡೆಗೆ ಅಷ್ಟು ಲಕ್ಷ್ಯ ಕೊಡಲಿಲ್ಲ. ಆ ಕಳ್ಳನು ಒಂದು ಸಲ ಬಹಳ ಸಾಹಸದಿಂದ ಎತ್ತರವಾದ ಒಂದು ಮರಕ್ಕೆ ಕಟ್ಟಿಕೊಂಡ ಹಗ್ಗದ ಜೋಕಾಲಿಯಿಂದ ಹತ್ತಿರವಿದ್ದ ಧನಿಕರ ಒಂದು ಮಹಡಿಯ ಮನೆಯ ಮೇಲೆ ಹಾರಿ ಕಿಟಕಿಗಳ ಮೂಲಕ ಒಳಗೆ ನುಗ್ಗಿ ಇಬ್ಬರು ಜೊತೆಗಾರರೊಡನೆ ಮನೆಯನ್ನೆಲ್ಲಾ ಶೋಧಿಸಿ ನೆಲದಲ್ಲಿ ಹುಗಿದಿದ್ದ ಆಭರಣಾದಿಗಳನ್ನು ಅಗೆದು ತೆಗೆದನಂತೆ. ಆಗ ಮಹಡಿಯ ಮೇಲೆ ಏನೋ ಶಬ್ದವಾದ್ದರಿಂದ ಎದೆಯಲ್ಲಿ ಝಲ್ಲೆಂದು ಭಯದಿಂದ ಮೈಯೆಲ್ಲಾ ಬೆವತು ನಡುಗುವುದಕ್ಕೆ ತೊಡಗಿತಂತೆ. ಆಗ ತಾನು ಸತ್ತೇ ಹೋಗಿರುವಂತೆ ಭಾಸವಾಯಿತಂತೆ. ಒಂದು ಸಣ್ಣ ಇಲಿಯೂ ಕೂಡ ಆಗ ಅವನನ್ನು ಕೊಲ್ಲಬಹುದಾಗಿತ್ತಂತೆ; ಅಷ್ಟು ನಿಸ್ಸತ್ತ್ವರಾಗಿದ್ದರು ಅವರು. ವಾಸ್ತವವಾಗಿ ಆ ಶಬ್ದವು ಆಗ ಇಲಿಗಳಿಂದಲೇ ಆಗಿದ್ದುದೆಂದು ಅನಂತರ ಬಹಳ ಹೊತ್ತಿನ ಮೇಲೆ ತಿಳಿಯಿತಂತೆ. ಆದರೆ ಅಷ್ಟರೊಳಗೆ ಭಯದಿಂದ ಅವರ ಪ್ರಾಣವೇ ಹಾರಿಹೋಗಿತ್ತಂತೆ. ಆಗ ಅವನು ವರ್ಣಿಸುತ್ತಿದ್ದ ಅನುಭವವು ರೋಮಾಂಚಕಾರಿಯಾಗಿತ್ತು; ಇವತ್ತಿಗೂ ಅದು ರಾಮನಿಗೆ ಮರೆತಿಲ್ಲ. ಆ ಭಯದಲ್ಲಿ ಅವನಿಗೆ ಕ್ಷಣಕಾಲ ಬಹಳ ಪಶ್ಚಾತ್ತಾಪವಾಗಿ ದೇವರಿಗೆ ಮನಃಪೂರ್ವಕವಾಗಿ ಮೊರೆಯಿಟ್ಟನಂತೆ. ದೇಹವನ್ನು ಪೂರಾ ಮರೆತು ಹೃದಯದಲ್ಲಿ ಶರಣಾಗತನಾದನಂತೆ. ಆಗ ಮನಸ್ಸು ಮನಸ್ಸಾಗಿರಲಿಲ್ಲ; ದೇಹದ ಪರವೆಯೇ ಇರಲಿಲ್ಲ; ಸ್ವಾರ್ಥವೆಲ್ಲಾ ಮರೆತುಹೋಗಿತ್ತು; ಒಂದು ಬಗೆಯ ಸಮಾಧಿ ಸ್ಥಿತಿಯೇ ಬಂದಿತ್ತು. ಆಗ ದೇವರಲ್ಲಿ "ಓ ದೇವ! ನಮ್ಮನ್ನು ಕಾಪಾಡು. ಇಲ್ಲಿಂದ ಯಾರಿಗೂ ಸಿಗದಂತೆ ಪಾರಾದರೆ ನಾನು ಖಂಡಿತ ಸಂನ್ಯಾಸವನ್ನು ತೆಗೆದುಕೊಂಡು ಜೀವಮಾನವೆಲ್ಲಾ ನಿನ್ನ ಧ್ಯಾನದಲ್ಲಿಯೇ ಸೇವೆಯಲ್ಲಿಯೇ ಕಳೆಯುತ್ತೇನೆ." ಎಂದು ಮೊದಲಾಗಿ ಮನಸ್ಸಿನ ಆಳದಿಂದಲೂ ಪ್ರಾರ್ಥನೆ ಸಲ್ಲಿಸಿದನಂತೆ. ಸ್ವಲ್ಪ ಹೊತ್ತಿನಲ್ಲಿ ಸದ್ದು ಅಡಗಿದ್ದರಿಂದ ಎಲ್ಲರೂ ಸುರಕ್ಷಿತವಾಗಿ ಹೊರಗೆ ಬಂದರಂತೆ. ಇಲ್ಲಿ ಮುಖ್ಯವಾಗಿ ನಾವು ಗಮನಿಸಬೇಕಾದುದು, ಯಾವ ಮನುಷ್ಯನನ್ನೂ ಕೇವಲ ಅವನ ಹೊರಗಿನ ಆಚರಣೆಯನ್ನು ನೋಡಿ ಒಳಗಿನ ಯೋಗ್ಯತೆಯನ್ನು ಊಹಿಸಬಾರದು—ಎನ್ನುವದು.

Man is not what his actions are, man is what his thoughts are. "ಮನುಷ್ಯನ ವರ್ತನೆಗಳು ಮನುಷ್ಯನಲ್ಲ; ಅವನ ಭಾವನೆಗಳೇ ಅವನು." ಅಪಕೀರ್ತಿ ಹೊತ್ತವರ ಮನೆಯಲ್ಲಿ ಒಬ್ಬ ಸಂತನಿರಬಹುದು. ಮಹಾತ್ಮನಾದ

ಬುದ್ಧನು ಒಬ್ಬ ಸೂಳೆಯ ಮನೆಗೆ ಹೋಗಿದ್ದನು. ಜನರು ಕಲ್ಲಿನಿಂದ ಹೊಡೆದು ಕೊಲ್ಲುವದಕ್ಕೆ ಹೋಗಿದ್ದ ವ್ಯಭಿಚಾರಿಣಿಯಾಗಿದ್ದ ಮೇರಿ ಮ್ಯಾಗ್‌ಡಲೀನ್‌ಳ ಮನೆಯಲ್ಲಿ ಭಗವಾನ್ ಕ್ರಿಸ್ತನು (Lord Christ) ವಾಸ ಮಾಡಿದ್ದನು. ಆದರೆ ಕ್ರಿಸ್ತನು ದೇವರಾಗಿದ್ದನು. ಇಂಡಿಯಾ ದೇಶದಲ್ಲಿ ಕ್ರಿಸ್ತನಂಥಾ ಅನೇಕರು ಉದ್ಧಾರಕರೂ ಸಂರಕ್ಷಕರೂ ಆಗಿದ್ದಾರೆ. ಅವರಲ್ಲಿ ಕೆಲವರು ಅಪಕೀರ್ತಿವುಳ್ಳವರ ಜೊತೆಗೇ ಇದ್ದರು. ಅವರು ನಿಜವಾಗಿಯೂ ದೇವರಾಗಿದ್ದರು. ಒಬ್ಬ ಮನುಷ್ಯನನ್ನು ಅವನ ಆಚರಣೆಗಳಿಂದಲೂ ಅವನ ವಾಸ ಸಹವಾಸಗಳಿಂದಲೂ ಅವನ ಒಳಗಿನ ಯೋಗ್ಯತೆಯನ್ನು ತೀರ್ಮಾನಿಸಬಾರದು. ಯಾರ ಗುಣಶೀಲಗಳನ್ನೂ ವಿವೇಚಿಸ ಬೇಡಿ. ಭಾವನೆಗಳೇ ವಿಚಾರಗಳೇ ಮನುಷ್ಯ. ಸೆರೆಮನೆಯಲ್ಲಿರತಕ್ಕವರು ಎಷ್ಟೋ ವೇಳೆ ಸ್ವರ್ಗದಲ್ಲಿರುತ್ತಾರೆ. ಜಾನ್ ಬನಿಯನ್ ತನ್ನ "Pilgrim's Progress" 'ಯಾತ್ರಿಕನ ಮುನ್ನಡೆ' ಎಂಬ ಪ್ರಸಿದ್ಧ ಗ್ರಂಥವನ್ನು ಸೆರೆಮನೆಯಲ್ಲಿಯೇ ಬರೆದನು. ಮಿಲ್ಟನ್ ಮಹಾಕವಿಯ ಮಹಾಕೃತಿ ಒಂದು ಅವನು ಬಂದೀಖಾನೆಯಲ್ಲಿ ಕುರುಡ ನಾಗಿದ್ದಾಗ ರಚನೆಯಾಗಿ ಹೊರ ಬಂದಿತು. ಡಾನಿಯಲ್ ಡಿ ಫೋ "ರಾಬಿನ್‌ಸನ್ ಕ್ರೂಸೋ" ಎಂಬ ಗ್ರಂಥವನ್ನೂ, ಸರ್ ವಾಲ್ಟರ್ ರಿಲೇ "History of the World" 'ಪ್ರಪಂಚ ಚರಿತ್ರೆ' ಎಂಬ ಗ್ರಂಥವನ್ನೂ ಅವರು ಬಂದೀಖಾನೆಗಳಲ್ಲಿ ದ್ದಾಗಲೇ ಬರೆದುದು. ನಮ್ಮ ಸುತ್ತ ವಲಯಗಳು ಹೀಗಿರಬೇಕೆಂದೂ ಹಾಗಿರ ಬೇಕೆಂದೂ ಬಯಸುತ್ತೇವೆ ; ಆದರೆ ನಮ್ಮ ಆಲೋಚನೆಗಳೂ ಭಾವನೆಗಳೂ ವಾಸಿಸು ವಲ್ಲಿ ನಾವು ವಾಸಮಾಡುತ್ತೇವೆ.

ಕಳ್ಳನು ಯಶಸ್ವಿಯಾಗುವದು ಕೂಡ ಅವನು ಕ್ಷಣಕಾಲ ದೇಹವನ್ನು ಮರೆತು ಅವನಿಗೇ ತಿಳಿಯದೆ ದೇವತ್ವದಲ್ಲಿ ಮುಳುಗುವದರಿಂದ. ಎಲ್ಲಾ ಯಶಸ್ಸೂ ಎಲ್ಲರ ಯಶಸ್ಸೂ ಅವರಲ್ಲಿರುವ ದೇವತ್ವದಿಂದ, ಕ್ಷಣಕಾಲವಾದರೂ ಆ ದೇವತ್ವದಲ್ಲಿ ಅವರು ಮುಳುಗುವದರಿಂದ. ಕಳ್ಳತನದಿಂದ ದೈವೀಸ್ವರ–ಮೈತ್ರಿಯನ್ನು–ಋತ ನಿಯಮ ವನ್ನು–ಮುರಿಯುವದರಿಂದ ಶಿಕ್ಷೆಯನ್ನು ಅನುಭವಿಸುತ್ತಾರೆ. ಒಬ್ಬ ಮನುಷ್ಯನನ್ನು ಪೂರಾ ಕೆಟ್ಟವನೆನ್ನುವದರಲ್ಲಿ ನಾವು ತಪ್ಪುಮಾಡುತ್ತೇವೆ. ಕಳ್ಳನಲ್ಲಿಯೂ ದೈವ ಭಕ್ತಿಯೂ ಆತ್ಮಾರ್ಪಣೆ ಭಾವವೂ ಇರಬಹುದು. ಕ್ರಿಸ್ತರುಗಳಲ್ಲಿಯೂ ಮಿಷನರಿ ಪಾದ್ರಿಗಳಲ್ಲಿಯೂ ಧರ್ಮ ಪ್ರಚಾರಕರಲ್ಲಿಯೂ ಸ್ವಾಮಿಗಳಲ್ಲಿಯೂ ಗುರುಗಳಲ್ಲಿಯೂ ಕೆಲವು ಕೆಟ್ಟ ಪ್ರವೃತ್ತಿಗಳಿರಬಹುದು. ಒಳ್ಳೆಯ ಗುಣಗಳ ಜೊತೆಗೆ ಸ್ವಾಭಾವಿಕ ವಾದ ಕೆಟ್ಟಗುಣವನ್ನು ನೋಡದಿರುವ ಕುರುಡುತನವೇ ನಾವು ವ್ಯಕ್ತಿಪೂಜೆಯಲ್ಲಿ ಮಾಡುವ ತಪ್ಪು. ಆದ್ದರಿಂದ ಯಾವಾಗಲೂ, ಮಿಶ್ರವಾಗಿರುವ ಸತ್ಯಾನೃತಗಳನ್ನು (ಋತವನ್ನೂ ಅನೃತವನ್ನೂ) ಬೇರ್ಪಡಿಸಿ ತಿಳಿಯಬೇಕು. ಪ್ರತಿಯೊಬ್ಬನಲ್ಲಿಯೂ ಇವೆರಡರ ವಿಲಕ್ಷಣ ಮಿಶ್ರಣವಿದೆ.

೧೪೪. ಸತ್ತವರನ್ನಾದರೂ ಬದುಕಿದವರನ್ನಾದರೂ ಉದ್ಧರಿಸುವ ಮಾರ್ಗ

(ಮೃತನಾದ ಪತಿಯನ್ನು ಉದ್ಧರಿಸಬೇಕೆಂಬ ಪತ್ನಿ)

ಯಾವ ವ್ಯಕ್ತಿಗಾದರೂ ನಾವು ಇಚ್ಛಿಸಿದಂತೆ ಭಾವನೆ ಬರುವ ಹಾಗೆ ಮಾಡ ಬಹುದೆಂದು ಎಲ್ಲಾ ಕ್ರೈಸ್ತ ವಿಜ್ಞಾನಿಗಳೂ ಸ್ವಾನುಭವದಿಂದ ಬಲ್ಲರು. ಹೀಗೆ ಅಭ್ಯಾಸಮಾಡುವ ಪತಿಪತ್ನಿಯರಿಬ್ಬರೂ ಪರಸ್ಪರ ಸಹಾಯವಾಗುತ್ತಾರೆ. ಆಹಾ ! ಎಂಥಾ ಆಧ್ಯಾತ್ಮಿಕ ಐಕಮತ್ಯ ಅದು ! ನೈಜವಾದ ಐಕ್ಯಭಾವ, ಸಂಯೋಗ ಅದು ! ಅದು ಭವ್ಯವೂ ದಿವ್ಯವೂ ಆದ ಮಿಲನ. ಉಭಯರೂ ಸಹಾಯ ಮಾಡತಕ್ಕವರೂ ಸಹಾಯವನ್ನು ಪಡೆಯತಕ್ಕವರೂ ಆಗುತ್ತಾರೆ. ಅಂಥಾ ಆಧ್ಯಾತ್ಮಿಕ ಸಂಯೋಗದ ಆಧಾರದ ಮೇಲೆ ಬೆಳೆದಂಥ ಮದುವೆಯೂ ಪ್ರೇಮವೂ ಪ್ರಪಂಚದಲ್ಲಿ ಅತ್ಯಂತ ಸುಖಮಯವಾದುದು. ಮುಖದ ಬಣ್ಣವನ್ನೂ ರೂಪರೇಖೆಗಳನ್ನೂ ಆಕೃತಿಯನ್ನೂ ದೇಹವನ್ನೂ ವ್ಯಕ್ತಿಸೌಂದರ್ಯವನ್ನೂ ಮೋಹಿಸಿ ಮಾಡಿಕೊಂಡ ಎಲ್ಲಾ ವಿವಾಹ ಸಂಬಂಧಗಳೂ ಬಹಳ ದುಃಖ–ಚಿಂತಾಮಯವಾಗಿ ನಷ್ಟದಲ್ಲಿ ಪರಿಣಾಮ ಹೊಂದುತ್ತವೆ.

ಆಧ್ಯಾತ್ಮಿಕ ಸಂಸ್ಕಾರ–ಸಂಯೋಗಗಳ ಆಧಾರದ ಮೇಲೆ ನಡೆದ ಮದುವೆಯು ಮಾತ್ರ ಬಣ್ಣ, ರೂಪ, ಸೌಂದರ್ಯಾದಿಗಳನ್ನು ಲಕ್ಷ್ಯಮಾಡದೆ ಒಳಗಿರುವ ಸುರಕ್ಷಿತವೂ ಶಾಶ್ವತವೂ ಆದ ದೇವತ್ವವನ್ನು ಮಾತ್ರ ಗಮನಿಸುತ್ತದೆ. ಇಂಥಾ ಮದುವೆಯು ಮಾತ್ರ ಸುಖವನ್ನೂ ಆನಂದವನ್ನೂ ತರುತ್ತದೆ.

ಒಬ್ಬಳು ಹೆಂಗಸು ಸಾಧುಗಳೊಬ್ಬರಲ್ಲಿ ಬಂದು "ನನ್ನ ಗಂಡನು ಸತ್ತುಹೋಗಿ ಕೆಲವು ತಿಂಗಳಾಯಿತು. ಅವನಿಗೆ ಸದ್ಗತಿಯನ್ನು ಕೊಡಲು ನಾನು ಏನು ಮಾಡಬೇಕು ?" ಎಂದು ಕೇಳಿದಳು. ಅವರಲ್ಲಿ ಮತ್ತೊಬ್ಬ ಮನುಷ್ಯ ಬಂದು ತನ್ನ ಕಷ್ಟವನ್ನು ಹೇಳಿಕೊಂಡನು. ಅವನು ತನಗಿದ್ದ ಒಬ್ಬನೇ ಮಗನನ್ನು ಕಳೆದು ಕೊಂಡಿದ್ದನು ; ಆದ್ದರಿಂದ ಆ ವಿಯೋಗವನ್ನು ತಡೆಯಲಾರದೆ ಆತ್ಮಹತ್ಯೆ ಮಾಡಿ ಕೊಳ್ಳುವದಾಗಿ ಹೇಳಿದನು. ಮತ್ತೊಬ್ಬ ಗೃಹಸ್ಥನು ಬಂದು ತನ್ನ ಹೆಂಡತಿಯನ್ನು ಕಳೆದುಕೊಂಡಿರುವದಾಗಿಯೂ ಆದ್ದರಿಂದ ತಾನು ಬದುಕುವದೇನೂ ಪ್ರಯೋಜನ ವಿಲ್ಲವೆಂದೂ ಹೇಳಿಕೊಳ್ಳುತ್ತಿದ್ದನು.

ಸಾಧುಗಳು ಆ ಹೆಂಗಸಿಗೆ ಹೇಳಿದರು : "ನಿನ್ನ ಗಂಡನನ್ನು ನೀನು ರಕ್ಷಣ ಮಾಡಬಹುದು ; ನೀನೇನೂ ನಿರಾಶೆಯಾಗುವ ಕಾರಣವಿಲ್ಲ. ನನ್ನ ಹಿತವಚನದಂತೆ ನಡೆದುಕೊಳ್ಳಬೇಕು. ನಿತ್ಯವೂ ಸ್ವಲ್ಪಹೊತ್ತು ನಿಯಮಿತ ಕಾಲದಲ್ಲಿ ಧ್ಯಾನ ಮಾಡು. ನಿನ್ನ ಕಣ್ಣುಗಳನ್ನು ಮುಚ್ಚಿಕೋ. ನಿನ್ನ ಗಂಡನ ದೇಹವನ್ನು ನಿನ್ನ ಮನಸ್ಸಿನ ಎದುರಿಗೆ ಇಟ್ಟುಕೊ. ನಮ್ಮ ಪ್ರೀತಿಯ ವಸ್ತುವನ್ನು ನಾವು ಚಿಂತಿಸಿದ ಕೂಡಲೇ

20069
20082

ನಮ್ಮ ಕಣ್ಣೆದುರಿಗೆ ಮನಸ್ಸಿನಲ್ಲಿ ಬರುತ್ತದೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ನಿನ್ನ ಗಂಡನ ದೇಹವು ನಿನ್ನ ಮನಸ್ಸಿನಲ್ಲಿ ಕಣ್ಣೆದುರಿಗೆ ಬಂದಾಗ ದುಃಖ ಪಡಬೇಡ, ಅಳಬೇಡ. ನೀನು ಅತ್ತು ಕಣ್ಣೀರು ಹಾಕುವದರಿಂದ ಅವನು ಪ್ರಪಂಚದಲ್ಲಿಯೇ ಆಸಕ್ತನಾಗುವಂತೆ, ಸಿಕ್ಕಿಕೊಳ್ಳುವಂತೆ ಮಾಡುತ್ತಿ. ಅವನಿಗೆ ನೀನು ಕೇಡು ಮಾಡಿದಂತೆ ಆಗುತ್ತದೆ. ಅವನನ್ನು ನೀನು ಈ ಭೂಮಿಗೇ ಅಂಟಿಕೊಳ್ಳುವಂತೆ ಕೆಳಗೆ ಜಗ್ಗಬಾರದು. ಅವನ ಅಭಿವೃದ್ಧಿಯನ್ನು ಕೆಡಿಸಬಾರದು. ಅವನನ್ನು ಆಲೋಚಿಸುವಾಗ ಮನಸ್ಸಿನಲ್ಲಿ ನಿನ್ನ ಕಣ್ಣೆದುರಿಗೆ ನಿನ್ನ ಗಂಡನನ್ನು ಸ್ಪಷ್ಟವಾಗಿ ಕಾಣುವದರಿಂದ ಅವನು ಸತ್ತಿದ್ದಾನೆಂದೇ ಭಾವಿಸಬೇಡ ; ಅವನು ಜೀವಂತನಾಗಿದ್ದಾನೆಂದು ಭಾವಿಸು, ಅವನು ಕಣ್ಣೆದುರಿಗಿದ್ದಾಗ ಅವನನ್ನು ದೇವರೆಂದು ಭಾವಿಸು, ಚಿಂತಿಸು ; ಅವನನ್ನು ದೇವರೆಂದು ಅರಿ. ಅವನಿಗೆ 'ನೀನು ದೇವರು, ನೀನು ವಿಶ್ವಪ್ರಭು ; ನಿನ್ನ ದೇಹದಲ್ಲಿ, ನಿನ್ನ ರೂಪದಲ್ಲಿ ನನಗೆ ದೇವತ್ವವೇ ಕಾಣುತ್ತಿದೆ' ಎಂದು ಅವನಿಗೆ ಪುನಃ ಪುನಃ ಸಾರಿ ಹೇಳು ; ಬಾರಿ ಬಾರಿಗೂ ಅವನೆದುರಿಗೆ ಈ ಭಾವನೆಯನ್ನೇ ಸುರಿಸು, ಹರಿಸು. ಅವನಿಗೆ ಅದನ್ನೇ ಉಪದೇಶಮಾಡು." ಈ ರೀತಿಯಿಂದ ವಿಯೋಗ ಹೊಂದಿದ ನಿನ್ನ ಪತಿಯನ್ನು ನೀನು ರಕ್ಷಿಸಬಹುದು.

ನಾವು ನಮ್ಮ ಮೃತರಾದ ಮಿತ್ರರನ್ನು ಹೀಗೆ ರಕ್ಷಿಸಬಹುದಾದರೆ, ಉದ್ಧಾರ ಮಾಡಬಹುದಾದರೆ ನಮ್ಮ ಜೀವಂತ ಮಿತ್ರರನ್ನೂ ಇದೇ ಬಗೆಯಿಂದ ರಕ್ಷಿಸಬಹುದು, ಉದ್ಧಾರ ಮಾಡಬಹುದು ; ಅವರಿಗೆ ಉಪಕಾರ ಮಾಡಬಹುದು.

ಪ್ರಕೃತಿ ನಿಯಮವೇನೆಂದರೆ, ನನಗೆ ಸುಖವಾದುದು ನಿಮಗೂ ಸುಖವಾಗಬೇಕು ; ನನಗೆ ಯಾವದು ಒಳ್ಳೆಯದೋ ಅದು ನಿಮಗೂ ಒಳ್ಳೆಯದು ; ನಾನು ಮುಂದುವರಿದರೆ, ನೀವು ಮುಂದುವರಿಯುತ್ತೀರಿ. ನನ್ನ ಅಭಿವೃದ್ಧಿಯೇ ನಿಮ್ಮ ಅಭಿವೃದ್ಧಿ ; ನಾನು ಅಸ್ವಸ್ಥನಾದರೆ ಪ್ರಪಂಚವೂ ಕೆಲವಂಶದಿಂದ ಅಸ್ವಸ್ಥವಾಗುತ್ತದೆ. ನಾನು ಆರೋಗ್ಯವಾಗಿರುವದರಿಂದ ಜಗತ್ತನ್ನೇ ಆರೋಗ್ಯವಾಗಿಟ್ಟಿರುತ್ತೇನೆ. ಕ್ರಿಯೆ–ಪ್ರತಿಕ್ರಿಯೆಗಳು ಸರಿಸಮವೂ ವಿರುದ್ಧವೂ ಆಗಿವೆ.

ವಿಷಯ ಸುಖಭೋಗಕ್ಕೆ ಒಬ್ಬರಿಗೊಬ್ಬರು ಸಹಾಯ ಮಾಡುವದರಿಂದ ನಿಜವಾದ ಸುಖವನ್ನು ಕೊಡುವದೆಂದು ತಿಳಿಯುತ್ತಾರೆ ; ಖಂಡಿತ ಅದು ನಿಜ ಸುಖವಲ್ಲ. ಅದು ದ್ವೇಷವನ್ನೂ ಪ್ರೇಮಭಂಗವನ್ನೂ ಹೃದಯ ಭೇದನವನ್ನೂ ಉಂಟುಮಾಡುತ್ತದೆ. ಇದಕ್ಕೆಲ್ಲಾ ಅಜ್ಞಾನವೇ ಕಾರಣ. ನಿಜವಾದ ಸುಖಕ್ಕೆ ಕಾರಣವಾದುದು ಪರಸ್ಪರ ಜ್ಞಾನ ದಾನ ಮತ್ತು ಆಧ್ಯಾತ್ಮಿಕ ಸ್ವಾತಂತ್ರ್ಯ. ಪತಿಪತ್ನಿಯರ ಹಾಗೂ ಮಿತ್ರರ ಪರಸ್ಪರ ಕರ್ತವ್ಯವೇ ಇದು. ಪತಿಪತ್ನಿಯರು ಒಬ್ಬರಿಗೊಬ್ಬರು ತಮ್ಮ ಮನೆಯನ್ನೇ ವಿಶ್ವವಿದ್ಯಾನಿಲಯವನ್ನಾಗಿಯೂ ತಾವು ತಾವೇ ಒಬ್ಬರಿಗೊಬ್ಬರು ಪ್ರೊಫೆಸರುಗಳನ್ನಾಗಿಯೂ ಮಾಡಿಕೊಳ್ಳಬೇಕು. ನಿಮ್ಮ ಸಂತಾನವು ಮಿಲ್ಟನ್‌ರು,

ಪೇಕ್ಸ್ ಪಿಯರ್‌ರುಗಳು, ಕ್ರಿಸ್ತರು ಮೊದಲಾದ ಮಹಾ ಪುರುಷರಾಗಿ ನಿಮ್ಮ ಕುಟುಂಬಕ್ಕೂ ಪ್ರಪಂಚಕ್ಕೂ ಹಿತಕಾರಿಗಳಾಗಬೇಕಾದರೆ ನಿಮ್ಮ ಹೃದಯಗಳನ್ನು ಪರಿಶುದ್ಧಿ ಮಾಡಿ ಕೊಳ್ಳಿ. ಪತಿಪತ್ನಿಯರಿಬ್ಬರೂ ಪವಿತ್ರ ಭಾವನೆಯಿಂದ ತುಂಬಿದ್ದರೆ ಅವರ ಸಂತಾನವೂ ಪವಿತ್ರವೂ ಪ್ರಭಾವಸಂಪನ್ನವೂ ಆಗುತ್ತದೆ.

ಮನೆಯು ಪ್ರೇಮದ ಕೇಂದ್ರವಾಗಬೇಕೇ ಹೊರತು ಅದರ ಗಡಿ ಆಗಬಾರದು ; ಪರಿಧಿ ಆಗಬಾರದು. ಆದರೆ ಜನರು ಸಾಮಾನ್ಯವಾಗಿ, ಪ್ರೇಮವು ಹೊರಗೆ ಹರಡ ದಂತೆ ಮನೆಯನ್ನು ಪ್ರೇಮದ ಎಲ್ಲೆಕಟ್ಟಾಗಿ, ಮೇರೆಯಾಗಿ ಮಾಡಿಕೊಳ್ಳುತ್ತಾರೆ. ಮನೆಯೂ ಹೆಂಡತಿಯೂ ನಿಮ್ಮ ಪ್ರೇಮದ ಕಿರಣಗಳು ದಶದಿಕ್ಕುಗಳಲ್ಲಿಯೂ ಪ್ರಸಾರವಾಗುವದಕ್ಕೆ ಕೇಂದ್ರಗಳಾಗಬೇಕು ; ಅವರಿಂದ ಪರಿಮಿತವಾಗಬಾರದು. ಹೆಂಡತಿಯು ನಿಮಗೆ ಪ್ರೀತಿಸುವದನ್ನು ಕಲಿಸುತ್ತಾಳೆ. ಆದರೆ ಆ ಪ್ರೇಮವನ್ನು ನೀವು ಶುದ್ಧೀಕರಿಸಬೇಕು. ಹೊರಗಿನ ರೂಪ, ವರ್ಣ, ದೇಹ ಮೊದಲಾದವುಗಳ ಪ್ರೇಮವನ್ನು ಇಡೀ ವಿಶ್ವಪ್ರೇಮವಾಗಿ ಪರಿವರ್ತಿಸುವದರಿಂದ ಆದನ್ನು ಭಗವತ್ ಪ್ರೇಮವಾಗಿ ರೂಪಿಸಬೇಕು.

೧೪೯. Like cures like ಸಮಾನ ಪ್ರಯೋಗದ ಚಿಕಿತ್ಸೆ–ಒಂದು ರೋಗದ ಆ ಲಕ್ಷಣಗಳನ್ನೇ ಉಂಟುಮಾಡುವ ಔಷಧಿಯಿಂದ ಆ ರೋಗದ ಪರಿಹಾರ

(ಭೇದಿಯ ಔಷಧಿಯಿಂದ ಅತಿಸಾರದ ಪರಿಹಾರ)

. ಯಾವ ಏಣಿಯಿಂದ ನೀವು ಕೆಳಗೆ ಬಿದ್ದಿದ್ದೀರೋ ಆ ಏಣಿಯೇ ನಿಮ್ಮನ್ನು ಮೇಲೊಯ್ಯುತ್ತದೆ. ಯಾವ ರಸ್ತೆಯೊಳಗಿಂದ ನೀವು ಚಿಂತಾತಂಕಗಳಲ್ಲಿಯೂ ವಿಪ ತ್ತುಗಳಲ್ಲಿಯೂ ಬಿದ್ದಿರೋ ಆ ರಸ್ತೆಯಿಂದಲೇ ನೀವು ಹಿಂದಿರುಗಿ ನಡೆಯಬೇಕು. ವೇದಾಂತವು ನಿಮ್ಮ ವಿಮೋಚನೆಗೆ ಯಾವ ಬಗೆಯ ಭಾವನೆಯನ್ನು ಉಪದೇಶಿಸಿ ಸಲಹೆ ಮಾಡುತ್ತಿದೆಯೋ ಅದೇ ನಿಮ್ಮನ್ನು ಕೆಳಗೆ ತಂದ ಭಾವನಾರೂಪಕ್ಕೆ ವಿರುದ್ಧವಾದುದು. ವಿರುದ್ಧ ಗುಣ ಸ್ವಭಾವಗಳು ವಿರುದ್ಧ ಗುಣ ಧರ್ಮಗಳನ್ನು ಗುಣಪಡಿಸುತ್ತವೆ. (Like cures like and the contrary cures the contrary.) ನಿಮ್ಮ ಭಾವನೆಯೇ ನಿಮ್ಮ ಕಲ್ಪನೆಯೇ ನಿಮ್ಮ ಆಲೋಚನೆಯೇ ಈ ಎಲ್ಲಾ ಪ್ರಪಂಚ ವಾಗಿದೆಯೇ ಹೊರತು ಬೇರೆಯಲ್ಲ ಎಂಬುದನ್ನು ವೇದಾಂತವು ತೋರಿಸಿ ಕೊಡು ತ್ತದೆ. ಈಗ ಈ ಭಾವನಾ ಆಲೋಚನೆಗಳನ್ನೇ ಶುದ್ಧಮಾಡಿ, ಉನ್ನತಗೊಳಿಸಿ, ವಿಹಿತ ವಾಗಿ ನಿರ್ದೇಶಿಸಿದರೆ, ನೀವೇ ಪ್ರಕಾಶಗಳಿಗೆಲ್ಲಾ ಪ್ರಕಾಶವಾಗಿಯೂ ವಿಶ್ವದಲ್ಲಿಯ ಸರ್ವವಾಗಿಯೂ ಆಗುತ್ತೀರಿ.

ಅತಿಸಾರದಿಂದ, ಅತಿ ಭೇದಿಯಿಂದ ನರಳುತ್ತಿರುವವನಿಗೆ ವೈದ್ಯರು ಭೇದಿಯಾಗು ವದಕ್ಕೇ ಔಷಧಿಯನ್ನು ಕೊಡುತ್ತಾರೆ. ಅದರಿಂದ ಆ ಕಾಯಿಲೆಯು ಗುಣವಾಗುತ್ತದೆ.

ಅತಿಸಾರವಾದಾಗ ಪುನಃ ಪುನಃ ಪಾಯಿಖಾನೆಗೆ ಹೋಗುವಂತೆ ಮಾಡುತ್ತಿತ್ತು. ಈಗ ಇಷ್ಟ ಪಟ್ಟು ತೆಗೆದುಕೊಂಡ ವಿರೇಚಕ (ಭೇದಿ) ಔಷಧಿಯು ಅದೇ ಪರಿಣಾಮವನ್ನು ಉಂಟು ಮಾಡಿದರೂ ಎರಡು ಪ್ರವೃತ್ತಿಗಳಿಗೂ—ವಿಶ್ವದಷ್ಟು ವ್ಯತ್ಯಾಸವಿದೆ. ಎರಡೂ ಒಂದೇ ರೀತಿಯಾದ ಪರಿಣಾಮವನ್ನುಂಟು ಮಾಡಿದರೂ ಅತಿಸಾರವು ರೋಗವೂ ವಿರೇಚಕವು ಔಷಧಿಯೂ ಆಗಿವೆ. ಪ್ರಾಪಂಚಿಕ ಭಾವನೆಯು ನಿಮ್ಮನ್ನು ದಾಸ್ಯದಲ್ಲಿ ಕೆಡವುತ್ತದೆ; ಅದು ನಿಮ್ಮನ್ನು ಬಂಧಿಸುತ್ತದೆ; ಎಲ್ಲಾ ಬಗೆಯ ಸನ್ನಿವೇಶಗಳ ಕರುಣೆಗೂ ಗುರಿಪಡಿಸುತ್ತದೆ ; ಅದು ರೋಗ ; ಪ್ರತಿಯೊಂದು ಗಾಳಿಯೂ ಬಿರುಗಾಳಿಯೂ ನಿಮ್ಮನ್ನು ಉರುಳಿಸಿ ತಲೆಕೆಳಗು ಮಾಡುತ್ತದೆ. ಸಾಮಾನ್ಯ ಮಾನವ ಭಾವನೆಯೇ ಭಾವನೆಯು ಅತಿಸಾರ. ವೇದಾಂತವು ಒದಗಿಸುವ, ಸೂಚಿಸುವ ವಿರೇಚಕವೇ (ಭೇದಿಯ ಔಷಧಿಯೇ) ವಿಮೋಚಕವಾಗಿದೆ. ಅದನ್ನು ತೆಗೆದುಕೊಳ್ಳಿ. ಇದನ್ನೂ ಒಂದು ಬಗೆಯ ಕಲ್ಪನೆಯೆಂದೇ ತಿಳಿಯಬಹುದು. ಜಗತ್ತಿನ ಎಲ್ಲಾ ಭಾವನೆಗಳೂ ಹೀಗೆಯೇ ಇವೆ. ಆದರೆ ಪ್ರಾಪಂಚಿಕ ಭಾವನೆಗಳೂ ಮಾನಸ ಕಲ್ಪನೆಗಳೂ ಅತಿಸಾರವೇ ಸರಿ; ವೇದಾಂತವು ಪ್ರತಿಪಾದಿಸುವ ಕಲ್ಪನೆಗಳೂ ವಿಚಾರಗಳೂ ಭೇದಿಯ ಔಷಧಿಯಂತೆ ಇವೆ. ಈ ವಿರೇಚಕವನ್ನು ತೆಗೆದುಕೊಂಡರೆ ನಿಮ್ಮ ರೋಗವು ಪರಿಹಾರವಾಗುತ್ತದೆ. ನಿಮ್ಮ ಎಲ್ಲಾ ವ್ಯಥೆಯೂ ಚಿಂತೆಯೂ ತೊಂದರೆಯೂ ನಿವಾರಣೆಯಾಗುತ್ತವೆ.

ಇಂಡಿಯಾದಲ್ಲಿ ಕೆಲವರು ಕೈತೊಳೆಯುವದಕ್ಕೆ ಸಾಬೂನನ್ನು ಉಪಯೋಗಿಸದೆ ಬೂದಿಯನ್ನು ಉಪಯೋಗಿಸುತ್ತಾರೆ. ಬೂದಿಯು ಒಂದು ಬಗೆಯ ಕೊಳೆ, ನಿಮ್ಮ ಕೈಗೆ ಹತ್ತಿ, ನಿಮ್ಮ ಕೈಯನ್ನು ಅಪವಿತ್ರಗೊಳಿಸುತ್ತಿರುವದೂ ಇನ್ನೊಂದು ಬಗೆಯ ಕೊಳೆ, ಹೊಲಸು, ಕೈಗಳಿಗೆ ಬೂದಿಯನ್ನು ಹಚ್ಚಿ ನೀರಿನಿಂದ ತೊಳೆಯುವಾಗ ಕೈಗೆ ಮೊದಲು ಹತ್ತಿದ್ದ ಕೊಳೆಯು ಹೋಗುವದಲ್ಲದೆ ಬೂದಿಯೂ ಹೋಗುತ್ತದೆ.

ಹಾಗೆಯೇ ವೇದಾಂತವು ಉಪದೇಶಿಸುವ ಭಾವನೆಯೂ ವಿಚಾರವೂ ಕಲ್ಪನೆಯೂ ಬೂದಿಯಂತೆ ಇವೆ. ಅವು ನಿಮ್ಮಲ್ಲಿರುವ ಎಲ್ಲಾ ಮಾಲಿನ್ಯವನ್ನೂ ದೌರ್ಬಲ್ಯವನ್ನೂ ತೊಳೆದು ಕಳೆಯುತ್ತವೆ.

ಒಬ್ಬನು ಕನಸಿನಲ್ಲಿ ಅನೇಕ ಬಗೆಯ ವಸ್ತುಗಳನ್ನು ನೋಡುತ್ತಾನೆ. ಕನಸಿನ ಆ ವಸ್ತುಗಳೆಲ್ಲಾ ಕೇವಲ ಕಲ್ಪನೆಗಳು, ಭಾವನೆಗಳು. ಕನಸಿನಲ್ಲಿ ಸಿಂಹವನ್ನೋ ಹುಲಿಯನ್ನೋ ಹಾವನ್ನೋ ನೀವು ಕಂಡರೆ, ಕೂಡಲೇ ಹೌಹಾರಿ ಎಚ್ಚರಗೊಳ್ಳುತ್ತೀರಿ; ಈ ಭಯಂಕರ ಸ್ವಪ್ನದಲ್ಲಿ ಈ ಹುಲಿ–ಹಾವುಗಳು ನಿಮ್ಮ ಕಲ್ಪನೆಗಳೇ ಆದರೂ ಮಿಕ್ಕ ಎಲ್ಲಾ ಕಲ್ಪನೆಗಳನ್ನೂ ನುಂಗಿ ನಿಮ್ಮನ್ನು ಎಚ್ಚರಗೊಳಿಸತಕ್ಕಂಥ ವಿಲಕ್ಷಣ ಕಲ್ಪನೆ. ಹುಲಿಯಾಗಲೀ ಸಿಂಹವಾಗಲೀ ಹುಲ್ಲನ್ನೋ ಕಲ್ಲನ್ನೋ ತಿನ್ನುವದಿಲ್ಲ. ಆದರೆ ನಿಮ್ಮ ಸ್ವಪ್ನ ಸಿಂಹವು ಆ ಸ್ವಪ್ನಲೋಕದ ಮನೋಹರ ದೃಶ್ಯಗಳನ್ನೂ ಸುಂದರವಾದ ನೆಲನೋಟಗಳನ್ನೂ ಹರಿಯುವ ನದಿಗಳನ್ನೂ ಭವ್ಯವಾದ ಪರ್ವತಗಳನ್ನೂ ಘನವಾದ

ಅರಣ್ಯಗಳನ್ನೂ ತಿಂದು, ಕನಸಿನ ಜೀವನನ್ನು ಕಳವಳಗೊಳಿಸಿ ತನ್ನನ್ನು ತಾನೇ ನುಂಗಿ ಹಾಕಿದ ಆಶ್ಚರ್ಯಕರವಾದ ಸೃಷ್ಟಿ. ಏಕೆಂದರೆ ಎಚ್ಚರವಾದ ಕೂಡಲೇ ಕನಸಿನಲ್ಲಿ ಅಷ್ಟೆಲ್ಲಾ ಅನಾಹುತ ಮಾಡಿದ ಆ ಭಯಾನಕ ಸಿಂಹವೂ ಇರುವದಿಲ್ಲ.

ಇದೇ ಪ್ರಕಾರ, ಈ ಪುಸ್ತಕದಲ್ಲಿ ಮನಸ್ಸಿಗೆ ನಾಟುವಂತೆ ಪುನಃ ಪುನಃ ಬೋಧಿಸಿರುವ ಭಾವನೆಗಳೂ ಕಲ್ಪನೆಗಳೂ ಸ್ವಪ್ನದಲ್ಲಿ ಕಾಣುವ ಸಿಂಹದಂತೆ ಇವೆ. ಇಡೀ ಪ್ರಪಂಚವೇ ಒಂದು ಕನಸು. ಕನಸಿನ ಸಿಂಹವೋ ಹುಲಿಯೋ ಎಲ್ಲಾ ಸುಳ್ಳು ಕಲ್ಪನೆಗಳನ್ನೂ ಭಾವನೆಗಳನ್ನೂ ಅಜ್ಞಾನವನ್ನೂ ಕಳೆದು, ತಾನೂ ಅಳಿಯುತ್ತದೆ, ಎಲ್ಲಾ ಕಲ್ಪನೆಗಳೂ ಮಾತೂ ನಿಲ್ಲುವ ಅವರ್ಣನೀಯವಾದ ಇರುವಿಕೆಯಲ್ಲಿ ನಮ್ಮನ್ನು ನೆಲೆಗೊಳಿಸುತ್ತದೆ.

೧೫೦. Contrary cures contrary : **ವಿರುದ್ಧ ಪ್ರಯೋಗದ ಚಿಕಿತ್ಸೆ. ವಿರುದ್ಧ ಲಕ್ಷಣಗಳನ್ನು ಉಂಟುಮಾಡುವ ಚಿಕಿತ್ಸೆಯಿಂದ ಒಂದು ರೋಗದ ಪರಿಹಾರ**

(ಸ್ವಪ್ನ ಸಿಂಹ)

ಉದಾಹರಣೆಗಾಗಿ, ಕನಸಿನಲ್ಲಿರುವ ಜ್ಞಾತೃವು ಪರ್ವತವನ್ನೇರಿ ಒಂದು ಸಿಂಹವನ್ನು ಸಮೀಪಿಸಿದಾಗ, ಅದು ಅವನನ್ನು ಹರಿದು ಚೂರು ಚೂರು ಮಾಡುತ್ತದೆ. ಅಥವಾ ಇನ್ನೊಮ್ಮೆ ಅವನು ಒಂದು ಕೆಸರು ಗುಂಡಿಯಲ್ಲಿ ಸಿಕ್ಕಿಕೊಳ್ಳುತ್ತಾನೆ ; ಅಥವಾ ಮತ್ತೊಮ್ಮೆ ಕನಸಿನಲ್ಲಿ ಅವನು ಗಂಗಾಪ್ರವಾಹದಲ್ಲಿ ಕೊಚ್ಚಿ ಹೋಗುತ್ತಾನೆ— ಎಂದಿಟ್ಟುಕೊಳ್ಳೋಣ. ಈಗ ಕನಸಿನ ಜ್ಞಾತೃವು ನಿಜವಾಗಿದ್ದರೆ ಅದು ತನ್ನ ಕನಸೆಂದೂ ತನಗೆ ಕಾಣುತ್ತಿರುವ ಪರ್ವತವೂ ಸಿಂಹವೂ ಅದರ ಹಿಂಸೆಯೂ ಎಲ್ಲಾ ಕಲ್ಪನೆ ಮಾತ್ರವೆಂದೂ ತಿಳಿದು, ಸಿಂಹವು ಹರಿದು ತಿನ್ನುವಾಗ ಅವನು ಕಿರಿಚುತ್ತಲೂ ಅಳುತ್ತಲೂ ಇರಲಿಲ್ಲ. ಅಥವಾ ಕೆಸರಿನಲ್ಲಿ ಸಿಕ್ಕಿಕೊಂಡಂತೆ ಕಂಡಾಗ ಅಥವಾ ಗಂಗೆಯು ಸೆಳೆದುಯ್ಯುತ್ತಿರುವಾಗ ಅವನು ಭಯಪಡುತ್ತಿರಲಿಲ್ಲ. ಈಗ ಈ ಕನಸಿನ ವಸ್ತುಗಳು ನಿಜವಾದವೆಂದಿಟ್ಟುಕೊಂಡರೆ, ಸಿಂಹವು ಕನಸುಕಾಣುವವನನ್ನು ನಿಜವಾಗಿಯೂ ಕೊಲ್ಲಬೇಕು, ಅಥವಾ ಹಾಸಿಗೆಯೆಲ್ಲಾ ಕೆಸರಾಗಬೇಕು ಅಥವಾ ಗಂಗಾ ಜಲದಿಂದ ಹಾಸಿಗೆ-ಬಟ್ಟೆಗಳೆಲ್ಲಾ ತೊಯ್ದಿರಬೇಕು, ಕೊಚ್ಚಿಕೊಂಡು ಹೋಗಿರಬೇಕು. ಆದರೆ ಇದು ಯಾವದೂ ಆಗಿರುವದಿಲ್ಲ. ಆದ್ದರಿಂದ ಕನಸಿನ ಚಿತ್ತವೂ ನಿಜವಲ್ಲ, ವಸ್ತುವೂ ನಿಜವಲ್ಲ ; ಆ ಜ್ಞಾತೃವೂ ನಿಜವಲ್ಲ, ಜ್ಞೇಯವೂ ನಿಜವಲ್ಲ, ಆ ವಿಜ್ಞಾನವೂ(ಅರಿವೂ) ನಿಜವಲ್ಲ. ವಿಷಯಿಯೂ ನಿಜವಲ್ಲ, ವಿಷಯವೂ ನಿಜವಲ್ಲ. ಆದರೆ ಈ ಎರಡೂ ನಿಜವಲ್ಲದಿದ್ದರೂ ಈ ಎರಡೂ ಕೂಡಿಯೇ ಕನಸಾಗುತ್ತದೆ. ಗಣಿತ ಶಾಸ್ತ್ರದ ಸಂಕೇತಗಳಿಂದ ಈ ತತ್ತ್ವವನ್ನು ಹೀಗೆ ತಿಳಿಸಬಹುದು.

ಮೇಜು=ಗುಣವೇ+ಅ(ಅಜ್ಞೇಯವಾದ ಕೇವಲ ಸತ್ಯ)
ಹಲಗೆ=ಗುಹ+ಅ(ಅಜ್ಞೇಯ ಸತ್ಯ)
ಜಾಜಿ=ಗುಂಜಾ+ಅ(ಅಜ್ಞೇಯ ಸತ್ಯ)

ಇಲ್ಲಿ ಮೇಜಿನ ಗುಣದೊಂದಿಗೆ ಅಜ್ಞೇಯವಾದ ಕೇವಲ ಸತ್ಯವು ಸೇರಿದರೆ ಮೇಜು.

ಹಲಗೆಯ ಗುಣಗಳೊಂದಿಗೆ ಅಜ್ಞೇಯವು ಸೇರಿದರೆ ಹಲಗೆ.

ಜಾಜಿಯ ಗುಣಗಳೊಂದಿಗೆ ಅಜ್ಞೇಯವು ಸೇರಿದರೆ ಜಾಜಿ.

ಜಾಜಿಯು ಬೆಳ್ಳಗಿದೆ, ಹೂವಿನಲ್ಲಿ ದಳಗಳಿವೆ, ಸುವಾಸನೆಯಿದೆ, ಕೋಮಲವಾಗಿದೆ, ಮೊದಲಾಗಿ ಇವೆಲ್ಲಾ ಜಾಜಿಯ ಹೂವಿನ ಗುಣಗಳು. ಅಜ್ಞೇಯದಲ್ಲಿ ಈ ಗುಣಗಳೆಲ್ಲಾ ಸೇರಿ ಜಾಜಿ ಹೂವಾಗಿದೆ. ಎಲ್ಲದರಲ್ಲಿಯೂ ಅಜ್ಞೇಯವು ಮಾತ್ರ ಒಂದೇ, ಸಮಾನ. ಅದೇ ಅವೆಲ್ಲವುಗಳಲ್ಲಿರುವ ಸತ್ಯ, ಆತ್ಮ.

೧೫೧. ಮರಣಾನಂತರ: ಸ್ವರ್ಗ, ನರಕಗಳು

(ರಾಮನು ವಿದ್ಯಾರ್ಥಿಯಾಗಿದ್ದಾಗ ಇತ್ಯಾದಿ)

ವೇದಾಂತದ ರೀತ್ಯಾ ಮನುಷ್ಯ ಸತ್ತ ಮೇಲೆ ಕೂಡಲೇ ಅಲ್ಲಿಯೇ ಹುಟ್ಟುವದಿಲ್ಲ. ಮರದಿಂದ ಬೀಜವು ಬಿದ್ದಮೇಲೆ, ಅದು ಕೂಡಲೇ ಮೊಳಕೆಯಾಗಿ ಮರವಾಗಿ ಬೆಳೆಯುವದಿಲ್ಲ. ಮನುಷ್ಯನು ಒಂದು ಮನೆಯನ್ನು ಬಿಟ್ಟಮೇಲೆ ತತ್ ಕ್ಷಣವೇ ಇನ್ನೊಂದು ಮನೆಯಲ್ಲಿ ಪ್ರವೇಶಿಸುವದಿಲ್ಲ ; ಸ್ವಲ್ಪಕಾಲ ಬೇಕಾಗುತ್ತದೆ. ಹಾಗೆಯೇ ಮನುಷ್ಯನು ಸತ್ತಮೇಲೆ ಕೂಡಲೇ ಅವನು ಪುನಃ ಹುಟ್ಟುವದಿಲ್ಲ. ನಾವು ಮರಣಾವಸ್ಥೆಯೆಂದು, ಅಥವಾ ದೀರ್ಘ ನಿದ್ರಾವಸ್ಥೆಯೆಂದು ಕರೆಯುವ ಒಂದು ಮಧ್ಯಕಾಲ ಸ್ಥಿತಿಯಲ್ಲಿ ಅವನು ಹಾಯ್ದುಹೋಗಬೇಕು. ಈಗ ಈ ಸ್ಥಿತಿಯ ವಿಚಾರವೇನು ? ಇದು ಎಂಥಾ ಸ್ಥಿತಿ ? ಸಾವಿಗೂ ಪುನರ್ಜನ್ಮಕ್ಕೂ ನಡುವಿನ ಈ ಸ್ಥಿತಿ ಹೇಗಿದೆ ? ಅದೊಂದು ನಿದ್ರಾಸ್ಥಿತಿ ; ಅದರಲ್ಲಿ ನಿದ್ರೆಯ ಎಲ್ಲಾ ಗುಣಗಳೂ ಲಕ್ಷಣಗಳೂ ಇವೆ. ಮನುಷ್ಯನು ನಿದ್ರೆ ಮಾಡುವಾಗ, ಅವನ ಕನಸಿನಲ್ಲಿ, ಎಚ್ಚರದಲ್ಲಿ ಅವನು ಕಂಡಿದ್ದ ಬಗೆಯ ವಸ್ತುಗಳನ್ನೇ ವ್ಯವಹಾರವನ್ನೇ ಕಾಣುತ್ತಾನೆ ಎಂಬುದು ನಿಮಗೆ ಗೊತ್ತಿದೆ. ಅದು ಸಾಮಾನ್ಯ ನಿಯಮ. ಕೆಲವು ಸಮಯ ಅದಕ್ಕೆ ಅಪವಾದವಾಗಿ ಹೊಸಬಗೆಯ ವಸ್ತುಗಳನ್ನೂ ಕನಸಿನಲ್ಲಿ ಕಾಣಬಹುದು. ಆದರೆ ಸಾಮಾನ್ಯವಾಗಿ ಮನುಷ್ಯನು ತನ್ನ ಎಚ್ಚರದಲ್ಲಿ ಕಂಡಿದ್ದ ವಸ್ತುಗಳ ಬಗೆಯ ವಸ್ತುಗಳನ್ನೇ ಕನಸಿನಲ್ಲಿಯೂ ಕಾಣುತ್ತಾನೆ. ವಿಶ್ವವಿದ್ಯಾನಿಲಯದಲ್ಲಿ ಓದುತ್ತಿರುವ ವಿದ್ಯಾರ್ಥಿಗಳು, ಪರೀಕ್ಷೆಯು ಸಮೀಪವಿರುವಾಗ ಅತ್ಯಂತ ಶ್ರಮದಿಂದ ರಾತ್ರಿ ಹಗಲೂ ಅಭ್ಯಾಸ ಮಾಡುತ್ತಿರುತ್ತಾರೆ. ಆಗ ಕಾಣುವ ಅವರ ಕನಸುಗಳಲ್ಲಿಯೂ

ಅದೇ ವಿಚಾರವನ್ನೇ ಅವರು ಕಾಣುತ್ತಿರುತ್ತಾರೆ. ಪರೀಕ್ಷೆಯು ಮುಗಿದ ಮೇಲೆ, ಅವರು ಅದರ ಫಲಿತಾಂಶವನ್ನು (Results) ನಿರೀಕ್ಷಿಸುತ್ತಿರುವ ಕಾಲದಲ್ಲಿ, ತಮಗೆ ತೇರ್ಗಡೆಯಾಗಬಹುದೆಂದೂ ತೇರ್ಗಡೆ ಹೊಂದುವ ಪದವೀಧರರ ಪಟ್ಟಿಯಲ್ಲಿ ತಾವೇ ಮೊದಲು ಬರಬಹುದೆಂದೂ ತೀವ್ರವಾಗಿ ಭಾವಿಸುತ್ತಿರುವ ಕಾತರ-ಕಳವಳದ ಸಂದಿಗ್ಧಸ್ಥಿತಿಯಲ್ಲಿ ನಿದ್ರೆ ಮಾಡುವಾಗಲೂ ಅವರು ಅದೇ ಕನಸುಗಳನ್ನೇ ಕಾಣುತ್ತಾರೆ. ರಾಮನ ಈ ಮಾತನ್ನು ವಿದ್ಯಾರ್ಥಿಗಳೆಲ್ಲಾ ಒಪ್ಪಬಹುದು. ಯಾವದೊಂದು ವಿಷಯವನ್ನಾಗಲೀ ಮಾತನ್ನು ವಿದ್ಯಾರ್ಥಿಗಳೆಲ್ಲಾ ಒಪ್ಪಬಹುದು. ಯಾವದೊಂದು ವಿಷಯವನ್ನಾಗಲೀ ವಸ್ತುವನ್ನಾಗಲೀ ಪ್ರೀತಿಸುತ್ತಿರುವವರು ರಾತ್ರಿಯಲ್ಲಿಯೂ ಅದೇ ಕನಸನ್ನು ಕಾಣದೇ ಇರಲಾರರು.

ರಾಮನು ವಿದ್ಯಾರ್ಥಿಯಾಗಿ ಬಿ. ಎ. ಪರೀಕ್ಷೆಗೆ ಅಭ್ಯಾಸ ಮಾಡುತ್ತಿದ್ದಾಗ, ಒಬ್ಬ ಸಹಪಾಠಿಯೂ ಅವನ ಜೊತೆಯಲ್ಲಿ ವಾಸ ಮಾಡುತ್ತಿದ್ದನು. ಆ ಸಹಾಧ್ಯಾಯಿಯು ಬಹಳ ವಿನೋದ ಸ್ವಭಾವದ ವಿದ್ಯಾರ್ಥಿಯಾಗಿದ್ದನು. ಅವನು ತನ್ನ ಕಾಲವನ್ನೆಲ್ಲಾ ಹಾಡುವದರಲ್ಲಿಯೂ ಕುಣಿಯುವದರಲ್ಲಿಯೂ ಆಡುವದರಲ್ಲಿಯೂ ಕಳೆಯುತ್ತಿದ್ದನು. ಒಂದು ದಿನ, ಅವನು ನಿತ್ಯವೂ ಎಷ್ಟು ಗಂಟೆಗಳ ಕಾಲ ಪಾಠಗಳ ವ್ಯಾಸಂಗಕ್ಕಾಗಿ ವಿನಿಯೋಗಿಸುತ್ತಾನೆಂದು ಹಿರಿಯರೊಬ್ಬರು ಆ ನನ್ನ ಮಿತ್ರನನ್ನು ಕೇಳಿದರು. ಅವನು ಕೂಡಲೇ ನಗು ನಗುತ್ತಾ "ಪೂರಾ 18 ಗಂಟೆಗಳ ಕಾಲ" ಎಂದು ಹೇಳಿಬಿಟ್ಟನು. ಅದಕ್ಕೆ ಅವರು "ಏನಯ್ಯಾ ಹಾಗೆ ಹೇಳುತ್ತೀಯೆ ? ನನ್ನ ಕಣ್ಣೆದುರಿಗೇ ನಾಲ್ಕೈದು ಗಂಟೆಗಳ ಕಾಲ ವ್ಯರ್ಥವಾಗಿ ಕಳೆಯುತ್ತೀಯೆ. 24 ಗಂಟೆಗಳಲ್ಲಿ 8-9 ಗಂಟೆಗಳು ನಿದ್ರೆ ಮಾಡುತ್ತಿ ಎನ್ನುವದು ಗೊತ್ತಿದೆ. ಇನ್ನು 10 ಅಥವಾ 12 ಗಂಟೆಗಳು ನಿನಗೆ ಉಳಿಯುತ್ತವೆ. ಆದರೂ ಪೂರಾ 18 ಗಂಟೆಗಳ ಕಾಲ ಓದುತ್ತಿರುವದಾಗಿ ಹೇಳುತ್ತಿ. ಅದು ಹೇಗೆ ಸಾಧ್ಯ ?" ಎಂದು ಕೇಳಿದರು. ಆ ವಿದ್ಯಾರ್ಥಿ ಹೇಳಿದ : "ನೀವು ಗಣಿತಶಾಸ್ತ್ರವನ್ನು ಓದಿಲ್ಲವೆಂದು ತೋರುತ್ತದೆ. ನಾನು ಪೂರಾ 18 ಗಂಟೆಗಳು ಓದುತ್ತಿರುವೆನೆಂಬದನ್ನು ತೋರಿಸಬಲ್ಲೆ. ನೋಡಿ, ನಾನೂ ಈ ರಾಮನೂ ಒಂದೇ ಕೋಣೆಯಲ್ಲಿ ವಾಸಮಾಡುತ್ತೇವೆ. ವಾಸ್ತವವಾಗಿ ನಾನು 12 ಗಂಟೆಗಳ ಹೊತ್ತು ಓದುತ್ತೇನೆ. ಅವನು 24 ಗಂಟೆಗಳ ಕಾಲ ಓದುತ್ತಾನೆ. ಇಬ್ಬರ ಅಭ್ಯಾಸ ಕಾಲವೂ ಒಟ್ಟು ಸೇರಿ 36 ಗಂಟೆಗಳಾಯಿತು. ಇದನ್ನು ಇಬ್ಬರಿಗೆ ಸರಿಯಾಗಿ ಹಂಚಿದರೆ 18 ಗಂಟೆಗಳು ನನ್ನ ಭಾಗಕ್ಕೂ 18 ಗಂಟೆಗಳು ಅವನಿಗೂ ಬರುತ್ತವೆ". ಆ ಯಜಮಾನರು ಹೇಳಿದರು : "ಒಳ್ಳೆಯದು, ನೀನು 12 ಗಂಟೆಗಳು ಓದುತ್ತೀಯೆಂದು ಒಪ್ಪಿಕೊಂಡರೂ ರಾಮನು ನಿತ್ಯವೂ ಪೂರಾ 24 ಗಂಟೆಗಳು ಓದುತ್ತಾನೆಂಬದನ್ನು ಯಾರೂ ಒಪ್ಪಲು ಸಾಧ್ಯವಿಲ್ಲ. ಅದು ಹೇಗೆ ಸಾಧ್ಯವಾಗಬೇಕು ? ರಾಮನು ಬಹಳ ಕಷ್ಟಪಟ್ಟು ಓದತಕ್ಕ ವಿದ್ಯಾರ್ಥಿ ; ಅವನು

ವಿಶ್ವವಿದ್ಯಾಲಯದ ಪಾಠಗಳನ್ನು ಮಾತ್ರ ಓದುವದಿಲ್ಲ, ಅದರ ನಾಲ್ಕರಷ್ಟು ಹೆಚ್ಚಿನ ವ್ಯಾಸಂಗ ಮಾಡುತ್ತಾನೆ. ಅವನು ಬೇರೆ ಅನೇಕ ವಿಷಯಗಳನ್ನು–ಸಂಗತಿಗಳನ್ನು–ಅಭ್ಯಾಸ ಮಾಡುತ್ತಾನೆ; ಅಲ್ಲದೆ ಅವನು ಹಲವು ಕೆಲಸಗಳನ್ನೂ ಮಾಡುತ್ತಾನೆ ;–ಎಂಬುದು ನನಗೆ ಗೊತ್ತಿದೆ. ಆದರೂ ಅವನು 24 ಗಂಟೆಗಳೂ ಕೆಲಸಮಾಡುವದಕ್ಕೆ ಪ್ರಕೃತಿ ನಿಯಮಗಳು ಅವನಿಗೆ ಅವಕಾಶ ಕೊಡುವುದಿಲ್ಲ". ಇದಕ್ಕೆಲ್ಲಾ ರಾಮನ ಸ್ನೇಹಿತನು ಅವರನ್ನು ಕುರಿತು "ನೋಡಿ, ನಿತ್ಯವೂ ರಾಮನೂ ಮಾಡಲೇ ಬೇಕಾಗಿರುವ ಸ್ನಾನ, ಶೌಚ, ಭೋಜನಾದಿಗಳಿಗೇ 2-3 ಗಂಟೆಗಳ ಕಾಲವು ಕಳೆಯುತ್ತಿರುವಾಗ ನಿದ್ರೆಗೆ 5-6 ಗಂಟೆಗಳ ಕಾಲವಾದರೂ ಬೇಕಾಗಿರುವಾಗ ಪರಮಾವಧಿಯಾಗಿ 15-16 ಗಂಟೆಗಳ ಕಾಲಕ್ಕೆ ಹೆಚ್ಚಾಗಿ ಯಾರಿಗೂ ಉಳಿಯಲಾರದು ; ಆದ್ದರಿಂದ ರಾಮನು 24 ಗಂಟೆಗಳು ಅಭ್ಯಾಸಮಾಡುವದು ಸಾಧ್ಯವಿಲ್ಲ, ಸುಳ್ಳು,—ಎಂದು ನೀವು ಹೇಳಬಹುದು. ಆದರೆ ರಾಮನ ವಿಷಯವೇ ಆಶ್ಚರ್ಯ, ಅಸಾಧಾರಣ. ಅವನು ಊಟಮಾಡುತ್ತಿರುವಾಗಲೂ ಒಂದು ಸೆಕೆಂಡ್ ಆದರೂ ಮನಸ್ಸು ಸುಮ್ಮನಿರುವದಕ್ಕೆ ಬಿಡುವದಿಲ್ಲ. ಅವನು ಆಲೋಚಿಸುತ್ತಿರುವದಕ್ಕೆ ಸಹಾಯಕವಾಗಿ ಯಾವಾಗಲೂ ಒಂದು ಕಾಗದವನ್ನು ಕೈಯಲ್ಲಿ ಇಟ್ಟುಕೊಂಡೇ ಇರುತ್ತಾನೆ. ಅದರ ಮೇಲೆ ಯಾವಾಗಲೂ ಒಂದು ವಿಜ್ಞಾನದ ಸಮಸ್ಯೆಯೋ ಯಾವದಾವರೊಂದು ಗಣಿತದ ಪ್ರಶ್ನೆಯೋ ಅಥವಾ ತಾತ್ತ್ವಿಕ ವಿಷಯವೋ ಚಿಂತನಕ್ಕಾಗಿ ಇದ್ದೇ ಇರುತ್ತದೆ. ಯಾವದಾದರೂ ಪದ್ಯವನ್ನಾದರೂ ನೆನಪಿನಲ್ಲಿ ಉಳಿಯುವಂತೆ ಕಲಿಯುತ್ತಿರುತ್ತಾನೆ. ಹೀಗೆ ಊಟ ಮಾಡುವಾಗಲೂ ಅವನು ಒಂದು ನಿಮಿಷವನ್ನಾದರೂ ವ್ಯರ್ಥವಾಗಿ ಕಳೆಯುವದಿಲ್ಲ. ಎಲ್ಲಿಗಾದರೂ ನಡೆದುಹೋಗುವಾಗಲೂ ಯಾವದಾದರೂ ಪುಸ್ತಕವನ್ನು ಓದುತ್ತಲೇ ಇರುತ್ತಾನೆ. ಅವನು ಉಡುಪು ಹಾಕಿಕೊಳ್ಳುವ ಅಲಂಕಾರದ ಕೋಣೆಯಲ್ಲಿದ್ದರೂ ಸೀಮೆಯ ಸುಣ್ಣದಿಂದ ಗೋಡೆಯ ಮೇಲೆ ಯಾವದಾದರೂ ಲೆಕ್ಕವನ್ನೋ ರೇಖಾಕೃತಿಗಳನ್ನೋ ಬರೆಯುತ್ತಿರುತ್ತಾನೆ. ಸ್ನಾನಮಾಡುವಾಗಲೂ ಅವನು ಏನನ್ನಾದರೂ ಕಂಠಪಾಠಮಾಡುತ್ತಿರುತ್ತಾನೆ, ಯಾವದಾದರೂ ಗಣಿತಸಮಸ್ಯೆಯನ್ನು ತಲೆಯಲ್ಲಿ ತುಂಬಿಕೊಂಡೇ ಮಲಗುವದಕ್ಕೆ ಹೋಗುತ್ತಾನೆ. ಆದ್ದರಿಂದ ನಿದ್ರಿಸುವಾಗಲೂ. ಹಗಲೆಲ್ಲಾ ಮನಸ್ಸಿನಲ್ಲಿ ಆಸಕ್ತಿಯಿಂದ ತುಂಬಿಕೊಂಡಿದ್ದನ್ನೇ ಅವನು ಕನಸಿನಲ್ಲಿಯೂ ಕಾಣುತ್ತಾನೆ. ಗಾಢನಿದ್ರೆ ಎನ್ನುವದು ಅವನಿಗೆ ಕೆಲವು ನಿಮಿಷಗಳಾದರೂ ಬರುವದೋ ಇಲ್ಲವೋ. ಏಕೆಂದರೆ ಎಷ್ಟೋ ಸಲ ತನ್ನ ಅಭ್ಯಾಸದ ವಿಷಯಗಳನ್ನೇ ನನಗೂ ನಿದ್ರೆಗೆಡಿಸುವಂತೆ ಕನವರಿಸುತ್ತಿರುತ್ತಾನೆ. ಹೀಗೆ ರಾಮನ ಅಭ್ಯಾಸವು 24 ಗಂಟೆಗಳೂ ಬಿಡುವಿಲ್ಲದೆ ನಡೆದಿರುತ್ತದೆಯೆಂದರೆ ಆಶ್ಚರ್ಯವಲ್ಲ." ಎಂದು ಅವನು ಚಕಿತರಾಗುವಂತೆ ವಿವರಿಸಿದನು,

ಒಳ್ಳೆಯದು : ಅವನ ವರ್ಣನೆಯಲ್ಲಿ ಸ್ವಲ್ಪ ಸತ್ಯವಿತ್ತು. ಏಕೆಂದರೆ, ಪೂರಾ 18 ಗಂಟೆಗಳ ಕಾಲ ಯಾರು ಅಭ್ಯಾಸದಲ್ಲಿ ಕಳೆಯುತ್ತಾರೋ ಅವರ ಕನಸಿನಲ್ಲಿಯೂ

ಅವರು ಅದನ್ನೇ ಮಾಡದೇ ಬೇರೆ ಹವ್ಯಾಸವಿರುವದಿಲ್ಲ. ಇದು ಸ್ವಾಭಾವಿಕ. ಕೆಲವು ಸಮಯ ಜನರು, ಎಂದೂ ಕಾಣದಿದ್ದ ವಸ್ತುಗಳನ್ನು ಕನಸಿನಲ್ಲಿ ಕಂಡುದಾಗಿ ಹೇಳುತ್ತಾರೆ. ವೇದಾಂತವು ಇದನ್ನು ಒಪ್ಪುವದಿಲ್ಲ. ಇನ್ನೊಬ್ಬ ಮನುಷ್ಯನು, ತನ್ನ ಕನಸಿನಲ್ಲಿ ಅಸಮಂಜಸ ಭಾಗಗಳಿಂದ ಕೂಡಿದ ವಿಲಕ್ಷಣವಾದ ಅದ್ಭುತ ರಾಕ್ಷಸನನ್ನು ಕಂಡಿರುವದಾಗಿ ಹೇಳಬಹುದು. ಅವನಿಗೆ ಸಿಂಹದ ತಲೆಯೂ ಒಂಟೆಯ ಬೆನ್ನೂ ಸರ್ಪದ ಬಾಲವೂ ಕಪ್ಪೆಯ ಕಾಲುಗಳೂ ಇದ್ದವೆಂದು ಹೇಳಬಹುದು. ಅವನು ಹಿಂದೆಂದೂ ಅಂಥಾ ಪ್ರಾಣಿಯನ್ನು ತಾನು ಕಂಡಿರಲಿಲ್ಲವೆಂದೂ ಹೇಳಬಹುದು. ವೇದಾಂತ ಹೇಳುವದೇನೆಂದರೆ, "ತಮ್ಮ, ನೀನು ಮನುಷ್ಯನನ್ನು ನೋಡಿದ್ದಿ ; ಸರ್ಪವನ್ನೂ ಒಂಟೆಯನ್ನೂ ಕಪ್ಪೆಯನ್ನೂ ಎಚ್ಚರದ ಪ್ರಪಂಚದಲ್ಲಿ ನೋಡಿದ್ದಿ. ಸಿಂಹದ ತಲೆಯನ್ನೂ ಒಂಟೆಯ ಬೆನ್ನನ್ನೂ ಕಪ್ಪೆಯ ಕಾಲುಗಳನ್ನೂ ಸರ್ಪದ ಬಾಲವನ್ನೂ ನಿನ್ನ ಕನಸಿನಲ್ಲಿ ಕೂಡಿಸಿ ಬೃಹದಾಕಾರದ ಮನುಷ್ಯನಿಗೆ ಇವುಗಳನ್ನೆಲ್ಲಾ ಹಚ್ಚಿ ಹೊಸದೊಂದು ಅದ್ಭುತ ವಿಲಕ್ಷಣ ವಸ್ತುವನ್ನು ಮಾಡಿ ನೋಡಿ ಹೆದರಿದ್ದಿ. ಆದ್ದರಿಂದ ಕನಸಿನಲ್ಲಿ ನೀನು ಯಾವ ಅಪೂರ್ವವಾದ ಹೊಸ ವಸ್ತುವನ್ನು ಕಂಡರೂ ಅದು ಎಚ್ಚರದಲ್ಲಿ ಕಂಡ ವಸ್ತುಗಳ ವಿಪರ್ಯಾಸವೇ ಆಗಿರುತ್ತದೆ."

ರಷ್ಯಾ ದೇಶಕ್ಕೆ ಎಂದೆಂದೂ ಹೋಗದೆ, ಅದರ ವಿಷಯವನ್ನಾದರೂ ಕೇಳದೇ, ಇದ್ದ ಮನುಷ್ಯನು ಕನಸಿನಲ್ಲಿ, ಸೆಯಿಂಟ್ ಪೀಟರ್ಸ್ ಬರ್ಗ್‌ನಲ್ಲಿ ಇದ್ದಂತೆ ಎಂದೂ ಕಾಣುವದಿಲ್ಲ. ಅದು ಎಂದೆಂದಿಗೂ ಸಾಧ್ಯವಲ್ಲ. ಒಬ್ಬ ತತ್ತ್ವಜ್ಞಾನಿಯು ತನ ಕನಸಿನಲ್ಲಿ ಎಂದಾದರೂ ಜೋಡು ಹೊಲಿಯುವದುಂಟೆ ? ಅವನು ಮೋಚಿಯ ಮನೆಯ ಹತ್ತಿರವೇ ವಾಸಮಾಡುತ್ತಿದ್ದರೂ ಕನಸಿನಲ್ಲಿ ಆಗಾಗ ಆ ಮೋಚಿಯನ್ನು ಕಾಣುತ್ತಿದ್ದರೂ ಅವನು ತಾನೇ ಜೋಡುಗಳನ್ನು ಹೊಲಿಯುತ್ತಿರುವಂತೆ ಎಂದೂ ಕಾಣುವದಿಲ್ಲ.

ಹೀಗಿರುವಾಗ ನಿಮ್ಮ ಸಾವಿನ ದೀರ್ಘನಿದ್ರೆಯಲ್ಲಿ ಏನನ್ನು ನಿರೀಕ್ಷಿಸಬಹುದು? ಮರಣಕ್ಕೂ ಪುನಃ ಒದಗುವ ಜನನಕ್ಕೂ ನಡುವಿನ ದೀರ್ಘ ನಿದ್ರೆಯು ಹೇಗೆ ಕಳೆಯುತ್ತದೆ? ನಿಮ್ಮ ಸ್ವರ್ಗಗಳಲ್ಲಿಯೋ ನರಕಗಳಲ್ಲಿಯೋ, ನಂದನವನಗಳಲ್ಲಿಯೋ (Paradises) ಪಾಪಗಳಿಗೆ ಪ್ರಾಯಶ್ಚಿತ್ತವುಂಟುಮಾಡುವ ದಂಡನೆಗಳುಳ್ಳ ಶುದ್ಧೀಕಾರಕವಾದ ಲೋಕಗಳಲ್ಲಿಯೋ (Purgatories) ಮರಣಾನಂತರದ ನಿದ್ರಾ ಕಾಲವು ಕಳೆಯುತ್ತದೆಂದು ವೇದಾಂತವು ಹೇಳುತ್ತದೆ. ಈ ಸ್ವರ್ಗ, ನಂದನವನ (ಈಡನ್ನಿನ ತೋಟ) ನರಕ, ಪಾಪಮಾರ್ಜಕ ಸ್ಥಾನಗಳೆಲ್ಲಾ ಏನು? ಇವೆಲ್ಲಾ ಸಾವಿಗೂ ಹುಟ್ಟಿಗೂ ನಡುವೆ, ಜೀವನಿಗೆ ಅನುಭವಕ್ಕೆ ಬರುವ ಸ್ವಪ್ನಲೋಕಗಳು.

ಇಲ್ಲಿ ಒಬ್ಬ ನಿಜವಾದ ಕ್ರೈಸ್ತ ಮತಸ್ಥನಿದ್ದಾನೆ. ಇವನು ಅತ್ಯಂತ ಪುಣ್ಯಶೀಲವಾದ ಧರ್ಮಶ್ರದ್ಧೆಯುಳ್ಳ ನಿಷ್ಠಾವಂತ ಜೀವನವನ್ನು ನಡೆಸುತ್ತಿದ್ದಾನೆ.

ಇವನು ಪ್ರತಿ ಸಂಜೆಯೂ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದಾನೆ. ಪ್ರತಿ ಆದಿತ್ಯವಾರವೂ ಚರ್ಚ್‌ಗೆ ಹೋಗಿಬರುತ್ತಿದ್ದಾನೆ. ಪ್ರತಿಯೊಂದು ಭೋಜನ ಕಾಲದಲ್ಲಿಯೂ ದೇವರ ದಯೆಯನ್ನು ಬೇಡುತ್ತಿದ್ದಾನೆ. ಇವನು ಜೀವಮಾನವನ್ನೆಲ್ಲಾ ಕ್ರಿಸ್ತನ ಶಿಲುಬೆಯನ್ನು (Cross of Christ) ತನ್ನ ಎದೆಯ ಮೇಲೆ ಇಟ್ಟು ಕೊಂಡಿದ್ದಾನೆ. ಇವನು ಹುಟ್ಟಿದಂದಿನಿಂದ ಸಾಯುವವರೆಗೂ ಎಚ್ಚರವಾಗಿರುವಾಗಲೆಲ್ಲಾ ಯೇಸು ಕ್ರಿಸ್ತನ ಧ್ಯಾನವನ್ನೇ ಮಾಡುತ್ತಿದ್ದಾನೆ. ಇವನು ಯೇಸುಕ್ರಿಸ್ತನ ಪವಿತ್ರ ಸನ್ನಿಧಿಯಲ್ಲಿಯೇ ತಾನಿರುವೆನೆಂದು ನಡೆಯುವಾಗ, ನುಡಿಯುವಾಗ, ಎಲ್ಲಾ ವ್ಯವಹಾರಗಳಲ್ಲಿಯೂ ಜೀವಮಾನವೆಲ್ಲಾ ಶ್ರದ್ಧೆಯಿಂದ ಭಾವಿಸುತ್ತಿದ್ದಾನೆ. ಈ ಮನುಷ್ಯ ಬದುಕಿದ 80-90 ವರ್ಷಗಳ ಎಚ್ಚರ ಕಾಲವನ್ನೆಲ್ಲಾ ಕ್ರಿಸ್ತನ ಪ್ರೇಮಕ್ಕಾಗಿ ವಿನಿಯೋಗಿಸಿದ್ದಾನೆ. ಇವನು ತನ್ನೆಲ್ಲಾ ಭಾವನೆಯನ್ನೂ ಕ್ರಿಸ್ತನಲ್ಲಿಟ್ಟಿದ್ದಾನೆ; ಸತ್ತಮೇಲೆ ಕ್ರಿಸ್ತನ ಬಲಗಡೆಯಲ್ಲಿ ತನಗೆ ಪೀಠವು ದೊರಕುವುದೆಂದು ಚಿಂತಿಸುತ್ತಿದ್ದಾನೆ ಇವನು ಜೀವಮಾನವೆಲ್ಲಾ ದೇವದೂತರೂ (Angels), ದೇವತೆಗಳೂ (Seraphims) ಮತ್ತು ದೇವಪುರುಷರೂ (Cherubims) ತನ್ನನ್ನು ಮರಣಾನಂತರ ಸ್ವರ್ಗದಲ್ಲಿ ಸ್ವಾಗತಿಸುವರೆಂದು ನೆನೆಯುತ್ತಾ ಕನಸು ಕಾಣುತ್ತಾ ಇದ್ದಾನೆ. ವೇದಾಂತವು ಹೇಳುವದೇನೆಂದರೆ, ಈ ಬಗೆಯ ನಿಷ್ಠಾವಂತ ಕ್ರೈಸ್ತನೊಬ್ಬನು ಸತ್ತ ಮೇಲೆ ಯೇಸುಕ್ರಿಸ್ತನ ಬಲಪೀಠದಲ್ಲಿಯೇ ತಾನು ಕುಳಿತಿರುವಂತೆ ಕಾಣುತ್ತಾನೆ. ಖಂಡಿತವಾಗಿಯೂ ಖಂಡಿತವಾಗಿಯೂ, ಸತ್ತಮೇಲೆ ಪುನಃ ಹುಟ್ಟುವದಕ್ಕೆ ಮುಂಚೆ ಆ ದೀರ್ಘ ನಿದ್ರೆಯಲ್ಲಿ ಯಾವಾಗಲೂ ದೇವಸ್ತುತಿ-ಸಂಕೀರ್ತನೆ ಮಾಡುತ್ತಿರುವಂಥಾ ದೇವದೂತರಿಂದಲೂ ದೇವತೆಗಳಿಂದಲೂ ದೇವಪುರುಷರಿಂದಲೂ ತಾನು ಸುತ್ತುವರಿಯಲ್ಪಟ್ಟಿರುವಂತೆ ಅವನು ಕಾಣುತ್ತಾನೆ. ಜೀವಮಾನವೆಲ್ಲಾ ಅವನು ಹಾಗೆ ಭಾವಿಸಿರುವದರಿಂದ ಸತ್ತಮೇಲೂ ಅವನು ಆ ಕನಸನ್ನೇ ಕಾಣುವದು ಕೇವಲ ಸ್ವಾಭಾವಿಕ. ಅವನು ಹಾಗೆ ಕಾಣದೇ ಇರುವದಕ್ಕೆ ಕಾರಣವೇ ಇಲ್ಲ. ವೇದಾಂತವು ಹೇಳುವದೇನೆಂದರೆ, "ಓ ಕ್ರೈಸ್ತರೆ, ನೀವು ನಿಷ್ಠಾವಂತರಾದರೆ, ನೀವು ನಿಜವಾಗಿಯೂ ಶ್ರದ್ಧಾದರವುಳ್ಳವರಾದರೆ, ನಿಮ್ಮ ಶಾಸ್ತ್ರಗಳಲ್ಲಿ ನಿಮಗೆ ಕೊಟ್ಟಿರುವ (ಸ್ವರ್ಗಲೋಕದ) ಆಶೆಗಳೂ ಭರವಸೆಗಳೂ ವಾಗ್ದಾನಗಳೂ ಎಲ್ಲವೂ ಸಫಲವಾಗುತ್ತವೆ : ಈಡೇರುತ್ತವೆ. ಆದರೆ ಮಹಮ್ಮದೀಯರಲ್ಲಿಯೂ ಹಿಂದೂಗಳಲ್ಲಿಯೂ ತಪ್ಪು ಕಂಡುಹಿಡಿಯಬೇಡಿ.

ಮಹಮ್ಮದೀಯನೊಬ್ಬನು ನಿಜವಾದ ಮಹಮ್ಮದೀಯನಾದರೆ, ಅವನು ಬದುಕಿರುವ 70-80 ವರ್ಷಗಳ ಎಚ್ಚರದ ಜೀವಮಾನದಲ್ಲೆಲ್ಲಾ ಮಹಮ್ಮದನ ಉಪದೇಶದಂತೆಯೇ ನಡೆಯುತ್ತಿದ್ದರೆ, ಅವನ ಚಿಂತನೆಯನ್ನೇ ಮಾಡುತ್ತಿದ್ದರೆ, ನಿತ್ಯವೂ ಐದು ಹೊತ್ತು ಮಹಮ್ಮದನ ಹೆಸರಿನಲ್ಲಿ ಪ್ರಾರ್ಥನೆ ಮಾಡುತ್ತಿದ್ದರೆ, ಮತ್ತು ಮಹಮ್ಮದನಿಗಾಗಿ ಯಾವಾಗಲೂ ತನ ಜೀವವನ್ನು ಬಲಿಗೊಡಲು ಸಿದ್ಧ

ಆಗಿದ್ದರೆ, ಇವನ ಗತಿ ಏನಾಗುತ್ತದೆ? ಅವನಿಗೆ ಪ್ರಕೃತಿ ನಿಯಮಗಳಿಗೆ ವಿರುದ್ಧ ವಾಗಿ ಏನೂ ಆಗುವದಿಲ್ಲ. ನಾವು ಎಚ್ಚರದಲ್ಲಿ ಮಾಡುವ ಕಾರ್ಯವನ್ನೇ ನಿದ್ರೆ ಮಾಡುವಾಗ ಕನಸಿನಲ್ಲಿಯೂ ಕಾಣಬೇಕೆಂಬದು ಪ್ರಕೃತಿ ನಿಯಮ. ಮಹಮ್ಮದೀಯರು ಬಹಳ ಶ್ರದ್ಧಾವಂತರು, ಅತ್ಯಂತ ಅಭಿಮಾನಿಗಳು, ಉತ್ಸಾಹಿಗಳು, ಛಲವಾದಿಗಳು. ಕೆಲವು ಸಮಯ (ಅಥವಾ ಬಹಳ ಮಟ್ಟಿಗೆ ಅವರು ಅಂಧಾಭಿಮಾನಿಗಳು. ದುರಭಿಮಾನಿಗಳು ಅಥವಾ ಉನ್ಮತ್ತಾಭಿಮಾನಿಗಳು ಮತ್ತು ಧರ್ಮಭ್ರಾಂತರು (Bigoted Fanatics) ಎಂದು ಸಹ ಹೇಳಬಹುದು,) ಅವರು 24 ಗಂಟೆಗಳಲ್ಲಿ ನಾಲ್ಕೈದು ಸಲ ಪ್ರಾರ್ಥನೆ ಮಾಡುತ್ತಾರೆ; ಬಹಳ ನಿಯಮಶೀಲರು, ಬಹಳ ಭಕ್ತಿ ವಂತರು. ಇಂಥಾ ಒಬ್ಬ ಮಹಮ್ಮದೀಯನು ಮಹಮ್ಮದನ ವಿಷಯವಾಗಿಯೂ ಸತ್ತ ಮೇಲೆ ಅನುಗ್ರಹಿಸುವದಾಗಿ ಅವನು ವಾಗ್ದಾನ ಮಾಡಿರುವ ಸ್ವರ್ಗದ ವಿಷಯವಾಗಿಯೂ ಅಲ್ಲಿಯ ಸುಂದರ ಉದ್ಯಾನವನಗಳು, ಅಲ್ಲಿಯ ಅಪ್ಸರಸ್ತ್ರೀಯರು. ದ್ರಾಕ್ಷಾರಸದ ನದಿಗಳು, ಭವ್ಯವಾದ ಅರಮನೆಗಳು, ಬಗೆಬಗೆಯ ಭೋಗವಸ್ತುಗಳು ಇವುಗಳ ವಿಷಯ ವಾಗಿಯೂ ಜೀವಮಾನವೆಲ್ಲಾ ಹಂಬಲಿಸುತ್ತಾ ಕಾತರಿಸುತ್ತಾ ಕನಸು ಕಾಣುತ್ತಿರುತ್ತಾನೆ. ವೇದಾಂತವು ಹೇಳುವದೇನೆಂದರೆ, ಇಂಥಾ ಒಬ್ಬ ಶ್ರದ್ಧಾವಂತ ಮಹಮ್ಮದೀಯನು ಸತ್ತಮೇಲೆ, ಅವನ ಜೀವಂತ ಕಲ್ಪನೆಯಲ್ಲಿದ್ದಂಥಾ ಸ್ವರ್ಗಸುಖಗಳನ್ನೇ ಅವನು ತನ್ನ ದೀರ್ಘನಿದ್ರೆಯ ಸ್ವಪ್ನ ಸ್ವರ್ಗದಲ್ಲಿಯೂ ತಪ್ಪದೇ ಅನುಭವಿಸುತ್ತಾನೆ. ಇದನ್ನು ತಪ್ಪಿಸುವುದಕ್ಕೆ ಪ್ರಕೃತಿಯಲ್ಲಿ ಯಾವ ಶಕ್ತಿಯೂ ಇಲ್ಲ, ಯಾವ ನಿಯಮವೂ ಇಲ್ಲ. ಮಹಮ್ಮದನು ವಾಗ್ದಾನಮಾಡಿರುವ ಸ್ವರ್ಗದಂಥಾ ಸ್ವರ್ಗವನ್ನೇ ಅವನು ಸತ್ತಮೇಲೆ ಕಾಣಬೇಕು—ಎಂದು ವೇದಾಂತವು ಹೇಳುತ್ತದೆ.

ಆದರೆ ವೇದಾಂತವು ಹೇಳುವದೇನೆಂದರೆ, "ಓ ಮಹಮ್ಮದೀಯರೆ, ಈ ಪ್ರಪಂಚದ ಎಲ್ಲಾ ಜನರನ್ನೂ, ಸತ್ತಮೇಲೆ, ನಿಮ್ಮ ಸ್ವಂತ ಪ್ರವಾದಿಯಾದ ಮಹಮ್ಮದ್ ಪೈಗಂಬರನೊಬ್ಬನ ಕರುಣೆಗೂ ಪರೀಕ್ಷೆಗೂ ಗುರಿಪಡಿಸುವುದಕ್ಕೆ ನಿಮಗೆ ಅಧಿಕಾರವಿಲ್ಲ. ಕ್ರೈಸ್ತರ ಭಾವನೆಯಂತೆ ಅವರಿಗೆ ಫಲವಾಗುವುದಕ್ಕೆ ಅವರು ಸ್ವತಂತ್ರರಿದ್ದಾರೆ. ಅವರಿಗೆ ಸ್ವರ್ಗಸುಖವನ್ನು ಅನುಗ್ರಹಿಸುವುದಕ್ಕೆ ಅವರ ಯೇಸುಕ್ರಿಸ್ತನಿದ್ದಾನೆ. ಕ್ರೈಸ್ತರು ಸತ್ತಮೇಲೆ ಅವರನ್ನು ವಿಚಾರಣೆಗೆ ಗುರಿಪಡಿಸು ವುದಕ್ಕೆ ನಿಮ್ಮ ಮಹಮ್ಮದನಿಗೇನು ಅಧಿಕಾರವಿದೆ? ಹಾಗೆ ಹೇಳುವುದಕ್ಕೆ ನಿಮಗೇನು ಅಧಿಕಾರವಿದೆ ? ಯೂರೋಪ್, ಅಮೇರಿಕಾ, ಜಪಾನ್, ಇಂಡಿಯಾ ಅಥವಾ ಚೈನಾ ಈ ಮೊದಲಾದ ದೇಶಗಳಲ್ಲಿ ಯಾರು ಎಲ್ಲಿ ಸತ್ತರೂ ನಿಮ್ಮ ಮಹಮ್ಮದನ ವಿಚಾರಣೆಗೇ ದಯೆಗೇ ಏಕೆ ಗುರಿಯಾಗಬೇಕು? ಆದರಲ್ಲಿ ಯಾವ ನ್ಯಾಯವಿದೆ? "ಮಹಮ್ಮದನನ್ನು ನಂಬಿದರೆ ಸರಿ; ಇಲ್ಲವಾದರೆ ಅವರು ಹಾಳಾಗಿ ಹೋಗುತ್ತಾರೆ,

ನಾಶವಾಗುತ್ತಾರೆ, ನರಕಕ್ಕೆ ಹೋಗುತ್ತಾರೆ" ಎಂದು ಇಷ್ಟು ಕ್ರೂರವಾಗಿ, ಹೀಗೆ ಹೇಳುವುದಕ್ಕೆ ನಿಮಗೆ ಅಧಿಕಾರವಿಲ್ಲ. ನಿಮಗೆ ಇಷ್ಟವಾದ ನಿಮ್ಮ ಕಲ್ಪನೆಯ ಸ್ವರ್ಗವು ನಿಮಗೆ ಸಿಕ್ಕುವಂತೆಯೇ ಬೇರೆ ಧರ್ಮದವರಿಗೂ ಅವರವರಿಗೆ ಇಷ್ಟವಾದ ಅವರವರ ಕಲ್ಪನೆಯ ಸ್ವರ್ಗವು ಅವರವರಿಗೆ ಲಭಿಸುವುದು ನ್ಯಾಯವಾಗಿದೆ, ಸ್ವಭಾವ ವಾಗಿದೆ. ನಿಜವಾಗಿ ವಿಚಾರಮಾಡಿದರೆ, ಸತ್ತಮೇಲಿನ ಸ್ವರ್ಗವೋ ನಿಮ್ಮ ನರಕವೋ ನಿಮ್ಮ ಭಾವನೆಯನ್ನೇ ಅವಲಂಬಿಸಿವೆ. ಅವುಗಳನ್ನು ನೀವೇ ಸೃಷ್ಟಿಸಿಕೊಳ್ಳುತ್ತೀರಿ. ಅವುಗಳು ಬರೀ ನಿಮ್ಮ ಕನಸುಗಳೇ ಹೊರತು ಹೆಚ್ಚಿನದೇನೂ ಅಲ್ಲ. ಆದರೆ ಕನಸು ಕಾಣುವಾಗ ಆ ಕನಸಿನ ಸ್ವರ್ಗವಾಗಲೀ ನರಕವಾಗಲೀ ನಿಮಗೆ ಸತ್ಯವಾಗಿಯೇ ತೋರುತ್ತವೆ. ಬದುಕಿರುವಾಗ ಕಾಣುವ ಕನಸೂ ಸತ್ತಮೇಲೆ ಕಾಣುವ ಸ್ವರ್ಗ-ನರಕಗಳ ಕನಸೂ ಎರಡೂ ಒಂದೇ. ಕನಸನ್ನು ಕಾಣುತ್ತಿರುವಾಗ ಆ ಅನುಭವವು ನಿಜವಾಗಿ ತೋರುವಂತೆ ಸತ್ತಮೇಲಿನ ಸ್ವರ್ಗನರಕಗಳೂ ನಿಜವಾಗಿಯೇ ತೋರುತ್ತವೆ. ಆದರೆ ವಾಸ್ತವವಾಗಿಯೂ ಅವುಗಳಲ್ಲಿ ಕನಸಿಗಿಂತಲೂ ಹೆಚ್ಚಿನ ಸತ್ಯತೆಯಿಲ್ಲ.

ಇನ್ನೊಂದು ವಿಷಯವನ್ನು ವಿಚಾರ ಮಾಡಬಹುದು. "ನಮ್ಮ ಶ್ರುತಿ ಶಾಸ್ತ್ರಗಳು ನಮಗೆ ಮಾಡಿರುವ ವಾಗ್ದಾನವು ನಿಜವಾದರೆ ಸತ್ತಮೇಲೆ ನಮಗೆ ಶಾಶ್ವತವಾದ ಅಥವಾ ಅನಂತಕಾಲದ ಸ್ವರ್ಗಸುಖವು ಲಭಿಸಬೇಕು" ಎಂದು ಜನರು ಹೇಳಬಹುದು. ಶಾಸ್ತ್ರಗಳು ಅನಂತಕಾಲದ ಸುಖವನ್ನೋ (Eternal happiness), ಅನಂತಕಾಲದ ನರಕ ಶಿಕ್ಷೆಯನ್ನೋ (Eternal damnation) ಹೇಳುತ್ತವೆ—ಇದರ ವಿಚಾರವೇನು ? ಎಂದು ಕೇಳಬಹುದು. ವೇದಾಂತ ಹೇಳುವುದೇನೆಂದರೆ, "'ಅನಂತತೆ ಎನ್ನುವದೇನು ?' ಅನಂತತೆಯು ಕಾಲಕ್ಕೆ ಸಂಬಂಧಪಟ್ಟದ್ದು, ಅದು ಬಹಳ ದೀರ್ಘವಾದ ಕಾಲ, ಅನಂತಕಾಲ. ಜಾಗ್ರದವಸ್ಥೆಯ ಕಾಲವೇ ಬೇರೆ, ಸ್ವಪ್ನಾವಸ್ಥೆಯ ಕಾಲವೇ ಬೇರೆ. ಅವುಗಳ ಬಗೆಗಳೇ ಬೇರೆ. ಕನಸಿನಲ್ಲಿ ನೀವು ಒಂದು ಪರ್ವತವನ್ನು ನೋಡಬಹುದು; ಐದು ಸಾವಿರ ವರ್ಷಗಳಿಂದ ಈ ಪರ್ವತವಿದೆಯೆಂದೂ ನಿಮಗೆ ಆಗ ತೋರಬಹುದು. ಆದರೆ ಎಚ್ಚರದ ದೃಷ್ಟಿಯಿಂದ ಅದು, ನಿಮ್ಮ ಕನಸಿನಲ್ಲಿ ಆಗೀದಾಗಲೇ ಸೃಷ್ಟಿಯಾಗಿರುವದು. ಹೀಗೆಯೇ ಮರಣಾನಂತರದ ಕನಸಿನಲ್ಲಿಯೂ ಅನಂತಕಾಲ ಸ್ವರ್ಗ ಸುಖವನ್ನು ಅನುಭವಿಸುತ್ತಿರುವಂತೆ ನಿಮಗೆ ಕಾಣಬಹುದು. ಇದು ಕನಸಿನ ಜೀವನ ದೃಷ್ಟಿಯಿಂದಲೇ ಹೊರತು, ಎಚ್ಚರದ ಜೀವನ ದೃಷ್ಟಿಯಿಂದಲ್ಲ.

ನಿಮಗೆ ಬೈಬಲ್ ಕೊಟ್ಟಿರುವ ಭರವಸೆಯು ಸರಿಯೆಂದು ನಿಮಗೆ ತೋರುವದು ನಿಜ. ಏಕೆಂದರೆ ಮರಣಾನಂತರದ ಸ್ವಪ್ನಸ್ವರ್ಗದಲ್ಲಿ ನೀವಿರುವಾಗ, ಆ ಸುಖವು ಎಂದೆಂದಿಗೂ ಶಾಶ್ವತವಾಗಿ ಇರುವಂತೆ ನಿಮಗೆ ತೋರುತ್ತದೆ. ಅದು ನಿಮಗೆ ಅನಂತ ಕಾಲವಿರುತ್ತದೆ. ಆದರೆ ಸ್ವಪ್ನ ಜೀವನ ದೃಷ್ಟಿಯಿಂದ ಅನಂತವಾಗಿ

ತೋರುವದು ಎಚ್ಚರದ ಜೀವನ ದೃಷ್ಟಿಯಿಂದ ಕೆಲವು ದಿನಗಳೋ ಗಂಟೆಗಳೋ ನಿಮಿಷಗಳೋ ಆಗಬಹುದು."

ಮರಣಾನಂತರದ ಸ್ಥಿತಿಯನ್ನು ಬಗೆಬಗೆಯಾಗಿ ತಿಳಿಸುತ್ತಿರುವ ಬೇರೆ ಬೇರೆ ಧರ್ಮಗಳ ಬೇರೆ ಬೇರೆ ವಾದಗಳನ್ನು ವೇದಾಂತವು ಹೇಗೆ ವಿರೋಧವಿಲ್ಲದಂತೆ ಸಮಂಜಸವಾಗಿ ಸಮನ್ವಯ ಮಾಡಿ ತೋರಿಸುತ್ತದೆ ಎಂಬುದು ಇದುವರೆಗಿನ ವಿಚಾರ ದಿಂದ ಸ್ವಲ್ಪಮಟ್ಟಿಗೆ ಭಾವನೆ ಬರಬಹುದು.

ಆದರೆ, ಜನ್ಮಾಂತರದ ವಿಚಾರವೇನು ? ಮುಕ್ತ ಪುರುಷರ ವಿಚಾರವೇನು ? ವೇದಾಂತವು ಹೇಳುವದೇನೆಂದರೆ, ಸತ್ತ ಮೇಲೆ ಪ್ರತಿಯೊಬ್ಬರೂ ಸ್ವರ್ಗ–ನರಕಗಳ ಕನಸನ್ನು ಕಾಣಬೇಕಾಗಿಲ್ಲ ಮತ್ತು ಪುನಃ ಹುಟ್ಟಲೇಬೇಕೆಂಬದಿಲ್ಲ. ಮುಕ್ತಜೀವರು ಸ್ವರ್ಗ–ನರಕಗಳಲ್ಲಿಯೂ ಸೆರೆಯಾಗಬೇಕಾಗಿಲ್ಲ ; ಮತ್ತೆ ಹುಟ್ಟಲೂ ಬೇಕಿಲ್ಲ. ಎಲ್ಲಾ ಸ್ವರ್ಗ ನರಕಗಳೂ ಎಲ್ಲಾ ಲೋಕಗಳೂ ಅವರಲ್ಲಿಯೇ ಇವೆ. ಅದರ ವಿಚಾರವಾಗಿ ಸ್ವಲ್ಪ ಹೇಳಬಹುದು.

ನಿಮ್ಮ ಕನಸುಗಳಲ್ಲಿ ನೀವು, ವಿಷಯಿ ಮತ್ತು ವಿಷಯ ಎನ್ನುವ ಎರಡು ಬಗೆಯ ಪ್ರಕೃತಿವಿಲಾಸವನ್ನು ಕಾಣುತ್ತೀರಿ. ನೀವು ಕನಸಿನಲ್ಲಿ ಕಾಣುವ, ನಿಮ್ಮ ಸುತ್ತಲಿರುವ ನದಿಗಳೂ ಪರ್ವತಗಳೂ ಅರಣ್ಯಗಳೂ ಇವೇ ಮೊದಲಾದವು ವಿಷಯ. ಕನಸನ್ನು ನೋಡುತ್ತಿರುವ ಕನಸಿನಲ್ಲಿರುವ ಪ್ರವಾಸಿಯೂ ಯಾತ್ರಿಕನೂ ಆದ ಜೀವನೇ ವಿಷಯಿ. ನಿಮ್ಮ ಕನಸಿನಲ್ಲಿರುವ ಅನೇಕ ವಸ್ತುಗಳಲ್ಲಿ ನಾನು ಎನ್ನುವದೂ ಇದೆ ; ನನ್ನಿಂದ ಬೇರೆಯಾದ ವಸ್ತುಗಳೂ ಇವೆ. ನಾನು ಎನ್ನುವದೇ ವಿಷಯಿ, ಜ್ಞಾತೃ. ನಾನಲ್ಲದ ಬೇರೆ ಎಲ್ಲಾ ವಸ್ತುಗಳೂ ವಿಷಯ (ಜ್ಞೇಯ) ಎನ್ನಿಸಿಕೊಳ್ಳುತ್ತವೆ. ನಿಮ್ಮ ಕನಸುಗಳಲ್ಲಿ ಸಾಮಾನ್ಯವಾಗಿ ಈ ವಿಭಾಗವಿರುತ್ತದೆ. ವೇದಾಂತವು ಹೇಳುವ ದೇನೆಂದರೆ, ವಿಷಯಿ ಮತ್ತು ವಿಷಯ ಈ ಎರಡೂ ನಿಮ್ಮ ಸೃಷ್ಟಿ ; ನಿಜವಾದ ಆತ್ಮನ ಸೃಷ್ಟಿ ; ಎಚ್ಚರದ ಜೀವನ ಸೃಷ್ಟಿ. ನಿಘಂಟುಕಾರನಾದ ಡಾಕ್ಟರ್ ಜಾನ್ ಸನ್ನನು ಭಾಷಣಕಾರರಲ್ಲಿ ರಾಜನೆನ್ನಿಸಿಕೊಂಡಿದ್ದನು. ಅವನು ವಾಗ್ವಾದದಲ್ಲಿ ಎಂದೂ ಸೋಲನ್ನು ಸಹಿಸುತ್ತಿರಲಿಲ್ಲ. ಎದುರಾಳಿಯು ಉತ್ತರ ಕೊಡಲಾಗದ ಕೊನೆಯ ಮಾತು ಯಾವಾಗಲೂ ಅವನದೇ ಆಗಿರುತ್ತಿತ್ತು. ಅವನು ಉಡಾಯಿಸಿದ ಪಿಸ್ತೂಲಿನ ಗುರಿಯು ಒಂದುವೇಳೆ ತಪ್ಪಿದರೆ, ಎದುರಾಳಿಯನ್ನು ಅದರ ಬುಡದಿಂದಲಾದರೂ ಹೊಡೆದು ಕೆಡವುತ್ತಾನೆ,–ಎಂದು ಜನ ಹೇಳುತ್ತಿದ್ದರು. ಮಾತಿನಲ್ಲಿ ಯಾವಾಗಲೂ ತಾನೇ ಜಯಿಸಬೇಕೆಂಬುದು ಅವನ ಹಟ. ವಾದದಲ್ಲಿ ಯಾವನಾದರೂ ಅವನಿ ಗಿಂತಲೂ ಎಂದಾದರೂ ಪ್ರಬಲನಾದರೆ, ಅವನು ಭೂಮ್ಯಾಕಾಶಗಳನ್ನು ಒಂದು ಮಾಡಿಯಾದರೂ ತನ್ನ ಎದುರಾಳಿಯ ಸೇಡು ತೀರಿಸಿಕೊಳ್ಳುತ್ತಿದ್ದನು. ಒಮ್ಮೆ ಜಾನ್‌ಸನ್‌ಗೆ ಒಂದು ಕನಸಾಯಿತು. ಅದರಲ್ಲಿ ಮಹಾವಾಗ್ಮಿಯಾದ

ಎಡ್‌ಮಂಡ್‌ಬರ್ಕ್‌ನು (Edmund Burke) ಒಂದು ವಾದದಲ್ಲಿ ಅವನನ್ನು ಸೋಲಿಸಿಬಿಟ್ಟನು. ಜಾನ್‌ಸನ್ (Johnson) ಸ್ವಭಾವದ ಒಬ್ಬ ವ್ಯಕ್ತಿಗೆ ಆ ಸ್ವಪ್ನವು ಭಯಂಕರ ಸ್ವಪ್ನವೇ ಆಗುತ್ತದೆ. ಅವನು ಕನಸಿನಲ್ಲಿ ಆ ಸೋಲಿನಿಂದ ಬೆಚ್ಚಿಬಿದ್ದನು. ಇದರಿಂದ ಅವನಿಗೆ ಎಚ್ಚರವಾಯಿತು. ಆದರೂ ಅವನು ಕಳವಳಗೊಂಡ ಸ್ಥಿತಿಯಲ್ಲಿದ್ದನು. ಏನು ಮಾಡಿದರೂ ಪುನಃ ಅವನಿಗೆ ನಿದ್ರೆ ಬರಲಿಲ್ಲ, ಕನಸಿನಲ್ಲಿ ಪಡೆದ ಸೋಲಿನಿಂದಾದ ಅಪಮಾನದ ತಳಮಳವು ಅಡಗಲಿಲ್ಲ. ಆದರೆ ಯಾವಾಗಲೂ ವಿಶ್ರಾಂತಿಯನ್ನೂ ಶಾಂತಿಯನ್ನೂ ಹುಡುಕುವದೇ ಮನಸ್ಸಿನ ಸ್ವಭಾವವಾಗಿದೆ. ಅದು ಯಾವ ಕಾರಣದಿಂದಾದರೂ ಸ್ವಸ್ಥತೆಯನ್ನು ಕಳೆದುಕೊಂಡ ಕೂಡಲೇ ಪುನಃ ಸ್ವಸ್ಥತೆಯನ್ನು ಪಡೆಯುವದಕ್ಕಾಗಿಯೇ ಅದು ಹಂಬಲಿಸುತ್ತದೆ. ಇದಕ್ಕೆ ಕಾರಣವೇನೆಂದರೆ ನಿಜವಾದ ಶಾಂತಿಯೇ ಅದರ ತೌರು, ಆದರ ಮೂಲ ಸ್ವಭಾವ. ಅದು ತನ್ನ ಮೂಲ ಸ್ವಭಾವವನ್ನು ಪಡೆಯಲೇ ಬೇಕು. ಜಾನ್‌ಸನ್ನನ ಮನಸ್ಸೂ ಶಾಂತಿ ಪಡೆಯುವದಕ್ಕಾಗಿ ಚಡಿಪಡಿಸುತ್ತಿತ್ತು. ಹೇಗಾದರೂ ಶಾಂತವಾಗಬೇಕೆಂದು ಅದು ಹಂಬಲಿಸುತ್ತಾ ಹುಡುಕುತ್ತಾ ಇತ್ತು. ಅವನು ಹೀಗೆ ಸಮಾಧಾನ ಮಾಡಿಕೊಳ್ಳುತ್ತಿದ್ದನು: "ನಾನು ಎಡ್‌ಮಂಡ್‌ಬರ್ಕ್‌ನ ಹತ್ತಿರ ಹೋಗಿ, ಪುನಃ ವಾದ ಮಾಡುತ್ತೇನೆ. 'ಬರ್ಕ್, ಬರ್ಕ್, ಎಲ್ಲಿ, ಎಲ್ಲಿ, ನನ್ನನ್ನು ಸೋಲಿಸಿದ ನಿನ್ನ ವಾದವೇನು ? ಇನ್ನೊಮ್ಮೆ ಹೇಳು ; ಈಗ ಸರಿಯಾಗಿ ಉತ್ತರ ಕೊಡುತ್ತೇನೆ. ನನ್ನ ಆಕ್ಷೇಪಕ್ಕೆ ನೀನು ಉತ್ತರ ಕೊಡು, ನೋಡೋಣ' ಎನ್ನುತ್ತೇನೆ. ಎಲ ಎಲಾ ! ಹೌದು, ನನ್ನ ಕನಸಿನಲ್ಲಿ ಕಂಡ ಬರ್ಕ್, ಎಚ್ಚರದ ಬರ್ಕ್ ಹೇಗಾಗಬಲ್ಲ? ಎಚ್ಚರದ ಬರ್ಕನಿಗೆ ಕನಸಿನ ಬರ್ಕ್‌ನ ವಿಚಾರವು, ವಾದವು ಹೇಗೆ ಗೊತ್ತಾಗಬೇಕು ? ನನ್ನ ನಿದ್ರೆಯಲ್ಲಿ ಅವನು ಪ್ರಯೋಗಿಸಿದ ಪ್ರಬಲತರ ಯುಕ್ತಿಗಳೇನು ಎನ್ನುವದೂ ನನ್ನ ಸೋಲಿಗೆ ಕಾರಣವಾದ ನನ್ನ ದುರ್ಬಲ ಯುಕ್ತಿಗಳೇನು ಎನ್ನುವದೂ ಎರಡೂ ನನಗೆ ಗೊತ್ತಿದೆ. ಜಯ ಪಡೆದ ಪಕ್ಷದ ವಾದವೂ ನನಗೆ ಗೊತ್ತಿದೆ; ಅಪಜಯ ಹೊಂದಿದ ಪಕ್ಷದ ವಾದವೂ ನನಗೇ ತಿಳಿದಿದೆ. ಪಾಪ, ಆ ನಿಜವಾದ ಬರ್ಕ್‌ನಿಗೆ ಇದು ಯಾವದೂ ತಿಳಿಯದು. ಹೀಗೆ ಎರಡು ಪಕ್ಷಗಳ ವಾದಗಳನ್ನೂ ನನ್ನ ಮಿಂದುಳೇ ಒದಗಿಸಿದೆ, ಕಲ್ಪಿಸಿದೆ. ಒಂದು ಕಡೆ ಜಯಶಾಲಿಯಾದ ಎಡ್‌ಮಂಡ್ ಬರ್ಕ್‌ನಾಗಿಯೂ ಇನ್ನೊಂದು ಕಡೆ ಪರಾಜಿತನಾದ ಜಾನ್‌ಸನ್ ಆಗಿಯೂ ನನಗೆ ನಾನೇ ಈ ಎರಡು ರೂಪಗಳಿಂದಲೂ ತೋರಿದೆ. ಆದ್ದರಿಂದ ನಾನು ಬೇರೆಯವರಿಂದ ಸೋಲಲಿಲ್ಲ."

ಹೀಗೆ ನಿಜವಾದ ವಿಚಾರವು ಹೊಳೆದ ಕೂಡಲೇ ಜಾನ್‌ಸನ್ನನಿಗೆ ತನ್ನ ಭ್ರಾಂತಿಗಾಗಿ ನಗು ಬಂದು, ಮನಸ್ಸು ನಾಚಿ, ಶಾಂತವಾಯಿತು. ವೇದಾಂತವು ಹೇಳುವದೇನೆಂದರೆ, ನಿಮ್ಮ ಕನಸುಗಳಲ್ಲಿ ಒಂದು ಕಡೆ ವಿಷಯವಾಗಿಯೂ ಇನ್ನೊಂದು ಕಡೆ

ವಿಷಯಿಯಾಗಿಯೂ ನೀವೇ ತೋರುತ್ತೀರಿ. ನೀವೇ, ನಿಮ್ಮೊಳಗಿರುವ ನಿಜವಾದ ಆತ್ಮನೇ ಒಂದು ಕಡೆ ಪರ್ವತಗಳಾಗಿಯೂ ನದಿಗಳಾಗಿಯೂ ಅರಣ್ಯಗಳಾಗಿಯೂ ಪಶುಗಳಾಗಿಯೂ ಪಕ್ಷಿಗಳಾಗಿಯೂ ಪ್ರಾಣಿಗಳಾಗಿಯೂ ಇನ್ನೊಂದು ಕಡೆ ದಿಗ್ಭ್ರಾಂತನಾದ ಯಾತ್ರಿಕನಾಗಿಯೂ ತೋರುತ್ತಿರುವದು. ನೀವೇ ವಿಷಯ, ನೀವೇ ವಿಷಯಿ (Subject).

೧೫೨. ಪುನರ್ಜನ್ಮದ ಮೇಲೆ ಸಂಸ್ಕಾರ-ಸನ್ನಿವೇಶ—ಸಹವಾಸಾದಿಗಳ ಪ್ರಭಾವ

(ಒಬ್ಬ ಋಷಿಯಲ್ಲಿ ಬೆಕ್ಕು ನಾಯಿಗಳ ಪ್ರಶ್ನೆ)

ಪ್ರಶ್ನೆ—ಮನುಷ್ಯರು ಹಿಂದಿರುಗಿ ಬೆಕ್ಕುಗಳಾಗಿಯೂ ನಾಯಿಗಳಾಗಿಯೂ ಹುಟ್ಟುವದುಂಟೆ ?

ಉತ್ತರ—ಇಂದಿನ ನಮ್ಮ ಸಂಸ್ಕಾರಕ್ಕೂ ಶಿಕ್ಷಣಕ್ಕೂ ಸಾಧನಕ್ಕೂ ವರ್ತನಕ್ಕೂ ಜೀವನಕ್ಕೂ ಯಾವ ಸಹವಾಸ, ಸನ್ನಿವೇಶ ಸಂದರ್ಭಗಳು ಕಾರಣವಾಗುತ್ತವೆಯೋ ಅವೇ ನಮ್ಮ ಮುಂದಿನ ಜನ್ಮಗಳಿಗೂ ಕಾರಣವಾಗುತ್ತವೆ. ನಾವು ಯಾವ ಪ್ರಾಣಿಯಾಗಿ ಹುಟ್ಟುವದಕ್ಕೂ ನಮ್ಮ ಸಂಸ್ಕಾರ-ಸನ್ನಿವೇಶಗಳೇ ಕಾರಣವಾಗುತ್ತವೆ. ಒಟ್ಟಿನ ಮೇಲೆ ಎಲ್ಲವೂ ಸಂಸ್ಕಾರ-ಸಹವಾಸ-ಸನ್ನಿವೇಶಗಳನ್ನು ಅವಲಂಬಿಸಿವೆ.

ಭಾರತದೇಶದಲ್ಲಿ ಒಬ್ಬ ಋಷಿಯ ಹತ್ತಿರ ಪ್ರಶ್ನೆ ಕೇಳುವದಕ್ಕಾಗಿ ಎರಡು ಜನರು ಬಂದರು. ಇವರಲ್ಲಿ ಒಬ್ಬನದು ನಾಯಿಯ ಸ್ವಭಾವವಾಗಿಯೂ ಇನ್ನೊಬ್ಬನದು ಬೆಕ್ಕಿನ ಸ್ವಭಾವವಾಗಿಯೂ ಇದ್ದಿತು ; ಅಥವಾ ಒಬ್ಬ ಋಷಿಯ ಹತ್ತಿರ ಒಂದು ನಾಯಿಯೂ ಒಂದು ಬೆಕ್ಕೂ ಬಂದವು—ಎಂದು ಹೇಳಬಹುದು. ನಾಯಿಯು ಕೇಳಿದ್ದೇನೆಂದರೆ, "ಸ್ವಾಮಿ, ಇಲ್ಲಿ ಈ ಬೆಕ್ಕು ಇದೆ, ಅಥವಾ ಬೆಕ್ಕಿನ ಸ್ವಭಾವದ ಈ ಮನುಷ್ಯನಿದ್ದಾನೆ. ಇವನು ಬಹಳ ಕಪಟಿ, ಕೇಡಿಗ, ದುಷ್ಟ. ಮುಂದಿನ ಜನ್ಮದಲ್ಲಿ ಇವನು ಏನಾಗಬಹುದು ?" ಅನಂತರ ಕೆಲವು ಹೊತ್ತಿನ ಮೇಲೆ ಆ ಬೆಕ್ಕಿನ ಸ್ವಭಾವದ ಮನುಷ್ಯನು ಬಂದು "ಸ್ವಾಮಿ, ಇಲ್ಲಿ ಈ ನಾಯಿ ಇದೆ : ಅಥವಾ ಈ ನಾಯಿಯ ಸ್ವಭಾವದ ಮನುಷ್ಯನಿದ್ದಾನೆ. ಇವನು ಬಹಳ ಕೆಟ್ಟವನು. ಇವನು ಯಾವಾಗಲೂ ಹಲ್ಲುಕಿಸಿದು ಗುರುಗುಟ್ಟುತ್ತಾನೆ ; ಬಾಯಿಗೆ ಬಂದಂತೆ ಬೊಗಳುತ್ತಾನೆ. ಇವನು ಸತ್ತ ಮೇಲೆ ಮುಂದಿನ ಜನ್ಮದಲ್ಲಿ ಇವನ ಗತಿಯೇನು ?" ಎಂದು ಕೇಳಿದನು. ಆ ಋಷಿಯು ಸುಮ್ಮನಿದ್ದನು. ಆದರೆ ಅವರಿಬ್ಬರು ಬಿಡದೆ ಮತ್ತೆ ಮತ್ತೆ ಅದೇ ಪ್ರಶ್ನೆಯನ್ನು ಮಾಡಿದರು. ಆಗ ಋಷಿಯು "ತಮ್ಮ, ನೀವು ಈ ಪ್ರಶ್ನೆಯನ್ನು ಮಾಡದಿದ್ದರೆ ಚೆನ್ನಾಗಿತ್ತು." ಎಂದು ಪುನಃ ಸುಮ್ಮನಾದನು. ಆದರೂ ಅವರಿಬ್ಬರೂ ಬಿಡದೆ ಉತ್ತರ ಹೇಳಲೇಬೇಕೆಂದು ಅವನನ್ನು ಒತ್ತಾಯಪಡಿಸಿದರು. ಅದರಿಂದ ಆ ಋಷಿಯು ಹೇಳಿದ್ದೇನೆಂದರೆ, "ಓ ನಾಯಿಯೆ ! ಈ ಬೆಕ್ಕು ಯಾವಾಗಲೂ

ನಿನ್ನ ಸಹವಾಸದಲ್ಲಿಯೇ ಜೀವಿಸುತ್ತಿರುವುದರಿಂದ ನಿನ್ನ ಗುಣಸ್ವಭಾವಗಳನ್ನು ಇದು ಹೀರಿಕೊಂಡು ನಿನ್ನ ಶೀಲವನ್ನು ಅಭ್ಯಾಸಮಾಡುತ್ತದೆ. ಆದ್ದರಿಂದ ಮುಂದಿನ ಜನ್ಮದಲ್ಲಿ ಇದು ನಾಯಿಯಾಗುತ್ತದೆ. ಹೀಗಲ್ಲದೆ ಇನ್ನೇನಾಗಬಲ್ಲದು ? ಎಲೈ ಬೆಕ್ಕೆ! ಈ ನಾಯಿಯು ಯಾವಾಗಲೂ ನಿನ್ನ ಸಹವಾಸದಲ್ಲಿ ಸ್ನೇಹದಿಂದ ಇರುವದರಿಂದ ಇದು ನಿನ್ನ ಗುಣ ಶೀಲ-ಸ್ವಭಾವಗಳನ್ನೇ ಅಭ್ಯಾಸಮಾಡುತ್ತಿದೆ. ಆದ್ದರಿಂದ ಮುಂದಿನ ಜನ್ಮದಲ್ಲಿ ಇದು ಠಕ್ಕಿನ ಸ್ವಭಾವದ ಬೆಕ್ಕು ಆಗುತ್ತದೆ."

ಆದ್ದರಿಂದ ಹಗಲಿರುಳೂ ನಾಯಿಗಳನ್ನೂ ಬೆಕ್ಕುಗಳನ್ನೂ ಅತಿಯಾಗಿ ಪ್ರೀತಿಸುತ್ತಾ ಅಭಿಮಾನಿಸುತ್ತಾ ಮುದ್ದಿಸುತ್ತಾ ಅವುಗಳ ಸಹವಾಸ ದಲ್ಲಿಯೇ ಸಂತೋಷದಿಂದ ಜೀವಿಸುತ್ತಿರುವ ಮನುಷ್ಯರು ಮುಂದಿನ ಜನ್ಮ ದಲ್ಲಿ ನಾಯಿಗಳಾಗಿಯೋ ಬೆಕ್ಕುಗಳಾಗಿಯೋ ಹುಟ್ಟುವದರಲ್ಲಿ ಸಂಶಯ ವಿಲ್ಲ. (ಜಿಂಕೆಯನ್ನು ಅತಿಯಾಗಿ ಪ್ರೀತಿಸಿ ಮುದ್ದಿಸುತ್ತಾ ಅಂತ್ಯ ದಲ್ಲಿಯೂ ಅದೇ ಚಿಂತೆಯಿಂದ ಸತ್ತ ಭರತರಾಜನು ಮುಂದಿನ ಜನ್ಮದಲ್ಲಿ ಜಿಂಕೆಯಾಗಿಯೇ ಹುಟ್ಟಿದನೆಂಬುದು ಪ್ರಸಿದ್ಧವಾಗಿದೆ). ಈ ಪ್ರಶ್ನೆಗೆ ಇದಕ್ಕಿಂತಲೂ ಹೆಚ್ಚಿನ ವಿವರಣೆಯು ಅಗತ್ಯವಿಲ್ಲ.

೩೧೫. ನಿಜವಾದ ಜೊತೆಗಾರ

(ಧರ್ಮರಾಜ ಮತ್ತು ನಾಯಿ)

ಭಾರತೀಯ ಭಾಷೆಯಲ್ಲಿ ಒಂದು ಸೊಗಸಾದ ಗೀತೆಯಿದೆ. ಪದ್ಯವಿದೆ, ಇಲ್ಲಿ ಅದನ್ನೇನೂ ಹಾಡುವ ಅವಶ್ಯವಿಲ್ಲ. ಆ ಗೀತೆಯ ಸಾರಾಂಶವೇನೆಂದರೆ, ಸತ್ಯವನ್ನು ಅನುಭವ ಮಾಡುವದಕ್ಕೆ ನಿಮ್ಮ ತಂದೆಯು ದಾರಿಯಲ್ಲಿ ಅಡ್ಡಲಾಗಿ ನಿಂತರೆ,—ಇಂಡಿಯಾ ದೇಶದಲ್ಲಿಯ ಮಹಾಭಕ್ತ ಶಿರೋಮಣಿಯಾದ ಪ್ರಹ್ಲಾದನು, ಸತ್ಯ-ಧರ್ಮಗಳ ಸಾಧನೆಗೆ ಅಡ್ಡಿಯಾದಂಥ ತನ್ನ ತಂದೆಯನ್ನು ಪರಿತ್ಯಜಿಸಿದಂತೆ—ಆ ತಂದೆಯನ್ನೂ ದಾಟಿಹೋಗಿ. ನಿಮ್ಮ ತಾಯಿಯು ಹಾಗೆ ಸತ್ಯಸಾಧನೆಗೆ ವಿರೋಧಿಯಾದರೆ, ಆಕೆ ಯನ್ನೂ ತೊರೆಯಿರಿ. ಹೊಸ ಒಡಂಬಡಿಕೆಯು (New Testament) ಇದನ್ನೇ ಹೇಳುವದು. ಹಿಂದೂ ಶಾಸ್ತ್ರವೂ ಹೀಗೇ ಹೇಳುವದು. ನಿಮ್ಮ ತಂದೆ ತಾಯಿಯರ ಸಲುವಾಗಿ ಸತ್ಯವನ್ನು ಪ್ರೀತಿಸಿರಿ. ಸತ್ಯಕ್ಕೆ ಅಭಿಮುಖವಾದ ನಿಮ್ಮ ಅಭಿವೃದ್ಧಿಗೆ ಎಲ್ಲಿಯವರೆಗೆ, ಎಷ್ಟರ ಮಟ್ಟಿಗೆ, ನಿಮ್ಮ ಮಾತಾಪಿತೃಗಳು ತಡೆಯಾಗುವುದಿಲ್ಲವೋ ಹಿಮ್ಮೆಟ್ಟಿಸುವುದಿಲ್ಲವೋ ಅಲ್ಲಿಯವರೆಗೆ ಅಷ್ಟರ ಮಟ್ಟಿಗೆ ಅವರನ್ನು ಪ್ರೀತಿಸಿರಿ, ಗೌರವಿಸಿರಿ. ಸತ್ಯದ ಮಾರ್ಗದಲ್ಲಿ ನಿಮ್ಮ ಸಹೋದರರು ಏನಾದರೂ ವಿರೋಧಿಗಳಾದರೆ ವಿಭೀಷಣನಂತೆ ಅವರನ್ನು ಕೊಡವಿ ಹಾಕಿರಿ, ಕೈ ಬಿಡಿರಿ. ಸತ್ಯಸಾಧನೆಗೆ ನಿಮ್ಮ ಹೆಂಡತಿ ಯೇನಾದರೂ ಪ್ರತಿಕೂಲಳಾದರೆ ಭರ್ತೃಹರಿಯಂತೆ ಆಕೆಯನ್ನೂ ಹೊರಚೆಲ್ಲಿ. ನಿಮ್ಮ ಗಂಡನೇನಾದರೂ ಸತ್ಯಕ್ಕೆ ವಿರೋಧಿಯಾದರೆ ಮೀರಾಬಾಯಿಯಂತೆ ಅವನನ್ನೂ ಆಚೆ ಎಸೆಯಿರಿ. ನಿಮ್ಮ ಗುರುವೇನಾದರೂ ಸತ್ಯಾನುಭವಕ್ಕೆ ಭಂಗಕಾರಿಯಾದರೆ,

ಬಲಿಚಕ್ರವರ್ತಿಯಂತೆ ಅವನನ್ನು ಎತ್ತಿ ಎಸೆಯಿರಿ; ಏಕೆಂದರೆ, ನಿಮ್ಮ ನಿಜವಾದ ಬಂಧುವೂ ಗುರುವೂ ಪರಮಮಿತ್ರನೂ ಸತ್ಯವೇ, ಕೇವಲ ಸತ್ಯವೊಂದೇ ಆಗಿದೆ. ಮಿಕ್ಕ ಎಲ್ಲಾ ಸಂಬಂಧಗಳೂ ಸಂಗಾತಿಗಳೂ ತೋರಿ ಅಡಗತಕ್ಕವು, ಕಾಣದೆ ಹೋಗತಕ್ಕವು; ಅನಂತ ಕಾಲದ ದೃಷ್ಟಿಯಿಂದ ಎಲ್ಲಾ ಒಂದೇ ದಿನದ ಬಾಳಿನವು; ಆದರೆ ಸತ್ಯವು ಎಂದೆಂದೂ ನಿಮ್ಮ ಜೊತೆಗೇ ಇರತಕ್ಕದು. ಸತ್ಯವೇ ನಿಮ್ಮ ನಿಜವಾದ ಆತ್ಮ. ನಿಮ್ಮ ತಂದೆತಾಯಿಗಳಿಗಿಂತಲೂ ಸತ್ಯವು ನಿಮಗೆ ಹೆಚ್ಚು ಸಮೀಪ. ನಿಮ್ಮ ಹೆಂಡತಿ, ಮಕ್ಕಳು, ಸ್ನೇಹಿತರು ಮೊದಲಾದ ಎಲ್ಲರಿಗಿಂತಲೂ ಸತ್ಯವು ನಿಮಗೆ ಹೆಚ್ಚು ಸಮೀಪವಾಗಿದೆ. ರಾಜರುಗಳಿಗಿಂತಲೂ ತಂದೆತಾಯಿಗಳಿಗಿಂತಲೂ ಮಕ್ಕಳಿಗಿಂತಲೂ ಯಾರಿಗಿಂತಲೂ ಸತ್ಯವನ್ನು ಹೆಚ್ಚಾಗಿ ಗೌರವಿಸಬೇಕು.

ಭಾರತ ದೇಶದಲ್ಲಿ ಒಬ್ಬ ರಾಜನ ಜೀವನದಿಂದ ತಿಳಿಯಬರುವ ಒಂದು ಸೊಗಸಾದ ದೃಷ್ಟಾಂತವಿದೆ. ಅವನು ಸತ್ಯಪಥದಲ್ಲಿ ನಡೆದನು. ಅವನು ತನ್ನ ದೇಹವನ್ನು ಹಿಮಾಲಯದ ಮಂಜಿನಲ್ಲಿ ಕರಗಿಸಿ ಬಿಡುವುದಕ್ಕಾಗಿ ಹಿಮಾಲಯ ಪರ್ವತವನ್ನು ಹತ್ತಿ ಹೋಗುತ್ತಿದ್ದನಂತೆ. ಅದರ ವಿಷಯದಲ್ಲಿ ಉದ್ದವಾದೊಂದು ಕಥೆಯೇ ಇದೆ. ರಾಮನು ನಿಮಗೆ ಅದನ್ನೆಲ್ಲಾ ಹೇಳಬೇಕಾದುದಿಲ್ಲ. ಏನೋ ಒಂದು ಕಾರಣಕ್ಕಾಗಿ ಒಂದು ಮಹತ್ವದ ಕಾರಣಕ್ಕಾಗಿಯೇ ಆ ರಾಜನು ತನ್ನ ಹೆಂಡತಿಯೊಡನೆಯೂ ತನ್ನ ನಾಲ್ಕು ಜನ ಸೋದರರೊಡನೆಯೂ ಹಿಮಾಲಯ ಪರ್ವತ ಶಿಖರಗಳನ್ನು ಏರುತ್ತಾ ಹೋಗುತ್ತಿದ್ದನು. ಅವನು ಸತ್ಯಾನ್ವೇಷಕನಾಗಿ ಸತ್ಯ–ಧರ್ಮಗಳ ಪಥದಲ್ಲಿ ನಡೆಯುತ್ತಿದ್ದನು. ಎಲ್ಲರಿಗಿಂತಲೂ ಮುಂದಿದ್ದ ಅವನು ಮುಂದೆ ಮುಂದೆ ಹೋಗುತ್ತಿದ್ದನು. ಆ ರಾಜನ ಹಿಂದೆ ಅವನ ಮೊದಲನೆಯ ತಮ್ಮನಿದ್ದನು; ಆ ಮೊದಲನೆಯ ತಮ್ಮನ ಹಿಂದೆ ಎರಡನೆಯ ತಮ್ಮನಿದ್ದನು; ಅವನ ಹಿಂದೆ ಅವನ ತಮ್ಮನಿದ್ದನು; ಅವನ ಹಿಂದೆ ಕೊನೆಯ ತಮ್ಮನಿದ್ದನು. ಹೀಗೆ ಸರಿಯಾದ ಕ್ರಮದಲ್ಲಿ ನಡೆಯುತ್ತಿದ್ದ ಆ ರಾಜನ ಎಲ್ಲಾ ಸಹೋದರರ ಹಿಂದೆ ಅವನ ಪತ್ನಿಯು ಅವರೆಲ್ಲರನ್ನೂ ಅನುಸರಿಸಿ ಹೋಗುತ್ತಿದ್ದಳು. ಎಲ್ಲರ ಮುಂದಿದ್ದ ರಾಜನು, ಒಮ್ಮೆಯೂ ಹಿಂದೆ ನೋಡದೆ, ತನ್ನ ಗುರಿಯಾದ ಸತ್ಯದಲ್ಲಿಯೇ ದೃಷ್ಟಿಯಿಟ್ಟು ಸತ್ಯಕ್ಕೆ ಮುಖವಾಗಿಯೇ ನಡೆಯುತ್ತಿದ್ದನು. ಹಿಮಾಲಯದ ಪರ್ವತಗಳನ್ನು ಏರುತ್ತಾ ಬಹಳ ದೂರ ಹೋದ ಮೇಲೆ, ಕೋಮಲಾಂಗಿಯಾದ ಮಹಾರಾಣಿಗೆ ಬಹಳ ಶ್ರಮವಾದುದರಿಂದ ಅವರ ಜೊತೆಗೆ ನಡೆಯಲು ಸಾಧ್ಯವಾಗದೆ ಹಿಂದೆ ಹಿಂದೆ ದೂರ ಬಿದ್ದು, ಅಳುತ್ತಾ ಗೋಳಿಡುತ್ತಾ ತನ್ನನ್ನೂ ಜೊತೆಗೆ ಕರೆದುಕೊಂಡು ಹೋಗಬೇಕೆಂದು ತನ್ನ ಮುಂದಿದ್ದವರಿಗೂ ರಾಜನಿಗೂ ಅಂಗಲಾಚಿ ಮೊರೆಯಿಟ್ಟಳು. ಆಗ ರಾಜನು ತನ್ನ ಪ್ರತಿಜ್ಞೆಯಂತೆ ಮುಂದಿದ್ದ ಸತ್ಯದಲ್ಲಿಯೇ ಲಕ್ಷ್ಯವಿಟ್ಟಿದ್ದರಿಂದ ಹಿಂದಿರುಗಿ ನೋಡಲಿಲ್ಲ. ಆಕೆ ಬೇಡುವುದಕ್ಕೆ ತೊಡಗಿದ ಮೊದಲು, ಮೊದಲು ಮೂರು ಮಾರು ತನ್ನೊಡನೆ ಓಡಿ ಬಂದರೆ

ತಾನು ಕರೆದೊಯ್ಯುವದಾಗಿ ರಾಜನು ಆಕೆಗೆ ಆಶ್ವಾಸನೆ ಕೊಡುತ್ತಿದ್ದನೇ ಹೊರತು ತಿರುಗಿ ನೋಡುತ್ತಿರಲಿಲ್ಲ. ಆದರೆ ಆಕೆಗೆ ಅದು ಸಾಧ್ಯವಾಗಲಿಲ್ಲ. ತಮ್ಮಂದಿರೆಲ್ಲರೂ ಅಣ್ಣನಿಗೆ ವಿಧೇಯರಾಗಿ ಆ ಸತ್ಯಪಥದಲ್ಲಿಯೇ ನಡೆಯುತ್ತಿದ್ದುದರಿಂದ ಅವರೂ ತಿರುಗಿ ನೋಡುವಂತಿರಲಿಲ್ಲ. ತಮ್ಮ ಅಣ್ಣನನ್ನು ಅನುಸರಿಸುವದೊಂದೇ ಅವರಿಗೆ ಧರ್ಮವಾಗಿತ್ತು. ಗುರಿಯನ್ನು ಬಿಟ್ಟು ಹಿಂತಿರುಗಿ ನೋಡುವದಾಗಲಿ ಒಂದು ಹೆಜ್ಜೆ ಹಿಮ್ಮೆಟ್ಟುವದಾಗಲೀ ಧರ್ಮ ಸಮ್ಮತವಾಗಿರಲಿಲ್ಲ. ಆ ಯುಧಿಷ್ಠಿರ ರಾಜನು ಎಂದೂ ಒಂದು ಹೆಜ್ಜೆಯೂ ಹಿಮ್ಮೆಟ್ಟತಕ್ಕವನಾಗಿರಲಿಲ್ಲ. ಹೆಂಡತಿಯು ನಡೆಯಲಾರದೆ ಬಿದ್ದು ಹೋಗುತ್ತಾಳೆ. ಆದರೆ, ಆಕೆಗಾಗಿ ರಾಜನು ಸತ್ಯದಿಂದ ಹೊರಳಿ, ತಿರುಗಿಯೂ ನೋಡತಕ್ಕವನಲ್ಲ. ನಿಮ್ಮ ಹಿಂದಿನ ಅನೇಕ ಜನ್ಮಗಳಲ್ಲಿ ನಿಮಗೆ ಸಹಸ್ರಾರು ಹೆಂಡಿರಿದ್ದರು; ಮುಂದೇನಾದರೂ ನಿಮಗೆ ಜನ್ಮ ಬಂದರೆ, ನೀವು ಎಷ್ಟು ಸಲ ಮದುವೆಯಾಗುತ್ತೀರೆಂಬುದೂ ನಿಮಗೆ ಹಿಂದೆಷ್ಟು ಜನ ಬಂಧುಗಳಿದ್ದರು, ಮುಂದೆಷ್ಟು ಜನ ಬಂಧುಗಳಾಗುತ್ತಾರೆ—ಎಂಬುದೂ ನಿಮಗೆ ತಿಳಿಯದು. ಈ ಬಂಧುಗಳಿಗಾಗಿಯೂ ಸಂಬಂಧಗಳಿಗಾಗಿಯೂ ನೀವು ಸತ್ಯದಿಂದ ಹಿಂತಿರುಗಬೇಕಾಗಿಲ್ಲ. ಯಾವಾಗಲೂ ಮುಂದೆ ಮುಂದೆಯೇ ನಡೆಯುತ್ತಿರಬೇಕು. ಯಾವುದೂ ನಿಮ್ಮನ್ನು ಹಿಂದಕ್ಕೆ ಜಗ್ಗಬಾರದು. ನಿಮಗೆ ಹೆಂಡತಿಯಲ್ಲಿ ಇರುವ ಗೌರವಕ್ಕಿಂತಲೂ ಹೆಚ್ಚು ಗೌರವವು ಸತ್ಯದಲ್ಲಿಯೂ ದೇವರಲ್ಲಿಯೂ ಇರಲಿ. ಸತ್ಯವು ಇಡೀ ಮಾನವ ಜನಾಂಗಕ್ಕೇ ಸಂಬಂಧಪಟ್ಟುದು. ಸತ್ಯವು ಅಥವಾ ದೇವರು ಸರ್ವ ಕಾಲಕ್ಕೂ ಸಂಬಂಧಪಟ್ಟುದು. ಅದು ಶಾಶ್ವತವಾದುದು, ಆದರೆ ನಿಮ್ಮ ಪ್ರಾಪಂಚಿಕ ಸಂಬಂಧಗಳು ಹಾಗಿಲ್ಲ. ಅವು ಕ್ಷಣಿಕವಾದುವು. **"ಅಧ್ಯಾತ್ಮ ದೃಷ್ಟಿಯಿಂದ. ನಿಮಗೆ ನಿಜವಾಗಿಯೂ ಒಳ್ಳೆಯದಾವುದೋ ಅದು ನಿಮ್ಮ ಹೆಂಡತಿಗೂ ಸಂಗಾತಿಗಳಿಗೂ ನಿಜವಾಗಿಯೂ ಒಳ್ಳೆಯದಿರಬೇಕೆಂಬ ನಿಯಮವನ್ನು ಯಾವಾಗಲೂ ನೆನಪಿಡಿ."** ನಿಮ್ಮ ಪತ್ನಿಯಿಂದ ನೀವು ದೂರವಿರುವುದು ನಿಮಗೆ ಹಿತವೆಂದು ತೋರಿದರೆ ನಿಮ್ಮಿಂದ ದೂರವಿರುವುದು ಆಕೆಗೂ ಹಿತವೆಂದು ನೆನಪಿನಲ್ಲಿಡಿ. ಇದೇ ನಿಯಮ. ನಿಮ್ಮ ವ್ಯಕ್ತಿತ್ವಕ್ಕೆ ಆಧಾರವಾದ ಸತ್ಯವೇ ದೇವತ್ವವೇ ನಿಮ್ಮ ಪತ್ನಿಯ ವ್ಯಕ್ತಿತ್ವಕ್ಕೂ ಆಧಾರವಾಗಿದೆ. ಕೊನೆಗೆ ಯುಧಿಷ್ಠಿರ ರಾಜನ ಹೆಂಡತಿಯು ಬಿದ್ದುಹೋದಳು. ಆದರೆ ರಾಜನು, ತನ್ನನ್ನು ಹಿಂಬಾಲಿಸಲು ತನ್ನ ತಮ್ಮಂದಿರಿಗೆ ಹೇಳಿ ನೇರಾಗಿ ಮುಂದೆ ಹೋದನು. ಕೆಲವು ಹೊತ್ತಿನವರೆಗೆ ಅವರು ಅವನೊಡನೆ ಓಡಿದರು ; ಆದರೆ ಕೊನೆಯ ತಮ್ಮನು ಮಿಕ್ಕವರೊಡನೆ ನಡೆಯಲಾಗಲಿಲ್ಲ. ಅವನೂ ಅತಿ ಕಷ್ಟದಿಂದ ಓಲಾಡುತ್ತಾ ಮುಗ್ಗರಿಸುತ್ತಾ "ಅಣ್ಣ, ಅಣ್ಣ ಯುಧಿಷ್ಠರ ! ನಾನು ಸಾಯಲಾಗಿದ್ದೇನೆ ; ನಾನು ನಡೆಯಲಾರೆ ; ರಕ್ಷಿಸು ; ರಕ್ಷಿಸು." ಎಂದು ಬೇಡಿದನು. ಆದರೆ ಯುಧಿಷ್ಠಿರನು ತನ್ನ ಮುಂದಿರುವ ಗುರಿಯಾದ ಸತ್ಯದಿಂದ ದೃಷ್ಟಿಯನ್ನು ತಿರುಗಿಸಲಿಲ್ಲ ; ಮುಂದೆ ಮುಂದೆ

ಹೋಗುತ್ತಲೇ ಇದ್ದನು. ಆದರೆ ಧೈರ್ಯಮಾಡಿ ಕಷ್ಟಪಟ್ಟು ತನ್ನೊಡನೆ ಸ್ವಲ್ಪದೂರ ಒಂದರೆ ಕರೆದುಕೊಂಡು ಹೋಗುವದಾಗಿ ಆ ತಮ್ಮನಿಗೆ ರಾಜನು ಅಭಯ ಪ್ರಧಾನ ಮಾಡುತ್ತಿದ್ದನೇ ಹೊರತು, ಅವನನ್ನು ಸ್ವಲ್ಪವಾದರೂ ಎಳೆದುಕೊಳ್ಳುವುದಕ್ಕೆ ಒಮ್ಮೆಯೂ ಹಿಂದಿರುಗಲಿಲ್ಲ. ಆ ಕೊನೆಯ ತಮ್ಮನೂ ಸತ್ತನು. ಅನಂತರ ಆ ಸಹೋದರರ ಸರಪಳಿಯ ಕೊನೆಯಲ್ಲಿದ್ದ ತಮ್ಮನ ಗತಿಯೂ ಹಾಗೇ ಆಯಿತು. ಹೀಗೆ ಯುಧಿಷ್ಠಿರನನ್ನು ಬಿಟ್ಟು ಮಿಕ್ಕೆಲ್ಲರೂ ಒಬ್ಬರಾದ ಮೇಲೆ ಮತ್ತೊಬ್ಬರು ಬಿದ್ದು ಸತ್ತು ಹೋದರು. ಆದರೆ ಯುಧಿಷ್ಠಿರ ರಾಜನು ಒಂದು ಹೆಜ್ಜೆಯೂ ಹಿಂದಿಡದೆ ಸತ್ಯ-ಧರ್ಮಗಳ ಪಥದಲ್ಲಿ ಮುಂದೆ ಮುಂದೆ ಹೋಗುತ್ತಲೇ ಇದ್ದನು.

ಕೊನೆಗೆ ಯುಧಿಷ್ಠಿರ ರಾಜನು ತನ್ನ ಗುರಿಯಾದ ಸತ್ಯರೂಪ ಕೈಲಾಸ ಶಿಖರವನ್ನು ಸೇರಿದಾಗ ಸತ್ಯಸ್ವರೂಪನಾದ ದೇವರೇ ಅವನಿಗೆ ದರ್ಶನವಿತ್ತನು. ದೇವರು ಪಾರಿವಾಳ ರೂಪದಿಂದ ತೋರಿಕೊಂಡನೆಂದು ಬೈಬಲ್‌ನಲ್ಲಿ ಹೇಳಿರುವಂತೆ ದೇವರು ಕೆಲವರಿಗೆ ಒಬ್ಬ ದೇವಪುರುಷನ ಶರೀರದಿಂದ ಅಥವಾ ಸ್ವರ್ಗಾಧಿಪತಿಯಾದ ದೇವೇಂದ್ರನ ರೂಪದಿಂದ ತೋರಿಕೊಂಡನೆಂದು ಹಿಂದೂ ಶಾಸ್ತ್ರಗಳಲ್ಲಿ ಹೇಳಿದೆ. ಶರೀರ ಸಹಿತವಾಗಿ ಸ್ವರ್ಗಕ್ಕೆ ಹೋಗಲು (ಕಾಯ ಸಹಿತ ಕೈಲಾಸಕ್ಕೆ ಹೋಗಲು) ದೇವರು ಯುಧಿಷ್ಠಿರನಿಗೆ ಹೇಳಿದನು. ಕೆಲವರನ್ನು ಜೀವಂತವಾಗಿ ಸ್ವರ್ಗಕ್ಕೆ ಏರಿಸಿದರೆಂದು ಬೈಬಲ್‌ನಲ್ಲಿ ಬರುವಂತೆ ಅಲ್ಲಿಯೂ ಬಂದಿದೆ. ರಾಜನು ತನ್ನ ಬಲಗಡೆಯಲ್ಲಿ ನೋಡಿದಾಗ ಜೊತೆಯಲ್ಲಿ ಒಂದು ನಾಯಿಯನ್ನು ಕಂಡನು. ಅವನು ದೇವರಿಗೆ "ಓ ದೇವ! ಓ ಸತ್ಯಸ್ವರೂಪ! ನನ್ನನ್ನು ನೀನು ಅತ್ಯುನ್ನತ ಸ್ವರ್ಗಕ್ಕೆ ಏರಿಸುವದಾದರೆ, ಈ ನಾಯಿಯನ್ನೂ ನನ್ನ ಜೊತೆಯಲ್ಲಿ ಅಲ್ಲಿಗೆ ಏರಿಸಬೇಕಾಗುತ್ತದೆ" ಎಂದನು. ಅದಕ್ಕೆ ದೇವರು, "ರಾಜಾ ಯುಧಿಷ್ಠಿರ! ಅದು ಸಾಧ್ಯವಿಲ್ಲ. ಸ್ವರ್ಗಾರೋಹಣ ಮಾಡುವುದಕ್ಕೆ ನಾಯಿಗೆ ಅರ್ಹತೆಯಿಲ್ಲ. ನಾಯಿಯು ಇನ್ನೂ ಅನೇಕ ಜನ್ಮಗಳನ್ನೆತ್ತಿ ಕೊನೆಗೆ ಮನುಷ್ಯನಾಗಿ ಹುಟ್ಟಿ ಪರಿಶುದ್ಧವಾದ ಜೀವನವನ್ನು ನಡೆಸಿ, ನಿಷ್ಕಳಂಕ ಪುರುಷನಾಗಬೇಕು. ಅಷ್ಟೆಲ್ಲಾ ಸಂಸ್ಕಾರವಾಗದಿರುವ ನಾಯಿಯನ್ನು ಹೇಗೆ ಸ್ವರ್ಗಕ್ಕೇರಿಸಲು ಸಾಧ್ಯ? ನಿನಗೇನೋ ಅಧಿಕಾರವಿದೆಯೇ ಹೊರತು ಆ ನಾಯಿಗಿಲ್ಲ." ಎಂದು ಹೇಳಿದನು. ಆಗ ಯುಧಿಷ್ಠಿರನು "ಓ ದೇವ! ಓ ಸತ್ಯ! ನಿನಗಾಗಿ ನಾನು ಬಂದೆನೇ ಹೊರತು. ಸ್ವರ್ಗಕ್ಕಾಗಿಯೋ ಕೈಲಾಸಕ್ಕಾಗಿಯೋ ನಾನು ಬರಲಿಲ್ಲ. ಎಲ್ಲಕ್ಕೂ ಮೇಲಿನ ಸ್ವರ್ಗಕ್ಕೆ ನನ್ನನ್ನು ಏರಿಸಿ ಅಲ್ಲಿ ನನಗೆ ಸಿಂಹಾಸನಾರೋಹಣ ಮಾಡಿಸಬೇಕಾದರೆ ನನ್ನೊಡನೆ ಈ ನಾಯಿಯನ್ನೂ ನೀನು ಕರೆದುಕೊಳ್ಳಲೇ ಬೇಕಾಗುತ್ತದೆ. ಏಕೆಂದರೆ, ನನ್ನ ಹೆಂಡತಿಯು ನನ್ನೊಡನೆ ಬರಲಿಲ್ಲ; ಸತ್ಯ-ಧರ್ಮಗಳ ಪಥದಲ್ಲಿ ಆಕೆ ತತ್ತರಿಸಿ ಬಿದ್ದಳು. ಎಲ್ಲಾ ತಮ್ಮಂದಿರೂ ತತ್ತರಿಸಿ ಬಿದ್ದರು. ಯಾರೂ ನನ್ನೊಡನೆ ಬರಲಿಲ್ಲ; ಎಲ್ಲರೂ ದುರ್ಬಲತೆಗೂ ಮೋಹಕ್ಕೂ ಬಲಿಯಾದರು. ಆದರೆ ಈ

ನಾಯಿಯೊಂದೇ ನನ್ನ ಜೊತೆಗೆ ಬಂದಿದೆ. ಇದು ನನ್ನ ಕಷ್ಟಗಳಲ್ಲಿಯೂ ಸಂಕಟದಲ್ಲಿಯೂ ಶ್ರಮದಲ್ಲಿಯೂ ಹೋರಾಟಗಳಲ್ಲಿಯೂ ಭಾಗಿಯಾಗಿದೆ ; ಆದ್ದರಿಂದ ನನ್ನ ಸ್ವರ್ಗಸುಖದಲ್ಲಿಯೂ ಏಕೆ ಭಾಗಿಯಾಗಬಾರದು ? ಆ ಸ್ವರ್ಗ ಸುಖದಲ್ಲಿ ಈ ನಾಯಿಯನ್ನೂ ಸಮಭಾಗಿಯನ್ನಾಗಿ ಮಾಡದಿದ್ದರೆ, ನಾನೆಂದಿಗೂ, ಆ ನಿನ್ನ ಸ್ವರ್ಗಕ್ಕೆ ಹೊಗುವುದೇ ಇಲ್ಲ." ಎಂದನು.

ಪುರುಷಾಕೃತಿಯಿಂದ ತೋರಿದ ಸತ್ಯವು ಅಥವಾ ದೇವರು ಪುನಃ ಯುಧಿಷ್ಠಿರನಿಗೆ "ರಾಜಾ ! ನಾಯಿಯನ್ನು ಸ್ವರ್ಗಕ್ಕೆ ನಿನ್ನೊಡನೆ ಒಯ್ಯುವ ವರವನ್ನು ಮಾತ್ರ ಕೇಳಬೇಡ ; ಅದೊಂದು ಸಾಧ್ಯವಿಲ್ಲ ; ಅದನ್ನು ಬಿಟ್ಟು ಬೇರೆ ಏನಾದರೂ ಕೇಳು" ಎಂದು ಹೇಳಿದನು. ಆದರೆ ಯುಧಿಷ್ಠಿರನು, "ಎಲೈ ಬ್ರಹ್ಮವೆ ! ತೊಲಗು ಆಚೆ. ನೀನು ಸತ್ಯವೂ ಅಲ್ಲ ; ದೇವರೂ ಅಲ್ಲ. ನೀನು ಯಾವದೋ ದೆವ್ವವಾಗಿ, ಪಿಶಾಚಿಯಾಗಿ ಕಾಣುತ್ತಿ. ನೀನು ದೇವರೇ ನಿಜವಾಗಿದ್ದರೆ, ನಿನ್ನಲ್ಲಿ ಪಕ್ಷಪಾತವೇಕಿರುತ್ತಿತ್ತು ? ನಿನ್ನಲ್ಲಿ ಅನ್ಯಾಯವೇಕೆ ? ನನ್ನ ಕಷ್ಟಗಳಲ್ಲಿ ಭಾಗಿಯಾದ ನಾಯಿಗೆ ನನ್ನ ಸುಖದಲ್ಲಿಯೂ ಭಾಗ ಕೊಡದಿದ್ದರೆ ನೀನು ನಾಯಿಗೆ ಅನ್ಯಾಯ ಮಾಡಿದಂತಾಗುವದಿಲ್ಲವೆ ? ಇದು ದೇವರೆನಿಸಿಕೊಂಡುವನಿಗೆ ಅಥವಾ ಸತ್ಯಪುರುಷನಿಗೆ ಸತ್ಯದೇವನಿಗೆ ಇದು ಯೋಗ್ಯವಲ್ಲ" ಎಂದನು. ಆಗ ದೇವರು ತನ್ನ ನಿಜರೂಪದಿಂದ ಪ್ರತ್ಯಕ್ಷವಾಗಿ ದರ್ಶನಕೊಟ್ಟನು. ರಾಜನ ಜೊತೆಗಿದ್ದ ನಾಯಿಯು ಅದೃಶ್ಯವಾಗಿತ್ತು ; ಅದು ನಾಯಿಯೇ ಆಗಿರಲಿಲ್ಲ. ಅದು ಸಾಕ್ಷಾತ್ ಸರ್ವಸಮರ್ಥನಾದ ಪರಮಾತ್ಮನೇ ಆಗಿತ್ತು. ರಾಜನು ದೇವರ ಪರೀಕ್ಷೆಗೆ ಗುರಿಯಾಗಿದ್ದನು. ಅಂತಿಮ ಪರೀಕ್ಷೆಯಲ್ಲಿ ಅವನು ಉತ್ತೀರ್ಣನಾದನು.

ನೀವಾದರೂ ಸತ್ಯದ ಪಥದಲ್ಲಿ ಹೀಗೆಯೇ ನಡೆಯಬೇಕು. ಸತ್ಯ–ಧರ್ಮಗಳ ಮಾರ್ಗದಲ್ಲಿ, ನಿಮ್ಮ ಪ್ರಿಯ ಬಂಧುಗಳಿಗೆ ಬಹಳ ಹತ್ತಿರವಿರುವ ಅತ್ಯಂತ ಪ್ರಿಯರೂ ಅತ್ಯಂತ ಸಮೀಪರೂ ಆದ ನಿಮ್ಮ ಜೊತೆಗಾರರಾದರೂ ನಿಮ್ಮೊಡನೆ ನಡೆಯದಿದ್ದರೆ ಅವರನ್ನು ನಿಮ್ಮ ಮಿತ್ರರೆಂದು ಎಣಿಸಬೇಡಿ ; ಕೊನೆಗೊಂದು ನಾಯಿಯು ನಿಮ್ಮ ಜೊತೆಗೂಡಿ ನಡೆದರೂ ಅದನ್ನು ಅತ್ಯಂತ ಪ್ರಿಯವೂ ಅತ್ಯಂತ ಸಮೀಪವೂ ಆದ ಜೀವಿಯನ್ನಾಗಿ ಪರಿಗಣಿಸಬೇಕು. ಹೀಗೆ, ನಿಮ್ಮ ಧರ್ಮಮಾರ್ಗಕ್ಕೆ ಅನುಕೂಲರಾಗಿರತಕ್ಕವರೆಂಬ ನಿಯಮದ ಮೇಲೆ ನೀವು ನಿಮ್ಮ ಮಿತ್ರರನ್ನು ಮಾಡಿಕೊಳ್ಳಿ ; ನಿಮ್ಮ ಕೆಟ್ಟ ಸ್ವಭಾವಕ್ಕೆ ಪ್ರೋತ್ಸಾಹ ಕೊಡತಕ್ಕವರನ್ನು ನಿಮ್ಮ ಮಿತ್ರರೆಂದು ಆರಿಸಿಕೊಳ್ಳಬೇಡಿ. ನಿಮ್ಮ ಕೆಟ್ಟ ಸ್ವಭಾವದಂಥ ದುಷ್ಟ ಪ್ರವೃತ್ತಿಗಳುಳ್ಳವರನ್ನೇ ನಿಮ್ಮ ಸಂಗಡಿಗರನ್ನಾಗಿ ಆರಿಸಿಕೊಂಡರೆ, ಸಂಕಷ್ಟವೂ, ಅತಿ ಯಾತನೆಯೂ, ದುಃಖಾನುಭವವೂ, ನಿಮ್ಮ ಹಣೆಯ ಬರಹವೂ, ದುರ್ದೈವವೂ ಆಗುತ್ತದೆ.

೧೫೪. ಸತ್ಯಸಂಧತೆ

(ಶ್ರೀ ರಾಮಚಂದ್ರನ ಸತ್ಯ ಧರ್ಮಪರಾಯಣತೆಯ ಪ್ರಭಾವ)

ಇಡೀ ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠನಾಯಂಕನಾದ ಅಥವಾ ಭರತ ಖಂಡದಲ್ಲಿ ಯಾದರೂ ಅತ್ಯಂತ ಶ್ರೇಷ್ಠನಾಯಕನಾದ ಶ್ರೀರಾಮನ ಚರಿತ್ರೆಯನ್ನು ಆ ದೇಶದ 'ಇಲಿಯಡ್' ಆದ ರಾಮಾಯಣದಲ್ಲಿ ಹೇಳಿದೆ. ಅವನು ಸತ್ಯಾನ್ವೇಷಣೆಗಾಗಿ, ಸತ್ಯ ವನ್ನು ಹಿಂದಿರುಗಿ ಸಾಧಿಸುವದಕ್ಕಾಗಿ, ಹೊರಟಾಗ ಸಮಸ್ತ ಪ್ರಕೃತಿಯೂ ಅವನಿಗೆ ಸೇವೆಯನ್ನು ಸಲ್ಲಿಸಿತು. ಮಂಗಗಳೇ ಅವನ ಸೈನಿಕರಾದವು. ಅವನು ಸಮುದ್ರದ ಮೇಲೆ ಸೇತುವೆಯನ್ನು ಕಟ್ಟುವುದಕ್ಕೆ ಅಳಿಲುಗಳೂ ಸಹಾಯ ಮಾಡಿದವು. ಅವನು ಶತ್ರು ಗಳನ್ನು ಜಯಿಸುವದಕ್ಕಾಗಿ ಹದ್ದುಗಳು ಸಹ ಅವನಿಗೆ ಸಹಾಯ ಮಾಡಿದವು. ಕಲ್ಲು ಗಳು ಸಹ ತಮ್ಮ ಸ್ವಭಾವವನ್ನು ಮರೆತು ರಾಮನ ಸೇವೆ ಮಾಡಿದವು. ಲಂಕಾ ಪಟ್ಟಣಕ್ಕೆ ಹೋಗಲು ಸಮುದ್ರದಲ್ಲಿ ಸೇತುವೆಯನ್ನು ಕಟ್ಟುವದಕ್ಕಾಗಿ ರಾಮನು (ರಾಮನ ಸೈನ್ಯವು) ಕಲ್ಲುಗಳನ್ನು ಹಾಕಲು, ಅವು ಮುಳುಗುವದಕ್ಕೆ ಬದಲಾಗಿ "ಸತ್ಯ ಸಾಧನೆಗೆ ಸಹಾಯವಾಗಿ ನಾವು ತೇಲೋಣ" ಎಂದು ತೇಲಾಡಿದವು. ವಾಯುವೂ ಅಗ್ನಿಯೂ ಮಾರುತಗಳೂ ಝಂಝಾ ಮಾರುತಗಳೂ ರಾಮನಿಗೆ ಸಹಾಯವಾದವು. ಇಂಗ್ಲಿಷ್‌ನಲ್ಲಿ ಒಂದು ಸುಭಾಷಿತವಿದೆ: "The wind and wave are always for the brave" "ಮಾರುತವೂ ತರಂಗಗಳೂ ಧೀರರಿಗೆ ಸರ್ವದಾ ಸ್ವಂತ ರಂಗಗಳಾಗಿವೆ ಸ್ವತಂತ್ರ ರಂಗಗಳಾಗಿವೆ." ಸತ್ಯಪಥದಲ್ಲಿ ನಡೆಯುತಕ್ಕವರಿಗೆ ಆರಂಭದಲ್ಲಿ ಒದಗುವ ವಿಘ್ನಗಳನ್ನೂ ವಿರೋಧಗಳನ್ನೂ ವ್ಯಾಮೋಹಗಳನ್ನೂ ಅವರು ಎದೆಗುಂದದೆ ಮೀರಿ, ಹಿಡಿದ ಪಟ್ಟನ್ನು ಬಿಡದೆ ಧೃತಿಯಿಂದ ಮುಂದುವರಿದರೆ, ಇಡೀ ಪ್ರಕೃತಿಯೇ ಅವರನ್ನು ಸೇವಿಸುತ್ತದೆ. ನಾವು ಸತ್ಯವನ್ನು ಬಿಡದೆ ಅದರಲ್ಲಿಯೇ ನೆಲೆಯಾಗಿ ನಿಂತರೆ, ನೀವು ಜೀವಿಸುತ್ತಿರುವ ಈ ಪ್ರಪಂಚವು ಸಾಮಾನ್ಯವೇನೂ ಅಲ್ಲವೆಂದು ನಿಮಗೆ ತೋರುತ್ತದೆ. ಈ ಪ್ರಪಂಚವು ನಿಮಗೆ ಆಶ್ಚರ್ಯಕರವೂ ಅದ್ಭುತವೂ ಮಹತ್ತಾದ ಪವಾಡವೂ ಆಗಿ ಕಾಣುವದರಲ್ಲಿ ಸಂಶಯವಿಲ್ಲ. ನಿಮ್ಮ ಸತ್ಯ-ಧರ್ಮದ ಮಾರ್ಗದಲ್ಲಿ ದೇವತೆಗಳು ನಿಮ್ಮನ್ನು ಸೇವಿಸದಿದ್ದರೆ ಅವರಿಗೆ ಮಹಾ ವಿಪತ್ತೇ ಸರಿ. ಪುರುಷೋತ್ತಮನಾದ ಜಗನ್ನಾಥನನ್ನು ಪ್ರಕೃತಿದೇವಿಯು ಸರ್ವದಾ ಕಾತರದಿಂದ ಕಾದಿದ್ದು ಓಲೈಸುತ್ತಾಳೆ. ನೀವೇ ಜಗನ್ನಾಥರು, ಜಗದೀಶ್ವರರು, ವಿಶ್ವೇಶ್ವರರು, ಇಡೀ ವಿಶ್ವಕ್ಕೆ ನೀವೇ ವಲ್ಲಭರು.

೧೫೫. ಬಹುಮತದ ಬೆಂಬಲವು ಸತ್ಯಕ್ಕೆ, ನಿಜವಾದ ಬಲವಲ್ಲ ಪ್ರಮಾಣವಲ್ಲ.

(ಪಾರ್ಲಿಮೆಂಟಿನಲ್ಲಿ ಸ್ರಬಲಸಾದ ಸದಸ್ಯ)

ಲಂಡನ್ನಿನಲ್ಲಿ, ಪಾರ್ಲಿಮೆಂಟ್ ಭವನದಲ್ಲಿ ಒಮ್ಮೆ ಮಹಾ ವಾಗ್ಮಿಯಾಗಿದ್ದ ಪ್ರತಿನಿಧಿಯೊಬ್ಬನನ್ನು ಅವನ ಪ್ರತಿಪಕ್ಷದವರು ಅಪಹಾಸ್ಯ-ತಿರಸ್ಕಾರಗಳ

ಹಂಯ್ಲೊಬ್ಬಿಸಿ ಕೂರಿಸಿದಾಗ ಅವನೇನು ಹೇಳಿದ ಗೊತ್ತಿದೆಯೆ ? ಪ್ರತಿ ಪಕ್ಷದವರನ್ನು ಕುರಿತು ಯೋಗ್ಯನಾದ ಆ ಬುದ್ಧಿಶಾಲಿಯು ಹೇಳಿದ್ದೇನೆಂದರೆ, "ನಿಮ್ಮ ಕಡೆ ಹೆಚ್ಚು ಸಂಖ್ಯೆಯ ಜನರಿದ್ದರೆ ಏನಾಯಿತು ? ಅಭಿಪ್ರಾಯಗಳನ್ನು ತೂಕ ಮಾಡಬೇಕು, ಅವುಗಳನ್ನು (ಖಾಲಿ ತಲೆಗಳನ್ನೂ ಸೇರಿಸಿ) ಎಣಿಸಬಾರದು."

"Opinions ought to be weighed, they ought not to be counted."

ಖಗೋಳ ಶಾಸ್ತ್ರಜ್ಞನಾದ (ಇಟಲೀ ದೇಶಸ್ಥ) ಗೆಲಿಲಿಯೋ ಮಹಾಶಯನು (Gelileo) ಕೋಪರ್ನಿಕಸ್ಸನ (Copernicus) ಸಿದ್ಧಾಂತವನ್ನು ಲೋಕಕ್ಕೇ ಎತ್ತಿ ಹಿಡಿದಿದ್ದ ಕಾಲವೊಂದಿತ್ತು. ಈ ಭೂಮಿಯು ತಿರುಗುತ್ತಿದೆಯೇ ಹೊರತು ಸೂರ್ಯನು ತಿರುಗುವದಿಲ್ಲ–ಎಂದು ಅವನು ಹೇಳಿದನು. ಅವನ ಅಭಿಪ್ರಾಯವು ಭಯಂಕರ ಅಲ್ಪಸಂಖ್ಯೆಯದಾಗಿತ್ತು ; ಆ ಅಭಿಪ್ರಾಯವು ಆಗ ಅವನ ಒಬ್ಬನದೇ ಆಗಿತ್ತು. ಇಡಿಯ ವಿಶಾಲ ಜಗತ್ತೇ ಅವನ ವಿರುದ್ಧವಾಗಿತ್ತು ; ಸಮಸ್ತ ಬಹು ಸಂಖ್ಯಾತರೂ ಅವನ ವಿರುದ್ಧವಾಗಿದ್ದರು. ಆದರೆ ಸತ್ಯವು ಯಾವದು ಈಗ ? ಸತ್ಯವು ಅಲ್ಪಸಂಖ್ಯಾತರ ಕಡೆಗೆ ಇದೆಯೋ ? ಬಹುಸಂಖ್ಯಾತರ ಕಡೆಗೆ ಇದೆಯೋ ? ಬಹುಸಂಖ್ಯೆ, ಅಲ್ಪಸಂಖ್ಯೆ ಎನ್ನುವುದರಲ್ಲಿ ಏನಿಲ್ಲ. ಕ್ರೈಸ್ತಮತದ ರೋಮನ್ ಕ್ಯಥೋಲಿಕ್ ಸಂಪ್ರದಾಯದಲ್ಲಿ ಅನುಯಾಯಿಗಳು ಬಹುಸಂಖ್ಯೆಯಲ್ಲಿ ಇದ್ದ ಕಾಲವೊಂದಿತ್ತು ; ಆದರೆ ಬಹುಸಂಖ್ಯಾತ ಜನರು ಅದರ ಇನ್ನೊಂದು ಸಂಪ್ರದಾಯಕ್ಕೆ ಸೇರಿದ ಕಾಲವು ಬಂದಿತು. ಕ್ರೈಸ್ತಮತದಲ್ಲಿ ಹನ್ನೊಂದೇ ಜನ ಶಿಷ್ಯರಿದ್ದ ಕಾಲ ವೊಂದಿತ್ತು. ಆದರೆ ಈ ಕ್ರಿಶ್ಚಿಯಾನಿಟಿಯಲ್ಲಿ ಅಥವಾ ಚರ್ಚಿಯಾನಿಟಿಯಲ್ಲಿ ತೋರಿಕೆಯ ಬಹುಸಂಖ್ಯಾತರು ಇರುವ ಕಾಲ ಬಂದಿತು. ಬಹುಸಂಖ್ಯೆ ಮತ್ತು ಅಲ್ಪಸಂಖ್ಯೆ ಎನ್ನುವುದು ಅಷ್ಟು ಮುಖ್ಯವಲ್ಲ, ಪ್ರಯೋಜನವಿಲ್ಲ. ನಾವು ಭದ್ರವಾದ ಕಲ್ಲುಬಂಡೆಯ ಮೇಲೆ ನಿಂತಿದ್ದೇವೆ ; ಸತ್ಯದ ಮೇಲೆ ನಿಂತಿದ್ದೇವೆ ; ಸತ್ಯವು ಪ್ರಕಾಶಕ್ಕೆ ಬರುತ್ತದೆ.

೧೫೬. ಶಾಶ್ವತ ಸತ್ಯದಲ್ಲಿ ಪ್ರೇಮ

(ವಿವಾಹಿತಳಾದವನ ವಧು)

ಹೀಗೆಯೇ ನಿಮ್ಮ ಸಂಬಂಧಗಳೂ ಬಾಂಧವ್ಯಗಳೂ ಬದಲಾವಣೆಯಾಗುತ್ತಾ ಬದಲಾವಣೆಯಾಗುತ್ತಾ ಹೋಗುತ್ತವೆ. ಅವನ್ನು ಸಂತತ ಏಕರೂಪವಾಗಿ ಇಟ್ಟು ಕೊಳ್ಳುವದು ಸಾಧ್ಯವಲ್ಲ. ಆ ದಿಶೆಯಲ್ಲಿ ನಿಮಗೇನಾದರೂ ಅತ್ಯಾಸಕ್ತಿ ಇದ್ದರೆ ಬಿಟ್ಟು ಬಿಡಿ.

ಪರ್ವತಗಳ ಮೇಲಕ್ಕೆ ನದಿಗಳು ಹರಿಯಲೂ ಬಹುದು.
ಗಾಳಿಗಳು ಕೆಳಮುಖವಾಗಿ ಬೀಸಲೂ ಬಹುದು.
ಬೆಂಕಿಯು ತಂಪಾದ ಕಿರಣಗಳ ಹೊರ ಸೂಸಬಹುದು,
ರವಿಯು ತಾ ಕತ್ತಲೆಯ ಹೊರಚೆಲ್ಲಲೂ ಬಹುದು.

ಆದರೆ ಪ್ರಾಪಂಚಿಕ ಸಂಬಂಧಗಳ ಅಸ್ಥಿರತೆಯು ಮಾತ್ರ ವ್ಯರ್ಥವಾಗುವದಿಲ್ಲ ಅಥವಾ ನಿಷ್ಫಲವಾಗುವದಿಲ್ಲ. ಇದೇ ಪ್ರಕೃತಿ ನಿಯಮ. ಇದು ನಿಮಗೆ ಒಪ್ಪಿಗೆಯಾಗದೆ, ನೀವು ಬೇರೆ ಬಗೆಯಿಂದ ತಿಳಿದಿದ್ದರೆ, ಅದು ನಿಮ್ಮ ತಪ್ಪು ತಿಳಿವಳಿಕೆ. ಹೇಗೆ ಒಂದು ನದಿಯಲ್ಲಿ ಬೇರೆ ಬೇರೆ ದಿಕ್ಕುಗಳಿಂದ ನೀರಿನ ಮೇಲೆ ತೇಲಿ ಬರುವ ಮರದ ತುಂಡು ಗಳು ಕ್ಷಣಕಾಲ ಸಂಧಿಸಿ, ಸ್ವಲ್ಪಕಾಲ ಒಂದರೊಡನೆ ಒಂದು ಸೇರಿದ್ದರೂ ಬಲವಾದ ಗಾಳಿಯೂ ಅಲೆಯೂ ಬಂದು ಒಂದೊಂದು ದಿಮ್ಮಿಯನ್ನು ಒಂದೊಂದು ದಿಕ್ಕಿಗೆ ಕೊಚ್ಚಿಕೊಂಡು ಹೋಗುತ್ತವೆಯೋ ಹಾಗೆ ನಮ್ಮ ಕೌಟುಂಬಿಕ ಸಂಬಂಧಗಳಿವೆ. ತೆರೆಗಳಿಂದ ಕೊಚ್ಚಿ ಒಯ್ಯಲ್ಪಟ್ಟ ಆ ಮರದ ಕೊರಡುಗಳು ಆ ನದಿಯಲ್ಲಿ ತೇಲಿ ಹೋಗುವಾಗ ಎಲ್ಲಿಯೋ ಯಾವಾಗಲೋ ಒಂದರೊಡನೊಂದು ಮತ್ತೆ ಸೇರಬಹುದು. ಆದರೆ ಪುನಃ ಸ್ವಲ್ಪ ಕಾಲದಲ್ಲಿ ಅವು ಅಗಲಲೇ ಬೇಕಾಗುತ್ತದೆ. ನಿಮ್ಮ ಇಡೀ ಜೀವನದಲ್ಲಿ ಹೇಗೋ ಹಾಗೆಯೇ ನಿಮ್ಮ ನಿತ್ಯ ಜೀವನದಲ್ಲಿಯೂ ತಂದೆ, ತಾಯಿ, ಅಣ್ಣ ತಮ್ಮಂದಿರು, ಅಕ್ಕ ತಂಗಿಯರು ಯಾವಾಗಲೂ ಕೂಡಿರುವದಿಲ್ಲ. ಊಟಕ್ಕಾಗಿಯೋ ಮಾತಿಗಾಗಿಯೋ ಅವರು ಕೆಲವು ನಿಮಿಷಗಳು ಕೂಡಿದ್ದು, ತಮ್ಮ ತಮ್ಮ ಬೇರೆ ಬೇರೆ ಕೋಣೆಗಳಿಗೋ ಆಫೀಸುಗಳಿಗೋ ಉದ್ಯೋಗಗಳಿಗೋ ಹೋಗುತ್ತಾರೆ. ಪ್ರತಿಯೊಂದು ಗೃಹಕೃತ್ಯದ ಕೌಟುಂಬಿಕ ಸಣ್ಣ ವೃತ್ತದಲ್ಲಿ ನಿತ್ಯವೂ ಕಾಣಬಹುದಾದ ಯೋಗ ವಿಯೋಗಗಳನ್ನೇ ವಿಶಾಲವಾದ ಜಗಜ್ಜೀವನದಲ್ಲಿ ಕಾಣುತ್ತೇವೆ. ನಿಮಗೆ ಅತ್ಯಂತ ಪ್ರಿಯರಾದವರೊಡನೆಯೂ ನೀವು ಎಷ್ಟೇ ಪ್ರಯತ್ನಪಟ್ಟರೂ ಎಂದೆಂದಿಗೂ ಕೂಡಿರುವದು ಸಾಧ್ಯವಲ್ಲ. ಪ್ರಕೃತಿ ನಿಯಮವು ಇಷ್ಟು ಉಗ್ರವಾಗಿರುವಾಗ ಮುಗ್ಧರಾದ ಮಕ್ಕಳಂತೆ ಏಕೆ ಆಡಬೇಕು ? ಈ ಸಂಬಂಧಗಳೆಲ್ಲಾ ಇಷ್ಟು ಅಸ್ಥಿರವೂ ಅವಿಶ್ವಸನೀಯವೂ ಆಗಿರುವದರಿಂದ ಯಾವದು ಎಂದೆಂದಿಗೂ ಇರುವದೋ ಸ್ಥಿರವಾಗಿಯೂ ಶಾಶ್ವತವಾಗಿಯೂ ಇರುವದೋ ಅದರ ಚಿಂತೆಯನ್ನು ಹೆಚ್ಚಾಗಿ ಏಕೆ ಹಚ್ಚಿಕೊಳ್ಳಬಾರದು ? ಯಾವದನ್ನು ನೀವು ಎಂದೂ ಬಿಟ್ಟಿರಲಾರಿರೋ ಯಾವದರಿಂದ ನೀವು ಬೇರೆ ಅಲ್ಲವೋ ಯಾವದು ನಿಮ್ಮ ಸ್ವರೂಪವೇ ಆಗಿದೆಯೋ ಅದರ ವಿಷಯದಲ್ಲಿ ಏಕೆ ಹೆಚ್ಚು ಆಲೋಚನೆಯನ್ನೂ ವಿಚಾರವನ್ನೂ ಮಾಡಿ, ಅದನು ಸಾಧಿಸುವದಕ್ಕೂ ಅನುಭವ ಮಾಡುವದಕ್ಕೂ ಪ್ರಯತ್ನ ಮಾಡಬಾರದು ? ತೋರಿ ಹಾರುವ ಸುಳ್ಳು ಸಂಬಂಧಗಳಿಗಾಗಿ ಎಂದೆಂದಿಗೂ ಇರುವ ಸತ್ಯವನ್ನೂ ಶಾಶ್ವತ ತತ್ತ್ವವನ್ನೂ ಏಕೆ ಬಲಿಕೊಡಬೇಕು ?

ಇಂಡಿಯಾದೇಶದಲ್ಲಿ ಹೊಸದಾಗಿ ಮದುವೆಯಾದ ಒಬ್ಬ ತರುಣಿಯಿದ್ದಳು, ಒಂದು ದಿನ ಆಕೆಯು ತನ್ನ ಅತ್ತೆಯೊಡನೆಯೂ ಅತ್ತಿಗೆಯೊಡನೆಯೂ ಕುಳಿತಿದ್ದಳು. ಅವರು ಬಹಳ ವಿನೋದವಾಗಿ ಮಾತನಾಡುತ್ತಿದ್ದರು. ಆ ನೂತನ ವಧುವಿನ ಪತಿಯು ಆ ಸಮಯದಲ್ಲಿ ಆ ಸನ್ನಿವೇಶದಲ್ಲಿರಲಿಲ್ಲ. ಯಾವದೋ ವಿಷಯವನ್ನು ಕುರಿತು

ಮಾತನಾಡುತ್ತಾ ಅತ್ತಿಗೆಯು ಆ ವಧುವಿನ ಗಂಡನನ್ನು (ಅಂದರೆ ತನ್ನ ತಮ್ಮನನ್ನು) ಆಕ್ಷೇಪಿಸಿದಳು, ದೂಷಿಸಿದಳು. ಆ ಸಂದರ್ಭದಲ್ಲಿ ರಾಮನೂ ಅಲ್ಲಿಯೇ ಇದ್ದನು. ರಾಮನು ಆ ವಧುವಿನ ಮುಖದಿಂದ ಹಿತವೂ ವಿಹಿತವೂ ಮಧುರವೂ ಆದ ಈ ಮಾತನ್ನು ಕೇಳಿದನು: "ಅತ್ತಿಗೆ! ನೀವು ನಿಮ್ಮ ಸಹೋದರರೊಡನೆ ಇನ್ನು ಹೆಚ್ಚೆಂದರೆ ನಾಲ್ಕೆಂಟು ದಿನಗಳು ಇರಬಹುದು. ನಾನಾದರೋ ಆ ನನ್ನ ದೇವರೊಡನೆ ಜೀವಮಾನವೆಲ್ಲಾ ಕೂಡಿರಬೇಕು, ಸ್ನೇಹದಿಂದಿರಬೇಕು, ಅವರನ್ನು ಭಕ್ತಿಯಿಂದ ಸೇವಿಸಿ ಅವರ ಪ್ರೇಮಾನುಗ್ರಹಕ್ಕೆ ಪಾತ್ರಳಾಗಬೇಕು. ಅವರಲ್ಲಿ ನಾನು ಎಳ್ಳಷ್ಟೂ ದೋಷವನ್ನು ಎಣಿಸಲಾರೆ. ಅವರು ನನಗೆ ಸಕಲ ಸದ್ಗುಣಸಂಪನ್ನರಾದ ಪತಿದೇವರು, ಮಹಾಪ್ರಭುಗಳು. ಬೇರೆ ಯಾರು ಅವರಲ್ಲಿ ದೋಷವನ್ನು ಹೇಳಿದರೂ ನನ್ನ ಪ್ರೇಮವು ಸಹಿಸಲಾರದು. ನೀವು ನನಗಿಂತಲೂ ಅವರಿಗಿಂತಲೂ ಹಿರಿಯರು. ಆದ್ದರಿಂದ ನೀವು ಅವರ ದೋಷವನ್ನು ನನ್ನ ಎದುರಿಗೆ ಹೇಳಬೇಡಿ. ನಾಲ್ಕು ದಿನಗಳು ಜೊತೆಗಿರಬಹುದಾದ ನಿಮಗಾಗಿ, ಎಂದೆಂದಿಗೂ ನನ್ನೊಡನೆ ಎಡೆಬಿಡದೆ ನನ್ನ ಆತ್ಮನಾಗಿ ಅತ್ಯಂತ ಪ್ರೇಮದಿಂದಿರಬೇಕಾದ ನನ್ನ ಪರಮಾತ್ಮನೊಡನೆ—ತಿಳಿಯದ ಬಾಲಕಿಯಂತೆ—ನಾನು ಮನಸ್ಸನ್ನು ಕೆಡಿಸಿಕೊಳ್ಳಲಾರೆ. ದೋಷವನ್ನು ಕಂಡವರಲ್ಲಿ ಪ್ರೇಮವುಕ್ಕುವುದಿಲ್ಲ. ಪ್ರೇಮ ಉಕ್ಕಿದಲ್ಲಿ ದೋಷವು ಕಾಣುವದಿಲ್ಲ. ನನಗೆ ಶಾಶ್ವತ ಪ್ರೇಮವೂ ಶಾಶ್ವತ ಸಂಗವೂ ಸೇವೆಯೂ ಮಾತ್ರ ಬೇಕು. ಆ ಶಾಶ್ವತ ವಸ್ತುವಿಗಾಗಿಯೂ ಶಾಶ್ವತ ಪ್ರೇಮಕ್ಕಾಗಿಯೂ ಮಿಕ್ಕ ಎಲ್ಲವನ್ನೂ ತ್ಯಾಗ ಮಾಡುತ್ತೇನೆ; ಬಲಿಗೊಡುತ್ತೇನೆ. ಅತ್ತಿಗೆ! ಕ್ಷಮಿಸಿ, ನೀವು ನನ್ನ ಪ್ರೇಮದ ಪರೀಕ್ಷೆಗಾಗಿಯೂ ನನ್ನಲ್ಲಿ ಈ ಉನ್ನತ ಭಾವನೆಯನ್ನು ಕೆರಳಿಸುವದಕ್ಕಾಗಿಯೂ ಈ ಮಾತನ್ನು ಹೇಳಿರುವಂತೆ ತಿಳಿಯುತ್ತೇನೆ. ನೀವು ನನಗಿಂತಲೂ ದೊಡ್ಡವರು, ತಿಳಿದವರು, ಪೂಜ್ಯರು. ನೀವು ಈ ನನ್ನ ಭಾವನೆಯನ್ನು ಒಪ್ಪಿಕೊಂಡು ಆಶೀರ್ವದಿಸುತ್ತೀರೆಂದು ನಿಮಗೆ ನಮಸ್ಕರಿಸುತ್ತೇನೆ" ಎಂದು ಆ ನವವಧುವು ವಿವೇಕಿಯಾದ ಮಹಾ ಪ್ರೌಢೆಯಂತೆ, ಧರ್ಮಾತ್ಮರು ತಲೆದೂಗುವ ರೀತಿಯಲ್ಲಿ, ಧರ್ಮದೇವತೆಯೇ ಮೆಚ್ಚಿ ಕೃಪಾವರ್ಷಣ ಮಾಡುವಂತೆ, ಅಪ್ರಸ್ತುತರೂಪವಾದ ಮಾತನ್ನಾಡಿದಳು.

ಆ ಬಾಲಕಿಗಿದ್ದಷ್ಟು ವಿವೇಕವಾದರೂ ನಮಗೆ ಬೇಕು. ಆಕೆಯ ಮಾತಿನಲ್ಲಿ ಶಾಶ್ವತ ವಸ್ತುವಿಗಾಗಿ ಆಕೆಯು ಎಷ್ಟು ಬೆಲೆಯನ್ನೂ ಮಹತ್ವವನ್ನೂ ಕೊಟ್ಟಿದ್ದಾಳೆ ಎಂಬದನ್ನು ನಾವು ಗಮನಿಸಬೇಕು. ಸತಿಗೆ ಪತಿಯೇ ಪರದೈವವೆಂಬ ಧರ್ಮತತ್ತ್ವವನ್ನು ಗೌರವಿಸಿ, ಆಕೆಯು ನಿತ್ಯ ಸತ್ಯವಾದ ಪರಮಾತ್ಮನ ಸ್ಥಾನದಲ್ಲಿ ಪತಿಯನ್ನಿರಿಸಿ ಶಾಶ್ವತವಾದ ವಸ್ತುವಿನಲ್ಲಿ ಎಲ್ಲಾ ವಿವೇಕಿಗಳಿಗೂ ಇರಬೇಕಾದ ಅಚಲವೂ ದೃಢವೂ ನೈಜವೂ ತೀವ್ರವೂ ಆದ ಭಾವನೆಯನ್ನು ವ್ಯಕ್ತಮಾಡಿದ್ದಾಳೆ. ಪ್ರಾಪಂಚಿಕವಾದ ಯಾವ ಸಂಬಂಧವೂ ಸ್ಥಿರವಲ್ಲ. ಆದರೆ ನಿಮ್ಮ ನಿಜವಾದ ಆತ್ಮನೊಡನೆ ನೀವು ನಿಮ್ಮ

ಜೀವಮಾನವನ್ನೆಲ್ಲಾ ಕಳೆಯಬೇಕು. ಆತ್ಮ ಶಾಶ್ವತವಾದುದು. ಅದರ ಸಂಬಂಧವನ್ನು ಕಡಿದು ಕೊಳ್ಳುವದಾಗಲೀ ಅದರಿಂದ ಬೇರ್ಪಡುವದಾಗಲೀ ಸಾಧ್ಯವಿಲ್ಲ. ತೋರಿ ಹಾರುವ ವರ್ತಮಾನ ಕಾಲದ ವಸ್ತುಗಳಿಗಾಗಿ ನಿಜವಾದ ಆತ್ಮನೊಡನೆ ನೀವು ಕಡಿದು ಕೊಳ್ಳಬಾರದು. ನಿಮ್ಮನ್ನು ನೀವು ಆ ಚಂಚಲ ವಸ್ತುಗಳಿಗಾಗಿ ಏಕೆ ಮಾರಿಕೊಳ್ಳು ತ್ತೀರಿ? ನಿಮ್ಮನ್ನು ನೀವೇ ಕೀಳ್ಮಾಡಿ, ಅಲ್ಪವಾಗೆಣಿಸುವ, ತೃಣೀಕರಿಸುವ ಜೀವನ ವನ್ನು ಏಕೆ ನಡೆಸುತ್ತೀರಿ ? ನಿಮ್ಮೊಳಗಿನ ದೇವರನ್ನು ಏಕೆ ಅನುಭವಮಾಡುವದಿಲ್ಲ ? ನಿಮ್ಮ ನಿಜವಾದ ಆತ್ಮನಿಂದ ಏಕೆ ಒಡೆದುಕೊಳ್ಳುತ್ತೀರಿ ? ಸಾಕಷ್ಟು ವಿವೇಕಿಗಳಾಗಿರಿ.

೧೫೭. ನಿತ್ಯ ಜೀವನದಲ್ಲಿ ವೇದಾಂತ

(ರಾಮನು ಬಾಲಕನಾಗಿದ್ದಾಗ)

ರಾಮನು ಕಾಲೇಜಿನಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕನಾಗಿದ್ದಾಗ ತೊಡಕಾದ ಗಣಿತ ಪ್ರಶ್ನೆಗಳನ್ನು ಎಷ್ಟು ಬೇಗ ಎಷ್ಟು ಸುಲಭವಾಗಿ ಬರೆಯುತ್ತಿದ್ದನೋ ಅಷ್ಟು ಬೇಗ ಅಷ್ಟು ಸುಲಭವಾಗಿ ಅದನ್ನು ಬಿಡಿಸಿ, ಸರಿಯಾದ ಉತ್ತರವನ್ನು ಬರೆದಿಡುತ್ತಿದ್ದನು. ಇದು ಹೇಗೆ ಸಾಧ್ಯವಾಯಿತೆಂದರೆ, ಗಣಿತದ ಬೇರೆ ಬೇರೆ ನಿಯಮಗಳನ್ನು ಚೆನ್ನಾಗಿ ಕಲಿತು, ಅವುಗಳನ್ನು ಬೆರಳ ತುದಿಯಲ್ಲಿಟ್ಟುಕೊಂಡಂತೆ ಅಭ್ಯಾಸಮಾಡಿದ್ದ ರಿಂದ ಎಂಥಾ ಸಮಸ್ಯೆಗಳನ್ನಾದರೂ ನಿಮಿಷ ಮಾತ್ರದಲ್ಲಿ ಬಿಡಿಸುವದು ಸುಲಭ ವಾಯಿತು. ರಾಮನ ಅಭ್ಯಾಸವೆಷ್ಟಿತ್ತೆಂದರೆ ಹದಿನೆಂಟು ಅಂಕೆಗಳನ್ನು ಹದಿನೇಳು ಅಂಕೆಗಳಿಂದ ಒಂದು ನಿಮಿಷದಲ್ಲಿ ಗುಣಿಸಿ, ಅದರ ಗುಣಲಬ್ಧವನ್ನು ಒಂದೇ ಸಾಲಿನಲ್ಲಿ ಹೇಳುತ್ತಿದ್ದನು. ಹಾಗೆ ನಿಮ್ಮ ದೇವಾಲಯವೂ ದೇವರೂ ಹೃದಯದಲ್ಲಿ ಮಾತ್ರವಲ್ಲದೆ ಬೀದಿಯಲ್ಲಿಯೂ ಭೋಜನಶಾಲೆಯಲ್ಲಿಯೂ ದಿವಾನಖಾನೆಯಲ್ಲಿಯೂ ಶಯ್ಯಾಗೃಹದಲ್ಲಿಯೂ ಓದುವ ಕೋಣೆಯಲ್ಲಿಯೂ ಇರಬೇಕು. ಎಲ್ಲೆಡೆಯಲ್ಲಿಯೂ ಸತ್ಯವನ್ನು ಕಾಣಬೇಕು.

ರಾಮನು ವಿದ್ಯಾರ್ಥಿಯಾಗಿದ್ದಾಗ ಒಂದು ದಿನ ಪುಸ್ತಕವನ್ನು ಓದುತ್ತಾ ಬೀದಿಯಂಚಿನಲ್ಲಿ ಹೋಗುತ್ತಿದ್ದನು. ಅದನ್ನು ನೋಡಿದ ಒಬ್ಬ ಸಂಪನ್ನ ಮನುಷ್ಯನು ಬಂದು ತಮಾಷೆಯಾಗಿ "ಏನಯ್ಯಾ! ಬೀದಿಯಲ್ಲಿ ನಡೆಯುವಾಗ ಓದುವದೇನಯ್ಯ? ಇದೇನು ಪಾಠಶಾಲೆಯೆ ? ನಿನ್ನ ಪುಸ್ತಕವನ್ನು ಎಸೆ." ಎಂದನು. ರಾಮನು ಶಾಂತವಾಗಿ "ಇಡೀ ಜಗತ್ತೇ ನನ್ನ ಶಾಲೆ" ಎಂದು ಉತ್ತರಿಸಿದನು. ನಿಮ್ಮ ಶಾಲೆಯು ಯಾವದೆಂಬದನ್ನು ಈಗ ರಾಮನು ಚೆನ್ನಾಗಿ ಮನಗಾಣಿಸಿದ್ದಾನೆ.

ನಿತ್ಯಜೀವನದಲ್ಲಿ ವೇದಾಂತವನ್ನು ಬಳಸಿಕೊಳ್ಳದಿದ್ದರೆ ಅದರ ಪ್ರಯೋಜನ ವೇನು ? ಬೀರುಗಳಲ್ಲಿಟ್ಟು ಹುಳುಗಳು ತಿನ್ನುತ್ತಿರುವ ವೇದಾಂತ ಪುಸ್ತಕಗಳಿಂದ ಉಪಯೋಗವಿಲ್ಲ ; ಅದನ್ನು ಬದುಕಿನಲ್ಲಿ ಬಾಳಬೇಕು.

ವೇದಾಂತವನ್ನು ಜ್ಞಾನಾಗ್ನಿ ಎಂದು ಕರೆಯುತ್ತಾರೆ. ಭೌತಿಕವೂ ಲೌಕಿಕವೂ

ಆದ ಅಗ್ನಿಯು ಆಹಾರವನ್ನು ಪಾಕಮಾಡಿ ನಮ್ಮ ಹಸಿವೆಯ ಬಾಧೆಯನ್ನು ಕಳೆಯುತ್ತದೆ ; ಚಳಿಯ ತೊಂದರೆಯನ್ನೂ ತಪ್ಪಿಸುತ್ತದೆ. ಜ್ಞಾನಾಗ್ನಿಯು ನಿಮ್ಮ ಶೋಕ ಮೋಹಗಳ ಸಂಕಷ್ಟವನ್ನು ಪರಿಹರಿಸದಿದ್ದರೆ ವ್ಯವಹಾರಕ್ಕಾಗಿ ಉಪಯೋಗವಾಗುವ ಸಾಮಾನ್ಯವಾದ ಬೆಂಕಿಗಿಂತಲೂ ವೇದಾಂತವು ಕಡೆಯಾಗುತ್ತದೆ. ಅದು ನಿಮಗೆ ಸುಖವನ್ನು ಕೊಡದಿದ್ದರೆ, ತೊಲಗಿ ಹೋಗಲಿ, ಅದರ ಚಿಂತನೆಯಿಂದ ಪ್ರಯೋಜನವಾದರೂ ಏನು ?

೧೫೪. ಸರಿಯಾಗಿ ಕಲಿಯುವ ರೀತಿ

(ಬಾಲ ಯುಧಿಷ್ಠಿರ)

ಮುಂದೆ ಭಾರತದೇಶದ (ಇಂಡಿಯಾ ದೇಶದ) ಚಕ್ರವರ್ತಿಯಾದ ಯುಧಿಷ್ಠಿರನ ಹಿಂದಿನ ಬಾಲ್ಯದ ಒಂದು ಕಥೆ ಇದೆ. ಅವನಿಗೆ ಅನೇಕ ಜನ ಸಹೋದರರಿದ್ದರು. ಅವರೊಡನೆ ಅವನು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದನು. ಒಂದು ದಿನ ವಿದ್ಯಾರ್ಥಿಗಳನ್ನು ಪರೀಕ್ಷೆಮಾಡುವದಕ್ಕಾಗಿ ಶಾಲಾಧ್ಯಕ್ಷರು ಬಂದರು. ಯುಧಿಷ್ಠಿರನ ತಮ್ಮಂದಿರೆಲ್ಲಾ ತಾವು ತಾವು ಕಲಿತ ಪಾಠಗಳನ್ನು ಪರೀಕ್ಷಕರಿಗೆ ಒಪ್ಪಿಸಿದರು. ಅದುವರೆಗೆ ಸುಮ್ಮನೆ ನಿಂತಿದ್ದ ಯುಧಿಷ್ಠಿರನನ್ನು ಪ್ರಶ್ನೆಮಾಡಿದರು. ಅವನು ಸ್ವಲ್ಪವೂ ಸಂಕೋಚವಿಲ್ಲದೆ "ನಾನು ಅಕ್ಷರಗಳನ್ನೆಲ್ಲಾ ಕಲಿತು, ಮೊದಲನೆಯ ವಾಕ್ಯವನ್ನು ಮಾತ್ರ ಕಲಿತಿದ್ದೇನೆ," ಎಂದು ಸಂತೋಷ ಧ್ವನಿಯಲ್ಲಿ ಹೇಳಿದನು. ಉಪಾಧ್ಯಾಯರು ಅಸಮಾಧಾನದಿಂದ "ಇಷ್ಟು ದಿನಗಳಿಗೆ ನೀನು ಕಲಿತಿರುವದು ಇಷ್ಟೇಯೇ? ಇನ್ನೇನೂ ಕಲಿತಿಲ್ಲವೆ ?" ಎಂದು ಕೇಳಿದರು. ಅದಕ್ಕೆ ಯುಧಿಷ್ಠಿರನು ಸ್ವಲ್ಪ ಶಂಕೆಯಿಂದ ಎರಡನೆಯ ವಾಕ್ಯವನ್ನೂ ಹೇಳಿದನು. ಮುಂದೆ ಮಹಾರಾಜನಾಗುವ ಬಾಲಕನು ಮಂದಬುದ್ಧಿಯೂ ಮಂದಗಾಮಿಯೂ ಆಗದೆ ತೀಕ್ಷ್ಣಮತಿಯೂ ತೀವ್ರಗಾಮಿಯೂ ಆಗಬೇಕೆಂದು ಅಪೇಕ್ಷಿಸಿ ಶ್ರಮಪಡುತ್ತಿದ್ದುದರಿಂದ ಆ ಉಪಾಧ್ಯಾಯರಿಗೆ ಯುಧಿಷ್ಠಿರನ ಜಡತೆಯನ್ನು ಕಂಡು ಬಹಳ ಉದ್ರೇಕ ಉಂಟಾಯಿತು. ದಂಡವನ್ನು ಬಳಸಿ ದಂಡನೆಯನ್ನು ಮಾಡದಿರುವದೆಂದರೆ ಮಕ್ಕಳ ಬಾಳನ್ನೇ ದಂಡ ಮಾಡಿದಂತೆ (To spare the rod was to spoil the child)— ಎಂಬ ನೀತಿಯನ್ನು ಮೆಚ್ಚಿಕೊಂಡಿದ್ದ ಉಪಾಧ್ಯಾಯರು ಬಹಳ ಉಗ್ರಭಾವ ತಾಳಿದರು; ಮಕ್ಕಳನ್ನು ಶಿಕ್ಷಿಸುವದಕ್ಕೆ—ರೂಪಿಸುವದಕ್ಕೆ ಶಿಕ್ಷಕನು ಎಷ್ಟು ಹೆಚ್ಚು ಕೋಲುಗಳನ್ನು—ಬೆತ್ತಗಳನ್ನು— ಮುರಿದರೆ ಮಕ್ಕಳು ಅಷ್ಟು ಹೆಚ್ಚಾಗಿ ಸುಧಾರಿಸುತ್ತಾರೆಂದು ಮಹಾ ಮಹಾ ಪ್ರಾಧ್ಯಾಪಕರುಗಳೂ ಅಭಿಪ್ರಾಯಪಡುವದುಂಟು. ಇದೇ ಮನೋಭಾವದಿಂದ ಆ ಉಪಾಧ್ಯಾಯರು ಯುಧಿಷ್ಠಿರನನ್ನು ಮನಸ್ಸಿಗೆ ಬಂದಂತೆ ಚೆನ್ನಾಗಿ ಹೊಡೆದರು ; ಬೆತ್ತದಿಂದ ಬಲವಾಗಿ ಬಲಿಹಾಕಿದರು. ಅವರು ಸ್ವಲ್ಪ ಹೊತ್ತು ಹೊಡೆದು ದಣಿದರೂ ಯುಧಿಷ್ಠಿರನು ಸ್ಥಿರವಾಗಿಯೂ ಶಾಂತವಾಗಿಯೂ

ನಿರ್ವಿಕಾರವಾಗಿಯೂ ನಿರ್ಭಯವಾಗಿಯೂ ನಿಂತಿರುವದನ್ನು ನೋಡಿ ಅವರಿಗೆ ಆಶ್ಚರ್ಯವಾಯಿತು. ಸಮಾಧಾನ—ಸಂತೋಷಗಳಿಂದಿದ್ದ ಆ ಬಾಲಕನ ಸುಂದರವಾದ ಮುಖವನ್ನು ನೋಡಿ—ಕಲ್ಲೂ ಕರಗುವಂತಿರಲು—ಆ ಕಠಿಣ ಮನಸ್ಕರಾದ ಗುರುಗಳಿಗೂ ಮನಸ್ಸು ಕರಗಿ ಕರುಣೆ ಉಕ್ಕಿತು. ಅವರು ಆಲೋಚಿಸಿದರು: "ಏನಿದು ಆಶ್ಚರ್ಯ! ಒಂದು ದಿನ ನನ್ನನ್ನೂ ಈ ಭಾರತ ದೇಶವನ್ನೂ ಆಳುವ ಈ ಮಹಾರಾಜ ಒಂದು ಮಾತಿನಿಂದ ನನ್ನ ಕೆಲಸವನ್ನೇ ಕಿತ್ತೊಗೆಯುವ ಅಧಿಕಾರವುಳ್ಳವನಾದರೂ ನನ್ನ ಎಲ್ಲಾ ಕ್ರೌರ್ಯವನ್ನೂ ಸಹಿಸಿಕೊಂಡು ಇಷ್ಟು ಶಾಂತನಾಗಿದ್ದಾನೆ? ಇವನ ಸಹೋದರರನ್ನು ಹಿಂದೊಮ್ಮೆ ಹೀಗೆಯೇ ಶಿಕ್ಷಿಸಿದಾಗ ಎಲ್ಲರೂ ಕ್ರುದ್ಧರಾಗಿದ್ದರು; ಅವರಲ್ಲಿ ಒಬ್ಬ ದುಷ್ಟನಂತೂ ನನ್ನ ಬೆತ್ತವನ್ನು ಕಿತ್ತುಕೊಂಡು ನನ್ನನ್ನೇ ತಿರುಗಿ ಹೊಡೆದು ಬಿಟ್ಟಿದ್ದನು. ಇವನಾದರೋ ನನ್ನ ಹುಚ್ಚು ಸಿಟ್ಟನ್ನೆಲ್ಲಾ ಸಹಿಸಿಕೊಂಡು ಸಂತೋಷದಿಂದ ಶಾಂತವಾಗಿಯೇ ಇದ್ದಾನೆ. ಏನು ಕಾರಣವಿರಬಹುದು?" ಎಂದು ಯುಧಿಷ್ಠಿರನು ಕೈಯಲ್ಲಿ ಹಿಡಿದಿದ್ದ ಪುಸ್ತಕದಲ್ಲಿ ಅವನು ಕಲಿತಿದ್ದ ಮೊದಲನೆಯ ವಾಕ್ಯವನ್ನು ಆ ಮಾಸ್ತರನು ನೋಡಿದನು.

ಇಂಡಿಯಾದಲ್ಲಿ ಮಕ್ಕಳಿಗೆ ಕಲಿಸುವ ಬಾಲಬೋಧೆಗಳು 'ನಾಯಿಗಳಿಂದಲೂ ಬೆಕ್ಕುಗಳಿಂದಲೂ ಪ್ರಾರಂಭವಾಗುವದಿಲ್ಲ. ಪ್ರಾಥಮಿಕ ಪುಸ್ತಕಗಳು ದೇವರ ವಿಚಾರವಾದ ಪಾಠದಿಂದಲೂ ನೀತಿ–ಧರ್ಮಗಳ ಪಾಠದಿಂದಲೂ ಆರಂಭವಾಗುತ್ತವೆ. ಆ ಸಂಸ್ಕೃತಭಾಷೆಯ ಪುಸ್ತಕದ ಮೊದಲನೆಯ ಪಾಠದಲ್ಲಿ "ಮನಸ್ಸಿನ ಸಮಾಧಾನವನ್ನೂ ಪ್ರಸನ್ನತೆಯನ್ನೂ ಎಂದೂ ಕಳೆದುಕೊಳ್ಳಬೇಡಿ; ಎಂದೂ ರೇಗಬೇಡಿ; ಉದ್ವಿಗ್ನರಾಗಬೇಡಿ: ಸಿಟ್ಟಾಗಬೇಡಿ..." ಎಂದಿತ್ತು. ಎರಡನೇ ಪಾಠದಲ್ಲಿ "ಸತ್ಯಂ ವದ; ಯಾವಾಗಲೂ ನಿಜವನ್ನೇ ಹೇಳು; ಸುಳ್ಳಾಡಬೇಡ" ಎಂದು ಬರೆದಿತ್ತು. ಉಪಾಧ್ಯಾಯನು ಒಂದು ದೃಷ್ಟಿಯಿಂದ ಮೊದಲನೇ ವಾಕ್ಯವನ್ನೂ ಇನ್ನೊಂದು ದೃಷ್ಟಿಯಿಂದ ಆ ಬಾಲಕನ ಶಾಂತವೂ ಪ್ರಸನ್ನವೂ ಆದ ಮುಖವನ್ನೂ ನೋಡಿದನು. ಆ ಸುಂದರವೂ ಸಂತೋಷಿಯೂ ಆದ ಮುಖವು "ಎಂದೂ ಸಿಟ್ಟಾಗಬೇಡ" ಎಂಬ ಬುದ್ಧಿವಾದದ ಪ್ರತ್ಯಕ್ಷ ಅವತಾರವೂ ಘನೀಭೂತ ದೃಷ್ಟಾಂತವೂ ಆಗಿತ್ತು.

ಆ ಮಾಸ್ತರಿಗೆ ಆ ಪಾಠವು ಅದುವರೆಗೆ ಬರಿ ಬಾಯಿಪಾಠವಾಗಿತ್ತು. ಆ ಉಪದೇಶವನ್ನು ಅವರು ಯಾವಾಗಲೂ ಮೀರುತ್ತಿದ್ದರು; ಆದ್ದರಿಂದ ಅದು ಗಿಳಿಪಾಠವಾಗಿತ್ತು, ಅದು ಎಂದೂ ನಿಲುಕದಿರುವ ಆದರೆ ಎಂದೆಂದಿಗೂ ಕಣ್ಣೆದುರಿಗಿದ್ದು ಕಾಡುತ್ತಿರುವ ಆದರ್ಶ ಮಾತ್ರವಾಗಿತ್ತು. ಆ ಮಾತನ್ನು ಗಿಳಿಯಂತೆ ಕಲಿತು ಇನ್ನೊಬ್ಬರೆದುರು ಆಡಿತೋರಿಸುವದಕ್ಕೆ ಮಾತ್ರವಲ್ಲ, ಬಾಳಿನಲ್ಲಿ ರೂಢಿಗೆ ತರಬಹುದು–ಎಂದು ಅವರಿಗೆ ಇವತ್ತು ಹೊಳೆಯಿತು; ತಮ್ಮ ಸ್ವಂತ ಜ್ಞಾನವೇ ಎಷ್ಟು ಅಲ್ಪವಾದುದು ಎನ್ನುವದೂ ತಿಳಿಯಿತು. ಆ ಬಾಲಕನು ಆ ನೀತಿಬೋಧೆಯನ್ನು

ಸರಿಯಾಗಿ ಅರ್ಥಮಾಡಿಕೊಂಡು ಚೆನ್ನಾಗಿ ಅಭ್ಯಾಸಮಾಡಿರುವಾಗ, ಅವನ ಗುರುಗಳಾದ ತಾವು ಆ ಮೊದಲನೆಯ ಮಾತನ್ನೇ ನಿಜವಾಗಿ ಅರಿತಿಲ್ಲವಲ್ಲಾ ಎಂದು ಅವರಿಗೆ ತುಂಬಾ ಸೂಚಿಕೆಯಾಯಿತು. ಒಂದು ಒಳ್ಳೆಯ ವಿಷಯವನ್ನು ಕಲಿಯುವದೆಂದರೆ, ಅದರ ಅರ್ಥವನ್ನು ವಿಚಾರಿಸಿ, ಭಾವಿಸಿ, ಅಭ್ಯಾಸ ಮಾಡಿ, ತನ್ನ ಪ್ರತಿನಿಮಿಷದ ಅನುಭವದಲ್ಲಿ ತಂದುಕೊಂಡು, ಅದರಲ್ಲಿ ತಾನು ಒಂದಾಗುವದು; ಅದೇ ತಾನಾಗುವದು—ಎಂಬ ವಿದ್ಯೆಯನ್ನು ಆ ವಿದ್ಯಾರ್ಥಿಯಿಂದ ಆ ಗುರುಗಳು ಕಲಿತು ಸಂತೋಷದಿಂದ ಅವನನ್ನು ಮುದ್ದಾಡಿ, ಎತ್ತಿಕೊಂಡು ಮುತ್ತಿಟ್ಟರು. ತಮ್ಮ ಮೌಢ್ಯಕ್ಕಾಗಿಯೂ ಕಠೋರ ವರ್ತನೆಗಾಗಿಯೂ ಅತಿಶಯ ವಿಷಾದಪಟ್ಟರು ; ಲಜ್ಜಿತರಾದರು. ಅವರು ಆ ಬಾಲಕನನ್ನು ಕುರಿತು, "ವತ್ಸಾ ! ರಾಜಕುಮಾರ ! ನೀನು ಶಾಸ್ತ್ರದ ಒಂದು ವಾಕ್ಯವನ್ನಾದರೂ ಸರಿಯಾಗಿ ಕಲಿತಿರುವದಕ್ಕಾಗಿ ನಿನ್ನನ್ನು ಎಷ್ಟು ಹೊಗಳಿದರೂ ಅಭಿನಂದಿಸಿದರೂ ಸಾಲದೆನಿಸಿದೆ. ಅಯ್ಯೋ! ನಿನ್ನ ಗುರುವೆನಿಸಿರುವ ನಾನು ಶಾಸ್ತ್ರದಲ್ಲಿಯ ಆ ಪ್ರಥಮ ವಾಕ್ಯವನ್ನೇ ಇನ್ನೂ ಕಲಿತಿಲ್ಲ; ಏಕೆಂದರೆ, ನಾನು ಅಲ್ಪ ಕಾರಣಕ್ಕೂ ಅಡಿಗಡಿಗೆ ಕೋಪಗೊಳ್ಳುತ್ತೇನೆ, ಒಂದು ಸಣ್ಣ ವಿಷಯವಾದರೂ ನನ್ನ ಸಮಾಧಾನವನ್ನು ಏರುಪೇರು ಮಾಡುತ್ತದೆ. ಮಗು ! ನನ್ನ ಮೇಲೆ ದಯೆಯಿಡು ; ನನಗಿಂತಲೂ ನೀನು ಹೆಚ್ಚು ತಿಳಿದವನು; ಬಲು ಜಾಣ." ಎಂದು ಪ್ರೀತಿ ಗೌರವಗಳಿಂದ ಉದ್ಗಾರಮಾಡಿದರು. ಆಗ ಆ ಬಾಲಕನು "ತಂದೆ ! ತಂದೆ ! ನೀವು ಮೆಚ್ಚಿ ಕೊಂಡಾಡುವಷ್ಟು ಯೋಗ್ಯತೆ ನನ್ನಲ್ಲಿಲ್ಲ : ಕ್ಷಮಿಸ ಬೇಕು. ಇದು ನಿಮ್ಮ ಅತಿಶಯವಾದ ವಾತ್ಸಲ್ಯವನ್ನು ತೋರಿಸುತ್ತಿದೆ ; ಅಷ್ಟೆ. ಆ ಮೊದಲನೆಯ ವಾಕ್ಯವನ್ನು ನಾನು ಇನ್ನೂ ಪೂರಾ ಕಲಿತಿಲ್ಲ. ನೀವು ಕೆಲವು ನಿಮಿಷಗಳು ನನ್ನನ್ನು ಬಿಡದೆ ಹೊಡೆದಾಗ ನನ್ನ ಮನಸ್ಸಿನಲ್ಲಿಯೂ ಸ್ವಲ್ಪ ಸಿಟ್ಟೂ ಸಂತಾಪವೂ ಸುಳಿದಾಡಿದವು. ಮನಸ್ಸಿನಲ್ಲಿ ಸಿಟ್ಟು, ಯಾವ ಕಾರಣದಿಂದಲಾದರೂ ಸ್ವಲ್ಪವೂ ತಲೆದೋರಬಾರದಲ್ಲವೆ ?" ಎಂದನು. ತನ್ನನ್ನು ಇನ್ನೊಬ್ಬರು ಮನಮೆಚ್ಚಿ ಬಾಯಿತುಂಬಾ ಹೊಗಳುತ್ತಿರುವಾಗ ಯಾರಾದರೂ ತನ್ನಲ್ಲಿರುವ ದೌರ್ಬಲ್ಯವನ್ನು ಮುಚ್ಚಿಟ್ಟುಕೊಳ್ಳುವ ಚಾಪಲ್ಯಕ್ಕೆ ಬಲಿಯಾಗುವದೇ ಸ್ವಾಭಾವಿಕವಾಗಿರುವಾಗ, ಯುಧಿಷ್ಠಿರನು ಆ ದೌರ್ಬಲ್ಯಕ್ಕೆ ಒಳಗಾಗದೆ ತನ್ನ ಗೌರವಕ್ಕೆ ಹಾನಿಯನ್ನು ತರಬಹು ದಾದ ತನ್ನೊಳಗಿನ ನಿಜವಾದ ದೌರ್ಬಲ್ಯವನ್ನು ಹೇಳಿಕೊಂಡನು. ಇದರಿಂದ, ಅವನು ಆ ಶಾಸ್ತ್ರದ "ಸತ್ಯಂ ವದ ; ನಿಜವನ್ನು ನುಡಿ ;" ಎನ್ನುವ ಎರಡನೆಯ ವಾಕ್ಯದ ಪ್ರಯೋಗವನ್ನೂ ಮಾಡಿ ತೋರಿಸಿದ್ದರಿಂದ ಗುರುಗಳಿಗೆ ಅವನಲ್ಲಿ ಗೌರವವು ಇನ್ನೂ ಹೆಚ್ಚಾಯಿತು. ಹೀಗೆ ಯುಧಿಷ್ಠಿರನು ಜೀವಿತದಲ್ಲಿ, ತನ್ನ ಕೃತಿಯಿಂದ, ಶಾಸ್ತ್ರದಲ್ಲಿ ಉಪದೇಶಿಸಿರುವ ನೀತಿ ಧರ್ಮಗಳನ್ನು ನಡೆದು ತೋರಿಸಿದನು.

ಇದೇ ವೇದಾಂತವನ್ನು ಉಪಯೋಗ ಮಾಡಿಕೊಳ್ಳುವ ರೀತಿ, ಈಗ ರಾಮನು

ಹೇಳುವದೇನೆಂದರೆ, ನಿಮ್ಮನ್ನು ನೀವು ಉದ್ಧಾರಮಾಡಿಕೊಳ್ಳಬೇಕು. ಬೇರೆ ಯಾರೂ ನಿಮ್ಮನ್ನು ಉದ್ಧಾರ ಮಾಡಲಾರರು. ಗುರುವೂ ಉದ್ಧಾರ ಮಾಡುವದಿಲ್ಲ; ದೇವರೂ ಉದ್ಧಾರ ಮಾಡುವದಿಲ್ಲ. ಬೆಳಗಿನ ಜಾವ ನೀವು ಓಂಕಾರವನ್ನು ಜಪಿಸುವಾಗ ಅದರ ಅರ್ಥವನ್ನು ತಿಳಿದು ಅನುಭವದಲ್ಲಿ ತಂದುಕೊಳ್ಳುವದಕ್ಕೆ ದೃಢವಾದ ನಿರ್ಧಾರ ಮಾಡಬೇಕು. ಯಾವ ಕಾರ್ಯವನ್ನಾದರೂ ಪ್ರಾರಂಭಿಸುವಾಗ ಎಚ್ಚರವನ್ನು ವಹಿಸಬೇಕು. ನದಿಗೆ ಸ್ನಾನಕ್ಕೂ ಈಜುವದಕ್ಕೂ ಹೋಗುವಾಗ ಮೊದಲೇ ತಯಾರಾಗಿ ಹೋಗುವಂತೆ ಯಾವದೊಂದು ಕೆಲಸದಲ್ಲಿ ತೊಡಗುವಾಗಲೂ ಯಾರನ್ನಾದರೂ ಕಾಣುವದಕ್ಕೆ ಹೋಗುವಾಗಲೂ ನಮ್ಮ ಅಹಂಕಾರವನ್ನು ಕಳಚಿ ನಮ್ಮೊಳಗೂ ಹೊರಗೂ ನಾವು ವ್ಯವಹರಿಸಬೇಕಾದ ಜನರಲ್ಲಿಯೂ ಪರಮಾತ್ಮನನ್ನೇ ಕಾಣುವ ಭಾವನೆಯನ್ನು ಎಚ್ಚರದಿಂದ ಬೆಳಸಿಕೊಳ್ಳಬೇಕು. ಸ್ನೇಹಿತರನ್ನಾಗಲೀ ಬೇರೆ ಯಾರನ್ನಾಗಲೀ ವಿರೋಧಿಗಳನ್ನೇ ಆಗಲಿ ಕಾಣುವದಕ್ಕೆ ಹೋಗುವ ಮುಂಚೆ ಎಲ್ಲರಲ್ಲಿಯೂ ಪ್ರೇಮ ಸ್ವರೂಪನಾದ ಪರಮಾತ್ಮನನ್ನೇ ಅಥವಾ ನಿಜಾತ್ಮನನ್ನೇ—ತನ್ನನ್ನೇ—ನೋಡಬೇಕೆಂಬ ನಿಶ್ಚಯ ಮಾಡಿಕೊಳ್ಳಬೇಕು. ಹಾಗಾದರೆ ಎಂಥಾ ಪ್ರಸಂಗದಲ್ಲಿಯೂ ಎಚ್ಚರ ತಪ್ಪುವದಿಲ್ಲ. ಸಮಾಧಾನವು ಕದಲುವದಿಲ್ಲ. ಪ್ರಯತ್ನವು ವಿಫಲವಾಗುವದಿಲ್ಲ, ಕಾರ್ಯವೂ ಸಮಾಗಮವೂ ಮುಗಿದ ಮೇಲೆ ಮನಸ್ಸನ್ನು ಪುನಃ ಪರಮಾತ್ಮ ಭಾವನೆಯಿಂದ ಶುದ್ಧಿ ಮಾಡಿಕೊಳ್ಳಬೇಕು; ಸಿದ್ಧ ಮಾಡಿಕೊಳ್ಳಬೇಕು.

ಕೈಗೂ ಬಟ್ಟೆಗೂ ಕೊಳೆ ಹತ್ತಿದೊಡನೆ ತೊಳೆದುಕೊಳ್ಳುವಂತೆ ವ್ಯಕ್ತಿ ಭಾವನೆಯನ್ನೂ ಅಹಂಕಾರವನ್ನೂ ಹುರಿದುಂಬಿಸುವ ಸಹವಾಸವೂ ಸಂಭಾಷಣೆಯೂ ವ್ಯವಹಾರವೂ ಮುಗಿದೊಡನೆ ಆತ್ಮ ಚಿಂತನೆಯಿಂದ ಮನಸ್ಸನ್ನು ಶುದ್ಧಿ ಮಾಡಿಕೊಳ್ಳಬೇಕು. ಮನಸ್ಸಿಗೆ ಏನಾದರೂ ವ್ಯಥೆಯಾದೊಡನೆಯೇ ಆತ್ಮಾನುಸಂಧಾನ ಮಾಡಬೇಕು. ಜನಸಂಗದಲ್ಲಿ ನಿಮ್ಮ ಶಾಂತಿಯು ಕಲಕಿದರೆ ನಿರ್ಜನ ಸ್ಥಳಕ್ಕೆ ಹೋಗಿ ಮನಸ್ಸನ್ನು ನಿರಾಲಂಬ ಮಾಡಿರಿ. ಓಂಕಾರವನ್ನು ಜಪಿಸಿರಿ; ಏಕಾಂತವೂ ಕಾಲವೂ ನಿಮಗೆ ಸಮತೋಲನೆಯನ್ನೂ ಸಮಚಿತ್ತತೆಯನ್ನೂ ಸಮಾಧಾನವನ್ನೂ ಕೊಡುತ್ತವೆ. ಕಾಲರಾ, ಪ್ಲೇಗು ಮೊದಲಾದ ಅಂಟುರೋಗಗಳ ಸೋಂಕುಳ್ಳವನು ಅದನ್ನು ಗುಣಪಡಿಸಿಕೊಳ್ಳದೆ ಹೇಗೆ ಸಮಾಜದೊಳಗೆ ಬರಬಾರದೋ ಹಾಗೆ ಕಾಮ ಕ್ರೋಧಾದಿಗಳೂ ದ್ವೇಷಾಸೂಯೆಗಳೂ ಉಳ್ಳವನು, ದುಃಖಿಯಾದವನು, ಅವುಗಳನ್ನು ಕಳೆದುಕೊಳ್ಳದೆ ಜನರಲ್ಲಿ ಬಂದು ಸೇರಿ ತೊಂದರೆ ಕೊಡುವದಕ್ಕೆ ಅಧಿಕಾರವಿಲ್ಲ. ಏಕಾಂತದಲ್ಲಿ ಕುಳಿತು ಓಂಕಾರವನ್ನು ಜಪಿಸಿ, ಆತ್ಮ ಭಾವನೆಯಿಂದ ಶುದ್ಧರಾಗಿ ಹೊರಗೆ ಬನ್ನಿ. ಫಲವನ್ನು ತಿನ್ನಬೇಕೆನ್ನುವವರು ಆ ಮರವನ್ನೇ ಕಡಿಯಬಾರದು. ಹಾಗೆ ಸುಖವನ್ನು ಬಯಸುವವರು ಭೋಗದಿಂದ ಆತ್ಮಶೋಷಣೆ ಮಾಡಿಕೊಳ್ಳದೆ ದಿವ್ಯಭಾವದಲ್ಲಿ ಮುಳುಗಿ ನಿಜಾನಂದವನ್ನು ಸವಿಯಬೇಕು.

ರಾಮನು ನಿಜವಾಗಿಯೂ ಭಯವನ್ನೂ ಚಿಂತೆಯನ್ನೂ ವ್ಯಥೆಯನ್ನೂ ಮೀರಿದ್ದಾನೆಂದು ನಿಮಗೆ ಹೇಳುತ್ತಾನೆ. ಆದರೆ ಅದು ಯಾರಿಗಾದರೂ ನಿರಂತರ ಅಭ್ಯಾಸದಿಂದಲೇ ಬರುತ್ತದೆ. ಅದು, ರಾಮನನ್ನು ಮನೋದೌರ್ಬಲ್ಯ ಮತ್ತು ಭ್ರಾಂತಿಗಳ ಅತ್ಯಂತ ಕೀಳಾದ ಸ್ಥಿತಿಯಿಂದ ಮೇಲಕ್ಕೆತ್ತಿದೆ. ಒಂದು ಕಾಲದಲ್ಲಿ ರಾಮನೂ ಅತ್ಯಂತ ಮೂಢನಂಬಿಕೆ ಉಳ್ಳವನಾಗಿದ್ದ. ಸಣ್ಣದೊಂದು ವಿರುದ್ಧ ಘಟನೆಯ ಸುಳಿಗಾಳಿಯೂ ಅವನ ಮನಸ್ಸಿನ ಸಮತೂಕವನ್ನು ಏರುಪೇರು ಮಾಡುತ್ತಿತ್ತು. ಈಗ ಭಯಂಕರ ಬಿರುಗಾಳಿಗೂ ತತ್ತರಿಸದ ಸ್ಥಿರಮೇರುವಾಗಿದ್ದಾನೆ. ಯಾವನೊಬ್ಬನು ಹೀಗೆ ಆಗಬಲ್ಲನಾದರೆ ನೀವೂ ಸಾಧಿಸಬಲ್ಲಿರಿ.

೧೫೯. ನೈಜವಾದ ವೇದಾಂತ ಜೀವನದ ಆದರ್ಶ

(ರಾಣಿಯ ಸರ್ವಸಮರ್ಪಣ ಭಾವ)

ಒಂದಾನೊಂದು ರಾಜ್ಯದಲ್ಲಿ ಆಗ ತಾನೇ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಿ ಬಂದಿದ್ದ ಉದಾತ್ತ ಸ್ವಭಾವದವನೂ ವಿದ್ವಾಂಸನೂ ಘನತೆಯುಳ್ಳವನೂ ಗಂಭೀರ ಗುಣಶಾಲಿಯೂ ಆದ ರಾಜನಿದ್ದನು. ಬಹಳ ವರ್ಷಗಳು ಕಳೆದರೂ ಅವನು ಲಗ್ನವಾಗಲಿಲ್ಲ, ಪ್ರಜೆಗಳು ರಾಜ್ಯಕ್ಕೆ ಉತ್ತರಾಧಿಕಾರಿಯನ್ನು ಅಪೇಕ್ಷಿಸುತ್ತಿದ್ದುದರಿಂದ ರಾಜನು ಲಗ್ನವಾಗದಿರುವದಕ್ಕಾಗಿ ಬಹಳ ಕಳವಳಗೊಂಡಿದ್ದರು. ರಾಜನು ತನಗೆ ಇಷ್ಟವಾದ ವಧುವನ್ನು ತಾನೇ ಆರಿಸಿಕೊಂಡು ವಿವಾಹವಾಗಬಹುದೆಂದು ಜನರು ಎಡೆಬಿಡದೆ ಒತ್ತಾಯಮಾಡತೊಡಗಿದರು. ತನಗೆ ಬೇಕಾದ ಯಾವ ಕನ್ಯೆಯನ್ನಾದರೂ ಮದುವೆಯಾಗಲು ಜನರು ಒಪ್ಪುವದಾದರೆ ತಾನು ಲಗ್ನವಾಗುವದಾಗಿ ರಾಜನು ಹೇಳಿದನು. ಆ ರಾಜ್ಯದಲ್ಲಿ ಪ್ರಣಯಕ್ಕಾಗಿ ಆಗಲಿ, ಪರಿಣಯಕ್ಕಾಗಿ ಆಗಲೀ ಯಾರಿಗೂ ಸ್ವಾತಂತ್ರ್ಯವಿರಲಿಲ್ಲ. ಅವರೆಲ್ಲರೂ ಪದ್ಧತಿ ಬದ್ಧರಾಗಿದ್ದರು. ಆದರೂ ರಾಜನ ಇಚ್ಛೆಗೆ ಸ್ವಾತಂತ್ರ್ಯವನ್ನು ಕೊಡದಿದ್ದರೆ ಅವನು ಜೀವಮಾನವೆಲ್ಲಾ ಅವಿವಾಹಿತನಾಗಿ ಉಳಿಯಬಹುದೆಂದು ಹೆದರಿ, ಪ್ರಜೆಗಳು ಅವನ ಸ್ವೇಚ್ಛೆಯಾದ ಆಯ್ಕೆಗೆ ಹಿಂದೆಂದೂ ಯಾರಿಗೂ ಕೊಡದಿದ್ದ ವಿಶೇಷವಾದ ಅವಕಾಶವನ್ನು ಕೊಟ್ಟರು. ಆಗ ರಾಜನು ಮಹತ್ತಾದ ವಿವಾಹ ಮಹೋತ್ಸವಕ್ಕಾಗಿ ಸಿದ್ಧತೆ ಮಾಡಲು ತನ್ನ ಆಸ್ಥಾನದ ಮಹಾಜನರಿಗೂ ಅಧಿಕಾರಿಗಳಿಗೂ ಆಜ್ಞೆ ಮಾಡಿದನು. ಭವ್ಯವಾದ ಅತ್ಯಂತ ರಾಜ ವೈಭವದ ರೀತಿಯಿಂದ ಸಕಲ ಸಿದ್ಧತೆಗಳೂ ನಡೆದವು. ಆ ನಿಯಮಿತವಾದ ದಿನ ಮಹತ್ತಾದ ಸಂಭ್ರಮದಿಂದ ಸರ್ವ ಸೈನ್ಯವೂ ಸಿದ್ಧವಾದವು. ಪ್ರತಿಯೊಬ್ಬರೂ ತಮ್ಮ ತಮ್ಮ ಅತ್ಯಂತ ಜಾಜ್ವಲ್ಯಮಾನವಾದ ವಸ್ತ್ರಾಲಂಕಾರಗಳಿಂದ ಭೂಷಿತರಾಗಿ ಉತ್ಕೃಷ್ಟವಾದ ವಾಹನಗಳಲ್ಲಿಯೂ ಸಾರೋಟು ಗಾಡಿಗಳಲ್ಲಿಯೂ ಉತ್ಸವ ಹೊರಟರು. ರಾಜನು ಮಧ್ಯದಲ್ಲಿ ರಥದಲ್ಲಿ ಹೋಗುತ್ತಿರುವಾಗ ಎರಡು ಕಡೆಗಳಲ್ಲಿಯೂ ಸೈನ್ಯಗಳು ಸಾಗುತ್ತಿದ್ದವು, ಯಾವದೊಂದು ದೊಡ್ಡ ರಸ್ತೆಯನ್ನು ಹಿಡಿಯದೆ ರಾಜನ

ನಿರ್ದೇಶದಂತೆ ಎಲ್ಲರೂ ಹೋಗುತ್ತಿದ್ದರು. ಅವರು ಅತಿ ನಿಬಿಡವಾದ ಗೊಂಡಾರಣ್ಯದಲ್ಲಿ ಪ್ರವೇಶಿಸಿ ಬಹಳ ದೂರ ಹೋದರು. "ಇದೇನು ನಮ್ಮ ರಾಜನು ಈ ಅರಣ್ಯದಲ್ಲಿ ಒಂದು ಸರೋವರವನ್ನೋ ಮರವನ್ನೋ ಕಲ್ಲನ್ನೋ ಲಗ್ನವಾಗುವನೋ ಹೇಗೆ ?" ಎಂದು ಜನರು ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಅವರಿಗೆ ಆಶ್ಚರ್ಯ! ರಾಜನ ಉದ್ದೇಶವು ಯಾರಿಗೂ ತಿಳಿಯದು. ಎಲ್ಲಾ ರಹಸ್ಯಮಯ. ಅವನನ್ನು ಕೇಳುವ ಧೈರ್ಯ ಯಾರಿಗೂ ಇಲ್ಲ. ಆ ಅಡವಿಯಲ್ಲಿ ಕೊನೆಗೆ ಅವರು ಒಂದು ಗುಡಿಸಿಲಿನ ಸಮೀಪ ಬಂದರು. ಅದರ ಹತ್ತಿರ ಸ್ಫಟಿಕದಂತೆ ನಿರ್ಮಲವಾದ ಸುಂದರವಾದೊಂದು ಸರೋವರವಿದ್ದಿತು. ಆ ಸರೋವರದ ಸುತ್ತಲೂ ಮನೋಹರವೂ ಭವ್ಯವೂ ಸ್ವಾಭಾವಿಕವೂ ಆದ ಹಣ್ಣಿನ ಗಿಡಗಳ ತೋಟವಿದ್ದಿತು. ಅಲ್ಲಿ ಒಂದು ಮರದ ಕೊಂಬೆಗಳಿಗೆ ತೂಗು ಕಟ್ಟಿದ ಒಂದು ಹಗ್ಗದ ಜೋಲಿಯಲ್ಲಿ ಒಬ್ಬ ಮುದುಕನು ಮಲಗಿದ್ದನು. ಇದನ್ನು ನೋಡಿದ ಜನರು, "ಇದೇನು ನಮ್ಮ ರಾಜನು ಈ ಮುದುಕನನ್ನು ಮದುವೆಯಾಗುವನೇ ?" ....ಎಂದು ತಮ್ಮೊಳಗೇ ಮಾತನಾಡಿಕೊಳ್ಳುತ್ತಿದ್ದರು. ಅರ್ಧ ಸೈನ್ಯವೇ ಮುಂದುವರಿಯಿತು, ಆದರೆ ರಾಜನು ಕುಳಿತಿದ್ದ ಆನೆಯು ಆ ಸ್ಥಳವನ್ನು ಸೇರಿದ ಕೂಡಲೇ ರಾಜನು ಎಲ್ಲರಿಗೂ "ನಿಲ್ಲಿ" ಎಂದು ಆಜ್ಞೆ ಮಾಡಿದನು. ಕೂಡಲೇ ಆ ಸ್ಥಳದಲ್ಲಿ. ಜೋಲಿಯ ಮೇಲೆ ಮಲಗಿದ್ದ ತನ್ನ ತಂದೆಯನ್ನು ಮೆಲ್ಲನೆ ಮೃದುವಾಗಿ ತೂಗುತ್ತಿದ್ದ ಸುಂದರಿಯೂ ಮನೋಹರಿಯೂ ಕೋಮಲಾಂಗಿಯೂ ಆದ ಕನ್ಯೆಯೊಬ್ಬಳು ಕಾಣಿಸಿಕೊಂಡಳು.

ಆ ರಾಜನು ಸಿಂಹಾಸನಕ್ಕೆ ಬರುವದಕ್ಕೆ ಮೊದಲು ಆ ಅಡವಿಗೆ ಅನೇಕ ಸಲ ಬಂದಿದ್ದನು. ಆ ಕನ್ಯೆಯ ವರ್ತನೆಯನ್ನೆಲ್ಲಾ ನೋಡಿದ್ದನು. ಆಕೆಯು ಯಾವಾಗಲೂ ಅತ್ಯಂತ ವಿಧೇಯಳಾಗಿಯೂ ಕರ್ತವ್ಯನಿಷ್ಠಳಾಗಿಯೂ ಇರುವದನ್ನು ಕಂಡಿದ್ದನು. ಆಕೆಯು ನೀರನ್ನು ತಂದು ತಂದೆಗೆ ಸ್ನಾನಮಾಡಿಸಿ ಊಟಮಾಡಿಸಿ ಅತ್ಯಂತ ಭಕ್ತಿ ವಿಶ್ವಾಸದಿಂದ ಸೇವೆ ಮಾಡುತ್ತಿದ್ದಳು ; ಉಜ್ಜುವ, ತಿಕ್ಕುವ, ತೊಳೆದು ಬಳಿಯುವ, ಅಡಿಗೆ ಮಾಡುವ ಎಲ್ಲಾ ಕಷ್ಟ ಕಾರ್ಯಗಳನ್ನೂ ಆಕೆಯು ಬಹಳ ಶ್ರದ್ಧೆಯಿಂದ ಮಾಡುತ್ತಿದ್ದಳು. ಆದರೆ ಆಕೆಯು ಯಾವ. ಕೆಲಸ ಮಾಡುವಾಗಲೂ ಸ್ವಚ್ಛಂದವಾದ ಪಕ್ಷಿಯಂತೆ ಆನಂದವಾಗಿ ಹಾಡಿಕೊಂಡು ಸಂತೋಷವಾಗಿಯೂ ಗೆಲುವಾಗಿಯೂ ಕಳೆಯಾಗಿಯೂ ವಿನೋದವಾಗಿಯೂ ಉಲ್ಲಾಸವಾಗಿಯೂ ಹರ್ಷಚಿತ್ತಳಾಗಿಯೂ ಇರುತ್ತಿದ್ದಳು. ಆಕೆಯ ನಿರಂತರವಾದ ಈ ಸಂತೋಷ ವೃತ್ತಿಯು ಆ ರಾಜಕುಮಾರನ ಮೇಲೆ ಬಹಳ ಸತ್ಪರಿಣಾಮ ಮಾಡಿದ್ದರಿಂದ, ತಾನು ಎಂದಾದರೂ ಲಗ್ನವಾಗುವದಾದರೆ ಈ ಅಪೂರ್ವ ಬಾಲಕಿಯನ್ನೇ ಲಗ್ನವಾಗಬೇಕೆಂದು ಅವನು ಬಹಳ ಹಿಂದೆಯೇ ಪ್ರತಿಜ್ಞೆ ಮಾಡಿಕೊಂಡಿದ್ದನು. ಆನೆ. ಕುದುರೆ. ರಥ, ಸೈನಿಕರಿಂದ ಕೂಡಿದ ಈ ಎಲ್ಲಾ ವೈಭವದ ದೃಶ್ಯವನ್ನು ಆ ಮುಗ್ಧ ಕನ್ಯೆಯು ಬೆರಗಾಗಿ ನಿಟ್ಟಿಸಿ

ನೋಡುತ್ತಿದ್ದಳು. ತನ್ನ ಗುಡಿಸಿಲಿನ ಮುಂದೆಯೇ ಎಷ್ಟೋ ಸಲ ಹಿಂದೆ ಹಾದು ಹೋಗಿದ್ದ ಕುದುರೆ ಸವಾರನು ರಾಜಕುಮಾರನೆಂಬುದು ಆಕೆಗೆ ತಿಳಿಯಿತು. ಈ ಎಲ್ಲಾ ಅದ್ಭುತ ದೃಶ್ಯವು ಏನೆಂದು ಆಕೆಯು ತನ್ನ ತಂದೆಯನ್ನು ಕೇಳಿದಳು. ದೂರ ದೇಶದಲ್ಲಿದ್ದ ರಾಜಕುಮಾರಿಯನ್ನು ಲಗ್ನವಾಗಲು ಹೋಗುತ್ತಿದ್ದ ವರನಾದ ರಾಜನ ಪರಿವಾರವು ಇದೆಲ್ಲಾ ಇರಬೇಕೆಂದು ಆ ಮುದುಕನು ಹೇಳಿದನು. ಆಗ ರಾಜನು ಆನೆಯಿಂದ ಇಳಿದು, ಆ ವೃದ್ಧನಲ್ಲಿಗೆ ಹೋಗಿ, ಪೌರ್ವಾತ್ಯ ದೇಶದ ಪದ್ಧತಿಯಂತೆ ಅವನ ಪಾದಗಳಲ್ಲಿ ನಮಸ್ಕರಿಸಿದನು. ಆ ವೃದ್ಧನು "ವತ್ಸ ! ನಿನಗೇನು ಬೇಕು ?" ಎಂದು ಕೇಳಿದನು. ರಾಜನ ಮುಖವು ಸಂತೋಷದಿಂದ ಕಳೆಗೊಂಡಿತು ; "ನನ್ನನ್ನು ನೀವು ದಯವಿಟ್ಟು ನಿಮ್ಮ ಅಳಿಯನನ್ನಾಗಿ ಮಾಡಿಕೊಳ್ಳಬೇಕು" ಎಂದು ಬೇಡಿದನು. ಮುದುಕನ ಹೃದಯವು ಸಂತೋಷದಿಂದ ಹಾರಿತು. ಅವನ ಆನಂದಾವೇಶಕ್ಕೆ ಮಿತಿಯೇ ಇರಲಿಲ್ಲ. ಆದರೂ ಅವನು "ರಾಜಾ ! ನಾವು ಬಡವರು, ಬಹಳ ಬಡವರು ; ನೀನು ತಪ್ಪಾಗಿ ತಿಳಿದಿರಬಹುದು. ಬಡ ವನವಾಸಿಯ ಮಗಳನ್ನು ನೀನು ಮದುವೆಯಾಗಲು ಬಯಸುವದು ಹೇಗೆ ಸಾಧ್ಯ ?" ಎಂದು ಕೇಳಿದನು. ಈ ಮನೋಹರೆಯಾದ ಕನ್ಯೆಯ ಹೊರತು ಬೇರೆ ಯಾರನ್ನೂ ತಾನು ಇಷ್ಟು ಪ್ರೀತಿಸಲಿಲ್ಲವೆಂದು ರಾಜನು ಹೇಳಿದನು, "ಹಾಗಾದರೆ. ಆಕೆಯು ನಿನ್ನವಳೇ" ಎಂದು ವೃದ್ಧನು ಹೇಳಿದನು. ಈ ತಂದೆಯು ವೇದಾಂತಿಯಾದ ತಪಸ್ವಿಯಾಗಿದ್ದನು ; ತನ್ನ ತತ್ತ್ವಜ್ಞಾನವನ್ನು ಇವನು ತನ್ನ ಮಗಳಿಗೂ ಬೋಧಿಸಿದ್ದನು. ಮದುವೆಯಲ್ಲಿ ತನ್ನ ಮಗಳಿಗೆ ಕೊಡುವದಕ್ಕೆ ತನ್ನಲ್ಲಿ ಯಾವ ಬಳುವಳಿಯೂ ಇಲ್ಲವೆಂದೂ ತನ್ನ ಆಶೀರ್ವಾದ ಮಾತ್ರವನ್ನೇ ಕೊಡಬಹುದೆಂದೂ ಮುದುಕನು ರಾಜನಿಗೆ ಹೇಳಿದನು. ಆಗ ರಾಜನು ವಧುವಿಗೆ ಎಲ್ಲಾ ಬಗೆಯಾದ ಸುಂದರ ವಸ್ತ್ರಾಲಂಕಾರಗಳನ್ನೂ ಕೊಟ್ಟು ಅವುಗಳನ್ನು ಧರಿಸಲು ಬೇಡಿಕೊಂಡನು. ಆಕೆಯು ಹಾಗೆಯೇ ಮಾಡಿದಳು. ಆದರೆ ಆಕೆಯು ರಾಜನಲ್ಲಿಗೆ ಬರಿಗೈಯಲ್ಲಿ ಹೋಗಲಿಲ್ಲ. ಅವಳ ಹತ್ತಿರ ಒಂದು ಬಳುವಳಿಯಿತ್ತು. ಅದೇನು ? ರಾಜನು ಆಕೆಗೆ ಕೊಟ್ಟ ಕೆಲವು ಸಂಪುಟಗಳ ಒಂದರಲ್ಲಿ ಆಭರಣಗಳನ್ನು ಇಡುವದಕ್ಕೆ ಬದಲು, ತಾನು ತಂದೆಯ ಮನೆಯಲ್ಲಿ ಹಾಕಿಕೊಳ್ಳುತ್ತಿದ್ದ ಹರಕು ಬಟ್ಟೆಗಳನ್ನು ಹಾಕಿಟ್ಟಳು. ಈಗ ಅಲ್ಲಿ ಮುದುಕನು ಒಬ್ಬನೇ ಉಳಿದುದರಿಂದ, ಅವನ ಉಪಚಾರಕ್ಕಾಗಿ ಒಬ್ಬ ಸೇವಕನನ್ನು ರಾಜನು ಬಿಟ್ಟು ಹೋದನು. ರಾಜನಿಂದ ಆ ಮುದುಕನು ಬೇರೆ ಏನನ್ನೂ ಬಯಸಲಿಲ್ಲ.

ರಾಜನು ತನ್ನ ವಧುವನ್ನು ಅರಮನೆಗೆ ಕರೆದುಕೊಂಡು ಹೋದನು. ಆಕೆಯು ಕೀಳು ಜಾತಿಯವಳೆಂದು ಮೊದಲು ಮೊದಲು ದರ್ಬಾರಿನ ಜನರು ಆಕೆಯನ್ನು ಪ್ರೀತಿಸುತ್ತಿರಲಿಲ್ಲ. ಆ ರಾಜವರ್ಗದ ಜನರೂ ಶ್ರೀಮಂತರೂ ತಮ್ಮ ಹೆಣ್ಣು ಮಕ್ಕಳನ್ನೂ ತಮ್ಮ ಸೋದರ-ಸೋದರಿಯರ ಮಕ್ಕಳನ್ನೂ ರಾಜನಿಗೆ ಮದುವೆ

ಮಾಡಿಕೊಡಬೇಕೆಂದು ಬಯಸುತ್ತಿದ್ದುದರಿಂದ ಈ ಹೀನ ವರ್ಣದ ಕನ್ಯೆಯು ತಮ್ಮ ನ್ನೆಲ್ಲಾ ಮೀರಿಸಿ ರಾಣಿಯಾದುದರಿಂದ ಅವರೆಲ್ಲರಿಗೂ ಆಕೆಯ ವಿಷಯದಲ್ಲಿ ಅಸೂಯೆ ಉಂಟಾಯಿತು. ಆಕೆಯನ್ನು ರಾಣಿಯೆಂದು ಗೌರವಿಸುವದು ಹೇಗೆ? ಇದು ಅವರ ಸ್ವಾಭಿಮಾನಕ್ಕೆ ಬಹಳ ನೋವನ್ನುಂಟುಮಾಡಿತು. ಆದರೆ ಆ ಹೊಸ ಮಹಾರಾಣಿಯು ಆಕೆಯ ಮಧುರ ಸ್ವಭಾವದಿಂದಲೂ ಮೃದುವಾದ ಮಾತಿನಿಂದಲೂ ಮನೋಹರವಾದ ವರ್ತನೆಯಿಂದಲೂ ಎಲ್ಲರನ್ನೂ ರಂಜನೆಮಾಡಿ ಪ್ರೀತಿಯಿಂದ ಒಲಿಸಿಕೊಂಡಳು. ಕ್ರಮೇಣ ಎಲ್ಲರೂ ಆಕೆಯನ್ನು ಬಹಳ ಅಕ್ಕರೆಯಿಂದ ಪ್ರೀತಿಸ ತೊಡಗಿದರು. ಆಕೆಯು ಯಾವಾಗಲೂ ಬಹಳ ಸಮಾಧಾನವಾದಿಯೂ ಶಾಂತ ವಾಗಿಯೂ ಇರುತ್ತಿದ್ದಳು. ಆಕೆಯು ಯಾವ ವಿಷಯಕ್ಕೂ ಎಂದಿಗೂ ಎಂಥಾ ಸಂದರ್ಭಗಳಲ್ಲಿಯೂ ಅಸಮಾಧಾನವನ್ನೂ ಉದ್ವೇಗವನ್ನೂ ಹೊಂದುತ್ತಿರಲಿಲ್ಲ. ಒಂದು ವರ್ಷದ ಮೇಲೆ ರಾಣಿಗೆ ಒಬ್ಬಳು ಮಗಳು ಹುಟ್ಟಿದಳು. ಮಗುವು ಬಹಳ ಮುದ್ದಾಗಿದ್ದಿತು. ರಾಜನೂ ರಾಣಿಯೂ ಬಹಳ ಸಂತೋಷವಾಗಿದ್ದರು!

ಮಗುವಿಗೆ ಮೂರು ನಾಲ್ಕು ವರ್ಷಗಳಾದ ಮೇಲೆ, ರಾಜ್ಯದಲ್ಲಿ ಅತ್ಯಂತ ಅನಿಷ್ಟಕರವಾದಂಥ ದಂಗೆಯೇಳುವದೆಂದೂ ಬಂಡಾಯವಾಗುವದೆಂದೂ ರಾಜನು ರಾಣಿಗೆ ಹೇಳಿದನು. ರಾಣಿಯು ಅಂಥ ಪರಿಸ್ಥಿತಿಗೆ ಕಾರಣವೇನೆಂದು ಕೇಳಿದಳು. ಆಕೆಯನ್ನು ಮದುವೆಯಾದಾಗ ಮತ್ಸರಪೀಡಿತರಾದ ಮಂತ್ರಿಗಳೂ ಅಧಿಕಾರಿಗಳೂ ಈಗ ಕೀಳು ತಾಯಿಗೆ ಹುಟ್ಟಿದ ಬಾಲಕಿಯು ಮುಂದೆ ರಾಜ್ಯಾಧಿಕಾರಕ್ಕೆ ಬರುವ ದನ್ನು ಸಹಿಸಲಾರರೆಂದು ರಾಜನು ಆಕೆಗೆ ಹೇಳಿದನು, ಅವರಿಗೆ ರಾಜವಂಶದ ರಾಜ ಕುಮಾರನೇ ಬೇಕಾದಿರುವದರಿಂದ ಮಂತ್ರಿಗಳೊಬ್ಬರ ಮಗುವನ್ನು ರಾಜನು ದತ್ತು ತೆಗೆದುಕೊಳ್ಳಬೇಕೆಂದು ಅವರು ಇಚ್ಛಿಸಿದರು. ಆದರೆ, ತಾವು ಹಾಗೆ ಮಾಡಿದರೆ, ಬಾಲಕಿಯು ದೊಡ್ಡವಳಾದ ಮೇಲೆ, ಬಹಳ ಮಟ್ಟಿಗೆ ಆಕೆಗೂ ದತ್ತು ಪುತ್ರನಿಗೂ ವೈರವುಂಟಾಗುವದರಿಂದ ರಾಜ್ಯದಲ್ಲಿ ಅನರ್ಥವುಂಟಾಗುವದೆಂದು ರಾಜನು ಹೇಳಿ ದನು. ಅಂಥಾ ದುಷ್ಪರಿಣಾಮವನ್ನು ತಪ್ಪಿಸಲು ತಾನು ಬಹಳವಾಗಿ ಯೋಚಿಸು ತ್ತಿರುವದಾಗಿಯೂ ವಿಶಾಲ ರಾಜ್ಯದ ಹಿತದೃಷ್ಟಿಯಿಂದ ರಾಜಕುಮಾರಿಯನ್ನು ಕೊಲ್ಲಿಸಿ ಬಿಡುವದೇ ಉತ್ತಮವೆಂದೂ ಅನಿವಾರ್ಯವೆಂದೂ ತಾನು ಕೊನೆಯ ತೀರ್ಮಾನಕ್ಕೆ ಬಂದಿರುವದಾಗಿಯೂ ರಾಜನು ರಾಣಿಗೆ ಹೇಳಿದನು. ಆಗ ಆ ಗ್ರಿಸೆಲ್ಡಾ [ಹೆಸರಿನ] ರಾಣಿಯು ರಾಜನಿಗೆ ಈ ಅತ್ಯಂತ ವಿಲಕ್ಷಣವಾದ ಉತ್ತರವನ್ನು ಕೊಟ್ಟಳು. ಇದು ರಾಜನ ವಿಷಯದಲ್ಲಿ ಆಕೆಯ ವರ್ತನೆಯನ್ನೂ ಕರ್ತವ್ಯವನ್ನೂ ನಿದರ್ಶಿಸುತ್ತದೆ.

"ಮಹಾರಾಜ! ನಾನು ಇಲ್ಲಿಗೆ ಬಂದಂದಿನಿಂದ ಈ ಸಿಂಹಾಸನದ ಸೌಖ್ಯ ವನ್ನು ಅನುಭವಿಸುವ ಆಶೆಯು ನನಗೆ ಸ್ವಂತವಾಗಿ ಇರಲಿಲ್ಲವೆಂಬದು ನಿನಗೇ

ಗೊತ್ತಿದೆ. ನಿನ್ನ ಇಚ್ಛೆಯನ್ನೇ ಆಶೆಯನ್ನೇ ನನ್ನ ಇಚ್ಛೆಯೆಂದೂ ಆಶೆಯೆಂದೂ ಪೂರ್ಣವಾಗಿ ಮಾಡಿಕೊಂಡಿದ್ದೇನೆ. ನನ್ನ ಪ್ರತ್ಯೇಕತೆಯೂ ವ್ಯಕ್ತಿತ್ವವೂ ನಿನ್ನಲ್ಲಿ ಮುಳುಗಿ ಹೋಗಿದೆ ; ನಿನ್ನ ಇಚ್ಛೆಗೂ ಉದ್ದೇಶಕ್ಕೂ ವಿರೋಧವಾಗದೆ ನಿನ್ನ ಸೇವೆಗೆ ಸಾಧನವಾಗಿರುವಷ್ಟು ಮಟ್ಟಿಗೆ ಮಾತ್ರ ನನ್ನಲ್ಲಿ ವ್ಯಕ್ತಿತ್ವ ಉಳಿದಿದೆ. ಮಗಳನ್ನು ತೆಗೆದುಬಿಡಬೇಕೆಂಬದು ನಿನ್ನ ಇಚ್ಛೆಯಾದರೆ ಹಾಗೆಯೇ ಆಗಲಿ, ನನ್ನ ಹೃದಯಾಂತರಾಳದಲ್ಲಿ ಮಗಳನ್ನು ಎಂದೂ ನನ್ನವಳೆಂದು ಭಾವಿಸಿಲ್ಲ "

ಮಧ್ಯರಾತ್ರಿಯಲ್ಲಿ ಮಗಳನ್ನು ಯಾರೋ ಕರೆದುಕೊಂಡು ಹೋದರು. ಕೆಲವು ಗಂಟೆಗಳ ಮೇಲೆ ರಾಜನು ಹಿಂದಿರುಗಿ ಬಂದು, ಮಗಳನ್ನು ಕೊಲೆಮಾಡುವದಕ್ಕಾಗಿ ಕೊಲೆಗಡುಕರಿಗೆ ಕೊಟ್ಟು ಬಂದುದಾಗಿ ಹೇಳಿದನು. ಯಾವ ಅನಿಷ್ಟವೂ ಸಂಭವಿಸಿಯೇ ಇಲ್ಲವೇನೋ ಎಂಬಂತೆ ರಾಣಿಯು ಸಮಾಹಿತಳೂ ಮನಃಕ್ಷೋಭೆ ಇಲ್ಲದವಳೂ ಸ್ಥಿರಚಿತ್ತಳೂ ಶಾಂತಳೂ ಸಂತೋಷ ವೃತ್ತಿಯುಳ್ಳವಳೂ ಆಗಿದ್ದಳು. ಆಕೆಯ ತುದೆಯು ಬೋಧಿಸಿದ ನಿಜವಾದ ವೇದಾಂತವು ಆಕೆಯಲ್ಲಿ ಅಳವಟ್ಟಿತ್ತು. ಹೊರಗಿನ ಯಾವ ಆಗುಹೋಗುಗಳೂ ಎಂಥಾ ಪರಿಸ್ಥಿತಿಗಳೂ ಆಕೆಯ ಮನಸ್ಸಿನಲ್ಲಿ ಏರುಪೇರುಗಳನ್ನೂ ಆವೇಗ–ಉದ್ವೇಗಗಳನ್ನೂ ಉಂಟುಮಾಡುತ್ತಿರಲಿಲ್ಲ.

ಮಗಳನ್ನು ಕೊಲೆಮಾಡಿದ್ದರಿಂದ ರಾಜ್ಯದಲ್ಲಿ ಎಲ್ಲರಿಗೂ ಬಹಳ ಸಂತೋಷವಾಗಿದೆಯೆಂದು ರಾಜನು ಹೇಳಿದನು, ಒಂದು ವರ್ಷದ ಮೇಲೆ ರಾಣಿಗೆ ಪುನಃ ಒಬ್ಬ ಮಗನು ಹುಟ್ಟಿದನು. ಎಲ್ಲರೂ ಇದನ್ನು ಪ್ರೀತಿಸುತ್ತಿದ್ದರು. ಬಾಲಕನಿಗೆ ಐದಾರು ವರ್ಷಗಳಾದಾಗ, ಇವನು ಮುಂದೆ ರಾಜನಾಗಬಾರದೆಂದು ರಾಜ್ಯದಲ್ಲಿ ಪುನಃ ಎಲ್ಲೆಡೆಯೂ ಪ್ರತಿಭಟನೆಯೂ ದೊಡ್ಡ ಕೂಗೂ ಎದ್ದವು. ವಿರೋಧಿಗಳು ಪ್ರಬಲರಾಗಿರುವದರಿಂದ ರಾಜ್ಯದಲ್ಲಿ ಅಂತರ್ಯುದ್ಧವಾಗದೆ ಶಾಂತಿಯು ನೆಲೆಸಬೇಕಾದರೆ ಈ ಮಗನನ್ನೂ ಕೊಂದುಬಿಡಬೇಕೆಂದು ರಾಜನು ಹೇಳಿದನು. ಆಗಲೂ ರಾಣಿಯು ಸಂತೋಷಚಿತ್ತಳಾಗಿ ನಗುನಗುತ್ತಲೇ ಇದ್ದಳು. "ಇಡೀ ದೇಶವೇ ನನ್ನ ನಿಜವಾದ ಆತ್ಮ ; ನನ್ನ ಸ್ವಂತ, ವೈಯಕ್ತಿಕ ಎನ್ನುವದು ಯಾವದೂ ಇಲ್ಲ. ನಾನು ಸೂರ್ಯನಂತೆ ಇದ್ದೇನೆ. ನಾನು ಯಾವಾಗಲೂ ಕೊಡತಕ್ಕವಳು" ಎಂದಳು. ನಮಗೆ ಯಾವದರಲ್ಲಿಯೂ ಆಸಕ್ತಿಯಿಲ್ಲದೆ ಇದ್ದರೆ, ಯಾವದಕ್ಕೂ ನಾವು ನಮ್ಮದೆಂದು ಜೋತು ಬೀಳದೆ ಇದ್ದರೆ, ಯಾವ ಘಟನೆಯು ನಮ್ಮ ಸಂತೋಷವನ್ನು ಭಂಗಗೊಳಿಸಬಲ್ಲದು ? ಸೂರ್ಯನು ಸರ್ವಕಾಲದಲ್ಲಿಯೂ ಬೆಳಕನ್ನು ಬೀರುತ್ತಲೇ ಇದ್ದರೂ ನಿರಂತರವಾಗಿ ಬೆಳಗುತ್ತಲೇ ಇರುತ್ತಾನೆ. ಒಂದು ದಿನ ಮಧ್ಯರಾತ್ರಿಯಲ್ಲಿ ಆ ರಾಜಕುಮಾರನನ್ನು ಕೊಲೆಗಾರರು ಗುಪ್ತವಾಗಿ ಕರೆದುಕೊಂಡು ಹೋದರು.

ಕೆಲವು ವರ್ಷಗಳ ಮೇಲೆ ರಾಣಿಗೆ ಮೂರನೆಯ ಮಗುವು ಜನನವಾಯಿತು.

ಅದಕ್ಕೂ ಮೂರು ನಾಲ್ಕು ವರ್ಷಗಳಾದಾಗ ಅದನ್ನೂ ವಧಕಾರರು ತೆಗೆದುಕೊಂಡು ಹೋದರು.

ಈಗ ಇಂಥಾ ಉಗ್ರವಾದ ಅಗ್ನಿ ಪರೀಕ್ಷೆಗಳಲ್ಲಿ ಆ ರಾಣಿಯು ತನ್ನ ಶಾಂತಿಯನ್ನು ಸಂರಕ್ಷಣೆ ಮಾಡಿಕೊಂಡುದು ಹೇಗೆ ? ಆಕೆಯು ಅರಮನೆಗೆ ಬಂದುದಿನಿಂದ ನಿತ್ಯವೂ ತನ್ನ ಹಳೆಯ ಹರಕು ಬಟ್ಟೆಗಳನ್ನಿಟ್ಟುಕೊಂಡಿದ್ದ ಏಕಾಂತ ಗೃಹಕ್ಕೆ ಏಕಾಂಗಿಯಾಗಿ ಹೋಗಿ ರಹಸ್ಯವಾಗಿ ಸೇರಿಕೊಳ್ಳುತ್ತಿದ್ದಳು. ಅಲ್ಲಿ ಆಕೆಯು ತನ್ನ ರಾಜ ವೈಭವದ ವಸ್ತ್ರಾಲಂಕಾರಗಳನ್ನೆಲ್ಲಾ ಬಿಚ್ಚಿ ತೆಗೆದಿಟ್ಟು, ತನ್ನ ಹಳೆಯ ಹರಕು ಬಟ್ಟೆಗಳನ್ನು ಹಾಕಿಕೊಂಡು, ಹಿಂದಿನ ವನವಾಸದ ತಪಸ್ವಿನಿಯ ಪರಿಶುದ್ಧ ಜೀವನವನ್ನೂ ತಂದೆಯ ವೇದಾಂತ ಬೋಧೆಯ ಆನಂದ ಸ್ಥಿತಿಯನ್ನೂ ನೆನಸಿಕೊಂಡು ಪದ್ಮಾಸನದಲ್ಲಿ ಕುಳಿತು ಕಣ್ಣು ಮುಚ್ಚಿಕೊಂಡು "ಅಹಂ ಬ್ರಹ್ಮಾಸ್ಮಿ, ಸೋಹಂ" "ಆ ಪರಮಾತ್ಮನೇ ನಾನು" ಎಂದು ಧ್ಯಾನಿಸುತ್ತಿದ್ದಳು. "ಕಿರೀಟಧಾರಣ ಮಾಡಿರುವ ತಲೆಯು ಯಾವಾಗಲೂ ಚಿಂತಾಭರಿತವಾಗಿ ನೆಮ್ಮದಿಯಿಲ್ಲದಿರುತ್ತದೆ" ಎಂದು ಷೇಕ್ಸ್‌ಪಿಯರ್ ಹೇಳಿದ್ದಾನೆ. ತಾನು ಕಾನನದ ಕಾಸಾರ ತೀರದಲ್ಲಿ ಸ್ವಚ್ಛಂದವಾಗಿಯೂ ಆನಂದವಾಗಿಯೂ ಗಾನ ಮಾಡುತ್ತಿದ್ದ ಕನ್ಯೆಯಾಗಿದ್ದುದನ್ನು ಆಕೆಯು ತನ್ನ ಹೃದಯಾಂತರಾಳದಲ್ಲಿ ನೆನಪಿಟ್ಟುಕೊಂಡಿದ್ದಳು. ಈಗ ಇಲ್ಲಿ ಆಕೆಯು ರಾಜನ ಅರಮನೆಯಲ್ಲಿ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ಸೆರೆಯಾದಂತಿದ್ದಳು ; ಆದರೆ ವ್ಯವಹಾರದಲ್ಲಿ ಆಕೆಯು ಸಿಕ್ಕಿಬಿದ್ದು ಸಂಕಟಪಡಲಿಲ್ಲ. ಯಾವದರಲ್ಲಿಯೂ ಆಕೆಯು ಆಸಕ್ತಳಾಗಲಿಲ್ಲ ; ಮತ್ತು ತನ್ನ ನಿಜಾತ್ಮನನ್ನು ಸುತ್ತಲ ಎಲ್ಲಾ ಪರಿಸ್ಥಿತಿಗಳಿಂದಲೂ ನಿರಂತರವಾಗಿ ಪ್ರತ್ಯೇಕವಾಗಿಟ್ಟುಕೊಂಡಿದ್ದಳು. ಆಕೆಯು ಸತತವಾಗಿ ಬ್ರಾಹ್ಮೀಸ್ಥಿತಿಯಲ್ಲಿಯೇ ಮುಳುಗಿರುತ್ತಿದ್ದಳು. ಎಲ್ಲಾ ಆಶೆಗಳನ್ನೂ ಆಕಾಂಕ್ಷೆಗಳನ್ನೂ ಆಸಕ್ತಿಗಳನ್ನೂ ಪರಿತ್ಯಜಿಸಿ ಆಕೆಯು ಮನಸ್ಸನ್ನು ಪವಿತ್ರವಾಗಿಟ್ಟುಕೊಂಡಿದ್ದಳು. ಆಕೆಯು ಯಾವ ಹೊಣೆಗಾರಿಕೆಯನ್ನೂ ಭಾವನೆಯಿಂದ ಹೊರಲಿಲ್ಲ : ಯಾರಿಗೂ ಯಾವ ಕರ್ತವ್ಯಕ್ಕೂ ಬದ್ಧಳಾಗಲಿಲ್ಲ. ಬಡತನದಲ್ಲಿಯೇ ಇರಲಿ, ಸಿರಿತನದಲ್ಲಿಯೇ ಇರಲಿ ಎಲ್ಲಾ ಆಶೆಗಳಿಂದಲೂ ಆಸಕ್ತಿಗಳಿಂದಲೂ ಸಂಬಂಧಗಳಿಂದಲೂ ಕೊರತೆಗಳಿಂದಲೂ ಅವಶ್ಯಕತೆಗಳಿಂದಲೂ ನಾವು ಕಳಚಿಕೊಳ್ಳಬೇಕು. ನಾವು ಯಾವಾಗಲೂ ಮುಕ್ತರೇ. ಆ ರಾಣಿಯು ಅರಮನೆಯಲ್ಲಿ ಇರುವ ಎಲ್ಲಾ ಕಾಲದಲ್ಲಿಯೂ ತನ್ನ ಸ್ಥಿತಿಯನ್ನು ಈ ರೀತಿಯಿಂದಲೇ ಇಟ್ಟುಕೊಂಡಿದ್ದಳು.

ಒಂದು ರಾತ್ರಿ ರಾಜನು ರಾಣಿಯ ಹತ್ತಿರ ಬಂದು, ತಮ್ಮ ಹೆಣ್ಣು ಮಕ್ಕಳನ್ನೂ ಗಂಡುಮಕ್ಕಳನ್ನೂ ಯಾವಾಗಲೂ ಕೊಲ್ಲುತ್ತಿರುವುದು ಹಿತವೂ ಸಾಧ್ಯವೂ ಅಲ್ಲವೆಂದೂ ಬೇರೆ ಮಗುವನ್ನು ದತ್ತು ತೆಗೆದುಕೊಳ್ಳುವ ಇಚ್ಛೆಯೂ ತನಗಿಲ್ಲವೆಂದೂ ತಿಳಿಸಿದನು, ಆದ್ದರಿಂದ ರಾಜ್ಯದಲ್ಲಿ ಶಾಂತಿಯನ್ನು ನೆಲೆಗೊಳಿಸುವುದಕ್ಕಾಗಿ ಬಹಳ ಆಲೋಚನೆ

ಮಾಡಿ. ಇನ್ನೊಂದು ಲಗ್ನ ಮಾಡಿಕೊಳ್ಳುವದೇ ಯೋಗ್ಯವೆಂದು ತಾನು ನಿಶ್ಚಯ ಮಾಡಿರುವದಾಗಿ ರಾಜನು ತನ್ನ ಪತ್ನಿಗೆ ಹೇಳಿದನು. ಅನ್ಯರಿಂದ ಸುಖವನ್ನು ಪಡೆಯದೆ, ಆನಂದ ಸ್ವರೂಪವಾದ ತನ್ನ ಆತ್ಮನಲ್ಲಿಯೇ ಯಾವಾಗಲೂ ಆಕೆಯು ರಮಿಸುತ್ತಿದ್ದುದರಿಂದ, ತನ್ನ ಸುಖಕ್ಕೆ ರಾಜನು ಕಾರಣನೆಂದು ಆಕೆ ಎಂದೂ ತಿಳಿದಿರಲಿಲ್ಲ. ಆದ್ದರಿಂದ ರಾಜನ ಇಚ್ಛೆಗೆ ಕೂಡಲೇ ಆಕೆಯು ಮನಃಪೂರ್ವಕವಾಗಿ ಒಪ್ಪಿಕೊಂಡಳು. ಆಕೆಯು ತನ್ನ ಸರ್ವ ಸುಖವನ್ನೂ ಒಳಗಿನ ದೇವರಿಂದ ಪಡೆಯುತ್ತಿದ್ದಳೇ ಹೊರತು ತನ್ನ ಗಂಡನಿಂದಾಗಲೀ ತಂದೆಯಿಂದಾಗಲೀ ಮಕ್ಕಳಿಂದಾಗಲೀ ಪಡೆಯುತ್ತಿರಲಿಲ್ಲ. ಎಂಥಾ ಪರಿಸ್ಥಿತಿಯಲ್ಲಿಯೂ ತಳಮಳಗೊಳ್ಳದೆ, ಒಂದೇ ಸಮನಾಗಿರುವ ಆಕೆಯ ಸಮಾಧಾನವನ್ನೂ ಸಂತೋಷವನ್ನೂ ನೋಡಿ ರಾಜನಿಗೆ ಅತ್ಯಂತ ಆಶ್ಚರ್ಯವಾಯಿತು ; ಆಗಿನ ಹೊಸ ಸನ್ನಿವೇಶದಲ್ಲಿ ಆಕೆಯ ಇಚ್ಛೆಯೇನೆಂದು ಕೇಳಿದನು. ತನ್ನ ಪತಿಯ ಇಚ್ಛೆಯೇ ತನ್ನ ಇಚ್ಛೆಯೆಂದೂ ತನಗೆ ಬೇರೆ ಇಚ್ಛೆಯೇ ಇಲ್ಲವೆಂದೂ ರಾಣಿಯು ಹೇಳಿದಳು. ಆಕೆಯು ಅರಮನೆಯಲ್ಲಿದ್ದರೆ ಸ್ನೇಹ ಸಮಾಧಾನಗಳಿಗೆ ಭಂಗ ಬರಬಹುದಾದುದರಿಂದ ಆಕೆಯು ಹೊರಟುಹೋಗುವದೇ ಲೇಸೆಂದು ರಾಜನು ಹೇಳಿದನು. ಆ ಕೂಡಲೇ ರಾಣಿಯು ತನ್ನ ರಾಜ ವೈಭವದ ವಸ್ತ್ರಾಭರಣಗಳನ್ನೆಲ್ಲಾ ಬಿಚ್ಚಿಟ್ಟು, ಪುನಃ ತನ್ನ ವನವಾಸಿ ಭಿಕ್ಷುಕಿಯ ಹಳೆಯ ಹರಕು ಬಟ್ಟೆಗಳನ್ನೇ ಧರಿಸಿಕೊಂಡು ಅರಮನೆಯನ್ನು ಬಿಟ್ಟು ತನ್ನ ಅರಣ್ಯದ ಮನೆಗೆ ಹಿಂದಿರುಗಿ ಹೋದಳು. ಆಗಲೂ ಆಕೆಯು ಸಂತೋಷವಾಗಿಯೇ ಇದ್ದಳು. ಸಮಸ್ತ ರಾಜವೈಭವವನ್ನೂ ಪರಿತ್ಯಾಗ ಮಾಡಿ ಬಂದ ಮಗಳನ್ನು ನೋಡಿದ ತಂದೆಯೂ ಎಂದಿನಂತೆ ಸಂತೋಷವಾಗಿಯೇ ಇದ್ದನು. ತನ್ನನ್ನು ಸೇವಿಸುತ್ತಿದ್ದ ರಾಜನ ಸೇವಕನನ್ನು ವೃದ್ಧನು ಕೂಡಲೇ ರಾಜನಲ್ಲಿಗೇ ಹಿಂದಕ್ಕೆ ಕಳಿಸಿಕೊಟ್ಟನು.

ಒಂದು ದಿನ ರಾಜನು ಆಕೆಯನ್ನು ಸಂತೈಸುವ ಉದ್ದೇಶದಿಂದ ಕುದುರೆಯ ಮೇಲೆ ಆಕೆಯ ಪರ್ಣ ಕುಟೀರದ ಮುಂದೆ ಹಾದುಹೋಗುತ್ತಿದ್ದನು. ಆದರೆ ಆಕೆಯು ನಗುನಗುತ್ತಲೇ ಸಂತೋಷವಾಗಿರುವದನ್ನು ನೋಡಿ, ಆಕೆಯನ್ನು ಸಮಾಧಾನ ಮಾಡುವ ಆವಶ್ಯಕತೆಯು ರಾಜನಿಗೆ ಕಾಣಲಿಲ್ಲ. ಆಗ ಪುನಃ ಅರಮನೆಗೆ ಬಂದು ನೂತನ ವಧುವನ್ನು ಸ್ವೀಕರಿಸಿ ಸ್ವಾಗತಿಸುವದಕ್ಕೆ ಆಕೆಯು ಬರಬಲ್ಲಳೇ ?–ಎಂದು ರಾಜನು ಆಕೆಯನ್ನು ಕೇಳಿದನು. ಅದಕ್ಕೆ ಆಕೆಯು ಸಂತೋಷದಿಂದ ಒಪ್ಪಿದಳು. ಆಕೆಯು ಮೊದಲಿನಂತೆ ಅರಮನೆಗೆ ಬಂದು, ಮಂತ್ರಿಗಳೂ ಅಧಿಕಾರಿಗಳೂ ಅವರ ಪತ್ನಿಯರೂ ಆಶ್ಚರ್ಯಪಡುವಂತೆ ತನ್ನ ಪತಿಯ ಪುನರ್ವಿವಾಹಕ್ಕಾಗಿ—ಅತಿಶಯ ಸುಂದರವಾಗಿಯೂ ಮನೋಹರವಾಗಿಯೂ ವ್ಯವಸ್ಥೆಗಳನ್ನು ಮಾಡಿದಳು. ಆಗಿನ ಏರ್ಪಾಡಿನಂತೆ ನವವಧುವು ದೊಡ್ಡ ಸೈನ್ಯದೊಡನೆ ಸುವರ್ಣ ರತ್ನಾಭರಣಗಳ ಭವ್ಯವಾದ ಬಳುವಳಿಯನ್ನು — ಮರೋಪಚಾರಗಳನ್ನು—ತೆಗೆದುಕೊಂಡು ರಾಜನಲ್ಲಿಗೆ

ಬರಬೇಕಾಗಿತ್ತು. ಆಕೆಯು ಹಾಗೆಯೇ ಮಹಾ ವೈಭವದಿಂದಲೂ ಆಡಂಬರದಿಂದಲೂ ರಾಜಧಾನಿಯೊಳಗೆ ಬಂದಳು. ರಾಜನ ಅನುಜ್ಞೆಯಂತೆ ಮಹಾರಾಣಿಯು ಆಸ್ಥಾನದ ಇತರ ಮಹಿಳೆಯರೊಡನೆ ಆ ನೂತನ ವಧುವಿಗೆ ಮಹಾ ರಾಜ ವೈಭವದ ಸ್ವಾಗತವನ್ನು ನೀಡಿದಳು, ಆಕೆಯನ್ನು ನೋಡಿದ ಕೂಡಲೇ ಮಹಾರಾಣಿಯು ಸ್ವಂತ ತಾಯಿಯಂತೆ ಆ ಹೊಸ ವಧುವನ್ನು ಪ್ರೀತಿಸಿ, ಮುತ್ತಿಟ್ಟು, ಆಲಂಗಿಸಿದಳು. ಮದುವಣಗಿತ್ತಿಯ ಸೌಂದರ್ಯವನ್ನು ನೋಡಿ ಮಹಾರಾಣಿಯೂ ಇತರ ಶ್ರೀಮಂತ ಮಹಿಳೆಯರೂ ಬೆರಗಾಗಿ ಹೋದರು. ಆದರೆ ಹಳೆಯ ರಾಣಿಯ ಅಸಾಧಾರಣವಾದ ನೈತಿಕ ಸೌಂದರ್ಯವನ್ನು ನೋಡಿ ಎಲ್ಲರೂ ಹೆಚ್ಚು ವಿಸ್ಮಯ ಮೂಕರಾದರು. ವಧುವಿನ ಜೊತೆಗೆ ಇಬ್ಬರು ಪುಟ್ಟ ಸಹೋದರರಿದ್ದರು. ಆ ದೇಶದ ಪದ್ಧತಿಯಂತೆ ಶ್ರೀಮಂತ ಸ್ತ್ರೀ ಪುರುಷರು ಆ ದಿನ ಅರಮನೆಯಲ್ಲಿ ದೊಡ್ಡ ಔತಣದ ಭೋಜನ ಮಾಡಬೇಕಾಗಿತ್ತು. ಎಲ್ಲಾ ಕಾರ್ಯಗಳಲ್ಲಿಯೂ ಹಳೆಯ ಮಹಾರಾಣಿಯೇ ಅಧ್ಯಕ್ಷಿಣಿಯಾಗಿದ್ದಳು. ಆಕೆಯ ಸೌಮ್ಯವೂ ಶಾಂತವೂ ಪ್ರಸನ್ನವೂ ಆದ ಸ್ವಭಾವವನ್ನೂ ಗಂಭೀರ ವರ್ತನೆಯನ್ನೂ ನೋಡಿ ಎಲ್ಲ ಜನರ ಹೃದಯವೂ ಕರಗಿ ಕಣ್ಣುಗಳಲ್ಲಿ ನೀರು ಸುರಿಯಿತು. ವಿವಾಹ ಕಾರ್ಯಕಲಾಪಗಳೆಲ್ಲಾ ಮುಗಿದ ಮೇಲೆ ತಾನು ಅರಮನೆಯನ್ನು ಬಿಟ್ಟು ಪುನಃ ಅರಣ್ಯದ ತೌರುಮನೆಗೆ ತಂದೆಯ ಸಮೀಪಕ್ಕೆ ಹೋಗುವದಾಗಿಯೂ ಪುನಃ ಅವಶ್ಯವಾದಾಗ ಕರೆಯುವದಕ್ಕೆ ಸಂಕೋಚ ಪಡಬಾರದೆಂದೂ ರಾಣಿಯು ಮಹಾರಾಜನಿಗೆ ಹೇಳಿದಾಗ ಅಲ್ಲಿದ್ದ ಎಲ್ಲಾ ಸ್ತ್ರೀ ಪುರುಷರ ಮನಸ್ಸೂ ಕರಗಿ, ಕರುಣೆಯ ಸೆಲೆಯೊಡೆದು ಬಿಕ್ಕಿ ಬಿಕ್ಕಿ ಅಳತೊಡಗಿದರು. ಅವರು ತಮ್ಮ ಹೃದಯದ ಕಾಠಿಣ್ಯಕ್ಕಾಗಿ ಪಶ್ಚಾತ್ತಾಪಪಟ್ಟರು. "ಮಹಾಮಾತೆ! ನೀನು ಭಿಕ್ಷುವಿನ ಪುತ್ರಿ ಅಲ್ಲಮ್ಮ ದೇವಪುತ್ರಿ, ದೇವರ ಮಗಳು". ಎಂದು ಅವರು ಉದ್ಗಾರಮಾಡಿದರು. ದೇಶದ ಶಾಂತಿಯನ್ನು ರಕ್ಷಣೆ ಮಾಡುವದಕ್ಕಾಗಿ ತನ್ನ ಮಕ್ಕಳನ್ನು ಕೊಲೆಮಾಡುವದಕ್ಕೆ ಆಕೆಯು ಹೇಗೆ ಅವಕಾಶ ಕೊಟ್ಟು ಮಹಾ ಬಲಿದಾನಮಾಡಿದ್ದಳೆಂದು ಅವರು ಮರಮರ ಮರುಗಿ ಮಾತನಾಡಿಕೊಂಡರು, ಇದನ್ನು ಕೇಳಿದ ಹೊಸರಾಣಿಯೂ ಅಳತೊಡಗಿದಳು. "ಅಯ್ಯೋ ! ನಿಮ್ಮ ಪುತ್ರ ಪುತ್ರಿಯರೆಲ್ಲಾ ಕೊಲೆಯಾದ ರಕ್ತದ ಹೊಳೆಯಲ್ಲಿ ಹಾದು ನಾನು ಈ ಅರಮನೆಗೆ ಬರಬೇಕಾಯಿತೆ ?" ಎಂದು ಸಣ್ಣ ರಾಣಿಯು ದೊಡ್ಡ ರಾಣಿಗೆ ಹೇಳಿ ಗೋಳಾಡಿದಳು. ನಿರಪರಾಧಿಗಳಾದ ಸ್ವಂತ ಮಕ್ಕಳನ್ನೇ ಕೊಲ್ಲಿಸಿದ್ದು ಘೋರ ಪಾಪವೂ ಅನ್ಯಾಯವೂ ಆಯಿತೆಂದು ಎಲ್ಲರೂ ಸೇರಿ ಕ್ರೂರ ಹೃದಯಿಯಾದ ರಾಜನನ್ನು ನಿಂದಿಸತೊಡಗಿದರು.

ಆಗ ರಾಜನು ಎದ್ದು, ಕಣ್ಣುಗಳಲ್ಲಿ ಧಾರಾಕಾರವಾಗಿ ನೀರು ಸುರಿಯುತ್ತಿರಲು "ಮಂತ್ರಿಗಳೇ, ಅಧಿಕಾರಿಗಳೆ, ಶ್ರೀಮಂತ ಜನರೆ, ಬಂಧುಗಳೆ, ಉದಾತ್ತಭಾವದ ಮಹಿಳೆಯರೆ ! ಮಹಾರಾಣಿ ಒಬ್ಬಳ ಹೊರತು ನೀವೆಲ್ಲರೂ ದುಃಖಿಸುತ್ತಿದ್ದೀರಿ,

ಅಳುತ್ತಿದ್ದೀರಿ. ಸುಖ–ದುಃಖ ಮಿಶ್ರವಾದ ಭಾವನೆಗಳಿಂದ ನಾನೂ ಅಳುತ್ತಿದ್ದೇನೆ. ಓ ಪ್ರಜೆಗಳೆ ! ನಿಮ್ಮನ್ನು ನಾನು ದೂಷಿಸುವದಿಲ್ಲ. ನೀವೆಲ್ಲಾ ನನ್ನ ಮಕ್ಕಳು. ನನ್ನ ಕಣ್ಣುಗಳಿಂದಲೂ ನೀರು ಹರಿಯುತ್ತಿದೆ, ನಿಜ. ಆದರೆ ಅದು ಶೋಕದ ಕಣ್ಣೀರಲ್ಲ ; ಇದು ಸಂತೋಷಗಳ ಬಾಷ್ಪ ; ಆನಂದಬಾಷ್ಪ. ನಿಮ್ಮ ದುಃಖಾಶ್ರುವೂ ಆನಂದ ಬಾಷ್ಪವಾಗಲಿ". ಎಂದು ಹೇಳಿ ಗ್ರಿಸೆಲ್ಡಾ ರಾಣಿಯನ್ನು ಕುರಿತು "ದೇವೀ! ಎಂಥಾ ಘೋರ ವಿಪತ್ತು ಬಂದರೂ ಇಡೀ ರಾಜ್ಯದಲ್ಲಿ ನೀನೊಬ್ಬಳೇ ಯಾವಾಗಲೂ ಸಂತೋಷಚಿತ್ತದಿಂದಿರತಕ್ಕವಳು. ದೇವರ ದಯೆಯಿಂದ ಈಗ ನಿನಗೆ–ನಿಮಗೆಲ್ಲಾ–ಸಂತೋಷದ ವಿಷಯವನ್ನೇ ಹೇಳಬೇಕಾಗಿದೆ. ನನಗೂ ಪರಮಾಪ್ತ ಜನರಿಂದ ಕೆಲವು ಗಂಟೆಗಳ ಮುಂಚೆ ಈ ರಹಸ್ಯವು ತಿಳಿದು ಅತ್ಯಾಶ್ಚರ್ಯವೂ ಅತ್ಯಾನಂದವೂ ಆಯಿತು. ಈ ನೂತನ ವಧುವು, ಆಕೆಯನ್ನು ವಿವಾಹ ಮಾಡಿಕೊಡುವದಕ್ಕಾಗಿ ಇಲ್ಲಿಗೆ ಕರೆತಂದಿರುವ ರಾಜನ ಔರಸಪುತ್ರಿಯಲ್ಲ ; ಈತನ ಸಾಕುಮಗಳು. ಈಕೆಯ ಸಹೋದರರಿಬ್ಬರೂ ಹಾಗೆಯೇ ಸಾಕು ಮಕ್ಕಳು. ಈ ಮಕ್ಕಳು ಅನಾಥರಾಗಿ ಆ ರಾಜನಿಗೆ ದೈವಯೋಗದಿಂದ ಸಿಕ್ಕರು. ಅವನು ಇವರ ಆಕರ್ಷಕವಾದ ಸೌಂದರ್ಯಕ್ಕಾಗಿ ಮನಸೋತು ಇವರನ್ನು ತನ್ನ ಮಕ್ಕಳೆಂಬಂತೆ ಪ್ರೀತಿಸಿ ಪಾಲಿಸಿದನು. ಈ ಮೂವರೂ ನನ್ನ ಮತ್ತು ಮಹಾರಾಣಿ ಗ್ರಿಸೆಲ್ಡಾಳ ಮಕ್ಕಳು. ಇವರನ್ನು ಕೊಲೆ ಮಾಡುವದಕ್ಕಾಗಿ ತೆಗೆದುಕೊಂಡು ಹೋದ ಕೊಲೆಗಾರರು ನಿರಪರಾಧಿಗಳಾದ ಈ ಎಳೆಮಕ್ಕಳನ್ನು ನಿರ್ದಯವಾಗಿ ಕೊಲ್ಲುವದಕ್ಕೆ ಮನಸ್ಸು ಬಾರದೆ ಇವರನ್ನು ಒಯ್ದು ಆ ರಾಜನಿಗೆ ಕೊಟ್ಟರು. ನನ್ನ ಮಗಳೆಂಬುದನ್ನು ತಿಳಿಯದೆ ಆ ರಾಜನು ಈಕೆಯನ್ನು ನನಗೆ ಲಗ್ನಮಾಡಿಕೊಡಲು ಇಷ್ಟೆಲ್ಲಾ ಪ್ರಯತ್ನ ಮಾಡಿದನು. ಆದರೆ ಆಗಬಾರದುದು ಆಗುವದಕ್ಕೆ ಮುಂಚೆ ದೈವಾನುಗ್ರಹದಿಂದ ಈ ವಿಷಯವೆಲ್ಲಾ ತಿಳಿದು ನಾವು ಧನ್ಯರಾದೆವು." ಎಂದು ಹೇಳಿದನು.

ಹೀಗೆ ಸಮಸ್ತ ಪ್ರಜೆಗಳ ಸಮ್ಮತಿಯಿಂದಲೂ ಸಂತೋಷದಿಂದಲೂ ಗ್ರಿಸೆಲ್ಡಾ ನೇ ಮಹಾರಾಣಿಯಾಗಿ ಉಳಿದಳು. ಆಕೆಯ ಮಕ್ಕಳೇ ರಾಜ್ಯಕ್ಕೆ ಉತ್ತರಾಧಿಕಾರಿಗಳಾದರು. ಇದರಿಂದ, ದೇವರು ತನ್ನ ಭಕ್ತರನ್ನು ಎಂದೂ ಕೈಬಿಡುವದಿಲ್ಲವೆಂದೂ ತನ್ನ ಮೇಲಿನ ನಿಷ್ಕಾಮ ಪ್ರೇಮದಿಂದ ಭಕ್ತರು ತನಗಾಗಿ ಮಾಡಿದ ತ್ಯಾಗವನ್ನು ಕೃತಜ್ಞನಾದ ದೇವರು ಬಡ್ಡಿ ಸಹಿತ ತೀರಿಸುವನೆಂದೂ ಸ್ಪಷ್ಟವಾಗುತ್ತದೆ.

ಪ್ರತಿಯೊಬ್ಬ ವಿವಾಹಿತ ಸ್ತ್ರೀಯೂ ತನ್ನ ಪ್ರೇಮದಲ್ಲಿ ಇಂಥಾ ರಾಜಯೋಗ್ಯವಾದ ಸಮರ್ಪಣೆಯನ್ನು ಮಾಡಲಿ. ಇಂಡಿಯಾ ದೇಶದಲ್ಲಿ ಇವರನ್ನು ಪತಿವ್ರತೆಯರೆಂದು ಕರೆಯುತ್ತಾರೆ. ಪತ್ನಿಯು ಪತಿಯಲ್ಲಿಯೂ ಪತಿಯು ಪತ್ನಿಯಲ್ಲಿಯೂ ಒಂದಾಗಿ ಜೀವಿಸಬೇಕು. ಸ್ತ್ರೀಯರು ಪತಿವ್ರತೆಯರಾಗಿರುವಂತೆ ಪುರುಷರೂ ಪತ್ನೀವ್ರತಸ್ಥರಾಗಬೇಕು. ಪತ್ನಿಯು ಪತಿಯಲ್ಲಿ ದೇವರನ್ನೇ ನೋಡಬೇಕು ; ತನ್ನ ತನು

ಮನಗಳನ್ನೂ ಸಮಸ್ತವನ್ನೂ ಪತಿಗೆ ಪ್ರೀತಿಯಿಂದ ಒಪ್ಪಿಸಬೇಕು. ಪತಿಯೂ ಪತ್ನಿಯಲ್ಲಿರುವ ದೇವರಿಗೆ ತನ್ನನ್ನು ಪೂರ್ಣವಾಗಿ ಒಪ್ಪಿಸಿಕೊಳ್ಳಬೇಕು. ಇಬ್ಬರಲ್ಲಿಯೂ ವೈಯಕ್ತಿಕ ಎನ್ನುವದೂ ಸ್ವಾರ್ಥ ಎನ್ನುವದೂ ಯಾವದೂ ಇಲ್ಲ. ಇಂಡಿಯಾ ದೇಶದಲ್ಲಿ ವಿವಾಹ ಮಹೋತ್ಸವವು ಸಾಮಾನ್ಯವಾಗಿ, ನದಿಗಳ ತೀರದಲ್ಲಿ, ಬಯಲಿನಲ್ಲಿ, ಮನೋಹರವಾದ ಮಂದಮಾರುತವು ಬೀಸುತ್ತಿರುವಾಗ, ಸೂರ್ಯನು ಹಿತವಾಗಿ ತಲೆಯ ಮೇಲೆ ಬೆಳಗುತ್ತಿರುವಾಗ ನಡೆಯುತ್ತದೆ. ಹೆಣ್ಣು ತನ್ನ ಕೈಯನ್ನು ಗಂಡಿನ ಕೈಯಲ್ಲಿಡಬೇಕು ; ಗಂಡು ಹೆಣ್ಣಿನ ಕೈಯನ್ನು ಹಿಡಿದು ಎರಡು ಕೈಯಗಳನ್ನೂ ದೇವರಿಗೆ ಒಪ್ಪಿಸಬೇಕು. ಗ್ರಿಸೆಲ್ಡಾಗೆ ಹೇಗೆ ಯಾವ ಆಸಕ್ತಿಯೂ ಇರಲಿಲ್ಲವೋ ಹಾಗೆ ಹೆಣ್ಣಿಗೆ ಯಾವ ಆಸಕ್ತಿಯೂ ಇರಬಾರದು ; ತಮ್ಮನ್ನು ತಾವು ದೇವರಿಗೆ, ಆತ್ಮನಿಗೆ ಒಪ್ಪಿಸಿಕೊಳ್ಳಬೇಕು.

ಪುರುಷರೂ ಹೀಗೆಯೇ ಮಾಡಬೇಕು. ಗಂಡನು ಹೆಂಡತಿಯಲ್ಲಿಯೂ ಹೆಂಡತಿಯು ಗಂಡನಲ್ಲಿಯೂ ತನ್ನ ತನ್ನ ಪ್ರತ್ಯೇಕ ವ್ಯಕ್ತಿತ್ವವನ್ನು ಕಳೆದುಕೊಂಡರೆ ವಿವಾಹಿತ ಜೀವನವು ಸುಖಿಯಾಗದೆ ಇರುವದೇ ಇಲ್ಲ. ಏಕಾತ್ಮಭಾವದಿಂದಲೇ ಜೀವನವೂ ಪ್ರೇಮವೂ ಸುಖಪ್ರದವಾಗುತ್ತವೆ.

೧೬೦. ನಿಜವಾದ ವೇದಾಂತ

(ಕೃಷ್ಣ-ಅರ್ಜುನ)

ನೀವು ವ್ಯಕ್ತಿತ್ವವನ್ನೂ ದೇಹವನ್ನೂ ಮೀರಿ ನಿಂತಾಗ ಬೇರೆ ವ್ಯಕ್ತಿಗಳೂ ದೇಹಗಳೂ ಸಹ ನಿಮ್ಮ ದೃಷ್ಟಿಗೆ ಸುಳ್ಳಾಗುತ್ತವೆ ; ವಾಸ್ತವವಾಗಿ ಉಳಿಯುವದಿಲ್ಲ ; ಚೈತನ್ಯ ಸ್ವರೂಪವೇ ಆಗುತ್ತವೆ. ಹೀಗಿರುವಾಗ ಲಕ್ಷಾಂತರ ಸೂರ್ಯರೂ ನಕ್ಷತ್ರಗಳೂ ನಿರ್ನಾಮವಾದರೂ ಸತ್ಯವನ್ನು ಅರಿತವನಿಗೆ ಅದು ಮಹತ್ತ್ವವಲ್ಲ. ಕುರಿಗಳೂ ಮೇಕೆಗಳೂ ಎತ್ತುಗಳೂ ಸತ್ತರೆ ಅವನಿಗೆ ಅದು ವಿಶೇಷವಲ್ಲ.

ಪ್ರಪಂಚದಲ್ಲಿಯೇ ಅತ್ಯಂತ ಮಹತ್ತಾದ—ಭಾರತದೇಶದ-ಕುರುಕ್ಷೇತ್ರ ಯುದ್ಧದಲ್ಲಿ ಶ್ರೀ ಕೃಷ್ಣನು ಅರ್ಜುನನಿಗೆ ಸಾರಥಿಯಾಗಿದ್ದನು. ಯುದ್ಧದಲ್ಲಿ ಲಕ್ಷಾಂತರ ಜನರನ್ನು ಕೊಲ್ಲಬೇಕಲ್ಲಾ—ಎಂಬ ಅತೀವ ಕರುಣೆಗೂ ಕನಿಕರಕ್ಕೂ ವಿಷಾದಕ್ಕೂ ಅರ್ಜುನನು ಒಳಗಾದನು. ಅವನು ಕೊಲೆಯ ದೆಸೆಯಿಂದ ಭೀತನೂ ವ್ಯಥಿತನೂ ಆದನು. ಅತಿಯಾದ ಮೋಹವೂ ಮರುಕವೂ ಅವನ ಮನಸ್ಸನ್ನು ಮುಸುಕಿ ಶೋಕ ಸಾಗರದಲ್ಲಿ ಮುಳುಗಿಸಿತು. ಪರಮಾತ್ಮನ ಅವತಾರನೂ ಮಾನವ ಜನ್ಮದಲ್ಲಿ ಎಂದಾದರೂ ಅತ್ಯಂತ ಶ್ರೇಷ್ಠ ಪುರುಷನೂ ಇಂಡಿಯಾ ದೇಶಕ್ಕೆ ಮಾತ್ರವಲ್ಲದೆ ವಿಶ್ವಕ್ಕೇ ಕ್ರಿಸ್ತನೂ ಆಗಿದ್ದ ಕೃಷ್ಣನು ಅರ್ಜುನನ ಶೋಕ ಮೋಹಗಳನ್ನು ಕಳೆಯುವದಕ್ಕಾಗಿ ತತ್ತ್ವಜ್ಞಾನವನ್ನು ಉಪದೇಶ ಮಾಡಿದನು. ಅವನು ಶರೀರವೂ ವ್ಯಕ್ತಿಯೂ ಅಲ್ಲವೆಂದು ಹೇಳಿ ಅವನಲ್ಲಿ ಪರಮಾತ್ಮ ಪ್ರಜ್ಞೆಯನ್ನು ಎಚ್ಚರಗೊಳಿಸಿದನು.

ಕೃಷ್ಣನು ಅವನನ್ನು ಕುರಿತು "ಎಲೈ ಅರ್ಜುನ! ಆತ್ಮ ತತ್ತ್ವವನ್ನು ಅರಿಯದ್ದರಿಂದ ನಿನಗೆ ಈ ಶೋಕಮೋಹಗಳು ಉಂಟಾಗಿವೆ. ಎಲ್ಲರಲ್ಲಿರುವ ಆತ್ಮನು ಒಬ್ಬನೇ. ಈ ಲೋಕಕ್ಕೆಲ್ಲಾ ಸೂರ್ಯನು ಒಬ್ಬನೇ; ಅವನ ಪ್ರತಿಬಿಂಬಗಳು ಅನೇಕವಾಗಿವೆ. ಒಂದೊಂದು ಜಲಾಶಯದಲ್ಲಿಯೂ ಒಂದೊಂದು ಪ್ರತಿಬಿಂಬವಿದೆ. ಜಲಾಶಯಗಳಂತೆ ದೇಹಗಳು; ಜಲಗಳಂತೆ ಅಂತಃಕರಣಗಳು; ಪ್ರತಿಬಿಂಬಗಳಂತೆ ಜೀವರು. ಸೂರ್ಯನಂತೆ ಆತ್ಮನೊಬ್ಬನೇ ನಿತ್ಯನೂ ನಿರ್ವಿಕಾರಿಯೂ, ಮಿಕ್ಕ ಎಲ್ಲವೂ ನಶ್ವರವಾದವುಗಳು; ತೋರಿ ಅಡಗತಕ್ಕವುಗಳು; ಸಂಕ್ಷೋಭದವುಗಳು. (ಪ್ರತಿಬಿಂಬಗಳ ನಿಜವಾದ ರೂಪ, ಮೂಲರೂಪನಾದ ಸೂರ್ಯನೆ;) ಎಲಾ ಜೀವರ ನಿಜವಾದ ರೂಪ ಪರಮಾತ್ಮನೆ. ಆದ್ದರಿಂದ ನೀನು ಎಂದೂ ಸಾಯತಕ್ಕವನಲ್ಲ; ಇವರು ಯಾರೂ ಸಾಯತಕ್ಕವರಲ್ಲ. ಎಲ್ಲರ ದೇಹಗಳೂ ಎಂದಾದರೂ ಯಾವ ಕಾರಣದಿಂದಲಾದರೂ ಸಾಯತಕ್ಕವೆ. ಆತ್ಮಸ್ವರೂಪದಿಂದ ನೋಡಿದಾಗ ನೀನು "ನಾನು ಕೊಲ್ಲುತ್ತೇನೆ" ಎಂಬ ಕರ್ತೃತ್ವದ ಅಭಿಮಾನವಿಲ್ಲದವನು; ಈ ಭೀಷ್ಮಾದಿಗಳೂ ಸೈನಿಕರೂ ಯಾರೂ ಕೊಲ್ಲಲ್ಪಡತಕ್ಕವರಲ್ಲ. ದೇಹವು ಯಾವ ಮಾರ್ಪಾಡನ್ನು ಹೊಂದಿದರೂ ಆತ್ಮನಲ್ಲಿ ಯಾವ ವಿಕಾರವೂ ಆಗುವಂತಿಲ್ಲ. ಆದ್ದರಿಂದ ಯಾವ ಬಗೆಯಿಂದಲೂ ಮಾರ್ಪಡಿಸಲಾಗದ ಈ ಆತ್ಮನ ವಿಷಯದಲ್ಲಿ ಶೋಕ ಮಾಡಬೇಡ. ಆತ್ಮನು, ಶರೀರವು ಹುಟ್ಟುವಾಗ ಹುಟ್ಟಿ ಅದು ಸಾಯುವಾಗ ಅದರ ಜೊತೆಯಲ್ಲಿಯೇ ಸಾಯುವನೆಂಬ ಸಾಮಾನ್ಯರ ನಂಬಿಕೆಯನ್ನೇ ನೀನು ಇಟ್ಟು ಕೊಂಡರೂ ಶೋಕಕ್ಕೆ ಕಾರಣವಿಲ್ಲ. ಹುಟ್ಟಿ ಸಾಯುವದೇ ಆತ್ಮನ ಸ್ವಭಾವವಾದರೆ ಅದಕ್ಕಾಗಿ ಶೋಕ ಪಡುವದೇಕೆ? ಆದರೆ ವಸ್ತುಸ್ಥಿತಿಯು ಹೀಗಿಲ್ಲ; ಆತ್ಮನು ಎಂದೆಂದೂ ಸಾಯತಕ್ಕವನಲ್ಲ; ಆದ್ದರಿಂದ ಅವನನ್ನು ಏತರಿಂದ ಕೊಲ್ಲುವದೂ ಸಾಧ್ಯವಲ್ಲ. ಇದರಿಂದ ಕನಿಕರಕ್ಕೂ ಶೋಕಕ್ಕೂ ಕಾರಣವೇ ಇಲ್ಲ. ಭಯಪಡುವದೇಕೆ? ನಡುಗುತ್ತೀ ಏಕೆ? ಈಗಿನ ನಿನ್ನ ಧರ್ಮವೇನು? ಎಂಬುದನ್ನು ವಿಚಾರ ಮಾಡು. ಇವರೆಲ್ಲರನ್ನೂ ಕೊಲ್ಲುವದೇ ಈಗಿನ ನಿನ್ನ ಕ್ಷಾತ್ರ ಧರ್ಮವಾದರೆ, ಲೋಕಧರ್ಮವಾದರೆ, ನಿರ್ದಾಕ್ಷಿಣ್ಯವಾಗಿ ಮರುಕವಿಲ್ಲದೆ ಕೊಲ್ಲು. ಯುದ್ಧವು ನಿನಗೆ ಸ್ವಧರ್ಮವೆಂಬ ದೃಷ್ಟಿಯಿಂದ ನೋಡಿದರೂ ವಿಷಾದಪಡುವದಕ್ಕೆ ಕಾರಣವಿಲ್ಲ.

ಪ್ರಕಾಶಗಳಿಗೆಲ್ಲಾ ಪ್ರಕಾಶನೂ ದೇವಾಧಿದೇವನೂ ಆದ ನಾನು ಪ್ರತಿ ನಿಮಿಷದಲ್ಲಿಯೂ ಕೋಟ್ಯಂತರ ಕ್ರಿಮಿಕೀಟ ಪಶುಪಕ್ಷಿ ಮೊದಲಾವುಗಳನ್ನೆಲ್ಲಾ ಕೊಲ್ಲುತ್ತಿದ್ದೇನೆ. ಮಹಾ ಪ್ರಕೃತಿಮಾತೆಯಾದ ನಾನು ಸಂತತವಾಗಿ ಎಲ್ಲವನ್ನೂ ಸೃಷ್ಟಿಸುತ್ತಿರುವಂತೆಯೇ ರಕ್ಷಣೆಯನ್ನು ಮಾಡಿ ನಾಶವನ್ನೂ ಮಾಡುತ್ತಿದ್ದೇನೆ. ಆದರೂ ನಾನು ಪರಿಶುದ್ಧನೂ ನಿಷ್ಕಳಂಕನೂ ಆಗಿದ್ದೇನೆ. ದೇವರು ಕೊಂದರೆ ದೇವರು ದೂಷಿತನಾಗುವನೆ? ನಿನ್ನ ಆತ್ಮನೇ ದೇವರೆಂದು ನೀನು ತಿಳಿದರೆ ನಿನ್ನ ದೇಹವು

ಅಥವಾ ನಿನ್ನ ವ್ಯಕ್ತಿತ್ವವು ದೇವರ ಕಾರ್ಯಕ್ಕೆ ಒಂದು ಸಾಧನ ಮಾತ್ರ ಆಗುತ್ತದೆ ; ನಿಮಿತ್ತ ಮಾತ್ರ ಆಗುತ್ತದೆ. ಆಗ ಸತ್ಯ-ಧರ್ಮಗಳ ರಕ್ಷಣೆಗಾಗಿಯೂ ನ್ಯಾಯ ವನ್ನು ಎತ್ತಿ ಹಿಡಿಯುವದಕ್ಕಾಗಿಯೂ ನೀನು ನಿನ್ನ ದೇಹದಿಂದ ಲಕ್ಷಾಂತರ ಜನರನ್ನು ಕೊಂದರೂ ನಿನಗೆ ಪಾಪವಿಲ್ಲ : ನೀನು ಪರಿಶುದ್ಧನೇ ಇರುತ್ತೀಯು."

ಜನರು ಈ ಮಾತಿನ ಸತ್ಯತೆಯನ್ನು ಮನಗಾಣಬೇಕು. ನೀವು ಇದರ ಸತ್ಯತೆಯನ್ನು ಕಂಡುಕೊಳ್ಳಬಹುದು ಅಥವಾ ಇಲ್ಲದಿರಬಹುದು ; ಆದರೆ ರಾಮನಂತು ಅವನ್ನು ಹೇಳದಿರಲಾರನು.

ಅರ್ಜುನನು, ಆಚಾರ್ಯರನ್ನೂ ತಂದೆಯು ವಾವೆಯವರನ್ನೂ ಮಕ್ಕಳು, ಅಜ್ಜಂದಿರು, ಸೋದರ ಮಾವಂದಿರು, ಮಾವಂದಿರು, ಮುಮ್ಮಕ್ಕಳು, ಭಾವಮೈದು ನರು, ನೆಂಟರು ಇವರೇ ಮೊದಲಾದ ಅತ್ಯಂತ ಪ್ರಿಯರನ್ನೂ ಸಮೀಪದ ಬಂಧು ಗಳನ್ನೂ ಪೂಜ್ಯರನ್ನೂ ಧರ್ಮಕ್ಕಾಗಿ ಹಿಂದು ಮುಂದು ನೋಡದೇ ಕೊಲ್ಲಬಹು ದೆಂದು ಕೃಷ್ಣನು ಹೇಳಿದ್ದೇ ವೇದಾಂತದ ಉಪದೇಶ. ಹೀಗಿರುವಾಗ ಮೇಕೆಗಳ ನ್ನಾಗಲೀ ಕುರಿಗಳನ್ನಾಗಲೀ ದನಗಳನ್ನಾಗಲೀ ಯಾವದೇ ಪ್ರಾಣಿಗಳನ್ನಾಗಲೀ ಕೊಲ್ಲುವದಕ್ಕೆ ವೇದಾಂತವು ಹೇಗೆ ಶಂಕಿಸೀತು ? ಆದರೂ ವೇದಾಂತವು ಮಾಂಸಾ ಹಾರವನ್ನು ತೀರಾ ಬೇರೆ ಕಾರಣಗಳಿಗಾಗಿ ನಿಷೇಧಿಸುತ್ತದೆ.

ಮಾಂಸವನ್ನು ಸೇವಿಸುವವರಿಗೆ ಚಿತ್ತವು ಸುಲಭವಾಗಿ ಏಕಾಗ್ರವಾಗುವದಿಲ್ಲ; ಬೇರೆ ಬೇರೆ ಆಹಾರಗಳು ಬೇರೆ ಬೇರೇ ಪರಿಣಾಮಗಳನ್ನು ಉಂಟುಮಾಡುತ್ತವೆ. ಮದ್ಯಪಾನದಿಂದ ಅಮಲು ಬರುತ್ತದೆ. ಅಫೀಮಿನಿಂದ ಬುದ್ಧಿ ವಿಕಲ್ಪವಾಗುತ್ತದೆ; 'ಅರ್ಸೆನಿಕ್' ತಿಂದರೆ ವಿಶಿಷ್ಟ ಪರಿಣಾಮ ಉಂಟಾಗುತ್ತದೆ. ಹೀಗೆ ಒಂದೊಂದು ಆಹಾರದಿಂದ ಒಂದೊಂದು ಪರಿಣಾಮವಾಗುವದನ್ನು ಯಾರೂ ಅಲ್ಲಗಳೆಯಲಾರರು; ಮಾಂಸಾಹಾರದಿಂದ ಉಂಟಾಗುವ ಪರಿಣಾಮವು ಧರ್ಮಸಾಧಕರಿಗೆ ಹಿತವಾದುದಲ್ಲ. ಆದ್ದರಿಂದ ಧರ್ಮಶ್ರದ್ಧೆ ಉಳ್ಳವರು ಮಾಂಸಾಹಾರವನ್ನು ಬಿಟ್ಟರೆ ಒಳ್ಳೆಯದು. ಒಂದು ವೇಳೆ ಮಾಂಸ ಸೇವನೆಯ ಅಭ್ಯಾಸವನ್ನು ಬಿಡುವದು ಸಾಧ್ಯವಾಗದಿದ್ದರೆ ಬಿಡಬೇಡಿ ; ತಿನ್ನಿರಿ ; ಅದೇನೂ ಮಹಾಪರಾಧವಲ್ಲ". ಎಂದು ವೇದಾಂತವೇ ಹೇಳುತ್ತದೆ.

ನೀವು ಕ್ಷತ್ರಿಯರೂ ಯೋಧರೂ ಸರ್ವದಾ ತೀವ್ರ ಕಾರ್ಯಾಸಕ್ತರೂ ಆಗಿದ್ದರೆ ನೀವು ಮಾಂಸಾಹಾರವನ್ನು ಮಾಡುವದು ಅತ್ಯವಶ್ಯ ; ಕೇವಲ ಕಾಯಿಪಲ್ಯಗಳನ್ನೂ ಧಾನ್ಯಾಹಾರವನ್ನೂ ತಿಂದಿರಬಾರದು ಎಂದು ವೇದಾಂತವು ಹೇಳುತ್ತದೆ. ಮಾಂಸಾ ಹಾರವನ್ನು ಬಿಟ್ಟಿದ್ದರಿಂದ ಕೆಲವರಿಗೆ ಒಳ್ಳೆಯದಾಗಬಹುದು ; ಕೆಲವರಿಗೆ ಕೆಟ್ಟದ್ದಾಗ ಬಹುದು. ಅವರವರ ಹಿತಾಹಿತಗಳನ್ನು ಅವರವರೇ ಕಂಡುಕೊಳ್ಳಬೇಕು. ಸತ್ತ್ವವುಳ್ಳದ್ದು ಬದುಕಿ ಬೆಳೆಯಬೇಕೆಂಬದೇ ಪ್ರಕೃತಿ ನಿಯಮ. ಸಾವಿರಾರು

ಮೀನುಗಳನ್ನು ತಿಂದು ತಿಮಿಂಗಿಲಗಳು ಬದುಕುತ್ತವೆ. ದೊಡ್ಡದಾದ ತಿಮಿಂಗಿಲವು ಬದುಕುವದಕ್ಕಾಗಿ ಸಾವಿರಾರು ಸಣ್ಣ ಮೀನುಗಳು ಬಲಿಯಾಗಬೇಕೆಂಬುದೇ ಪ್ರಕೃತಿ ನಿಯಮ, ಜಗತ್ತಿನಲ್ಲಿ ಖನಿಜ ವರ್ಗಕ್ಕಿಂತಲೂ ಶ್ರೇಷ್ಠವಾದ ಸಸ್ಯವರ್ಗವು ಬೆಳೆಯುಲೆಂದೇ ಖನಿಜವರ್ಗದ ಮಣ್ಣು ಮೊದಲಾದವುಗಳು ಸಸ್ಯಕ್ಕೆ ಆಹಾರವಾಗಿ ನಾಶ ಹೊಂದಿ ಸಸ್ಯವನ್ನು ಬೆಳೆಸುತ್ತವೆ. ಪುನಃ ಶ್ರೇಷ್ಠವಾದ ಪ್ರಾಣಿಗಳು ಬದುಕಲೆಂದೇ ಕನಿಷ್ಠವಾದ ಸಸ್ಯಗಳು ಅವುಗಳಿಗೆ ಆಹಾರವಾಗುತ್ತವೆ. ಹಾಗೆಯೇ ಸರ್ವ ಶ್ರೇಷ್ಠವಾದ ಮನುಷ್ಯನು ಜೀವಿಸುವದಕ್ಕಾಗಿ ಸಸ್ಯಗಳೂ ಪ್ರಾಣಿಗಳೂ ಅವನಿಗೆ ಆಹಾರವಾಗಿವೆ : ಮಿಕ್ಕೆಲ್ಲ ಪ್ರಾಣಿಗಳೂ ಅವನ ಸೇವೆಯನ್ನು ಮಾಡಬೇಕಾಗಿದೆ. ಮನುಷ್ಯನು ಪ್ರಾಣಿಗಳನ್ನು ತಿನ್ನಲೇಬೇಕೆಂದು ರಾಮನು ಹೇಳುವದಿಲ್ಲ ; ಅವುಗಳನ್ನು ವಿಹಿತವಾಗಿ ಉಪಯೋಗಿಸಿಕೊಳ್ಳಬೇಕು. ಇದರಿಂದ ಅವುಗಳ ಪೋಷಣೆಯೂ ಆಗುತ್ತದೆ. ಪ್ರಪಂಚದ ಜನ ಸಾಮಾನ್ಯರಲ್ಲಿ ಹೆಚ್ಚಿನ ಶಕ್ತಿಯುಳ್ಳವರು ಸ್ವಾಭಾವಿಕವಾಗಿ ಮುಂದುವರಿಯುತ್ತಿರುವದನ್ನು ನೋಡುತ್ತೇವೆ. ವ್ಯಾಪಕವಾಗಿ ಯುದ್ಧಗಳೂ ರೋಗಗಳೂ ಬಂದಾಗ ಪ್ರಬಲ ಪ್ರಕೃತಿಗಳ ಉಳಿವಿಗಾಗಿ ದುರ್ಬಲ ಪ್ರಕೃತಿಗಳು ನಾಶವಾಗುತ್ತವೆ. ಇದೇ ಪ್ರಕೃತಿಯ ಯೋಜನೆ. ಈ ಋತ ನಿಯಮವು ಇಡೀ ವಿಶ್ವವನ್ನೇ ಆಳುತ್ತಿದೆ.

ಹೀಗೆ, ರಾಮನು ಹೇಳುವದೇನೆಂದರೆ. ಮಾಂಸವನ್ನು ತಿನ್ನುವದರಿಂದ ಹೆಚ್ಚು ಉತ್ತಮವಾಗಿ ಲೋಕಹಿತವನ್ನು ಸಾಧಿಸಬಹುದಾದರೆ ಶಂಕೆ ಮಾಡದೆ ತಿನ್ನಿ. ಆದರೆ ಅದನ್ನು ಬಿಡುವದರಿಂದ ಶ್ರೇಷ್ಠತರವಾದ ಸತ್ಯ-ಧರ್ಮಗಳನ್ನು ಉತ್ತಮ ರೀತಿಯಿಂದ ಸೇವಿಸಬಹುದಾದರೆ ಅದನ್ನು ಕಷ್ಟಪಟ್ಟಾದರೂ ಬಿಟ್ಟು ಬಿಡಿ.

ಪ್ರತಿಯೊಬ್ಬನೂ ತನ್ನ ಅಲ್ಪವಾದ ಜೀವಾತ್ಮನನ್ನು ದೇವರ ಆತ್ಮವೆಂದು ಕಾಣಬೇಕು. ವೇದಾಂತದ ಪ್ರಕಾರ ಪ್ರತಿಯೊಬ್ಬನೂ ಪ್ರತಿಯೊಂದು ಕಾರ್ಯವನ್ನೂ ವ್ಯಕ್ತಿಭಾವನೆ ಇಲ್ಲದೆ, ನಿಸ್ವಾರ್ಥವಾಗಿ ಮಾಡಬೇಕು. ನೀವು ಯಾವದನ್ನು ಮಾಡಿದರೂ ಏನನ್ನೂ ಮಾಡಿಲ್ಲದಿರುವಂತೆ ಮಾಡಬೇಕು, ಇರಬೇಕು. ಅಂದರೆ ಅಹಂಕಾರದಿಂದಲೂ ಆಶೆಯಿಂದಲೂ ಏನನ್ನೂ ಮಾಡಬಾರದು. ಆದರೆ ಮಾಂಸದ ರುಚಿಯ ಸುಖಕ್ಕಾಗಿ ಅದನ್ನು ತಿಂದರೆ ಅದು ಪಾಪವಾಗುತ್ತದೆ. ವಿಷಯ ಸುಖಕ್ಕಾಗಿ ಯಾವದನ್ನು ಮಾಡಿದರೂ ಪಾಪವಾಗುವಂತೆ ಅದೂ ಪಾಪವಾಗುತ್ತದೆ. ಕಟುಕರ ಅಂಗಡಿಗಳಲ್ಲಿ ನೇತು ಕಟ್ಟಿರುವ ಮಾಂಸದ ತುಂಡುಗಳನ್ನು ನೋಡಿ ಬೀದಿಯಲ್ಲಿ ಹೋಗುತ್ತಿರುವ ಕೆಲವು ಜನರು, ಮೂರ್ಛೆ ಹೋಗತಕ್ಕವರು ಇಂಡಿಯಾದಲ್ಲಿದ್ದಾರೆ. ಅವರು ಅದನ್ನು ತಿನ್ನುವದಿರಲಿ, ಅದರ ನೋಟವನ್ನು ಸಹ ಸಹಿಸಲಾರರು.

ರುಚಿಕರವಾದ ಪದಾರ್ಥಗಳು ಉಪಯೋಗಕರವಾಗಿರುವದೂ ಉಂಟು ; ಆದರೆ ಬಹಳ ರುಚಿಯಾದದ್ದೂ ವಿಷವಾಗುವದೂ ಉಂಟು. ಆದ್ದರಿಂದ ರುಚಿಯೇ ಮುಖ್ಯವಲ್ಲ.

ಹಿತವಾಗಿರುವುದು ಮುಖ್ಯ. ಅದರಲ್ಲಿಯೂ ಒಬ್ಬರ ಹಿತಕ್ಕಿಂತಲೂ ಬಹು ಜನರ ಹಿತವು ಬಹಳ ಮುಖ್ಯ. ಬಹು ಜನರ ಹಿತವು ಅಥವಾ ಲೋಕಹಿತವು ಮಾಂಸಾಹಾರದಿಂದ ಸಾಧಿಸುವದಾದರೆ ಅವಶ್ಯವಾಗಿ ಅದನ್ನು ಮಾಡಬೇಕು.

೧೬೧. ಸ್ವರ್ಗವಾಗಿ ಪರಿವರ್ತನೆಯಾದ ನರಕ

(ಅತ್ಯಂತ ಕೆಳಗಿನ ನರಕದಲ್ಲಿ ವಿಜ್ಞಾನಿಗಳು)

ಈ ಪ್ರಪಂಚದಲ್ಲಿ ಕೋಪವಿದೆಯಲ್ಲ, ಏಕೆ ? ನಾವು ದುರ್ಬಲತೆಗೆ ಅವಕಾಶ ಕೊಡಬಾರದೆಂದೂ ಸಮಾಧಾನವನ್ನು ಕಳೆದುಕೊಳ್ಳಬಾರದೆಂದೂ ನಿತ್ಯವೂ ಉಚ್ಚ ಸ್ವರದಿಂದ ಮಾಡುವ ಉಪದೇಶಗಳನ್ನು ಕೇಳುತ್ತೇವೆ. ಆದರೂ ಆ ಗುಣಗಳನ್ನು ಸಾಧಿಸಬೇಕಾದ ಸಮಯ ಬಂದಾಗ ಮನೋ ದೌರ್ಬಲ್ಯಕ್ಕೇ ಬಲಿಯಾಗುತ್ತೇವೆ. ಅದೇಕೆ ? ಕ್ರೋಧವೇಕೆ ? ದ್ವೇಷವೇಕೆ ? ಸ್ವಾರ್ಥ ಸಾಧನೆಯ ಭಾವನೆಯೇಕೆ ? ಇನ್ನೂ ಬೇರೆ ಬೇರೆ ಪಾಪಗಳೇಕೆ? ಈ ಪಾಶವೀ ಕಾಮಗಳೇಕೆ ? ಈ ಎಲ್ಲಾ ಪಾಪಗಳಿಗೂ ವೇದಾಂತವು ಒಂದೇ ನಿಯಮದ ಆಧಾರದ ಮೇಲೆ ಒಂದೇ ರೀತಿಯ ವಿವರಣೆಯನ್ನೂ ಸಮಾಧಾನವನ್ನೂ ನೀಡುತ್ತದೆ. ಈ ಎಲ್ಲಾ ಪಾಪಗಳ ವಿವರ ಗಳನ್ನೂ ವಿಸ್ತಾರವಾಗಿ ವಿಚಾರ ಮಾಡುವದಕ್ಕೆ ಈಗ ಕಾಲಾವಕಾಶವೇ ಇಲ್ಲ.ಅವುಗಳ ವಿಷಯದಲ್ಲಿ ಹೆಚ್ಚು ತಿಳಿವಳಿಕೆಯನ್ನು ಪಡೆಯಬೇಕೆಂದಿದ್ದರೆ ನೀವು ರಾಮನ ಹತ್ತಿರ ಬನ್ನಿ. ಈ ಎಲ್ಲಾ ಪಾಪಗಳ ಕಾರಣಗಳನ್ನೂ ಸ್ವಭಾವ ಲಕ್ಷಣಗಳನ್ನೂ ಅವುಗಳ ಫಲ ಗಳನ್ನೂ ಪರಿಹಾರಗಳನ್ನೂ ಕೂಲಂಕಷವಾಗಿ ರಾಮನು ನಿಮಗೆ ವಿವರಿಸುತ್ತಾನೆ. ಆದರೆ ಈಗ ಅಲ್ಪವೇ ಕಾಲವಿರುವದರಿಂದ ರಾಮನು ಸುಮ್ಮನೆ ಅವನ್ನೆಲ್ಲಾ ಸಂಗ್ರಹ ಮಾಡಿ ನಿಮಗೆ ಹೇಳುತ್ತಾನೆ. ಈ ಎಲ್ಲಾ ಪಾಪಗಳಿಗೂ ಅಜ್ಞಾನವೇ ಕಾರಣವೆಂಬು ದನ್ನು ನೀವು ಮರೆಯಬಾರದೆಂದು ಮಾತ್ರ ಈಗ ಹೇಳಿರುತ್ತಾನೆ. ದೇಹೇಂದ್ರಿಯಗಳೇ ನೀವೆಂಬ, ಮನಸ್ಸೇ ನೀವೆಂಬ ತಪ್ಪು ತಿಳಿವಳಿಕೆಯನ್ನು ಅಜ್ಞಾನವು ಹುಟ್ಟಿಸುತ್ತದೆ. ಈ ಅಜ್ಞಾನವೊಂದನ್ನು ನೀವು ಕಳೆದುಕೊಂಡರೆ ಯಾವ ಪಾಪವೂ ಉಳಿಯುವದಿಲ್ಲ. ಈ ಪಾಪಗಳನ್ನು ಬೇರೆ ರೀತಿಯಿಂದ ಪರಿಹರಿಸಿಕೊಳ್ಳುವ ಪ್ರಯತ್ನವನ್ನು ಮಾಡಿದ್ದಾದರೆ ಅದು ನಿಷ್ಫಲವಾಗುತ್ತದೆ. ಏಕೆಂದರೆ, ವಾಸ್ತವವಾಗಿರುವ ಯಾವ ಕಾರಣವನ್ನು ನಾಶ ಮಾಡುವದಕ್ಕೆ ಆಗಲಾರದೋ ಆ ಕಾರಣವಾದ ವಸ್ತುವನ್ನಾಗಲೀ ಶಕ್ತಿಯನ್ನಾಗಲೀ ರೂಪಾಂತರಗೊಳಿಸಬಹುದೇ ಹೊರತು ಪೂರ್ಣ ನಾಶಮಾಡುವದು ಸಾಧ್ಯವಲ್ಲವೆಂಬದು ಅಬಾಧಿತವಾದ ವೈಜ್ಞಾನಿಕ ನಿಯಮ. ಆದರೆ ಅಜ್ಞಾನವು ನಿಜವಾಗಿಲ್ಲವಾದರೂ ಇದ್ದಂತೆ ತೋರುತ್ತಿರುವದರಿಂದ ಅದನ್ನು ಕಳೆಯಬಹುದು ; ನಾಶಮಾಡಬಹುದು, ಮಕ್ಕಳು ಹುಟ್ಟಿದಾಗ ಅವಕ್ಕೆ ಅನೇಕ ವಿಷಯಗಳ ವಿಚಾರದಲ್ಲಿ ಅಜ್ಞಾನವಿರುತ್ತದೆ. ಅವು ಬೆಳೆಯುತ್ತಾ ಬೆಳೆಯುತ್ತಾ ಹಲವು ವಿಷಯಗಳ ಜ್ಞಾನವನ್ನು ಗಳಿಸುತ್ತ ಗಳಿಸುತ್ತಾ ಹೋದಂತೆ ಆಯಾ ವಿಷಯಗಳ ಅಜ್ಞಾನವೂ

ಕ್ರಮೇಣ ಕಳೆಯುತ್ತಾ ಬರುತ್ತದೆ. ಹೀಗೆ ಜ್ಞಾನಸಾಧನೆಯಿಂದ ಅಜ್ಞಾನವನ್ನು ಕಳೆಯಬಹುದು.

ನಿಮ್ಮಲ್ಲಿ ಕಾಮ, ಕ್ರೋಧ, ಲೋಭ, ಮೋಹಾದಿ ಪಾಪಗಳನ್ನು ನಡೆಸುವದಕ್ಕೆ ಪ್ರೇರೇಪಿಸುವ ಒಂದು ಶಕ್ತಿಯಿದೆ. ನಿಮ್ಮ ಉಪನ್ಯಾಸಗಳಿಂದಲೂ ಉಪದೇಶಗಳಿಂದಲೂ ಈ ಶಕ್ತಿಯನ್ನು ಯಾವ ರೀತಿಯಿಂದಲೂ ನಾಶಮಾಡುವುದು ಸಾಧ್ಯವಲ್ಲ. ಅದನ್ನು ಉಡುಗಿಸುವದಕ್ಕಾಗಲೀ ಅಡಗಿಸುವದಕ್ಕಾಗಲೀ ಎಂದಿಗೂ ಶಕ್ಯವಲ್ಲ. ನಾವು ಆ ಶಕ್ತಿಯನ್ನು ಅಧ್ಯಾತ್ಮೀಕರಣವನ್ನು ಮಾತ್ರ ಮಾಡಬಹುದೆಂದು ವೇದಾಂತವು ಹೇಳುತ್ತದೆ. ಅದನ್ನು ಸಾಮಾನ್ಯವಾಗಿ ದುರುಪಯೋಗ ಮಾಡುತ್ತಿದ್ದೇವೆ ; ಅದನ್ನು ಸದುಪಯೋಗ ಮಾಡಿಕೊಳ್ಳಬೇಕು. ಇಡೀ ಜಗತ್ತಿಗೇ ಸ್ವಾಮಿಯಾಗಿರುವ ನಿಮ್ಮಲ್ಲಿರುವ ಚೈತನ್ಯದ ಶಕ್ತಿ ಅದು ; ನಿಮ್ಮ ನಿಜಾತ್ಮನ ಶಕ್ತಿಯೇ ಅದು. ಅದಕ್ಕೆ ಪ್ರತಿಯಾದುದೇ ಇಲ್ಲ. ಸಮಾನವಾದುದಾಗಲೀ ವಿರುದ್ಧವಾದುದಾಗಲೀ ಇಲ್ಲ.

ಪ್ರತಿಯೊಬ್ಬನಿಗೂ ಮುಕ್ತನಾಗಬೇಕೆಂಬ ಇಚ್ಛೆಯಿದೆ ; ಸ್ವತಂತ್ರನಾಗಬೇಕೆಂಬ ಇಚ್ಛೆಯಿದೆ. ಆ ಇಚ್ಛೆಯ ಮೂಲಸ್ವಭಾವ ಲಕ್ಷಣಗಳೇನು ? ನಮಗೆ ಸಮಾನವೂ ಪ್ರತಿಸ್ಪರ್ಧಿಯೂ ಆದ ಎರಡನೆಯ ಯಾವದೂ ಇಲ್ಲದ ಅತ್ಯುನ್ನತವಾದೊಂದು ಭೂಮಿಕೆಗೆ ಏರುವದೇ ಮುಕ್ತಸ್ಥಿತಿಯಾಗಿದೆ. ನೀವು ಆ ಸ್ಥಿತಿಯನ್ನು ಪಡೆಯಬೇಕೆಂಬುದೇ ಆತ್ಮ ಶಕ್ತಿಯ ಇಚ್ಛೆಯಾಗಿದೆ. ಏಕೆಂದರೆ, ಆತ್ಮ ಚೈತನ್ಯವು ಸಮ-ವಿರೋಧರಹಿತವಾದ ಅದ್ವಿತೀಯ ಶಕ್ತಿಯು–ತತ್ತ್ವವು. ಸ್ವಾರ್ಥಭಾವನೆಯನ್ನು ನಾಶಮಾಡುವದಕ್ಕೋಸ್ಕರ ಅದಕ್ಕೆ ಕಾರಣವಾದ ಆತ್ಮಶಕ್ತಿಯನ್ನು ನಾಶ ಮಾಡುವದು ಸಾಧ್ಯವಲ್ಲ. ನಿತ್ಯವಾದ ಆತ್ಮಚೈತನ್ಯವು ಅವಿನಾಶಿಯಾದುದರಿಂದ ಅದರ ಶಕ್ತಿಯೂ ಅವಿನಾಶಿ. ಯಾವ ಶಕ್ತಿಯನ್ನಾದರೂ ವಸ್ತುವನ್ನಾದರೂ ದುರುಪಯೋಗಪಡಿಸಿ ಸ್ವರ್ಗವನ್ನೂ ನರಕವನ್ನಾಗಿ ಮಾಡಿಕೊಳ್ಳಬಹುದು ; ಅಥವಾ ಅದನ್ನೇ ಸದುಪಯೋಗ ಪಡಿಸಿ ನರಕವನ್ನೇ ಸ್ವರ್ಗವನ್ನಾಗಿ ಮಾರ್ಪಡಿಸಿಕೊಳ್ಳಬಹುದು.

ಇಂಗ್ಲೆಂಡಿನಲ್ಲಿ ಕ್ರೈಸ್ತಪಾದ್ರಿಯ ಕತೆಯೊಂದಿದೆ. ಅವನು ಪ್ರಸಿದ್ಧ ವಿಜ್ಞಾನಿಗಳಾದ ಡಾರ್ವಿನ್ ಮತ್ತು ಹಕ್ಸ್ಲಿ ಮೊದಲಾದ ಮಹಾಪುರುಷರ ಮರಣದ ವಿಚಾರವನ್ನು ಓದಿದನು. ಅವರು ಸ್ವರ್ಗಕ್ಕೆ ಹೋಗಿರಬಹುದೋ ನರಕಕ್ಕೆ ಹೋಗಿರಬಹುದೋ ಎಂದು ಅವನು ಮನಸ್ಸಿನಲ್ಲಿಯೇ ಯೋಚಿಸತೊಡಗಿದನು. ಅವನು ಆ ವಿಷಯದಲ್ಲಿಯೇ ಬಹಳವಾಗಿ ಯೋಚಿಸಿ ಯೋಚಿಸಿ ಸಂತ್ರಸ್ತನಾದನು. "ಈ ಜನರು ಯಾವ ಅಪರಾಧಗಳನ್ನೂ ಮಾಡದಿದ್ದರೂ ಬೈಬಲನ್ನೂ ಕ್ರಿಸ್ತನನ್ನೂ ನಂಬಿರಲಿಲ್ಲ ; ನಿಜವಾದ ಅರ್ಥದಲ್ಲಿ ಅವರು ಕ್ರೈಸ್ತರಾಗಿರಲಿಲ್ಲ. ಆದ್ದರಿಂದ ಅವರು ನರಕಕ್ಕೇ ಹೋಗಿರಬೇಕು." ಆದರೆ ಆ ತೀರ್ಮಾನವು ಅವನಿಗೆ ಸಮಾಧಾನವನ್ನು ಕೊಡಲಿಲ್ಲ; ಪುನಃ ಅವನು ಮತ್ತೊಂದು ರೀತಿಯಲ್ಲಿ ಯೋಚಿಸುವದಕ್ಕೆ ತೊಡಗಿದನು.

"ಅವರೂ ಒಳ್ಳೆಯ ಮನುಷ್ಯರಿದ್ದರು. ಅವರು ಪ್ರಪಂಚದಲ್ಲಿ ಕೆಲವು ಒಳ್ಳೆಯ ಕಾರ್ಯಗಳನ್ನೇ ಮಾಡಿದ್ದರು. ಅವರು ನರಕಕ್ಕೆ ಅರ್ಹರಾಗಿರಲಿಲ್ಲ; ಹಾಗಾದರೆ ಅವರು ಈಗ ಎಲ್ಲಿರಬಹುದು ?" ಹೀಗೆ ಯೋಚಿಸುತ್ತ ಯೋಚಿಸುತ್ತಾ ಮಲಗಿ ಅವನು ನಿದ್ರೆಹೋದನು. ಆಗ ಅವನು ಅತ್ಯಂತ ವಿಸ್ಮಯಂಕರವಾದೊಂದು ಕನಸನ್ನು ಕಂಡನು. ತಾನೇ ಸತ್ತಿರುವಂತೆ ಅವನಿಗೆ ಕಂಡಿತು. ಎಲ್ಲಕ್ಕೂ ಮೇಲಿನ ಅತ್ಯಂತ ಶ್ರೇಷ್ಠವಾದ ಸ್ವರ್ಗಕ್ಕೆ ಅವನು ಕರದೊಯ್ಯಲ್ಪಟ್ಟನು. ಅವನು ನೀರಿಕ್ಷಿಸಿದ್ದ ಜನರೆಲ್ಲಾ ಅಲ್ಲಿರುವದನ್ನು ಕಂಡನು. ಅವನ ದೇವಾಲಯಕ್ಕೆ (ಚರ್ಚಿಗೆ) ಬರುತ್ತಿದ್ದ ಎಲ್ಲಾ ಕ್ರೈಸ್ತಸಹೋದರರನ್ನೂ ಅಲ್ಲಿ ಕಂಡನು. ಆಗ ಅವನು ಹಕ್ಸ್ಲೆ ಮತ್ತು ಡಾರ್ವಿನ್ ವಿಜ್ಞಾನಿಗಳ ವಿಷಯವನ್ನು ಅಲ್ಲಿ ವಿಚಾರಿಸಿದನು. ಅದಕ್ಕೆ ಅವರು ಅತ್ಯಂತ ಕೆಳಗಿನ ನರಕದಲ್ಲಿದ್ದಾರೆಂದು ಸ್ವರ್ಗದ ದ್ವಾರಪಾಲಕನು ಅಥವಾ ವ್ಯವಸ್ಥಾಪಕನು ಹೇಳಿದನು. ತಾನು ಆ ಕನಿಷ್ಠತಮ ನರಕಕ್ಕೆ ಹಾರಿಹೋಗಿ, ಸುಮ್ಮನೆ ಅವರನ್ನು ನೋಡಿ, ಪವಿತ್ರ ಬೈಬಲ್ ವೇದವನ್ನು ಅವರಿಗೆ ಉಪದೇಶಮಾಡಿ, ಅವರು ಬೈಬಲ್ಲಿನ ಅಕ್ಷರ ಅಕ್ಷರದಲ್ಲಿಯೂ ವಿಶ್ವಾಸವನ್ನಿಡದೆ, ಹೀನವಾದ ಅಪರಾಧವನ್ನು ಮಾಡಿದ್ದಾರೆಂಬ ಅವರಿಗೆ ಸಾಧ್ಯವಾದರೆ ತೋರಿಸಿ ಬರುವದಕ್ಕೆ, ಅವಕಾಶವಿದೆಯೆ ? ಎಂದು ವಿಚಾರ ಮಾಡಿದನು. ಗೊಂದಲ-ತೊಂದರೆಗಳ ಅನಂತರ ಆ ವ್ಯವಸ್ಥಾಪಕನು ಅನುಕೂಲವಾಗಿ ಅತ್ಯಂತ ಅಧೋಭಾಗದ ನರಕಕ್ಕೆ ಅವನಿಗಾಗಿ ಒಂದು ಟಿಕೆಟ್ ತಂದುಕೊಡಲು ಒಪ್ಪಿದನು. ಸ್ವರ್ಗ-ನರಕಗಳಿಗೂ ರೈಲುಗಾಡಿಯಲ್ಲಿ ಹೋಗಿ ಬರುವದೆಂದರೆ ನಿಮಗೆ ಆಶ್ಚರ್ಯವಾಗಬಹುದು. ಆದರೆ ಆಗ ಅವನಿಗೆ ಹಾಗೇ ಆಯಿತು. ಏಕೆಂದರೆ, ರೈಲುಗಾಡಿಗಳ ಪ್ರಯಾಣದಿಂದಲೂ ಟೆಲಿಗ್ರ್ಯಾಫ್‌ಗಳಿಂದಲೂ ಮಿತಿಮೀರಿ ತುಂಬಿ ಹೋಗಿದ್ದ ಸನ್ನಿವೇಶಗಳಲ್ಲಿ ಅವನು ಜೀವಿಸಿದ್ದನು. ಆದ್ದರಿಂದ ಅವನ ಕಲ್ಪನೆಯಲ್ಲಿಯೂ ಕನಸಿನಲ್ಲಿಯೂ ಸ್ವರ್ಗನರಕಗಳ ಜೊತೆಗೆ ರೈಲು ಪ್ರವಾಸವೂ ಕೂಡಿಕೊಂಡಿದ್ದರೆ ಆಶ್ಚರ್ಯವಲ್ಲ.

ಒಳ್ಳೆಯದು ; ಈ ಪಾದ್ರಿಯು ಮೊದಲನೇ ತರಗತಿಯ ಟಿಕೆಟ್ಟನ್ನೇ ಪಡೆದಿದ್ದನು. ಅವನು ರೈಲಿನಲ್ಲಿ ಮುಂದೆ ಮುಂದೆ ಬಹಳ ದೂರ ಹೋದನು. ಮೇಲಿನ ಕೊನೆಯ ಸ್ವರ್ಗದಿಂದ ಕೆಳಗಿನ ಕಟ್ಟಕಡೆಯ ನರಕಕ್ಕೆ ಅವನು ಹೋದುದರಿಂದ ನಡುವೆ ಅನೇಕ ಸ್ಟೇಷನ್‌ಗಳನ್ನು ಹಾದುಹೋಗಬೇಕಾಯಿತು. ಆ ನಡುವಿನ ಕೆಲವು ಸ್ಟೇಷನ್‌ಗಳಲ್ಲಿ ಇಳಿದು ನೋಡಿದರೆ, ಕೆಳಕೆಳಗೆ ಹೋದಂತೆ ಆ ನರಕಗಳು ಹೆಚ್ಚು ಹೆಚ್ಚು ಕೆಟ್ಟು ಹೋಗಿದ್ದವು, ಕೊನೆಯದರ ಒಂದು ಹಿಂದಿನ ಸ್ಟೇಷನ್ನಿಗೆ ಬಂದಾಗ ಅವನಲ್ಲಿರುವ ಎಲ್ಲಾ ಕರವಸ್ತ್ರಗಳನ್ನೂ ಮೂಗಿಗೆ ಒತ್ತಿ ಹಿಡಿದರೂ ಅಲ್ಲಿಂದ ಹೊರಡುತ್ತಿದ್ದ ದುರ್ವಾಸನೆಯನ್ನು ಸಹಿಸುವದು ಸಾಧ್ಯವಾಗದೆ, ಮೂರ್ಛೆ ಹೋಗುವಂತಾಯಿತು. ಅಲ್ಲಿ ಅನೇಕ ಜನರು ನೋವಿನಿಂದ ಕೂಗುತ್ತಾ ಕಿರಿಚುತ್ತಾ ಅಳುತ್ತಾ ಹಲ್ಲು ಹಲ್ಲು ಕಡಿಯುತ್ತಾ ಬೊಬ್ಬೆ ಹೊಡೆಯುತ್ತಾ ಇದ್ದರು. ಅವನು

ಆ ಆಕ್ರಂದನವನ್ನು ಕೇಳಲಾರದೆ, ಆ ಭಯಂಕರ ದೃಶ್ಯವನ್ನು ನೋಡಲಾರದೆ, ಆ ದಾರುಣ ದುಃಖವನ್ನು ಕಂಡು ಸಹಿಸಲಾರದೆ, ಹಟದಿಂದ ಅಲ್ಲಿಗೆ ಬಂದುದಕ್ಕಾಗಿ ಪಶ್ಚಾತ್ತಾಪಪಟ್ಟನು.

ಕೆಲವು ನಿಮಿಷಗಳಲ್ಲಿ ಆಗರ ಮುಂದಿನ ಕೊನೆಯ ಸ್ಟೇಷನ್ನೇ ಬಂದಿತು. ಅಲ್ಲಿ "ಕೆಳಗಿನ ಕೊನೆಯ ನರಕ. ಅತ್ಯಂತ ಕನಿಷ್ಠ ನರಕ" ಎಂದು ಪ್ರಯಾಣಿಕರ ಸೌಕರ್ಯಕ್ಕಾಗಿ ಜನರು ಕೂಗಿ ಹೇಳುತ್ತಿದ್ದರು. ಆ ಸ್ಟೇಷನ್ನಿನ ಗೋಡೆಗಳ ಮೇಲೆಲ್ಲಾ ದೊಡ್ಡ ಅಕ್ಷರಗಳಿಂದ "ಅಧಮಾಧಮ ನರಕ" "ಅತ್ಯಂತ ಭೀಕರ ಭೀಭತ್ಸ ನರಕ" ಎಂದು ಮೊದಲಾಗಿ ತೊಳಗಿ ಬೆಳಗುವಂತೆ ರಕ್ತವರ್ಣದಲ್ಲಿ ಬರೆದಿದ್ದಿತು. ಆದರೆ, ಆ ಮಾತಿಗೆ ಪೂರಾ ವಿರುದ್ಧವಾದ ದೃಶ್ಯವನ್ನೇ ನೋಡಿ ಅವನಿಗೆ ಆಶ್ಚರ್ಯವಾಯಿತು. ಅವನು ಪ್ರತಿಯೊಬ್ಬರನ್ನೂ ಕುತೂಹಲದಿಂದ ಕೇಳುವದಕ್ಕೆ ತೊಡಗಿದನು. "ಆಹಾ! ಇದು ಕನಿಷ್ಠ ನರಕವಲ್ಲ; ಇದು ನರಕವೇ ಅಲ್ಲ; ಖಂಡಿತ ಸುಳ್ಳು! ಅಲ್ಲವೇ ಅಲ್ಲ! ಇದು ಸ್ವರ್ಗವೇ ಸರಿ! ಅತ್ಯಂತ ಶ್ರೇಷ್ಠ ಸ್ವರ್ಗವೇ ಇರಬೇಕು!" ಹೀಗೆಂದು ಅವನು ಆಶ್ಚರ್ಯ ಸಂತೋಷಗಳಿಂದ ಕುಣಿದಾಡಿ ಕೂಗಾಡಿದನು. ಅಷ್ಟರಲ್ಲಿ ರೈಲ್ವೇ ಗಾರ್ಡ್ ಬಂದು "ಇಳಿಯಿರಿ ಸ್ವಾಮಿ! ಇದೇ ಕೊನೆಯ ಕನಿಷ್ಠ ನರಕ; ನಿಮ್ಮ ಉದ್ದಿಷ್ಟವಾದ ಕೊನೆಯ ಗಮ್ಯಸ್ಥಾನವೇ ಇದು; ಇಳಿಯಿರಿ ಎಂದು ಕೈ ಹಿಡಿದು ಇಳಿಸಿದನು.

ಆ ಬಡಪಾಯಿ ಇಳಿದನು; ಆದರೆ ಸುತ್ತಲೂ ನೋಡಿ ಆಶ್ಚರ್ಯದಿಂದ ಬೆಪ್ಪಾದನು. ಈ ಕೊನೆಯ ನರಕದ ಹಿಂದಿನ ನರಕವನ್ನು ನೋಡಿ ಅದರ ಭಯಂಕರ ಅಸಹ್ಯತೆಗೂ ದುಃಖ ದುರವಸ್ಥೆಗಳಿಗೂ ಮೂರ್ಛೆಗೊಂಡಿದ್ದನು. ಅದರ ಮುಂದಿನ ಅದಕ್ಕಿಂತ ಕೆಳಗಿನ ನರಕವು ಅದಕ್ಕಿಂತಲೂ ಭಯಾನಕ ದುಸ್ಸ್ಥಿತಿಯಲ್ಲಿರಬೇಕೆಂದೂ ತಾನು ಅದನ್ನು ನೋಡುವದೇ ಸಾಧ್ಯವಲ್ಲವೆಂದೂ ನಿರೀಕ್ಷಿಸಿದ್ದನು. ಆದರೆ, ಅವನ ಕಲ್ಪನೆಯಲ್ಲಾ ತಲೆಕೆಳಗಾಗಿ ಈ ಕೊನೆಯ ನರಕವು ಅವನ ಮೊದಲಿನ ಅತ್ಯಂತ ಶ್ರೇಷ್ಠ ಸ್ವರ್ಗದೊಡನೆ ಸ್ಪರ್ಧಿಸುತ್ತಿರುವಂತೆ ತೋರಿತು. ತನ್ನ ಸುಖ ಸೌಕರ್ಯಗಳಿಂದಲೂ ಸೌಂದರ್ಯ ಸೌಗಂಧಗಳಿಂದಲೂ ವೈಭವದಿಂದಲೂ ಆ ಶ್ರೇಷ್ಠತಮ ಸ್ವರ್ಗವನ್ನೂ ಅದು ನಾಚಿಸುವಂತಿತ್ತು. ಅಲ್ಲಿ ಭವ್ಯವಾದ ಸೌಧಗಳನ್ನು ಕಂಡನು; ಅಲ್ಲಲ್ಲಿ ಸುಂದರವಾದ ನಂದನವನಗಳು ಫಲಪುಷ್ಪಗಳಿಂದ ಶೋಭಿಸುತ್ತಿದ್ದವು. ವಾಯು ಮಂಡಲವೆಲ್ಲಾ ಸುಗಂಧಭರಿತವಾಗಿದ್ದು ಉನ್ಮಾದವನ್ನುಂಟು ಮಾಡುತ್ತಿತ್ತು. ಎಲ್ಲೆಲ್ಲಿಯೂ ಸುಶ್ರಾವ್ಯವಾದ ಸಂಗೀತವೇ ತುಂಬಿತ್ತು. ಅವನು ಹೋಗುತ್ತಿದ್ದ ದಾರಿಯಲ್ಲಿ ಎತ್ತರವಾದ ಒಬ್ಬ ಮನುಷ್ಯನು ಮುಂದೆ ನಡೆಯುತ್ತಿದ್ದನು. ಅವನನ್ನು ಎಲ್ಲಿಯೋ ಕಂಡಂತಿತ್ತು. ಪಾದ್ರಿಯು ಅವನನ್ನು ಕರೆದು ನಿಲ್ಲಿಸಿ, ಅವನೊಡನೆ ಹಸ್ತಲಾಘವ ಕೊಟ್ಟು ಹೆಸರನ್ನು ಕೇಳಿದನು. ಆಶ್ಚರ್ಯ! ಆ ಉನ್ನತ ಭವ್ಯ ವ್ಯಕ್ತಿಯು ಹಕ್ಸ್ಲೆ ಮಹಾಶಯನೇ

ಆಗಿದ್ದನು. ನಮ್ಮ ಪಾದ್ರಿಯು ವಿಸ್ಮಿತನಾಗಿ "ಇದೇನು ಮಹಾಶಯ ? ಇದೇ ಅತ್ಯಂತ ನೀಚ ನರಕವೇ ?" ಎಂದು ಕೇಳಿದನು. ಹಕ್ಸ್ಲಿ ಉತ್ತರಿಸಿದನು: "ಹೌದು, ನಿಸ್ಸಂದೇಹವಾಗಿ." ಪಾದ್ರಿಯು ಚಕಿತನಾಗಿ ಹೇಳಿದನು: ನಾನಿಲ್ಲಿಗೆ ನಿಮಗೆಲ್ಲಾ ಧರ್ಮೋಪದೇಶ ಮಾಡಬೇಕೆಂದು ಬಂದೆ. ಇದು ನೀಚಾತಿನೀಚ ನರಕವೆಂದು ತಿಳಿದಿದ್ದೆ. ಇಲ್ಲಿಯ ಅಸಹ್ಯ ಯಾತನೆಯಲ್ಲಿರಬಹುದಾದ ನಿಮ್ಮನ್ನೆಲ್ಲಾ ಕರುಣೆಯಿಂದ ಉದ್ಧಾರ ಮಾಡಬೇಕು ಧಾವಿಸಿದೆ. ಪತಿತರಾಗಿರುವ ನಿಮ್ಮನ್ನು ಜ್ಞಾನೋಪದೇಶ ಮಾಡಿ ಪಾವನಮಾಡುವದಕ್ಕಾಗಿ ಕರಗಿ ಬಂದೆ. ಆದರೆ ಇಲ್ಲಿ ನೋಡಿದರೆ ಎಲ್ಲಾ ಪರಮಾಶ್ಚರ್ಯಕರವಾದ ದೃಶ್ಯವು ದಿಗ್ಭ್ರಮೆಗೊಳಿಸುತ್ತಿದೆ. ಇಲ್ಲಿರುವ ಸೌಂದರ್ಯ, ಸೌರಭಗಳೂ ಸುಖ ಸೌಕರ್ಯಗಳೂ ಅತ್ಯಂತ ಶ್ರೇಷ್ಠ ಸ್ವರ್ಗದಲ್ಲಿಯೂ ಇರಲಾರವು. ನಾನೇನಾದರೂ ದಾರಿ ತಪ್ಪಿ, ನಾನು ಕಂಡಿದ್ದ ಅಥವಾ ಕಲ್ಪಿಸಿಕೊಂಡಿದ್ದ ಶ್ರೇಷ್ಠತಮ ಸ್ವರ್ಗಕ್ಕಿಂತಲೂ ಹೆಚ್ಚಿನ ಅಪೂರ್ವವಾದ ಸ್ವರ್ಗಕ್ಕೆ ದೈವವಶಾತ್ ಬಂದೆನೋ ಹೇಗೆ ? ದಯವಿಟ್ಟು ಮೊದಲು ಇದನ್ನು ನನಗೆ ತಿಳಿಸಿ."

ಅದಕ್ಕೆ ಹಕ್ಸ್ಲಿಯು "ಈ ಲೋಕವು ಅತ್ಯಂತ ಕನಿಷ್ಠವಿರಬೇಕೆಂದು ನೀವು ನಿರೀಕ್ಷಿಸಿದ್ದುದೇನೂ ತಪ್ಪಲ್ಲ. ನೀವೇನೂ ಹಾದಿ ತಪ್ಪಿ ಬಂದಿಲ್ಲ. ನೀವು ಉದ್ದೇಶ ಪಟ್ಟ ಅಧಮಾಧಮ ಸ್ಥಳಕ್ಕೇ ಬಂದಿದ್ದೀರಿ. ನಾವು ಇಲ್ಲಿಗೆ ಬಂದಾಗ ಮೊದಲು ಈ ಲೋಕವು ವಿಶ್ವದಲ್ಲಿಯೇ ಅತ್ಯಂತ ಭಯಂಕರ ದುರವಸ್ಥೆಯಲ್ಲಿದ್ದಿತು. ನೀವು ಕಲ್ಪಿಸುವದಕ್ಕೇ ಸಾಧ್ಯವಲ್ಲದ ಅನಿಷ್ಟ ಕನಿಷ್ಠ ಸ್ಥಿತಿಯಲ್ಲಿದ್ದಿತು." ಎಂದು ಹೇಳಿ ಅವನು ಅಂಥಾ ಕೆಲವು ಸ್ಥಳಗಳನ್ನು ತೋರಿಸಿದನು. "ಇಲ್ಲಿ ಕೊಳಕು ನಾರುವ ಗುಂಡಿಗಳಿದ್ದವು" ಎಂದನು. ಅವನು ಇನ್ನೊಂದು ಸ್ಥಳವನ್ನು ತೋರಿಸಿ ಅಲ್ಲಿ ಕೆಂಪಗೆ ಕಾದು ಸುಡುತ್ತಿದ್ದ ಕಬ್ಬಿಣದ ರಾಶಿಯಿದ್ದಿತು" ಎಂದನು. ಅವನು ಇನ್ನೂ ಒಂದು ಸ್ಥಳವನ್ನು ತೋರಿಸಿ "ಅಲ್ಲಿ ಕಾದ ಮರಳೂ ಆವಿ ಹೊರಡುತ್ತಿದ್ದ ಸಗಣಿಯೂ ಗೊಬ್ಬರವೂ ಇದ್ದವು" ಎಂದನು.

"ಮೊಟ್ಟಮೊದಲು ನಮ್ಮನ್ನು ಅತ್ಯಂತ ಕೊಳಕು ಹೇಸಿಗೆಯ ಗುಂಡಿಗಳಲ್ಲಿ ಇರಿಸಿದ್ದರು. ಆದರೆ, ಅಲ್ಲಿ ನಾವಿರುವಾಗ ನಾವು ನಮ್ಮ ಕೈಗಳಿಂದ ಪಕ್ಕದಲ್ಲಿ ಕಾದು ಸುಡುತ್ತಿದ್ದ ಕಬ್ಬಿಣದ ರಾಶಿಗಳ ಮೇಲೆ (ನಮ್ಮ ಗುಂಡಿಗಳಿಂದ) ನೀರನ್ನು ಎರಚುತ್ತಿದ್ದೆವು. ಈ ಕೆಲಸವನ್ನು ನಾವು ಬಹಳ ಕಾಲ ಮಾಡುತ್ತಿದ್ದೆವು. ಆಗ ಆ ಅತ್ಯಂತ ಅಧಮಾಧಮ ನರಕದ ರಕ್ಷಕರು ನಮ್ಮನ್ನು ಆ ಕಾದುಕರಗಿದ ಕಬ್ಬಿಣವಿದ್ದ ಸ್ಥಳಕ್ಕೆ ಕರೆದುಕೊಂಡು ಹೋದರು. ಅಷ್ಟರಲ್ಲಿ ನಾವು ಎರಚಿದ್ದ ನೀರಿನಿಂದ ಎಷ್ಟೋ ಕಬ್ಬಿಣವು ಆರಿ ಕೈಯಲ್ಲಿ ಹಿಡಿಯುವಂತಾಗಿದ್ದವು. ಆದರೂ ಇನ್ನೂ ಎಷ್ಟೋ ಕಬ್ಬಿಣವು ಕಾದು ಕರಗಿದ್ದ ಸ್ಥಿತಿಯಲ್ಲಿಯೇ ಇದ್ದಿತು. ಆಗ ಆರಿಹೋಗಿದ್ದ ಕೆಲವು ಕಬ್ಬಿಣವನ್ನು ಬೆಂಕಿಯಲ್ಲಿ ಸಾಕಷ್ಟು ಕಾಯಿಸಿ ಆದರಿಂದ ಕೆಲವು ಯಂತ್ರಗಳನ್ನೂ

ಹತಾರಿಗಳನ್ನೂ ಮಾಡಿಕೊಂಡೆವು. ಅನಂತರ ಅವರು ನಮ್ಮನ್ನು ಸಗಣಿಯ ಗುಂಡಿಗೆ ಕರೆದುಕೊಂಡು ಹೋಗಬೇಕಾಯಿತು. ಅಲ್ಲಿ ನಾವು ನಮ್ಮ ಕೆಲವು ಹತಾರಿಗಳ, ಗುದ್ದಲಿಸಲಕೆಗಳ ಮತ್ತು ಯಂತ್ರಗಳ ಸಹಾಯದಿಂದ ನೆಲವನ್ನು ಅಗಿಯುವುದಕ್ಕೆ ತೊಡಗಿದೆವು. ನಮ್ಮ ಗುಂಡಿಯ್ದು ಗೊಬ್ಬರಗಳನ್ನು ಆ ನೆಲಕ್ಕೆ ಹಾಕಿದೆವು. ಪುನಃ ಅವರು ನಮ್ಮನ್ನು ಬೇರೊಂದು ಬಗೆಯ ಮಣ್ಣಿರುವ ಸ್ಥಳಕ್ಕೆ ಕರೆದುಕೊಂಡು ಹೋದರು. ಅಲ್ಲಿಯೂ ನಾವು ಆ ನೆಲವನ್ನು ನಮ್ಮ ಕಬ್ಬಿಣದ ಯಂತ್ರಸಾಧನೆಗಳಿಂದ ಚೆನ್ನಾಗಿ ಕೃಷಿ ಮಾಡಿ ಗೊಬ್ಬರವನ್ನು ಹಾಕಿ, ಬೇಕು ಬೇಕಾದ ಬೆಳೆಗಳನ್ನು ಬೆಳೆದೆವು. ಹೀಗೆ ನಾವು ಬಹಳ ಕಾಲ ಶ್ರಮಪಟ್ಟು ಕೆಲಸಮಾಡಿ ಕ್ರಮೇಣವಾಗಿ ಆ ಅತ್ಯಂತ ಕನಿಷ್ಠ ನರಕವನ್ನು ಈ ಅತ್ಯಂತ ಶ್ರೇಷ್ಠ ಸ್ವರ್ಗವನ್ನಾಗಿ ಪರಿವರ್ತನೆ ಮಾಡಿದೆವು" ಎಂದು ಪಕ್ಷಿಯು ಹೇಳಿದನು.

ಇಲ್ಲಿ ಮುಖ್ಯ ವಿಷಯವೇನೆಂದರೆ, ಆ ಅತ್ಯಂತ ಕನಿಷ್ಠ ನರಕದಲ್ಲಿಯೂ ಉಪಯುಕ್ತವಾದ ಎಲ್ಲಾ ವಸ್ತುಗಳೂ ಇದ್ದವು. ಆದರೆ ಜಾಣತನದಿಂದ ಅವುಗಳನ್ನೇ ಆವವುಗಳಿಗೆ ಸರಿಯಾದ ಸ್ಥಳಗಳಲ್ಲಿ ಸೇರಿಸಿದ್ದರಿಂದ ಅದೇ ಸುಖಧಾಮವಾದ ಅತ್ಯಂತ ಶ್ರೇಷ್ಠ ಸ್ವರ್ಗವಾಯಿತು. ಅದೇ ರೀತಿ, ವೇದಾಂತವು ಹೇಳುವದೇನೆಂದರೆ, ನಿಮ್ಮಲ್ಲಿ ದಿವ್ಯವಾದ ವಸ್ತು, ದೇವರೂ ಇದ್ದಾನೆ; ನಿಮ್ಮಲ್ಲಿ ಅಯೋಗ್ಯ ಶರೀರವೂ ಇದೇ; ಆದರೆ ಆ ವಸ್ತುಗಳನ್ನು ನೀವು ವ್ಯತ್ಯಸ್ತವಾಗಿ ಇಟ್ಟಿದ್ದೀರಿ. ಅವುಗಳನ್ನು ನೀವು ತಲೆಕೆಳಗಾಗಿ ಇಟ್ಟಿದ್ದೀರಿ. ನೀವು ಕುದುರೆಯ ಮುಂದೆ ಗಾಡಿಯನ್ನು ಕಟ್ಟಿದಂತಾಗಿದೆ. ಇದರಿಂದಲೇ ನೀವು ಈ ಲೋಕವನ್ನು ನರಕವನ್ನಾಗಿ ಮಾಡಿಕೊಂಡಿದ್ದೀರಿ. ನೀವು ಯಾವದನ್ನೂ ನಾಶಮಾಡಬೇಕಾಗಿಲ್ಲ. ಈ ನಿಮ್ಮ ಮಹತ್ವಾಕಾಂಕ್ಷೆಯೇ ಈ ಸ್ವಾರ್ಥಪರತೆಯೇ ಈ ಕ್ರೋಧ ಸ್ವಭಾವವೇ ನಿಮ್ಮ ಈ ಪಾಪಗಳೇ ನರಕವಾಗಿವೆ, ಅವುಗಳನ್ನು ನೀವು ನಾಶಮಾಡಲಾರಿರಿ. ಆದರೆ ಅವುಗಳಿಂದ ನಿಮಗೆ ಬಾಧಕವಾಗದ ರೀತಿಯಲ್ಲಿ ಪುನರ್ವ್ಯವಸ್ಥೆಗೊಳಿಸಬಹುದು. ಏಕೆಂದರೆ ಯಾವ ಶಕ್ತಿಯನ್ನೂ ನಾಶ ಮಾಡಲಾಗುವದಿಲ್ಲ; ಆದರೆ ಅವುಗಳನ್ನೇ ನೀವು ಸಾಧಕವಾಗುವ ರೀತಿಯಲ್ಲಿ ವ್ಯವಸ್ಥೆಗೊಳಿಸಬಹುದು. ಇದರಿಂದ ಈ ಲೋಕವನ್ನೇ ನೀವು ಅತ್ಯಂತ ಶ್ರೇಷ್ಠ ಸ್ವರ್ಗವನ್ನಾಗಿ ಮಾರ್ಪಡಿಸಬಹುದು.

ಖಿನ್ನಮುಖಭಾವದಿಂದಲೂ ದುಃಖಿತ ಮನೋಭಾವದಿಂದಲೂ ಕೂಡಿದ ಈ ಪ್ರಪಂಚದ ಸಂಕಷ್ಟಗಳಿಂದ ಪಾರಾಗುವದಕ್ಕೂ ಎಲ್ಲಾ ಪಾಪಗಳಿಂದ ಪರಿಹಾರ ಪಡೆಯುವದಕ್ಕೂ ಸಮಸ್ತ ಪ್ರಲೋಭನಗಳನ್ನು ಮೀರಿ ನಿಲ್ಲುವದಕ್ಕೂ ಈ ಪ್ರಪಂಚದಿಂದ ಎಲ್ಲಾ ದುಃಖಗಳನ್ನೂ ತೊಡೆದುಹಾಕುವದಕ್ಕೂ ಆತ್ಮಜ್ಞಾನವೊಂದೇ ನಿಜವಾದ ಮಾರ್ಗವೆಂದೂ ಮುಕ್ತದ್ವಾರವೆಂದೂ ವೇದಾಂತವು ಹೇಳುತ್ತದೆ. ನಿಮ್ಮನ್ನು ಮೋಹಗೊಳಿಸಿ ಚಿತ್ತಾಕರ್ಷಣೆ ಮಾಡುವಂಥ ಈ ಎಲ್ಲಾ ಉಜ್ಜ್ವಲ ವೈಭವ–ಅಟ್ಟಹಾಸಗಳನ್ನು ಪರಿತ್ಯಾಗ ಮಾಡಿದ ಹೊರತು ನೀವು ಎಂದೆಂದಿಗೂ ಪಾಶವೀಕಾಮನೆಗಳನ್ನು

ತಡೆಗಟ್ಟಲಾರಿರಿ. ಅದನ್ನು ನೀವು ಮನಗಂಡಾಗಲೇ ಎಲ್ಲಾ ಕಾಮ ಮೋಹಗಳನ್ನೂ ಮೀರಿ ನಿಲ್ಲುತ್ತೀರಿ ; ಆಗಲೇ ಪೂರ್ಣ ಮುಕ್ತರೂ ಆನಂದಭರಿತರೂ ಆಗುತ್ತೀರಿ. ಅದೇ ನಿಜವಾದ ಸ್ವರ್ಗ !

೧೬೨. ಕ್ರಿಯೆಗಾಗಿ ಕ್ರಿಯೆ, ಕರ್ಮದಲ್ಲಿ ಅಕರ್ಮ

(ದೀಪ, ಸರೋವರ ಮತ್ತು ನದಿ)

ಕರ್ಮವೆಂದರೆ ಏನು ? ವೇದಾಂತದ ಪ್ರಕಾರ, ಅತ್ಯಂತ ತೀವ್ರ ಕರ್ಮವೆಂದರೆ, ವಿಶ್ರಾಂತಿಯೇ ಆಗಿದೆ. ಇದೊಂದು ವಿಲಕ್ಷಣವೂ ವಿರೋಧಾಭಾಸವೂ ಚಕಿತಗೊಳಿಸುವದೂ ಆದ ಹೇಳಿಕೆ. "ಕರ್ಮವೆಂದರೆ ಸುಮ್ಮನಿರುವದು ; ಶ್ರಮವೆಂದರೆ ವಿಶ್ರಮ ; ಕ್ರಿಯೆ ಎಂದರೆ ನಿಷ್ಕ್ರಿಯೆ ; ಚಲನೆ ಎಂದರೆ ನಿಶ್ಚಲತೆ, ಇತ್ಯಾದಿ" ನಿಜ ; ಎಲ್ಲಾ ನಿಜವಾದ ಕರ್ಮವೂ ವಿಶ್ರಾಂತಿಯೇ ನೈಷ್ಕರ್ಮ್ಯವೇ ! ಆಗಿದೆ. ಇದನ್ನೇ ವೇದಾಂತವು ತಿಳಿಸುವದು ; ಅತ್ಯಂತ ಮಹತ್ತಿನ ಕೆಲಸಗಾರನನ್ನು, ಅವನು ತನ್ನ ಉದ್ಯಮದ ಎತ್ತರ ಶಿಖರಕ್ಕೆ ಏರಿದಾಗ–ತನ್ನ ಪರಮಾವಧಿಯಾಗಿ ನಿರ್ವಹಿಸುತ್ತಿರುವಾಗ–ಅವನನ್ನು ಲಕ್ಷ್ಯವಿಟ್ಟು ನೋಡಿ. ಇತರರ ದೃಷ್ಟಿಯಿಂದ ಅವನು ಅತಿಶ್ರಮದ ಕಾರ್ಯದಲ್ಲಿ ತೊಡಗಿರಬಹುದು ; ಆದರೆ. ಅವನ ಸ್ವಂತ ದೃಷ್ಟಿಯಿಂದ ನೋಡಿರಿ ; ಅವನು ಏನನ್ನೂ ಮಾಡುತ್ತಿಲ್ಲ. ದೂರದಿಂದ ನೋಡತಕ್ಕವರಿಗೆ ಕಾಮನ ಬಿಲ್ಲಿನಲ್ಲಿ ಸುಂದರವಾದ ವರ್ಣಗಳು ಕಂಡರೂ ಸಮೀಪದಲ್ಲಿ ಪರೀಕ್ಷಿಸುವವರಿಗೆ ಯಾವ ಬಣ್ಣವೂ ಅದರಲ್ಲಿ ಕಾಣದಿರುವಂತೆ ಶ್ರೇಷ್ಠ ಕರ್ಮಿಯಲ್ಲಿ. 'ನಾನು ಮಾಡುತ್ತೇನೆ' ಎಂಬ ಭಾವವಿರುವದಿಲ್ಲ. ಯುದ್ಧದಲ್ಲಿ ತೊಡಗಿ, ತಮ್ಮ ಸಾಹಸ ಸರ್ವಸ್ವವನ್ನೂ ಪ್ರಯೋಗಿಸುತ್ತಿರುವ ಮಹಾ ಯೋಧರಾದ ನೆಪೋಲಿಯನ್ ಅಥವಾ ವಾಷಿಂಗ್‌ಟನ್‌ರನ್ನು ನೋಡಿದರೆ, ಅವರ ದೇಹಗಳು ತಮಗೆ ತಾವೇ ಯಾಂತ್ರಿಕವಾಗಿ ಹೋರಾಡುತ್ತಿರುವಾಗ 'ನಾನು ಯುದ್ಧ ಮಾಡುತ್ತಿದ್ದೇನೆ' ಎಂಬ ಕಲ್ಪನೆಯು ಸಂಪೂರ್ಣ ಹಾದಿ ಹೋಗಿರುವಷ್ಟು ತೀವ್ರವಾಗಿ, ಅವರು ಆ ರಣಕರ್ಮದಲ್ಲಿ ತಲ್ಲೀನರಾಗಿರುವದನ್ನು ಕಾಣುತ್ತೇವೆ. ಆಗ ಅವರಲ್ಲಿ ಜಯವನ್ನು ಗಳಿಸಿ ಸಂತೋಷಪಡಬೇಕೆನ್ನುವ (ಭೋಕ್ತೃವಾದ) ಅಹಂಕಾರವೂ ದೂರ ಮಾಯವಾಗಿದೆ. ಎಡೆಬಿಡದಿರುವ ಈ ತೀವ್ರ ಕರ್ಮವೇ, ನಮಗೆ ಅರಿವಿಲ್ಲದಂತೆ ಪರಮೋನ್ನತ ಯೋಗಕ್ಕೆ ಒಯ್ಯುತ್ತದೆ. ವೇದಾಂತವು ತೀವ್ರ ಕರ್ಮದ ಮೂಲಕ ನೀವು ಈ ಅಲ್ಪವಾದ ಅಹಂಕಾರವನ್ನು ಮೀರಿ ನಿಲ್ಲಬೇಕು – ಎನ್ನುತ್ತದೆ. ಶ್ರಮವೇ ತೋರದಷ್ಟು ತೀವ್ರವಾದ ಕರ್ಮದಲ್ಲಿ ದೇಹವೂ ಮನಸ್ಸೂ ನಿರಂತರವಾಗಿ ತೊಡಗಿರಲಿ. "ನಾನು ಈ ಕವಿತೆಯನ್ನು ಬರೆಯುತ್ತಿದ್ದೇನೆ" ಎಂಬ ಭಾವ ಇಲ್ಲದಿರುವಾಗ, ಕ್ಷುದ್ರವಾದ ಅಹಂಕಾರವನು ಮೀರಿ ನಿಂತಾಗ. ಒಬ್ಬ ಕವಿಯಲ್ಲಿ ಸ್ಫೂರ್ತಿ ತೋರುತ್ತದೆ. ಗಣಿತ ಶಾಸ್ತ್ರದಲ್ಲಿ ಅತಿ ಕಠಿಣ ಸಮಸ್ಯೆಗಳನ್ನು ಬಿಡಿಸತಕ್ಕವರು ಕೂಡ "ನಾನು ಇದನ್ನು ಮಾಡುತ್ತಿದ್ದೇನೆ"

ಎಂಬುದನ್ನು ಪೂರಾ ಮರೆತಾಗಲೇ ಕಷ್ಟವೂ ಸಮಸ್ಯೆಯೂ ಪರಿಹಾರವಾದುದನ್ನು ಕಾಣುತ್ತಾರೆ. ಈ ಅಲ್ಪವಾದ ಅಹಂಕಾರವನ್ನು ನಾವು ಎಷ್ಟೆಷ್ಟು ಮೀರಿ ನಿಲ್ಲಬಲ್ಲೆವೋ ಅಷ್ಟಷ್ಟು ಉನ್ನತ ಮಹಿಮಾ ಕಾರ್ಯಗಳು ನಮ್ಮಿಂದ ಹೊರಬೀಳುತ್ತವೆ.

ಹೀಗೆ. ಶ್ರದ್ಧಾಪೂರ್ಣವಾಗಿ ಕರ್ಮವನ್ನು ಮಾಡುವ ಬಲದಿಂದಲೇ ಈ ಚಿಕ್ಕ 'ನಾನು' ಎಂಬುದನ್ನು ಮೀರಿ, ಮಾತಿನಿಂದ ಬಣ್ಣಿಸಲಾಗದ, ಒಳಗಿನ ನಿಜವಾದ ಆತ್ಮನಲ್ಲಿ ಅಥವಾ ಪರಮಾತ್ಮನಲ್ಲಿ ಸರ್ವಸ್ವವನ್ನೂ ಕಳೆದುಕೊಳ್ಳಬೇಕೆಂದು, ವೇದಾಂತವು ಬೋಧಿಸುತ್ತದೆ. ಯಾವಾಗ ಒಬ್ಬ ವಿಚಾರಕನು, ತತ್ತ್ವಜ್ಞನು, ಕವಿಯು, ವಿಜ್ಞಾನಿಯು ಅಥವಾ ಕರ್ಮಿಯು ಅರೂಪ ಸ್ಥಿತಿಗೆ, ಚಿನ್ಮಾತ್ರ ಗೋಚರ ಸ್ಥಿತಿಗೆ, ತನ್ನನ್ನು ತಾನು ಶ್ರುತಿಗೂಡಿಸಿಕೊಳ್ಳುತ್ತಾನೋ ಮತ್ತು ತನ್ನಲ್ಲಿ ವ್ಯಕ್ತಿ ಕಲ್ಪನೆಯು ಲೇಶವೂ ಉಳಿಯುವಷ್ಟು, ಆತ್ಮಾರ್ಪಣೆಯ ಉನ್ನತ ಮಟ್ಟಕ್ಕೆ ಏರುತ್ತಾನೋ ಮತ್ತು ಅದರಿಂದ ಅವನಲ್ಲಿ ವೇದಾಂತವು ವಾಸ್ತವವಾಗಿಯೂ ಅನುಭವಾರೂಢವಾಗಿದೆಯೋ, ಆಗಲೇ–ಆಗ ಮಾತ್ರವೇ-ಗಾನಲೋಲನೂ ಗಾನಲೀಲಾ ವಿಶಾರದನೂ ಆದ ಪರಮಾತ್ಮನು, ಅವನ ಶರೀರ–ಮನಸ್ಸುಗಳ ವಾದ್ಯಸಾಧನವನ್ನು ತನ್ನ ಸ್ವಂತ ಕೈಗಳಲ್ಲಿ ತೆಗೆದುಕೊಂಡು, ಅವನ ಮೂಲಕ ಭವ್ಯವಾದ ಸ್ಪಂದನೆಗಳನ್ನೂ ಮಧುರ ನಾದಗಳನ್ನೂ ಉತ್ಕೃಷ್ಟವಾದ ಸ್ವರ ಮೇಳಗಳನ್ನೂ ಹೊರಡಿಸುತ್ತಾನೆ. ಆಗ, "ಅವನು ದೈವಪ್ರೇರಿತನಾಗಿದ್ದಾನೆ; ದೈವಾವೇಶಗೊಂಡಿದ್ದಾನೆ; ಸ್ಫೂರ್ತಿ ಪಡೆದಿದ್ದಾನೆ;" ಎಂದು ಜನ ಹೇಳುತ್ತಾರೆ. ಆದರೆ, ಅವನಲ್ಲಿ ಅವನ ದೃಷ್ಟಿಯಿಂದ "ನಾನು" ಎಂಬುದಿಲ್ಲ; ಮಾಡುವುದು, ಅನುಭವಿಸುವುದು, ಯಾವುದೂ ಲವ–ಲೇಶವೂ ಇಲ್ಲ. ಇದೇ ವಾಸ್ತವ ಜೀವನದಲ್ಲಿ ವೇದಾಂತವನ್ನು ಅನುಭವಕ್ಕೆ ತಂದುಕೊಳ್ಳುವದೆಂಬುದು. ಹೀಗೆ, ಅರಿಯದಂತೆಯೇ ಕಾರ್ಯರೂಪದಲ್ಲಿ ತಂದ ವೇದಾಂತದಿಂದ ಎಲ್ಲಾ ಯಶಸ್ಸುಗಳೂ ಗೆಲವುಗಳೂ ಸಿದ್ಧಿಗಳೂ ಹರಿದುಬರುತ್ತವೆ.

ವೇದಾಂತ-ಯೋಗವನ್ನು ಮೈಗೂಡಿಸಿಕೊಳ್ಳಲು ಅರಣ್ಯಗಳ ವಿವಿಕ್ತ ಸ್ಥಾನದಲ್ಲಿ ಏಕಾಂತ ವಾಸದಿಂದ ಅಸ್ವಾಭಾವಿಕವಾದ ಅಭ್ಯಾಸಗಳನ್ನು ಮಾಡುವ ಅಗತ್ಯವಿಲ್ಲ. ಕಾರ್ಯಗಳಲ್ಲಿ ಮುಳುಗಿ, ಉದ್ಯೋಗಶೀಲತೆಯಲ್ಲಿ ನಿಮ್ಮನ್ನು ನೀವು ಮರೆತಾಗ, ನೀವು ಸ್ವತಃ ಯೋಗಜನಕನೂ ಯೋಗೀಶ್ವರನೂ ಆದ ಶಿವನೇ ಆಗಿರುತ್ತೀರಿ. ವೇದಾಂತರೀತ್ಯ, ದೇಹವು ನೀವಲ್ಲ; ಈ ಸತ್ಯವನ್ನು ನೀವು ಕಾರ್ಯರೂಪದಲ್ಲಿ ಮನಗಂಡಾಗಲೇ ಮಹಿಮಾ ವೈಭವದ ಉನ್ನತಿಯಲ್ಲಿ, ನಿಮ್ಮ ಪರಮೋಚ್ಚ ಸ್ಥಿತಿಯಲ್ಲಿ, ನೀವಿರುತ್ತೀರೆಂಬುದೂ, ತೀವ್ರಶ್ರಮದ ಯೋಗದಿಂದ ದೇಹಮನಸ್ಸುಗಳು ನಿಮ್ಮ ಭಾಗಕ್ಕೆ ಇಲ್ಲವಾಗುತ್ತವೆಂಬದೂ, ನಿಮ್ಮ ಅನುಭವದಲ್ಲಿ ತೋರುವುದಿಲ್ಲವೆ ?

ಕರ್ಮವೆಂದರೇನು ? - ಎಂಬುದನ್ನು ಒಂದು ದೀಪದ ಉದಾಹರಣೆಯಿಂದ ವಿವರಿಸಬಹುದು. ಒಂದು ಗ್ಯಾಸ್‌ಲೈಟ್ ಅಥವಾ ಒಂದು ಎಣ್ಣೆಯ ದೀಪವನ್ನು

ತೆಗೆದುಕೊಳ್ಳಿ. ಅದರ ಬೆಳಕು ಎಷ್ಟು ಭವ್ಯವಾಗಿಯೂ ಉಜ್ಜ್ವಲವಾಗಿಯೂ ದಿವ್ಯವಾಗಿಯೂ ಪ್ರಕಾಶಮಾನವಾಗಿಯೂ ಇದೆ, ಆ ಭವ್ಯತೆಯನ್ನೂ ಆ ಪ್ರಕಾಶವನ್ನೂ ಆ ದೀಪಕ್ಕೆ ನೀಡಿರುವದಾವುದು ? ಅದು, ನಿರಂತರ ಕ್ರಿಯೆಯ ಮೂಲಕ ಅಹಂಕಾರವನ್ನು ಅಲ್ಲಗಳೆಯುವುದೇ ಆಗಿದೆ. ದೀಪವು ತನ್ನ ಎಣ್ಣೆಯನ್ನೂ ಬತ್ತಿಯನ್ನೂ ಉಳಿಸಿಕೊಂಡರೆ, ಬರೀ ಕತ್ತಲೂ ಸೋಲೂ ; ಯಾವ ಗೆಲವೂ ಇಲ್ಲ. ಗೆಲುವಾಗಬೇಕೆಂದರೆ, ದೀಪವು ಉರಿಯಬೇಕು; ಎಣ್ಣೆ ಬತ್ತಿಗಳನ್ನು ಉಳಿಸಿಕೊಳ್ಳಬಾರದು. ಇದೇ ವೇದಾಂತದ ಉಪದೇಶ. ನಿಮಗೆ ಜಯವಾಗಬೇಕೆಂದರೆ, ನಿಮಗೆ ಏಳಿಗೆಯಾಗಬೇಕೆಂದಿದ್ದರೆ ನಿಮ್ಮ ಕಾರ್ಯಗಳ ಮೂಲವೂ, ನಿಮ್ಮ ನಿತ್ಯ ಜೀವನದಿಂದಲೂ, ನಿಮ್ಮ ರಕ್ತಮಾಂಸಗಳನ್ನು ಸುಡಬೇಕು ; ನಿರಂತರ ಉಪಯೋಗವೆಂಬ ಯೋಗಾಗ್ನಿಯಿಂದ ಅವನ್ನು ದಹಿಸಬೇಕು. ಎಡೆಬಿಡದ ಕರ್ಮದಲ್ಲಿ ದೇಹ ಮನಸ್ಸುಗಳನ್ನು ಉಪಯೋಗಿಸುತ್ತಾ ಅವನ್ನು ಸುಡುತ್ತಿರುವ ಸ್ಥಿತಿಯಲ್ಲಿಟ್ಟಿರಬೇಕು. ಅದೇ ತಪಸ್ಸು. ನಿಮ್ಮ ದೇಹ-ಮನಸ್ಸುಗಳನ್ನು ದಂಡಿಸಿ, ಶೋಷಿಸಿ, ಶಿಲುಬೆಗೇರಿಸಬೇಕು. ಕೆಲಸ–ಕೆಲಸ, ಉದ್ಯೋಗ-ಉದ್ಯೋಗ, ಇದರಿಂದಲೇ ನಿಮ್ಮಲ್ಲಿರುವ ತೇಜಸ್ಸು ಪ್ರಕಾಶವಾಗುತ್ತದೆ. ಸತತ ಕರ್ಮವೆಂದರೆ, ನಿಮ್ಮ ದೇಹಮನಸ್ಸುಗಳ ಎಣ್ಣೆ-ಬತ್ತಿಗಳನ್ನು ಉರಿಸುವದೇ ಆಗಿದೆ. ಸರ್ವದಾ ಕಾರ್ಯನಿರತನಾಗುವದೆಂದರೆ, ನಿಮ್ಮ ಅರಿವಿನ ದೃಷ್ಟಿಯಿಂದ, ದೇಹ ಮನಸ್ಸುಗಳ ಮಾಯೆಯನ್ನು, ವಾಸ್ತವವಾಗಿ ಇಲ್ಲವಾಗಿಸುವದೇ ಆಗಿದೆ.

ನಿರಂತರ ಕರ್ಮವೇ ಸತತೋದ್ಯೋಗವೇ ಪ್ರಾಪಂಚಿಕ ಮನುಷ್ಯನಿಗೆ ಮಹತ್ತಮ ಯೋಗ. ನಿಮ್ಮ ದೃಷ್ಟಿಯಲ್ಲಿ ನೀವು ಕರ್ಮ ಮಾಡುವರಲ್ಲದಿರುವಾಗ–ಕರ್ತೃವಲ್ಲದಿರುವಾಗ-ಪ್ರಪಂಚದ ಜನರಿಗೆ ನೀವು ಅತ್ಯಂತ ಮಹತ್ತ್ವದ ಕಾರ್ಯಸಾಧಕರಾಗಿರುತ್ತೀರಿ.

ನಾವು ಯಾವ ಭಾವದಲ್ಲಿದ್ದರೆ. ಯಾವ ರೀತಿಯಿಂದ, ಯಶಸ್ವಿಗಳಾದ ಕಾರ್ಯಗಳು ನಮಗೆ ಸ್ವಾಭಾವಿಕವಾಗುತ್ತವೆ ? "ಕೆಲಸ ಮಾಡು, ಕೆಲಸ ಮಾಡು" ಎಂದು ಹೇಳುವುದು ಬಹಳ ಸುಲಭ. ಆದರೆ ಕೆಲಸ ಮಾಡುವದು, ಸುಲಭವಲ್ಲ ; ಅದು ಬಹಳ ಕಠಿಣವೂ, ಶ್ರಮಪೂರಿತವೂ ಆಯಾಸಕರವೂ ಆದುದು. ತಾನು ಅತ್ಯಂತ ಶ್ರೇಷ್ಠ ಚಿತ್ರಕಾರನಾಗಬೇಕೆಂದೂ ಸಂಗೀತಗಾರನಾಗಬೇಕೆಂದೂ ಪ್ರತಿಯೊಬ್ಬನಿಗೂ ಆಶೆಯಿರುತ್ತದೆ. ಆದರೆ, ಪ್ರತಿಯೊಬ್ಬನೂ ತಾನು ಇಚ್ಛಿಸಿದಂತೆ ಆಗಲಾರ. ಕೆಲಸ ಮಾಡದಿರುವಂತೆ ಮನಸ್ಸು ಆಲಸಿಯಾಗುವದಕ್ಕೂ ಅದು ಸಂತೋಷದಿಂದ ಶ್ರಮಪಡುವದಕ್ಕೂ ಕಾರಣವೇನು ? ಹಲವು ಸಮಯ, ನಮಗೆ ಕೆಲಸ ಮಾಡುವ ಇಚ್ಛೆಯಿದ್ದರೂ ಕಾರ್ಯಸಾಧ್ಯವಾಗುವದಿಲ್ಲ ; ಕೆಲವು ಸಮಯ ಶ್ರಮಪಡುವ ಇಚ್ಛೆಯಿಲ್ಲದಿದ್ದರೂ. ಸೊಗಸಾದ ಕಾರ್ಯವು ನಡೆದಿರುತ್ತದೆ. ಇದರಿಂದ ನಮ್ಮ ಕ್ರಿಯಾಶಕ್ತಿಯನ್ನು ಆಳುತ್ತಿರುವ ಹೆಚ್ಚಿನ ಶಕ್ತಿ ಏನೋ ಇದೆಯೆಂದು

20069 20082

ಅನುಭವವಾಗುತ್ತದೆ. ಕೆಲವು ಸಮಯ, ಒಂದು ಕವಿತೆಯನ್ನೋ ಪ್ರಬಂಧವನ್ನೋ ಬರೆಯಲು ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗುವದಿಲ್ಲ. ಆದರೆ ರಾತ್ರಿಯಲ್ಲಿ ಮಲಗಿ ನಿದ್ರೆಮಾಡಿ, ಬೆಳಿಗ್ಗೆ ಎದ್ದಕೂಡಲೇ ಪ್ರಕೃತಿಯೊಡನೆ ಸಮಶ್ರುತಿಗೊಂಡ, ಅವರ್ಣನೀಯವಾದೊಂದು ಪ್ರಸನ್ನ ಭಾವದಿಂದ, ದಿವ್ಯವಾದ ಕಾವ್ಯವೋ ತತ್ತ್ವ ವಿಚಾರವೋ ಸಹಜವಾಗಿ ಉಕ್ಕಿ ಹರಿದು ಬರುತ್ತದೆ; ಅವನು ಲೇಖನಿಯಿಂದ ಲಿಪಿಗಿಳಿಸುತ್ತಾನೆ. ಚಿತ್ರಕಾರ ಮೊದಲಾದವರಿಗೂ ಇದೇ ಅನುಭವಾಗುತ್ತದೆ.

ಹೀಗೆ ನಿಮ್ಮ ಕಾರ್ಯಸಾಧನೆಯ ಶಕ್ತಿಗಳನ್ನೆಲ್ಲಾ ಅತ್ಯಂತ ಶ್ರೇಷ್ಠಸ್ಥಿತಿಗೆ ತರಬಲ್ಲ ಏನೋ ಒಂದು ಹೆಚ್ಚು ಮೇಲಿನದೂ ಪ್ರಬಲವೂ ಆದುದು ಇದೆಯೆಂದು ಮನಗಾಣುತ್ತೇವೆ. ಆ ಶ್ರೇಷ್ಠತರವಾದ ಹೆಚ್ಚು ಮೇಲಿನ ಭಾವದ ಉಪಯೋಗ ವನ್ನು ನೀವು ಮಾಡಿಕೊಂಡರೆ, ನೀವು ಯಾವಾಗಲೂ ನಿಮ್ಮ ಪರಮೋತ್ತಮ ಸ್ಥಿತಿಯಲ್ಲಿಯೇ ನೆಲೆಸಿರಬಹುದು ; ಆಗ ನಿಮ್ಮ ಕೈಯಿಂದ ಆದ ಕೆಲಸಗಳು, ಅತ್ಯಂತ ಸುಂದರವೂ ಪರಿಪೂರ್ಣವೂ ಆಗಿರುತ್ತವೆ. ಆ ಉನ್ನತತರ ಭಾವವನ್ನೂ ಆ ಹೆಚ್ಚು ಉನ್ನತ ರಹಸ್ಯವನ್ನೂ ವೇದಾಂತವು ನಿಮ್ಮ ಮುಂದೆ ಬಿಚ್ಚಿಡುತ್ತದೆ. ವೇದಾಂತವು ವಿಶ್ವದೊಡನೆ, ವಿಶ್ವಾತ್ಮದೊಡನೆ. ಸಂಪೂರ್ಣ ಸಮರಸಭಾವದಿಂದ ಜೀವಿಸಿರುವದಲ್ಲದೆ ಬೇರೇನೂ ಅಲ್ಲ. ದೇವತ್ವದೊಡನೆ ಶ್ರುತಿಗೂಡಿರುವುದು ; ನಿಮ್ಮೊಳಗಿರುವ ನಿಜ ವಾದ ಆತ್ಮನಲ್ಲಿ ಅಥವಾ ಪರಮಾತ್ಮನಲ್ಲಿ ವಾಸ್ತವವಾಗಿಯೂ ಜೀವಿಸಿರುವುದು ; ಇದ ರಿಂದ ಅಲ್ಪವಾದ ಅಹಂಕಾರವನ್ನೂ ಸ್ವಾರ್ಥದ ಬಯಕೆಗಳನ್ನೂ ಮೀರಿರುವುದು- ಇದೇ ವೇದಾಂತವು. ವೇದಾಂತವು ಬೋಧಿಸುವ ಆ ರಹಸ್ಯವೇ ಇದು. ಹೀಗೆ ನಿಮ್ಮೊಳಗಿರುವ ಎಲ್ಲಾ ಬೆಳಕಿನ ಅಥವಾ ಶಕ್ತಿಯ ರಹಸ್ಯವನ್ನೂ ನೀವು ಉಪಯೋಗಿಸಿ ಕೊಳ್ಳುವುದರಿಂದ ನಿಮ್ಮ ಕರ್ಮವು ಆಶ್ಚರ್ಯಕರವಾಗುತ್ತದೆ.

ಕರ್ಮಕ್ಕಾಗಿ ಕರ್ಮ ಮಾಡಬೇಕೆಂದು ವೇದಾಂತವು ಹೇಳುತ್ತದೆ. ಕಾರ್ಯವು ಯಶಸ್ವಿಯಾಗಬೇಕಾದರೆ, ಅದರ ಫಲವನ್ನು ಗಮನಿಸಬಾರದು ; ಪರಿಣಾಮದ ಚಿಂತೆ ಇರಬಾರದು. ಸಾಧನವನ್ನೂ ಸಾಧ್ಯವನ್ನೂ ಒಂದುಗೂಡಿಸಬೇಕು; ಕಾರ್ಯ ಸಾಧನೆಯೇ ನಮ್ಮ ಫಲವಾಗಬೇಕು. ನಿಮ್ಮ ಅಂತರಾತ್ಮನು ಒಳಗೆ ಸರ್ವದಾ ವಿಶ್ರಾಂತಿಯಿಂದಿರಲಿ ; ಆದರೆ ದೇಹವು, ನಿರಂತರವಾಗಿ ಕಾರ್ಯನಿರತವಾಗಿರಲಿ ; ಚಲನ ಶಕ್ತಿಯ ನಿಯಮಕ್ಕೆ ಅಧೀನವಾದ ದೇಹವು ಕಾರ್ಯದಲ್ಲಿ ತೊಡಗಿರಲಿ. ಒಳಗಿನ ಆತ್ಮವು ಯಾವಾಗಲೂ ಸ್ಥಾಯೀಭಾವದಲ್ಲಿ ವಿಶ್ರಾಂತಿ ಹೊಂದಿರಲಿ. ನಮ್ಮ ಸ್ವಾರ್ಥಪರವಾದ ಚಡಪಡಿಕೆಯೂ ಕಳವಳವೂ ನಮ್ಮ ಎಲ್ಲಾ ಕೆಲಸಗಳನ್ನೂ ಹಾಳುಮಾಡುತ್ತವೆ. ಶಾಂತಿಗಾಗಿ ಅಥವಾ ನಿರ್ವಾಣಕ್ಕಾಗಿ ಕರ್ಮ ಮಾಡಿರಿ.

ಎರಡನೆಯ ತತ್ತ್ವ ಅಥವಾ ನಿಯಮ—ನಿಸ್ಸ್ವಾರ್ಥವಾದ ತ್ಯಾಗ

ಒಮ್ಮೆ ಒಂದು ಸರೋವರಕ್ಕೂ ನದಿಗೂ ಜಗಳವಾಯಿತು. ನದಿಗೆ ಸರೋವರವು ಹೇಳಿತು : ಓ ನದಿ ! ನಿನ್ನ ಎಲ್ಲಾ ನೀರನ್ನೂ ಸಂಪತ್ತನ್ನೂ

ಸಮುದ್ರಕ್ಕೆ ಕೊಡುವುದು ಮೂರ್ಖತನ. ಸಮುದ್ರಕ್ಕೆ ಕೃತಜ್ಞತೆಯಿಲ್ಲ. ಅದಕ್ಕೆ ಅಗತ್ಯವೂ ಇಲ್ಲ. ನೀನು ನಿನ್ನ ಮಧುರವಾದ ಜಲವನ್ನು ಅದಕ್ಕೆ ಎಷ್ಟೇ ದಾನ ಮಾಡಿದರೂ ಅದು ಉಪ್ಪಾಗಿಯೇ ಇರುವದು. 'ಹಂದಿಯ ಮುಂದೆ ಮುತ್ತುಗಳನ್ನು ಎಸೆಯಬಾರದು' ನಿನ್ನ ಐಶ್ವರ್ಯವನ್ನೆಲ್ಲಾ ನಿನ್ನಲ್ಲಿಯೇ ಇಟ್ಟುಕೋ ; " ಇದೇಸೋ ಪ್ರಾಪಂಚಿಕವಾದ ಜಾಣತನವಾಗಿತ್ತು. ಇಲ್ಲಿ ದಾನದ ಫಲವನ್ನು ಗಮನಿಸಲು, ನದಿಗೆ ಇದು ಬುದ್ಧಿವಾದವಾಗಿತ್ತು. ಆದರೆ ನದಿಯು ವೇದಾಂತಿಯಾಗಿದ್ದಿತು. ನದಿಯು ಹೇಳಿತು : "ಇಲ್ಲ, ಫಲವಾಗಲೀ ಪರಿಣಾಮವಾಗಲೀ ನನಗೆ ಮುಖ್ಯವಲ್ಲ. ಸೋಲು–ಗೆಲುವುಗಳೂ ನನಗೆ ಕ್ಷುಲ್ಲಕವಾದುವು. ಕೆಲಸವನ್ನು ನಾನು ಪ್ರೀತಿಸುತ್ತೇನೆ. ಆದ್ದರಿಂದಲೇ ನಾನು ಕೆಲಸಮಾಡಬೇಕು. ಕೆಲಸಕ್ಕಾಗಿ ಕೆಲಸಮಾಡಬೇಕು, ಕರ್ಮ ಮಾಡುವುದೇ ನನ್ನ ಧ್ಯೇಯ ; ಯಾವಾಗಲೂ ಕಾರ್ಯಶೀಲವಾಗಿರುವುದೇ ನನ್ನ ಜೀವನ. ಶಕ್ತಿಯೇ ನನ್ನ ಆತ್ಮ. ನಾನು ಕೆಲಸಮಾಡಬೇಕು." ಹೀಗೆ, ನದಿಯು ನಿರಂತರವಾಗಿ ಹರಿಯುವ ಕಾರ್ಯ ಮಾಡುತ್ತಾ ನಡೆಯಿತು. ಅದು ಸಮುದ್ರದಲ್ಲಿ ಲಕ್ಷ ಲಕ್ಷ ಕೊಡಗಳ ನೀರನ್ನು ಸುರಿಯುತ್ತಾ ಹೋಯಿತು. ಆದರೆ ಲೋಭಿಯಾದ ಮಿತವ್ಯಯಿ ಸರೋವರವು ಮೂರು ನಾಲ್ಕು ತಿಂಗಳುಗಳಲ್ಲಿ ಒಣಗಿ ಬರಿದಾಯಿತು. ಅದಕ್ಕೆ ಮೊದಲು, ಆ ಸರೋವರದ ನೀರು ಮಲೆತು, ಕೊಳೆತು, ದುರ್ಗಂಧ–ವಿಷವಾಯಿತು. ಆದರೆ ನದಿಯು ನೂತನವೂ ನಿರ್ಮಲವೂ ಆಗಿದ್ದಿತು. ಆದರ ಅಕ್ಷಯ ಚಿಲುಮೆಗಳು ಬತ್ತಲೇ ಇಲ್ಲ. ನದಿಯ ಉಗಮ ಸ್ಥಾನಗಳನ್ನು ಪುನಃ ಭರ್ತಿಮಾಡಲು ನಿಶ್ಶಬ್ದವಾಗಿಯೂ ಸಾವಕಾಶವಾಗಿಯೂ ಸಮುದ್ರದ ಮೇಲ್ಮೈಯ ನೀರು ಉಪಯೋಗವಾಯಿತು, ಮುಂಗಾರು-ಹಿಂಗಾರು ಮಳೆಗಳೂ ಇತರ ವಾಣಿಜ್ಯ ಮಾರುತಗಳೂ ಗಲಾಟೆಯಿಲ್ಲದೆ, ಸಾವಕಾಶವಾಗಿಯೂ ಅದೃಶ್ಯವಾಗಿಯೂ ಸಾಗರದಿಂದ ನೀರನ್ನು ಸಾಗಿಸಿ. ನದಿಯ ಮೂಲವನ್ನು ಎಂದೆಂದಿಗೂ ನವ್ಯವಾಗಿಯೂ ಅಕ್ಷಯವಾಗಿಯೂ ಇಟ್ಟಿದ್ದವು.

ಹೀಗೆಯೇ ಆ ಕ್ಷುದ್ರ ಸರೋವರದ ಕುತರ್ಕದ ನೀತಿಯನ್ನು ಅನುಸರಿಸಬಾರದೆಂದು ವೇದಾಂತವು ಹೇಳುತ್ತದೆ. "ಓ, ನನ್ನ ಗತಿಯೇನು ? ನನ್ನ ಕೆಲಸದ ಗತಿಯೇನು ?" ಎಂದು ಆ ಸ್ವಾರ್ಥಪರವಾದ ಕೃಪಣ ಸರೋವರವು ಯಾವಾಗಲೂ ಚಿಂತಿಸುತ್ತಿರುತ್ತದೆ. ನಿಮ್ಮ ಕೆಲಸವೇ ನಿಮಗೆ ಗುರಿಯಾಗಬೇಕು ; ಅದರ ಫಲವಲ್ಲ, ಹೀಗೆ ವೇದಾಂತವು, ಬಯಕೆಯ ಪೇಚಾಟದಿಂದ ಬಿಡುಗಡೆ ಮಾಡುತ್ತದೆ. ನಿಮ್ಮ ಕಾರ್ಯವನ್ನೂ ಕೃತಿಯನ್ನೂ ಜನರು ಮೆಚ್ಚುವರೋ ಇಲ್ಲವೋ ಎಂದೂ, ಎಲ್ಲಿ ಕಟುವಾಗಿ ಟೀಕಿಸುವರೋ ಎಂದೂ, ಚಿಂತೆ ಮಾಡಬಾರದು. ಜನರಿಂದ ಏನನ್ನೂ ನಿರೀಕ್ಷಿಸಬಾರದು. ಫಲದ ಬಯಕೆಯಿಂದ ಬಿಡುಗಡೆ ಪಡೆಯಬೇಕೇ ಹೊರತು ಕೆಲಸದಿಂದಲ್ಲ. ಎಲ್ಲಾ ಬಗೆಯ ಕಾಮ ವಿಕಾರಗಳಿಗೂ ಚಿತ್ತಾಕರ್ಷಣೆಗಳಿಗೂ ಭ್ರಮೆಗಳಿಗೂ ಚಾಪಲ್ಯಗಳಿಗೂ ಅತ್ಯಂತ ಪರಿಣಾಮಕಾರಿಯೂ ಅತ್ಯುತ್ತಮವೂ

ಆದ ಔಷಧವೆಂದರೆ, ಸತತ ಉದ್ಯೋಗವೇ ಆಗಿದೆ. ಆದರೆ ಇದು, ನಿಷೇಧ ಮುಖವಾದ ಸಲಹೆ ಆದೀತು. ವಿಧಿ ಮುಖವಾದ ವಾಸ್ತವ ಗುಣವು, ಶ್ರದ್ಧಾಪೂರ್ಣವಾದ ಕಾರ್ಯದಲ್ಲಿ ಎಡೆಬಿಡದೇ ಇರುವ ನಿಜವಾದ ಆನಂದವೇ ಆಗಿದೆ. ಪ್ರಯತ್ನವಿಲ್ಲದೆ, ತನ್ನನ್ನು ತಾನು ಅರಿಯುವ ಮೋಕ್ಷದ ಕಿರಣವೂ ಇದೇ ಆಗಿದೆ. ಉದ್ಯೋಗವು ನಿಮ್ಮನ್ನು ಕಳಂಕವಿಲ್ಲದವರನ್ನಾಗಿಯೂ ಪರಿಶುದ್ಧವಾಗಿಯೂ ದೇವತ್ವದೊಡನೆ ಒಂದಾಗಿಯೂ ಇಟ್ಟಿರುತ್ತದೆ. ಈ ಆನಂದವೇ ಅತ್ಯುನ್ನತವೂ ಅತ್ಯಂತ ನಿಶ್ಚಿತವೂ ಆದ ಕರ್ಮಫಲವಾಗಿದೆ. ಕರ್ಮಸಂಬಂಧವಾಗಿ ಹೃದಯದಲ್ಲಿ ಸ್ವಾರ್ಥಪರವಾದ ಉದ್ದೇಶಗಳನ್ನು ಇಟ್ಟುಕೊಂಡು, ಆನಂದಪ್ರದವಾದ ಸ್ವರ್ಗಸಂಪತ್ತನ್ನು ಕೆಡಿಸಬೇಡಿ. ತುಚ್ಛವಾದ ಮಹತ್ವಾಕಾಂಕ್ಷೆಗಳೂ ಕ್ಷುಲ್ಲಕವಾದ ಹಂಬಲಗಳೂ ನಮ್ಮ ಮುಂದುವರಿಕೆಯನ್ನು ಹಿಮ್ಮೆಟ್ಟಿಸುವವೇ ಹೊರತು, ಹೆಚ್ಚು ವೇಗಗೊಳಿಸುವುದಿಲ್ಲ. ನಮ್ಮ ಕಾರ್ಯ ನಿರ್ವಹಣೆಯ ದಕ್ಷತೆಗೂ ಸಾಮರ್ಥ್ಯಕ್ಕೂ ಹೊರಗಿನ ಸ್ಥೂಲವಾದ ಮೋಹಾಕರ್ಷಣೆಗಳು ಪ್ರತಿಕೂಲವಾಗುವವೇ ಹೊರತು ಅನುಕೂಲವಾಗುವುದಿಲ್ಲ. ಶ್ರದ್ಧಾಪೂರ್ಣವಾದ ಕಾರ್ಯದ ಸಂಗಡಲೇ ಇರುವ ತತ್ಕಾಲದ ಆನಂದಕ್ಕಿಂತಲೂ ಯಾವ ಬಹುಮಾನವೂ ಮೆಚ್ಚುಗೆಯೂ ಹೆಚ್ಚು ಶುಭಕರವೂ ಹಿತಕರವೂ ಆಗಲಾರದು. ಕರ್ಮವು ಒಳಗೊಂಡಿರುವ ತ್ಯಾಗವನ್ನೋ ಧರ್ಮವನ್ನೋ ಪೂಜೆಯನ್ನೋ ಸಾಧಿಸುವುದಕ್ಕೋಸ್ಕರ, ಕರ್ಮಮಾರ್ಗವನ್ನೇ ಅನುಸರಿಸಿರಿ. ಆದರೆ ಕರ್ತವ್ಯಭಾರದ ಹೊಣೆಗಾರಿಕೆಯಿಂದ ಕುಗ್ಗಿ ಕುಸಿಯಬೇಡಿ. "ಮೊದಲು ಅರ್ಹನಾಗು, ಅನಂತರ ಆಶೆಮಾಡು." ಎಂದು ಜನರು ಹೇಳುವುದುಂಟು. ಆದರೆ. "ಅರ್ಹನಾಗು ಮಾತ್ರ ; ಆಶೆಯು ಅಗತ್ಯವೇ ಇಲ್ಲ"–ಎಂದು ವೇದಾಂತವು ಹೇಳುತ್ತದೆ. "ಗೋಡೆಗೆ ಸರಿಹೊಂದುವ ಕಲ್ಲು ಎಂದಿಗೂ ಹಾದಿಯ ಮೇಲೆ ಬಿದ್ದಿರುವುದೇ ಇಲ್ಲ." ನೀವು ಅರ್ಹತೆಯನ್ನು ಸಂಪಾದಿಸುವದೇ ತಡ, ತಡೆಯಲಾಗದ ದೈವೀ ನಿಯಮದಿಂದ, ಬರಬೇಕಾದ ಪ್ರತಿಯೊಂದೂ ನಿಮ್ಮಲ್ಲಿಗೆ ಬಂದೇ ಬರುತ್ತದೆ. ದೀಪವು ಉರಿಯುತ್ತಿದ್ದರೆ, ಪತಂಗಗಳು ಬಂದೇ ಬರುತ್ತವೆ. ದೀಪವೇನೂ ಅವಕ್ಕೆ ಆಹ್ವಾನ ಕೊಡುವುದು ಬೇಡ. ಅವು ತಾವಾಗಿಯೇ ಬಂದು ತುಂಬಿಕೊಳ್ಳುತ್ತವೆ, ನಿರ್ಮಲವಾದ ಚಿಲುಮೆ ಇದ್ದಲ್ಲಿಗೆ ಜನರು ತಾವಾಗಿಯೇ ಬರುತ್ತಾರೆ. ಚಿಲುಮೆಯು ಜನರಿಗಾಗಿ ಹಲ್ಲುಕಡ್ಡಿಯಷ್ಟೂ ಚಿಂತಿಸುವುದು ಬೇಡ. ಜೇನುತುಪ್ಪವೂ ಸಕ್ಕರೆಯೂ ಇದ್ದಲ್ಲಿಗೆ ಇರುವೆಗಳು ತಾವಾಗಿಯೇ ಬರುತ್ತವೆ. ಚಂದ್ರೋದಯವಾದರೆ ಸಾಕು. ಆ ಬೆಳದಿಂಗಳಲ್ಲಿ ಆನಂದಪಡಲು ರಸಿಕ ಜನರು ತಾವಾಗಿಯೇ ಬರುತ್ತಾರೆ. ನುಗ್ಗಿ ! ನುಗ್ಗಿ ! ಸಗ್ಗದಲೆ ನುಗ್ಗಿ ! ಜಗ್ಗಿ ಹೊಡೆಯಿರಿ ! ಸುತ್ತಿಗೆಯ ಜಗ್ಗಿ ಹೊಡೆಯಿರಿ ! (ಕಷ್ಟವಾದರೂ ಕಾರ್ಯವನ್ನು) ಸಾಧಿಸಿ ! ಸಾಧಿಸಿ ! ದೇಹದ ನಿರರ್ಥಕತೆಯನ್ನೂ ನಿಜಾತ್ಮನ ಪರಮಸತ್ಯತೆಯನ್ನೂ ಮನಗಾಣಲು ಎಡೆಬಿಡದೆ ಕೆಲಸಮಾಡಿರಿ. ತೋರಿಕೆಯ ಈ ಉದ್ಯೋಗಶೀಲತೆಯ ಶಿಖರದ ಮೇಲೆ ನಿರ್ವಾಣದ ಅಥವಾ ಕೈವಲ್ಯದ ಸವಿಯನ್ನು

ಕಾಣುವಿರಿ. ಹೀಗೆ ನಿಮ್ಮ ವ್ಯಕ್ತಿತ್ವವನ್ನೂ ಅಹಂಕಾರವನ್ನೂ ಶ್ರಮದ ಶಿಲುಬೆಯು ಮೇಲೆ ಏರಿಸಿದಾಗ ಯಶಸ್ಸೂ ಗೆಲುವೂ ಸಿದ್ಧಿಯೂ ನಿಮ್ಮನ್ನು ಹುಡುಕಿಕೊಂಡು ಬರುತ್ತದೆ. ಆಗ ನಿಮ್ಮ ಕೆಲಸವನ್ನು ಮೆಚ್ಚುವ ಜನರಿಗೂ ಕೊರತೆಯಿರುವದಿಲ್ಲ. ಕ್ರಿಸ್ತನು ಬದುಕಿರುವವರೆಗೂ ಜನರು ಅವನನ್ನು ಒಪ್ಪಿಕೊಳ್ಳಲಿಲ್ಲ ; ಗೌರವಿಸಲಿಲ್ಲ. ಜನರು ಅವನನ್ನು ಪೂಜಿಸಬೇಕಾದರೆ, ಅವನನ್ನು ಶಿಲುಬೆಗೇರಿಸಬೇಕಾಯಿತು. "ನೆಲಕ್ಕೆ ತುಳಿದ ಸತ್ಯವು ಪುನಃ ಪುಟಿದು ಮೇಲೇರುತ್ತದೆ." ಯಾವ ಜೀವಂತ ಬೀಜವೂ ಭೂಮಿಯಲ್ಲಿ ಬಿದ್ದು ನೀರಿನಲ್ಲಿ ನೆನೆದು ನಶಿಸಿ, ತನ್ನ ರೂಪವನ್ನು ಕಳೆದು ಕೊಂಡ ಹೊರತು, ಅದರ ಶಕ್ತಿಯು ಚಿಮ್ಮಿ ಮೇಲೆದ್ದು ಅಸಂಖ್ಯಾತವಾಗಿ ಬೆಳೆಯು ಲಾರದು. ಆದ್ದರಿಂದ, ಗೆಲುವಿನ ಎರಡನೆಯ ಅವಶ್ಯ ನಿಯಮವೆಂದರೆ ಯಜ್ಞ, ಆಹುತಿ, ಅಹಂಕಾರದ ಬಲಿದಾನ, ತ್ಯಾಗ. "ತ್ಯಾಗ" ಎಂಬದರ ಅರ್ಥವನ್ನು ತಪ್ಪಾಗಿ ತಿಳಿಯಬೇಡಿ. ತ್ಯಾಗವೆಂದರೆ ತಪಶ್ಚರ್ಯವೆಂದೂ ಸಂನ್ಯಾಸವೆಂದೂ ತಿಳಿಯಬೇಡಿ.

ಮನಸ್ಸನ್ನು ಯಾವಾಗಲೂ ನಿರೀಕ್ಷಿಸುವ ಅಪೇಕ್ಷಿಸುವ, ಬೇಡುವ ಹೀನ-ಸ್ಥಿತಿಯಲ್ಲಿ ಎಸೆಯಬೇಡಿ. ಯಾವಾಗಲೂ ನೀಡತಕ್ಕವರಾಗಿ, ಸ್ವತಂತ್ರ ಕಾರ್ಯ ಸಾಧಕರಾಗಿ. ಒಂದು ವಸ್ತುವಿನ ಮೇಲೆ ಒಬ್ಬನೇ ಪೂರಾ ಹಕ್ಕನ್ನೂ ಪೂರ್ಣಾಧಿಕಾರ ವನ್ನೂ ಪಡೆಯುವ (ಏಕಸ್ವಾಮ್ಯ) 'ಮನಾಪೊಲಿ' ಪದ್ಧತಿಯನ್ನೂ "ರಿಜಿಸ್ಟರ್ಡ್ ಪೇಟೆಂಟ್" ಹಾಕಿಕೊಳ್ಳುವ ದುರಭ್ಯಾಸವನ್ನೂ ಬಿಟ್ಟು ಬಿಡಿ. ನಿಮ್ಮ ಶ್ವಾಸಕೋಶ ದಲ್ಲಿರುವ ಗಾಳಿಯು, ನಿಮ್ಮದು ಮಾತ್ರವಾದರೆ, ಅದನ್ನು ಹೊರಗೆ ಬಿಡಬೇಡಿ. ಬೇರೆ ಜನರೂ ಬೇರೆ ಪ್ರಾಣಿಗಳೂ ಉಸಿರಾಡಿ ಬಿಟ್ಟ ಹೊರಗಿನ ಗಾಳಿಯನ್ನೂ ನೀವು ಒಳಗೆ ಸೇವಿಸಬೇಡಿ. ಆಗ ನಿಮ್ಮ ಗತಿಯೇನು ? ನೀವು ಬದುಕಬಲ್ಲಿರಾ ? ಗಾಳಿಯು ಎಲ್ಲ ರಿಗೂ ಸೇರಿದ್ದು. ನಿಮ್ಮ ಶ್ವಾಸಕೋಶದಲ್ಲಿರುವ ಅಲ್ಪವಾದ ಗಾಳಿಯ ಮೇಲೆ ನೀವು ಹಕ್ಕು ಸ್ಥಾಪಿಸದಿದ್ದರೆ, ಎಲ್ಲೆಲ್ಲಿಯೂ ತುಂಬಿರುವ ಎಲ್ಲಾ ಗಾಳಿಗೂ ನೀವು ಹಕ್ಕು ದಾರರಾಗುತ್ತೀರಿ ; ನಿಮ್ಮ ಸಾಧನ ಸಂಪತ್ತು ಅಪರಿಮಿತವಾಗುತ್ತದೆ. ಮುಖ್ಯ ಪ್ರಾಣವಾದ ವಿಶ್ವದ ಆಮ್ಲಜನಕವನ್ನು ಯಥೇಚ್ಛೆಯಾಗಿ ಸೇವಿಸಿ, ಉಸಿರಾಡಿ, ಗರ್ವಪಡಬೇಡಿ ; ಹೆಮ್ಮೆಪಡಬೇಡಿ. ನಿಮ್ಮ ಅಲ್ಪವಾದ ಅಹಂಕಾರಕ್ಕೆ ಯಾವು ದಾದರೂ ಸೇರಿದೆಯೆಂದು ತಿಳಿಯಬೇಡಿ ; ಸಕಲವೂ ಪರಮಾತ್ಮನಿಗೆ ಸೇರಿದವು ; ನಿಮ್ಮ ನಿಜವಾದ ಆತ್ಮನಿಗೆ ಸೇರಿದವು. ಸರ್ ಇಸ್ಸಾಕ್ ನ್ಯೂಟನ್ ಇವನ ಉದಾಹರಣೆಯನ್ನು ತೆಗೆದುಕೊಳ್ಳಿ. ಅವನು ಲೋಕದ ದೃಷ್ಟಿಯಲ್ಲಿ ಅಷ್ಟು ಪ್ರಕಾಶವುಳ್ಳವನೂ ಪ್ರಖ್ಯಾತನೂ ಹೇಗಾದನು ? ಅವನು ಸಾಯುವ ಸಮಯದಲ್ಲಿ, ಅದುವರೆಗೆ ಅವನು ಯಾವ ನಿಸ್ಸ್ವಾರ್ಥ ಮನೋಧರ್ಮದಿಂದ ಅನೇಕ ಕಷ್ಟಗಳನ್ನು ಸಹಿಸಿ, ಮಹತ್ತಾದ ಕಾರ್ಯ ಸಾಧನೆ ಮಾಡಿದ್ದನೆಂಬುದು ಲೋಕಕ್ಕೆ ತಿಳಿಯಿತು. ಪ್ರಪಂಚದಲ್ಲಿಯೇ ಅವನು ಅತ್ಯಂತ ಶ್ರೇಷ್ಠ ಮನುಷ್ಯನೆಂದು ಜನರು ಅವನನ್ನು

ಶ್ಲಾಘಿಸಲು, ಅವನು, "ಓಹೋ ಇಲ್ಲ, ಈ ನನ್ನ ಬುದ್ಧಿ, ಅಥವಾ ಈ ನನ್ನ ಸಣ್ಣ ವ್ಯಕ್ತಿತ್ವವು, ಅಪಾರವಾದ ಜ್ಞಾನ ಸಾಗರದ ಅಂಚಿನಲ್ಲಿ, ಕಲ್ಲುಹರಳುಗಳನ್ನು ಆರಿಸುತ್ತಿರುವ ಕೇವಲ ಸಣ್ಣ ಹುಡುಗನಂತೆ ಇದೆ" ಎಂದನು. ಹೀಗೆ ತನ್ನದೆಂದೂ ತನ ಹಕ್ಕಿನದೆಂದೂ ಯಾವುದನ್ನೂ ತನ್ನ ಅಲ್ಪವಾದ ಜೀವಕ್ಕೆ ಸಂಗ್ರಹಿಸದೆ, ಕೇವಲ ನಿರಹಂಕಾರಿಯಾಗಿರುವ ಮನೋಧರ್ಮವೇ ನಿಮ್ಮ ಕಾರ್ಯಸಾಧನೆಯ ಸಾಮರ್ಥ್ಯವನ್ನೂ ಶಕ್ತಿಗಳನ್ನೂ, ಅವುಗಳ ಅತ್ಯುತ್ತಮ ಸ್ಥಿತಿಯಲ್ಲಿ ಇಡಬಲ್ಲದು. ಇದೇ ವೇದಾಂತದ ವಿಶಿಷ್ಟವಾದ ಮನೋಧರ್ಮ.

ನಿಮಗೆ ಅನೇಕ ವಿಧವಾದ ಆಶೆಗಳಿವೆ. ಅವೆಲ್ಲವೂ ಪೂರ್ಣವಾಗಬೇಕೆಂದು ಇಚ್ಛಿಸುತ್ತೀರಿ. ಆದರೆ, ಆಶೆಗಳು ಪೂರ್ಣವಾಗುವ ಗುಟ್ಟನ್ನು ತಿಳಿಯಬೇಕು. ನೀವು ಆಶೆಯನ್ನು ಬಿಟ್ಟಾಗಲೇ ಅದು ಪೂರ್ಣವಾಗುವುದು, ಅದು ಫಲಿಸುವುದು. ಬಾಣಗಳನ್ನು ಬಿಡುವುದು ಹೇಗೆ ? ನಾವು ಬಿಲ್ಲನ್ನು ಬಗ್ಗಿಸಿ, ಹೆದೆಯನ್ನು ಕಟ್ಟಿ, ಬಾಣವನ್ನು ಹೂಡಿ, ಆ ಹೆದೆಯನ್ನು ಕಿವಿಯವರೆಗೆಳೆದು, ಎಷ್ಟು ಜಗ್ಗಿದರೂ ಬಾಣವು ನಮ್ಮ ಕೈಯಲ್ಲಿಯೇ ಇರುತ್ತದೆ. ಅದು ಶತ್ರುವಿಗೆ ತಾಗುವುದೇ ಇಲ್ಲ. ನಮ್ಮ ಕಡೆಗೇ ಹೆದೆಯನ್ನು ಎಷ್ಟೆಷ್ಟು ಜಗ್ಗಿದರೂ ಪ್ರಯೋಜನವಿಲ್ಲ ; ನಮ್ಮ ಆಶೆಯು ಪೂರ್ಣವಾಗುವುದಿಲ್ಲ. ಆ ಜಗ್ಗಿದ್ದ ದಾರವನ್ನು ಜೋರಾಗಿ ಬಿಟ್ಟಾಗಲೇ ವೇಗವಾಗಿ ಬಾಣ ಪ್ರಯೋಗವಾಗುವುದು. ಹಾಗೆಯೇ ಬಯಸಿ ಬಯಸಿ, ಮನಸ್ಸನ್ನು ಯಾವಾಗಲೂ ಬಯಕೆಯ ಬಿಗಿತದಿಂದ ನಿಮ್ಮ ಕಡೆಗೆ ಜಗ್ಗುತ್ತಲೇ ಇದ್ದರೆ, ಬಯಕೆಯು ಫಲಿಸುವುದಿಲ್ಲ. ನೀವು ಎಷ್ಟೇ ಬಯಸಿದರೂ ತೊಳಲಿದರೂ, ಹಂಬಲಿಸಿದರೂ, ತೀವ್ರವಾಗಿ ಇಚ್ಛಿಸಿದರೂ, ಅದು ಸಫಲವಾಗುವುದಿಲ್ಲ. ನೀವು ಬಯಕೆಯನ್ನು ಜಗ್ಗಿ ಬಿಟ್ಟಾಗಲೇ, ಅದು ಗುರಿಯನ್ನು ಭೇದಿಸುತ್ತದೆ ; ಫಲವನ್ನು ಸಾಧಿಸುತ್ತದೆ. "ನೀವು ನನ್ನನ್ನು ಬಿಟ್ಟು ನನ್ನನ್ನು ಕಳೆದುಕೊಂಡಾಗಲೇ ನನ್ನನ್ನು ಪಡೆಯುತ್ತೀರಿ." ನಮ್ಮೆಲ್ಲರಿಗಿಂತಲೂ ಶ್ರೇಷ್ಠವೂ ಮೇಲಿನದೂ ಆದ ಅವರ್ಣನೀಯವೂ ವಿಲಕ್ಷಣವೂ ಆದೊಂದು ಸ್ಥಿತಿಯಲ್ಲಿ ನಿಮ್ಮನ್ನೂ ನೀವು ಮರೆತು ನಿಂತಾಗಲೇ ನನ್ನನ್ನು ಕಾಣುತ್ತೀರಿ. ಇದೇ ವೇದಾಂತದ ಉಪದೇಶ.

೧೬೩. ಮರವೆಯಿಲ್ಲದ ಪ್ರತಿ ವರ್ತನೆ

(ನಿವೃತ್ತನಾದ ಒಬ್ಬ ಯೋಧ)

ತನ್ನ ಸೈನಿಕ ವೃತ್ತಿಯಿಂದ ನಿವೃತ್ತನಾದ ಒಬ್ಬನು, ಚೆನ್ನಾಗಿ ಪಳಗಿದ ಕದೀಮನಾದ ಯೋಧನಿದ್ದ. ಅವನು ಸಿಪಾಯಿ ಕವಾಯತುಗಳ (ಡ್ರಿಲ್) ಚಾಕಚಕ್ಯ ಪ್ರಯೋಗವನ್ನು ಯಾಂತ್ರಿಕವಾಗಿ ನಡೆಸುವಷ್ಟು ಸೈನಿಕ ಕವಾಯತುಗಳಲ್ಲಿಯೂ ಶಿಸ್ತಿನಲ್ಲಿಯೂ ಪರಿಣತನಿದ್ದನು. ಈ ಸಿಪಾಯಿಯು ಒಮ್ಮೆ ಹಾಲು ತುಂಬಿದ ದೊಡ್ಡ ಪಾತ್ರೆಯನ್ನು ಹೊತ್ತುಕೊಂಡು ಬೀದಿಯಲ್ಲಿ ಬರುತ್ತಿದ್ದನು. ಇವನ

ಸ್ವಭಾವವನ್ನು ತಿಳಿದಿದ್ದ ಒಬ್ಬ ಕುಚೋದ್ಯಪ್ರಿಯನಾದ ಹಾಸ್ಯಗಾರನು ದೂರದಿಂದ ಇವನನ್ನು ನೋಡಿದ. ಜನರನ್ನು ನಗಿಸುತ್ತಿರುವದರಲ್ಲಿಯೇ ಅವನಿಗೆ ಯಾವಾಗಲೂ ಉತ್ಸಾಹ, ಸಂತೋಷ. ಅವನು ಏನು ಮಾಡದಿದ್ದರೂ ಮಾತಾಡದಿದ್ದರೂ ಅವನನ್ನು ನೋಡಿದರೇ ಜನರು ನಗುತ್ತಿದ್ದರು. ಆ ಸಿಪಾಯಿಯು ಹೊತ್ತಿದ್ದ ಹಾಲನ್ನೂ. ಹಣ್ಣು ತರಕಾರಿ ಮೊದಲಾವುಗಳನ್ನೂ ಜನರು ತುಂಬಿದ್ದ ಆ ಅಂಗಡಿ ಬೀದಿಯಲ್ಲಿ ಚರಂಡಿಯಲ್ಲಿ ಚೆಲ್ಲಿಸಬೇಕೆಂದು ಆ ತಮಾಷೆಗಾರನ ಮನಸ್ಸಿಗೆ ಬಂದಿತು. ಆ ಸಿಪಾಯಿಯು ಆ ಅಂಗಡಿಯ ಬೀದಿಯಲ್ಲಿ ಚರಂಡಿಯ ಪಕ್ಕದಲ್ಲಿ ಹೋಗುತ್ತಿದ್ದನು. ಆ ವಿಕಟ ವಿನೋದಿಯು ಸ್ವಲ್ಪ ದೂರದಲ್ಲಿ ಸಿಪಾಯಿಯ ಹಿಂದೆ ನಿಂತು, ಸಿಪಾಯಿಗಳ ಡ್ರಿಲ್ಲಿನ ಕವಾಯತ್‌ನ ಗಡುಸಿನ ಧೋರಣೆಯ ಧ್ವನಿಯಿಂದ "ಅಟೆನ್‌ಷನ್ !" (ಹುಷಾರ್!) ಎಂದು ಗಟ್ಟಿಯಾಗಿ ಥಕ್ಕನೆ ನುಡಿದನು. ಆ 'ಅಟೆನ್‌ಷನ್' ಶಬ್ದವನ್ನು ಕೇಳಿದ ಕೂಡಲೆ ಬಹು ಕಾಲದಿಂದ ಡ್ರಿಲ್ ಅಭ್ಯಾಸ ಮಾಡಿದ್ದ ಆ ಕದೀಮ ಸಿಪಾಯಿಯ ಎರಡು ಕೈಗಳೂ (ಅಟೆನ್‌ಷನ್ ಸ್ಥಿತಿಗೆ ಬರಲು) ಕೆಳಗೆ ಬಿದ್ದವು. ಅವನು ಹೊತ್ತುಕೊಂಡಿದ್ದ ಹಾಲು ಮೊದಲಾದವುಗಳೆಲ್ಲಾ ಕೆಳಗೆ ಚೆಲ್ಲಿ, ಬೀದಿಯ ಜನರಿಗೂ ಅಂಗಡಿಗಳ ವರ್ತಕರಿಗೂ (ಈ ಬಡಪ್ರಾಣಿಯ ದೆಸೆಯಿಂದ) ದೊಡ್ಡ ತಮಾಷೆಯ ಹಬ್ಬವಾಯಿತು ! 'ಅಟೆನ್‌ಷನ್' ಶಬ್ದವನ್ನು ಕೇಳಿದ ಕೂಡಲೇ ಸಿಪಾಯಿಯು ಕೈಗಳನ್ನು ಕೆಳಗೆ ಬಿಟ್ಟನು. ಆದರೆ ಮನಶ್ಶಾಸ್ತ್ರವು ಅವನು ಏನೂ ಕರ್ಮ ಮಾಡಲಿಲ್ಲವೆಂದು ಹೇಳುತ್ತದೆ. ಅವನಿಂದ ಆದ ಕಾರ್ಯಕ್ಕೆ "Reflex action" ಎಂದು ಹೆಸರು. ಅಂದರೆ, ಸಂಕಲ್ಪಕ್ಕೆ ಅಧೀನವಾಗದೆ ಕೇವಲ ನರಗಳ ಪ್ರಚೋದನೆಯ ಫಲವಾಗಿ ಉಂಟಾದ ಇಚ್ಛೆಯಿಲ್ಲದ ಪ್ರತಿಕ್ರಿಯೆ. ಈ ಬಗೆಯ "ನಿರಿಚ್ಛಾ ಪ್ರತಿಕ್ರಿಯೆ"ಯು ಕರ್ಮವೆನಿಸುವುದಿಲ್ಲ ; ಏಕೆಂದರೆ, ಅದರಲ್ಲಿ ಮನಸ್ಸು ತೊಡಗಿರುವದಿಲ್ಲ.

೧೬೪. ಅರೆಮನಸ್ಸಿನ ಕಾರ್ಯ

(ಭಿನ್ನರುಚಿಯ ಬಾಲಕರಿಬ್ಬರು)

ದೇವಸ್ಥಾನಕ್ಕೆ ಹೋಗುತ್ತಿದ್ದ ಒಬ್ಬನೂ, ಆಟಕ್ಕೆ ಹೋಗುತ್ತಿದ್ದ ಇನ್ನೊಬ್ಬ ಅವನ ಸ್ನೇಹಿತನೂ ರಸ್ತೆಯ ಮೇಲೆ ಸೇರಿದರು. ದೇವಸ್ಥಾನದವನು ಇಬ್ಬರೂ ದೇವಸ್ಥಾನಕ್ಕೆ ಹೋಗೋಣ—ಎಂದನು. ಆಟದವನು ಇಬ್ಬರೂ ಆಟಕ್ಕೆ ಹೋಗೋಣ—ಎಂದನು. ಒಂದೇ ಕಾರ್ಯಕ್ಕೆ ಇಬ್ಬರೂ ಹೋಗಲು ಒಪ್ಪಿಗೆಯಾಗದೆ ಅವರು ತಮತಮಗೆ ಬೇಕಾದ ಕಾರ್ಯಗಳಿಗೆ ಹೋದರು. ದೇವಸ್ಥಾನಕ್ಕೆ ಹೋಗಿದ್ದವನಿಗೆ ಅಲ್ಲಿ ನಡೆಯುತ್ತಿದ್ದ ಪೂಜಾ-ಪ್ರಾರ್ಥನೆಗಳ ಅರ್ಥ ಗೊತ್ತಾಗದೆ ಬೇಸರವಾಗಿ ತಾನು ಆಟಕ್ಕೇ ಹೋಗಿದ್ದರೆ ಚೆನ್ನಾಗಿತ್ತು ಎನ್ನಿಸಿತು. ಆದರೂ ಹಾಗೆ ಚಿಂತಿಸುತ್ತಾ ಅಲ್ಲಿಯೇ ಇದ್ದನು. ಆಟಕ್ಕೆ ಹೋದವನಿಗೆ ಸರಿಯಾದ ಜೊತೆಯ ಸ್ನೇಹಿತ ಆಟಕ್ಕೆ ಸಿಕ್ಕಲಿಲ್ಲವಾದ್ದರಿಂದ ಜಿಗುಪ್ಸೆಗೊಂಡು ತನ್ನ ಸ್ನೇಹಿತನ ಜೊತೆಗೆ ದೇವಸ್ಥಾನಕ್ಕೇ

20082

RAMA'S POEMS

ರಾಮನ ಪದ್ಯಗಳು

BLOOD RELATIONS

ರಕ್ತ ಸಂಬಂಧಗಳು

ಓ ನನ್ನ ನೇರ ರಕ್ತಸಂಬಂಧಗಳು
ನನ್ನೆಲ್ಲ ರಕ್ತನಾಳಗಳಲಿ ಸಂಧಿಸಿಹವು.
ಗಿಡ ಮರವು ಗಾಳಿ ಬೆಳಕು ನೀರುಗಳು
ಮಿಕ್ಕೆಲ್ಲ ಸಂಬಂಧಗಳು ತಪ್ಪದೆ ಶೃಂಖಲೆಗಳು.
ಪರ್ವತಗಳು ನದಿಗಳು ಸೂರ್ಯ ಮೇಘ ಮಳೆಗಳು
ನನ್ನ ಮೂಳೆಯ ಮೂಳೆ, ನನ್ನ ರಕ್ತದ ರಕ್ತ, ಇವುಗಳು,
ಜಾಜಿ ಮಲ್ಲಿಗೆ ಗುಲಾಬಿ ಸಂಪಿಗೆಗಳು ನಗು ನಗುತ್ತಿವೆ.
ನನ್ನ ಹೃದಯದ ಹೃದಯದಲಿ ಆ ಹರ್ಷ ತುಂಬಿಹುದು.
ನಗರದ ಬೀದಿಗಳಲಿ ನಡೆವಂತೆ ಎನ್ನಲ್ಲಿ
ಕಡಲುಗಳು, ಗಾಳಿಗಳು, ಭೂಮಿಗಳು, ಓಡುತಿಹವು.
ದಿವ್ಯ ರಾಗಗಳಲಿ ಸ್ವರ್ಗೀಯ ಗಾನದಲಿ,
ನನ್ನ ಅನಂತ, ಅನಂತಾನಂದವೇ ವ್ಯಕ್ತವಾದಿಹುದು ;
ತಾರೆಗಳ ಥಳಥಳಿಪ ಕಣ್ಣೀರ ಹನಿಗಳನು
ಸುರಿಯುವಾ ಮಳೆಗಳಲಿ ವರ್ಷಿಸುತ್ತಿಹೆನು ;
ಗಂಗಾ ನದಿಯ ಇಂಪಾದ ಗಾನವೂ
ಒಲಿಯುಪಾ ದೇವದಾರುಗಳ ಇನಿದನಿಯೂ
ಸಾಗರದ ಹೋರಾಟದಾ ಮಾರ್ದನಿಯು,
ಹಸುವಿನಾ ಕೂಗು,
ಮಂಜಿನಾ ದ್ರವ ಹನಿಯು,
ಭಾರದಿಂ ಕೆಳಗಿಳಿವ ಮೋಡ,
ಪುಟ್ಟ ಹೆಜ್ಜೆಗಳ ಪಟ ಪಟವೆನುವ ಸದ್ದು,
ಮಂದಿಯಾ ಗೊಳ್ಳೆನುವ ಗಟ್ಟಿ ನಗು,
ಸೂರ್ಯನಾ ಸುವರ್ಣ ಕಿರಣಜಾಲ,
ನಿಶ್ಶಬ್ದ ತಾರೆಯಾ ಥಳಥಳ ಮಿರುಗು,

ತೊಳ ತೊಳಗುವಾ ರಜತ ಚಂದ್ರನ ಬೆಳಕು,
ದೂರವೂ ಸಮೀಪವೂ ಚೆಲ್ಲುತಿಹ ಕಾಂತಿ,
ಉರಿಯುತಿಹ ಕತ್ತಿಯಾ ಹೊಳಪು,
ಉಜ್ಜ್ವಲ ರತ್ನಗಳ ಥಳಥಳಿಪ ಕಳೆಯು,
ಕಡಲ ಬೆಳಕು ಮನೆಯಾ ಸಂಜ್ಞಾ ಜ್ಯೋತಿಯು ಪ್ರಭೆಯು,
ಕತ್ತಲ ಕಾವಳದ ರಾತ್ರಿಯಲಿ ;
ಸೇಬಿನ ಸಮೃದ್ಧಿಯು ಭೂಮಿ, ಸ್ವರ್ಗದಾ ದಿವ್ಯಸಂಪತ್ತು,
ಶಬ್ದವಿಲ್ಲದಾ ಶಬ್ದ, ಉರಿಯಿಲ್ಲದಾ ದೀಪ,
ಕಪ್ಪಿಲ್ಲದಾ ಕತ್ತಲೆಯು, ರೆಕ್ಕೆಯಿಲ್ಲದಾ ಹಾರಾಟ,
ಮನವಿಲ್ಲದಾಲೋಚನೆಯು, ಕಣ್ಣಿಲ್ಲದಾ ನೋಟ,
ಬಾಯಿಯಿಲ್ಲದಾ ಮಾತು, ಕೈಯಿಲ್ಲದಾ ಹಗುರ ಹಿಡಿತ,
ನಾನೇ, ನಾನೇ. ನಾನೇ, ನಾನೇ.

The world, the world is naught to me
ಈ ಪ್ರಪಂಚವು, ಪ್ರಪಂಚವು ಶೂನ್ಯವು ನನಗೆ
ನನ್ನ ಆತ್ಮವು, ಆತ್ಮವು ಸರ್ವಸ್ವವು ನನಗೆ,
ಈ ದೇಹವು, ಎಲ್ಲಿಗೆ ಹೋದರು, ಏನಾದರೇನು ನನಗೆ,
ಎಸೆದಾಡಿದರು ಇಲ್ಲಿ—ಅಲ್ಲಿ, ಅಥವಾ ಸತ್ತರು ಏನು ನನಗೆ,
ಸ್ವಚ್ಛಂದಾತ್ಮ ನಾನು, ಕ್ಷಾರ ಸಾಗರದ ತುಷಾರದಂತೆ
ಅಪ್ಪಳಿಸಿದರು ಇತ್ತಿಂದತ್ತ ಅಥವಾ ಮೇಲೆ ಮತ್ತೆತ್ತಲೋ !
ಸುಖ ಸಂತೋಷಗಳೆ ಬನ್ನಿ, ಬನ್ನಿ ; ಸಂಕಟಗಳೆ, ನೀವೂ ಬನ್ನಿ,
ನನಗೆ ನೀವೆಲ್ಲ ಸಮ, ಒಂದೆ, ಒಂದೇ.
ಆದಿತ್ಯದೇವ ಬೆಳಗುವನು ಉದ್ಯಾನಗಳ ಅಂತೆ, ಹಾಳನೆಲವ
ಹಾಗೆ ನಾನೂ ವಿಧಿಯು ಮೂರ್ಪಾಡುಗಳ ಬೆಳಗುವೆನು ಸುಮಂತೆಯಿಂದ.
ಮೋಡಗಳು ಗಗನದಲಿ ಏರಿ, ತೋರಿ, ಅಡಗಿದರೂ,
ನಿರ್ಮಲೋನ್ನತ ವಿಶಾಲ ನೀಲಾಕಾಶ ಸಾಗರವೆಂದಿಗೂ ಬಾಧ್ಯವಲ್ಲ.
ಜೀವನವೊ ಸಾವೊ ಆರೋಗ್ಯವೋ ರೋಗವೋ
ಎನ್ನಲ್ಲಿ ಹಬೆಯಂತೆ ಎದ್ದು ಆಡಿ, ಅಡುಗುತ್ತಿವೆ.
ಯೌವನದ ನೇರಗೆರೆ, ಮುಪ್ಪಿನಾ ವಕ್ರಗೆರೆ
ಕಾಗದದ ಪರಿ ಇರುವ ಎನ್ನ ಮೇಲೆಳೆದಿರುವ ರೇಖಾಕೃತಿಗಳು.
ಗೆಲುವು ಸೋಲುಗಳ ಭೇದ ಎನಗಿಲ್ಲ.
ಏಕೆನೆ, ನಾನೆ ಮುಕ್ತ. ನಾನೇ ಮುಕ್ತ, ಮುಕ್ತ ನಾನೇ.

ಸಕಲ ಗ್ರಹಗಳ, ಸೂರ್ಯರ ತಾರೆಗಳ ಗಗನಗಳ
ದೂರ ಸರಿದಟ್ಟಿ ಬಹಳ ಮೇಲೇರಿ ಹಾರುತಿದೆ,
ಹುರಿದಾರವಿಲ್ಲದಾ ಎನ್ನ ಮುಕ್ತಿ ಸ್ವಾತಂತ್ರ್ಯದಾ ಗಾಳಿಪಟವು,
ಹರ್ಷ ಗೀತೆಗಳ ಪಾಡುವೆನು ತುಂಬಿದೆದೆಯಿಂ ನಾನು,
ನಾ ಮುಕ್ತ, ನಾ ಮುಕ್ತ, ನಾ ಮುಕ್ತ, ಮುಕ್ತ ನಾನೇ :
ಪ್ರಪಂಚವೇನಿಲ್ಲ; ಪ್ರಪಂಚ ಶೂನ್ಯವೆನಗೆ.

Goodbye

ಸ್ವಸ್ತಿ, ಶುಭಮಸ್ತು, ನಮಸ್ತೇ

ಚಂದ್ರನು ಮೇಲೇರಿಹ, ಚಂದ್ರನನು ನೋಡುವರು,
ನಿನ್ನ ಹುಬ್ಬುಗಳ ಬೆಳಕ ಪಾನಗೈಯುವೆ,
ಪೂರ್ಣ ನಿಬಿಡವಹ ಮಹಾ ಪ್ರದರ್ಶನಗಳ ನಡೆಸುವರು,
ದೃಷ್ಟಿ ಮೂಲವಹ ಎನ್ನನೆ ನಾ ನಿರೀಕ್ಷಿಸುವೆ ನಿರೀಕ್ಷಿಸುವೆ !
ಬೇಡ, ಕರೆಯುಬೇಡ, ವೈದ್ಯರನು, ಶಸ್ತ್ರವೈದ್ಯರನು, ಯಾರನೂ.
ಎನಗೆ ಎನ್ನ ನೋವೇ ಸಕಲ ಸುಖವು.
ನಾಗರಿಕರೇ ! ನಗರಗಳೆ, ಸ್ವಸ್ತಿ ! ಶುಭಮಸ್ತು, ನಮಸ್ತೇ !
ತಲೆ ತಿರುಗಿಸುವ ಸ್ವರ್ಗೀಯ ಔನ್ನತ್ಯಗಳೆ ! ಓ ಸ್ವಾಗತವು.
ಓ ನೀಟುಗಾರಿಕೆಯೆ, ಪದ್ಧತಿಯೆ, ಗುಣ—ದೋಷಗಳೆ,
ಓ ನಿಯಮವೇ, ಸಂಪ್ರದಾಯವೇ, [ಕಲ್ಪಿತವೆ] ಶಾಂತಿಯೆ ರಣವೆ !
ಓ ಮಿತ್ರರೆ, ಶತ್ರುಗಳೆ, ಬಂಧುಗಳೆ, ಬಂಧನವೆ,
ಸ್ವತ್ತೆ, ರಾಗವೆ, ತಪ್ಪು, ಸರಿಯೆ.
ನಮಸ್ತೇ ಓ ಕಾಲ—ದೇಶಗಳೆ, ನಮಸ್ತೇ !
ನಮಸ್ತೇ ! ಓ ಜಗವೆ, ಹಗಲು, ರಾತ್ರಿಗಳೆ,
ನನ್ನ ಪ್ರಿಯಂಕರಗಳು ಹೂವುಗಳು ಹಾಡು ಬೆಳಕು.
ಹಗಲು ಎನಗೆ ಪ್ರಿಯವು ರಾತ್ರಿ ಎನಗೆ ಪ್ರಿಯವು,
ಎಲ್ಲಾ ಕತ್ತಲು, ಬೆಳಕೂ ಎನ್ನಲ್ಲಿ ಕರಗಿಹವು
ಓ ಎಂಥಾ ಶಾಂತಿ, ಸಮಾಧಾನ, ಆನಂದ !
ಎನ್ನ ಪ್ರೇಮವನು, ಎನ್ನನೂ ಓ ಎನ್ನನೊಬ್ಬನೇ ಬಿಟ್ಟು ಬಿಡಿರಿ,
ನಮಸ್ತೇ ! ನಮಸ್ತೇ !! ನಮಸ್ತೇ !!!

ಓಂ ! ಓಂ ! ಓಂ !

20082